
ಬಸವಣ್ಣನವರ
ಕುರಿತ ವರ್ಣಚಿತ್ರಕಲೆ

• ವಿಶ್ಲೇಷಣಾಧ್ಯಯನ •

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ



ಸಂಶೋಧಕರು
ಬಸವರಾಜ ಶಿ. ಅನಗವಾಡಿ

ಮಾರ್ಗದರ್ಶಕರು
ಪ್ರೊ. ಎಸ್. ಸಿ. ಪಾಟೀಲ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨

ಬಸವಣ್ಣನವರನ್ನು ಕುರಿತ ವರ್ಣಚಿತ್ರಕಲೆ:

ವಿಶ್ಲೇಷಣಾಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಬಸವರಾಜ ಶಿ. ಅನಗವಾಡಿ

ಮಾರ್ಗದರ್ಶಕರು

ಪ್ರೊ. ಎಸ್. ಸಿ. ಪಾಟೀಲ
ಪ್ರಾಧ್ಯಾಪಕರು, ದೃಶ್ಯಕಲಾ ವಿಭಾಗ
ಮತ್ತು
ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,
ಪ್ರಾದೇಶಿಕ ಕಛೇರಿ : ಬೆಂಗಳೂರು

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೬

ಪ್ರಮಾಣ ಪತ್ರ

ಬಸವಣ್ಣನವರನ್ನು ಕುರಿತ ವರ್ಣಚಿತ್ರಕಲೆ: ವಿಶ್ಲೇಷಣಾಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಪ್ರೊ. ಎಸ್. ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 30/1/17

ಸ್ಥಳ : ಹಂಪಿ

(ಬಸವರಾಜ ಶಿ. ಅನಗವಾಡಿ)
ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೃಢೀಕರಣ ಪತ್ರ

ಬಸವರಾಜ ಶಿ. ಅನಗವಾಡಿ ಇವರು ಸಾದರಪಡಿಸಿದ **ಬಸವಣ್ಣನವರನ್ನು ಕುರಿತ ವರ್ಣಚಿತ್ರಕಲೆ: ವಿಶ್ಲೇಷಣಾಧ್ಯಯನ** ಎಂಬ ಶೀರ್ಷಿಕೆಯ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: 30|1|2017
ಸ್ಥಳ : ಹಂಪಿ

(ಪ್ರೊ. ಎಸ್.ಸಿ. ಪಾಟೀಲ)
ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಬೆಂಗಳೂರು

ಬಸವಣ್ಣನವರನ್ನು ಕುರಿತ ವರ್ಣಚಿತ್ರಕಲೆ

(ವಿಶ್ಲೇಷಣಾಧ್ಯಯನ)

ಪರಿವಿಡಿ

ಅಧ್ಯಾಯ : ೨

ಬಸವಣ್ಣನವರ ಜೀವನದ ಪ್ರಮುಖ ಘಟ್ಟಗಳ ವರ್ಣಚಿತ್ರಗಳು

ಅಧ್ಯಾಯ : ೩

ಬಸವಣ್ಣನವರ ವಚನಗಳ ಆಧಾರಿತ ಚಿತ್ರಗಳು

ಅಧ್ಯಾಯ : ೪

ಇತರೆ ಮಾಧ್ಯಮದಲ್ಲಿ ಅಭಿವ್ಯಕ್ತಗೊಂಡ ಬಸವಣ್ಣನವರು

ಅಧ್ಯಾಯ : ೫

ಬಸವಣ್ಣನವರ ಕುರಿತ ಭಾವಚಿತ್ರಗಳು

ಅಧ್ಯಾಯ : ೬

ಬಸವಣ್ಣನವರ ಕುರಿತ ವರ್ಣಚಿತ್ರಗಳ ಅಧ್ಯಯನಕ್ಕೆ ಪೂರಕವಾದ ಕಲಾಕೃತಿಗಳು

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

" ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯ
ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯಾ
ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯಾ" [೧]

ಜ್ಞಾನದ ಮೂಲಕವೇ ಅಜ್ಞಾನದ ಕೇಡುಕರ್ಮಗಳನ್ನು ನೋಡಬಹುದಾಗಿದೆ ಎಂದು ಜ್ಞಾನದ ಮಹತಿಯನ್ನು ವಿಶ್ವಕ್ಕೆ ಸಾರಿದ ಬಸವಣ್ಣನವರು ಶತ-ಶತಮಾನಗಳ ಅಂತರದ ನಂತರ ಈ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗುತ್ತಿದ್ದಾರೆ. ಜಗತ್ತಿನ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಇತಿಹಾಸವನ್ನು ಗಮನಿಸಿದಾಗ ಅದರಲ್ಲಿ ಆಯಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಾನ್ ನಾಯಕರು ನಮಗೆ ಕಂಡುಬರುತ್ತಾರೆ. ಅವರು ಅಂದಂದು ಮಾಡಿದ ಎಲ್ಲ ಸಾಧನೆಗಳನ್ನು ಇತಿಹಾಸದ ಪುಟಗಳಲ್ಲಿ ದಾಖಲು ಮಾಡುವ ಪರಿಕ್ರಮ ಸಾಮಾನ್ಯವಾದುದು. ಆದರೆ ಇತಿಹಾಸದ ಎಲ್ಲ ಪುಟಗಳು ಕೇವಲ ಅಕ್ಷರಸ್ಥ ಸಮಾಜವನ್ನು ಮಾತ್ರ ತಲುಪಲು ಸಾಧ್ಯ. ಅದೇ ಸಾಧಕರು ಮತ್ತು ಅವರ ಸಾಧನೆಗಳನ್ನು ಕಲಾಜಗತ್ತಿನ ಮೂಲಕ ಪರಿಚಯಿಸಿಕೊಡುವ ಬಹುಮುಖ್ಯ ಕೆಲಸವನ್ನು ಕಲಾವಿದರು ಮಾಡಿಕೊಡುತ್ತ ಬಂದಿದ್ದಾರೆ. ಭಗವಾನ್ ಬುದ್ಧ, ಏಸುಕ್ರಿಸ್ತ, ಜಗಜ್ಯೋತಿ ಬಸವೇಶ್ವರ, ಗಾಂಧಿ ಮುಂತಾದ ಸಾಮಾಜಿಕ ಮತ್ತು ಧಾರ್ಮಿಕ ನಾಯಕರನ್ನು ನಮ್ಮ ಅಕ್ಷರಸ್ಥ ಸಮಾಜವು ಸಾಹಿತ್ಯಕೃತಿಗಳ ಮೂಲಕ ಅರ್ಥೈಸಿಕೊಳ್ಳುತ್ತದೆ. ಗ್ರಾಮೀಣ ಪರಿಸರದ ಓದು-ಬರಹ ಬಾರದ ಜನರು ಇಂತಹ ಸಾಧಕರನ್ನು ವರ್ಣಚಿತ್ರ, ಪ್ರತಿಮೆಗಳ ಮೂಲಕ ಸುಲಭವಾಗಿ ಗ್ರಹಿಸುತ್ತಾರೆ. ಒಂದು ಚಿತ್ರವು ಸಾವಿರ ಪದಗಳಿಗೆ ಸಮ ಎನ್ನುವ ಕಲೆಯ ಔನ್ನತ್ಯವನ್ನು ಸಾರುವ ಮಾತನ್ನು ಇಲ್ಲಿ ನೆನೆಯಬಹುದು.

---

೦೧. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೮೮೨), ಪು-೪೨೪

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದ ಜನಜೀವನದ ಎಲ್ಲ ರಂಗಗಳಲ್ಲಿ ಸ್ಥಗಿತ ಪರಿಸ್ಥಿತಿಯಿದ್ದು ಜನರು ಹೊಸ ವಾತಾವರಣಕ್ಕಾಗಿ ಹಾತೊರೆಯುತ್ತಿದ್ದರು. "ಒಂದು ಕಡೆ ಸಾಮಾಜಿಕ ವೈಷಮ್ಯ, ಇನ್ನೊಂದು ಕಡೆ ಧಾರ್ಮಿಕ ಜಟಿಲತೆ, ಮತ್ತೊಂದು ಕಡೆ ವ್ರತಾಚಾರಗಳ ಡಾಂಭಿಕತೆಯಿಂದ ಜನ ಕಂಗೆಟ್ಟಿದ್ದರು. ಇಂಥ ವಿಷಮ ಪರಿಸ್ಥಿತಿಯಿಂದ ಪಾರು ಮಾಡುವ ಮಹಾತ್ಮನೊಬ್ಬನ ಬರವಿಗಾಗಿ ಜ್ಯೋತಿಯೊಂದು ಆವಿಷ್ಕಾರವಾದಂತೆ ಬಸವಣ್ಣ ಉದಯವಾದರು."[೨] ಬಸವಣ್ಣನವರ ಉದಯದಿಂದ ಹಿಂದಿನ ಶತಮಾನಗಳಲ್ಲಿ ಸಮಾಜದಲ್ಲಿ ಕವಿದಿದ್ದ ಕಾರ್ಮೋಡಗಳು ಕರಗಿದವು ಎಂದೇ ಹೇಳಬಹುದಾಗಿದೆ.

ಕರ್ನಾಟಕದ ವಿಜಾಪುರ ಜಿಲ್ಲೆಯ ಬಾಗೇವಾಡಿಯು ಹಿಂದೆ ಪ್ರಸಿದ್ಧವಾದ ಅಗ್ರಹಾರವಾಗಿತ್ತು. ಶಾಸನಗಳಲ್ಲಿ ಈ ಜ್ಞಾನಕೇಂದ್ರದ ವರ್ಣನೆಯಿದೆ. 'ಶ್ರೀಮತ್ತರ್ದವಾಡಿ ಮಧ್ಯಗ್ರಾಮ ಬಾಗವಾಡಿ–ಪುರವರಾಧೀಶ್ವರ'ನೆಂಬ ಕೀರ್ತಿಗೆ ಪಾತ್ರನಾದ ಮಾದಿರಾಜನು ಬಾಗವಾಡಿಯ ಐನೂರು ಮಹಾಜನರಿಗೆ ಅಗ್ರೇಶ್ವರನಾಗಿದ್ದನು. ಆತ ಕಮ್ಮೆಕುಲದ ಶೈವಬ್ರಾಹ್ಮಣ, ಆತನ ಪತ್ನಿ ಸದ್ಗುಣವತಿ ಮಾದಲಾಂಬಿಕೆ, ಅವರು ಕೂಡಲಸಂಗಮದ ಸಂಗಮನಾಥನಲ್ಲಿ ಅನನ್ಯ ಭಕ್ತಿಯುಳ್ಳವರಾಗಿದ್ದರು. ಅವರು ನಾಗಲಾಂಬೆ ಎಂಬ ಹೆಣ್ಣು ಮಗಳಾದ ನಂತರ ಗಂಡು ಸಂತಾನ ಬೇಕೆಂದು "ಮಾದಲಾಂಬೆ ಮಾಡಿದ ನಂದೀಶ್ವರ ವ್ರತದ ಫಲವಾಗಿ ೧೧೩೪ನೆಯ ನವೆಂಬರ್ ೭ರಂದು ಬಸವಣ್ಣನ ಜನನವಾಯಿತು. ಕೂಡಲಸಂಗಮದಿಂದ ಬಂದ ಜಾತವೇದ ಗುರುಗಳು ಮಗುವನ್ನು ಹರಸಿಹೋದರು. ಮಗುವಿನ ಬಾಲಲೀಲೆಗಳು ತಂದೆ ತಾಯಿಗಳ ಮತ್ತು ಅಗ್ರಹಾರದವರ ಕಣ್ಮನಗಳನ್ನು ತುಂಬಿದವು. ಬಸವ ಅಗ್ರಹಾರಾಧಿಪತಿಯ ಮಗನಾದುದರಿಂದ ಎಲ್ಲರ ಕಣ್ಮಣಿಯಾಗಿ ಬೆಳೆದನು."[೩] ಆಧ್ಯಾತ್ಮಿಕ ನಂಬಿಕೆಯ ಫಲವಾಗಿ ಹುಟ್ಟಿದ ಬಸವನಲ್ಲಿ ಭವಿಷ್ಯದ ಚಿಂತನಾಫಲಗಳು ಅಡಗಿದ್ದವು.

ಚಿಕ್ಕಮಕ್ಕಳಲ್ಲಿ ಅನುಕರಣೆ ಸಹಜ. ಆದರೆ ಬಾಲ ಬಸವ ಯಾವುದೇ ಆಚರಣೆಯನ್ನು ಕುರುಡಾಗಿ ಅನುಸರಿಸುತ್ತಿರಲಿಲ್ಲ. ವಿಚಿಕಿತ್ಸಕ ದೃಷ್ಟಿಯಿಂದ ಅದು ಏಕೆ? ಇದು ಏಕೆ? ಎಂದು ಪ್ರಶ್ನಿಸಿ ಬಂದ ಉತ್ತರ ಸಮಾಧಾನಕರವಾಗಿದ್ದರೆ ಮಾತ್ರ ಆಚರಿಸುತ್ತಿದ್ದನು. ಜನರಲ್ಲಿ ತಾರತಮ್ಯ ಬೆಳೆಸುವ ಯಾವುದೇ ಆಚರಣೆಯನ್ನು ಆತ ಖಂಡಿಸುತ್ತಿದ್ದನು. ಸೂಕ್ಷ್ಮ ಸಂವೇದನಾಶೀಲನಾದ ಆತ ಸಮಾಜದಲ್ಲಿ ನಡೆಯುತ್ತಿದ್ದ ಸಂಗತಿಗಳಿಗೆ ಸ್ಪಂದಿಸುತ್ತಿದ್ದನು. ಅವನ ತಾರ್ಕಿಕ ಬುದ್ಧಿಯನ್ನು ಕಂಡ ಕೆಲವರಿಗೆ ತಲೆನೋವಾದುದು ಸಹಜ. "ಬಸವಣ್ಣನಿಗೆ ಶುಷ್ಕ ಕರ್ಮಗಳಿಗಿಂತ ನಿರ್ಮಲವಾದ ಭಕ್ತಿ ಸೊಗಸೆನಿಸಿತು. ವೈದಿಕ ಸಂಪ್ರದಾಯದ ಅರ್ಥಹೀನ ಆಚರಣೆಗಳು ಅವನಿಗೆ ಹಿಡಿಸಲಿಲ್ಲ."[೪] ಹೀಗೆ ಬಾಲ್ಯದ ಬದುಕಿನಲ್ಲಿಯೇ ಪ್ರಗತಿಪರ ಚಿಂತನಾಕ್ರಮವನ್ನು ಮೈಗೂಡಿಸಿಕೊಂಡ ಬಾಲ ಬಸವನು ತನ್ನ ಮುಂದಿನ ದಿನಗಳಲ್ಲಿ ಪುರೋಹಿತಶಾಹಿ ವರ್ಗದ ವೈರಿಯಾಗಿ, ಶೋಷಿತ ಸಮಾಜದ ಧ್ವನಿಯಾಗಿ ಗೋಚರವಾಗುತ್ತಾನೆ. ಹತ್ತು ಹಲವು ವಿಶೇಷಣಗಳಿಂದ ವ್ಯಕ್ತಿತ್ವವನ್ನು ರೂಪಿಸಿಕೊಂಡ ಬಸವಣ್ಣನವರು ವೈಚಾರಿಕತೆ ರಹಿತ ಸಮಾಜದ ನಡವಳಿಕೆಗಳಿಂದ ಬೇಸತ್ತು ಉದಾತ್ತವಾದ,

---

೦೨. ಟಿ. ಆರ್. ಮಹೇಶ್ವರಯ್ಯ (ಸಂ.) : ಬಸವಣ್ಣನವರ ಸಮಗ್ರ ವಚನಗಳು, ಪು–೫

೦೩. ಅದೇ.

೦೪. ಅದೇ., ಪು–೬

ವೈಚಾರಿಕವಾದ ನೆಲೆಯ ಹುಡುಕಾಟದಲ್ಲಿದ್ದಾಗಲೇ ಅವರಿಗೆ ಕಂಡಿದ್ದು ಕೂಡಲಸಂಗಮ ಸುಕ್ಷೇತ್ರ. 'ಕೃಷ್ಣ ಮತ್ತು ಮಲಾಪಹಾರಿ ನದಿಗಳು' ಸಂಗಮಿಸುವ ಸ್ಥಳ ಕೂಡಲಸಂಗಮ ಕ್ಷೇತ್ರ. ಅದು ಆಗ ಒಂದು ಪ್ರಸಿದ್ಧವಾದ ಘಟಿಕಾ ಸ್ಥಾನವಾಗಿತ್ತು. ಧರ್ಮ, ಸಾಹಿತ್ಯ, ಸಂಸ್ಕೃತಿಗಳ ತ್ರಿವೇಣಿ ಸಂಗಮವಾಗಿತ್ತು. ಶಾಸನಗಳು ಅದನ್ನು 'ಆದಿಬ್ರಹ್ಮಪುರ' ಎಂದು ಕರೆದಿವೆ. ಅದೊಂದು ಸುವಿಖ್ಯಾತ ವಿದ್ಯಾಕೇಂದ್ರವಾಗಿತ್ತು. ಅನೇಕ ವಿದ್ಯಾರ್ಥಿಗಳು, ಸಾಧಕರು ಅಲ್ಲಿ ಅಧ್ಯಯನ ಮಾಡುತ್ತಿದ್ದರು, ಸಾಧನೆಗೈಯುತ್ತಿದ್ದರು. ಕಪ್ಪಡಿಯ ಆಚಾರ್ಯರು ಬಸವಣ್ಣನಿಗಾಗಲೀ, ನಾಗಲಾಂಬೆಗಾಗಲೀ ಚಿರಪರಿಚಿತರೇ. ಅವರು ಬಸವಣ್ಣ, ನಾಗಲಾಂಬೆಯರನ್ನು ಆದರದಿಂದ ಬರಮಾಡಿಕೊಂಡರು. ವಿಚಾರಶೀಲ ಬಸವಣ್ಣನ ಆಗಮನ ಗುರುಗಳಿಗೆ ಹೆಚ್ಚಿನ ಸಂತೋಷ ತಂದಿತು. ಬಸವಣ್ಣನಿಗೂ ಆ ಕೇಂದ್ರದ ಪರಿಸರ ಹಿಡಿಸಿತು. ಘಾಸಿಗೊಳಗಾಗಿದ್ದ ಅವನ ಮನಸ್ಸು ಸತ್ಯಾನ್ವೇಷಣೆಗೆ ಯೋಗ್ಯಸ್ಥಳ ದೊರೆತುದಕ್ಕೆ ಸಮಾಧಾನಗೊಂಡಿತು. ಗುರುಗಳ ಬೋಧೆ, ಗ್ರಂಥಾಧ್ಯಯನ, ಸುತ್ತಲಿನ ಸಾಧಕರ ಆಚರಣೆಗಳ ಪ್ರತ್ಯಕ್ಷ ದರ್ಶನಗಳಿಂದ ಬಸವಣ್ಣನ ವ್ಯಕ್ತಿತ್ವ ವಿಕಾಸವಾಗತೊಡಗಿತು. ಸ್ಥಾನಪತಿಗಳಾದ ಈಶಾನ್ಯ ಗುರುವಿನ ಶಿಕ್ಷೆ, ಜಾತವೇದ ಮುನಿಯ ದೀಕ್ಷೆ, ಕೂಡಲಸಂಗಮನಾಥನ ರಕ್ಷೆಗಳು ಬಾಲಬಸವನಿಗೆ ಹೊಸಜನ್ಮ ನೀಡಿದವು. ಜ್ಞಾನ ಸಂಪನ್ನನಾದ ಬಸವಣ್ಣ ಕೂಡಲಸಂಗಮದೇವನ ಬಗ್ಗೆ ಅನನ್ಯ ಭಕ್ತಿಭಾವವನ್ನು ಬೆಳೆಸಿಕೊಂಡನು. ಶಿವಪೂಜೆ, ಶಿವಧ್ಯಾನ, ಶಿವಾನುಭವ ಗೋಷ್ಠಿಗಳು ನಿರಂತರ ಸಾಗಿದವು. ಸ್ಥಾವರ ಲಿಂಗೋಪಾಸನೆಯಲ್ಲಿ ಆರಂಭವಾದ ಬಸವಣ್ಣನ ಸಾಧನೆ ಕ್ರಮೇಣ ಇಷ್ಟಲಿಂಗೋಪಾಸನೆಯಾಗಿ ಪರಿವರ್ತನೆಗೊಂಡಿತು."[೧೫] ಇಂತಹ ಮನಃ ಪರಿವರ್ತನೆಗೊಳಗಾದ ಬಸವಣ್ಣ ಯೌವ್ವನಾವಸ್ಥೆಯ ಹಂತಕ್ಕೆ ಬಂದಾಗ ಅಧ್ಯಯನ ಗಾಂಭಿರ್ಯತೆಯೂ ಪ್ರಬುದ್ಧಾವಸ್ಥೆಗೆ ತಲುಪಿತು.

ಅನಂತರ ಬಸವಣ್ಣನವರು ಈ ದಿಸೆಯಲ್ಲಿ ಆಳವಾದ ಸಂಶೋಧನೆ ನಡೆಸಿದರು. ಆಚರಣೆ ಮಾಡಿ ನೋಡಿದರು. ಆಗ ಒಂದು ವಿಶೇಷ ವಿಚಾರ ಸ್ಫುರಿಸಿತು; ಹೊಸ ದಿಗಂತವೊಂದು ತೆರೆದುಕೊಂಡಿತು, ಸಮಾಜದಲ್ಲಿನ ವೈಷಮ್ಯವನ್ನು, ಮಾನವ-ಮಾನವರ ನಡುವಿನ ತಾರತಮ್ಯವನ್ನು ಹೋಗಲಾಡಿಸಿ ಎಲ್ಲರನ್ನು ಒಂದು ಕೃಪಾಚ್ಛತ್ರದಡಿ ತರಲು ಇಷ್ಟ ಲಿಂಗೋಪಾಸನೆ ಉತ್ತಮ ಸಾಧನವಾಗುತ್ತದೆ ಎಂಬುದನ್ನು ಕಂಡುಕೊಂಡರು. 'ಉಂಬ ಬಟ್ಟಲು ಬೇರೆ ಕಂಚಲ್ಲ, ನೋಡುವ ದರ್ಪಣ ಬೇರೆ ಕಂಚಲ್ಲ. ಬೆಳಗೆ ಕನ್ನಡಿಯೆನಿಸಿತ್ತು;' ಹಿಂದೆ ಹೊಳಪಿನ ಕಂಚಿನ ತಟ್ಟೆಯನ್ನು ಮುಖ ನೋಡಿಕೊಳ್ಳುವ ಕನ್ನಡಿಯಾಗಿ ಬಳಸುತ್ತಿದ್ದರು. ಅದರಂತೆ ಮನಸ್ಸನ್ನು ಸಂಸ್ಕಾರಕ್ಕೆ ಒಳಪಡಿಸಿ, ನಿರ್ಮಲಗೊಳಿಸಿದರೆ ಅರಿವಿನ ಬಾಳಾಗುತ್ತದೆ. ಆಗ ಸಾಕ್ಷಾತ್ಕಾರ ಎಷ್ಟು ಹೊತ್ತು? ಬಸವಣ್ಣನ ಮನದಲ್ಲಿ ಮೂಡಿದ ಈ ಕ್ರಾಂತಿಕಾರಕ ಕಲ್ಪನೆ ಯಾರನ್ನೂ ಅರಸುವ ಗೋಜಿಗೆ ಹೋಗದೆ ವ್ಯಕ್ತಿ ತಂತಾನೆ ವಿಕಾಸಗೊಳ್ಳುವ ಮುಕ್ತ ಅವಕಾಶವನ್ನು ನೀಡುವಂಥದ್ದಾಗಿತ್ತು. "ಬಡವ-ಬಲ್ಲಿದ, ಕುಲಜ-ಕುಲಹೀನ, ಹೆಣ್ಣು-ಗಂಡು ಮೊದಲಾದ ತರ-ತಮವನ್ನು ಅಳಿಸಿ, ಸಮರಸ ಸಮಾಜವನ್ನು ಕಟ್ಟಲು ಇದೊಂದು ಸಮರ್ಥ ಮಾಧ್ಯಮವಾಗಬಲ್ಲುದೆಂಬುದನ್ನು ಬಸವಣ್ಣ ಕಂಡುಕೊಂಡರು."[೧೬] ಹೀಗೆ ಬಸವಣ್ಣನವರಲ್ಲಿ ಸಂಸ್ಕಾರ, ಸಾಕ್ಷಾತ್ಕಾರಗಳು ಮನದಲ್ಲಿ ಮೂಡುವುದರೊಂದಿಗೆ ಕ್ರಾಂತಿಕಾರಕ ಚಿಂತನೆಗಳು ಒಡಮೂಡತೊಡಗಿದವು.

೧೫. ಟಿ. ಆರ್. ಮಹೇಶ್ವರಯ್ಯ (ಸಂ.) : ಬಸವಣ್ಣನವರ ಸಮಗ್ರ ವಚನಗಳು, ಪು-೭

೧೬. ಅದೇ.

ಕ್ರಾಂತಿಯೆಂದರೆ ಹಳೆಯದನ್ನೆಲ್ಲಾ ಸುಟ್ಟು ಅಳಿಸಿ ಹೊಸದನ್ನು ಸೃಷ್ಟಿಸುವುದಲ್ಲ, ಹಳೆಯದನ್ನು ಬಳಸಿಕೊಂಡು ಹೊಸದನ್ನು ಕಟ್ಟುವುದು. "ಮಾನವಶಕ್ತಿಯ ಸೂಕ್ತಬಳಕೆ ಹಾಗೂ ತನ್ನ ಸುತ್ತಮುತ್ತ ಇರುವ ವಸ್ತುವಿಶೇಷಗಳನ್ನೇ ಬಳಸಿಕೊಂಡು ಸರ್ವಸಮಾನತೆಯ ಸ್ವಯಂಪೂರ್ಣ ಸಮಾಜದ ರಚನೆ ಮಾಡುವುದು"[೭] ಬಸವಣ್ಣನವರ ಬದುಕಿನ ಧ್ಯೇಯವಾಗಿತ್ತು.

ಬಸವಣ್ಣನವರ ವಿಚಾರಧಾರೆ ಭರತಖಂಡದ ಅನೇಕ ಭಾಗಗಳ ಸಮಾನ ಚಿಂತಕರ ಗಮನವನ್ನು ಸೆಳೆಯಿತು. ಸಾವಿರಾರು ಜನ ಕಲ್ಯಾಣಕ್ಕೆ ಬಂದು ಸೇರತೊಡಗಿದರು. ಎಲ್ಲೆಲ್ಲಿಂದ ಬಂದರು? "ಕಾಶ್ಮೀರದಿಂದ ಮಹದೇವ ಭೂಪಾಲ, ದಕ್ಷಿಣದಿಂದ ಸಕಲೇಶ ಮಾದರಸ, ಗುಜರಾತಿನಿಂದ ಆದಯ್ಯ, ಕಳಿಂಗದಿಂದ ಮರುಳ ಶಂಕರದೇವ, ಆಂಧ್ರದಿಂದ ಮೈದುನ ರಾಮಯ್ಯ ಇತ್ಯಾದಿ."[೮]

ಇದುವರೆಗಿನ ಬಸವಣ್ಣನವರ ಅಧ್ಯಯನಗಳನ್ನು ಗಮನಿಸಿದರೆ ಅವರಲ್ಲಿ ಕಂಡುಬಂದ ಚಿಂತನಾಕ್ರಮಗಳು ಅನನ್ಯ, ಅನೂಹ್ಯ ಮತ್ತು ವಿಸ್ಮಯಕರ! ಧಾರ್ಮಿಕ ಆಚರಣೆಗಳಲ್ಲಿ ಹೆಣ್ಣಿನ ಪಾಲ್ಗೊಳ್ಳುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿತ್ತು, ಪತಿಯನ್ನು ಕಳೆದುಕೊಂಡ ಸ್ತ್ರೀ ಯಾವುದೇ ಮಂಗಳ ಕಾರ್ಯಗಳಲ್ಲಿ ಭಾಗಿಯಾಗುವಂತಿಲ್ಲ! ಪುರುಷ ಪರಿತ್ಯಕ್ತ ಸ್ತ್ರೀಯನ್ನು ಸಮಾಜ ನಡೆಸಿಕೊಂಡ ನಡೆಯ ಕುರಿತು ಬಸವಣ್ಣನವರಿಗೆ ಅಗಾಧವಾದ ಅತೃಪ್ತಿಯಿತ್ತು. ಮನುಷ್ಯರೆಲ್ಲಾ ಒಂದೇ ಎಂಬ ಭಾವ ಈ ಸಮಾಜಕ್ಕೆ ಬರುವುದು ಯಾವಾಗ? ಎಂಬ ಪ್ರಶ್ನೆಯನ್ನು ತಮ್ಮೊಳಗೆ ಹಾಕಿಕೊಂಡು, ಸಮಾಜದ ಅಂಧಕಾರವನ್ನು ತೊಡೆದು ಹಾಕಲು, ತಮ್ಮ ಮನದಲ್ಲಿನ ಸಂಕಲ್ಪವನ್ನು ಸಾಕಾರಗೊಳಿಸಲು ಬದ್ಧತೆಯನ್ನು ಹೊಂದಿದ ಬಸವಣ್ಣನವರಲ್ಲಿ ಅಧ್ಯಯನಕಾರರು ಈ ಮುಂದಿನ ಸದ್ಗುಣಗಳನ್ನು ಕಂಡರಿಸುತ್ತಾರೆ.

ವಿಚಾರವಂತರು, ಧರ್ಮ ಸಂಸ್ಥಾಪಕರು, ಧಾರ್ಮಿಕ ಸಹಿಷ್ಣು, ವಚನಕಾರರು, ಕವಿ, ಸಾಮಾಜಿಕ ಚಿಂತಕ, ಸಮಾಜವಾದಿ, ಸಮತಾವಾದಿ, ಯೋಗಿ, ಋಷಿ, ಭಂಡಾರಿ, ದಂಡನಾಯಕ, ಕರಣಿಕ, ಸ್ತ್ರೀ–ಸ್ವಾತಂತ್ರ್ಯವಾದಿ, ಆರ್ಥಿಕ ತಜ್ಞ, ವಿಜ್ಞಾನಿ, ಪ್ರಜಾಪ್ರಭುತ್ವ ಸಂಸ್ಥಾಪಕ, ಪ್ರಜಾ ಸಂವಿಧಾನ ಸಂಸ್ಥಾಪಕ, ಇತಿಹಾಸ ಪುರುಷ, ಪುರಾಣ ಪುರುಷ, ಕನ್ನಡ ಪಂಡಿತ, ಕನ್ನಡ ಹೋರಾಟಗಾರ, ಜಾನಪದ ತಜ್ಞ, ಅಸ್ಪೃಶ್ಯತಾ ನಿವಾರಕ, ಅಭಿವೃದ್ಧಿ ಚಿಂತಕ, ಸಸ್ಯತಜ್ಞ, ಅಹಿಂಸಾವಾದಿ, ಪವಾಡ ಪುರುಷ, ೬೪ ವಿದ್ಯೆಗಳ ಪೈಕಿ ೬೩ ವಿದ್ಯೆಗಳಲ್ಲಿ ಪಾರಂಗತ, ಕಾಲಜ್ಞಾನಿ, ಪ್ರಕೃತಿರಕ್ಷಕ, ಸಾಹಿತ್ಯ ರಚನೆಕಾರ, ಸಾಮಾಜಿಕ ಮಾರ್ಗದರ್ಶಕ, ಧಾರ್ಮಿಕ ಕ್ರಾಂತಿಕಾರಿ, ಸ್ಥಿತಪ್ರಜ್ಞ, ದೈವಾಂಶಸಂಭೂತ, ಸಾಮಾಜಿಕ ವೈದ್ಯ, ಕಾಯಕಯೋಗಿ, ಶರಣ, ಶಿಷ್ಟಾಚಾರಿ, ಏಕದೇವೋಪಾಸಕ, ವಿಭೂತಿ ಪುರುಷ, ಮಾನವಹಕ್ಕು ಹೋರಾಟಗಾರ, ಪ್ರಕೃತಿ ಧರ್ಮದ ಆರಾಧಕ, ಶಿಕ್ಷಣ ತಜ್ಞ, ದಾಸೋಹ ತತ್ತ್ವದ ಹರಿಕಾರ, ಗಣಿತಜ್ಞ, ದಾರ್ಶನಿಕ, ಕಲಿ, ತತ್ತ್ವಶಾಸ್ತ್ರಜ್ಞ, ಮಹಾ ಮಾನವತಾವಾದಿ ಹೀಗೆ ಬಸವಣ್ಣನವರಲ್ಲಿ ಕಂಡುಬಂದ ವಿಶೇಷಣಗಳಿವು. ಇಂತಹ ಕಾಯಕ

೦೭. ಟಿ. ಆರ್. ಮಹೇಶ್ವರಯ್ಯ (ಸಂ.) : ಬಸವಣ್ಣನವರ ಸಮಗ್ರ ವಚನಗಳು, ಪು–೭

೦೮. ಅದೇ., ಪು–೯

ಯೋಗಿಯ ಜೀವನಚರಿತ್ರೆಯ ಅಧ್ಯಯನ ಇಳೆಯ ಒಡಲಾಳವನ್ನು ಬಗೆದಂತೆ! ಬಸನವಣ್ಣನವರ ಬದುಕು ಸಮಾಜದ ಎಲ್ಲ ವರ್ಗದವರಿಗೂ ಪ್ರೇರಣೆಯಾಗಿದೆ. ಅದರಲ್ಲೂ ಸಾಹಿತಿಗಳಿಗೆ, ಕವಿಗಳಿಗೆ, ತತ್ತ್ವಜ್ಞಾನಿಗಳಿಗೆ ನಿತ್ಯ ಆಕರಗ್ರಂಥವಾಗಿರುವ ಬಸವಣ್ಣನವರ ಬದುಕು ಕಲಾವಿದರನ್ನು ಪ್ರೇರೇಪಿಸಿದ್ದು ಸಹ ಪವಾಡವೇ.

ಇಂತಹ ಕ್ರಾಂತಿಕಾರಿ ಯೋಗಿಯು ತಮ್ಮ ಬದುಕಿನುದ್ದಕ್ಕೂ ಸಾವಿರಾರು ವಚನಗಳನ್ನು ಬರೆದು ಅನುಭವ ಮಂಟಪದಲ್ಲಿ ಮಂಡಿಸಿದ್ದಾರೆ. ೮೦೦ ವರ್ಷಗಳ ನಂತರವೂ ಆ ವಚನಗಳು ಇಂದಿಗೂ ಪ್ರಸ್ತುತವಾಗಿರಲು ಮುಖ್ಯ ಕಾರಣ ಈಗಲೂ ಜೀವಂತವಾಗಿರುವ ಅಸ್ಪೃಶ್ಯತೆ, ಸಾಮಾಜಿಕ ತಾರತಮ್ಯ, ಮಾನವಸಂಬಂಧಗಳಲ್ಲಿ ಇರುವ ಹಗೆತನ, ವೈಷಮ್ಯ ಇನ್ನೂ ಮುಂತಾದವು.

ಕಳೆದ ಎಂಟು ಶತಮಾನಗಳಲ್ಲಿ ಬಸವಣ್ಣವನವರ ವಚನಗಳಿಂದ ಅನೇಕ ಶರಣರು, ಸಾಮಾಜಿಕ ಚಿಂತಕರು, ವಿದ್ವಾಂಸರು, ಕವಿಗಳು, ಕಲಾವಿದರು ಸ್ಫೂರ್ತಿ ಪಡೆದು ಅವರ ವಚನಗಳನ್ನು ಮರುವ್ಯಾಖ್ಯಾನ ಅಥವಾ ಮರು ಓದಿಗೆ ಒಳಪಡಿಸಿದ್ದಾರೆ. ಚಿತ್ರಕರು, ಶಿಲ್ಪಿಗಳು ತಮ್ಮ ಚಿತ್ರ-ಶಿಲ್ಪಗಳಲ್ಲಿ ಬಸವಣ್ಣನವರ ವಚನಗಳ ಸಾರದೊಂದಿಗೆ ಆಧ್ಯಾತ್ಮಿಕ ಸಾಧನೆ, ಬದುಕು ಮತ್ತು ಸಂಸ್ಕಾರ, ಬಡವ ಬಲ್ಲಿದ ನಡುವಿನ ಭೇದಭಾವಗಳಿಗೆ ಸಂಬಂಧಪಟ್ಟಂತೆ ದೃಶ್ಯರೂಪಕಗಳನ್ನು ಅಭಿವ್ಯಕ್ತಿಸಿದ್ದಾರೆ. ಬಸವಣ್ಣನವರ ಬದುಕು-ಬರಹಗಳ ಕುರಿತು ಇಡೀ ದೇಶದಾದ್ಯಂತ ಅನೇಕ ಕಲಾವಿದರು ದೃಶ್ಯರೂಪಗಳ ಮುಖೇನ ಪ್ರತಿಕ್ರಿಯಿಸಿದ್ದಾರೆ. ಅವರ ಅನೇಕ ಭಾವಚಿತ್ರಗಳು-ಭಾವಶಿಲ್ಪಗಳು ವಿಶ್ವದ ಬಹುಭಾಗದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿವೆ.

ಅರಮನೆಯಿಂದ ಅನುಭವ ಮಂಟಪದವರೆಗಿನ ಬಸವಣ್ಣನವರ ಪಯಣದ ಓದು ಬಹು ವಿಶಾಲವಾದುದು. ಸುಮಾರು ಎಂಟನೂರು ವರ್ಷಗಳ ನಂತರವೂ ಈಗಲೂ ಬಸವಣ್ಣನವರ ಕುರಿತ ಅಧ್ಯಯನಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆದಿವೆ-ನಡೆಯುತ್ತಲೂ ಇವೆ. ಅವರ ಪರಿಚಯ ಈ ಅಧ್ಯಯನದಲ್ಲಿ ನೆಪ ಮಾತ್ರಕ್ಕೆ. ಬಸವಣ್ಣನವರನ್ನು ಓದಿದವರು ವಿದ್ವಾಂಸರು ಮತ್ತು ಅವರ ಅನುಯಾಯಿಗಳು. ಇವರಿಗೆಲ್ಲ ಇಂದಿನವರೆಗೂ ಬಸವಣ್ಣನವರ ವಚನಗಳೇ ಮೇಲುಪ್ಪರಿಗೆ. ಇವೆಲ್ಲವನ್ನೂ ಮೀರಿದ, ಅಂದರೆ ಬಸವಣ್ಣನವರ ಬದುಕು, ಅವರ ಕಾವ್ಯ-ಸಾಹಿತ್ಯ ಕೃಷಿಗೆ ಸಂಬಂಧಪಟ್ಟ ಚಿತ್ರ-ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸುವುದೇ ಈ ಅಧ್ಯಯನದ ಮೂಲ ಗುರಿ.

ಕಾಯಕಯೋಗಿ ಬಸವಣ್ಣನವರ ಪಯಣದ ಹಾದಿ ಅತಿ ದುರ್ಗಮವಾದುದು. ಬಾಲ್ಯದಿಂದ ಜೀವನದ ಸಂಧ್ಯಾಕಾಲದವರೆಗೂ ಅವರ ಮನದ ತೊಳಲಾಟಗಳೆಲ್ಲವನ್ನೂ ಅವರ ವಚನಗಳಲ್ಲಿ ಕಾಣಬಹುದಾಗಿದೆ. ಹನ್ನೆರಡನೆಯ ಶತಮಾನದ ನಾಗರಿಕ ಸಮಾಜ, ಸಂಸ್ಕೃತಿ, ಸಂಸ್ಕಾರಗಳು ನಿರ್ದಿಷ್ಟ ಗೊತ್ತು-ಗುರಿಯಿಲ್ಲದೇ ಹೊಯ್ದಾಡುತ್ತಲೇ ಇದ್ದವು. ಆಗ ಕಲೆಯ ಮೂಲಕವಾಗಲೀ ಅಥವಾ ಸಾಹಿತ್ಯದ ಮೂಲಕವಾಗಲಿ ಸಮಾಜದ ಅಂಕು-ಡೊಂಕುಗಳನ್ನು ಸರಿಪಡಿಸುವುದು ಅಸಾಧ್ಯವೆನ್ನಬಹುದಾದ ಸಂದರ್ಭದಲ್ಲಿ ಬಸವಣ್ಣನವರ ಪ್ರವೇಶ ಅತ್ಯಂತ ಸಕಾಲಿಕವಾದುದು.

ಜಗತ್ತು ಹುಟ್ಟಿದಂದಿನಿಂದ ಮಾನವ ಸಂಸ್ಕೃತಿ, ಸಂಸ್ಕಾರದ ಇತಿಹಾಸದಲ್ಲಿ ಅನೇಕ ಏರಿಳಿತಗಳು ಕಂಡುಬಂದಿವೆ. ಆಯಾ ಕಾಲದ ನಾಗರಿಕತೆ ಮತ್ತು ಸಂಸ್ಕೃತಿ, ಸಂಸ್ಕಾರವನ್ನು ಅಳೆಯಲು ಕಲೆ ಮತ್ತು ಸಾಹಿತ್ಯ ಮಾನದಂಡಗಳೆಂದು ನಿಸ್ಸಂದೇಹವಾಗಿ ಹೇಳಬಹುದು. ಮನುಷ್ಯನು ಸಾಹಿತಿಯಲ್ಲದಿದ್ದಾಗ ಕಲಾತ್ಮಕ ಜೀವಿಯಾಗಿದ್ದನು. ಅದರ ಸಂಗಡವೇ ಸಂಸ್ಕಾರ ಬೆಳೆದು ಬಂತು. ಇವೆರಡೂ ಬೇರೆ ಬೇರೆ ಎನ್ನದಷ್ಟು ಹೊಂದಿಕೊಂಡು ಇದ್ದವು; ಎಂದರೆ ಅವನ ಜೀವನದಲ್ಲಿ ಸಂಸ್ಕಾರ ಮತ್ತು ಕಲೆ ಬೆರೆತುಹೋಗಿದ್ದುವು. ಸಂಸ್ಕಾರವು ಜೀವನವಾದರೆ ಕಲೆಯು ಭಾವವಾಗಿತ್ತು. ನೃತ್ಯ, ಸಂಗೀತ, ಶಿಲ್ಪ, ವಾಸ್ತು, ಚಿತ್ರ ಮತ್ತು ಸಾಹಿತ್ಯ ಇವು ಧರ್ಮಪ್ರೇರಿತವಾದ ಸಂಸ್ಕಾರಗಳ ಅಂಗವಾಗಿಯೇ ಹುಟ್ಟಿದವು. ಕೇವಲ ಇತ್ತೀಚಿನ ಜೀವನದಲ್ಲಿ ಬೇರೆ ಬೇರೆಯಾಗುತ್ತ ಬಂದವು. ಮತ-ಧರ್ಮಗಳು ಬೇರೆಯಾಗಿ ಕಾಣಿಸುತ್ತಿದ್ದರೂ ಕಲೆಗಳನ್ನಳೆಯುವಾಗ, ಅವು ಆಯಾ ಕಾಲದ ಜನತೆಯ ಸಂಸ್ಕೃತಿ ಸಂಸ್ಕಾರಗಳ ಸೂಚಿಯೆಂದೇ ಹೇಳಬೇಕು. "ಹಕ್ಕಿಗಳು ಎಂದರೆ ಕೋಗಿಲೆ, ಭ್ರಮರ ಇವುಗಳು ಹಾಡುವುದನ್ನು ಕೇಳಿ ಮಾನವನು ತನ್ನ ಸಂತೋಷದಲ್ಲಿ ಹಾಡಿದ, ನವಿಲು ಇನ್ನಿತರ ಪ್ರಾಣಿಗಳು ಕುಣಿದಂತೆ, ಸಂತೋಷದಲ್ಲಿ ಕುಣಿದ. ಆದರೆ ಅವಶ್ಯ ಬಿದ್ದಾಗ ತಾನು ನೋಡಿದುದನ್ನು ಮತ್ತು ತನ್ನ ಅನುಭವ, ವಿಚಾರಗಳನ್ನು ಇನ್ನೊಬ್ಬನ ಮುಂದೆ ಪ್ರಕಟಿಸುವಾಗ ಸಂಕೇತಕ್ಕಾಗಿ ಚಿತ್ರಕಲೆ ಉಪಯೋಗಿಸಿಕೊಂಡನೆಂದು ಎನಿಸುತ್ತದೆ. ಇದುವೆ ಚಿತ್ರಕಲಾ ಸೃಷ್ಟಿಯ ಮೂಲವೆಂದು ಹೇಳಬಹುದು."[೯]

ಭಾರತೀಯ ಚಿತ್ರಕಲೆಯು ಜಗತ್ತಿನಲ್ಲಿ ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ಜಗತ್ತಿನಲ್ಲಿ ಸಂಸ್ಕಾರ, ಸಂಸ್ಕೃತಿಗಳ ಸಂಗಡ ಅವರವರ ವಿಚಾರಗಳು ಬದಲಾಗುವುದಲ್ಲದೆ ಅವರವರ ನೋಟದಲ್ಲಿಯೂ ಬದಲಾವಣೆ ಹೊಂದುತ್ತದೆ. ಅಂತೆಯೇ ಭಾರತೀಯ ಸಂಸ್ಕಾರ, ಸಂಸ್ಕೃತಿ ಬೇರೆಯಾಗದಂತೆ ಅವರ ವಿಚಾರ, ನೋಟವೂ ಬದಲಾಗಿದೆ ಎಂಬುದಕ್ಕೆ ಜಗತ್ತಿನ ಚಿತ್ರಕಲೆಯ ಸಂಗಡ ಹೋಲಿಸಿ ನೋಡಿದಾಗ ತಾನೇ ಮನದಟ್ಟಾಗುತ್ತದೆ. ಭಾರತೀಯ ಚಿತ್ರಕಲೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಜಗತ್ತಿನ ಚಿತ್ರಕಲೆಗಿಂತ ಎಷ್ಟು ಮೇಲ್ಮಟ್ಟದ್ದೆಂದು ಅರ್ಥವಾಗದಿರದು.

ಅಭಿವ್ಯಕ್ತಿ ಕ್ರಿಯೆಯಿಂದ ವ್ಯಕ್ತಿಯ ಜೊತೆಜೊತೆಗೆ ಅವನ ಸಮುದಾಯದ ಬದುಕು ವ್ಯಕ್ತವಾಗುತ್ತಾ ಹೋಗುತ್ತದೆ. "ಭೌತಿಕ ಮತ್ತು ಆಧ್ಯಾತ್ಮಿಕ ಅಸ್ತಿತ್ವಕ್ಕೆ ಸೌಂದರ್ಯವನ್ನು ತಂದುಕೊಡುವ ಕೆಲಸಗಳೆಲ್ಲವೂ ಕಲೆಯ ಕ್ಷೇತ್ರದಲ್ಲಿ ನಡೆಯುತ್ತಾ ಬಂದಿವೆ."[೧೦] ೧೪-೧೫ನೇ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಕ್ರೈಸ್ತ ಮಂದಿರಗಳ ಭಿತ್ತಿಯ ಮೇಲೆ ಬೈಬಲ್ ಆಧರಿಸಿದ ಕಥೆಗಳಿಗೆ ಪೂರಕವಾಗಿ ಚಿತ್ರಗಳನ್ನು ಬರೆಸುವುದರ ಮೂಲಕ ಧರ್ಮಪ್ರಚಾರ ಕೈಗೊಂಡಿದ್ದು ದಾಖಲೆಗಳ (ಗ್ರಂಥಗಳ) ಮೂಲಕ ನಮಗೆ ತಿಳಿಯುತ್ತದೆ. ಇದಕ್ಕೂ ಮೊದಲು, ಅಂದರೆ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪದಲ್ಲಿ ವಚನಗಳ ಮೂಲಕ ಧರ್ಮಜಾಗೃತಿಯನ್ನು ಮೂಡಿಸಿದರು. ಆದರೆ ಅಂದಿನ ಸಂದರ್ಭದಲ್ಲಿ ಅವು

---

೯. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಚಿತ್ರಕಲಾ ಪ್ರಪಂಚ [ಬಿ. ಎಸ್. ಗೌಡಾ (ಲೇ): ಭಾರತೀಯ ಚಿತ್ರಕಲೆ], ಪು-೧೦೧

೧೦. ಡಾ. ಎಸ್. ಸಿ. ಪಾಟೀಲ : ವರ್ಣಸಂಚಯ, ಪು-೨೯

ದೃಶ್ಯರೂಪದಲ್ಲಿ ಅಭಿವ್ಯಕ್ತಿಸಲ್ಪಡಲಿಲ್ಲ. ನಂತರದ ಹಲವು ಶತಮಾನಗಳ ಅಂತರದಲ್ಲಿ ಬಸವಣ್ಣನವರ ಕುರಿತ ಚಿತ್ರ-ಶಿಲ್ಪಗಳು ರಚನೆಯಾಗಿರುವುದನ್ನು ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ಉದ್ದೇಶವಾದ ಹಿನ್ನೆಲೆಯಲ್ಲಿ ಭಾರತೀಯ ಚಿತ್ರಕಲೆಯ ಪಕ್ಷಿನೋಟವನ್ನು ಗಮನಿಸಬಹುದಾಗಿದೆ.

ಚಿತ್ರಕಲೆ ಪ್ರಾಚೀನವಾದ ಕಲೆ ಎಂಬುದರಲ್ಲಿ ಸಂದೇಹವಿಲ್ಲ. ಅದರಲ್ಲಿ ಭಾರತೀಯ ಚಿತ್ರಕಲೆ ಬಹು ಪ್ರಾಚೀನ ಎಂಬುವುದಕ್ಕೆ ಸಂಸ್ಕೃತ ಕಾವ್ಯ, ಶಾಸ್ತ್ರ, ಪುರಾಣಗಳಲ್ಲಿ, ಪ್ರಮಾಣಗ್ರಂಥಗಳಲ್ಲಿ ಪ್ರಮಾಣಭೂತ ವಾಕ್ಯಗಳು, ಸಂದರ್ಭಗಳು ದೊರೆಯುತ್ತವೆ. ಕಲೆಯು ಮಾನವನ ಹುಟ್ಟಿನೊಂದಿಗೇ ದೈವದತ್ತವಾಗಿ ಬಂದ ಒಂದು ಚಮತ್ಕಾರವೇ ಸರಿ. "ಸಾವಿರಾರು ವರುಷಗಳಿಂದ ಮಾನವ ಜನಾಂಗಗಳ ಬೆಳವಣಿಗೆಯೊಂದಿಗೆ ಜೊತೆ ಜೊತೆಗೆ ಅವನ ಬದುಕಿನ ಪ್ರಮುಖ ಅಂಗವಾಗಿ ಕಲಾಸಂಸ್ಕೃತಿಯೂ ಬೆಳವಣಿಗೆಯಾಗುತ್ತಲೇ ಬಂದಿದೆ."[೧೧] ಅವು ನಿರಂತರವಾಗಿ ಮುಂದಿನ ಜನಾಂಗಕ್ಕೂ ಪರಿಚಯವಾಗ-ಬೇಕಾದರೆ ಬಸವಣ್ಣನವರ ಕುರಿತು ರಚಿಸಿದ ದೃಶ್ಯಕಲೆಗಳ ರಚನೆಯ ಉದ್ದೇಶ ಇನ್ನೂ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನದ ಮೂಲಕ ದಾಖಲೀಕರಣ ಮಾಡುವ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ಮಾನವನ ಕಲಾಭಿವ್ಯಕ್ತಿ ಹಲವು ನೆಲೆಗಳಲ್ಲಿ ನಡೆಯುತ್ತದೆ. ಕಲಾವಿದ ತನಗೆ ಲಭ್ಯವಿದ್ದ ಸೌಲಭ್ಯ ಮತ್ತು ಸೌಕರ್ಯಗಳನ್ನು ತನ್ನ ಕಲಾ ಪ್ರತಿಪಾದನೆಗೆ ಮಾಧ್ಯಮವನ್ನಾಗಿ ಬಳಸಿಕೊಳ್ಳುತ್ತಾನೆ. ಯಾವ ಮಾಧ್ಯಮವು ತನ್ನ ಸಂಪೂರ್ಣ ಭಾವನೆಗಳ ಪ್ರಕಟಣೆಗೆ ಸಾಧ್ಯತೆಗಳನ್ನು ದೊರಕಿಸಿ ಕೊಡುತ್ತದೆಯೋ ಅದರ ಕಡೆಗೆ ಆತನ ಒಲವು. ಈ ಹಿನ್ನೆಲೆಯಲ್ಲಿ ವರ್ಣಚಿತ್ರ, ಮೂರ್ತಿಶಿಲ್ಪ, ಕಾಷ್ಠಶಿಲ್ಪ, ಲೋಹಶಿಲ್ಪ, ಮಣ್ಣಿನ ಶಿಲ್ಪ, ಫೈಬರ್‌ಗ್ಲಾಸ್ ಶಿಲ್ಪ, ಪ್ಲಾಸ್ಟರ್ ಆಫ್ ಪ್ಯಾರಿಸ್ ಶಿಲ್ಪ ಮುಂತಾದ ಮಾಧ್ಯಮಗಳನ್ನು ಬಳಸಲಾಗುತ್ತದೆ. ಈ ಎಲ್ಲ ಮಾಧ್ಯಮಗಳಲ್ಲಿ ಕಲಾಸಂಗತಿಗಳನ್ನು ಅತ್ಯಂತ ಸಮರ್ಥವಾಗಿ ವ್ಯಕ್ತಪಡಿಸಲು ಹಲವು ಮಿತಿಗಳಿವೆ. ಈ ತೆರನಾದ ಕಲಾಕೃತಿಗಳನ್ನು ನೋಡುಗ ಏಕಮುಖವಾಗಿ ನೋಡಲು ಸಾಧ್ಯವಿಲ್ಲ. ಅಂದರೆ ಅಶ್ವಾರೂಢನಾದ ಬಸವಣ್ಣನನ್ನು ಕೇವಲ ಒಂದು ದಿಕ್ಕಿನಿಂದ ನೋಡಿ ಅದರ ಸವಿಯನ್ನು ಸವಿಯಲು ಸಾಧ್ಯವಿಲ್ಲ. ಆ ಶಿಲ್ಪವನ್ನು ಒಂದು ಪೂರ್ತಿ ಸುತ್ತು ನೋಡಿದಾಗ ಮಾತ್ರ ಅದರ ಪೂರ್ಣ ಸಂಗತಿಗಳನ್ನು ಅರಿಯಲು ಸಾಧ್ಯವಾಗುತ್ತದೆ. ಆದರೆ ವರ್ಣಚಿತ್ರ ಮಾಧ್ಯಮದಲ್ಲಿ ನೋಡುಗ ಆ ಕಲಾಕೃತಿಯನ್ನು ಕೇವಲ ತನ್ನ ಒಂದು ಏಕಪಾರ್ಶ್ವ ನೋಟದ ಮೂಲಕ ಮಾತ್ರವೇ ಅದರ ಒಟ್ಟು ಸಂಗತಿಗಳನ್ನು ಪೂರ್ಣವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಇದನ್ನು ವರ್ಣಚಿತ್ರ ಮಾಧ್ಯಮದ ಒಂದು ಸೌಲಭ್ಯ ಎಂದು ಗ್ರಹಿಸಬಹುದು. ಬಸವಣ್ಣನವರನ್ನು ಕುರಿತ ವರ್ಣಚಿತ್ರಗಳನ್ನು ಅಧ್ಯಯನ ಮಾಡುವ ದಿಶೆಯಲ್ಲಿ ಈ ಅಂಶಗಳು ಮಹತ್ವಪೂರ್ಣವಾದವುಗಳೆಂದು ಪರಿಭಾವಿಸಲಾಗಿದೆ.

---

೧೧. ಎ. ಟಿ. ಕಾಳೆ : ಚಿತ್ರಕಲಾ ದರ್ಪಣ, ಪು-೩

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಬೌದ್ಧಿಕ ವಿಚಾರಕ್ರಾಂತಿಗಳನ್ನು ರೂಪಿಸಿ, ಅವುಗಳನ್ನು ಕಾರ್ಯರೂಪಕ್ಕೆ ತಂದು ಯಶಸ್ವಿಯಾದ ಮಹಾನ್ ಕ್ರಾಂತಿಪುರುಷ ಬಸವಣ್ಣನವರ ಜೀವನದ ಸಾಧನೆಗಳನ್ನು ಕುರಿತು ಸಾಹಿತ್ಯವಲಯದಲ್ಲಿ ಈಗಾಗಲೇ ಅಕ್ಷರ ಮಾಧ್ಯಮವಾದ ಸಾಹಿತ್ಯದಲ್ಲಿ ವಿಪುಲ ಕೃತಿಗಳು ಹೊರಬಂದಿವೆ. ಈವರೆಗೆ ಬಸವಣ್ಣನವರನ್ನು ಕುರಿತು ಕನ್ನಡ, ತೆಲುಗು, ಸಂಸ್ಕೃತ, ತಮಿಳು, ಹಿಂದಿ, ಮರಾಠಿ, ಉರ್ದು, ಇಂಗ್ಲೀಷ್, ಫ್ರೆಂಚ್, ಮುಂತಾದ ಹದಿನಾರು ಭಾಷೆಗಳಲ್ಲಿ ಕೃತಿಗಳು ರಚನೆಯಾಗಿವೆ. ಅವೆಲ್ಲವೂ ಅಕ್ಷರಸ್ಥ ಸಮಾಜವನ್ನು ಗುರಿಯಾಗಿಟ್ಟುಕೊಂಡು ರಚಿತವಾದ ಕೃತಿಗಳಾಗಿದ್ದು, ಎಸ್.ಆರ್. ಗುಂಜಾಳ ಅವರು ೧೯೭೭ರಲ್ಲಿ "ಬಸವ ಸಾಹಿತ್ಯ ದರ್ಪಣ" ಎಂಬ ಶೀರ್ಷಿಕೆಯ ಗ್ರಂಥವೊಂದನ್ನು ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ಬಸವಣ್ಣನವರನ್ನು ಕುರಿತು ಪ್ರಕಟವಾದ ಕೃತಿಗಳ ಒಟ್ಟು ಸಂಖ್ಯೆ ೪೧೫. ಇವುಗಳಲ್ಲಿ ಬಸವಣ್ಣನವರನ್ನು ಕುರಿತ ನಾಟಕಗಳು ಸುಮಾರು ೧೩ ಇಂಗ್ಲಿಷ್ ಭಾಷೆಯಲ್ಲಿ 'ವಿಶ್ವಜ್ಯೋತಿ ಬಸವಣ್ಣನವರು', ಹಿಂದಿ ಭಾಷೆಯಲ್ಲಿ 'ಬಸವರಾಜ್' ಎಂಬ ನಾಟಕಗಳು ಪ್ರಮುಖವಾಗಿವೆ. ಅಲ್ಲದೆ ೮ ಯಕ್ಷಗಾನ ಕೃತಿಗಳೂ ಇದರಲ್ಲಿ ಸೇರಿವೆ. ವಿಪುಲ ಸಂಖ್ಯೆಯ ಅಕ್ಷರಮಾಧ್ಯಮದ ಕೃತಿಗಳು ಎಲ್ಲ ವರ್ಗದವರಿಗೆ ಪೂರ್ಣಪ್ರಮಾಣದಲ್ಲಿ ಅರ್ಥವಾಗುತ್ತವೆ ಎಂದು ಹೇಳಲಾಗುವುದಿಲ್ಲ. ಆದರೆ ವರ್ಣಚಿತ್ರವೊಂದು ಕೇವಲ ಒಂದು ಭಾಷೆಯ ಅಕ್ಷರಸ್ಥ ಸಮಾಜಕ್ಕೆ ಮಾತ್ರ ಸೀಮಿತವಾಗದೆ, ಜಗತ್ತಿನ ಸಾರ್ವತ್ರಿಕ ಭಾಷೆಯ ಸಂಕೇತವಾಗಿ ನಿಲ್ಲುತ್ತದೆ. ಈ ಹಿನ್ನೆಲೆಯಲ್ಲಿ ಬಸವಣ್ಣನವರನ್ನು ನಮ್ಮ ಕಲಾವಿದರು ಹಲವು ದೃಷ್ಟಿಕೋನಗಳಿಂದ ದೃಶ್ಯಾತ್ಮಕವಾಗಿ ಅಭಿವ್ಯಕ್ತಿಸಿದ್ದಾರೆ.

ಬಸವಣ್ಣನವರ ಕುರಿತ ದೃಶ್ಯಕಲೆಗಳ ಅಧ್ಯಯನವೆಂದರೆ ಅವರ ಒಟ್ಟು ಬದುಕಿನ ದೃಶ್ಯಾತ್ಮಕ ರೂಪಗಳ ಅಧ್ಯಯನವೆಂದೇ ಅರ್ಥ. ಬಸವಣ್ಣನವರ ಬದುಕು-ಬರಹ-ವಚನಗಳಿಗೆ ನಮ್ಮ ನಡುವಿನ ಕಲಾವಿದರು ಹೇಗೆ ದೃಶ್ಯಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆಂಬುದನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ. ಬಸವಣ್ಣನವರ ಕುರಿತ ರೇಖಾಚಿತ್ರಗಳು, ವರ್ಣಚಿತ್ರಗಳು ನಿರೂಪಣೆಯ ನೆಲೆಯಲ್ಲಿ ರೂಪುಗೊಂಡಿವೆ. ಹೀಗಾಗಿ ಆ ಚಿತ್ರಗಳು ಒಂದು ಬಗೆಯಲ್ಲಿ ಆಧ್ಯಾತ್ಮಿಕ ರಮಣೀಯತೆಯ ಅನುಭವವನ್ನು ವೀಕ್ಷಕನಿಗೆ ಕೊಡುತ್ತವೆ. ನಮ್ಮ ಕಲಾವಿದರು ನೈಜ ಮತ್ತು ಆಧುನಿಕ ಶೈಲಿಯಲ್ಲಿ ರಚಿಸಿದ ಕೃತಿಗಳು ಸಮಾಜಮುಖಿಯನ್ನಾಗಿಸುವುದರ ಮೂಲಕ ಸಮಾಜಕ್ಕೆ ಸ್ಪಂದಿಸಿರುವುದನ್ನು ಸಹ ಇಲ್ಲಿ ಅಧ್ಯಯನ ಮಾಡಲಾಗುವುದು.

ಬಸವಣ್ಣನವರ ವಚನಗಳು ಹಾಗೂ ಅವರ ಕ್ರಾಂತಿಕಾರಕ ಬದುಕು ಹಿರಿ-ಕಿರಿಯ ಕಲಾವಿದರಿಗೆ ಸ್ಫೂರ್ತಿಯನ್ನು ನೀಡುವ ಸತ್ವವನ್ನು ಹೊಂದಿವೆ. ಆ ಸತ್ವಗಳಲ್ಲಿ ಸಂಯೋಜನಾ ವಿನ್ಯಾಸ, ವರ್ಣಛಾಯೆ, ತಂತ್ರಪ್ರಯೋಗ, ಕಲಾಕೌಶಲ್ಯ ಇನ್ನೂ ಮುಂತಾದ ರಚನಾತಂತ್ರಗಳು ಭಿನ್ನತೆಯ ನೆಲೆಯಲ್ಲಿ ಪ್ರಕಟಗೊಂಡಿವೆ. ಇಂತಹ ಸಾವಿರಾರು ಕಲಾಕೃತಿಗಳು ವೈವಿಧ್ಯಮಯವಾಗಿದ್ದು, ಅವುಗಳ ವಸ್ತುವಿಷಯ, ಮಾಧ್ಯಮದ ಹಾಗೂ ತಂತ್ರಗಳ ಕುರಿತು, ವರ್ಣವಿನ್ಯಾಸ, ರೇಖಾವಿನ್ಯಾಸಗಳ ಸ್ವರೂಪದ ಹಿನ್ನೆಲೆಯಲ್ಲಿ ವಿಶೇಷವಾದ ಅಧ್ಯಯನ ಮಾಡುವ ಉದ್ದೇಶವು ಇಲ್ಲಿದೆ.

ಬಸವಣ್ಣನವರ ಕುರಿತು ರಚಿಸಲಾದ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆಗಳನ್ನು ಗುರುತಿಸುವ ದೆಸೆಯಲ್ಲಿಯೂ ಈ ಅಧ್ಯಯನದಲ್ಲಿ ಗಮನ ಹರಿಸಲಾಗುವುದು. ಬಸವಣ್ಣನವರ ಕುರಿತು ಕಲಾಕೃತಿಗಳನ್ನು ರಚಿಸಿದ ಕಲಾವಿದರ ಅಭಿವ್ಯಕ್ತಿ ಧ್ಯೇಯ, ಧೋರಣೆಗಳು, ರಚನೆಯ ವಿವಿಧ ಹಂತಗಳನ್ನು ಒಂದೆಡೆಗೆ ದಾಖಲಿಸುವ ಮಹತ್ವದ ಕಾರ್ಯವನ್ನು ಈ ಅಧ್ಯಯನದಲ್ಲಿ ಮಾಡಲಾಗುವುದು. ಅಲ್ಲದೇ, ಪ್ರಸ್ತುತ ಅಧ್ಯಯನದಲ್ಲಿನ ಕಲಾಕೃತಿಗಳ ಪ್ರಮುಖ ಧೋರಣೆಗಳನ್ನು ಗುರುತಿಸುವ ಮತ್ತು ಈ ಕಲಾಕೃತಿಗಳಿಂದ ಸಮಾಜದ ಮೇಲಾದ ಪರಿಣಾಮಗಳ ಸೂಕ್ಷ್ಮ ಒಳನೋಟಗಳನ್ನು ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಬಸವಣ್ಣನವರ ಚಿತ್ರ-ಶಿಲ್ಪಗಳ ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳು

ಬಸವಣ್ಣನವರು, ಹನ್ನೆರಡನೆಯ ಶತಮಾನದಿಂದ ಇಂದಿನವರೆಗೆ ಎಲ್ಲ ಶತಮಾನಗಳ ಎಲ್ಲ ಸಾಹಿತ್ಯ ಪ್ರಕಾರಗಳಿಗೆ ವಸ್ತುವಾಗುತ್ತ ಬಂದಿದ್ದಾರೆ. ಇದರ ಪರಿಣಾಮವಾಗಿ ಇವರನ್ನು ಕುರಿತು ಬಂದಷ್ಟು ಸಾಹಿತ್ಯ ಕನ್ನಡದಲ್ಲಿ ಇತರ ಯಾರ ಬಗೆಗೂ ಬಂದಿಲ್ಲವೆಂದು ಹೇಳಬಹುದು ಆದರೆ ಬಸವಣ್ಣನವರು ಹಾಗೂ ಅವರ ವಚನ ಸಾಹಿತ್ಯಗಳನ್ನು ಆಧರಿಸಿ ಬೆರಳೆಣಿಕೆಯಷ್ಟು ಚಿತ್ರಪದ್ಯಗಳು ಪ್ರಕಟವಾಗಿವೆ. **'ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ'**ವೊಂದನ್ನು ಹೊರತು ಪಡಿಸಿದರೆ ಅಂತಹ ಚಿತ್ರಪದ್ಯಗಳ ಅಧ್ಯಯನ ಆಗಿಲ್ಲವೆಂದು ಹೇಳಬಹುದು. ಆದರೂ ಅಲ್ಲಲ್ಲಿ ಕೆಲವು ವಚನ ಸಾಹಿತ್ಯಗಳಲ್ಲಿ ಪ್ರಾಸಂಗಿಕವಾಗಿ ಬಸವಣ್ಣನವರ ಚಿತ್ರಗಳನ್ನು ಪದ್ಯಕ್ಕೆ ಚಿತ್ರವಾಗಿ ಬಳಸಿಕೊಂಡ ಉದಾಹರಣೆಗಳು ಸಿಗುತ್ತವೆ.

ಚಿತ್ರಪದ್ಯಗಳು

೧೯೮೦ರಲ್ಲಿ ಮುಂಬೈನ ಅಮರ ಚಿತ್ರಕಥಾ ಪ್ರಕಾಶನದವರು ಮಕ್ಕಳಿಗಾಗಿ **"BASA-VESHWARA"**[೧೨] ಎಂಬ ಶೀರ್ಷಿಕೆಯಡಿ ಚಿತ್ರಪದ್ಯ(ಕಾಮಿಕ್ಸ್)ವೊಂದನ್ನು ಪ್ರಕಾಶಿಸಿದ್ದಾರೆ. ಈ ಪದ್ಯಕ್ಕೆ ಚಿತ್ರವನ್ನು ಹೆಸರಾಂತ ಕಲಾವಿದರಾದ ಮುಂಬೈನ ಜಿ. ಆರ್. ನಾಯಕ್ ಒದಗಿಸಿದ್ದರೆ, ಸುಬ್ಬಾರಾವ್ ಅವರು ಪದ್ಯವನ್ನು ಬರೆದುಕೊಟ್ಟಿದ್ದಾರೆ. ಇದೇ ಚಿತ್ರಪದ್ಯವು 'ಜಗಜ್ಯೋತಿ ಬಸವೇಶ್ವರ' ಎಂಬ ಶೀರ್ಷಿಕೆಯಡಿ ಕನ್ನಡದಲ್ಲಿ ಪ್ರಕಟವಾಗಿದೆ.

೨೦೦೮ರಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ದೇಶೀಕೇಂದ್ರ ಮಹಾಸ್ವಾಮಿಗಳು ಸಂಪಾದಿಸಿದ **"ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ"**[೧೩] ಎಂಬ ಚಿತ್ರಪದ್ಯವನ್ನು ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ಇವರು ಪ್ರಕಟಪಡಿಸಿದ್ದಾರೆ. ಈ ಪದ್ಯಚಿತ್ರದಲ್ಲಿ ಅಲ್ಲಲ್ಲಿ ಬಸವಣ್ಣನವರ ಕುರಿತ ಪದ್ಯಚಿತ್ರಗಳು ಪ್ರಕಟವಾಗಿವೆ.

---

೧೨. ಜಿ. ಆರ್.ನಾಯ್ಕ : BASAVESHWARA, ಪ್ರ: ಅಮರ ಚಿತ್ರಕಥಾ ಪ್ರಕಾಶನ, ಮುಂಬೈ. ೧೯೮೦

೧೩. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಸಂ.) : ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ, ಪ್ರ: ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೨೦೦೮

ಪ್ರಾಸಂಗಿಕ ಪಠ್ಯಚಿತ್ರಗಳು

ಇದುವರೆಗೆ ಕನ್ನಡದಲ್ಲಿ ಪ್ರಕಟವಾದ ವಚನಸಾಹಿತ್ಯ, ಮತ್ತು ಇತರ ಸಾಹಿತ್ಯ ಪ್ರಕಾರಗಳಲ್ಲಿ ಬಸವಣ್ಣನವರ ಕುರಿತು ಹಲವು ಚಿತ್ರಗಳನ್ನು ಚಿತ್ರಪಠ್ಯವಾಗಿಯೂ ಮತ್ತು ಪ್ರಾಸಂಗಿಕ ಚಿತ್ರವಾಗಿಯೂ ದುಡಿಸಿಕೊಂಡಿದ್ದು, ಅವು ಈ ಕೆಳಗಿನಂತಿವೆ:

೧೯೪೫ರಲ್ಲಿ ಪ್ರಕಟವಾದ ಶ್ರೀ ಶಿವಬಸವ ಸ್ವಾಮಿಗಳು ಸಂಪಾದಿಸಿದ **"ಶರಣ ಲೀಲಾಮೃತ"**[೧೪] ಗ್ರಂಥವನ್ನು ಮೈಸೂರಿನ ಶಿವಶರಣ ವಾಙ್ಮಯ ಪ್ರಕಾಶ ಕಾರ್ಯಾಲಯದವರು ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ಒಟ್ಟು ೧೩ ಬಸವಣ್ಣನವರನ್ನು ಕುರಿತ ಚಿತ್ರಗಳನ್ನು ಪ್ರಾಸಂಗಿಕವಾಗಿ ಬಳಸಿದ್ದಾರೆ.

೨೦೧೩ರಲ್ಲಿ ಡಾ.ವೀರಣ್ಣ ರಾಜೂರ, ಶ್ರೀ ಬಸವರಾಜ ಹೂಗಾರ ಇವರು ಸಂಪಾದಿಸಿದ **"ಯುಗಯುಗದ ಉತ್ಸಾಹ"**[೧೫] ಬಸವಜಯಂತಿ ಆಚರಣೆ ಶತಮಾನೋತ್ಸವ ಸ್ಮರಣ ಸಂಪುಟವನ್ನು ಶ್ರೀ ಮುರುಘಾಮಠ, ಧಾರವಾಡ ಇವರು ಪ್ರಕಟಿಸಿದ್ದಾರೆ. ಬಸವ ಜಯಂತಿಯ ಶತಮಾನೋತ್ಸವದ ಅಂಗವಾಗಿ ಹೊರಬಂದ ಈ ಸಂಪುಟದ ಕೊನೆಯ ಪುಟದಲ್ಲಿ ದೇಶದ ಹಲವಾರು ಕಲಾವಿದರು ನೈಜ, ನಿರೂಪಣಾ ಹಾಗೂ ಆಧುನಿಕ ಶೈಲಿಯಲ್ಲಿ ರಚಿಸಿದ ಕಲಾಕೃತಿಗಳನ್ನು ಪ್ರಾಸಂಗಿಕವಾಗಿ ಮುದ್ರಿಸಿದ್ದಾರೆ.

ಇದೇ ಅವಧಿಯಲ್ಲಿ ಎಲ್. ಶಿವಲಿಂಗಪ್ಪ ಅವರು **"ದೃಶ್ಯಮಾಧ್ಯಮದಲ್ಲಿ ಬಸವಣ್ಣ"**[೧೬] ಎಂಬ ಗ್ರಂಥವನ್ನು ಪ್ರಕಟಪಡಿಸಿದ್ದಾರೆ. ಬಸವಣ್ಣನವರ ಭಾವಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಈ ಗ್ರಂಥಗಳಲ್ಲಿ ಕೆಲವು ಸಂಯೋಜನ ಚಿತ್ರಗಳು ಹಾಗೂ ಶಿಲ್ಪಗಳ ಕುರಿತು ಸಂಕ್ಷಿಪ್ತ ಪರಿಚಯವಿದೆ. ೨೦೧೩ರಲ್ಲಿ ಜಿ.ಕೆ. ಶಿವಣ್ಣ ಅವರು **"ವಚನ ಚಿತ್ತಾರ"**[೧೭] ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ವಚನಗಳನ್ನು ಕುರಿತು ರೇಖಾಚಿತ್ರಗಳನ್ನು ಚಿತ್ರಿಸಿದ್ದಾರೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದ ವಿಷಯವನ್ನು ಕುರಿತು ಸಂಕ್ಷಿಪ್ತ ಸ್ವರೂಪದ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

ಅಧ್ಯಾಯ ೧ : ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವೈಧಾನಿಕತೆಗಳನ್ನು ಮತ್ತು ಆಕರ ಸಾಮಗ್ರಿಗಳನ್ನು ಕುರಿತು ವಿವರಿಸಲಾಗಿದೆ.

---

೧೪. ಶ್ರೀಶಿವಬಸವ ಸ್ವಾಮಿಗಳು(ಸಂ) : ಶರಣ ಲೀಲಾಮೃತ, ಪ್ರ: ಶಿವಶರಣ ವಾಙ್ಮಯ ಪ್ರಕಾಶ ಕಾರ್ಯಾಲಯ, ಮೈಸೂರು. ೧೯೪೫

೧೫. ಡಾ. ವೀರಣ್ಣ ರಾಜೂರ, ಶ್ರೀ ಬಸವರಾಜ ಹೂಗಾರ (ಸಂ.) : ಯುಗಯುಗದ ಉತ್ಸಾಹ, ಪ್ರ: ಶ್ರೀ ಮುರುಘಾಮಠ, ಧಾರವಾಡ ೨೦೧೩

೧೬. ಎಲ್. ಶಿವಲಿಂಗಪ್ಪ : ದೃಶ್ಯಮಾಧ್ಯಮದಲ್ಲಿ ಬಸವಣ್ಣ, ಪ್ರ: ಶ್ರೀ ಗಾಯಿತ್ರಿ ಪ್ರಿಂಟರ್ಸ್, ಮೈಸೂರು. ೨೦೧೩

೧೭. ಜಿ. ಕೆ. ಶಿವಣ್ಣ : ವಚನಚಿತ್ತಾರ, ಪ್ರ: ಓನಿಯರ್ಸ್ ಪ್ರಕಾಶನ, ೨೦೧೩

ಅಧ್ಯಾಯ ೨ : ಬಸವಣ್ಣನವರ ಜೀವನದ ಪ್ರಮುಖ ಘಟ್ಟಗಳ ವರ್ಣಚಿತ್ರಗಳು

ಈ ಅಧ್ಯಾಯದಲ್ಲಿ ಬಸವಣ್ಣನವರ ಜೀವನದ ಪ್ರಮುಖ ಘಟ್ಟಗಳ ವರ್ಣಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು. ಬಸವಣ್ಣನ ಜನನಕ್ಕೂ ಮೊದಲು ಅಂದಿನ ಬಸವಪೂರ್ವ ಯುಗದ ಸಾಮಾಜಿಕ–ಧಾರ್ಮಿಕ ವ್ಯವಸ್ಥೆಯ ವರ್ಣಚಿತ್ರಗಳು, ಬಸವಣ್ಣನವರ ಬಾಲ್ಯಾವಸ್ಥೆಯ ವರ್ಣಚಿತ್ರಗಳು, ಯೌವ್ವನಾವಸ್ಥೆಯ ವರ್ಣಚಿತ್ರಗಳು, ಪವಾಡಗಳ ವರ್ಣಚಿತ್ರಗಳು, ಕಾಯಕದ ವರ್ಣಚಿತ್ರಗಳು, ಪ್ರಸಾದ ಮತ್ತು ದಾಸೋಹದ ವರ್ಣಚಿತ್ರಗಳು, ಅನುಭವ ಮಂಟಪದ ವರ್ಣಚಿತ್ರಗಳು, ಪಾದುಕಾ ಪ್ರಸಂಗದ ವರ್ಣಚಿತ್ರಗಳು, ಅಂತರ್ಜಾತೀಯ ವಿವಾಹದ ವರ್ಣಚಿತ್ರಗಳು, ಗಡಿಪಾರು ಘಟನೆಯ ವರ್ಣಚಿತ್ರಗಳು, ಕಲ್ಯಾಣದ ಶರಣರಿಂದ ಬೀಳ್ಕೊಡುಗೆಯ ವರ್ಣಚಿತ್ರಗಳು ಹಾಗೂ ಅಂತಿಮವಾಗಿ ಬಸವಣ್ಣನವರು ಕೂಡಲ ಸಂಗಮನಾಥನಲ್ಲಿ ಐಕ್ಯವಾಗುವ ವರ್ಣಚಿತ್ರಗಳ ಕುರಿತು ಈ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ೩ : ಬಸವಣ್ಣನವರ ವಚನಗಳ ಆಧಾರಿತ ವರ್ಣಚಿತ್ರಗಳು

ಬಸವಣ್ಣನವರು ಇದುವರೆಗೂ ನಮ್ಮ ನಡುವೆ ಜೀವಂತವಾಗಿರುವುದಕ್ಕೆ ಮುಖ್ಯ ಕಾರಣ ಅವರು ರಚಿಸಿದ ವಚನಗಳು. ಅನೇಕ ಹಿಂದುಸ್ಥಾನಿ ಸಂಗೀತ ವಿದ್ವಾಂಸರು ಬಸವಣ್ಣನವರ ವಚನಗಳನ್ನು ಈಗಲೂ ತಮ್ಮ ಸಂಗೀತ ಕಛೇರಿಯಲ್ಲಿ ಹಾಡುವುದರಿಂದಲೂ ಬಸವಣ್ಣನವರ ಅಸ್ತಿತ್ವಕ್ಕೆ ಸಂಚಕಾರವಿಲ್ಲದಂತೆ ಮಾಡಿದ್ದಾರೆ. ಇನ್ನು ನಮ್ಮ ನಡುವಿನ ದೃಶ್ಯ ಕಲಾವಿದರೂ ಸಹ ಬಸವಣ್ಣನವರ ಬದುಕು–ಬರಹಗಳಿಂದ ಪ್ರೇರಿತರಾಗಿ ಬಗೆಬಗೆಯ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ.

ಬಸವಣ್ಣನವರು ಅರಮನೆಯಿಂದ ಅನುಭವ ಮಂಟಪದವರೆಗಿನ ತಮ್ಮ ಪಯಣದಲ್ಲಿ ಸಾವಿರಾರು ಸಮಾಜಮುಖಿಯಾದ ವಚನಗಳನ್ನು ರಚಿಸಿದ್ದಾರೆ. ಆ ವಚನಗಳಲ್ಲಿ ಆಧ್ಯಾತ್ಮಿಕ ಸಾಧನೆ, ಸಾಮಾಜಿಕ ಸ್ವಾಸ್ಥ್ಯ ಇನ್ನೂ ಮುಂತಾದ ಸಾರ್ವತ್ರಿಕ ಬದುಕಿನ ವಿವಿಧ ಮಜಲುಗಳ ಕುರಿತು ವಚನಗಳನ್ನು ಆಧರಿಸಿ ನಮ್ಮ ಕಲಾವಿದರು ರಚಿಸಿದ ಕಲಾಕೃತಿಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ೪ : ಇತರೆ ಮಾಧ್ಯಮಗಳಲ್ಲಿ ಅಭಿವ್ಯಕ್ತಗೊಂಡ ಬಸವಣ್ಣನವರು

ಬಸವಣ್ಣನವರ ಕ್ರಾಂತಿಕಾರಕ, ಸಮಾಜ ಸುಧಾರಣೆಯ ಹಾಗೂ ಹಲವಾರು ಘಟನೆಗಳ ಕುರಿತಂತೆ ಅನೇಕ ಕಲಾವಿದರು ಅನೇಕ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಲೋಹ ಮಾಧ್ಯಮ, ಶಿಲಾ ಮಾಧ್ಯಮ, ಕಾಷ್ಠ ಮಾಧ್ಯಮ, ಫೈಬರ್ ಮಾಧ್ಯಮ, ಗಾಜಿನ ಮಾಧ್ಯಮ, ತೊಗಲುಗೊಂಬೆಯ ಮಾಧ್ಯಮ, ನಾಟಕ ಮಾಧ್ಯಮ, ಚಲನಚಿತ್ರ ಮಾಧ್ಯಮ, ಮುದ್ರಣ ಮಾಧ್ಯಮ, ನಾಣ್ಯಗಳ ಮೇಲೆ ಒಡಮೂಡಿದ, ಪುಸ್ತಕಗಳ ಮುಖಪುಟಗಳಲ್ಲಿ ಕಾಣಿಸಿಕೊಂಡ ಬಸವಣ್ಣನವರ ಕುರಿತ ಚಿತ್ರ–ಶಿಲ್ಪಗಳು ~~ಕುರಿತು~~ ಇಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ೫ : ಬಸವಣ್ಣನವರ ಕುರಿತ ಭಾವಚಿತ್ರಗಳು

ಈ ಅಧ್ಯಾಯದಲ್ಲಿ ಬಸವಣ್ಣನವರ ಕುರಿತು ರಚಿತವಾದ ಭಾವಚಿತ್ರಗಳನ್ನು ಪ್ರತ್ಯೇಕವಾಗಿ ಅಧ್ಯಯನ

ಮಾಡಲಾಗುವುದು. ಬಸವಣ್ಣನವರನ್ನು ನಾಡಿನ ಜನತೆಗೆ ವರ್ಣಚಿತ್ರಗಳ ಮೂಲಕ ಪ್ರತಿಯೊಬ್ಬರ ಅಂತರಂಗದಲ್ಲಿ ಪ್ರತಿಷ್ಠಾಪಿಸಲು ಕಲಾವಿದರು ಮಾಡಿರುವ ಪ್ರಯತ್ನವನ್ನು ಇಲ್ಲಿ ದಾಖಲಿಸಲಾಗಿದೆ. ಭಾವಚಿತ್ರಗಳು ನೋಡುಗರ ಮನಸ್ಸಿನ ಮೇಲೆ ಕ್ಷಣ ಮಾತ್ರದಲ್ಲಿ ಪರಿಣಾಮವನ್ನು ಬೀರುವ ವಿಶಿಷ್ಟ ಅಭಿವ್ಯಕ್ತಿ ಮಾಧ್ಯಮಗಳಾಗಿವೆ. ಚಿಕ್ಕಮಕ್ಕಳಲ್ಲಿ, ವಯಸ್ಕರಲ್ಲಿ ಹಾಗೂ ಸರ್ವರಲ್ಲಿ ಭಾವಚಿತ್ರಗಳು ಆಧ್ಯಾತ್ಮಿಕ, ಸಾತ್ವಿಕ, ನೈತಿಕ ಮೌಲ್ಯಗಳ ಬದುಕನ್ನು ಕಟ್ಟಿಕೊಳ್ಳಲು ಪ್ರೇರೇಪಿಸುತ್ತವೆ.

ಹೆಸರೇ ಹೇಳುವಂತೆ ಭಾವವನ್ನು ಪ್ರಕಟಿಸುವ ಚಿತ್ರಗಳು ಸಾಧಕರ ಸಾರ್ಥಕ ಬದುಕಿನ ಸಂಕೇತಗಳಾಗಿವೆ. ಈ ಹಿನ್ನೆಲೆಯಲ್ಲಿ ಬಹಳಷ್ಟು ಕಲಾವಿದರು ಅನೇಕಾನೇಕ ಭಾವಚಿತ್ರಗಳನ್ನು ರಚಿಸಿದ್ದಾರೆ. ಹತ್ತು ಹಲವು ಬಗೆಯಲ್ಲಿ ಸಂಯೋಜಿಸಿಕೊಂಡು ರಚಿಸಿದ ಭಾವಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ೬ : ಬಸವಣ್ಣನವರ ಕುರಿತ ವರ್ಣಚಿತ್ರಗಳ ಅಧ್ಯಯನಕ್ಕೆ ಪೂರಕವಾದ ಕಲಾಕೃತಿಗಳು

ಇದುವರೆಗಿನ ಅಧ್ಯಯನದಲ್ಲಿ ಬಸವಣ್ಣನವರ ಕುರಿತ ಚಿತ್ರ-ಶಿಲ್ಪ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದರೆ, ಪ್ರಸ್ತುತ ಅಧ್ಯಾಯದಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿ ನಡೆಯುವ ಘಟನೆಗಳಿಗೆ ಪೂರಕವಾದ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು. ಬಸವಣ್ಣನವರ ಬದುಕಿನ ಬಹು ಮುಖ್ಯ ಘಟನೆಗಳಾದ ಪಾದುಕಾ ಪ್ರಸಂಗ, ಎಳಯೂಟಿ ಪ್ರಸಂಗ, ಶರಣರು ಕಲ್ಯಾಣವನ್ನು ತೊರೆಯುತ್ತಿರುವುದು, ಶರಣರು ಹಸ್ತಪ್ರತಿಗಳನ್ನು ಸಂರಕ್ಷಣೆಯನ್ನು ಮಾಡುತ್ತಿರುವುದು ಇನ್ನೂ ಮುಂತಾದ ಬಸವಣ್ಣನವರ ಪೂರಕ ಬದುಕಿಗೆ ಸಂಬಂಧಪಟ್ಟ ಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೆ ಕೈಗೊಳ್ಳಲಾಗಿದೆ.

ಅಧ್ಯಾಯ ೭ : ಬಸವಣ್ಣನವರ ಕಲಾಕೃತಿಗಳ ರಚನಾ ಕಲಾವಿದರು

ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಂಡ ಬಸವಣ್ಣನವರ ಕುರಿತ ಕಲಾಕೃತಿಗಳನ್ನು ಹಲವಾರು ಕಲಾವಿದರು ರಚಿಸಿದ್ದಾರೆ. ಅಂತಹ ಕಲಾವಿದರಲ್ಲಿ ಕೆಲವರು ಮಾತ್ರ ಈಗಲೂ ಜೀವಂತವಾಗಿದ್ದರೆ ಇನ್ನೂ ಕೆಲವು ಕಲಾವಿದರು ಗತಿಸಿಹೋಗಿದ್ದಾರೆ. ಲಭ್ಯ ಮಾಹಿತಿಯನ್ವಯ ಕಲಾವಿದರನ್ನು ಸಂಕ್ಷಿಪ್ತವಾಗಿ ಇಲ್ಲಿ ಪರಿಚಯಿಸಲಾಗಿದೆ.

ಅಧ್ಯಾಯ ೮ : ಬಸವಣ್ಣನವರ ಕುರಿತ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಬಸವಣ್ಣನವರ ಕುರಿತು ರಚಿತವಾದ ಕಲಾಕೃತಿಗಳ ಮೇಲೆ ಬೀರಿದ ಪ್ರಭಾವವನ್ನು ಗುರುತಿಸುವುದರೊಂದಿಗೆ, ಜ್ಞಾನದಾಸೋಹ, ಅನ್ನದಾಸೋಹಕ್ಕೆ, ಸಮಾಜದ ಮೇಲ್ವರ್ಗದವರ ಮನಃ ಪರಿವರ್ತನೆಗೆ ಬಸವಣ್ಣನವರ ಬದುಕು-ಬರಹಗಳು ಪ್ರೇರಣೆ ನೀಡಿವೆ. ಅದರಂತೆ ಸಮಾಜದ ಪ್ರಮುಖ ಭಾಗವಾಗಿರುವ ದೃಶ್ಯ ಕಲಾವಿದರಿಗೂ ಸಹ ಬಸವಣ್ಣನವರು ಕಲಾಕೃತಿಗಳನ್ನು ರಚಿಸಲು ಪ್ರೇರಣೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ರಚಿತಗೊಂಡ ಕಲಾಕೃತಿಗಳಲ್ಲಿ ಕಂಡುಬರುವ ರೇಖಾವಿನ್ಯಾಸ, ವರ್ಣಗಾರಿಕೆ, ಪ್ರಭಾವ, ಕಲಾತಂತ್ರ, ಶೈಲಿಯ ವಿಶಿಷ್ಟ ಅಭಿವ್ಯಕ್ತಿಯ ವೈವಿಧ್ಯ-ಸಾಧ್ಯತೆಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ೯ : ಸಮಾರೋಪ

ಪ್ರಸ್ತುತ ಅಧ್ಯಯನವನ್ನು ಒಟ್ಟು ಒಂಬತ್ತು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಈ ಮೇಲಿನ ಎಂಟು ಅಧ್ಯಾಯಗಳನ್ನು ವಿಷಯಕ್ಕೆ ಅನುಗುಣವಾಗಿ ವಿಭಾಗಿಸಲಾಗಿದೆ. ಪ್ರತಿಯೊಂದು ಅಧ್ಯಾಯಗಳ ಒಟ್ಟು ಸಮೀಕ್ಷೆಯನ್ನು ಪ್ರಸ್ತುತ ಈ ಒಂಬತ್ತನೆಯ ಅಧ್ಯಾಯದಲ್ಲಿ ನೀಡಲಾಗಿದೆ. ಮತ್ತು ಪ್ರಸ್ತುತ ಮಹಾಪ್ರಬಂಧದಿಂದ ಕಂಡುಬರುವ ಮುಖ್ಯವಾದ ಫಲಿತಗಳನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಬಸವಣ್ಣನವರ ಕುರಿತ ಚಿತ್ರಗಳ ಅಧ್ಯಯನದ ವ್ಯಾಪ್ತಿ ಒಂದು ಪ್ರಾಂತಕ್ಕೆ ಸೀಮಿತವಾದುದಲ್ಲ. ಅದು ಸಾಗರದಾಚೆಗೂ ವಿಸ್ತೃತಗೊಂಡ ಅಧ್ಯಯನವೆಂದು ಹೇಳಿದರೆ ಅತಿಶಯೋಕ್ತಿಯೇನಲ್ಲ. ಏಕೆಂದರೆ ಬಸವಣ್ಣನವರ ಚಿತ್ರ–ಶಿಲ್ಪಗಳು ಭಾರತದಲ್ಲಿ ಮಾತ್ರವಲ್ಲದೇ ವಿದೇಶಗಳಲ್ಲೂ ಸಂಗ್ರಹಗೊಂಡಿರುವುದು ಅವರ ಸಾಮಾಜಿಕ ನ್ಯಾಯದ ವ್ಯಕ್ತಿತ್ವಕ್ಕೆ ದೊರೆತ "ಜಾಗತಿಕ ಪ್ರಶಂಸೆ" ಎಂದೇ ಹೇಳಬಹುದು. ಅಷ್ಟೇ ಅಲ್ಲದೇ ಅಂತರ್ಜಾಲದಲ್ಲೂ ಕೂಡ ಅವರ ಹಲವಾರು ಕೃತಿಗಳು ಹರಿದಾಡಿವೆ, ಹರಿದಾಡುತ್ತಲಿವೆ. ಅಸಂಖ್ಯಾತ ಮನೆ–ಮಠಗಳಲ್ಲಿ, ಧರ್ಮಛತ್ರಗಳಲ್ಲಿ, ವಿದ್ಯಾರ್ಥಿ ನಿಲಯಗಳಲ್ಲಿ, ಭಾರತದ ಮತ್ತು ಲಂಡನ್ ಸಂಸತ್ ಭವನದಲ್ಲಿ, ಕಲಾ ಸಂಗ್ರಹಾಲಯಗಳಲ್ಲಿ ನೆಲೆಗೊಂಡಿರುವ ಅವರ ಕಲಾಕೃತಿಗಳು ಅಂತರ್ಜಾಲದಲ್ಲಿ, ವಸ್ತು ಸಂಗ್ರಹಾಲಯಗಳಲ್ಲಿ, ಖಾಸಗಿ ಕಲಾ ಗ್ಯಾಲರಿಗಳಲ್ಲಿ, ಕಲಾಶಿಕ್ಷಣ ಸಂಸ್ಥೆಗಳ ಸಂಗ್ರಹಗಳಲ್ಲಿರುವುದರಿಂದ ಅಧ್ಯಯನದ ವ್ಯಾಪ್ತಿ ಜಾಗತಿಕವಾಗಿ ಹರಡಿದೆ.

ಅಧ್ಯಯನದ ವೈಧಾನಿಕತೆ

ಬಸವಣ್ಣನವರ ಕುರಿತ ವರ್ಣಚಿತ್ರಕಲೆ (ವಿಶ್ಲೇಷಣಾಧ್ಯಯನ) ಶೀರ್ಷಿಕೆಯ ಪಿಎಚ್.ಡಿ. ಮಹಾಪ್ರಬಂಧವನ್ನು ಸಾಮಾಜಿಕ ಸಂಶೋಧನೆಯ ನೆಲೆಯಲ್ಲಿ ಅಧ್ಯಯನ ಮಾಡಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದಲ್ಲಿ 'ಎನೆಲಿಟಿಕಲ್ ಸರ್ವೆ' ವಿಶ್ಲೇಷಣಾತ್ಮಕ ಮಾದರಿಯನ್ನು ಅಳವಡಿಸಿಕೊಳ್ಳಲಾಗಿದೆ. ಮೂಲ ಮತ್ತು ಆನುಷಂಗಿಕ ಆಕರಗಳೆರಡನ್ನು ಬಳಸಿಕೊಳ್ಳಲಾಗಿದ್ದು, ವರ್ಣಚಿತ್ರಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ಸಾಹಿತ್ಯಕ ಕೃತಿಗಳ ನೆರವನ್ನು ಪಡೆಯಲಾಗಿದೆ.

ಇಲ್ಲಿ ಬಳಸಲಾಗಿರುವ ಬಸವಣ್ಣನವರ ಬಹುಪಾಲು ವರ್ಣಚಿತ್ರಗಳು ಸಾಹಿತ್ಯ ಕೃತಿಗಳ, ವಚನಗಳನ್ನು ಆಧರಿಸಿ ರಚಿತವಾಗಿವೆ. ಆದ್ದರಿಂದ ಬಸವಣ್ಣನವರನ್ನು ಕುರಿತು ಸಾಹಿತ್ಯದಲ್ಲಿ ರಚಿತವಾದ ಕಾವ್ಯಗಳು, ವಚನಗಳು, ವಿಮರ್ಶಾ ಸಾಹಿತ್ಯ ಮುಂತಾದವುಗಳ ಆಧಾರದಿಂದ ಬಸವಣ್ಣನವರ ಜೀವನವನ್ನು ಮೊದಲು ಸಾಹಿತ್ಯರೂಪದಲ್ಲಿ ಕಟ್ಟಿಕೊಡಲಾಗಿದ್ದು ಅನಂತರ ವರ್ಣಚಿತ್ರಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ.

ಬಸವಣ್ಣನವರ ಜೀವನದ ವಿವಿಧ ಘಟ್ಟಗಳನ್ನು ಕುರಿತ ಸುಮಾರು ೫೦೦ ಕ್ಕೂ ಹೆಚ್ಚು ವರ್ಣಚಿತ್ರಗಳು ಲಭ್ಯವಿದ್ದರೂ ಅವುಗಳಲ್ಲಿ ಉತ್ತಮವಾದ ಸುಮಾರು ೨೦೦ ವರ್ಣಚಿತ್ರಗಳನ್ನು ಮಾತ್ರ ಇಲ್ಲಿ ಬಳಕೆ ಮಾಡಿಕೊಳ್ಳಲಾಗಿದೆ. ಸಂಶೋಧನೆಯ ಅಧ್ಯಯನದ ಮಾದರಿಯ ಚೌಕಟ್ಟಿನಲ್ಲಿ ಇಲ್ಲಿ ಅಡಿಟಿಪ್ಪಣಿಗಳನ್ನು

(ಸಂದರ್ಭಸೂಚಿ) ಅಗತ್ಯಕ್ಕೆ ತಕ್ಕಂತೆ ನೀಡಲಾಗಿದೆ. ಬಸವಣ್ಣನನ್ನು ಕುರಿತು ವರ್ಣಚಿತ್ರಗಳನ್ನು ರಚಿಸಿದ ಕಲಾವಿದರ ಹೆಸರುಗಳನ್ನು ಆಯಾ ಕಲಾಕೃತಿಯ ಶೀರ್ಷಿಕೆಯ ಜೊತೆಗೆ ಉಲ್ಲೇಖಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಅಗತ್ಯವಾದ ಕ್ಷೇತ್ರಕಾರ್ಯ ಮಾಡಿ, ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

೧. ಮೂಲ ಆಕರಸಾಮಗ್ರಿ

ಸಂಶೋಧನೆಯ ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ. ಬಸವಣ್ಣನವರ ಕುರಿತು ವ್ಯಕ್ತಿಗಳ ಸಂದರ್ಶನ, ಚರ್ಚೆ, ಸಂಗ್ರಹದಲ್ಲಿರುವ ಕಲಾಕೃತಿಗಳ ಛಾಯಾಚಿತ್ರಣ ಮಾಡುವುದು, ಅವರ ಕುರಿತು ಬಂದ ಸಂದರ್ಶನಗಳಿಂದ ವಿಷಯಗಳನ್ನು ಸಂಗ್ರಹಿಸುವುದರ ಮೂಲಕ ನಡೆದ ಅಧ್ಯಯನವು ಆಧಾರಭೂತವಾಗಿರುತ್ತದೆ.

ಸಂದರ್ಶನ : ಬಸವಣ್ಣನವರನ್ನು ಅರಿತ ವಿದ್ವಾಂಸರಿಂದ ಮಾಹಿತಿಯನ್ನು, ಅವರ ಸಾಂಸ್ಕೃತಿಕ ಪರಿಸರ, ವೃತ್ತಿಜೀವನ, ಈ ಹಂತದಲ್ಲಿ ಅವರು ರಚಿಸಿದ ಕಲಾಕೃತಿಗಳ ರಚನೆ ಅವರ ಕಲಾಕೃತಿಗಳ ರಚನಾ ತಂತ್ರ, ವಸ್ತು ವಿಷಯ, ವರ್ಣಗಾರಿಕೆಯ ಪ್ರಭಾವ ಹೀಗೆ ಹತ್ತು ಹಲವು ವಿಷಯಗಳನ್ನು ತಿಳಿದುಕೊಳ್ಳಲಾಯಿತು. ಇಷ್ಟಲ್ಲದೇ ಬಸವಣ್ಣನವರ ವ್ಯಕ್ತಿತ್ವವನ್ನು ಅರಿತುಕೊಳ್ಳಲು ಅವರನ್ನು ಓದಿದ ವಿದ್ವಜ್ಜನರಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಛಾಯಾಚಿತ್ರಣ : ಬಸವಣ್ಣನವರ ಕುರಿತ ಕಲಾಕೃತಿಗಳನ್ನು ವಿವಿಧ ಕಡೆಗಳಲ್ಲಿ ಸಂದರ್ಶಿಸಿ ಭೇಟಿಕೊಟ್ಟು ಛಾಯಾಚಿತ್ರಣ ಮಾಡಿಕೊಳ್ಳಲಾಯಿತು. ಈ ಕುರಿತಂತೆ ಬಸವಣ್ಣನವರನ್ನು ಕುರಿತ ರೇಖಾಚಿತ್ರಗಳು, ವರ್ಣಚಿತ್ರಗಳು ಹಾಗೂ ಹಲವಾರು ವಿಷಯಗಳನ್ನೊಳಗೊಂಡ ಕಲಾಕೃತಿಗಳ ಛಾಯಾಚಿತ್ರಗಳನ್ನು ಮಾಡಿಕೊಳ್ಳಲಾಯಿತು. ಹೀಗೆ ಈ ಎಲ್ಲ ವಿಧಾನಗಳಿಂದ ಅವಶ್ಯವಾದ ವಿಷಯಗಳನ್ನು ಸಂಗ್ರಹಿಸಿ ಈ ಪ್ರಬಂಧಕ್ಕೆ ಬಳಸಿಕೊಳ್ಳಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ

ಸಂಶೋಧನ ಮಹಾಪ್ರಬಂಧಗಳು, ಪ್ರಕಟಿತ, ಅಪ್ರಕಟಿತ ಕೃತಿಗಳು, ನಿಘಂಟುಗಳು, ಪತ್ರಿಕೆಗಳು, ಗ್ರಂಥಗಳು, ಕಲಾವಿದರ ಕಲಾಕೃತಿಗಳನ್ನು ಉದ್ದೇಶಿಸಿ ಪ್ರಕಟವಾದ ಕಲಾವಿಮರ್ಶೆ ಮತ್ತು ಅಭಿಪ್ರಾಯಗಳು, ಲೇಖನಗಳು, ಸಂಶೋಧನಾ ಲೇಖನಗಳು, ಬೇರೆ ಬೇರೆ ಕಲಾಶಾಲೆಗಳು ಮತ್ತು ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಂದ ಕಲಾಕೃತಿ ಮತ್ತು ವಿಷಯಗಳನ್ನು ಸಂಗ್ರಹಿಸಿಕೊಂಡು ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

□□□

ಅಧ್ಯಾಯ : ಎರಡು

ಬಸವಣ್ಣನವರ ಜೀವನದ ಪ್ರಮುಖ ಘಟ್ಟಗಳ ವರ್ಣಚಿತ್ರಗಳು

೨೧ನೆಯ ಶತಮಾನದ ಮಾನವ ಅಮಿತಗತಿಯ ಪ್ರಗತಿಯನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದಾನೆ. ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನಗಳ ಕ್ಷೇತ್ರಗಳು ಇಡೀ ಜಗತ್ತನ್ನು ಒಂದು ಪುಟ್ಟ ಹಳ್ಳಿಯನ್ನಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿವೆ. ಮಾನವ ಮಾಹಿತಿ ತಂತ್ರಜ್ಞಾನದ ಮೂಲಕವೇ ಜ್ಞಾನವನ್ನು ಕ್ಷಣಾರ್ಧದಲ್ಲಿ ದೇಶದಿಂದ ದೇಶಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ವರ್ಗಾಯಿಸುವ ಮತ್ತು ಹಂಚಿಕೊಳ್ಳುವ ಪ್ರಕ್ರಿಯೆಯಲ್ಲಿ ಸದಾ ನಿರತನಾಗಿರುವುದು ಕಂಡುಬರುತ್ತದೆ. ಇದರ ಪರಿಣಾಮವಾಗಿ ವೈಜ್ಞಾನಿಕ ಪ್ರಗತಿಯೊಂದಿಗೆ ಮಾನವೀಯ ಬದುಕಿನ ಮೂಲ ಸೆಲೆಗಳಾದ ಪ್ರೀತಿ, ವಿಶ್ವಾಸ, ಕರುಣೆ, ಅನುಕಂಪಗಳೊಂದಿಗೆ ದೂರ ಸಾಗುತ್ತಿದ್ದಾನೆ. ತನ್ನೊಳಗೆ ತಾನು ಅವಿತುಕೊಳ್ಳುವ ಮನಸ್ಥಿತಿಯ ಕಾರಣದಿಂದ ಮಾನವಸಂಬಂಧಗಳ ನಡುವಿನ ಕಂದರ ಹೆಚ್ಚುತ್ತಾ ಹೋಗುತ್ತಿದೆ. ಇಂತಹ ಸಂದರ್ಭದಲ್ಲಿ ನಾವಿಂದು ಕಲೆ, ಸಾಹಿತ್ಯ, ಸಂಗೀತಗಳ ಮಾಧ್ಯಮದ ಮೂಲಕ ಮಾನವೀಯ ಸಂಬಂಧಗಳ ಕಂದರವನ್ನು ಮುಚ್ಚುವ ನಿಟ್ಟಿನಲ್ಲಿ ಸಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕ್ರಿ.ಶ. ೧೨ನೆಯ ಶತಮಾನದಲ್ಲಿ ಬಾಳಿ ಬದುಕಿದ ಮಹಾನ್ ಶರಣ, ವಚನಕಾರ, ಕ್ರಾಂತಿಕಾರ, ವಿಶ್ವಮಾನವ, ಕವಿ–ಹೀಗೆ ನಾನಾ ಪ್ರತಿಭೆಗಳ ಒಟ್ಟು ಎರಕದಂತಿರುವ ಬಸವಣ್ಣನವರನ್ನು ಕುರಿತು ಪ್ರಸ್ತುತ ಅಧ್ಯಯನ ಸಾಗಿದೆ. ಇಂಥ ಭವ್ಯ ಮಾನವನನ್ನು ಜಗತ್ತಿಗೆ ನೀಡಿದ ಕೀರ್ತಿ ಕನ್ನಡ ನಾಡಿಗೆ ಸಲ್ಲುತ್ತದೆ.

ಬಸವಣ್ಣ ಎಂಬ ಹೆಸರಿನ ಉಚ್ಚಾರಣೆಯೊಂದಿಗೆ ಭಕ್ತಿಭಂಡಾರಿ ಬಸವಣ್ಣ ಎಂಬ ಬಿರುದು ಅವಿಚ್ಛಿನ್ನವಾಗಿ ಸೇರಿಕೊಂಡಿದೆ. ನಮ್ಮ ನಾಡಿನ ಜನತೆಯ ದೃಷ್ಟಿಯಲ್ಲಿ ಬಸವಣ್ಣನವರು ಭಕ್ತಿಯ ಭಂಡಾರವೇ ಎಂಬ ರೀತಿಯಲ್ಲಿ ಭಾವನಾತ್ಮಕವಾಗಿ ಬೆರೆತು ಹೋಗಿದ್ದಾರೆ. ಸಮುದಾಯದ ದೃಷ್ಟಿಯಲ್ಲಿ ಬಸವಣ್ಣನವರು ದೇವಮಾನವರಾಗಿ ಬಿಂಬಿತರಾಗಿದ್ದಾರೆ. ಕ್ರಿ.ಶ. ೧೨ನೆಯ ಶತಮಾನದಲ್ಲಿ ಅಂದು ವಿವಿಧ ಕ್ಷೇತ್ರಗಳಲ್ಲಿ

ಮಾಡಿದ ಕ್ರಾಂತಿಕಾರಕ ಸಾಧನೆಗಳು ಪವಾಡಸದೃಶವಾಗಿ ಕಾಣತೊಡಗಿದವು. ಅವರ ಸಾಧನೆಗಳನ್ನು ಅತಿಮಾನವ ಹಿನ್ನೆಲೆಯಲ್ಲಿ ಗುರುತಿಸಿ ಅವರನ್ನು ಪವಾಡ ಪುರುಷರೆಂದೇ ಬಹಳಷ್ಟು ಜನ ಭಾವಿಸಿದ್ದಾರೆ. ಅಕಾಡೆಮಿಕ್ ವಲಯದ ವಿದ್ವಾಂಸರು, ಚಿಂತಕರು, ವಿಮರ್ಶಕರು ಬಸವಣ್ಣನವರನ್ನು ಜಗತ್ತಿನ ಪ್ರಮುಖ ವಿಚಾರವಾದಿ, ಮಾನವತಾವಾದಿಗಳ ಸಾಲಿನಲ್ಲಿ ಸೇರ್ಪಡೆ ಮಾಡುವುದರ ಮೂಲಕ ತಮ್ಮ ಗೌರವ ಸಮರ್ಪಿಸಿದ್ದಾರೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬಸವಣ್ಣನವರನ್ನು ಕುರಿತ ಅನೇಕ ಕೃತಿಗಳು ರಚನೆಯಾಗಿವೆ. ಹರಿಹರ ಕವಿಯು 'ಬಸವರಾಜದೇವರ ರಗಳೆ' (ಕ್ರಿ.ಶ. ಸು. ೧೨೦೦)ಯನ್ನು ಮೊದಲಿಗೆ ರಚಿಸಿದ. ಪಾಲ್ಕುರಿಕೆ ಸೋಮನಾಥನು ತೆಲುಗುಭಾಷೆಯಲ್ಲಿ 'ಬಸವಪುರಾಣ'ವನ್ನು ರಚಿಸಿದ. ಇದೇ ಕೃತಿಯನ್ನು ಆಧರಿಸಿ ಕನ್ನಡದಲ್ಲಿ ಭೀಮಕವಿಯು ಕನ್ನಡ 'ಬಸವಪುರಾಣ' (ಕ್ರಿ.ಶ. ಸು. ೧೩೬೯)ವನ್ನು ರಚಿಸಿದ. ಅನಂತರ ಭೀಮಕವಿಯನ್ನು ಅನುಸರಿಸಿ ಷಡಕ್ಷರದೇವ ಕವಿಯು 'ವೃಷಭೇಂದ್ರವಿಜಯ' (ಕ್ರಿ.ಶ. ಸು. ೧೬೭೫) ಎಂಬ ಚಂಪೂ ಕೃತಿಯನ್ನು ರಚಿಸಿದ. ಮುಂದೆ ಕಂಚಿಯ ಶಂಕರಾಧ್ಯನಿಂದ ಸಂಸ್ಕೃತ ಭಾಷೆಯಲ್ಲಿ ಬಸವಪುರಾಣವು ರಚಿತವಾಯಿತು.

"ಸಿಂಗಿರಾಜನು 'ಅಮಲಬಸವಚಾರಿತ್ರ್ಯ(ಸಿಂಗಿರಾಜಪುರಾಣ)' ಎಂಬ ಕೃತಿಯನ್ನು ಮತ್ತು ಲಕ್ಕಣ ದಂಡೇಶನು 'ಶಿವತತ್ವಚಿಂತಾಮಣಿ' ಎಂಬ ಕೃತಿಯನ್ನು ರಚಿಸಿದ್ದಾರೆ. ಕ್ರಿ.ಶ. ೧೬೭೫ರ ಕಾಲಘಟ್ಟದಲ್ಲಿದ್ದ ಷಡಕ್ಷರದೇವನು ೨೨ ಆಶ್ವಾಸಗಳು ಮತ್ತು ನಾಲ್ಕುಸಾವಿರ ಪದ್ಯಗಳಿಂದ ಕೂಡಿದ 'ವೃಷಭೇಂದ್ರವಿಜಯ' ಎಂಬ ಮಹಾಗ್ರಂಥವನ್ನು ರಚಿಸಿದ್ದಾನೆ. ಇದನ್ನು 'ಶ್ರೀಮದ್ ಬಸವರಾಜ ವಿಜಯ ಮಹಾಪುರಾಣ'ವೆಂದು ಆತ ವರ್ಣಿಸಿದ್ದಾನೆ."[೧] ಅಳಿಯ ಲಿಂಗರಾಜ ಅರಸರ ಆಶ್ರಯದಲ್ಲಿದ್ದ ಕವಿ ನಂಜುಂಡ ಭಾಗವತನು ಯಕ್ಷಗಾನ ಮಹಾನಾಟಕವಾದ 'ವೃಷಭೇಂದ್ರ ವಿಳಾಸ' ಎಂಬ ವಿಶಿಷ್ಟ ಕಾವ್ಯವನ್ನು ರಚಿಸಿದ್ದಾನೆ. ಬಸವಣ್ಣನವರನ್ನು ಕುರಿತು ಸಾಹಿತ್ಯ ಮತ್ತು ವರ್ಣಚಿತ್ರಗಳೆರಡರ ವಿನೂತನ ಪ್ರಯೋಗಗಳೊಂದಿಗೆ ಕನ್ನಡದಲ್ಲಿ ಪ್ರಸ್ತುತ 'ವೃಷಭೇಂದ್ರ ವಿಳಾಸ' ರಚಿತವಾಗಿದೆ.

ಬಸವಣ್ಣನವರ ಸಮಕಾಲೀನ ವಚನಕಾರರು ಮತ್ತು ನಂತರದವರು ಅವರನ್ನು ಕುರಿತು ತಮ್ಮ ವಚನಗಳಲ್ಲಿ ಕೊಂಡಾಡಿದ್ದಾರೆ. ಚಾಮರಸ ವಿರಚಿತ ಪ್ರಭುಲಿಂಗಲೀಲೆ, ವಿರೂಪಾಕ್ಷ ಪಂಡಿತನ 'ಚನ್ನಬಸವಪುರಾಣ' ಮುಂತಾದ ಪ್ರಮುಖ ಕೃತಿಗಳಲ್ಲಿ ಬಸವಣ್ಣನವರ ಚರಿತ್ರೆಯು ಪ್ರಾಸಂಗಿಕವಾಗಿ ನಿರೂಪಿತವಾಗಿದೆ. ಇಂತಹ ಪ್ರಮುಖ ಕೃತಿಗಳ ಸಾಲಿಗೆ ಸೇರುವ, ಕ್ರಿ.ಶ. ೧೬೫೦ರಲ್ಲಿ ಚನ್ನಪ್ಪ ಕವಿಯಿಂದ ರಚಿತವಾಗಿರುವ 'ಶರಣ ಲೀಲಾಮೃತ' ಕೃತಿಯು ಗಮನಸೆಳೆಯುತ್ತದೆ. ಈ ಕೃತಿಯಲ್ಲಿ ಹಲವು ಶಿವಶರಣರ ಕತೆಗಳು ಬರುತ್ತವೆಯಾದರೂ ಅದು ಮುಖ್ಯವಾಗಿ ಬಸವಣ್ಣನವರ ಜೀವನ ಚರಿತ್ರೆಯಾಗಿದೆ.

---

೦೧. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಸಂ.) : ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ (ಯಕ್ಷಗಾನ ಮಹಾನಾಟಕ), ಪು-೧೦ (ಮುನ್ನುಡಿ)

೧೨ನೆಯ ಶತಮಾನದ ಅನುಭಾವಿ, ಶೂನ್ಯಸಿಂಹಾಸನದ ಚಕ್ರವರ್ತಿ ಎಂದು ಖ್ಯಾತಿಯಾದ ಅಲ್ಲಮಪ್ರಭುದೇವರು ತಮ್ಮದೊಂದು ವಚನದಲ್ಲಿ ಬಸವಣ್ಣನವರ ವ್ಯಕ್ತಿತ್ವವನ್ನು ಹೀಗೆ ಚಿತ್ರಿಸಿದ್ದಾರೆ:

"ಕೌಪು ಕಾಷಾಂಬರವ ಕಟ್ಟಿ ಮಂಡೆ ಬೋಳಾದರೇನಯ್ಯ

ಎನ್ನಲ್ಲಿ ನಿಜವಿಲ್ಲದನ್ನಕ್ಕ

ಹೊನ್ನು ಹೆಣ್ಣು ಮಣ್ಣು ತ್ರಿವಿಧವ ತೊರೆದರೇನಯ್ಯ

ಮನದಲ್ಲಿ ವ್ರತಿಯಾಗದನ್ನಕ್ಕ

ಹಸಿವು ತೃಷೆ ವ್ಯಸನಾದಿಗಳ ಬಿಟ್ಟರೇನಯ್ಯ

ಅರ್ಥದಿಚ್ಛೆ ಮನದಲ್ಲಿ ಹಿಂಗದನ್ನಕ್ಕ

ಆನು ಜಂಗಮವೆ? ಆನು ಹಿರಿಯನಾದೆನಲ್ಲದೆ, ಆನು ಜಂಗಮವೆ?

ಒಡಲಿಲ್ಲದಾತ ಬಸವಣ್ಣ ; ಪ್ರಾಣವಿಲ್ಲದಾತ ಬಸವಣ್ಣ

ಬಸವಣ್ಣನಾಗಿ ಹುಟ್ಟಿಸದೆ ಎನ್ನ ಪ್ರಭುವಾಗಿ ಏಕೆ ಹುಟ್ಟಿಸಿದೆ ಗುಹೇಶ್ವರಾ?"[೨]

ಹೀಗೆ ಪ್ರಾಚೀನ ಕನ್ನಡ ಕವಿಗಳು ಬಸವಣ್ಣನವರನ್ನು ಕುರಿತು ತಮ್ಮದೇ ಶೈಲಿ ಮತ್ತು ಆಯಾಮಗಳಲ್ಲಿ ಜೀವನ–ಸಾಧನೆಗಳನ್ನು ಚಿತ್ರಿಸಿದ್ದಾರೆ. ಬಸವಣ್ಣನವರ ಜೀವನಚರಿತ್ರೆಯನ್ನು ಸಾಹಿತ್ಯ ಮತ್ತು ವರ್ಣಚಿತ್ರ ಮಾಧ್ಯಮಗಳ ಮೂಲಕ 'ವೃಷಭೇಂದ್ರ ವಿಳಾಸ' ಕೃತಿಯಲ್ಲಿ ಕಟ್ಟಿಕೊಟ್ಟಿರುವುದು ವಿಶೇಷವಾಗಿದೆ. ಹರಿಹರನು ತನ್ನ 'ಬಸವದೇವರಾಜ ರಗಳೆ' ಕೃತಿಯಲ್ಲಿ ಬಸವಣ್ಣನವರನ್ನು ಮಾನವೀಯ ಸಾಕಾರಮೂರ್ತಿ ಎಂಬ ಆಶಯದೊಂದಿಗೆ ನಿರೂಪಿಸಿದ್ದಾನೆ.

ಪಾಲ್ಕುರಿಕೆ ಸೋಮನಾಥ ಕವಿಯು ಬರೆದಿರುವ 'ಬಸವಪುರಾಣ'ದಲ್ಲಿ ಪುರಾಣದ ಸ್ವರೂಪವು ಮೂರ್ತಗೊಂಡಿದೆ. ಅಲ್ಲಿ ವಾಸ್ತವಗಳಿಗಿಂತ ಅತಿಮಾನುಷ ನೆಲೆಗಳಿಗೆ ಪ್ರಾಧಾನ್ಯವಿದೆ. ಸಿಂಗಿರಾಜನು ತನ್ನ 'ಅಮಲಬಸವ ಚಾರಿತ್ರ್ಯ' (ಸಿಂಗಿರಾಜಪುರಾಣ) ಎಂಬ ಕೃತಿಯಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ಸಂಗತಿಗಳ ಸಮೀಕರಣದೊಂದಿಗೆ ಬಸವಣ್ಣನವರ ಜೀವನ ಅಭಿವ್ಯಕ್ತಿಗೊಳಿಸಿದ್ದಾನೆ. ಲಕ್ಕಣ ದಂಡೇಶನು ತನ್ನ 'ಶಿವತತ್ವಚಿಂತಾಮಣಿ' ಕೃತಿಯಲ್ಲಿ ಸಿಂಗಿರಾಜನ ಧೋರಣೆಯನ್ನೇ ತಳೆದಿದ್ದಾನೆ. ೨೦ನೆಯ ಶತಮಾನದಲ್ಲಿ ರಚಿತವಾದ, ಹರ್ಡೇಕರ್ ಮಂಜಪ್ಪನವರು ರಚಿಸಿದ 'ಬಸವಣ್ಣನ ಚರಿತ್ರೆ'ಯೂ ಸಿಂಗಿರಾಜನ 'ಅಮಲಬಸವಚಾರಿತ್ರ್ಯ' ಕೃತಿಯನ್ನೇ ಹೆಚ್ಚು ಆಧರಿಸಿದೆ.

ಈವರೆಗಿನ ಬಸವಣ್ಣನವರ ಜೀವನಚರಿತ್ರೆಯು ವೀರಶೈವ ಧರ್ಮದ ಹಿನ್ನೆಲೆಯಲ್ಲಿ ಬಹುವಾಗಿ ಚಿತ್ರಿತವಾಗಿರುವುದನ್ನು ಕನ್ನಡ ಸಾಹಿತ್ಯದ ಇತಿಹಾಸ ದಾಖಲಿಸಿದೆ. ಬಸವಣ್ಣನವರ ಬಗೆಗಿನ ಪ್ರೀತಿ, ಕಾಳಜಿ, ಧರ್ಮದೀಪಕತ್ವ, ಮಾನವಪರ ಕಾಳಜಿ ಇವುಗಳ ಹಿನ್ನೆಲೆಯಲ್ಲಿ ಅವರನ್ನು ದೈವಿಕ ನೆಲೆಯಲ್ಲಿ

೦೨. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಸ್ತೋತ್ರದ ವಚನಗಳು, ಪು–೨

ವೈಭವೀಕರಿಸುವುದು ಆ ಧರ್ಮದ ಅನುಯಾಯಿಗಳಿಗೆ ಸಹಜವಾದುದೇ ಆಗಿರುತ್ತದೆ. ವೀರಶೈವೇತರ ಧರ್ಮದವರು ಬಸವಣ್ಣನವರನ್ನು ಗ್ರಹಿಸಿದ ರೀತಿ ಭಿನ್ನ ನೆಲೆಯಲ್ಲಿ ಅಭಿವ್ಯಕ್ತಿಗೊಂಡಿದೆ. ಜೈನ ಕವಿ ಧರಣಿಪಂಡಿತನು ರಚಿಸಿದ 'ಬಿಜ್ಜಳ ಚರಿತೆ' ಮತ್ತು ಚಂದ್ರಸಾಗರವರ್ಣಿ ರಚಿಸಿದ 'ಬಿಜ್ಜಳರಾಯ ಪುರಾಣ'ದಲ್ಲಿ ಬಸವಣ್ಣನವರನ್ನು ವಿಮರ್ಶಾತ್ಮಕ ನೆಲೆಯಲ್ಲಿ ಪರಿಚಯಿಸಲಾಗಿದೆ.

ಬಸವಣ್ಣನವರ ಜೀವನಚರಿತ್ರೆಯ ಮೊದಲ ಭಾಗವನ್ನು ಎರಡು ನೆಲೆಗಳಲ್ಲಿ ಗುರುತಿಸಬಹುದು. ಮೊದಲನೆಯದು ಧಾರ್ಮಿಕ ಮತ್ತು ಪೌರಾಣಿಕ ಹಿನ್ನೆಲೆ. ಎರಡನೆಯದು ಸಾಹಿತ್ಯಕ ಮತ್ತು ಐತಿಹಾಸಿಕ ನೆಲೆ. ಪೌರಾಣಿಕ ಹಿನ್ನೆಲೆಯು ಬಸವಣ್ಣನ ಜನನಕ್ಕಿಂತ ಮೊದಲಿನ ಪೂರ್ವ ಕಥೆಯನ್ನು ಒಳಗೊಂಡಿದ್ದು ಅದು ಶಿವನ ಒಡ್ಡೋಲಗದಿಂದ ಪ್ರಾರಂಭವಾಗುತ್ತದೆ. ಅದರ ಸಾರವನ್ನು ಹೀಗೆ ಗ್ರಹಿಸಬಹುದು : ಒಂದು ದಿನ ಶಿವನ ವಾಹನವಾದ ನಂದಿಯು ಕೈಲಾಸ ಪರ್ವತದಿಂದ ಇಳಿದು ದಕ್ಷಿಣ ದಿಕ್ಕಿನತ್ತ ಸಾಗಿ ಭೂಲೋಕದ ಒಂದು ತಗ್ಗಾದ ಪ್ರದೇಶದಲ್ಲಿ ಮಲಗುತ್ತದೆ.[೩]

"ಆ ಅರಣ್ಯದಲ್ಲಿ ಅನಿಮಿಷಯ್ಯಗಳೆಂಬ ಅರಸನು ಅದೇ ಮಾರ್ಗದಲ್ಲಿ ಬರುತ್ತಿರಲು ಅರಸನ ಅಶ್ವವು ಅವನಿಂದ ತಪ್ಪಿಸಿಕೊಂಡು ಓಡಿಹೋಗುತ್ತದೆ. ಅದನ್ನು ಬೆನ್ನಟ್ಟಿದ ಅರಸ ತನ್ನ ಆಪ್ತ ಸಚಿವರು ಮತ್ತು ಸೇನೆಯಿಂದ ಬೇರ್ಪಡುತ್ತಾನೆ. ಆ ಹೊತ್ತಿಗೆ ಆತನ ಕುದುರೆಯು ಮಾಯವಾಗುತ್ತದೆ. ಅರಸನು ನಿತ್ಯವೂ ಶಿವಲಿಂಗಾರ್ಚನೆಯನ್ನು ಮಾಡಿ ತನ್ನ ಹಸಿವು-ತೃಷೆಗಳನ್ನು ನೀಗಿಸಿಕೊಳ್ಳುವ ವ್ರತವನ್ನು ಉಳ್ಳವನಾದುದರಿಂದ ಚಿಂತಾಕ್ರಾಂತನಾಗುತ್ತಾನೆ. ಆತನ ಲಿಂಗವು ಸೇನಾ ಪರಿವಾರದಲ್ಲಿ ಉಳಿದಿರುತ್ತದೆ. ಲಿಂಗಪೂಜೆಯಿಲ್ಲದೆ ಉಣ್ಣದಿರುವ ಆತನನ್ನು ನಂದಿಯು ಆತನ ದುಃಖಕ್ಕೆ ಕಾರಣವೇನೆಂದು ಕೇಳುತ್ತಾನೆ. ನಡೆದುದೆಲ್ಲವನ್ನು ಹೇಳಿದ ಅರಸನಿಗೆ ನಂದಿಯು ತನ್ನ ಲಿಂಗವನ್ನು ತೋರಿಸಿ ಊಟ ಮಾಡುವಂತೆ ಹೇಳುತ್ತಾನೆ. ಲಿಂಗವನ್ನು ಕೈಯಲ್ಲಿ ಹಿಡಿದು ನೋಡ ನೋಡುತ್ತಿದ್ದಂತೆ ಅರಸನು ಭೂಮಿಯೊಳಗೆ ಅಡಗಿಹೋಗುತ್ತಾನೆ."[೪]

ಹೀಗೆ ನಂದಿಯು ಲಿಂಗವನ್ನು ಕಳೆದುಕೊಂಡು ಕೈಲಾಸದೆಡೆಗೆ ಚಿಂತಿಸುತ್ತಾ ಹೋಗುತ್ತಾನೆ. ಕೈಲಾಸದ ಸೇವಕನು ಲಿಂಗ ಧರಿಸದ ನಂದಿಯನ್ನು ಭವಿಯೆಂದು ನಿಂದಿಸಿ ಒಳಗೆ ಹೋಗದಂತೆ ತಡೆಯುತ್ತಾನೆ. ಇತ್ತ ಕೈಲಾಸದ ಒಡ್ಡೋಲಗದಲ್ಲಿ ಶಿವನು ನಂದಿಯ ಉಪಸ್ಥಿತಿಯನ್ನು ಕಾಣದೆ ನಂದಿ ಎಲ್ಲಿರುವನೆಂದು ಕೇಳುತ್ತಾನೆ. ವಿಷಯ ತಿಳಿದ ಶಿವನು ಮಹಾದ್ವಾರದ ಹೊರಗಿದ್ದ ನಂದಿಯನ್ನು ತಡೆದ ದ್ವಾರಪಾಲಕನಿಗೆ ಹೀಗೆ ಹೇಳುತ್ತಾನೆ: ದ್ವಾರಪಾಲಕನೇ ಕೇಳು, ನಂದಿಯ ಅಂಗವೇ ಲಿಂಗಮಯವಾದದ್ದು. ಆತನ ನಾಲ್ಕು ಪಾದಗಳು ನಾಲ್ಕು ವೇದಗಳಿದ್ದಂತೆ ಎಂದು ಹೇಳಿ ನಂದಿಯನ್ನು ತಡೆದಿದ್ದಕ್ಕೆ, ಅವನಿಗೆ ಭೂಲೋಕದಲ್ಲಿ ಬಿಜ್ಜಳನಾಗಿ ಜನಿಸು ಎಂದು ಶಾಪ ನೀಡುತ್ತಾನೆ. ನಂತರ ಬಸವಣ್ಣನನ್ನು ಕೈಲಾಸದೊಳಗೆ ಪ್ರೀತಿಯಿಂದ ಕರೆತರುತ್ತಾನೆ.

---

೦೩. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಸಂ.) : ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ (ಯಕ್ಷಗಾನ ಮಹಾನಾಟಕ), ಪು-೧೮, ೧೯

೦೪. ಶ್ರೀ. ಶಿವಬಸವ ಸ್ವಾಮಿಗಳು (ಸಂ.) : ಶರಣ ಲೀಲಾಮೃತ, ಪು-೧೦೦, ೧೦೧

ಶಿವನ ಒಡ್ಡೋಲಗದಲ್ಲಿ ನಾರದ ಮಹರ್ಷಿಗಳು ಲೋಕವಾರ್ತೆಯನ್ನು ಶಿವನಿಗೆ ನಿವೇದಿಸುತ್ತ, ಭೂಮಿಯ ಮೇಲೆ ವಾಸಿಸುವ ಜನರು ಸಾಧುಜೀವಿಗಳಲ್ಲಿ ದಯೆಯನ್ನು ತೋರದೆ, ಕೆಟ್ಟ ಮಾರ್ಗವನ್ನು ಅನುಸರಿಸುತ್ತಿದ್ದಾರೆ. ದುರಾಚಾರಿಗಳಾಗಿದ್ದಾರೆ, ಅಸಂತುಷ್ಟರಾಗಿದ್ದು ಭೇದ ಬಗೆಯುತ್ತ, ವಾದದಲ್ಲಿ ತೊಡಗಿ ಸದಾ ಸಿಟ್ಟಿನಿಂದ ಹೊಡೆದಾಡುತ್ತಿರುತ್ತಾರೆ ಎನ್ನುತ್ತಾರೆ. ಶಿವನೇ, ನಿನ್ನನ್ನು ಪೂಜೆ ಮಾಡುವವರನ್ನು ನಾನು ಅಲ್ಲಿ ಕಾಣಲಿಲ್ಲ. ಭೂಲೋಕದಲ್ಲಿ ಭವಿಗಳ ಸಂಖ್ಯೆ ದೊಡ್ಡದಾಗಿದೆ ಎಂದು ಹೇಳುತ್ತಾನೆ. ಆಗ "ಶಿವನು ನಂದಿಯನ್ನು ಕರೆದು, ನೀನು ಕಲ್ಯಾಣದಲ್ಲಿ ಬಸವೇಶನೆಂಬ ಹೆಸರಿನಿಂದ ಧರ್ಮ ಸ್ಥಾಪಿಸಬೇಕೆಂದು ಆದೇಶ ನೀಡಿದನು. ವೀರಭದ್ರನನ್ನು ಕರೆದು ಮಡಿವಾಳ ಮಾಚಯ್ಯನಾಗಲು, ನಾರದನನ್ನು ಕರೆದು ಕೊಂಡೆಯ ಮಂಚಣ್ಣನಾಗಲು, ಗಂಗೆಯನ್ನು ಕರೆದು ಬಿಜ್ಜಳನ ಮಂತ್ರಿ ಬಲದೇವನ ಮಗಳಾಗಿ ಜನಿಸಿ, ತನ್ನ ಸ್ಥೂಲರೂಪವಾಗಿರುವ ಬಸವೇಶನ ಹೆಂಡತಿಯಾಗಲು ಹೇಳಿದನು"[೫] ಈ ಎಲ್ಲ ಸಂಗತಿಗಳು ಬಸವಣ್ಣನವರ ಜನನದ ಹಿಂದಿನ ಪವಾಡ ಕಥೆಗಳಾಗಿ ರೂಪಿತವಾಗಿರುವುದು ಸ್ಪಷ್ಟವಾಗಿದೆ. ಇನ್ನು ಕೆಲವು ಕೃತಿಗಳಲ್ಲಿ ನಂದಿಯು ತನ್ನ ಅಜ್ಞಾನ, ಮರೆವು, ಆಲಸ್ಯಗಳಿಂದ ಮಾಡಿದ ತಪ್ಪಿನಿಂದಾಗಿ ಆತನ ಪುಣ್ಯ ಕ್ಷೀಣಿಸುತ್ತದೆ. ಆ ಕಾರಣಕ್ಕಾಗಿ ಆತನು ಭೂಲೋಕದಲ್ಲಿ ಬಸವಣ್ಣನಾಗಿ ಜನಿಸಿ, ಧರ್ಮ ಮತ್ತು ಲೋಕೋದ್ಧಾರ ಮಾಡಿ ಮತ್ತೆ ಪುಣ್ಯ ಸಂಪಾದಿಸಿ ಶಿವನ ಒಡ್ಡೋಲಗಕ್ಕೆ ಶಿವನಿಂದಲೇ ಕರೆದೊಯ್ಯಲ್ಪಟ್ಟ ಸಂಗತಿಯು ಹರಿಹರನ 'ಬಸವದೇವರಾಜ ರಗಳೆ' ಮುಂತಾದ ಕೃತಿಗಳಲ್ಲಿ ನಿರೂಪಿತವಾಗಿದೆ.

ಕನ್ನಡ ಸಾಹಿತ್ಯ ಮತ್ತು ಐತಿಹಾಸಿಕ ಸಂಗತಿಗಳ ಹಿನ್ನೆಲೆಯಲ್ಲಿ ಬಸವಣ್ಣನವರ ಬಾಲ್ಯ, ದೇಶ, ಕಾಲಗಳ ವಿಷಯಗಳನ್ನು ಸಾಹಿತ್ಯಚರಿತ್ರೆಕಾರರು ಈವರೆಗೆ ಸುದೀರ್ಘವಾದ ಚರ್ಚೆ ನಡೆಸುತ್ತಾ ಬಂದಿದ್ದಾರೆ. ಬಸವಣ್ಣನವರ ಕಾಲ ಮತ್ತು ಜೀವನದ ವಿವರಗಳಲ್ಲಿ ಭಿನ್ನಾಭಿಪ್ರಾಯಗಳಿವೆ. 'ಎಸ್. ಶ್ರೀಕಂಠಶಾಸ್ತ್ರಿಗಳು ಬಸವಣ್ಣನವರ ಉಲ್ಲೇಖ ಕಂಡುಬರುವ ಕೆಲವು ಶಾಸನಗಳೆಂದರೆ 'ಹಿರಿಯೂರು ಶಾಸನ'[೬], 'ಅರ್ಜುನಗಿ ಶಾಸನ'[೭], 'ಚೌಡದಾನಪುರ ಶಾಸನ'[೮], 'ಕಲ್ಲೇದೇವರ ಪುರಶಾಸನ'[೯], 'ಮರಡಿಪುರ ಶಾಸನ'[೧೦], 'ಹೊಯ್ಸಳ ಸೋಮೇಶ್ವರನ ಕಣ್ಣಾನೂರು ಶಾಸನ'[೧೧]" – ಶ್ರೀಎಸ್. ಶ್ರೀಕಂಠಶಾಸ್ತ್ರಿಗಳು ಉಲ್ಲೇಖಿಸಿರುವ ಈ ಶಾಸನಗಳು ಬಸವಣ್ಣನವರ ಕಾಲಕ್ಕಿಂತ ಸುಮಾರು ಒಂದು ಶತಮಾನಕ್ಕಿಂತ ಈಚಿನವು. ಎಂ. ಗೋವಿಂದ ಪೈ ಅವರು ಬಸವಣ್ಣನವರನ್ನು ಕುರಿತ ಶಾಸನಗಳಲ್ಲಿ ಗುಡಿಹಾಳದ ಗಡಿಕಲ್ಲುಶಾಸನ, ಸೊರಟೂರು ಮಲ್ಲೇಶ್ವರ ದೇವಾಲಯದ ಸ್ತಂಭಶಾಸನ, ಚೌಡದಾನಪುರದ ಶಾಸನ, ಮರಡಿಪುರ ಶಾಸನ, ಕಲ್ಲೇದೇವರಪುರದ

---

೦೫. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಸಂ.) : ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ (ಯಕ್ಷಗಾನ ಮಹಾನಾಟಕ), ಪು–೧೯

೦೬. *E.K.* ಗಿ. ಎ.ಕೆ ?: ೧೨೧೫, ಪು–೧೦೯

೦೭. *E.I. XXI : 1260*, ಪು–೯

೦೮. *PSOIC : 1252*, ಪು–೧೧೦

೦೯. *E.K. XII, J.L., 30, 1279*

೧೦. *E.K. III, M.D., 33 : 1280*

೧೧. ಡಾ. ಹಾ.ಮಾ. ನಾಯಕ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ(ಸಂ.) : ಕನ್ನಡ ಸಾಹಿತ್ಯ ಚರಿತ್ರೆ, ಸಂಪು–೪, ಪು–೪೫೫

ಕಲ್ಲೇಶ್ವರ ದೇವಾಲಯದ ಶಾಸನ, ಹಿರಿಯೂರು ಕುಂಜೇಶ್ವರ ದೇವಾಲಯದ ಶಾಸನ, ಅರ್ಜುನವಾಡದ ಶಾಸನ (೧೨೬೦) ಇವುಗಳಲ್ಲಿ ಬಸವಣ್ಣನವರ ಉಲ್ಲೇಖವಿರುವುದನ್ನು ದಾಖಲಿಸುತ್ತಾರೆ.[೧೨] ಕನ್ನಡ ಶಾಸನಗಳಲ್ಲಿ ಬಸವಣ್ಣನವರನ್ನು ಸಂಗನಬಸವ ಎಂಬ ಹೆಸರಿನಿಂದಲೂ ಗುರುತಿಸಲಾಗಿದೆ. ಬಸವಣ್ಣನವರ ತಂದೆ ಮಾದರಸ ಅಥವಾ ಶಾಸನಗಳಲ್ಲಿ ಉಲ್ಲೇಖವಾದಂತೆ ಮಾದಿರಾಜ. ಆತನಿಗೆ ಇಬ್ಬರು ಮಕ್ಕಳು ಮೊದಲನೆಯವನು ದೇವರಾಜ, ಎರಡನೆಯಾತ ಬಸವರಾಜ (ಸಂಗನಬಸವ). ದೇವರಾಜನಿಗೆ ಕಾವರಸ, ಕಲಿದೇವರಸ, ಹಾಲಬಸವಿದೇವ ಎಂಬ ಮಕ್ಕಳಿದ್ದು ಬಸವಣ್ಣನವರು ಗೌರವಾನ್ವಿತ ಕುಟುಂಬದಿಂದ ಜನಿಸಿ ಬಂದವರು ಎಂಬ ಸಂಗತಿಗಳನ್ನು ಶಾಸನಗಳು ತಿಳಿಸುತ್ತವೆ. ಅರ್ಜುನವಾಡ ಶಾಸನ, ಚೌಡದಾನಪುರ ಶಾಸನ ಮುಂತಾದ ಶಾಸನಗಳಲ್ಲಿ ಬಸವಣ್ಣನವರು ಸಂಗಮೇಶನ ಮಗನೆಂದೂ, ನಂದಿನಾಥನ ಅವತಾರವೆಂದೂ ಇಲ್ಲವೆ ಅವತಾರ ಪುರುಷರೆಂದು ಬಿಂಬಿಸಲಾಗಿದೆ. ಮತ್ತು ಬಸವಣ್ಣನವರು ಜಂಗಮಸೇವೆ, ಲಿಂಗಪೂಜೆ, ಮತ್ತು ಪ್ರಸಾದ ಸಿದ್ಧಿಗಳನ್ನು ನೆರವೇರಿಸುತ್ತಿದ್ದರೆಂಬ ಉಲ್ಲೇಖಗಳು ದೊರೆಯುತ್ತವೆ. ಬಸವಣ್ಣನವರನ್ನು ಕುರಿತು ಕನ್ನಡಭಾಷೆಯಲ್ಲಿ ಮಾತ್ರವಲ್ಲ, ನೆರೆಯ ಮರಾಠಿ, ತಮಿಳು, ತೆಲುಗು ಭಾಷೆಗಳಲ್ಲಿ ಅನೇಕ ಕೃತಿಗಳು ದೊರೆಯುತ್ತವೆ.

ಬಾಲ್ಯ

ವಿಜಯಪುರ ಜಿಲ್ಲೆಯ ಬಾಗೇವಾಡಿ ಬಸವಣ್ಣನವರ ಜನ್ಮಸ್ಥಳ ಎಂಬುದನ್ನು ಭೀಮಕವಿ ವಿರಚಿತ 'ಬಸವ ಪುರಾಣ'ದಲ್ಲಿ

"..ಸಿರಿ

ಗಿರಿಯ ಪಡುವಣ ಕಡೆಯ ಧರೆಯಲಿ

ನರನುತಾಸ್ಪ ದವನೆಸಿದಾ ಕರ್ನಾಟಕದೇಶದಲಿ

ಕರಮೆಸದುದಲ್ಲಿ ಪ್ರಸಿದ್ಧದಿ

ಪಿರಿದೆನಿಪ ಶಿವಭಕ್ತಿಬೀಜ

ಕ್ಕಿರವೆನಿಸಿದೊಂದಿಂಗುರೇಶ್ವರ ಬಾಗವಾಡಿಯದು" – ಶ್ರೀಗಿರಿಯ ಪಶ್ಚಿಮಭಾಗದಲ್ಲಿ ಕರ್ನಾಟಕ ದೇಶವು ಕರಮೆಸದಿರುವುದು. ಅಲ್ಲಿ ಹಿಂಗುಳೇಶ್ವರ ಭಾಗವಾಟಿಯೆಂಬ ವಿಖ್ಯಾತ ಅಗ್ರಹಾರವುಂಟು. ಆ ಅಗ್ರಹಾರದೊಳಗೆ ಮಂಡಗೆ ಮಾದಿರಾಜ, ಮಾದಾಂಬೆ ಎಂಬ ದಂಪತಿಗಳಿದ್ದರು[೧೩] ಎಂಬ ವಿವರಗಳಿವೆ.

"ಸಿದ್ಧಾರ್ಥಿ ಸಂವತ್ಸರದ ಕಾರ್ತೀಕ ಶುದ್ಧ ಪೌರ್ಣಮಿಯ ಸೋಮವಾರದ ಮಧ್ಯರಾತ್ರಿಯಲ್ಲಿ ಒದವಿರ್ದ ಕೃತ್ತಿಕಾ ಶಿವಯೋಗ ವೃಷಭ ಲಗ್ನದೊಳು ಮಾದಲಾಂಬಿಕೆಯ ಗರ್ಭರತ್ನಾಕರ ದೊಳುದಯವಾದಂ"[೧೪] ಅಂದರೆ, ಕ್ರಿ.ಶ. ೧೧೩೦–೩೧ರ ಕಾಲಘಟ್ಟದಲ್ಲಿ ಬಸವಣ್ಣನವರು ಜನಿಸಿದರೆಂದು ತಿಳಿದುಬರುತ್ತದೆ. ಬಹುತೇಕ ವಿದ್ವಾಂಸರು ಬಸವಣ್ಣನವರು ಕ್ರಿ.ಶ. ೧೧೩೧ರಲ್ಲಿ ಜನಿಸಿದರೆಂಬ

೧೨. ಡಾ. ಹಾ.ಮಾ. ನಾಯಕ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ(ಸಂ.) : ಕನ್ನಡ ಸಾಹಿತ್ಯ ಚರಿತ್ರೆ, ಸಂಪು–೪, ಪು–೪೫೬
೧೩. ಡಾ. ಆರ್. ಸಿ. ಹಿರೇಮಠ : ಭೀಮಕವಿ ವಿರಚಿತ ಬಸವಪುರಾಣ, ಪು–೫೧
೧೪. ಡಾ. ಹಾ.ಮಾ. ನಾಯಕ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ(ಸಂ.) : ಕನ್ನಡ ಸಾಹಿತ್ಯ ಚರಿತ್ರೆ, ಸಂಪು–೪, ಪು–೪೬೩

ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾರೆ. ಇಂಗಳೇಶ್ವರ ಗ್ರಾಮವು ಬಸವಣ್ಣನವರ ತಾಯಿಯ ಊರಾಗಿದ್ದು, ತಂದೆಯ ಊರು ಬಾಗೇವಾಡಿ. ಬಾಗೇವಾಡಿಯು ಒಂದು ಪ್ರಮುಖ ಅಗ್ರಹಾರವಾಗಿದ್ದು, ಅಲ್ಲಿಯ ಮಹಾದೇವರಸನು ಆ ಅಗ್ರಹಾರದ ಮುಖ್ಯಸ್ಥನಾಗಿದ್ದ. ಆತನನ್ನು ಇಂದು ವಾಡಿಕೆಯಾಗಿ ಮಾದರಸ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಬಸವಣ್ಣನವರ ತಾಯಿ ಮಾದಲಾಂಬಿಕೆ. ಮಾದರಸನು ಸಾಂಪ್ರದಾಯಿಕ ಶೈವ ಮತದ ಮನೆತನಕ್ಕೆ ಸೇರಿದವನಾಗಿದ್ದು, ದಂಪತಿಗಳಿಬ್ಬರೂ ದೈವಭಕ್ತರಾಗಿದ್ದರು. ಬಾಗೇವಾಡಿಯ ಶಿವಾಲಯದಲ್ಲಿ ನಂದಿವಿಗ್ರಹವಿದ್ದು ಅಪಾರ ದೈವಸೆಲೆಯನ್ನು ಹೊಂದಿದ್ದಾಗಿತ್ತು. ಮಾದಲಾಂಬಿಕೆಯು ಶಿವಾಲಯದ ನಂದೀಶ್ವರನಿಗೆ ಹರಕೆಯನ್ನು ಹೊತ್ತು ನಂದಿವ್ರತವನ್ನು ಪಾಲಿಸಿ ಗರ್ಭಿಣಿಯಾಗುತ್ತಾಳೆ. ಅಲೌಕಿಕ ಪುರುಷನಾದ ಬಸವೇಶ್ವರನಿಗೆ ಜನ್ಮ ನೀಡುತ್ತಾಳೆ. ಬಸವಣ್ಣನವರನ್ನು ಕುರಿತ ಕಾವ್ಯ, ಪುರಾಣಗಳು ಬಸವಣ್ಣನವರ ಜನನವನ್ನು ಮಹತ್ತರವಾದ ದೈವಿಕ ನೆಲೆಯೊಂದಿಗೆ ವರ್ಣಿಸಿವೆ. ಶಿವನು ಮಾದಲಾಂಬಿಕೆಯ ಬಳಿಗೆ ಬಂದು ನಾನು ನಿನ್ನ ಗರ್ಭದಲ್ಲಿ ಶಿಶುವಾಗಿ ಜನಿಸುತ್ತೇನೆಂದು ಕೇಳಿಕೊಳ್ಳುತ್ತಾನೆ. ಬಸವಣ್ಣನವರು ಹುಟ್ಟುವಾಗಲೇ ಕೊರಳಲ್ಲಿ ಲಿಂಗವನ್ನು ಧರಿಸಿದ್ದರೆಂದೂ ಕಾವ್ಯ, ಪುರಾಣಗಳು ವರ್ಣಿಸುತ್ತವೆ. ಹುಟ್ಟಿದ ಮಗು ಬಸವಣ್ಣನಿಗೆ ಚಲನೆಯಿಲ್ಲದಿರುವುದನ್ನು ಕಂಡರು. ಆ ಸಮಯಕ್ಕೆ ಅಲ್ಲಿಗೆ ಬಂದ ಜಾತವೇದ ಮುನಿಗಳು ಮಗುವಿನ ಹಣೆಯಲ್ಲಿ ವಿಭೂತಿ ಧರಿಸಿ, ಕೊರಳಿಗೆ ಲಿಂಗವನ್ನು ಕಟ್ಟಿದಾಗ ಮಗು ಚಲನಶೀಲವಾಗುತ್ತದೆ. ಮಗುವಿಗೆ ಜಾತವೇದ ಮುನಿಗಳು 'ಬಸವ' ಎಂಬ ನಾಮವನ್ನು ನೀಡುತ್ತಾರೆ.

ಬಸವಣ್ಣನು ಬಾಲ್ಯದಲ್ಲಿಯೇ ಎಲ್ಲ ಮಕ್ಕಳಂತೆ ಕಳೆಯದೆ ಭಿನ್ನವಾಗಿ ಆಲೋಚನೆ ಮಾಡುವ ಮತ್ತು ವಿಚಾರಿಸುವ ಮನಸ್ಥಿತಿ ಹೊಂದಿರುತ್ತಾನೆ. ಐದು ವರ್ಷಗಳು ತುಂಬಿದ ಬಾಲಕ ಬಸವಣ್ಣನಿಗೆ ಜಾತವೇದ ಮುನಿಗಳು ಆರಂಭಿಕ ವಿದ್ಯಾಭ್ಯಾಸ ಮಾಡಿಸುತ್ತಾರೆ. ಆ ಹೊತ್ತಿನಲ್ಲಿ ಅವನ ಸಹಪಾಠಿಗಳು ಇವನ ಚುರುಕು ಬುದ್ಧಿಯನ್ನು ಕಂಡು ಅಸೂಯೆ ಪಡುತ್ತಾರೆ. ಕೆಲವು ಸಹಪಾಠಿಗಳು ದ್ವೇಷದ ಭಾವನೆಯಿಂದ ಬಸವನ ಬಗೆಗೆ ಸುಳ್ಳು ಮಾತುಗಳನ್ನಾಡುತ್ತಿದ್ದರು. ಒಂದು ದಿನ ವಟುಗಳು ಹಲಗೆಯನ್ನು ತೊಳೆಯಲು ಕೆರೆಗೆ ಹೋದಾಗ ಬೆನಕಪ್ಪನೆಂಬ ಸಹಪಾಠಿ ಕೆರೆಯಲ್ಲಿ ಕಾಲುಜಾರಿ ಬಿದ್ದು ಸತ್ತು ಹೋಗುತ್ತಾನೆ. ಬಸವೇಶನೇ ಅವನನ್ನು ನೂಕಿ ಕೆರೆಗೆ ತಳ್ಳಿ ಸಾಯಿಸಿದನೆಂದು ಅವನ ಸಹಪಾಠಿ ವಿರೋಧಿಗಳು ದೂರು ನೀಡುತ್ತಾರೆ. ಬೆನಕಪ್ಪನ ತಂದೆ-ತಾಯಿಗಳು ಮಾದಲಾಂಬೆಯ ಬಳಿಗೆ ಬಂದು ನಿನ್ನ ಮಗ ಈ ರೀತಿ ಸಾಯಿಸಿದುದು ಸರಿಯಾದುದೇ? ಎಂದು ಪ್ರಶ್ನಿಸುತ್ತಾರೆ. ಆಗ ಮಾದಿರಾಜ ಬಾಲಕ ಬಸವಣ್ಣನನ್ನು ಕರೆಸಿ ವಿಷಯವನ್ನು ಕೇಳಿದಾಗ, ಬಸವಣ್ಣನು ಇಂಥ ಅಕಾರ್ಯವನ್ನು ನಾನು ಮಾಡಿಲ್ಲ ಎನ್ನುತ್ತಾನೆ. ಅದೇ ಹೊತ್ತಿಗೆ ಬೆನಕನು ಎಚ್ಚರಗೊಂಡು ನನ್ನನ್ನು ನೂಕಿದರು ಎಂದು ಹೇಳುವವರು ಕೇವಲ ನಾಯಿಗಳಂತಹವರು. ನಾನೇ ಮುಗ್ಗರಿಸಿ ಬಿದ್ದೆ ಎಂದು ಬೆನಕನು ಅಲ್ಲಿ ನೆರೆದವರಿಗೆ ಹೇಳುತ್ತಾನೆ. ಹೀಗೆ ಅವನ ಪವಾಡದಿಂದ ಬೆನಕಪ್ಪನು ಬದುಕಿ ಬಂದ ಎಂಬ ಸಂಗತಿಯನ್ನು 'ವೃಷಭೇಂದ್ರ ವಿಳಾಸ'ದ ನಂಜುಂಡ ಕವಿಯು ನಿರೂಪಿಸುತ್ತಾನೆ.

ಸಕಾಲದಲ್ಲಿ ಉಪನಯನ ಮಾಡಿಸುವ ಕರ್ತವ್ಯಪ್ರಜ್ಞೆ ಮಾದರಸನಿಗೆ ಜಾಗೃತವಾಗಿ ತನ್ನ ಮಗ ಬಾಲಕ ಬಸವಣ್ಣನಿಗೆ, ಬ್ರಹ್ಮಕರ್ಮವನ್ನು ಮಾಡುವವನು ಬ್ರಾಹ್ಮಣನಾಗುವನು, ಬ್ರಹ್ಮಯಜ್ಞವನ್ನು ಮಾಡುವವನು ಬ್ರಾಹ್ಮಣನಾಗುವನು, ಬ್ರಹ್ಮಜ್ಞಾನವನ್ನು ತಿಳಿದವನು ಬ್ರಾಹ್ಮಣನಾಗುವನು, ಬ್ರಹ್ಮವೇ ಮೊದಲಾದ ಕರ್ಮವಿಧಿಯನ್ನು ತಿಳಿಸುತ್ತಾನೆ. ಬಾಲಕ ಬಸವಣ್ಣನು ತನ್ನ ತಂದೆ ಮಾದರಸನಿಗೆ, 'ಭವತಿ ಭಿಕ್ಷಾಂ ದೇಹಿ' ಎಂದು ಬಾಳುವುದೇ ನಮ್ಮ ವಂಶದ ಕಾರ್ಯದ ರೀತಿ ಮತ್ತು ನಡತೆ ಎಂದು ಮಾರ್ನುಡಿಯುತ್ತಾನೆ. ಬ್ರಾಹ್ಮಣರ ರೀತಿ ಮುಂಜಿವೆ(ಉಪನಯನ)ವನ್ನು ಮಾಡಿಸಿಕೊಳ್ಳದೆ ಇದ್ದರೆ ನಿನ್ನನ್ನು ಶೂದ್ರನೆಂದು ಭಾವಿಸುತ್ತಾರೆ. ಉತ್ತಮ ದ್ವಿಜರು ನಿನ್ನ ಕೈಯಿಂದ ಅನ್ನ, ನೀರುಗಳನ್ನು ಸ್ವೀಕರಿಸುವುದಿಲ್ಲ ಎಂದು ಎಚ್ಚರಿಸಿದರೂ ಕೂಡ ಬಸವಣ್ಣನು ತನ್ನದೇ ಆದ ತರ್ಕ ಮಂಡಿಸುತ್ತಾ ಇಂಥ ಮೂಢ ನಂಬಿಕೆಗಳನ್ನು ಬಿಡು, ಇಂಥಹ ಧರ್ಮ ಮತ್ತು ಜನರ ಮಧ್ಯೆ ನಾನಿರಲು ಇಚ್ಛಿಸುವುದಿಲ್ಲವೆಂದು ಕಟುನುಡಿದು ಕೂಡಲ ಸಂಗಮಕ್ಕೆ ತೆರಳಲು ನಿರ್ಧರಿಸುತ್ತಾನೆ. ಆದರೆ ಹರಿಹರನು ತನ್ನ 'ಬಸವದೇವರಾಜ ರಗಳೆ'ಯಲ್ಲಿ, ಬಾಲಕ ಬಸವಣ್ಣನಿಗೆ ಈಗಾಗಲೇ ಉಪನಯನವಾಗಿರುವ ಸಂಗತಿಯನ್ನು ನಿರೂಪಿಸುತ್ತಾನೆ. ಶಿವಲಿಂಗಾರ್ಚನೆಯಲ್ಲಿ ಆಸಕ್ತನಾದ ಬಸವಣ್ಣನು "ಕರ್ಮಲತೆಯಂತಿರ್ದ ಜನ್ನಿವಾರಂ ಕಳೆದು ಬಿಸುಟು, ಹೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪರಿದು ಬಿಸುಟು, ನವ್ಯದುಕೂಲಮಂ ತೆಗೆದಿಟ್ಟು, ದಿವ್ಯವಸ್ತ್ರಮಂ ಪೊದೆದು, ಮನೆ, ನೆಳಲಂ ನೆನೆಯದೆ, ಅರ್ಥಮಂ ಲೆಕ್ಕಿಸದೆ, ವೃತ್ತಿಯಂ ವಿಚಾರಿಸದೆ, ಬಂಧುಗಳಂ ಬಗೆಯದೆ, ಪುರಜನಮಂ ಪರಿಕಿಸದೆ, ಹರಭಕ್ತಿಯೊಳಾತುರದಿಂ ಬಾಗವಾಡಿಯಿಂ ಪೊರಮಟ್ಟು ಪೂರ್ವದಿಶಾಭಿಮುಖನಾಗಿ ಕಿರಿದಂತರಂ ನಡೆದುಬಂದು..."[೧೫] ಎಂದು ಹೇಳಿರುವಲ್ಲಿ ಬಸವಣ್ಣನ ಬಾಲ್ಯಜೀವನದ ನಿರೂಪಣೆಯಲ್ಲಿ ಭಿನ್ನತೆಗಳು ಕಂಡುಬರುತ್ತವೆ.

ಬಸವಣ್ಣನು ತನ್ನ ಬಾಲ್ಯದ ಪರಿಸರದಲ್ಲಿದ್ದ ಜೈನ, ಬೌದ್ಧ ಮತ್ತು ಬ್ರಾಹ್ಮಣ ಧರ್ಮಗಳ ಮತಾಚರಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ. ವಿಶೇಷವಾಗಿ ಬ್ರಾಹ್ಮಣ ಧರ್ಮದ ಆಚರಣೆಗಳು ಆತನಿಗೆ ಸಮರ್ಪಕವಾಗಿ ಕಂಡುಬರದೆ, ಅವುಗಳನ್ನು ಪ್ರಶ್ನಿಸುವ ಮನೋಭಾವವನ್ನು ಬೆಳೆಸಿಕೊಂಡ. ಚಿಕ್ಕ ವಯಸ್ಸಿನಲ್ಲಿ ಆತನ ಹುಟ್ಟುಧರ್ಮದ ಹಿನ್ನೆಲೆಯಲ್ಲಿ ಮಾಡುವ ಉಪನಯನವನ್ನು ನಿರಾಕರಿಸುತ್ತಾನೆ. ಈಗಾಗಲೇ ಜಾತವೇದಮುನಿಗಳು ಲಿಂಗದೀಕ್ಷೆಯನ್ನು ಮಾಡಿರುವುದರಿಂದ ಯಜ್ಞೋಪವೀತ ಅಥವಾ ಜನಿವಾರವನ್ನು ಧರಿಸಲು ನಿರಾಕರಿಸುತ್ತಾನೆ. ತಂದೆಯ ಮಾತನ್ನು ಮೀರಿ ತನ್ನ ಧರ್ಮ ವೀರಶೈವ ಧರ್ಮ ಎಂಬುದನ್ನು ಸ್ಪಷ್ಟಪಡಿಸಿ ಅದರ ಆಚರಣೆಗೆ ಕಟಿಬದ್ಧನಾಗುತ್ತಾನೆ. ಆ ಮೂಲಕ ತಾನು ಕೂಡಲಸಂಗಮಕ್ಕೆ ಶಿವನ ಸನ್ನಿಧಾನಕ್ಕೆ ಹೋಗುವುದಾಗಿ ಮಾದರಸನಿಂದ ಅನುಮತಿ ಪಡೆಯುತ್ತಾನೆ. ಆತನೊಂದಿಗೆ ಅಕ್ಕನಾದ ನಾಗಮ್ಮನೂ ಕೂಡಲಸಂಗಮಕ್ಕೆ ಹೊರಡಲು ಅಣಿಯಾಗುತ್ತಾಳೆ. ಬಹುತೇಕ ಕೃತಿಗಳಲ್ಲಿ ಅಕ್ಕ ನಾಗಮ್ಮನಿಗೆ ವಿವಾಹವಾಗಿರುವುದರ ಉಲ್ಲೇಖಗಳು ದೊರೆಯುವುದಿಲ್ಲ. ಆದರೆ ಕೆಲವೊಂದು ಕೃತಿಗಳಲ್ಲಿ ಆತನ ಅಕ್ಕ ನಾಗಮ್ಮನಿಗೂ ಸಂಗಮದ ಶಿವಸ್ವಾಮಿಯೊಂದಿಗೆ ಲಗ್ನವಾಗುತ್ತದೆ ಎಂದಿದೆ. ಬಸವಣ್ಣ ಮತ್ತು ಅಕ್ಕ ನಾಗಮ್ಮ ಇಬ್ಬರೂ ಕೂಡಲ ಸಂಗಮಕ್ಕೆ ಬರುತ್ತಿರುವಾಗ ಮಲಾಪಹರಿ (ಮಲಪ್ರಭಾ)

---

೧೫. ಡಾ. ಎಂ. ಎಂ. ಕಲಬುರ್ಗಿ (ಸಂ.) : ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು – ಬಸವೇಶ್ವರದೇವರ ರಗಳೆ, ಪು–೧೨೯

ನದಿಯು ಅಡ್ಡಗಟ್ಟುತ್ತದೆ. ಬಸವಣ್ಣನು ಆಗ ಶಿವನನ್ನು ನೆನೆಸಿದ ಕೂಡಲೇ ನದಿಯು ಇಬ್ಭಾಗವಾಗಿ ದಾರಿ ಬಿಡುತ್ತದೆ. ಅದೇ ಹೊತ್ತಿಗೆ ಸಾಕ್ಷಾತ್ ಶಿವನು ಬಂದು ಕೂಡಲಸಂಗಮಕ್ಕೆ ಕರೆದೊಯ್ಯುವ "... ಎಂದು ಪೊರಮಡಲು ಬಸವೇಶಕ್ಕೆ ನಾಗಮ್ಮ ಪಿಂದೆ ಬೆಂಬತ್ತಿ ಬರೆ ಬಾಗವಾಡಿಯ ಬಿಟ್ಟು ಮುಂದಡ್ಡಗಟ್ಟಿದ ಮಲಪ್ರಹರಿ ನದಿತಟದಿ ನುತಿಸಲಾ ಸಂಗಮೇಶಂ । ಬಂದು ತಕ್ಕವಿಸುತ್ತ ವಂದಿಸಿದ ಭಕ್ತರ ನ್ನಂದು ತನ್ನಾಲಯಕೆ ಕರತಂದು ಮನ್ನಿಸುತ ಚಂದಮಿರಲತ್ತ ಕಲ್ಯಾಣ ಪಟ್ಟಣದ ಮಹಿಮೆಯ ಪೇಳ್ವೆ ಶಿವನ ಕೃಪೆಯಂ॥" ಸಂಗತಿಯನ್ನು ವೃಷಭೇಂದ್ರ ವಿಳಾಸವೆಂಬ ಯಕ್ಷಗಾನ ಕೃತಿಯ ಕವಿ ನಂಜುಂಡ ಭಾಗವತನು ತಿಳಿಸುತ್ತಾನೆ.[೧೬] ಸಂಗಮೇಶ್ವರ ದೇವಸ್ಥಾನದಲ್ಲಿ ಅಲ್ಲಿಯ ಸ್ಥಾನಪತಿಯ ನೇತೃತ್ವದೊಂದಿಗೆ ಬಸವಣ್ಣನ ಪ್ರೌಢ ವಿದ್ಯಾಭ್ಯಾಸವು ನಡೆಯುತ್ತದೆ. ಬಾಲ್ಯದಿಂದಲೇ ಚಿಂತನಶೀಲನಾದ ಬಸವಣ್ಣ ಸಕಲ ವಿದ್ಯೆಗಳಲ್ಲಿ ಪರಿಣತಿ ಪಡೆದು ಶಿವಭಕ್ತಿಯನ್ನು ರೂಢಿಸಿಕೊಳ್ಳುತ್ತಾನೆ. ತನ್ನ ಜೀವನದ ಮುಂದಿನ ಯೋಜನೆಗಳನ್ನು ಅಲ್ಲಿಯೇ ರೂಪಿಸಿಕೊಂಡ ಬಸವಣ್ಣ ಆ ವರೆಗೆ ಇದ್ದ ಧಾರ್ಮಿಕ ವ್ಯವಸ್ಥೆಯ ಕರ್ಮಠತನ, ಮೂಢನಂಬಿಕೆಗಳು, ಅರ್ಥರಹಿತ ಆಚರಣೆಗಳನ್ನು ಹೊಡೆದೋಡಿಸುವ ಛಲ ತೊಡುತ್ತಾನೆ. ವ್ಯಕ್ತಿಸ್ವಾತಂತ್ರ್ಯ, ಸ್ತ್ರೀಸಮಾನತೆ, ವ್ಯಕ್ತಿಯ ಆತ್ಮವಿಕಾಸದ ಸಾಧ್ಯತೆಗಳನ್ನು ಅನಾವರಣಗೊಳಿಸುವ ವೇದಿಕೆಯನ್ನು ಸಿದ್ಧಪಡಿಸಿಕೊಳ್ಳುತ್ತಾನೆ. ಸಂಗಮದಿಂದ ಹೊರಟ ಬಸವಣ್ಣ ನೇರವಾಗಿ ಕಲ್ಯಾಣಕ್ಕೆ ಹೋದನೆಂಬ ಅಂಶವನ್ನು ಬಸವಪುರಾಣವು ನಿರೂಪಿಸುತ್ತದೆ. ಆದರೆ ಹರಿಹರನು ಬಸವಣ್ಣ ಮೊದಲು ಬಿಜ್ಜಳನ ನೆಲೆಯಾಗಿದ್ದ ಮಂಗಳವಾಡಕ್ಕೆ ಹೋದನೆಂದು ನಿರೂಪಿಸುತ್ತಾನೆ.

ಕೂಡಲ ಸಂಗಮದಲ್ಲಿರುವಾಗಲೇ ಬಸವಣ್ಣನವರ ವಿಷಯ ಕಲ್ಯಾಣ ಪಟ್ಟಣದಲ್ಲಿರುವ ಬಸವಣ್ಣನವರ ಮಾವನಾದ ಬಲದೇವನಿಗೆ ತಿಳಿಯುತ್ತದೆ. ಆತನು ಕೂಡಲೇ ಸಂಗಮಕ್ಕೆ ಬಂದು ಅವರಿಬ್ಬರನ್ನು ಕಲ್ಯಾಣ ಪಟ್ಟಣಕ್ಕೆ ಕರೆದುತರುತ್ತಾನೆ. ನಂತರ ತನ್ನ ಮಗಳಾದ ಗಂಗಾಂಬಿಕೆಯನ್ನು ಬಸವಣ್ಣನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಕ್ರಿ.ಶ. ೧೧೬೨ರ ಹೊತ್ತಿಗೆ ಬಿಜ್ಜಳನು ತೈಲಪನನ್ನು ಹಿಂದೆ ಸರಿಸಿ ತಾನೇ ಕಲ್ಯಾಣ ಚಾಳುಕ್ಯರ ಅಧಿಪತ್ಯವನ್ನು ವಹಿಸಿಕೊಳ್ಳುತ್ತಾನೆ. ಈ ಹೊತ್ತಿಗಾಗಲೇ ಬಸವಣ್ಣ ಮತ್ತು ಬಿಜ್ಜಳ ಇವರ ಸ್ನೇಹವು ಬಲಗೊಂಡಿತ್ತು ಎಂಬ ಸಂಗತಿಗಳನ್ನು ಕಾವ್ಯ, ಪುರಾಣಗಳು ಸ್ಪಷ್ಟಪಡಿಸುತ್ತವೆ. ಬಿಜ್ಜಳ ಮಹಾರಾಜ ಚಕ್ರವರ್ತಿಯಾಗಲು ಬಸವಣ್ಣನ ಮಾತುಗಳು ಪ್ರೇರಣೆ ನೀಡಿದವು ಎಂಬ ಅಂಶವನ್ನು ಗಿರೀಶ್ ಕಾರ್ನಾಡರು ತಮ್ಮ ತಲೆದಂಡ ನಾಟಕದಲ್ಲಿ ಪ್ರತಿಪಾದಿಸುತ್ತಾರೆ. "ಹದಿನಾರು ವರ್ಷಗಳ ಕೆಳಗಿನ ಮಾತು. ನಾನು ಆಗ ಚಾಲುಕ್ಯರ ಸಾಮಂತ!... ಆಗ ಬಸವಣ್ಣ ಮಂಗಳವಾಡಕ್ಕೆ ಬಂದ. ಇನ್ನೂ ಇಪ್ಪತ್ತು ತುಂಬಿರಾಕಿಲ್ಲ. ಆದರೆ ಏನು ಮಾತು! ಏನು ಚಟುವಟಿಕಿ! ಆಗಳೇ ಅನತಿದ್ದ : ರಾಜ್ಯಭಾರ ಅಂದರ ಕಾಯಕ. ಅದಕ್ಕ ವಂಶಾ ಇದ್ದರ ಸಾಲದು. ಯೋಗ್ಯತಾ ಬೇಕು ಅಂತ. ಬಸವಣ್ಣ ಖರೇನ ನೀ ಅಂದು ಆ ಮಾತು ಆಡದೇ ಹೋಗಿದ್ದರ ನಾ ಚಾಲುಕ್ಯರ ಕೈಯಾಗಿಂದ ಈ ಪಟ್ಟ ಕಸಗೊಂತಿದ್ದಿಲ್ಲ. ಕಲ್ಯಾಣದ ಚಕ್ರವರ್ತಿ ಆಗತಿದ್ದಿಲ್ಲ."[೧೭] ಎನ್ನುವ ಗಿರೀಶ್ ಕಾರ್ನಾಡ್ ಅವರ ವೈಚಾರಿಕ ಚಿಂತನೆಯ ಮಾತುಗಳನ್ನಿಲ್ಲಿ

೧೬. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಸಂ.) : ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ (ಯಕ್ಷಗಾನ ಮಹಾನಾಟಕ), ಪು-೫೭

೧೭. ಗಿರೀಶ ಕಾರ್ನಾಡ : ತಲೆದಂಡ ನಾಟಕ, ಅಂಕ ೧, ದೃಶ್ಯ ೩, ಪು-೧೨

ಗಮನಿಸಬೇಕು. ಅನಾದಿಕಾಲದಿಂದಲೂ ಬಸವಣ್ಣನವರ ಬದುಕು-ಬರಹಗಳ ಕುರಿತು ಅನೇಕ ವಿದ್ವಜ್ಜನರು ಚರ್ಚಿಸಿದ್ದಾರೆ, ಚರ್ಚಿಸುತ್ತಲೂ ಇದ್ದಾರೆ. ಹನ್ನೆರಡನೆಯ ಶತಮಾನದಿಂದ ಹಿಡಿದು ಮಾಹಿತಿ ತಂತ್ರಜ್ಞಾನದ ಕಾಲದವರೆಗೂ ಜೀವಂತವಾಗಿದ್ದು, ಎಲ್ಲರೊಳಗೆ ಪ್ರಶ್ನಾರ್ಹ, ಚರ್ಚಾಸ್ಪದವಾಗಿರುವ ಬಸವಣ್ಣನವರ ಕುರಿತು ರಚಿಸಿದ ಕಲಾಕೃತಿಗಳನ್ನು ವಿಶ್ಲೇಷಣಾತ್ಮಕ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೨.೧. ಬಸವಪೂರ್ವ ಯುಗದ ಸಾಮಾಜಿಕ-ಧಾರ್ಮಿಕ ವ್ಯವಸ್ಥೆಯ ವರ್ಣಚಿತ್ರಗಳು

ಭಾರತದ ಸನಾತನ ವೈದಿಕ ಪದ್ಧತಿಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳ ವ್ಯವಸ್ಥೆ ಬಹುಕಾಲದಿಂದಲೂ ರೂಢಿಯಲ್ಲಿದೆ. ವಿಷ್ಣುವಿನ ತಲೆಯಿಂದ ಬ್ರಾಹ್ಮಣ, ಎದೆಯಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ, ಪಾದಗಳಿಂದ ಶೂದ್ರ ಜನಿಸಿದ ಎಂಬ ನಂಬಿಕೆಯ ಆಧಾರದ ಮೇಲೆ ಆ ವ್ಯವಸ್ಥೆ ರೂಪಿತವಾಗಿತ್ತು. ಕಾಲಾನುಕ್ರಮದಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ವೈದಿಕ ಪರಂಪರೆಯ ವ್ಯವಸ್ಥೆಯಲ್ಲಿ ಅಲ್ಲಸಲ್ಲದ ನಿಯಮಗಳನ್ನು ಸೇರಿಸುವುದರ ಮೂಲಕ ತಮ್ಮ ನೆಲೆಯನ್ನು ಭದ್ರ ಮಾಡಿಕೊಂಡರು. ಅದನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಶೋಷಣೆಯಲ್ಲಿ ತೊಡಗಿದರು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಕುಲದವರಿಗೆ ಇದರಿಂದ ತೊಂದರೆಯಾಗಲಿಲ್ಲ. ಅಂತಿಮವಾಗಿ ಶೂದ್ರನು ಉಳಿದ ಮೂರು ವರ್ಗಗಳಿಂದ ಶೋಷಣೆಗೆ ಒಳಗಾಗಬೇಕಾಯಿತು. ಕ್ರಿ.ಶ. ೧೨ನೆಯ ಶತಮಾನದ ಪರಿಸರದಲ್ಲಿ ಬಸವಣ್ಣನ ತಂದೆ-ತಾಯಿಗಳು ಇಂತಹ ವಿಷಮ ಕಾಲಘಟ್ಟದಲ್ಲಿ ಬದುಕಿ ಬಾಳಿದ್ದರು. ಅಸಮಾನತೆ, ಶೋಷಣೆ, ಮತೀಯ ಕಂದಾಚಾರಗಳು, ಮೌಢ್ಯಗಳು, ಯಜ್ಞ-ಯಾಗಾದಿಗಳ ಹೆಸರಿನಲ್ಲಿ ನಡೆಯುವ ಪ್ರಾಣಿಬಲಿ, ಅಸ್ಪೃಶ್ಯತೆ ಮುಂತಾದ ಸಮಾಜಕ್ಕೆ ಅಹಿತಕರವಾದ ಘಟನಾವಳಿಗಳನ್ನು ಅಂದಿನ ಜನತೆ ಒಪ್ಪಿಕೊಂಡಿತ್ತು. ಬಸವಣ್ಣನ ತಂದೆ ಮಾದರಸ ಮತ್ತು ತಾಯಿ ಮಾದಲಾಂಬಿಕೆ ಅವರೂ ಸಹ ಸನಾತನ ವೈದಿಕ ಧರ್ಮ ಮತ್ತು ಅದರ ಕಟ್ಟುನಿಟ್ಟಿನ ಆಚರಣೆಗಳ ಬಗೆಗೆ ಪ್ರತಿರೋಧ ವ್ಯಕ್ತಪಡಿಸಿದಂತೆ ಕಂಡುಬರುವುದಿಲ್ಲ. ಆದರೆ ಬಸವಣ್ಣ ತನ್ನ ಬಾಲ್ಯದಲ್ಲಿಯೇ ಇವುಗಳ ಕುರಿತು ಚಿಂತನೆ ನಡೆಸಿ ಈ ಸಾಮಾಜಿಕ ಅಸಮಾನತೆಗಳನ್ನು ಮೊದಲು ಗುರುತಿಸಿದ. ಬಸವಣ್ಣನ ವ್ಯಕ್ತಿತ್ವವನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಆತನ ಬಾಲ್ಯದ ಹಿಂದಿನ ಪರಿಸರವು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕಲಾವಿದರು ಬಸವಣ್ಣನಿಗಿಂತ ಹಿಂದಿನ ಇಲ್ಲವೆ ಸಮಕಾಲೀನ ಪರಿಸರದ ಎಲ್ಲ ಘಟನೆ, ಸನ್ನಿವೇಶಗಳನ್ನು ವರ್ಣಚಿತ್ರಗಳಲ್ಲಿ ಹಿಡಿದಿಡುವ ಪ್ರಯತ್ನಗಳನ್ನು ಮಾಡಿದ್ದಾರೆ. ಅಂಥ ಕೆಲವು ವರ್ಣಚಿತ್ರಗಳನ್ನು ಇಲ್ಲಿ ಗಮನಿಸಲಾಗಿದೆ.

೨.೧.೧. ಬಸವಪೂರ್ವ ಯುಗದ ಹಿಂದೂ ಧರ್ಮದ ಚಿತ್ರಣ

"ನಾವು ಮನಸ್ಸಿನಲ್ಲಿ ಅದುಮಿಟ್ಟ ಎಷ್ಟೋ ವಿಷಯಗಳು ಕನಸಿನಲ್ಲಿ ಕಾಣುವಂತೆ, ಕಲಾವಿದನ ಮನಸ್ಸಿನಲ್ಲಿಟ್ಟ ಎಷ್ಟೋ ವಿಚಾರಗಳು ಚಿತ್ರ ರೂಪದಲ್ಲಿ ಪರಿಹಾರ ಪಡೆದುಕೊಳ್ಳುತ್ತದೆ"[೧೮] ಎಂಬ ಮಾತು ಈ ಚಿತ್ರಕ್ಕೆ ಅನ್ವಯಿಕೆಯಾಗುತ್ತದೆ. ಬಾಗಲಕೋಟ ಜಿಲ್ಲೆಯ ಅನಗವಾಡಿ ಗ್ರಾಮದವರಾದ ಕಲಾವಿದ ಶಿವಾನಂದ ಹಿರೇಮಠ ಅವರು ೨೦೧೮ರಲ್ಲಿ ಈ ಕೃತಿಯನ್ನು ೩'x೨' ಅಡಿ ಅಳತೆಯಲ್ಲಿ ರಚಿಸಿದ್ದಾರೆ.

೧೮. ಶಂಕರ ಪಾಟೀಲ : ಚಿತ್ರಕಲಾ ಚಿಂತನೆ, ಪು-೩೮

ಈ ಚಿತ್ರದಲ್ಲಿ ರಾಜನಿಂದ ಹಿಡಿದು ದಲಿತರ ಬದುಕಿನ ಚಿತ್ರಣವನ್ನು ಇಲ್ಲಿ ತಮ್ಮದೇ ಆದ ಶೈಲಿಯಲ್ಲಿ ಆಕೃತಿಗಳನ್ನು ಸಂಯೋಜಿಸಿ, ಕಾಗದವನ್ನು ಸಂಪೂರ್ಣವಾಗಿ ಬಳಸಿಕೊಂಡು ಅತ್ಯಂತ ನೈಜ ರೀತಿಯಲ್ಲಿ ರಾಜನ ಮೆರವಣಿಗೆಯಾಗಲಿ, ಬ್ರಾಹ್ಮಣರು ಪೂಜೆ ಮಾಡುವುದಾಗಲಿ, ಗ್ರಾಮೀಣ ಜನರು ತಮ್ಮ ದಿನನಿತ್ಯ ಕಾಯಕದಲ್ಲಿ ತೊಡಗಿರುವುದಾಗಲಿ ಹಾಗೂ ಅದೇ ರೀತಿ ಶೂದ್ರರು ತಮ್ಮ ಕಾರ್ಯದಲ್ಲಿ ನಿರತರಾಗಿರುವಂತೆ ಇಲ್ಲಿ ಚಿತ್ರಿಸಲಾಗಿದೆ. ಮನುಷ್ಯರ ಆಕೃತಿಗಳೊಂದಿಗೆ ನಿಸರ್ಗ, ಪ್ರಾಣಿ ಪಕ್ಷಿಗಳನ್ನು ಬಳಸಿಕೊಂಡು ಕಲಾತ್ಮಕವಾಗಿ ಮತ್ತು ನೈಜವಾಗಿ ಚಿತ್ರಿಸಲಾಗಿದೆ. ಜಲವರ್ಣ ಮಾಧ್ಯಮದಲ್ಲಿ ರಚಿಸಿದ ಈ ಕಲಾಕೃತಿಯಲ್ಲಿ ಬಿಳಿ, ಹಸಿರು, ಕೆಂಪು, ಕಂದುಗೆಂಪು ಈ ನಾಲ್ಕು ವರ್ಣಗಳನ್ನು ಬಳಸಿರುವುದು ಕಂಡುಬರುತ್ತದೆ. ಒಟ್ಟಾರೆ ಈ ಚಿತ್ರದಲ್ಲಿ ಯಥಾದರ್ಶನಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ.

ಈ ಚಿತ್ರದಲ್ಲಿ ಮುಖ್ಯವಾಗಿ ರಾಜನು ಕುದುರೆಯನ್ನೇರಿ ಬರುವುದು, ಅಗ್ರಹಾರ ಮತ್ತು ಗ್ರಾಮೀಣ ಪ್ರದೇಶದ ಪಂಚಮ ಕಾಯಕ ಹಾಗೂ ಶೂದ್ರರು ಜಲವರ್ಣದ ಪರಂಪರೆಗೆ ಸೇರಿದ ಈ ಕಲಾಕೃತಿಯಲ್ಲಿ ಕಲಾವಿದ ತನ್ನೆಲ್ಲ ಗ್ರಹಿಕೆಗಳನ್ನು ನೋಡುಗರಿಗೆ ಮುಟ್ಟಿಸುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ. ಚಿತ್ರವನ್ನು ಪ್ರಧಾನವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. ಚಿತ್ರದ ಎದುರು ನೋಟದ ಮಧ್ಯಭಾಗದಲ್ಲಿ ದೇವಸ್ಥಾನವೊಂದು ಕಂಡುಬರುತ್ತದೆ. ಅದನ್ನು ಪ್ರವೇಶಿಸಲು ಬೀದಿಯೊಂದರ ಎಡಬದಿಯಲ್ಲಿ ವಿಶಾಲವಾದ ಎತ್ತರವಾದ ಕೋಟೆಯ ಗೋಡೆಯೊಂದು ಕಂಡುಬರುತ್ತದೆ. ಸುಮಾರು ಐದಾರು ಜನ ಬ್ರಾಹ್ಮಣರು ಕೆಂಪುವಸ್ತ್ರ ಧರಿಸಿ, ತಲೆಯನ್ನು ಬೋಳಿಸಿ ಕೇವಲ ಜುಟ್ಟನ್ನು ಮಾತ್ರ ಬಿಟ್ಟಿದ್ದಾರೆ. ಅವರು ದೇವಸ್ಥಾನದ ಮುಂದೆ ಧಾರ್ಮಿಕ ಕ್ರಿಯೆಗಳನ್ನು ನಡೆಸುವರಂತೆ ಕಂಡುಬರುತ್ತಾರೆ. ಒಬ್ಬಾತ ದೇವಸ್ಥಾನದ ಎದುರು ಬದಿಯಲ್ಲಿರುವ ತುಳಸಿ ಮಂಟಪಕ್ಕೆ ಪೂಜೆಯನ್ನು ನೆರವೇರಿಸುವ ಕಾಯಕದಲ್ಲಿ ತೊಡಗಿದ್ದಾನೆ. ಕಪ್ಪು ಕೋಡುಗಳನ್ನುಳ್ಳ ಬಿಳಿ ಬಣ್ಣದ ಹಸು ಕೂಡ ಆತನ ಪಕ್ಕದಲ್ಲಿ ನಿಂತಿರುವುದು ಕಾಣಿಸುತ್ತದೆ.

ಚಿತ್ರದ ಎಡಬದಿಯಲ್ಲಿ ಕ್ಷತ್ರಿಯರ ಲೋಕವನ್ನೇ ಕಲಾವಿದ ಸೃಷ್ಟಿಸಿದ್ದಾನೆ. ಎತ್ತರವಾದ ಅಲಂಕೃತಗೊಂಡ, ಬಲಿಷ್ಠವಾದ ಬಿಳಿಯ ಕುದುರೆಯ ಮೇಲೆ ರಾಜನು ಕೆಂಪು ಉಡುಗೆಗಳೊಂದಿಗೆ ಕಿರೀಟವನ್ನು ಧರಿಸಿ, ಕಡಿವಾಣಗಳನ್ನು ಹಿಡಿದು ಕುಳಿತಿದ್ದಾನೆ. ಆತನ ಪಕ್ಕದಲ್ಲಿ ಒಬ್ಬನು ಕೆಂಪುವಸ್ತ್ರವನ್ನು ಸೊಂಟಕ್ಕೆ ಸುತ್ತಿ, ನವಿಲುಗರಿಯ ಚಿಹ್ನೆಯನ್ನುಳ್ಳ ರಾಜಮರ್ಯಾದೆಯ ಸಂಕೇತವಾಗಿ ಚಾಮರವನ್ನು ಎತ್ತಿ ಹಿಡಿದಿದ್ದಾನೆ. ಆತನ ಎದುರಿಗೆ ಪುರದಜನರನ್ನು ಅವರಲ್ಲಿ ಗಂಡಸರು ಮತ್ತು ಹೆಂಗಸರು ತಮ್ಮ ಸೊಂಟಗಳನ್ನು ಬಗ್ಗಿಸಿ ಭಯ, ವಿನೀತಭಾವದಿಂದ ನಮಸ್ಕರಿಸುವಂತೆ ಕಲಾವಿದ ಚಿತ್ರಿಸಿದ್ದಾನೆ. ಇಬ್ಬರು ಗಂಡಸರು ಬಿಳಿಬಣ್ಣದ ಉಡುಗೆಗಳನ್ನು ಧರಿಸಿದ್ದು ಕಪ್ಪು ಕೂದಲನ್ನು ಹೊಂದಿದ್ದಾರೆ. ಹೆಂಗಸರು ಕಡುಗೆಂಪು, ಕಡುನೀಲಿ ಬಣ್ಣ, ಹಸಿರುಬಣ್ಣದ ಸೀರೆ ಮುಂತಾದ ವಸ್ತ್ರಗಳನ್ನು ಧರಿಸಿದ್ದಾರೆ. ಅವರಲ್ಲಿ ಮಕ್ಕಳು ಕೂಡ ಸೇರಿಕೊಂಡಿದ್ದಾರೆ. ರಾಜನ ಅರಮನೆಯ ಭಿತ್ತಿಯು, ಕೋಟೆಯ ಗೋಡೆಗಳು ಅತ್ಯಂತ ಸುಂದರವಾಗಿ ಮೂಡಿಬಂದಿವೆ. ಕಲಾವಿದ ತುಂಬ ತಾಳ್ಮೆಯಿಂದ ಇಲ್ಲಿ ಎಲ್ಲ ಸಂಗತಿಗಳನ್ನು ಸಮವಾಗಿ ನಿರೂಪಿಸಿ ಯಶಸ್ಸು ಪಡೆದಿದ್ದಾನೆ. ಕೋಟೆಯ ಹೆಬ್ಬಾಗಿಲಿನ ಚಿತ್ರವು ಕಡುಕಂದುವರ್ಣ ಮತ್ತು ತೆಳು ಕಂದುವರ್ಣಗಳ ಸಮನ್ವಯದಿಂದ ಚಿತ್ತಾಕರ್ಷಕವಾಗಿದೆ. ಬ್ರಾಹ್ಮಣ ಮತ್ತು ಕ್ಷತ್ರಿಯರಿಗೆ ಸೇರಿಕೊಂಡಂತೆ

ಅವರ ಮುಂಭಾಗದಲ್ಲಿ ವಿವಿಧ ಹೂವು, ಗಿಡಗಳಿಂದ ಕೂಡಿದ ಚಿಕ್ಕ ಉದ್ಯಾನವಿರುವುದನ್ನು ನೋಡಬಹುದು. ಅದನ್ನು ಸುತ್ತುವರೆದ ಸುತ್ತುಗೋಡೆಯು ದಟ್ಟ ಕಂದುವರ್ಣದಿಂದ ಗಮನಸೆಳೆಯುತ್ತದೆ.

ದೇವಸ್ಥಾನದ ಬಲಭಾಗದಲ್ಲಿ ಅನೇಕ ಮನೆಗಳು ಎತ್ತರದ ಪ್ರದೇಶದಲ್ಲಿ ನಿರ್ಮಿತಿಗೊಂಡಿವೆ. ಇದು ವ್ಯಾಪಾರಿಗಳು, ಒಕ್ಕಲುತನ ಮಾಡುವ ವೈಶ್ಯ ಜನಾಂಗಕ್ಕೆ ಸೇರಿದ ಬೀದಿಯಾಗಿದೆ. ಇಲ್ಲಿಯೂ ಒಂದು ಚಿಕ್ಕ ಅಗಸೆಬಾಗಿಲು ಕಂದುವರ್ಣದಿಂದ ರೂಪಿತವಾಗಿರುವುದನ್ನು ಕಾಣುತ್ತೇವೆ. ಅದರ ಸುತ್ತಲೂ ಜನರು ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಅವರಲ್ಲಿ ಒಬ್ಬಾತ ತನ್ನ ಹೆಗಲ ಮೇಲೆ ಕಂದುಬಣ್ಣದ ನೇಗಿಲನ್ನು ಹೊತ್ತು ತಲೆಗೆ ಕೆಂಪುಬಣ್ಣದ ರುಮಾಲು ಧರಿಸಿ, ಬಿಳಿಪಂಚೆ, ಅಂಗಿಯನ್ನು ಉಟ್ಟುಕೊಂಡು ನಡೆಯುತ್ತಿದ್ದಾನೆ. ಇನ್ನು ಕೆಲವರು ಸಂತೆಯ ರೀತಿಯಲ್ಲಿ ವಿವಿಧ ವಸ್ತುಗಳನ್ನು ನೆಲದ ಮೇಲೆ ಹರಡಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಹಸಿರುಬಣ್ಣದ ಸೀರೆ, ಕೆಂಪುಬಣ್ಣದ ರವಿಕೆಯನ್ನು ಧರಿಸಿದ ಹೆಂಗಸೊಬ್ಬಳು ತನ್ನ ತಲೆಯ ಮೇಲೆ ದುಂಡಾಕಾರದ ಪುಟ್ಟಿಯಲ್ಲಿ ಕೆಂಪುಬಣ್ಣದ ಹೂವುಗಳನ್ನು ಹೊತ್ತು ಮಾರುತ್ತಿರುವ ಸನ್ನಿವೇಶವು ಕಂಡುಬರುತ್ತದೆ. ವಿರಳವಾಗಿ ಎಲೆಗಳನ್ನು ಹೊಂದಿರುವ ತೆಳು ಹಸಿರುಬಣ್ಣದ ಎಲೆಗಳನ್ನು ಹೊಂದಿರುವ ಎರಡು ಮರಗಳನ್ನು ಅಲ್ಲಿ ಕಾಣುತ್ತೇವೆ.

ದೇವಸ್ಥಾನದ ಎಡಮುಂಭಾಗದಲ್ಲಿ ದಟ್ಟವಾದ ಹಸಿರುಬಣ್ಣದಿಂದ ಕೂಡಿದ ಮರವೊಂದಿದ್ದು ಕಡುಗಪ್ಪುಬಣ್ಣವನ್ನು ಹೊಂದಿದ ಬಲವಾದ ಕಾಂಡಗಳಿಂದ ಕೂಡಿದೆ. ಒಂದು ಮೋಟುಗೋಡೆ, ಅದರ ಕೆಳಗೆ ದಲಿತರ ಅಥವಾ ಶೂದ್ರರ ಕೇರಿಯಿದೆ. ಇಲ್ಲಿ ಆರೇಳು ಜನರು ಕೇವಲ ಪಂಚೆಯನ್ನು ಮಾತ್ರ ಧರಿಸಿ, ಬರಿಮೈಯನ್ನು ಹೊಂದಿದ್ದಾರೆ. ಅವರು ಸತ್ತ ಎಮ್ಮೆಯನ್ನು ಕೊಯ್ಯುವ ಕಾಯಕದಲ್ಲಿ ತೊಡಗಿದ್ದಾರೆ. ಪ್ರಾಣಿಯ ಕತ್ತಿನಿಂದ ಹೊರಬರುವ ರಕ್ತವು ಕೆಂಪುಬಣ್ಣವನ್ನು ಹೊಂದಿ ಆ ಕ್ರಿಯೆ ಈಗ ನಡೆಯುತ್ತಿದೆಯೇನೋ ಎಂಬ ಭಾವನೆ ಬರುವಂತೆ ಕಲಾವಿದ ಇಲ್ಲಿ ಸೃಷ್ಟಿಸಿದ್ದಾನೆ. ಪ್ರಾಣಿಯ ಪಕ್ಕದಲ್ಲಿ ಅರ್ಧವೃತ್ತಾಕಾರದ ಕಪ್ಪು ಬಣ್ಣದ ಹಿಡಿಕೆಯುಳ್ಳ ಕುಡುಗೋಲು ಎದ್ದು ಕಾಣಿಸುತ್ತದೆ. ಇಟ್ಟಿಗೆಗಳಿಂದ ಮಾಡಿದ ಮೋಟುಗೋಡೆಯ ವರ್ಣಸಂಯೋಜನೆ ಗಮನಾರ್ಹವಾಗಿದೆ. ಪ್ರಾಣಿಯ ಮಾಂಸವನ್ನು ಕತ್ತರಿಸುವಾಗ ಸಹಜವೆಂಬಂತೆ ನಾಯಿ ಬಂದಿರುವ ಚಿತ್ರಣವಿದೆ. ಇನ್ನಿಬ್ಬರು ಚಪ್ಪಲಿ ಹೊಲಿಯುವ ಕಾಯಕದಲ್ಲಿ ತೊಡಗಿರುವ ಸನ್ನಿವೇಶವನ್ನು ಕಲಾವಿದ ಅಚ್ಚುಕಟ್ಟಾಗಿ ಚಿತ್ರಿಸಿದ್ದು ತನ್ನ ಉದ್ದೇಶವನ್ನು ಸಮರ್ಥವಾಗಿ ಅಭಿವ್ಯಕ್ತಿಸಿದ್ದಾನೆ.

ಮೇಲಿನ ವಿಶ್ಲೇಷಣೆಯ ಅನುಸಾರ ಪ್ರಸ್ತುತ ಚಿತ್ರದಲ್ಲಿ ರಾಜ, ಅರಮನೆ, ಅರಮನೆಯ ಆವರಣದ ಉದ್ಯಾನವನ, ಅರಮನೆಗೆ ಹೊಂದಿಕೊಂಡಂತೆ ಕೋಟೆಯ ಗೋಡೆ, ದೇಗುಲ, ದಲಿತರ ಕೇರಿಯನ್ನು ಒಳಗೊಂಡ ಗ್ರಾಮೀಣ ಪರಿಸರ, ಪ್ರಾಣಿವಧೆ, ದೈನಂದಿನ ಬದುಕು ಇವೆಲ್ಲವನ್ನೂ ಒಳಗೊಂಡ ಅತ್ಯಂತ ಸಂಕೀರ್ಣವಾದ ಸಂಯೋಜನೆಯಿದು. ಒಂದೇ ಅವಕಾಶವನ್ನು ವಿಭಾಗಿಸಿಕೊಂಡು ವಿವಿಧ ಸನ್ನಿವೇಶಗಳನ್ನು ಚಿತ್ರೀಕರಿಸಿರುವ ಪರಿ ಅನನ್ಯ. ವರ್ಣಸಂಯೋಜನೆಯಲ್ಲೂ ಸಹ ತಾಜಾತನವನ್ನು ಉಳಿಸಿಕೊಂಡಿರುವ ಕಲಾವಿದರು, ಬಸವಪೂರ್ವಯುಗದ ಸನ್ನಿವೇಶವನ್ನು ಸಮರ್ಥವಾಗಿ ಬಿಂಬಿಸಲು ಯತ್ನಿಸಿದ್ದಾರೆ. ಪ್ರಸ್ತುತ ಚಿತ್ರದಲ್ಲಿ ಭಾರತೀಯ ಚಿಕಣಿ ಚಿತ್ರಗಳಲ್ಲಿ ಕಂಡು ಬರುವ ಪಕ್ಷಿನೋಟದ ಯಥಾದರ್ಶನ ವಿನ್ಯಾಸವು

ಪ್ರಮುಖವಾಗಿ ಗೋಚರವಾಗುತ್ತಿದೆ. ಒಂದು ರೀತಿಯಲ್ಲಿ ಬಿಜ್ಜಳ ದೊರೆಯ ಕಲ್ಯಾಣದ ಪರಿಸರವನ್ನು ಈ ಚಿತ್ರ ಪ್ರತಿನಿಧಿಸುತ್ತದೆ. ಪ್ರಸ್ತುತ ಈ ಚಿತ್ರವು ಬಸವಕಲಾನಿಕೇತನ ಸಂಘ, ಕೂಡಲಸಂಗಮದಲ್ಲಿ ಸಂಗ್ರಹಗೊಂಡಿದೆ.

೨.೧.೨. ದಲಿತರ ಕೇರಿಯ ದೃಶ್ಯ

"ಕಲೆ ವ್ಯಕ್ತಿಯ ಆಂತರಿಕ ವಿಶ್ವವನ್ನು ಉದ್ಘಾಟಿಸುವ ಮತ್ತು ವಿಸ್ತರಿಸುವ ಕೆಲಸ ಮಾಡುತ್ತದೆ"[೧೯] ಎಂಬ ಮಾತು ತುಂಬಾ ಅರ್ಥಪೂರ್ಣವಾದುದು. ೨೦೧೪ರಲ್ಲಿ ಬಾಗಲಕೋಟೆ ಜಿಲ್ಲೆಯ ಕಲಾವಿದರಾದ ಬಸವರಾಜ ಅನಗವಾಡಿಯವರು ಈ ಕಲಾಕೃತಿಯನ್ನು ೧೨'x೧೮' ಅಳತೆಯಲ್ಲಿ ರಚಿಸಿದ್ದಾರೆ. ಈ ಚಿತ್ರವು ಬಸವಣ್ಣನ ಕ್ರಾಂತಿಯ ಮುಂಚಿನ ಹಿಂದೂ ಧರ್ಮದ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತಿದೆ. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಎಂಬ ನಾಲ್ಕು ವರ್ಣಗಳಲ್ಲಿ ಕೊನೆಯದಾದ ಶೂದ್ರರ ಕೇರಿಯನ್ನು ಇಲ್ಲಿ ಕಲಾವಿದ ನೋಡುಗರ ಮನಸ್ಸಿನಲ್ಲಿ ಉಳಿಯುವಂತೆ ಚಿತ್ರಿಸಿರುವುದು ಕಂಡುಬರುತ್ತದೆ. ಚಿತ್ರದ ಮಧ್ಯಭಾಗದಲ್ಲಿ ಬೋಳು ಬೋಳಾದ, ಕಾಂಡದ ಕೊನೆಯ ಭಾಗದಲ್ಲಿ ಮಾತ್ರ ಹಸಿರು, ಹಳದಿ ಮತ್ತು ಕೆಂಪುಮಿಶ್ರಿತ ವರ್ಣದ ಎಲೆಗಳನ್ನು ಹೊಂದಿರುವ ಮರವೊಂದಿದೆ. ಕಪ್ಪು ಮತ್ತು ಕಂದುಬಣ್ಣಗಳಿಂದ ರಚಿಸಿದ ಮರದ ಬುಡ ಮತ್ತು ಕಾಂಡಗಳನ್ನು ಕಾಣುತ್ತೇವೆ. ಕಾಂಡಗಳ ಮೇಲೆ ಚರ್ಮವನ್ನು ಒಣಗಿ ಹಾಕಿರುವ ದೃಶ್ಯ ಕಂಡುಬರುತ್ತದೆ.

ಮರದ ಕೆಳಗೆ ಕುಳಿತ ಮೂವರು ವ್ಯಕ್ತಿಗಳಲ್ಲಿ ಇಬ್ಬರು ದೃಢಕಾಯದವರಾಗಿದ್ದು ಒಬ್ಬಾತ ಸಣಕಲು ದೇಹವನ್ನು ಹೊಂದಿದ್ದಾನೆ. ಇಲ್ಲಿ ಬಂದಿರುವ ದಲಿತ ಪುರುಷರು ಕೇವಲ ಸೊಂಟಕ್ಕೆ ಪಂಚೆಯನ್ನು ಮಾತ್ರ ಧರಿಸಿದ್ದು ಬರಿ ಮೈಯನ್ನು ಹೊಂದಿರುತ್ತಾರೆ. ಇಬ್ಬರು ವ್ಯಕ್ತಿಗಳು ಒಂದು ಕುರಿಯನ್ನು ಕತ್ತರಿಸುತ್ತಿದ್ದಾರೆ. ಅವರ ಮುಂದೆ ಒಬ್ಬಾತ ಹಲವು ಸಲಕರಣೆಗಳಿಂದ ಚಪ್ಪಲಿಯನ್ನು ಹೊಲಿಯುವ ಕಾರ್ಯದಲ್ಲಿ ನಿರತನಾಗಿದ್ದಾನೆ. ಆತನ ಪಕ್ಕದಲ್ಲಿಯೇ ಒಂದು ನೀರಿನ ಕುಳಿಯ ಪಕ್ಕದಲ್ಲಿ ನಾಯಿಯೊಂದು ಮಲಗಿದೆ. ಚಮ್ಮಾರನ ಮುಂದೆ ಮೂರು ಕೋಳಿ ಮತ್ತು ಮರಿಗಳು ಆಹಾರವನ್ನು ಮೇಯುತ್ತಿವೆ. ಕತ್ತು ಮತ್ತು ಪುಚ್ಛದಲ್ಲಿ ಕೆಂಪು ವರ್ಣ, ದೇಹದ ಮಧ್ಯಭಾಗದಲ್ಲಿ ಬಿಳಿ ಮತ್ತು ಹಸಿರುಬಣ್ಣಗಳ ಬಳಕೆ ಆಕರ್ಷಕವಾಗಿ ಮೂಡಿಬಂದಿದೆ. ಮರದ ಎಡಬದಿಯಲ್ಲಿ ಇಬ್ಬರು ವ್ಯಕ್ತಿಗಳು ಆಡು ಇಲ್ಲವೆ ಕುರಿಯೊಂದರ ನಾಲ್ಕು ಕಾಲುಗಳನ್ನು ಕಟ್ಟಿ, ಕಟ್ಟಿಗೆಗೆ ಇಳಿಯಬಿಟ್ಟು ಅದನ್ನು ಹೊತ್ತುಕೊಂಡು ಹೋಗುವ ದೃಶ್ಯವಿದೆ. ಮರದ ಎದುರಿಗೆ ದಟ್ಟ ಹಸಿರುಬಣ್ಣದ ಸೀರೆಯನ್ನು ಸೊಂಟಕ್ಕೆ ಅರ್ಧ ಮತ್ತು ಉಳಿದ ಅರ್ಧ ಮೇಲ್ಭಾಗದ ದೇಹಕ್ಕೆ ಸುತ್ತಿಕೊಂಡು ಕೈಯಲ್ಲಿ ಮೀನುಗಳನ್ನು ಹಿಡಿದಿರುವ ಸನ್ನಿವೇಶವಿದೆ. ಅವಳ ಬದಿಯಲ್ಲಿ ನಾಯಿಯೊಂದು ಕುಳಿತಿದೆ. ಅವಳ ಎಡಬದಿಯಲ್ಲಿ ಅಂಗಿಯನ್ನು ತೊಟ್ಟ ಏಕೈಕ ಮಗು ಅಳುತ್ತಿದೆ, ಅದನ್ನು ಸಮಾಧಾನ ಪಡಿಸಲು ಇನ್ನಿಬ್ಬರು ಮಕ್ಕಳು ಮತ್ತು ತಿಳಿಗೆಂಪು ಬಣ್ಣದ ಸೀರೆಯನ್ನು ಧರಿಸಿದ ಹೆಂಗಸೊಬ್ಬಳು ತಲೆಯ ಮೇಲೆ ಕೈಹೊತ್ತು ರೋದಿಸುತ್ತಿರುವ ದೃಶ್ಯವು ಕಂಡುಬರುತ್ತದೆ. ಅವಳ ಹಿಂದಿರುವ ಎರಡು ಗುಡಿಸಲುಗಳು ಬಿದಿರು, ಹುಲ್ಲಿನಿಂದ ನಿರ್ಮಿತಗೊಂಡಿದ್ದು ಪರಿಣಾಮಕಾರಿಯಾದ

೧೯. ಚಂದ್ರಕಾಂತ ಕುಸನೂರ : ಕಲೆ ಅನುಭವ ಮತ್ತು ಅನುಭಾವ, ಪು-೮೨

ವರ್ಣಸಂಯೋಜನೆಯೊಂದಿಗೆ ಮೂಡಿಬಂದಿವೆ. ಜಲವರ್ಣ ಮಾಧ್ಯಮದಲ್ಲಿ ಚಿತ್ರಣಗೊಂಡ ಈ ಕೃತಿಯಲ್ಲಿ ಕೆಂಪು, ಹಳದಿ, ಹಸಿರು, ನೀಲಿ ವರ್ಣಗಳನ್ನು ಬಳಸಿಕೊಂಡು ಗ್ರಾಮೀಣ ಜನರ ಬಡತನ ಮತ್ತು ಹಸಿವಿನ ಸ್ಥಿತಿಯನ್ನು ಅತ್ಯಂತ ಕಲಾತ್ಮಕವಾಗಿ ಆಕೃತಿಗಳನ್ನು ಸಂಯೋಜಿಸಲಾಗಿದೆ. ಇಲ್ಲಿನ ಆಕೃತಿಗಳು ಶೀರ್ಷಿಕೆಯಡಿಯಲ್ಲಿ ಉದಾಹರಣೆಗಾಗಿ ಕಲಾವಿದರು ತಮ್ಮದೇ ಆದ ಶೈಲಿಯಲ್ಲಿ ಚಿತ್ರಿಸಲಾಗಿದೆ. "ಯಾವುದೇ ರೀತಿಯ ಫಿನಿಶಿಂಗ್‌ಗೆ ಒಳಗಾಗಿರದಿದ್ದುದನ್ನು ಇಲ್ಲಿ ಗುರುತಿಸಬಹುದು. ಆದರೂ ಈ ಫಿನಿಶಿಂಗ್‌ನ ಕೊರತೆ ಕೃತಿಯ ಒಟ್ಟಂದದ ಸ್ವರೂಪದಲ್ಲಿ ಎಲ್ಲೂ ಒಂದು ಊನವಾಗಿ ಎದ್ದು ತೋರದಂತೆ ಮತ್ತು ಕೃತಿಯ ಪ್ರಭಾವವು ಎಲ್ಲೂ ಒಂದಿನಿತೂ ಕಡಿಮೆಯಾಗದಂತೆ"[೨೦] ಈ ಚಿತ್ರ ರೂಪುಗೊಂಡಿದೆ.

ಮೇಲಿನ ಚಿತ್ರದ ವಿಶ್ಲೇಷಣೆಯ ಅನುಸಾರ ದಲಿತರ ಕೇರಿಯ ಬದುಕಿನ ಸಮಗ್ರತೆಯನ್ನು ಬಿಂಬಿಸುವ ಆಶಯ ಇಲ್ಲಿದ್ದರೂ, ಬಸವಪೂರ್ವಯುಗದಲ್ಲಿನ ದಲಿತರ ಒಟ್ಟು ಬದುಕನ್ನು ಮಾರ್ಮಿಕವಾಗಿ ಪ್ರಕಟಪಡಿಸುವ ಇರಾದೆಯೂ ಸಹ ಇಲ್ಲಿದೆ. ಆ ಕೇರಿಯ ವಾತಾವರಣ, ಅಲ್ಲಿನ ನಿವಾಸಿಗಳ ಅಸ್ತವ್ಯಸ್ತ ಬದುಕನ್ನು, ಜೊತೆಗೆ ಬದುಕಿಗೆ ಮೂಲಾಧಾರವಾದ ಚರ್ಮದ ಕುಶಲಕರ್ಮಿಗಳ ದೈನಂದಿನ ಕಾಯಕವನ್ನು ದೃಶ್ಯಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನ ಇಲ್ಲಿದೆ. ಸಂಯೋಜನೆಯ ನೆಲೆಯಲ್ಲಿ ಚಿತ್ರದ ಉದ್ದಿಶ್ಯಕ್ಕೆ ಅನುಗುಣವಾಗಿ ಬೌದ್ಧಿಕ ಮತ್ತು ಭೌತಿಕ ಆಕೃತಿ, ವಿನ್ಯಾಸಗಳಿಗೆ ಹೆಚ್ಚು ಆಸ್ಥೆ ವಹಿಸಲಾಗಿದೆ. ಗ್ರಾಮ್ಯ ಪರಿಸರವನ್ನು ದೇಸೀಯ ನೆಲೆಯಲ್ಲಿ ಕಟ್ಟಿಕೊಡುವ ಈ ಚಿತ್ರದ ಮಾನವಾಕೃತಿಗಳಲ್ಲಿ ದಲಿತರ ಬೌದ್ಧಿಕ ಭಾವನೆ, ಚಹರೆಗಳನ್ನು ಚಿತ್ರಿಸಿದ್ದಾರೆ. ಅತ್ಯಂತ ಪ್ರಮಾಣಬದ್ಧವಾಗಿ ಮೂಡಿಬಂದ ಮರದ ವಿನ್ಯಾಸ, ಗುಡಿಸಲುಗಳ ವಿನ್ಯಾಸಗಳು ಬಸವಪೂರ್ವ ಯುಗದ ಸಾಮಾಜಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸಲು ಯಶಸ್ವಿಯಾಗಿವೆ. ವರ್ಣಸಂಯೋಜನೆ ಮತ್ತು ಅವಕಾಶವನ್ನು ವಿಂಗಡಿಸಲು ಆಕೃತಿಗಳನ್ನು ಸಮರ್ಥವಾಗಿ ದುಡಿಸಿಕೊಳ್ಳಲಾಗಿದೆ. ಒಟ್ಟು ಚಿತ್ರವು ನೋಡುಗನನ್ನು ಭಾವಪೂರ್ಣವಾಗಿ ಸ್ಪಂದಿಸುವಂತೆ ಮಾಡುತ್ತದೆ. ಪ್ರಸ್ತುತ ಈ ಕೃತಿಯು ಬಸವಕಲಾನಿಕೇತನ ಸಂಘ, ಕೂಡಲಸಂಗಮದಲ್ಲಿ ಸಂಗ್ರಹಗೊಂಡಿದೆ.

೨.೧.೩. ದಲಿತರಿಗೆ ದೇವಾಲಯ ಪ್ರವೇಶ ನಿಷೇಧದ ಸನ್ನಿವೇಶ

ವಿಜಯಪುರ ಜಿಲ್ಲೆ ಕಲಾವಿದರಾದ ಶಂಬಾಜಿ ರಜಪೂತ ಇವರು ೨೦೧೪ರಲ್ಲಿ ಈ ಕೃತಿಯನ್ನು ೧೨'x೧೮' ಅಳತೆಯಲ್ಲಿ ರಚಿಸಿದ್ದಾರೆ. ಈ ಚಿತ್ರದಲ್ಲಿ ವಿಶಾಲವಾದ ದೇವಾಲಯದ ಮಂಟಪವೊಂದನ್ನು ರೂಪಿಸಲಾಗಿದ್ದು ಅದರಲ್ಲಿ ಬ್ರಾಹ್ಮಣರು ಶೂದ್ರರಿಗೆ ದೇವಾಲಯ ಪ್ರವೇಶವನ್ನು ನಿರಾಕರಿಸುವ ಸನ್ನಿವೇಶವನ್ನು ಕಲಾವಿದ ಚಿತ್ರಿಸಿದ್ದಾನೆ. ನೀಲಿ ಮತ್ತು ಬಿಳಿಬಣ್ಣಗಳ ಸಂಯೋಜನೆಯಿಂದ ನಿರ್ಮಿತವಾದ ನಂದಿಯು ದೇವಾಲಯದ ಮಂಟಪದ ಮಧ್ಯಭಾಗದಲ್ಲಿರುವುದರಿಂದ ಈ ದೇವಾಲಯವು ನಿಶ್ಚಿತವಾಗಿಯೂ ಶಿವದೇವಾಲಯವಾಗಿದೆ. ಆಭರಣಗಳಿಂದ ಕೂಡಿದ ನಂದಿಯ ಮುಖವು ಗಾಬರಿಗೊಂಡಂತಿದೆ. ಭುಜದ ಕೆಳಗೆ ವಿವಿಧ ಅಲಂಕಾರಗಳಿಂದ ಕೂಡಿದ ಕೆಂಪುವಸ್ತ್ರವನ್ನು ಹಾಕಲಾಗಿದೆ. ಅದರ ಹಿಂದೆ ತೆಳು ಗುಲಾಬಿಬಣ್ಣದ ಸೀರೆಯನ್ನುಟ್ಟ ಮಹಿಳೆಯೊಬ್ಬಳು ತನ್ನ ಮಂಡಿಯೂರಿ ಎರಡೂ ಕೈಗಳನ್ನು ಮುಗಿದು

೨೦. ಚಿದಾನಂದ ಸಾಲಿ : ಚೌಕಟ್ಟನಾಚೆ...(ಶಂಕರಗೌಡ ಬೆಟ್ಟದೂರು ಅವರ ಕಲಾಕೃತಿಗಳ ಅಕ್ಷರ ನೋಟ), ಪು-೧

ಶಿವನನ್ನು ಪ್ರಾರ್ಥಿಸುತ್ತಿದ್ದಾಳೆ. ಅವಳ ಎಡಪಕ್ಕದಲ್ಲಿ ಹೂ ಬುಟ್ಟಿಯಿದೆ. ಮಹಿಳೆಯ ಬಲಭಾಗದಲ್ಲಿ ಪಂಚೆ ಧರಿಸಿ, ಬರಿ ಮೈಯಲ್ಲಿ ಗಂಟೆಯನ್ನು ಬಾರಿಸುತ್ತಿರುವ ಬ್ರಾಹ್ಮಣನೊಬ್ಬನು ಕಂಡುಬರುತ್ತಾನೆ. ಬಲಗೈಯನ್ನು ಎತ್ತಿ ಗಂಟೆಯ ನಾಲಿಗೆಯನ್ನು ಮುಟ್ಟುವ ಹಂತದಲ್ಲಿದ್ದಾನೆ. ಮೇಲ್ಗಡೆ ಹಳದಿಬಣ್ಣದಿಂದ ಹೊಳೆಯುವ ಗಂಟೆಯು ನೇತು ಬಿದ್ದಿದೆ. ಇವರಿಬ್ಬರ ಹಿಂದೆ ಬಿಳಿಮಿಶ್ರಿತ ನೀಲಿಬಣ್ಣದ ಪಂಚೆ, ಮೇಲುಹೊದಿಕೆ, ಹುರಿಮೀಸೆ, ಹಿಂದಕ್ಕೆ ಬಾಚಿದ ಕೂದಲು, ಬೋಳಾದ ಹಣೆಯಿಂದ ಕೂಡಿರುವ ಪುರೋಹಿತನೊಬ್ಬ ತನ್ನೆರಡು ಕೈಗಳನ್ನು ಮುಗಿದು ತಲೆಯನ್ನು ತುಸುಬಾಗಿಸಿ ನಿಂತಿದ್ದಾನೆ. ಆತನ ಹೆಂಡತಿಯೆಂದು ತೋರುವ, ಹಸಿರು ಬಣ್ಣದ ಸೀರೆಯನ್ನುಟ್ಟು ಹಣೆಗೆ ಕುಂಕುಮ, ತಲೆತುಂಬ ಸೆರಗನ್ನು ಹೊದ್ದು ಎರಡೂ ಕೈಗಳನ್ನು ಜೋಡಿಸಿ ತಲೆಬಾಗಿಸಿ ನಿಂತಿರುವ ಸ್ತ್ರೀಯೊಬ್ಬಳು ನಿಂತಿದ್ದಾಳೆ.

ಮಂಟಪದ ಎಡಮೂಲೆಯಲ್ಲಿ ಎಡಗೈಯಲ್ಲಿ ಉದ್ದನೆಯ ದಂಡ, ಹಿಂದಕ್ಕೆ ಬಾಚಿದ ಕೂದಲು, ಹಳದಿಮಿಶ್ರಿತ ಕೆಂಪುಬಣ್ಣದ ಮೇಲುಹೊದಿಕೆಯನ್ನು ಸೊಂಟಕ್ಕೆ ಸುತ್ತಿಕೊಂಡು ಪಂಚೆಯನ್ನು ಮಾತ್ರ ಧರಿಸಿ ಬರಿಮೈಯಲ್ಲಿ ಹಿರಿಯ ವ್ಯಕ್ತಿ ನಿಂತಿದ್ದಾನೆ. ವಯಸ್ಸಾದಂತೆ ತೋರುವ ಆತ ತನ್ನ ಬಲಗೈಯನ್ನು ಅರ್ಧಭಾಗದವರೆಗೆ ಮೇಲಕ್ಕೆತ್ತಿ ಹಸ್ತದ ಬೆರಳುಗಳ ನಿರಾಕರಣೆ ಸಂಜ್ಞೆಯಿಂದ ದೇವಾಲಯದ ಪ್ರವೇಶವನ್ನು ದಲಿತರಿಗೆ ನಿರಾಕರಿಸುವ ಭಂಗಿಯಲ್ಲಿ ನಿಂತಿದ್ದಾನೆ. ಬಿಳಿಮಿಶ್ರಿತ ಹಸಿರುಬಣ್ಣದ ಶಿಲೆಗಳನ್ನು ಮಂಟಪದ ನೆಲಕ್ಕೆ ಹಾಕಲಾಗಿದ್ದು, ಅದೇ ಬಣ್ಣದ ವಿವಿಧ ಅಲಂಕಾರಗಳಿಂದ ಕೂಡಿದ ಕೆತ್ತನೆಯ ಕಂಬಗಳು ಇಲ್ಲಿ ಕಂಡುಬರುತ್ತವೆ. ಮಂಟಪದ ಕೆಳಗೆ ಪಂಚೆ, ಬರಿಮೈ, ಹಿಂದಕ್ಕೆ ಬಾಚಿ ಕಟ್ಟಿದ ಕೂದಲು, ಹುರಿಮೀಸೆ, ಬಗಲಲ್ಲಿ ವಸ್ತ್ರದ ಜೋಳಿಗೆಯನ್ನು ಹಾಕಿಕೊಂಡಿರುವ ವಯಸ್ಸಾದಂತೆ ತೋರುವ ಶೂದ್ರನೊಬ್ಬ ದೇವಾಲಯಕ್ಕೆ ಪ್ರವೇಶವನ್ನು ಕೇಳುತ್ತಿರುವಂತೆ ನಿಂತಿದ್ದಾನೆ. ಆತನ ಕೆಳಗೆ ಪುಟ್ಟ ಮಗುವೊಂದು ತಂದೆಯ ಕಾಲಿಗೆ ಅಂಟಿಕೊಂಡಂತೆ ನಿಂತಿರುವುದು ಕಂಡುಬರುತ್ತದೆ. ಆತನ ಪಕ್ಕದಲ್ಲಿ ಬಿಳಿಮಿಶ್ರಿತ ಹಸಿರುಬಣ್ಣದ ಸೀರೆಯನ್ನು ಮೊಣಕಾಲಿನವರೆಗೆ ಮಾತ್ರ ಧರಿಸಿದ ಶೂದ್ರನ ಹೆಂಡತಿ ತನ್ನೆರಡು ಕೈಗಳನ್ನು ಮುಗಿದು ದೇವಾಲಯಕ್ಕೆ ಪ್ರವೇಶ ನೀಡಲು ಪ್ರಾರ್ಥಿಸುತ್ತಿರುವಂತೆ ತೋರುತ್ತಾಳೆ. ಚಿತ್ರದ ಭಿತ್ತಿಯಲ್ಲಿ ಮಂಟಪದ ಎಡಬದಿಯಲ್ಲಿ ಗೋಪುರವನ್ನುಳ್ಳ ಒಂದು ಪುಟ್ಟ ದೇಗುಲ, ಅದರ ಪಕ್ಕದಲ್ಲಿ ಎರಡು ಡೊಂಕಾದ ತೆಂಗಿನ ಮರಗಳು, ನಾಲ್ಕೈದು ಮನೆಗಳನ್ನು ಕಾಣುತ್ತೇವೆ. ಮಂಟಪದ ಎದುರಿಗೆ ಚಿಕ್ಕ ಗುಡ್ಡಗಳು, ಒಣಗಿ ಹೋದಂತಿರುವ ಗಿಡಮರಗಳು, ಬಣ್ಣಬಣ್ಣದ ಆಕಾಶದ ಚಿತ್ರಣಕ್ಕೆ ತಕ್ಕುದಾದ ವರ್ಣಸಂಯೋಜನೆಗಳನ್ನು ಕಲಾವಿದ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾನೆ. ತನ್ನ ಉದ್ದೇಶವನ್ನು ಪ್ರಸ್ತುತ ಕಲಾಕೃತಿ ಈಡೇರಿಸಿಕೊಂಡಿದೆ.

ಮೇಲ್ಕಂಡ ವಿಶ್ಲೇಷಣೆಯ ಅನುಸಾರ, ಚಿತ್ರದ ಉದ್ದೇಶಕ್ಕೆ ಅನುಗುಣವಾದ ವಾತಾವರಣವನ್ನು, ಅಂದರೆ ಗ್ರಾಮ್ಯ ಪರಿಸರವನ್ನು, ಹಿನ್ನೆಲೆಯಲ್ಲಿ ಗುಡ್ಡ-ಬೆಟ್ಟಗಳನ್ನು ದೂರದ ಛಾಯೆಗಳಿಗೆ ಅನುಸಾರವಾಗಿ ಚಿತ್ರಿಸಲಾಗಿದೆ. ಚಿತ್ರದ ಪ್ರಮುಖ ಆಶಯಕ್ಕೆ ತಕ್ಕಂತೆ ದೇವಾಲಯವನ್ನು ಸಾಮೀಪ್ಯದ ನೆಲೆಯಲ್ಲಿ ತೋರಿಸಿದರೆ, ಎರಡನೇ ಆಶಯವಾಗಿರುವ ಹಿನ್ನೆಲೆಯನ್ನು ಯಥಾದರ್ಶನದ ಸಿದ್ಧಾಂತದ ಪ್ರಕಾರವಾಗಿ ದೂರದ ಛಾಯೆಗಳಾಗಿ ಚಿತ್ರಿಸಲಾಗಿದೆ. ಆಧ್ಯಾತ್ಮಿಕ ಪರಿಸರದ ಛಾಯೆ ಚಿತ್ರದ ಮೂಲ ಆಶಯದೊಳಗೆ ಶೂದ್ರರನ್ನು

ಧಾರ್ಮಿಕ ಕೇಂದ್ರಗಳಿಂದ ಹೊರಗಿರಿಸುವ ಸನ್ನಿವೇಶ ಅತ್ಯಂತ ಪರಿಣಾಮಕಾರಿಯಾಗಿ ಮೂಡಿಬಂದಿದೆ. ದೇಗುಲದ ನೆಲಹಾಸಿನಲ್ಲಿ ಕಲ್ಲಿನ ಮೈವಳಿಕೆಯ, ಭೂಮಿ ಬೆಟ್ಟಗುಡ್ಡಗಲ್ಲಿ ದೂರದ ಮೈವಳಿಕೆಯ ಅನುಭವ ಇಲ್ಲಿ ದಕ್ಕುತ್ತದೆ. ಬ್ರಾಹ್ಮಣ ಮತ್ತು ಭಕ್ತರಲ್ಲಿ ವಿನೀತಭಾವವಿದ್ದರೆ ಸೇವಕನಲ್ಲಿ ದರ್ಪದ ಭಾವವೂ ಅತ್ಯಂತ ಸ್ಪಷ್ಟ. ಹಾಗೆಯೇ ಶೂದ್ರರ ದೈನ್ಯ ಭಾವವೂ ಬಸವಪೂರ್ವ ಯುಗದ ಸಾಮಾಜಿಕ ತಾರತಮ್ಯದ ಪ್ರತೀಕ.

"ಚಿತ್ರ ಹೊರಡುವುದು ಚಿತ್ರಕಾರನ ತಲೆಯಿಂದ ಎಂಬುವುದರಲ್ಲಿ ಎರಡು ಮಾತಿಲ್ಲ."[೨೧] ಒಟ್ಟಾರೆ ಈ ಚಿತ್ರದಲ್ಲಿ ಯಾವುದೇ ಪ್ರಖರ ವರ್ಣಗಳು ಕಂಡು ಬರುವುದಿಲ್ಲ. ತೆಳುವರ್ಣದ ಹಿತಮಿತವಾದ ಜಲವರ್ಣ ಮಾಧ್ಯಮದಿಂದ ಚಿತ್ರಿಸಲಾಗಿದೆ. ಚಿತ್ರದಲ್ಲಿನ ಆಕೃತಿಗಳು ಕಲಾವಿದನ ಸ್ವ ಕಲ್ಪನೆಯಿದಿಂದ ರೂಪುಗೊಂಡಿವೆ. ಅದೇ ರೀತಿ ಆಕೃತಿಗಳ ಸಂಯೋಜನೆಯಾಗಲಿ, ಮಂಟಪ, ಗ್ರಾಮೀಣ ಪರಿಸರ, ಹಿಂದೆ ಬೆಟ್ಟ ಆಕಾಶ ಚಿತ್ರಗಳ ದೂರ-ಸಮೀಪ ದೃಷ್ಟಿಯು ಅತ್ಯಂತ ನೈಜ ರೀತಿಯಲ್ಲಿ ಮೂಡಿಬಂದಿವೆ. ಶೀರ್ಷಿಕೆಯ ಹಿನ್ನೆಲೆಯಲ್ಲಿ ರಚಿಸಿರುವ ಈ ಕೃತಿಯಲ್ಲಿ ಆಕೃತಿಗಳಲ್ಲಿನ ಭಂಗಿಗಳು, ಅವರ ಮುಖದಲ್ಲಿನ ಭಾವ ಅಚ್ಚುಕಟ್ಟು ಮತ್ತು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಆದರೂ ಸಂಪೂರ್ಣವಾಗಿ ಸ್ಥಳಾವಕಾಶವನ್ನು ಬಳಸಿಕೊಂಡು ಚಿತ್ರಗಳನ್ನು ತಮ್ಮದೇ ಆದ ಶೈಲಿಯಲ್ಲಿ ರಚಿಸಿರುವುದನ್ನು ಕಾಣಬಹುದಾಗಿದೆ. ಚಿತ್ರಕ್ಕೆ ಎಲ್ಲಿಯೂ ಭಾದೆಯನ್ನು ತರದೆ ಕೃತಿ ಕಾಯ್ದುಕೊಳ್ಳಲಾಗಿದೆ. ಪ್ರಸ್ತುತ ಈ ಕೃತಿಯು ಬಸವಕಲಾನಿಕೇತನ ಸಂಘ, ಕೂಡಲಸಂಗಮದಲ್ಲಿ ಸಂಗ್ರಹಗೊಂಡಿದೆ.

೨.೧.೪. ದಲಿತರಿಗೆ ಕೆರೆ-ಬಾವಿಯ ನಿಷೇಧ

ವಿಜಯಪುರ ಜಿಲ್ಲೆಯ ಗುಡಿಹಾಳ ಗ್ರಾಮದ ಕಲಾವಿದ ಮಹಾಂತಯ್ಯ ಹಿರೇಮಠ ಅವರು ೨೦೧೪ರಲ್ಲಿ ಈ ಕಲಾಕೃತಿಯನ್ನು ೧೨'x೧೮' ಅಳತೆಯಲ್ಲಿ ರಚಿಸಿದ್ದಾರೆ. ಹಿಂದಿನ ಕಾಲದಲ್ಲಿ ಅಂದರೆ ಬಸವಪೂರ್ವದ ಕಾಲಘಟ್ಟದಲ್ಲಿ ಚಾತುರ್ವರ್ಣಗಳ ನಿಯಮ ಮತ್ತು ಆಚರಣೆ ದಟ್ಟವಾಗಿತ್ತು. ಉನ್ನತವರ್ಗದ ಜನರು ಕೆಳಜಾತಿಯವರಿಗೆ ಎಲ್ಲ ರೀತಿಯ ನಿರ್ಬಂಧಗಳನ್ನು ಹೇರಿರುವುದು ಕಂಡುಬರುತ್ತದೆ. ದಲಿತರಿಗೆ ಕೆರೆ-ಬಾವಿಗಳ ನೀರಿನ ಬಳಕೆಯನ್ನು ನಿಷೇಧಿಸಲಾಗಿತ್ತು. ಅಂಥ ಒಂದು ಘಟನೆಯನ್ನು ಕಲಾವಿದ ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಜಲವರ್ಣ ಪರಂಪರೆಗೆ ಸೇರಿದ ಚಿತ್ರವಿದಾಗಿದ್ದು, ಚಿತ್ರದ ಎಡಭಾಗದಲ್ಲಿ ಕಲ್ಲುಗಳಿಂದ ನಿರ್ಮಿತವಾದ ಸುಂದರವಾದ ವೃತ್ತಾಕಾರದ ಬಾವಿಯೊಂದಿದೆ. ಅದಕ್ಕೆ ಹೊಂದಿಕೊಂಡಂತೆ ಹಸಿರುಬಣ್ಣದ ಎಲೆಗಳಿಂದ ಕಂಗೊಳಿಸುವ ದಪ್ಪ ಕಾಂಡದ ಮರವಿದೆ. ಹಸಿರುಬಣ್ಣದ ಸೀರೆಯುಟ್ಟ ಸ್ತ್ರೀಯೊಬ್ಬಳು ಬಿಂದಿಗೆಯಿಂದ ಬಾವಿಯ ನೀರನ್ನು ಸೇದಿಕೊಡುತ್ತಿದ್ದಾಳೆ. ಅವಳ ಎದುರಿಗೆ ನೀಲಿಬಣ್ಣದ ಅಂಗಿ, ಬಿಳಿಬಣ್ಣದ ಪಂಚೆಯೊಂದನ್ನು ಧರಿಸಿದ ಇಬ್ಬರು ಯುವಕರು ತಮ್ಮ ಕೈಗಳಿಂದ ಕೊಡದಲ್ಲಿರುವ ನೀರನ್ನು ಕೆಳಗೆ ಕುಳಿತ ದಲಿತವರ್ಗದ ಮಹಿಳೆಯರ ಬಿಂದಿಗೆಗಳಿಗೆ ನೀರನ್ನು ಹುಯ್ಯುತ್ತಿರುವ ದೃಶ್ಯ ಕಂಡುಬರುತ್ತದೆ.

---

೨೧. ಡಾ. ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ, ಪು-೨೪

ಹಸಿರುಬಣ್ಣದ ಸೀರೆಯನ್ನುಟ್ಟು ಕುಳಿತ ಸ್ತ್ರೀ, ಅವಳ ಎದುರಿಗೆ ಮಣ್ಣಿನ ಬಿಂದಿಗೆ, ಅದರ ಪಕ್ಕದಲ್ಲಿ ಕೆಂಪು ರವಿಕೆಯನ್ನು ಧರಿಸಿ ಕಂದುಬಣ್ಣದ ಸೀರೆಯನ್ನು ಧರಿಸಿ, ತಲೆತುಂಬ ತುರುಬು ಕಟ್ಟಿಕೊಂಡ ಮಹಿಳೆಯಿದ್ದಾಳೆ. ಅವಳ ಪಕ್ಕದಲ್ಲಿ ಈಗಾಗಲೇ ನೀರನ್ನು ಮೇಲ್ಜಾತಿಯವರಿಂದ ತುಂಬಿಸಿಕೊಂಡು ಕೊಡವನ್ನು ತನ್ನ ಮೊಣಕಾಲಿನ ಆಸರೆಯೊಂದಿಗೆ ಮೇಲೆತ್ತಿಕೊಳ್ಳುವ ಹವಣಿಕೆಯಲ್ಲಿರುವ ಎತ್ತರದ ಸ್ತ್ರೀಯೊಬ್ಬಳು ಕ್ರಿಯಾಶೀಲಳಾಗಿದ್ದಾಳೆ. ಕೆಳಗೆ ಚೆಲ್ಲಿದ ನೀರನ್ನು ನಾಯಿಯೊಂದು ಕುಡಿಯುತ್ತಿರುವ ಸನ್ನಿವೇಶವು ಕೂಡ ಗಮನಿಸತಕ್ಕದ್ದಾಗಿದೆ. ಬಲಭಾಗದ ಚಿತ್ರದಲ್ಲಿ ಶೂದ್ರನೊಬ್ಬ ಆತುರಪಟ್ಟು ಕೆರೆಯ ನೀರಿನಲ್ಲಿ ತನ್ನ ಮಣ್ಣಿನ ಕೊಡದಿಂದ ನೀರು ತರಲು ಹೋಗಿ, ತುಂಬಿಸಿಕೊಂಡು ವಾಪಸು ಬರುವಾಗ ಅದನ್ನು ಬ್ರಾಹ್ಮಣರು ನೋಡಿದ್ದಾರೆ. ಶೂದ್ರನೊಬ್ಬ ಕೆರೆಯ ನೀರನ್ನು ಮುಟ್ಟಿ ಮೈಲಿಗೆ ಮಾಡಿದ ಎಂಬ ಆಕ್ರೋಶದಿಂದ ಆತನನ್ನು ಹೊಡೆಯುವ ಸನ್ನಿವೇಶವನ್ನು ಕಲಾವಿದ ಮನ ಕಲಕುವಂತೆ ಚಿತ್ರಿಸಿದ್ದಾನೆ. ಕಪ್ಪು ಮತ್ತು ಕಂದುವರ್ಣದ ದೇಹವರ್ಣವನ್ನು ಹೊಂದಿದ ಶೂದ್ರ ನೀಲಿಯ ಬಣ್ಣದ ತುಂಡು ಪಂಚೆಯೊಂದನ್ನು ಮಾತ್ರ ಧರಿಸಿದ್ದು ಆ ಪಂಚೆಯೂ ಹೊಡೆತದಿಂದ ಚಲ್ಲಾಪಿಲ್ಲಿಯಾಗಿದೆ. ತಲೆಯಲ್ಲಿ ಬಣ್ಣ ಮಾಸಿದ ಕೆದರಿದ ಕೂದಲು, ಗಡ್ಡ ಮೀಸೆಗಳಿಂದ ಕೂಡಿದ ದಲಿತ ತನ್ನ ಬಲಗೈಯನ್ನು ಮೇಲೆತ್ತಿ ತನ್ನನ್ನು ಹೊಡೆಯಬಾರದೆಂದು ಕೇಳಿಕೊಳ್ಳುತ್ತಿದ್ದಾನೆ. ಎಡಗೈಯನ್ನು ಭೂಮಿಗೆ ಆಸರೆಯಾಗಿ ಊರಿಕೊಂಡು ಬೀಳದಂತೆ ಕುಳಿತಿದ್ದಾನೆ. ಆತನ ಹಿಂದೆ ದಢೂತಿಯಾದ ಕೆಂಪು ದೇಹವರ್ಣದ, ಬಲಗೈಯಲ್ಲಿ ಉದ್ದನೆಯ ದಂಡ, ಕಾಲಿನಲ್ಲಿ ಚಪ್ಪಲಿ, ಹಸಿರು ಮೇಲುಹೊದಿಕೆಯನ್ನು ಇಳಿಬಿಟ್ಟುಕೊಂಡ ವ್ಯಕ್ತಿ ಆಕ್ರೋಶದಿಂದ ತನ್ನ ಬಲಗಾಲನ್ನು ದಲಿತನ ಬೆನ್ನ ಮೇಲೆ ಊರಿ ಒದೆಯುವ ಭಂಗಿಯಲ್ಲಿದ್ದಾನೆ.

ನೀಲಿಬಣ್ಣದ ಅಂಗಿ, ಬಿಳಿಬಣ್ಣದ ಪಂಚೆಯನ್ನು ಧರಿಸಿದ ವ್ಯಕ್ತಿಯ ಬಲಗೈಯಲ್ಲಿ ಉದ್ದನೆಯ ಕೋಲು, ಎಡಗೈಯಲ್ಲಿ ಮಣ್ಣಿನ ಬಿಂದಿಗೆ, ಆತನ ಪಕ್ಕದಲ್ಲಿ ಮತ್ತೊಬ್ಬ ಹಳದಿ ಬಣ್ಣದ ಹೊಳೆಯುವ ಅಂಗಿ, ನೀಲಿಬಣ್ಣದ ಪಂಚೆ, ಅದೇ ಬಣ್ಣದ ರುಮಾಲನ್ನು ಧರಿಸಿ, ತನ್ನ ಎರಡೂ ಕೈಗಳಿಂದ ದೊಣ್ಣೆಯೊಂದನ್ನು ಹಿಡಿದು ದಲಿತನಿಗೆ ಹೊಡೆಯುವ ಭಂಗಿಯಲ್ಲಿದ್ದಾನೆ. ಹೊಡೆತ ತಿಂದು ಕೆಳಗೆ ಬಿದ್ದ ದಲಿತನ ಪಕ್ಕದಲ್ಲಿ ಮಡಕೆಯ ಚೂರುಗಳಿವೆ. ಬಹುಶಃ ನೀರಿನ ಬಿಂದಿಗೆಯನ್ನೂ ಸವರ್ಣೀಯರು ಒಡೆದು ಹಾಕಿರಬೇಕು. ಕೆರೆಯ ದಂಡೆಯಲ್ಲಿ ಒಬ್ಬ ಸ್ತ್ರೀ ನೀರು ತುಂಬಿಸಿಕೊಳ್ಳುತ್ತಿದ್ದಾಳೆ, ಮತ್ತೊಬ್ಬಳು ತನ್ನ ತಲೆಯ ಮೇಲೆ, ಸೊಂಟದ ಮೇಲೊಂದು ಬಿಂದಿಗೆಯನ್ನು ಹೊತ್ತು ಊರಕಡೆಗೆ ಮುಖ ಮಾಡಿ ನಡೆದಿದ್ದಾಳೆ. ದಡದಲ್ಲಿ ಪಶುಗಳು ಕೆರೆಯ ನೀರನ್ನು ಕುಡಿಯುತ್ತಿರುವ, ಹುಲ್ಲನ್ನು ಮೇಯುತ್ತಿರುವ ದೃಶ್ಯವನ್ನು ಕಾಣುತ್ತೇವೆ. ಅಂದರೆ ಪಶುಗಳಿಗಿಂತ ಶೂದ್ರನ ಬದುಕು ಅತ್ಯಂತ ಹೀನವಾದುದು ಎಂಬ ಪ್ರಧಾನ ಆಶಯವನ್ನು ಕಲಾವಿದ ಇಲ್ಲಿ ಪ್ರಕಟಪಡಿಸಿರುವುದು. ದಲಿತರಿಗೆ ಕೆರೆ–ಬಾವಿಯ ನಿಷೇಧದ ಆಶಯವನ್ನು ಪ್ರಕಟಪಡಿಸುವ ಈ ಚಿತ್ರದಲ್ಲಿ ಬೌದ್ಧಿಕ ಆಕೃತಿಗಳ ಜೊತೆ ಭೌತಿಕ ಆಕೃತಿಗಳು ಚಿತ್ರದಲ್ಲಿ ಪೈಪೋಟಿಗಿಳಿದಿವೆ. ದೂರದಲ್ಲಿ ಗ್ರಾಮದ ಮತ್ತು ದೇಗುಲಗಳ ವಿನ್ಯಾಸವು ಮೂಡಿಬಂದರೆ ಸಾಮೀಪ್ಯದಲ್ಲಿ ಮಾನವಾಕೃತಿಗಳು ಮತ್ತು ಚಿತ್ರದ ಮುಖ್ಯ ಆಶಯವಾದ ಕೆರೆ ಮತ್ತು ಬಾವಿಗಳು ರಚಿತಗೊಂಡಿವೆ. ಕೆರೆಯನ್ನು ಸ್ಪರ್ಶಿಸಿದ ಮೇಲ್ವರ್ಗದ ಆಕೃತಿಗಳಲ್ಲಿ ದರ್ಪದ ಭಾವವನ್ನು ಚಿತ್ರಿಸಲು ಕಲಾವಿದ ತನ್ನ

ಶ್ರಮವನ್ನು ಸಾರ್ಥಕಗೊಳಿಸಿದ್ದಾನೆ. ತಮ್ಮ ದೈನಂದಿನ ಕಾರ್ಯಗಳಲ್ಲಿ ಮಗ್ನರಾದ ಮಹಿಳಾ ಆಕೃತಿಗಳಲ್ಲಿ ಶೂದ್ರನ ಮೇಲೆ ನಡೆಯುತ್ತಿರುವ ದೈಹಿಕ ಹಲ್ಲೆಯು ತಮಗೆ ಸಂಬಂಧವಿಲ್ಲವೆಂಬಂತೆ ತೋರ್ಪಡುವುದರಿಂದ ಹಿಂದೆ ಅಂದು ಪ್ರಚಲಿತದಲ್ಲಿದ್ದ ಪುರುಷಪ್ರಧಾನ ಸಮಾಜದ ದರ್ಪದ ಪ್ರತೀಕವೂ ಹೌದು.

ಒಟ್ಟಾರೆ ಈ ಚಿತ್ರದಲ್ಲಿ ಯಾವುದೇ ಪ್ರಖರ ವರ್ಣಗಳು ಕಂಡು ಬರುವುದಿಲ್ಲ. ತೆಳುವರ್ಣದ ಹಿತಮಿತವಾದ ಜಲವರ್ಣ ಮಾಧ್ಯಮದಿಂದ ಚಿತ್ರಿಸಲಾಗಿದೆ. ಆಕೃತಿಗಳ ಸಂಯೋಜನೆಯೊಂದಿಗೆ ಪರಿಸರದ ಕೆಲವು ವಸ್ತುಗಳನ್ನು ಬಳಸಿಕೊಂಡು ಸುಂದರವಾಗಿ ಚಿತ್ರವನ್ನು ಪೂರ್ಣಗೊಳಿಸಲಾಗಿದೆ. ಈ ಚಿತ್ರದಲ್ಲಿಯೂ ಆಕೃತಿಗಳಲ್ಲಿನ ಭಾವನೆ ಅಷ್ಟೇನು ಪರಿಪೂರ್ಣವೆಂಬಂತೆ ಕಂಡುಬರುವುದಿಲ್ಲ. ಆದರೆ ಕೆಲವು ಆಕೃತಿಗಳಲ್ಲಿನ ತಮ್ಮ ತಮ್ಮ ಕಾರ್ಯದಲ್ಲಿ ನಿರತರಾಗಿರುವಂತೆ ಚಿತ್ರಿಸಿ, ಚಿತ್ರದ ಯಥಾದರ್ಶನಕ್ಕೆ ಧಕ್ಕೆ ಬರಲಾಗದೆ ಸೃಜನಾತ್ಮಕವಾಗಿ ಚಿತ್ರವನ್ನು ಚಿತ್ರಿಸಲಾಗಿದೆ. ಪ್ರಸ್ತುತ ಈ ಕೃತಿಯು ಬಸವಕಲಾನಿಕೇತನ ಸಂಘ, ಕೂಡಲಸಂಗಮದಲ್ಲಿ ಸಂಗ್ರಹಗೊಂಡಿದೆ.

೨.೧.೫. ದಲಿತರಿಗೆ ಶಿಕ್ಷಣ ನಿಷೇಧ

"ಬಣ್ಣಗಳು, ಆಕಾರಗಳು ಆ ಸೃಷ್ಟಿಯ ಉತ್ತಮವಾದ ಅಂಶಗಳು. ಬಣ್ಣಗಳ ವಿವಿಧ ಛಾಯಾಕಲೆ ಕಲಾವಿದನ ಭಾವೋದ್ರೇಕಗಳೊಂದಿಗೆ ಹೊಂದಿಕೊಳ್ಳಬಹುದು. ಆದ್ದರಿಂದಲೇ ಕಲಾವಿದ ತನ್ನ ಭಾವನೆಯನುಸಾರ ದುಡಿಸಿಕೊಳ್ಳುತ್ತಾನೆ."[೨೨] ಬಾಗಲಕೋಟ ಜಿಲ್ಲೆಯ ಬೇವೂರ ಗ್ರಾಮದ ಕಲಾವಿದ ಗಣೇಶ ದಿಡ್ಡಿಬಾಗಿಲ ಇವರು ಬಸವಪೂರ್ವ ೨೦೧೪ರಲ್ಲಿ ಈ ಕೃತಿಯನ್ನು ೧೨'x೧೮' ಅಳತೆಯಲ್ಲಿ ರಚಿಸಿದ್ದಾರೆ. ಜಲವರ್ಣ ಮಾಧ್ಯಮಕ್ಕೆ ಸೇರಿದ ಈ ಚಿತ್ರದಲ್ಲಿ ಬಲಬದಿಗೆ ಸ್ವಲ್ಪ ಎತ್ತರವಾದ ಕಟ್ಟೆಯ ಮೇಲೆ ಬ್ರಾಹ್ಮಣ ಪಂಡಿತ ಬಿಳಿಮಿಶ್ರಿತ ತೆಳುನೀಲಿ ಬಣ್ಣದ ಪಂಚೆಯನ್ನು ಧರಿಸಿ ಬರಿಮೈಯಲ್ಲಿ ಇದ್ದಾನೆ. ಹೆಗಲಮೇಲೆ ಉದ್ದನೆಯ ಹಳದಿಬಣ್ಣದ ಮೇಲುಹೊದಿಕೆಯು ಮಾತ್ರವಿದೆ. ಕೂದಲನ್ನು ತಲೆಯ ಹಿಂದಕ್ಕೆ ಬಾಚಿ ಗಂಟು ಕಟ್ಟಿಕೊಂಡಿರುವ ಈತ ತನ್ನ ದೃಷ್ಟಿಯನ್ನು ಕೆಳಗೆ ಕುಳಿತಿರುವ ಬ್ರಾಹ್ಮಣ ವಟುಗಳ ಮೇಲಿರಿಸಿ ತನ್ನ ಎರಡೂ ಕೈಗಳ ಭಂಗಿಯು ಪಾಠ ಹೇಳಿಕೊಡುತ್ತಿರುವಂತೆ ಚಿತ್ರಿಸಲಾಗಿದೆ. ಆತನ ಎಡಪಕ್ಕದಲ್ಲಿ ಕೆಂಪು ವಸ್ತ್ರದಿಂದ ಸುತ್ತಿರುವ ಗ್ರಂಥಗಳನ್ನು ಕಾಣುತ್ತೇವೆ. ಕಟ್ಟೆಯ ಕೆಳಗಡೆಯಲ್ಲಿ ಬ್ರಾಹ್ಮಣ ವಟುಗಳೆಲ್ಲರೂ ಹೊಳೆಯುವ ಹಳದಿಬಣ್ಣದ ಪಂಚೆಯನ್ನು ಮಾತ್ರ ಧರಿಸಿದ್ದಾರೆ. ಬರಿಮೈಯಲ್ಲಿರುವ ಇವರು ಮುಂದಲೆಯನ್ನು ಬೋಳಿಸಿಕೊಂಡು ಹಿಂದೆ ಸ್ವಲ್ಪ ಕೂದಲಿನ ಜುಟ್ಟನ್ನು ಮಾತ್ರ ಕಟ್ಟಿಕೊಂಡಿದ್ದಾರೆ. ಎಲ್ಲರೂ ತಮ್ಮ ಕೈಗಳನ್ನು ಮುಗಿದು ಗುರುಗಳೆಡೆಗೆ ತಮ್ಮ ದೃಷ್ಟಿಯನ್ನು ನೆಟ್ಟಿದ್ದಾರೆ. ಮೂರು ಜನ ಮಾತ್ರ ವಯಸ್ಸಿನಲ್ಲಿ ದೊಡ್ಡವರಂತೆ ಕಂಡುಬರುತ್ತಿದ್ದು ಉಳಿದವರು ಕಿರಿಯವಯಸ್ಸಿನ ವಟುಗಳಾಗಿದ್ದಾರೆ.

ಚಿತ್ರದ ಎಡ ಮೂಲೆಯಲ್ಲಿ ನೀಲಿಮಿಶ್ರಿತ ಬಿಳಿಬಣ್ಣದ ಪಂಚೆಯನ್ನು ಧರಿಸಿದ ಇಬ್ಬರು ಬಾಲಕರು ಕೆದರಿದ ಬಣ್ಣ ಮಾಸಿದ ತಲೆಗೂದಲುಗಳನ್ನು ಹೊಂದಿದ್ದಾರೆ. ಒಬ್ಬಾತ ತನ್ನೆರಡೂ ಕೈಗಳನ್ನು ಕಟ್ಟಿಕೊಂಡು ತಲೆಯನ್ನು ಬಾಗಿಸಿ ನಿಂತಿದ್ದರೆ, ಆತನ ಪಕ್ಕದಲ್ಲಿರುವಾತ ತನ್ನ ಎಡಗೈಯನ್ನು ಕೆಳಗೆ ಇಳಿಬಿಟ್ಟು ಬಲಗೈಯಿಂದ

೨೨. ಟಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ, ಪು-೫೬೧

ಗುರುಗಳ ಕಡೆಗೆ ಕೈಮಾಡಿ ತೋರಿಸುವ ಭಂಗಿಯಲ್ಲಿ ನಿಂತಿದ್ದಾನೆ. ಬಹುಶಃ ತಮಗೂ ಶಿಕ್ಷಣ ನೀಡಿ ಎಂಬ ಅಹವಾಲನ್ನು ಆತ ಸಲ್ಲಿಸಲು ಬಂದಿರುವಂತೆ ತೋರುತ್ತದೆ. ಗುರುಗಳ ಬಲಬದಿಯಲ್ಲಿ ವಿಶಾಲವಾದ ಇಳಿಜಾರು ಮೇಲ್ಛಾವಣಿ ಹೊಂದಿದ ಮನೆಯನ್ನು ಕಾಣುತ್ತೇವೆ. ಮನೆಯ ಬಾಗಿಲಿನ ಮುಂದೆ ಕಡುನೀಲಿ ಬಣ್ಣದ ತುಳಸಿಗಿಡದ ಕಟ್ಟೆಯನ್ನು ಇಬ್ಬರು ಸ್ತ್ರೀಯರು ಪೂಜಿಸುತ್ತಿದ್ದಾರೆ. ಅವರಲ್ಲಿ ಒಬ್ಬಾಕೆ ಹಸಿರುಬಣ್ಣದ ಸೀರೆಯನ್ನು ಧರಿಸಿ ಎರಡೂ ಕೈಗಳನ್ನು ಮುಗಿದು ನಮಸ್ಕರಿಸುತ್ತಿರುವಂತೆ, ಇನ್ನೊಬ್ಬಾಕೆ ಬಿಳಿಬಣ್ಣದ ಸೀರೆ, ಕೆಂಪುಬಣ್ಣದ ರವಿಕೆಯನ್ನು ಧರಿಸಿ, ತುಳಸಿ ಗಿಡದೆಡೆಗೆ ಬಾಗಿ ಎರಡೂ ಕೈಗಳಿಂದ ಆರತಿಯನ್ನು ಬೆಳಗುತ್ತಿರುವಂತೆ ನಿಂತಿದ್ದಾಳೆ. ಅವಳ ಹಿಂದೆ ಮರವೊಂದು ಚಿತ್ರಿತವಾಗಿದೆ. ಮನೆಯ ಗೋಡೆಗೆ ತುಂಬ ತೆಳುವರ್ಣದ ಕಂದುಮಿಶ್ರಿತ ಬಿಳಿಬಣ್ಣವನ್ನು ಲೇಪಿಸಲಾಗಿದೆ.

ಪ್ರಸ್ತುತ ಚಿತ್ರದ ಮೇಲಿನ ವಿಶ್ಲೇಷಣೆಗೆ ಪೂರಕವಾಗಿ ಚಿತ್ರ ವಿನ್ಯಾಸದ ಕುರಿತು ಈ ಕೃತಿಯನ್ನು ವಿವರಿಸುವುದಾದರೆ, ಬ್ರಾಹ್ಮಣರ ಗುರುಕುಲದ ವಾತಾವರಣವು ಇಲ್ಲಿ ಅತ್ಯಂತ ಸಮರ್ಥವಾಗಿ ಒಡಮೂಡಿದೆ. ಹಿನ್ನೆಲೆಯಲ್ಲಿ ಪಂಡಿತನ ಮನೆಯೊಂದು ಅನಾದಿ ಕಾಲದಲ್ಲಿ ಕಂಡುಬರುವಂತಹ ವಿನ್ಯಾಸವನ್ನು ಹೊಂದಿದೆ. ಅದರ ಮುನ್ನೆಲೆಯಲ್ಲಿ ಸಣ್ಣ ಮರವೊಂದರ ವಿನ್ಯಾಸ, ಇಬ್ಬರು ಮಹಿಳೆಯರು ತುಳಸೀ ಪೂಜೆಯಲ್ಲಿ ತಲ್ಲೀನರಾಗಿರುವ ಬಗೆ ಇವು ಬ್ರಾಹ್ಮಣ್ಯದ ವಾತಾವರಣಕ್ಕೆ ಪೂರಕವಾಗಿವೆ. ಇನ್ನು ಚಿತ್ರದ ಸಾಮೀಪ್ಯದಲ್ಲಿ ಪಂಡಿತನ ಬೋಧನಾ ಸ್ಥಿತಿ, ಶಿಷ್ಯರ ಆಲಿಸುವ ಸ್ಥಿತಿ, ಶೂದ್ರರಿಬ್ಬರು ಶಿಕ್ಷಣಕ್ಕಾಗಿ ಹಂಬಲಿಸುವ ಬಗೆ, ಹೀಗೆ ಅವರ ವೇಷಭೂಷಣಗಳೆಲ್ಲವೂ ಬಸವಪೂರ್ವ ಯುಗದಲ್ಲಿನ ಮೇಲ್ವರ್ಗದ ಸಾಮಾಜಿಕ ಪರಿಸರವನ್ನು ಈ ಚಿತ್ರ ಪ್ರತಿನಿಧಿಸುತ್ತದೆ. ನವಿರಾದ ವರ್ಣಸಂಯೋಜನೆ, ಬೌದ್ಧಿಕ ಮತ್ತು ಭೌತಿಕ ಆಕೃತಿ–ವಿನ್ಯಾಸಗಳು ಚಿತ್ರದ ಅವಕಾಶಕ್ಕೆ ಹಾಗೂ ಚಿತ್ರದ ಆಶಯಕ್ಕೆ ನ್ಯಾಯ ಒದಗಿಸಿಕೊಟ್ಟಿವೆ. ಒಟ್ಟಾರೆ ಅಂದಿನ ಯುಗದಲ್ಲಿ ದಲಿತರಿಗೆ ಶಿಕ್ಷಣ ನಿಷೇಧದ ಪರಿಕಲ್ಪನೆಯನ್ನು ಕಲಾವಿದ ಇಲ್ಲಿ ಸಾಕಾರಗೊಳಿಸಿದ್ದಾನೆ.

ಒಟ್ಟಾರೆ ಈ ಮೇಲಿನ ನಾಲ್ಕು ಚಿತ್ರಕಲಾಕೃತಿಗಳಿಗಿಂತಲೂ ಈ ಕೃತಿಯಲ್ಲಿ ಆಕೃತಿಗಳಲ್ಲಿನ ಭಾವನೆಯು ಸ್ವಲ್ಪ ಮಟ್ಟಿಗೆ ಸ್ಪಷ್ಟವಾಗಿ ಕಾಣಬಹುದು. ಶೀರ್ಷಿಕೆಯ ಹಿನ್ನೆಲೆಯಲ್ಲಿ ರೂಪಿಸಿರುವಂತ ಈ ಚಿತ್ರವು ಕಲಾವಿದನ ಸ್ವ ಕಲ್ಪನೆಯಿಂದಲೇ ಆಕೃತಿಗಳನ್ನು ಚಿತ್ರಿಸಲಾಗಿದೆ. ಚಿತ್ರದಲ್ಲಿನ ವರ್ಣಗಳು ಆ ಚಿತ್ರಕ್ಕೆ ಧಕ್ಕೆಯುಂಟು ಮಾಡದೆ ತೆಳುವಾದ ಹಿತಮಿತ ವರ್ಣಗಳನ್ನು ಬಳಸಿಕೊಂಡು ಸುಂದರವಾಗಿ ಚಿತ್ರಿಸಿರುವುದರೊಂದಿಗೆ ಯಥಾದರ್ಶನವನ್ನು ಕಾಯ್ದುಕೊಳ್ಳಲಾಗಿದೆ. ಪ್ರಸ್ತುತ ಈ ಕೃತಿಯು ಬಸವ ಕಲಾನಿಕೇತನ ಸಂಘ, ಕೂಡಲಸಂಗಮದಲ್ಲಿ ಸಂಗ್ರಹಗೊಂಡಿದೆ.

೨.೨. ಬಸವಣ್ಣನವರ ಬಾಲ್ಯಾವಸ್ಥೆಯ ವರ್ಣಚಿತ್ರಗಳು

೨.೨.೧. ಬಸವಣ್ಣನ ಜನನ (ಕಾಮಿಕ್ಸ್ ಚಿತ್ರಕಥೆ)

ಅಮರ ಚಿತ್ರಕಥಾ ಪ್ರೈ.ಲಿ. ಇವರ "ಬಸವೇಶ್ವರ" ಎಂಬ ಆಂಗ್ಲ ಕೃತಿಯಲ್ಲಿ ಈ ಮೇಲಿನ ಚಿತ್ರವು ಮುದ್ರಣಗೊಂಡಿದೆ. ಕಲಾವಿದ ಜಿ. ಆರ್. ನಾಯಕ್ ಅವರು ಈ ಕಲಾಕೃತಿಯನ್ನು ಜಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಕಥಾರೂಪದಲ್ಲಿ ಚಿತ್ರಿಸಿರುವ ಈ ಕಲಾಕೃತಿಯು ಗ್ರಂಥದಲ್ಲಿನ ಚಿಕ್ಕ ಚಿಕ್ಕ

ಪಟ್ಟಿಕೆಗಳಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ. ಇಲ್ಲಿರುವ ಬಸವಣ್ಣನವರ ಎಲ್ಲ ಕಾಮಿಕ್ಸ್ ವರ್ಣಚಿತ್ರಗಳು ಜಿ. ಆರ್. ನಾಯಕ್ ಅವರು ರಚಿಸಿರುತ್ತಾರೆ. ಮತ್ತು ಅವೆಲ್ಲವು ಈ ಮೇಲಿನ ಕೃತಿಯಿಂದಲೇ ಬಳಸಿಕೊಳ್ಳಲಾಗಿದೆ.

ಈ ಚಿತ್ರದಲ್ಲಿ ಬಳಕೆಯಾಗಿರುವ ಬಣ್ಣಗಳ ಸಂಖ್ಯೆ ಕಡಿಮೆಯಾಗಿದೆ. ಆದರೆ ಬಸವಣ್ಣನವರ ಜೀವನದ ಮಹತ್ವದ ಘಟನೆಯನ್ನು ತಿಳಿಸಿಕೊಡುವಲ್ಲಿ ಕಲಾವಿದನ ಯತ್ನ ಸಾರ್ಥಕವಾಗಿದೆಯೆನ್ನಿಸುತ್ತದೆ. ಮಾದಲಾಂಬಿಕೆಗೆ ಒಂದು ಗಂಡು ಮಗು ಹುಟ್ಟಿದ ಸಂಗತಿಯು ಇಲ್ಲಿ ವ್ಯಕ್ತವಾಗಿದೆ. ಕೋಣೆಯೊಂದರಲ್ಲಿ ಮಾದಲಾಂಬಿಕೆಯು ನೀಲಿ ಬಣ್ಣದ ಸೀರೆಯನ್ನು ಧರಿಸಿ ಮಂಚದ ಮೇಲೆ ಮಲಗಿಕೊಂಡಿರುವಂತೆ ರಚಿಸಿ, ಬಾಣಂತಿಯ ಕೋಣೆಯ ಸನ್ನಿವೇಶಕ್ಕೆ ಪೂರಕವಾಗಿ ಮಂಚದ ಕೆಳಗೆ ಒಂದು ಮಣೆಯ ಮೇಲೆ ಚಿಕ್ಕ ಪಾತ್ರೆಯನ್ನು ಇಡಲಾಗಿದೆ. ಕೋಣೆಯ ಹೊರಗೆ ತೆರೆದ ಬಾಗಿಲಿನ ಪಕ್ಕದಲ್ಲಿ ಹಸಿರುಬಣ್ಣದ ಸೀರೆಯನ್ನು ಧರಿಸಿದ ಸೂಲಗಿತ್ತಿಯೊಬ್ಬಳು ತನ್ನ ಕೈಯಲ್ಲಿ ಶಿಶು ಬಸವನನ್ನು ಎರಡೂ ಕೈಗಳಲ್ಲಿ ಎದೆಗೆ ಅಂಟಿಕೊಂಡಂತೆ ಹಿಡಿದುಕೊಂಡು ವಿಷಯವನ್ನು ಪುಟ್ಟ ಬಾಲಕಿಯಾದ ನಾಗಲಾಂಬಿಕೆಗೆ ತೋರಿಸುತ್ತಿರುವ ಸನ್ನಿವೇಶವನ್ನು ಇಲ್ಲಿ ಕಾಣುತ್ತೇವೆ. ನಾಗಲಾಂಬಿಕೆಯು ಕೆಂಪು ಬಣ್ಣದ ಲಂಗ, ಕುಪ್ಪಸವನ್ನು ಧರಿಸಿದ್ದು ತೆಳುಗುಲಾಬಿ ವರ್ಣದ ಮೇಲುವಸ್ತ್ರವನ್ನು ಹೆಗಲಮೇಲೆ ಇಳಿಯಬಿಟ್ಟಿದ್ದಾಳೆ. ಇಲ್ಲಿ ಕಲಾವಿದ ಕಪ್ಪುವರ್ಣದ ರೇಖೆಗಳನ್ನು ಹೆಚ್ಚು ಬಳಸಿ ನೆಳಲು ಬೆಳಕಿನ ಸಂಯೋಜನೆಯನ್ನು ಸಹಜವೆಂಬಂತೆ ರಚಿಸಿರುವುದು ಕಂಡುಬರುತ್ತದೆ.

ಕಾಮಿಕ್ಸ್ ಎಂದರೆ ಚಿಕ್ಕಮಕ್ಕಳಿಗೆ ಪಂಚಪ್ರಾಣ. ಕಾಮಿಕ್ಸ್‌ಗಳಲ್ಲಿರುವ ಚಿತ್ರ ಸಹಿತ ಕಥೆಯನ್ನು ಓದುವುದು ಅವರ ಎಳೆಯತನದಲ್ಲಿ ಕಂಡುಬರುವ ಆಪ್ಯಾಯಮಾನವಾದ ಕ್ರಿಯೆ. ಬಸವಣ್ಣನವರ ಕುರಿತು ಅನೇಕ ಅಧ್ಯಯನಗ್ರಂಥಗಳು ಬಂದಿರುವ ಹಾಗೆ ಮಕ್ಕಳಿಗೆ ಕಾಮಿಕ್ಸ್‌ಗಳೂ ಸಹ ಪ್ರಕಟವಾಗಿವೆ. ಆಕೃತಿಗಳಿಗೆ ದಟ್ಟವರ್ಣದ ಬಾಹ್ಯರೇಖೆಯ ಒಳಭಾಗದಲ್ಲಿ ಏಕಪ್ರಕಾರವಾದ (ಫ್ಲ್ಯಾಟ್ ಟೆಕ್ನಿಕ್) ವರ್ಣಲೇಪನ ತಂತ್ರಗಾರಿಕೆ ಇಲ್ಲಿರುತ್ತದೆ. ಮೇಲ್ಭಾಗದಲ್ಲಿ ಅರ್ಧವರ್ತುಲ ಮತ್ತು ಆಯತಾಕಾರಗಳಲ್ಲಿ ಕಥೆಯ ಸಾರವನ್ನು ಬರೆದಿರುತ್ತಾರೆ. ಪ್ರಸ್ತುತ ಚಿತ್ರದಲ್ಲಿ ಮನೆಯೊಂದರ ಒಳಾವರಣ (ಕೊಠಡಿ) ಮತ್ತು ಹೊರಾವರಣವನ್ನು ತೋರ್ಪಡಿಸಲಾಗಿದೆ. ವಾಸ್ತುವಿನ ರಚನೆಯಲ್ಲೂ ಯಥಾದರ್ಶನದ ಪಕ್ವತೆಯನ್ನು ಕಾಯ್ದುಕೊಳ್ಳಲಾಗಿದೆ. ಆಕೃತಿಗಳಲ್ಲಿ ನೈಜತೆಯ ರಚನೆಯೊಂದಿಗೆ ಮಕ್ಕಳ ಮಾನಸಿಕ ಸ್ಥಿತಿಗೆ ಪೂರಕವಾಗಿ ಚಿತ್ರ ಸ್ಪಷ್ಟತೆಯನ್ನು ಪಡೆದುಕೊಂಡಿದೆ.

೨.೨.೨. ಅಳದಿರುವ ಮಗು ಬಸವಣ್ಣನನ್ನು ಹೊತ್ತ ಸೂಲಗಿತ್ತಿ (ಕಾಮಿಕ್ಸ್ ಚಿತ್ರಕಥೆ)

ಮಾದಲಾಂಬಿಕೆಗೆ ಒಂದು ಗಂಡುಮಗು ಹುಟ್ಟಿದ ಸಂಗತಿಯು ಇಲ್ಲಿ ವ್ಯಕ್ತವಾಗಿದೆ. ಹೆರಿಗೆ ಕೋಣೆಯೊಂದರಲ್ಲಿ ಮಾದಲಾಂಬಿಕೆಯು ಹೊದ್ದು ಮಲಗಿರುವ ದೃಶ್ಯವಿದೆ. ಅವಳ ಪಕ್ಕದಲ್ಲಿ ಸೂಲಗಿತ್ತಿಯೊಬ್ಬಳು ಹಸಿರು ಬಣ್ಣದ ಸೀರೆಯನ್ನು ಧರಿಸಿ, ವಯಸ್ಸಾದವಳಂತೆ ಕಾಣುತ್ತಿದ್ದಾಳೆ. ಅವಳ

ಕೈಯಲ್ಲಿ ಶಿಶು ಬಸವನು ಮಲಗಿದ್ದಾನೆ. ಗಂಡುಮಗು ಹುಟ್ಟಿರುವ ಸಂಗತಿಯನ್ನು ಅವಳ ಮುಂದಿರುವ ಬಸವನ ತಂದೆ ಮಾದರಸನಿಗೆ ಮನವರಿಕೆ ಮಾಡಿಕೊಡುತ್ತಿದ್ದಾಳೆ. ಆದರೆ ಈ ಮಗು ಅಳುವ ಇಲ್ಲವೆ ಸದ್ದನ್ನು ಮಾಡುತ್ತಿಲ್ಲವೆಂದು ಹೇಳುತ್ತಾಳೆ. ಮಾದರಸನು ಮಗುವಿನ ಕಣ್ಣುಗಳು ಮುಚ್ಚಿರುವುದನ್ನು ಗಮನಿಸಿ ಸೂಲಗಿತ್ತಿಗೆ ಹೇಳುತ್ತಿರುವುದನ್ನು ಕಾಣುತ್ತೇವೆ. ಆತನೊಂದಿಗೆ ಪುಟ್ಟ ಬಾಲಕಿ ಅಕ್ಕ ನಾಗಮ್ಮನು ಕುತೂಹಲದಿಂದ ಮಗುವನ್ನು ಗಮನಿಸುತ್ತಿರುವದು ಹಾಗೂ ತಾಯಿ ಮಾದಲಾಂಬಿಕೆ ಮಲಗಿದಲ್ಲಿ ಅರ್ಥೈಸಿಕೊಳ್ಳುವ ಸಂಗತಿ ಇಲ್ಲಿ ವ್ಯಕ್ತವಾಗಿದೆ. ಪ್ರಸ್ತುತ ಚಿತ್ರದ ಕಾಮಿಕ್ಸ್‌ನಲ್ಲಿ ಕಂಡುಬರುವ ಏಕಪ್ರಕಾರವಾದ ವರ್ಣಲೇಪನಗಳು ಬಾಹ್ಯರೇಖೆಯ ಒಳಭಾಗದಲ್ಲಿ ರಚಿತವಾಗಿವೆ. ಮನೆಯ ಒಳಾವರಣದಲ್ಲಿ ಮಾದರಸ, ಬಾಣಂತಿ, ನಾಗಲಾಂಬಿಕೆ, ಮತ್ತು ಸೂಲಗಿತ್ತಿಯರ ಆಕೃತಿಗಳು ೪/೩ರಷ್ಟರ ಪ್ರಮಾಣದಲ್ಲಿ ರಚಿತವಾಗಿದ್ದು ಸನ್ನಿವೇಶಕ್ಕೆ ಪೂರಕವಾಗಿ ಆಕೃತಿಗಳಲ್ಲಿ ಭಾವ ಸ್ಪಂದನೆಯಿದೆ. ಎಂದಿನಂತೆ ಅರ್ಧ/ವರ್ತುಲಾಕಾರಗಳಲ್ಲಿ ಚಿತ್ರ ಕಥೆಯ ಸಾರವನ್ನು ನಿರೂಪಿಸಲಾಗಿದೆ.

೨.೨.೩. ಬಾಲಕ ಬಸವಣ್ಣನನ್ನು ಮಾದಲಾಂಬಿಕೆ ಎತ್ತಿಕೊಂಡಿರುವುದು

"ಕಲಾವಿದನ ಅನುಭವದಲ್ಲಿ ಕಲಾಸತ್ಯವೇ ತನ್ನನ್ನು ತಾನೇ ಮರಳುಗೊಳಿಸುವ ಒಂದು ಸ್ವಭಾವ ಮಾನವನಲ್ಲಿದೆ. ಅದನ್ನು ಕಲಾವಿದ ತೃಪ್ತಗೊಳಿಸುತ್ತಾನೆ."[೨೩] ಬಸವನ ಬಾಗೇವಾಡಿಯ ಕಲಾವಿದರಾದ ಕೆ. ಗಂಗಾಧರ ಅವರು ಈ ಕೃತಿಯನ್ನು ತೈಲಮಾಧ್ಯಮದಲ್ಲಿ ೩೬"x೪೮" ಅಳತೆಯ ಕ್ಯಾನ್ವಾಸಿನಲ್ಲಿ ರಚಿಸಿದ್ದಾರೆ. ಬಾಲಕ ಬಸವಣ್ಣನನ್ನು ತನ್ನ ಕಂಕುಳಲ್ಲಿ ಎತ್ತಿಕೊಂಡ ಮಾದಲಾಂಬಿಕೆ ಮತ್ತು ಆಕೆಯ ಪಕ್ಕದಲ್ಲಿ ಅಕ್ಕ ನಾಗಮ್ಮ ಇರುವ ಪ್ರಸ್ತುತ ಚಿತ್ರವು ಉತ್ತಮ ಅಭಿರುಚಿಯ ಕಲಾಕೃತಿಯಾಗಿದೆ. ತೈಲವರ್ಣ ಮಾಧ್ಯಮದಲ್ಲಿ ರಚಿತವಾದ ಇದರಲ್ಲಿ ಗಾಢವಾದ ಕಂದು, ಹಳದಿ, ನೀಲಿ ಮತ್ತು ಬಿಳಿ ಬಣ್ಣಗಳನ್ನು ಕಲಾವಿದ ಅಧಿಕವಾಗಿ ಬಳಸಿದ್ದಾನೆ. ಇವುಗಳ ಜೊತೆಗೆ ಕಂದು, ಕಪ್ಪುಗಳ ಜೊತೆಗೆ ಮಿಶ್ರವರ್ಣಗಳ ಬಳಕೆಯನ್ನು ಇಲ್ಲಿ ಕಾಣುತ್ತೇವೆ. ದಟ್ಟವಾದ ಕಪ್ಪು ತಲೆಗೂದಲು, ಹಣೆಯಲ್ಲಿ ರಾರಾಜಿಸುವ ವಿಭೂತಿಯ ಗೆರೆಗಳು, ಕೆಂಪುಬಣ್ಣದ ಕುಂಕುಮದ ಬೊಟ್ಟು, ಅದರ ಕೆಳಗೆ ವಿಭೂತಿಯ ಬೊಟ್ಟು, ಅಂದವಾದ ಕಣ್ಣುಗಳು, ತೆಳುವಾದ ತಿದ್ದಿ ತೀಡಿದಂತಿರುವ ಹುಬ್ಬುಗಳು, ನೀಳವಾದ ಮೂಗು, ತುಟಿಗಳು, ಕೊರಳಲ್ಲಿ ಹಲವು ಎಳೆಗಳ ಮುತ್ತಿನ ಸರಗಳು, ಬಂಗಾರದ ಆಭರಣದ ಸರಗಳು, ಮತ್ತು ಇಷ್ಟಲಿಂಗ, ಬಲಕಿವಿಯಲ್ಲಿ ಮುತ್ತಿನ ಓಲೆ ಮತ್ತು ಬುಗುಡಿಯ ಆಭರಣಗಳು ಇವುಗಳ ಮೂಲಕ ಸುಲಕ್ಷಣವಾಗಿ ಕಾಣುವಂತೆ ಮಾದಲಾಂಬಿಕೆಯ ಚಿತ್ರಣವನ್ನು ಕಲಾವಿದ ಇಲ್ಲಿ ಚಿತ್ರಪಠ್ಯದ ಮೂಲಕ ಅಭಿವ್ಯಕ್ತಿಸಿದ್ದಾನೆ.

ಹೊಳೆಯುವ ಬಂಗಾರದ ಬಣ್ಣದ ಅಂಚಿನ ಕಪ್ಪು ಮತ್ತು ಗಾಢವಾದ ಕಂದುಬಣ್ಣ ಮಿಶ್ರಿತ ಸೀರೆ ಮತ್ತು ಅದರ ನೆರಿಗೆಗಳು, ಜರತಾರಿ ಜರಿಯಿಂದ ಕೂಡಿದ ಆಕಾಶ ನೀಲಿಬಣ್ಣದ ಕುಪ್ಪಸ, ನೀಳವಾದ ದೇಹಾಕಾರ, ಪಾದಗಳಿಗೆ ಬಂಗಾರದ ಚೈನು, ಬೆಳ್ಳಿಯ ಕಾಲುಂಗುರ ಇಡೀ ಚಿತ್ರದ ಕುಸುರಿ ಕೆಲಸದ ಶ್ರೀಮಂತಿಕೆಗೆ ಸಾಕ್ಷಿಯಾಗಿವೆ. ತನ್ನ ಕಂಕುಳಲ್ಲಿ ಎತ್ತಿಕೊಂಡ ಬಸವಣ್ಣ ಇನ್ನೂ ಚಿಕ್ಕ ಮಗು.

---

೨೩. ಸಿ.ಡಿ. ಜಟ್ಟೆಣ್ಣನವರ : ಕಲಾವಿದ ಡಾ. ಎಂ.ವಿ. ಮಿಣಜಿಗಿ (ಅಪ್ರಕಟಿತ ಎಂ.ಫಿಲ್ ಪ್ರಬಂಧ), ಪು-೨೩

ಕಂದುಬಣ್ಣದ ಮಟ್ಟಸವಾದ ತಲೆಗೂದಲು, ಹಣೆಯಲ್ಲಿ ವಿಭೂತಿ, ಅಂದವಾದ ಕಣ್ಣುಗಳು, ತುಂಟುತನವಿಲ್ಲದ ಸೌಮ್ಯ ಮುಖ, ಕಿವಿಯಲ್ಲಿ ಓಲೆ, ಬಿಳಿಯ ಬಣ್ಣದ ಅರ್ಧತೋಳಿನ ಅಂಗಿ, ಕಾಲಲ್ಲಿ ಬಂಗಾರದ ಕಾಲ್ಗಡಗವನ್ನು ಧರಿಸಿದ ಬಾಲಕ ಬಸವಣ್ಣ ತನ್ನ ತಾಯಿಯ ಕೊರಳಲ್ಲಿರುವ ಗುಂಡುಗಡಿಗೆಯ(ಬೆಳ್ಳಿಯ ಚೌಕ)ಯನ್ನು ಹಿಡಿದಿರುವುದು ಅತ್ಯಂತ ಸಹಜವೆನ್ನುವಂತೆ ಚಿತ್ರಿಸಲಾಗಿದೆ.

ಮಾದಲಾಂಬಿಕೆಯ ಬಲಬದಿ ಅಂದರೆ ನೋಡುಗರಿಗೆ ಚಿತ್ರದ ಎಡಬದಿಯಲ್ಲಿ ಬಿಳಿ ಬಣ್ಣದ ಲಂಗ ಮತ್ತು ನೀಳ ಕುಪ್ಪಸದಂತಿರುವ ಮಿರುಗುವ ವಸ್ತ್ರಗಳನ್ನು ಧರಿಸಿ, ಎರಡು ಜಡೆಗಳನ್ನು ಕಟ್ಟಿರುವ, ಕೊರಳಲ್ಲಿ ಒಂದು ಮುತ್ತಿನ ಎಳೆಯ ಸರವನ್ನು ಧರಿಸಿ ಸೌಮ್ಯರೂಪದ ಮುಖ-ಭಾವನೆಯನ್ನು ಹೊಂದಿರುವ ಅಕ್ಕ ನಾಗಮ್ಮನನ್ನು ಇಲ್ಲಿ ಕಾಣುತ್ತೇವೆ. ಅಕ್ಕ ನಾಗಮ್ಮನು ಧರಿಸಿದ ವಸ್ತ್ರಗಳ ನೀರಿಗೆಗಳು ಮತ್ತು ಹಳದಿ ಬಣ್ಣದ ಚಿತ್ತಾರದ ಚಿಕ್ಕೆಗಳನ್ನು ಗಮನಿಸಿದರೆ, ಇದೊಂದು ಭಾವಚಿತ್ರವೆ ಅಥವಾ ಛಾಯಾಚಿತ್ರವೇ ಎಂಬ ಅನುಮಾನ ಮೂಡುತ್ತದೆ. ಭಿತ್ತಿಯಲ್ಲಿ ಸಂಯೋಜಿಸಿರುವ ಮಿಶ್ರವರ್ಣಗಳು, ನೆಲಹಾಸನ್ನು ಚಿತ್ರಿಸಲು ಬಳಸಿರುವ ಬಣ್ಣಗಳನ್ನು ಗಮನಿಸಿದರೆ ಕಲಾವಿದನ ಉನ್ನತ ಮಟ್ಟದ ಪ್ರತಿಭೆಯ ಅರಿವು ನೋಡುಗರಿಗಾಗುತ್ತದೆ. ಇಡೀ ಚಿತ್ರವನ್ನು ನೋಡಿದಾಗ, ಮಾದಲಾಂಬಿಕೆಯ ದೇಹಾಕೃತಿಯ ಎತ್ತರ ತುಸು ಹೆಚ್ಚಾಗಿದೆಯೇನೋ ಎಂಬ ಅನುಮಾನ ಕಾಡುತ್ತದೆ. ಇದನ್ನು ಹೊರತುಪಡಿಸಿದರೆ ಈ ಕಲಾಕೃತಿಯ ಎಲ್ಲ ಸಂಗತಿಗಳು ಸಮರ್ಪಕವಾಗಿವೆ.

ತೈಲವರ್ಣದಲ್ಲಿ ರಚಿಸಲ್ಪಟ್ಟಿರುವ ಈ ಕಲಾಕೃತಿಯು ಪೂರ್ಣಭಾವಚಿತ್ರದ ಸಂಯೋಜನೆಯಡಿಯಲ್ಲಿ ರಚಿತಗೊಂಡಿದೆ. ಆಕೃತಿಗಳ ಹಿನ್ನೆಲೆಯಲ್ಲಿ ಅಗ್ರಹಾರದ ಆಡಳಿತಗಾರನ ಮನೆಯ ವೈಭವ ಮಸುಕಾಗಿ ಗೋಚರವಾಗುವಂತೆ ಮಾಡಿರುವುದರಿಂದ ಮುನ್ನೆಲೆಯ ಆಕೃತಿಗಳು ಸ್ಪಷ್ಟವಾಗಿ ಚಿತ್ರಿತಗೊಂಡಿವೆ. ದೃಢಕಾಯದ ವ್ಯಕ್ತಿತ್ವವನ್ನು ಹೊಂದಿದ ಮಾದಲಾಂಬಿಕೆ ತನ್ನ ಎಡ ಕಂಕುಳಲ್ಲಿ ಬಾಲ ಬಸವನನ್ನು ಪ್ರೀತಿಯಿಂದ ಎತ್ತಿಕೊಂಡಿದ್ದು, ಪಕ್ಕದಲ್ಲಿ ಅಕ್ಕನಾಗಮ್ಮನನ್ನು ಚಿತ್ರಿಸಲಾಗಿದೆ. ಕಲಾಕೃತಿಯಲ್ಲಿರುವ ಆಕೃತಿಗಳಲ್ಲಿ ರಮಣೀಯ ಶೈಲಿಯ ವರ್ಣಮೇಳವಿದೆ. ಪ್ರಸ್ತುತ ಈ ಕಲಾಕೃತಿಯು ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ.

೨.೨.೪ ವೈದ್ಯ ಪಂಡಿತರು ಮಗುವಿನ ಪರೀಕ್ಷೆ ಮಾಡುತ್ತಿರುವುದು (ಕಾಮಿಕ್ಸ್ ಚಿತ್ರಕಥೆ)

ಜಲವರ್ಣ ಮಾಧ್ಯಮದಲ್ಲಿ ಚಿತ್ರಿತಗೊಂಡ ಈ ಕೃತಿಯಲ್ಲಿ ಶಿಶು ಬಸವನು ಜನ್ಮಿಸಿದ ಸಂದರ್ಭದಲ್ಲಿ ಕಣ್ಣುಗಳು ತೆರೆಯದಿದ್ದಾಗ ಎಷ್ಟೋ ಜನ ವೈದ್ಯರು ಬಂದು ಪರೀಕ್ಷೆ ಮಾಡುತ್ತಾರೆ. ಆದರೂ ಏನೂ ಪ್ರಯೋಜನವಾಗುವುದಿಲ್ಲ. ಅದೇ ಸಮಯಕ್ಕೆ ಜಂಗಮನೊಬ್ಬ ಮಗುವಿನ ಹತ್ತಿರಕ್ಕೆ ಬಂದು ಪರೀಕ್ಷೆ ಮಾಡುವ ಸಂದರ್ಭದಲ್ಲಿ ಮಾದರಸನು, ಸ್ವಾಮಿ, ನನ್ನ ಮಗ ಎಂದಾದರೂ ನನ್ನ ಕಡೆ ನೋಡಿಯಾನೇ ಮತ್ತು ಮಾತನಾಡಿಯಾನೇ ಎಂದು ಕೇಳುತ್ತಾರೆ. ಆಗ ವೈದ್ಯನು ಅದು ಶಿವನ ಸಂಕಲ್ಪವನ್ನು ಅವಲಂಬಿಸಿದೆ ಎಂದು ಹೇಳುತ್ತಾರೆ. ಪ್ರಸ್ತುತ ಚಿತ್ರದಲ್ಲಿ ಶಿಶು ಬಸವನು ಕಣ್ಣನ್ನು ಮುಚ್ಚಿರುವಂತೆಯೂ, ಏನೂ ಅರಿಯದ

ಭಾವನೆಯನ್ನು ವ್ಯಕ್ತಪಡಿಸಿದಂತಿದೆ. ಮಂಚದ ಹಿಂದೆ ಮಾದಲಾಂಬಿಕೆಯು ಕಡು ನೀಲಿಬಣ್ಣದ ಸೀರೆಯನ್ನು ಧರಿಸಿ, ತನ್ನೆರಡೂ ಕೈಗಳನ್ನು ಚೆಲ್ಲುವುದರ ಮೂಲಕ ತನ್ನ ನೋವನ್ನು ವೈದ್ಯರಲ್ಲಿ ತೋಡಿಕೊಳ್ಳುವಂತೆ ಕಂಡುಬರುತ್ತಾಳೆ. ಮಾದರಸನು ಹಸಿರುಬಣ್ಣದ ಮೇಲುಹೊದಿಕೆಯನ್ನು ಧರಿಸಿ ವೈದ್ಯನನ್ನು ಪ್ರಶ್ನಿಸುವ ರೀತಿಯು ಸಹಜವಾಗಿ ಮೂಡಿಬಂದಿದೆ. ಕಾಮಿಕ್ಸ್ ರಚನಾಶೈಲಿಯನ್ನು ಇಲ್ಲಿನ ಚಿತ್ರದಲ್ಲಿ ಕಾಣಬಹುದಾಗಿದ್ದು ೧/೨ ದಷ್ಟು ಪ್ರಮಾಣದಲ್ಲಿ ಆಕೃತಿಗಳು ರಚನೆಗೊಂಡಿರುವುದರಿಂದ ಸಹಜವಾಗಿ ಮನೆಯ ಒಳಾವರಣವನ್ನು ಸಾಮೀಪ್ಯದ ನೆಲೆಯಲ್ಲಿ ಚಿತ್ರಿಸಲಾಗಿದೆ. ಆಕೃತಿಗಳಲ್ಲಿ ಕಡುವರ್ಣದ ರೇಖೆಗಳಿಂದ ನೆರಳನ್ನು ಸೃಷ್ಟಿಸಲಾಗಿದೆ.

೨.೨.೫. ಗುರುಗಳಿಂದ ಮಂತ್ರೋಪದೇಶ (ಕಾಮಿಕ್ಸ್ ಚಿತ್ರಕಥೆ)

ಮಗು ಬಸವನ ಜನನವಾದ ನಂತರ ಮಾದರಸ ಮತ್ತು ಮಾದಲಾಂಬಿಕೆಯರು ಜಾತವೇದ ಮುನಿಗಳನ್ನು ಮನೆಗೆ ಕರೆಸಿ ಮಾಂಸಪಿಂಡವು, ಮಂತ್ರಪಿಂಡವಾಗುವಂತೆ ಹರಸಬೇಕೆಂದು ಕೇಳಿಕೊಳ್ಳುತ್ತಾರೆ. ಆಗ ಮುನಿಗಳು ಮಗುವಿಗೆ ಮಂತ್ರೋಪದೇಶ ಮಾಡುವ ಸನ್ನಿವೇಶವನ್ನು ಪ್ರಸ್ತುತ ಚಿತ್ರವು ಒಳಗೊಂಡಿದೆ. ಮಂಚದ ಮೇಲೆ ಮಗು ಬಸವನು ಹಣೆಯಲ್ಲಿ ವಿಭೂತಿ ಧರಿಸಿ ಆಟವಾಡುತ್ತಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ವಿಶಾಲವಾದ ಮಂಚದ ಮೇಲೆ ಮಗು ಬಸವಣ್ಣನ ಕಿವಿಯಲ್ಲಿ ಜಾತವೇದಮುನಿಗಳು 'ಓಂ ನಮಃ ಶಿವಾಯ' ಎಂಬ ಗೌಪ್ಯ ಮಂತ್ರೋಪದೇಶವನ್ನು ಮಾಡುತ್ತಿರುವ ಕಲಾವಿದನ ಕಲ್ಪನೆ ಇಲ್ಲಿ ಸೊಗಸಾಗಿ ಮೂಡಿಬಂದಿದೆ. ಮಾದರಸನು ತಿಳಿಹಸಿರು ಬಣ್ಣದ ಮೇಲು ಹೊದಿಕೆಯನ್ನು ಹೊದ್ದಿದ್ದಾನೆ. ಅವನ ಮುಖವು ಗಂಭೀರವಾಗಿದೆ. ಅಲ್ಲಿಯೇ ಇರುವ ಪುಟ್ಟ ಬಾಲಕಿ ನಾಗಲಾಂಬಿಕೆಯು ಕೆಂಪು ಲಂಗ, ತಿಳಿಗೆಂಪು ಮೇಲುವಸ್ತ್ರ ಧರಿಸಿದ್ದು, ಮಂತ್ರೋಪದೇಶ ಮಾಡುವ ಸನ್ನಿವೇಶವನ್ನು ಕುತೂಹಲದಿಂದ ಮುನ್ನುಗ್ಗಿ ನೋಡುತ್ತಿರುವಂತೆಯೂ ಮಾದರಸ ಅವಳನ್ನು ಹಿಡಿದೆಳೆದು ನಿಲ್ಲಿಸಿರುವಂತೆಯೂ ಚಿತ್ರಣಗೊಂಡಿದೆ. ಮಾದಲಾಂಬಿಕೆಯು ತಲೆತುಂಬ ಸೆರಗನ್ನು ಹೊದ್ದು ಕಡುನೀಲಿ ಬಣ್ಣದ ಒಡಲನ್ನು ಹೊಂದಿದ ಹಳದಿ ವರ್ಣದ ಅಂಚಿನ ಸೀರೆಯನ್ನು ಧರಿಸಿ ಅಲ್ಲಿಯ ಕ್ರಿಯಾಚರಣೆಯನ್ನು ಏಕಚಿತ್ತದಿಂದ ಗಮನಿಸುತ್ತಿರುವಂತೆ ಕಲಾವಿದ ರಚಿಸಿದ್ದಾನೆ. ಜಾತವೇದ ಮುನಿಗಳು ತಮ್ಮ ಕಟ್ಟಿಗೆಯ ಪಾದರಕ್ಷೆಗಳನ್ನು ಬಾಗಿಲ ಬಳಿಯಲ್ಲಿಯೇ ಬಿಟ್ಟು ಬಂದಿರುವುದನ್ನು ಗಮನಿಸಬಹುದು. ಮನೆಯ ವಿಶಾಲವಾದ ಕೋಣೆಯಲ್ಲಿಯ ತೊಟ್ಟಿಲಿನ ಒಳಭಾಗವು ತಿಳಿ ಹಳದಿ ಬಣ್ಣದಿಂದ ಕೂಡಿದ್ದು, ಒಳಭಾಗವು ಕಪ್ಪು ವರ್ಣದಿಂದ ಅಲಂಕೃತಗೊಂಡಿದೆ.

ಪ್ರಸ್ತುತ ಚಿತ್ರವು ಅತ್ಯಂತ ಪ್ರಬುದ್ಧ ಸಂಯೋಜನೆಯಾಗಿದೆ. ಮನೆಯ ಒಳಾವರಣದಲ್ಲಿ ಅಗ್ರಹಾರದ ಆಡಳಿತಗಾರನ ವೈಭವವನ್ನು ಸೂಚಿಸುವ ವಿನ್ಯಾಸಗಳು ಇವೆ. ಮಂಚದ ಮೇಲೆ ಮಲಗಿರುವ ಬಸವ, ಅವನ ಕಿವಿಯಲ್ಲಿ ಮುನಿಗಳು ಷಟ್‌ಸ್ಥಲ ಮಂತ್ರ ಉಚ್ಚರಿಸುತ್ತಿರುವ, ಹಿನ್ನೆಲೆಯಲ್ಲಿ ಮಾದರಸ, ಮಾದಲಾಂಬಿಕೆ ಮತ್ತು ಅಕ್ಕನಾಗಮ್ಮನ ಆಕೃತಿಗಳು ನೈಜ ನೆಲೆಯಲ್ಲಿ ಚಿತ್ರಿತಗೊಂಡಿವೆ. ಕಡುವರ್ಣದ ರೇಖೆಗಳನ್ನು ಯಥೇಚ್ಛವಾಗಿ ಎಂದಿನಂತೆ ಆಕೃತಿಗಳಿಗೆ ದುಡಿಸಿಕೊಂಡಿರುವ ಹಾಗೂ ಒಳಾವರಣದಲ್ಲಿ ಏಕಪ್ರಕಾರ–ವಾಗಿರುವ ವರ್ಣಲೇಪನದೊಂದಿಗೆ ಈ ಕಲಾಕೃತಿ ಮಕ್ಕಳಿಗೆ ಅತ್ಯಂತ ಆಕರ್ಷಣೀಯವಾಗಿದೆ.

೨.೨.೬. ಬಾಲಕ ಬಸವಣ್ಣನಿಗೆ ಗುರುಗಳ ಆಶೀರ್ವಾದ

"ಸಾಮಾನ್ಯವಾಗಿ ನೋಡುಗನಲ್ಲಿ ಗುಣಾತ್ಮಕವಾದ ಹಾಗೂ ವಿಷಯದ ಜಾಗೃತೆಯನ್ನುಂಟು ಮಾಡುವ ದಿಸೆಯಲ್ಲಿ ಕಲಾವಿದ ಉದ್ದೇಶ ಪೂರ್ವಕವಾಗಿ ಮಾಡಿದವುಗಳೇ ಕಲೆಯಾಗಿ ರೂಪುತಾಳುತ್ತವೆ."[೨೪] ಕಲಾವಿದ ಬಸವರಾಜ ಮುಗಳಿಯವರು ಶರಣ ಭಕ್ತರಾಗಿದ್ದು, ಅವರು ಅಧಿಕವಾಗಿ ಬಸವೇಶ್ವರರ, ಶರಣ-ಶರಣೆಯರ ಕುರಿತಂತೆ ಚಿತ್ರಕಲಾಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ. ಪ್ರಸ್ತುತ ಚಿತ್ರವು ೪೮"x೩೬" ಅಳತೆಯಲ್ಲಿ ರಚಿಸಲಾಗಿದೆ. ಈ ಚಿತ್ರದಲ್ಲಿ ಮಗು ಬಸವನಿಗೆ ಜಾತವೇದ ಮುನಿಗಳು ಆಶೀರ್ವಾದವನ್ನು ಮಾಡುತ್ತಿರುವ ಸನ್ನಿವೇಶವನ್ನು ಕಾಣುತ್ತೇವೆ. ಬಸವಣ್ಣನ ತಾಯಿ ಮಾದಲಾಂಬಿಕೆ ಮತ್ತು ತಂದೆ ಮಾದರಸ, ಗುರುಗಳಾದ ಜಾತವೇದ ಮುನಿಗಳು ಚಿತ್ರದಲ್ಲಿ ಕಂಡುಬಂದರೂ ಪ್ರಮುಖ ಆಕರ್ಷಣೆಯಾಗಿ ಶಿಶು ಬಸವೇಶ್ವರನು ಕಂಡುಬರುತ್ತಾನೆ. ಮಗುವನ್ನು ಚಿತ್ರಿಸಲು ಬಳಸಿದ ಗಾಢವಾದ ಗುಲಾಬಿ ಬಣ್ಣ ಮತ್ತು ಜಾತವೇದಮುನಿಗಳು ಧರಿಸಿರುವ ಪಂಚೆ, ಮಾದರಸ ಧರಿಸಿರುವ ಮೇಲು ಹೊದಿಕೆಯ (ಶಲ್ಯ) ಬಣ್ಣವು ಒಂದೇ ಆಗಿರುವುದು ಕಂಡುಬರುತ್ತದೆ.

ಜಾತವೇದ ಮುನಿಗಳು ಕಾವಿಬಣ್ಣದ ಪಂಚೆಯನ್ನು ಧರಿಸಿ ಅದನ್ನೇ ಮೇಲು ಹೊದಿಕೆಯನ್ನಾಗಿ ಧರಿಸಿರುವುದರಿಂದ ಅವರ ಬಲಭಾಗದ ಶರೀರ ತೆರೆದು ಕಾಣುವಂತಿದೆ ಮತ್ತು ಕಪ್ಪು ಕೂದಲಿನ ಜಟೆ, ಗಡ್ಡಮೀಸೆಯನ್ನು ಹೊಂದಿರುವಂತೆ ಚಿತ್ರಿಸಲಾಗಿದೆ. ಎಡದ ಹಸ್ತವನ್ನು ತಮ್ಮ ತೊಡೆಯ ಮೇಲಿರಿಸಿ, ಬಲದ ಹಸ್ತದಿಂದ ಶಿಶು ಬಸವನಿಗೆ ಕರುಣಾಪೂರಿತ ಕೃಪಾಶೀರ್ವಾದದಿಂದ ಹರಸುತ್ತಿರುವುದನ್ನು ಕಾಣಬಹುದಾಗಿದೆ. ಮುನಿಗಳು ಇನ್ನೂ ಪ್ರಾಯದವರಂತೆ ಕಾಣುತ್ತಿರುವುದನ್ನು ಗಮನಿಸಬಹುದಾಗಿದೆ. ಮಾದರಸರು ಕಡುಹಸಿರು ಬಣ್ಣದ ದಡಿಯಿಂದ ಕೂಡಿರುವ ಬಿಳಿಪಂಚೆಯನ್ನು ಮಾತ್ರ ಧರಿಸಿದ್ದಾರೆ. ಹೆಗಲ ಮೇಲೆ ಕೆಂಪು ಮೇಲುವಸ್ತ್ರವನ್ನು ಮಾತ್ರ ಹೊದ್ದಿರುವುದು ಮತ್ತು ಜನಿವಾರವನ್ನು ಎದ್ದು ಕಾಣುವಂತೆ ಚಿತ್ರಿಸಿದ್ದು, ಬ್ರಾಹ್ಮಣ ಧರ್ಮ ಪರಂಪರೆಯನ್ನು ಎದ್ದುಕಾಣುವಂತೆ ಚಿತ್ರಿಸುವುದು ಕಲಾವಿದನ ಉದ್ದೇಶವಾಗಿರುವುದು ಸ್ಪಷ್ಟವಾಗಿದೆ.

ಅರೆನಿಮೀಲಿತ ನೇತ್ರದಿಂದ ಮಾದರಸನು ಕೃತಜ್ಞತಾ ಭಾವದಿಂದ ಹರಸುತ್ತಿರುವ ಗುರುವನ್ನು ನೋಡಿ ತೃಪ್ತಿಗೊಂಡಂತಹ ಭಾವನೆ ಇಲ್ಲಿ ವ್ಯಕ್ತವಾಗಿದೆ. ಮಾದಲಾಂಬಿಕೆಯು ಕಡು ನೀಲಿ ಬಣ್ಣದ ಸೀರೆಯನ್ನು ಧರಿಸಿ, ಕೈಗಳಲ್ಲಿ ಹಸಿರು ಬಣ್ಣದ ಬಳೆಗಳನ್ನು ಧರಿಸಿ, ಹಣೆಯಲ್ಲಿ ಕುಂಕುಮವನ್ನು ಧರಿಸಿ, ಓರೆಮುಖವನ್ನು ಮಾಡಿರುವಂತೆ ಚಿತ್ರಿಸಿರುವುದು ಗುರುಗಳ ಬಗೆಗಿನ ಶ್ರದ್ಧೆ ಮತ್ತು ಗೌರವಗಳು ಒಡೆದು ತೋರುವಂತಿವೆ. ಮುದ್ದಾದ ಮುಖ ಮತ್ತು ದೇಹವನ್ನು ಹೊಂದಿರುವಂತೆ ಶಿಶು ಬಸವನನ್ನು ಚಿತ್ರಿಸಲಾಗಿದೆ. ತಾಯಿಯ ಕಣ್ಣುಗಳಲ್ಲಿ ಶಿಶುವಿನ ಮೇಲೆ ಮಮತೆ, ಗುರುಗಳ ಮೇಲೆ ಭಕ್ತಿ ಗೌರವದ ಭಾವನೆಗಳನ್ನು ಗುರುತಿಸಬಹುದಾಗಿದೆ. ಕೋಣೆಯು ತೆಳುಹಸಿರು ಬಣ್ಣದ ಗೋಡೆಗಳಿಂದ ಅಲಂಕೃತವಾಗಿದ್ದು ದೀಪವನ್ನಿಡುವ ಒಂದು ಗೂಡು, ಕಿಟಕಿಯಲ್ಲಿ ಒಂದು ತುಂಬಿದ ತಂಬಿಗೆ, ಅದರ ಮೇಲೊಂದು

---

೨೪. ಚಿ. ಸು. ಕೃಷ್ಣಶೆಟ್ಟಿ : ಚಿತ್ರಚಿತ್ತ, ಪು-೫೮

ನೀರಿನ ಲೋಟವು ಮಲಗುವ ಕೋಣೆಯನ್ನು ನೆನಪಿಸುತ್ತಿದೆ. ಪ್ರಸ್ತುತ ಕಲಾಕೃತಿಯಲ್ಲಿ ಚಿತ್ರಿತವಾಗಿರುವ ಪಾತ್ರಗಳಾದ ಜಾತವೇದಮುನಿಗಳು ಮತ್ತು ಮಾದರಸರ ಚಿತ್ರಗಳ ಪ್ರಮಾಣ ಸಾಮಾನ್ಯ ವ್ಯಕ್ತಿಗಳ ಎತ್ತರಕ್ಕಿಂತ ತುಸು ಹೆಚ್ಚಾಗಿರುವುದು ವಿಶೇಷವೆನ್ನಿಸುತ್ತದೆ. ಮನೆಯ ಒಳಾಂಗಣವನ್ನು ಪ್ರಾಥಮಿಕ ವರ್ಣದಿಂದ ತೋರಿಸುವುದರಿಂದ ಕಲಾಕೃತಿ ವೈಭವಕ್ಕೆ ಮಂಕಾಗಿದೆ. ಆಕೃತಿಗಳ ಅಂಗ ರಚನೆಗಳಲ್ಲಿ ವ್ಯತ್ಯಾಸಗಳು ಕಂಡು ಬಂದಿರುವುದು ಆಕೃತಿಗಳಲ್ಲಿ ಸನ್ನಿವೇಶಕ್ಕೆ ಪೂರಕವಾದ ಭಾವಸ್ಫುರಣ ಈ ಚಿತ್ರದ ವಿಶೇಷತೆ. ಮಾದರಸ ಮತ್ತು ಮಾದಲಾಂಬಿಕೆಯಲ್ಲಿ ಶರಣ ಸೌಮ್ಯತೆಯ ಅಭಿವ್ಯಕ್ತಿ ಇಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬಂದಿದೆ. ಪ್ರಸ್ತುತ ಈ ಕೃತಿಯು ಬಸವ ಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ.

೨.೨.೭. ಗುರುವಿನ ಪಾದಕಮಲದಲ್ಲಿ ಶಿಶು ಬಸವ

"ಕಲಾಕೃತಿಯ ಮೂಲ ಅಥವಾ ಸಮಾನವಾದ ಸಾದೃಶ್ಯವನ್ನು ಕಂಡಾಗ ಅದು ರಸಾನುಭೂತಿ-ಯಾಗುತ್ತದೆ. ಆನಂದವನ್ನುಂಟು ಮಾಡುತ್ತದೆ."[೨೫] "ಚಿತ್ರದ ಪರಮಗುರಿಯೇ ಇದು."[೨೬] ಮೈಸೂರಿನ ಹಿರಿಯ ಕಲಾವಿದ ಎಂ. ವೀರಪ್ಪನವರು ಈ ಚಿತ್ರವನ್ನು ೧೨"x೧೮" ಅಳತೆಯಲ್ಲಿ ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ಮಗು ಬಸವೇಶ್ವರನಿಗೆ ಜಾತವೇದ ಮುನಿಗಳು ಆಶೀರ್ವಾದವನ್ನು ಮಾಡುತ್ತಿರುವ ಸನ್ನಿವೇಶವನ್ನು ಕಾಣುತ್ತೇವೆ. ಬಸವಣ್ಣನ ತಾಯಿ ಮಾದಲಾಂಬಿಕೆ ಮತ್ತು ತಂದೆ ಮಾದರಸ, ಗುರುಗಳಾದ ಜಾತವೇದ ಮುನಿಗಳು ಚಿತ್ರದಲ್ಲಿ ಕಂಡುಬಂದರೂ ಪ್ರಮುಖ ಆಕರ್ಷಣೆಯಾಗಿ ಶಿಶು ಬಸವೇಶ್ವರನು ಕಂಡುಬರುತ್ತಾನೆ. ಜಾತವೇದ ಮುನಿಗಳು ಕಾವಿಬಣ್ಣದ ಪಂಚೆಯನ್ನು ಧರಿಸಿ ಅದನ್ನೇ ಮೇಲು ಹೊದಿಕೆಯನ್ನಾಗಿ ಧರಿಸಿರುವುದರಿಂದ ಅವರ ಬಲಭಾಗದ ಶರೀರ ತೆರೆದು ಕಾಣುವಂತಿದೆ. ದೇಹದ ಮೇಲೆ ಧರಿಸಿರುವ ವಿಭೂತಿಯ ಪಟ್ಟಿಗಳು ಸ್ಪಷ್ಟವಾಗಿವೆ. ಬಿಳಿಕೂದಲಿನ ಜಟೆ ಮತ್ತು ಗಡ್ಡಮೀಸೆಯನ್ನು, ಕೊರಳಲ್ಲಿ ಮತ್ತು ಬಲಗೈಯಲ್ಲಿ ರುದ್ರಾಕ್ಷಿಗಳನ್ನು ಮಾಲೆಯಾಗಿ ಧರಿಸಿರುವುದು ಕಂಡುಬರುತ್ತದೆ. ಬಲದ ಹಸ್ತದಿಂದ ಶಿಶು ಬಸವೇಶನಿಗೆ ಕರುಣಾಪೂರಿತ ಕೃಪಾಶೀರ್ವಾದದಿಂದ ಹರಸುತ್ತಿರುವುದನ್ನು ಕಾಣಬಹುದಾಗಿದೆ.

ಮುನಿಗಳು ಈ ಚಿತ್ರದಲ್ಲಿ ವಯೋವೃದ್ಧರಾಗಿರುವಂತೆ ಕಾಣುತ್ತಿದ್ದಾರೆ. ಕಲಾವಿದ ಅವರ ಜ್ಞಾನಕ್ಕೆ ಮಾಗಿದ ಕಾಯವನ್ನು ಕಲ್ಪಿಸುವುದರಲ್ಲಿಯೇ ಸಾರ್ಥಕತೆಯನ್ನು ಪಡೆದಿರುವಂತೆ ಕಾಣುತ್ತದೆ. ಮಾದರಸರು ಹಳದಿ ಬಣ್ಣದ ದಡಿಯಿಂದ ಕೂಡಿರುವ ರೇಷ್ಮೆವಸ್ತ್ರವನ್ನು ಧರಿಸಿದ್ದಾರೆ. ವೈದಿಕ ಸಂಪ್ರದಾಯದಂತೆ ತಲೆಯ ಮುಂಭಾಗವನ್ನು ಬೋಳಾಗಿಸಿಕೊಂಡು, ಕಪ್ಪು ಕೂದಲನ್ನೊಳಗೊಂಡ ಜಟೆಯನ್ನು ಬಿಟ್ಟುಕೊಳ್ಳಲಾಗಿದೆ. ಎರಡೂ ಕೈಗಳನ್ನು ಮುಗಿದುಕೊಂಡು ತಲೆಯನ್ನು ತುಸು ಬಾಗಿಸಿ ನಿಂತಿರುವುದು ಕಂಡುಬರುತ್ತದೆ. ಚೂಪು ಮೀಸೆಯನ್ನು ಬಿಟ್ಟಿರುವುದು ರಾಜಮನೆತನದವರ ಸಂಕೇತವೆಂಬಂತೆ ತೋರುತ್ತದೆ. ಮೇಲು ಹೊದಿಕೆಯ ನಿರಿಗೆಗಳನ್ನು ಕಲಾವಿದ ತನ್ನ ಕುಶಲತೆಯಿಂದ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವುದು ಗಮನಾರ್ಹವಾಗಿದೆ.

---

೨೫. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪು-೩೬

೨೬. ಡಾ. ಜಿ. ಎಸ್. ಭೂಸಗೊಂಡ : ಚಿತ್ರಕಲಾವಿದ ಚಂದ್ರವರ್ಮ ಬಿ.ಆರ್. ಕೋಟ್ಯಾಳಕರ ಒಂದು ಅಧ್ಯಯನ (ಅಪ್ರ.ಡಿ.ಲಿಟ್.ಮ.ಪ್ರ), ಪು-೧೩೬

ಮಾದಲಾಂಬಿಕೆಯು ಹಳದಿ ಬಣ್ಣದ ರೇಷ್ಮೆ ಸೀರೆಯನ್ನು ಧರಿಸಿ, ತನ್ನ ಎರಡೂ ಕೈಗಳಿಂದ ಮಗು ಬಸವೇಶನನ್ನು ಹಿಡಿದುಕೊಂಡು ಗುರುಗಳ ಪಾದಾರವಿಂದಗಳಿಗೆ ಸಮರ್ಪಿಸಿರುವುದು ಮತ್ತು ಆಕೆಯ ದೃಷ್ಟಿ ಆ ಮಗುವಿನ ಮೇಲೆಯೇ ನೆಟ್ಟಿರುವುದನ್ನು ಕಾಣಬಹುದು. ತಲೆಯ ಮೇಲಿನಿಂದ ಪಾರದರ್ಶಕವಾದ ಮೇಲುಹೊದಿಕೆಯನ್ನು ಇಳಿಯಬಿಟ್ಟಿರುವುದು ಮಾದಲಾಂಬಿಕೆಯು ರಾಜಮನೆತನಕ್ಕೆ ಸೇರಿದವಳೆಂಬುದನ್ನು ತೋರಿಸುವ ಇಚ್ಛೆ ಕಲಾವಿದನಿಗೆ ಇದ್ದಂತೆ ತೋರುತ್ತದೆ. ಈ ಚಿತ್ರದಲ್ಲಿ ಶಿಶು ಬಸವೇಶನನ್ನು ಹೊರತುಪಡಿಸಿ ಉಳಿದೆಲ್ಲ ಪಾತ್ರಗಳ ಮುಖವನ್ನು ಪಾರ್ಶ್ವನೋಟದಿಂದ ಚಿತ್ರಿಸಿರುವುದು ವಿಶೇಷವಾಗಿದೆ. ಪಾರ್ಶ್ವನೋಟದಲ್ಲಿ ಚಿತ್ರಿತವಾಗಿದ್ದರೂ, ಅವರ ಹಣೆಗಳಲ್ಲಿ ಧರಿಸಿರುವ ವಿಭೂತಿ, ಗಡ್ಡ ಮೀಸೆಗಳು, ಮಾದಲಾಂಬಿಕೆಯ ಹಣೆಯಲ್ಲಿ ಧರಿಸಿರುವ ಕುಂಕುಮ ಇವೆಲ್ಲವು ಬಹಳ ಅಚ್ಚುಕಟ್ಟಾಗಿ ಕಲಾವಿದನ ಕುಂಚದಿಂದ ಮೂಡಿಬಂದಿವೆ. ಚಿತ್ರದಲ್ಲಿ ಕಲ್ಲಿನ ಕಂಬವು ಗೋಚರಿಸುವುದರಿಂದ ಹಾಗೂ ಹಾಸಿಗೆ ಮತ್ತು ದಿಂಬನ್ನು ನೀಲಿಬಣ್ಣದಿಂದ ಚಿತ್ರಿಸಿರುವುದರಿಂದ ಒಳಾಂಗಣದಲ್ಲಿ ರಚಿತವಾಗಿರುವುದು ಸ್ಪಷ್ಟವಾಗಿದೆ. ಈ ಚಿತ್ರವು ರಾಜಮನೆತನದ ವೈಭವದ ಪ್ರತೀಕವಾಗಿದೆ. ಕೋಣೆಯ ಒಳಗೋಡೆಯಲ್ಲಿ ನೆರಳು-ಬೆಳಕಿನ ಸಂಭ್ರಮವನ್ನು ಗುರುತಿಸಬಹುದು.

ಹಿಂದಿನ ಚಿತ್ರದಲ್ಲಿ ಮಾದಲಾಂಬಿಕೆಯನ್ನು ಶರಣಸಂಪನ್ನೆಯಂತೆ ತೋರಿಸಿದರೆ ಇಲ್ಲಿ ಅರಸೊತ್ತಿಗೆಯ ವೈಭೋಗದ ಪ್ರತೀಕವಾಗಿ ಮಾದಲಾಂಬಿಕೆ ಗೋಚರವಾದರೆ, ಹಿನ್ನೆಲೆಯಲ್ಲಿ ಅರಸೊತ್ತಿಗೆಯ ಸಂಕೇತಗಳೇನೂ ಕಂಡುಬರುವುದಿಲ್ಲ. ಬಲಪಾರ್ಶ್ವದಲ್ಲಿ ಕಂಬದ ವಿನ್ಯಾಸವಷ್ಟೇ ಅರಸೊತ್ತಿಗೆ ಸೂಚಕವಾಗಬಹುದು. ಹಿಂದಿನ ಕಾಮಿಕ್ಸ್ ಚಿತ್ರಗಳಲ್ಲಿ ಅಕ್ಕನಾಗಮ್ಮನ ಇರುವಿಕೆ ಇದ್ದರೆ ಇಲ್ಲಿ ಇಲ್ಲ. ಎಂದಿನ ರಮಣೀಯ ವರ್ಣಮೇಳ, ಆಕೃತಿಗಳಲ್ಲಿ ಭಕ್ತಿ ಭಾವಸ್ಫುರಣ ಪ್ರಕಟಗೊಂಡಿದೆ.

೨..೨.೮. ಕಣ್ತೆರೆದು ಆಡುವ ಮಗುವನ್ನು ಕಂಡು ಸಂತಸಗೊಂಡ ತಂದೆ-ತಾಯಿ (ಕಾಮಿಕ್ಸ್ ಚಿತ್ರಕಥೆ)-೧

ಮಗು ಬಸವನು ಹುಟ್ಟಿದ ಕೂಡಲೇ ಎಲ್ಲರಂತೆ ಇಲ್ಲದಿರುವುದನ್ನು ಕಾವ್ಯಗಳು ಚಿತ್ರಿಸುತ್ತವೆ. ಅಂತೆಯೇ ಈ ಚಿತ್ರದಲ್ಲಿ ಮಗುವು ಕಣ್ಣು ತೆರೆಯದೆ ಇದ್ದಾಗ ಆತನ ತಂದೆ-ತಾಯಿಗಳು ಚಿಂತಾಕ್ರಾಂತರಾಗಿರುತ್ತಾರೆ. ಆ ವೇಳೆಯಲ್ಲಿ ಜಾತವೇದ ಮುನಿಗಳು ಅಲ್ಲಿಗೆ ಬಂದು ತಮ್ಮ ದಿವ್ಯ ಜ್ಞಾನ ಮತ್ತು ಸ್ಪರ್ಶದಿಂದ ಆ ಶಿಶು ಬಸವೇಶನ ಕಣ್ಣನ್ನು ತೆರೆಸುತ್ತಾರೆ. ಆ ಸಂದರ್ಭದಲ್ಲಿ ರಚಿತವಾದ ಚಿತ್ರವಿದಾಗಿದೆ. ಕಲಾವಿದ ಇಲ್ಲಿ ತುಂಬ ಉತ್ಸಾಹದಿಂದ ಚಿತ್ರವನ್ನು ರಚಿಸಿರುವುದು ಕಂಡುಬರುತ್ತದೆ. ಶಿಶು ಬಸವೇಶನ ಹಣೆಯಲ್ಲಿ ವಿಭೂತಿ ರಾರಾಜಿಸುತ್ತಿದ್ದು, ವಿಶಿಷ್ಟ ಭಂಗಿಯಲ್ಲಿ ಮಗುವು ಮಲಗಿರುವಂತೆ ಚಿತ್ರಿಸಲಾಗಿದೆ. ಅದರ ತಲೆಯ ಸುತ್ತ ಪ್ರಭಾವಳಿಯನ್ನು ಕಲ್ಪಿಸಲಾಗಿದೆ. ಮಗುವಿನ ಪಕ್ಕದಲ್ಲಿ ಕುಳಿತ ಜಾತವೇದ ಮುನಿಗಳು ವಯೋವೃದ್ಧರಾಗಿರುವಂತೆ ಕಾಣಿಸುತ್ತಾರೆ. ಜಟಾಶಿಖೆಯನ್ನು, ಕೊರಳಲ್ಲಿ ಕೈಗಳಲ್ಲಿ ರುದ್ರಾಕ್ಷಿ ಮಾಲೆಗಳನ್ನು ಧರಿಸಿರುವ ಅವರ ನೋಟವು ಮಗುವಿನತ್ತ ಇರದೆ ಧ್ಯಾನದ ದಿಕ್ಕಿನತ್ತ ಮುಖ ಮಾಡಿದಂತಿದೆ. ಇಂತಹ ಅಚ್ಚರಿಯ ಸಂಗತಿಯನ್ನು ಬಸವಣ್ಣನ ತಂದೆ ಮಾದರಸ ಮತ್ತು ತಾಯಿ

ಮಾದಲಾಂಬಿಕೆ, ಬಸವಣ್ಣನ ಅಕ್ಕನಾದ ನಾಗಮ್ಮ ಇವರೆಲ್ಲರೂ ಹರ್ಷಚಿತ್ತದಿಂದ ಮಗುವನ್ನು ನೋಡುತ್ತಿರುವಂತೆ ಚಿತ್ರಿತವಾಗಿದೆ. ಮಾದಲಾಂಬಿಕೆಯು ನೀಲಿಬಣ್ಣದ ಸೀರೆಯನ್ನು ಧರಿಸಿ ಎದ್ದುಕಾಣುವ ಹಳದಿಬಣ್ಣದ ಸೆರಗನ್ನು ಹೊಂದಿರುವದು ಮತ್ತು ಮೂಗಿನಲ್ಲಿ ಒಡೆದು ತೋರುವ ನತ್ತನ್ನು ಧರಿಸಿರುವುದು ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಕಪ್ಪು ಬಣ್ಣದ ರೇಖೆಗಳೊಂದಿಗೆ ಹಿತಮಿತವಾದ ನೀಲಿ, ಹಳದಿ, ಹಸಿರು, ಮತ್ತು ಕಾವಿ ಬಣ್ಣಗಳ ಸಂಯೋಜನೆ ಇಲ್ಲಿದೆ. ಇಡೀ ಈ ದೃಶ್ಯ ಒಳಾಂಗಣದಲ್ಲಿ ನಿರ್ಮಿತವಾಗಿದೆ. ಇಲ್ಲಿ ಕಲಾವಿದ ಮಿತವಾದ ಬಣ್ಣಗಳ ಬಳಕೆಯನ್ನು ಮಾಡಿರುವದು ಕಂಡು ಬರುತ್ತದೆ. ಹಿಂದಿನ ಕಾಮಿಕ್ಸ್ ರಚನೆಯ ಶೈಲಿಯ ಚಿತ್ರವಿದು. ಕಪ್ಪು ಶಾಯಿಯ ರೇಖೆಗಳೊಂದಿಗೆ ಆಕೃತಿಗಳನ್ನು ರಚಿಸಿರುವ ಕಲಾವಿದರು ಅದೇ ರೇಖೆಗಳೊಂದಿಗೆ ಆಕೃತಿಗಳಲ್ಲಿ ನೆರಳಿನ ಸ್ಪರ್ಶ ನೀಡಿದ್ದಾರೆ. ತೆಳುವಾದ ವರ್ಣಮೇಳದೊಂದಿಗೆ ಪ್ರಸ್ತುತ ಸನ್ನಿವೇಶಕ್ಕೆ ಪೂರಕವಾಗಿ ಆಕೃತಿಗಳಲ್ಲಿ ಸಂಭ್ರಮಾತ್ಮಕ ಭಾವ ವ್ಯಕ್ತಗೊಂಡಿದೆ. ಹಿಂದಿನ ಎಲ್ಲ ಚಿತ್ರಗಳಿಗೂ ಆಂತರಿಕ ಸಂಬಂಧವನ್ನು ಮುಂದುವರೆಸಿಕೊಂಡು (ಕಾಮಿಕ್ಸ್‌ಗಳಲ್ಲಿ ಅದು ಅನಿವಾರ್ಯವೂ ಹೌದು) ಬಂದಿರುವ ಇಲ್ಲಿನ ವಿನ್ಯಾಸ-ಆಕೃತಿಗಳು ಸಾಮೀಪ್ಯದ ನೆಲೆಯಲ್ಲಿ ಚಿತ್ರಿತಗೊಂಡಿದ್ದು, ಸ್ಪಷ್ಟವಾಗಿ ನಿರೂಪಿತಗೊಂಡಿವೆ.

ಕಣ್ತೆರೆದು ಆಡುವ ಮಗುವನ್ನು ಕಂಡು ಸಂತಸಗೊಂಡ ತಂದೆ-ತಾಯಿ-೨

ಪ್ರೇರಣೆಗೊಳಗೊಂಡ ಯಾವುದೇ ಕಲಾವಿದ ತಾನು ಚಿತ್ರಿಸುವ ಕಲಾಕೃತಿಯ ಪ್ರತಿಯೊಂದು ಹಂತ ಮತ್ತು ಆ ಚಿತ್ರದ ವಿಷಯಗಳ ಕುರಿತು ಅತ್ಯಂತ ಕಾಳಜಿಯನ್ನು ವಹಿಸುವ ಪ್ರಕ್ರಿಯೆ ಅವರು ರಚಿಸಿರುವ ಕಲಾಕೃತಿಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಕಲಾವಿದ ಬಸವರಾಜ ಮುಗಳಿಯವರು ೨೦೦೭ರಲ್ಲಿ ಈ ಕಲಾಕೃತಿಯನ್ನು ೪೮"x೩೬" ಅಳತೆಯ, ತೈಲವರ್ಣದ (ಎನಾಮೆಲ್) ಮಾಧ್ಯಮದಲ್ಲಿ ರಚಿಸಿದ್ದಾರೆ. ಪ್ರಸ್ತುತ ಈ ಕೃತಿಯು ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ. ಜಾತವೇದ ಮುನಿಗಳು ಇಲ್ಲಿ ಶಿಶು ಬಸವನಿಗೆ ಅನುಗ್ರಹ ಮಾಡುತ್ತಿರುವುದು ಕಂಡುಬರುತ್ತದೆ. ಪ್ರಸ್ತುತ ಚಿತ್ರದ ಸಂಯೋಜನೆ ಜಲವರ್ಣಮಾಧ್ಯಮದ್ದು. ಗಾಢ ವರ್ಣಗಳ ಬಳಕೆಯಿಲ್ಲಿದೆ. ಗುರುಗಳಾದ ಜಾತವೇದ ಮುನಿಗಳು ಬಾಲಬಸವ ಮಲಗಿದ ಮಂಚದ ಮೇಲೆಯೇ ಆಸೀನರಾಗಿದ್ದು, ಕಾವಿಬಣ್ಣದ ಪಂಚೆಯನ್ನು ಧರಿಸಿದ್ದಾರೆ. ಕೊರಳು, ಕೈಗಳಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿ, ಬಿಳಿ ಬಣ್ಣದ ಕೂದಲುಗಳಿಂದ ಕೂಡಿದ ಗಡ್ಡ-ಮೀಸೆ ಮತ್ತು ಜಟೆಯನ್ನು ಹೊಂದಿರುವಂತೆ ಇಲ್ಲಿ ರಚಿಸಲಾಗಿದೆ. ಅವರು ತಮ್ಮ ಬಲದ ಹಸ್ತವನ್ನು ಮೇಲೆತ್ತಿ ಮಂಚದ ಮೇಲೆ ಮಲಗಿರುವ ಶಿಶು ಬಸವನಿಗೆ ಹರಸುತ್ತಿರುವಂತೆ ಕಾಣಿಸುತ್ತದೆ. ಶಿಶು ಬಸವನು ಹಳದಿ ಮತ್ತು ಬಿಳಿಬಣ್ಣ ಮಿಶ್ರಣದಿಂದ ಕೂಡಿದ ಹಾಸುಗೆಯ ಮೇಲೆ ಪವಡಿಸಿದ್ದಾನೆ. ಎಡಗಾಲನ್ನು ಅರ್ಧ ಮಡಿಚಿದ್ದು ಗುಲಾಬಿ ಬಣ್ಣದ ವಸ್ತ್ರವನ್ನು ಧರಿಸಿರುವಂತೆ ಚಿತ್ರಿಸಲಾಗಿದೆ.

ಮಗುವಿನ ಸುತ್ತಲೂ ಬಿಳಿಯ ವರ್ಣದ ಪ್ರಭಾವಳಿಯಿದೆ. ಮಗುವಿನ ಮುಖವು ಲವಲವಿಕೆಯಿಂದ ಕೂಡಿದ್ದು ತೇಜೋಮಯವಾಗಿದೆ. ಎಡಗಣ್ಣು ಸ್ಪಷ್ಟವಾಗಿ ತೆರೆದಿರುವಂತಿದ್ದು ಅದು ತನ್ನ ತಂದೆ-ತಾಯಿ ಮತ್ತು ಅಕ್ಕನಾಗಮ್ಮನನ್ನು ದಿಟ್ಟಿಸಿ ನೋಡುವಂತಿದೆ. ಮಾದಲಾಂಬಿಕೆ ಶಿಶುವಿನತ್ತ ಓರೆನೋಟವನ್ನು ಬೀರಿದ್ದಾಳೆ. ಮಾದರಸ ತಲೆಯ ಮೇಲೆ ತುಂಬುಗೂದಲನ್ನು ಇಳಿಯಬಿಟ್ಟಿದ್ದಾನೆ. ಮುಖದಲ್ಲಿ ವಿಭೂತಿ

ಮತ್ತು ಅದರ ಮಧ್ಯದಲ್ಲಿ ಕೆಂಪುಬಣ್ಣದ ನಾಮವನ್ನು ಎಳೆದುಕೊಂಡಿದ್ದಾನೆ. ಬಹುಶಃ ಅದು ತಾನು ಬ್ರಾಹ್ಮಣ ಜಾತಿಯವನೆಂಬುದನ್ನು ಸೂಚಿಸುವುದಕ್ಕೆ. ಮಾದಲಾಂಬಿಕೆಯ ಮುಖದಲ್ಲಿ ದೈವೀಕಳೆಯ ಜೊತೆಗೆ ಕುತೂಹಲವೇ ಎದ್ದು ಕಾಣುವಂತಿದೆ. ಓರೆನೋಟದ ಮುಖ ಭಂಗಿಯಲ್ಲಿ ಕಲಾವಿದ ಎಲ್ಲವನ್ನೂ ಹೇಳಲು ಪ್ರಯತ್ನಿಸಿದ್ದಾನೆ. ನಾಗಲಾಂಬಿಕೆಯು ಮಗುವನ್ನು ಕುತೂಹಲದಿಂದ ನೋಡುತ್ತಿದ್ದಾಳೆ. ಗಾಢವಾದ ಹಸಿರು, ಮತ್ತು ತೆಳುನೀಲಿ ಬಣ್ಣಗಳು, ಗಾಢವಾದ ಕಾವಿಯ ಬಣ್ಣಗಳನ್ನು ಪ್ರಸ್ತುತ ಚಿತ್ರದಲ್ಲಿ ಕಲಾವಿದ ಬಳಕೆ ಮಾಡಿದ್ದಾನೆ. ಈ ಚಿತ್ರದಲ್ಲಿ ಬಂದಿರುವ ಎಲ್ಲ ವ್ಯಕ್ತಿಗಳ ಮುಖದಲ್ಲಿ ಕಣ್ಣುಗಳ ಹೊಳಪಿನ ಕಾಂತಿಯಿದೆ. ಆದರೆ ಆ ಕಾಂತಿಯುತ ದೃಷ್ಟಿ ಎಲ್ಲಿ ನೆಟ್ಟಿದೆ ಎಂಬುದು ನೋಡುಗನಿಗೆ ಬಿಟ್ಟಿದ್ದು. ಸ್ಥಳದ ಆವರಣವು ಇತರ ಚಿತ್ರಗಳಲ್ಲಿರುವಂತೆ ಅರಮನೆಯ ಆವರಣವಾಗಿರದೆ ಸಾಮಾನ್ಯವಾದ ಮಲಗುವ ಕೋಣೆಯನ್ನು ನೆನಪಿಸುವಂತಿದೆ. ಮಾದರಸ ಮತ್ತು ಮಾದಲಾಂಬಿಕೆಯರು ಧರಿಸಿದ ಉಡುಪುಗಳು ಅವರು ವೈದಿಕ ಮನೆತನದ ಸಂಪ್ರದಾಯಸ್ಥ ಕುಟುಂಬದವರೆಂಬುದನ್ನು ನೆನಪಿಸುವಂತೆ ಕಲಾವಿದ ಚಿತ್ರಿಸಿದ್ದಾನೆ. ಪ್ರಸ್ತುತ ಚಿತ್ರ ಗಂಭೀರ ನೆಲೆಯಲ್ಲಿ ಅವಕಾಶವನ್ನು ಪಡೆಯದಿದ್ದರೂ ಬಸವ ಅನುಯಾಯಿಗಳಿಗೆ ಸಂಭ್ರಮಾತ್ಮಕ ಪ್ರತಿಕ್ರಿಯೆ ನೀಡುತ್ತದೆ. ಯಥಾದರ್ಶನದ ಅಸ್ಪಷ್ಟ ನಿರೂಪಣೆಯೊಂದಿಗೆ ರಚಿತವಾಗಿರುವ ಈ ಚಿತ್ರದ ಒಳಾಂಗಣದ ವಿನ್ಯಾಸದಲ್ಲಿ ಒಂದು ಮರಳಿನಂತಹ ಮೈವಳಿಕೆಯನ್ನು ಸೃಷ್ಟಿಸಲಾಗಿದೆ. ಅರಸೊತ್ತಿಗೆಯ ವೈಭವ ಇಲ್ಲಿ ಗೌಣವಾಗಿದ್ದರೂ ಶರಣ ಸಂಪನ್ನ ವಾತಾವರಣವನ್ನು ಸೂಚಿಸುತ್ತದೆ ಈ ಚಿತ್ರ. ಪ್ರತಿಯೊಂದು ಆಕೃತಿಯ ದೃಷ್ಟಿ ಚಿತ್ರದ ಉದ್ದೇಶಕ್ಕೆ ಪೂರಕವಾಗಿಲ್ಲವಾದರೂ ಜೀವಚೈತನ್ಯವಿದೆ.

೨.೨.೯. ಶಿಶು ಬಸವನನ್ನು ಆಶೀರ್ವದಿಸುತ್ತಿರುವ ಗುರುಗಳು–೧

"ಅವತಾರದ ಪುರುಷರು ಮನುಕುಲದ ಮಧ್ಯದಲ್ಲಿಯೇ ಹುಟ್ಟಿಬಂದವರು ಸಾಧನೆಯಿಂದಾಗಿ ದಿವ್ಯಚೇತನವಾಗಿ ಬೆಳದು ನಿಂತವರು"[೨೬] ಅಂತಹ ಮಹಾನುಭಾವರಲ್ಲಿ ಬಸವೇಶ್ವರರು ಒಬ್ಬರು. ಈ ಕೃತಿಯನ್ನು ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ.

ಈ ಚಿತ್ರದಲ್ಲಿ ಜಾತವೇದ ಮುನಿಗಳು ಶಿಶು ಬಸವನಿಗೆ ಅನುಗ್ರಹ ಮಾಡುತ್ತಿರುವುದು ಕಂಡುಬರುತ್ತದೆ. ಪ್ರಸ್ತುತ ಚಿತ್ರದ ಸಂಯೋಜನೆ ನೈಜಚಿತ್ರಗಳ ಗುಂಪಿಗೆ ಸೇರುತ್ತದೆ. ಗಾಢ ವರ್ಣಗಳನ್ನು ಬಳಸಲಾಗಿದೆ. ಗುರುಗಳಾದ ಜಾತವೇದಮುನಿಗಳು ಸಿಂಹಾಸನದ ಮೇಲೆ ಕುಳಿತಿದ್ದು ಕಾವಿಬಣ್ಣದ ಪಂಚೆಯನ್ನು ಧರಿಸಿದ್ದಾರೆ. ಕೊರಳು, ಕೈಗಳಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿ, ಬಿಳಿಬಣ್ಣದ ಕೂದಲುಗಳಿಂದ ಕೂಡಿದ ಗಡ್ಡ–ಮೀಸೆ ಮತ್ತು ಜಟೆಯನ್ನು ಹೊಂದಿರುವಂತೆ ಇಲ್ಲಿ ರಚಿಸಲಾಗಿದೆ. ಅವರ ತಲೆಯ ಸುತ್ತಲೂ ಪ್ರಭಾವಳಿಯಿದೆ. ಅವರು ತಮ್ಮ ಬಲದ ಹಸ್ತವನ್ನು ಮೇಲೆತ್ತಿ ಮಂಚದ ಮೇಲೆ ಮಲಗಿರುವ ಶಿಶು ಬಸವನಿಗೆ ಹರಸುತ್ತಿರುವಂತೆ ಕಾಣಿಸುತ್ತದೆ. ಶಿಶು ಬಸವನು ಸಹ ರೇಷ್ಮೆ ವಸ್ತ್ರದ ನೀಲಿಬಣ್ಣದಿಂದ

೨೬ ಡಾ. ಎಂ. ಎಂ. ಪಡಶೆಟ್ಟಿ : ತಿಂಥಣಿ ಮೋನಪ್ಪಯ್ಯ ಒಂದು ಅಧ್ಯಯನ, ಪು–೦೧

ಕೂಡಿದ ಹಾಸುಗೆಯ ಮೇಲೆ ಪವಡಿಸಿದ್ದಾನೆ. ಎಡಗಾಲನ್ನು ಅರ್ಧ ಮಡಿಚಿ ಅದರ ಮೇಲೆ ಬಲಗಾಲನ್ನು ನೇರವಾಗಿರಿಸಿದಂತೆ ಮತ್ತು ಓರೆ ಭಂಗಿಯಲ್ಲಿ ಮಲಗಿರುವಂತೆ ತನ್ನ ಬಲದ ಹಸ್ತವನ್ನು ಎದೆಯ ಮೇಲಿರಿಸಿರುವಂತೆ ರಚಿಸಲಾಗಿದೆ. ಬಹುಶಃ ತನ್ನ ಬಲದ ಹಸ್ತ ತನ್ನ ಎದೆಯ ಮೇಲೆ ಇರಿಸಿರುವುದು ಕಲಾವಿದ ಸಾಂಕೇತಿಕವಾಗಿ ಏನನ್ನೋ ಹೇಳಲು ಪ್ರಯತ್ನಿಸಿರುವಂತಿದೆ. ಮಗುವಿನ ಸುತ್ತಲೂ ಬಿಳಿಯ ವರ್ಣದ ಪ್ರಭಾವಳಿಯಿದೆ. ಮಗುವಿನ ಮುಖವು ಸ್ನಿಗ್ಧವಾಗಿದ್ದು, ತುಂಬ ಶಾಂತ ಮತ್ತು ಗಂಭೀರವಾಗಿರುವಂತೆ ರಚಿಸಲಾಗಿದೆ. ಮಾದರಸ ಮತ್ತು ಮಾದಲಾಂಬಿಕೆಯರು ಇಬ್ಬರೂ ತಮ್ಮ ಎರಡೂ ಕೈಗಳನ್ನು ಮುಗಿದು ಧನ್ಯತಾ ಭಾವವನ್ನು ಪ್ರಕಟಪಡಿಸುತ್ತಿದ್ದಾರೆ. ಮಾದಲಾಂಬಿಕೆಯ ಮುಖದಲ್ಲಿ ದೈವೀಕಳೆ ತಾಂಡವವಾಡುತ್ತಿದೆ. ಮಾದರಸನ ಮುಖದಲ್ಲಿ ಗಂಭೀರತೆಯಿಂದ ಕೂಡಿದ ಧನ್ಯತಾ ಭಾವ ಎದ್ದು ತೋರುತ್ತಿದೆ. ಗಾಢವಾದ ಹಸಿರು, ಕಂದು, ಬಿಳಿ ಬಣ್ಣಗಳು ಇಲ್ಲಿ ಬಳಕೆಯಾಗಿವೆ. ಮಾದಲಾಂಬಿಕೆಯ ಪಕ್ಕದಲ್ಲಿ ಅಕ್ಕನಾಗಮ್ಮ ತಾಯಿಗೆ ಒರಗಿಕೊಂಡಂತೆ ನಿಂತಿರುವ ಅವಳು ತನ್ನ ತಮ್ಮನಾದ ಬಸವೇಶನ ಕಡೆಗೆ ದೃಷ್ಟಿಯನ್ನಿಟ್ಟಿದ್ದಾಳೆ. ಅವಳ ಮುಖದಲ್ಲಿ ಮಗುವನ್ನು ಅತ್ಯಂತ ಕುತೂಹಲದಿಂದ ಗಮನಿಸುವ ಭಾವನೆ ವ್ಯಕ್ತವಾಗಿದೆ. ಇಡಿಯ ಚಿತ್ರವು ಅರಮನೆಯ ಒಂದು ಕೋಣೆಯಲ್ಲಿ ನಡೆಯುತ್ತಿರುವ ಸಂಗತಿಯೆಂಬುದನ್ನು ಅಲ್ಲಿರುವ ಕಂಭಗಳು, ಭಿತ್ತಿಗಳು, ವಸ್ತ್ರಗಳು ಸಾರಿ ಹೇಳುತ್ತಿವೆ. ಈ ಚಿತ್ರದಲ್ಲಿ ತಿಳಿನೀಲಿ ವರ್ಣವನ್ನು ಪ್ರಮುಖವಾಗಿ ಕಲಾವಿದ ಬಳಸಿರುವುದು ಕಂಡುಬರುತ್ತದೆ.

ಪ್ರಸ್ತುತ ಚಿತ್ರವು ಅರಸೊತ್ತಿಗೆಯ ಪ್ರತೀಕವಾಗಿದೆ. ಅರಮನೆಯ ವೈಭವವನ್ನು ಪ್ರತಿನಿಧಿಸುವ ಹಿನ್ನೆಲೆಯ ವಿನ್ಯಾಸ ಅವಾಸ್ತವ. ಮುನ್ನೆಲೆಯಲ್ಲಿ ಕಾಣಬರುವ ಆಕೃತಿಗಳಿಗೆ ಹಿನ್ನೆಲೆಯ ವರ್ಣವಿನ್ಯಾಸ ಅನಿವಾರ್ಯ. ಶರಣಸಂಪನ್ನವಾದ ವೇಷಭೂಷಣ ಅರಸೊತ್ತಿಗೆಯವರಲ್ಲಿ ಕಂಡುಬರುತ್ತದೆ. ಎಂದಿನಂತೆ ಜಾತವೇದ ಮುನಿಗಳಲ್ಲಿ ಸನ್ಯಾಸತ್ವದ ಭಾವ ಸ್ಪಷ್ಟ. ಇದಕ್ಕೆ ಪೂರಕವಾಗಿ ಅರಸೊತ್ತಿಗೆಯ ಸದಸ್ಯರಲ್ಲಿ ಬಸವ ಕಣ್ತೆರೆದ ಸಂಭ್ರಮದಲ್ಲಿ ಮುನಿಗಳಲ್ಲಿ ವಿನೀತಭಾವದಿಂದ ಭಕ್ತಿ ಸಮರ್ಪಣೆ. ಸಂಯೋಜನೆಯ ನೆಲೆಯಿಂದ ಇದೊಂದು ಉತ್ತಮ ವಿನ್ಯಾಸ. ಬಲಪಾರ್ಶ್ವದಲ್ಲಿ ಮುನಿಗಳು, ಮಧ್ಯಭಾಗದಲ್ಲಿ ಬಾಲಬಸವ, ಎಡಪಾರ್ಶ್ವದಲ್ಲಿ ಮಾದರಸನ ಕುಟುಂಬ. ಹೀಗೆ ಒಟ್ಟು ಸ್ಥಳಾವಕಾಶವನ್ನು ಸಮರ್ಥವಾಗಿ ವಿಂಗಡಿಸಿಕೊಳ್ಳುವ ಪ್ರಣೀತ ಕುಶಲತೆಗೆ ಈ ಕೃತಿ ಸಾಕ್ಷಿ.

ಶಿಶು ಬಸವನನ್ನು ಆಶೀರ್ವದಿಸುತ್ತಿರುವ ಗುರುಗಳು-೨

"ಒಬ್ಬ ಕಲಾವಿದ ವಸ್ತುವಿನ ಮೇಲೆ ಹೇಗೆ ಧ್ಯಾನಿಸುತ್ತಾನೋ ಅದರ ಮೇಲಿಂದ ಅವನ ಅಭಿವ್ಯಕ್ತಿಗೆ ಚಾಲನೆ ಸಿಗುತ್ತದೆ"[೨೭] ಎಂಬ ಮಾತು ಕಲಾವಿದ ಎಂ. ವೀರಪ್ಪನವರಿಗೆ ಅನ್ವರ್ಥಕವಾಗುತ್ತದೆ. ಅವರ ಈ ಚಿತ್ರವು ೧೨"x೧೮" ಅಳತೆಯಲ್ಲಿ ರಚನೆಗೊಂಡಿದೆ. ಪ್ರಸ್ತುತ ಚಿತ್ರವು ಬಸವೇಶ್ವರನ ಜನನ ಮತ್ತು ಸಂಗಮೇಶನಿಂದ ಲಿಂಗದೀಕ್ಷೆಯನ್ನು ನೀಡಿಸುವುದಾಗಿದೆ. ಮಾದಲಾಂಬಿಕೆಯು ಶಿಶು ಬಸವನಿಗೆ ಜನ್ಮ ನೀಡಿದ್ದಾಳೆ. ಆಗ ಶಿವನು ಅಲ್ಲಿಗೆ ಜಂಗಮ ವೇಷದಿಂದ ಪ್ರತ್ಯಕ್ಷನಾಗಿ ಬಂದಿದ್ದಾನೆ. ಮಾದಲಾಂಬಿಕೆ

---

೨೭. ಚಂದ್ರಕಾಂತ ಕುಸನೂರ : ಕಲೆ ಅನುಭವ ಮತ್ತು ಅನುಭಾವ, ಪು-೬೨

ಗಾಢವಾದ ನಿದ್ರೆಯಲ್ಲಿದ್ದಾಳೆ ಅಥವಾ ಮಾಯದ ನಿದ್ರೆಯನ್ನು ನೀಡಿರುವಂತಿದೆ. ಮಂಚದ ಮೇಲೆ ಮಾದಲಾಂಬಿಕೆಯು ಓರೆಯಾಗಿ ಮಲಗಿದ್ದಾಳೆ. ಅವಳ ಎಡದ ತೋಳಿನಲ್ಲಿ ತೋಳುಬಂಧಿಯನ್ನು ಧರಿಸಿರುವುದು, ಮುಖದ ಮೇಲೆ ವ್ಯಕ್ತವಾಗಿರುವ ಭಾವನೆಗಳು ನಿದ್ರಿಸುತ್ತಿದ್ದರೂ ಅವಳಲ್ಲಿ ರಾಜಕಳೆಯನ್ನು ತುಂಬುವ ಪ್ರಯತ್ನವನ್ನು ಕಲಾವಿದ ಇಲ್ಲಿ ಮಾಡಿದ್ದಾನೆ. ಅವಳ ಮಡಿಲಿನಲ್ಲಿ ಮಲಗಿರುವ ಶಿಶು ಬಸವನ ಕೊರಳಿನಲ್ಲಿ ಲಿಂಗ, ಮೈ ಮತ್ತು ಕೈಗಳಲ್ಲಿ ವಿಭೂತಿ ಧಾರಣೆ, ತಲೆಯ ಸುತ್ತಲೂ ದಿವ್ಯ ಪ್ರಭಾವಳಿಯನ್ನು ಗಮನಿಸಿದರೆ ಆತನೊಬ್ಬ 'ಕಾರಣಿಕ ಶಿಶು' ಎಂಬುವಂತೆ ಕಲಾವಿದ ಪ್ರಕಟಪಡಿಸಿದ್ದಾನೆ. ಮಂಚದ ಕೆಳಗೆ ಅಗ್ಘವಣಿ, ದೀಪ, ಧೂಪ ಮುಂತಾದ ಪೂಜಾ ಪರಿಕರಗಳುಳ್ಳ ಹರಿವಾಣ, ಕಳಶಗಳು ಇವು ಸನ್ನಿವೇಶದ ದೈವಿಕ ಕಳೆಯನ್ನು ಮತ್ತಷ್ಟು ಹೆಚ್ಚಿಸಿವೆ. ಬಹುಮುಖ್ಯವಾಗಿ ಈ ಚಿತ್ರದಲ್ಲಿ ಜಂಗಮ ವೇಷದಿಂದ ಬಂದ ವ್ಯಕ್ತಿಯು ಶಿವನೆಂಬುದನ್ನು ಕಲಾವಿದ ತಿಳಿಯಪಡಿಸಿದ್ದಾನೆ. ಇದೇ ಸನ್ನಿವೇಶದ ಎಲ್ಲ ಚಿತ್ರಗಳಲ್ಲಿಯೂ ಜಾತವೇದ ಮುನಿಗಳು ಮಗು ಬಸವೇಶನಿಗೆ ಹರಸುವ ಸನ್ನಿವೇಶವನ್ನು ಕಾಣುತ್ತೇವೆ. ಸಾಕ್ಷಾತ್ ಶಿವನೇ ಜಂಗಮ ರೂಪಿಯಾಗಿ ಬಂದು ಮಗುವನ್ನು ಹರಸುವ ಸನ್ನಿವೇಶ ಇಲ್ಲಿ ವ್ಯಕ್ತವಾಗಿದೆ. ಮೇಲ್ನೋಟಕ್ಕೆ ಇಲ್ಲಿಯ ವ್ಯಕ್ತಿ ಜಾತವೇದ ಮುನಿ ಎಂದು ಕಂಡುಬರಲು ಅವಕಾಶವಿದೆ. ಆದರೆ ಆತನ ಶಿಖೆಯಲ್ಲಿನ ಚಂದ್ರನ ಚಿಹ್ನೆಯು ಆತ ಶಿವನೇ ಎಂಬುದನ್ನು ಖಚಿತ ಪಡಿಸುತ್ತದೆ. ಈ ಚಿತ್ರವು ಮೂಲಭೂತವಾಗಿ ವರ್ಣಚಿತ್ರದ ಗುಂಪಿಗೆ ಸೇರಿದ್ದುದಾಗಿದೆ. ಆದರೆ ಛಾಯಾಚಿತ್ರಕಾರರು ಇದನ್ನು ಕಪ್ಪುಬಿಳುಪು ವರ್ಣದಲ್ಲಿ ಸೆರೆಹಿಡಿದುದರಿಂದ ನೋಡುವುದಕ್ಕೆ ಕಪ್ಪುಬಿಳುಪು ಚಿತ್ರದಂತೆಯೇ ಕಂಡುಬರುತ್ತದೆ.

ಈ ಕಲಾಕೃತಿಯೂ ಸಹ ಅರಸೊತ್ತಿಗೆಯನ್ನೇ ಪ್ರತಿನಿಧಿಸುತ್ತದೆ. ಜಲವರ್ಣದಲ್ಲಿ ಚಿತ್ರಿತಗೊಂಡ ಈ ಚಿತ್ರದಲ್ಲಿ ಇರುಳಿನ ವಾತಾವರಣವನ್ನು ಪ್ರಕಟಪಡಿಸುತ್ತದೆ. ಅರಸೊತ್ತಿಗೆ ವೈಭವವನ್ನು ಪ್ರತಿನಿಧಿಸುವಂತಹ ವಿನ್ಯಾಸಗಳು ಮಂಚದಲ್ಲಿ ಮತ್ತು ಹಿನ್ನೆಲೆಯಲ್ಲಿ ಕಂಡುಬರುತ್ತವೆ. ಹಿನ್ನೆಲೆಯ ಪರದೆಯಲ್ಲಿ ಎಲ್ಲಿಂದಲೋ ಬಂದ ಬೆಳಕು ಇರುಳಿನ ವಿಶಿಷ್ಟವಾದ ಅನುಭವ ನೀಡುತ್ತದೆ. ಶಿವನ ಪ್ರತೀಕವಾಗಿರುವ ಗುರುಗಳು ಮಾದಲಾಂಬಿಕೆ ಮತ್ತು ಬಾಲ ಬಸವನನ್ನು ಹರಸುತ್ತಿರುವುದು, ಮಂಚದ ಮೇಲೆ ಮಲಗಿರುವ ಮಾದಲಾಂಬಿಕೆ ಮತ್ತು ಬಾಲಬಸವರ ಭಾಗದಲ್ಲಿ ಪ್ರಖರ ಬೆಳಕು ನೀಡಿದ್ದರಿಂದ ಆಕೃತಿಗಳೆಲ್ಲವೂ ಸ್ಪಷ್ಟವಾಗಿ ತೋರುತ್ತವೆ. ಈ ಕೃತಿಯು ಸದ್ಯ ಕಲಾವಿದರ ಮನೆಯ ಕಲಾಗ್ಯಾಲರಿಯಲ್ಲಿ ಸಂಗ್ರಹಗೊಂಡಿದೆ.

ಶಿಶು ಬಸವನನ್ನು ಆಶೀರ್ವದಿಸುತ್ತಿರುವ ಗುರುಗಳು–೩

ಭಾರತೀಯ ಕಲಾವಿದ ಮೊದಲಿನಿಂದಲೂ ತನ್ನ ಆಶಯಕ್ಕೆ ಮಹತ್ವ ಕೊಡುತ್ತಾ ಬಂದಿದ್ದು ಗಮನಾರ್ಹವಾದಂತಹ ವಿಷಯ. ತನ್ನ ಆಶಯವನ್ನು ರೂಪಾಕೃತಿಯಲ್ಲಿ ಬಂಧಿಸುವ ಕಲಾವಿದ, ಅನೇಕ ಸಲ ರೂಪಾಕೃತಿಯ ಹೊರಮೈಯಲ್ಲಿರುವ ಚೆಲುವಿನೊಂದಿಗೇ, ವಸ್ತುವಿನ ಆಂತರಿಕ ಚೆಲುವನ್ನು ಅಂದರೆ ಆಧ್ಯಾತ್ಮಿಕ ಮತ್ತು ಆದಿ ಭೌತಿಕ ಸೌಂದರ್ಯವನ್ನು ಅಭಿವ್ಯಕ್ತಿಗೊಳಿಸುತ್ತಾ ಬಂದಿದ್ದು ತುಂಬಾ ಮಹತ್ವದ ಅಂಶ. ಕಲಾವಿದ ಎಂ. ವೀರಪ್ಪನವರು ಮೇಲಿನ ಶೀರ್ಷಿಕೆಯಡಿಯಲ್ಲಿ ಒಟ್ಟು ಎರಡು ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ಎರಡನೆಯ ಕಲಾಕೃತಿಯಾದ ಈ ಚಿತ್ರವನ್ನು ೧೨"x೧೮" ಅಳತೆಯ, ಜಲವರ್ಣ

ಮಾಧ್ಯಮದಲ್ಲಿ ರಚಿಸಿದ್ದಾರೆ. ಈ ಚಿತ್ರದಲ್ಲಿಯೂ ಜಾತವೇದ ಮುನಿಗಳು ಶಿಶು ಬಸವನನ್ನು ಹರಸಿ ಆಶೀರ್ವದಿಸುವ ಸಂದರ್ಭವನ್ನು ಹೇಳುತ್ತಿದೆ. ತುಂಬ ಅಪರೂಪವೆನ್ನುವ ಸಂಗತಿಗಳನ್ನು ಕಲಾವಿದ ಇಲ್ಲಿ ನಿರೂಪಿಸಿದ್ದಾನೆ. ವರ್ಣಗಳ ಸಂಯೋಜನೆ ಉತ್ತಮವಾಗಿ ಮೇಳೈಸಿರುವುದನ್ನು ಕಾಣುತ್ತೇವೆ. ಇಲ್ಲಿ ಮಾದರಸ ಮತ್ತು ಮಾದಲಾಂಬಿಕೆಯರು ರಾಜಮನೆತನದವರೆಂಬುದನ್ನು ನಿರೂಪಿಸುವುದಕ್ಕೆ ಕಲಾವಿದ ಒತ್ತು ಕೊಟ್ಟಿದ್ದಾನೆ. ಅಲಂಕೃತಗೊಂಡ ಮಂಚದ ಮೇಲೆ ಹಸಿರುಬಣ್ಣದ ಹಾಸಿಗೆ ಮತ್ತು ದಿಂಬುಗಳಿವೆ. ಹಂಸಗಳಿಂದ ಅಲಂಕೃತಗೊಂಡ ಮಂಚದ ಬಣ್ಣವು ನೈಜ ಕಟ್ಟಿಗೆಯಿಂದ ನಿರ್ಮಿತವಾಗಿದೆಯೋ ಎಂಬಂತೆ ಕಾಣುತ್ತದೆ. ಅದರ ಮೇಲೆ ಸುಂದರವಾದ ವೃತ್ತಾಕಾರದ ಸತ್ತಿಗೆ (ಛತ್ರಿ)ಯನ್ನು ಚಿತ್ರಿಸಲಾಗಿದೆ. ಮಾದಲಾಂಬಿಕೆಯು ತನ್ನ ಶಿಶು ಬಸವನನ್ನು ಅರೆಮುಚ್ಚಿದ ಕಣ್ಣುಗಳಿಂದ ಪ್ರೀತಿಯಿಂದ ನೋಡುತ್ತಿದ್ದಾಳೆ. ಅವಳ ಉಡುಗೆಯು ರಾಜಮನೆತನದ ಸಂಕೇತವನ್ನು ಪ್ರಕಟಪಡಿಸುತ್ತದೆ.

ತೆಳುನೀಲಿ ಬಣ್ಣದ ಸೀರೆ ಮತ್ತು ಅಲಂಕೃತಗೊಂಡ ಸೆರಗನ್ನು ಹೊಂದಿದ ಅವಳ ವಸ್ತ್ರಗಳ ವಿನ್ಯಾಸ, ಶೈಲಿ ಮನಸೆಳೆಯುತ್ತದೆ. ವಿವಿಧ ರೀತಿಯ ಆಭರಣಗಳನ್ನು ಧರಿಸಿರುವ ಮಾದಲಾಂಬಿಕೆಯ ದೇಹದಲ್ಲಿ ಎಲ್ಲಿಯೂ ವಿಭೂತಿ, ರುದ್ರಾಕ್ಷಿ ಮುಂತಾದ ದೈವಸೂಚಕವಾದ ಮಂಗಳಕರವಾದ ಚಿಹ್ನೆಗಳನ್ನು ಇಲ್ಲಿ ಕಾಣಲಾಗುವುದಿಲ್ಲ. ಕಲಾವಿದ ವಿಭೂತಿಧಾರಣೆಯನ್ನು ಉದ್ದೇಶಪೂರ್ವಕವಾಗಿ ಚಿತ್ರಿಸದೆ ಬಿಟ್ಟಿರುವುದಂತೂ ಢಾಳಾಗಿ ಕಾಣಿಸುತ್ತದೆ. ಮಗು ಬಸವನ ಕೊರಳಲ್ಲಿ ಲಿಂಗವಿದೆ. ಹಣೆ, ತೋಳುಗಳಲ್ಲಿ ವಿಭೂತಿ ಧಾರಣೆಯಿದೆ. ತಲೆಯ ಸುತ್ತಲೂ ದೈವೀ ಸಂಕೇತವಾದ ಪ್ರಭಾವಳಿಯು ಸ್ಪಷ್ಟವಾಗಿ ಕಾಣಿಸುತ್ತಿದೆ. ಮಾದರಸನು ರೇಷ್ಮೆ ವಸ್ತ್ರಗಳನ್ನು ಧರಿಸಿ ಹಣೆ, ಕೈ, ಕೊರಳಿನಲ್ಲಿ ವಿಭೂತಿ ಧಾರಣೆ ಮಾಡಿದ್ದಾನೆ. ಕಪ್ಪು ಕೂದಲನ್ನು ಉದ್ದಕ್ಕೆ ಬಿಟ್ಟು, ತಲೆಯಲ್ಲಿ ರಾಜಮನೆತನದ ಸಂಕೇತವಾದ ಚಿಕ್ಕ ತೆರೆದ ಕಿರೀಟವನ್ನು ಧರಿಸಿದ್ದಾನೆ. ರಾಜನಾದರೂ ಗೌರವ, ಶ್ರದ್ಧೆಯ ಸಂಕೇತವೆಂಬಂತೆ ವಿನೀತಭಾವದ ಮುಖ ಮುದ್ರೆಯಿದೆ. ಜಾತವೇದ ಮುನಿಗಳ ಮುಖ ಕಾಣದಿದ್ದರೂ ಅವರು ನಿಂತು ಮಗುವನ್ನು ಹರಸುವ ಭಂಗಿ ಮಾತ್ರ ಅದ್ಭುತವಾಗಿದೆ. ಅವರು ತೊಟ್ಟ ಪಂಚೆಯ ಬಣ್ಣ ಮತ್ತು ಅದರ ವಿನ್ಯಾಸವು ಕಲೆಯ ಸೂಕ್ಷ್ಮತೆಯನ್ನು ಮನವರಿಕೆಯಾಗುವಂತೆ ಮಾಡುತ್ತಿದೆ. ಅವರು ಕಾಲಿನಲ್ಲಿ ಧರಿಸಿದ ಮರದ ಪಾದುಕೆಗಳು, ಮುನಿಗಳು ಕಪ್ಪು ಮತ್ತು ಬಿಳಿಬಣ್ಣ ಮಿಶ್ರಿತ ಕೂದಲಿನಿಂದ ಜಟೆಯನ್ನು ಕಟ್ಟಿರುವ ರೀತಿ, ಕಿವಿಯಲ್ಲಿ ಧರಿಸಿದ ರುದ್ರಾಕ್ಷಿಯ ಕುಂಡಲಗಳು, ಬಾಗಿದ ಬೆನ್ನು, ಅಭಯಹಸ್ತ ಅದ್ಭುತವಾಗಿ ಸಾಧಿತವಾಗಿವೆ. ಚಿತ್ರದಲ್ಲಿ ಅವರ ಮುಖ ಕಾಣಿಸದಿದ್ದರೂ ಅದನ್ನು ಸಹೃದಯ ಸ್ಪಷ್ಟವಾಗಿ ಕಲ್ಪಿಸಿಕೊಳ್ಳಬಲ್ಲ. ಅರಮನೆಯ ಆವರಣದಲ್ಲಿ ನಡೆದ ಘಟನೆಯೆಂಬಂತೆ ಈ ಚಿತ್ರಣವು ಬಿಂಬಿತವಾಗಿದ್ದು, ಇಲ್ಲಿ ಕಂಡುಬರುವ ಕಲ್ಲಿನ ಕಲಾಕುಸುರಿಯ ಶೈಲಿಯು ಚಾಲುಕ್ಯರ ಕಾಲಘಟ್ಟದ ಶಿಲ್ಪಕಲೆಯನ್ನು ನೆನಪಿಸುತ್ತದೆ.

ಮೇಲಿನ ವಿಶ್ಲೇಷಣೆಯ ಪ್ರಕಾರವಾಗಿ ಪ್ರಸ್ತುತ ಚಿತ್ರದ ವರ್ಣಸಂಯೋಜನೆಯಲ್ಲಿ ಕಲಾವಿದ ಹಿಡಿತ ಸಾಧಿಸಿದ್ದಾನೆ. ಅರಸೊತ್ತಿಗೆಯನ್ನು ದೃಶ್ಯಾತ್ಮಕವಾಗಿ ತೋರ್ಪಡಿಸುವಲ್ಲಿ ವರ್ಣಸಂಯೋಜನೆ ಬಹು ಮುಖ್ಯವಾದ ಕ್ರಿಯೆ. ಆಕೃತಿಗಳಿಗೆ ಪೂರಕವಾದ, ಮೃದುವಾದ ವರ್ಣಬಳಕೆ ಅರಸೊತ್ತಿಗೆಯ

ವಾತಾವರಣವನ್ನು ಸಹ ಮೃದುಗೊಳಿಸಿದೆ. ಅರಮನೆಯ ಹಿನ್ನೆಲೆಯನ್ನು ಗಾಢವರ್ಣದಿಂದ ತೋರ್ಪಡಿಸಿ, ವೈಭವ ಸೂಚಕವಾಗಿರುವ ಮಂಚ, ಛತ್ರಿಗಳನ್ನು ಎರಡನೆಯ ಆಶಯವಾಗಿರಿಸುವುದರ ಮೂಲಕ ವಿವರವಾದ ವಿನ್ಯಾಸಗಳನ್ನು ಚಿತ್ರಿಸಲಾಗಿದೆ. ನೀಳ ಕಾಯದ ಜಾತವೇದ ಮುನಿಗಳ ಅಂಗಸೌಷ್ಠವ ಅವರಲ್ಲಿರುವ ಪವಾಡ ಸದೃಶ ಭಾವವನ್ನು ಪ್ರಕಟಿಸುತ್ತದೆ. ವಿನೀತನಾಗಿರುವ ಮಾದರಸ, ಬಾಲಬಸವನತ್ತ ಅಕ್ಕರೆಯ ನೋಟ ಬೀರಿದ ಮಾದಲಾಂಬಿಕೆ ಅವರು ನೈಪುಣ್ಯ ಯುಕ್ತವಾಗಿ ಚಿತ್ರಿತಗೊಂಡಿದ್ದಾರೆ. ಚಿತ್ರರಚನಾ ಸಿದ್ಧಾಂತಗಳನ್ನು ಪುನರಪಿ ನೆನಪಿಸುವಂತಹ ಕೃತಿ ಇದು. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯ ಕಲಾಗ್ಯಾಲರಿಯಲ್ಲಿ ಸಂಗ್ರಹಗೊಂಡಿದೆ.

೨.೨.೧೦. ಶಿಶು ಬಸವನಿಗೆ ನಾಮಕರಣ–೧

"ಕನ್ನಡ ನಾಡಿನ ಜನತೆ ಬರೆಯಿಸುವುದರ ಮೂಲಕ ಪೋಷಕರಾಗಿ, ಬರೆಯುವುದರ ಮೂಲಕ ಬರೆಪಕಾರರಾಗಿ ಹಸ್ತಪ್ರತಿ ನಿರ್ಮಾಣ ಕಾರ್ಯವನ್ನು ಜೀವಂತವಾಗಿಟ್ಟು ನಮ್ಮ ನಾಡನ್ನು ಅಪಾರವಾದ ಹಸ್ತಪ್ರತಿ ಭಂಡಾರವನ್ನಾಗಿಸಿದ್ದಾರೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ, ಜನಾಂಗದಿಂದ ಜನಾಂಗಕ್ಕೆ, ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ ಧರ್ಮದತ್ತಿಯಾಗಿ ಉಳಿದುಕೊಂಡು ಬಂದಿದೆ. ಇಂಥ ಹಸ್ತಪ್ರತಿಗಳು ಅರಸರ 'ಸಪ್ತಸಂತಾನ'ದ ಕರ್ತವ್ಯಗಳಲ್ಲಿ ಒಂದೆಂದೋ, ಶಾಸ್ತ್ರದಾನ, ಗ್ರಂಥ ಪ್ರತಿಷ್ಠೆಯ ಪುಣ್ಯ ಪ್ರತೀಕವೆಂದೋ, ಧರ್ಮ ಪೀಠಾರೋಹನ ಪ್ರಸಂಗದ ಜ್ಞಾನದುಡುಗೊರೆಗಳೆಂದೋ, ಬದುಕಿನ ಸ್ವಸುಖದ–ಪರಸುಖದ ಕಾಮಧೇನುಗಳೆಂದೋ ಭಾವಿಸಿ ಇಂದಿನವರೆಗೂ ಕನ್ನಡಿಗರು ಅವುಗಳನ್ನು ಪೂಜ್ಯ ಭಾವನೆಯಿಂದ ಸಂರಕ್ಷಿಸಿಕೊಂಡು ಬಂದಿದ್ದಾರೆ"[೨೮] ಅಂತಹ ಹಸ್ತಪ್ರತಿಗಳಲ್ಲಿ 'ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ–ಯಕ್ಷಗಾನ ಮಹಾನಾಟಕ'ವು ಒಂದಾಗಿದ್ದು.

ಈ ಮೇಲಿನ ಶೀರ್ಷಿಕೆಯ ಹಿನ್ನೆಲೆಯ ಚಿತ್ರವು ಬಸವಣ್ಣನ ನಾಮಕರಣದ ಸಂದರ್ಭದಲ್ಲಿ ತಾಯಿ ಮಾದಲಾಂಬಿಕೆಯೊಂದಿಗೆ ಮೂರು ಮಹಿಳೆಯರು ಸೇರಿ ಜೋಗುಳ ಪದವನ್ನು ಹಾಡಿರುವುದು ಕಂಡುಬರುತ್ತದೆ. ಆ ಜೋಗುಳ ಪದ:

"ಜೋ ಜೋ ಮಾದರಸರ ಸುಕುಮಾರ
ಜೋ ಜೋ ಮಾದಲಾಂಬ ಕಿಶೋರ
ಜೋ ಜೋ ಶೃಂಗಾರ ಭಕ್ತಿಗಂಭೀರ
ಜೋ ಜೋ ಸತ್ಯಧರ್ಮವಿಚಾರ ಜೋ ಜೋ ಲಾಲಿ ॥೯೭॥"...[೨೯]

ಮೇಲಿನ ಶೀರ್ಷಿಕೆಯ ಸಾರವಾಗಿ ವೃಷಭೇಂದ್ರ ವಿಳಾಸ ಗ್ರಂಥದಲ್ಲಿ ಪ್ರಕಟವಾದ ಈ ಕಲಾಕೃತಿಯಲ್ಲಿ ಚಿತ್ರರಚನಾ ಸಿದ್ಧಾಂತ ಅನನ್ಯವಾದುದು. ಈ ಚಿತ್ರ ಸಾಂಪ್ರದಾಯಿಕ ಶೈಲಿಯಲ್ಲಿ ರಚಿತವಾದುದು. ಬಹು

---

೨೮. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ, ಪು–೧

೨೯. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಸಂ.) : ನಂ.ಭಾ.ವಿ. ವೃಷಭೇಂದ್ರ ವಿಳಾಸ, ಪು–೪೨

ಹಿಂದೆಯೇ ಸಾಂಪ್ರದಾಯಿಕ ಪರಿಣಿತ ಕಲಾವಿದರು ರಚಿಸಿರಬಹುದಾದ ಈ ಕಲಾಕೃತಿಯಲ್ಲಿ ಮೂಲವರ್ಣಗಳದ್ದೇ ಪ್ರಾಬಲ್ಯ. ಸ್ತ್ರೀ ಆಕೃತಿಗಳಲ್ಲಿ ಕಂಡು ಬರುವ ಅಂಗಸೌಷ್ಠವ ಮರಾಠಾ ಪ್ರದೇಶದ ಸ್ತ್ರೀ ವ್ಯಕ್ತಿತ್ವವನ್ನು ನೆನಪಿಸುತ್ತದೆ. ಬಲ ಭಾಗದಲ್ಲಿ ಕೆಂಪುವರ್ಣದ ಸೀರೆಯನ್ನುಟ್ಟ ಮಾದಲಾಂಬಿಕೆಯ ವೇಷ-ಭೂಷಣಗಳಲ್ಲಿ ಅರಸೊತ್ತಿಗೆಯ ವೈಭವವನ್ನು ಕಲಾವಿದ ತೋರ್ಪಡಿಸಿದ್ದಾನೆ. ಹಿನ್ನೆಲೆಯಲ್ಲಿ ಸಖಿಯರು ಫಲ ತಾಂಬೂಲವನ್ನು ಹಿಡಿದು ಬಸವನ ನಾಮಕರಣಕ್ಕೆ ಸಂಭ್ರಮದ ವಾತಾವರಣ ಕಲ್ಪಿಸಿದ್ದಾರೆ. ಶ್ವೇತವರ್ಣದ ಹಿನ್ನೆಲೆಯ ಆಕೃತಿಗಳಲ್ಲಿ ಪ್ರಬುದ್ಧತೆ ಮೇಳೈಸಿದೆ. ಹಾಗೆಯೇ ಚಿತ್ರದ ಅವಕಾಶವನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಂಡು ವೀಕ್ಷಕರಿಗೆ ಸ್ಪಷ್ಟವಾದ ಬಸವ ನಾಮಕರಣದ ಸಂದೇಶವನ್ನು ನೀಡುವಲ್ಲಿ ಯಶಸ್ಸು ಪಡೆದಿದ್ದಾರೆ.

ಈ ಚಿತ್ರದಲ್ಲಿ ಮಗು ಬಸವನು ತೊಟ್ಟಿಲಿನಲ್ಲಿ ಮಲಗಿದ್ದಾನೆ. ಆತನ ಕೊರಳಲ್ಲಿ ಕೆಂಪುವಸ್ತ್ರದಲ್ಲಿ ಸುತ್ತಿದ ಇಷ್ಟಲಿಂಗವಿದೆ. ಹಣೆ, ಕೊರಳು, ತೋಳು, ಭುಜ, ಕೈ, ಹೊಟ್ಟೆಯ ಮೇಲೆ ವಿಭೂತಿಯ ಧಾರಣೆಯಿದೆ ಹಾಗೂ ರುದ್ರಾಕ್ಷಿಯ ಮಾಲೆಗಳನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಎರಡೂ ಕಾಲುಗಳಲ್ಲಿ ಧರಿಸಿರುವ ಕಡಗಗಳು ಎದ್ದು ಕಾಣುತ್ತಿವೆ. ಬಸವನು ತೊಟ್ಟಿಲಿನ ಮೇಲೆ ಕಟ್ಟಿರುವ ಗಿಲಗಂಚಿ (ಆಟದ ಬೊಂಬೆ)ಯನ್ನು ತದೇಕ ಚಿತ್ತದಿಂದ ಗಮನಿಸುತ್ತಿದ್ದಾನೆ. ಆತನ ತಲೆಯ ಹಿಂಭಾಗದಲ್ಲಿ ಮತ್ತು ಕಾಲಿನ ಭಾಗದಲ್ಲಿ ತಲಾ ಇಬ್ಬರು ಸ್ತ್ರೀಯರು ತೊಟ್ಟಿಲನ್ನು ತೂಗುತ್ತಿದ್ದಾರೆ. ಇವರಲ್ಲಿ ಇಬ್ಬರು ಸ್ತ್ರೀಯರು ಗಾಢ ಕೆಂಪುಬಣ್ಣದ ಸೀರೆಗಳನ್ನು ಧರಿಸಿದ್ದು, ಉಳಿದ ಇಬ್ಬರಲ್ಲಿ ಒಬ್ಬಾಕೆ ಹಸಿರುಬಣ್ಣದ ಸೀರೆಯನ್ನುಟ್ಟು ಕೈಯಲ್ಲಿ ಹೂವಿನ ಬಟ್ಟಲನ್ನು ಹಿಡಿದಿದ್ದಾಳೆ. ತೊಟ್ಟಿಲಿನ ಕೆಳಗೆ ವಿವಿಧ ರೀತಿಯ ಹಣ್ಣುಗಳನ್ನು ಹೊಂದಿರುವ ಬಟ್ಟಲು ಕಾಣುತ್ತದೆ. ಚಿತ್ರದ ಶೈಲಿಯು ಸಾಂಪ್ರದಾಯಿಕ. ಸ್ತ್ರೀಯರು ಧರಿಸಿರುವ ಆಭರಣಗಳು ಮತ್ತು ತಲೆಯಲ್ಲಿ ಧರಿಸಿರುವ ಮುತ್ತಿನ ಕಿರು ಹೂಮಾಲೆಗಳು ಗಮನಾರ್ಹ. ಈ ಚಿತ್ರದಲ್ಲಿ ಕೆಂಪುಬಣ್ಣವನ್ನು ಪ್ರಮುಖವಾಗಿ ಬಳಸಲಾಗಿದೆ. ತೊಟ್ಟಿಲು ಹಿಡಿದ ಎಡ ಹಾಗೂ ಬಲಭಾಗದ ಮಹಿಳೆಯರ ಸೀರೆಯ ಒಡಲನ್ನು ಕೆಂಪು, ಹಸಿರು ವರ್ಣದ ಸೀರೆಗೆ ಹಳದಿ ವರ್ಣದ ಅಂಚನ್ನು, ಹಳದಿ ವರ್ಣದ ಸೀರೆಗೆ ಕೆಂಪುಬಣ್ಣದ ನೆರಳು ಬಿದ್ದಂತೆಯೂ ಚಿತ್ರಿಸಲಾಗಿದೆ. ಒಟ್ಟಾರೆ ಈ ಕಲಾಕೃತಿಯಲ್ಲಿ ಮಗು ಬಸವಣ್ಣನನ್ನು ಹೊರತುಪಡಿಸಿ, ಉಳಿದೆಲ್ಲ ಆಕೃತಿಗಳಲ್ಲಿ ಮುಖದ ಒಂದು ಭಾಗವನ್ನು ಮಾತ್ರ ರಚಿಸಲಾಗಿದೆ. ರಾಜವಂಶದ ಮಗುವಿನ ಆರೈಕೆಯನ್ನು ಹೋಲುವಂತೆ ಈ ಚಿತ್ರದಲ್ಲಿ ಆಕೃತಿಗಳ ಮತ್ತು ಬಳಸಿಕೊಂಡಿರುವ ವಸ್ತುಗಳ ಅಲಂಕಾರದ ವಿನ್ಯಾಸವನ್ನು ಗಮನಿಸಬಹುದಾಗಿದೆ.

ಶಿಶು ಬಸವನಿಗೆ ನಾಮಕರಣ-೨

"ಶ್ರೇಷ್ಠ ಕಲೆಯು ಯಾವಾಗಲೂ ಸಂವೇದನೆ ಹಾಗೂ ಭಾವಪೂರ್ಣವಾದ ಸಹಜಾನುಭೂತಿಗಳ ಸಂಗ್ರಹವನ್ನು ಮುಂದಿಡುತ್ತದೆ"[೩೦] ಎಂಬ ಮಾತು ಕಲಾವಿದ ಬಸವರಾಜ ಮುಗಳಿ ಅವರಿಗೆ ಅನ್ವಯಗೊಳ್ಳುತ್ತದೆ. ೪೮"x೩೬" ಅಳತೆಯ, ತೈಲವರ್ಣ ಮಾಧ್ಯಮದಲ್ಲಿ ಚಿತ್ರಿತಗೊಂಡ ಅವರ ಈ ಕಲಾಕೃತಿಯಲ್ಲಿ ಮಗು ಬಸವನನ್ನು ತೊಟ್ಟಿಲಿನಲ್ಲಿಟ್ಟು ತೂಗುವ ಸನ್ನಿವೇಶವನ್ನು ಈ ಚಿತ್ರವು ಒಳಗೊಂಡಿದೆ.

---

೩೦. ಡಾ. ಕಾಶಿನಾಥ ಅಂಬಲಗೆ (ಅನು.) : ಸೌಂದರ್ಯಶಾಸ್ತ್ರ, ಪು-೧೩೯

ಮಗು ಬಸವನು ತೊಟ್ಟಿಲಿನಲ್ಲಿ ಮಲಗಿದ್ದಾನೆ. ಆತನ ಕೊರಳಲ್ಲಿ ಇಷ್ಟಲಿಂಗವನ್ನು ಕಟ್ಟಲಾಗಿದ್ದು, ಬಿಳಿಯ ಬಣ್ಣದ ವಸ್ತ್ರವನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಹಣೆಯಲ್ಲಿ ಮಾತ್ರ ಎದ್ದು ತೋರುವಂತೆ ವಿಭೂತಿ ಧರಿಸಲಾಗಿದೆ. ಎಡಗಾಲಿನಲ್ಲಿ ಧರಿಸಿದ ಕಡಗ ಮಾತ್ರ ನೋಡುಗರಿಗೆ ಗೋಚರವಾಗುತ್ತದೆ. ಕಣ್ಣುಗಳು ಆರತಿಯನ್ನು ಹಿಡಿದ ಮಂಗಳೆಯರನ್ನು ತದೇಕ ಚಿತ್ತದಿಂದ ನಿರುಕಿಸುವಂತೆ ಕಂಡುಬರುತ್ತದೆ. ತಾಯಿ ಮಾದಲಾಂಬಿಕೆಯು ಹಳದಿಬಣ್ಣದ ಅಂಚನ್ನು ಹೊಂದಿರುವ ಗುಲಾಬಿಬಣ್ಣದ ಸೀರೆಯನ್ನು ಮತ್ತು ಕಡುಗೆಂಪು ಬಣ್ಣದ ಕುಪ್ಪಸವನ್ನು ಧರಿಸಿದ್ದಾಳೆ. ತನ್ನ ಮುದ್ದಿನ ಮಗು ಬಸವನನ್ನು ಅರೆನಿಮೀಲಿತ ಕಣ್ಣುಗಳಿಂದ ಶಾಂತ ಮುಖಮುದ್ರೆಯಿಂದ ನೋಡುತ್ತಿರುವಂತೆ ಕಲಾವಿದನು ಇಲ್ಲಿ ಚಿತ್ರಿಸಿದ್ದಾನೆ. ಅವಳ ಒಟ್ಟು ವ್ಯಕ್ತಿತ್ವವು ಮಂಗಳಾಂಗಿಯೆಂದರೆ ಹೀಗಿರಬೇಕೇನೋ ಎಂಬ ಗ್ರಹಿಕೆಯನ್ನು ಉಂಟುಮಾಡುವಂತಿದೆ.

ಅರೆವೃತ್ತಾಕಾರದ ಹುಬ್ಬುಗಳು, ನೀಳವಾದ ನಾಸಿಕ, ಎದ್ದು ಕಾಣುವಂತೆ ತೆಗೆದ ಬೈತಲೆ, ಹಣೆಯಲ್ಲಿ ಕೆಂಪಗಿನ ಕುಂಕುಮದ ಬೊಟ್ಟು ಚಿತ್ರದ ಆಕರ್ಷಣೆಗೆ ಸಹಾಯಮಾಡಿವೆ. ಆರತಿತಟ್ಟೆಯಲ್ಲಿ ಇಟ್ಟಿರುವ ಮಂಗಳಕರವಾದ ದೀಪಗಳು ನಿಜವಾಗಿಯೂ ಬೆಳಕನ್ನು ಚೆಲ್ಲುತ್ತಿವೆಯೋ ಎಂಬಂತೆ ಭಾಸವಾಗುತ್ತವೆ. ಸಹವರ್ತಿಯೊಬ್ಬಳ ಕೈಯಲ್ಲಿ ಹಿಡಿದಿರುವ ಕುಂಕುಮದ ತಟ್ಟೆಯು ಗಮನ ಸೆಳೆಯುತ್ತದೆ. ಇಲ್ಲಿ ಬಂದಿರುವ ಎಲ್ಲ ಪಾತ್ರಗಳ ವಿವಿಧ ಭಂಗಿಗಳು ಅಳತೆ ಮತ್ತು ಪ್ರಮಾಣಬದ್ಧವಾಗಿ ರೂಪಿತವಾಗಿರುವುದನ್ನು ಕಾಣಬಹುದು. ಮಾದಲಾಂಬಿಕೆಯ ಜೊತೆಗಿರುವ ಸಖಿಯರು ಧರಿಸಿರುವ ಸೀರೆಗಳ ವರ್ಣವು ಕಡುಹಸಿರು, ಕಡುನೀಲಿ, ಕಡುಗೆಂಪು ಮತ್ತು ಬಿಳಿಬಣ್ಣದಿಂದ ಕೂಡಿದೆ. ಸಮರ್ಪಕವಾದ ವರ್ಣಸಂಯೋಜನೆಯು ಕಲಾವಿದನ ನೈಪುಣ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಈ ಸಂಯೋಜನೆಯನ್ನು ಒಟ್ಟಾಗಿ ಗ್ರಹಿಸಿದಲ್ಲಿ, ಕಲಾವಿದ ತುಂಬ ಶಾಂತವಾದ ಮನಸ್ಸಿನಿಂದ ಚಿತ್ರವನ್ನು ರಚಿಸಿ, ತನ್ನ ಶಾಂತತೆ ಮತ್ತು ಧ್ಯಾನಮುದ್ರಿತ ಮನಸ್ಸನ್ನು ಅದರಲ್ಲಿ ಅಭಿವ್ಯಕ್ತಿಪಡಿಸಿರುವಂತೆ ಕಂಡುಬರುತ್ತದೆ.

ಮೇಲಿನ ವಿಶ್ಲೇಷಣೆಯ ಪ್ರಕಾರವಾಗಿ ಈ ಚಿತ್ರವು ೩/೪ ರಷ್ಟು ಸ್ಥಳಾವಕಾಶದಲ್ಲಿ ಚಿತ್ರಿತಗೊಂಡಿದೆ. ಸ್ತ್ರೀ ಆಕೃತಿಗಳಲ್ಲಿ ಏಕರೂಪವಾದ ಮುಖಚಹರೆ ಕಂಡುಬರುತ್ತದೆ. ಆದರೆ ಪ್ರಸನ್ನತೆ, ಆಪ್ಯಾಯಮಾನತೆ ಸಾಕಾರಗೊಂಡಿದೆ. ನಾಮಕರಣದ ಒಟ್ಟು ಸಂಭ್ರಮಾತ್ಮಕ ವಾತಾವರಣ ಈ ಚಿತ್ರದಲ್ಲಿ ಕಂಡುಬರುತ್ತದೆ. ಸಂಯೋಜನೆಯ ದೃಷ್ಟಿಯಿಂದ ಹೇಳುವುದಾದರೆ ಆಕೃತಿಗಳನ್ನು ಸಾಮೀಪ್ಯದಿಂದ ಚಿತ್ರಿಸುವುದರ ಮೂಲಕ ಚಿತ್ರದ ಆಶಯಕ್ಕೆ ಹೆಚ್ಚು ಒತ್ತು ನೀಡಲಾಗಿದೆ.

೨.೨.೧೧. ಸತ್ತ ಗೆಳೆಯನನ್ನು ಬದುಕಿಸಿದ ಬಾಲ ಬಸವಣ್ಣ-೧

ಕಲಾವಿದ ಎಂ. ವೀರಪ್ಪನವರು ಈ ಚಿತ್ರಕಲಾಕೃತಿಯನ್ನು ರಚಿಸಿರುತ್ತಾರೆ. ೧೨"x೧೮" ಅಳತೆಯ ಜಲವರ್ಣ ಮಾಧ್ಯಮದಲ್ಲಿ ರಚಿತಗೊಂಡ ಈ ಕಲಾಕೃತಿಯು ಅದರ ಕಾಲವನ್ನು ಕಲಾವಿದ ಉಲ್ಲೇಖಿಸಿರುವುದಿಲ್ಲ. ಪ್ರಸ್ತುತ ಚಿತ್ರದಲ್ಲಿ ಬಾಲಕ ಬಸವನು ಪವಾಡವೊಂದನ್ನು ಮೆರೆದಿದ್ದುದನ್ನು ಚಿತ್ರಿಸಲಾಗಿದೆ. ಈ ಚಿತ್ರವು ಜಲವರ್ಣಮಾಧ್ಯಮದಲ್ಲಿ ರಚಿತಗೊಂಡಿದ್ದು, ಬಸವಣ್ಣ ಬಾಲ್ಯದ ಜೀವನದಲ್ಲಿ ನಡೆದ ಘಟನೆಯೊಂದನ್ನು ಪ್ರಸ್ತುತ ಚಿತ್ರವು ವಿಶದೀಕರಿಸುತ್ತದೆ. ಶ್ರೀಮಠದಲ್ಲಿ ಬಾಲಕ ಬಸವಣ್ಣನು

ವಿದ್ಯಾಭ್ಯಾಸ ಮಾಡುತ್ತಿರುವಾಗ ಆತನಿಗೆ ಕೆಲವು ಸಹಪಾಠಿಗಳೇ ಶತ್ರುಗಳಾಗುತ್ತಾರೆ. ದ್ವೇಷದ ಭಾವನೆಯಿಂದ ಕೆಲವು ಸಹಪಾಠಿಗಳು ಬಸವಣ್ಣನ ಬಗೆಗೆ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಗುರುಗಳಿಗೆ ಚಾಡಿ ಹೇಳುತ್ತಾರೆ. ಒಂದು ದಿನ ವಟುಗಳು ಕಪ್ಪು ಹಲಗೆಯನ್ನು ತೊಳೆಯಲು ಹೊಂಡಕ್ಕೆ ಕಳುಹಿಸಿದಾಗ ಬೆನಕಪ್ಪನೆಂಬ ಸಹಪಾಠಿಯು ಹೊಂಡದಲ್ಲಿ ಕಾಲುಜಾರಿ ಬಿದ್ದು ಮರಣ ಹೊಂದುತ್ತಾನೆ. ಈ ವಿಷಯವನ್ನು ಆತನ ಸ್ನೇಹಿತರು ಬೆನಕನ ತಂದೆತಾಯಿಗಳ ಬಳಿಗೆ ಬಂದು ಬಸವನೇ ಬೆನಕನನ್ನು ಕೆರೆಗೆ ತಳ್ಳಿ ಸಾಯಿಸಿದನೆಂದು ಸುಳ್ಳು ಹೇಳುತ್ತಾರೆ. ಬೆನಕನ ತಂದೆ-ತಾಯಿಗಳು ಮಾದರಸ ಮತ್ತು ಮಾದಲಾಂಬಿಕೆಯ ಬಳಿಗೆ ಬಂದು, ನಿನ್ನ ಮಗನು ನನ್ನ ಮಗನನ್ನು ಸಾಯಿಸಿದ್ದು ಧರ್ಮವೇ? ಎಂದು ಕೇಳುತ್ತಾರೆ. ಆಗ ಮಾದರಸನು ಮಗನನ್ನು ಕರೆದು ವಿಚಾರಿಸಿದಾಗ, ಬಸವನು ಅಪ್ಪಾ, ನನ್ನ ಮಾತನ್ನು ಕೇಳು, ನಾನು ಬೆನಕನನ್ನು ಕೆರೆಗೆ ತಳ್ಳಿ ಸಾಯಿಸಲಿಲ್ಲ. ಅವನೇ ಕಾಲುಜಾರಿ ಬಿದ್ದನೆಂದು ಹೇಳುತ್ತಾನೆ. ಆ ಹೊತ್ತಿಗೆ ಎಲ್ಲರೂ ಹೊಂಡದ ಬಳಿ ಬಂದು ನೋಡಿದಾಗ, ಬೆನಕನು ಹೊಂಡದಿಂದ ಹಲಗೆಯನ್ನು ಹಿಡಿದು ಎದ್ದು ಬಂದು, ಅಲ್ಲಿ ನೆರೆದಿರುವ ತಂದೆ-ತಾಯಿಗಳು, ಸಹಪಾಠಿಗಳಿಗೆ ಬಸವನು ನನ್ನನ್ನು ಹೊಂಡದಲ್ಲಿ ನೂಕಿ ಬೀಳಿಸಲಿಲ್ಲ. ನಾನೇ ಕಾಲುಜಾರಿ ಬಿದ್ದೆನೆಂದು ನುಡಿಯುತ್ತಾನೆ.

ಪ್ರಸ್ತುತ ಚಿತ್ರದಲ್ಲಿ ಬಾಲಕ ಬಸವನು ಉದ್ದನೆಯ ತಲೆಗೂದಲನ್ನು ಹೊಂದಿ, ಹಣೆಗೆ ವಿಭೂತಿ ಧರಿಸಿ, ಗಾಢವಾದ ಕೆಂಪುಬಣ್ಣದ ಅಂಗಿಯನ್ನು ಧರಿಸಿ, ಬಿಳಿಯ ಒಳ ಉಡುಪನ್ನು ಧರಿಸಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ಆತನ ಕಣ್ಣುಗಳಲ್ಲಿ ತಾನು ತಪ್ಪಿತಸ್ಥನಲ್ಲವೆಂಬ ಭಾವನೆ ಎದ್ದುತೋರುತ್ತದೆ. ಹೊಂಡದಲ್ಲಿದ್ದ ಬಾಲಕ ಬೆನಕನು ಕೈಯಲ್ಲಿ ಫಲಕವನ್ನಿಡಿದು ಮೇಲೆ ಬರುವಂತೆ ಚಿತ್ರಿಸಲಾಗಿದೆ. ಆತನು ಹೊರಬರುವ ಘಟನೆಯನ್ನು ಆತನ ಸಹಪಾಠಿಗಳು ಕುತೂಹಲದಿಂದ ಗಮನಿಸುತ್ತಿರುವುದನ್ನು ಕಾಣುತ್ತೇವೆ. ಅವರಲ್ಲಿ ಇಬ್ಬರು ಟೋಪಿಯನ್ನು ಧರಿಸಿ, ಉಳಿದವರು ಹಾಗೆ ಇದ್ದಾರೆ. ಉಟ್ಟು ಮಾದಲಾಂಭಿಕೆ ಆಕರ್ಷಕ ಸೀರೆಯನ್ನು ಧರಿಸಿ, ಹಣೆಗೆ ಕುಂಕುಮವನ್ನು ಧರಿಸಿದ್ದಾಳೆ, ಮಾದರಸನು ತಲೆಯನ್ನು ಅರ್ಧ ಬೋಳಿಸಿ ಜುಟ್ಟು ಕಟ್ಟಿಕೊಂಡಿರುವಂತೆ ಚಿತ್ರಿಸಲಾಗಿದೆ. ಅವರ ಕಣ್ಣುಗಳಲ್ಲಿ ಆತಂಕದ ಛಾಯೆ ಇನ್ನೂ ಮಾಸದಿರುವುದನ್ನು ಕಾಣಬಹುದಾಗಿದೆ. ಅವರ ಮುಂದೆ ನಿಂತಿರುವ ನೀಲಿಸೀರೆಯನ್ನುಟ್ಟ, ಮೂಗಿನಲ್ಲಿ ಎದ್ದು ಕಾಣುವ ನತ್ತನ್ನು ಧರಿಸಿ, ಹಣೆಗೆ ವಿಭೂತಿ, ಕುಂಕುಮ ಧರಿಸಿದಾಕೆ ಬೆನಕನ ತಾಯಿಯೆಂದು ತೋರುತ್ತದೆ. ಆಕೆಯ ಪಕ್ಕದಲ್ಲಿ ನಿಂತಾತ ಬೆನಕನ ತಂದೆಯಾಗಿರಬೇಕು. ತಲೆಗೆ ನೀಲಿಬಣ್ಣದ ರುಮಾಲು, ಹಣೆಗೆ ವಿಭೂತಿ, ಬಿಳಿಯ ಅಂಗಿ, ಮೇಲುವಸ್ತ್ರಗಳನ್ನು ಧರಿಸಿದ್ದಾನೆ. ಆತನ ಮುಖದಲ್ಲಿ 'ಸತ್ತ ಮಗ ಹೇಗೋ ಬದುಕಿ ಬಂದ' ಎಂಬ ಸಂತೃಪ್ತಿಯ ಮುಗುಳ್ನಗೆ ತಾಂಡವವಾಡುತ್ತಿದೆ. ತನ್ನ ಎರಡು ಕೈಗಳನ್ನು ಅರ್ಧ ಮೇಲೆತ್ತಿದ ಭಂಗಿ ಮನಸ್ಸಿನ ಸಂತೃಪ್ತಿಯನ್ನು ಸೂಚಿಸುತ್ತದೆ. ಕಲಾವಿದ ಇಂತಹ ಸಂಗತಿಗಳೆಡೆಗೆ ಗಮನವಿತ್ತಿದ್ದಾನೆ. ಇಡೀ ಕಲಾಕೃತಿಯನ್ನು ಒಟ್ಟು ಗಮನಿಸಿದಾಗ, ಇಲ್ಲಿ ಬಂದಿರುವ ಹಿನ್ನೆಲೆ ಚಿತ್ರಣವು ಆಧುನಿಕ ಸಂಗತಿಗಳ ಪ್ರಭಾವಕ್ಕೆ ಒಳಗಾಗಿದೆ ಎನ್ನಬಹುದು. ಅಲ್ಲಿ ಬಂದಿರುವ ಹೊಂಡದ ಮಾದರಿ, ಕಟ್ಟಡಗಳ ಮಾದರಿ, ಬಸವೇಶನ ಸಹಪಾಠಿಗಳು ಧರಿಸಿರುವ ಕೆಳ ಉಡುಗೆ, ಸಹಪಾಠಿ ಹುಡುಗಿಯೊಬ್ಬಳು

ಎದೆಯ ಮೇಲೆ ಇಳಿಬಿಟ್ಟುಕೊಂಡಿರುವ ಎರಡು ಜಡೆಗಳು ವರ್ತಮಾನವನ್ನು ಭೂತದೊಂದಿಗೆ ಬೆಸೆಯುವ ಪ್ರಯತ್ನದಲ್ಲಿ ಕಲಾವಿದ ತೊಡಗಿರಬೇಕೆಂಬ ಸಂದೇಹ ಮೂಡುತ್ತದೆ.

ಮೇಲಿನ ವಿಶ್ಲೇಷಣೆಯ ಪ್ರಕಾರ ಕಲಾಕೃತಿಯಲ್ಲಿ ಭೂತಕಾಲದ ಪ್ರಸಂಗವೊಂದನ್ನು ವರ್ತಮಾನ ಕಾಲದ ಸಂದರ್ಭಕ್ಕೆ ತಕ್ಕಂತೆ ರಚಿಸುವುದರ ಹಿಂದೆ ಚಿತ್ರಕಾರನಲ್ಲಿ ಭೂತಕಾಲದ ಪ್ರಸಂಗಗಳ ಗ್ರಹಿಕೆಯ ಕೊರತೆ ಕಾರಣ. ಆದರೂ ಸಂಯೋಜನೆ, ರಚನೆ, ವರ್ಣ ಸಂಯೋಜನೆ, ವಿನ್ಯಾಸದ ದೃಷ್ಟಿಯಿಂದ ಈ ಕಲಾಕೃತಿ ಮಹತ್ವದ್ದು. ಜಲವರ್ಣಮಾಧ್ಯಮದ ತಾಂತ್ರಿಕ ಸಾಧ್ಯತೆಯನ್ನು ದುಡಿಸಿಕೊಂಡ ಕಲಾವಿದರು ಮಾನವಾಕೃತಿಗಳಲ್ಲಿ ತಕ್ಕಮಟ್ಟಿಗೆ ಅಂಗಾಂಗಗಳನ್ನು ಪ್ರಮಾಣ ಬದ್ಧವಾಗಿ ರಚಿಸಿದ್ದಾರೆ. ಚಿತ್ರದ ಉದ್ದೇಶಕ್ಕೆ ತಕ್ಕ ಭಾವಗಳನ್ನು ಆಕೃತಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ಒಟ್ಟು ಸ್ಥಳಾವಕಾಶವನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಂಡು ಆಕೃತಿಗಳನ್ನೆಲ್ಲ ಮಧ್ಯದಲ್ಲಿ ಸಂಯೋಜಿಸಿ, ಚಿತ್ರದ ಮುಖ್ಯ ಆಶಯವನ್ನು ಕೆಳಭಾಗದಲ್ಲಿ ತೋರಿಸಲ್ಪಟ್ಟಿದ್ದಾರೆ. ಒಟ್ಟಾರೆ ಚಿತ್ರ ೧೨ನೆಯ ಶತಮಾನದ ಘಟನೆಯನ್ನು ಪ್ರತಿನಿಧಿಸದೇ ೨೦ನೇ ಶತಮಾನದ ಘಟನೆಯ ಅನುಭವವನ್ನು ನೀಡುತ್ತದೆ.

ಸತ್ತ ಗೆಳೆಯನನ್ನು ಬದುಕಿಸಿದ ಬಾಲಕ ಬಸವ–೨

"ಕಲಾವಿದನು ನಿರ್ಮಿಸಿದ ಕಲಾಕೃತಿಯ ಆಕಾರ, ವರ್ಣ, ಎತ್ತರ, ಅಗಲ, ಆಳ ಬೇರೆ ಬೇರೆಯಾಗಿದ್ದರೂ ಎಲ್ಲದರಲ್ಲೂ ರೇಖೆ ಮತ್ತು ವರ್ಣಗಳೇ ಆಟವಾಡುತ್ತವೆ. ಆದರೂ ಕಲಾಕೃತಿಯೊಂದು ತನ್ನ ಇನ್ನಿತರ ಅಂಶಗಳಿಗಿಂತಲೂ ವರ್ಣಸಂಯೋಜನೆಯ ತೀವ್ರತೆಯಿಂದ ನೋಡುಗನ ಪ್ರಜ್ಞೆಯನ್ನು ಕ್ಷಣಾರ್ಧದಲ್ಲಿ ಪ್ರಭಾವಿಸಬಲ್ಲದು"[೩೧] ಎಂಬ ಮಾತು ಸತ್ಯ. ಕಲಾವಿದ ಎಂ. ವೀರಪ್ಪನವರು ಈ ಚಿತ್ರದಲ್ಲಿ ಕಪ್ಪು–ಬಿಳುಪು ಈ ಎರಡು ವರ್ಣಗಳಿಂದ ಇಡೀ ಕಲಾಕೃತಿಯನ್ನು ಅತ್ಯಂತ ನೈಜ ಹಾಗೂ ಕಲಾತ್ಮಕವಾಗಿ ಚಿತ್ರಿಸಿದ್ದು, ಇಲ್ಲಿ ಅವರ ವರ್ಣಗಳ ಹಿಡಿತದ ತಂತ್ರಗಾರಿಕೆಯನ್ನು ವಿಶೇಷವಾಗಿ ಗಮನಿಸಬಹುದಾಗಿದೆ.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಕಲಾಕೃತಿಗಳನ್ನು ಕಲಾವಿದ ಎಂ. ವೀರಪ್ಪನವರು ರಚಿಸಿದ್ದಾರೆ. ಆ ಎರಡೂ ಕಲಾಕೃತಿಗಳು ಸುತ್ತೂರು ಮಠದಲ್ಲಿ ಸಂಗ್ರಹಗೊಂಡಿವೆ. ಅದರಲ್ಲಿ ಒಂದಾದ ಈ ಚಿತ್ರವು ೧೨"x೧೮" ಅಳತೆಯ, ಜಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಈ ಚಿತ್ರದಲ್ಲಿ ಬಾಲಕ ಬಸವನು ಮೆರೆದ ಪವಾಡವನ್ನು ವಸ್ತುವನ್ನಾಗುಳ್ಳ ಎರಡೂ ಚಿತ್ರಗಳು ರಚನೆಯಲ್ಲಿ ಭಿನ್ನತೆಯನ್ನು ಪಡೆದಿವೆ. ಒಂದೇ ವಸ್ತುವನ್ನು ಒಬ್ಬನೇ ಕಲಾವಿದ ಭಿನ್ನ ಭಿನ್ನ ಆಯಾಮಗಳಲ್ಲಿ ಹೇಗೆ ನೋಡಬಲ್ಲ ಎಂಬುದನ್ನು ನಿರೂಪಿಸಲು ಇಲ್ಲಿ ಎರಡನೆಯ ಚಿತ್ರವನ್ನು ವಿಶ್ಲೇಷಿಸಲಾಗಿದೆ. ಹೊಂಡದಿಂದ ಬಾಲಕ ಬೆನಕನು ಕೈಯಲ್ಲಿ ಹಲಗೆಯನ್ನು ಹಿಡಿದುಕೊಂಡಿದ್ದಾನೆ. ಆತನ ಕೂದಲುಗಳು ನೀರಿನಲ್ಲಿ ತೋಯ್ದದ್ದರ ಸಂಕೇತವಾಗಿ ತೊಪ್ಪತೊಪ್ಪೆಯಾಗಿ ಕಾಣುತ್ತಿವೆ. ಹಲಗೆ ಮತ್ತು ಕೈಯಿಂದ ನೀರಿನ ಹನಿಗಳು ಜಾರಿ ಬೀಳುತ್ತಿರುವುದನ್ನು ಕಾಣಬಹುದು. ಹೊಂಡದ ಮೆಟ್ಟಿಲುಗಳನ್ನು ಸೂಚಿಸಲು ಗೆರೆಗಳನ್ನು ಕಲಾವಿದ ತ್ರೈ ಆಯಾಮದ(೩ಡಿ) ಮಾದರಿಯನ್ನು ಬಳಕೆ ಮಾಡಿದ್ದಾನೆ. ಬಾಲಕ ಬಸವನು ಕಪ್ಪುಬಣ್ಣದ

೩೧. ಪಿ.ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ, ಪು–೫೬೧

ನಿಲುವಂಗಿಯನ್ನು, ಬಿಳಿಯ ಬಣ್ಣದ ಪೈಜಾಮನ್ನು ಧರಿಸಿ, ಕೈಯಲ್ಲಿ ಫಲಕವನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಅಂತೆಯೇ ತಲೆಗೆ ಶ್ರೀಮಂತಿಕೆಯ ಸಂಕೇತವಾಗಿರುವ ಅಲಂಕೃತ ಟೊಪ್ಪಿಗೆ ಧರಿಸಿ, ತನ್ನ ಬಲಗೈಯನ್ನು ಬೆನಕನೆಡೆಗೆ ಚಾಚಿದ್ದಾನೆ. ಆತನ ಮುಖದಲ್ಲಿ ಯಾವುದೇ ಆತಂಕದ ಛಾಯೆ ಕಾಣಲಾಗುವುದಿಲ್ಲ. ಬಹುಶಃ ತಾನು ತಪ್ಪಿತಸ್ಥನಲ್ಲ ಎಂಬ ದೃಢವಾದ ಮನಸ್ಥಿತಿ ಅದಕ್ಕೆ ಕಾರಣವಾಗಿರಬೇಕು. ಆತನ ಹೆಗಲ ಮೇಲೆ ಮಾದರಸನು ಎಡಗೈಯನ್ನಿಟ್ಟಿದ್ದಾನೆ. ಆತನ ಬಲಗೈಯ ತೋರುಬೆರಳಿನ ಭಂಗಿಯು ಇದೇನಾಶ್ಚರ್ಯ ಎಂಬುದನ್ನು ಸೂಚಿಸುತ್ತದೆ. ಆತನ ಪಕ್ಕದಲ್ಲಿ ರಾಜಮನೆತನದ ಉಡುಪನ್ನು ಧರಿಸಿದ ಮಾದಲಾಂಬಿಕೆಯು ಇದ್ದಾಳೆ. ಅವಳ ದೃಷ್ಟಿಯು ಆಶ್ಚರ್ಯಚಕಿತತೆಯನ್ನು ವ್ಯಕ್ತಪಡಿಸುವಂತಿದೆ. ಬೆನಕನ ತಂದೆ ೧೬ನೆ ಚಿತ್ರದಲ್ಲಿ ಮಗನನ್ನು ಕಂಡ ಸಂತಸವನ್ನು ವ್ಯಕ್ತಪಡಿಸುವಂತಿದ್ದರೆ, ಈ ಚಿತ್ರದಲ್ಲಿ ಆತನು ತನ್ನ ಮಗ ಬದುಕಿ ಬಂದುದಕ್ಕೆ ಧನ್ಯತಾಭಾವದ ಸೂಚಕವಾಗಿ ಎರಡೂ ಕೈಗಳನ್ನು ಮುಗಿದಿರುವಂತೆ ಚಿತ್ರಿಸಲಾಗಿದೆ. ಸಹಪಾಠಿಗಳೆಲ್ಲರ ಉಡುಪುಗಳು ಅವರು ಶ್ರೀಮಂತಿಕೆಯ ಮನೆತನದಿಂದ ಬಂದವರೆಂಬ ಭಾವನೆ ಮೂಡಿಸುವಂತಿವೆ. ವಿವಿಧ ಭಂಗಿಗಳಲ್ಲಿ ನಿಂತ ಅವರ ಮುಖಭಾವನೆಗಳು ಆತಂಕವನ್ನು ವ್ಯಕ್ತಪಡಿಸುತ್ತಿವೆ. ಚಿತ್ರ ೧೬ನ್ನು ಕಲಾವಿದ ಆಧುನಿಕತೆಯ ಸ್ಪರ್ಶದಿಂದ ಚಿತ್ರಿಸಿದ್ದಿರಬೇಕು. ಅದು ಸರಿಯೆನ್ನಿಸದೆ ಸಾಂಪ್ರದಾಯಿಕ ಶೈಲಿಯ ಈ ಚಿತ್ರವನ್ನು ರಚಿಸಿರಬೇಕೆಂದು ತೋರುತ್ತದೆ. ಚಿತ್ರ ೧೬ರಲ್ಲಿ ಬಂದಿರುವ ಉಪ್ಪರಿಗೆಯ ಮನೆಯು ಆಧುನಿಕ ಶೈಲಿಯನ್ನು ನೆನಪಿಸುತ್ತದೆ. ಪ್ರಸ್ತುತ ಚಿತ್ರದಲ್ಲಿ ಅದನ್ನು ಸಾಂಪ್ರದಾಯಿಕ ಉಪ್ಪರಿಗೆಯ ಮನೆಯ ಶೈಲಿಯನ್ನು ಹೊಂದಿರುವಂತೆ ಚಿತ್ರಿಸಲಾಗಿದೆ. ಹೊಂಡದಲ್ಲಿರುವ ನೀರಿನ ಅಲೆಗಳು ಇಲ್ಲಿ ವೃತ್ತಾಕಾರದ ಚಲನೆಯನ್ನು ಹೊಂದಿರುವಂತೆ ಸ್ಪಷ್ಟವಾಗಿ ಮೂಡಿಸಲಾಗಿದೆ.

ಪ್ರಸ್ತುತ ಚಿತ್ರದಲ್ಲಿರುವ ಮಕ್ಕಳ ಆಕೃತಿಗಳ ವೇಷ ಭೂಷಣಗಳು ಬ್ರಿಟಿಷ್ ವೇಷ ಭೂಷಣಗಳನ್ನೇ ನೆನಪಿಸುತ್ತವೆ. ಸಂಯೋಜನೆಯ ದೃಷ್ಟಿಯಿಂದ ಹಿಂದಿನ ಚಿತ್ರಕ್ಕೂ ಈ ಚಿತ್ರಕ್ಕೂ ಅಂತಹ ವ್ಯತ್ಯಾಸಗಳು ಕಂಡು ಬರುವುದಿಲ್ಲ. ಹಿನ್ನೆಲೆಯಲ್ಲಿ ಗುಡ್ಡದಂತಹ ವಿನ್ಯಾಸ, ಅದರ ಮೇಲೆ ಹಂಚಿನ ಮನೆಯನ್ನು ಚಿತ್ರಿಸಿದ್ದಾರೆ. ಪುಷ್ಕರಣಿಯ ಒಂದು ಭಾಗವನ್ನು ಚಿತ್ರಿಸಿದ್ದರೂ, ಅದು ಅಷ್ಟಕೋನಗಳಲ್ಲಿ ರಚಿತವಾಗಿದೆಯೆಂಬ ಅನುಭವ ದಕ್ಕುತ್ತದೆ. ಕಲ್ಲಿನ ಮೇಲ್ಭಾಗದಲ್ಲಿ ರಚಿಸಿರುವ ಮೈವಳಿಕೆ ಅನನ್ಯವಾದುದು. ಆ ವರ್ಣ ಸಂಯೋಜನೆ ತರತಮದಿಂದ ಕೂಡಿದ್ದು, ಅದರ ಮೇಲೆ ಹಿಂಭಾಗದಲ್ಲಿರಬಹುದಾದ ಮರವೊಂದರ ನೆರಳು ಬಿದ್ದಿರಬಹುದಾದ ಅನುಭವವನ್ನು ನೀಡುತ್ತದೆ.

೨.೨.೧೨. ಈ ಜನಿವಾರ ನನಗೇಕೆ ಎಂದು ಪ್ರಶ್ನಿಸುತ್ತಿರುವ ಬಸವಣ್ಣ (ಕಾಮಿಕ್ಸ್ ಚಿತ್ರಕಥೆ)

ಬಾಲಕ ಬಸವಣ್ಣನಿಗೆ ಯಜ್ಞೋಪವೀತವನ್ನು ತೊಡಿಸುವ ಸಂದರ್ಭವನ್ನು ಇಲ್ಲಿ ಕಾಣುತ್ತೇವೆ. ಈ ಕಲಾಕೃತಿಯಲ್ಲಿ ಕಡಿಮೆ ವರ್ಣಗಳನ್ನು ಬಳಸಿದ್ದರೂ ವಿಷಯಗಳ ನಿರೂಪಣೆ ಇಲ್ಲಿ ತನ್ನ ಉದ್ದೇಶವನ್ನು ಸಾಧಿಸಿದೆ. ವೈದಿಕ ಸಂಪ್ರದಾಯದಂತೆ ಮುಂಜಿಯನ್ನು ಧರಿಸಲು ಸಕಲ ಏರ್ಪಾಡುಗಳನ್ನು ಮಾದರಸ ಇಲ್ಲಿ ಮಾಡಿರುವುದು ಕಂಡುಬರುತ್ತದೆ. ಬಾಲಕ ಬಸವನು ಮುಂಜಿಯನ್ನು ಧರಿಸಲು ಮಣೆಯ ಮೇಲೆ ಕುಳಿತ ಸಂದರ್ಭದಲ್ಲಿ ಅವನ ಮನಸ್ಸಿನಲ್ಲಿ ಚಿಂತನೆ ರೂಪುವಡೆದು ಜನಿವಾರವನ್ನು ನಿರಾಕರಿಸುತ್ತಾನೆ.

ಮಾದರಸನು ತನ್ನ ಎರಡೂ ಕೈಗಳಲ್ಲಿ ಜನಿವಾರದ ಎರಡೂ ತುದಿಗಳನ್ನು ಬೆರಳಿನಲ್ಲಿ ಸಿಕ್ಕಿಸಿಕೊಂಡು ಮಗನಿಗೆ ತೊಡಿಸಲು ಸಿದ್ಧನಾಗಿರುವಂತೆ ಚಿತ್ರವು ಮನವರಿಕೆ ಮಾಡಿಕೊಡುತ್ತದೆ. ಅಂತೆಯೇ ಅವನ ಪಕ್ಕದಲ್ಲಿದ್ದ ಬಸವನು ಆಕ್ಷೇಪ ವ್ಯಕ್ತಪಡಿಸುವ ಭಾವನೆಯೂ ಸ್ಪಷ್ಟವಾಗಿ ಮೂಡಿಬಂದಿದೆ. ಬಸವಣ್ಣನ ಎದುರಿಗಿದ್ದ ಬ್ರಾಹ್ಮಣ ಆಚಾರ್ಯನು ಮಣೆಯ ಮೇಲೆ ಅಧಿಕಾರಯುತ ಶೈಲಿಯಲ್ಲಿ ಕುಳಿತು ಜನಿವಾರವನ್ನು ಧರಿಸುವಂತೆ ಬೋಧನೆ ಮಾಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು. ಅಕ್ಕನಾಗಮ್ಮ ಮತ್ತು ಮಾದಲಾಂಬಿಕೆಯರು ಬಸವಣ್ಣನ ಪಕ್ಕದಲ್ಲಿ ನಿಂತಿರುವ ಸನ್ನಿವೇಶವು ಇಲ್ಲಿ ಮೂಡಿಬಂದಿದೆ.

ಪ್ರಸ್ತುತ ಚಿತ್ರದಲ್ಲಿ ಪ್ರಮುಖವಾಗಿ ಗೋಚರಿಸುವುದು ಪ್ರಬುದ್ಧ ಸಂಯೋಜನೆ. ಚಿತ್ರವನ್ನು ನೋಡಿದಾಕ್ಷಣವೇ ಆಪ್ಯಾಯಮಾನವೆನಿಸುವ, ಕಥಾ ನಿರೂಪಣೆಗೆ ಪೂರಕವಾದ ಆಕೃತಿಗಳ ರಚನೆಯಿದೆ. ಹೀಗೆ ಚಿತ್ರ ಒಟ್ಟು ಸಮಗ್ರತೆಯನ್ನು ಸೂಚಿಸುತ್ತದೆ. ಜನಿವಾರ ಧಾರಣೆಯನ್ನು ವಿರೋಧಿಸುವ ಬಸವ, ಜನಿವಾರವನ್ನು ಧರಿಸಲು ಓಲೈಸುತ್ತಿರುವ ಪುರೋಹಿತ, ಮಾದರಸ ಇವರ ಆಕೃತಿಗಳಲ್ಲಿ ಇರುವ ಭಾವಗಳು ಅತ್ಯಂತ ಸುಸ್ಪಷ್ಟ. ಮಾನವ ಅಂಗ ರಚನಾ ಶಾಸ್ತ್ರದ ಪರಿಪಾಲನೆಯೂ ಅಷ್ಟೇ ಸ್ಫುಟ. ಹಿನ್ನೆಲೆಯಲ್ಲಿ ಶುಭ ಸಂಭ್ರಮದ ದ್ಯೋತಕವಾಗಿ ನಿರ್ಮಿಸಲಾಗಿರುವ ಚಪ್ಪರ, ಅದರೊಳಗಡೆ ರಚಿತವಾಗಿರುವ ಜನರು, ಹೀಗೆ ಸಾಂದರ್ಭಿಕತೆಗೊಂದು ಸ್ಪಷ್ಟವಾದ ಚಿತ್ರ ನಿರೂಪಣೆ ಅನನ್ಯ. ಎಂದಿನ ಕಾಮಿಕ್ಸ್ ಶೈಲಿಯಲ್ಲಿ ರಚನೆಗೊಂಡ ಇಲ್ಲಿನ ಆಕೃತಿಗಳಲ್ಲಿ ಅವಾಸ್ತವವೆನ್ನುವಂತಹ ವರ್ಣಮೇಳಗಳಾಗಲಿ, ರೇಖೆಗಳ ದುಂಡಾವರ್ತನೆಗಳು ಗೌಣ. ಮಕ್ಕಳ ಮನಸ್ಸಿಗೆ ಥಟ್ಟನೆ ತಟ್ಟುವ ಜೀವಂತ ಕ್ರಿಯೆ ಈ ಚಿತ್ರದ ಅಗ್ಗಳಿಕೆ.

೨.೨.೧೩. ಬಾಲಕ ಬಸವಣ್ಣನಿಂದ ಜನಿವಾರ ನಿರಾಕರಣೆ (ಕಾಮಿಕ್ಸ್ ಚಿತ್ರಕಥೆ)–೧

ಯಜ್ಞೋಪವೀತವನ್ನು ನೀನು ಧರಿಸುವುದು ಬ್ರಾಹ್ಮಣ ಧರ್ಮದ ಪಾಲನೆ ಮತ್ತು ಕರ್ತವ್ಯ ಎಂದು ಮಾದರಸ ಬಾಲಕ ಬಸವನಿಗೆ ಮನವರಿಕೆ ಮಾಡಿ ಕೊಡುವಲ್ಲಿ ವಿಫಲನಾಗುತ್ತಾನೆ. ಆ ಮಾತಿಗೆ ಪ್ರತಿಕ್ರಿಯೆಯೆಂಬಂತೆ ಬಾಲಕ ಬಸವನು ಎದ್ದು ನಿಂತು ಎರಡೂ ಕೈಗಳಿಂದ ನಿರಾಕರಣೆಯ ಭಾವವನ್ನು ಪ್ರಕಟಿಸಿದ್ದಾನೆ. ಮಾದರಸನು, 'ನಿನ್ನ ಮಾತೇ ಅರ್ಥವಾಗದು ಬಸವ, ತಲೆಮಾರುಗಳಿಂದ ಗೌರವಿಸಿಕೊಂಡು ಬಂದ ಪದ್ಧತಿಗಳನ್ನು ಏಕೆ ಬದಲಾಯಿಸಬೇಕು?' ಎಂದು ಪ್ರಶ್ನಿಸುತ್ತಾನೆ. ಉತ್ತರವಾಗಿ ಬಸವನು 'ಕ್ಷಮಿಸು ಅಪ್ಪಾ, ಅರ್ಥವಿಲ್ಲದ ಈ ಗೌರವ ನನಗೆ ಬೇಡ. ದೇವರ ಮುಂದೆ ಎಲ್ಲರೂ ಒಂದೇ' ಎಂಬ ವಾದವನ್ನು ಮುಂದಿಡುತ್ತಾನೆ. ಈ ಚಿತ್ರದಲ್ಲಿ ಬಾಲಕ ಬಸವನ ಮುಖದಲ್ಲಿ ವ್ಯಕ್ತವಾದ ಭಾವವು ಅತ್ಯಂತ ದೃಢತೆಯಿಂದ ಕೂಡಿರುವಂತೆ ಕಲಾವಿದ ಚಿತ್ರಿಸಿರುವುದು ವಿಶೇಷವಾಗಿದೆ.

ಮೇಲಿನ ಚಿತ್ರದಂತೆ ಈ ಚಿತ್ರವೂ ಸಹ ಪ್ರಬುದ್ಧ ಸಂಯೋಜನೆ. ಮುನ್ನೆಲೆಯಲ್ಲಿ ಬಾಲ ಬಸವ ಮತ್ತು ಮಾದರಸನ ಆಕೃತಿಗಳಲ್ಲಿ ಜನಿವಾರ ಧಾರಣೆಯ ಕುರಿತು ವಾಗ್ವಾದ ನಡೆಯುತ್ತಿರುವುದನ್ನು, ಹಿನ್ನೆಲೆಯಲ್ಲಿ ನಿಂತು ಅಪ್ಪ–ಮಗನ ವಾಗ್ವಾದವನ್ನು ವೀಕ್ಷಿಸುತ್ತಿರುವ ಮಾದರಸನ ಬಂಧುಗಳು, ೧/೩ ರಷ್ಟು ಭಾಗದಲ್ಲಿ ಚಿತ್ರಿತವಾದ ಈ ಆಕೃತಿಗಳಲ್ಲಿ ಎಂದಿನ ಕಾಮಿಕ್ಸ್ ಚಿತ್ರ ಶೈಲಿಯೇ ಮುಂದುವರೆದಿದೆ.

ಕಪ್ಪುವರ್ಣದ ರೇಖೆಗಳಿಂದಲೇ ಬಸವನ ಹಾಗೂ ಮಾದರಸನ ಆಕೃತಿಗಳಲ್ಲಿ ನೆರಳಿನ ಛಾಯೆ ತೋರಿಸುವ, ಒಳಾವರಣದಲ್ಲಿ ತೆಳುವಾದ ಸಹಜವಾದ ವರ್ಣ ಲೇಪನವಿದೆ. ಹಿನ್ನೆಲೆಯ ಆಕೃತಿಗಳಲ್ಲಿ ಕಂಡುಬರುವ ಪುರೋಹಿತನ ಮುಖಚರ್ಯೆಯಲ್ಲಿ ಅಪ್ಪ-ಮಗನ ವಾಗ್ವಾದದಿಂದ ಆತಂಕದ ಗೆರೆಗಳು ಮೂಡಿವೆ. ಹಿನ್ನೆಲೆಯ ತೆಳು ಹಸಿರಿನ ವರ್ಣಲೇಪನ ಹಿಂದಿನ ಚಿತ್ರದಲ್ಲಿ ಕಂಡುಬರುವ ಚಪ್ಪರದ ಮುಂದುವರಿಕೆಯನ್ನು ಇಲ್ಲಿ ಉಳಿಸಿಕೊಂಡಿದ್ದರಿಂದ ಈ ಘಟನೆ ಚಪ್ಪರದೊಳಗೆ ನಡೆದದ್ದು ಎಂಬುದನ್ನು ಸೂಚಿಸುತ್ತದೆ. ಇಂತಹ ಪುನರಾವರ್ತನೆಗಳು ಕಾಮಿಕ್ಸ್‌ಗಳಲ್ಲಿ ಅನಿವಾರ್ಯವೂ ಹೌದು.

ಬಾಲಕ ಬಸವಣ್ಣನಿಂದ ಜನಿವಾರ ನಿರಾಕರಣೆ-೨

ಕಲಾವಿದ ಬಿ. ಸೂರಿಯವರು ೨೦೦೮ರಲ್ಲಿ ಈ ಕಲಾಕೃತಿಯನ್ನು ರಚಿಸಿದ್ದಾರೆ. ಬಾಲಕ ಬಸವಣ್ಣನು ತನಗೆ ಹಾಕಿದ ಜನಿವಾರವನ್ನು ತೆಗೆದು ನೆಲಕ್ಕೆ ಬೀಳಿಸಲು ಹೊರಟ ಸನ್ನಿವೇಶವನ್ನು ಕಲಾವಿದ ಇಲ್ಲಿ ಚಿತ್ರಿಸಿದ್ದಾನೆ. ಬಸವಣ್ಣನು ತೆಳು ಹಳದಿಬಣ್ಣದ ಪಂಚೆಯನ್ನು ಉಟ್ಟಿದ್ದು, ಹೆಗಲ ಮೇಲೆ ಮೇಲುಹೊದಿಕೆಯನ್ನು ಧರಿಸಿದ್ದಾನೆ. ಆದರೆ ಅದು ಆತನ ಆವೇಶದ ಸಂದರ್ಭದಲ್ಲಿ ಕೆಳಗೆ ಬಿದ್ದಿರುವುದನ್ನು ಗಮನಿಸಿಲ್ಲವೆಂಬುದಾಗಿ ಚಿತ್ರಕಾರನ ಕಲ್ಪನೆಯಾಗಿದೆ. ಇದು ಸಹಜವಾದ ಚಿತ್ರಣವೆನ್ನಬಹುದು. ಮುಂದಲೆಯನ್ನು ಬೋಳಿಸಿ ಹಿಂದೆ ಜುಟ್ಟನ್ನು ಕಟ್ಟದೆ ಬಿಟ್ಟಿರುವ ಬಾಲಕ ಬಸವಣ್ಣನ ದೇಹವರ್ಣವು ಚೆನ್ನಾಗಿ ಮೂಡಿಬಂದಿದೆ. ವರ್ಣಗಳ ಸಂಯೋಜನೆ ಪ್ರಸ್ತುತ ಕಲಾಕೃತಿಯಲ್ಲಿ ಅತ್ಯುತ್ತಮವಾಗಿ ಮೂಡಿದೆ. ಬಸವೇಶ್ವರನ ದೇಹಾಕಾರವನ್ನು ಚಿತ್ರಿಸುವಲ್ಲಿ ಕಲಾವಿದ ಪ್ರಮಾಣಬದ್ಧತೆಯನ್ನು ಕಂಡರಿಸಿದ್ದಾನೆ. ಆತನ ದೇಹದ ಅಂಗಾಂಗಗಳಲ್ಲಿ, ಕೈ, ಕಾಲು, ಮೊಣಕಾಲು ಇವುಗಳ ಪ್ರಮಾಣವು ಸುಮಾರು ಪ್ರೌಢ ಇಲ್ಲವೆ ಪ್ರಾಯ ಉಕ್ಕುವ ವ್ಯಕ್ತಿಯನ್ನು ಹೋಲುತ್ತವೆ. ಬಸವಣ್ಣನ ಹಿನ್ನೆಲೆಯಲ್ಲಿ ಮಾಡಿರುವ ವರ್ಣ ಸಂಯೋಜನೆಯು ಉತ್ತಮವಾಗಿದೆ, ಅಲ್ಲದೇ ಬೆಂಕಿಯಂತಹ ವಿನ್ಯಾಸವನ್ನು ಹೊಂದಿದ್ದು ಬಸವ ಈ ಪುರೋಹಿತಶಾಹಿ ವರ್ತನೆಗಳ ಕುರಿತು ಪ್ರತಿಭಟನೆಯನ್ನು ಸೂಚಿಸುವ ಅರ್ಥವನ್ನು ಹೊಂದಿದೆ. ಹಳದಿ, ಕೆಂಪು ಮಿಶ್ರಣಗಳಿಂದ ಮೋಡಗಳನ್ನು ಚಿತ್ರಿಸಿರುವುದು ಕ್ರಾಂತಿಕಾರಿ ಮನೋಭಾವನೆಗೆ ಭೂಮಿಕೆಯನ್ನು ಒದಗಿಸಿದಂತಿದೆ. ಬಸವಣ್ಣ ಜನಿವಾರವನ್ನು ಕೈಯಲ್ಲಿ ಹಿಡಿದು ಇನ್ನೇನು ಕೆಳಗೆ ಬಿಡಬೇಕೆನ್ನುವ ಹೊತ್ತಿನವರೆಗೆ ಮಾತ್ರ ಚಿತ್ರ ನಿಂತು ವಿರಮಿಸಿದೆ. ಆತನ ಹಿಂದೆ ತಂದೆ ಮಾದರಸ ಪೀಠದ ಮೇಲೆ ಕುಳಿತುಕೊಂಡು ತನ್ನ ಬಲ ಹಸ್ತವನ್ನು ಸ್ವಲ್ಪ ಮೇಲೆತ್ತಿ ನಿರಾಕರಣೆಯ ಮುದ್ರೆಯನ್ನು ಹಿಡಿದಿರುವುದು ಕಂಡುಬರುತ್ತದೆ. ಅದು ಬಸವಣ್ಣನಿಗೆ, ಜನಿವಾರವನ್ನು ಬಿಡಬೇಡ ಎಂದು ಕೇಳಿ-ಕೊಳ್ಳುವಂತಿದೆ. ಆತನ ಹಿಂದೆ ಮಾದಲಾಂಬಿಕೆ, ಅಕ್ಕನಾಗಮ್ಮ ಇಬ್ಬರು ಆತಂಕದಿಂದ ಈ ದೃಶ್ಯವನ್ನು ನೋಡುತ್ತಿದ್ದ ಸಂಗತಿಯು ಮೂಡಿಬಂದಿದೆ.

ಬಸವಣ್ಣನ ಜೀವನ ಚರಿತ್ರೆಗಳಲ್ಲಿ ಬಾಲಬಸವನು ಜನಿವಾರ ನಿರಾಕರಿಸಿದ್ದು ಅವನ ಬಾಲ್ಯಾವಸ್ಥೆಯಲ್ಲಿ ಎಂದು ಹಲವಾರು ಕಡೆ ಉಲ್ಲೇಖವಾಗಿದೆ. ಆದರೆ ಇಲ್ಲಿ ಯುವಕನಾಗಿದ್ದಾಗ ಜನಿವಾರ ನಿರಾಕರಿಸಿದನೆಂಬುದಕ್ಕೆ ಈ ಚಿತ್ರ ಸಾಕ್ಷಿಯಾಗುತ್ತದೆ. ಚಿತ್ರಿತಗೊಂಡ ಬಸವನ ದೇಹದಲ್ಲಿ ಯೌವ್ವನಾವಸ್ಥೆಯ ಲಕ್ಷಣಗಳಿರುವುದುಂಟು. ಚಿತ್ರರಚನೆಯಲ್ಲಿ ವೃತ್ತಿಪರ ಕುಶಲತೆ ಕಾಣುತ್ತದೆ. ಆಕೃತಿಯಲ್ಲಿ ಜನಿವಾರವನ್ನು

ತಿರಸ್ಕರಿಸುವ ದಿಟ್ಟತನದ ಭಾವ ವ್ಯಕ್ತವಾಗಿದೆ. ಮಾನವ ಸಹಜವಾದ, ವರ್ಣಮೇಳಕ್ಕೆ ಪೂರಕವಾದ ಹಿನ್ನೆಲೆಯ ವಿನ್ಯಾಸ, ಚಿತ್ರದಲ್ಲಿ ಸ್ಪಷ್ಟತೆ ಇವು ಈ ಚಿತ್ರದ ಧನಾತ್ಮಕ ಅಂಶಗಳು.

"ಚಿತ್ರಗಳಲ್ಲಿ ಬಣ್ಣ, ಆಕಾರಗಳು ಆ ಸೃಷ್ಟಿಯ ಅತ್ಯುತ್ಕೃಷ್ಟವದ ಅಂಶಗಳು. ಬಣ್ಣಗಳ ವಿವಿಧ ಛಾಯಾಮಾಲೆ ಕಲಾವಿದನ ವಿವಿಧ ಭಾವೋದ್ರೇಕಗಳೊಂದಿಗೆ ಹೊಂದಿಕೊಳ್ಳಬಲ್ಲವು. ಕೆಂಪು ಆಕ್ರೋಶಕ್ಕೆ, ಹಳದಿ ಸಂತೋಷಕ್ಕೆ, ನೀಲಿ ಹಾತೊರೆಯುವಿಕೆಗೆ"[೩೨] ಹೀಗೆ ಕಲಾವಿದನು ತನ್ನ ಕಲಾಕೃತಿಯಲ್ಲಿ ವರ್ಣಸಂಯೋಜನೆಯನ್ನು ಆಳ, ಪ್ರಖರತೆ ಹಾಗೂ ನೆರಳು ಬೆಳಕುಗಳ ವಿನ್ಯಾಸಕ್ಕನುಸಾರವಾಗಿ ತನ್ನ ಭಾವನೆಗಳ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ದುಡಿಸಿಕೊಳ್ಳುತ್ತಾನೆ.[೩೩]

೨.೨.೧೪. ಮೂಢ ಆಚರಣೆಗಳನ್ನು ಪ್ರಶ್ನಿಸುತ್ತಿರುವ ಬಾಲಕ ಬಸವಣ್ಣ

"ನಮ್ಮ ಪ್ರಾಚೀನ ಚಿತ್ರಕಲೆಯ ಸ್ವರೂಪ ಇಂದು ಇಲ್ಲದಿದ್ದರೂ ಸಾಂಪ್ರದಾಯಿಕ ಸಂದರ್ಭದಲ್ಲಿ ಪ್ರಾಚೀನ ಕಲಾ ಶೈಲಿಯನ್ನು ಇಂದಿನ ಆಧುನಿಕ ಸಂದರ್ಭದಲ್ಲಿಯೂ ಆಗಾಗ ಪುನರಾವರ್ತಿಸಿ-ಕೊಳ್ಳುತ್ತೇವೆ."[೩೪] ಹಾಗೆಯೇ ಕಲಾವಿದ ಮುಗಳಿಯವರು ಸಾಂಪ್ರದಾಯಿಕ ಶೈಲಿಯಲ್ಲಿಯೇ ಹೆಚ್ಚು ಕಲಾಕೃತಿಗಳು ರಚಿಸಿರುವುದನ್ನು ಕಾಣಬಹುದಾಗಿದೆ. ಈ ಮೇಲಿನ ಚಿತ್ರವನ್ನು ೪೮"x೩೬" ಅಳತೆಯ, ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಈ ಚಿತ್ರದಲ್ಲಿ ಬಸವನು ಬಾಲ್ಯದಲ್ಲಿ ಬ್ರಾಹ್ಮಣ ಧರ್ಮದ ಅರ್ಥಹೀನ ಸಂಪ್ರದಾಯಗಳನ್ನು ಖಂಡಿಸುತ್ತಿರುವ ಸಂದರ್ಭವನ್ನು ಹಿಡಿದಿಡಲಾಗಿದೆ. ಬಾಲಕ ಬಸವನಿಗೆ ಎಂಟು ವರ್ಷಗಳು ತುಂಬುವ ಸಂದರ್ಭದಲ್ಲಿ ಮಾದರಸನು ಮಗೂ ಬಸವ, ನೀನು ಬ್ರಾಹ್ಮಣ ಧರ್ಮದಲ್ಲಿ ಹುಟ್ಟಿದ ಕಾರಣದಿಂದ ನಮ್ಮ ಮತದ ಅನುಸಾರವಾಗಿ ಉಪನಯನವನ್ನು ಮಾಡಿಸಿಕೊ. ಇಲ್ಲದಿದ್ದರೆ ಬ್ರಾಹ್ಮಣ್ಯ ಲಭಿಸುವುದಿಲ್ಲ. ಉಪನಯನವನ್ನು ಮಾಡಿಸಿಕೊಳ್ಳದೇ, ಜನಿವಾರವನ್ನು ಧರಿಸದೇ ಇದ್ದರೆ ಸತ್ಕುಲ ಪ್ರಸೂತರಾದ ಬ್ರಾಹ್ಮಣರು ಅಂಥವರ ಮನೆಯಲ್ಲಿ ನೀರನ್ನು ಸಹ ಸೇವಿಸುವುದಿಲ್ಲ. ಕರ್ಮವನ್ನು ಮಾಡಿಸುವುದಿಲ್ಲ ಎಂದು ಮುಂತಾಗಿ ಧರ್ಮದ ಬೋಧನೆ ಮಾಡಿ ಅದರಂತೆ ನಡೆದುಕೊ ಎಂದು ತಿಳಿಸುತ್ತಾನೆ. ಆ ಮಾತಿಗೆ ಉತ್ತರವನ್ನು ನೀಡುವ ಸನ್ನಿವೇಶವನ್ನು ಪ್ರಸ್ತುತ ಚಿತ್ರದಲ್ಲಿ ಕಾಣುತ್ತೇವೆ. ತೈಲವರ್ಣ ಮಾಧ್ಯಮದಲ್ಲಿ ರಚಿತವಾದ ಈ ಕೃತಿ ನೈಜ ಅಭಿವ್ಯಕ್ತಿಗೆ ಹತ್ತಿರವಾದುದಾಗಿದೆ. ಬಾಲಕ ಬಸವಣ್ಣನಿಗೆ ತಂದೆ ತಾಯಿಗಳು ಬುದ್ಧಿ ಹೇಳುವುದರ ಸೂಚಕವಾಗಿ ಮಾದರಸ ತನ್ನ ಎರಡೂ ಕೈಗಳನ್ನು ಅರ್ಧಕ್ಕೆ ಎತ್ತಿ ಮುಂಚಾಚಿ ಬೋಧನೆ ಮಾಡುವಂತೆ ಚಿತ್ರಿಸಲಾಗಿದೆ. ಇಳಿಯಬಿಟ್ಟ ತಲೆಗೂದಲು, ಹೆಗಲ ಮೇಲೆ ಹೊದ್ದ ಮೇಲು ಹೊದಿಕೆ, ಶುಭ್ರವಾದ ನಿರಿಗೆಗಳನ್ನುಳ್ಳ ಬಿಳಿಯ ಪಂಚೆಯನ್ನು ಧರಿಸಿರುವ ಮಾದರಸ, ಅಂತೆಯೇ ಗಾಢ ನೀಲಿವರ್ಣದ ಸೀರೆಯನ್ನುಟ್ಟು, ಅರ್ಧತಲೆಯವರೆಗೆ ಸೆರಗನ್ನು ಹೊದ್ದಿರುವ,

---

೩೨. ಪಿ. ಆರ್. ತಿಪ್ಪೇಸ್ವಾಮಿ (ಸಂ.) : ಚಿತ್ರಕಲಾ ಪ್ರಪಂಚ, ಪು–೫೬೨

೩೩. ಡಾ. ಲಕ್ಷ್ಮೀದೇವಿ ಗವಾಯಿ : ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು(ಪಿಹೆಚ್.ಡಿ ಮ.ಪ್ರ.), ಪು–೧೬೧

೩೪. ಡಾ. ರವೀಂದ್ರ ಕಮ್ಮಾರ : ಚಿತ್ರಕಲಾವಿದ ವಿ.ಬಿ. ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ (ಅಪ್ರ.ಪಿಎಚ್.ಡಿ. ಮ.ಪ್ರ), ಪು–೯೫

ಸಹಧರ್ಮಿಣಿಯಾದ ಮಾದಲಾಂಬಿಕೆ ಇವರನ್ನು ಬ್ರಾಹ್ಮಣಧರ್ಮಕ್ಕೆ ಸೇರಿದವರೆಂಬ ಭಾವನೆ ಬರುವಂತೆ ಚಿತ್ರಿಸಲಾಗಿದೆ. ಬಾಲಕ ಬಸವಣ್ಣನು ಶುಭ್ರವಾದ ಬಿಳಿಯ ನಿಲುವಂಗಿ, ಮೊಣಕಾಲಿನವರೆಗೆ ಧರಿಸಿದ ಬಿಳಿಯ ಪಂಚೆ, ಎರಡೂ ಕೈಗಳನ್ನು ಅಗಲವಾಗಿ ಚಾಚಿ ಅರ್ಧ ಮೇಲಕ್ಕೆತ್ತಿದ ಭಂಗಿಯು ಬ್ರಾಹ್ಮಣ ಧರ್ಮದ ತತ್ವಗಳನ್ನು ನಾನು ಒಪ್ಪಲಾರೆ ಎಂಬ ದೃಢವಾದ ಭಾವನೆಗಳನ್ನು ಪ್ರಕಟ ಪಡಿಸುವಂತಿವೆ. ಆತನು ನಿಂತಿರುವ ಭಂಗಿಯು ಒಂದು ವಿಷಯವನ್ನು ನಿರಾಕರಿಸುವ ಎಲ್ಲ ಸಂಜ್ಞೆಗಳನ್ನು ಒಳಗೊಂಡಂತೆ ತೋರುತ್ತದೆ. ಆತನ ಆಲೋಚನೆಗಳನ್ನು ಮೇಲಿನ ಮೂರು ಚಿತ್ರಗಳ ಸಹಾಯದಿಂದ ತಿಳಿಸುವಂತೆ ಕಲಾವಿದ ಇಲ್ಲಿ ತಂತ್ರವನ್ನು ಬಳಸಿದ್ದಾನೆ.

ಮೊದಲನೆಯ ಚಿತ್ರದಲ್ಲಿ ಬ್ರಾಹ್ಮಣರು ಯಜ್ಞಯಾಗಾದಿಗಳನ್ನು ಮಾಡುವ ಪರಂಪರೆಯನ್ನು ತಿಳಿಸುವ ಸಂದರ್ಭವಿದೆ. ಎರಡನೆಯ ಚಿತ್ರದಲ್ಲಿ ಒಬ್ಬ ಮಹಿಳೆಯ ಗಂಡ ಸತ್ತು ಹೋದಲ್ಲಿ ಆಕೆಯು ವಿಧವೆಯಾದಳೆಂದು ಸಮಾಜಕ್ಕೆ ಸೂಚಿಸುವ ಸಲುವಾಗಿ ತಲೆಯನ್ನು ಬೋಳಿಸುವ ಪದ್ಧತಿಯ ಚಿತ್ರಣವಿದೆ. ಮೂರನೆಯ ಚಿತ್ರದಲ್ಲಿ ಯಜ್ಞದ ಕೊನೆಯ ಬಹುಮುಖ್ಯ ಭಾಗವಾಗಿ ಮೇಕೆಯನ್ನು ಬಲಿಕೊಡುವ ಸಂಪ್ರದಾಯದ ಚಿತ್ರಣವಿದೆ. ಈ ಮೂರು ಚಿತ್ರಗಳ ಮೂಲಕ ವೈದಿಕ ಧರ್ಮದಲ್ಲಿ ಮಾನವಧರ್ಮಕ್ಕೆ ವಿರೋಧವಾದ ಅಂಶಗಳಿವೆ ಎಂಬುದನ್ನು ಬಸವಣ್ಣ ತನ್ನ ತಂದೆ-ತಾಯಿಗಳಿಗೆ ತನ್ಮೂಲಕ ಸಮಾಜಕ್ಕೆ ಸಾರಿ ಹೇಳುವ ಚಿತ್ರಣವಿದೆ. ಚಿತ್ರದ ಒಂದು ಭಾಗದಲ್ಲಿ ಬ್ರಾಹ್ಮಣ ಪುರೋಹಿತ ವಟುಗಳು ಪುಟ್ಟದಾದ ಅಗ್ನಿಕುಂಡವನ್ನು ನಿರ್ಮಿಸಿ ಅದಕ್ಕೆ ತುಪ್ಪವನ್ನು ಹಾಕುತ್ತಿರುವ ಚಿತ್ರವು ಸಾಂಕೇತಿಕವಾಗಿ ಪಾಲು ಪಡೆದಿದೆ. ಅವರೆಲ್ಲರೂ ಅಚ್ಚರಿಯಿಂದ ಬಸವಣ್ಣನನ್ನು ನೋಡುತ್ತಿರುವಂತೆ ಕಲಾವಿದ ಚಿತ್ರವನ್ನು ಮೂಡಿಸಿದ್ದಾನೆ.

ಪ್ರಸ್ತುತ ಚಿತ್ರದ ನಿರೂಪಣೆಗೆ ಪೂರಕವಾಗಿ ಈ ಚಿತ್ರದಲ್ಲಿ ಗಾಢವರ್ಣಗಳು ಗೌಣ. ಅಂಗರಚನೆಯಲ್ಲಿ ದುರ್ಬಲ, ಭಾವಾಭಿವ್ಯಕ್ತಿಯಲ್ಲಿ ತಕ್ಕಮಟ್ಟಿಗೆ ಫಲ ನೀಡಿದ ಈ ಚಿತ್ರದಲ್ಲಿ ಯಥಾದರ್ಶನದ ಪರಿಪಾಲನೆ ಉತ್ತಮ. ಹಿನ್ನೆಲೆಯಲ್ಲಿ ಎಂದಿನಂತೆ ಮಾದರಸನ ಅರಮನೆಯ ವಿನ್ಯಾಸ, ಅರಮನೆಯೊಳಗೆ ಬ್ರಾಹ್ಮಣರ ಹೋಮ ಹವನವನ್ನು ಎರಡನೆಯ ಆಶಯವಾಗಿ ತೋರ್ಪಡಿಸಲಾಗಿದೆ. ಮುನ್ನೆಲೆಯ ಆಕೃತಿಗಳು ಹಿನ್ನೆಲೆಯ ಆಕೃತಿಗಳಿಗಿಂತ ಸ್ಪಷ್ಟ. ಬಸವನ ಉತ್ತರವನ್ನು ಅಂಡಾಕಾರದ ವಿನ್ಯಾಸದೊಳಗೆ ದೃಶ್ಯ ರೂಪದಲ್ಲಿ ತೋರಿಸಿರುವದು ಕಾಮಿಕ್ಸ್‌ನ ಪ್ರಭಾವದ ಹಿನ್ನೆಲೆಯಲ್ಲಿ. ಸದ್ಯ ಈ ಕಲಾಕೃತಿಯು ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ.

೨.೨.೧೫. ಜನಿವಾರವನ್ನು ತೊರೆದು ಹೊರಟಿರುವ ಬಸವ

"ಎಲ್ಲವೂ ಆನಂದದ ಅಭಿವ್ಯಕ್ತಿಯೇ ಆದುದರಿಂದ ಯೋಗಿಯ ದೃಷ್ಟಿ ಪಡಕೊಂಡವನಿಗೆ ಎಲ್ಲವೂ ಪರಮ ಸುಂದರವಾಗಿಯೇ ತೋರುತ್ತದೆ"[೩೫] ಅಂತಹ ದೃಷ್ಟಿ ಪಡೆದ ಎಂ. ವೀರಪ್ಪನವರು ಜಲವರ್ಣದಲ್ಲಿ ರಚಿಸಿದ ಎಲ್ಲಾ ಕಲಾಕೃತಿಗಳು ಅವರಲ್ಲಿನ ಕಲಾ ಪ್ರೌಢಿಮೆಯೊಂದಿಗೆ ಅವರದೇ ಆದ ಶೈಲಿಯನ್ನು ಗುರುತಿಸಿಕೊಂಡು ಮೂಡಿಬಂದಿರುವುದೇ ಸಾಕ್ಷಿ.

೩೫. ಜಿ. ಎಸ್. ಶಿವರುದ್ರಪ್ಪ : ಸೌಂದರ್ಯ ಸಮೀಕ್ಷೆ, ಪು-೧೧೪

ಈ ಕಲಾಕೃತಿಯು ಜಲವರ್ಣದಲ್ಲಿ ೧೨'x೧೮' ಅಳತೆಯಲ್ಲಿದ್ದು, ಈ ಚಿತ್ರದಲ್ಲಿ ಬಾಲಕ ಬಸವನು ಉಪನಯನವನ್ನು ನಿರಾಕರಿಸಿ, ಜನಿವಾರವನ್ನು ಕಿತ್ತೆಸೆಯುವ ಸನ್ನಿವೇಶ ಬಂದಿದೆ. ಕೆಲವು ಕಲಾವಿದರು ಬಸವಣ್ಣನು ಜನಿವಾರವನ್ನು ಧರಿಸುವ ಸಂದರ್ಭವನ್ನೇ ನಿರಾಕರಿಸಿದಂತೆ ತೋರುತ್ತದೆ. ಉಪನಯನ ಮಾಡಿಕೊಂಡು ಜನಿವಾರವನ್ನು ಧರಿಸು ಎಂದು ಬಸವಣ್ಣನ ತಂದೆ ಮಾದರಸನು ಮಗನಿಗೆ ಹೇಳುತ್ತಲೇ ಬಾಲಕ ಬಸವೇಶನು ತಂದೆಯೇ, ನನ್ನ ಮಾತನ್ನು ಗಮನವಿಟ್ಟು ಕೇಳು, ಶಿವಧರ್ಮವನ್ನು ಒಪ್ಪಿಕೊಂಡ ನನಗೆ ವೈದಿಕಧರ್ಮದ ದೀಕ್ಷೆಯೇಕೆ? ಎಂದು ನಿರಾಕರಿಸಿ ಅಸಮಾಧಾನದಿಂದ ಕೂಡಲಸಂಗಮಕ್ಕೆ ಹೊರಡುವುದನ್ನು ಕಾಣುತ್ತೇವೆ. ಪ್ರಸ್ತುತ ಚಿತ್ರದಲ್ಲಿ ಯಜ್ಞಕುಂಡದ ಸುತ್ತಲೂ ಬ್ರಾಹ್ಮಣ ಪುರೋಹಿತರು, ಬ್ರಾಹ್ಮಣ ಸಮುದಾಯದ ಸ್ತ್ರೀಯರು, ಪುರುಷರು, ಗುರು, ಹಿರಿಯರು ನೆರೆದಿರುವುದನ್ನು ಕಾಣುತ್ತೇವೆ. ಬಸವಣ್ಣನಿಗೆ ಅರ್ಧತಲೆಯನ್ನು ಬೋಳಿಸಿ ಉಳಿದ ಕೂದಲನ್ನು ಜುಟ್ಟು ಕಟ್ಟಲಾಗಿದೆ. ಹಳದಿ ವಸ್ತ್ರವನ್ನು ಸೊಂಟಕ್ಕೆ ಸುತ್ತಿಕೊಂಡ ಆತನಿಗೆ ಹಣೆ, ಹೊಟ್ಟೆ, ತೋಳುಗಳಿಗೆ ವಿಭೂತಿಯನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಆತನ ಕೊರಳಿನಲ್ಲಿ ಹಾಕಿದ ಜನಿವಾರವನ್ನು ಬಲವಂತದಿಂದ ಬಾಲಕ ಬಸವನೇ ಕಿತ್ತುಕೊಂಡಂತೆ ಚಿತ್ರಿಸಲಾಗಿದೆ.

ಹರಿದ ಜನಿವಾರದ ಅರ್ಧ ಭಾಗವು ದೇಹದಿಂದ ನೇತಾಡುತ್ತಿರುವಂತೆ ಕಾಣುತ್ತದೆ. ಹಿಂದೆ ಚಾಚಿದ ಆತನ ಬಲಗೈ ಯಜ್ಞೋಪವೀತದ ಪ್ರಕ್ರಿಯೆಯೇ ಬೇಡವೆನ್ನುವಷ್ಟರ ಮಟ್ಟಿಗೆ ದೇಹಭಾಷೆಯ (ಬಾಡಿ ಲ್ಯಾಂಗ್ವೇಜ್) ಮೂಲಕ ಕಲಾವಿದ ಪ್ರತಿಪಾದಿಸಿದ್ದಾನೆ. ಆತನ ಕಣ್ಣುಗಳಲ್ಲಿ ಮುಂದಿನ ಗುರಿಯ ನಿಶ್ಚಿತವಾದ ನೋಟವಿದೆ. ಆತನೊಡನೆ ಅಕ್ಕನಾದ ಅಕ್ಕನಾಗಮ್ಮನು ಇದ್ದಾಳೆ. ನೀಲಿ ಕುಪ್ಪಸ, ಮತ್ತು ಕಡುನೀಲಿ ಬಣ್ಣದ ನಿರಿಗೆಯುಳ್ಳ ಲಂಗವನ್ನು ಧರಿಸಿದ್ದಾಳೆ. ಆಕೆಯೂ ಬಸವನೊಂದಿಗೆ ಜೊತೆಗಿದ್ದು ತಾನೂ ಕೂಡಲಸಂಗಮಕ್ಕೆ ಬರಲು ಸಿದ್ಧಳಾಗಿ ಹೊರಟು ನಿಂತಿದ್ದಾಳೆ. ಅವಳ ಕಣ್ಣುಗಳಲ್ಲಿ ಕೂಡಲಸಂಗಮಕ್ಕೆ ಹೊರಡುವ ಭಾವನೆಯನ್ನು ಬಿಟ್ಟು ಮತ್ತಾವ ಆಲೋಚನೆಯೂ ಇಲ್ಲದಂತೆ ಕಾಣುವ ನೋಟವಿದೆ. ಪುರೋಹಿತರು ಬಟ್ಟಲಿನಲ್ಲಿ ಹಾಲನ್ನು ಹಿಡಿದು ಕಟ್ಟಿಗೆಯ ತುಂಡಿನ ಮೂಲಕ ಯಜ್ಞಕುಂಡಕ್ಕೆ ಅರ್ಪಿಸುವ ಕ್ರಿಯೆಯಲ್ಲಿ ತೊಡಗಿದ್ದಾರೆ. ಬಹುಗಂಭೀರವಾದ ಮುಖಚರ್ಯೆ ಪುರೋಹಿತರಿಗಿದೆ. ಉಳಿದವರಿಂದ ಪ್ರತ್ಯೇಕಿಸಲೆಂದೇ ಕಲಾವಿದ ಅವರನ್ನು ಕಡು ಕಂದುಬಣ್ಣದಿಂದ ರೂಪಿಸಿರುವುದು ಕಂಡು ಬರುತ್ತದೆ.

ಮಾದರಸನು ಅರ್ಧ ತಲೆ ಬೋಳಿಸಿಕೊಂಡು, ಜುಟ್ಟು ಬಿಟ್ಟು, ದಪ್ಪ ಪೊದೆ ಮೀಸೆಯನ್ನು ಹೊಂದಿದವನಾಗಿದ್ದಾನೆ. ತನ್ನ ಬಲಗೈಯಿಂದ ಮರದ ಸೌಟಿನಲ್ಲಿ ದ್ರವ್ಯಗಳನ್ನು ಯಜ್ಞಕುಂಡಕ್ಕೆ ಅಥವಾ ಅಗ್ನಿಕುಂಡಕ್ಕೆ ಸುರಿಯುತ್ತಿರುವ ದೃಶ್ಯ ಕಂಡು ಬರುತ್ತದೆ. ಯಜ್ಞಕುಂಡದಲ್ಲಿ ಉರಿಯುತ್ತಿರುವ ಬೆಂಕಿಗೆ ಸಹಜವಾಗಿಯೇ ಕೆಂಪುಬಣ್ಣವನ್ನು ಬಳಸಲಾಗಿದೆ. ಯಜ್ಞಕುಂಡದ ಎಡಬದಿಯಲ್ಲಿ ಉಪನಯನಕ್ಕೆ ಅಗತ್ಯವಾದ ವಸ್ತುಗಳನ್ನು ಬಟ್ಟಲುಗಳಲ್ಲಿ ತುಂಬಿಸಿರುವುದನ್ನು ಕಾಣುತ್ತೇವೆ. ಮಾದರಸನ ಎಡಭಾಗದಲ್ಲಿ ಮಾದಲಾಂಬಿಕೆಯು ಕೆಂಪುಬಣ್ಣದ ಸೀರೆಯನ್ನು ಧರಿಸಿ ಕುಳಿತಿರುವುದನ್ನು ಕಾಣುತ್ತೇವೆ. ಅವಳ ಎಡಬದಿಯಲ್ಲಿ ಹಲವು ಸ್ತ್ರೀಯರು ತೆಳುವಾದ ವಿವಿಧ ಬಣ್ಣಗಳ ಸೀರೆಗಳನ್ನು ಧರಿಸಿದ್ದಾರೆ. ಅವರ ಮುಖ ಭಾವಗಳು ಮೆಲುದನಿಯಲ್ಲಿ ಪರಸ್ಪರ ಚರ್ಚೆಯಲ್ಲಿ ತೊಡಗಿರುವಂತೆ, ಮತ್ತೆ ಕೆಲವರು ಪ್ರಶ್ನಿಸುವಂತೆ,

ಸಂಭಾಷಣೆಯಲ್ಲಿ ತೊಡಗಿರುವುದನ್ನು ತಿಳಿಸುತ್ತವೆ. ಮಾದರಸನ ಬಲ ಬದಿಯಲ್ಲಿ ಕುಳಿತ ವ್ಯಕ್ತಿಗಳಲ್ಲಿ ಕೆಲವರು ತಲೆಗೆ ವಿವಿಧ ಬಣ್ಣದ ಮುಂಡಾಸುಗಳನ್ನು ಧರಿಸಿದ್ದಾರೆ. ಮತ್ತೆ ಕೆಲವರು ಕೂದಲನ್ನು ಹಿಂದಕ್ಕೆ ಕಟ್ಟಿ ಗಂಟು ಹಾಕಿದ್ದಾರೆ. ಅವರೆಲ್ಲರೂ ಬ್ರಾಹ್ಮಣ ಸಂಪ್ರದಾಯಕ್ಕೆ ಸೇರಿದವರೆಂದು ತಿಳಿಯಬಹುದಾಗಿದೆ. ಈ ಚಿತ್ರದ ಅಂಗ ರಚನಾ ತಂತ್ರವೂ ಇದ್ದುದರಲ್ಲಿಯೇ ಉತ್ತಮ. ಮೃದುವಾದ ವರ್ಣಮೇಳವಿದ್ದು ಅವಕಾಶದ ೧/೩ರಷ್ಟು ಆಕೃತಿಗಳು ರಚನೆಗೊಂಡಿವೆ. ಮಾದರಸ, ಮಾದಲಾಂಬಿಕೆ ಹಾಗೂ ಪುರೋಹಿತರು ಇವರಿಗೆ ಚಿತ್ರದಲ್ಲಿ ಆದ್ಯತೆ ಇದೆ. ಹಿನ್ನೆಲೆಯಲ್ಲಿ ಏಕ ಪ್ರಕಾರವಾದ ತೆಳು ನೀಲಿವರ್ಣದ ಲೇಪನಕ್ಕಿಂತ ಅರಸೊತ್ತಿಗೆಯನ್ನು ಸಾಂಕೇತಿಕವಾಗಿ ತೋರ್ಪಡಿಸಬಹುದಿತ್ತು. ಪ್ರಸ್ತುತ ಈ ಕೃತಿಯು ಮೈಸೂರಿನ ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ.

೨.೨.೧೬. ಅರ್ಥವಿಲ್ಲದ ಆಚರಣೆಗಳನ್ನು ನಿರಾಕರಿಸಿ ಹೊರಟ ಬಸವಣ್ಣ

ಕಲಾ ಪ್ರೌಢಿಮೆಯನ್ನು ಸಾಧಿಸಿರುವ ಎಂ. ವೀರಪ್ಪನವರು ಜಲವರ್ಣದಲ್ಲಿ ಪರಿಪಕ್ವವಾದ ಹಿಡಿತವನ್ನು ಹೊಂದಿರುವುದು ಈ ಚಿತ್ರದ ಮೂಲಕ ತಿಳಿದುಬರುತ್ತದೆ. ೧೨'x೧೮' ಅಳತೆಯ ಈ ಕೃತಿಯು ಮೈಸೂರಿನ ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ. ಚಿತ್ರದಲ್ಲಿ ಬಾಲಕ ಬಸವನಿಗೆ ಯಜ್ಞೋಪವೀತ ಧಾರಣೆ ಮತ್ತು ಅದರ ನಿರಾಕರಣೆಯ ಎರಡು ಸಂದರ್ಭಗಳನ್ನು ಇಲ್ಲಿ ಕಾಣುತ್ತೇವೆ. ಬಸವನು ಇಲ್ಲಿ ಯಜ್ಞಕುಂಡದಿಂದ ವಿಮುಖನಾಗಿ ಹೋಗುತ್ತಿರುವ ದೃಶ್ಯವಿದೆ. ಬಿಳಿಬಣ್ಣದ ತುಂಬುತೋಳಿನ ನಿಲುವಂಗಿ, ಪೈಜಾಮು, ಹಣೆ ಮತ್ತು ಕೊರಳಿನಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ, ತಲೆಗೆ ಅಲಂಕೃತ ಸಾಂಪ್ರದಾಯಿಕ ಪೇಟಾ–ಇವು ಬಾಲಕ ಬಸವನ ಉಡುಗೆ ತೊಡುಗೆಗಳು. ಮುಖದಲ್ಲಿ ವಿಷಾದದ ಭಾವವನ್ನು ಹೊತ್ತು ಕಂಗಳಲ್ಲಿ ಮತ್ತೇನನ್ನೋ ಹುಡುಕುವಂತಹ ಭಾವನೆಯನ್ನು ಕಲಾವಿದ ಇಲ್ಲಿ ಅಭಿವ್ಯಕ್ತಗೊಳಿಸಿದ್ದಾನೆ. ಬಾಲಕನ ಹೆಗಲ ಮೇಲೆ ಆತನ ಅಕ್ಕನಾದ ಅಕ್ಕನಾಗಮ್ಮನು ತನ್ನ ಎಡಗೈಯನ್ನು ಹಾಕಿದ್ದಾಳೆ. ಅವಳ ಉಡುಗೆ ತೊಡುಗೆ ಸಾಂಪ್ರದಾಯಿಕವಾಗಿದೆ. ಹಣೆಯಲ್ಲಿ ವಿಭೂತಿ, ಕುಂಕುಮ, ಕೊರಳಲ್ಲಿ ಆಭರಣ, ಕೈಯಲ್ಲಿ ಧರಿಸಿರುವ ಬಳೆ–ಇವುಗಳು ಅವಳ ದೈವಿಕ ಮತ್ತು ರಾಜಸಂಕೇತಗಳನ್ನು ಪ್ರತಿನಿಧಿಸುತ್ತಿವೆ. ಕ್ರಮವಾಗಿ ಅವಳ ಹಿಂದೆ ಉರಿಯುತ್ತಿರುವ ಯಜ್ಞಕುಂಡ, ಅದರ ಪಕ್ಕದಲ್ಲಿ ಮಂಗಳ ಕಳಶಗಳು, ಫಲ ಪುಷ್ಪಗಳ ಹರಿವಾಣಗಳಿವೆ. ಇಬ್ಬರು ವಯೋವೃದ್ಧ ಬ್ರಾಹ್ಮಣ ಆಚಾರ್ಯರು ಬಾಲಕ ಬಸವನ ಯಜ್ಞೋಪವೀತ ನಿರಾಕರಣೆಯನ್ನು ಕುರಿತು ಸಂಭಾಷಣೆಯಲ್ಲಿ ತೊಡಗಿರುವಂತೆ ತೋರುತ್ತದೆ. ಹದಿಹರೆಯದ ವಟುವೊಬ್ಬ ಮರದ ಸೌಟಿನಿಂದ ತುಪ್ಪವನ್ನು ಅಗ್ನಿಗೆ ಹಾಕುವುದನ್ನು ಮರೆತು ಬಸವಣ್ಣ ಮತ್ತು ಅಕ್ಕನಾಗಮ್ಮನೆಡೆಗೆ ನೋಡುತ್ತಿರುವಂತೆ ಕಲಾವಿದ ಇಲ್ಲಿ ಚಿತ್ರಿಸಿದ್ದಾನೆ. ಆಚಾರ್ಯರ ಪಕ್ಕದಲ್ಲಿ ನಿಂತ ಮಾದರಸ ಮತ್ತು ಮಾದಲಾಂಬಿಕೆಯರು ಬಸವನನ್ನು ತಡೆಯುವ ಯತ್ನದಲ್ಲಿ ತೊಡಗಿರುವಂತೆ ಕಾಣಿಸುತ್ತದೆ. ಅರ್ಧಕ್ಕೆ ಎತ್ತಿದ ಮಾದರಸನ ಬಲಗೈ ನಿಲ್ಲು ಎಂಬುದನ್ನು ಸಂಕೇತಿಸುತ್ತದೆ. ತೆರೆದ ಕಿರೀಟವನ್ನು, ತೋಳಿನಲ್ಲಿ ಅಲಂಕೃತಗೊಂಡ ತೋಳುಬಂಧಿಯನ್ನು, ಹಣೆಗೆ ವಿಭೂತಿ, ಕೊರಳಿಗೆ ರುದ್ರಾಕ್ಷಿ ಮಾಲೆಯನ್ನು ಧರಿಸಿರುವುದು ರಾಜ ಮನೆತನದವನೆಂಬ ಸಂಕೇತವನ್ನು ತೋರ್ಪಡಿಸುತ್ತದೆ.

ಮಾದಲಾಂಬಿಕೆಯು ಹಣೆಗೆ ವಿಭೂತಿ, ಕುಂಕುಮ, ತಲೆತುಂಬ ಸೆರಗು ಧರಿಸಿದ್ದರೂ, ಕೊರಳಲ್ಲಿ ಧರಿಸಿರುವ ಆಭರಣಗಳು, ಕಂಚುಕಗಳು ರಾಜ ಮನೆತನದವರೆಂಬುದನ್ನು ಸ್ಪಷ್ಟಪಡಿಸುತ್ತವೆ. ಓರೆ ಭಂಗಿಯಲ್ಲಿ ನಿಂತ ಅವಳ ಮುಖದ ಕಣ್ಣುಗಳಲ್ಲಿ ಆತಂಕದ ಛಾಯೆ ಸ್ಪಷ್ಟವಾಗಿ ಕಾಣುವಂತೆ ಚಿತ್ರಿಸಿರುವುದು ಕಲಾವಿದನ ನಿಪುಣತೆಯನ್ನು ತೋರಿಸುತ್ತದೆ. ಈ ಎಲ್ಲ ಕಾರ್ಯಕ್ರಮವು ಮಂಗಳಕರವಾದುದು, ಶುಭಸೂಚಕವಾದುದು ಎಂಬುದನ್ನು ತಿಳಿಸಲು ಚಿತ್ರದ ಹಿನ್ನೆಲೆ ಭಿತ್ತಿಯಲ್ಲಿ ಬಾಳೆಯ ಕಂಬ ಮತ್ತು ಎಲೆಗಳ ಚಿತ್ರಗಳನ್ನು ಮೂಡಿಸಲಾಗಿದೆ. ಮಾದಲಾಂಬಿಕೆಯ ಎಡಬದಿಯಲ್ಲಿರುವ ಇಬ್ಬರು ಸ್ತ್ರೀಯರು ಪ್ರಸ್ತುತ ಘಟನೆಯನ್ನು ಕುರಿತು ಸಂವಾದದಲ್ಲಿ ತೊಡಗಿರುವಂತೆ ತೋರುತ್ತದೆ. ಪ್ರಸ್ತುತ ಚಿತ್ರ ರಚಿಸಿದ ಕಲಾವಿದರು ಮೇಲಿನ ಮತ್ತೊಂದು ಚಿತ್ರದಲ್ಲಿ ಬಸವಣ್ಣ ಮತ್ತು ಅಕ್ಕನಾಗಮ್ಮ ಇಬ್ಬರು ನಿಂತಿರುವುದನ್ನು ಹೊರತುಪಡಿಸಿದರೆ, ಉಳಿದೆಲ್ಲ ಪಾತ್ರಗಳು ಕುಳಿತುಕೊಂಡಿರುವುದನ್ನು ಕಾಣಬಹುದು. ಆದರೆ ಇಲ್ಲಿ ಮುನಿಗಳನ್ನು ಹೊರತುಪಡಿಸಿ ಎಲ್ಲರು ನಿಂತಿರುವ ಭಂಗಿಯಲ್ಲಿ ರಚಿಸಲಾಗಿದೆ. ಬಸವಣ್ಣ ಕೇವಲ ಹಳದಿಯ ವಸ್ತ್ರವನ್ನು ಸೊಂಟಕ್ಕೆ ಧರಿಸಿ ಉಳಿದಂತೆ ಬರಿಮೈಯಲ್ಲಿ ವಿಭೂತಿ ಬಳಿದುಕೊಂಡಿರುವಂತೆ ಚಿತ್ರಿಸಲಾಗಿದೆ. ಅಕ್ಕ ನಾಗಮ್ಮನ ಉಡುಪುಗಳು ಸಹ ಅತ್ಯಂತ ಸರಳವಾಗಿವೆ. ಮಾದರಸ ಮತ್ತು ಮಾದಲಾಂಬಿಕೆಯರು ನಿಷ್ಠಾವಂತ ಬ್ರಾಹ್ಮಣ ಕುಟುಂಬದವರೆಂಬುದನ್ನು ಅವರ ಉಡುಗೆ ತೊಡುಗೆಗಳು ತೋರಿಸಿ ಕೊಡುತ್ತವೆ. ಈ ಆಚರಣೆಗಳು ನನಗೆ ಬೇಡ ಎಂಬ ಭಂಗಿಯು ಬಾಲಕ ಬಸವಣ್ಣನ ಮುಖ ಮತ್ತು ದೇಹಭಾಷೆಯಲ್ಲಿ ಅಭಿವ್ಯಕ್ತಿಗೊಂಡಿದೆ. ಕಪ್ಪು ಬಿಳುಪು ಚಿತ್ರವಾದ ಇದರಲ್ಲಿ ಉತ್ತಮವಾದ ಸಂಯೋಜನೆಯಿದೆ. ಹಿನ್ನೆಲೆಯಲ್ಲಿ ಸಂಭ್ರಮದ ದ್ಯೋತಕವಾದ ಬಾಳೆ, ತಳಿರು, ತೋರಣಗಳು ಸೂಚ್ಯವಾಗಿ ತೋರಿಸ್ಪಲಟ್ಟರೆ, ಮುನ್ನೆಲೆಯಲ್ಲಿರುವ ಆಕೃತಿಗಳನ್ನು ಸುಸ್ಪಷ್ಟವಾಗಿ ತೋರಿಸಿರುವುದರಿಂದ ಚಿತ್ರದ ಸಂದೇಶ ನೋಡುಗರ ಮನವನ್ನು ತಟ್ಟುತ್ತದೆ. ತ್ರಿಭುಜಾಕೃತಿಯ ಸಂಯೋಜನೆಯ ಮಾನದಂಡವನ್ನು ಪ್ರಯೋಗಿಸಿರುವ ಈ ಚಿತ್ರದಲ್ಲಿ ಅಗತ್ಯವೆನಿಸುವಷ್ಟು ವರ್ಣಗಳನ್ನು ದುಡಿಸಿಕೊಂಡಿದ್ದಾರೆ. ನೆರಳು ಮತ್ತು ಬೆಳಕಿನ ಸಂಯೋಜನೆಯನ್ನು ಸಮರ್ಥವಾಗಿ ದುಡಿಸಿಕೊಂಡಿರುವ ಕಲಾವಿದರು ವ್ಯಕ್ತಿಗತವಾಗಿರುವ ಚಹರೆಗಳನ್ನು ಸ್ಪಷ್ಟವಾಗಿ ಪ್ರಕಟಿಸಿದ್ದಾರೆ.

೨.೨.೧೭. ಉಪನಯನ ನಿರಾಕರಿಸುತ್ತಿರುವ ಬಸವಣ್ಣ–೧

"ಕಣ್ಮನಗಳ ಸೆಳೆಯುವ ಅಪೇಕ್ಷೆಯ ಸಾಕಾರವೇ ಈ ಅದ್ಭುತ ಕಲಾಕೃತಿ"[೩೬] ಎಂಬಂತೆ ಅಲಭ್ಯ ಪರಿಸರದಲ್ಲೂ ಸುಂದರ ಕಲಾಕೃತಿಗಳನ್ನು ನಿರ್ಮಿಸಿ, ನೋಡುಗರ ಕಣ್ಮನಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಕಲಾವಿದ ಬಸವರಾಜ ಮುಗಳಿಯವರ ಬಸವಣ್ಣನಿಗೆ ಸಂಬಂಧಿಸಿದ ಎಲ್ಲ ಕಲಾಕೃತಿಗಳು ೨೪'x೩೬' ಅಳತೆಯ ತೈಲವರ್ಣ ಮಾಧ್ಯಮದಲ್ಲಿದ್ದು, ಈ ಚಿತ್ರದಲ್ಲಿ ಬಾಲಕ ಬಸವ ಜನಿವಾರ ಧರಿಸುವುದನ್ನು ನಿರಾಕರಿಸುವ ಸನ್ನಿವೇಶವನ್ನು ರೂಪಿಸಲಾಗಿದೆ.

ಬಾಲಕ ಬಸವನನ್ನು ವೈದಿಕರು ಪೂಜೆಯ ಸಂದರ್ಭದಲ್ಲಿ ಧರಿಸುವ ಬಿಳಿಯ ವಸ್ತ್ರವನ್ನು ಧರಿಸಿದ್ದು, ಹಣೆಯಲ್ಲಿ ವಿಭೂತಿಯನ್ನು ಮಾತ್ರ ಧರಿಸಿರುವಂತೆ ಚಿತ್ರಿಸಲಾಗಿದೆ. ಕೊರಳಲ್ಲಿ ರುದ್ರಾಕ್ಷಿ

---

೩೬. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.): ನಿಜದನೆಲೆ (ಡಾ.ಸ್ನೇಹಾ ಭೂಸನೂರವರ ಲೇಖನ), ಪು–೫೭

ಮಾಲೆ ಮತ್ತು ಇಷ್ಟಲಿಂಗವು ಕಾಣಿಸುವುದಿಲ್ಲ. ಆತನ ಎಡಗೈ ತುಸು ಮೇಲಕ್ಕೆತ್ತಿ ನಿರಾಕರಣೆಯ ಭಾವವನ್ನು ವ್ಯಕ್ತಪಡಿಸುತ್ತದೆ. ಅರೆ ವೃತ್ತಾಕಾರವಾಗಿರುವ ಹುಬ್ಬು, ಮುಖ ಮತ್ತು ಕಣ್ಣುಗಳು ತುಸು ಮೇಲಕ್ಕೆ ಏನನ್ನೋ ಧ್ಯಾನಿಸುವಂತೆ ಚಿತ್ರಿತವಾಗಿವೆ.

ಜನಿವಾರ ನಿರಾಕರಣೆಯ ವಿಷಯವನ್ನು ತನ್ನ ಎದುರಿಗಿರುವ ತಂದೆ–ತಾಯಿಗಳಾದ ಮಾದರಸ ಮತ್ತು ಮಾದಲಾಂಬಿಕೆಗೆ ಹೇಳಿದಂತೆ ತೋರುವುದಿಲ್ಲ. ಆತನು ನಿಂತಿರುವ ಭಾವ ಭಂಗಿ ಮಾತ್ರ ಅದನ್ನು ಸ್ಪಷ್ಟಪಡಿಸುತ್ತದೆ. ಮಾದರಸನು ಬಿಳಿಯ ಬಣ್ಣದ ಪಂಚೆ ಮತ್ತು ಹಸಿರುಬಣ್ಣದ ಮೇಲ್ವಸ್ತ್ರವನ್ನು ಹೆಗಲಿಗೆ ಇಳಿಬಿಟ್ಟು, ಕೊರಳಿಗೆ ಜನಿವಾರ, ಹಣೆಗೆ ವಿಭೂತಿ, ಅದರ ಮಧ್ಯದಲ್ಲಿ ಕೆಂಪು ಬಣ್ಣದ ನಾಮದ ಗುರುತನ್ನು ಧರಿಸಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ಆತನ ಕಣ್ಣುಗಳು ಬಸವನೆಡೆಗೆ ನೆಟ್ಟಿವೆ. ಜನಿವಾರ ನಿರಾಕರಿಸಲು ಕಾರಣವೇನು ಎಂದು ಬಸವನನ್ನು ಪ್ರಶ್ನಿಸುವ ಭಂಗಿಯಲ್ಲಿ ಆತ ನಿಂತಿದ್ದಾನೆ.

ಆತನ ಹಿಂದೆಯೇ ಮಾದಲಾಂಬಿಕೆಯು ಕೆಂಪು ಸೀರೆಯನ್ನು ಉಟ್ಟು, ಕೆಂಪು ಕೈ ಬಳೆಗಳು, ಹಣೆಯಲ್ಲಿ ವಿಭೂತಿ, ಕುಂಕುಮಗಳನ್ನು ಧರಿಸಿ ನಿಂತಿದ್ದಾಳೆ. ಅವಳ ಮುಖವು ತುಸು ಬಲಗಡೆಗೆ ಓರೆಯಾದಂತೆ ಕಾಣುತ್ತಿದ್ದು ಮುಖದ ಭಾವನೆಗಳು ಸ್ಪಷ್ಟವಾಗಿವೆ. ಅವಳ ಹಿಂದೆ ಇಬ್ಬರು ಸ್ತ್ರೀಯರು ನಿಂತಿದ್ದಾರಾದರೂ ಅವರ ಮುಖಗಳು ನೋಡುಗರಿಗೆ ಗೋಚರಿಸುವುದಿಲ್ಲ. ಇತ್ತ ಯಜ್ಞಕುಂಡದಲ್ಲಿ ಬ್ರಾಹ್ಮಣ ಆಚಾರ್ಯರಿಬ್ಬರು ಜನಿವಾರ ಧಾರಣೆಯನ್ನು ಮಾಡಿಸುವ ಸಿದ್ಧತೆಯಲ್ಲಿ ತೊಡಗಿದ್ದಾರೆ. ಅವರು ಬಸವೇಶ ಮತ್ತು ಮಾದರಸ ಇವರ ಮಧ್ಯೆ ನಡೆಯುವ ಚರ್ಚೆಯ ಬಗೆಗೆ ಗಮನವಿಲ್ಲದೆ ಕೇವಲ ತಮ್ಮ ವೈದಿಕ ಕ್ರಿಯಾಚರಣೆಯ ಸಿದ್ಧತೆಯಲ್ಲಿ ತೊಡಗಿರುವಂತೆ ತೋರುತ್ತದೆ.

ಆಚಾರ್ಯನೊಬ್ಬ ಡೊಳ್ಳು ಹೊಟ್ಟೆಯನ್ನು ಬಿಟ್ಟುಕೊಂಡು ಮಣೆಯ ಮೇಲೆ ಕುಳಿತಿದ್ದು, ಜನಿವಾರವನ್ನು ಎರಡೂ ಕೈಗಳ ಮಧ್ಯದಲ್ಲಿ ಸಿಕ್ಕಿಸಿಕೊಂಡು ಬಸವನಿಗೆ ತೊಡಿಸಲು ಪೂರ್ವಸಿದ್ಧತೆ ಮಾಡಿಕೊಳ್ಳುತ್ತಿದ್ದಾನೆ. ಇದಕ್ಕೆ ಪೂರಕವಾಗಿ ಇವರ ಹಿಂಬದಿಯಲ್ಲಿ ಬ್ರಾಹ್ಮಣ ವಟುಗಳು ಪೂರಕ ಕ್ರಿಯೆಯಲ್ಲಿ ತೊಡಗಿರುವುದನ್ನು ಕಾಣುತ್ತೇವೆ. ಕಲಾವಿದನು ಭಿತ್ತಿಚಿತ್ರದಲ್ಲಿ ಪ್ರಸ್ತುತ ಪ್ರಸಂಗವನ್ನು ಒಡಮೂಡಿಸಿದ್ದಾನೆ.

ಉಪನಯನ ನಿರಾಕರಿಸುತ್ತಿರುವ ಬಸವನ ಕುರಿತ ಸಂಯೋಜನೆ ಇದಾಗಿದ್ದು, ಚಿತ್ರದಲ್ಲಿ ಕಾಣಬರುವ ದೋಷವೆಂದರೆ ನೆಲಹಾಸು ಮತ್ತು ಗೋಡೆ ಎರಡೂ ಭಾಗಶಃ ಒಂದೇ ತೆರನಾಗಿ ಚಿತ್ರಿತಗೊಂಡಿರುವುದರಿಂದ ಹಿನ್ನೆಲೆ–ಮುನ್ನೆಲೆಯ ವ್ಯತ್ಯಾಸಗಳು ಇಲ್ಲಿ ಗೌಣವಾಗಿವೆ. ಅವಕಾಶದ ಎಡ ಪಾರ್ಶ್ವದಲ್ಲಿ ಬಸವಣ್ಣ, ಮಧ್ಯದಲ್ಲಿ ಪುರೋಹಿತರು ಹೋಮ ಕುಂಡದ ಮುಂದೆ ಇರುವ, ಬಲಪಾರ್ಶ್ವದಲ್ಲಿ ಮಾದರಸ ಮತ್ತು ಮಾದಲಾಂಬಿಕೆಯನ್ನು ಚಿತ್ರಿಸಿರುವ ಕಲಾವಿದರು ಅವಕಾಶದಲ್ಲಿ ಪ್ರಧಾನ ಆಕೃತಿಗಳನ್ನು ಸಾಮೀಪ್ಯದ ನೆಲೆಯಲ್ಲಿ ಚಿತ್ರಿಸಿದ್ದಾರೆ. ಸಂಯೋಜನೆಯ ಮಹತ್ವವನ್ನು ಈ ಕೃತಿ ಪಡೆಯಬೇಕಿತ್ತು. ಈ ಕೃತಿಯು ಬಸವ ಕಲ್ಯಾಣದ ಬಸವೇಶ್ವರ ದೇವಾಲಯದಲ್ಲಿ ಸಂಗ್ರಹಗೊಂಡಿದೆ.

ಉಪನಯನ ನಿರಾಕರಿಸುತ್ತಿರುವ ಬಸವಣ್ಣ-೨

"ಕಲಾವಿದ ರೇಖೆ, ವರ್ಣಗಳಿಂದಲೇ ಪ್ರಪಂಚವನ್ನು ನಿರ್ಮಿಸಬೇಕು"[೩೭] ಎಂಬ ಮಾತು ತುಂಬಾ ಅರ್ಥಪೂರ್ಣವಾದುದು. ಕಲಾವಿದ ಕೆ. ಗಂಗಾಧರ ಅವರು ೪೮"x೩೬" ಅಳತೆಯ, ತೈಲವರ್ಣ ಮಾಧ್ಯಮದಲ್ಲಿ ಈ ಕಲಾಕೃತಿಯನ್ನು ರಚಿಸಿದ್ದಾರೆ. ಈ ಚಿತ್ರದಲ್ಲಿ ಬಾಲಕ ಬಸವಣ್ಣನು ಜನಿವಾರ ಧರಿಸುವುದನ್ನು ನಿರಾಕರಿಸುವ ಸಂದರ್ಭವನ್ನು ಹಿಡಿದಿಟ್ಟಿದೆ. ನೈಜ ಚಿತ್ರವಾಗಿದ್ದು, ತೈಲವರ್ಣ ಮಾಧ್ಯಮದ ಈ ಚಿತ್ರದಲ್ಲಿ ಬಾಲಕ ಬಸವಣ್ಣನ ತಲೆಯನ್ನು ಪೂರ್ಣವಾಗಿ ಬೋಳಿಸಲಾಗಿದ್ದು, ಹಣೆಯಲ್ಲಿ ಧರಿಸಿರುವ ವಿಭೂತಿಯು ಎದ್ದು ಕಾಣುತ್ತಿದೆ. ಕೈಯಲ್ಲಿ ರುದ್ರಾಕ್ಷಿ ಮಾಲೆಯನ್ನು ಕೊರಳಲ್ಲಿ ಇಷ್ಟಲಿಂಗದ ಗಂಟನ್ನು ಕಟ್ಟಿಕೊಳ್ಳುವುದರ ಮೂಲಕ ಆತನೊಬ್ಬ ಶಿವಭಕ್ತನೆಂಬುದನ್ನು ಸಾರುವುದು ಕಲಾವಿದನ ಉದ್ದೇಶವಾಗಿದೆ.

ಬಂಗಾರದ ಬಣ್ಣದ ಅಂಚಿನಿಂದ ಕೂಡಿದ ಬಿಳಿಯ ಪಂಚೆಯನ್ನು ಹೆಗಲವರೆಗೂ ಕಟ್ಟಿಕೊಂಡ ವಟುವಿನ ವೇಷವಿದಾಗಿದೆ. ಆತನ ಎದುರಿಗೆ ಬ್ರಾಹ್ಮಣ ಆಚಾರ್ಯನೊಬ್ಬ ಕುಳಿತಿದ್ದು, ಆತನ ಭಂಗಿಯು ಅಧಿಕಾರಯುಕ್ತವಾದುದಾಗಿದೆ. ಆತನ ಮಾತುಗಳನ್ನು ಬಸವಣ್ಣ ನಿರಾಕರಿಸಿದಂತೆಯೂ, ಬಾಲಕನು ತನ್ನ ಎಡಗೈಯನ್ನು ಅಗ್ನಿಕುಂಡದ ಕಡೆಗೆ ಎತ್ತಿ ತೋರಿಸುವುದರಿಂದ ಮತ್ತು ಬಲಗೈಯನ್ನು ಸ್ವಲ್ಪ ಮೇಲೆತ್ತಿ ಕಾಣುವಂತೆ ಹಿಡಿದಿರುವ ಭಂಗಿಯು, ಬ್ರಾಹ್ಮಣ ಪರಂಪರೆಯ ಯಜ್ಞೋಪವೀತ ಧಾರಣೆಯ ಕರ್ಮಗಳನ್ನು ನಾನು ಒಪ್ಪುವುದಿಲ್ಲ ಎಂಬ ದೃಢ ನಿಶ್ಚಯವನ್ನು ಪ್ರಕಟಿಸುತ್ತದೆ. ಆತನ ಹಿಂದೆ ನಿಂತಿರುವ ಮಾದರಸ ಮತ್ತು ಮಾದಲಾಂಬಿಕೆಯರು ಉನ್ನತವಾದ ಉಡುಪು-ವಸ್ತ್ರಗಳನ್ನು ಧರಿಸಿದ್ದಾರೆ. ಅವರ ಮುಖದಲ್ಲಿ ಆತಂಕದ ಛಾಯೆ ಕಂಡು ಬರುತ್ತಿದ್ದು, ಮಗನ ಜನಿವಾರ ನಿರಾಕರಣೆಯು ಮನಸ್ಸಿಗೆ ನೋವನ್ನು ಉಂಟು ಮಾಡಿದೆ ಎಂಬ ಭಾವವನ್ನು ಕಲಾವಿದ ಇಲ್ಲಿ ಸಮರ್ಥವಾಗಿ ಚಿತ್ರಿಸಿದ್ದಾನೆ. ಆಚಾರ್ಯನ ಕೆಳಗೆ ಒಂದು ಹೊಳೆಯುವ ಪಾತ್ರೆ ಮತ್ತು ಅಗ್ಘವಣಿಯಿರುವುದನ್ನು ಕಾಣಬಹುದು. ಯಜ್ಞಕುಂಡ ಮತ್ತು ಅದರಲ್ಲಿ ಧಗಧಗಿಸುವ ಬೆಂಕಿಯನ್ನು ಕಲಾವಿದ ಒಪ್ಪ ಓರಣವಾಗಿ ವರ್ಣ ಸಂಯೋಜನೆಯೊಂದಿಗೆ ಹಿಡಿದಿಟ್ಟಿದ್ದಾನೆ. ಈ ಚಿತ್ರಣವು ಅರಮನೆಯ ವಿಶಾಲವಾದ ಒಂದು ಕೊಠಡಿಯಲ್ಲಿ ನಡೆಯುತ್ತಿರುವಂತೆ ಭಾಸವಾಗುತ್ತಿದೆ.

ಅಲಂಕರಣಗೊಂಡ ಗೋಡೆ, ಕಂಬಗಳು, ಬಿಳಿ ಪಂಚೆಯನ್ನು ಹೆಗಲವರೆಗೂ ಉಟ್ಟುಕೊಂಡು ನಿಂತಿರುವ ಬ್ರಾಹ್ಮಣ ಸಮೂಹ ಅವರ ಹಿಂದೆ ಸ್ಪಷ್ಟವಾಗಿ ಕಾಣಿಸದಂತೆ ಬಸವಣ್ಣನ ಬಂಧುಬಳಗ ಮತ್ತು ಮಿತ್ರರಿರುವಂತೆ ಕಲಾವಿದ ನೆರಳು ಬೆಳಕಿನ ಸಂಯೋಜನೆಯೊಂದಿಗೆ ಅದ್ಭುತವಾಗಿ ರೂಪಿಸಿಕೊಟ್ಟಿದ್ದಾನೆ. ಬಸವಣ್ಣನ ತಲೆಯ ಮೇಲೆ ಪ್ರಭಾವಳಿ ಮತ್ತು ಅಗ್ನಿಯ ಕುಂಡದ ಬೆಳಕು ಎಲ್ಲಿಯವರೆಗೆ ಬೀಳುತ್ತದೆಯೋ ಅಲ್ಲಿಯವರೆಗೆ ವಸ್ತುಗಳು, ವ್ಯಕ್ತಿಗಳು ಸ್ಪಷ್ಟವಾಗಿ ಕಾಣುವಂತೆ ಚಿತ್ರಿಸಿರುವುದು ಕಲಾವಿದನ ಕುಶಲತೆಗೆ ಸಾಕ್ಷಿಯಾಗಿದೆ.

---

೩೭ ಚಂದ್ರಕಾಂತ ಕುಸನೂರ : ಕಲೆ ಅನುಭವ ಮತ್ತು ಅನುಭಾವ, ಪು-೧೪

ಅರಸೊತ್ತಿಗೆಯ ಹಿನ್ನೆಲೆ, ಮುನ್ನೆಲೆಯಲ್ಲಿ ಬಸವ ಪರಿವಾರದವರಿದ್ದು, ಚಿತ್ರದ ಉದ್ದೇಶವನ್ನು ಸಾರ್ಥಕಗೊಳಿಸುವ ಇರಾದೆ ಈ ಚಿತ್ರದ್ದು. ಕ್ರಮವಾಗಿ ಮುನ್ನೆಲೆಯ ಎಡಪಾರ್ಶ್ವದಲ್ಲಿ ಮಾದರಸ ಮತ್ತು ಮಾದಲಾಂಬಿಕೆ, ಅವರ ಮುಂಭಾಗದಲ್ಲಿ ಉಪನಯನವನ್ನು ನಿರಾಕರಿಸುತ್ತಿರುವ ಬಸವ, ಬಲಭಾಗದಲ್ಲಿ ಬಸವನಿಗೆ ತಿಳಿವಳಿಕೆ ಹೇಳಲು ಯತ್ನಿಸುತ್ತಿರುವ ಪುರೋಹಿತರು, ಹೋಮಕುಂಡ ಮತ್ತು ಪರೋಹಿತ, ಹಿನ್ನೆಲೆಯಲ್ಲಿ ಬ್ರಾಹ್ಮಣಪುರೋಹಿತ ವರ್ಗ, ಹಾಗೆಯೇ ಅರಸೊತ್ತಿಗೆಯ ಪರಿವಾರದವರು ಹೀಗೆ ಮಾನವಾಕೃತಿಗಳು ಒಟ್ಟು ಅವಕಾಶವನ್ನು ಒಂದು ರೇಖಾ ಮಾರ್ಗದಲ್ಲಿ ತೆರೆದುಕೊಂಡಿವೆ. ಈ ಬಗೆಯ ಸಂಯೋಜನೆ ಅಪರೂಪದ್ದು, ನೆರಳು ಬೆಳಕಿನ ಆಟ-ಮಾಟ ಇಲ್ಲಿನ ಆಕೃತಿಗಳಲ್ಲಿ ಪ್ರಧಾನವಾಗಿ ಕಾಣಿಸುತ್ತದೆ. ವರ್ಣಮೇಳವೂ ಸಹ ರಮಣೀಯವಾದುದು. ಒಳಾಂಗಣದಲ್ಲಿ ಕಾಣಬಹುದಾದ ನೈಜ ವಾತಾವರಣವನ್ನು ಈ ಚಿತ್ರ ಹೊಂದಿರುವುದು ವಿಶೇಷ.

ಒಟ್ಟಾರೆ ಅತ್ಯಂತ ವರ್ಣರಂಜಿತದಿಂದ ಕೂಡಿದ ಈ ಕಲಾಕೃತಿಯು ನೋಡುಗನ ಕಣ್ಮನ ಸೆಳೆಯುವಲ್ಲಿ ಸಂದೇಹವಿಲ್ಲ. ಇಲ್ಲಿ ಆಕೃತಿಗಳೂ ಆಕರ್ಷಣಾತ್ಮಕವಾಗಿ ಮೂಡಿ ಬಂದಿವೆ. ಚಿತ್ರದಲ್ಲಿನ ವಸ್ತುಗಳು ಮತ್ತು ಆಕೃತಿಗಳು ಆ ಸಂದರ್ಭಕ್ಕೆ ತಕ್ಕಂತೆ ಕಲ್ಪನಾತ್ಮಕವಾಗಿ ಚಿತ್ರಿಣಗೊಂಡಿವೆ. ಇಲ್ಲಿ ವಿಷಯಕ್ಕೆ ಹೆಚ್ಚು ಒತ್ತು ನೀಡಿ ಆಕೃತಿಯನ್ನು ತುಂಬಾ ಸ್ಪಷ್ಟವಾಗಿ ಅದರ ಭಾವ ಭಂಗಿಗಳಲ್ಲಿ ಯಥಾದರ್ಶನವನ್ನು ಕಾಯ್ದಿಟ್ಟಿದ್ದಾರೆ.

೨.೨.೧೮. ದಲಿತ ಸ್ನೇಹಿತನೊಂದಿಗೆ ಸಹಭೋಜನ ಮಾಡುತ್ತಿರುವ ಬಸವಣ್ಣ

ಕಲಾವಿದ ಕೆ. ಗಂಗಾಧರ ಅವರು ೪೮"x೩೬" ಅಳತೆಯ, ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಇದೊಂದು ಅಪೂರ್ವ ಕಲಾಕೃತಿಯಾಗಿದೆ. ಬಸವೇಶ್ವರನು ಕೂಡಲಸಂಗಮದಲ್ಲಿ ದಲಿತನೊಬ್ಬನ ಜೊತೆಯಲ್ಲಿ ಊಟ ಮಾಡುವ ಮತ್ತು ಆ ಮೂಲಕ ಸಮಾನತೆಯ ತತ್ವವನ್ನು ಬೋಧಿಸುವ ಸಂಗತಿ ಈ ಚಿತ್ರಪಠ್ಯದ ಮೂಲಕ ವ್ಯಕ್ತವಾಗಿದೆ. ಇಂತಹ ವಿಚಾರ ಸರಣಿಯನ್ನು ಬಹುಶಃ ಕೆ. ಗಂಗಾಧರ್ ಒಬ್ಬರೇ ರೂಪಿಸಿದ್ದಾರೆಂದು ಹೇಳಬಹುದು. ಬಾಲಕ ಬಸವನು ಕೂಡಲಸಂಗಮದಲ್ಲಿ ಅಧ್ಯಯನ ಮಾಡುತ್ತಿರುವ ಸಂದರ್ಭದಲ್ಲಿ ದೇವಸ್ಥಾನದಿಂದ ತುಸು ದೂರದಲ್ಲಿ ಮರಗಳ ಸಾಲಿನ ನೆರಳಿನಲ್ಲಿ ದಲಿತ ವ್ಯಕ್ತಿಯೊಂದಿಗೆ ಕುಳಿತು ತಟ್ಟೆಯಲ್ಲಿದ್ದ ಫಲಾಹಾರವನ್ನು ಹಂಚಿಕೊಳ್ಳುವುದು ಇಲ್ಲಿ ಕಂಡು ಬರುತ್ತದೆ. ಸವರ್ಣೀಯನಾದ ಬಸವಣ್ಣ ಜರತಾರಿ ಅಂಚಿನ ಬಿಳಿಬಣ್ಣದ ಅಂಗಿ ಮತ್ತು ಧೋತ್ರವನ್ನು ಧರಿಸಿದ್ದಾನೆ. ಆತನ ಮುಖದಲ್ಲಿ ವಿಭೂತಿ ಎದ್ದು ಕಾಣುತ್ತದೆ. ಆತನ ಮೈಬಣ್ಣವು ಹೊಳೆಯುವ ರೀತಿಯಲ್ಲಿ ಚಿತ್ರಿತವಾಗಿದ್ದರೆ, ಆತನ ಎದುರಿಗೆ ತೀರ ಹತ್ತಿರದಲ್ಲಿ ಕುಳಿತ ವ್ಯಕ್ತಿಯ ಮೈಬಣ್ಣವನ್ನು ಕಪ್ಪು ಮಿಶ್ರಿತ ಕಂದುಬಣ್ಣದೊಂದಿಗೆ ಸಮೀಕರಿಸಲಾಗಿದೆ. ವರ್ಣವು ದಲಿತನೆಂಬುದನ್ನು ಎತ್ತಿ ತೋರಿಸುವುದು ಕಲಾವಿದನ ಉದ್ದೇಶವಿದ್ದಂತಿದೆ. ಹರಿದ ಪಂಚೆಯನ್ನು ಧರಿಸಿದ ಆತನ ಮೈ ಬರಿದಾಗಿದೆ. ಬಸವನೊಂದಿಗೆ ಯಾವುದೋ ವಿಷಯವನ್ನು ಹೇಳುತ್ತಿರುವಂತೆ ಬಸವಣ್ಣ ಅದನ್ನು ಶ್ರದ್ಧೆಯಿಂದ ಕೇಳುತ್ತಿರುವಂತೆ ಚಿತ್ರಿಸಲಾಗಿದೆ. ಕಲ್ಯಾಣ ಕ್ರಾಂತಿಯಲ್ಲಿ ಜಾತಿ ಪದ್ಧತಿಯ

ವಿರುದ್ಧ ಹೋರಾಡಿದ ಬಸವಣ್ಣನ ಕ್ರಾಂತಿಯ ಮೂಲ ಇಲ್ಲಿ ಬೀಜ ರೂಪದಲ್ಲಿ ಇರುವುದನ್ನು ಗಮನಿಸಬಹುದು. ಆ ದೃಷ್ಟಿಯಿಂದ ಈ ಚಿತ್ರವು ವಿಶೇಷತೆಯನ್ನು ಪಡೆದಿದೆ. ಮರಗಳ ಸಾಲಿನಿಂದ ದೇವಸ್ಥಾನಕ್ಕೆ ಹೋಗುವ ಕಾಲು ದಾರಿಯು ನೈಜವಾಗಿ ರೂಪಿತಗೊಂಡಿದ್ದು, ದೇವಸ್ಥಾನದ ಹತ್ತಿರ ನಡೆದು ಬರುತ್ತಿರುವ ವ್ಯಕ್ತಿಗಳ ನೆರಳುಗಳು ಉದ್ದವಾಗಿ ಬಿದ್ದಿರುವುದರಿಂದ ಈ ಘಟನೆಯು ಸಾಯಂಕಾಲ ಇಲ್ಲವೆ ಬೆಳಿಗ್ಗೆಯ ಹೊತ್ತಿನಲ್ಲಿ ನಡೆದಿರಬಹುದೆಂದು ಊಹಿಸಲು ಅವಕಾಶವಿದೆ. ಮರಗಿಡಗಳು, ಆಕಾಶ, ದೇವಾಲಯ, ಕಾಲುದಾರಿ ಇಂಥ ಎಲ್ಲ ಸಂಗತಿಗಳು ಅರ್ಹ ವರ್ಣ ಸಂಯೋಜನೆಯೊಂದಿಗೆ ಮೂಡಿಬಂದಿವೆ.

ಪ್ರಸ್ತುತ ಚಿತ್ರವು ತೈಲವರ್ಣದಿಂದ ರಚಿತವಾಗಿದ್ದು ಒಂದು ಉದ್ದೇಶಿತ ಸನ್ನಿವೇಶವನ್ನು ಅಭಿವ್ಯಕ್ತಿಸುವಾಗ ಹಿನ್ನೆಲೆಗೆ ಆದ್ಯತೆಯನ್ನು ನೀಡಿದರೆ ಅದು ಹೇಗೆ ಆಕರ್ಷಣೀಯವಾಗಿ ಗೋಚರವಾಗುತ್ತದೆ ಎಂಬುದಕ್ಕೆ ಈ ಚಿತ್ರ ಒಂದು ಉತ್ತಮ ಉದಾಹರಣೆ. ಸುಂದರವಾದ ಪರಿಸರವನ್ನು ಯಥಾದರ್ಶನದ ನೀತಿಯಂತೆ ಇಲ್ಲಿ ಚಿತ್ರಿಸಲಾಗಿದೆ. ಮರಗಳ ತೋಪು, ದೂರದಲ್ಲಿ ಚಾಲುಕ್ಯ ಶೈಲಿಯನ್ನು ನೆನಪಿಸುವ ದೇಗುಲ, ಹಸಿರು ಸೀರೆಯುಟ್ಟ ಇಳೆ ಹೀಗೆ ಇವುಗಳ ಹಿನ್ನೆಲೆಯಲ್ಲಿ ಚಿತ್ರದ ಪ್ರಮುಖ ಆಶಯವಾದ ಆಕೃತಿಗಳನ್ನು ತೋರ್ಪಡಿಸುವಿಕೆ ಇವು ಬೌದ್ಧಿಕ ಅಭಿವ್ಯಕ್ತಿಗೆ ನಿದರ್ಶನಗಳು. ಶೂದ್ರನೊಬ್ಬನ ಅಂತರಂಗದ ತೊಳಲಾಟದ ಅಭಿವ್ಯಕ್ತಿ ಅವನ ಮುಖಚರ್ಯೆಯಲ್ಲಿ ಕಾಣಬಹುದಾಗಿದೆ. ಪ್ರಸನ್ನವದನನಾಗಿ ಆಲಿಸುತ್ತಿರುವ ಬಸವ, ಇವು ಭಾವಾಭಿವ್ಯಕ್ತಿಗೆ ಪೂರಕವಾದ ಕ್ರಿಯೆಗಳು. ನೈಜ ನೆಲೆಯಲ್ಲಿ ಪರಿಸರ, ಆಕೃತಿಗಳನ್ನು ತೋರ್ಪಡಿಸುವುದರ ಹಿಂದೆ ರಮಣೀಯ ವರ್ಣಮೇಳಗಳು ಬಹು ಮುಖ್ಯವೆಂಬುದಕ್ಕೆ ಈ ಕಲಾಕೃತಿ ಒಂದು ಉತ್ತಮ ಉದಾಹರಣೆಯಾಗಬಲ್ಲುದು.

೨.೨.೧೯. ಕೂಡಲಸಂಗಮದತ್ತ ಪಯಣ–೧

"ಯಾವುದೇ ಇತಿಹಾಸವನ್ನು ಹೇಳ ಹೊರಟರೆ ಅದಕ್ಕೊಂದು ಆಧಾರವಿರಲೇಬೇಕು. ಹಾಗಿಲ್ಲದೇ ಹೇಳುವುದು ಪುರಾಣವಾಗುತ್ತದೆ. ಕಲ್ಪಿತ ಪುರಾಣಕ್ಕೆ ವೈಭವೀಕರಣ ಮುಖ್ಯವಾದಂತೆ, ವಾಸ್ತವದ ನೆಲೆಗಟ್ಟಿನಲ್ಲಿ ಲಭ್ಯವಿರುವ ಸಂಪನ್ಮೂಲಗಳ ಮೂಲಕ ಹೇಳುವುದು ಇತಿಹಾಸಕ್ಕೆ ಮುಖ್ಯವೆನಿಸುತ್ತದೆ. ಪುರಾಣಕ್ಕೆ ಗಟ್ಟಿನೆಲೆ ಇಲ್ಲದಿದ್ದರೂ, ಇದ್ದಂತೆ ಭಾವಿಸುವ ಅಥವಾ ಸಾವಿರಾರು ವರ್ಷಗಳ ಹಿಂದೆ ಆಗಿ ಹೋಗಿತ್ತು. ಅದು ಇಂದು ನಾಮಾವಶೇಷವಿಲ್ಲದಂತಾಗಿದೆ ಎಂಬ ಭ್ರಮಾವಾದದ ಮೂಲಕ ಇಂದಿಗೂ ಅಸ್ತಿತ್ವದಲ್ಲಿವೆಯೆಂದರೆ ಅದಕ್ಕೆ ದೃಶ್ಯಮಾಧ್ಯಮವೇ ಕಾರಣ ಎಂದರೆ ತಪ್ಪಾಗಲಾರದು"[೩೮] ಎಂಬ ಮಾತಿಗೆ ಉತ್ತಮ ಉದಾಹರಣೆ ಈ ಕಲಾಕೃತಿಯೆಂದರೆ ಅತಿಶಯೋಕ್ತಿಯಾಗಲಾರದು.

ಳಲ"x೩೬" ಅಳತೆಯ, ತೈಲವರ್ಣ ಮಾಧ್ಯಮದಲ್ಲಿ ಮೂಡಿರುವ ಈ ಕಲಾಕೃತಿಯನ್ನು ಕಲಾವಿದ ಕೆ. ಗಂಗಾಧರ ಅವರು ರಚಿಸಿರುತ್ತಾರೆ. ಈ ಚಿತ್ರದಲ್ಲಿ ಬಾಲಕ ಬಸವನು ಬಾಗೇವಾಡಿಯಿಂದ ಕೂಡಲಸಂಗಮದತ್ತ ಪ್ರಯಾಣ ಬೆಳೆಸಿರುವ ಸಂದರ್ಭವನ್ನು ಕಾಣುತ್ತೇವೆ. ಕಲಾವಿದನ ಚಿತ್ರದ ಪ್ರಕಾರ

---

೩೮. ಎಲ್. ಶಿವಲಿಂಗಪ್ಪ : ದೃಶ್ಯ ಮಾಧ್ಯಮದಲ್ಲಿ ಬಸವಣ್ಣ, ಪು–೧

ಅಕ್ಕನಾಗಮ್ಮನಿಗೆ ಈಗಾಗಲೇ ಶಿವಸ್ವಾಮಿಯೊಂದಿಗೆ ವಿವಾಹವಾಗಿದೆಯೆಂದು ತಿಳಿದುಬರುತ್ತದೆ. ವಟು ವೇಷದ ಬಾಲಕ ಬಸವಣ್ಣನು ತಾನೇ ಅವರಿಬ್ಬರನ್ನು ಮುನ್ನಡೆಸುತ್ತಾ, ಮಾರ್ಗದರ್ಶನ ಮಾಡುತ್ತಾ ಕೂಡಲ ಸಂಗಮ ದೇವಾಲಯದ ನದಿಯ ಈಚೆಯ ದಡಕ್ಕೆ ಬಂದಿದ್ದಾನೆ. ಅನತಿ ದೂರದಲ್ಲಿರುವ ಸಂಗಮೇಶ್ವರ ದೇವಾಲಯವನ್ನು ತನ್ನ ಬಲಗೈಯನ್ನು ಮುಂಚಾಚುವುದರ ಮೂಲಕ ತೋರಿಸುತ್ತಿದ್ದಾನೆ. ಆತನ ಚರ್ಯೆಯನ್ನು ಅಕ್ಕನಾಗಮ್ಮ ಮತ್ತು ಶಿವಸ್ವಾಮಿ ದಂಪತಿಗಳು ಗಮನವಿಟ್ಟು ಕೇಳುವಂತೆ ಕಲಾವಿದ ಇಲ್ಲಿ ಚಿತ್ರಿಸಿದ್ದಾನೆ. ದಂಪತಿಗಳಿಬ್ಬರ ಉಡುಗೆ–ತೊಡುಗೆಗಳಿಗೆ ಬಳಸಿದ ವರ್ಣ ಸಂಯೋಜನೆ ಅಚ್ಚುಕಟ್ಟಾಗಿ ಮೂಡಿಬಂದಿದೆ. ಆಲದ ಮರದ ಬಿಳಲುಗಳ ಮಧ್ಯೆ ಮರಳಿನ ಮೇಲೆ ನಡೆಯುವ ಭಂಗಿ ಆಕರ್ಷಕವಾಗಿದೆ. ಸಂಗಮನಾಥನ ದೇವಸ್ಥಾನ ದೂರದಿಂದ ಕಾಣುತ್ತಿದ್ದು, ನದಿಯ ನೀರಿನ ಬಣ್ಣ ಮತ್ತು ಗಿಡಗಳ ಮಧ್ಯೆ ಕಾಣುವ ಆಕಾಶದ ಚಿತ್ರಣ ಇವೆಲ್ಲವೂ ಕಲಾವಿದನ ಕುಂಚದಿಂದ ಸುಂದರವಾಗಿ ಮೂಡಿಬಂದಿವೆ. ನೆರಳು–ಬೆಳಕಿನ ಆಟವನ್ನು ಪ್ರಸ್ತುತ ಚಿತ್ರದಲ್ಲಿ ಕಾಣಬಹುದಾಗಿದೆ.

ಕೂಡಲಸಂಗಮದತ್ತ ಪಯಣಿಸುತ್ತಿರುವ ಈ ಕಲಾಕೃತಿಯಲ್ಲಿ ಅಕ್ಕನಾಗಮ್ಮ ದಂಪತಿಯನ್ನು ಬಾಲ ಬಸವನು ಕರೆದುಕೊಂಡು ಹೋಗುತ್ತಿರುವ ದೃಶ್ಯ ಸಂಭ್ರಮಾತ್ಮಕ ವರ್ಣಮೇಳದಿಂದ ಕೂಡಿದೆ. ಹಸಿರು ಹೊದ್ದ ಇಳೆ, ಸುಂದರವಾದ ಕಾನನ, ಬಸವ ಪರಿವಾರಕ್ಕೆ ಸುತ್ತವರಿದಿದ್ದರೂ ಆಕೃತಿಗಳು ಮಾತ್ರ ಸ್ಪಷ್ಟವಾಗಿ ಗೋಚರವಾಗುತ್ತಿವೆ. ಯಥಾದರ್ಶನದ ನೀತಿಯ ಪ್ರಕಾರವಾಗಿ ದೂರ ಮತ್ತು ಸಾಮೀಪ್ಯದ ಪ್ರಾಯೋಗಿಕ ಸಿದ್ಧಾಂತ ಇಲ್ಲಿ ಸ್ಪಷ್ಟ. ದೂರದಲ್ಲಿ ಕೂಡಲಸಂಗಮನಾಥನ ದೇಗುಲ, ಅದರ ಈಚೆ ಕೃಷ್ಣಾ ನದಿ, ಮತ್ತೆ ಅದರ ಈಚೆ ಕಾನನ, ಹುಲ್ಲುಗಾವಲು. ಆಕೃತಿಗಳು ಸಾಮೀಪ್ಯದ ನೆಲೆಯಲ್ಲಿ ಚಿತ್ರಿತಗೊಂಡಿವೆ. ಸೂರ್ಯಾಸ್ತದ ಪ್ರಖರ ವರ್ಣಛಾಯೆ ಆಕೃತಿಗಳಲ್ಲಿ, ಮರಗಳಲ್ಲಿ ಕಂಡುಬಂದರೆ ನೀಲಾಕಾಶದಲ್ಲಿ ಅಂತಹ ಸನ್ನಿವೇಶ ಕಂಡುಬರುವುದಿಲ್ಲ. ಇದು ತದ್ವಿರುದ್ಧ ಕ್ರಿಯೆ.

ಕೂಡಲಸಂಗಮದತ್ತ ಪಯಣ–೨

ನಂಜುಂಡ ಭಾಗವತ ವಿರಚಿತ 'ವೃಷಭೇಂದ್ರ ವಿಳಾಸ ಯಕ್ಷಗಾನ ಮಹಾನಾಟಕ' ಎಂಬ ಕೃತಿಯಲ್ಲಿ ಈ ಕಲಾಕೃತಿಯು ಸಂಗ್ರಹಗೊಂಡಿದೆ. ಆದರೆ ಈ ಚಿತ್ರಕಲಾಕೃತಿಯನ್ನು ರಚಿಸಿದ ಕಲಾವಿದರ ಹೆಸರು ಮತ್ತು ಕಾಲಮಾನ ಅಲಭ್ಯ. ಪ್ರಸ್ತುತ ಚಿತ್ರವು ಪ್ರಕೃತಿದತ್ತ ಜಲವರ್ಣದಲ್ಲಿ ರಚಿತವಾಗಿದ್ದು, ಸಾಂಪ್ರದಾಯಿಕ ಶೈಲಿಯಲ್ಲಿ ರಚಿತವಾದ ಈ ಚಿತ್ರದಲ್ಲಿ ಬಸವಣ್ಣ ಮತ್ತು ಅಕ್ಕನಾಗಮ್ಮನು ಬಾಗೇವಾಡಿಗೆ ಬರುವಾಗ ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಅಡ್ಡ ಬರುತ್ತವೆ. ಆಗ ಬಸವಣ್ಣನು ಸಂಗಮನಾಥನನ್ನು ನೆನೆಯಲು ಶಿವನು ತಡ ಮಾಡದೆ ಅಲ್ಲಿಗೆ ಬಂದು ತನ್ನನ್ನು ನೆನೆದ ಭಕ್ತರನ್ನು ತಾನೇ ರಕ್ಷಿಸುವಂತೆ ಸ್ವತಃ ಬಸವ ಮತ್ತು ಅಕ್ಕನಾಗಮ್ಮಗಳ ಕೈಹಿಡಿದು ತನ್ನ ಆಲಯಕ್ಕೆ ಕರೆದುತರುತ್ತಾನೆ. ಈ ಸಂದರ್ಭವನ್ನು ಕಲಾವಿದ ಸುಂದರವಾಗಿ ಚಿತ್ರಿಸಿದ್ದಾನೆ. ಚಿತ್ರಪಠ್ಯದ ದೃಷ್ಟಿಯಿಂದ ಮತ್ತು ಅಕ್ಷರಪಠ್ಯದ ದೃಷ್ಟಿಯಿಂದ ಈ ಕೃತಿಯು ಮಹತ್ವದ ಸ್ಥಾನ ಪಡೆಯುತ್ತದೆ.

ಬಸವಣ್ಣನು ಸಾಂಪ್ರದಾಯಿಕವಾದ ಕಾವಿ ಬಟ್ಟೆಯನ್ನು ತಲೆಯ ಮೇಲಿನಿಂದ ಕಾಲಿನವರೆಗೂ ಧರಿಸಿ, ಕೊರಳಲ್ಲಿ ಇಷ್ಟಲಿಂಗ ಮತ್ತು ರುದ್ರಾಕ್ಷಿ ಮಾಲೆಯನ್ನು ಧರಿಸಿದ್ದಾನೆ. ಹಣೆಯಲ್ಲಿ ಮತ್ತು ಕಣ್ಣಿನ ಸುತ್ತಲೂ ವಿಭೂತಿಯನ್ನು ಲೇಪಿಸಲಾಗಿದೆ. ಆತನನ್ನು ಕೈಹಿಡಿದ ಶಿವನು ಸಾಮಾನ್ಯ ಜಂಗಮನ ವೇಷಧಾರಿಯಂತೆ ಕಂಡುಬರುತ್ತಾನೆ. ಹಣೆ, ಮೈ, ಕೈ, ಎದೆ ಮುಂತಾದ ಕಡೆಗೆ ವಿಭೂತಿಯನ್ನು ಧರಿಸಿದ್ದಾನೆ. ಕೊರಳಲ್ಲಿ ಇಷ್ಟಲಿಂಗ ಮತ್ತು ರುದ್ರಾಕ್ಷಿಮಾಲೆಗಳು ಶೋಭೆ ತಂದಿವೆ. ಮುಖಕ್ಕೆ ಕಪ್ಪುಕೂದಲಿನ ಗಡ್ಡ ಇರುವುದು ಆಕರ್ಷಕವಾಗಿದೆ. ಆತನ ನೋಟವೆಲ್ಲ ಸಂಗಮನ ದೇವಾಲಯದ ಕಡೆಗೆ ನೆಟ್ಟಿದೆ. ಅಕ್ಕನಾಗಮ್ಮ ಸರ್ವಾಲಂಕಾರ ಭೂಷಿತೆಯಾಗಿ ಹಣೆಯಲ್ಲಿ ವಿಭೂತಿಯನ್ನು ಧರಿಸಿ, ಬೈತಲೆ ತೆಗೆದು, ಕೆಂಪುಸೀರೆ ಮತ್ತು ಹಳದಿ ಬಣ್ಣದ ಕುಪ್ಪಸವನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಬಹುಮುಖ್ಯವಾಗಿ ಈ ಚಿತ್ರದಲ್ಲಿ ಕೂಡಲಸಂಗಮದ ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ಕಲಾವಿದ ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿ ತನ್ನ ಪ್ರತಿಭೆಯನ್ನು ಮೆರೆದಿದ್ದಾನೆ.

ಇಲ್ಲಿ ಕಂಡುಬರುವ ತೆಂಗಿನ ಗಿಡಗಳು, ಅವುಗಳ ಗರಿಗಳ ಚೂಪಾದ ತುದಿಗಳು, ವಿವಿಧ ಮರಗಳಲ್ಲಿ ಕಂಡು ಬರುವ ಕೋಗಿಲೆ, ಅಳಿಲು, ಮುಂತಾದ ಪಕ್ಷಿ ಸಂಕುಲಗಳು, ನದಿಯಲ್ಲಿ ಈಜಿ ಬರುತ್ತಿರುವ ಮೀನುಗಳು ಮೂಡಿಬಂದಿವೆ. ಬಾಗೇವಾಡಿಯಿಂದ ಕೂಡಲಸಂಗಮಕ್ಕೆ ಬಸವಣ್ಣನು ಬರುವಾಗ ಜೊತೆಗೆ ಅಕ್ಕನಾಗಮ್ಮ ಮತ್ತು ಆಕೆಯ ಗಂಡ ಶಿವದೇವ ಬರುವಂತೆ ಕಲಾವಿದರು ಚಿತ್ರಿಸಿದ್ದಾರೆ. ಆದರೆ ಇಲ್ಲಿ ಬಸವಣ್ಣ ಮತ್ತು ಅಕ್ಕನಾಗಮ್ಮನೊಂದಿಗೆ ಸಾಕ್ಷಾತ್ ಶಿವನೇ ಕೈಹಿಡಿದು ನಡೆಸಿಕೊಂಡು ಶಿವಾಲಯಕ್ಕೆ ಕರೆದುಕೊಂಡು ಹೋಗುತ್ತಿರುವ ಕಲ್ಪನೆ ಮಹತ್ವವನ್ನು ಪಡೆಯುತ್ತದೆ. ಪ್ರತಿಯೊಂದು ಸಾಂಪ್ರದಾಯಿಕ ಚಿತ್ರಗಳಿಗೆ ತನ್ನದೇ ಆದಂತಹ 'ಶೈಲಿ' ಎನ್ನುವುದು ಇರುತ್ತದೆ. ನಮ್ಮ ದೇಶದಲ್ಲಿ ಪ್ರಾಂತೀಯವಾರು ಶೈಲಿಗಳುಂಟು. ಉದಾಹರಣೆಗೆ ಮೈಸೂರು ಶೈಲಿ, ತಂಜಾವೂರ್ ಶೈಲಿ, ಬಸೋಲಿ ಶೈಲಿ, ರಾಜಸ್ಥಾನ ಶೈಲಿ ಹೀಗೆ ಹತ್ತು ಹಲವಾರು ಚಿತ್ರಶೈಲಿಗಳುಂಟು. ಆ ಚಿತ್ರ ಶೈಲಿಗೆ ತನ್ನದೇ ಆದ ಚಿತ್ರರಚನಾ ಶೈಲಿಯು ಸಹ ಇರುತ್ತದೆ. ಪ್ರಸ್ತುತ ಚಿತ್ರದ ಶೈಲಿಯ ಮೂಲ ಲಭ್ಯವಿಲ್ಲದಿದ್ದರೂ ರಾಜಸ್ಥಾನ ಚಿಕಣಿ ಚಿತ್ರಶೈಲಿಯಲ್ಲಿ ಕಂಡುಬರುವಂತೆ ಇಲ್ಲಿ ಪ್ರಕೃತಿಯನ್ನು ಪಕ್ಷಿ ನೋಟದಿಂದ ಚಿತ್ರಿಸಿರುವುದಕ್ಕೆ ಹರಿಯುತ್ತಿರುವ ನದಿ ಸಾಕ್ಷಿ. ಗಿಡಗಳ ಎಲೆಯನ್ನು ಪ್ರತ್ಯೇಕವಾಗಿ ಒಂದರ ಮಗ್ಗುಲಿಗೆ ಒಂದರಂತೆ ಚಿತ್ರಿಸಲಾಗಿದೆ.

ದೇಗುಲಕ್ಕಿಂತ ಚಿಕ್ಕದಾಗಿ ತೆಂಗಿನ ಮರಗಳನ್ನು ಚಿತ್ರಿಸಲಾಗಿದೆ. ಆಕೃತಿಗಳ ದೇಹಕ್ಕಿಂತ ಶಿರವನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಮೇಲ್ನೋಟಕ್ಕೆ ಈ ಚಿತ್ರದಲ್ಲಿ ಪ್ರಮಾಣಬದ್ಧತೆಯ ಕೊರತೆ ಕಂಡುಬಂದರೂ ಚಿತ್ರ ರಚಿಸಿದ ಕಲಾವಿದನ ಹಿನ್ನೆಲೆಯ ಕುರಿತು ತಿಳಿದುಕೊಳ್ಳುವುದು ಅವಶ್ಯವೆನಿಸುತ್ತದೆ. ಇಂತಹ ಚಿತ್ರ ರಚನೆಯ ಕಲಾವಿದರು ಯಾವುದೇ ಶಿಷ್ಟವಾದ ಕಲಾ ತರಬೇತಿ ಪಡೆದಿರುವುದಿಲ್ಲ. ತಮ್ಮ ಮನೆತನದಿಂದ ಪರಂಪರಾಗತವಾಗಿ ಬಂದ ವೃತ್ತಿಯ ಮುಖೇನ ಇಂತಹ ಚಿತ್ರಗಳನ್ನು ರಚಿಸಿರುವುದರಿಂದ ಅವರಿಗೆ ಬೌದ್ಧಿಕ ಮತ್ತು ಭೌತಿಕ ವಸ್ತುಗಳ ತಾಂತ್ರಿಕತೆಯ ಹಾಗೂ ಪ್ರಮಾಣಬದ್ಧತೆಯ ಅರಿವು ಇರುವುದಿಲ್ಲ. ಹೀಗಾಗಿ ಇಂತಹ ಚಿತ್ರ ಶೈಲಿಯಲ್ಲಿ ಪ್ರಮಾಣಬದ್ಧತೆಗಿಂತ ಚಿತ್ರದ ಒಟ್ಟು ಲಕ್ಷಣದ ಹಿನ್ನೆಲೆಯಲ್ಲಿ

ನೋಡಬೇಕಾಗುತ್ತದೆ ಎಂಬುದಕ್ಕೆ ಈ ಚಿತ್ರ ಒಂದು ಉದಾಹರಣೆಯಾಗುತ್ತದೆ. ಇಡೀ ಚಿತ್ರದಲ್ಲಿ ಎಲ್ಲಿಯೂ ಪ್ರಖರ ವರ್ಣಗಳನ್ನು ದುಡಿಸಿಕೊಳ್ಳದೇ, ಮೃದುವಾದ ವರ್ಣಗಳನ್ನು ದುಡಿಸಿಕೊಳ್ಳುವುದರ ಮುಖೇನ ಚಿತ್ರಕ್ಕೆ ಆಧ್ಯಾತ್ಮಿಕ ಆಯಾಮವನ್ನು ತಂದುಕೊಡುವ ಪರಿ ಅನೂಹ್ಯವಾದುದು. ಇಡೀ 'ವೃಷಭೇಂದ್ರ ವಿಳಾಸ'ದಲ್ಲಿ ಇಂತಹ ಚಿತ್ರಗಳು ಉದ್ದೇಶಿತ ಚರಿತ್ರೆಯನ್ನು ದೃಶ್ಯಾತ್ಮಕವಾಗಿ ಹೇಳಿಕೊಂಡು ಹೋಗುವ ಬಗೆ ಅನನ್ಯವಷ್ಟೇ ಅಲ್ಲ! ವಿಸ್ಮಯದ ಅನುಭವವನ್ನೂ ನೀಡುತ್ತವೆ.

೨.೨.೨೦. ಸಂಗಮನಾಥ ಬಸವಣ್ಣನಿಗೆ ಕೃಷ್ಣಾನದಿ ದಾಟಲು ದಾರಿ ಮಾಡಿಕೊಟ್ಟಿರುವುದು

ಉತ್ಕೃಷ್ಟ ಕಲೆ ಒಬ್ಬ ಉತ್ತಮ ಕಲಾವಿದನನ್ನು ರೂಪಿಸುವುದರಲ್ಲಿ ಎರಡು ಮಾತಿಲ್ಲ. ಕಲಾವಿದ ಎಂ. ವೀರಪ್ಪನವರ ಹಲವು ಕಲಾಕೃತಿಗಳಲ್ಲಿ ಇದೂ ಒಂದಾಗಿದೆ. ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಪ್ರಸ್ತುತ ಚಿತ್ರದಲ್ಲಿ ಅಕ್ಕನಾಗಮ್ಮ ಮತ್ತು ಬಾಲಕ ಬಸವಣ್ಣ ಇವರಿಬ್ಬರು ಬಾಗೇವಾಡಿಯಿಂದ ಕೂಡಲ ಸಂಗಮಕ್ಕೆ ಹೊರಟು ಇನ್ನೇನು ಸಂಗಮವನ್ನು ತಲುಪಬೇಕೆಂಬ ಸಂದರ್ಭದಲ್ಲಿ ಕೃಷ್ಣಾನದಿಯು ತುಂಬಿ ಹರಿಯುತ್ತಿರುತ್ತದೆ. ಆ ಸಂದರ್ಭದಲ್ಲಿ ಶಿವನು ಪ್ರತ್ಯಕ್ಷನಾಗಿ ಅವರಿಬ್ಬರನ್ನು ಕರೆಯುವ ಸನ್ನಿವೇಶವನ್ನು ಪ್ರಸ್ತುತ ಚಿತ್ರವು ಹೊಂದಿದೆ. ಜಲವರ್ಣದಲ್ಲಿ ರಚಿತವಾದ ಈ ಕಲಾಕೃತಿಯಲ್ಲಿ ಕೆಂಪುವರ್ಣ ಬಳಕೆಯನ್ನು ಕಾಣುತ್ತೇವೆ. ನದಿಯ ದಂಡೆಯಲ್ಲಿ ಅಂದರೆ ನೋಡುಗರಿಗೆ ಚಿತ್ರದ ಬಲ ಮೂಲೆಯಲ್ಲಿ ದಪ್ಪವಾದ ಬೊಡ್ಡೆಯ ಮರದ ಬುಡದಲ್ಲಿ ಬಾಲಕ ಬಸವನು ತಲೆಯಲ್ಲಿ ಮಕಮಲ್ಲಿನ ಟೋಪಿ ಧರಿಸಿ, ತನ್ನೆರಡು ಕೈಗಳನ್ನು ಜೋಡಿಸಿ ನಿಂತಿದ್ದಾನೆ. ಅವನ ಹಿಂದೆ ಅವನಿಗಿಂತಲೂ ಸ್ವಲ್ಪ ಹೆಚ್ಚು ವಯಸ್ಸಿನ ಅಕ್ಕನಾಗಮ್ಮ ತಲೆಯ ತುಂಬ ಮೇಲುವಸ್ತ್ರವನ್ನು ಹೊದೆದು, ಚಿತ್ತಾರದ ಲಂಗ ಮತ್ತು ಅರ್ಧತೋಳಿನ ತುಂಬು ರವಿಕೆಯನ್ನು ಧರಿಸಿದ್ದಾಳೆ. ನದಿಯನ್ನು ಹೇಗೆ ದಾಟುವುದು ಎಂಬ ಸಂಶಯ ಅವರಿಗಿದ್ದಂತೆ ತೋರುತ್ತದೆ. ಆದರೆ ಅವರ ಎದುರಿಗಿರುವ ನದಿಯು ಶಾಂತವಾಗಿ ಹರಿಯುತ್ತಿದೆ. ಅಲೆಗಳಿಲ್ಲದ್ದರಿಂದ ನದಿಯ ದಂಡೆಯ ಮೇಲಿರುವ ಮರ-ಗಿಡಗಳ ಛಾಯೆ ನೀರಿನ ಮೇಲೆ ಬಿದ್ದಿದೆ. ಇವರಿಗೆ ಎದುರು ದಡದಲ್ಲಿ ಶಿವನು ತಲೆಯಲ್ಲಿ ಕಪ್ಪು ಕೂದಲಿನ ಜಟೆ, ಅದರಲ್ಲಿ ಅರ್ಧಚಂದ್ರ, ಹಣೆಯಲ್ಲಿ ಕಣ್ಣು, ಕೊರಳಲ್ಲಿ ಸರ್ಪ, ಬಲಗೈ ಮತ್ತು ಎಡಗೈಯಲ್ಲಿ ಹಿಡಿದಿರುವ ತ್ರಿಶೂಲ, ತಲೆಯ ತುಂಬ ಪ್ರಭಾವಳಿ, ಸೌಮ್ಯ ಮುಖಭಾವವನ್ನು ಹೊಂದಿ ತನ್ನೆದುರಿಗಿರುವ ಬಸವಣ್ಣ, ಅಕ್ಕನಾಗಮ್ಮನನ್ನು ಪ್ರೀತಿಯಿಂದ ಕರೆಯುತ್ತಿರುವ ಭಂಗಿಯಲ್ಲಿ ನಿಂತಿದ್ದಾನೆ. ಆತನ ಹಿಂದೆ ಕೂಡಲಸಂಗಮನಾಥನ ದೇವಸ್ಥಾನ ಮರಗಿಡಗಳ ನಡುವೆ ಮುಚ್ಚಿ ಹೋಗಿದ್ದರೂ ಶಿಖರಗಳು ಮಾತ್ರ ಸ್ಪಷ್ಟವಾಗಿ ಕಾಣುತ್ತವೆ. ಈ ಚಿತ್ರದಲ್ಲಿ ನದಿಯ ಮಧ್ಯೆಯಿರುವ ಒಂದು ತೋರು ಹಾದಿಯು ಈ ಚಿತ್ರದ ಆಶಯವನ್ನು ಪೂರ್ಣಗೊಳಿಸಿರುವುದನ್ನು ಗುರುತಿಸಬಹುದು. ನೀರಿನ ಮೇಲೆ ದಾರಿಯನ್ನು ಕೇವಲ ಒಂದು ಅಂಕುಡೊಂಕಾದ ಗೆರೆಯ ಮೂಲಕ ಕಲಾವಿದ ಸಾಧಿಸಿರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ.

ಸೇಫಿಯಾ ವಿಧಾನದಲ್ಲಿ ರಚಿತವಾದ ಈ ಕಲಾಕೃತಿಯಲ್ಲಿ ಆಕೃತಿಗಳಿಗಿಂತ ಹಿನ್ನೆಲೆಯ ಪರಿಸರಕ್ಕೆ ಆದ್ಯತೆ ಇದೆ. ನದಿಯ ಒಂದು ಬದಿಯಲ್ಲಿ ಶಿವ, ಮತ್ತೊಂದು ಬದಿಯಲ್ಲಿ ಬಸವ ಮತ್ತು ಅಕ್ಕನಾಗಮ್ಮನ

ಆಕೃತಿಗಳು ರಚನೆಗೊಂಡಿದ್ದು, ವಾಸ್ತವವಾಗಿ ಯಥಾದರ್ಶನದ ನೀತಿಯನ್ವಯ ಶಿವ ಇನ್ನೂ ಚಿಕ್ಕದಾಗಿ ಚಿತ್ರಿತವಾಗಬೇಕಿತ್ತು. ಇವರೀರ್ವರ ಮಧ್ಯೆ ನದಿಯ ಹರಿವು ಪಾರದರ್ಶಕವಾಗಿ ಒಡಮೂಡಿದೆ. ಯಥಾದರ್ಶನದ ವಿಧಾನದನ್ವಯ ದೂರದಲ್ಲಿ ಕೂಡಲಸಂಗಮನಾಥನ ದೇಗುಲವನ್ನು ತೋರ್ಪಡಿಸಲಾಗಿದೆ. ಪಾರ ಮತ್ತು ಅಪಾರದರ್ಶಕ ವಿಧಾನಗಳೆರಡನ್ನು ಸಹ ಈ ಚಿತ್ರ ಒಳಗೊಂಡಿದೆ.

೨.೨.೨೧. ಸಂಗಮನಾಥನ ದರ್ಶನ (ಕಾಮಿಕ್ಸ್ ಚಿತ್ರಕಥೆ)

ಬಾಲಕ ಬಸವನು ಬಾಗೇವಾಡಿಯಿಂದ ಕೂಡಲಸಂಗಮಕ್ಕೆ ಬರುತ್ತಾನೆ. ಆತನ ಜೊತೆಗೆ ಅಕ್ಕನಾಗಮ್ಮ ಮತ್ತು ಶಿವಸ್ವಾಮಿ ಅವರೂ ಬರುತ್ತಾರೆ. ಕೂಡಲಸಂಗಮನಾಥನ ಗುಡಿಯಲ್ಲಿ ಬಸವಣ್ಣನು ಭಕ್ತಿ ಭಾವದ ಪರವಶತೆಯಿಂದ ಅಂತೂ ನಾನು ನಿನ್ನ ಬಳಿ ಇದ್ದೇನೆ! ದೇವಾ, ನನಗೆಂದೂ ಇಂತಹ ಶಾಂತಿ ದೊರಕಿರಲಿಲ್ಲ! ಎಂದು ನುಡಿಯುತ್ತಾನೆ. ಈ ಚಿತ್ರದಲ್ಲಿ ಕಲಾವಿದ ಬಸವಣ್ಣನ ಆವೇಶ, ಭಕ್ತಿ, ಉತ್ಸಾಹ, ಧನ್ಯತಾ ಭಾವ, ಆತ್ಮತೃಪ್ತಿಯ ಮನೋಭಾವ-ಇವೆಲ್ಲವುಗಳನ್ನು ಒಟ್ಟಾಗಿ ಮುಪ್ಪುರಿಗೊಂಡಂತೆ ಚಿತ್ರಿಸಿರುವುದನ್ನು ಕಾಣುತ್ತೇವೆ.

ನೋಡುಗರಿಗೆ ಚಿತ್ರದಲ್ಲಿರುವ ಕೂಡಲ ಸಂಗಮನಾಥನ ಮೂರ್ತಿಯ ಪಾರ್ಶ್ವಭಾಗ ಮಾತ್ರ ಗೋಚರಿಸುತ್ತದೆ. ವಿಭೂತಿಲೇಪನವು ಒಡೆದುತೋರುವಂತೆ ಕಲಾವಿದ ರೂಪಿಸಿರುವುದನ್ನು ನೋಡುತ್ತೇವೆ. ಲಿಂಗಕ್ಕೆ ಬಳಸಿದ ಹೂವುಗಳ ಬಣ್ಣಗಳಲ್ಲಿ ಹಳದಿ, ಕೆಂಪು, ಹಸಿರು ಮತ್ತು ಬಿಳಿಬಣ್ಣಗಳು ಪ್ರಧಾನವಾಗಿ ತೋರುತ್ತಿವೆ. ಬಾಲಕ ಬಸವಣ್ಣನು ಹಸಿರುಬಣ್ಣದ ಮೇಲುಹೊದಿಕೆ ಮತ್ತು ಬಿಳಿಬಣ್ಣದ ಪಂಚೆಯನ್ನು ಧರಿಸಿದ್ದಾನೆ. ಕೊರಳಲ್ಲಿ ಕೆಂಪುಬಣ್ಣದಲ್ಲಿ ಸುತ್ತಿದ ಇಷ್ಟಲಿಂಗವನ್ನು ಧರಿಸಿರುವುದು ಎದ್ದುಕಾಣುತ್ತದೆ. ತನ್ನೆರಡೂ ಕೈಗಳನ್ನು ಎಡಬಲಕ್ಕೆ ಚಾಚಿರುವ ಭಂಗಿ ಆಕರ್ಷಕವಾಗಿದೆ. ಆತನ ಹಿಂದೆ ನಂದಿಯ ವಿಗ್ರಹ ಮತ್ತು ಅದರ ಪಕ್ಕದಲ್ಲಿ ಅಕ್ಕನಾಗಮ್ಮ ಮತ್ತು ಶಿವಸ್ವಾಮಿ ದಂಪತಿಗಳು ಭಕ್ತಿಯಿಂದ ಕೈ ಮುಗಿದಿರುವುದು ಗೋಚರವಾಗುತ್ತದೆ. ಅವರ ಹಿಂದೆ ಭಕ್ತನೊಬ್ಬ ತೂಗು ಹಾಕಿರುವ ಗಂಟೆಯನ್ನು ಬಾರಿಸುವ ಕಾರ್ಯದಲ್ಲಿ ನಿರತನಾಗಿರುವುದು ಕಾಣಿಸುತ್ತದೆ. ಚಿತ್ರಪರ್ಯದ ಈ ಸಂಯೋಜನೆ ಪ್ರಬುದ್ಧವಾದುದು. ಪ್ರಧಾನ ಆಶಯವಾಗಿ ಬಸವ ಅತ್ಯಂತ ಸಂಭ್ರಮದಿಂದ ತನ್ನೆರಡೂ ಕೈಗಳನ್ನೊಡ್ಡಿ ದೇವನಲ್ಲಿ ಬೇಡಿಕೊಳ್ಳುತ್ತಿರುವ ಪರಿ ಭಾವಪೂರ್ಣವಾದುದು. ಗರ್ಭಗುಡಿ ಬಾಗಿಲ ಚೌಕಟ್ಟಿನ ಹೊರಭಾಗದಲ್ಲಿ ಸಂಯೋಜಿಸಲ್ಪಟ್ಟಿರುವ ಬಸವ, ಗರ್ಭಗುಡಿಯ ಒಳಭಾಗದಲ್ಲಿ ಚಿತ್ರಿಸಲ್ಪಟ್ಟ ಸಂಗಮನಾಥ (ಈಶ್ವರ ಪ್ರತಿಮೆ), ದೇಗುಲದ ವರಾಂಡದಲ್ಲಿ ಚಿತ್ರಿಸಿರುವ ಇತರ ಭಕ್ತರು, ಅಲ್ಲಿರುವ ಆಧ್ಯಾತ್ಮಿಕ ವಾತಾವರಣ ಇವೆಲ್ಲವೂ ಮಕ್ಕಳ ಮನಸ್ಸಿಗೆ ಮುದ ನೀಡುತ್ತವೆ. ಮೃದುವಾದ ವರ್ಣಸಂಯೋಜನೆ, ಮಾನವ ಅಂಗ ರಚನೆಯಲ್ಲಿರುವ ಪರಿಪಕ್ವತೆ ಇತರ ಚಿತ್ರಗಳಿಗೆ ಮಾದರಿಯಾದೀತು.

೨.೨.೨೨. ಸಂಗಮನಾಥನ ಪೂಜೆ (ಕಾಮಿಕ್ಸ್ ಚಿತ್ರಕಥೆ)

ಪ್ರಸ್ತುತ ಚಿತ್ರದಲ್ಲಿ ಬಸವಣ್ಣನು ಕೂಡಲಸಂಗಮ ದೇವನನ್ನು ತನ್ನ ಕೈಯಾರೆ ಪೂಜಿಸುತ್ತಿರುವ

ಸನ್ನಿವೇಶವಿದೆ. ತಿಳಿ ಹಸಿರುಬಣ್ಣದ ಮೇಲುಹೊದಿಕೆಯನ್ನು ಹೊದ್ದು ಹಣೆಗೆ ವಿಭೂತಿ, ಕುಂಕುಮಗಳನ್ನು ಧರಿಸಿ, ಕೊರಳಿಗೆ ರುದ್ರಾಕ್ಷಿಮಾಲೆ ಮತ್ತು ಕೆಂಪುವಸ್ತ್ರದಲ್ಲಿ ಸುತ್ತಿದ ಇಷ್ಟಲಿಂಗವನ್ನು ಬಸವಣ್ಣ ಧರಿಸಿ ನಿಂತಿದ್ದಾನೆ. ಕಲಾವಿದ ಆತನ ಮನಸ್ಥಿತಿಯನ್ನು ಬಹಳ ಸ್ಪಷ್ಟವಾಗಿ ತೋರುವಂತೆ ಚಿತ್ರಿಸಿರುವುದನ್ನು ನೋಡಬಹುದು. ನಾನು ನನ್ನ ಹಸ್ತದಿಂದಲೇ ಪೂಜಿಸಿದರೂ ನನ್ನ ಹೃದಯಕ್ಕೆ ನೆಮ್ಮದಿಯಿಲ್ಲ. ನಾನು ಮತ್ತೇನು ಮಾಡಬೇಕು? ಎಂಬ ಸದಾಶಿವನ ಚಿಂತನೆಯಲ್ಲಿ ತೊಡಗಿರುವುದು ಇಲ್ಲಿ ಕಂಡುಬರುತ್ತದೆ. ಲಿಂಗಕ್ಕೆ ಮುಡಿಸಿದ ಹಸಿರುಬಣ್ಣದ ಬಿಲ್ವಪತ್ರೆಯ ರಾಶಿ, ಕೆಂಪು ಹೂವುಗಳು ಕಲಾಕೃತಿಗೆ ಮೆರುಗನ್ನು ನೀಡಿವೆ. ಭಾವಚಿತ್ರದ ಶೈಲಿಯಲ್ಲಿ ಸಂಯೋಜಿಸಲ್ಪಟ್ಟ ಈ ಚಿತ್ರದ ಹಿನ್ನೆಲೆಯಲ್ಲಿ ಸಂಗಮನಾಥ ದೇವಾಲಯದ ಪರಿಸರವನ್ನು ಚಿತ್ರಿಸಲಾಗಿದೆ. ಗರ್ಭಗುಡಿಯ ಎದುರಿಗೆ ನಿಂತು ತನ್ನಷ್ಟಕ್ಕೆ ತಾನೇ ಪ್ರಶ್ನಿಸಿಕೊಳ್ಳುತ್ತಿರುವ ಬಾಲ ಬಸವನ ಮುಖಚರ್ಯೆ ಅವನ ಪ್ರಶ್ನೆಗೆ ಪೂರಕವಾಗಿದೆ. ಹಿಂದಿನ ಚಿತ್ರದಲ್ಲಿ ಸಂಭ್ರಮಾತ್ಮಕ ಅಭಿವ್ಯಕ್ತಿ ಕಂಡರೆ ಇಲ್ಲಿ ಮುಖದಲ್ಲಿ ಅತೃಪ್ತಿಯ ಭಾವ ಸ್ಪಷ್ಟ. ಈ ಬಗೆಯ ರಚನೆ, ಭಾವಾಭಿವ್ಯಕ್ತಿ ಅಪರೂಪವೇ.

೨.೨.೨೩ ಸಂಗಮನಾಥನ ಸನ್ನಿಧಿಯಲ್ಲಿ ಗುರುಗಳ ಆಶೀರ್ವಾದ

"ಕಲಾಕೃತಿಗಳಲ್ಲಿ ಜೀವಕಳೆ ತುಂಬುವುದು ಮುಖ್ಯ ಇಂತಹ ಜೀವಕಳೆ ತುಂಬುವ ಕಲೆಗಾರಿಕೆ ಬರಬೇಕು. ಅದು ಅನುಭವಜನ್ಯ"[೩೯] ಎಂಬ ಮಾತು ಕಲಾವಿದ ಕೆ. ಗಂಗಾಧರ ಅವರಿಗೆ ಅನ್ವಯಿಕವಾಗುತ್ತದೆ. ತೈಲವರ್ಣ ಮಾಧ್ಯಮದಲ್ಲಿ ಚಿತ್ರಿಸಲಾದ ಈ ಕೃತಿಯು ೪೮"x೩೬" ಅಳತೆಯಲ್ಲಿ ರಚನೆಯಾಗಿದೆ. ಇಲ್ಲಿ ಬಾಲಕ ಬಸವಣ್ಣನು ಜನಿವಾರ ನಿರಾಕರಣೆಯನ್ನು ಮಾಡಿ ಬಾಗೇವಾಡಿಯಿಂದ ಕೂಡಲಸಂಗಮಕ್ಕೆ ಬರುತ್ತಾನೆ. ಕೂಡಲಸಂಗಮದಲ್ಲಿ ಗುರುಗಳಾದ ಜಾತವೇದ ಮುನಿಗಳನ್ನು ಕಂಡು ಅವರ ಕೃಪೆಯೊಂದಿಗೆ ಸಂಗಮೇಶನ ದರ್ಶನ ಪಡೆಯುತ್ತಾನೆ. ಪ್ರಸ್ತುತ ಚಿತ್ರವು ನೈಜ ತೈಲವರ್ಣದ ಗುಂಪಿಗೆ ಸೇರುತ್ತದೆ. ಕಲಾವಿದ ಇಲ್ಲಿ ಎಲ್ಲ ಸಂಗತಿಗಳನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವುದು ಕಾಣಿಸುತ್ತದೆ. ಬಾಲಕ ಬಸವಣ್ಣನು ತಲೆಯನ್ನು ಬೋಳಿಸಿಕೊಂಡು ಹಣೆಗೆ ವಿಭೂತಿಯನ್ನು ಧರಿಸಿದ್ದಾನೆ. ಅವನ ತಲೆಯ ಸುತ್ತಲೂ ತೆಳು ನೀಲಿಬಣ್ಣದ ಪ್ರಭಾವಳಿಯಿದೆ. ಬಿಳಿಯ ಬಣ್ಣದ ನಿಲುವಂಗಿ ಮತ್ತು ಧೋತರವನ್ನುಟ್ಟು ಎರಡೂ ಕೈಗಳನ್ನು ಜೋಡಿಸಿ ಗುರುಗಳಾದ ಜಾತವೇದ ಮುನಿಗಳಿಗೆ ಮತ್ತು ಆ ಪರಿಸರದ ಸಂಗಮೇಶನಿಗೆ ನಮಸ್ಕರಿಸುವಂತೆ ಕಾಣಿಸುತ್ತದೆ. ಆತನ ಎದುರಿಗೆ ಜಾತವೇದ ಮುನಿಗಳು ಕಾವಿ ಬಣ್ಣದ ಪಂಚೆ ಮತ್ತು ಮೇಲು ಹೊದಿಕೆಯನ್ನು ಧರಿಸಿದ್ದಾರೆ. ಬಿಳಿಬಣ್ಣದ ಕೂದಲುಗಳಿಂದ ಜಟೆ ಮತ್ತು ಗಡ್ಡ-ಮೀಸೆಗಳು ಚಿತ್ರಿತವಾಗಿವೆ. ಬಲದ ಕೈಯನ್ನು ಅರ್ಧ ಎತ್ತಿ ಬಸವೇಶ್ವರನಿಗೆ ಆಶೀರ್ವದಿಸುವಂತೆ ಚಿತ್ರಿಸಲಾಗಿದ್ದು, ಅವರ ಮುಖದ ಭಾವನೆಗಳು ಸ್ಪಷ್ಟವಾಗಿ ಗೋಚರಿಸುವಂತೆ ಕಲಾವಿದ ಮಾಡಿದ ಪ್ರಯತ್ನ ಇಲ್ಲಿ ಯಶಸ್ವಿಯಾಗಿದೆ. ಅವರು ಎಡಗೈಯಲ್ಲಿ ಹಿಡಿದಿರುವ ಕಮಂಡಲ ಪಾತ್ರೆ, ಪಾದದಲ್ಲಿ ಧರಿಸಿರುವ ಮರದ ಪಾದರಕ್ಷೆಗಳನ್ನು ಚಿತ್ರಿಸುವಲ್ಲಿ ಕಲಾವಿದ ತನ್ನ ಕುಶಲತೆಯನ್ನು ಮೆರೆದಿದ್ದಾನೆ. ದೇವಸ್ಥಾನದ ಗರ್ಭಗುಡಿಯ ಒಳಗೆ ಶಿವಲಿಂಗವು ಸ್ಪಷ್ಟವಾಗಿ ಕಾಣುತ್ತದೆ.

---

೩೯. ಎಲ್. ಶಿವಲಿಂಗಪ್ಪ : ಕರ್ಮವೀರ ವಾರಪತ್ರಿಕೆ, ದಿ.೧೩.೦೪.೧೯೯೭ ಪು-೩೪

ವಿಭೂತಿಯ ಪಟ್ಟಿಕೆಗಳನ್ನು ಧರಿಸಿಕೊಂಡಿರುವ ಶಿವಲಿಂಗವು ಗರ್ಭಗುಡಿಯ ಆವರಣದಲ್ಲಿ ತುಂಬ ಕಾಂತಿಯುಕ್ತವಾದ ಪ್ರಭೆಯನ್ನು ಹೊರಡಿಸುತ್ತಿರುವುದನ್ನು ಕಲಾವಿದ ಸಮರ್ಥವಾದ ವರ್ಣ ಸಂಯೋಜನೆಯೊಂದಿಗೆ ದಾಖಲಿಸಿದ್ದಾನೆ. ಶಿವಲಿಂಗದ ಮೇಲೆ ಅಭಿಷೇಕದ ಧಾರಾ ಪಾತ್ರೆಯನ್ನು ಕಟ್ಟಲಾಗಿದ್ದು, ಅದರಿಂದ ನೀರಿನ ಧಾರೆಯು ಶಿವಲಿಂಗದ ಮೇಲೆ ಸದಾ ಬೀಳುತ್ತಿರುವಂತೆ ಕಾಣಿಸಲಾಗಿದೆ. ತಾಮ್ರದ ಅಭಿಷೇಕದ ಪಾತ್ರೆಯು ಕಾಂತಿಯುಕ್ತವಾದ ಬೆಳಕಿನಲ್ಲಿ ಹೊಳೆಯುವುದನ್ನು ಚಿತ್ರಿಸಲು ಕಲಾವಿದ ಮಾಡಿದ ಪ್ರಯತ್ನ ಅತ್ಯಂತ ಯಶಸ್ವಿಯಾಗಿದೆ. ಗರ್ಭಗುಡಿಯ ಬಾಗಿಲುಗಳ ತೋರಣ ಮತ್ತು ಸುಕನಾಸಿಯಲ್ಲಿ ರಚಿತವಾಗಿರುವ ಕುಸುರಿಯ ಕಂಭಗಳು ಚಾಲುಕ್ಯರ ಶೈಲಿಯ ಶಿಲ್ಪಕಲೆಯನ್ನು ನೆನಪಿಸುತ್ತವೆ. ಶಿವಲಿಂಗದ ಎದುರಿಗೆ ಇರುವ ನಂದಿಯು ಕಪ್ಪುಕಲ್ಲಿನ ಮೂರ್ತಿಯಂತೆ ಒಡಮೂಡಿದೆ. ಶಿವಲಿಂಗದಿಂದ ಹೊಮ್ಮುವ ಪ್ರಭೆಯು ನಂದಿಕೋಡುಗಳ ಮಧ್ಯದಿಂದ ಹಾಯ್ದು ಭುಜ ಮತ್ತು ಅದರ ಹಿಂಭಾಗದವರೆಗೂ ಚಾಚಿರುವುದನ್ನು ಗುರುತಿಸಬಹುದು. ದೇವಸ್ಥಾನದ ಆಕಾರ, ಅಳತೆ, ಗಾತ್ರ, ಪ್ರಮಾಣ, ವರ್ಣಸಂಯೋಜನೆಗಳು ಕಲಾಕೃತಿಯ ಯಶಸ್ಸಿಗೆ ಕಾರಣವಾಗಿರುವುದನ್ನು ಇಲ್ಲಿ ಕಾಣುತ್ತೇವೆ.

ಬೆಳಕಿನ ವೈಭವ, ಅದರಿಂದ ಇಮ್ಮಡಿಗೊಳ್ಳುವ ಸೌಂದರ್ಯ, ಆ ಬೆಳಕಿನಲ್ಲಿ ಕಾಣುವ ಆಲಯ ಇಂತಹ ವಿಶಿಷ್ಟ ಅನುಭವ ನೀಡುವುದಕ್ಕೆ ಮುಖ್ಯ ಕಾರಣ ಈ ಚಿತ್ರದ ಗರ್ಭಗುಡಿಯಿಂದ ಹೊರಬರುವ ಬೆಳಕು. ಇದೇ ಬೆಳಕು ಎಲ್ಲ ಬೌದ್ಧಿಕ ಮತ್ತು ಭೌತಿಕ ಆಕೃತಿ–ವಿನ್ಯಾಸಗಳಿಗೆ ವಿಶಿಷ್ಟ ಪರಿಣಾಮವನ್ನು ನೀಡಲು ಇಲ್ಲಿನ ಸಂಯೋಜನೆಯೂ ಮುಖ್ಯ ಕಾರಣ. ಅವಕಾಶದ ಕೇಂದ್ರ ಭಾಗಕ್ಕೆ ಸಂಯೋಜನೆಗೊಳ್ಳುವ ಗರ್ಭಗುಡಿಯಿಂದ ಸಮಾನಾಂತರವಾಗಿ ಸಂಯೋಜನೆ ವಿಸ್ತೃತಗೊಂಡಿದೆ. ಎಡ ಪಾರ್ಶ್ವದಲ್ಲಿ ಗುರುಗಳು, ಬಲಪಾರ್ಶ್ವದಲ್ಲಿ ಬಾಲಬಸವ, ಮಧ್ಯದಲ್ಲಿ ನಂದಿಯ ವಿಗ್ರಹ, ಅವಕಾಶದ ಎಡ ಮತ್ತು ಬಲಪಾರ್ಶ್ವಗಳಲ್ಲಿ ಚಾಲುಕ್ಯ ಶೈಲಿಯ ಕಂಬಗಳು ರಚನೆಗೊಂಡಿವೆ. ರಮಣೀಯ ಶೈಲಿಯ ವರ್ಣ ಸಂಯೋಜನೆ ವಾಸ್ತವಾತೀತ. ಸಾಮಾನ್ಯರನ್ನು ಪುಳಕಗೊಳಿಸುವ ಸಂಯೋಜನೆ ಇದಾಗಿದೆ.

೨.೨.೨೪. ಅಧ್ಯಯನದಲ್ಲಿ ನಿರತನಾದ ಬಸವಣ್ಣ

ಯಾವುದೇ ಮನುಷ್ಯ ಶ್ರದ್ಧೆ, ಶಿಸ್ತು, ತಾಳ್ಮೆ ಈ ಮೂರನ್ನು ತನ್ನಲ್ಲಿ ಅಳವಡಿಸಿಕೊಂಡರೆ, ಅದರಿಂದಾದ ಜ್ಞಾನ ಮೌಲ್ಯತೆಯನ್ನು ಕಂಡುಕೊಳ್ಳುವುದರೊಂದಿಗೆ ಪರಿಣಾಮಕಾರಿಯಾದ ಪ್ರಭಾವ ಮತ್ತೊಬ್ಬರಲ್ಲಿ ಬೀರುತ್ತದೆ. ಈ ಮಾತಿಗೆ ಕಲಾವಿದ ಬಸವರಾಜ ಮುಗಳಿ ಅವರು ಹೊರತಾಗಿಲ್ಲ. ತೈಲವರ್ಣ ಮಾಧ್ಯಮದಲ್ಲಿ ಮೂಡಿರುವ ಈ ಕಲಾಕೃತಿಯು ೪೮"x೩೬" ಅಳತೆಯಲ್ಲಿ ರಚನೆಗೊಂಡಿದೆ. ಈ ಚಿತ್ರದಲ್ಲಿ ಬಸವನು ಕೂಡಲಸಂಗಮದಲ್ಲಿರುವ ಸಂಗಮನಾಥ ದೇವಸ್ಥಾನದಲ್ಲಿ ಅಧ್ಯಯನ ನಿರತನಾಗಿರುವ ಸಂದರ್ಭವನ್ನು ಕಾಣುತ್ತೇವೆ. ಬಿಳಿಬಣ್ಣದ ಪಂಚೆಯನ್ನು ಧರಿಸಿದ ಬಸವಣ್ಣನು ಹಣೆಯಲ್ಲಿ ವಿಭೂತಿ, ಕೊರಳಲ್ಲಿ, ಕೈಗಳಲ್ಲಿ ರುದ್ರಾಕ್ಷಿಯ ಮಾಲೆಗಳನ್ನು ಧರಿಸಿದ್ದಾನೆ. ನೀಲಿ ವರ್ಣದ ಚಾಪೆಯಂತಹ ಆಸನ ಅಥವಾ ರತ್ನಗಂಬಳಿಯ ಮೇಲೆ ಕುಳಿತ ಆತನು ತುಸು ಓರೆಯಾದ ಮುಖಭಾವದಿಂದ ಕೈಯಲ್ಲಿ ಹಸ್ತಪ್ರತಿಯನ್ನಿಡಿದು ಅರೆನಿಮೀಲಿತ

ಕಣ್ಣುಗಳಿಂದ ಅಧ್ಯಯನಶೀಲನಾಗಿರುವುದು ಕಂಡುಬರುತ್ತದೆ. ಆತನ ಎದುರಿನಲ್ಲಿ ಸಂಗಮನಾಥನನ್ನು (ಶಿವನನ್ನು) ನೋಡುತ್ತಿರುವ ನಂದಿಯ ವಿಗ್ರಹವಿದೆ. ಕಪ್ಪು ಕಲ್ಲಿನಲ್ಲಿ ನಿರ್ಮಿತವಾದ ನಂದಿಯು ವಿಭೂತಿ ಧಾರಣೆಯಿಂದ ಕಳೆಗೊಂಡಿದೆ. ಎದುರಿಗೆ ಗರ್ಭಗುಡಿಯಲ್ಲಿರುವ ಸಂಗಮನಾಥನ ಲಿಂಗವು ಮಸುಕು ಬೆಳಕಿನಲ್ಲಿ ಚಿತ್ರಿತವಾಗಿದೆ. ದೇವಸ್ಥಾನದಲ್ಲಿರುವ ಕಂಭಗಳು ಕಪ್ಪು ವರ್ಣದಿಂದ ಕೂಡಿದ್ದು ನಂದಿಕೋಲಿನ ತಾಳಗಳ ಮಾದರಿಯನ್ನು ನೆನಪಿಸುವಂತಿವೆ. ಬಸವಣ್ಣನ ಹಿಂಬದಿಯಲ್ಲಿ ಜಾತವೇದ ಮುನಿಗಳು ಕಾವಿ ಬಣ್ಣದ ಪಂಚೆ, ಮೇಲುವಸ್ತ್ರವನ್ನು ಮೈತುಂಬ ಧರಿಸಿ, ಎಡಗೈಯಲ್ಲಿ ಕಮಂಡಲ ಮತ್ತು ದಂಡವನ್ನು ಹಿಡಿದಿದ್ದಾರೆ. ತಮ್ಮ ಬಲಗೈಯನ್ನು ತುಸು ಮೇಲಕ್ಕೆತ್ತಿ ಬಸವಣ್ಣನಿಗೆ ಅಭಯಾಶೀರ್ವಾದ ಮಾಡುವ ಭಂಗಿಯಲ್ಲಿ ನಿಂತಿದ್ದಾರೆ. ಅವರ ಕಣ್ಣುಗಳು ಕರುಣೆಯನ್ನು ಸೂಸುವ ಶಾಂತ ಮುಖಮುದ್ರೆಯ ಭಾವವನ್ನು ಪ್ರಕಟಪಡಿಸುತ್ತವೆ.

ಕೂಡಲಸಂಗಮನಾಥನ ದೇಗುಲದಲ್ಲಿ ಅಧ್ಯಯನ ನಿರತನಾದ ಬಸವ, ಅವನ ಹಿಂದೆ ನಿಂತು ಆಶೀರ್ವದಿಸುತ್ತಿರುವ ಗುರುಗಳು, ಹಿನ್ನೆಲೆಯಲ್ಲಿ ಸಂಗಮನಾಥನ ದೇಗುಲದ ಒಳಾಂಗಣದ ಸಂಯೋಜನೆ. ಈ ಚಿತ್ರದಲ್ಲಿ ಪ್ರಮುಖ ಆಶಯವಾಗಿ ಬಸವಣ್ಣ ಮತ್ತು ಗುರುಗಳ ಆಕೃತಿಗಳು ನೈಜ ಶೈಲಿಯಲ್ಲಿ ರಚಿತವಾಗಿದ್ದು ಭಾವಪೂರ್ಣವಾಗಿವೆ. ಗರ್ಭಗುಡಿಯನ್ನು ಮಂದವಾಗಿ ತೋರ್ಪಡಿಸಿ, ಮಾನವಾಕೃತಿಗಳನ್ನು ಸ್ಪಷ್ಟ ವರ್ಣ ಮೇಳದೊಂದಿಗೆ ಚಿತ್ರದ ಉದ್ದೇಶಕ್ಕೆ ತಕ್ಕ ಹಾಗೆ ಚಿತ್ರಿಸಲಾಗಿದೆ. ಚಿತ್ರದ ಬಲಪಾರ್ಶ್ವದಲ್ಲಿ ಕಿಟಕಿಯಾಚೆ ಸಂಗಮದ ಪರಿಸರವನ್ನು ಸೂಚ್ಯವಾಗಿ ಚಿತ್ರಿಸಲಾಗಿದೆ.

೨.೨.೨೫. ಗುರುಸನ್ನಿಧಿಯಲ್ಲಿ ಬಸವಣ್ಣನ ಅಧ್ಯಯನ

"ಕಲೆಯ ಅನುಭವವೇ ಭಾವಾನುಭವ(Aesthetic), ಕ್ರಿಯಾನುಭವ(Artistic) ಎಂಬ ಎರಡೂ ನೆಲಸುಗಳಲ್ಲಿ – ಕಲಾಕೃತಿಯ ಅನುಭವವೇ ಪ್ರಧಾನ"[೪೦] ಎಂಬಂತೆ ಈ ಕಲಾಕೃತಿ ಮೂಡಿಬಂದಿದೆ. ಕಲಾವಿದ ಕೆ. ಗಂಗಾಧರ ಅವರ ಈ ಕಲಾಕೃತಿಯು ೪೮"x೩೬" ಅಳತೆಯ ತೈಲವರ್ಣದಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ಬಸವನು ಕೂಡಲಸಂಗಮದ ಗುರುಗಳ ಆಶ್ರಯದಲ್ಲಿ ಅಧ್ಯಯನನಿರತನಾಗಿರುವ ಸಂದರ್ಭವನ್ನು ಕಾಣುತ್ತೇವೆ. ಬಿಳಿಬಣ್ಣದ ಪಂಚೆಯನ್ನು, ಹಳದಿ ಮೇಲುವಸ್ತ್ರವನ್ನು ಧರಿಸಿದ ಬಸವಣ್ಣನು ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಯ ಮಾಲೆಗಳನ್ನು ಧರಿಸಿದ್ದಾನೆ. ಆತನ ತಲೆಯ ಸುತ್ತಲೂ ನೀಲಿಮಿಶ್ರಿತ ಬಿಳಿಬಣ್ಣದಿಂದ ಕೂಡಿದ ಪ್ರಭಾವಳಿಯಿದೆ. ತಾಳೆಗರಿ ಕಟ್ಟೊಂದರ ಮೇಲೆ ತದೇಕಚಿತ್ತದಿಂದ ವಚನ ರಚನೆಯಲ್ಲಿ ನಿರತನಾದಂತೆ ಕಾಣುತ್ತದೆ. ಉಳಿದ ಎರಡು ತಾಳೆಪತ್ರಗಳು ನೆಲದ ಮೇಲಿವೆ. ಅವುಗಳ ವರ್ಣ ಸಂಯೋಜನೆಯನ್ನು ಕಲಾವಿದ ಸಮರ್ಪಕವಾಗಿ ನಿರ್ವಹಿಸಿರುವುದು ಇಲ್ಲಿ ಕಂಡುಬರುತ್ತದೆ. ಬಸವಣ್ಣನ ಬಲಬದಿಗೆ ಕುಳಿತ ಅಕ್ಕನಾಗಮ್ಮ ಮತ್ತು ಶಿವದೇವ ಇವರನ್ನು ಬಸವಣ್ಣನ ಕೃತಿ ರಚನೆಯನ್ನು ಕುತೂಹಲ ಮತ್ತು ನಗೆಮೊಗದ ಭಾವನೆಯಿಂದ ವೀಕ್ಷಿಸುತ್ತಿರುವಂತೆ ಚಿತ್ರಿಸಲಾಗಿದೆ.

---

೪೦. ವಿ. ಸೀತಾರಾಮಯ್ಯ : ಕಲಾನುಭವ, ಪು-೩

ಸಾಂಪ್ರದಾಯಿಕ ವೈದಿಕ ಮನೆತನದ ದಿರಿಸುಗಳನ್ನು ಧರಿಸಿದ ದಂಪತಿಗಳ ಮುಖ, ಕಣ್ಣುಗಳು, ತಲೆ ಮೇಲಿನ ಕೂದಲು, ವಸ್ತ್ರಗಳ ಬಣ್ಣವನ್ನು ಸಂಯೋಜನೆ ಮಾಡುವಲ್ಲಿ ಕಲಾವಿದ ಯಶಸ್ವಿಯಾಗಿದ್ದಾನೆ. ಮಾದರಸನ ಪಕ್ಕದಲ್ಲಿ ಅಂದರೆ ಬಸವಣ್ಣನ ಬಲಪಾರ್ಶ್ವದಲ್ಲಿ ಸಿಂಹಾಸನದ ಮೇಲೆ ಜಾತವೇದಮುನಿ ಗುರುಗಳು ಕುಳಿತಿದ್ದು, ಬಸವಣ್ಣನ ಅಧ್ಯಯನ, ವಚನ ರಚನೆಯ ಕಾರ್ಯವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸುವ ಭಾವನೆಯನ್ನು ತೋರ್ಪಡಿಸುತ್ತಿದ್ದಾರೆ. ತಮ್ಮ ಬಲಗೈಯನ್ನು ಅರ್ಧಮೇಲೆತ್ತಿ ಮೆಚ್ಚುಗೆಯನ್ನು ಸೂಚಿಸುವ ಅವರ ಭಾವಭಂಗಿ ಆಕರ್ಷಕವಾಗಿದೆ. ಇಲ್ಲಿ ರಚಿತವಾಗಿರುವ ಎಲ್ಲ ವ್ಯಕ್ತಿಗಳ ಚಿತ್ರಗಳು ಸಮರ್ಪಕವಾದ ಭಾವ, ಭಂಗಿ, ನಿಲುವು, ವರ್ಣ ಸಂಯೋಜನೆಯಲ್ಲಿ ಅಚ್ಚುಕಟ್ಟಾಗಿ ಕಲಾವಿದನಿಂದ ನಿರ್ವಹಣೆಗೊಂಡಿರುವುದನ್ನು ಕಾಣುತ್ತೇವೆ. ಬಸವಣ್ಣನ ಹಿಂದಿರುವ ಕಡುನೀಲಿಬಣ್ಣದ ಕಂಬವು ಚಾಲುಕ್ಯ ಮನೆತನದ ವಾಸ್ತುಶೈಲಿಯನ್ನು ಪ್ರತಿನಿಧಿಸುತ್ತದೆ. ಗೋಡೆಗಳಿಗೆ ಹಾಕಿದ ತೆಳುನೀಲಿವರ್ಣ, ಮರದ ಬಾಗಿಲು, ನೆಲದ ಹಾಸುಗಳು ಸಮರ್ಪಕವಾಗಿವೆ.

ಮೇಲಿನ ವಿಶ್ಲೇಷಣೆಯ ಪ್ರಕಾರವಾಗಿ ಗುರುವಿನ ಸನ್ನಿಧಿಯಲ್ಲಿ ಬಸವನ ಅಧ್ಯಯನದ ಚಿತ್ರವು ಸಂಯೋಜನೆಯ ದೃಷ್ಟಿಯಿಂದ ಮಹತ್ವದ್ದು. ಆಕೃತಿಗಳನ್ನು ಒಟ್ಟು ಅವಕಾಶದಲ್ಲಿ ಸಾಮೀಪ್ಯಕ್ಕೆ ತಂದು ಚಿತ್ರಿಸಿರುವುದರಿಂದ ನೋಡುಗನಿಗೆ ಸವಿವರ ನೋಟ ದಕ್ಕುತ್ತದೆ. ಆಕೃತಿಗಳಿಗೆ ಸ್ಪಷ್ಟತೆಯನ್ನು ನೀಡಬೇಕೆಂಬ ಉದ್ದೇಶದಿಂದ ಹಿನ್ನೆಲೆಯಲ್ಲಿ ನೀಲಿವರ್ಣದ ತರತಮ ಲೇಪವಿದೆ. ಮಾದರಸ ದಂಪತಿಗಳ ಆಕೃತಿಗಳಲ್ಲಿನ ಕುತೂಹಲದ ನೋಟ ಚಿತ್ರಭಾವಕ್ಕೆ ಇಂಬು ಕೊಡುತ್ತವೆ. ಒಟ್ಟಾರೆ ಈ ಚಿತ್ರದಲ್ಲಿ ದಟ್ಟವರ್ಣಗಳ ಕೈ ಮೇಲಿದೆ. ಅದೇ ರೀತಿ ಆಕೃತಿಗಳ ಭಾವನೆಗಳು ಯಥಾ ರೀತಿಯಲ್ಲಿ ಮೂಡಿಬಂದಿವೆ. ಸಂಪೂರ್ಣ ಸ್ಥಳಾವಕಾಶವನ್ನು ಬಳಸಿಕೊಂಡು ಆಕೃತಿಗಳನ್ನು ಸಂಯೋಜಿಸಿರುವ ಈ ಕಲಾಕೃತಿ ನೋಡುಗರ ಗಮನ ಸೆಳೆಯುವಲ್ಲಿ ಎರಡು ಮಾತಿಲ್ಲ. ಪ್ರಸ್ತುತ ಈ ಕೃತಿಯು ಕಲಾವಿದರ ವೈಯಕ್ತಿಕ ಸಂಗ್ರಹದಲ್ಲಿದೆ.

೨.೨.೨೬. ಗುರುಗಳಿಗೆ ನಮಸ್ಕರಿಸುತ್ತಿರುವ ಬಸವಣ್ಣ

ಒಬ್ಬ ಉತ್ತಮ ಕಲಾವಿದ ಪರಿಕರ, ವರ್ಣಗಳ ಇತ್ಯಾದಿಗಳು ಅಲಭ್ಯ ಮತ್ತು ಅಪೂರ್ಣವಾಗಿದ್ದರೂ ತನ್ನ ಮನೋಜ್ಞಾನದ ಸಹಾಯದಿಂದ ಆ ಕಲಾಕೃತಿಯನ್ನು ಅಚ್ಚುಕಟ್ಟಾಗಿ ರೂಪಿಸುವಲ್ಲಿ ಯಶಸ್ವಿಯಾಗುತ್ತಾನೆ. ಅದೇ ರೀತಿ ಕಲಾವಿದ ಎಂ. ವೀರಪ್ಪನವರು ತಮ್ಮ ಜಲವರ್ಣ ಕೈಚಳಕವನ್ನು ಇಲ್ಲಿ ನಿರೂಪಿಸಿರುವುದು ಕಂಡುಬರುತ್ತದೆ. ೧೨"x೧೮" ಅಳತೆಯ ಈ ಕೃತಿಯು ಪ್ರಸ್ತುತ ಮೈಸೂರಿನ ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ.

ಈ ಚಿತ್ರದಲ್ಲಿ ಬಾಲಕ ಬಸವನು ಬಾಗೇವಾಡಿಯಲ್ಲಿ ವೈದಿಕ ಧರ್ಮದ ಉಪನಯನವನ್ನು ನಿರಾಕರಿಸಿ ಕೂಡಲಸಂಗಮದಲ್ಲಿಯ ಜಾತವೇದ ಮುನಿಗಳ ಬಳಿ ಬಂದು ಅವರ ಕಾಲಿಗೆ ನಮಸ್ಕರಿಸಿ, ವಿದ್ಯಾಭ್ಯಾಸ ಮಾಡಲು ಬಂದ ಸನ್ನಿವೇಶವನ್ನು ಕಲಾವಿದ ಇಲ್ಲಿ ಚಿತ್ರಿಸಿದ್ದಾನೆ. ಗುರುಕುಲ ಪದ್ಧತಿಯನ್ನು ನೆನಪಿಸುವ ಆವರಣವನ್ನು ಕಲಾವಿದ ಇಲ್ಲಿ ಬಳಸಲು ಪ್ರಯತ್ನಿಸಿದ್ದಾನೆ. ಆಧುನಿಕ ಉದ್ಯಾನವನ,

ಕಟ್ಟೆಯ ಗೋಡೆಗೆ ಬಳಸಲಾದ ಕಲ್ಲುಗಳ ವಿನ್ಯಾಸವು ಗ್ರಾಮ್ಯ ಸಂದರ್ಭವನ್ನು ಪ್ರಕಟ ಪಡಿಸುತ್ತವೆ. ಬಾಲಕ ಬಸವಣ್ಣನು ಉದ್ದವಾದ ಕೂದಲುಗಳನ್ನು ಬಿಟ್ಟಿದ್ದು ಜಟೆಯನ್ನು ಕಟ್ಟದಿರುವುದು ಇಲ್ಲಿಯ ವಿಶೇಷವಾಗಿದೆ. ಹಳದಿ ಬಣ್ಣದ ಪಂಚೆಯನ್ನು ಉಟ್ಟ ಬಾಲಕ ಬರಿ ಮೈಯಲ್ಲಿದ್ದಾನೆ. ಗುರುಗಳ ಪಾದಕ್ಕೆ ತನ್ನೆಲ್ಲವನ್ನೂ ಸಮರ್ಪಿಸಿದಂತಹ ಭಾವನೆ ಕಣ್ಣುಗಳನ್ನು ಮುಚ್ಚಿದ್ದರೂ ವ್ಯಕ್ತವಾಗುತ್ತದೆ.

ಜಾತಿವೇದ ಮುನಿಗಳು ಕಾವಿಧಾರಿಯಾಗಿ ಚಿತ್ರಿತವಾಗಿದ್ದಾರೆ. ಮುಖವನ್ನು ಹೊರತುಪಡಿಸಿ ದೇಹದ ಅಂಗಾಂಗಗಳು ವೃದ್ಧಾಪ್ಯವನ್ನು ಸೂಚಿಸುವಂತಿವೆ. ಕಣ್ಣುಗಳು ಆನಂದವನ್ನು ವ್ಯಕ್ತಪಡಿಸುತ್ತ ಚೇತೋಹಾರಿಯಾಗಿವೆ. ಹುಲಿಯ ಚರ್ಮದ ಆಸನದ ಮೇಲೆ ಅವರು ಕುಳಿತಿರುವುದನ್ನು ಕಲಾವಿದ ಉತ್ತಮವಾಗಿ ಚಿತ್ರಿಸಿದ್ದಾನೆ. ಇಲ್ಲಿ ಕಟ್ಟೆಯೊಂದರ ಮೇಲೆ ಗುರುಗಳು ಕುಳಿತಿರುವುದು, ಅವರ ಜೊತೆಯಲ್ಲಿ ಉಳಿದ ವಿದ್ಯಾರ್ಥಿಗಳು ತಾಳೆಯ ಕಟ್ಟುಗಳನ್ನಿಡಿದು ಅಧ್ಯಯನದಲ್ಲಿ ನಿರತರಾಗಿರುವುದು ಕಂಡುಬರುತ್ತದೆ. ಚಪ್ಪರಕ್ಕೆ ಹಾಸಿದ ಒಣ ಹುಲ್ಲಿಗೆ ಹಳದಿ ಬಣ್ಣ ಬಳಸಿರುವುದು ಮತ್ತು ಉದ್ಯಾನಕ್ಕೆ ದಟ್ಟವಾದ ಹಸಿರು, ಕೆಂಪು ವರ್ಣಗಳನ್ನು ಬಳಸಿರುವುದು ಕಲಾಕೃತಿಯ ಮೆರುಗಿಗೆ ಕಾರಣವಾಗಿದೆ. ಪಕ್ಕದಲ್ಲಿಯೇ ಫಲ ಬಿಟ್ಟಿರುವ ಹಲಸಿನ ಮರದ ಹಣ್ಣುಗಳು ಜ್ಞಾನಫಲಕ್ಕೆ ಸಂಕೇತವೆಂಬ ಕಲ್ಪನೆ ಕಲಾವಿದನಿಗಿರಬೇಕು.

ಗುರುಕುಲದ ಪರಿಸರವನ್ನು ಸಮರ್ಥವಾಗಿ ಚಿತ್ರಿಸಿರುವ ಕಲಾವಿದ ಆಕೃತಿಗಳನ್ನು ಅಧ್ಯಯನ ನಿರತರನ್ನಾಗಿಸುವಲ್ಲಿ ಶ್ರಮವಹಿಸಿದ್ದಾನೆ. ಜಿಗ್‌ಜಾಗ್ ಶೈಲಿಯಲ್ಲಿ ಆಕೃತಿಗಳನ್ನು ಸಂಯೋಜಿಸಿ ಗುರುವಿನ ಆಕೃತಿಯನ್ನು ಪ್ರಧಾನವಾಗಿಸುವಲ್ಲಿ ಆಸ್ಥೆ ವಹಿಸುವುದರೊಂದಿಗೆ ಭಾವ ಸ್ಪರ್ಶಕ್ಕೆ ಆದ್ಯತೆ ನೀಡಲಾಗಿದೆ. ಮೃದುವಾದ ವರ್ಣಮೇಳದ ಸಾಂಗತ್ಯ ಇಲ್ಲಿನ ಆಕೃತಿಗಳಿಗೆ ಹಾಗೂ ಭೌತಿಕ ವಿನ್ಯಾಸಗಳಿಗಿರುವುದುಂಟು. ಆಕೃತಿಗಳಲ್ಲಿ ಅಂಗರಚನೆ ಪ್ರಬುದ್ಧವಾಗಿದ್ದರೆ ಈ ಕೃತಿಗೆ ಇನ್ನೂ ಹೆಚ್ಚಿನ ಪ್ರಾಮುಖ್ಯತೆ ಪ್ರಾಪ್ತವಾಗುತ್ತಿತ್ತು.

೨.೨.೨೭ ಧ್ಯಾನ ನಿರತ ಬಸವಣ್ಣ

ಕಲಾವಿದ ಬಸವರಾಜ ಮುಗಳಿಯವರ ೪೮"x೩೬" ಅಳತೆಯ ತೈಲವರ್ಣ(ಎನಾಮೆಲ್) ಮಾಧ್ಯಮದಲ್ಲಿ ಚಿತ್ರಣಗೊಂಡ ಈ ಕಲಾಕೃತಿಯು ಬಸವ ಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ. ಇಲ್ಲಿ ಕಲಾಕೃತಿಯ ಕಾಲವನ್ನು ದಾಖಲಿಸಿರುವುದಿಲ್ಲ. ಕೂಡಲಸಂಗಮದಲ್ಲಿ ಬಾಲಕ ಬಸವನು ಧ್ಯಾನ ಮಾಡುವ ಸನ್ನಿವೇಶವನ್ನು ಇಲ್ಲಿ ನಿರೂಪಿಸಲಾಗಿದೆ. ಕಲಾವಿದ ಈ ಚಿತ್ರದಲ್ಲಿ ಅನೇಕ ಸೂಕ್ಷ್ಮ ಸಂಗತಿಗಳಿಗೆ ಒತ್ತುಕೊಟ್ಟು ರಚಿಸಿದ್ದಾನೆ. ಆಲದ ಮರವೊಂದರ ಕೆಳಗೆ ಬಾಲಕ ಬಸವನು ಕುಳಿತಿದ್ದಾನೆ. ತೆಳುನೀಲಿ ಮಿಶ್ರಿತ ಬಿಳಿಬಣ್ಣದ ಪಂಚೆಯನ್ನು ಮತ್ತು ಮೇಲು ಪಂಚೆಯನ್ನು ಧರಿಸಿದ್ದಾನೆ. ಹಣೆಯಲ್ಲಿ ಮತ್ತು ಕೈಗಳಲ್ಲಿ ವಿಭೂತಿ ಮತ್ತು ರುದ್ರಾಕ್ಷಿ ಮಾಲೆಗಳನ್ನು ಧರಿಸಿದ್ದಾನೆ. ದೇಹವರ್ಣದ ಕಾಂತಿಯು ಪ್ರಕಾಶಮಾನವಾಗಿ ಇರುವುದರಿಂದ ಹಣೆಯಲ್ಲಿ ಧರಿಸಿದ ವಿಭೂತಿ ಎದ್ದು ತೋರುವುದಿಲ್ಲ. ಬಸವಣ್ಣನವರ ದೇಹವು ವಯಸ್ಕ ವ್ಯಕ್ತಿಯ ದೇಹದಂತೆ ಕಾಣುತ್ತಿದ್ದು, ಮುಖದ ಕೋಮಲತೆಗೆ ಹೊಂದಿಕೆಯಾದಂತೆ ಎನಿಸುವುದಿಲ್ಲ. ಕಣ್ಣುಗಳನ್ನು ಮುಚ್ಚಿರುವುದರಿಂದ ಪ್ರಶಾಂತತೆಯ ಭಾವ ಒಡೆದು

ತೋರುತ್ತದೆ. ಅದಕ್ಕೆ ಸಹವರ್ತಿಯಾದ ಪರಿಸರವನ್ನು ಕಲಾವಿದ ಸಮರ್ಥವಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಬಸವಣ್ಣನು ರತ್ನಗಂಬಳಿಯ ಮೇಲೆ ಕುಳಿತಿದ್ದು ಆತನ ಮುಂದೆ ಕಟ್ಟಿಗೆಯ ಮಣೆಯಿದೆ. ಅದರ ಮೇಲೆ ಎರಡು ಕೆಂಪು ಹೂವುಗಳನ್ನು ಇರಿಸಲಾಗಿದೆ. ಪ್ರಸ್ತುತ ಪರಿಸರವು ಕೂಡಲಸಂಗಮ ಪವಿತ್ರ ಸ್ಥಳವಾಗಿದ್ದು ಎರಡು ನದಿಗಳು ಸಂಗಮವಾಗುವ ಸ್ಥಳಗಳಿಂದ ಕೂಡಿದೆ. ನದಿಯ ದಂಡೆಯಲ್ಲಿಯೇ ಆಲದ ಮರವಿದ್ದು ಅದರ ಕೆಳಗೆ ಬಸವೇಶನು ಧ್ಯಾನಕ್ಕೆ ಕುಳಿತಿರುವುದು ಸಹಜವಾಗಿದೆ. ಆಲದ ಮರವು ಜ್ಞಾನಕ್ಕೆ ಸಂಕೇತವಾಗಿ ಬಳಕೆಗೊಂಡಿದೆ. ಅದರ ಟೊಂಗೆಗಳನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದ್ದು, ಕೆಂಪುಬಣ್ಣದ ಹಣ್ಣುಗಳು ಚಿತ್ರಕ್ಕೆ ಮೆರುಗು ನೀಡುತ್ತಿವೆ. ಬಸವಣ್ಣನು ಕುಳಿತ ಸ್ಥಳದ ಕೆಳಗೆ ತಾವರೆ ಬಳ್ಳಿಯ ಅಗಲವಾದ ಎಲೆಗಳು ಮತ್ತು ಕೆಂಪುಬಣ್ಣದ ಅರಳಿದ ತಾವರೆಗಳು ಚಿತ್ರಿತವಾಗಿವೆ. ಹಿನ್ನೆಲೆಯಲ್ಲಿ ಕೂಡಲಸಂಗಮನಾಥನ ದೇವಾಲಯದ ಶಿಖರವು ಬಿಳಿಯ ಬಣ್ಣದಿಂದ ಹೊಳೆಯುತ್ತಿರುವಂತೆ ಚಿತ್ರಿತವಾಗಿದೆ. ಕಲಾವಿದ ಬಸವಣ್ಣನವರ ದೇಹರಚನೆಯ ಪ್ರಮಾಣದಲ್ಲಿ ಸ್ವಲ್ಪ ಎಡವಿದಂತೆ ತೋರಿದರೂ ಒಟ್ಟು ಚಿತ್ರಣವು ಸನ್ನಿವೇಶವನ್ನು ವಿವರಿಸುವಲ್ಲಿ ಸಫಲವಾಗಿದೆ. ಬೋಧಿವೃಕ್ಷದ ಕೆಳಗೆ ಬುದ್ಧನು ತಪಸ್ಸು ಮಾಡಿದ ಸಂದರ್ಭವನ್ನು ಈ ಚಿತ್ರ ನೆನಪಿಸುತ್ತದೆ. ಈ ಚಿತ್ರದ ಧನಾತ್ಮಕವಾದ ಅಂಶ ಯಥಾದರ್ಶನ ನೀತಿಯ ಪರಿಪಾಲನೆ. ಧ್ಯಾನಸ್ಥನಾದ ಬಸವಣ್ಣ ಮುನ್ನೆಲೆಯಲ್ಲಿ ಚಿತ್ರಿತನಾದರೆ ಹಿನ್ನೆಲೆಯಲ್ಲಿ ಕೂಡಲಸಂಗಮನಾಥನ ದೇಗುಲ ಮಸುಕಾಗಿ ಗೋಚರವಾಗುತ್ತಿದೆ. ಧಾರ್ಮಿಕ ಪರಿಸರವನ್ನು ಸಹ ಮೃದುವಾದ ವರ್ಣಗಳಿಂದ ಚಿತ್ರಿಸಲಾಗಿದೆ. ದೇಗುಲದ ಮುಂಭಾಗದಲ್ಲಿ ಮಾನವಾಕೃತಿಗಳನ್ನು ಸೂಚ್ಯವಾಗಿ ತೋರ್ಪಡಿಸಿರುವುದರಿಂದ ದೂರ ಮತ್ತು ಸಾಮೀಪ್ಯದ ಅನುಭವ ಸ್ಪಷ್ಟವಾಗಿ ಕಾಣುತ್ತದೆ.

೨.೨.೨೮. ಗುರುಗಳಿಂದ ಬಸವಣ್ಣನಿಗೆ ಉಪದೇಶ

ಕಾಲ್ಪನಿಕ ಚಿತ್ರರಚಿಸುವುದರಲ್ಲಿ ಬಸವರಾಜ ಮುಗಳಿಯವರಿಗಿದ್ದ ಕಲ್ಪನಾ ಸೌಂದರ್ಯದ (Imaginative Beauty)[೪೧] ಪ್ರೌಢಿಮೆ ಅದ್ಭುತವಾದುದು. ಚಿತ್ರ ಹೊರಡುವುದು ಚಿತ್ರಕಾರನ ತಲೆಯಿಂದ[೪೨] ಎಂಬುದರಲ್ಲಿ ಎರಡು ಮಾತಿಲ್ಲ. ಮುಗಳಿಯವರ ೪೮"x೩೬" ಅಳತೆಯ ತೈಲವರ್ಣದ ಈ ಕಲಾಕೃತಿಯು ಬೀದರ ಜಿಲ್ಲೆಯ ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ. ಅವರ ಈ ಕಲಾಕೃತಿಯಲ್ಲಿಯೂ ಕಾಲದ ವಿವರ ಅಲಭ್ಯ. ಈ ಚಿತ್ರದಲ್ಲಿ ಜಾತವೇದ ಮುನಿಗಳು ಬಸವನಿಗೆ ಬೋಧೆಯನ್ನು ಮಾಡುತ್ತಿರುವ ಸನ್ನಿವೇಶವನ್ನು ಪ್ರಸ್ತುತ ಭಿತ್ತಿಚಿತ್ರವು ಒಳಗೊಂಡಿದೆ. ಜಲವರ್ಣದಲ್ಲಿ ರಚಿಸಿದ ಈ ಚಿತ್ರವು ವಿಷಯವನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿದೆ. ಬಾಲಕ ಬಿಳಿಬಣ್ಣದ ಪಂಚೆಯನ್ನು ಪೂರ್ತಿಯಾಗಿ ಹೆಗಲ ಮೇಲಿನವರೆಗೆ ಧರಿಸಿ, ಹಣೆಗೆ, ತೋಳುಗಳಿಗೆ, ಕೊರಳಿಗೆ ವಿಭೂತಿ ಧಾರಣೆ

---

೪೧. ಡಾ. ಜಿ. ಎಸ್. ಭೂಸಗೊಂಡ : ಚಿತ್ರಕಲಾವಿದ ಚಂದ್ರವರ್ಮ ಬಿ.ಆರ್. ಕೋಟ್ಯಾಳಕರ (ಅಪ್ರ.ಡಿ.ಲಿಟ್.ಮಪ್ರ), ಪು–೧೧೪

೪೨. ಡಾ. ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ, ಪು–೨೪

ಮತ್ತು ರುದ್ರಾಕ್ಷಿ ಮಾಲೆಗಳ ಧಾರಣೆಯನ್ನು ಮಾಡಿರುವುದು ಕಂಡುಬರುತ್ತದೆ. ಬಸವಣ್ಣನ ಎಡಗೈ ತೋಳಿನ ಪ್ರಮಾಣವು ಬಲಗೈಯ ತೋಳಿನ ಪ್ರಮಾಣಕ್ಕಿಂತ ತುಸು ಹೆಚ್ಚಾಗಿರುವುದು ಕಂಡುಬರುತ್ತದೆ. ನೆಟ್ಟನೆಯ ನೋಟದಿಂದ ಗುರುಗಳು ನೀಡುವ ಆಶೀರ್ವಚನವನ್ನು ತದೇಕ ಚಿತ್ತದಿಂದ ಆಲಿಸುವಂತಹ ಭಂಗಿಯನ್ನು ಇಲ್ಲಿ ನೋಡಬಹುದು. ಜಾತವೇದ ಮುನಿಗಳು ಕಡುಗೆಂಪುಬಣ್ಣದ ವಸ್ತ್ರವನ್ನು ಧರಿಸಿ, ನಸುಗೆಂಪುಬಣ್ಣದಿಂದ ಕೂಡಿದ ಕೂದಲಿನ ಜಟೆ ಮತ್ತು ಗಡ್ಡವನ್ನು ಬಿಟ್ಟಿರುವುದು ಕಂಡುಬರುತ್ತದೆ.

ಹಣೆಗೆ ಎದ್ದು ತೋರುವಂತೆ ಧರಿಸಿದ ವಿಭೂತಿ, ಕೊರಳಲ್ಲಿನ ರುದ್ರಾಕ್ಷಿ ಮಾಲೆಯ ಸರಗಳು ಗಮನ ಸೆಳೆಯುತ್ತವೆ. ತಮ್ಮ ಶಿಷ್ಯ ಬಸವನೆಡೆಗೆ ಗುರುಗಳಿಗೆ ಪ್ರೀತಿಪೂರ್ವಕವಾದ ನೋಟವನ್ನು ಕಲಾವಿದ ಉತ್ತಮವಾಗಿ ಚಿತ್ರಿಸಿದ್ದಾನೆ. ಪ್ರಸ್ತುತ ಚಿತ್ರವು ಭಿತ್ತಿಚಿತ್ರವಾಗಿರುವುದರಿಂದ ಇಲ್ಲಿ ಕಲಾವಿದನ ಸೂಕ್ಷ್ಮವಾದ ಕುಸುರಿ ಕೆಲಸಗಳಿಗೆ ಅವಕಾಶ ಕಡಿಮೆಯಾಗಿರುವುದು ಸಹಜವಾಗಿದೆ. ಗುರುಮನೆಯ ಒಳಾಂಗಣವನ್ನು ಯಥಾರ್ಥವಾಗಿ ತೋರಿಸಲ್ಪಟ್ಟಿರುವ ಈ ಚಿತ್ರದಲ್ಲಿ ದೂರ ಮತ್ತು ಸಾಮೀಪ್ಯದ ಅನುಭವ ಸ್ಪಷ್ಟವಾಗಿ ದಕ್ಕುತ್ತದೆ. ಮುನ್ನೆಲೆಯಲ್ಲಿ ಗುರುಗಳು ಮತ್ತು ಬಸವಣ್ಣನವರ ಆಕೃತಿಗಳು ಸ್ಪಷ್ಟವಾಗಿ ನಿರೂಪಿತಗೊಂಡಿವೆ. ಹಿನ್ನೆಲೆಯಲ್ಲಿ ಬಾಗಿಲಿನ ಚೌಕಟ್ಟು, ಒಳಭಾಗದಲ್ಲಿ ಅಲಂಕಾರಕ್ಕೆಂದು ಚಿತ್ರಿಸಿರುವ ಹೂವಿನ ಗಿಡ ಇವು ದೂರದ ಭಾವಾರ್ಥವನ್ನು ಸೂಚಿಸುತ್ತವೆ. ಬಾಗಿಲಿನಿಂದ ಒಳಪ್ರವೇಶಿಸುವ ಬೆಳಕು ಇಡೀ ಕೊಠಡಿಯನ್ನು ಆವರಿಸಿದೆ. ಅಂಗರಚನೆಯು ದುರ್ಬಲವಾಗಿದ್ದರೂ ಚಿತ್ರ ಪರಿಣಾಮಕಾರಿಯಾಗಿ ಮೂಡಿದೆ. ಒಟ್ಟಾರೆ ಕಲಾವಿದ ಉತ್ತಮ ಚಿತ್ರ ರಚಿಸಲು ಶಾಸ್ತ್ರೀಯವಾದ "ರೂಪ"[೪೩]ವೆಂಬ ಕಲಾಪರಿಜ್ಞಾನ, ವಸ್ತುವಿನ ಅಂಗಾಂಗಗಳನ್ನು ಅಚ್ಚುಕಟ್ಟಾಗಿ ರೂಪಿಸಲು "ಪ್ರಮಾಣ"[೪೪], ಯಾವುದೇ ವಸ್ತುವಿನ ಆಂತರಿಕ ಹಾಗೂ ಬಾಹ್ಯದ ನಿರೀಕ್ಷಣೆಯ ಪರಿಣಾಮವಾಗಲು ಆ ಆಕೃತಿಗಳ "ಭಾವ"[೪೫], ಆಕೃತಿಗಳ "ಸೌಂದರ್ಯ ಅಥವಾ ಲಾವಣ್ಯ ಯೋಜನೆ"[೪೬] ಹೀಗೆ ಒಂದು ಉತ್ಕೃಷ್ಟ ಕಲಾಕೃತಿ ಮೂಡಲು ಅವಶ್ಯವಾದ ಅಂಶಗಳು ಈ ಕಲಾಕೃತಿಯಲ್ಲಿ ಕಂಡುಬಂದಿರುವುದು ಆ ಕಲಾಕೃತಿಯ ಶ್ರೇಷ್ಠತೆಯನ್ನು ವರ್ಣಿಸುತ್ತದೆ.

೨.೩. ಬಸವಣ್ಣನವರ ಯೌವ್ವನಾವಸ್ಥೆಯ ವರ್ಣಚಿತ್ರಗಳು

ಕೃಷ್ಣಾನದಿ ಮತ್ತು ಮಲಪ್ರಭಾ ನದಿಗಳ ಸಂಗಮವಾದ ಇಂದಿನ ಕೂಡಲಸಂಗಮವು ಅಂದು ಕಪ್ಪಡಿ ಸಂಗಮವೆಂದು ಪ್ರಸಿದ್ಧವಾಗಿತ್ತು. ಕಪ್ಪಡಿಯು ಪ್ರಾಚೀನ ಕರ್ನಾಟಕದ ಪ್ರಮುಖ ವಿದ್ಯಾಕೇಂದ್ರಗಳಲ್ಲಿ ಒಂದಾಗಿತ್ತು. ಕೂಡಲಸಂಗಮ ಮತ್ತು ಬಸವಣ್ಣನ ನಡುವೆ ಅವಿನಾಭಾವ ಸಂಬಂಧವಿದೆ. ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಜಾತವೇದ ಮುನಿ ಅಥವಾ ಈಶಾನ್ಯ ಗುರುಗಳು ಎಂದು ಗುರುತಿಸುವ ಊರು ಇದೇ ಆಗಿದ್ದು, ಅಲ್ಲದೆ ಅಕ್ಕನಾಗಮ್ಮನಿಗೆ ಇದೇ ಊರಿನ ಶಿವಸ್ವಾಮಿ ಎಂಬಾತನೊಂದಿಗೆ ವಿವಾಹವಾದುದು ಗಮನಾರ್ಹವಾದುದು. ಚಿಕ್ಕವನಿದ್ದಾಗಿನಿಂದಲೂ ಬಸವಣ್ಣ ಈ ಊರಿನ ಕೀರ್ತಿಯ

---

೪೩. ಡಾ. ಎಸ್. ಸಿ. ಪಾಟೀಲ : ವರ್ಣಸಂಚಯ, ಪು-೭

೪೪. ಅದೇ., ಪು-೮

೪೫. ಅದೇ., ಪು-೯

೪೬. ಅದೇ., ಪು-೧೦

ಬಗೆಗೆ ಕೇಳಿ ತಿಳಿದವನಾಗಿದ್ದುದರಿಂದ ಕೂಡಲಸಂಗಮದ ಆಗಮನಕ್ಕೆ ಕಾರಣವಾಯಿತು. ಬಸವಣ್ಣನೊಂದಿಗೆ ಅಕ್ಕನಾದ ನಾಗಮ್ಮನು ಕೂಡಲಸಂಗಮಕ್ಕೆ ಹೊರಡಲು ಅಣಿಯಾಗುತ್ತಾಳೆ. ಬಹುತೇಕ ಕೃತಿಗಳಲ್ಲಿ ಅಕ್ಕ ನಾಗಮ್ಮನಿಗೆ ವಿವಾಹವಾಗಿರುವುದರ ಉಲ್ಲೇಖಗಳು ದೊರೆಯುವುದಿಲ್ಲ. ಆದರೆ ಕೆಲವೊಂದು ಕೃತಿಗಳಲ್ಲಿ ಆತನ ಅಕ್ಕ ನಾಗಮ್ಮನಿಗೂ ಸಂಗಮದ ಶಿವಸ್ವಾಮಿಯೊಂದಿಗೆ ಲಗ್ನವಾಗುತ್ತದೆ. "ಬಸವಣ್ಣ ಮತ್ತು ಅಕ್ಕ ನಾಗಮ್ಮ ಇಬ್ಬರೂ ಕೂಡಲಸಂಗಮಕ್ಕೆ ಬರುತ್ತಿರುವಾಗ ಮಲಾಪಹಾರಿ (ಮಲಪ್ರಭಾ) ನದಿಯು ಅಡ್ಡಗಟ್ಟುತ್ತದೆ. ಬಸವಣ್ಣನು ಆಗ ಶಿವನನ್ನು ನೆನೆಸಿದ ಕೂಡಲೇ ನದಿಯು ಇಬ್ಭಾಗವಾಗಿ ದಾರಿ ಬಿಡುತ್ತದೆ. ಅದೇ ಹೊತ್ತಿಗೆ ಸಾಕ್ಷಾತ್ ಶಿವನು ಬಂದು ಕೂಡಲಸಂಗಮಕ್ಕೆ ಕರೆದೊಯ್ಯುವ ಸಂಗತಿಯನ್ನು ವೃಷಭೇಂದ್ರ ವಿಳಾಸವೆಂಬ ಯಕ್ಷಗಾನ ಕೃತಿಯ ಕವಿ ನಂಜುಂಡ ಭಾಗವತನು"[೪೭] ತಿಳಿಸುತ್ತಾನೆ. ಸಂಗಮೇಶ್ವರ ದೇವಸ್ಥಾನದಲ್ಲಿಯ ಸ್ಥಾನಪತಿಯ ನೇತೃತ್ವದೊಂದಿಗೆ ಬಸವಣ್ಣನ ಪ್ರೌಢ ವಿದ್ಯಾಭ್ಯಾಸವು ನಡೆಯುತ್ತದೆ. ಬಾಲ್ಯದಿಂದಲೇ ಚಿಂತನಶೀಲನಾದ ಬಸವಣ್ಣ ಸಕಲ ವಿದ್ಯೆಗಳಲ್ಲಿ ಪರಿಣತಿ ಪಡೆದು ಶಿವಭಕ್ತಿಯನ್ನು ರೂಢಿಸಿಕೊಳ್ಳುತ್ತಾನೆ. ತನ್ನ ಜೀವನದ ಮುಂದಿನ ಯೋಜನೆಗಳನ್ನು ಅಲ್ಲಿಯೇ ರೂಪಿಸಿಕೊಂಡ ಬಸವಣ್ಣ ಆವರೆಗೆ ಇದ್ದ ಧಾರ್ಮಿಕ ವ್ಯವಸ್ಥೆಯ ಕರ್ಮಠತನ, ಮೂಢನಂಬಿಕೆಗಳು, ಅರ್ಥರಹಿತ ಆಚರಣೆಗಳನ್ನು ಹೊಡೆದೋಡಿಸುವ ಛಲ ತೊಡುತ್ತಾನೆ. ವ್ಯಕ್ತಿಸ್ವಾತಂತ್ರ್ಯ, ಸ್ತ್ರೀಸಮಾನತೆ, ವ್ಯಕ್ತಿಯ ಆತ್ಮವಿಕಾಸದ ಸಾಧ್ಯತೆಗಳನ್ನು ಅನಾವರಣಗೊಳಿಸುವ ವೇದಿಕೆಯನ್ನು ಸಿದ್ಧಪಡಿಸಿಕೊಳ್ಳುತ್ತಾನೆ. ಸಂಗಮದಿಂದ ಹೊರಟ ಬಸವಣ್ಣ ನೇರವಾಗಿ ಕಲ್ಯಾಣಕ್ಕೆ ಹೋದನೆಂಬ ಅಂಶವನ್ನು ಬಸವಪುರಾಣವು ನಿರೂಪಿಸುತ್ತದೆ. ಆದರೆ ಹರಿಹರನು ಬಸವಣ್ಣ ಮೊದಲು ಬಿಜ್ಜಳನ ನೆಲೆಯಾಗಿದ್ದ ಮಂಗಳವಾಡಕ್ಕೆ ಹೋದನೆಂದು ನಿರೂಪಿಸುತ್ತಾನೆ.

ಕೂಡಲಸಂಗಮದಲ್ಲಿರುವಾಗಲೆ ಬಸವಣ್ಣನವರ ವಿಷಯ ಕಲ್ಯಾಣ ಪಟ್ಟಣದಲ್ಲಿರುವ ಬಸವಣ್ಣನವರ ಮಾವನಾದ ಬಲದೇವನಿಗೆ ತಿಳಿಯುತ್ತದೆ. ಆತನು ಕೂಡಲೇ ಕೂಡಲಸಂಗಮಕ್ಕೆ ಬಂದು ಬಸವಣ್ಣ ಮತ್ತು ಆತನ ಸಹೋದರಿ ಅಕ್ಕನಾಗಮ್ಮ ಇವರಿಬ್ಬರನ್ನು ಕಲ್ಯಾಣ ಪಟ್ಟಣಕ್ಕೆ ಕರೆತರುತ್ತಾನೆ.

"ನಡೆತಂದು ಬಸವರಸ। ನೊಡನಕ್ಕನಾಗಮ್ಮ
ನೊಡಗೊಂಡು ಕಲ್ಯಾಣ। ಪೊಡವಿಗೈತಂದ ॥೧೩೭॥
ಅಳಿಯ ಬಸವಣ್ಣನಿಗೆ । ಚಲುವೆ ಗಂಗಾಂಬೆಯ ಘ
ಳಿಲನೆ ಮದುವೆಯಗೈವೆ। ನೊಲಿದೆನ್ನುತಾಗ ॥೧೩೮ ॥
ಬಲದೇವ ನಿಶ್ಚಿತಾರ್ಥವಗೈದು ಸುತೆಗೆ ಮಂ
ಗಳ ಮಜ್ಜನಂಬೊಗಿಸಿ ನಾಂದಿಯನ್ನಾಚರಿಸು
ತೊಲವು ಮಿಗಲಳಿಯನಿಗೆ ಮದುವಣಿಗ ಶಾಸ್ತ್ರವಂ ಮಾಡಿ ಸಂತಸವ ಕೂಡಿ ।
ಸುಲಲಿತದಿ ಪಸೆನಿಂದ ಬಸವೇಶ ಕನ್ಯಾರ್ಥಿ

೪೭. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಸಂ.) : ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ (ಯಕ್ಷಗಾನ ಮಹಾನಾಟಕ), ಪು–೫೭

ಗೊಲಿಯುತ ತದೇವಲಗ್ನಂ ಚಂದ್ರ ನಕ್ಷತ್ರ

ಬಲವೆಂದು ಗಂಗೆಯಂ ಧಾರೆಯನ್ನೆರೆದನು ಶಿವಾರ್ಪಣೆನ್ನುತ ಬಸವಗೆ" [೪೮]

ಬಲದೇವನು ಬಸವಣ್ಣ ಮತ್ತು ತನ್ನ ಮಗಳಾದ ಗಂಗಾಂಬೆಯೊಂದಿಗೆ ನಿಶ್ಚಿತಾರ್ಥವ ಮಾಡಿ, ಮಗಳಿಗೆ ಮಂಗಳ ಸ್ನಾನವ ಮಾಡಿಸಿ ಸಂಭ್ರಮದಿಂದ ಮದುವಣಿಗ ಶಾಸ್ತ್ರವನ್ನು ಮಾಡಿಸುತ್ತಾ ಸಂತೋಷಪಡುತ್ತಾನೆ. ಸುಲಲಿತವಾಗಿ ಹಸೆಯಿಂದ ಕನ್ಯಾರ್ಥಿಯಾದ ಬಸವನಿಗೆ ಸಂತೋಷದಿಂದ ಈ ಲಗ್ನಕ್ಕೆ ಚಂದ್ರ, ನಕ್ಷತ್ರ ಬಲವಿದೆಯೆಂದು ತನ್ನ ಮಗಳಾದ ಗಂಗಾಂಬಿಕೆಯನ್ನು ಶಿವಾರ್ಪಣ ಎನ್ನುತ್ತ ಧಾರೆಯೆರೆಯುತ್ತಾನೆ. ಅಳಿಯನಾದ ಬಸವೇಶ್ವರನಿಗೆ ಯೋಗ್ಯವಾದ ಉಪಚಾರವನ್ನು ಮಾಡುತ್ತಾ ಗಂಗಾಂಬೆಯನ್ನು ಹಲವು ಉಡುಗೊರೆಗಳ ಸಹಿತ ಒಪ್ಪಿಸುತ್ತಾನೆ. ಮೃಷ್ಟಾನ್ನ ಭೋಜನವನ್ನು ಮಾಡಿಸಿ ಸಂತೃಪ್ತಿಗೊಳಿಸಿ, ಮಂಗಳ ವಾದ್ಯಗಳನ್ನು ಮೊಳಗಿಸಿ ಶುಭ ಕೋರುತ್ತಾನೆ. ಮದುವೆಯ ಸಂಭ್ರಮವನ್ನು ಪೂರೈಸಿಕೊಂಡು ಬಸವಣ್ಣ, ಗಂಗಾಂಬೆ, ಅಕ್ಕನಾಗಮ್ಮ ಈ ಮೂವರು ಸಂಗಮೇಶನ ದೇವಸ್ಥಾನಕ್ಕೆ ಬರುತ್ತಾರೆ. ಸಂಗಮೇಶನನ್ನು ಮನಸ್ಸಿನಲ್ಲಿ ಧ್ಯಾನಿಸಿದಾಗ ಒಡನೆಯೇ ಸಾಕ್ಷಾತ್ ಶಿವನು ಲಿಂಗದಿಂದ ಒಡಮೂಡಿ, ಬಸವರಾಜನನ್ನು ಆಲಿಂಗಿಸಿಕೊಂಡು, ನೀನು ಸುಖವಾಗಿರುವೆಯಾ? ಸುಗುಣವಂತೆಯಾದ ತೇಜಸ್ಸಿನಿಂದ ಕೂಡಿದ ವನಿತೆ ಗಂಗಾಂಬೆ ಮತ್ತು ಅಕ್ಕನಾಗಮ್ಮ, ಕ್ಷೇಮದಿಂದ ಇರುವಿರಾ? ಎಂದು ಕೇಳುತ್ತಾನೆ. ಅಂತೆಯೇ ಬಸವಣ್ಣನಿಗೆ, ಶಿವಶರಣರನ್ನು ಆದರದಿಂದ ನೋಡಿಕೋ, ಅವರಿಗೆ ಭಕ್ತಿಯಿಂದ ನಮಸ್ಕರಿಸು, ಮಗನೆ, ನೀನು ಚೆನ್ನಾಗಿ ಬಾಳುವೆಯನ್ನು ನಡೆಸು, ಜಗತ್ತಿನಲ್ಲಿ ದುಷ್ಟ ಜನರನ್ನು ಶಿಕ್ಷಿಸು, ಶಿಷ್ಟಜನರನ್ನು ರಕ್ಷಿಸು, ನಿನ್ನಿಂದ ತಪ್ಪುಗಳು ನಡೆಯದಂತೆ ನೋಡಿಕೊ ಎಂದು ಹಿತೋಪದೇಶ ನೀಡಿ ಆ ಕ್ಷಣದಲ್ಲಿ ಲಿಂಗದಲ್ಲಿ ಮತ್ತೆ ಅಂತರ್ಧಾನನಾಗುತ್ತಾನೆ. ಈ ಸನ್ನಿವೇಶವನ್ನು ಹರಿಹರ ಮತ್ತಷ್ಟು ಭಾವನಾತ್ಮಕವಾಗಿ ಹೀಗೆ ಚಿತ್ರಿಸುತ್ತಾನೆ: "ನಂದಿಯ ಮುಖದಿಂದೊಗೆತಪ್ಪ ದಿವ್ಯಲಿಂಗಮಂ ಸಂಗನಬಸವಂ ಸ್ನೇಹರಸಭರಿತ ಸಾತ್ವಿಕ ದೃಷ್ಟಿಯಿಂದಾಲಿಂಗಿಸುವಂತೆ ನೋಡಿ ನೋಡಿ, ಮನದೊಳೋವಿ ಹೃತ್ಕಮಲದೊಳು ಬೆಳೆದ ಲಿಂಗಕ್ಕೆ ಕರಕಮಲವನಾಂತು, ನಂದಿಯ ನಾಲಗೆಯ ತುದಿಗಂ ತನ್ನ ಕರಪಲ್ಲವಕ್ಕಂ ಸಂದಿಲ್ಲದಂತೆ ಕಯ್ಯೊಡ್ಡಿರೆ, ವೃಷಭರಾಜಂ ಪಶುಪತಿಯನುಜ್ಞೆಯೊಡನೆ ಬಸವರಾಜನ ಹಸ್ತದೊಳು ಸಂಗಮೇಶ್ವರ ಲಿಂಗಂ ಬಿಜಯಂಗೆಯ್ಸಿ ಕೊಟ್ಟು"[೪೯] ತನ್ನ ಮಗಳನ್ನು ಬಸವಣ್ಣನಿಗೆ ಧಾರೆಯೆರೆದು ತನ್ನ ಕರ್ತವ್ಯವನ್ನು ಪೂರೈಸಿದ ಮಂತ್ರಿ ಬಲದೇವನು ಶಿವೈಕ್ಯನಾಗುತ್ತಾನೆ. ಇತ್ತ ಬಿಜ್ಜಳನು ತನ್ನ ಮಂತ್ರಿ ಬಲದೇವನ ಮರಣದ ನಂತರ ರಾಜ್ಯದ ಬೊಕ್ಕಸವನ್ನು ನೋಡಿಕೊಳ್ಳುವವರಾರು ಎಂಬ ಚಿಂತೆಯಲ್ಲಿ ಮುಳುಗಿರುತ್ತಾನೆ. ಬಸವಣ್ಣನು ಈ ಕಾರ್ಯಕ್ಕೆ ಯೋಗ್ಯನೆಂದು ತಿಳಿದುಬರುತ್ತದೆ. ಒಡನೆಯೇ ಬಿಜ್ಜಳನು ತನ್ನ ಸೇವಕರನ್ನು ಬಸವಣ್ಣನಲ್ಲಿಗೆ ಕೊಟ್ಟು ಕಳುಹಿಸಿ, ಬಿಜ್ಜಳನ ರಾಜಧಾನಿಯಲ್ಲಿ ಭಂಡಾರದ ಪದವಿಯನ್ನು ಸ್ವೀಕರಿಸಲು ಬರುವಂತೆ ಆಜ್ಞೆ ಮಾಡುತ್ತಾನೆ. ಅವನ ಮಾತಿಗೆ ಬಸವಣ್ಣ ಸೇವಕನಿಗೆ ಹೀಗೆ ಹೇಳುತ್ತಾನೆ: ನಿಮ್ಮ ಪ್ರಭುವಿನ ಆಜ್ಞೆ ನಿಮಗೆ ದೊಡ್ಡದು. ಆದರೆ ನಾನು ಈ ಪದವಿಯನ್ನು ಒಪ್ಪಿಕೊಳ್ಳಲು ನನ್ನ ಒಡೆಯನಾದ ಸಂಗಮೇಶನ ಅಪ್ಪಣೆ

೪೮. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಸಂ.) : ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ (ಯಕ್ಷಗಾನ ಮಹಾನಾಟಕ), ಪು–೫೮, ೫೯

೪೯. ಡಾ. ಎಂ. ಎಂ. ಕಲಬುರ್ಗಿ (ಸಂ.) : ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ಪು–೧೩೬

ಬೇಕು ಎಂದು ಹೇಳುತ್ತಾನೆ. ಸಂಗಮೇಶನ ಒಪ್ಪಿಗೆ ಕೇಳಿದಾಗ ಶಿವನು, ಬಸವಣ್ಣನಿಗೆ ಮಂತ್ರಿ ಪದವಿಯನ್ನು ವಹಿಸಿಕೊಳ್ಳಲು ಅಪ್ಪಣೆ ನೀಡುತ್ತಾನೆ. ಇದೇ ಸಂಗತಿಯನ್ನು ಹರಿಹರನು ಬೇರೊಂದು ರೀತಿಯಲ್ಲಿ ನಿರೂಪಿಸುತ್ತಾನೆ. ಒಮ್ಮೆ ಮಂಗಳವಾಡೆಯಲ್ಲಿ ಬಿಜ್ಜಳನು ಆಳ್ವಿಕೆ ನಡೆಸುತ್ತಿರುವಾಗ, ಅಲ್ಲಿಯ ಕರಣಿಕರು ಲೆಕ್ಕಪತ್ರಗಳನ್ನು ಪರೀಕ್ಷಿಸುತ್ತಿರುತ್ತಾರೆ. ಎಷ್ಟು ಕಷ್ಟಪಟ್ಟರೂ ಅವರ ಲೆಕ್ಕದ ಮೊತ್ತದ ಹಣ ತಾಳೆಯಾಗುವುದಿಲ್ಲ. ಆ ಸಂದರ್ಭದಲ್ಲಿ ಬಸವಣ್ಣ ಬಂದು ಅವರ ಲೆಕ್ಕದ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸುತ್ತಾನೆ. ಆಗ ಅಲ್ಲಿಯ ಗಣಕರು ಬಸವಣ್ಣನ ಪ್ರತಿಭೆಯನ್ನು ಬಿಜ್ಜಳನಿಗೆ ತಿಳಿಸುತ್ತಾರೆ. ನಂತರ ಬಿಜ್ಜಳನು–

"ಒಂದು ವರುಷಕೆ ನೂರೊಂದು ಹೊನ್ನಂ ಬೇಡಿ
ಕೊಡಿಸಿ ಭಂಡಾರಿ ತನ್ನರಮನೆಗೆ ಕೊಂಡೊಯ್ದು
ಕಡುಮೋಹದಿಂದೆ ಹೊಗಳುತ್ತೆ ಮನ್ನಣೆಗೆಯ್ದು"[೫೦]

ಬಸವಣ್ಣನಿಗೆ ಒಂದು ವರ್ಷಕ್ಕೆ ನೂರೊಂದು ಹೊನ್ನುಗಳನ್ನು ಸಂಬಳವಾಗಿ ನೀಡಿ ತನ್ನರಮನೆಗೆ ಪ್ರೀತಿಯಿಂದ ಕರೆತರುತ್ತಾನೆ. ವೃಷಭೇಂದ್ರ ವಿಳಾಸದ ನಂಜುಂಡ ಕವಿಯು ಬಸವಣ್ಣನನ್ನು ಬಿಜ್ಜಳನು ಮಂತ್ರಿಪದವಿಗೆ ತಾನೇ ಸ್ವತಃ ಆಹ್ವಾನಿಸಿ, ಕಳಸ, ಕನ್ನಡಿ, ಮಂಗಳವಾದ್ಯಗಳೊಂದಿಗೆ ತಾನು ಕುಳಿತುಕೊಳ್ಳುವ ಆನೆಯ ಮೇಲೆ ಬಸವಣ್ಣನನ್ನು ಕುಳ್ಳಿರಿಸಿಕೊಂಡು, ತಾನು ಕುದುರೆಯ ಮೇಲೆ ಕುಳಿತುಕೊಂಡು ಬೀದಿಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ ತನ್ನ ಆಸ್ಥಾನಕ್ಕೆ ಕರೆದುಕೊಂಡು ಬರುವುದಾಗಿ ನಿರೂಪಿಸುತ್ತಾನೆ. ಬಿಜ್ಜಳನಿಂದ ಮಂತ್ರಿಪದವಿ ಪಡೆದ ಬಸವಣ್ಣ, ಕೇಳು ಮಹಾರಾಜ, ನಾವು ಶಿವಭಕ್ತಿಯನ್ನು ಆಚರಿಸುವ ಶುದ್ಧಮನಸ್ಸಿನ ಆಧ್ಯಾತ್ಮ ಜೀವಿಗಳು. ರಾಜರ ಸಹಜ ಗುಣದಂತೆ ಎರಡು ಮನಸ್ಸಿನಲ್ಲಿ ನೀವು ಗಂಟೆಗೊಂದು ಮಾತನ್ನಾಡುವಿರಿ, ಹೊಟ್ಟೆಕಿಚ್ಚಿನ ಕೆಟ್ಟಮನಸ್ಸಿನ ಜನರು ನಿಜವನ್ನು ತಿಳಿಯದೆ ಒಂದಕ್ಕೆ ಒಂಬತ್ತು ಸಲ್ಲದ ಚಾಡಿ ಮಾತುಗಳನ್ನು ಹೇಳುತ್ತಾರೆ. ಅದೇ ಅವರ ಕೆಲಸವಾಗಿರುತ್ತದೆ. ಹೇಳಿಕೆಯ ಮಾತಿನಿಂದ ಬದುಕು ಹಾಳು ಮಾಡುವವರೆಂದು ಬಸವಣ್ಣ ಬಿಜ್ಜಳನಿಗೆ ನೇರವಾಗಿ ಹೇಳುವುದರ ಮೂಲಕ ತನ್ನ ಮನಸ್ಸಿನ ನಿಲುವು ಹೀಗಿದೆಯೆಂದು ಸ್ಪಷ್ಟಪಡಿಸುತ್ತಾನೆ.

ಕ್ರಿ.ಶ. ೧೧೬೨ರ ಹೊತ್ತಿಗೆ ಬಿಜ್ಜಳನು ತೈಲಪನನ್ನು ಹಿಂದೆ ಸರಿಸಿ ತಾನೇ ಕಲ್ಯಾಣ ಚಾಲುಕ್ಯರ ಅಧಿಪತ್ಯವನ್ನು ವಹಿಸಿಕೊಳ್ಳುತ್ತಾನೆ. ಈ ಹೊತ್ತಿಗಾಗಲೇ ಬಸವಣ್ಣ ಮತ್ತು ಬಿಜ್ಜಳ ಇವರ ಸ್ನೇಹವು ಬಲಗೊಂಡಿತ್ತು ಎಂಬ ಸಂಗತಿಗಳನ್ನು ಕಾವ್ಯ, ಪುರಾಣಗಳು ಸ್ಪಷ್ಟಪಡಿಸುತ್ತವೆ. ಬಿಜ್ಜಳ ಮಹಾರಾಜ ಚಕ್ರವರ್ತಿಯಾಗಲು ಬಸವಣ್ಣನ ಮಾತುಗಳು ಪ್ರೇರಣೆ ನೀಡಿದವು ಎಂಬ ಅಂಶವನ್ನು ಗಿರೀಶ ಕಾರ್ನಾಡರು ತಮ್ಮ ತಲೆದಂಡ ನಾಟಕದಲ್ಲಿ ಪ್ರತಿಪಾದಿಸುತ್ತಾರೆ. "ಹದಿನಾರು ವರ್ಷಗಳ ಕೆಳಗಿನ ಮಾತು. ನಾನು ಆಗ ಚಾಲುಕ್ಯರ ಸಾಮಂತ!... ಆಗ ಬಸವಣ್ಣ ಮಂಗಳವಾಡಕ್ಕೆ ಬಂದ. ಇನ್ನೂ ಇಪ್ಪತ್ತು ತುಂಬಿರಾಕಿಲ್ಲ. ಆದರೆ ಏನು ಮಾತು! ಏನು ಚಟುವಟಿಕಿ! ಆಗಳೇ ಅನತಿದ್ದ, ರಾಜ್ಯಭಾರ ಅಂದರ ಕಾಯಕ. ಅದಕ್ಕ ವಂಶಾ ಇದ್ದರ ಸಾಲದು. ಯೋಗ್ಯತಾ ಬೇಕು ಅಂತ. ಬಸವಣ್ಣ ಖರೇನ ನೀ ಅಂದು ಆ ಮಾತು

---

೫೦. ಡಾ. ಎಂ. ಎಂ. ಕಲಬುರ್ಗಿ (ಸಂ.) : ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ಪು–೧೩೬

ಆಡದೇ ಹೋಗಿದ್ದರ ನಾ ಚಾಲುಕ್ಯರ ಕೈಯಾಗಿಂದ ಈ ಪಟ್ಟ ಕಸಗೊಂತಿದ್ದಿಲ್ಲ. ಕಲ್ಯಾಣದ ಚಕ್ರವರ್ತಿ ಆಗತಿದ್ದಿಲ್ಲ."[೫೧] ಎನ್ನುವ ಗಿರೀಶ ಕಾರ್ನಾಡ್ ಅವರ ವೈಚಾರಿಕ ಚಿಂತನೆಯ ಮಾತುಗಳನ್ನು ಗಮನಿಸಬೇಕು. ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಿಂದ ಕರ್ನಾಟಕದ ಮಹಾ ರಾಜಧಾನಿಯಾಗಿ ಬೆಳೆದು ಬಂದ ಕಲ್ಯಾಣನಗರವು ಬಸವಣ್ಣನವರ ಸಮಾಜಕಲ್ಯಾಣ ಕಾರ್ಯಗಳಿಗೆ ವೇದಿಕೆಯಾಗಿ ಪರಿಣಮಿಸಿತು. ನಾಡಿನ ನಾನಾ ಭಾಗಗಳಿಂದ ಸಾಧಕರನ್ನು ಬಹುವಾಗಿ ಆಕರ್ಷಿಸಿ, ನೂರಾರು ಶರಣರು ಸಮಾವೇಶಗೊಳ್ಳುವ ಸಂದರ್ಭ ಸೃಷ್ಟಿಯಾಯಿತು.

ಬಸವಣ್ಣ ಬಿಜ್ಜಳನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೇಲೆ ಅಲ್ಲಿಯ ಪರಿಸರ ಬದಲಾಗುತ್ತದೆ. ಮೊದಲಿದ್ದ ಮಂಚಣ್ಣ ಕ್ರಮಿತ ಮೊದಲಾದ ಕೆಲವು ಜನರಿಗೆ ಬಸವಣ್ಣನವರ ಅಧಿಕಾರ ಅಸಹನೀಯವಾಗುತ್ತದೆ. ಬಿಜ್ಜಳನು ನಿನ್ನ ಮಂತ್ರಿಪದವಿ ಮೊದಲು ಬಲದೇವನ ಪಾಲಿಗಿತ್ತು. ಅದೀಗ ನಿನ್ನ ಪಾಲಾಗಿದೆ. ಅದನ್ನು ನೀನು ಅವನಂತೆ ಪಾಲಿಸು ಎಂದು ಹೇಳಿದಾಗ ಬಸವಣ್ಣ ಎಲ್ಲವನ್ನೂ ರಕ್ಷಿಸುವ ಶಿವನಿಗೆ ನಿನ್ನ ರಕ್ಷಣೆಯು ಎಷ್ಟರದು? ಅದಕ್ಕಾಗಿ ನೀನು ಶಿವಭಕ್ತರಲ್ಲಿ ಭಯಭಕ್ತಿಯುಳ್ಳವನಾಗು ಎಂದು ಮರುನುಡಿಯುತ್ತಾನೆ. ನಂತರ ಬಸವಣ್ಣನು ಪುರೋಹಿತರನ್ನು, ಅಮಾತ್ಯರನ್ನು, ಸೇನಾನಾಯಕರನ್ನು, ಮತ್ತು ಪುರಜನರನ್ನು ಕರೆದು ಸಮಾಲೋಚನೆ ನಡೆಸುತ್ತಾನೆ. ಪ್ರಜೆಗಳೇ, ಸ್ನೇಹಿತರೇ, ನೀವೆಲ್ಲರೂ ಧರ್ಮ ಮಾರ್ಗದಿಂದ ನಡೆಯುತ್ತಿರುವಿರಲ್ಲವೇ? ಭಕ್ತಿಯನ್ನು ಮಾಡುತ್ತಿದ್ದೀರಲ್ಲವೇ? ಸಾಲವನ್ನು ಮಾಡದೆ ಅಚ್ಚುಕಟ್ಟಿನಿಂದ ಜೀವನವನ್ನು ನಿರ್ವಹಿಸಿಕೊಂಡು ಹೋಗುತ್ತೀರಲ್ಲವೆ? ಹಣವನ್ನು ಜೋಪಾನವಾಗಿ ಕೂಡಿ ರಕ್ಷಣೆ ಮಾಡುತ್ತೀರಲ್ಲವೆ? ಭೂಮಿಯನ್ನು ಪಾಲಿಸುವ ರಾಜನಲ್ಲಿ ದ್ರೋಹವನ್ನು ಮಾಡಬಾರದು ಎಂದು ಉಪದೇಶವನ್ನು ಮಾಡುತ್ತಾನೆ. ನಿತ್ಯವೂ ಶಿವರಾತ್ರಿ ವ್ರತ, ಶಿವಭಾವನೆ ಹಾಗೂ ಭಕ್ತರ ವಂಶವಿಚಾರ, ಭಕ್ತದೋಷಗಳನ್ನು ಎಣಿಸದಿರುವುದು, ಜನನ ಮರಣಗಳಿಗೆ ವಶವಾಗದಿರುವಿಕೆ, ರಾಜನ ಸಂಗಡ ಕೂಡ ದೈನ್ಯಾಕ್ಷರಗಳಿಲ್ಲದ ಸಂವಾದ, ಪ್ರತಿದಿನ ಶಿವನಲ್ಲಿಯೂ ಬೇಡದಿರುವುದು, ಕೇಳಿದವರಿಗೆ ಅಭೀಷ್ಟ ದಾನಗಳನ್ನು ಯಥೇಚ್ಛ ಮಾಡುವುದು, ಸತ್ಯ ಮತ್ತು ಸನ್ಮಾರ್ಗದ ಬೋಧನೆ ಮತ್ತು ಆಚರಣೆ, ಪರಸ್ತ್ರೀಯರನ್ನು ನೋಡದಿರುವುದು, ಮುಂತಾದ ಧೋರಣೆಗಳನ್ನು ಬಸವಣ್ಣ ಬಿಜ್ಜಳನಿಗೆ ಸ್ಪಷ್ಟಪಡಿಸುತ್ತಾನೆ. ಬಸವಣ್ಣನು ತನ್ನ ಮನೆಯಲ್ಲಿ ನಿತ್ಯವೂ ವಾಸಿಸುತ್ತಿದ್ದ ಜಂಗಮರಿಗೆ ಅವರವರ ಅಭೀಷ್ಟಗಳನ್ನು ನೆರವೇರಿಸುತ್ತಿರುತ್ತಾನೆ. ಅಲ್ಲಿ ವಾಸವಾಗಿದ್ದ ಭಕ್ತರು, ಜಂಗಮರ ಸಂಖ್ಯೆ ಒಂದು ಲಕ್ಷದ ಎಂಬತ್ತು ಸಾವಿರಕ್ಕಿಂತಲೂ ಅಧಿಕವಾಗಿತ್ತೆಂದು ಕಂಚಿಯ ಶಂಕರಾರಾಧ್ಯರು ತಮ್ಮ ಬಸವಪುರಾಣ ಕೃತಿಯಲ್ಲಿ ಉಲ್ಲೇಖಿಸುತ್ತಾರೆ. ಬಸವಣ್ಣ ಮತ್ತು ಬಿಜ್ಜಳ ಇಬ್ಬರ ಸಂಬಂಧವು ದಿನದಿಂದ ದಿನಕ್ಕೆ ಗಟ್ಟಿಗೊಳ್ಳುತ್ತಾ ಹೋಗುತ್ತದೆ. ಅದಕ್ಕೆ ಕಾರಣವಾಗಿರಬಹುದಾದ ನಿಧಿಯ ಪವಾಡದ ಘಟನೆಯನ್ನು ಇಲ್ಲಿ ಅಗತ್ಯವಾಗಿ ನೆನೆಪಿಸಿಕೊಳ್ಳಬಹುದಾಗಿದೆ.

"ಪರಮನಟ್ಟಿದ ಓಲೆ ಬಂದಿಳಿಯಿತ್ತು ಬಿಜ್ಜಳನ ಸಿಂಹಾಸನದ ಮುಂದೆ ;

ಅದ ತಂದು ಓದಿದಡೆ, ಸೃಷ್ಟಿಯ ಸೇನಬೋವರಿಗೆ ತಿಳಿಯದು ;

---

೫೧. ಗಿರೀಶ್ ಕಾರ್ನಾಡ್ : ಸಾಹಿತ್ಯ ಸಲ್ಲಾಪ-೨ – ತಲೆದಂಡ ನಾಟಕ, ಅಂಕ-೧, ದೃಶ್ಯ-೩, ಪು-೧೨

ಛಪ್ಪನ್ನದೇಶದ ಭಾಷೆಯ ಲಿಪಿ ಮುನ್ನವೆ ಅಲ್ಲ

ಇದನೋದಿದವರಿಗೆ ಆನೆ, ಸೇನೆ, ಕುದುರೆ, ಭಂಡಾರ

ಅರುವತ್ತಾರು ಕರಣಿಕರಿಗೆ ಮುಖ್ಯನ ಮಾಡುವೆನೆಂದು,

ಬಿಜ್ಜಳ ಭಾಷೆಯ ಕೊಡುತ್ತಿರಲು

ಹರನಿರೂಪವ ಶಿರದ ಮೇಲಿಟ್ಟು ಶಿವಶರಣೆಂದು, ಬಸವಣ್ಣನೋದಿ

ಮೆಟ್ಟೆ ತೆಗೆಸಿದನಯ್ಯಾ, ಅರುವತ್ತಾರು ಕೋಟಿ ವಸ್ತುವ ಅರಮನೆಗೆ" [೫೨]

ಮಂತ್ರಿಪದವಿಯನ್ನು ಪಡೆದು ಬಿಜ್ಜಳನ ಆಸ್ಥಾನದಲ್ಲಿ ಶಿವತತ್ವದೊಂದಿಗೆ ಕಾಯಕದಲ್ಲಿ ನಿರತನಾದ ಬಸವಣ್ಣ ಬಿಜ್ಜಳನ ಪ್ರೀತಿ, ವಿಶ್ವಾಸ ಗಳಿಸಲು ಲಿಪಿಯ ಪವಾಡದ ಘಟನೆಯು ಮಹತ್ವದ ಪಾತ್ರ ವಹಿಸುತ್ತದೆ. ಚನ್ನಬಸವಣ್ಣನು ತನ್ನ ವಚನಗಳಲ್ಲಿ ಈ ಪವಾಡದ ಘಟನೆಗಳನ್ನು ಮೇಲಿನಂತೆ ನಿರೂಪಿಸಿದ್ದಾನೆ. ಲಿಪಿಯ ಪವಾಡವು ಚನ್ನಬಸವಣ್ಣನವರ ವಚನಗಳನ್ನು ಹೊರತುಪಡಿಸಿದರೆ, ಕ್ರಿ.ಶ. ೧೩೬೯ರ ಭೀಮಕವಿಯ ಬಸವಪುರಾಣದಲ್ಲಿ ಮೊದಲು ಉಲ್ಲೇಖಗೊಂಡಂತೆ ತೋರುತ್ತದೆ. ಬಲದೇವನ ಮರಣದ ನಂತರ ಬಿಜ್ಜಳನು ಬಸವಣ್ಣನನ್ನು ಕೂಡಲಸಂಗಮದಿಂದ ಮೆರವಣಿಗೆಯ ಸಹಿತ ಕಲ್ಯಾಣಕ್ಕೆ ಕರೆದುಕೊಂಡು, ಬರುವಾಗ ಲಿಪಿಯೊಂದು ಆಕಾಶದಿಂದ ಕೆಳಗೆ ಬೀಳುತ್ತದೆ. ತನ್ನ ಅರಮನೆಯ ಒಡ್ಡೋಲಗಕ್ಕೆ ಬಂದು ಅದರ ಅರ್ಥವನ್ನು ಲಿಪಿತಜ್ಞರು, ಕರಣಿಕರು, ಮುಂತಾದ ನಿಪುಣರು ಓದಲು ಅಸಮರ್ಥರಾಗುತ್ತಾರೆ. ಗಣಪ, ಬ್ರಹ್ಮ, ವಿಷ್ಣು ಇವರೇ ಮೊದಲಾದವರಿಗೆ ಸಾಧ್ಯವಲ್ಲದ ಲಿಪಿಯನ್ನು ಮಾನವರಿಗೆ ಓದಲು ಅಸಾಧ್ಯವೆಂಬ ಅಭಿಪ್ರಾಯವನ್ನು ಪಂಡಿತರು ಆಸ್ಥಾನದಲ್ಲಿ ವ್ಯಕ್ತಪಡಿಸುತ್ತಾರೆ. ಈ ಓಲೆಯ ಲಿಪಿಯನ್ನು ಓದಿದ ಯಾರಿಗೇ ಆಗಲಿ, ಅಮಾತ್ಯಾದಿ ಸಕಲ ನಿಯೋಗದ ಒಡೆತನವನ್ನು ಕೊಡುವೆನೆಂದು ಬಿಜ್ಜಳನು ಸಾರುತ್ತಾನೆ.

ಬಸವಣ್ಣನು ಅರಸನ ಕೈಯಲ್ಲಿದ್ದ ಓಲೆಯನ್ನು ಪಡೆದುಕೊಂಡು ಶಿವಲಿಖಿತಾರ್ಥವನ್ನು ನಿಮಿಷದಲ್ಲಿ ಗಳಗಳನೆ ಓದಿದನು. 'ಸತ್ಯವಾಗಿ ಹೇಳುವೆನು ಅರಸ ಕೇಳು, ಚಾಳುಕ್ಯ ವಂಶೀಯರು ಹಿಂದೆ ನಿಕ್ಷೇಪಿಸಿದ ಎಂಬತ್ತೆಂಟು ಕೋಟಿ ಧನ ನಿನ್ನ ಸಿಂಹಾಸನದ ಕೆಳಗಿದೆ. ಇನ್ನು ಸಂಶಯವೇಕೆ, ಅಗೆಯಿಸು. ನಿನ್ನ ಕಣ್ಣು ಮನಸ್ಸು ತೃಪ್ತಿಗೊಳ್ಳುವಂತೆ ಗುಪ್ತನಿಧಿಯನ್ನು ತೋರುವೆನು ಎನ್ನುತ್ತಾನೆ. ಹಾಗೆಯೇ ಅಗೆಯಿಸಿ ನೋಡಲು ಅಪಾರ ಪ್ರಮಾಣದ ನಿಧಿ ಕಣ್ಣು ಕೋರೈಸುವಂತೆ ಥಳಥಳಿಸುತ್ತದೆ. "ಹೊನ್ನನ್ನು ಹೊರ ತೆಗೆಯುವಾಗ ಬಸವನ ಕೈ ತಾಕಿದೊಡನೆಯೇ ಧನರಾಶಿ ನೂರ್ಮಡಿಯಾಗುತ್ತದೆ. ಬಿಜ್ಜಳನು ನಿಧಿಯನ್ನು ನೋಡಿ ಆಶ್ಚರ್ಯದಿಂದ, ಪ್ರೀತಿಯಿಂದ ಕೈಮುಗಿದು ಬಸವಣ್ಣನನ್ನು ಮನಸಾರೆ ಕೊಂಡಾಡುತ್ತಾನೆ. ಮತ್ತು ನೂತನ ವಸ್ತ್ರಾಭರಣಗಳನ್ನಿತ್ತು ಸನ್ಮಾನಿಸುತ್ತಾನೆ." [೫೩] ಲಕ್ಕಣದಂಡೇಶ ಕವಿಯ ಶಿವತತ್ವ ಚಿಂತಾಮಣಿಯಲ್ಲಿ,

೫೨. ಡಾ. ಆರ್. ಸಿ. ಹಿರೇಮಠ (ಸಂ.) : ಚನ್ನಬಸವಣ್ಣನವರ ವಚನಗಳು, ಪು–೬೯೮

೫೩. ಡಾ. ಎಸ್. ವಿದ್ಯಾಶಂಕರ : ವಚನಾನುಶೀಲನ, ಪು–೩೯೮

"ಬಿಜ್ಜಳನು ಒಂದು ದಿನ ಆಸ್ಥಾನದಲ್ಲಿ ಸಭೆ ನಡೆಸುತ್ತಿರಲು ಆಗಸದಿಂದ ಓಲೆಯೊಂದು ಬಂದು ಬೀಳುವುದು. ಓಲೆಯನ್ನು ಯಾರೂ ಓದಲಾಗದಿದ್ದಾಗ ಯಾರಾದರೂ ಈ ಲಿಖಿತವಾದ ಒಕ್ಕಣೆಯನ್ನು ಓದಿದರೆ ಅವರಿಗೆ ಮುದ್ರೆಯುಂಗುರವನ್ನು, ಭೂ, ನಾರಿ ಮೊದಲಾದ ಸಕಲೈಶ್ವೈರ್ಯವನ್ನು ಕೊಡುವೆನೆಂದು ಬಿಜ್ಜಳ ಮಹಾರಾಜನು ಡಂಗುರ ಸಾರಿಸುವನು. ಬಲದೇವನ ಅಳಿಯನು ಈ ಓಲೆಯಕ್ಷರಗಳನ್ನು ಓದಬಲ್ಲ ಸಮರ್ಥನೆಂದು ಓರ್ವನು ತಿಳಿಸಲು, ಬಸವಣ್ಣನನ್ನು ಸಭೆಗೆ ಕರೆಸಲಾಗುವುದು. ಬಸವಣ್ಣ ಓಲೆಯನ್ನು ಓದಿ ಸಿಂಹಾಸನದ ಕೆಳಗೆ ಅರವತ್ತಾರು ಕೋಟಿ ಧನವಿರುವುದನ್ನು ತಿಳಿಸುವನು. ಅಗೆಯಿಸಿ ನೋಡಲು ಓಲೆಯಲ್ಲಿ ಹೇಳಿದಷ್ಟು ಧನವಿದ್ದುದು ಕಂಡುಬಂದಿತು. ಬಿಜ್ಜಳ ಬಸವಣ್ಣನನ್ನು ಅಪ್ರತಿಮನೆಂದು ಹೇಳಿ ಮಹದಾನಂದದಿಂದ ಮುದ್ರೆಯುಂಗುರವಿತ್ತು ಸನ್ಮಾನಿಸಿದನು. ನಂತರ ಅರಸನು ಪುರಜನರಿಗೆ ಸಂತಸವಾಗಲೆಂದು ಬಸವ ದಂಡಾಧೀಶನೊಡನೆ ಮೆರವಣಿಗೆಯಲ್ಲಿ ನಡೆದನು. ಬಸವ ದಂಡಾಧೀಶನಿಗೆ ಬಿಜ್ಜಳನು ಮಹಾಭವನವೊಂದನ್ನು ಕಟ್ಟಿಸಿಕೊಟ್ಟನು. ತನಗೂ ಮಂತ್ರಿಗೂ ಹೊರೆಹುಟ್ಟದಂತೆ ಮಾಡುವ ಸಲುವಾಗಿ ತನ್ನ ತಂಗಿ ನೀಲಾಂಬಿಕೆಯನ್ನು ಬಸವಣ್ಣನಿಗೆ ಕೊಟ್ಟು ವಿವಾಹ ಮಾಡಿದನು."[೫೪] ನಂಜುಂಡ ಕವಿಯು ತನ್ನ ವೃಷಭೇಂದ್ರ ವಿಳಾಸವೆಂಬ ಯಕ್ಷಗಾನ ಕೃತಿಯಲ್ಲಿ ಸ್ವಲ್ಪ ಬದಲಾವಣೆಯೊಂದಿಗೆ ಲಿಪಿಯ ಪವಾಡವನ್ನು ಸಾಹಿತ್ಯ ಮತ್ತು ಚಿತ್ರಕಲೆಯೊಂದಿಗೆ ಸಮೀಕರಿಸಿ ವಿವರಿಸಿದ್ದಾನೆ.

"ಶ್ರೀಮದೈಶ್ವರ್ಯ ಸಂಪನ್ನ ಬಿಜ್ಜಳರಾಯ

ಗಾ ಮಹಾಕೈಲಾಸಗಿರಿವಾಸ ಲಿಪಿ ಬರಸು

ತೀ ಮಹಿಗೆ ಕಳುಹಿದೊಕ್ಕಣೆಯೆನಲ್ ಪ್ರಮಥರಿಳಿವರೆಚ್ಚರಿಕೆ ಮುಂದೆ ।

ಭೂಮಿಯೊಳು ನಲವಕ್ಕು ಸಕಲ ಸಂಪದವಕ್ಕು

ಸೀಮೆ ನಾಲ್ವತ್ತೆಂಟು ಯೋಜನಮದಕ್ಕು ನೋ

ಡಾ ಮಹಿತ ಗದ್ದುಗೆಯ ಕೆಳಗೇಳುಗೊಪ್ಪರಿಗೆ ಇಹುದು ಮುತ್ತಿನ ಗದ್ದುಗೆ" [೫೫]

ಬಿಜ್ಜಳನು ಬಸವಣ್ಣನನ್ನು ಮೆರವಣಿಗೆ ಮಾಡಿಸುತ್ತ ಕಲ್ಯಾಣಕ್ಕೆ ಕರೆದು ತರುತ್ತಿರುವಾಗ ಶ್ರೇಷ್ಠವಾದ ತಾಳೆಗರಿಯ ಗೂಢಲಿಪಿಯುಳ್ಳ ಪತ್ರವು ಆಕಾಶದಿಂದ ಬೀಳುತ್ತದೆ. ಬಿಜ್ಜಳನು ಬಸವಣ್ಣನಿಗೆ ಪತ್ರವನ್ನು ಓದಲು ಕೋರುತ್ತಾನೆ. ಆಗ ಬಸವಣ್ಣ, ಶ್ರೀಮತ್ ಮಹದೈಶ್ವರ್ಯವನ್ನು ಹೊಂದಿರುವ ಬಿಜ್ಜಳರಾಜನಿಗೆ ಮಹಾಕೈಲಾಸ ವಾಸಿಯಾದ ಶಿವನು ಲಿಪಿಯನ್ನು ಬರೆಸಿ ಈ ಭೂಮಿಗೆ ಕಳುಹಿಸಿ ಕೊಟ್ಟಿರುತ್ತಾನೆ. ಇದರಲ್ಲಿ ಬರೆದ ವಿಷಯವೆಂದರೆ, ಈ ಭೂಮಿಯಲ್ಲಿ ಸಂತೋಷವಾಗಲಿದೆ. ಸಕಲ ಸಂಪತ್ತು ದೊರೆಯಲಿದೆ. ಸೀಮೆಯಲ್ಲಿ (ಒಂದು ಪ್ರದೇಶದಲ್ಲಿ) ನಲವತ್ತೆಂಟು ಯೋಜನ ದೂರದಲ್ಲಿ ಅರಸನ ಗದ್ದುಗೆಯ ಕೆಳಗೆ ಏಳು ಕೊಪ್ಪರಿಕೆ ಹೊನ್ನು ಮತ್ತು ಮುತ್ತಿನಿಂದ ಕೂಡಿದ ಗದ್ದುಗೆ ಇರುವುದು ಎಂದು ಹೇಳುತ್ತಾನೆ. ಈತನ ಮಾತನ್ನು ಪರೀಕ್ಷಿಸಲು ಬಿಜ್ಜಳನು ಸಿಂಹಾಸನವನ್ನು ಸರಿಸಿ ಆ ಜಾಗದಲ್ಲಿ ಅಗೆಯಿಸಿ ನೋಡಿದಾಗ,

---

೫೪. ಡಾ. ಎಸ್. ವಿದ್ಯಾಶಂಕರ : ವಚನಾನುಶೀಲನ, ಪು-೩೯

೫೫. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಸಂ.) : ನಂಜುಂಡ ಭಾಗವತ ವಿರಚಿತ ವೃಷಭೇಂದ್ರ ವಿಳಾಸ (ಯಕ್ಷಗಾನ ಮಹಾನಾಟಕ), ಪು-೭೬

ಏಳು ಕೊಪ್ಪರಿಕೆಗಳಲ್ಲಿ ತುಂಬಿ ತುಳುಕಾಡುವ ಹೊನ್ನಿನ ರಾಶಿ ಮತ್ತು ಅಲ್ಲಿಯೇ ಇದ್ದ ಮುತ್ತಿನಿಂದ ಅಲಂಕೃತಗೊಂಡ ಗದ್ದುಗೆಯನ್ನು ಬಿಜ್ಜಳನು ಬಸವಣ್ಣನನ್ನು ಕರೆದು ಪ್ರೀತಿಯಿಂದ ತೋರಿಸುತ್ತಾನೆ. ಬಿಜ್ಜಳನು ಸಂಪ್ರೀತನಾಗಿ ಬಸವಣ್ಣನಿಗೆ ತನ್ನ ರಾಜ್ಯದ ಉನ್ನತ ಅಧಿಕಾರದ ಸಂಕೇತವಾದ ರಾಜ್ಯದ ಮುದ್ರೆಯುಂಗುರವನ್ನು ನೀಡುತ್ತಾನೆ. ಮತ್ತು ಬಹಳ ಅಕ್ಕರೆಯಿಂದ ತನ್ನ ತಂಗಿಯಾದ ನೀಲಾಂಬೆಯನ್ನು ಕೊಟ್ಟು ವಿವಾಹ ಮಾಡಿಸುತ್ತಾನೆ. ಹೀಗೆ ಲಿಪಿಯ ಪವಾಡವು ಕೇವಲ ಪವಾಡದ ಘಟನೆಯಾಗಿ ನಿರೂಪಿತವಾಗಿರದೆ ಬಸವಣ್ಣ ಮತ್ತು ಬಿಜ್ಜಳ ಇವರಿಬ್ಬರ ಜೀವನದ ಗತಿಯನ್ನೇ ಬದಲಿಸಿದ ಸಂಗತಿಯಾಗಿ ಕಂಡುಬರುತ್ತದೆ. ಬಿಜ್ಜಳನಿಗೆ ಅಧಿಕ ಧನಪ್ರಾಪ್ತಿ ಮತ್ತು ಬಸವಣ್ಣನಿಗೆ ನೀಲಾಂಬಿಕೆಯ ಕನ್ಯಾ-ಪ್ರಾಪ್ತಿಯುಂಟಾಗುತ್ತದೆ.

ಪ್ರಸ್ತುತ ಸನ್ನಿವೇಶದಲ್ಲಿ ಮಹತ್ತರ ಪ್ರಶ್ನೆಯೊಂದು ಎದುರಾಗುತ್ತದೆ. ಬಿಜ್ಜಳ ಮಹಾರಾಜನು ಜೈನಧರ್ಮದ ಪರಂಪರೆಗೆ ಸೇರಿದವನು. ಬಸವಣ್ಣನು ವೀರಶೈವ ಧರ್ಮದ ಪರಂಪರೆಗೆ ಸೇರಿದವನು. ಬಸವಣ್ಣ ಜಾತೀಯತೆಯ ವಿರುದ್ಧ ಹೋರಾಟದ ಕಣಕ್ಕಿಳಿದುದು ಬಹುಶಃ ಅನುಭವ ಮಂಟಪದ ಸಂಪರ್ಕ ಮತ್ತು ಶರಣಸಮೂಹದ ಜೊತೆಗೆ ಬೆರೆತ ನಂತರದ ದಿನಗಳಲ್ಲಿ ಎಂದು ತೋರುತ್ತದೆ. ನೀಲಾಂಬಿಕೆ ಅಥವಾ ನೀಲಲೋಚನೆಯು ಬಿಜ್ಜಳನ ತಂಗಿ ಹೇಗಾದಳೆಂಬುದಕ್ಕೆ ಸ್ವಾರಸ್ಯ ಪೂರ್ಣವಾದ ವಿವರಣೆಯನ್ನು ಸಿಂಗಿರಾಜ ನೀಡುವನು. ಅವನ ಪ್ರಕಾರ, "ಬಿಜ್ಜಳನ ತಾಯಿ ಸಹಗಮನದಿಂದ ದೇಹತ್ಯಾಗ ಮಾಡಿದಾಗ ಬಿಜ್ಜಳನ ತಮ್ಮ ಕರ್ಣದೇವ ಇನ್ನೂ ಹಸುಗೂಸು. ಅವನನ್ನು ಮೊಲೆಯೂಡಿ ಕಾಪಾಡಿದವಳು ಸಿದ್ಧರಸ ದಣ್ಣಾಯಕರ ಪತ್ನಿ ಪದ್ಮಗಂಧಿ. ಅವರ ಹೊಟ್ಟೆಯಲ್ಲಿ ಮುಂದೆ ಹುಟ್ಟಿದವಳು ನೀಲಲೋಚನೆ. ಈ ಆತ್ಮೀಯ ಸಂಬಂಧದಿಂದಾಗಿ ನೀಲಲೋಚನೆ ಬಿಜ್ಜಳನಿಗೆ ತಂಗಿ! ತನ್ನ ಹಾಗೂ ಬಸವರಾಜನ ನಡುವಣ ವಿಶ್ವಾಸ ಗಟ್ಟಿಯಾಗಲಿಕ್ಕಾಗಿ ಹಾಗೂ 'ಮನ ಬೇರಿಲ್ಲದಿರಬೇಕು' ಎಂಬ ಕಾರಣಕ್ಕಾಗಿ ಈ ವಿವಾಹದ ಅನುಬಂಧವನ್ನು ಬಿಜ್ಜಳ ನೆನೆದನಂತೆ! ಲಕ್ಕಣ ದಂಡೇಶ ಹಾಗೂ ಸಿಂಗಿರಾಜ ಈ ದಿಶೆಯಲ್ಲಿ ಒಂದೇ ಬಗೆಯಾಗಿ ಆಲೋಚಿಸಿದಂತಿದೆ"[೫೬]

೨.೩.೧. ಕೂಡಲಸಂಗಮದಿಂದ ಮಂಗಳವಾಡೆಯತ್ತ ಪಯಣ-೧

"ಸೃಷ್ಟಿಕಾರ್ಯದಲ್ಲಿ ಒಬ್ಬ ವ್ಯಕ್ತಿ ತನ್ನಲ್ಲಿ ತುಂಬಿಕೊಂಡ ಭಾವನೆ, ಕಲ್ಪನೆಗಳನ್ನು ಮೂರ್ತರೂಪದಲ್ಲಿ ತೋರಿಸಲೇಬೇಕು ಎನ್ನುವ ಅದಮ್ಯ ಒತ್ತಡ ಅವನಲ್ಲಿ ಮೊದಲಿಗೆ ಕಾಣಿಸಬೇಕು. ಅಂಥ ಸಾಧನ, ಸಲಕರಣೆ ಮತ್ತು ಯಾವುದೇ ಮಾಧ್ಯಮದ ಸಹಾಯದಿಂದ ಆತ ನಿರ್ಮಿಸಿದಂಥ ಒಂದು ಕೃತಿ ಸುತ್ತಣ ಜನರಿಗೆ ಅವನಲ್ಲುಂಟಾದ ನೋವನ್ನೋ, ಸಂತೋಷವನ್ನೋ, ಆನಂದವನ್ನೋ, ಇನ್ನಾವುದೋ ನಿಶ್ಚಿತ ಭಾವನೆಯನ್ನೋ ತಿಳಿಸಿದಾಗ, ಅವುಗಳಿಗೆ ಅವರು ಪುಳಕಿತರಾಗಿ ತೃಪ್ತಿಯನ್ನು, ಸಂತೋಷವನ್ನೂ ಪಡುವ ಪ್ರಸಂಗ ಉಂಟಾಗಬೇಕು. ಅಂಥ ಗುಣವುಳ್ಳ ಕೃತಿ ಮಾತ್ರವೇ ಕಲಾಕೃತಿ ಎನಿಸುತ್ತದೆ. ಅದನ್ನು ನಿರ್ಮಿಸಿದಾತ ಕಲಾವಿದ"[೫೭]ನೆಂಬ ಬಿರುದಿಗೆ ಪಾತ್ರನಾಗುತ್ತಾನೆ ಎಂಬ ಡಾ. ಶಿವರಾಮ ಕಾರಾಂತರ

---

೫೬. ಡಾ. ಎಸ್. ವಿದ್ಯಾಶಂಕರ : ವಚನಾನುಶೀಲನ, ಪು-೪೦೦

೫೭. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪು-೩

ಮಾತು ಸತ್ಯ. ಕಲಾವಿದ ಕೆ. ಗಂಗಾಧರರ ಕಲಾಕೃತಿಗಳಲ್ಲಿ ಈ ಮೇಲಿನ ಅಂಶಗಳನ್ನು ನಾವು ಗಮನಿಸಬಹುದಾಗಿದೆ.

ಪ್ರಸ್ತುತ ಈ ಕಲಾಕೃತಿಯನ್ನು ಕೆ. ಗಂಗಾಧರವರು ೪೮"x೩೬" ಅಳತೆಯ ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಇಲ್ಲಿ ಕೂಡಲಸಂಗಮದ ವಿದ್ಯಾಪೀಠದಲ್ಲಿ ವಿದ್ಯಾರ್ಜನೆ ಮಾಡಿದ ಬಸವಣ್ಣನವರು ಮಂಗಳವಾಡೆಯತ್ತ ಪ್ರಯಾಣ ಬೆಳೆಸುವ ಸಮಯದಲ್ಲಿ ಗುರುಗಳಿಗೆ ಮಂಡಿಯೂರಿ ಭಕ್ತಿಪೂರ್ವಕವಾಗಿ ಕೈಜೋಡಿಸಿ ನಮಸ್ಕರಿಸುತ್ತಾರೆ. ಅವರೊಂದಿಗೆ, ಅಕ್ಕನಾಗಮ್ಮ, ಶಿವದೇವ ಮತ್ತು ಬಲದೇವರಿದ್ದಾರೆ. ಬಸವಣ್ಣವನವರು ಕೆಂಪು ಜರಿಯ ಅಂಚನ್ನೊಳಗೊಂಡ ಬಿಳಿಯ ನಿಲುವಂಗಿಯನ್ನು ಧರಿಸಿದ್ದಾರೆ. ಕೊರಳಲ್ಲಿ ಲಿಂಗಧಾರಣೆ ಮಾಡಿದ್ದಾರೆ. ಹಣೆಯ ಮೇಲೆ ಧರಿಸಿದ ವಿಭೂತಿ ಎದ್ದು ಕಾಣುತ್ತದೆ. ಬಸವಣ್ಣನವರ ಗುರುಗಳಿಗೆ ಕಾವಿಬಣ್ಣದ ಪಂಚೆ, ಕಾವಿಬಣ್ಣದ ಮೇಲುಹೊದಿಕೆಯನ್ನು ಹೊದ್ದಂತೆ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ಕೆಂಪುಬಣ್ಣದ ಅಂಚಿನ, ಕಡುಹಸಿರು ಬಣ್ಣದ ಸೀರೆ ಧರಿಸಿದ ಅಕ್ಕನಾಗಮ್ಮನು ಗುರುಗಳತ್ತ ಕೈಮುಗಿದು ನಿಂತಿರುವ ಭಂಗಿಯಿದೆ. ಅಕ್ಕನಾಗಮ್ಮನ ಎಡ ಮತ್ತು ಬಲಬದಿಯಲ್ಲಿ ಬಲದೇವ ಮತ್ತು ಶಿವದೇವ ಇಬ್ಬರು ನಿಂತಿದ್ದಾರೆ. ಅಕ್ಕನಾಗಮ್ಮನ ಎಡಬದಿಯಲ್ಲಿ ನಿಂತಿರುವ ಬಲದೇವನು ಬಂಗಾರವರ್ಣದ ದಡಿಯಿಂದ ಕೂಡಿದ, ಗುಲಾಬಿ ಬಣ್ಣದ ನಿಲುವಂಗಿ ಧರಿಸಿದ್ದಾನೆ. ಕೊರಳಲ್ಲಿ ಹಸಿರು ಶಾಲು ಹೊದ್ದಿದ್ದಾನೆ. ಮುತ್ತಿನಿಂದ ಅಲಂಕೃತಗೊಂಡ ಪೇಟವನ್ನು ತಲೆಗೆ ಧರಿಸಿ, ರಾಜಪೋಷಾಕಿನೊಂದಿಗೆ ಗುರುಗಳಿಗೆ ನಮಸ್ಕರಿಸುತ್ತಿರುವ ಭಂಗಿಯಿದೆ. ಅಕ್ಕನಾಗಮ್ಮನ ಬಲಗಡೆ ಶಿವದೇವನ ಚಿತ್ರವಿದ್ದು ಆತನು ಬಿಳಿಯಂಗಿ ಧರಿಸಿದ್ದಾನೆ. ಒಟ್ಟು ಈ ಚಿತ್ರವು ಕೂಡಲಸಂಗಮದಿಂದ ಮಂಗಳವಾಡೆಗೆ ಹೊರಡುವ ಸಂದರ್ಭವನ್ನು ಸ್ಪಷ್ಟಪಡಿಸುತ್ತದೆ. ಗುರುಗಳಿಂದ ಬೀಳ್ಕೊಂಡು ಹೋಗಲು ನಿಂತಿರುವ ಬಸವಣ್ಣ, ಗುರು ಈರ್ವರು ನೇರವಾಗಿ ಮುಖಾಮುಖಿಯಾಗಿಲ್ಲ. ಬಸವಣ್ಣನವರು ಎಲ್ಲೋ ಶೂನ್ಯದಲ್ಲಿ ದೃಷ್ಟಿ ನೆಟ್ಟಂತೆ, ಅನ್ಯ ಮನಸ್ಕರಾಗಿರುವಂತೆ ಭಾಸವಾಗುತ್ತದೆ. ಅಕ್ಕ ನಾಗಮ್ಮ ಮತ್ತು ಶಿವದೇವರ ಜೊತೆಯಲ್ಲಿರುವ ಬಾಲಕ ಚನ್ನಬಸವಣ್ಣನಿರಬೇಕೆನ್ನಿಸುತ್ತದೆ.

ಮೇಲಿನ ನಿರೂಪಣೆಯನ್ವಯ ಚಿತ್ರವು ಸುಂದರವಾದ ಪರಿಸರವನ್ನು ಹೊಂದಿದ್ದು ಯಥಾದರ್ಶನ ತತ್ತ್ವದಡಿಯಲ್ಲಿ ರಚಿತವಾಗಿದೆ. ಸ್ಥಳಾವಕಾಶದ ಬಲಭಾಗದಲ್ಲಿ ಹರಿಯುತ್ತಿರುವ ಮಲಾಪಹಾರಿ ನದಿಯ ದಡದಲ್ಲಿ ಬಸವಣ್ಣನವರ ಬೀಳ್ಕೊಡುಗೆಯ ಸಂದರ್ಭ ರಚಿತಗೊಂಡಿದೆ. ಸಂಯೋಜನೆಯ ದೃಷ್ಟಿಯಿಂದ ಈ ಕಲಾಕೃತಿ ಮಹತ್ವದ್ದು. ಜಿಗ್‌ಜಾಗ್ ಬಗೆಯಲ್ಲಿ ಆಕೃತಿಗಳನ್ನು ಸಂಯೋಜಿಸಲ್ಪಟ್ಟಿರುವ ಈ ಚಿತ್ರದಲ್ಲಿ ಆಕೃತಿಗಳ ಭಾವಚಹರೆ ಗಮನಾರ್ಹವಾದದ್ದು.

ಕೂಡಲಸಂಗಮದಿಂದ ಮಂಗಳವಾಡೆಯತ್ತ ಪಯಣ–೨ (ಕಾಮಿಕ್ಸ್ ಚಿತ್ರ)

ಈ ಚಿತ್ರದಲ್ಲಿ ಬಸವಣ್ಣ ಕೂಡಲಸಂಗಮದಲ್ಲಿ ವಿದ್ಯಾಭ್ಯಾಸ ಮುಗಿಸಿ ಮಂಗಳವಾಡೆಯತ್ತ ಪ್ರಯಾಣ ಬೆಳೆಸಿದ್ದಾನೆ. ಮಾವನಾದ ಬಲದೇವ, ಅಕ್ಕ ನಾಗಮ್ಮ ಆತನ ಜೊತೆಗಿದ್ದಾರೆ. ಈ ಚಿತ್ರದಲ್ಲಿ ಪ್ರಧಾನವಾಗಿ ಕಡು ಹಸಿರು, ತಿಳಿ ಹಸಿರು, ತೆಳುಹಳದಿ ಬಣ್ಣಗಳು ಬಳಕೆಯಾಗಿವೆ. ಇಲ್ಲಿರುವ ಎಲ್ಲ

ದೇಹಾಕೃತಿಗಳ ಮೈಬಣ್ಣವು ಒಂದೇ ಆಗಿದೆ. ಮಂಟಪವನ್ನು ಹೋಲುವ ಚಕ್ಕಡಿ ಬಂಡಿಯಲ್ಲಿ ಬಸವಣ್ಣ ಬಂಡಿಯ ಹಿಂಬದಿಯ ತುದಿಗೆ ಕುಳಿತು, ತನ್ನ ಪ್ರಿಯವಾದ ಕೂಡಲಸಂಗಮದೇವನನ್ನು ಮನಸ್ಸಿನಲ್ಲಿ ಸ್ಮರಿಸುತ್ತಾ ಹಿಂತಿರುಗಿ ಆ ಕಡೆಗೆ ನೋಟ ಬೀರಿದ್ದಾನೆ. ಇನ್ನೂ ಪ್ರಾಯದಲ್ಲಿರುವ ಬಸವಣ್ಣ ಬಿಳಿ ಪಂಚೆ, ತೆಳು ಹಸಿರುಬಣ್ಣದ ಮೇಲು ಹೊದಿಕೆಯನ್ನು ಹೊದ್ದು ಕೊರಳಲ್ಲಿ ರುದ್ರಾಕ್ಷಿಯ ಮಾಲೆ ಧರಿಸಿದ್ದಾನೆ. ಇಷ್ಟಲಿಂಗವು ಕೊರಳಲ್ಲಿ ಕಂಡುಬಂದಂತೆ ತೋರುವುದಿಲ್ಲ. ಆತನ ಬಲಬದಿಯಲ್ಲಿ ಸ್ತ್ರೀಯೊಬ್ಬಳ ಮುಖ ಭಾಗ ಸ್ವಲ್ಪ ಮಾತ್ರ ಕಾಣಿಸಿದ್ದು ಆಕೆ ಅಕ್ಕನಾಗಮ್ಮನಿರಬೇಕೆನ್ನಿಸುತ್ತದೆ. ಬಂಡಿಯ ಮುಂಬದಿಯಲ್ಲಿ ಬಲದೇವ ಮತ್ತು ಕಡು ನೀಲಿಬಣ್ಣದ ಸೀರೆಯನ್ನುಟ್ಟು, ತಲೆತುಂಬ ಸೆರಗು ಹೊದ್ದಿರುವ ಆತನ ಹೆಂಡತಿ ಓರೆ ಮುಖ ಮಾಡಿ ಕುಳಿತಿದ್ದಾಳೆ. ಬಂಡಿಯನ್ನು ನಡೆಸುವ ವ್ಯಕ್ತಿ ವೃದ್ಧನಾಗಿದ್ದು, ಬಿಳಿಮೀಸೆ, ಹಸಿರುಬಣ್ಣದ ರುಮಾಲನ್ನು ತಲೆಗೆ ಧರಿಸಿದ್ದಾನೆ. ಹೊರಾಂಗಣದ ನಿಸರ್ಗದಲ್ಲಿ ಪ್ರಸ್ತುತ ಸನ್ನಿವೇಶವನ್ನು ಕಲಾವಿದ ಅಚ್ಚುಕಟ್ಟಾಗಿ ಚಿತ್ರದ ಮೂಲಕ ನಿರೂಪಿಸಿದ್ದಾನೆ. ಬಂಡಿಯ ಹಿಂದೆ ಅಂಕುಡೊಂಕಾದ ರಸ್ತೆ, ದೂರದಲ್ಲಿ ಕಾಣುವಂತಿರುವ ಸಂಗಮನಾಥನ ದೇವಾಲಯದ ಶಿಖರ, ದಾರಿಯ ಅಕ್ಕಪಕ್ಕಗಳಲ್ಲಿ ಗಿಡಮರಗಳು ಸನ್ನಿವೇಶದ ಸಹಜತೆಗೆ ಅನುಕೂಲವಾಗಿವೆ. ವರ್ಣಗಳ ಜೊತೆಗೆ ಕಪ್ಪು ರೇಖೆಗಳ ಬಳಕೆಯು ಇಲ್ಲಿ ಮಹತ್ವದ ಸ್ಥಾನ ಪಡೆದಿದೆ.

ಪ್ರಬುದ್ಧವಾದ ಅಂಗರಚನಾ ಶಾಸ್ತ್ರಕ್ಕೆ ಮಾದರಿಯೆಂಬಂತೆ ಪ್ರಸ್ತುತ ಅಧ್ಯಯನದಲ್ಲಿ ಇರುವ ಈ ಕಾಮಿಕ್ಸ್ ಚಿತ್ರಗಳು ಸಂಯೋಜನೆ, ಭಾವಾಭಿವ್ಯಕ್ತಿ, ಇರುವ ಅವಕಾಶವನ್ನು ಸಮರ್ಥವಾಗಿ ದುಡಿಸಿಕೊಳ್ಳುವುದರೊಂದಿಗೆ ಚಿಕ್ಕಮಕ್ಕಳಿಗೆ ಚಿತ್ರಕಥೆಯೊಂದು ಹೇಗೆ ಆಪ್ಯಾಯಮಾನವಾಗಬೇಕು ಎಂಬುದಕ್ಕೆ ಇಲ್ಲಿನ ಚಿತ್ರಕಥೆ ಒಂದು ಶ್ರೇಷ್ಠ ಉದಾಹರಣೆ. ಸಾರೋಟಿನಂತಹ ಬಂಡಿಯ ಸನ್ನಿವೇಶದ ಹಿನ್ನೆಲೆಯ ಪರಿಸರದ ದೂರ ಮತ್ತು ಸಾಮೀಪ್ಯದ ಚಿತ್ರಣ ಇವು ಪ್ರಸ್ತುತ ಕಾಮಿಕ್ಸ್‌ನ ಶ್ರೇಷ್ಠ ಅಂಶಗಳು.

೨.೩.೨. ಬಸವಣ್ಣನಿಗೆ ಬಲದೇವನು ಉಡುಗೊರೆಗಳನ್ನು ಕೊಡುತ್ತಿರುವುದು

ನಂಜುಂಡ ಭಾಗವತ ವಿರಚಿತ 'ವೃಷಭೇಂದ್ರ ವಿಳಾಸ' ಈ ನೆಲದ ಒಂದು ಶ್ರೇಷ್ಠ ಚಿತ್ರಕಥಾ ಗ್ರಂಥ. ಈ ಗ್ರಂಥದಲ್ಲಿ ಒಡಮೂಡಿರುವ ಚಿತ್ರಗಳು ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ರಚಿತವಾದ ಕೃತಿಗಳು. ಈ ಹಿಂದಿನ ಚಿತ್ರಕ್ಕೆ ಹೋಲಿಸಿದರೆ ಇಲ್ಲಿನ ಕಲಾಕೃತಿಗಳಲ್ಲಿ ಅಂಗರಚನೆಯ ಪ್ರಮಾಣಗಳಲ್ಲಿ ಬದ್ಧತೆ ಇದೆ. ಅರಮನೆಯ ವಿನ್ಯಾಸ ಮೊಘಲ್ ಚಿಕಣಿ ಚಿತ್ರಗಳ ಶೈಲಿಯನ್ನು ನೆನಪಿಸುತ್ತದೆ. ಜನಿವಾರವನ್ನು ಧರಿಸಿದ ಬಲದೇವನ ಸಹಚರರು ಹಿಂಬದಿಯಲ್ಲಿ ನಿಂತು ಸನ್ನಿವೇಶಕ್ಕೆ ಬೆಂಬಲವಾಗಿದ್ದಾರೆ. ಮೃದುವಾದ ವರ್ಣಸಂಯೋಜನೆಯ ನೆರಳು-ಬೆಳಕುಗಳಲ್ಲಿಯೂ ಸಹ ಮೃದುತ್ವವನ್ನು ಕಾಪಾಡಿಕೊಂಡು ಬಂದಿರುವುದು ಇಲ್ಲಿ ಗೋಚರವಾಗುತ್ತದೆ. ಪೂರಕವಾದ ವರ್ಣಗಳು ಆಕೃತಿಗಳ ಭಾವಾಭಿವ್ಯಕ್ತಿಯನ್ನು ನೂರ್ಮಡಿಗೊಳಿಸಿವೆ. ಬಲದೇವನಲ್ಲಿ ಗಾಂಭೀರ್ಯತೆ, ಬಸವಣ್ಣನಲ್ಲಿ ಸಂಭ್ರಮ ಭಾವಸ್ಫುಟ. ಯಥಾದರ್ಶನದ ಪಾಲನೆ ಪ್ರಸ್ತುತ ಸಂಪ್ರದಾಯದ ಹಿನ್ನೆಲೆಯ ಈ ಚಿತ್ರದಲ್ಲಿ ಗೌಣವಾಗಿವೆ.

ಈ ಚಿತ್ರದಲ್ಲಿ ಬಸವಣ್ಣನಿಗೆ ತಿಳಿಗೆಂಪು ಬಣ್ಣದ ಶಾಲು ಮತ್ತು ಅದೇ ಬಣ್ಣದ ಪಂಚೆ ತೊಡಿಸಲಾಗಿದೆ. ಕೊರಳಲ್ಲಿ ಕಡು ಕಂದುಬಣ್ಣದ ರುದ್ರಾಕ್ಷಿ ಮಾಲೆ, ಲಿಂಗವನ್ನು ಹೊಂದಿದ ಗುಂಡುಗಡಿಗೆ, ತಲೆಗೆ ಅಲಂಕೃತಗೊಂಡ ಕೆಂಪುಬಣ್ಣದ ಪೇಟವನ್ನು ಧರಿಸಿರುವಂತೆ ಚಿತ್ರಿಸಿದ್ದಾರೆ. ಬಸವಣ್ಣನ ಎದುರುಗಡೆ ಬಲದೇವನು ಫಲಪುಷ್ಪಗಳು, ಹರಳು, ಮುತ್ತು ರತ್ನಗಳ ಆಭರಣಗಳಿಂದ ಕೂಡಿದ ಮೂರು ಹರಿವಾಣಗಳನ್ನು ಕಾಣುತ್ತೇವೆ. ಬಲದೇವ ಪಾರದರ್ಶಕವಾದ ಬಿಳಿಯ ಬಣ್ಣದ ಅಂಗಿಯನ್ನು ಧರಿಸಿದ್ದಾನೆ. ಆತನ ಹಿಂದೆ ಜನಿವಾರ ಧರಿಸಿ, ವಿಭೂತಿಯ ಪಟ್ಟಿಗಳನ್ನು ಮೈತುಂಬಾ ಬಳಿದುಕೊಂಡ ಮೂರು ಜನ ಬ್ರಾಹ್ಮಣರು ಕುಳಿತಿದ್ದಾರೆ. ಉಡುಗೊರೆ ನೀಡುವ ಸನ್ನಿವೇಶವು ಮಂಟಪದ ಒಳಾಂಗಣದಲ್ಲಿ ನಿರ್ಮಿತಿಯಾಗಿದೆ. ನೆಲಕ್ಕೆ ಕೆಂಪುಬಣ್ಣದ ಮೆತ್ತನೆಯ ಹಾಸು ಹಾಕಲಾಗಿದೆ. ಮಂಟಪವು ಅಲಂಕೃತಗೊಂಡಿದ್ದು, ಬಲದೇವ ಮತ್ತು ಬಸವಣ್ಣನವರ ಮಧ್ಯದಲ್ಲಿ ಮಂಟಪದ ಮೇಲಿನಿಂದ ಗಾಜಿನಿಂದ ಅಲಂಕೃತಗೊಂಡ ದೀಪಗಳನ್ನು ತೂಗುಹಾಕಲಾಗಿದೆ. ಮಂಟಪದ ಹಿಂಬದಿಯ ಗೋಡೆಗೆ ಬಿಳಿಯಂಚು ಹೊಂದಿದ ಹಸಿರುಬಣ್ಣದ ಪರದೆಗಳನ್ನು ಇಳಿಯಬಿಡಲಾಗಿದೆ. ಮಂಟಪದಲ್ಲಿ ಪ್ರತಿಧ್ವನಿಯನ್ನು ನಿಯಂತ್ರಿಸಲು ಗಾಜಿನ ಉಪಕರಣವೊಂದನ್ನು ತೂಗು ಹಾಕಲಾಗಿದೆ.

೨.೩.೩. ಬಸವಣ್ಣನಿಗೆ ಗಂಗಾಂಬಿಕೆಯನ್ನು ಧಾರೆಯೆರೆಯುತ್ತಿರುವುದು

ಮಂತ್ರಿಯಾದ ಬಲದೇವನು ನಿಶ್ಚಿತಾರ್ಥವನ್ನು ಮಾಡಿ, ಮಂಗಳ ಸ್ನಾನ ಮಾಡಿಸಿ ಸಂಭ್ರಮದಿಂದ ಅಳಿಯನಿಗೆ ಮದುವಣಿಗ ಶಾಸ್ತ್ರವನ್ನು ಮಾಡಿಸುತ್ತ ಸಂತೋಷಪಡುತ್ತಾನೆ. ಹಸೆಯಿಂದ ಕನ್ಯಾರ್ಥಿಯಾದ ಬಸವೇಶನಿಗೆ ಸಂತೋಷದಿಂದ 'ತದೇವ ಲಗ್ನಂ ಸುದಿನಂ ತದೇವ ತಾರಾಬಲಂ ಚಂದ್ರಬಲಂ ತದೇವ' ಆತನ ಎನ್ನುತ್ತಾ ತನ್ನ ಮಗಳಾದ ಗಂಗಾಂಬೆಯನ್ನು ಶಿವಾರ್ಪಣವೆನ್ನುತ್ತಾ ಧಾರೆಯೆರೆಯುವ ಸಂದರ್ಭವಿದಾಗಿದೆ. ಒಟ್ಟು ೧೫ ಜನರಿರುವ ಈ ಚಿತ್ರದಲ್ಲಿ ಬಸವಣ್ಣನವರನ್ನು ರಾಜಪೋಷಾಕು ಧರಿಸಿದಂತೆ ಚಿತ್ರಿಸಲಾಗಿದೆ. ಕೆಂಪುಬಣ್ಣದ ನಿಲುವಂಗಿಯ ಮೇಲೆ ಬಂಗಾರ ಬಣ್ಣದ ದುಂಡಗಿನ ಬಿಲ್ಲೆಗಳನ್ನು ಚಿತ್ರಿಸಲಾಗಿದೆ. ತಿಳಿಗೆಂಪು ಬಣ್ಣದ ಪಂಚೆ, ಕಾಲಿನಲ್ಲಿ ಲೋಹದಿಂದ ಮಾಡಿದ ಕಾಲ್ಗಡಗ (ಆ್ಯಂಕಲ್) ಧರಿಸಿರುವುದು ವಿಶೇಷವೆನಿಸಿದೆ. ಮುತ್ತಿನಿಂದ ಅಲಂಕೃತಗೊಂಡ ಹಸಿರುಬಣ್ಣದ ಮೇಲು ಹೊದಿಕೆಯನ್ನು ಧರಿಸಿರುವಂತೆ ಚಿತ್ರಿಸಲಾಗಿದೆ.

ಬಸವಣ್ಣನವರು ಧರಿಸಿದ ಪೇಟವು ಮುತ್ತು ರತ್ನಗಳಿಂದ ಅಲಂಕೃತಗೊಂಡಿದ್ದು ಕೆಂಪುವರ್ಣದ್ದಾಗಿದೆ. ಬಸವಣ್ಣನವರ ದೃಷ್ಟಿ ಗಂಗಾಂಬೆಯತ್ತ ಹರಿದಿರುವುದನ್ನು ಗಮನಿಸಬಹುದು. ಬಸವಣ್ಣನವರ ಹಿಂದೆ ನಿಂತಿರುವ ಶರಣರು ಕೊರಳಲ್ಲಿ ರುದ್ರಾಕ್ಷಿಮಾಲೆ, ಇಷ್ಟಲಿಂಗಗಳನ್ನು ಧರಿಸಿದ್ದು ಅವರು ತಲೆಯಲ್ಲಿ ಹಸಿರು, ಕೆಂಪುಬಣ್ಣದ ಶಿರಸ್ತ್ರಾಣಗಳನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಮುತ್ತುಗಳಿಂದ ಅಲಂಕೃತಗೊಂಡ ಕೆಂಪು ಮೇಲುಹೊದಿಕೆಗಳನ್ನು ಧರಿಸಿದ್ದಾರೆ. ಶರಣರೆಲ್ಲರೂ ವಿಭೂತಿಯ ಧಾರಣೆ ಮಾಡಿದ್ದಾರೆ. ಚಿತ್ರದಲ್ಲಿ ಶರಣರನ್ನು ಗುರುತಿಸಲು ಕಲಾವಿದ ಹಣೆ ಮತ್ತು ಕಣ್ಣಿನ ಸುತ್ತಲೂ ವಿಭೂತಿ ಧಾರಣೆಯನ್ನು ವಿಶೇಷವಾಗಿ ಮಾಡಿರುವುದು ಕಂಡುಬರುತ್ತದೆ.

ಸಾಮಾನ್ಯವಾಗಿ ಮದುವೆಯ ಸಂದರ್ಭದಲ್ಲಿ ವರನ ಎಡಭಾಗದಲ್ಲಿ ವಧುವನ್ನು ಕೂರಿಸಲಾಗುತ್ತದೆ. ಇಲ್ಲಿ ಮಾತ್ರ ವಧುವು ವರನ ಬಲಭಾಗದಲ್ಲಿರುವುದು ವಿಶೇಷ. ಗಂಗಾಂಬಿಕೆಗೆ ಬಿಳಿ ಮುತ್ತುಗಳನ್ನು ಅಂಟಿಸಿದ ಕೆಂಪುಸೀರೆ ಹಳದಿವರ್ಣದ ಅಂಚನ್ನು ಹೊಂದಿದೆ. ಹಸಿರು ಬಣ್ಣದ ಕುಪ್ಪಸವು ಹಳದಿ ವರ್ಣದ ಅಂಚನ್ನು ಹೊಂದಿದೆ. ಕೊರಳಿಗೆ ಮುತ್ತಿನ ಹಾರಗಳಿಂದ, ಕಿವಿಗಳಿಗೆ ಬಂಗಾರ, ವಜ್ರದ ಓಲೆಗಳನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಹಣೆಗೆ ಮಲ್ಲಮ್ಮನ ದಂಡೆಯನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಗಂಗಾಂಬಿಕೆಯ ಹಿಂದೆ ನಾಲ್ಕು ಜನ ಸ್ತ್ರೀಯರಿದ್ದು, ಕೈಯಲ್ಲಿ ಮಂಗಳಕರವಾದ ವಸ್ತುಗಳಿರುವ ಹರಿವಾಣಗಳನ್ನು ಹಿಡಿದು ನಿಂತಿದ್ದಾರೆ. ಅವರು ಕಡುಗೆಂಪು, ಹಸಿರುಬಣ್ಣದ ಸೀರೆಗಳನ್ನು ಧರಿಸಿ, ಕಿವಿಗಳಲ್ಲಿ ಕೊರಳಿನಲ್ಲಿ ಆಭರಣಗಳನ್ನು ಧರಿಸಿದ್ದಾರೆ. ಅವರ ಪಕ್ಕದಲ್ಲಿ ಬಲದೇವನು ಬೆಳ್ಳಿಯ ಗಿಂಡಿಯಿಂದ ಕ್ಷೀರಧಾರೆಯನ್ನು ವಧು-ವರರ ಕೈಗಳ ಮೇಲೆ ಎರೆಯುತ್ತಿದ್ದು ಹಾಲಿನ ಧಾರೆಯ ಚಿತ್ರವು ಸ್ಪಷ್ಟವಾಗಿ ಮೂಡಿ ಬಂದಿರುವುದು ವಿಶೇಷವಾಗಿದೆ. ಮದುವೆ ಮಂಟಪದ ಕೆಳಭಾಗದಲ್ಲಿ ಅಗ್ನಿಕುಂಡವಿದ್ದು ಅದಕ್ಕೆ ಬ್ರಾಹ್ಮಣ ಪುರೋಹಿತರು ಹೇಳಿದಂತೆ ಶರಣರು ತುಪ್ಪವನ್ನು ಹಾಕುತ್ತಿರುವ ದೃಶ್ಯ ಗಮನಸೆಳೆಯುತ್ತದೆ.

ಹಿಂದಿನ ಚಿತ್ರದಂತೆ ಈ ಚಿತ್ರವೂ ಸಹ ಸಾಂಪ್ರದಾಯಿಕ ನೆಲೆಯಲ್ಲಿ ರಚಿತವಾದುದು. ಆಧುನಿಕ ಸಂಯೋಜನೆಯ ಸಿದ್ಧಾಂತದಲ್ಲಿ ಜಿಗ್ ಜಾಗ್ ರೀತಿಯ ಆಕೃತಿಗಳನ್ನು ಸಂಯೋಜಿಸುವುದು ವಾಡಿಕೆ. ಆದರೆ ಇಲ್ಲಿ ಎರಡು ಹಂತಗಳಲ್ಲಿ ಅಂದರೆ ಎರಡು ಸಮಾನಾಂತರವಾದ ಪಟ್ಟಿಕೆಯ ರೂಪದಲ್ಲಿ ಇಲ್ಲಿನ ಆಕೃತಿಗಳು ಸಾಮೀಪ್ಯದ ನೆಲೆಯಲ್ಲಿ ರಚನೆಗೊಂಡಿವೆ. ಹಿನ್ನೆಲೆಯಲ್ಲಿ ಸೂಚ್ಯವಾಗಿ ಅರಮನೆಯ ವಾತಾವರಣವನ್ನು ತೋರ್ಪಡಿಸಿರುವುದು. ಮೂಲವರ್ಣಗಳನ್ನು ದುಡಿಸಿಕೊಂಡರೂ, ಅವುಗಳೊಂದಿಗೆ ಮೃದುವಾದ ವರ್ಣಗಳನ್ನು ಪ್ರಾತಿನಿಧಿಕವಾಗಿ ಬಳಸಿಕೊಳ್ಳಲಾಗಿದೆ. ಶೈವ ಮತ್ತು ವೈಷ್ಣವ ಪಂಥದವರನ್ನು ಜನಿವಾರ ಮತ್ತು ವಿಭೂತಿಗಳಿಂದ ಪ್ರತ್ಯೇಕವಾಗಿ ಗುರುತಿಸಬಹುದಾಗಿದೆ. ಆಡಂಬರ ಮತ್ತು ವೈಭವದ ಸೂಚಕವಾದ ವಿನ್ಯಾಸಗಳನ್ನು ಆಕೃತಿಗಳಲ್ಲಿ ಸಮರ್ಥವಾಗಿ ದುಡಿಸಿಕೊಂಡರೆ, ಸ್ಥಳಾವಕಾಶವನ್ನು ಸಮಾನವಾಗಿ ವಿಂಗಡಿಸಿರುವುದು ಈ ಚಿತ್ರಕ್ಕೆ ಬಲ ತುಂಬಿದೆ.

೨.೩.೪. ಬಸವಣ್ಣ-ಗಂಗಾಂಬಿಕೆಯರ ವಿವಾಹ-೧

"ತಮ್ಮ ಆಂತರಿಕ ಭಾವನೆಗಳನ್ನು, ಅನಿಸಿಕೆಗಳನ್ನು ಅಷ್ಟೇ ಅರ್ಥವತ್ತಾಗಿ, ಲಲಿತವಾಗಿ, ಸುಸಂಬದ್ಧವಾಗಿ ಕಲಾಕೃತಿಗಳ ಮೂಲಕ ತೋರಿಸಬಲ್ಲ ಶಕ್ತಿ ಇದ್ದರೆ ಮಾತ್ರವೇ ಒಬ್ಬಾತ ಕಲಾವಿದ ಎನಿಸಿಕೊಂಡಾನು"[೫೮] ಈ ಮಾತಿಗೆ ಕಲಾವಿದ ಎಂ. ವೀರಪ್ಪನವರು ಹೊರತಾಗಿಲ್ಲ. ಈ ಮೇಲಿನ ಶೀರ್ಷಿಕೆಯಡಿಯಲ್ಲಿ ಮೂಡಿಬಂದಿರುವ ಈ ಚಿತ್ರವು ೧೨"x೧೮" ಅಳತೆಯ ಕಪ್ಪು ಬಿಳುಪು ಬಣ್ಣದ ಸಂಯೋಜನೆಯನ್ನು ಹೊಂದಿದ್ದು, ಜಲವರ್ಣ ಪರಂಪರೆಗೆ ಸೇರುತ್ತದೆ. ದೃಶ್ಯವನ್ನು ದೂರದಿಂದ ಸೆರೆಹಿಡಿದಿರುವಂತೆ ಚಿತ್ರಿಸಲಾಗಿದೆ. ಬಿಜ್ಜಳನ ಆಸ್ಥಾನವಾದ ಕಲ್ಯಾಣದಲ್ಲಿ ಬಲದೇವನು ಮಹಾಮಂತ್ರಿ-ಯಾಗಿದ್ದು, ಎಲ್ಲ ವ್ಯವಹಾರಗಳನ್ನು ಸಾಂಗವಾಗಿ ನೋಡಿಕೊಂಡು ಹೋಗುತ್ತಿರುತ್ತಾನೆ. ಅದೇ ಹೊತ್ತಿನಲ್ಲಿ ಕೂಡಲಸಂಗಮದಲ್ಲಿ ಬಸವಣ್ಣ ತನ್ನ ಅಕ್ಕ ನಾಗಲಾಂಬಿಕೆಯ ಜೊತೆ ಬಂದಿರುತ್ತಾನೆ. ಅವನ ವಿಷಯ

೫೮. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪು-೧೨

ತಿಳಿದ ಬಿಜ್ಜಳ ತನ್ನ ಮಗಳಾದ ಗಂಗಾಂಬಿಕೆಯನ್ನು ಬಸವಣ್ಣನಿಗೆ ಕೊಟ್ಟು ವಿವಾಹ ಮಾಡಲು ಮುಂದಾಗುತ್ತಾನೆ. ಆ ವಿವಾಹದ ಸನ್ನಿವೇಶವನ್ನು ಪ್ರಸ್ತುತ ಚಿತ್ರದಲ್ಲಿ ಕಲಾವಿದ ಚಿತ್ರಪಠ್ಯವನ್ನಾಗಿ ರೂಪಿಸಿದ್ದಾನೆ. ವಿವಾಹ ಮಂಟಪದ ಸುಲಕ್ಷಣಗಳು ಸ್ಪಷ್ಟವಾಗಿ ಮೂಡಿಬಂದಿವೆ.

ಚಿತ್ರದ ಮಧ್ಯದಲ್ಲಿ ವಧು-ವರರ ಚಿತ್ರಣವಿದೆ. ವರನಾದ ಬಸವೇಶನು ವಧುವಿನ ಎಡಭಾಗದಲ್ಲಿ ಕುಳಿತಿದ್ದಾನೆ. ಇವರಿಬ್ಬರ ಎಡಬಲಗಳಲ್ಲಿ ಆಪ್ತೇಷ್ಟರು ಆಸೀನರಾಗಿದ್ದಾರೆ. ಮುಖಕ್ಕಿಂತಲೂ ಪೇಟವೇ ದೊಡ್ಡದೆನ್ನಿಸುತ್ತದೆ. ಹಾಕಿಕೊಂಡಿರುವ ಹೂವಿನ ಹಾರ, ಕೈಯಲ್ಲಿ ತೆಂಗಿನ ಕಾಯಿಯ ಫಲವನ್ನು ಹಿಡಿದಿರುವಂತೆ ತೋರುತ್ತದೆ. ಅವನ ಬಲಬದಿಗೆ ಅಂದರೆ ನೋಡುಗರ ಬಲಬದಿಗೆ ಕನ್ಯೆ ಗಂಗಾಂಬಿಕೆಯನ್ನು ಕೂಡಿಸಲಾಗಿದೆ. ಅವಳು ಸಾಲಂಕೃತ ವಧುವಾಗಿದ್ದಾಳೆ. ವಿವರಗಳು ಸ್ಪಷ್ಟವಾಗಿ ಕಾಣಿಸದಿದ್ದರೂ ಒಟ್ಟು ನೋಟಕ್ಕೆ ತಲೆಯಲ್ಲಿ ಬಾಸಿಂಗ, ಹೂವು, ಕೊರಳಲ್ಲಿ ಹೂವಿನ ಹಾರವನ್ನು ಧರಿಸಿ ವಧುವು ವಿವಾಹದ ಸಂದರ್ಭದಲ್ಲಿ ಹೇಗೆ ಕುಳಿತಿರಬೇಕೋ ಹಾಗೆ ಅಚ್ಚುಕಟ್ಟಾಗಿ ಕುಳಿತಿದ್ದಾಳೆ. ಸೂಕ್ಷ್ಮವಾಗಿ ಗಮನಿಸಿದರೆ ಅವಳ ತಲೆ ಸ್ವಲ್ಪ ಬಾಗಿರುವುದು ಚಿತ್ರದ ಸೌಂದರ್ಯವೆಂದು ಇದನ್ನು ವ್ಯಾಖ್ಯಾನಿಸಬಹುದು. ತ್ರಿಕೋನಾಕಾರದ ವೇದಿಕೆಯ ವಧು-ವರರ ಹಿಂದೆ ಮೆತ್ತನೆಯ ದಿಂಬುಗಳನ್ನು ಅಳವಡಿಸಿರುವುದನ್ನು ಕಾಣುತ್ತೇವೆ.

ಚಿತ್ರದಲ್ಲಿ ಎದ್ದುಕಾಣುವ ಎರಡು ಎತ್ತರವಾದ ಬಾಳೆ ಕಂಬಗಳು ಮತ್ತು ಎರಡು ಉರಿಯುತ್ತಿರುವ ನಿಲುವಿನ ದೀಪಗಳು. ಅಂತೆಯೇ ವಧು-ವರರ ಮುಂದೆ ಮೂರುಕಾಲಿನ ಅಡ್ಡಣಿಗೆ, ಅದರ ಮೇಲೊಂದು ಕಳಸ, ಅಕ್ಕ ಪಕ್ಕದಲ್ಲಿ ಹಣ್ಣು ಹಂಪಲುಗಳು, ಒಂದು ತಟ್ಟೆಯಲ್ಲಿ ಹೂವುಗಳ ರಾಶಿಯನ್ನು ಕಲಾವಿದ ಕುಶಲತೆಯಿಂದ ಚಿತ್ರಿಸಿದ್ದಾನೆ. ಬಸವಣ್ಣನವರ ಎಡಬದಿಗೆ ಆತನ ಗುರುಗಳಾದ ಜಾತವೇದ ಮುನಿಗಳಿರಬಹುದೆಂದು ತೋರುವ ಗಡ್ಡಧಾರಿಯನ್ನು ಮತ್ತು ವಟುಗಳನ್ನು ಕಾಣಬಹುದು. ಗಂಗಾಂಬಿಕೆಯ ಎಡಬದಿಗೆ ಸ್ವಲ್ಪ ಎತ್ತರವಾದ ಪೀಠದಲ್ಲಿ ಬಲದೇವ ಕಂಬಳಿಯ ಮೇಲೆ ಗಂಭೀರವಾಗಿ ಕುಳಿತಿರುವಂತೆ ಕಾಣುತ್ತಿದ್ದು, ಆತನ ಮುಖದಲ್ಲಿ ನೋವಿನ, ಆತಂಕದ ಛಾಯೆಯಿರುವುದನ್ನು ಗುರುತಿಸಬಹುದು. ಒಬ್ಬ ತಂದೆ ಮಗಳನ್ನು ಕಳುಹಿಸಿಕೊಡುವ ಸಂಕಟ ಹೇಗಿರುತ್ತದೆಂದು ಇಲ್ಲಿ ಚಿತ್ರಿಸಲಾಗಿದೆ. ಆತನ ಹಿಂದೆ ಗಂಗಾಂಬಿಕೆಯ ತಾಯಿ ಮತ್ತು ಇತರ ಸ್ತ್ರೀಯರು ತಲೆತುಂಬ ಸೆರಗು ಹೊದ್ದು ಕುಳಿತಿರುವ ದೃಶ್ಯ ಮನಮೋಹಕವಾಗಿದೆ. ಕಲಾವಿದ ತಾನು ಏನನ್ನು ಹೇಳಬೇಕಾಗಿದೆಯೋ ಅದನ್ನೆಲ್ಲ ಸಾರ್ಥಕವಾಗಿ ಈ ಚಿತ್ರದಲ್ಲಿ ಅಭಿವ್ಯಕ್ತಿಪಡಿಸಿದ್ದಾನೆ.

ಹಿಂದಿನ ಚಿತ್ರದಲ್ಲಿ ಮದುವೆಯ ಸನ್ನಿವೇಶದಲ್ಲಿ ಅರಸೊತ್ತಿಗೆಯ ಸೊಬಗು ಕಂಡು ಬಂದರೆ ಇಲ್ಲಿ ಅತ್ಯಂತ ಸರಳ ವಿವಾಹದ ಸೊಬಗು ಕಂಡುಬರುತ್ತದೆ. ಹಿನ್ನೆಲೆಯಲ್ಲಿ ಗ್ರಾಮ್ಯ ಸೊಗಡು ಸೂಚ್ಯವಾಗಿ ಕಂಡು ಬಂದರೆ ಮುನ್ನೆಲೆಯಲ್ಲಿ ಆ ಸೊಗಡಿಗೆ ಪೂರಕವಾದ ಮದುವೆ ಸಂಭ್ರಮ ಚಿತ್ರಿತಗೊಂಡಿದೆ. ಮದುವೆ ಮಂಟಪ ಚಿತ್ರದ ಅವಕಾಶವನ್ನು ಲಂಬವಾಗಿ ಮೂರು ಭಾಗಗಳಾಗಿ ವಿಂಗಡಿಸಿದೆ. ಆದರೆ ಸಂಯೋಜನೆಯು ಸಮಾನಾಂತರವಾಗಿದೆ. ಅದನ್ನು ವಿವರವಾಗಿ ಗುರುತಿಸುವುದಾದರೆ; ಕೆಳಭಾಗದಲ್ಲಿ ಹಣ್ಣು-ಹೂವು, ಫಲ-ತಾಂಬೂಲ ಚಿತ್ರಣ ಸಂಯೋಜಿಸಿದ್ದರೆ, ಮಧ್ಯಭಾಗದಲ್ಲಿ ಆಕೃತಿಗಳನ್ನು

ಸಂಯೋಜಿಸಲಾಗಿದೆ. ಮೇಲ್ಭಾಗದ ಅವಕಾಶವನ್ನು ದಟ್ಟವರ್ಣದ ಲೇಪನದಿಂದ ಸೂಚ್ಯವಾಗಿ ಚಿತ್ರಿಸಲಾಗಿದೆ. ಆಕೃತಿಗಳು ಮತ್ತು ಫಲತಾಂಬೂಲಗಳನ್ನು ಪ್ರಖರ ಬೆಳಕಿನಡಿ ಚಿತ್ರಿಸಲಾಗಿದೆ.

ಬಸವಣ್ಣ–ಗಂಗಾಂಬಿಕೆಯರ ವಿವಾಹ–೨

ಹೊಸದಾಗಿ ಮದುವೆಯಾಗುವ ಬಸವಣ್ಣ ಮತ್ತು ಗಂಗಾಂಬೆ ದಂಪತಿಗಳಿಗೆ ಚಂದದಿಂದ ಅಲಂಕರಿಸಿ, ಅವರನ್ನು ಹಸೆಮಣೆಗೆ ಪ್ರೀತಿಯಿಂದ ಕರೆತಂದು ಕುಳ್ಳಿರಿಸಿರುವ ದೃಶ್ಯವಿದಾಗಿದ್ದು, ಸುಂದರ ಯುವತಿಯರು ಬಹಳ ಸಂತೋಷದಿಂದ ಶೋಭಾನ ಗೀತೆಯನ್ನು ರಾಗಬದ್ಧವಾಗಿ ಹಾಡುತ್ತಿರುವಂತೆ ಕಲಾವಿದ ಇಲ್ಲಿ ಚಿತ್ರಿಸಿದ್ದಾನೆ. ಬಸವಣ್ಣ ಮತ್ತು ಗಂಗಾಂಬಿಕೆ ಅಲಂಕೃತಗೊಂಡ ವೇದಿಕೆಯ ಮೇಲೆ ಕುಳಿತಿದ್ದಾರೆ. ಅವರ ಹಿಂದೆ ಗಾಢಕಂದುಬಣ್ಣದ ದಪ್ಪನೆಯ ದಿಂಬನ್ನು ಇರಿಸಲಾಗಿದೆ. ಗಂಗಾಂಬಿಕೆ ನಾಚಿಕೆಯಿಂದ ಬಸವಣ್ಣನೆಡೆಗೆ ನೋಡುತ್ತಿದ್ದು, ಬಸವಣ್ಣ ವೇದಿಕೆಯ ಎದುರಿಗೆ ಮುಖ ಮಾಡಿ ಕುಳಿತಿದ್ದಾನೆ. ಅವರ ಎದುರಿಗೆ ಕೆಳಗಿನ ನೆಲಹಾಸಿನಲ್ಲಿ ನಾಲ್ಕು ಹರಿವಾಣಗಳಲ್ಲಿ ಫಲಪುಷ್ಪಗಳು, ವಜ್ರ–ವೈಢೂರ್ಯಗಳ ರಾಶಿ ತುಂಬಿರುವುದನ್ನು ಗಮನಿಸಬಹುದು. ಜೊತೆಗೆ ಸಾಧಾರಣ ಎತ್ತರದ ಎರಡು ದೀಪಗಳನ್ನು ನಿಲ್ಲಿಸಲಾಗಿದೆ. ವಧು–ವರರ ಎಡ ಮತ್ತು ಬಲಬದಿಗೆ ವಸ್ತ್ರ ಒಡವೆಗಳಿಂದ ಅಲಂಕಾರಗಳನ್ನು ಮಾಡಿಕೊಂಡ ಮತ್ತು ಬಗೆಬಗೆಯ ವರ್ಣದ ಸೀರೆಗಳನ್ನು ಉಟ್ಟುಕೊಂಡಿರುವ ಸ್ತ್ರೀಯರ ದೃಶ್ಯ ಮನಮೋಹಕವಾಗಿದೆ. ಅವರೆಲ್ಲರ ದೃಷ್ಟಿ ವೇದಿಕೆಯ ಮೇಲಿರುವ ಬಸವಣ್ಣ ಮತ್ತು ಗಂಗಾಂಬಿಕೆಯರ ಮೇಲೆ ನೆಟ್ಟಿರುವುದನ್ನು ಕಾಣುತ್ತೇವೆ.

'ವೃಷಭೇಂದ್ರ ವಿಳಾಸ'ದ ಮತ್ತೊಂದು ಕೃತಿಯಾದ ಇದರಲ್ಲಿ, ಬಸವಣ್ಣ ಮತ್ತು ಗಂಗಾಂಬಿಕೆಯರ ವಿವಾಹ ಮಹೋತ್ಸವದ ಚಿತ್ರದ ಸಂಯೋಜನೆ ಮೂರು ಭಾಗಗಳಲ್ಲಿ ಹರಡಿಕೊಂಡಿದೆ. ಅದು ಲಂಬವಾಗಿದ್ದು, ಮಧ್ಯದಲ್ಲಿ ಬಸವದಂಪತಿ, ಎಡ ಮತ್ತು ಬಲಪಾರ್ಶ್ವದಲ್ಲಿ ಪರಿವಾರದವರನ್ನು ಸಂಯೋಜಿಸಲಾಗಿದೆ. ಆಕೃತಿಗಳಲ್ಲಿ ಮೂಲವರ್ಣಗಳ ಬಳಕೆ ಇದ್ದರೂ ಜೊತೆಗೆ ಮೃದುವರ್ಣಗಳನ್ನು ಆಕೃತಿಗಳಲ್ಲಿ, ಹಿನ್ನೆಲೆಯಲ್ಲಿ ಅತ್ಯಂತ ಸಮರ್ಥವಾಗಿ ದುಡಿಸಿಕೊಳ್ಳಲಾಗಿದೆ. ಗಂಗಾಂಬಿಕೆಯ ಸಂಕೋಚದ ಭಾವ ಅನನ್ಯ.

ಬಸವಣ್ಣ–ಗಂಗಾಂಬಿಕೆಯರ ವಿವಾಹ–೩

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ತೈಲವರ್ಣ ಮಾಧ್ಯಮದಲ್ಲಿ ರಚಿಸಿರುವ ಕಲಾಕೃತಿ ಇದಾಗಿದೆ. ಇಲ್ಲಿ ಗಂಗಾಂಬಿಕೆಯ ಮದುವೆಯ ಸಂದರ್ಭದಲ್ಲಿ ಬಲದೇವನು ಬಸವಣ್ಣ ಮತ್ತು ಗಂಗಾಂಬಿಕೆಗೆ ಆಶೀರ್ವದಿಸುವ ಸನ್ನಿವೇಶವನ್ನು ಇಲ್ಲಿ ಸ್ಪಷ್ಟವಾಗಿ ಬಿಂಬಿಸಲಾಗಿದೆ. ಬಸವಣ್ಣನವರು ಬಿಳಿಯ ಬಣ್ಣದ ಪಂಚೆ, ನಿಲುವಂಗಿಯನ್ನು ಧರಿಸಿ, ತಲೆಗೆ ರುಮಾಲು ಧರಿಸಿ, ಕೊರಳಿಗೆ ಹೂವಿನ ಹಾರವನ್ನು ಹಾಕಿಕೊಂಡು ಬಲದೇವನಿಗೆ ಪಾದಮುಟ್ಟಿ ನಮಸ್ಕರಿಸುತ್ತಿರುವುದು ಕಂಡುಬರುತ್ತದೆ. ಗಂಗಾಂಬಿಕೆಯು ಬಸವಣ್ಣನವರ ಜೊತೆಗೂಡಿ ತಂದೆ ಬಲದೇವನಿಗೆ ನಮಸ್ಕರಿಸುತ್ತಿರುವ ಸನ್ನಿವೇಶವು ವಿವಾಹ ಮಂಟಪದಲ್ಲಿ ರೂಪಿತವಾಗಿದ್ದು, ಗಂಗಾಂಬಿಕೆ ಕೈಗಳಿಗೆ ಹಸಿರು ಬಣ್ಣದ ಗಾಜಿನ ಬಳೆಗಳು, ಬಳೆಗಳ ಹಿಂದೆ–ಮುಂದೆ ಬಂಗಾರದ ಬಿಲ್ವಾರ ಧರಿಸಿದ್ದು, ಕೊರಳಿಗೆ ಹಸಿರು ಮತ್ತು ಕೆಂಪುಬಣ್ಣದ

ಹೂವಿನ ಹಾರ ಮತ್ತು ಅಲಂಕೃತ ಬಂಗಾರದ ಒಡವೆಗಳನ್ನು ಧರಿಸಿದ್ದು, ಜರಿ ದಡಿಯ ಮಡಿಯನ್ನು ಧರಿಸಿದ ಚಿತ್ರವಿದೆ. ಈ ದೃಶ್ಯವು ರಂಗು ರಂಗಿನಿಂದ ಕೂಡಿದ್ದು, ಆಕರ್ಷಕವಾಗಿದೆ. ಅಲ್ಲಿಯ ಉಡುಪಿನ ವೈಭವ ಎಂಥವರನ್ನೂ ಆಕರ್ಷಿಸುವಂತಿದ್ದು, ಎಲ್ಲರ ಮೊಗದಲ್ಲೂ ಉತ್ಸಾಹ ತುಂಬಿರುವದು ಕಂಡುಬರುತ್ತದೆ.

ಹಿಂದಿನ ಚಿತ್ರ ಸಾಂಪ್ರದಾಯಿಕವಾಗಿ ರಚಿತಗೊಂಡರೆ ಈ ಚಿತ್ರ ನೈಜ ನೆಲೆಯಲ್ಲಿ ರಚನೆಗೊಂಡಿದೆ. ಆಕೃತಿಗಳೆಲ್ಲವೂ ಸಾಮೀಪ್ಯದಲ್ಲಿ ತೋರಿಸಲ್ಪಟ್ಟರೆ, ಹಿನ್ನೆಲೆಯಲ್ಲಿ ಅರಸೊತ್ತಿಗೆಗೆ ಪೂರಕವಾದ ಕಂಬಗಳು, ಕಮಾನುಗಳನ್ನು ಚಿತ್ರಿಸಲಾಗಿದೆ. ಸಾಂಪ್ರದಾಯಿಕ ಚಿತ್ರಗಳಲ್ಲಿನ ಸಂಯೋಜನೆಗೂ ಈ ಚಿತ್ರದಲ್ಲಿನ ಸಂಯೋಜನೆಗೂ ವ್ಯತ್ಯಾಸವಿದೆ. ಇಲ್ಲಿ ಜಿಗ್‌ಜಾಗ್ ಬಗೆಯಲ್ಲಿ ಆಕೃತಿಗಳನ್ನು ಸಂಯೋಜಿಸಲಾಗಿದೆ. ಚಿತ್ರ ೭ರಲ್ಲಿ ಕಂಡುಬರುವ ವರ್ಣಗಳ ಮೃದುತ್ವ ಇಲ್ಲಿ ಅಲ್ಪಮಟ್ಟಿಗೆ ಗೌಣ. ಬಿಜ್ಜಳ ದಂಪತಿಗಳ ಮತ್ತು ಇನ್ನಿತರ ಆಕೃತಿಗಳ ಸಂಭ್ರಮಾತ್ಮಕ ಭಾವಚಹರೆ ಸೂಚ್ಯವಾಗಿ ಕಂಡುಬರುತ್ತದೆ. ನೆಲಹಾಸು ದಟ್ಟವರ್ಣದಲ್ಲಿದ್ದು ಹಿನ್ನೆಲೆಗಳ ವರ್ಣಮೇಳಗಳು ಚಿತ್ರಕ್ಕೆ ಬೆಂಬಲವಾಗಿಲ್ಲವೆಂಬುದು ದಿಟ.

೨.೩.೫. ಶಿವನು ಲಿಂಗದಿಂದ ಪ್ರತ್ಯಕ್ಷನಾಗಿ ಬಸವಣ್ಣನನ್ನು ಹರಸುತ್ತಿರುವುದು

ಈ ಚಿತ್ರದಲ್ಲಿ ಭಕ್ತರು ತನ್ನನ್ನು ಸ್ತುತಿ ಮಾಡಿದುದನ್ನು ಕೇಳಿಸಿಕೊಂಡ ಶಿವನು ಲಿಂಗದಿಂದ ಒಡಮೂಡಿ, 'ಮಗನೆ, ಬಾರೋ ಬಸವರಾಜ, ನೀನು ಸುಖವಾಗಿರುವೆಯಾ? ಸುಗುಣವಂತೆಯಾದ ತೇಜಸ್ಸಿನಿಂದ ಕೂಡಿದ ವನಿತೆ ಗಂಗಾಂಬೆ ಮತ್ತು ಅಕ್ಕನಾಗಮ್ಮ ಕ್ಷೇಮದಿಂದ ಇರುವರಾ? ನಾನು ನಿಮ್ಮ ಮನಸ್ಸಿನಲ್ಲಿಯೇ ನೆಲೆಸುತ್ತೇನೆ' ಎಂದು ವಂದಿಸಿ ನಿಂತ ಆ ಮೂವರಿಗೆ ಅಭಯ ನೀಡುತ್ತಿರುವ ದೃಶ್ಯವಿದಾಗಿದೆ. ಪ್ರಸ್ತುತ ಚಿತ್ರದಲ್ಲಿ ಶಿವನು ಉದ್ಭವಿಸಿದ ಲಿಂಗಕ್ಕೆ ಹಳದಿ ಬಣ್ಣ ಲೇಪಿಸಿದ್ದು ಅದರಲ್ಲಿ ಕೆಂಪು ಬಣ್ಣದ ಚಿಕ್ಕ ಚಿಕ್ಕ ಚೌಕಾಕಾರದ ಚಿಹ್ನೆಗಳನ್ನು ಬಿಡಿಸಲಾಗಿದೆ. ಲಿಂಗಕ್ಕೆ ಎರಡು ಎಳೆಯ ರುದ್ರಾಕ್ಷಿ ಮಾಲೆಗಳನ್ನು ಹಾಕಲಾಗಿದೆ. ಲಿಂಗದ ಮುಂದೆ ಶಿವನು ಉದ್ಭವವಾದಂತೆ ಇರುವ ಚಿತ್ರದಲ್ಲಿ ಶಿವನಿಗೆ ಗಡ್ಡ ಮೀಸೆಗಳು, ತಲೆಗೆ ಕೆಂಪು ಪಂಚೆಯ ತುಂಡೊಂದನ್ನು ಕಟ್ಟಿದಂತೆ ಚಿತ್ರಿಸಲಾಗಿದೆ. ಶಿವನು ಕೂಡಾ ಇಷ್ಟಲಿಂಗವನ್ನು, ರುದ್ರಾಕ್ಷಿ ಮಾಲೆಯನ್ನು ಧರಿಸಿದ್ದು ವಿಶೇಷವೆನ್ನಿಸಿದೆ. ಶಿವನು ತನ್ನ ಕೃಪಾಕಟಾಕ್ಷದಿಂದ ಬಸವಣ್ಣನೆಡೆಗೆ ಪ್ರೀತಿಯಿಂದ ನೋಡುತ್ತಾ ಆಶೀರ್ವದಿಸುತ್ತಿದ್ದಾನೆ. ಬಸವಣ್ಣನು ವಿನೀತನಾಗಿ ಆತನ ಕರುಣೋಪದೇಶಗಳನ್ನು ಕೇಳುತ್ತಿರುವುದು ಕಂಡುಬರುತ್ತದೆ. ಬಸವಣ್ಣನು ಪಾರದರ್ಶಕವಾದ ಬಿಳಿಯ ನಿಲುವಂಗಿ ಧರಿಸಿದ್ದು, ಅದರಲ್ಲಿ ಬಿಳಿಯ ಚುಕ್ಕೆಗಳನ್ನು ಅಳವಡಿಸಲಾಗಿದೆ. ಹೆಗಲಿಗೆ ಹಳದಿಯಂಚಿನ ಕೆಂಪುಬಣ್ಣದ ಮೇಲುಹೊದಿಕೆಯನ್ನು ಸುತ್ತಿಕೊಳ್ಳಲಾಗಿದೆ. ಇಲ್ಲಿ ಬಸವಣ್ಣ ಧರಿಸಿದ ರುಮಾಲು ವಿಶೇಷವಾದ ರೀತಿಯಲ್ಲಿರುವುದು ಕಂಡುಬರುತ್ತದೆ. ಹಳದಿ ಬಣ್ಣದ ರುಮಾಲಿಗೆ ಕೆಂಪುಬಣ್ಣದ ರೇಖೆಗಳನ್ನೆಳೆದಂತೆ ಚಿತ್ರಿಸಲಾಗಿದೆ. ಆತನ ಹಿಂದೆ ಗಂಗಾಂಬಿಕೆ, ಅವಳ ಹಿಂದೆ ಅಕ್ಕನಾಗಮ್ಮ ಸಂಗಮನಾಥನಿಗೆ ತಲೆಬಾಗಿಸಿ ನಮಿಸುತ್ತಿರುವುದು ಕಂಡುಬರುತ್ತದೆ. ಒಟ್ಟು ಚಿತ್ರದ ಸ್ಥಳಾವಕಾಶವನ್ನು ಎರಡು ಭಾಗಗಳಾಗಿಸಿ, ಬಲಪಾರ್ಶ್ವದಲ್ಲಿ ಲಿಂಗೋದ್ಭವ ಶಿವ, ಎಡಪಾರ್ಶ್ವದಲ್ಲಿ ಬಸವಣ್ಣ, ಗಂಗಾಬಿಕೆ ಮತ್ತು ಅಕ್ಕನಾಗಮ್ಮನವರ ಆಕೃತಿಗಳು ಸಂಯೋಜನೆಗೊಂಡಿವೆ. ಹಿನ್ನೆಲೆಯಲ್ಲಿ ಮುಕ್ತ ಪರಿಸರ, ಮುನ್ನೆಲೆಯಲ್ಲಿ ಶಿವಲಿಂಗದ ಆಕೃತಿಗಳು

ಮೂಡಿಬಂದಿವೆ. ಶಿವಲಿಂಗಕ್ಕೆ ಚಿನ್ನದ ಲೇಪನದಂತಹ ವಿನ್ಯಾಸವಿದ್ದು ವೈಭವದ ಸಂಕೇತವಾಗಿಯೂ ಪರಿಗಣಿತವಾಗಿದೆ. ಒಟ್ಟು ಸಂಯೋಜನೆಯಲ್ಲಿ ಆಧ್ಯಾತ್ಮಿಕ ಭಾವಪರವಶತೆ ಇರುವುದರೊಂದಿಗೆ, ಎಂದಿನಂತೆ ಮೂಲವರ್ಣಗಳನ್ನು ದುಡಿಸಿಕೊಳ್ಳುವುದರೊಂದಿಗೆ ಮೃದುವರ್ಣಗಳನ್ನು ಅತ್ಯಂತ ಸಮರ್ಥವಾಗಿ ಇಲ್ಲಿ ಬಳಸಿಕೊಳ್ಳಲಾಗಿದೆ.

೨.೩.೬. ಬಸವಣ್ಣನಿಗೆ ಮಂತ್ರಿಪಟ್ಟ

"ದೂಷಕನವನೊಬ್ಬ ದೇಶವ ಕೊಟ್ಟರೆ

ಆಸೆಮಾಡಿಯವನ ಹೊರೆಯಲಿರಬೇಡಿ;

ಮಾದರ ಶಿವಭಕ್ತ ನಾದರೆ ಆತನ ಹೊರೆಯಲಿ

ಭೃತ್ಯನಾಗಿರ್ಪುದು ಕರಲೇಸಯ್ಯಾ!

ತೊತ್ತಾಗಿರ್ಪುದು ತಂದು ಕರಲೇಸಯ್ಯಾ!

ಕಾಡಸೊಪ್ಪು ತಂದು ಓಡಿನಲ್ಲಿ ಹುರಿದಿಟ್ಟು

ಕೂಡಿಕೊಂಡಪ್ಪುದು, ನಮ್ಮ ಕೂಡಲ ಸಂಗನ ಶರಣರ."[೫೯] – ಇಲ್ಲಿ ಬಸವಣ್ಣವರು ಅಧಿಕಾರದ ಆಸೆಗಾಗಿ ಹೀನರ ಆಶ್ರಯಹೊಂದಿ ಅವನ ಸೇವೆ ಮಾಡಿ ಜೀಯಾ ಎನ್ನುತ್ತ, ಬಾಳುವುದಕ್ಕಿಂತ ಹಂಗಿಲ್ಲದ ಸ್ವತಂತ್ರವಾಗಿ ಕೂಲಿ ಮಾಡಿಯಾದರು ಬದುಕುವುದೇ ನೆಮ್ಮದಿಯ ಜೀವನವೆಂದು ವಿವರಿಸುತ್ತಾರೆ. ಬಸವಣ್ಣನವರು ಹಂಗಿನ ಮಂತ್ರಿಗಿಂತ ಸ್ವತಂತ್ರದ ಕೂಲಿ ಸೇವೆ ಮುಖ್ಯ ಎಂದು ಪ್ರತಿಪಾದಿಸಿದರು. ಜೀವನದೊಡನೆ ರಾಜಕೀಯ, ಆಧ್ಮಾತಿಕ, ಪ್ರಗತಿ ಕಡೆಗೆ ಪ್ರತಿಯೊಬ್ಬನು ಗಮನೀಯವಾಗಬೇಕೆಂಬ ಭಾವವನ್ನು ತಿಳಿದವರಾಗಿದ್ದರು.

ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣನವರು ಮಂತ್ರಿಪಟ್ಟವನ್ನು ವಹಿಸಿಕೊಂಡು ಬೆಳಿಗ್ಗೆ ಬೇಗನೆ ಎದ್ದು ರಾಜ್ಯದ ಜನತೆಯ ಯೋಗಕ್ಷೇಮವನ್ನು ವಿಚಾರಿಸಲು ಮುಂದಾಗುತ್ತಾರೆ. ಇಡೀ ರಾಜ್ಯದ ವರ್ತಕರೆಲ್ಲರೂ ಸುಖವಾಗಿದ್ದಾರೆಯೇ? ಸ್ನೇಹಿತರೇ, ಪ್ರಜೆಗಳೇ ನೀವೆಲ್ಲರೂ ಧರ್ಮಮಾರ್ಗ, ಭಕ್ತಿಮಾರ್ಗದಲ್ಲಿ ನಡೆಯುತ್ತಿರುವಿರಿ ಅಲ್ಲವೆ? ಸಾಲವನ್ನು ಮಾಡದೆ ಅಚ್ಚುಕಟ್ಟಿನಿಂದ ಜೀವನವನ್ನು ನಿರ್ವಹಿಸಿಕೊಂಡು ಹೋಗುತ್ತೀರಲ್ಲವೆ? ಭೂಮಿಯನ್ನು ಪಾಲಿಸುವ ರಾಜನಲ್ಲಿ ದ್ರೋಹವನ್ನು ಮಾಡಬಾರದು ಎಂದು ಉಪದೇಶವನ್ನು ನೀಡುತ್ತಾರೆ. ಬಸವಣ್ಣನವರು ಕುಳಿತಿರುವ ಪೀಠವು ಬೆಳ್ಳಿಯದಾಗಿದ್ದು ಅಲಂಕೃತಗೊಂಡಿದೆ. ಪೀಠದ ಎರಡೂ ಬದಿಯಲ್ಲಿ ಮುತ್ತಿನ ಸರಗಳನ್ನು ತೂಗು ಬಿಡಲಾಗಿದೆ. ಪೀಠದ ಮೇಲೆ ಕೈಗಳನ್ನಿಡುವ ಜಾಗದಲ್ಲಿ ಎರಡು ಬಡಕಲಾಗಿರುವ ಸಿಂಹಗಳು ಮಲಗಿಕೊಂಡಿರುವಂತೆ ತೋರುತ್ತದೆ. ಬಸವಣ್ಣನವರು ತೋರುಬೆರಳು ಮತ್ತು ಹೆಬ್ಬೆರಳನ್ನು ಕೂಡಿಸಿ ಉಪದೇಶ ಮಾಡುವ ಭಂಗಿಯನ್ನು ಇಲ್ಲಿ ಕಾಣುತ್ತೇವೆ. ಅವರು ನೀಡುತ್ತಿರುವ ಉಪದೇಶವನ್ನು ತದೇಕಚಿತ್ತರಾಗಿ ಆಲಿಸುತ್ತಿರುವಂತೆ ಅಲ್ಲಿ ನೆರೆದವರೆಲ್ಲ

೫೯. ಪ್ರೊ. ಬಸವರಾಜ ಚೆನ್ನವೀರಪ್ಪ ಜವಳಿ : ಧರ್ಮ ಭಂಡಾರಿ ಬಸವಣ್ಣನವರು, ಪು-೧೨೭

ಬಸವಣ್ಣನವರತ್ತಲೇ ಗಮನಹರಿಸಿದ್ದಾರೆ. ಅಧಿಕಾರದ ಸಂಕೇತವಾಗಿ ಬಸವಣ್ಣನವರು ಕುಳಿತಿರುವ ಪೀಠದ ಮುಂದೆ ಕತ್ತಿಯನ್ನು ಇರಿಸಲಾಗಿದೆ. ಮತ್ತು ಇಡೀ ಚಿತ್ರವನ್ನು ಗಮನಿಸಿದರೆ ಅಲ್ಲಿ ಶರಣರು, ಮತ್ತು ಇತರ ಧರ್ಮಗಳಿಗೆ ಸೇರಿದ ವ್ಯಕ್ತಿಗಳ ಸಮಾವೇಶವಾಗಿರುವುದನ್ನು ಕಾಣಬಹುದಾಗಿದೆ.

'ವೃಷಭೇಂದ್ರ ವಿಳಾಸ'ದಲ್ಲಿರುವ ಈ ಚಿತ್ರವೂ ಸಹ ಸಾಂಪ್ರದಾಯಿಕವಾದುದು. ಇದೇ ಶೈಲಿಯ ಚಿತ್ರಗಳಿಗಿಂತ ಈ ಚಿತ್ರ ಅಲ್ಪಮಟ್ಟಿಗೆ ಸಂಯೋಜನೆಯಲ್ಲಿ ವಿಭಿನ್ನವಾಗಿ ಚಿತ್ರಿಸಲ್ಪಟ್ಟಿದೆ. ಅರಸೊತ್ತಿಗೆಯ ಒಳಾವರಣದಲ್ಲಿ ರಚಿತವಾದ ಈ ಕೃತಿಯಲ್ಲಿ ಬಸವಣ್ಣನನ್ನು ಮಧ್ಯದಲ್ಲಿ ಸಂಯೋಜಿಸಿದ್ದು, ಪ್ರಜೆಗಳ ಪ್ರತಿಮೆಗಳನ್ನು ಎರಡೂ ಪಾರ್ಶ್ವದಲ್ಲಿ ಚಿತ್ರಿಸಲಾಗಿದೆ. ಅವಾಸ್ತವವೆನ್ನಬಹುದಾದ ಇಲ್ಲಿನ ಆಕೃತಿಗಳ ಸಂಯೋಜನೆ ಸಾಂಪ್ರದಾಯಿಕವಾಗಿ ಮಹತ್ವದ್ದು. ಒಂದು ಬಗೆಯಲ್ಲಿ ಮೆಟ್ಟಿಲುಗಳ ಮೇಲೆ ಆಕೃತಿಗಳು ಸಂಯೋಜಿಸಲ್ಪಟ್ಟಿವೆ ಎಂಬ ಭಾವನೆ ಬರುತ್ತದೆ. ಇಂತಹ ಸಾಂಪ್ರದಾಯಿಕ ಚಿತ್ರಗಳಲ್ಲಿ ಇದು ಅನಿವಾರ್ಯವಷ್ಟೇ ಅಲ್ಲ, ಈ ಚಿತ್ರ ರಚಿಸಿದ ಕಲಾವಿದರಿಗೆ ಸಾಂಪ್ರದಾಯಿಕವಾಗಿ ಬಂದ ವಿದ್ಯೆಯ ಪ್ರತಿಫಲವಿದು. ಆದರೂ ಇಡೀ ಕಲಾಕೃತಿ ಮೃದುವಾದ ವರ್ಣಗಳಿಂದ ಸಂಭ್ರಮಾತ್ಮಕ ಪರಿಸರವನ್ನು ಹೊಂದಿದೆ.

೨.೩.೭. ಬಿಜ್ಜಳ ಮಹಾರಾಜನು ಬಸವಣ್ಣನನ್ನು ಎದುರುಗೊಳ್ಳುತ್ತಿರುವುದು

ಬಿಜ್ಜಳನು ಬಸವಣ್ಣನಿಗೆ ಈ ಮೊದಲು ಮಂತ್ರಿಪದವಿಯನ್ನು ಸ್ವೀಕರಿಸುವಂತೆ ಕೇಳಿದಾಗ ಅವರು ನಾವು ಶಿವಭಕ್ತರು, ಶಿವಭಕ್ತಿಯನ್ನು ಆಚರಿಸುವ ಶುದ್ಧ ಮನಸ್ಸಿನ ಆಧ್ಯಾತ್ಮ ಜೀವಿಗಳು. ರಾಜರ ಸಹಜ ಗುಣದಂತೆ ಮನಸ್ಸಿನಲ್ಲಿ ಎರಡು ಮಾತುಗಳನ್ನು ಗಂಟೆಗೊಂದರಂತೆ ಆಡುತ್ತಿರುವಿರಿ ಎಂದು ಆಕ್ಷೇಪಿಸಿದಾಗ, ಬಿಜ್ಜಳನು–ಬಸವಣ್ಣ, ನೀವು ಹೇಳಿದಂತೆ ನಾನು ನಡೆಯುವೆ. ಸರ್ವಕ್ಕೂ ಅಧಿಪತ್ಯವನ್ನು ನೀನೇ ವಹಿಸು ಎಂದು ಬಸವಣ್ಣನವರನ್ನು ಕೇಳಿಕೊಳ್ಳುವ ಸನ್ನಿವೇಶವು ಈ ಚಿತ್ರದಲ್ಲಿ ನಿರೂಪಿತವಾಗಿದೆ. ಸುಖಾಸನದಲ್ಲಿ ನಿಂತಿರುವ ಬಸವಣ್ಣನವರು ಬಿಳಿಬಣ್ಣದ ನಿಲುವಂಗಿ ಧರಿಸಿದ್ದಾರೆ. ಆ ನಿಲುವಂಗಿಗೆ ನೀಲಿ ಬಣ್ಣದ ನೆರಳಿನ ಛಾಯೆ ಬೀಳುವಂತೆ, ಹೆಗಲಿಗೆ ಕೆಂಪುಬಣ್ಣದ ಮೇಲುವಸ್ತ್ರವನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಕೆಂಪುಬಣ್ಣದ ಮೇಲುವಸ್ತ್ರದ ಮಧ್ಯದಲ್ಲಿ ಹಳದಿ ಬಣ್ಣದ ಗೆರೆಯು ಢಾಳವಾಗಿ ಕಾಣುವಂತೆ ರಚಿಸಲಾಗಿದೆ. ಬಸವಣ್ಣನವರು ಧರಿಸಿದ ಹಸಿರು ಬಣ್ಣದ ರುಮಾಲಿಗೆ ಬಿಳಿಯ ಬಣ್ಣದ ರೇಖೆಗಳಿಂದ ಅಲಂಕರಿಸಲಾಗಿದೆ. ಬಸವಣ್ಣನವರ ಹಿಂದೆ ಮರವೊಂದು ಬೆಳೆದು ನಿಂತಿದ್ದು, ಅದರ ಹಿಂದೆ ಒಂದು ತೆಂಗಿನ ಮರದ ಚಿತ್ರವನ್ನು ಬಿಡಿಸಲಾಗಿದೆ. ಬಿಜ್ಜಳ ಅರಸನ ಹಳದಿಬಣ್ಣದ ನಿಲುವಂಗಿಗೆ ಕೆಂಪುಬಣ್ಣದ ಗೆರೆಗಳನ್ನೆಳೆದು ಕೈಗಳಿಗೆ ಮಣಿರತ್ನ ಖಚಿತ ಕೈಕಟ್ಟುಗಳನ್ನು ತೊಡಿಸಿದಂತೆ ಚಿತ್ರಿಸಲಾಗಿದೆ. ತುರಾಯಿಗಳಿಂದ ಕೂಡಿದ ಬಿಜ್ಜಳನ ಕಿರೀಟ ಆತನ ಅಧಿಕಾರವನ್ನು ಸಂಕೇತಿಸುತ್ತದೆ. ಬಿಜ್ಜಳ ಅರಸನ ಹಿಂದೆ ಇಬ್ಬರಲ್ಲಿ ಒಬ್ಬ ಕೊಂಡೆಯ ಮಂಚಣ್ಣ ಮತ್ತೊಬ್ಬ ಆತ್ಮರಕ್ಷಕನಿರಬೇಕೆಂದು ತೋರುತ್ತದೆ.

ಹಿನ್ನೆಲೆಯಲ್ಲಿ ಅರಸೊತ್ತಿಗೆಯ ವಿನ್ಯಾಸಗಳಿಲ್ಲ. ಅರಸೊತ್ತಿಗೆಯ ಹೊರ ಆವರಣದ ಸನ್ನಿವೇಶವಿದು. ಆಕೃತಿಗಳಿಗೆ ಭಂಗ ಬರಬಾರದೆಂಬ ಉದ್ದೇಶದಿಂದ ಹಿನ್ನೆಲೆಯ ಪರಿಸರ ಮುಕ್ತವಾಗಿದೆ. ಆಕೃತಿಗಳನ್ನು

ಪ್ರಧಾನ ಆಶಯವಾಗಿಸುವ ನಿಟ್ಟಿನಲ್ಲಿ ಆಕೃತಿಗಳನ್ನು ಅವಕಾಶದ ಸಾಮೀಪ್ಯಕ್ಕೆ ಚಿತ್ರಿಸಲಾಗಿದೆ. ಶರಣ ಮತ್ತು ಮಹಾರಾಜನಿಗೂ ಇರುವ ದೃಶ್ಯಾತ್ಮಕ ವ್ಯತ್ಯಾಸಗಳನ್ನು ಕಲಾವಿದ ಅತ್ಯಂತ ಪ್ರಬುದ್ಧವಾಗಿ ಚಿತ್ರಿಸಿದ್ದಾನೆ. ಶರಣರಲ್ಲಿ ವಿನಮ್ರ ಕೋರಿಕೆಯ ಭಾವ ಮಹಾರಾಜನಲ್ಲಿದೆ. ಹಿಂಭಾಗದಲ್ಲಿನ ಆಕೃತಿಗಳು ಸಹ ವಿನಮ್ರಧಾರಿಗಳಾಗಿ, ಮಹಾರಾಜನಿಗೆ ಬೆಂಬಲವಾಗಿ ರಚಿತವಾಗಿವೆ. ಸಮಾನಾಂತರ ಸಂಯೋಜನೆ–ಯಡಿಯಲ್ಲಿ ರಚಿತವಾದ ಇಲ್ಲಿನ ಆಕೃತಿಗಳು ಮೃದುವಾದ ವರ್ಣಗಳಿಂದ ಕೂಡಿದ್ದು, ಅತ್ಯಂತ ಸ್ಪಷ್ಟ ಹಾಗೂ ಭಾವಪ್ರಧಾನವಾಗಿವೆ.

೨.೩೮. ಬಿಜ್ಜಳ ಮಹಾರಾಜ ಬಸವಣ್ಣನನ್ನು ಮೆರವಣಿಗೆಯೊಂದಿಗೆ ಕರೆದೊಯ್ಯುತ್ತಿರುವುದು

ಬಿಜ್ಜಳನ ಆಹ್ವಾನವನ್ನು ಮನ್ನಿಸಿ ಬಸವಣ್ಣನವರು ಮಂತ್ರಿಪದವಿ ಸ್ವೀಕರಿಸಲು ಬಿಜ್ಜಳನೊಂದಿಗೆ ಮೆರವಣಿಗೆಯಲ್ಲಿ ಸಾಗುತ್ತಿರುವ ಸನ್ನಿವೇಶವನ್ನು ಪ್ರಸ್ತುತ ಚಿತ್ರವು ಹೊಂದಿದೆ. ಬಸವಣ್ಣನವರು ಆನೆಯ ಮೇಲೂ, ಬಿಜ್ಜಳನು ಕುದುರೆಯ ಮೇಲೆ ಕುಳಿತು ಹೊರಟಿರುವಂತೆ ಚಿತ್ರಿಸಲಾಗಿದೆ. ಸಾಮಾನ್ಯವಾಗಿ ರಾಜ–ಮಹಾರಾಜರು ಆನೆಯ ಮೇಲೆ ಮೆರವಣಿಗೆ ಹೋಗುವುದು ಸಾಮಾನ್ಯ. ಆದರೆ ಇಲ್ಲಿ ಬಿಜ್ಜಳ ಮಹಾರಾಜನು ತಾನು ಆನೆಯ ಮೇಲಿನ ಅಂಬಾರಿಯಲ್ಲಿ ಹೋಗುವುದರ ಬದಲು ಬಸವಣ್ಣನವರನ್ನು ಅಲ್ಲಿ ಕೂಡಿಸಿ ತಾನು ಮಂತ್ರಿಯು ಪ್ರಯಾಣಿಸುವ ಕುದುರೆಯ ಮೇಲೆ ಕುಳಿತಿರುವುದು ವಿಶೇಷವಾಗಿದೆ. ಇದು ಬಸವಣ್ಣನವರಿಗೆ ಬಿಜ್ಜಳನು ತೋರಿರುವ ಉನ್ನತ ಮಟ್ಟದ ಗೌರವದ ಸಂಕೇತವಾಗಿರುವುದು ಸ್ಪಷ್ಟವಾಗಿದೆ. ಬಸವಣ್ಣನವರು ಕುಳಿತಿರುವ ಆನೆಯು ಅಲಂಕೃತಗೊಂಡಿದೆ. ಅದರ ಕೊರಳಿನಲ್ಲಿ ಬಂಗಾರದ ಆಭರಣಗಳ ಜೊತೆಗಿರುವ ಗಂಟೆಯು ಗಮನ ಸೆಳೆಯುತ್ತದೆ. ಆನೆಯ ಮೇಲೆ ಹಾಕಿರುವ ಥಡಿಯು ವಿವಿಧ ಬಣ್ಣಗಳಿಂದ ಚಿತ್ರಿತವಾಗಿದೆ. ಬಸವಣ್ಣನವರು ಧರಿಸಿದ ಬಿಳಿಬಣ್ಣದ ನಿಲುವಂಗಿ ಮತ್ತು ತಲೆಯ ಪೇಟಕ್ಕೆ ಕೆಂಪುಬಣ್ಣದ ಪಟ್ಟಿಗಳನ್ನು ಬಳಿಯಲಾಗಿದೆ. ಬಸವಣ್ಣನವರು ಮತ್ತು ಬಿಜ್ಜಳ ಮಹಾರಾಜರಿಬ್ಬರನ್ನೂ ತಮ್ಮ ಬಲಗೈಯಲ್ಲಿ ಒಂದೊಂದು ಗುಲಾಬಿ ಹೂವನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಆದರೆ ಅವರಿಬ್ಬರು ಧರಿಸಿದ ಕೊರಳ ಮಾಲೆಗಳು ಮಾತ್ರ ಒಂದು ಇಷ್ಟಲಿಂಗವಾಗಿ ಮತ್ತೊಂದು ಕಂಠೀಹಾರವಾಗಿ ಭಿನ್ನತೆಯನ್ನು ತೋರುತ್ತಿವೆ. ಬಸವಣ್ಣನ ಪಕ್ಕದಲ್ಲಿ ಅಂಗರಕ್ಷಕರ ಪಡೆ ಇರುವುದನ್ನು ಗಮನಿಸಬಹುದಾಗಿದೆ. ಉಳಿದ ಜನರು ಗೀತವಾದ್ಯಗಳನ್ನು ನುಡಿಸುತ್ತ ಸಂಭ್ರಮಿಸಿ ಮೆರವಣಿಗೆ ಹೋಗುತ್ತಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಚಿತ್ರದಲ್ಲಿ ರಾಜನಿಗಿರುವ ಸ್ಥಾನಮಾನವನ್ನು ಬಸವಣ್ಣನವರಿಗೆ ಬಿಜ್ಜಳನು ನೀಡಿರುವುದು ಎದ್ದು ತೋರುತ್ತದೆ. ಬಯಲಿನಲ್ಲಿ ಛತ್ರ–ಚಾಮರಗಳನ್ನು ಹಿಡಿದು, ಊದುತ್ತಾ, ಬಾರಿಸುತ್ತಾ ಬರುತ್ತಿರುವ ಮೆರವಣಿಗೆಯು ಹುಲ್ಲುಹಾಸಿಗೆಯ ಸುಂದರ ನಿಸರ್ಗದಲ್ಲಿ ಸಾಗುತ್ತಿರುವಂತೆ ಚಿತ್ರಿಸಲಾಗಿದೆ.

'ವೃಷಭೇಂದ್ರ ವಿಳಾಸ' ಸದ್ಗ್ರಂಥದಲ್ಲಿ ಪ್ರಕಟವಾಗಿರುವ ಈ ಚಿತ್ರವೂ ಸಾಂಪ್ರದಾಯಿಕ ನೆಲೆಯಲ್ಲಿ ರಚನೆಗೊಂಡಿರುವುದು. ಮೊಘಲ್ ದೊರೆಗಳು ತಮ್ಮ ಕೈಯಲ್ಲಿ ಹೂವೊಂದನ್ನು ಹಿಡಿದುಕೊಂಡ ಹಾಗೆ ಬಸವಣ್ಣ ಮತ್ತು ಬಿಜ್ಜಳ ದೊರೆ ಇವರು ತಮ್ಮ ಕೈಯಲ್ಲಿ ಹೂವೊಂದನ್ನು ಹಿಡಿದುಕೊಂಡಿರುವರು.

ಮೊಘಲ್ ಶೈಲಿಯ ಕಿರುರೂಪದ ಚಿತ್ರಗಳನ್ನು ನೆನಪಿಸುತ್ತದೆ. ಇಲ್ಲಿನ ಸಂಯೋಜನೆಯು ಹಿಂದಿನ ಚಿತ್ರದಲ್ಲಿನಂತೆ ಸಮಾನಾಂತರ ಅಗಲಕ್ಕೆ ಪೂರಕವಾಗಿ ಚಿತ್ರಿತಗೊಂಡಿದೆ. ಸಾಂಪ್ರದಾಯಿಕ ಶೈಲಿಯ ಅಂಗರಚನೆಯ ಪಕ್ವತೆಯೊಂದಿಗೆ ದ್ವಿತೀಯ ವರ್ಗದ ವರ್ಣಗಳೊಂದಿಗೆ ಮೃದುವಾದ ವರ್ಣಮೇಳವೂ ಈ ಚಿತ್ರದ ಮಹತಿಯನ್ನು ಹೆಚ್ಚಿಸಿದೆ.

೨.೩.೯. ಗೂಢಲಿಪಿಯನ್ನು ಓದುತ್ತಿರುವ ಬಸವಣ್ಣ–೧

ಆಕಾಶದಿಂದ ಬಿದ್ದ ಗೂಢಲಿಪಿ ಪತ್ರವನ್ನು ಬಿಜ್ಜಳನ ಆಸ್ಥಾನದಲ್ಲಿರುವ ವಿದ್ವಾಂಸರು ನಮ್ಮಿಂದ ಈ ನಿಗೂಢ ಲಿಪಿಯನ್ನು ಓದಲು ಆಗುವುದಿಲ್ಲವೆಂದು ರಾಜನಲ್ಲಿ ನಿವೇದಿಸಿಕೊಳ್ಳುತ್ತಾರೆ. ಆಗ ಬಿಜ್ಜಳನು ಬಸವಣ್ಣನವರನ್ನು ಆ ಲಿಪಿಯನ್ನು ಓದಲು ಕೇಳಿಕೊಂಡಾಗ ಅವರು ಅದನ್ನು ಓದಿ ಹೇಳುತ್ತಾರೆ. 'ಶ್ರೀಮತ್ ಮಹದೈಶ್ವರ್ಯವನ್ನು ಹೊಂದಿರುವ ಬಿಜ್ಜಳರಾಯನಿಗೆ ಮಹಾಕೈಲಾಸವಾಸಿಯಾದ ಶಿವನು ಲಿಪಿಯನ್ನು ಬರೆಸಿ ಈ ಭೂಮಿಗೆ ಕಳುಹಿಸಿಕೊಟ್ಟಿರುತ್ತಾನೆ. ಇದರಲ್ಲಿ ಬರೆದ ವಿಷಯವೆಂದರೆ, ಈ ಭೂಮಿಯಲ್ಲಿ ಸಂತೋಷವಾಗಲಿದೆ. ಸಕಲ ಸಂಪತ್ತು ದೊರೆಯಲಿದೆ. ಸೀಮೆಯಲ್ಲಿ (ಒಂದು ಪ್ರದೇಶದಲ್ಲಿ) ನಲವತ್ತೆಂಟು ಯೋಜನ ದೂರದಲ್ಲಿ ಅರಸನ ಗದ್ದುಗೆಯ ಕೆಳಗೆ ಏಳು ಕೊಪ್ಪರಿಕೆ ಹೊನ್ನು ಮತ್ತು ಮುತ್ತಿನಿಂದ ಕೂಡಿದ ಗದ್ದುಗೆ ಇರುವುದು' ಎಂದು ಓದಿ ಹೇಳುತ್ತಾನೆ. ಪ್ರಸ್ತುತ ಚಿತ್ರದಲ್ಲಿ ಬಸವಣ್ಣನವರನ್ನು ಪಾರದರ್ಶಕ ಬಿಳಿಬಣ್ಣದ ನಿಲುವಂಗಿ, ಕೆಂಪು ಬಣ್ಣದ ಮೇಲುಹೊದಿಕೆ, ಬಣ್ಣದ ಪೇಟವನ್ನು ಧರಿಸಿ, ಕೈಯಲ್ಲಿ ಗೂಢಲಿಪಿಯ ಪತ್ರವನ್ನು ಹಿಡಿದು ಓದಿ ಅದರ ಅರ್ಥವನ್ನು ಬಿಜ್ಜಳನಿಗೆ ತಿಳಿಸುತ್ತಿರುವಂತೆ ಚಿತ್ರಿಸಲಾಗಿದೆ. ಬಸವಣ್ಣನವರು ಹೇಳುವ ಪ್ರತಿಯೊಂದು ಮಾತನ್ನೂ ತುಂಬ ಆಸಕ್ತಿಯಿಂದ ಬಿಜ್ಜಳ ಮತ್ತು ಅಲ್ಲಿರುವ ಆಸ್ಥಾನದ ಜನರು ಗಮನವಿಟ್ಟು ಕೇಳುತ್ತಿರುವಂತೆ ಇಲ್ಲಿ ಚಿತ್ರಿಸಲಾಗಿದೆ.

ಒಟ್ಟು ಸ್ಥಳಾವಕಾಶವನ್ನು ಲಂಬವಾಗಿ ಮೂರು ವಿಭಾಗಗಳಾಗಿಸಿ ವಿಂಗಡಿಸಿಕೊಂಡ ಈ ಚಿತ್ರದಲ್ಲಿ ಸುವರ್ಣಖಚಿತ ಸಿಂಹಾಸನದಲ್ಲಿ ಕುಳಿತ ಬಿಜ್ಜಳ, ಬೆಳ್ಳಿಯ ಸಿಂಹಾಸನದಲ್ಲಿ ಕುಳಿತ ಬಸವಣ್ಣ, ಬಲಪಾರ್ಶ್ವದಲ್ಲಿ ವಿನೀತರಾಗಿ ನಿಂತಿರುವ ಆಸ್ಥಾನ ಪಂಡಿತರ ಆಕೃತಿಗಳ ಜಿಗ್ ಜಾಗ್ ರೀತಿಯ ಸಂಯೋಜನೆಯು ಈ ಚಿತ್ರದಲ್ಲಿದೆ. ಅರಸೊತ್ತಿಗೆಯ ವೈಭವವನ್ನು ಸೂಚಿಸುವಂತಹ ಕಂಭಗಳ ಮತ್ತು ಕಮಾನುಗಳ ವಿನ್ಯಾಸದ ಒಳಾವರಣದಲ್ಲಿ ಆಕೃತಿಗಳನ್ನು ಸಂಯೋಜಿಸಲಾಗಿದೆ. ದ್ವಿತೀಯ ವರ್ಣಗಳೊಂದಿಗೆ ಚತುರ್ಥ, ಪಂಚಮ ವರ್ಣಗಳನ್ನು ಅತ್ಯಂತ ಸಮರ್ಥವಾಗಿ ದುಡಿಸಿಕೊಂಡ ಈ ಸಾಂಪ್ರದಾಯಿಕ ಶೈಲಿಯ ಚಿತ್ರ ಒಂದು ಅರಸೊತ್ತಿಗೆಯ ವೈಭವದ ಪ್ರತೀಕವಾಗಿದೆ.

ಗೂಢಲಿಪಿಯನ್ನು ಓದುತ್ತಿರುವ ಬಸವಣ್ಣ–೨

"ನಾಡಿನ ಸಂಸ್ಕೃತಿಯ ಜೀವಂತಿಕೆಯ ಹಿಂದೆ ಹಲವು ವ್ಯಕ್ತಿಗಳ ಕಾಯಕದ ಶಕ್ತಿ ಕಾಣಬರುತ್ತದೆ. ಬದುಕನ್ನೇ ಕಲೆ ಸಂಸ್ಕೃತಿಗಾಗಿ ಮೀಸಲಾಗಿರಿಸಿದ ಹಲವಾರು ಜನ ಕಲಾವಿದರಲ್ಲಿ ಎಂ.ಎ. ಚೆಟ್ಟಿಯವರು

ಪ್ರಮುಖರು. ಚಿತ್ರಕಲೆಗಾಗಿಯೇ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಖ್ಯಾತಿಯನ್ನು ಹೊಂದಿದವರು. ವೈವಿಧ್ಯಮಯವಾದ ಕಲಾಕೃತಿಗಳಿಂದ ಜನಮನವನ್ನು ಸೂರೆಗೊಂಡ ಈ ಶತಮಾನದ ಒಬ್ಬ ಗಮನಾರ್ಹ ಕಲಾವಿದರು. ಸಾವಿರಾರು ಕಲಾಕೃತಿಗಳನ್ನು ನಿರ್ಮಿಸಿದ ದಣಿವರಿಯದ ಪ್ರತಿಭೆ ಶ್ರೀ ಚೆಟ್ಟಿಯವರದು."[೬೦] ಕಲಾತಪಸ್ವಿಯೆಂದೆ ಖ್ಯಾತರಾದ ಎಂ. ಎ. ಚೆಟ್ಟಿಯವರು ಜಲವರ್ಣ ಮಾಧ್ಯಮದ ೩೦"x೨೨" ಅಳತೆಯಲ್ಲಿ ಈ ಕಲಾಕೃತಿಯನ್ನು ರಚಿಸಿದ್ದಾರೆ.

ಪ್ರಸ್ತುತ ಚಿತ್ರದಲ್ಲಿ ಗೂಢಲಿಪಿಯನ್ನು ಬಸವಣ್ಣನವರು ಓದುತ್ತಿರುವುದನ್ನು ಕಾಣುತ್ತೇವೆ. ಜರತಾರಿ ಅಂಚಿನ ಬಿಳಿ ನಿಲುವಂಗಿ, ಸೊಂಟಕ್ಕೆ ಕಟ್ಟಿದ ಮೇಲುಹೊದಿಕೆ, ಗೂಢಲಿಪಿಯನ್ನು ಗಾಢವಾದ ದೃಷ್ಟಿಯಿಟ್ಟು ಬಸವಣ್ಣನವರು ಓದುತ್ತಿರುವಂತೆ ಚಿತ್ರಿಸಲಾಗಿದೆ. ಬಸವಣ್ಣನವರು ನಿಂತಿರುವ ಜಾಗವನ್ನು ಅಲಂಕೃತಗೊಳಿಸಲಾಗಿರುವುದು ವಿಶೇಷವಾಗಿದೆ. ಕೆಂಪುವಸ್ತ್ರಗಳನ್ನು ಮತ್ತು ಬಂಗಾರದ ಕಿರೀಟವನ್ನು ಧರಿಸಿದ ಬಿಜ್ಜಳ ಮಹಾರಾಜ ಎತ್ತರದ ಸಿಂಹಾಸನದಲ್ಲಿ ಕುಳಿತು ತದೇಕಚಿತ್ತದಿಂದ ಬಸವಣ್ಣನವರು ಓದುವುದನ್ನು ಕೇಳುತ್ತಿರುವಂತೆ ಮತ್ತು ಅಲ್ಲಿ ನೆರೆದಿರುವ ಆಸ್ಥಾನದ ವಿವಿಧ ವರ್ಗದ ಅಧಿಕಾರಿಗಳು, ಪುರಜನರು ಆಶ್ಚರ್ಯ, ಅದ್ಭುತಗಳನ್ನು ಕಂಡವರಂತೆ ಗಮನಿಸುತ್ತಿರುವುದನ್ನು ಇಲ್ಲಿ ಕಾಣುತ್ತೇವೆ. ಸಿಂಹಾಸನದ ಮೆಟ್ಟಿಲುಗಳಿಗೆ ಕಡುಕಂದುಬಣ್ಣದ ಮೆಟ್ಟಿಲುಹಾಸನ್ನು, ಮತ್ತೆ ಮಹಾರಾಜನು ತನ್ನ ಕಾಲುಗಳನ್ನು ಚಾಚಿಕೊಳ್ಳಲು ಚಿಕ್ಕ ಹಸಿರುಹೊದಿಕೆಯ ಪೀಠವನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದೆ. ರಾಜ ಸಭಾಂಗಣದ ಗೋಡೆಯಲ್ಲಿ ಜಾಲಂಧರಗಳನ್ನುಳ್ಳ ನಾಲ್ಕು ಕಿಟಕಿಗಳನ್ನು ರಚಿಸಲಾಗಿದೆ. ಈ ಚಿತ್ರದಲ್ಲಿ ಬಸವಣ್ಣನವರು ಓರೆಯಾಗಿ ನಿಂತುಕೊಂಡು ಓದುವಲ್ಲಿ ಮಗ್ನರಾಗಿರುವಂತೆ ಕಂಡುಬರುತ್ತದಾದರೂ ಅವರ ಆಕೃತಿ ತುಸು ತೆಳುವಾಗಿಯೂ ಮತ್ತು ಉದ್ದದಲ್ಲಿ ಹೆಚ್ಚಾಗಿರುವಂತೆಯೂ ಕಂಡುಬರುತ್ತದೆ. ಉಳಿದಂತೆ ರಾಜಸಭೆಯಲ್ಲಿ ಸೇರಿರುವ ಸಭಾಸದರು ಔಚಿತ್ಯಪೂರ್ಣವಾಗಿ ಮೂಡಿಬಂದಿದ್ದಾರೆ. ವರ್ತುಲಾಕಾರದ ವೈಭವರಹಿತ ಅರಮನೆಯ ರಾಜಸಭೆಯಲ್ಲಿ ಬಸವಣ್ಣನವರು ಗೂಢಲಿಪಿಯನ್ನು ಓದುತ್ತಿರುವ ದೃಶ್ಯವನ್ನು ಯಥಾದರ್ಶನ ಆಚರಣೆಯಲ್ಲಿ, ಅತ್ಯಂತ ಪಕ್ವವಾಗಿ ಚಿತ್ರಿಸಲಾಗಿದೆ. ಇಡೀ ಚಿತ್ರದಲ್ಲಿ ಅತ್ಯಂತ ಮೃದುವಾದ, ವಿಶೇಷವಾಗಿ ತೆಳುವಾದ ವರ್ಣಸಂಯೋಜನೆ ಕಂಡುಬರುತ್ತದೆ. ನೈಜ ಬಗೆಯಲ್ಲಿ ಚಿತ್ರಿಸಲಾದ ದೃಶ್ಯಾತ್ಮಕವಾದ ಸೆಳಕುಗಳನ್ನು ಆಕೃತಿಗಳಲ್ಲಿ ಕಾಣಬಹುದಾಗಿದೆ. ಅಕಾಡೆಮಿಕ್ ತಂತ್ರವನ್ನು ಬಳಸಿಕೊಂಡು ಜಲವರ್ಣ ಮಾಧ್ಯಮದಲ್ಲಿ ಚಿತ್ರಿತಗೊಂಡ ಈ ಚಿತ್ರ ಮೃದುತ್ವದ ದೃಷ್ಟಿಯಿಂದ ಗಮನಸೆಳೆಯುತ್ತದೆ.

ಗೂಢಲಿಪಿಯನ್ನು ಓದುತ್ತಿರುವ ಬಸವಣ್ಣ–೩

ಪ್ರಸ್ತುತ ಚಿತ್ರ ಬಸವಣ್ಣನವರು ಗೂಢಲಿಪಿಯನ್ನು ಓದಿ ಹೇಳುತ್ತಿರುವ ಸನ್ನಿವೇಶವನ್ನು ಹೊಂದಿದೆ. ಬಸವಣ್ಣನವರು ಗೂಢಲಿಪಿಯನ್ನು ಒಮ್ಮೆ ನೋಡುತ್ತಲೇ ಅದರ ಅರ್ಥವನ್ನು ಗ್ರಹಿಸಿ ಬಿಜ್ಜಳ ಮಹಾರಾಜನಿಗೆ ತಿಳಿಸುತ್ತಿದ್ದಾರೆ. ಅದರ ಅರ್ಥವನ್ನು ಆಸ್ಥಾನದ ಇತರರು ಕುತೂಹಲದಿಂದ ಕೇಳುತ್ತಿರುವುದನ್ನು ಕಾಣುತ್ತೇವೆ.

---

೬೦. ಡಾ. ಲಕ್ಷ್ಮೀದೇವಿ ಗವಾಯಿ : ಕಲಾವಿದ ಎಂ.ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು – ಒಂದು ಅಧ್ಯಯನ, ಪು–೪

ರಾಜನ ಎದುರಿನಲ್ಲಿ ಕುಳಿತವರು ಸಾಮಾನ್ಯವಾಗಿ ಕಾಲಮೇಲೆ ಕಾಲನ್ನು ಹಾಕಿ ಕುಳಿತುಕೊಳ್ಳುವುದು ಶಿಷ್ಟಾಚಾರಕ್ಕೆ ಹೊರತಾದುದು. ಇಲ್ಲಿ ಒಬ್ಬ ವ್ಯಕ್ತಿ ಮಾತ್ರ ಹಾಗೆ ಕುಳಿತಿರುವುದನ್ನು ಕಾಣಬಹುದು. ಹಾಗೆಯೇ ಆಸ್ಥಾನದಲ್ಲಿ ಲಿಪಿಯನ್ನು ಓದುತ್ತಿರುವ ಬಸವಣ್ಣನವರು ಮತ್ತು ಇತರ ಆಸ್ಥಾನಿಕರು ಕಾಲಿಗೆ ಪಾದರಕ್ಷೆಗಳನ್ನು ಧರಿಸಿರುವ ಅಪರೂಪದ ಸನ್ನಿವೇಶವನ್ನು ಇಲ್ಲಿ ಕಾಣಬಹುದು. ಈ ದೃಶ್ಯದಲ್ಲಿ ಬಿಜ್ಜಳನ ಬದಿಯಿಂದ ನೋಟ ಹೊರಟಿರುವುದರಿಂದ ಬಿಜ್ಜಳ ಮತ್ತು ಅವನು ಕೂತ ಸಿಂಹಾಸನವು ಚಿತ್ರದಲ್ಲಿ ತುಂಬಾ ದೊಡ್ಡದಾಗಿ ಮತ್ತು ಅವನಿಂದ ದೂರವಿರುವ ವ್ಯಕ್ತಿ–ವಸ್ತುಗಳು ಸಣ್ಣದಾಗಿಯೂ ಚಿತ್ರಿತವಾಗಿರುವುದರಿಂದ ಯಥಾದರ್ಶನ ತತ್ವವಿಲ್ಲಿ ಮೊದಲ ನೋಟಕ್ಕೆ ಎದ್ದುಕಾಣುತ್ತದೆ.

ಚಿತ್ರದ ಪ್ರಮುಖ ಆಶಯವಾಗಿ ಬಿಜ್ಜಳ ಮಹಾರಾಜ, ಎರಡನೆಯ ಆಶಯವಾಗಿ ಬಸವಣ್ಣ, ಮೂರನೆಯ ಆಶಯವಾಗಿ ಆಸ್ಥಾನದ ಪಂಡಿತರು ಹೀಗೆ– ಅರ್ಧ ವರ್ತುಲಾಕಾರದಲ್ಲಿ ಇಲ್ಲಿನ ಆಕೃತಿಗಳು ಸಂಯೋಜನೆಗೊಂಡಿವೆ. ಮಾನವ ಅಂಗರಚನೆಯಲ್ಲಿ ಪ್ರಬುದ್ಧತೆ, ಮೃದುವಾದ ವರ್ಣಗಳ ಮೇಳೈಸುವಿಕೆ, ಸಂದರ್ಭಕ್ಕೆ ತಕ್ಕ ಹಾಗೆ ಆಕೃತಿಗಳಲ್ಲಿ ಚಲನಶೀಲತೆ, ಹಿನ್ನೆಲೆಯಲ್ಲಿ ಅರಸೊತ್ತಿಗೆಯ ವಾಸ್ತುವಿನ್ಯಾಸದೊಂದಿಗೆ ಬಸವಣ್ಣನತ್ತ ಇತರ ಆಕೃತಿಗಳು ದೃಷ್ಟಿಯನ್ನು ನೆಟ್ಟಿವೆ. ಇಂತಹ ರಚನೆಗಳು ಕಾಮಿಕ್ಸ್ ಮತ್ತು ಚಿಕ್ಕಮಕ್ಕಳ ನಡುವಿನ ಸಂಬಂಧವನ್ನು ಗಟ್ಟಿಗೊಳಿಸುವುದಲ್ಲದೇ, ಹೆಚ್ಚು ಆಪ್ಯಾಯಮಾನವಾಗುತ್ತವೆ.

೨.೩.೧೦. ನಿಧಿಶೋಧನೆ–೧

ಬಸವಣ್ಣನವರು ಓದಿದ ಗೂಢಲಿಪಿಯ ಮಾತಿನ ಅರ್ಥವನ್ನು ಪರೀಕ್ಷಿಸಬೇಕೆಂದು ಬಿಜ್ಜಳನು ತನ್ನ ಸಿಂಹಾಸನದ ಕೆಳಗೆ ನಿಧಿಯನ್ನು ಶೋಧಿಸಲು ಆಜ್ಞೆ ಮಾಡುತ್ತಾನೆ. ಪ್ರಸ್ತುತ ಚಿತ್ರವು ಸಿಂಹಾಸನವಿದ್ದ ಜಾಗದಲ್ಲಿ ಹಾರೆಗಳಿಂದ ಅಗೆಯುತ್ತಿರುವುದನ್ನು ಒಳಗೊಂಡಿದೆ. ಬಿಜ್ಜಳ ಮಹಾರಾಜ ಮತ್ತು ಬಸವಣ್ಣನವರು ಅಲ್ಲದೆ ಇತರ ಕೆಲವೇ ಪ್ರಮುಖ ಆಡಳಿತ ವರ್ಗದವರು ನಿಧಿಶೋಧವನ್ನು ಕುತೂಹಲದಿಂದ ನೋಡುತ್ತಿದ್ದಾರೆ. ಸಿಂಹಾಸನವನ್ನು ಬದಿಗಿರಿಸಿ ಎಲ್ಲರೂ ನಿಂತಿರುವುದನ್ನು ಇಲ್ಲಿ ಕಾಣಬಹುದು. ರಾಜನ ಸಿಂಹಾಸನದ ಮೇಲೆ ಹಾಸಿದ್ದ ಕೆಂಪುಹಾಸನ್ನು ಸುರುಳಿ ಸುತ್ತಿ ಕೆಳಗೆ ಇಟ್ಟಿರುವಂತೆ ಇಲ್ಲಿ ಚಿತ್ರಿಸಲಾಗಿದೆ. ಮಹಾರಾಜ ಬಿಜ್ಜಳನ ಆಕೃತಿಯನ್ನು ಭೀಮಕಾಯವನ್ನು ಹೋಲುತ್ತಿದ್ದು, ಬಸವಣ್ಣನವರ ಆಕೃತಿಯಲ್ಲಿ ಶರಣಸಂಪನ್ನತೆ ಕಂಡುಬರುತ್ತದೆ.

ನಿಗೂಢವಾದ ಪತ್ರವನ್ನು ಓದಿದ ಬಸವಣ್ಣನ ಅಣತಿಯಂತೆ ಬಿಜ್ಜಳ ತನ್ನ ಸಿಂಹಾಸನದ ಕೆಳಗಿನ ನೆಲವನ್ನು ಅಗೆಸುವ ಈ ದೃಶ್ಯದಲ್ಲಿ ಮಾನವಾಕೃತಿಗಳು ಅತ್ಯಂತ ಪ್ರಬುದ್ಧವಾಗಿ ಚಿತ್ರಿತವಾಗಿವೆ. ಹಾಗೆಯೇ ಅರಸೊತ್ತಿಗೆಯ ವಿನ್ಯಾಸಗಳು ಸಹ ಯಥಾದರ್ಶನದ ನೀತಿಯನ್ವಯ ಸಮರ್ಪಕವಾಗಿ ಚಿತ್ರಿತವಾಗಿವೆ. ಕಪ್ಪುಶಾಯಿಯನ್ನೇ ಆಕೃತಿಗಳ ನೆರಳನ್ನಾಗಿ ದುಡಿಸಿಕೊಳ್ಳುವುದು ಕಾಮಿಕ್ಸ್‌ನ ರಚನೆಗಳ ವಿಶೇಷ. ಇಲ್ಲಿನ ಆಕೃತಿಗಳ ಕಾರ್ಯದಲ್ಲಿ ನಿರತವಾದ ಆಂಗಿಕ ರಚನೆಯಿದೆ. ಆಕೃತಿಗಳಲ್ಲಿ ಚಲನಶೀಲತೆಯಿದ್ದರೆ ಮಾತ್ರ ಯಶಸ್ವಿ ಕೃತಿಯಾಗುತ್ತದೆ ಎಂಬುದಕ್ಕೆ ಈ ಚಿತ್ರ ಸಾಕ್ಷಿಯಾಗುತ್ತದೆ.

ನಿಧಿಶೋಧನೆ-೨

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ, ತೈಲವರ್ಣ ಮಾಧ್ಯಮದ ಈ ಕಲಾಕೃತಿಯು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಿಜ್ಜಳನ ಆಜ್ಞೆಯಂತೆ ಬಸವಣ್ಣನವರು ಹೇಳಿದ ಮಾತನ್ನು ಪರೀಕ್ಷಿಸಲು ತನ್ನ ಸಿಂಹಾಸನವನ್ನು ಬದಿಗಿರಿಸಿ ಆ ಸ್ಥಳದಲ್ಲಿ ನಿಧಿಯನ್ನು ಶೋಧಿಸಲು ತೊಡಗುತ್ತಾರೆ. ಪರಿಣಾಮವಾಗಿ ಎರಡು ಪೆಟ್ಟಿಗೆಗಳು ಶೋಧನೆಯ ಸಂದರ್ಭದಲ್ಲಿ ದೊರೆಯುತ್ತವೆ. ಒಂದು ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ ಚಿನ್ನದ ಆಭರಣಗಳ ರಾಶಿಯಿರುವ ಚಿತ್ರಣವಿದೆ.

ಪೆಟ್ಟಿಗೆಯ ಮುಚ್ಚಳವನ್ನು ಸೇವಕನೊಬ್ಬನು ತೆರೆದು ನೋಡುತ್ತಿರುವಂತೆ, ಅದನ್ನು ಬಸವಣ್ಣನವರು ಮತ್ತು ಬಿಜ್ಜಳ ಮಹಾರಾಜರಿಬ್ಬರೂ ಕುತೂಹಲದಿಂದ ನೋಡುತ್ತಿರುವ ಸನ್ನಿವೇಶವನ್ನು ಇಲ್ಲಿ ಚಿತ್ರಿಸಲಾಗಿದೆ. ಬಸವಣ್ಣನನ್ನು ಬಂಗಾರದ ಜರಿಯುಳ್ಳ ನಿಲುವಂಗಿ, ಪಂಚೆಯನ್ನು ಧರಿಸಿ ಬರಿಗಾಲಲ್ಲಿ ನಿಂತಿರುವಂತೆ ಚಿತ್ರಿಸಲಾಗಿದೆ. ತಾವು ಓದಿದ ಆ ಗೂಢಲಿಪಿ ಪತ್ರವನ್ನು ತಮ್ಮ ಎದೆಗೆ ಅವುಚಿ ಹಿಡಿದಿದ್ದು, ಅವರ ತಲೆಯ ಹಿಂದೆ ಸ್ಪಷ್ಟವಾದ ಮತ್ತು ಗಾತ್ರದಲ್ಲಿ ಚಿಕ್ಕದಾದ ಪ್ರಭಾವಳಿಯನ್ನು ನಿರ್ಮಿಸಲಾಗಿದೆ. ಅವರ ಪಕ್ಕದಲ್ಲಿ ಬಿಜ್ಜಳ ಮಹಾರಾಜನು ಬಂಗಾರದ ಜರಿಯುಳ್ಳ ತಿಳಿನೀಲಿ ಬಣ್ಣದ ನಿಲುವಂಗಿ ಮತ್ತು ಗುಲಾಬಿ ಬಣ್ಣದ ಪಂಚೆಯನ್ನು ಧರಿಸಿ, ಕಾಲಿಗೆ ಚಪ್ಪಲಿಗಳನ್ನು ಧರಿಸಿದ್ದಾನೆ. ತಲೆಯಲ್ಲಿ ಬಂಗಾರದ ಕಿರೀಟವಿದ್ದು ಹಣೆಗೆ ಹಚ್ಚಿದ ವಿಭೂತಿ ಅತ್ಯಂತ ಸ್ಪಷ್ಟವಾಗಿ ಎದ್ದುತೋರುತ್ತದೆ. ಪೆಟ್ಟಿಗೆಯಲ್ಲಿರುವ ನಿಧಿಯನ್ನು ನೋಡಿದ ಆತನ ಮುಖವು ಪ್ರಸನ್ನವಾಗಿರುವುದು ಕಂಡುಬರುತ್ತದೆ. ಬಸವಣ್ಣನವರು ಮತ್ತು ಬಿಜ್ಜಳ ಇಬ್ಬರ ಹಿಂದೆ ನೇಪಥ್ಯದಲ್ಲಿ ಆಸ್ಥಾನದ ಕೆಲವು ಜನ ನಿಂತಿರುವುದು ಕಾಣಿಸುತ್ತದೆ. ಕಮಾನಿನೊಳಗಿರುವ ನಿಧಿಯನ್ನು ಅಗೆಯುತ್ತಿರುವ ಸನ್ನಿವೇಶದಲ್ಲಿ ಐದಾರು ಜನರು ಪಾಲ್ಗೊಂಡಿದ್ದಾರೆ. ಇಬ್ಬರು ಮತ್ತೊಂದು ಪೆಟ್ಟಿಗೆಯನ್ನು ಎತ್ತಿ ಹಿಡಿದು ನಿಂತಿದ್ದಾರೆ. ಭಾರವಾದ ಪೆಟ್ಟಿಗೆಯನ್ನು ಹಿಡಿದಾಗ ಯಾವ ಆಂಗಿಕ ಪ್ರಕ್ರಿಯೆ ಇರುತ್ತದೆಯೋ ಅಂಥ ಭಾವವನ್ನು ಚಿತ್ರದಲ್ಲಿ ಮೂಡಿಸಲಾಗಿದೆ. ನೆಲಕ್ಕೆ ಹಸಿರುಹಾಸನ್ನು ಹಾಕಿರುವುದು ಗಮನ ಸೆಳೆಯುತ್ತದೆ. ಕಮಾನಿನ ಎರಡೂ ಬದಿಯಲ್ಲಿರುವ ಹಸಿರುಬಣ್ಣದ ಜೋಡಿ ಕಂಬಗಳು ಚಿತ್ರದ ಸೌಂದರ್ಯಕ್ಕೆ ಮೆರುಗು ನೀಡಿವೆ. ನೇಪಥ್ಯದಲ್ಲಿ ಎತ್ತರವಾದ ಮೂರು ಕಮಾನುಗಳಿಂದ ಕೂಡಿದ ಗ್ಯಾಲರಿಗಳು ಅಸ್ಪಷ್ಟವಾದರೂ ನೈಜತೆಯನ್ನು ಮೆರೆದಿವೆ.

ಅರಸೊತ್ತಿಗೆಯ ವೈಭವ ಯಥಾದರ್ಶನ ಸಿದ್ಧಾಂತದ ಹಿನ್ನೆಲೆಯಲ್ಲಿ ಸಮರ್ಥನೀಯವಾಗಿ ಮೂಡಿಬಂದಿದೆ. ನೆರಳು ಮತ್ತು ಬೆಳಕನ್ನು ಸಮರ್ಪಕವಾಗಿ ದುಡಿಸಿಕೊಂಡಿರುವುದರಿಂದ ವಾಸ್ತುವಿನ ವಿನ್ಯಾಸಗಳು ಸ್ಪಷ್ಟವಾಗಿ ಮೂಡಿಬಂದಿವೆ. ಆಕೃತಿಗಳಲ್ಲಿ ಸಾಂದರ್ಭಿಕವಾದ ಭಾವಸ್ಫುರಣೆಯಿಂದ ಚಿತ್ರ ಕಳೆಗಟ್ಟಿದೆ. ನಿಧಿಯ ಲಭ್ಯತೆಯಿಂದಾಗಿ ಬಿಜ್ಜಳ ಮತ್ತು ಬಸವಣ್ಣನ ಮೊಗದಲ್ಲಿ ಸಂಭ್ರಮಾತ್ಮಕ ಚರ್ಯೆ ಸುಂದರವಾಗಿ ಮೂಡಿದೆ. ರಾಜನು ಕುಳಿತುಕೊಳ್ಳುವ ಸಿಂಹಾಸನದ ಕೆಳಗೆ ಕಾರ್ಮಿಕರು ನೆಲವನ್ನು ಅಗೆದು ನಿಧಿಯನ್ನು ಎತ್ತುತ್ತಿರುವುದು ಭಾವಸ್ಪರ್ಶಿಯಾಗಿದೆ. ಅರಮನೆಯ ವಾಸ್ತುವನ್ನು ದಟ್ಟವರ್ಣ

ಹಿನ್ನೆಲೆಯಲ್ಲಿ ಸೂಚ್ಯವಾಗಿ ತೋರ್ಪಡಿಸಲಾಗಿದೆ. ಮೃದುವಾದ ವರ್ಣಮೇಳ ಚಿತ್ರದ ಅಂದವನ್ನು ಹೆಚ್ಚಿಸಿದರೆ, ಆಕೃತಿಗಳ ಆಂಗಿಕ ರಚನೆಯಲ್ಲಿ ಸ್ವಲ್ಪ ಬಲ ತುಂಬಬೇಕಿತ್ತು.

೨.೩.೧೧. ಶೋಧಗೊಂಡ ನಿಧಿಯನ್ನು ವೀಕ್ಷಿಸುತ್ತಿರುವ ಬಸವಣ್ಣ ಮತ್ತು ಬಿಜ್ಜಳ

ಪ್ರಸ್ತುತ ಚಿತ್ರದಲ್ಲಿ ಎರಡು ಪ್ರಮುಖ ಭಾಗಗಳಿರುವುದನ್ನು ಗಮನಿಸಬೇಕು. ಚಿತ್ರದ ಮೇಲಿನ ಅರ್ಧಭಾಗವು ಬಿಜ್ಜಳನ ಆಸ್ಥಾನದ ಒಂದು ಭಾಗವನ್ನು ಪರಿಚಯಿಸುತ್ತದೆ. ಮಧ್ಯದಲ್ಲಿ ಬಿಜ್ಜಳ ಮಹಾರಾಜ ತನ್ನ ಗಲ್ಲಕ್ಕೆ ತೋರುಬೆರಳನ್ನು ಇಟ್ಟುಕೊಂಡು ಅಚ್ಚರಿ ವ್ಯಕ್ತಪಡಿಸುತ್ತಿರುವುದು, ಬಸವಣ್ಣನವರು ಕೂಡ ದೊರೆತಿರುವ ನಿಧಿಯನ್ನು ತದೇಕಚಿತ್ತದಿಂದ ಗಮನಿಸುತ್ತಿರುವುದು, ಅಂತೆಯೇ ಬಿಜ್ಜಳ ಮಹಾರಾಜನ ಎಡಬದಿಯಲ್ಲಿ ಆಸ್ಥಾನದ ಪ್ರಮುಖರಲ್ಲಿ ನಾಲ್ಕು ಜನರು ಬಿಜ್ಜಳನ ಮುಖವನ್ನೇ ತದೇಕಚಿತ್ತದಿಂದ ಗಮನಿಸುತ್ತಿರುವಂತೆ ಚಿತ್ರಿಸಲಾಗಿದೆ. ಆದರೆ ಅದರಲ್ಲಿ ಕೆಂಪು ನಿಲುವಂಗಿಯನ್ನು ಧರಿಸಿದ ವ್ಯಕ್ತಿ ಮಾತ್ರ ನಿಧಿಯನ್ನು ಗಮನಿಸುತ್ತಿರುವುದು ತಿಳಿಯುತ್ತದೆ.

ಗಮನಿಸುವಂಥ ಇನ್ನೊಂದು ಅಂಶವೆಂದರೆ ಬಿಜ್ಜಳ ರಾಜನನ್ನು ಸ್ವರ್ಣಸಿಂಹಾಸನದಲ್ಲಿಯೂ ಬಸವಣ್ಣನನ್ನು ಬೆಳ್ಳಿಯ ಸಿಂಹಾಸನದಲ್ಲಿಯೂ ಚಿತ್ರಿಸಿರುವುದು. ಬಂಗಾರವು ಬೆಳ್ಳಿಗಿಂತ ಹೆಚ್ಚು ಮೌಲ್ಯವಾಗಿರುವಂಥದ್ದು. ಹಾಗಾಗಿ ರಾಜನಾದ ಬಿಜ್ಜಳನಿಗೆ ಸ್ವರ್ಣಸಿಂಹಾಸನವನ್ನು ಮಂತ್ರಿಯಾಗಿರುವ ಬಸವಣ್ಣನವರನ್ನು ರಜತ ಸಿಂಹಾಸನದ ಮೇಲೆ ಕೂಡಿಸಿರುವುದು ಅರಸೊತ್ತಿಗೆಯ ಶ್ರೇಣೀಕರಣವನ್ನು ಸೂಚಿಸುತ್ತದೆ. ಚಿತ್ರದ ಕೆಳಗಿನ ಭಾಗದಲ್ಲಿ ಇಬ್ಬರು ಸೇವಕರು ಸಲಿಕೆ ಮತ್ತು ಗುದ್ದಲಿಗಳನ್ನು ಹೊತ್ತಿದ್ದು ಕಪ್ಪುಬಣ್ಣವನ್ನು ಹೊಂದಿದವರಾಗಿದ್ದಾರೆ. ಅವರ ಎದುರಿಗೆ ಮುತ್ತಿನ ಸಿಂಹಾಸನ ಮತ್ತು ಅದರ ಪಕ್ಕದಲ್ಲಿ ಏಳು ಕೊಪ್ಪರಿಕೆಗಳನ್ನು ಒಂದರ ಮೇಲೊಂದರಂತೆ ಸೇರಿಸಿ ಇಡಲಾಗಿದೆ. ಮುತ್ತಿನ ಪಲ್ಲಕ್ಕಿಯು ರಾಜನು ಕುಳಿತುಕೊಳ್ಳುವ ಸ್ಥಳವೊಂದನ್ನು ಹೊರತುಪಡಿಸಿ ಪೂರ್ತಿಯಾಗಿ ಮುತ್ತುಗಳಿಂದ ಅಲಂಕೃತಗೊಂಡಿದೆ. ಬಿಳಿಯ ಬಣ್ಣದ ಮುತ್ತುಗಳು ಹೆಚ್ಚು ಬಳಕೆಯಾಗಿವೆ. ಸಿಂಹಾಸನದ ಮೇಲ್ಭಾಗದ ಛತ್ರದ ಸುತ್ತಲೂ ಹಸಿರುಬಣ್ಣದ ಮುತ್ತುಗಳನ್ನು ಕೂಡಿಸಲಾಗಿದೆ. ಅದರ ಪಕ್ಕದಲ್ಲಿರುವ ಏಳು ಕೊಪ್ಪರಿಕೆಗಳು ಬಂಗಾರದ ಬಣ್ಣವನ್ನು ಹೊಂದಿದ್ದು ಅದರ ಬದಿಯಲ್ಲಿಯೇ ನಿಧಿಯನ್ನು ತೆಗೆದ ಜಾಗದ ಕುಳಿಯೂ ಕೂಡ ಚಿತ್ರಣಗೊಂಡಿರುವುದನ್ನು ಕಾಣುತ್ತೇವೆ.

ಹಿಂದಿನ ಚಿತ್ರಗಳು ನಿರೂಪಣಾತ್ಮಕ ಹಿನ್ನೆಲೆಯಲ್ಲಿ, ವಾಸ್ತವದ (ನೈಜ) ನೆಲೆಗಟ್ಟಿನಲ್ಲಿ ರಚಿತವಾಗಿದ್ದರೆ ಈ ಚಿತ್ರ ಸಾಂಪ್ರದಾಯಿಕ ಶೈಲಿಯಲ್ಲಿ, ಸಾಂಕೇತಿಕ ನಿರೂಪಣೆಯ ನೆಲೆಗಟ್ಟಿನಲ್ಲಿ ರಚನೆಗೊಂಡಿದೆ. ಹೀಗೆ ರಚನೆಗೊಳ್ಳುವ ಸಾಂಪ್ರದಾಯಿಕ ಚಿತ್ರಗಳು ದುರ್ಬಲ ರಚನೆಗಳು ಎಂದು ಭಾವಿಸಬೇಕಿಲ್ಲ. ಅಂದಂದಿನ ಸಮಕಾಲೀನ ಸಾಂಪ್ರದಾಯಿಕ ರಚನೆಗಳಿಗೆ ತಮ್ಮದೇಯಾಗಿರುವ ಮೌಲ್ಯಗಳನ್ನು ನಾವು ಗುರುತಿಸಬೇಕಾಗುತ್ತದೆ. ಈ ಚಿತ್ರದ ರಚನಾಕಾರನನ್ನು ಸಹ ಸಂಪ್ರದಾಯದ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ. ಹಾಗೆ ನೋಡಿದಾಗ ಈ ಚಿತ್ರದಲ್ಲಿ ಶೋಧಗೊಂಡ ನಿಧಿಯನ್ನು ನಿರೂಪಿಸಲು

ಕಲಾವಿದ ಚಿತ್ರದ ಒಟ್ಟು ಸ್ಥಳಾವಕಾಶವನ್ನು ಅಗಲವಾಗಿ ಎರಡು ಭಾಗಗಳನ್ನಾಗಿಸಿಕೊಂಡು ಆಕೃತಿಗಳನ್ನು ರಚಿಸಿದ್ದಾನೆ. ಮೇಲ್ಭಾಗದಲ್ಲಿ ಎಡದಿಂದ ಬಸವಣ್ಣ, ಬಿಜ್ಜಳ ಮಹಾರಾಜ ಮತ್ತು ರಾಜಪರಿವಾರದವರು ಚಿತ್ರಿತಗೊಂಡರೆ, ಕೆಳಭಾಗದಲ್ಲಿ ನಿಧಿಗಾಗಿ ನೆಲವನ್ನು ಅಗೆದ ಕಾರ್ಮಿಕರು, ಸಿಂಹಾಸನ ಮತ್ತು ಹೊನ್ನಿನ ಮಡಿಕೆಗಳುಳ್ಳ ನೆಲವನ್ನು ಇಲ್ಲಿ ಕಾಣಬಹುದಾಗಿದೆ. ಇಡೀ ಕಥಾನಕ ಸಂದರ್ಭವನ್ನು ಬಿಡಿಬಿಡಿಯಾಗಿ ತೋರಿಸುವುದರ ಮೂಲಕ ಕಲಾವಿದನು ತನ್ನ ಮುಗ್ಧವಾದ ಸಾಂಪ್ರದಾಯಿಕ ಅಭಿವ್ಯಕ್ತಿಯನ್ನು ತೋರ್ಪಡಿಸಿದ್ದಾನೆ.

೨.೩.೧೨. ಚನ್ನಬಸವಣ್ಣನ ಜನನ ಪ್ರಸಂಗ

"ಕಲಾವಿದ ಬಿ.ಆರ್. ಕೋಟ್ಯಾಳಕರ ಇಲ್ಲಿಯವರೆಗೆ ಕರ್ನಾಟಕದ ಜನತೆಗೆ ಅಜ್ಞಾತರಾಗಿಯೇ ಉಳಿದಿದ್ದಾರೆ. ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ಅಲ್ಪಸ್ವಲ್ಪ ಪರಿಚಯವಿದ್ದರೂ ಅವರ ಕುರಿತು ಅಧ್ಯಯನ ನಡೆದಿಲ್ಲ. ಕರ್ನಾಟಕ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಿರಿಯ ಕಲಾವಿದರ ಕುರಿತು ಪರಿಚಯಗಳನ್ನು ಪ್ರಕಟಿಸಿದ್ದರೂ ಅವು ಸಮಗ್ರ ಅಧ್ಯಯನದಿಂದ ಕೂಡಿಲ್ಲ. ಕೈಪಿಡಿಗಳಂತೆ ತೋರುವ ಕಲಾವಿದರ ಹುಟ್ಟು ಜೀವನ ವಿಚಾರದೊಂದಿಗೆ ಅಲ್ಪ ಪ್ರಮಾಣದ ಕಲಾಕೃತಿಗಳ ನಿಷ್ಕರ್ಷೆ ನಡೆಸಿದ್ದುಂಟು. ಪಶ್ಚಿಮದ ಕಲಾವಿದರ ಚರಿತ್ರೆಯ ಗ್ರಂಥಗಳಂತಹ ಸಮಗ್ರ ಅಧ್ಯಯನ ನಮ್ಮಲ್ಲಿಯೂ ನಡೆಯಬೇಕಾಗಿದೆ."[೬೧] ಕಲಾವಿದ ಕೋಟ್ಯಾಳಕರವರು ಈ ಕೃತಿಯನ್ನು ೧೯೨೧ರಲ್ಲಿ ಜಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. "ಇದರ ಮೂಲ ಕೃತಿ ಲಭ್ಯವಾಗಿಲ್ಲ. ಮೂಲಕೃತಿಯ ಛಾಯಾಚಿತ್ರ ಪ್ರತಿಯು ಸೋಲಾಪುರದ ಕಾಶಿನಾಥ ಮಹಾಜನ ಅವರಲ್ಲಿಯೇ ಲಭ್ಯವಾಗಿದೆ."[೬೨] ಈ ಚಿತ್ರದಲ್ಲಿ ಚನ್ನಬಸವಣ್ಣನ ಜನನದ ಸನ್ನಿವೇಶವನ್ನು ಕಾಣುತ್ತೇವೆ. ಈತನ ಜನನಕ್ಕಾಗಲೇ ಬಸವಣ್ಣ ಕಲ್ಯಾಣಕ್ಕೆ ಬಂದು ಮಂತ್ರಿಪದವಿ ಸ್ವೀಕರಿಸಿರಬೇಕೆಂಬ ಅಂಶವನ್ನು ಚಿತ್ರದ ಒಟ್ಟು ಸನ್ನಿವೇಶವು ಸ್ಪಷ್ಟಪಡಿಸುತ್ತದೆ. ಚಿತ್ರದ ಬಲಭಾಗದಲ್ಲಿ ಅಕ್ಕನಾಗಮ್ಮನು ಕಾವಿಬಣ್ಣದ ಸೀರೆಯನ್ನು ಉಟ್ಟು, ತಲೆತುಂಬ ಸೆರಗನ್ನು ಹೊದ್ದು, ಚಿಕ್ಕ ಪೀಠವೊಂದರ ಮೇಲೆ ಕುಳಿತಿದ್ದಾಳೆ. ಅವಳ ತೊಡೆಯ ಮೇಲೆ ಪುಟ್ಟ ಮಗುವೊಂದು ಪವಡಿಸಿದೆ. ತನ್ನ ಅವನತ ದೃಷ್ಟಿಯಿಂದ ಮಗುವನ್ನು ಪ್ರೀತಿಯಿಂದ ನೋಡುತ್ತಿದ್ದಾಳೆ. ಆಕೆಯ ಪಕ್ಕದಲ್ಲಿ ಬಸವಣ್ಣ ತನ್ನ ಬಲಗೈಯನ್ನು ಅವಳು ಕುಳಿತ ಪೀಠದ ಮೇಲೆ ಮಡಿಚಿಟ್ಟುಕೊಂಡು ನಿಂತಿದ್ದಾನೆ. ನೀಳವಾದ ಪಾದಗಳು, ಕಂದುಬಣ್ಣದ ಸೊಂಟಕ್ಕೆ ಕಟ್ಟಿದ ಶಲ್ಯ, ಕೊರಳಲ್ಲಿ ಇಷ್ಟಲಿಂಗದ ಗಂಟು, ತಲೆಯಲ್ಲಿ ಬಂಗಾರದ ಕಿರೀಟವನ್ನು ಧರಿಸಿದ ಬಸವಣ್ಣ ತನ್ನ ಅಕ್ಕನಾದ ಅಕ್ಕನಾಗಮ್ಮನ ಮಗುವನ್ನು ತದೇಕಚಿತ್ತದಿಂದ ಗಮನಿಸುತ್ತಿದ್ದಾನೆ. ಬಸವಣ್ಣನ ಎಡಭಾಗದಲ್ಲಿ ಹಿಂದಕ್ಕೆ ಬಾಚಿದ ಕಪ್ಪುತಲೆಗೂದಲು, ಗಡ್ಡ–ಮೀಸೆಯನ್ನು ಹೊಂದಿ ಕೊರಳಲ್ಲಿ ಇಷ್ಟಲಿಂಗ, ರುದ್ರಾಕ್ಷಿ, ಕಾವಿಬಣ್ಣದ ವಸ್ತ್ರವನ್ನು ಧರಿಸಿದ, ಕೈಯಲ್ಲಿ ಖಡ್ಗವನ್ನು ನೆಲಕ್ಕೆ ಊರಿ ನಿಂತುಕೊಂಡ ವ್ಯಕ್ತಿಯನ್ನು ಕಾಣುತ್ತೇವೆ. ಬಹುಶಃ ಈತ ಮಡಿವಾಳ ಮಾಚಿದೇವನಿರಬಹುದು.

---

೬೧. ಡಾ. ಜಿ. ಎಸ್. ಭೂಸಗೊಂಡ : ಚಿತ್ರಕಲಾವಿದ ಚಂದ್ರವರ್ಮ ಬಿ.ಆರ್. ಕೋಟ್ಯಾಳಕರ – ಒಂದು ಅಧ್ಯಯನ. (ಅ.ಪ್ರ.ಡಿ.ಲಿಟ್.ಮ.ಪ್ರ ಕ.ವಿ.ವಿ. ಹಂಪಿ), ಪು–೪

೬೨. ಅದೇ., ಪು–೧೭೯

ಬಸವಣ್ಣನ ಬಲಬದಿಯಲ್ಲಿ ಪತ್ನಿಯರಾದ ಗಂಗಾಂಬಿಕೆ, ನೀಲಾಂಬಿಕೆಯರು ನಿಂತಿದ್ದಾಳೆ. ಹಳದಿ ಬಣ್ಣದ ಅಂಚು ಇರುವ ನೀಲಿ ಬಣ್ಣದ (ಪಿಕಾಕ್ ಬ್ಲೂ) ಸೀರೆ, ಮತ್ತೊಬ್ಬಾಕೆ ಹಳದಿಬಣ್ಣದ ಅಂಚಿನೊಂದಿಗೆ ನೇರಿಳೆ ಬಣ್ಣದ ಸೀರೆಯನ್ನು ಧರಿಸಿ, ತಲೆತುಂಬ ಸೆರಗನ್ನು ಹೊದ್ದು ನಿಂತಿದ್ದಾರೆ. ಅಕ್ಕನಾಗಮ್ಮಳ ಎದುರಿಗೆ ಬಿಜ್ಜಳಮಹಾರಾಜನು ದಿವ್ಯ ವಸ್ತ್ರಾಭರಣವನ್ನು ಧರಿಸಿ, ತಲೆಯ ಮೇಲೆ ಮಿರುಗುವ ಕಿರೀಟ, ಹುರಿತೀಡಿದ ಮೀಸೆ, ದಟ್ಟವಾದ ಕಪ್ಪುತಲೆಗೂದಲಿನೊಂದಿಗೆ ಗಂಭೀರವಾದ ನಿಲುವಿನ ಭಂಗಿಯಲ್ಲಿ ನಿಂತು, ಮಗು–ಅಕ್ಕನಾಗಮ್ಮನನ್ನು ತದೇಕಚಿತ್ತದಿಂದ ಗಮನಿಸುವಂತೆ ಕಲಾವಿದ ಚಿತ್ರಿಸುವಲ್ಲಿ ಯಶಸ್ಸು ಪಡೆದಿದ್ದಾನೆ. ಬಿಜ್ಜಳ ಸುಂದರವಾದ ಅಲಂಕೃತ ರತ್ನಗಂಬಳಿಯ ಮೇಲೆ ನಿಂತಿದ್ದಾನೆ. ಚಿತ್ರದ ಭಿತ್ತಿಯಲ್ಲಿ ಚಾಲುಕ್ಯರ ವಾಸ್ತುಶೈಲಿಯನ್ನು ನೆನಪಿಸುವ ಎತ್ತರದ ತೆಳುಗುಲಾಬಿ ಬಣ್ಣದ ಕಂಬಗಳು ಆಕರ್ಷಕವಾಗಿವೆ.

ನಿರೂಪಣಾ ಚಿತ್ರಗಳಲ್ಲಿಯೇ ಅತ್ಯುತ್ತಮ ಚಿತ್ರವಿದಾಗಿದ್ದು, ಜಲವರ್ಣದ ಪಾರದರ್ಶಕ ತಂತ್ರವನ್ನು ಅತ್ಯಂತ ಸಮರ್ಥವಾಗಿ ದುಡಿಸಿಕೊಂಡ ಕಲಾವಿದರು ಆಕೃತಿಗಳ ಅಂಗರಚನೆಯನ್ನು ಸಹ ಅಷ್ಟೇ ಪ್ರಬುದ್ಧವಾಗಿ ಮಂಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅರಸೊತ್ತಿಗೆಯನ್ನು ಸೂಚ್ಯವಾಗಿ ತೋರ್ಪಡಿಸಿ ಮುನ್ನೆಲೆಯಲ್ಲಿ ಆಕೃತಿಗಳನ್ನು ಸಂದರ್ಭಕ್ಕೆ ತಕ್ಕ ಹಾಗೆ ನಿರೂಪಿಸಿದ್ದಾರೆ. ಆಕೃತಿಗಳಲ್ಲಿ ರಾಜ ಚರ್ಯೆ ಮತ್ತು ಶರಣ ಸಂಪನ್ನತೆ ಎರಡೂ ಗುಣಗಳು ಪ್ರತ್ಯೇಕವಾಗಿ ಸ್ಫುಟವಾಗಿ ಪ್ರಕಟಗೊಂಡಿವೆ. ಜಲವರ್ಣವನ್ನು ಅತ್ಯಂತ ಮೃದುವಾಗಿ ದುಡಿಸಿಕೊಂಡ ಕಲಾವಿದನು ಆಕೃತಿ ಮತ್ತು ವಾಸ್ತುವಿನ್ಯಾಸಗಳಲ್ಲಿ ನೆರಳು ಬೆಳಕಿನ ವ್ಯತ್ಯಾಸವನ್ನು ತೂಕಬದ್ಧವಾಗಿ ನಿರ್ವಹಿಸಿದ್ದಾನೆ. ನಿರೂಪಣಾ ಚಿತ್ರಗಳು ಸುಂದರವಾಗಿದ್ದರೆ ನೋಡುಗರಿಗೆ ಆಪ್ಯಾಯ–ಮಾನವಾಗುತ್ತವೆ ಎಂಬುದಕ್ಕೆ ಈ ಕೃತಿ ಅತ್ಯುತ್ತಮ ನಿದರ್ಶನ.

೨.೩.೧೩. ಬಸವಣ್ಣ–ನೀಲಾಂಬಿಕೆಯರ ವಿವಾಹ–೧ (ಕಾಮಿಕ್ಸ್ ಚಿತ್ರ)

ತನ್ನ ಆಸ್ಥಾನದಲ್ಲಿ ಅಪಾರ ಧನರಾಶಿಯನ್ನು ಹೊರತೆಗೆದು ರಾಜ್ಯವನ್ನು ಸಂಪದ್ಭರಿತವನ್ನಾಗಿ ಮಾಡಿದ ಬಸವಣ್ಣನಿಗೆ ಬಿಜ್ಜಳನು ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತಾನೆ. ತನ್ನ ಕೃತಜ್ಞತೆಯು ಶಾಶ್ವತವಾಗಿ ಉಳಿಯಬೇಕೆನ್ನುವ ದೃಷ್ಟಿಯಿಂದ ತನ್ನ ಸಾಕುತಂಗಿಯಾದ ನೀಲಾಂಬಿಕೆಯನ್ನು ಬಸವಣ್ಣನಿಗೆ ಧಾರೆಯೆರೆದು ವಿವಾಹ ಮಾಡಿಸುತ್ತಾನೆ. ಆ ಸನ್ನಿವೇಶವನ್ನು ಪ್ರಸ್ತುತ ಚಿತ್ರವು ದಾಖಲಿಸಿದೆ. ಒಂದು ವಿಶಾಲವಾದ ಮಣೆಯ ಮೇಲೆ ಬಸವಣ್ಣ ಮತ್ತು ನೀಲಾಂಬಿಕೆಯರು ವಧೂ–ವರರಾಗಿ ಕುಳಿತಿದ್ದಾರೆ. ಚಿತ್ರಪಥ್ಯದ ಸಾರವು ಅವರಿಬ್ಬರಿಗೂ ಈಗಾಗಲೇ ವಿವಾಹವಾಗಿದ್ದ ಸಂಗತಿಯನ್ನು ನೋಡುಗರಿಗೆ ತಿಳಿಯಪಡಿಸುತ್ತದೆ. ನೀಲಿಮಿಶ್ರಿತ ಬಿಳಿಬಣ್ಣದ, ಕೆಂಪು ಅಂಚಿನಿಂದ ಕೂಡಿದ ಪಂಚೆ, ನಿಲುವಂಗಿಯನ್ನು ಧರಿಸಿದ ಬಸವಣ್ಣ ಕುಳಿತರೂ ಎತ್ತರದ ನಿಲುವಿನಂತೆ ಕಂಡುಬರುತ್ತಾನೆ.

ಇಲ್ಲಿ ಮೂಡಿಬಂದಿರುವ ವ್ಯಕ್ತಿಗಳೆಲ್ಲರನ್ನು ಪ್ರಮಾಣದಲ್ಲಿ ೬ ರಿಂದ ೭ ಅಡಿಯ ಎತ್ತರದ ವ್ಯಕ್ತಿಗಳೆಂದು ಭಾವಿಸಬಹುದು. ಮನಸೆಳೆಯುವ ಹೂವಿನ ಹಾರವನ್ನು, ಹೆಗಲ ಮೇಲಿನಿಂದ ಇಳಿಯಬಿದ್ದ

ಕೆಂಪು ಬಣ್ಣದ ಮೇಲುಹೊದಿಕೆಯನ್ನು ನೋಡುತ್ತೇವೆ. ಹಣೆಗೆ ಕಟ್ಟಿದ ಬಾಸಿಂಗ, ಕೊರಳಲ್ಲಿ ಕಟ್ಟಿದ ಇಷ್ಟಲಿಂಗ ಇವು ಬಸವಣ್ಣನಿಗೆ ಸೌಂದರ್ಯದಾಯಕಗಳಾಗಿವೆ. ಬಸವಣ್ಣನ ಎಡಭಾಗದಲ್ಲಿ ಹಸಿರು ನಿಲುವಂಗಿ, ಬಿಳಿಯ ಪಂಚೆ, ತಲೆಗೆ ಚಿಕ್ಕ ಕಿರೀಟವನ್ನು ಧರಿಸಿದ ವ್ಯಕ್ತಿಯು ಬಿಜ್ಜಳನಿರಬೇಕು. ಮಗಳು ಮತ್ತು ಅಳಿಯನನ್ನು ಆಶೀರ್ವದಿಸುವ ಭಂಗಿ ಆ ಚಿತ್ರದಲ್ಲಿದೆ. ಬಸವಣ್ಣನ ಹಿಂದೆ ಕಡುಹಸಿರು ಬಣ್ಣದ ಸೀರೆಯನ್ನುಟ್ಟು, ತಲೆತುಂಬ ಮುಸುಗು ಹೊದ್ದ ಸ್ತ್ರೀಯು ಅಕ್ಕನಾಗಮ್ಮ ನೀಲಾಂಬಿಕೆಯು ಗುಲಾಬಿ ಬಣ್ಣದ ಸೀರೆಯನ್ನುಟ್ಟು ದಂಡೆ ಮುಡಿದುಕೊಂಡು, ಕೊರಳಿಗೆ ಹಾರ ಧರಿಸಿ ತಕ್ಕುದಾದ ಭಂಗಿಯಲ್ಲಿ ಕುಳಿತಿದ್ದಾಳೆ. ಪಕ್ಕದಲ್ಲಿ ಹೂವಿನ ಪುಟ್ಟಿಯನ್ನು ಹಿಡಿದುಕೊಂಡವಳು ಬಸವಣ್ಣನ ಮೊದಲ ಹೆಂಡತಿ ಗಂಗಾಂಬಿಕೆ. ನೇಪಥ್ಯದಲ್ಲಿ ಉಳಿದ ಶರಣರು ನಿಂತಿದ್ದು ಅವರ ಮುಖಗಳು ಮಾತ್ರವೇ ಕಾಣುವಂತೆ ಚಿತ್ರಿಸುವುದರಲ್ಲಿ ಕಲಾವಿದ ಜಾಗೃತನಾಗಿದ್ದಾನೆ.

ಮದುವೆ ಚಪ್ಪರದ ಒಳಾವರಣದ ಮದುವೆ ಸಂಭ್ರಮದ ದೃಶ್ಯ ಇದು. ಯಥಾದರ್ಶನದ ಪಾಲನೆಗೆ ಸ್ವಲ್ಪವೂ ಚ್ಯುತಿ ಬರದ ಹಾಗೆ ಇಲ್ಲಿ ಚಿತ್ರವನ್ನು ರಚಿಸಲಾಗಿದೆ. ಸಾಮೀಪ್ಯದ ಆಕೃತಿಗಳೆಲ್ಲವನ್ನು ಸ್ಪಷ್ಟವಾಗಿ ನಿರೂಪಿಸಿದ, ದೂರದ ಆಕೃತಿಗಳೆಲ್ಲವನ್ನೂ ಸೂಚ್ಯವಾಗಿ ತೋರ್ಪಡಿಸಿದ ಸಂಯೋಜನೆ ಇದು. ಕಾಮಿಕ್ಸ್ ರಚನೆಗಳಲ್ಲಿ ಚಿತ್ರಕಥೆಯ ಆರಂಭದಲ್ಲಿ ಚಿತ್ರಿಸುವ ವಾಸ್ತು ವಿನ್ಯಾಸ, ಆಕೃತಿಗಳ ಚಹರೆಗಳನ್ನು ಚಿತ್ರಕಥೆಯ ಅಂತ್ಯದವರೆಗೂ ಅತ್ಯಂತ ಜತನದಿಂದ ಉಳಿಸಿಕೊಳ್ಳಬೇಕಾಗುತ್ತದೆ. ಹಾಗೆ ಈ ಅಧ್ಯಯನದ ಆರಂಭದ ಚಿತ್ರಕಥೆಗಳ ಆಕೃತಿಗಳಲ್ಲಿಯ ಗುಣಗಳು ಈ ಚಿತ್ರದಲ್ಲಿಯೂ ಮುಂದುವರೆದಿವೆ ಎಂದರೆ ಕಲಾವಿದರಲ್ಲಿರುವ ಮಾನವ ಅಂಗರಚನಾಶಾಸ್ತ್ರದ ಪ್ರಬುದ್ಧತೆಯೂ ಕಾರಣವಾಗುತ್ತದೆ ಎಂಬುದಕ್ಕೆ ಈ ಚಿತ್ರ ಒಂದು ಅತ್ಯುತ್ತಮ ಮಾದರಿಯಾಗುತ್ತದೆ. ಎಂದಿನಂತೆ ಆಕೃತಿಗಳೆಲ್ಲವೂ ರೇಖೆಗಳಿಂದ ರಚನೆಗೊಂಡು ಒಳಾವರಣದಲ್ಲಿ ಮೃದುವಾದ ವರ್ಣಗಳಿಂದ ಚಿತ್ರಿಸಲ್ಪಟ್ಟಿವೆ.

ಬಸವಣ್ಣ–ನೀಲಾಂಬಿಕೆಯರ ವಿವಾಹ–೨

ಕಲಾವಿದ ಬಸವರಾಜ ಮುಗಳಿಯವರ ಈ ಕಲಾಕೃತಿಯು ೪೮"x೩೬" ಅಳತೆಯ ತೈಲವರ್ಣ(ಎನಾಮೆಲ್) ಮಾಧ್ಯಮದಲ್ಲಿ ಚಿತ್ರಣಗೊಂಡಿವೆ. ಈ ಕಲಾಕೃತಿ ರಚನೆಯಾದ ಕಾಲವು ಲಭ್ಯವಿರುವುದಿಲ್ಲ. ಪ್ರಸ್ತುತ ಈ ಕಲಾಕೃತಿಯು ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಸವಣ್ಣ ಮತ್ತು ನೀಲಾಂಬಿಕೆಯರ ವಿವಾಹದ ಸನ್ನಿವೇಶವಿದ್ದು ಇಲ್ಲಿ ಬಳಸಲಾಗಿರುವ ಬಣ್ಣಗಳಲ್ಲಿ ಕಡುಹಸಿರು, ತಿಳಿಗುಲಾಬಿ, ನೀಲಿಮಿಶ್ರಿತ ಬಿಳಿ, ಕಡುಗೆಂಪು ಮುಖ್ಯವಾಗಿವೆ. ತೈಲವರ್ಣ ಪರಂಪರೆಗೆ ಸೇರಿದ ಈ ಚಿತ್ರದಲ್ಲಿ ಘಟನೆಯನ್ನು ತುಂಬ ಸರಳವಾಗಿ ನಿರೂಪಿಸಿದಂತೆ ಕಂಡರೂ ಸಾಕಷ್ಟು ಅಂಶಗಳಿರುವುದನ್ನು ಕಾಣುತ್ತೇವೆ. ಬಸವಣ್ಣ ಎತ್ತರದ ನಿಲುವಿನಂತೆ ಕಂಡುಬರುತ್ತಾನೆ. ಬಿಳಿಬಣ್ಣದ ತುಂಬುತೋಳಿನ ನಿಲುವಂಗಿ, ಕಡುಕೆಂಪು ಬಣ್ಣದ ಅಂಚನ್ನು ಹೊಂದಿರುವ ಮಡಿಚಿದ ಮೇಲುಹೊದಿಕೆ, ಕೊರಳಲ್ಲಿ ಉದ್ದನೆಯ ಸುಂದರವಾದ ಹೂವಿನ ಹಾರ, ತಲೆಗೆ ಹೂವಿನಿಂದ ಅಲಂಕೃತವಾದ ಬಾಸಿಂಗ,

ಹಣೆಯಲ್ಲಿ ವಿಭೂತಿ, ಕೊರಳಲ್ಲಿ ಇಷ್ಟಲಿಂಗ, ರುದ್ರಾಕ್ಷಿ ಮಾಲೆಗಳಿಂದ ಬಸವಣ್ಣ ಮದುವೆಯ ಗಂಡಿನ ಅಲಂಕಾರವನ್ನು ಹೊಂದಿದ್ದು ಹಸೆಮಣೆಯ ಮೇಲೆ ಕುಳಿತಿದ್ದಾನೆ. ಆತನ ಪಕ್ಕದಲ್ಲಿ ನೀಲಾಂಬಿಕೆ ಗುಲಾಬಿ ಬಣ್ಣದ ಸೀರೆ, ಕಡುಗೆಂಪು ಬಣ್ಣದ ಕುಪ್ಪಸ, ಹಣೆಯಲ್ಲಿ ವಿಭೂತಿ, ಹೂವಿನಿಂದ ಅಲಂಕೃತ ಬಾಸಿಂಗ, ಕೊರಳಲ್ಲಿ ಹೂವಿನ ಹಾರವನ್ನು ಧರಿಸಿ, ಎಡಗಾಲನ್ನು ಮಡಚಿ ಬಲಗಾಲನ್ನು ಮುಂಚಾಚಿ ಕುಳಿತ ವಧುವಾಗಿದ್ದಾಳೆ. ಎಡಬದಿಗೆ ಹಸಿರುಬಳೆಗಳನ್ನು ಧರಿಸಿದ, ಕೈಯಲ್ಲಿ ಫಲಪುಷ್ಪಗಳ ಹರಿವಾಣವನ್ನು ಹಿಡಿದ ಹೆಣ್ಣು ಬಸವಣ್ಣನ ಮೊದಲ ಮಡದಿ ಗಂಗಾಂಬಿಕೆ.

ಬಸವಣ್ಣನ ಬಲಬದಿಗೆ ಹಣೆಯಲ್ಲಿ ಕೆಂಪುಬಣ್ಣದ ಉದ್ದನೆಯ ತಿಲಕ, ಕಿರೀಟ, ಹುರಿಮೀಸೆ, ತಲೆಯಲ್ಲಿ ಬಂಗಾರದ ಕಿರೀಟ, ಹಸಿರುಬಣ್ಣದ ನಿಲುವಂಗಿ, ನೀಲಿಮಿಶ್ರಿತ ಬಿಳಿಪಂಚೆಯನ್ನು ಧರಿಸಿ, ತನ್ನ ಬಲಗೈಯನ್ನು ಆಶೀರ್ವಾದ ಮಾಡುವ ಭಂಗಿಯಲ್ಲಿ ಬಿಜ್ಜಳ ಮಹಾರಾಜ ನಿಂತಿದ್ದಾನೆ. ಬಸವಣ್ಣನ ಹಿಂದೆ ಅಕ್ಕನಾಗಮ್ಮ, ಪ್ರಮುಖ ಶರಣರು ಮದುವೆಯ ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದಾರೆ. ನವದಂಪತಿಗಳ ಮುಂದೆ ಹರಿವಾಣದಲ್ಲಿ ಹಸಿರು ಮತ್ತು ಬಿಳಿಪಟ್ಟೆಗಳಿಂದ ಕೂಡಿದ ಮಡಿಚಿದ ಸೀರೆ, ನೀಲಿಬಣ್ಣದ ಪಂಚೆ, ಕೆಂಪುಬಣ್ಣದ ಹೂವುಗಳಿಂದ ಕೂಡಿದ ವಸ್ತ್ರಗಳಿವೆ. ಆಗತಾನೆ ವಧುವರರಿಗೆ ಪುಷ್ಪಗಳನ್ನು ಸೇಸೆಯಿಕ್ಕಿದ ಸನ್ನಿವೇಶವನ್ನು ಪ್ರಸ್ತುತ ಚಿತ್ರ ಪ್ರತಿಪಾದಿಸುತ್ತದೆ. ಬಿಜ್ಜಳನ ಸಾಕುತಂಗಿ ನೀಲಾಂಬಿಕೆಯನ್ನು ಅದ್ದೂರಿಯಾಗಿ ವಿವಾಹ ಮಾಡಿಕೊಡುವ ಸನ್ನಿವೇಶವನ್ನು ಇಲ್ಲಿ ಕಾಣುವುದಿಲ್ಲ. ಅತ್ಯಂತ ಸರಳವಾದ ವಿವಾಹವು ಏರ್ಪಟ್ಟಿದೆ ಎಂಬುದನ್ನು ಇಲ್ಲಿಯ ಎಲ್ಲ ಅಂಶಗಳು ಹೇಳುತ್ತಿವೆ.

ಯಾವುದೇ ಬಗೆಯ ಅರಸೊತ್ತಿಗೆಯ ವಿನ್ಯಾಸಗಳಿಲ್ಲದೇ, ಆಡಂಬರದ ಸೂಚನೆಗಳಿಲ್ಲದೆ ರಚಿತವಾದ ಚಿತ್ರವಿದು. ಬಹಳ ಮೃದುವಾದ ವರ್ಣಸಂಯೋಜನೆಯಿಂದ ಆಪ್ಯಾಯಮಾನವಾಗುವ ಈ ಚಿತ್ರದಲ್ಲಿ ಶರಣಸಂಪನ್ನವಾದ ಗುಣಗಳನ್ನು ಹೊಂದಿದ ಆಕೃತಿಗಳನ್ನು ರಚಿಸಲಾಗಿದೆ. ಬಸವಣ್ಣ ದಂಪತಿಗಳು ಪಾರ್ಶ್ವದಲ್ಲಿ ನಿಂತಿರುವ ಆಕೃತಿಗಳು ಎಡಪಾರ್ಶ್ವಕ್ಕೆ ನೋಟ ಹರಿಸಿರುವುದು, ದಂಪತಿಗಳ ಹಿಂದೆ ನಿಂತಿರುವ ಆಕೃತಿಗಳು ಬಲಪಾರ್ಶ್ವಕ್ಕೆ ನೋಟವನ್ನು ಹರಿಸಿರುವದಂತೆ ಚಿತ್ರಿಸಿರುವುದು ಬಹುಶಃ ಚಿತ್ರಕ್ಕೆ ಸಹಜವಾದ ವಾತಾವರಣವನ್ನು ತುಂಬಲು ಇರಬಹುದು. ನೀಳವಾದ ಆಕೃತಿಗಳ ರಚನಾಶೈಲಿ ಇಡೀ ಚಿತ್ರಕ್ಕೆ ಭಾವದ ಸ್ಪರ್ಶ ನೀಡುತ್ತದೆ.

೨.೩೧೪. ಅನ್ಯೋನ್ಯ ಸಂಸಾರ

ಸ್ಥಳೀಯ ಕಲಾವಿದರಾದ ಕೆ. ಗಂಗಾಧರ ಅವರು ಈ ಕಲಾಕೃತಿಯನ್ನು ರಚಿಸಿದ್ದಾರೆ. ೪೮"x೩೬" ಅಳತೆಯ ತೈಲವರ್ಣ ಮಾಧ್ಯಮದಲ್ಲಿ ಈ ಕೃತಿ ಚಿತ್ರಿಸಲಾಗಿದೆ. ಪ್ರಸ್ತುತ ಈ ಕೃತಿಯು ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಸವಣ್ಣ ಮತ್ತು ಆತನ ಇಬ್ಬರು ಪತ್ನಿಯರೊಂದಿಗೆ ಅನ್ಯೋನ್ಯವಾಗಿರುವ ಸಂದರ್ಭವನ್ನು ದಾಖಲಿಸಲಾಗಿದೆ. ನೈಜಚಿತ್ರ ಪರಂಪರೆಗೆ ಸೇರಿದ ಪ್ರಸ್ತುತ ಕಲಾಕೃತಿಯು ಬಹು ಸೂಕ್ಷ್ಮ ಸಂಗತಿಗಳನ್ನು ಅನಾವರಣಗೊಳಿಸಿದೆ. ಚಿತ್ರದ ಆಶಯ, ಕಲಾಪ್ರಜ್ಞೆ, ಭಾವದ ಅಭಿವ್ಯಕ್ತಿ ಇವುಗಳು ಸಮತೂಕದಲ್ಲಿ ಅಭಿವ್ಯಕ್ತಿಗೊಂಡಿವೆ. ಕೆಂಪುಬಣ್ಣದ ತುಂಬು

ತೋಳಿನ ನಿಲುವಂಗಿ, ಹಣೆಯಲ್ಲಿ ವಿಭೂತಿ, ಕಪ್ಪುಕೂದಲನ್ನು ಬಾಚಿ ಹಿಂದಕ್ಕೆ ಕಟ್ಟಿರುವುದು, ಕೊರಳಲ್ಲಿ ರುದ್ರಾಕ್ಷಿ, ಬಿಳಿವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗ, ಬೋಧನೆ ಮಾಡುತ್ತಿರುವ ಮುಖದ ಭಾವನೆ ಇವು ಬಸವಣ್ಣನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿವೆ. ಮುಂದೆ ಇಳಿಜಾರಾದ ಕಟ್ಟಿಗೆಯ ಪುಟ್ಟ ಮೇಜು, ಅದರ ಮೇಲೆ ಬಿಡಿಸಿಟ್ಟ ತಾಳೆಗರಿಗಳು, ಮಸಿಕುಡಿಕೆ, ಲೇಖನಿ ಇವೆಲ್ಲವುಗಳು ಬಸವಣ್ಣ ವಚನರಚನೆಯಲ್ಲಿ ತೊಡಗಿದ್ದಾನೆ ಎಂಬ ಭಾವನೆಯನ್ನು ಬಹಳ ಸ್ಪಷ್ಟವಾಗಿ ಮೂಡಿಸುತ್ತವೆ. ಆತನ ಪಕ್ಕದಲ್ಲಿ ಅಲಂಕೃತಗೊಂಡ ಸೆರಗನ್ನುಳ್ಳ ಆಕಾಶನೀಲಿ ಬಣ್ಣದ ಸೀರೆಯನ್ನು ಉಟ್ಟುಕೊಂಡು ಕುಳಿತ ಸ್ತ್ರೀಯು ಬಹುಶಃ ಗಂಗಾಂಬಿಕೆ. ಹಣೆಯಲ್ಲಿ ಧರಿಸಿದ ವಿಭೂತಿ, ಅದರ ಮಧ್ಯೆ ಎದ್ದುತೋರುವ ಕುಂಕುಮದ ಬೊಟ್ಟು, ಕೊರಳಲ್ಲಿ ಇಷ್ಟಲಿಂಗದ ಬಿಳಿಬಣ್ಣದ ಗಂಟು, ಬಸವಣ್ಣ ಹೇಳುವುದನ್ನು ತನ್ಮಯತೆಯಿಂದ ಕೇಳುವ ಆಕೆಯ ಮುಖಭಾವವು ಸಹೃದಯರ ಅಭಿನಂದನೆಗೆ ಪಾತ್ರವಾಗುತ್ತದೆ. ಅವಳ ಹಿಂದೆ ಗುಲಾಬಿಬಣ್ಣದ ಸೀರೆಯನ್ನುಟ್ಟುಕೊಂಡು, ತಲೆತುಂಬ ಸೆರಗ್ಹೊದ್ದುಕೊಂಡು, ಕೈಯಲ್ಲಿ ಬೆಳ್ಳಿಯ ತಟ್ಟೆ, ಅದರಲ್ಲಿ ಫಲಾಹಾರಗಳನ್ನು ತೆಗೆದುಕೊಂಡು ಮೆಲ್ಲನೆಯ ಹೆಜ್ಜೆಯನ್ನು ಹಾಕುವ ಮುಖಭಾವದಿಂದ ಬರುವ ಸ್ತ್ರೀಯು ನೀಲಾಂಬಿಕೆ ಇರಬಹುದೆಂದು ಊಹಿಸಬಹುದು. ಕಲಾವಿದ ನೀಲಾಂಬಿಕೆಯು ಉಟ್ಟ ಸೀರೆಯ ನೆರಿಗೆಗಳನ್ನು ಬಹುಸೂಕ್ಷ್ಮವಾಗಿ ಕಾಣುವಂತೆ ಕುಶಲತೆಯಿಂದ ಚಿತ್ರಿಸಿದ್ದಾನೆ. ಇಳಿಬಿಟ್ಟ ಸೆರಗು, ಅದರ ವರ್ಣಸಂಯೋಜನೆಯನ್ನು ಸಮರ್ಪಕವಾಗಿ ಮೂಡಿಸಿದ್ದಾನೆ. ಚಿತ್ರದ ಭಿತ್ತಿಯಲ್ಲಿ ನೀಲಿ ಮತ್ತು ಹಸಿರು ಬಣ್ಣಗಳ ಸಂಯೋಜನೆಯಿಂದ ಕಿಟಕಿ, ಲಾಟೀನು, ಅದರ ಬೆಳಕು, ಮಂದಪ್ರಕಾಶ, ಇಳಿಯಬಿಟ್ಟ ಕಂದುಬಣ್ಣದ ಪರದೆ ಮತ್ತು ಅದರ ನಿರಿಗೆಗಳು ಒಂದಕ್ಕಿಂತ ಒಂದು ಯೋಜಿತ ರೀತಿಯಲ್ಲಿ ಕಲಾವಿದನ ಕುಂಚದಿಂದ ಮೂಡಿಬಂದಿವೆ. ಈ ಚಿತ್ರದಲ್ಲಿರುವ ಮೂರು ಮನುಷ್ಯಾಕೃತಿಗಳ ಅದರಲ್ಲೂ ವಿಶೇಷತಃ ಆಕೃತಿಗಳ ಮುಖಗಳ ಮೇಲೆ ಹೆಚ್ಚಿನ ಬೆಳಕನ್ನು ಕಲಾವಿದ ಚೆಲ್ಲಿದ್ದಾನೆ. ಕಲಾವಿದನ ಉದ್ದೇಶ ಹಿನ್ನೆಲೆಯ ಕಡೆಗೆ ಹೆಚ್ಚಿನ ಗಮನ ನೀಡದೆ ನೋಡುಗನು ವ್ಯಕ್ತಿಗಳ ಮೇಲೆ ಗಮನಹರಿಸಲಿ ಎಂದಿದ್ದಂತೆ ತೋರುತ್ತದೆ.

ಈ ಕಲಾಕೃತಿಯಲ್ಲಿ ಮೂಲವರ್ಣಗಳದ್ದೇ ಪ್ರಾಬಲ್ಯ. ಒಂದು ಬಗೆಯಲ್ಲಿ ಗಾಢಾಂಧಕಾರವನ್ನು ನೆನಪಿಸುತ್ತದೆ ಈ ಚಿತ್ರ, ಆಕೃತಿಗಳನ್ನು ಸ್ಪಷ್ಟವಾಗಿಸುವ ಒತ್ತಾಸೆ. ಇಂಗ್ಲೀಶ್‌ನ 'ವಿ' ಬಗೆಯಲ್ಲಿ ಆಕೃತಿಗಳ ಸಂಯೋಜನೆ. ಅರಸೊತ್ತಿಗೆಯ ಒಳಾವರಣವನ್ನು ದಟ್ಟವಾಗಿಸಿರುವುದರಿಂದ ವಾಸ್ತವತೆ ಗೌಣ. ಶರಣ–ಶರಣೆಯರ ವ್ಯಕ್ತಿತ್ವದಲ್ಲಿ ಶರಣಸಂಪನ್ನವಾದ ಮಂದಹಾಸ ಸ್ಪಷ್ಟವಾಗಿ ಮೂಡಿಬಂದಿದೆ. ಅಲಂಕಾರಕ್ಕೆಂದು ಹಿನ್ನೆಲೆಯಲ್ಲಿ ಇಟ್ಟಿರುವ ಹೂದಾನಿಯನ್ನು ಮಂದಬೆಳಕಿನಲ್ಲಿ ಚಿತ್ರಿಸಿರುವುದು ದೂರದ ವಸ್ತುವೊಂದನ್ನು ಗ್ರಹಿಸುವ ಬಗೆಗೆ ಈ ಚಿತ್ರ ನಿದರ್ಶನವಾಗಬಲ್ಲದು.

೨.೩.೧೫. ಲೆಕ್ಕ ಪತ್ರಗಳ ವ್ಯವಹಾರವನ್ನು ಸರಿಪಡಿಸುತ್ತಿರುವ ಬಸವಣ್ಣ

ಕೆ. ಗಂಗಾಧರ ಅವರ ಮತ್ತೊಂದು ಕೃತಿ ಇದಾಗಿದ್ದು, ೪೮"x೩೬" ಅಳತೆಯ ತೈಲವರ್ಣ ಮಾಧ್ಯಮದಲ್ಲಿ ಚಿತ್ರಣಗೊಂಡಿದೆ. ಈ ಕಲಾಕೃತಿಯೂ ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣ ಭಂಡಾರದ ಮಂತ್ರಿಯಾಗುವುದಕ್ಕಿಂತ ಮೊದಲಿನ ಸನ್ನಿವೇಶವನ್ನು ಪ್ರಸ್ತುತ ಚಿತ್ರವು ನಿರೂಪಿಸುತ್ತದೆ. ಬಿಜ್ಜಳನ ವಿತ್ತಮಂತ್ರಿಯಾಗಿದ್ದ ಬಲದೇವನು ಶಿವೈಕ್ಯನಾದ

ಮೇಲೆ ಭಂಡಾರದ ಮೇಲ್ವಿಚಾರಣೆ ನಡೆಸುವವರು ಯಾರೂ ಇಲ್ಲವಾಗುತ್ತದೆ. ಎಷ್ಟೋ ದಿನಗಳಿಂದ ಆಯ-ವ್ಯಯದ ಲೆಕ್ಕವನ್ನು ಆಸ್ಥಾನ ಕರಣಿಕರು ಮಾಡಿದರೂ ಲೆಕ್ಕಪತ್ರಗಳಿಗೆ ಭಂಡಾರದಲ್ಲಿರುವ ಹಣ, ಹೊನ್ನು, ವರಹಗಳಿಗೆ ತಾಳೆಯಾಗುವುದಿಲ್ಲ. ಆಗ ತಾನೆ ಕೂಡಲಸಂಗಮದಿಂದ ಕಲ್ಯಾಣಪಟ್ಟಣಕ್ಕೆ ಬಂದ ಬಸವಣ್ಣನ ಕೀರ್ತಿಯನ್ನು ಕೇಳಿದ ಬಿಜ್ಜಳ ಮಹಾರಾಜ ತನ್ನ ಆಸ್ಥಾನಕ್ಕೆ ಬಸವಣ್ಣನನ್ನು ಕರೆಸಿಕೊಳ್ಳುತ್ತಾನೆ. ಬಸವಣ್ಣ ಬಿಜ್ಜಳನ ಆಸ್ಥಾನದಲ್ಲಿ ಚಿಕ್ಕದಾದ ಪೀಠದಲ್ಲಿ ಬಂಗಾರದ ಅಂಚನ್ನು ಹೊಂದಿರುವ ಶುಭ್ರವಾದ ಬಿಳಿ ನಿಲುವಂಗಿ, ಪಂಚೆಯನ್ನು ಧರಿಸಿ ಕುಳಿತಿದ್ದಾನೆ. ಕೊರಳಲ್ಲಿ ಇಷ್ಟಲಿಂಗ, ಹಣೆಯಲ್ಲಿ ವಿಭೂತಿ, ಕಪ್ಪುತಲೆಗೂದಲನ್ನು ಬಾಚಿಕಟ್ಟಿದ ರೀತಿಯಲ್ಲಿ ಕಲಾವಿದ ಬಸವಣ್ಣನನ್ನು ಚಿತ್ರಿಸಿದ್ದಾನೆ. ತನ್ನ ಎರಡು ಕ್ರಿಯಾಶೀಲ ಹಸ್ತಗಳಿಂದ ಎದುರಿಗೆ ಕುಳಿತಿರುವ ನಾಲ್ಕು ಜನ ಕರಣಿಕರಿಗೆ ಲೆಕ್ಕಪತ್ರಗಳನ್ನು ಸರಿಪಡಿಸಲು ನಿರ್ದೇಶನ ಮಾಡುತ್ತಿದ್ದಾನೆ. ತೈಲವರ್ಣಕ್ಕೆ ಸೇರಿದ ಈ ಕಲಾಕೃತಿಯಲ್ಲಿ ಅತ್ಯಂತ ನವಿರಾದ ರೀತಿಯಲ್ಲಿ ಘಟನೆಯನ್ನು ಸಾದರಪಡಿಸುವುದನ್ನು ಕಾಣುತ್ತೇವೆ.

ಇಲ್ಲಿ ಬಂದಿರುವ ಪ್ರತಿಯೊಂದು ಸಂಗತಿಗಳು ಬಹುಸೂಕ್ಷ್ಮವಾದ ನೆಲೆಯಲ್ಲಿ ಅಭಿವ್ಯಕ್ತಗೊಂಡಿವೆ. ಅಚ್ಚುಕಟ್ಟುತನ ಪ್ರಧಾನವಾಗಿ ಎದ್ದುಕಾಣುವ ಅಂಶವಾಗಿದೆ. ಬಸವಣ್ಣನ ಎದುರಿಗೆ ನಿಂತಿರುವ ಬಿಜ್ಜಳ ಮಹಾರಾಜನು ಕಡುಕೆಂಪುಮಿಶ್ರಿತ ಕಂದುಬಣ್ಣದ ನಿಲುವಂಗಿ, ತಿಳಿನೀಲಿ ಬಣ್ಣದ ಮಿರುಗುವ ಪಂಚೆಯನ್ನುಟ್ಟಿದ್ದು, ತಲೆಗೆ ಮುತ್ತಿನ ಪೇಟವನ್ನು ಧರಿಸಿದ್ದಾನೆ. ಕೊರಳಲ್ಲಿ ಹಾಕಿರುವ ಮುತ್ತಿನ ಚಿಕ್ಕ ಸರ, ಹೆಗಲಿನಿಂದ ಎರಡೂಬದಿಗೆ ಇಳಿಯಬಿಟ್ಟಿರುವ ಜರತಾರಿ ಮೇಲುಹೊದಿಕೆ, ಎರಡೂ ಕೈಗಳಿಂದ ಹಿಡಿದಿರುವ ಕೆಂಪುಬಣ್ಣದ ಓಲೆಯ ಪತ್ರ ಆಕರ್ಷಕವಾಗಿವೆ.

ಬಿಜ್ಜಳನ ಪಕ್ಕದಲ್ಲಿ ವಯಸ್ಸಾದ ಇಬ್ಬರು ಬ್ರಾಹ್ಮಣರು ನಡೆಯುವ ವಿದ್ಯಮಾನವನ್ನು ಅತ್ಯಂತ ಕುತೂಹಲದಿಂದ ವೀಕ್ಷಿಸುತ್ತಿದ್ದಾರೆ. ಕೆಂಪು ಮೇಲುಹೊದಿಕೆ, ಹಣೆಯಲ್ಲಿ ಉದ್ದನೆಯ ನಾಮ, ಬಿಳಿದಾದ ಮಟ್ಟಸವಾದ ತಲೆಗೂದಲಿನ ವೃದ್ಧನು ತನ್ನ ಎಡಗೈಯನ್ನು ಗದ್ದದ ಮೇಲೆ ಆನಿಸಿಕೊಂಡಿದ್ದು ನೈಜವಾಗಿದೆ. ಮತ್ತೊಬ್ಬ ಬ್ರಾಹ್ಮಣ ಹಸಿರುಶಾಲನ್ನು ಹೆಗಲಮೇಲೆ ಹೊದೆದು ತನ್ನ ಎಡಗೈಯನ್ನು ಬಾಯಿಯ ಹತ್ತಿರ ತರುತ್ತಿರುವುದು ಅಚ್ಚರಿಯನ್ನು ವ್ಯಕ್ತಪಡಿಸುವ ರೀತಿಯಾಗಿದೆ. ಬಿಜ್ಜಳನ ಎದುರಿಗೆ ಇಬ್ಬರು ಕರಣಿಕರು ಹಳದಿಬಣ್ಣ ಮಿಶ್ರಿತ ಕೆಂಪು ನಿಲುವಂಗಿ, ಬಿಳಿಪಂಚೆ, ತಲೆಗೆ ನೇರಳೆ ಬಣ್ಣದ ರುಮಾಲು ಸುತ್ತಿಕೊಂಡಿದ್ದು, ಪಕ್ಕದಲ್ಲಿ ತೆಳುನೀಲಿ ಬಣ್ಣದ ನಿಲುವಂಗಿ, ಅದೇ ಬಣ್ಣದ ಪೇಟ, ಬಿಳಿ ಪಂಚೆಯನ್ನು ಧರಿಸಿ, ಲೆಕ್ಕಪತ್ರದ ತಾಳೆ ನೋಡುವಿಕೆಯಲ್ಲಿ ತಲ್ಲೀನರಾಗಿದ್ದಾರೆ. ಬಸವಣ್ಣನ ಎದುರಿಗೆ ಕುಳಿತ ಇಬ್ಬರು ಕರಣಿಕರು ಚಿಕ್ಕಮೇಜಿನ ಮೇಲೆ ಲೆಕ್ಕದ ಹಾಳೆಯನ್ನು ಪರಿಶೀಲಿಸುವ ರೀತಿಯಲ್ಲಿ ಗಂಭೀರ ಮುಖಮುದ್ರೆಯನ್ನು ಹೊಂದಿ ಕುಳಿತಿದ್ದಾರೆ. ಒಬ್ಬಾತ ಗುಲಾಬಿ ಬಣ್ಣದ ಅಂಗಿ, ಬಿಳಿಪಂಚೆ, ಮತ್ತೊಬ್ಬ ಮಿರುಗುವ ಆಕಾಶನೀಲಿ ಬಣ್ಣದ ನಿಲುವಂಗಿ, ಗುಲಾಬಿಬಣ್ಣದ ಪೇಟವನ್ನು ಧರಿಸಿದ್ದಾನೆ. ಭಿತ್ತಿಯಲ್ಲಿ ತೆಳುನೀಲಿ ಬಣ್ಣದ ಬಳಕೆಯಿದೆ. ಕಲಾವಿದ ಕೆ. ಗಂಗಾಧರರ ಕೃತಿಗಳಲ್ಲಿಯೇ ಹೆಚ್ಚು ಗಾಢವಾದ ಅದರಲ್ಲೂ ಕಪ್ಪನ್ನು ಬಳಸದೆಯೇ ರಚಿಸಿದ ಚಿತ್ರವಿದು. ಹಿನ್ನೆಲೆ, ಮುನ್ನೆಲೆಯಲ್ಲಿ ಹೆಚ್ಚು ಕಪ್ಪನ್ನು ಬೆರೆಸದೆಯೇ ಶುಭ್ರವರ್ಣಗಳ ಬಳಕೆ ಮಾಡಿದ್ದಾರೆ. ಹಾಗಾಗಿ ನೋಡುವುದಕ್ಕೆ ನಿಚ್ಚಳವಾಗಿ ಸೊಗಸಾಗಿ ಕಾಣುತ್ತದೆ.

ಸಂಯೋಜನೆಯ ದೃಷ್ಟಿಯಿಂದ ಮಹತ್ವದ್ದಾದ ಈ ಕಲಾಕೃತಿಯಲ್ಲಿ ಅಂಡಾಕಾರದಲ್ಲಿ ಆಕೃತಿಗಳು ರಚನೆಯಾಗಿವೆ. ಬಸವಣ್ಣ ಈ ಚಿತ್ರದಲ್ಲಿ ಪ್ರಮುಖ ಪ್ರತಿಮೆಯಾಗಿ ಗೋಚರವಾಗುವುದರ ಬದಲಿಗೆ ಬಿಜ್ಜಳನೇ ಪ್ರಮುಖ ಪ್ರತಿಮೆಯಾಗಿ ಚಿತ್ರಿತಗೊಂಡಿದ್ದಾನೆ. ಕಥಾನಕವೊಂದಕ್ಕೆ ಪೂರಕವಾಗಿ ಆಕೃತಿಗಳಲ್ಲಿ ಎಂದಿನಂತೆ ಆಂಗಿಕ ಚಲನಶೀಲತೆ ಮೆರೆದಿದೆ. ಬ್ರಾಹ್ಮಣರಿಬ್ಬರ ಆಂಗಿಕ ವರ್ತನೆಗಳು ಪಕ್ವವಾಗಿ ಪ್ರಕಟಗೊಂಡಿವೆ. ಕೆಳಗೆ ಕುಳಿತಿರುವ ಕರಣಿಕರ ಉಡುಪುಗಳಲ್ಲಿ ನೈಜತೆಗೆ ಹತ್ತಿರವಾದ ವರ್ಣೋಪಚಾರ ನಿರ್ವಹಿಸಲ್ಪಟ್ಟಿದೆ. ಅರಸೊತ್ತಿಗೆಯ ಖಜಾನೆಯಲ್ಲಿ ನಡೆಯುತ್ತಿರುವ ಘಟನೆಯನ್ನು ದೃಶ್ಯಾತ್ಮಕವಾಗಿ ನಿರೂಪಿಸಿರುವ ಈ ಚಿತ್ರ ಗಂಗಾಧರ ಅವರ ಇತರ ಚಿತ್ರಗಳಿಗಿಂತ ಮೃದುವಾದ ವರ್ಣಸಂಯೋಜನೆಯನ್ನು ಪಡೆದಿರುವುದರಿಂದ ಚಿತ್ರ ನೋಡುಗರಿಗೆ ಹೆಚ್ಚು ಆಪ್ಯಾಯಮಾನವಾಗುವುದರಲ್ಲಿ ಸಂದೇಹವಿಲ್ಲ ಎಂಬ ಸಂದೇಶವನ್ನು ಈ ಕೃತಿಯಿಂದ ಪಡೆಯಬಹುದಾಗಿದೆ.

೨.೩.೧೬. ಬಸವಣ್ಣ ಹರಳಯ್ಯನ ಮನೆಗೆ ಬಂದಾಗ ಆತ್ಮೀಯ ಅಪ್ಪುಗೆ

ಕಲಾವಿದ ಬಸವರಾಜ ಮುಗಳಿಯವರ ಈ ಕಲಾಕೃತಿಯು ೪೮"x೩೬" ಅಳತೆ, ತೈಲವರ್ಣ (ಎನಾಮೆಲ್) ಮಾಧ್ಯಮದಲ್ಲಿ ರಚನೆಯಾಗಿದೆ. ಈ ಚಿತ್ರದಲ್ಲಿ ಬಸವಣ್ಣ ಹರಳಯ್ಯನವರ ಮನೆಗೆ ಬಂದಾಗ ಹರಳಯ್ಯ ದಂಪತಿಗಳು ಬಸವಣ್ಣನನ್ನು ಆತ್ಮೀಯವಾಗಿ ನಡೆಸಿಕೊಂಡ ಅಪರೂಪದ ಚಿತ್ರವನ್ನು ಕಲಾವಿದರು ರಚಿಸಿದ್ದಾರೆ. ಕಪ್ಪಾದ ಕಿರು ತಲೆಗೂದಲು, ಹಣೆಯಲ್ಲಿ ಢಾಳವಾಗಿ ಕಂಡುಬರುವ ವಿಭೂತಿ ಪಟ್ಟಿಕೆಗಳು, ತಿದ್ದಿ ತೀಡಿದಂತಿರುವ ಹುಬ್ಬುಗಳು, ಅರೆನಿಮೀಲಿತವಾದ ಕಮಲದ ದಳದಂತೆ ಕಾಣುವ ಕಣ್ಣುಗಳು ಬಸವಣ್ಣನ ವ್ಯಕ್ತಿತ್ವವನ್ನು ಪರಿಚಯಿಸುತ್ತವೆ. ಬಿಳಿಪಂಚೆಯುಟ್ಟ ಬಸವಣ್ಣ ಹರಳಯ್ಯನನ್ನು ಬಹು ಆತ್ಮೀಯವಾಗಿ ಅಪ್ಪಿಕೊಂಡಿರುವಂತೆ ಕಂಡುಬರುತ್ತದೆ. ಅಂತೆಯೇ ಹರಳಯ್ಯ ದಟ್ಟವಾದ ಕಪ್ಪುಬಣ್ಣದ ಕೂದಲನ್ನು ಹಿಂಚಾಚಿ ಜಡೆಕಟ್ಟಿ, ಗಡ್ಡ ಮೀಸೆಯನ್ನು ಬಿಟ್ಟು, ತನ್ನ ತಲೆಯನ್ನು ಬಸವಣ್ಣನ ಹೆಗಲ ಮೇಲೆ ಇಟ್ಟಿದ್ದಾನೆ. ಇದೊಂದು ಅಪರೂಪದ ಭಾವನಾತ್ಮಕ ಸನ್ನಿವೇಶವಾಗಿದ್ದು, ಇಬ್ಬರು ಉನ್ನತ ಮಟ್ಟದ ಯೋಗಿಗಳ ಸಮ್ಮಿಲನವನ್ನು ಚಿತ್ರವು ಅಭಿವ್ಯಕ್ತಿಸುತ್ತದೆ. ಬಸವಣ್ಣನ ಎದುರಿಗೆ ಹಳದಿಬಣ್ಣದ ಕಿರು ಅಂಚಿನಿಂದ ಕೂಡಿದ ಬೂದಿಮಿಶ್ರಿತ ಹಸಿರು ಬಣ್ಣದ ಸೀರೆಯನ್ನು ಧರಿಸಿದ ಹರಳಯ್ಯನ ಪತ್ನಿಯಿದ್ದಾಳೆ. ಅವಳ ಮುಗ್ಧವಾದ ಭಾವನೆಯನ್ನು ಕಲಾವಿದ ಕಣ್ಣುಗಳ ಮೂಲಕ ಪ್ರಕಟಪಡಿಸಿದ್ದಾನೆ. ಎಡಗೈಯಲ್ಲಿ ನೀರಿನ ಕಮಂಡಲವನ್ನು, ಬಲಗೈಯಲ್ಲಿ ಒಂದು ತಟ್ಟೆಯಲ್ಲಿ ಪ್ರಸಾದವನ್ನು ಹಿಡಿದುಕೊಂಡು ನಿಂತಿರುವ ದೃಶ್ಯ ಮನಸ್ಸಿಗೆ ಉಲ್ಲಾಸ ನೀಡುತ್ತದೆ. ಪ್ರಸ್ತುತ ಚಿತ್ರದ ಭಿತ್ತಿಯು ಬಿದಿರಿನ ಜಾಲರಿಯ ಕಿಟಕಿಯನ್ನು ಹೊಂದಿದ್ದು, ಲಘುವರ್ಣಗಳನ್ನು ಹೆಚ್ಚು ಬಳಸಲಾಗಿದೆ. ಕಿಟಕಿಯ ಮೇಲೆ ಷಟ್‌ಸ್ಥಲದ ಚಿಹ್ನೆಯನ್ನು ಬಿಡಿಸಲಾಗಿದೆ. ಎಡಬದಿಯ ಕಿಟಕಿಯಲ್ಲಿ ತೆಳುಹಸಿರು ಬಣ್ಣದ ಗಿಡವೊಂದು ಕಾಣುತ್ತಿದೆ. ಈ ಕಲಾಕೃತಿಯು ತನ್ನ ಆಶಯ ಮತ್ತು ಉದ್ದೇಶಗಳನ್ನು ಅಭಿವ್ಯಕ್ತಗೊಳಿಸುವಲ್ಲಿ ಯಶಸ್ವಿಯಾಗಿದೆ.

ಕಲಾವಿದ ಮುಗಳಿಯವರ ವರ್ಣಮೇಳವೇ ಬಸವಣ್ಣನವರ ಜೀವನಚರಿತ್ರೆಗೆ ಅತ್ಯಂತ ಸೂಕ್ತ, ಸಮರ್ಪಕ, ಭಾವಾನಾತ್ಮಕ, ಪ್ರಚೋದಕ. ಒಂದು ಕಲಾಕೃತಿಗೆ ಬೇಕಾದ ಸತ್ವವೆಲ್ಲವೂ ಇವರ ವರ್ಣಮೇಳಗಳಲ್ಲಿ

ದೊರೆಯುತ್ತದೆ. ಆಕೃತಿಗಳಲ್ಲಿ ಸ್ವಲ್ಪ ಆಂಗಿಕವಾದ ಸತ್ವ ಮೈದುಂಬಿದರೆ ಶ್ರೇಷ್ಠವಾದ ಕಲಾಕೃತಿಯೊಂದು ಇವರಿಂದ ಉದ್ಭವಿಸುವುದು ದಿಟ ಎಂಬ ಸಂದೇಶವನ್ನು ಈ ಕಲಾಕೃತಿ ನೀಡುತ್ತಿರುವಂತಿದೆ. ಮಾನಸಿಕವಾಗಿ, ದೈಹಿಕವಾಗಿ ಶ್ರೀಮಂತ ಶರಣನ ಮನೆಗೆ ಬಂದ ಬಸವಣ್ಣ ಶರಣಸಮರ್ಪಣೆಯಿಂದ ಬಿಗಿದಪ್ಪಿಕೊಂಡಿದ್ದಾನೆ. ಈ ಹಿನ್ನೆಲೆಯಲ್ಲಿ ಹರಳಯ್ಯನ ಮನೆ ಅತ್ಯಂತ ಮೃದುವಾದ ವರ್ಣಸಂಯೋಜನೆಯಿಂದ ಯಥಾದರ್ಶನದ ಸೆಳಕುಗಳಿಂದ ಚಿತ್ರಿತವಾಗಿದೆ. ಆಕೃತಿಗಳೆಲ್ಲವೂ ಸಮಾನಾಂತರವಾಗಿ ಸಂಯೋಜಿಸಲ್ಪಟ್ಟಿದ್ದರೂ ಇಡೀ ಚಿತ್ರದ ವಾತಾವರಣವೇ ಶರಣಸಂಪನ್ನವಾಗಿದೆ.

೨.೩.೧೭. ಹರಳಯ್ಯನ ಮನೆಯಲ್ಲಿ ಬಸವಣ್ಣ ಪ್ರಸಾದ ಸ್ವೀಕಾರ ಮಾಡುತ್ತಿರುವುದು

ಶರಣರು ಜಾತಿಭೇದವನ್ನು ವಿರೋಧಿಸುತ್ತ ಬಾಳಿ ಬದುಕಿದವರು. ಮೇಲುಜಾತಿ, ಕೀಳುಜಾತಿ ಎಂಬ ತಾರತಮ್ಯ ಮಾಡದ ಇವರು ಅಸ್ಪೃಶ್ಯರು, ಸ್ಪೃಶ್ಯರು ಎಂಬ ಭೇದವನ್ನು ಮಾಡದೆ ಎಲ್ಲರೂ ಸಮಾನರು ಎಂಬ ತತ್ವವನ್ನು ಬೋಧಿಸಿ ಅದರಂತೆ ನಡೆದುಕೊಂಡವರು. ಪ್ರಸ್ತುತ ಚಿತ್ರದಲ್ಲಿ ಬಸವಣ್ಣನವರು ಶರಣನಾದ ಹರಳಯ್ಯನ ಮನೆಯಲ್ಲಿ ಪ್ರಸಾದ ಸ್ವೀಕರಿಸುತ್ತಿರುವ ಸನ್ನಿವೇಶವನ್ನು ಮನೋಜ್ಞವಾಗಿ ಚಿತ್ರಿಸಲಾಗಿದೆ. ಈ ಚಿತ್ರವು ವಾಸ್ತವಿಕ ಚಿತ್ರಣವನ್ನು ನೀಡುತ್ತಿದೆ. ಬಸವಣ್ಣನವರು ಹರಳಯ್ಯನ ಮನೆಯಲ್ಲಿ ತುಸು ಎತ್ತರವಾದ ಮಣಿಪೀಠದ ಮೇಲೆ ಕುಳಿತಿದ್ದಾರೆ. ಬಿಳಿಬಣ್ಣದ ಪಂಚೆ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಇಷ್ಟಲಿಂಗ, ಹಣೆಯಲ್ಲಿ ವಿಭೂತಿ, ಕೈಗಳಲ್ಲಿ ರುದ್ರಾಕ್ಷಿ ಧರಿಸಿ ಅತ್ಯಂತ ಸಂತೋಷದಿಂದ ಪ್ರಸಾದ ಸ್ವೀಕರಿಸಲು ಸಿದ್ಧವಾಗಿದ್ದಾರೆ. ಬಸವಣ್ಣನವರ ಎದುರಿಗೆ ಮೂರು ಕಾಲಿನ ಅಡ್ಡಣಿಗೆಯ ಮೇಲೆ ತಟ್ಟೆಯನ್ನಿಟ್ಟು ಅದರಲ್ಲಿ ಪ್ರಸಾದವನ್ನಿಡಲಾಗಿದೆ. ಬೆಳಕಿನ ಸಂಯೋಜನೆಯಿಂದ ತಟ್ಟೆಯಲ್ಲಿರುವ ಪ್ರಸಾದವು ಸ್ಪಷ್ಟವಾಗಿ ಮೂಡಿಬಂದಿದೆ. ಬಸವಣ್ಣನ ಮುಂಬದಿಯ ಅಕ್ಕಪಕ್ಕದಲ್ಲಿ ಹರಳಯ್ಯ ದಂಪತಿಗಳು ಪ್ರಸಾದದ ಪಾತ್ರೆ, ಬೋಗುಣಿಗಳನ್ನಿಟ್ಟುಕೊಂಡು ಅತ್ಯಂತ ವಿನಮ್ರರಾಗಿ ಬಸವಣ್ಣನವರನ್ನು ಪ್ರಸಾದ ಸ್ವೀಕರಿಸಲು ಕೋರಿಕೊಳ್ಳುವಂತೆ ಮುಖಭಾವ ಮೂಡಿಬಂದಿದೆ.

ಬಸವಣ್ಣನವರ ಎಡಪಕ್ಕದಲ್ಲಿ ನಿಲುವು ದೀಪವೊಂದು ಪ್ರಕಾಶಮಾನವಾಗಿ ಬೆಳಗುತ್ತಿದ್ದು ಅದರ ಬೆಳಕು ಇಡೀ ಕೋಣೆಯಲ್ಲಿ ವ್ಯಾಪಿಸಿದೆ. ಬೆಳಕಿನ ಪ್ರಕಾಶವನ್ನು ಅನುಸರಿಸಿ ಉಳಿದ ವಸ್ತುಗಳು ವ್ಯಕ್ತಿಗಳನ್ನು ವರ್ಣಸಂಯೋಜನೆಗೊಳಿಸಿ ಸಿದ್ಧಪಡಿಸಲಾಗಿದೆ. ದೀಪದ ಹತ್ತಿರ ಇರುವ ವ್ಯಕ್ತಿ, ವಸ್ತುಗಳು ಹೆಚ್ಚು ಪ್ರಕಾಶಮಾನವಾಗಿಯೂ, ದೀಪದ ಬೆಳಕಿನಿಂದ ಸ್ವಲ್ಪ ದೂರದ ವಸ್ತುಗಳು ಮಂದ ಪ್ರಕಾಶದಿಂದಲೂ ಚಿತ್ರಿತವಾಗಿರುವುದು ಈ ಚಿತ್ರದ ವೈಶಿಷ್ಟ್ಯವಾಗಿದೆ. ಬಿದಿರಿನ ಕಿಟಕಿಯ ಪಕ್ಕದಲ್ಲಿರುವ ಅಡುಗೆಯ ತಟ್ಟೆ, ಲೋಟ ಇನ್ನಿತರ ಸಾಮಗ್ರಿಗಳು ಮಂದ ಪ್ರಕಾಶದಲ್ಲಿ ಮೂಡಿಬಂದಿರುವುದನ್ನು ಕಾಣುತ್ತೇವೆ. ಜೊತೆಗೆ ಹರಳಯ್ಯನ ಮನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅಲ್ಲಿ ಯಾವ ಐಶ್ವರ್ಯದ ಸಂಪತ್ತಿನ ಕುರುಹುಗಳಿಲ್ಲದ ಸರಳ ಮತ್ತು ನಿರಾಡಂಬರ ಜೀವನಕ್ಕೆ ಸಾಕ್ಷಿ ನುಡಿಯುತ್ತದೆ. ಚಿತ್ರದ ಮಧ್ಯಕ್ಕೆ ಬಿದಿರಿನ ಜಾಲಂಧ್ರದ ಮೂಲಕ ತೂರಿಬರುತ್ತಿರುವ ಪ್ರಖರ ನೀಲಿಯು ನೋಡುಗರನ್ನು ತೀವ್ರವಾಗಿ ರಾಚುತ್ತದೆ. ಇದನ್ನು ತಪ್ಪಿಸಿದ್ದರೆ ಚಿತ್ರಕ್ಕೆ ಇನ್ನಷ್ಟು ಮೆರಗು ಬರುತ್ತಿತ್ತು.

ಹರಳಯ್ಯನ ಮನೆಯ ಒಳಾವರಣದಲ್ಲಿ ನಡೆದ ಘಟನೆಯನ್ನು ಆಧರಿಸಿದ ಚಿತ್ರವಿದು. ಹಿನ್ನೆಲೆಯಲ್ಲಿ ಹರಳಯ್ಯನ ಮನೆ, ಮುನ್ನೆಲೆಯಲ್ಲಿ ಪ್ರಸಾದ ಸ್ವೀಕಾರಕ್ಕೆ ಕುಳಿತ ಬಸವಣ್ಣ ಮತ್ತು ಹರಳಯ್ಯ ದಂಪತಿಗಳು. ಜಿಗ್ ಜಾಗ್ ಬಗೆಯಲ್ಲಿ ರಚನೆಗೊಂಡ ಇಲ್ಲಿನ ಆಕೃತಿಗಳು ಭಾವಪ್ರದವಾಗಿವೆ. ದೀಪದ ಬೆಳಕಿನ ಛಾಯೆ ಎಲ್ಲರ ಮೇಲೂ ಬಿದ್ದಿರುವಂತೆ ಚಿತ್ರಿಸಲಾಗಿದೆ. ಹರಳಯ್ಯನ ಮನೆಯ ಭಿತ್ತಿಯನ್ನು ಒಂದು ಬಗೆಯಲ್ಲಿ ಸಾಂಪ್ರದಾಯಿಕವಾಗಿ ಚಿತ್ರಿಸಲಾಗಿದೆ. ಕಿಟಕಿಯಾಚೆ ಮುಸ್ಸಂಜೆಯ ಛಾಯೆ ಸ್ಪಷ್ಟ. ಆಕೃತಿಗಳ ಮೇಲೆ ನೆರಳು ಬೆಳಕಿನ ವ್ಯತ್ಯಾಸವನ್ನು ಸ್ಪಷ್ಟವಾಗಿ, ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ.

೨.೩.೧೮. ಚೆನ್ನಬಸವೇಶ್ವರನ ಪುಷ್ಪಕೋತ್ಸವ

ಕಲಾವಿದ ಎಂ.ಎ. ಚೆಟ್ಟಿಯವರು ತೈಲವರ್ಣ ಮಾಧ್ಯಮದಲ್ಲಿ ಈ ಕಲಾಕೃತಿಯನ್ನು ರಚಿಸಿದ್ದಾರೆ. "ಬಿಜ್ಜಳ ರಾಜನು ಪಟ್ಟಣವನ್ನು ಸಿಂಗರಿಸಬೇಕೆಂದು ಹೇಳುತ್ತಿದ್ದಂತೆ ಊರ ಜನರು ತಮ್ಮ ಮನೆಯ ಮುಂದೆ ನೀರುಹೊಡೆದು ತಳಿರುತೋರಣಗಳಿಂದ ಬೀದಿಬೀದಿಗಳನ್ನು ಅಲಂಕರಿಸಿದರು. ಬಿಜ್ಜಳನು ತನ್ನ ಪುಷ್ಪಕವನ್ನು ತರಿಸಿ, ಅದರಲ್ಲಿ ನಾಗಲಾಂಬಿಕೆಯ ಮಗನನ್ನು ಕುಳ್ಳಿರಿಸಿ ನಮಸ್ಕರಿಸಿದನು. ಪಟ್ಟಣದ ಜನರನ್ನು ಮಂತ್ರಿಗಳನ್ನು ಕರೆಯಿಸಿ ವಾರಾಂಗನೆಯರನ್ನೂ ಬರಮಾಡಿಕೊಂಡನು. ಶೈವದಲ್ಲಿ ಶಿವಭಕ್ತಿ ಧರಿಸಿ ಜೈನನಾದ ಬಿಜ್ಜಳನು ಹರ್ಷದಿಂದ ಉತ್ಸವನ್ನು ಮಾಡಲು ಸಿದ್ಧನಾದನು."[೬೩] ಈ ದೃಶ್ಯದಲ್ಲಿ ಬಸವಣ್ಣನವರು ಭಾಗವಹಿಸಿದ್ದು ಕಂಡುಬರುತ್ತದೆ. ಬಸವಣ್ಣನವರಿಗೆ ಸೈನಿಕನೊಬ್ಬ ಚತ್ರಿಯನ್ನು ಹಿಡಿದು ಬಸವಣ್ಣನವರನ್ನು ಈ ಸಮಾರಂಭಕ್ಕೆ ಬರಮಾಡಿಕೊಳ್ಳುವ ದೃಶ್ಯ ಕಂಡುಬರುತ್ತದೆ. ಈ ಕೃತಿಯು ಅತ್ಯಂತ ಸುಂದರವಾಗಿ ಪಾಶ್ಚಾತ್ಯ ತಂತ್ರಗಳೊಂದಿಗೆ ಪ್ರಮಾಣ ಬದ್ಧವಾಗಿ ರೇಖೆ ವರ್ಣಗಳ ಬಳಕೆಯಾಗಿದ್ದು ಈ ಚಿತ್ರವು ಅದಕ್ಕೆ ಸಾಕ್ಷಿಯಾಗಿವೆ.

೨.೪. ಬಸವಣ್ಣನವರ ಪವಾಡಗಳ ವರ್ಣಚಿತ್ರಗಳು

ಧಾರ್ಮಿಕ ನಂಬಿಕೆಯನ್ನು ದೃಢವಾಗಿ ನಂಬಿರುವ ಮನಸ್ಸುಗಳು ಬಸವಣ್ಣನವರನ್ನು ಒಬ್ಬ ಚಾರಿತ್ರಿಕ ವ್ಯಕ್ತಿಯನ್ನಾಗಿ ನೋಡದೆ ಧಾರ್ಮಿಕ ಇಲ್ಲವೆ ದೈವೀ ಹಿನ್ನೆಲೆಯಲ್ಲಿ ನೋಡಬಯಸುತ್ತವೆ. ಅವರನ್ನು ಕುರಿತು ರಚಿತವಾದ ವೀರಶೈವ ಧರ್ಮೀಯ ಕವಿಗಳ ಸಾಹಿತ್ಯ ಕೃತಿಗಳು, ಪುರಾಣಗಳು, ಕಾವ್ಯಗಳು, ವಚನರಚನೆಗಳು ವೀರಶೈವ ಮತಾಚಾರವನ್ನು ಜಗತ್ತಿಗೆ ಪ್ರಸಾರ ಮಾಡುವ ಧೂತನಂತೆ ಚಿತ್ರಿಸಿರುವುದು ಕಂಡುಬರುತ್ತದೆ. ವಾಸ್ತವವಾಗಿ ಬಸವಣ್ಣ ಒಬ್ಬ ಚಾರಿತ್ರಿಕ ವ್ಯಕ್ತಿಯೆಂಬುದನ್ನು ಅನೇಕ ಶಾಸನಗಳು ನಮಗೆ ಮನವರಿಕೆ ಮಾಡಿಕೊಟ್ಟಿವೆ. ಜೋಡಿ ದಾಸೇನಹಳ್ಳಿ ಶಾಸನ[೬೪] ಕಲ್ಯಾಣದ ಶಿವಶರಣರ ಕುಲದ ಕೆಂಡ ಶಂಕರೇಶ್ವರ ದೇವರ ಗುಣಗಾನವು ಈ ಶಾಸನದ ವಸ್ತುವಾಗಿದೆ. ಇದರ ಕಾಲ ಕ್ರಿ.ಶ. ೧೬೮೬. ಇದರಲ್ಲಿ ಬಸವಣ್ಣನವರನ್ನು ಬಣ್ಣಿಸಿದ ಬಗೆ ವಿಶಿಷ್ಟವಾಗಿದೆ.

---

೬೩. ವೀರಭದ್ರಪ್ಪ ಹಾಲಭಾವಿ (ಸಂ.) : ವಿರುಪಾಕ್ಷ ಪಂಡಿತ ಕೃತಿ – ಚನ್ನಬಸವ ಪುರಾಣ, ಪು–೮

೬೪. E.K., XII, ಮದ್ದಗಿರಿ, ಪು–೮

ವೀರಶೈವ ಪುರಾಣಗಳಲ್ಲಿ ಉಕ್ತವಾಗಿರುವಂತೆ ೧,೯೬,೦೦೦ ಜಂಗಮರಿಗೆ ದಾಸೋಹ ಸೇವೆ ಮಾಡಿದುದು ಇಲ್ಲಿ ಉಲ್ಲೇಖಿತವಾಗಿದೆ. ಬಸವಣ್ಣನವರನ್ನು 'ಕಪ್ಪಟಿಯ ಸಂಗಮೇಶನ ಬಸವರಾಜೇಂದ್ರ' ಎಂದು ಬಣ್ಣಿಸಿರುವುದೊಂದು ವಿಶೇಷ. "...ಕಲ್ಯಾಣ ಪಟ್ಟಣಕ್ಕೆ ವಡೆಕರ್ತಿರಾಗಿ ೧೯೬೦೦೦ ಜಂಗಮಕೆ ದಾಸೋಹ ಮಾಡಿ ನಿಚ್ಚ ಪವಾಡವ ಮೆಸರೆದ ಕಪ್ಪಟಿಯ ಸಂಗನ ಬಸವ ರಾಜೇಂದ್ರನು..." ಎಂಬುದು ಶಾಸನದ ಪ್ರಧಾನ ಭಾಗವಾಗಿದೆ.[೬೫] ಬಸವಣ್ಣ ಕೇವಲ ಪೌರಾಣಿಕ ವ್ಯಕ್ತಿಯಾಗಿರಲಿಲ್ಲ ಎಂಬ ಅಂಶವನ್ನು ಪ್ರಸ್ತುತ ಶಾಸನ ದೃಢೀಕರಿಸುತ್ತದೆ. ಬುದ್ಧ, ಬಸವಣ್ಣ ಐತಿಹಾಸಿಕ ವ್ಯಕ್ತಿಗಳಾಗಿದ್ದರೂ ಅವರಿಗೆ ಧರ್ಮದ ಲೇಪನ ನೀಡಿ ದೈವತ್ವದ ಹಿನ್ನೆಲೆಯಲ್ಲಿ ನೋಡುವುದು ನಮ್ಮ ಜನರಿಗೆ ಹೆಚ್ಚು ಆಪ್ಯಾಯಮಾನವಾಗಿದೆ. ಈ ಹಿನ್ನೆಲೆಯಲ್ಲಿ ಬಸವಣ್ಣನವರನ್ನು ಭಕ್ತಿಭಂಡಾರಿ, ಯುಗಪುರುಷ, ಕ್ರಾಂತಿಕಾರಿ, ಧರ್ಮದೀಪಕ ಎಂಬೆಲ್ಲ ಅಭಿದಾನಗಳಿಂದ ಕರೆದರೂ ತೃಪ್ತಿಗೊಳ್ಳದಾದರು. ಇವುಗಳಲ್ಲಿ ಭಕ್ತಿಭಂಡಾರಿ ಎನ್ನುವ ವಿಶೇಷಣವು ಹೆಚ್ಚು ಸಂದರ್ಭದಲ್ಲಿ ಬಳಕೆಗೊಂಡಿದೆ. ಬಸವಣ್ಣ ಶಿವನ ಅಂಶವೇ ಎಂಬ ಅಭಿಪ್ರಾಯವನ್ನು ಕನ್ನಡ, ತೆಲುಗು ಮುಂತಾದ ಭಾಷೆಗಳಲ್ಲಿ ಪ್ರಕಟಗೊಂಡ ಕಾವ್ಯಗಳು ಸಾರುತ್ತಿವೆ. ಇನ್ನೂ ಕೆಲವರು ಸೂಚಿಸುವ ಬಸವಣ್ಣ ಮಾನವನಾಗಿ ಹುಟ್ಟಿ ತನ್ನ ಅಪರಿಮಿತ ಭಕ್ತಿಯಿಂದ ಕೂಡಲಸಂಗಮ ಅಂದರೆ ಶಿವನನ್ನು ಒಲಿಸಿಕೊಂಡು ಅನೇಕ ಪವಾಡಗಳನ್ನು ಮೆರೆದಿದ್ದಾನೆಂಬ ಅಭಿವ್ಯಕ್ತಿಗಳು ಅಷ್ಟೇ ಮುಖ್ಯವಾಗಿವೆ. ಈ ಹಿನ್ನೆಲೆಯಲ್ಲಿ ಬಸವಣ್ಣ ಒಬ್ಬ ಕಾರಣಿಕ ಪುರುಷನೆಂಬ ಬಲವಾದ ನಂಬಿಕೆಯಿಂದ ಕವಿಗಳು, ಸಾಹಿತಿಗಳು, ಚಿತ್ರಕಲಾವಿದರು ಆತನ ಸಾಧನೆಗಳನ್ನು ಪವಾಡಗಳ ಹಿನ್ನೆಲೆಯಲ್ಲಿ ನೋಡಬಯಸಿದ್ದಾರೆ. ಅಂಥ ಕಲಾವಿದರ ಚಿತ್ರಪಠ್ಯಗಳು ಬಸವಣ್ಣನ ವ್ಯಕ್ತಿತ್ವವನ್ನು ರೂಪಿಸಿಕೊಡುವಲ್ಲಿ ಯಾವ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ಪರಾಮರ್ಶಿಸಲಾಗಿದೆ.

"ಹರಿಹರ ಕವಿಯು ಬಸವರಾಜದೇವರ ರಗಳೆಯಲ್ಲಿ ಬಸವಣ್ಣನವರ ಅನೇಕ ಪವಾಡಗಳನ್ನು ವಿವರಿಸಿದ್ದಾನೆ. ಸ್ವಮತೀಯ ತಮ್ಮ ಮತನಾಯಕರ ಬಗೆಗೆ ಇಂತಹ ಪವಾಡಗಳನ್ನು ನಂಬಬಹುದು. ಆದರೆ ಪರಮತೀಯರು ನಂಬಬಹುದೇ? ಅಥವಾ ನಂಬಲಾರದೇ ಎಲ್ಲವನ್ನೂ ಅಸತ್ಯವೆಂದು ತಿರಸ್ಕರಿಸಿ ಬೇಕೆ? ಬಸವಣ್ಣನವರು ಪವಾಡಪುರುಷರೆಂಬುದು ಹರಿಹರಕವಿಯ ಮೂಢ ನಂಬಿಕೆಯಾಗಲೀ, ತಪ್ಪು ಊಹೆಯಾಗಲೀ ಇರಬಾರದು. ಕವಿಯು ಆ ರೀತಿಯ ತಿಳಿವಿಗೆ ಬಸವಣ್ಣನವರ ವಚನವೇ ಆಧಾರವೆಂದು ಹೇಳಬಹುದು. ಆ ವಚನವು ಇಂತಿದೆ.

ಎಂಬತ್ತೆಂಟು ಪವಾಡವ ಮೆರೆದು

ಹಗರಣದ ಚೋಹದಂತಾತ್ತೆನ್ನ ಭಕ್ತಿ – ಎಂಬ ವಚನದಲ್ಲಿ ಬಸವಣ್ಣನವರೇ ಸ್ವತಃ ತಾವು 'ಎಂಬತ್ತೆಂಟು ಪವಾಡ' ಗಳನ್ನು ಮೆರೆದರೆಂದು ತಿಳಿಸಿದ್ದಾರೆ."[೬೬]

ಗೊಲ್ಲತಿಯ ಮೊಸರಿನ ಗಡಿಗೆಯನ್ನು ಬೀಳದಂತೆ ರಕ್ಷಿಸಿದ ಪವಾಡ

ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣ, ಬ್ರಾಹ್ಮಣ ಮಂಚಣ್ಣ ಮೊದಲಾದ ಸಭಾಸದರು ಯಾವುದೋ

೬೫. ವಾಸುದೇವ ಬಡಿಗೇರ (ಸಂ.) : ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ (ಶೀಲಾಕಾಂತ ಪತ್ತಾರ ಅವರ ಲೇಖನ : ಶಾಸನಗಳಲ್ಲಿ ಬಸವಣ್ಣನವರು), ಪುಟ-೧೬೦

೬೬. ಪ್ರೊ. ಬಸವರಾಜ ಚೆನ್ನವೀರಪ್ಪ ಜವಳಿ : ಧರ್ಮ ಭಂಡಾರಿ ಬಸವಣ್ಣನವರು, ಪು-೩೧

ಸಮಾಲೋಚನೆಯಲ್ಲಿ ತೊಡಗಿರುವಾಗ ಬಸವಣ್ಣ ಕಾರಣವಿಲ್ಲದೆ ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹಿಡಿಯುತ್ತಾನೆ. ಇದನ್ನು ನೋಡಿದ ಮಂಚಣ್ಣ ಬಸವಣ್ಣನ ಈ ವರ್ತನೆಗೆ ಆಕ್ಷೇಪವೆತ್ತುತ್ತಾನೆ. ಜೊತೆಗೆ ತುಂಬಿದ ಸಭೆಯಲ್ಲಿ ಅನುಚಿತವಾಗಿ ವರ್ತಿಸಿದುದನ್ನು ಖಂಡಿಸುತ್ತಾನೆ. ಬಿಜ್ಜಳನು ಈ ಮಾತಿಗೆ ಉತ್ತರ ಹೇಳುವಂತೆ ಬಸವಣ್ಣನಿಗೆ ಸೂಚಿಸುತ್ತಾನೆ. ಆಗ ಬಸವಣ್ಣನು ಮಹಾರಾಜನೇ ಕೇಳು, ಗೊಲ್ಲತಿಯು ಮೊಸರಿನ ಗಡಿಗೆ ಹೊತ್ತು ಕಾಲ್ದಾರಿಯಲ್ಲಿ ನಡೆದು ಬರುತ್ತಿರುವಾಗ ಕಾಲುಜಾರಿ ಬೀಳುವಷ್ಟರಲ್ಲಿ ಬಸವೇಶಾ ನನ್ನನ್ನು ರಕ್ಷಿಸು ಎಂದು ಮೊರೆಯಿಟ್ಟಳು. ಅವಳ ಆರ್ತ ಮೊರೆ ನನಗೆ ಕೇಳಿಸಿದ್ದರಿಂದ ನನ್ನ ಕೈಯನ್ನೆತ್ತಿ ಅವಳ ಮೊಸರುಗಡಿಗೆ ಕೆಳಗೆ ಬೀಳುವುದನ್ನು ತಡೆದೆ ಎಂದು ಹೇಳುತ್ತಾನೆ. ಈ ಮಾತಿಗೆ ಕುತೂಹಲಗೊಂಡ ಬಿಜ್ಜಳ ಅಲ್ಲಿಗೆ ಸುಮ್ಮನಾಗದೆ ಈ ಮಾತನ್ನು ಪರೀಕ್ಷಿಸಲು ಮುಂದಾಗುತ್ತಾನೆ. ಸೇವಕನನ್ನು ಕರೆದು ಗೊಲ್ಲತಿಯನ್ನು ಉಪಾಯವಾಗಿ ಕರೆದು ತನ್ನಿ ಎಂದು ಆಜ್ಞಾಪಿಸುತ್ತಾನೆ. ಆಸ್ಥಾನಕ್ಕೆ ಬಂದ ಗೊಲ್ಲತಿಯು ಬಿಜ್ಜಳನಲ್ಲಿ, ಮಹಾರಾಜಾ, ನಾನು ಕಾಲುದಾರಿಯಲ್ಲಿ ಮೊಸರಿನ ಗಡಿಗೆ ಹೊತ್ತು ನಡೆಯುವಾಗ ಕಾಲುಜಾರಿ ಬೀಳಲಿದ್ದುದು ನಿಜ. ಬಸವನನ್ನು ನೆನೆದಾಗ ಆತನು ಮೊಸರಿನ ಗಡಿಗೆಯ ಸಹಿತ ನನ್ನನ್ನು ಮೇಲೆತ್ತಿ ರಕ್ಷಿಸಿದನು ಎಂದು ಬಡ ಗೊಲ್ಲತಿಯು ಅರಸನ ಸಮ್ಮುಖದಲ್ಲಿ ನುಡಿಯುತ್ತಾಳೆ. ಇದರಿಂದ ಬಿಜ್ಜಳ ಬಸವಣ್ಣನ ಶಕ್ತಿ, ಸತ್ವಗಳನ್ನು ಕಂಡು ಹರುಷಗೊಳ್ಳುತ್ತಾನೆ.

ಕೇತಕೀ ಹೂಗಳ ಪವಾಡ

ಒಂದು ದಿನ ಬಿಜ್ಜಳನ ಒಡ್ಡೋಲಗದಲ್ಲಿ ಬಿಜ್ಜಳನ ಪಕ್ಕದಲ್ಲಿ ಬಸವಣ್ಣ, ಗುರು ನಾರಾಯಣಭಟ್ಟ, ಮಂಚಣ್ಣಕ್ರಮಿತ, ಕೂಚಿಗ, ಪೋಚಿಪೆದ್ದಿಗ ಮೊದಲಾದ ಬ್ರಾಹ್ಮಣ ವರ್ಗದ ಪಂಡಿತರು ಕುಳಿತಿರುತ್ತಾರೆ. ಇವರನ್ನು ಹರಿಹರನು ವೇದಜಡರೆಂದು ಹೀಯಾಳಿಸುತ್ತಾನೆ. ಆ ಸಮಯದಲ್ಲಿ ಮಾಲೆಗಾರನೊಬ್ಬ ಆಸ್ಥಾನಕ್ಕೆ ಬಂದು ಘಮಘಮಿಸುವ ಬಂಗಾರದ ಬಣ್ಣದ ಕೇತಕೀ (ಕೇದಗೆ) ಹೂವನ್ನು ಅರಸನಿಗೆ ನೀಡುತ್ತಾನೆ. ಈ ಹೊಸದಾದ ಹೂವು ಎಲ್ಲಿಯದು ಎಂದು ಅಚ್ಚರಿಗೊಳ್ಳುತ್ತಾ ಸುವಾಸನೆಯ ಮುದ್ರೆಯನ್ನು ಒಡೆಯುವಂತೆ ಅರಸನು ಅದರ ದಳಗಳನ್ನು ಬಿಡಿಸುತ್ತಾನೆ. ಅದರೊಳಗಿನ ಒಂದು ಎಸಳನ್ನು ತೆಗೆದು ಬಸವಣ್ಣನ ಕೈಗೆ ನೀಡುತ್ತಾನೆ. ಬಸವಣ್ಣ ತನ್ನ ಕಕ್ಷಪುಟ(ಚೌಕ)ವನ್ನು ತೆರೆದು ಅದರೊಳಗಿರುವ ಇಷ್ಟಲಿಂಗಕ್ಕೆ ಕೇದಗೆ ಹೂವನ್ನು ಅರ್ಪಿಸುತ್ತಾನೆ. ಇದನ್ನೆಲ್ಲ ಗಮನಿಸುತ್ತಿದ್ದ ನಾರಾಯಣ ಭಟ್ಟರು ಕೇದಗಿ ಕುಸುಮವನ್ನು ಭೂತೇಶ್ವರಲಿಂಗಕ್ಕೆ ಅಂದರೆ ಶಿವನಿಗೆ ಮುಡಿಸಬಾರದು ಎಂಬುದು ಸತ್ಯ, ಇದು ಆಗಮಗಳಲ್ಲಿ ಲಿಖಿತವಾಗಿದೆ. ಇದನ್ನು ಮೀರಿ ದಂಡನಾಯಕನಾದ ಬಸವಣ್ಣನು ಲಿಂಗಕ್ಕೆ ಮುಡಿಸಿದ್ದಾನೆ ಎಂದು ಕಟುನುಡಿಯನ್ನು ಹೇಳುತ್ತಾನೆ. ಇದನ್ನು ಕೇಳಿ ಬಸವಣ್ಣನು ನಸುನಗುತ್ತಾ ಎಲೆ ದ್ವಿಜಾಧಮನೆ, ಕರ್ಮದಿಂದ ಜಡನಾದವನೆ, ಇಲ್ಲಿ ಕೇಳು, 'ದೇವಂ ಭಕ್ತರ್ ಕೊಟ್ಟಡೆ ಕೈಕೊಳ್ವಂ' ಎಂದು ನುಡಿಯುತ್ತಾನೆ. ಆ ಮಾತಿಗೆ ಬಿಜ್ಜಳನು ಗಡಗಡನೆ ನಡುಗಿ ಬಸವಣ್ಣನ ಮುಖವನ್ನು ನೋಡುತ್ತಾನೆ. "ದೇವರು ಭಕ್ತನು ಕೊಟ್ಟರೆ ಕೊಳ್ಳುತ್ತಾನೆ ಎಂಬುದಕ್ಕೆ ಸಾಕ್ಷಿ ಏನು?" ಎಂದು ಬಿಜ್ಜಳ ಪ್ರಶ್ನಿಸುತ್ತಾನೆ. ಅದಕ್ಕೆ ಉತ್ತರವಾಗಿ ಬಸವಣ್ಣನು ಶಿವಭಕ್ತರ ಕೊರಳಲ್ಲಿ, ತೋಳಿನಲ್ಲಿ, ಹಣೆಯಲ್ಲಿ ಕಟ್ಟಿಕೊಂಡ ಶಿವಲಿಂಗಗಳ ಗಂಟುಗಳನ್ನು ಇಲ್ಲವೆ ಚೌಕಗಳನ್ನು

ತೆರೆದು ತೋರಿಸಲು ಹೇಳುತ್ತಾನೆ. ಆಗ ಅವರ ಇಷ್ಟಲಿಂಗಗಳಲ್ಲಿ ಕೇದಗೆಯ ಹೂವಿನ ಎಸಳುಗಳು ರಾರಾಜಿಸುತ್ತಿರುವುದು ಕಂಡುಬರುತ್ತದೆ. ಅಲ್ಲದೆ ಪಟ್ಟಣದ ಶಿವದೇವಾಲಯಗಳಲ್ಲಿರುವ ಲಿಂಗಗಳ ತಲೆಯ ಮೇಲೆ ಕೇದಗೆಯ ಹೂವುಗಳು ತಾನೇತಾನಾಗಿ ಅಲಂಕೃತವಾಗಿರುವುದು ಕಂಡುಬರುತ್ತದೆ.

ದೇವರಿಗೆ ಯಾವ ಹೂವು ಇಷ್ಟವಾಗುವುದಿಲ್ಲವೆಂದು ಆಗಮಶಾಸ್ತ್ರ ಹೇಳುತ್ತದೆಯೋ ಭಕ್ತನು ಅದೇ ಹೂವನ್ನು ನೀಡಿದರೆ ಪ್ರೀತಿಯಿಂದ ಸ್ವೀಕರಿಸುತ್ತಾನೆ ಎಂಬುದು ಇದರಿಂದ ಸಾಬೀತಾಗುತ್ತದೆ. ಬಿಜ್ಜಳನು ಬಸವಣ್ಣನ ಪಾದಕ್ಕೆರಗಿ ತಪ್ಪುದಂಡವಾಗಿ ಪನ್ನಿಚ್ಛಾಸಿರ ಹೊನ್ನುಗಳನ್ನು ನೀಡುವ ಘಟನೆಗಳನ್ನು ಹರಿಹರನು ತನ್ನ ಬಸವದೇವರಾಜ ರಗಳೆಯಲ್ಲಿ ಚಿತ್ರಿಸಿದ್ದಾನೆ.[೬೭] ಈ ಘಟನೆಯು ಬಿಜ್ಜಳ ಮತ್ತು ಬಸವಣ್ಣ ಇಬ್ಬರನ್ನು ಹತ್ತಿರಕ್ಕೆ ತರುತ್ತದೆ.

ಭಂಡಾರದ ಪವಾಡ

ಬಸವಣ್ಣನ ಜೀವನಚರಿತ್ರೆಯಲ್ಲಿ ಭಂಡಾರದ ಪವಾಡ ಪ್ರಮುಖ ಘಟನೆಯಾಗಿ ರೂಪುಗೊಂಡಿದೆ. ಪ್ರಸ್ತುತ ಘಟನೆಯನ್ನು ಪಾರಂಪರಿಕವಾಗಿ, ಅತಿರಂಜಿತವಾಗಿ ಕನ್ನಡ ಕವಿಗಳು ತಮ್ಮ ಕಾವ್ಯ, ಪುರಾಣ ಇತ್ಯಾದಿ ಸಾಹಿತ್ಯ ಕೃತಿಗಳಲ್ಲಿ ಪ್ರಸ್ತಾಪಿಸುತ್ತಾ ಬಂದಿದ್ದಾರೆ. ಆಧುನಿಕ ನಾಟಕಕಾರರಾದ ಗಿರೀಶ್ ಕಾರ್ನಾಡ್ ಅವರು ಭಂಡಾರದ ಪವಾಡಕ್ಕೆ ವೈಜ್ಞಾನಿಕ ಮತ್ತು ವೈಚಾರಿಕ ಸಮರ್ಥನೆಗಳನ್ನು ನೀಡುವ ಪ್ರಯತ್ನ ಮಾಡಿದ್ದಾರೆ.

ಬಿಜ್ಜಳನ ಆಸ್ಥಾನದಲ್ಲಿದ್ದ ಬ್ರಾಹ್ಮಣ ಅಧಿಕಾರಿವರ್ಗದ ಒಂದು ಗುಂಪು ಬಸವಣ್ಣ ಮತ್ತು ಆತನ ಜೊತೆಗಿದ್ದ ವೀರಶೈವ ಅನುಯಾಯಿಗಳ ಗುಂಪುಗಳ ನಡುವೆ ಸದಾ ಒಂದಿಲ್ಲೊಂದು ವಾದ ವಿವಾದಗಳು, ವಾಗ್ವಾದಗಳು ನಡೆಯುತ್ತಲೇ ಇರುತ್ತವೆ. ಕ್ರಿ.ಶ. ೧೨ನೆಯ ಶತಮಾನದ ರಾಜಕೀಯ, ಧಾರ್ಮಿಕ ಪರಿಸ್ಥಿತಿಗಳು ಸದಾ ವಿಮುಖ ಚಲನೆಯನ್ನು ಪಡೆಯುತ್ತಿದ್ದುದನ್ನು ಇತಿಹಾಸ ಸ್ಪಷ್ಟಪಡಿಸಿದೆ. ಅದರ ಪರಿಣಾಮವಾಗಿ ಜಾತಿ, ಮತ, ಮೇಲು, ಕೀಳು ಇವುಗಳ ಕಿತ್ತಾಟಗಳು ನಡೆಯುತ್ತಿರುತ್ತವೆ. ಬಸವಣ್ಣನ ವಿರೋಧಿ ಬಣದ ಬಿಜ್ಜಳನ ಗುರುವಾಗಿದ್ದ ನಾರಣಕ್ರಮಿತ, ಸೌರಿಭಟ್ಟ, ವಿಷ್ಣುಪೆದ್ದಿ ಮೊದಲಾದ ವೈಷ್ಣವರು ಹರಭಕ್ತರ ಸಂಪತ್ತನ್ನು, ಅವರ ಪ್ರಸಿದ್ಧಿ, ಏಳ್ಗೆಯನ್ನು ಸಹಿಸಲಾಗದೆ, ಬುದ್ಧಿ ಬರಿದಾಗಿ, ಬಿಜ್ಜಳನಿಗೆ ಹೀಗೆ ಚಾಡಿ ಹೇಳುತ್ತಾರೆ: ಎಲೆ ದೇವ ಬಿಜ್ಜಳನೆ, ಪಟ್ಟಣದಲ್ಲಿ ಸುಳಿದಾಡುವ ಶಿವಭಕ್ತರ ಸಿರಿಯನ್ನು ಏನೆಂದು ನಿಮಗೆ ಹೇಳಲಿ, ನಿನ್ನ ಭಂಡಾರದಲ್ಲಿರುವ ಅತ್ಯಮೂಲ್ಯವಾದ ನೀನು ಎಂದೂ ತೊಟ್ಟುಕೊಳ್ಳಲಾರದ ಬಂಗಾರದ ಪದಕವನ್ನು ಶರಣರು ತಮ್ಮ ಎದೆಯ ಮೇಲೆ ಧರಿಸಿಕೊಂಡು ಮೆರೆಯುತ್ತಿದ್ದಾರೆ. ನೀನು ಮುಟ್ಟಲು ಹೆದರುವ ಹಿಂದಿನವರ ತೋರ ಮುತ್ತಿನ ಹಾರ (ದಪ್ಪವಾದ ಮುತ್ತಿನ ಹಾರ)ವನ್ನು ಶರಣರು ತಮ್ಮ ಕೊರಳಲ್ಲಿ ಧರಿಸಿಕೊಂಡು ಬೀಗುತ್ತಾ ಓಡಾಡುತ್ತಿದ್ದಾರೆ. ನೀನು ಭಂಡಾರದಲ್ಲಿರುವ ವಜ್ರಸಹಿತವಾದ ಕಂಕಣ (ಕಡಗ)ವನ್ನು ಶರಣರು ತಮ್ಮ ಕೈಗಳಲ್ಲಿ ಹಾಕಿಕೊಂಡು ಮೆರೆಯುತ್ತಿದ್ದಾರೆ. ನೀನು ಎಂದೂ ನೋಡಲು ಅಸಾಧ್ಯವಾದ ರತ್ನದಿಂದ ಕೂಡಿದ ಬಂಗಾರದ ಉಂಗುರಗಳನ್ನು ತಮ್ಮ ಕೈಗಳ ಬೆರಳುಗಳಲ್ಲಿ

೬೭. ಡಾ. ಎಂ.ಎಂ. ಕಲಬುರ್ಗಿ (ಸಂ.) : ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು–ಬಸವೇಶ್ವರದೇವರ ರಗಳೆ, ಪು–೧೪೬

ಧರಿಸಿಕೊಂಡು ಓಡಾಡುತ್ತಿದ್ದಾರೆ. ನೀನು ಈವರೆಗೆ ಎಂದೂ ಧರಿಸದಿರುವ ದಿವ್ಯವಾದ ವಸ್ತ್ರಗಳನ್ನು ಶರಣರು ಉಟ್ಟುಕೊಳ್ಳುತ್ತಿದ್ದಾರೆ. ನೀನು ಮೈಯಲ್ಲಿ ಪೂಸಿಕೊಳ್ಳದ ಅಪರೂಪದ ಅಮೋಘವಾದ ಗಂಧಗಳನ್ನು ಶರಣರು ತಮ್ಮ ಮೈಮೇಲೆ ಪೂಸಿಕೊಳ್ಳುತ್ತಿದ್ದಾರೆ. ಈವರೆಗೆ ನೀನೆಂದೂ ಪ್ರಯಾಣಿಸದ ವಾಹನಗಳು ಹರಭಕ್ತರಲ್ಲಿ ಕಂಡುಬರುತ್ತಿವೆ. ನೀನು ವಿನಾಕಾರಣ ಬಸವಣ್ಣನ ಮಾತುಗಳಿಗೆ ಮರುಳಾಗಿರುವೆ, ಅದರಿಂದ ನಿನ್ನ ಭಂಡಾರದ ನಗ, ನಾಣ್ಯ, ಮುತ್ತು, ರತ್ನ, ಒಡವೆ, ವಡ್ಯಾಣಗಳೆಲ್ಲವೂ ಒಂದೊಂದಾಗಿ ಕರಗುತ್ತಾ ಬರುತ್ತಿವೆ. ರಾಜ್ಯದ ಸಂಪತ್ತೆಲ್ಲವೂ ಹರಭಕ್ತರಿಗೆ ಅಂದರೆ ಶರಣರಿಗೆ ಖರ್ಚಾಗಿ ಹೋಯಿತು. ಇನ್ನು ಉಳಿದವರ ಪಾಡೇನು? ಇತ್ತೀಚೆಗೆ ಶರಣರ ಹಾವಳಿ ಹೆಚ್ಚಾಗಿದೆ. ಅವರು ಬ್ರಹ್ಮನನ್ನು, ವಿಷ್ಣುವನ್ನು, ಜಿನನನ್ನು ಬೈಯುತ್ತಿದ್ದಾರೆ. ಅದನ್ನು ಹೇಳುವವರಾರು? ಪ್ರಾಚೀನ ಕಾಲದಿಂದ ಬಂದಿರುವ ಷಟ್‌ದರ್ಶನಗಳೆಲ್ಲ ಕೀಳಾದವು, ಶಿವದರ್ಶನವೇ ಮೇಲಾಯಿತು. ಕ್ಷತ್ರಿಯ ಧರ್ಮದ ಅವನತಿಯನ್ನು ನೋಡಿಯೂ ನೀನು ಸುಮ್ಮನಿರುವೆಯಾ? ಇದನ್ನೆಲ್ಲ ನೀನು ಸಹಿಸಿಕೊಳ್ಳುತ್ತೀಯಾ ಎಂದಾದರೆ, ನಮ್ಮನ್ನೆಲ್ಲ ಎಲ್ಲಾದರೂ ಕಳುಹಿಸಿ ನೀನು, ಬಸವಣ್ಣ ಇಬ್ಬರೇ ಸುಖವಾಗಿರಿ ಎಂದು ಹೇಳುವುದರ ಮೂಲಕ ವಿಪ್ರವರ್ಗವು ಬಿಜ್ಜಳನ ಮನಸ್ಸನ್ನು ತಾಕುವಂತೆ ಮಾತನಾಡುತ್ತದೆ.

ಇವರ ಮಾತುಗಳಿಗೆ ಕಿವಿಗೊಟ್ಟು ಬಿಜ್ಜಳನು ಕೂಡಲೇ ತನ್ನ ಭಂಡಾರದ ಮಂತ್ರಿಯಾದ ಬಸವಣ್ಣನನ್ನು ಕರೆಸಿಕೊಳ್ಳುತ್ತಾನೆ. ಸಮಾನ ಗದ್ದುಗೆಯ ಮೇಲೆ ಇಬ್ಬರೂ ಕುಳಿತಿರುವಾಗ ಬಿಜ್ಜಳ ಅರಸನು ಮೆಲ್ಲಮೆಲ್ಲನೆ ಮಾತು ತೆಗೆದು, ಭಂಡಾರದ ಆಯವ್ಯಯವನ್ನು ನೋಡಿದಾಗ, ಅದರಲ್ಲಿ ಹದಿನೆಂಟು ಕೋಟಿ ಹಣ ಕಡಿಮೆಯಿರುವುದು ತಿಳಿದುಬಂದಿದೆ. ನಿನ್ನನ್ನು ನಂಬಿ ಈ ಭಂಡಾರವನ್ನು ಕೊಟ್ಟರೆ, ನೀನು ಅದರಲ್ಲಿರುವ ಅಮೂಲ್ಯ ಸಂಪತ್ತನ್ನು ಶಿವಭಕ್ತರಿಗೆ ನೀಡಿ ರಾಜ್ಯವನ್ನು ನೀರಿನಲ್ಲಿ ಮುಳುಗಿಸುವುದು ನ್ಯಾಯವೇ? ಅಷ್ಟೆಲ್ಲಾ ಮಾತೇಕೆ? ಆ ಹಣವನ್ನೆಲ್ಲ ನೀನು ತುಂಬಿಕೊಡಬೇಕೆಂದು ಬಿಜ್ಜಳನು ಬಸವಣ್ಣನಿಗೆ ಕಠಿಣವಾದ ಮಾತುಗಳಿಂದ ನುಡಿಯುತ್ತಾನೆ. ಬಸವಣ್ಣ, ಬಿಜ್ಜಳ ಪ್ರಭುವೇ, ನೀನು ಅನ್ಯಧರ್ಮದವರ ಮಾತುಗಳನ್ನು ಕೇಳಿ ಶಿವಭಕ್ತರ ಮೇಲೆ ದೋಷಾರೋಪಣೆ ಮಾಡುತ್ತಿರುವೆ. ಶಿವಭಕ್ತರು ಹಣ, ವಸ್ತು, ಒಡವೆಗಳಿಗೆ ಮನಸೋಲುವರೆಂದು ತಿಳಿದಿರುವೆಯಾ? ತಮ್ಮ ತಮ್ಮ ಒಡವೆಗಳನ್ನು ತಾವೆ ಕೊಂಡುಕೊಂಡಿದ್ದಾರೆ. ನಿನ್ನ ಮಾತನ್ನು ಪರೀಕ್ಷಿಸೋಣ, ನಡೆ ಬಿಜ್ಜಳನೇ ಎಂದು ಬಸವಣ್ಣ ಆತನ ವಿರೋಧಿಗಳು ಭಂಡಾರದ ಮನೆಗೆ ಬಂದು, ಮುದ್ರೆಯಿಂದ ಕೂಡಿರುವ ಪೆಟ್ಟಿಗೆಯನ್ನು ತೆಗೆದು ನೋಡುತ್ತಾರೆ. ಅದರಲ್ಲಿ ಕೋಟಿ ಕೋಟಿಯ ಹೊನ್ನುಗಳು ಇರುವುದು ಕಂಡುಬರುತ್ತದೆ.

ಈ ಮೊದಲಿದ್ದ ಹದಿನೆಂಟು ಕೋಟಿ ಹಣಕ್ಕೆ ೬೩ ಕೋಟಿ ಹೊನ್ನುಗಳು ಸೇರ್ಪಡೆಗೊಂಡಿರುತ್ತವೆ. ನೂರುಪಟ್ಟು, ಸಾವಿರಪಟ್ಟು, ಕೋಟಿಪಟ್ಟಾಗಿ ಹೆಚ್ಚಾಗುತ್ತಲೇ ಹೋಗುತ್ತಿರುತ್ತವೆ. ಗಣಕರು ಎಣಿಸಿ ಎಣಿಸಿ ಸುಸ್ತಾಗಿ ಕೊನೆಗೆ ಸುಮ್ಮನಾಗುತ್ತಾರೆ. ಬಸವಣ್ಣನ ವಿರೋಧಿಗಳ ಮುಖ ಬಿಳಿಪೇರುತ್ತದೆ. ಬಿಜ್ಜಳನ ಮುಖವು ನಾಚಿಕೆಯಿಂದ ಬಾಡಿಹೋಗುತ್ತದೆ. ಹರಭಕ್ತರ ಮುಖಗಳು ಹರುಷದಿಂದ ಕೂಡಿರುತ್ತವೆ. ಆಗ ಬಸವಣ್ಣನು ಅಲ್ಲಿಗೆ ಸುಮ್ಮನಾಗದೆ, "ಬಿಜ್ಜಳ ಮಹಾರಾಜನೇ, ಸರ್ವಬ್ರಹ್ಮಾಂಡ ಸಾರ್ವಭೌಮನೆನಿಪ ಶ್ರೀ ಸಂಗಮೇಶ್ವರಲಿಂಗದಂಘ್ರಿಯಂ ಮಹಾಪದವಿಗಳು ಬಯಸಿ ಬಂದು ಬಿಡದೋಲಯಿಸುತ್ತಿಪ್ಪಲ್ಲಿ

ಸಂಪದದೊಳೆಳ್ಳಿನಿತಂ ಕುಡೆ ಕುಬೇರನಾದಂ, ಕಾಂತಿಯೊಳೆಳ್ಳನಿತನೀಯೆ ಭಾಸ್ಕರನಾದಂ, ವೀರದೊಳು ಲವಲೇಶವನೀಯೆ ವೀರಭದ್ರನಾದಂ, ಚಲುವಿನೊಳಿನಿತುಂ ಸಿಡಿಯೆ ಕಾಮನಾದಂ, ನಿತ್ಯದ ಕಡೆಸೆರಂಗಿನ ಸೋಂಕಂ ಕುಡೆ ಲೋಮಜನಾದನೆಂದಡೆ ನೀನೆತ್ತಣ ಪರಮಾಣು? ಕ್ಷುದ್ರಜಂತು, ಶಿವನ ಮನೆಯ ತೊತ್ತಿನ ಮನೆಯ ತೊತ್ತಪ್ಪ ಮಾಯೆಯಾಡಿಸುವ ಮಣ್ಣರೂಪು, ಕಪ್ಪಡದ ಹಾಹೆ, ಕಲ್ಲ ಜಂತ್ರ, ಹುಲ್ಲ ಬೊಂಬೆ"[೬೮] ಎಂದು ಹೇಳುವುದರ ಮೂಲಕ ಬಸವಣ್ಣ ಶರಣಧರ್ಮ ಮತ್ತು ಶಿವನ ಪಾರಮ್ಯವನ್ನು ಈ ಮೂಲಕ ಪ್ರತಿಪಾದಿಸುತ್ತಾನೆ. ಅದಕ್ಕೆ ಪೂರಕವಾದ ಎರಡು ವಚನಗಳು ಈ ಸಂದರ್ಭದಲ್ಲಿ ಸಾಕ್ಷಿಕರಿಸಬಹುದು.

"ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು

ಓರೆಯಾವಿನ ಬೆನ್ನಲ್ಲಿ ಹರಿಯಲದೇಕಯ್ಯ?

ಲಜ್ಜೆಗೆಡಲೇಕೆ? ನಾಣುಗೆಡಲೇಕೆ?

ಕೂಡಲಸಂಗಮದೇವನುಳ್ಳನ್ನಕ್ಕ

ಬಿಜ್ಜಳನ ಭಂಡಾರವೆನಗೇಕಯ್ಯ?

ಮತ್ತು ಹೊನ್ನಿನೊಳಗೊಂದರೆಯ ಸೀರೆಯೊಳಗೊಂದೆಳೆಯ

ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ

ನಿಮ್ಮ ಪುರಾತನರಾಣೆ"[೬೯]

ಪ್ರಸ್ತುತ ಸನ್ನಿವೇಶವನ್ನು ಕುರಿತು ಗಿರೀಶ್ ಕಾರ್ನಾಡರು ತಮ್ಮ ತಲೆದಂಡ ನಾಟಕದಲ್ಲಿ ಹೊಸ ಆಯಾಮದೊಂದಿಗೆ ನಿರೂಪಿಸುತ್ತಾರೆ. ಸಾಂಪ್ರದಾಯಿಕವಾಗಿ ಮಂಚಣ್ಣಕ್ರಮಿತ ಬಿಜ್ಜಳನಿಗೆ ಬಸವಣ್ಣನು ಭಂಡಾರ ಸೂರೆ ಮಾಡುತ್ತಿರುವುದರ ಕುರಿತು ಚಾಡಿ ಹೇಳುತ್ತಾನೆ. ಆದರೆ ಬಿಜ್ಜಳ ಈ ಹಿಂದಿನ ನಿರೂಪಣೆಗಳಂತೆ ಒಡನೆಯೇ ಬಸವಣ್ಣನನ್ನು ಕರೆದು, ತನ್ನ ಭಂಡಾರದ ಲೆಕ್ಕಪತ್ರಗಳನ್ನು ಪರಿಶೀಲನೆ ಮಾಡುವುದಿಲ್ಲ. ಬದಲಾಗಿ ಮಂಚಣ್ಣಕ್ರಮಿತನಿಗೆ ಬಸವಣ್ಣನ ವ್ಯಕ್ತಿತ್ವದ ಬಗೆಗೆ ವಾಸ್ತವ ಸಂಗತಿಗಳನ್ನು ಕುರಿತು ಮನವರಿಕೆ ಮಾಡಿಕೊಡುತ್ತಾನೆ. ಮಂಚ್ಯಣ ಕ್ರಮಿತ, ನನ್ನ ರಾಜ್ಯದಲ್ಲಿ ಒಂದು ಲಕ್ಷದ ತೊಂಬತ್ತಾರು ಸಾವಿರ ಶರಣರಿದ್ದಾರೆ. ಅವರ ಚಲನವಲನಗಳನ್ನು, ಸಂಸಾರದ ರೀತಿಯನ್ನು ತಿಳಿದುಕೊಳ್ಳಲಾರದಷ್ಟು ದಡ್ಡ ನಾನಲ್ಲ. ಮಹಾಮನೆಯಲ್ಲಿ ನಡೆಯುವ ಪ್ರತಿಯೊಂದು ವಿಷಯವೂ ನನಗೆ ಗೊತ್ತು. ಅಲ್ಲಿರುವ ಒಂದೊಂದು ಪೈಸೆಯ ಲೆಕ್ಕವೂ ಗೊತ್ತು. ಕಲ್ಯಾಣ ಪಟ್ಟಣಕ್ಕೆ ನನ್ನ ಜೊತೆಗೆ ಬಸವಣ್ಣನೂ ಬಂದ. ಜೊತೆಗೆ ಶರಣರು ಬಂದರು. ಪ್ರತಿಯೊಬ್ಬ ಶರಣ 'ಕಾಯಕವೇ ಕೈಲಾಸ' ಎಂದು ರಟ್ಟೆ ಮುರಿಯುವ ತನಕ ದುಡಿಯುತ್ತಾನೆ. ಅವತ್ತಿನ ದಾಸೋಹಕ್ಕೆ ಎಷ್ಟು ಹಣ ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಳ್ಳುತ್ತಾನೆ. ಅಂದರೆ ಲಾಭ ಯಾರಿಗೆ ಬರುತ್ತದೆ? ಇಂದು ರಾಜ್ಯದ ಮೂಲೆ ಮೂಲೆಯಿಂದ ವ್ಯಾಪಾರಸ್ಥರು

೬೮. ಡಾ. ಎಂ. ಎಂ. ಕಲಬುರ್ಗಿ (ಸಂ.) : ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು– ಬಸವೇಶ್ವರದೇವರ ರಗಳೆ–ಸ್ಥಲ–೮, ಪು–೧೪೬

೬೯. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೭೫೫), ಪು–೧೮೯

ಕಲ್ಯಾಣಕ್ಕೆ ಬರುತ್ತಾರೆ. ಕಲ್ಯಾಣದಲ್ಲಿ ಜಗಳ, ಹೊಡೆದಾಟಗಳು, ಕಳ್ಳತನ ಮೊದಲಾದ ಅಕೃತ್ಯಗಳೇ ಇಲ್ಲ. ವಸ್ತುಗಳ ಧಾರಣಿ ಕಡಿಮೆಯಿದೆ. ಕಾಯಕವೇ ಶ್ರೇಷ್ಠ ಎಂದು ಎಲ್ಲ ಶರಣರೂ ತಮ್ಮ ಸಂಪತ್ತನ್ನು ತಂದು ತಂದು ಇಲ್ಲಿ ಸುರಿಯುತ್ತಾರೆ. ಅದರ ಲಾಭ ಯಾರಿಗೆ? ವ್ಯಾಪಾರಸ್ಥರಿಗೆ ತಾನೆ? ಜೈನರಿರಲಿ, ವೈದಿಕರಿರಲಿ, ಬಣಜಿಗರಿರಲಿ, ಹಣ ಎಲ್ಲರಿಗೂ ಒಂದೇಯಾಗಿರುತ್ತದೆ. ಅವರೆಲ್ಲ ಮಹಾಮನೆಗೆ ಕೈತುಂಬ ಕಾಣಿಕೆ ಕಳುಹಿಸುತ್ತಾರೆ.[೨೦]

ಬಸವಣ್ಣ ನಡೆಸಿದ ಬಹುತೇಕ ಪವಾಡಗಳಿಗೆ ಬಿಜ್ಜಳನ ಆಸ್ಥಾನದ ಬಸವಣ್ಣನ ವಿರೋಧಿ ಗುಂಪು ಸಾಕ್ಷಿಯಾಗಿ ನಿಲ್ಲುತ್ತದೆ. ಪುರಾಣಗಳಲ್ಲಿ ಕಂಡುಬರುವ ಪವಾಡಗಳಲ್ಲಿ ಅತಿಮಾನುಷ ನೆಲೆಗಳಲ್ಲಿಯೇ ಪ್ರಧಾನವಾಗಿ ಗೋಚರವಾಗುತ್ತದೆ. ಭಕ್ತರು ಮತ್ತು ಭವಿಗಳ ನಡುವಿನ ಸಂಘರ್ಷಗಳು ೧೨ನೆಯ ಶತಮಾನದ ಕಾಲಘಟ್ಟದಲ್ಲಿ ನಿರಂತರವಾಗಿ ನಡೆಯುತ್ತಿದ್ದುದನ್ನು ಅಂದಿನ ಕಾವ್ಯ ಪುರಾಣಗಳು ನಿರೂಪಿಸುತ್ತವೆ. ಅಪರೂಪದ ಪವಾಡವೊಂದು ಬಿಜ್ಜಳನ ಆಸ್ಥಾನದಲ್ಲಿ ನಡೆದ ಉಲ್ಲೇಖವನ್ನು ಸಿಂಗಿರಾಜ ತನ್ನ ಸಿಂಗಿರಾಜಪುರಾಣದಲ್ಲಿ ನಿರೂಪಿಸುತ್ತಾನೆ.

ತೃಣಪುರುಷನ ಪವಾಡ

ಒಂದು ದಿನ ಶ್ರೀಧರನೆಂಬ ಮೀಮಾಂಸಕಾಚಾರ್ಯನು ತನ್ನ ಶಿಷ್ಯ ಪರಿವಾರದೊಂದಿಗೆ ಬಿಜ್ಜಳನ ಆಸ್ಥಾನವನ್ನು ಪ್ರವೇಶಿಸುತ್ತಾನೆ. ರಾಜನು ವಿದ್ವಾಂಸನಾಗಿದ್ದ ಶ್ರೀಧರನಿಗೆ ಎದ್ದುನಿಂತು ನಮಸ್ಕರಿಸಿ, ಅವನನ್ನು ಕರೆತಂದು ಉಚಿತಾಸನದಲ್ಲಿ ಕುಳ್ಳಿರಿಸಿ, ಯಥೋಚಿತ ಗೌರವಾದರಗಳಿಂದ ಸತ್ಕರಿಸುತ್ತಾನೆ. ಅದೇ ಆಸ್ಥಾನದಲ್ಲಿದ್ದ ಬಸವಣ್ಣನು ಮಾತ್ರ ತನ್ನ ಆಸನದಿಂದ ಎದ್ದುನಿಂತು ನಮಸ್ಕರಿಸುವುದಿಲ್ಲ. ಅಲ್ಲಿದ್ದವರಿಗೆ ಮತ್ತು ಶ್ರೀಧರಾಚಾರ್ಯನಿಗೆ ಬಸವಣ್ಣನ ಈ ನಡವಳಿಕೆ ಸರಿಯೆನಿಸುವುದಿಲ್ಲ. ರಾಜನೇ ಎದ್ದುನಿಂತು ನಮಸ್ಕರಿಸಿದ ಮೇಲೆ ಮಂತ್ರಿಯಾದವನು ಅಧಿಕನೇ ಎಂಬ ಭಾವನೆ ಅವರಲ್ಲಿ ಮೂಡುತ್ತದೆ.

ಎದ್ದುನಿಲ್ಲದ ವ್ಯಕ್ತಿ ಬಸವಣ್ಣನೇ ಎಂದು ಆಚಾರ್ಯನಿಗೆ ಮನವರಿಕೆಯಾಗುತ್ತದೆ. ಕೂಡಲೇ ಬಸವಣ್ಣನನ್ನು ಆತನ ಮತವನ್ನು ಖಂಡಿಸುತ್ತಾ, ತನ್ನ ಪಾಂಡಿತ್ಯ ಪ್ರದರ್ಶನ ಮಾಡುತ್ತಾ ಮನಬಂದಂತೆ ಹಳಿಯಲು ಪ್ರಾರಂಭಿಸುತ್ತಾನೆ. ಅವನ ಎಲ್ಲ ಕಟುಮಾತುಗಳಿಗೂ ನಿಂದನೆಗಳಿಗೂ ಬಸವಣ್ಣನು ಉತ್ತರ ಕೊಡದೆ ಮೌನದಿಂದಿರುತ್ತಾನೆ. ಮೌನ ಆಚಾರ್ಯನನ್ನು ಮತ್ತಷ್ಟು ಕೆಣಕಿತು. ಭೃತ್ಯಾಪರಾಧ ಸ್ವಾಮಿಯದು ಎಂದು ಬಸವಣ್ಣನನ್ನು ಕೆಣಕುತ್ತಾನೆ. ಬಸವಣ್ಣನು ಶಿವನಿಂದಕರೊಂದಿಗೆ ಸಂಭಾಷಣೆ ನಡೆಸುವುದಿಲ್ಲ. ನನ್ನ ಮತ್ತು ಆತನ ನಡುವೆ ಒಂದು ತೃಣವನ್ನು (ಹುಲ್ಲುಕಡ್ಡಿ) ಹಾಕಿದರೆ ಆ ತೃಣಪುರುಷನಿಗೆ, ನಿಂದೆಗೆ ಉತ್ತರವನ್ನು ಕೊಡುತ್ತೇನೆ ಎಂದು ಬಸವಣ್ಣ ಹೇಳಿದಾಗ, ಬಸವಣ್ಣನ ಹೆಸರೇ ನಂದಿಯ ಸ್ವರೂಪದ್ದಾಗಿರುವುದರಿಂದ ಬಸವಣ್ಣನು ಹಸಿದಿರಬೇಕು, ಆದ್ದರಿಂದ ಹುಲ್ಲನ್ನು ಹಾಕಲು ಹೇಳುತ್ತಿದ್ದಾನೆ. ಆಸ್ಥಾನದ ಕುಹಕಿಯೊಬ್ಬ ಹಾಸ್ಯಮಾಡುತ್ತಾನೆ. ಮತ್ತೆ ಕೆಲವರು ಬಸವಣ್ಣ, ನೀನು ಸಾಮಾನ್ಯದವನಲ್ಲ,

೨೦. ಗಿರೀಶ ಕಾರ್ನಾಡ್ : ತಲೆದಂಡ ನಾಟಕ, ಅಂಕ ೧, ದೃಶ್ಯ ೩, ಪು–

ಆದ್ದರಿಂದ ತೃಣರಜ್ಜು ಪುರುಷನನ್ನು ಮಾಡಿ ಅಂದರೆ ಹುಲ್ಲನ್ನೇ ಮನುಷ್ಯನನ್ನಾಗಿ ರೂಪಿಸಿ ಅವನ ಬಾಯಿಂದಲೇ ನಿನ್ನ ಪ್ರತಿವಾದಿಗೆ ಉತ್ತರ ಕೊಡಿಸು ಎಂದು ಮಾರ್ಮಿಕವಾಗಿ ಸವಾಲೆಸೆಯುತ್ತಾರೆ.

ಅವರ ಬಯಕೆಯಂತೆ ಬಸವಣ್ಣನು ಆ ಒಣಹುಲ್ಲಿಗೆ ಕಣ್ಣುಬಾಯಿ, ಮೂಗು ಇತ್ಯಾದಿ ಬರುವಂತೆ ಮಾಡಿ ತೃಣವು ಪುರುಷನಾಗಿ ಮಾತನಾಡುವಂತೆ ಮಾಡುತ್ತಾನೆ. ತೃಣಪುರುಷನ ಮುಖದಿಂದಲೇ ಇಬ್ಬರ ನಡುವೆ ವಾದ ನಡೆಯುತ್ತದೆ. ಬಸವಣ್ಣ ಹೇಳಲಿಚ್ಛಿಸುವ ಎಲ್ಲ ಮಾತುಗಳನ್ನು ತೃಣಪುರುಷನೇ ಆಡತೊಡಗುತ್ತಾನೆ. ಆತನು ವೇದ, ಆಗಮ, ಉಪನಿಷತ್ತು, ಪುರಾಣಗಳ ಪ್ರಾಮಾಣ್ಯದಿಂದ ಮೀಮಾಂಸಕಾರನನ್ನು ಬೆರಗುಗೊಳಿಸುತ್ತಾನೆ. ಆತನ ತಲೆಯು ಭೂಮಿಯ ಉದರವನ್ನು ಬಗೆದು ಹೋಗುತ್ತಲಿತ್ತು. ಮೀಮಾಂಸಕಾರನಾದ ಶ್ರೀಧರನು ಶರಣು ಹೊಕ್ಕು ತನ್ನನ್ನು ಮನ್ನಿಸಬೇಕೆಂದು ಬೇಡಿಕೊಳ್ಳುತ್ತಾನೆ. ಪೂರ್ವಮೀಮಾಂಸೆಯ ಸಂಪಾದನೆಯ ಭ್ರಾಂತಿಯನ್ನು ಬಿಟ್ಟು ಉತ್ತರ ಮೀಮಾಂಸೆಯನ್ನು ತೃಣಪುರುಷ (ರಜ್ಜುಪುರುಷ)ನು ಉಪದೇಶಿಸಿದನು. ಶಿವಗಣಗಳ ಸಮೂಹವು ಆತನೊಂದಿಗೆ ಮಂತ್ರಿಮಂದಿರಕ್ಕೆ ತೆರಳುತ್ತದೆ.

ಮಂಚಣ್ಣ ದಂಪತಿಗಳ ಗುಪ್ತಭಕ್ತಿ – ಸದ್ಗತಿಪಥ

ಬಸವಣ್ಣನಿಗೆ ಭೂಮಂಡಲದಲ್ಲಿ ನೆರವಾಗಲು ಅವತರಿಸಬೇಕಾಗಿದ್ದ ಏಳುನೂರಾ ಎಪ್ಪತ್ತು ಅಮರಗಣಂಗಳಲ್ಲಿ ರಾಯಸದ ಮಂಚಣ್ಣನೂ ಒಬ್ಬನಾಗಿರುತ್ತಾನೆ. ಅವನ ಮಾತಾಪಿತೃಗಳು ವೈಷ್ಣವರಾಗಿದ್ದು, ಅದರಂತೆ ಮಂಚಣ್ಣನಿಗೆ ಚೌಲ, ಉಪನಯನ ಮುಂತಾದ ಬ್ರಾಹ್ಮಣ ಕರ್ಮಗಳನ್ನು ನೆರವೇರಿಸುತ್ತಾರೆ. ಆದರೆ ಮಂಚಣ್ಣ ಮೂಲದಲ್ಲಿ ಅಮರಗಣಂಗಳ ಸಾಲಿಗೆ ಸೇರಿದವನಾದ್ದರಿಂದ "ಶಿವಫಲಪ್ರದಾಯದ ಹೊಲಕ್ಕೆ ಮುಳುಬೇಲಿಗೆತ್ತಂತೆ ವೈಷ್ಣವರೂಪ ವಹಿಸಿಪ್ಪನು". ಅಂದರೆ ವೈಷ್ಣವನಂತೆ ಇದ್ದರೂ ಅವನು ವಿಷ್ಣುವೇ ಮೊದಲಾದ ದೇವತೆಗಳೂ ಮೋಕ್ಷಾರ್ಥವಾಗಿ ಶಿವನನ್ನೇ ಪೂಜೆ ಮಾಡಿರುವರೆಂದು ವೇದಾಗಮಗಳಲ್ಲಿ ತಿಳಿದು ಪರಮ ಶಿವಭಕ್ತಿಯನ್ನೇ ಆಚರಿಸುತ್ತಿದ್ದನು.

ಪ್ರತಿ ರಾತ್ರಿ ತನ್ನ ಗೋಪ್ಯವಾದ ಅಂತರಗೃಹದಲ್ಲಿ ತನ್ನ ಪತ್ನಿಯೊಡನೆ ಶಿವಪೂಜಾಕಾರ್ಯದಲ್ಲಿ ಮಗ್ನನಾಗುತ್ತಿದ್ದನು. ಒಂದು ದಿನ ನಡುರಾತ್ರಿ ಮಂಚಣ್ಣನ ಗೋಪ್ಯಗೃಹದ ಬೆಳಕಿಂಡಿಯಿಂದ ಧೂಪ, ಧೂಮವು ಹೊರಹೊಮ್ಮುತ್ತಿರುವುದನ್ನು ಕಂಡು ಗವಾಕ್ಷದೆಡೆಗೆ ಹೋಗಿ ಮಂಚರಸನೂ ಆತನ ಪತ್ನಿಯೂ ಶಿವಪೂಜಾನಿರತನಾಗಿರುವುದನ್ನು ಕಂಡು ಆ ಸಂಗತಿಯನ್ನು ಬಸವಣ್ಣನಿಗೆ ತಿಳಿಸುತ್ತಾನೆ. ವೈಷ್ಣವನಾಗಿಯೂ ಶಿವಪೂಜೆಯನ್ನು ಮಾಡುವ ಅಪರೂಪದ ಸಂಗತಿಯನ್ನು ಕಣ್ಣಾರೆ ಕಾಣಲು ಬಯಸಿ ಬಸವಣ್ಣ, ಸೊಡ್ಡಳ ಬಾಚಿರಾಜ, ಮಧುವರಸ, ಜಗದೇವಯ್ಯ ಇವರೆಲ್ಲರೂ ಮಂಚಣ್ಣನ ಮನೆಯ ಬಾಗಿಲಿಗೆ ಬಂದು ಕದ ತಟ್ಟುತ್ತಾರೆ. ಆ ಸದ್ದನ್ನು ಕೇಳಿದ ಮಂಚಣ್ಣ ದಂಪತಿಗಳಿಬ್ಬರು ತಮ್ಮ ಗುಪ್ತಭಕ್ತಿ ವ್ಯಕ್ತಭಕ್ತಿಯಾಯಿತೆಂದು ಕೊರಗಿ, ವ್ರತದ್ರೋಹವಾಯಿತೆಂದು ಮನನೊಂದು ಶಿವೈಕ್ಯರಾಗುತ್ತಾರೆ. ಮನೆಯ ಬಾಗಿಲು ಮಾತ್ರ ತೆರೆಯಲಿಲ್ಲ. ಇತ್ತ ಬಿಜ್ಜಳನ ಒಡ್ಡೋಲಗದಲ್ಲಿ ಅದೇ ಗೌಜು ಗುಂಪು ಕೊಂಡೆಯರು,

ಬಸವೇಶ್ವರಾದಿಗಳು ಮಂಚರಸರ ಮನೆಗೆ ದಾಳಿಯಿಟ್ಟಿರುವರು ಎಂದು ಚಾಡಿ ಹೇಳುತ್ತಾರೆ. ಅವರ ಮಾತು ನಿಜವೆಂದು ನಂಬಿದ ಬಿಜ್ಜಳನು ಹಾವನ್ನು ಮೆಟ್ಟಿದವನಂತೆ, ಕಾಯ್ದ ಕಾವಲಿಯ ಮೇಲೆ ಕೈಯಿಟ್ಟವನಂತೆ ಬೆಚ್ಚುತ್ತ, ಬೆದರುತ್ತ ನಡೆದ ಸಂಗತಿಯೇನೆಂದು ಕೇಳುತ್ತಾನೆ. ಗೂಢಚಾರರಿಂದ ವಿಷಯ ತಿಳಿದ ಬಿಜ್ಜಳ ಮಂಚಣ್ಣನ ಮನೆಗೆ ಹೋಗಿ ಮತ್ತೆ ಬಸವಾದಿಗಳನ್ನು 'ಉರಿವ ಉಕ್ಕುಗಳ ಬೊಟ್ಟನಿಟ್ಟಂತೆ' (ಕಾಯ್ದ ಉಕ್ಕಿನ ಸರಳಿನಿಂದ ಹಣೆಗೆ ತಿಲಕವನಿಟ್ಟಂತೆ) ಕೆಂಗಣ್ಣಿನಿಂದ ಕೆಕ್ಕರಿಸಿ ನೋಡುತ್ತ, ನೀವು ಇಲ್ಲಿಗೆ ಬಂದ ಕಾರಣವೇನೆಂದು ಕೇಳುತ್ತಾನೆ. ಆಗ ಬಸವಣ್ಣನು 'ನಾವು ಇಲ್ಲಿಗೆ ಸುಮ್ಮನೆ ಕೆಲಸವಿಲ್ಲದೆ ಬಂದಿಲ್ಲ, ಬಿಜ್ಜಳ ಮಹಾರಾಜ, ಮಂಚರಸರು ಸದಾಚಾರ ಸಜ್ಜನ ಶುದ್ಧಲಿಂಗಾರ್ಚಕರು, ಅವರ ಸದ್ಗತಿ ಪಥಕ್ಕೆ ನಮಸ್ಕಾರ ಮಾಡಲು ಬಂದೆವು" ಎನ್ನುತ್ತಾನೆ. ಆ ಮಾತನ್ನು ಕೇಳಿದ ಬಿಜ್ಜಳನ ಕೋಪ ಇನ್ನೂ ಹೆಚ್ಚಾಗುತ್ತದೆ.

ಮಂಚರಸನ ಮನೆಯ ಒಳಗೆ ನಡೆದಿರುವುದನ್ನು ತಿಳಿಯುವುದಕ್ಕಾಗಿ ಕದವನ್ನು ತೆಗೆಸಿ ನೋಡಿದಾಗ, ಮೈಯಲ್ಲಿ ಭಸಿತ ರುದ್ರಾಕ್ಷಿಗಳನ್ನು, ಕೈಯಲ್ಲಿ ಅಕ್ಷಮಾಲೆಯನ್ನು, ಅಂಗೈಯಲ್ಲಿ ಲಿಂಗವನ್ನು ಧರಿಸಿದ್ದ ಆ ಸತಿಪತಿಗಳಿಬ್ಬರು ಪ್ರಾಣ ಬಿಟ್ಟಿರುತ್ತಾರೆ. ಇದಕ್ಕೆ ಕಾರಣ ಬಸವಣ್ಣನೇ ಎಂದು ಬಿಜ್ಜಳನು ಆತನನ್ನು ದೂರುತ್ತಾನೆ. ಆಗ ಬಸವಣ್ಣನು ಅವರಿಬ್ಬರಿಗೂ ಭಸಿತವನ್ನಿಟ್ಟ ಕೂಡಲೇ ಅವನ ಪರುಷ ಪ್ರಭಾವದಿಂದ ಸತಿಪತಿಗಳಿಬ್ಬರ ಮೃತದೇಹಗಳಿಗೆ ಮತ್ತೆ ಜೀವಕಳೆ ತುಂಬುತ್ತದೆ. ಶಿವನು ಮೆಚ್ಚಿ ಪ್ರತ್ಯಕ್ಷನಾಗಿ ಅವರನ್ನು ಕೈಲಾಸಕ್ಕೆ ಕರೆದೊಯ್ಯುತ್ತಾನೆ. ಪ್ರಸ್ತುತ ಪವಾಡದಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳ ಸಂಘರ್ಷಣೆ ಮತ್ತು ಸಾಮರಸ್ಯಗಳೆರಡನ್ನೂ ಸೂಕ್ಷ್ಮವಾಗಿ ಅವಲೋಕಿಸಬಹುದಾಗಿದೆ. ವೇದಾಗಮಗಳು ಬ್ರಹ್ಮ, ವಿಷ್ಣು ಮೊದಲಾದ ಪ್ರಮುಖರು ಶಿವಪೂಜೆಯನ್ನು ಇಲ್ಲವೆ ಶಿವಲಿಂಗಾರ್ಚನೆಯನ್ನು ಮಾಡಿ ಇಷ್ಟಾರ್ಥ ಪಡೆಯುತ್ತಿದ್ದರೆಂಬ ಸಂಗತಿಯು ಶೈವಧರ್ಮದ ಉನ್ನತಿಕೆಯನ್ನು ತೋರ್ಪಡಿಸುವ ಕಾರ್ಯದಲ್ಲಿ ನಿರತವಾಗಿರುವುದನ್ನಿಲ್ಲಿ ಗಮನಿಸಬಹುದು. ಮೃತದಂಪತಿಗಳಿಗೆ ಬಸವಣ್ಣನು ತನ್ನ ಭಸಿತದಿಂದ ಮತ್ತೆ ಜೀವಬರಿಸಿದ ಘಟನೆಯು ಅಲೌಕಿಕವೆನ್ನಿಸಿದೆ.

ನೀನೊಲಿದರೆ ಬರಡು ಹಯನಹುದು

ಪ್ರಸ್ತುತ ಘಟನೆಯಲ್ಲಿ ಎರಡು ಸಂಗತಿಗಳು ನಮಗೆ ಕಾಣಸಿಗುತ್ತವೆ. ಬಸವಣ್ಣನನ್ನು ಬಿಜ್ಜಳನು ತನ್ನ ಆಸ್ಥಾನದಿಂದ ಮಂತ್ರಿಪದವಿಯಿಂದ ಉಚ್ಚಾಟಿಸಿದ್ದು, ಬಸವಣ್ಣನು ಬರಡು ಆಕಳಿನಿಂದ ಹಾಲು ಕರೆದದ್ದು. ಒಂದು ದಿನ ಗಣಪರ್ವದ ಸಂದರ್ಭದಲ್ಲಿ ಶಿವಶರಣರೆಲ್ಲರೂ ಕಲ್ಯಾಣಪಟ್ಟಣದಲ್ಲಿ ನೆರೆದಿರುತ್ತಾರೆ. ಮಂಗಳವಾದ್ಯಗಳೊಂದಿಗೆ ನಗರದ ಬೀದಿಬೀದಿಗಳಲ್ಲಿ ಕುಣಿಯುತ್ತಾ ಶಿವಭಜನೆ ಮಾಡುತ್ತಾ ಆನಂದದಿಂದ ಇರುವ ಕ್ಷಣಗಳನ್ನು ನೋಡಿ ಬಿಜ್ಜಳನು ಸಹಿಸದಾಗುತ್ತಾನೆ. ಇಂತಹ ಸಮಯವನ್ನೇ ಕಾಯುತ್ತಿದ್ದ ಕೊಂಡೆಯರು ಉರಿಯುವ ಬೆಂಕಿಗೆ ತುಪ್ಪವನ್ನು ಹಾಕಿದಂತೆ, ಸಂಗಮೇಶ ಕೊಟ್ಟನು, ಸಂಗಮೇಶ ತೆಗೆದುಕೊಳ್ಳುತ್ತಾನೆ ಎಂದು ಸುಳ್ಳು ನುಡಿಗಳನ್ನಾಡುತ್ತಾ ಬಸವಣ್ಣನು ಅರಮನೆಯ ಭಂಡಾರದ ಧನವನ್ನೆಲ್ಲ

ಗೊರವರಿಗಾಗಿ (ಶಿವಭಕ್ತರು) ದುರ್ವಿನಿಯೋಗ ಮಾಡುತ್ತಿದ್ದಾನೆ ಎಂದು ಚಾಡಿ ಹೇಳುತ್ತಾನೆ. ಆಗ ಬಿಜ್ಜಳನು ಬಸವಣ್ಣನನ್ನು ಕರೆಸಿ, ಜಂಗಮರ ಸಂಗವನ್ನು ತ್ಯಜಿಸು. ಇಲ್ಲವೆ ಮಂತ್ರಿಪದವಿನ್ನು ತ್ಯಜಿಸು ಎಂದು ಬಿರುಮಾತುಗಳನ್ನಾಡುತ್ತಾನೆ. ಬಸವಣ್ಣನು ಉತ್ತರವಾಗಿ, ಉರಿ ಬರಲಿ, ಸಿರಿ ಬರಲಿ. ಬೇಕು ಬೇಡೆಂದು ಕೇಳುವುದಿಲ್ಲ ಎಂದು ಹೇಳುತ್ತಾ, ಮಂತ್ರಿಪದವಿಯ ಮುದ್ರೆಯುಂಗುರವನ್ನು ಬಿಜ್ಜಳನಿಗೆ ವಾಪಸ್ಸು ನೀಡಿ ಹೊರಗೆ ಹೊರಟುಹೋಗುತ್ತಾನೆ. ಬಿಜ್ಜಳನು ಈ ಮೊದಲು ಬಸವಣ್ಣನಿಗೆ ನೀಡಿದ ಧನಕನಕ, ವಸ್ತುವಾಹನ, ವಸ್ತ್ರಾದಿಗಳನ್ನೆಲ್ಲ ವಶಪಡಿಸಿಕೊಂಡು ಹೊರದೂಡುತ್ತಾನೆ. ತಾನಾಗಿ ಬಂದ ರಾಜಲಕ್ಷ್ಮಿಯನ್ನು, 'ಗತಿಯನ್ನು ಅವಗತಿಯು ನೂಂಕುವಂತೆ', 'ಭಾಗ್ಯವನ್ನು ಅವಭಾಗ್ಯವು ನೂಕುವಂತೆ' ಬಸವೇಶನನ್ನು ಗಂಗಾದೇವಿ, ನೀಲಾಂಬಿಕೆ, ಅಕ್ಕನಾಗಮ್ಮ, ಶಿವಸ್ವಾಮಿ, ಚನ್ನಬಸವೇಶ್ವರ ಮತ್ತು ಬಾಲಸಂಗಯ್ಯ ಇವರು ಹಿಂಬಾಲಿಸಿ ನಡೆಯುತ್ತಾರೆ. ಒಂದೆರಡು ಯೋಜನ ದೂರ ನಡೆದ ಮೇಲೆ ಅವರಿಗೆ ಘೋರಾಟವಿ ಸಿಕ್ಕುತ್ತದೆ. ಆ ಹೊತ್ತಿನಲ್ಲಿ ಸಾಕ್ಷಾತ್ ಶಿವನೋ ಎಂಬಂತೆ ಒಬ್ಬ ಜಂಗಮಮೂರ್ತಿಯು, ಒಂದು ತಟ್ಟೆ, ತೌಡನ್ನು ಇಟ್ಟುಕೊಳ್ಳುವ ಒಂದು ಚೀಲದೊಂದಿಗೆ ಒಂದು ಮುದಿಯ ಹಸುವಿನೊಂದಿಗೆ ಬರುತ್ತಾನೆ. ಬಸವಣ್ಣನ ಚಿಂತಾಜನಕ ಸ್ಥಿತಿಯನ್ನು ನೋಡಿದ ಆತನು ಮಮ್ಮಲ ಮರುಗುತ್ತಾನೆ. ಬಸವಾದಿಗಳನ್ನು ಅಲ್ಲಿಯೇ ಹಳ್ಳದ ದಂಡೆಯಲ್ಲಿದ್ದ ಮತಿಘಟ್ಟದ ಒಂದು ಪಾಳುಜಾಗಕ್ಕೆ ಕರೆದುಕೊಂಡು ಬರುತ್ತಾನೆ. ಕಮಂಡಲದಲ್ಲಿ ನೀರು ತಂದು ಎಲ್ಲರ ತೃಷೆಯನ್ನು ಅಡಗಿಸುತ್ತಾನೆ. ಇದೇ ಹೊತ್ತಿನಲ್ಲಿ ಹಾಲಸರ್ವೇಶನೆಂಬ ಜಂಗಮನೊಬ್ಬನು ಬಸವೇಶ್ವರನನ್ನು ಹುಡುಕಿಕೊಂಡು ಬರುತ್ತಾನೆ. ಬಸವಣ್ಣನಿಗೆ, 'ಹೊಸಹಾಲಿನಿಂದ ಶಿವನಿಗೆ ಅಭಿಷೇಕ ಮಾಡಿ ಪೂಜೆ, ಪ್ರಸಾದ ಮಾಡುವ ವ್ರತವನ್ನು ನಾನು ಇರಿಸಿಕೊಂಡಿದ್ದೇನೆ. ಆದರೆ ಮಾಡುವುದೇನು? ಎಂದು ಬೇಸರ ವ್ಯಕ್ತಪಡಿಸುತ್ತಾನೆ. ಬಸವಣ್ಣನು ಅಲ್ಲಿಯೇ ಇದ್ದ ಬರಡು ಹಸುವಿನ ಮೈದಡವಲು, ಹಸ್ತಪುರುಷ ದೃಷ್ಟಿಪುರುಷ, ಭಾವಪುರುಷ, ಮುಂತಾದವುಗಳ ಪ್ರಭಾವದಿಂದ ಬರಡಾಕಳಿನ ಕೆಚ್ಚಲು ಹಾಲುತುಂಬಿ ತೊರೆಯಬಿಟ್ಟಿತು. ಬಸವಣ್ಣನು ಹಾಲನ್ನು ಕರೆದು ಹಾಲಸರ್ವೇಶನಿಗೆ ಸಮರ್ಪಿಸಿ ಕೃತಕೃತ್ಯನಾದನು. ಪ್ರಸ್ತುತ ಘಟನೆಗಳನ್ನು ಸಿಂಗಿರಾಜ ತನ್ನ ಸಿಂಗಿರಾಜಪುರಾಣದಲ್ಲಿ ಉಲ್ಲೇಖಿಸಿದ್ದಾನೆ.

ಬಸವಣ್ಣ ಮತ್ತು ಬಿಜ್ಜಳರು ಕ್ರೀ(ಕ್ರಿಯೆ) ಮತ್ತು ಭಾವಗಳ ಪ್ರತಿಬಿಂಬದಂತಿದ್ದರು. ಬಿಜ್ಜಳ ಮತ್ತು ಬಸವೇಶ್ವರರು ವೈಹಾಳಿಯಿಂದ ಹಿಂತಿರುಗಿ ಬರುತ್ತಿರುವಾಗ ಕಬ್ಬಿಲಿತಿಯೊಬ್ಬಳು ಮದ್ಯದ ಗಡಿಗೆಗೆ ಭಸ್ಮವನ್ನು ಲೇಪಿಸಿಕೊಂಡು ಅದನ್ನು ಹೊತ್ತುಕೊಂಡು ಬರುತ್ತಿರುತ್ತಾಳೆ. ಈ ವಿಷಯವನ್ನು ಬಿಜ್ಜಳನು ಈ ಮೊದಲೇ ಕೊಂಡೆಯರಿಂದ ತಿಳಿದಿರುತ್ತಾನೆ. ಬಸವಣ್ಣನಿಗೆ, 'ಭಸ್ಮವು ಸರ್ವವನ್ನೂ ಶುದ್ಧೀಕರಿಸುತ್ತದೆ-ಯೆಂದು ಹೇಳುವೆಯಲ್ಲ, ಆ ಭಸ್ಮವನ್ನು ಬಳಿದಿರುವ ಗಡಿಗೆಯೊಳಗೆ ಅಮೃತವೇ ಇದೆಯೇ?' ಎಂದು ಪ್ರಶ್ನಿಸುತ್ತಾನೆ. ಆಗ ಬಸವೇಶ್ವರನು ಆ ಗಡಿಗೆಯಲ್ಲಿದ್ದ ಮದ್ಯವನ್ನು ಹಾಲನ್ನಾಗಿ ಪರಿವರ್ತಿಸುತ್ತಾನೆ.

೨.೪.೧. ಬಸವಣ್ಣನವರನ್ನು ಕೊಲ್ಲಲು ಬಂದ ಆಗಂತುಕ

"ಕಳ್ಳ, ಬಂದಿಕಾರ, ಹಾವಡಿಗ, ಹಾದರಿಗ

ಬಂಟನೋಲೆಯ ಕಾರನೆಂದೆನಾದರೆ;

ನೀ ಮುಂತಾಗಿ ಬಂದ ಭಕ್ತರ,

ಅದೇ ದ್ರೋಹ

'ನಡೆನುಡಿ ಹುಸಿ' ಯುಂಟಾದರೆ,

ಕೂಡಲಸಂಗಮ ತೋರಿದ, ಚೆನ್ನಬಸವಣ್ಣ ನಾಣೆ!" – ಈಗ ಪ್ರಕಟಗೊಂಡಿರುವ ಬಸವರಾಜ ದೇವರ ರಗಳೆಯಲ್ಲಿ 'ಕಳ್ಳ,' ಮತ್ತು 'ಹಾದರಿಗ'ರ ಕಥೆಗಳು ಮಾತ್ರವಿದ್ದು ಆ ಎಲ್ಲಾ ಕಥಾ ಪ್ರಸಂಗಗಳಲ್ಲೂ ಬಸವಣ್ಣನವರು ಕಳ್ಳರು ಮತ್ತು ಹಾದರಿಗ ಈ ಎರಡೂ ಕಥೆಗಳ ಸಂದರ್ಭವು ಈಗಾಗಲೇ ಬಂದಿದೆ. ಬಸವರಾಜ ದೇವರ ರಗಳೆಯ ಇಲ್ಲದ ಭಾಗದಲ್ಲಿ ಪ್ರಾಯಶಃ (ಅ) ಬಂದಿಕಾರ, (ಆ) ಬಂಟ, (ಇ) ಓಲೆಕಾರ, (ಈ) ಹಾವಡಿಗ ಇವರ ಕಥೆಗಳು ಇರಬೇಕೆಂದು ಸಾಧಾರವಾಗಿಯೇ ಊಹಿಸಬಹುದಾಗಿದೆ.[೪೧]

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಸವಣ್ಣನವರು ತಮ್ಮ ಮಹಾಮನೆಯ ಮಲಗುವ ಕೋಣೆಯಲ್ಲಿ ಮಲಗಿರುವಾಗ ಕಳ್ಳನೊಬ್ಬ ಅವರ ಕೋಣೆಯನ್ನು ಪ್ರವೇಶಿಸಿ, ಕಳ್ಳತನ ಮಾಡುವ ವೇಷದ ಜೊತೆಗೆ ಅವರನ್ನು ಕೊಲೆ ಮಾಡುವ ಯತ್ನದಲ್ಲಿ ತೊಡಗಿರುವ ಸನ್ನಿವೇಶವನ್ನು ಕಾಣುತ್ತೇವೆ. ಪ್ರಸ್ತುತ ಚಿತ್ರವು ನೈಜಚಿತ್ರ ಪರಂಪರೆಗೆ ಸೇರಿದುದಾಗಿದೆ. ಬಿಳಿಯ ಪಂಚೆಯನ್ನು ತೊಟ್ಟುಕೊಂಡು ಬರಿಯ ಮೈಯಲ್ಲಿ ರುದ್ರಾಕ್ಷಿ ಮತ್ತು ವಿಭೂತಿ ಧಾರಣೆಗಳೊಂದಿಗೆ ಮೆತ್ತನೆಯ ಹಾಸಿಗೆಯ ಮೇಲೆ ಮಲಗಿರುವ ಬಸವಣ್ಣನನ್ನು ಕಾಣುತ್ತೇವೆ. ಮಂಚದ ಮೇಲೆ ಹಾಸಿರುವ ಸ್ವಲ್ಪ ಬಿಳಿಬಣ್ಣ ಮಿಶ್ರಿತ ಹಸಿರು ಹೊದಿಕೆಯು ನೀಲಿ ಮತ್ತು ಹಳದಿ ಬಣ್ಣದ ಅಂಚುಗಳಿಂದ ಅಲಂಕೃತಗೊಂಡಿದೆ. ಹಾಸಿಗೆಯ ಮೇಲಿರುವ ನವಿರಾದ ಮಡಿಕೆಗಳು ಕ್ರಮಬದ್ಧವಾಗಿವೆ. ಕೆಂಪುಬಣ್ಣದ ದೇಹವರ್ಣವನ್ನು ಹೊಂದಿದ ಬಸವಣ್ಣ ಕೆಂಪು ದಿಂಬಿನ ಮೇಲೆ ತನ್ನ ತಲೆಯನ್ನಿಟ್ಟು ಮಲಗಿ ಗಾಢವಾದ ನಿದ್ರೆಯಲ್ಲಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ವಿಭೂತಿಯ ಢಾಳಾಗಿ ಬಳಿದುಕೊಂಡ ಹಣೆ ಮತ್ತು ದೇಹದ ಇತರ ಭಾಗಗಳು, ಕಣ್ಣುಗಳು ನಿದ್ರೆಯಲ್ಲಿದ್ದಂತೆ ತೋರಿದರೂ ಒಂದು ಶಾಂತವಾದ ತಪೋಮುದ್ರೆಯ ಭಾವವನ್ನು ಸೂಚಿಸುತ್ತವೆ. ರುದ್ರಾಕ್ಷಿಯ ಮಾಲೆಯು ಮಲಗಿಕೊಂಡಾಗ ಅಸ್ತವ್ಯಸ್ತವಾಗಿ ಬಿದ್ದಿರುವಂತೆ ಬಸವಣ್ಣನ ಬಲಬದಿಗೆ ಜಾರಿಬಿದ್ದಂತೆ ಚಿತ್ರಿಸಲಾಗಿದೆ. ಅಂತೆಯೇ ಆತನ ಕೈಯಲ್ಲಿ ಬೀಸಣಿಗೆಯನ್ನು ಕಾಣಬಹುದು. ಬಹುಮುಖ್ಯವಾಗಿ ಬಸವಣ್ಣನ ಎದೆಯ ಮೇಲೆ ತನ್ನ ಇಷ್ಟಲಿಂಗದ ಪ್ರಭಾವಳಿಯು ಅನೇಕ ವರ್ಣಗಳ ಛಾಯೆಯನ್ನು ಉಂಟುಮಾಡಿದಂತೆ, ಮತ್ತು ತಲೆಯ ಸುತ್ತಲೂ ಪಾರದರ್ಶಕವಾದ ಪ್ರಭಾವಳಿ ಇರುವಂತೆ ಕಲಾವಿದನು ಚಿತ್ರಿಸಿದ್ದಾನೆ. ಎಡಗಾಲನ್ನು ಸ್ವಲ್ಪ ಮಡಿಚಿ ಬಲಗಾಲನ್ನು ನೀಳವಾಗಿ ಚಾಚಿದ್ದಾನೆ, ಆತನ ಬಲಗಾಲಿನ ಪಾದ, ಉಗುರುಗಳು, ಬೆರಳುಗಳು ತುಂಬ ನೈಜವಾಗಿ ಮೂಡಿಬಂದಿವೆ. ಪಂಚೆಯ ನೆರಿಗೆಗಳನ್ನು ತುಂಬ ಅಚ್ಚುಕಟ್ಟಾಗಿ ಚಿತ್ರಿಸುವುದನ್ನು ಕಲಾವಿದ ಮರೆತಿಲ್ಲ. ಕಳ್ಳನೊಬ್ಬ ಬಸವಣ್ಣನನ್ನು ಕೊಲ್ಲುವ ಉದ್ದೇಶದಿಂದ ಅಲ್ಲಿ ಬಂದಿದ್ದಾನೆ. ಕಪ್ಪು ಬಣ್ಣದ ತೋಳುಗಳಿಲ್ಲದ ಅಂಗಿಯನ್ನು ಧರಿಸಿದ ಆತನ ಕಿವಿಯ ಓಲೆಗಳು ಮಿಂಚುತ್ತಿವೆ. ಕೊರಳಲ್ಲಿ ಹುಲಿಯುಗುರಿನ ಸರವನ್ನು ಧರಿಸಿದ್ದಾನೆ. ಬಸವಣ್ಣನನ್ನು ಕೊಲ್ಲಲು ಬಂದ ಆತನ ಭಂಗಿ ಸಹಜವಾಗಿದೆ.

---

೭೧. ಪ್ರೊ. ಬಸವರಾಜ ಚೆನ್ನವೀರಪ್ಪ ಜವಳಿ : ಧರ್ಮ ಭಂಡಾರಿ ಬಸವಣ್ಣನವರು, ಪು–೩೧

ಕೈಯಲ್ಲಿ ಹಿಡಿದಿರುವ ಚಾಕು, ಬಲಗೈಯನ್ನು ಮೇಲೆತ್ತಿ ಕೊಲ್ಲಲು ಬಂದ ರೀತಿ ಇವೆಲ್ಲವೂ ಸಹಜವಾಗಿವೆ. ಕಳ್ಳನ ಕಣ್ಣುಗಳಲ್ಲಿ ಬಸವಣ್ಣನ ಇಷ್ಟಲಿಂಗದಿಂದ ಹೊರಟ ಪ್ರಭಾವಳಿಯು ಭೀತಿಯುಂಟು ಮಾಡಲು ಕಾರಣವಾಗಿದೆ. ಇಷ್ಟಲಿಂಗದ ಪ್ರಭಾವಳಿ ಒಮ್ಮೆಲೆ ಝಗ್ಗನೆ ಹೊಳೆದ ಪರಿಣಾಮಕ್ಕೆ ಕೊಲ್ಲಲು ಬಂದ ಕಳ್ಳನೇ ಅತಿ ಭೀತಿಯಿಂದ ಹಿಂದೆ ಸರಿಯುತ್ತಿರುವಂತೆ ಕಾಣುತ್ತದೆ. ಅಲಂಕೃತಗೊಂಡ ಮಂಚ, ಎಡಗಡೆಯ ಪುಟ್ಟ ಮೇಜಿನ ಮೇಲೆ ನೀರಿನ ಹೂಜಿ, ಮತ್ತು ಲೋಟ, ಭಿತ್ತಿಯಲ್ಲಿ ಹಸಿರುಬಣ್ಣದ ಇಳಿಯಬಿಟ್ಟ ಪರದೆಗಳು, ಅಲಂಕೃತಗೊಂಡ ಕಂಭಗಳು ನೈಜತೆಯ ಈ ಚಿತ್ರಕ್ಕೆ ಹೆಚ್ಚು ಮೆರುಗನ್ನು ನೀಡಿವೆ.

ಮೇಲಿನ ಚಿತ್ರ ವಿಶ್ಲೇಷಣೆಯನ್ವಯ ಈ ಚಿತ್ರದಲ್ಲಿ ಅರಸೊತ್ತಿಗೆಯ ಪ್ರತೀಕವಾಗಿರುವ ವಿನ್ಯಾಸಗಳು ವಿಜೃಂಭಿಸಿದ್ದು, ಮುನ್ನೆಲೆಯಲ್ಲಿ ಬಸವಣ್ಣ ಮತ್ತು ಕಳ್ಳನ ಆಕೃತಿಗಳು ರಚಿತಗೊಂಡಿವೆ. ಚಿತ್ರಿಕ ಗಂಗಾಧರ ಇವರ ಎಲ್ಲ ಕಲಾಕೃತಿಗಳಲ್ಲಿ ಎಂದಿನಂತೆ ಕಂಡುಬರುವ ನೀಲಿ ವರ್ಣವೇ ಹಿನ್ನೆಲೆಯಾಗಿ ಇಲ್ಲಿಯೂ ಪುನರಾವರ್ತನೆಗೊಂಡಿದೆ. ಕಂಭಗಳನ್ನು ಅವುಗಳ ವಿನ್ಯಾಸಗಳನ್ನು ಯಥಾದರ್ಶನದ ಹಿನ್ನೆಲೆಯಲ್ಲಿ ನೆರಳು ಬೆಳಕಿನ ಛಾಯೆಗಳನ್ನು ಅತ್ಯಂತ ಸಮರ್ಥವಾಗಿ ದುಡಿಸಿಕೊಂಡಿದ್ದರೆ, ಆಕೃತಿಗಳ ಅಂಗಾಂಗಗಳಲ್ಲಿ ಚೈತನ್ಯವನ್ನು ಇನ್ನೂ ಸಾಕಷ್ಟು ತುಂಬಬೇಕೆನ್ನುವ ಬೇಡಿಕೆಯನ್ನು ಸಹ ಈ ಕಲಾಕೃತಿ ಮುಂದಿಡುತ್ತದೆ.

೨.೪.೨. ಕಳ್ಳನಿಗೆ ಮನಃಪರಿವರ್ತನೆ ಮಾಡುತ್ತಿರುವ ಬಸವಣ್ಣ–೧

ಈ ಚಿತ್ರವೂ ಕಲಾವಿದ ಕೆ. ಗಂಗಾಧರ ಅವರದ್ದೇ ಆಗಿದೆ. ೪೮"x೩೬" ಅಳತೆಯ ಈ ಕಲಾಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಬಸವಣ್ಣನ ಮನೆಗೆ ಕಳ್ಳನು ಕದಿಯಲು ಬಂದಾಗ ಭಟರು ಕಳ್ಳನನ್ನು ಹಿಡಿದು ಬಸವಣ್ಣನ ಮುಂದೆ ನಿಲ್ಲಿಸುವ ಸನ್ನಿವೇಶವನ್ನು ಕಾಣುತ್ತೇವೆ. ಮಿರುಗುವ ದೇಹವರ್ಣವನ್ನು ಹೊಂದಿದ ಬಸವಣ್ಣ ಮಟ್ಟಸವಾದ ಕಪ್ಪು ಕೂದಲನ್ನು ಹಿಂದೆ ಚಾಚಿ ಬಾಚಿಕೊಂಡಂತೆ ಕಾಣುತ್ತಿದ್ದಾನೆ. ಕೊರಳಲ್ಲಿ ಇಷ್ಟಲಿಂಗದ ಕೆಂಪುವಸ್ತ್ರದ ಗಂಟು ಪ್ರಧಾನವಾಗಿ ಎದ್ದುಕಾಣಿಸುತ್ತದೆ. ಬರಿಯ ಮೈಯಲ್ಲಿದ್ದು, ಮುತ್ತಿನ ಪ್ರಕಾಶವನ್ನು ಬೀರುವ ನಿರಿಗೆಗಳುಳ್ಳ ಪಂಚೆಯನ್ನು ಸೊಂಟಕ್ಕೆ ಮೇಲುವಸ್ತ್ರವನ್ನು ಬಿಗಿದು ಕಟ್ಟಿಕೊಂಡು ನಿಂತಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ತನ್ನ ಎರಡೂ ಕೈಗಳಲ್ಲಿ ಮುತ್ತಿನ, ಬಂಗಾರದ ಆಭರಣಗಳನ್ನು ಹಿಡಿದುಕೊಂಡು ತನ್ನೆದುರಿಗೆ ನಿಂತ ಕಳ್ಳನಿಗೆ ಕೊಡುವ ಪ್ರಯತ್ನ ಮಾಡುತ್ತಿದ್ದಾನೆ. ಆತನು ನೀಡುವ ಆಭರಣಗಳನ್ನು ಕಳ್ಳನು ತನಗೆ ಬೇಡ ಎಂದು ನಿರಾಕರಿಸುತ್ತಿರುವ ಭಂಗಿಯೂ ವಿಶೇಷವಾಗಿದೆ.

ಬಸವಣ್ಣನ ಎದುರಿಗೆ ನಿಂತ ಕಳ್ಳನು ಮಾಸಿದ ತಿಳಿಹಳದಿ ಬಣ್ಣದ ಪಂಚೆ ಅಲಂಕೃತ ಅಂಚುಗಳಿಂದ ಕೂಡಿದ ನಿಲುವಂಗಿ, ಕೊರಳಲ್ಲಿ ಮುತ್ತಿನ ಸರ, ತಲೆಯ ತುಂಬ ಪೊಗದಸ್ತಾದ ಕೂದಲು, ಮೀಸೆ ಬಿಟ್ಟುಕೊಂಡಂತೆ ಕಲಾವಿದ ಚಿತ್ರಿಸುತ್ತಾ, ಪಂಚೆಯಲ್ಲಿ ಎದ್ದುಕಾಣುವ ನಿರಿಗೆಗಳನ್ನು ಕುಂಚದಿಂದ ಮೂಡಿಸಲು ಮರೆತಿಲ್ಲ. ಹೆಗಲ ಮೇಲೆ ಕಂಬಳಿಯೊಂದನ್ನು ಇಳಿಯಬಿಟ್ಟ ಆತನ ಮುಖಭಾವದಲ್ಲಿ ಪಶ್ಚಾತ್ತಾಪ ಎದ್ದುಕಾಣಿಸುತ್ತದೆ. ಬಸವಣ್ಣನ ಮುಖದಲ್ಲಿ ಕೋಪ, ರೋಷಗಳೊಂದೂ ಇಲ್ಲದೆ, ಮನೆಗೆ ಕಳ್ಳತನ

ಮಾಡಲು ಬಂದವನು ನಿಜವಾಗಿಯೂ ಕಳ್ಳನಿರಲಾರ, ಆತ ಕೂಡಲಸಂಗಮನೇ ಇರಬೇಕು ಎಂಬ ಭಾವನೆ ವ್ಯಕ್ತವಾಗಿದೆ. ಕಳ್ಳನ ಎರಡು ಬದಿಯಲ್ಲಿ ಇಬ್ಬರು ರಾಜಭಟರು ಕಳ್ಳನನ್ನು ಹಿಡಿದು ನಿಂತಿರುವ ಭಂಗಿಯನ್ನು ಕಲಾವಿದ ತುಂಬ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾನೆ. ಕಡುನೀಲಿ ಬಣ್ಣದ ರಾಜಭಟರ ಪೋಷಾಕನ್ನು ಧರಿಸಿದ ಅವರ ಬಟ್ಟೆಗಳಲ್ಲಿ ಎದ್ದುತೋರುವ ನಿರಿಗೆಗಳು ನೋಡುಗರ ಗಮನಸೆಳೆಯುತ್ತವೆ. ತಲೆಗೆ ಧರಿಸಿರುವ ಪೇಟಗಳು ನೆರಳು ಬೆಳಕಿನ ಸಂಯೋಜನೆಯೊಂದಿಗೆ ಅದ್ಭುತವಾಗಿ ಚಿತ್ರಣಗೊಂಡಿವೆ.

ಬಸವಣ್ಣನ ಹಿಂದೆ ಬಂಗಾರ ಬಣ್ಣದ ಅಂಚನ್ನುಳ್ಳ ಕಡುಗೆಂಪು ರೇಶ್ಮೆಸೀರೆಯನ್ನು ಧರಿಸಿದ, ತಲೆಯ ಅರ್ಧಭಾಗದವರೆಗೆ ಮಾತ್ರ ಸೆರಗು ಧರಿಸಿದ, ಕಪ್ಪುತಲೆಗೂದಲಿನ, ಹಣೆಯಲ್ಲಿ ವಿಭೂತಿ, ಮತ್ತು ಕೆಂಪು ಬಿಂದಿಯನ್ನು ಧರಿಸಿದ ಬಸವಣ್ಣನ ಪತ್ನಿ ನೀಲಾಂಬಿಕೆ ನಿಂತಿದ್ದಾಳೆ. ಅವಳ ಮುಖದ ಚಿತ್ರಣವನ್ನು ಅತ್ಯಂತ ಸ್ಪಷ್ಟವಾಗಿ ಕಲಾವಿದ ಮೂಡಿಸಿದ್ದಾನೆ. ಭಿತ್ತಿಯ ಮೇಲ್ಭಾಗದಲ್ಲಿ ಅರ್ಧವೃತ್ತವನ್ನು ಹೊಂದಿದ ಚೌಕಾಕಾರದ ಕಮಾನಿನ ಕಿಟಕಿಯೊಳಗಿನಿಂದ ಪೂರ್ಣಚಂದ್ರ ಅತ್ಯಂತ ಪ್ರಕಾಶಮಾನವಾಗಿ ಬೆಳಗುತ್ತಿದ್ದಾನೆ. ಪ್ರಸ್ತುತ ಸನ್ನಿವೇಶವು ರಾತ್ರಿಯಲ್ಲಿ ನಡೆದದ್ದು ಎಂಬುದನ್ನು ತಿಳಿಸಲು ಕಲಾವಿದ ಅನೇಕ ತಂತ್ರಗಳನ್ನು ನೆರಳು ಬೆಳಕಿನ ಸಂಯೋಜನೆಯೊಂದಿಗೆ ರೂಪಿಸಿರುವುದನ್ನು ನೋಡುತ್ತೇವೆ. ಚಿತ್ರದ ಒಟ್ಟು ಅಂಶಗಳಲ್ಲಿ ವ್ಯಕ್ತಿಗಳು ಧರಿಸಿದ ಉಡುಪುಗಳು, ಅವುಗಳ ವರ್ಣಸಂಯೋಜನೆ, ಕತ್ತಲೆ ಬೆಳಕುಗಳು ನೋಡುಗರ ಗಮನಸೆಳೆಯುತ್ತವೆ. ರಾತ್ರಿ ಹೊತ್ತಿನ ಹಾಗೂ ಮನದ ಅಂಧಕಾರವನ್ನು ಹೊಡೆದೋಡಿ-ಸುವಂತಹ ಸನ್ನಿವೇಶವಿದು. ಸಮಾನಾಂತರವಾದ ಸಂಯೋಜನೆಯಡಿಯಲ್ಲಿ ಚಿತ್ರಿತವಾದ ಈ ಚಿತ್ರ ನೈಜಶೈಲಿಯದ್ದು. ಅಂಗಾಂಗಳಲ್ಲಿ ಚೇತೋಹಾರಿ ರಚನೆಗೆ ಅವಕಾಶವಿದೆ. ಆಕೃತಿಗಳ ಸಂಯೋಜನೆಯಲ್ಲಿ ಹಿನ್ನೆಲೆ-ಮುನ್ನೆಲೆಯ ನೀತಿಯನ್ನು ಅನುಸರಿಸಿ ಒಟ್ಟು ಸನ್ನಿವೇಶವನ್ನು ಸಾಮೀಪ್ಯದ ನೆಲೆಯಲ್ಲಿ ಚಿತ್ರಿಸಲಾಗಿದೆ. ರಾಜಭಟನೊಬ್ಬ ಹಿಡಿದುಕೊಂಡಿರುವ ಪಂಜಿನ ಬೆಳಕಿನ ಛಾಯೆಯನ್ನು ಆಕೃತಿಗಳ ಮೇಲೆ ಸಮರ್ಥವಾಗಿ ಬಿಂಬಿಸಲಾಗಿದೆ. ಆಕೃತಿಗಳಲ್ಲಿ ಸನ್ನಿವೇಶಕ್ಕೆ ಪೂರಕವಾದ ಭಾವಸ್ಫುರಣೆ ಸ್ಪಷ್ಟವಾಗಿ ಚಿತ್ರಿತವಾಗಿದೆ.

ಕಳ್ಳನ ಮನಃಪರಿವರ್ತನೆ ಮಾಡುತ್ತಿರುವುದು-೨

ಪ್ರಸ್ತುತ ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ತನ್ನ ಮನೆಗೆ ಕದಿಯಲು ಬಂದ ಕಳ್ಳರನ್ನು ಬಸವಣ್ಣ ಪ್ರೀತಿಯಿಂದ ಕಾಣುವ ಮತ್ತು ಒಡವೆಗಳನ್ನು ಅವರಿಗೆ ಅರ್ಪಿಸಲು ಮುಂದಾಗಿರುವ ಸನ್ನಿವೇಶವನ್ನು ಕಲಾವಿದ ಈ ಚಿತ್ರಪಠ್ಯದ ಮೂಲಕ ಅಭಿವ್ಯಕ್ತಿಸಿದ್ದಾನೆ. ಈ ಚಿತ್ರದಲ್ಲಿ ಕಲಾವಿದ ಕಡು ಹಳದಿ, ತೆಳು ಗುಲಾಬಿ ಬಣ್ಣಗಳನ್ನು ಪ್ರಧಾನವಾಗಿ ಬಳಸಿ, ಆನುಷಂಗಿಕವಾಗಿ ಕಪ್ಪುಮಿಶ್ರಿತ ಹಳದಿ ಬಣ್ಣದ ಸಂಯೋಜನೆ ಮಾಡಿದ್ದಾನೆ. ಚಿತ್ರದ ಎಡಭಾಗದಲ್ಲಿ ಬಸವಣ್ಣ ಹೆಂಡತಿ, ಚಿತ್ರದ ಬಲಭಾಗದಲ್ಲಿ ಇಬ್ಬರು ಕಳ್ಳರ ಚಿತ್ರಗಳಿವೆ.

ತಲೆಯಿಂದ ಕತ್ತಿನ ಹಿಂಭಾಗದವರೆಗೆ ಬೆಳೆದ ಕಪ್ಪು ತಲೆಗೂದಲು, ಬಿಳಿ ವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ರುದ್ರಾಕ್ಷಿ ಮಾಲೆ, ಮಿರುಗುವ ದಟ್ಟವಾದ ಹಳದಿ ಬಣ್ಣದ ಅಂಚಿನ ಸಾಮಾನ್ಯ

ಹಳದಿಯ ಪಂಚೆ, ಹೆಗಲ ಮೇಲೆ ಅದೇ ಬಣ್ಣದ ಮಡಿಚಿದ ಮೇಲುಹೊದಿಕೆಯನ್ನು ಇಳಿಯಬಿಟ್ಟ ಬಸವಣ್ಣ ತನ್ನೆರಡು ಕೈಗಳಲ್ಲಿ ಬಂಗಾರದ ಆಭರಣಗಳನ್ನು ಹಿಡಿದು ತನ್ನೆದುರಿಗೆ ಇರುವ ಕಳ್ಳರ ಮುಖಗಳನ್ನು ಯಾವುದೇ ಕೋಪ, ಅಹಂಕಾರಗಳ ಸುಳಿವಿಲ್ಲದ ನಿರ್ವೇದ ಭಾವದಿಂದ ನೋಡುತ್ತಿದ್ದಾನೆ. ಆಭರಣಗಳನ್ನು ಕಳ್ಳರಿಗೆ ಒಪ್ಪಿಸಲು ಸಿದ್ಧವಾಗಿರುವ ಆತನ ಭಂಗಿಯು ಸಹಜವಾಗಿದೆ. ಹಿಂದೆ ತಿಳಿಗುಲಾಬಿ ಬಣ್ಣದ ಸೀರೆಯನ್ನು ಧರಿಸಿ, ತಲೆತುಂಬ ಸೆರಗು ಹೊದ್ದಿರುವ ಹೆಂಡತಿಯ ಚಿತ್ರವು ನಿರಾತಂಕ ಭಾವನೆಯನ್ನು ಸೂಚಿಸುತ್ತದೆ. ಎದುರಿಗಿರುವ ಇಬ್ಬರು ಕಳ್ಳರಲ್ಲಿ ಒಬ್ಬಾತ ತಲೆಯ ಕೂದಲನ್ನು ಹಿಂದಕ್ಕೆ ಚಾಚಿ ಕಟ್ಟಿಕೊಂಡಿದ್ದು, ಅರ್ಧತೋಳಿನ ಅಂಗಿಯನ್ನು ಧರಿಸಿ ತನ್ನೆರಡು ಕೈಗಳನ್ನು ಮುಗಿದು ಬಸವಣ್ಣನನ್ನು ನೋಡುವ ಭಂಗಿಯಲ್ಲಿ ನಿಂತಿದ್ದಾನೆ. ಪಕ್ಕದಲ್ಲಿರುವ ವ್ಯಕ್ತಿಯ ಮುಖವು ಅಸ್ಪಷ್ಟವಾಗಿದ್ದರೂ ತನ್ನ ಪಶ್ಚಾತ್ತಾಪದ ಭಾವನೆಯನ್ನು ನೋಡುಗ ಅರ್ಥಮಾಡಿಕೊಳ್ಳಲು ಸಹಕರಿಸಿದೆ. ಭಿತ್ತಿಯಲ್ಲಿರುವ ದೀಪವು ಹಳದಿ ಬಣ್ಣದ ಬೆಳಕನ್ನು ಹೊರಸೂಸುತ್ತಿದೆ. ನೆರಳು–ಬೆಳಕಿನ ಉತ್ತಮ ಸಂಯೋಜನೆಯನ್ನು ಕಲಾವಿದ ಚಿತ್ರಿಸಿರುವುದು ಮೊದಲ ನೋಟಕ್ಕೆ ಕಂಡುಬರುತ್ತದೆ.

ಒಂದು ಬಗೆಯಲ್ಲಿ ತೈಲವರ್ಣವನ್ನು ಪಾರದರ್ಶಕವಾಗಿ, ಡ್ರೈ ಬ್ರಶ್ ತಂತ್ರವನ್ನು ಬಳಸಿಕೊಂಡು ರಚಿಸಿದ ಚಿತ್ರವಿದು. ೪/೩ ರಷ್ಟು ಆಕೃತಿಗಳನ್ನು ಒಟ್ಟು ಸ್ಥಳಾವಕಾಶದಲ್ಲಿ ಮುನ್ನೆಲೆಗೆ ತಂದು ಚಿತ್ರಿಸಲಾಗಿರುವ ಈ ಕೃತಿ ಅಕಾಡೆಮಿಕ್ ಶೈಲಿಯ ಲೈಫ್ ಪೇಂಟಿಂಗ್‌ನಂತೆ ಉಪಚಾರಕ್ಕೊಳಪಟ್ಟಿದೆ. ಬಸವ ದಂಪತಿಗಳ ವ್ಯಕ್ತಿತ್ವದಲ್ಲಿ ಎಂದಿನಂತೆ ಶರಣಸಂಪನ್ನತೆ ಕಂಡುಬಂದರೆ, ಕಳ್ಳರ ಆಕೃತಿಗಳಲ್ಲಿ ಎಂದಿನಂತೆ ವೃತ್ತಿಗೆ ಅನುಗುಣವಾದ ಚಹರೆಗಳು ಕಂಡುಬಂದಿದೆ. ಆಕೃತಿಗಳ ಅಂಗನಿರೂಪಣೆಯಲ್ಲಿ ಸಾಕಷ್ಟು ಪ್ರಬುದ್ಧತೆ ಗೋಚರವಾಗುತ್ತದೆ. ಒಟ್ಟು ಚಿತ್ರವು ಮೃದುವಾದ ವರ್ಣ ಸಾಂಗತ್ಯ, ಪೂರಕವಾದ ಪರಿಸರವನ್ನು ಪ್ರಕಟಿಸುವಲ್ಲಿ ಯಶಸ್ಸುಗಳಿಸುತ್ತದೆ.

೨.೪.೩. ಕಳ್ಳರನ್ನು ಬಸವಣ್ಣ ಕ್ಷಮಿಸುವ ಸನ್ನಿವೇಶ

ಪುಣೆಯ ಕಲಾವಿದ ವಿಜಯ ಕದಮ್ ಅವರ ಕಲಾಕೃತಿ. ೪೮"x೩೬" ಅಳತೆಯ, ಅಕ್ರ್ಯಾಲಿಕ್ ಮಾಧ್ಯಮದಲ್ಲಿ ರಚನೆಗೊಂಡಿದೆ. ಈ ವಿಶಾಲವಾದ ಭಿತ್ತಿಯಲ್ಲಿ ನಿರ್ಮಿತಿಗೊಂಡ ಈ ಚಿತ್ರವು ತೈಲವರ್ಣ ಸಂಪ್ರದಾಯಕ್ಕೆ ಸೇರಿದ್ದು, ಬಸವಣ್ಣನ ಮಹಾಮನೆಗೆ ನಗನಾಣ್ಯಗಳನ್ನು ದೋಚಲು ಬಂದ ಕಳ್ಳರನ್ನು ಶಿಕ್ಷಿಸದಂತೆ ತಡೆದು ಅಭಯ ನೀಡುವ ಸನ್ನಿವೇಶವನ್ನು ಹೊಂದಿದೆ. ಅಗಲವಾದ ಹಳದಿಯ ಬಣ್ಣದ ಅಂಚುಗಳನ್ನು ಹೊಂದಿರುವ ರೇಷ್ಮೆಯ ಬಿಳಿ ಪಂಚೆ, ನಿಲುವಂಗಿ, ಬಂಗಾರ ಬಣ್ಣದ ಮಿರುಗುವ ಮೇಲುವಸ್ತ್ರ, ಕೊರಳಲ್ಲಿ ಇಷ್ಟಲಿಂಗದ ವಸ್ತ್ರದ ಗಂಟು, ರುದ್ರಾಕ್ಷಿಯ ಮಾಲೆ, ತಲೆಗೆ ಹೊಳೆಯುವ ಕಿರೀಟವನ್ನು ಧರಿಸಿದ ಬಸವಣ್ಣ ತನ್ನ ಎಡಗೈಯನ್ನು ಅರ್ಧಭಾಗದಷ್ಟು ಮೇಲೆತ್ತಿ ತೋರುಬೆರಳನ್ನು ಚಾಚಿಕೊಂಡಿರುವಂತೆ ಕಲಾವಿದ ಪ್ರಬುದ್ಧವಾಗಿ ಚಿತ್ರಿಸಿದ್ದಾನೆ.

ಅಗಲವಾದ ಬಲಹಸ್ತವನ್ನು ಅಭಯಹಸ್ತ ಮುದ್ರೆಯ ಭಂಗಿಯಲ್ಲಿ ಎತ್ತಿ ಹಿಡಿದಿದ್ದಾನೆ. ಮುಖದಲ್ಲಿ ಪ್ರಶಾಂತ ಭಾವವಿದೆ. ಬಸವಣ್ಣನ ಎದುರಿಗೆ ಈಗಾಗಲೇ ಕಟ್ಟುಮಸ್ತಾದ ನಾಲ್ವರು ಕಳ್ಳರು ನಿಂತಿದ್ದಾರೆ.

ಅರಮನೆಯಲ್ಲಿರುವ ವಸ್ತುಗಳನ್ನು ಲೂಟಿಮಾಡಿ ಹೊರಡಬೇಕೆನ್ನುವಾಗ ರಾಜಭಟರು ಅವರನ್ನು ಹಿಡಿದು ಹಗ್ಗಗಳಿಂದ ಬಂಧಿಸಿದ್ದಾರೆ. ಆ ಹೊತ್ತಿಗೆ ಬಸವಣ್ಣ ಬಂದಿದ್ದು ಕಳ್ಳರು ಕದ್ದ, ಬಂಗಾರದ ಒಡವೆಗಳನ್ನು ಅವರ ಮುಂದೆ ನೆಲದಲ್ಲಿ ಹರಡಿ ನಿಂತಿದ್ದಾರೆ. ಹೊಳೆಯುವ ಕತ್ತಿ, ಕೊರಳಲ್ಲಿ ಇಷ್ಟಲಿಂಗದ ಗಂಟು, ತಲೆಗೆ ಶಿರಸ್ತ್ರಾಣ, ಬಲಿಷ್ಠವಾದ ಮಾಂಸಖಂಡಗಳಿಂದ ತುಂಬಿದ ತೋಳುಗಳು, ಕಣ್ಣುಗಳಲ್ಲಿ ಭೀಕರ ಕೋಪದಿಂದ ಕೂಡಿದ ನೋಟಗಳಿಂದ ರಾಜಭಟರು ವಿವಿಧ ಭಂಗಿಗಳಲ್ಲಿ ಕಳ್ಳರನ್ನು ಸೆರೆಹಿಡಿದಿರುವಂತೆ ಕಲಾವಿದ ನೋಡುಗರ ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಕಳ್ಳರು ಬರಿಮೈಯಿಂದ ಕೂಡಿದ್ದು ಅದರಲ್ಲಿ ಮೂವರು ಮಾತ್ರ ತಲೆಗೆ ಮುಂಡಾಸು, ಪಂಚೆ, ಹಸಿರು ಮೇಲುವಸ್ತ್ರವನ್ನು ಹೆಗಲಿಗೆ ಹಾಕಿಕೊಂಡಿದ್ದಾರೆ. ಅವರಲ್ಲಿ ಒಬ್ಬಾತ ಬಸವಣ್ಣನವರಿಗೆ ಎರಡೂ ಕೈಗಳನ್ನು ಜೋಡಿಸಿ ತನ್ನ ತಪ್ಪನ್ನು ಮನ್ನಿಸಬೇಕು ಎಂಬ ಭಾವನೆಯನ್ನು ವ್ಯಕ್ತಪಡಿಸುವಂತೆ ಕುಳಿತಿದ್ದರೆ, ಇನ್ನೊಬ್ಬ ರಾಜಭಟರ ಹಗ್ಗಗಳಿಂದ ಬಂಧಿತನಾಗಿ ತಲೆಬಾಗಿಸಿ ಕುಳಿತಿದ್ದಾನೆ. ಮತ್ತೊಬ್ಬ ತನ್ನ ಬಲಗೈಯನ್ನು ಮೇಲಕ್ಕೆ ಹಿಡಿದು ತನ್ನನ್ನು ಹಿಂಸಿಸದಂತೆ ರಾಜಭಟರಲ್ಲಿ ಹೆದರಿದ ಮುಖಮುದ್ರೆಯಿಂದ ಬೇಡುತ್ತಿದ್ದಾನೆ. ಮತ್ತೊಬ್ಬನ ಕುತ್ತಿಗೆಗೆ ರಾಜಭಟನು ತನ್ನ ಖಡ್ಗವನ್ನು ಹಿಡಿದು ಸ್ವಲ್ಪ ಅಲುಗಾಡಿದರೂ ತಲೆತೆಗೆದುಬಿಡುತ್ತೇನೆ ಎಂಬ ಭಂಗಿಯಲ್ಲಿ ನಿಂತು ಬಸವಣ್ಣನ ಅಪ್ಪಣೆಗಾಗಿ ಕಾಯುತ್ತಿರುವಂತೆ ನಿಂತಿದ್ದಾನೆ.

ಬಸವಣ್ಣನ ಎಡಭಾಗದಲ್ಲಿ ಅಲಂಕೃತಗೊಂಡ ಕಟ್ಟಿಗೆಯ ಮಂಚವೊಂದರ ಮೇಲೆ ದಟ್ಟವಾದ ಹಸಿರುಬಣ್ಣದ ಸೀರೆಯನ್ನು ಧರಿಸಿ, ತನ್ನ ಎಡಗೈಯನ್ನು ಕೆನ್ನೆಯ ಮೇಲೆ ಆನಿಸಿಕೊಂಡು ಆತಂಕದಿಂದ ಕುಳಿತಿರುವ ನೀಲಾಂಬಿಕೆಯನ್ನು ಕಾಣುತ್ತೇವೆ. ಎಡಬದಿಯಲ್ಲಿ ಮತ್ತಿಬ್ಬರು ಸ್ತ್ರೀಯರು ನಿಂತಿದ್ದಾರೆ. ನೆಲಕ್ಕೆ ಹಾಸಿದ ಕಡುಗೆಂಪು ಬಣ್ಣದ ಅಲಂಕೃತ ಅಂಚುಗಳಿಂದ ಕೂಡಿದ ರತ್ನಗಂಬಳಿ, ತಿಳಿಹಸಿರು ಬಣ್ಣದಿಂದ ಕೂಡಿದ ಗೋಡೆಗಳು, ಅರ್ಧಭಾಗ ಕಾಣುವ ಗಾಜಿನ ಅಲಂಕೃತ ದೀಪ ಮುಂತಾದ ಎಲ್ಲ ಸೂಕ್ಷ್ಮವಾದ ವಿವರಗಳನ್ನು ಪ್ರಸ್ತುತ ಕಲಾಕೃತಿಯಲ್ಲಿ ಕಾಣಬಹುದು. ವಾಸ್ತವವಾಗಿ ಈ ಚಿತ್ರದ ಬಗೆಗೆ ಹೆಚ್ಚು ವಿವರಣೆ ನೀಡುವ ಅಗತ್ಯವೇ ಇಲ್ಲವೆಂಬಂತೆ ಕಲಾವಿದ ಚಿತ್ರಣ ಮಾಡಿರುವುದು ಆತನ ಕಲಾಪ್ರತಿಭೆಗೆ ಸಾಕ್ಷಿಯಾಗಿದೆ.

ಅರಸೊತ್ತಿಗೆಯ ಒಳಾವರಣವನ್ನು ಅತ್ಯಂತ ಸಮರ್ಥವಾಗಿ, ರೌದ್ರವಾಗಿ ಚಿತ್ರಿಸಿರುವುದು ಈ ಕಲಾಕೃತಿಯ ಹಿರಿಮೆ. ಎಲ್ಲ ಆಕೃತಿಗಳಲ್ಲಿ ಚಲನಶೀಲತೆ ಕಂಡುಬಂದಿರುವುದರಿಂದ ಚಿತ್ರಕ್ಕೆ ಜೀವಚೈತನ್ಯ ತುಂಬಿದೆ. ಪ್ರತಿ ಆಕೃತಿಯಲ್ಲೂ ಆಯಾ ಪಾತ್ರಕ್ಕೆ ಸಂಬಂಧಿಸಿದಂತೆ ಭಾವಾಭಿವ್ಯಕ್ತಿ ಪ್ರಕಟವಾಗಿದೆ. ಇಂತಹ ಭಾವಾಭಿವ್ಯಕ್ತಿಯನ್ನು ಪ್ರಕಟಪಡಿಸುವುದು ಸುಲಭ ಸಂಗತಿಯೇನಲ್ಲ. ಸನ್ನಿವೇಶ ಅಥವಾ ಸಾಂದರ್ಭಿಕವಾದ ಕಥಾನಕಗಳನ್ನು ಸರಿಯಾಗಿ ಗ್ರಹಿಸಿಕೊಂಡು ದೃಶ್ಯಾತ್ಮಕವಾಗಿ ಹೇಗೆ ಕಟ್ಟಿಕೊಡಬೇಕೆಂಬ ದೃಶ್ಯಪರಿಕಲ್ಪನೆ ಕಲಾವಿದನಲ್ಲಿ ಪರಿಪಕ್ವವಾಗಿರಬೇಕು ಎಂಬುದಕ್ಕೆ ಈ ಚಿತ್ರ ಸೂಕ್ತ ಮಾದರಿ. ಅರಸೊತ್ತಿಗೆಯ ವೈಭವವನ್ನು ಮೃದುವಾದ ವರ್ಣಗಳಿಂದ ರಚಿಸಲ್ಪಟ್ಟ ಹಿನ್ನೆಲೆ ಮುಂದಿನ ಆಕೃತಿಗಳಿಗೆ ಬೆಂಬಲವಾಗಿ

ನಿಂತಿದೆ. ಆಕೃತಿಗಳೆಲ್ಲವೂ ಅಂಡಾಕಾರದ ರೇಖಾಂಶದಲ್ಲಿ ಚಿತ್ರಿಸಲ್ಪಟ್ಟಿರುವುದರಿಂದ ಒಂದು ಬಗೆಯಲ್ಲಿ ವಿಶಿಷ್ಟವಾದ ಸಂಯೋಜನೆ ಎನಿಸುತ್ತದೆ. ಮಾನವಾಕೃತಿಗಳ ಅಂಗಾಂಗಗಳ ರಚನೆಯಲ್ಲಿ ತಕ್ಕಮಟ್ಟಿನ ಪ್ರಬುದ್ಧತೆಯ ಕಾರಣವಾಗಿ ಈ ಚಿತ್ರ ತನ್ನ ಅಸ್ತಿತ್ವದ ಘನತೆಯನ್ನು ಹೆಚ್ಚಿಸಿಕೊಂಡಿದೆ.

೨.೪.೪. ಜೋಳದ ರಾಶಿಯನ್ನು ಮುತ್ತಿನ ರಾಶಿಯನ್ನಾಗಿ ಮಾಡುತ್ತಿರುವುದು

"ಕಲಾಸೃಷ್ಟಿ ಮಾಡುವವನು ಮನುಷ್ಯನೇ. ಆತ ಬಾಹ್ಯ ಜಗತ್ತಿಗೆ ವಿವಿಧ ರೀತಿಗಳಿಂದ ಮಿಡಿಯಬಲ್ಲ ಮನಸ್ಸುಳ್ಳವ. ಅವನ ಸಂವೇದನೆಗಳು ಜನಸಾಮಾನ್ಯರ ಸಂವೇದನೆಗಳಿಗಿಂತ ಸೂಕ್ಷ್ಮವಾದುವು. ಅವನ ಮನಸ್ಸಿನ ರೀತಿಯನ್ನು ತಿಳಿಯದೆಯೇ ಸೃಷ್ಟಿಕ್ರಿಯೆಯ ಲೀಲೆಯನ್ನು ನಾವು ತಿಳಿಯಲಾರೆವು-"[೨೨] ಈ ಮಾತು ಸಾಮಾನ್ಯವಾಗಿ ಎಲ್ಲ ಕಲಾವಿದನಿಗೂ ಅನ್ವಯಿಸುತ್ತದೆ.

ಪ್ರಸ್ತುತ ಕಲಾಕೃತಿಯು ಕಲಾತಪಸ್ವಿ ಎಂ. ಎ. ಚೆಟ್ಟಿಯವರದಾಗಿದ್ದು, ಜಲವರ್ಣ ಮಾಧ್ಯಮದ ಈ ಕೃತಿಯು ೩೦"x೨೨" ಅಳತೆಯಲ್ಲಿ ರಚನೆಗೊಂಡಿದೆ. ಬಸವಣ್ಣನು ಸ್ನಾನ ಮಾಡುತ್ತಿದ್ದಾಗ ಜಂಗಮನೊಬ್ಬನು ಬಂದು, "ದಿನಾ ಒಕ್ಕುಳ ಮುತ್ತಿನ ಚೂರ್ಣದ ರಂಗವಾಲೆಯಿಕ್ಕುವುದು ನನ್ನ ನೇಮ. ಬಸವಾ, ಹತ್ತು ಖಂಡುಗ ಮುತ್ತುಗಳನ್ನು ಕೊಡು" ಎಂದು ಬೇಡಿದನು. ಬಸವನು ಅಲ್ಲಿದ್ದ ಜೋಳದ ರಾಶಿಯನ್ನು ನೋಡಿ, 'ಅದೋ, ಹತ್ತು ಖಂಡುಗವೇ ಏಕೆ, ನಿಮಗೆ ಬೇಕಾದಷ್ಟು ಒಯ್ಯಿರಿ' ಎಂದನು. ಆತನ ದೃಷ್ಟಿಕ್ಷೇಪದಿಂದ ಜೋಳದ ರಾಶಿಯೆಲ್ಲವೂ ಮುತ್ತಿನ ರಾಶಿಯಾಗಿರಲು ಜಂಗಮನು ಬೇಕಾದಷ್ಟು ಹೊತ್ತುಕೊಂಡು ಹೋದನು.[೨೩] ಬೇಡಿದವರಿಗೆ ಬೇಡಿದುದನ್ನು ನೀಡುವೆನೆಂದು ಬಸವಣ್ಣ ತನ್ನ ನಿಲುವನ್ನು ಸೂಚಿಸಿರುತ್ತಾನೆ. ಕಲ್ಯಾಣದಲ್ಲಿ ಈ ಮಾತನ್ನು ಕೇಳಿದ ಅನೇಕ ಜಾತಿ ಮತ, ಕುಲದವರು ಇದು ಸತ್ಯವೋ ಅಸತ್ಯವೋ ಎಂಬುದನ್ನು ಪರೀಕ್ಷಿಸಬೇಕೆಂದು ನಾನಾ ರೀತಿಯಾಗಿ ಹಲವು ವಸ್ತುಗಳನ್ನು ಧನ, ಕನಕ, ವಸ್ತ್ರಗಳನ್ನು ಬೇಡಲು ಮಹಾಮನೆಗೆ ಬರುತ್ತಾರೆ. ಒಂದು ಸಾರಿ ಕಳಿಂಗ ದೇಶದ ಮಹದೇವಶೆಟ್ಟಿಯು ಬಸವಣ್ಣನನ್ನು ಪರೀಕ್ಷಿಸಬೇಕೆಂದು ಬಯಸಿ, ಮುತ್ತು ರತ್ನಗಳನ್ನು ಹೇರಳವಾಗಿ ಬಸವಣ್ಣನಿಂದ ಪಡೆಯಬೇಕೆಂದು ಬಯಸಿ ಬರುತ್ತಾನೆ. ಬಸವಣ್ಣನನ್ನು ಕಂಡೊಡನೆಯೆ ಭಯದಿಂದ ಬೆವೆತು, ಮರೆತು, ತೊದಲುತ್ತ ಮೂವತ್ತು ಎತ್ತಿನ ಗಾಡಿಯಲ್ಲಿ ತೊಗರಿ, ಜೋಳ, ಅಕ್ಕಿ, ಕಡಲೆಗಳನ್ನು ತುಂಬಿಕೊಡಬೇಕೆಂದು ಕೇಳುತ್ತಾನೆ. ಆತನ ಮನಸ್ಸಿನ ಮೂಲ ಉದ್ದೇಶವನ್ನು ಅರಿತ ಬಸವಣ್ಣ, ಕೂಡಲೇ ಅಲ್ಲಿದ್ದ ಜೋಳದ ಕಾಳುಗಳ ರಾಶಿಯನ್ನು ಮುತ್ತುಗಳ ರಾಶಿಯನ್ನಾಗಿ ಮಾಡಿ ಪರಿವರ್ತಿಸಿ ಶೆಟ್ಟಿಗೆ ತೆಗೆದುಕೋ ಎನ್ನುತ್ತಾನೆ. ಈ ವಿಷಯವನ್ನು ಪ್ರಸ್ತುತ ಚಿತ್ರವು ಹಿಡಿದಿಟ್ಟಿದೆ. ಅದರಲ್ಲೂ ವಿಶೇಷವಾಗಿ ಚಿತ್ರಕೃತಿಯಲ್ಲಿ ಒಂದು ಬಗೆಯಲ್ಲಿ ಬೆಳಕಿನ ಮಾಯಾಜಾಲವೇ ಏರ್ಪಟ್ಟಿದೆ ಎನ್ನುವಷ್ಟರಮಟ್ಟಿಗೆ ಕೃತಿ ಸೊಬಗಿನಿಂದ ಕೂಡಿದೆ. ನೆರಳು ಬೆಳಕಿನ ಏರಿಳಿತವನ್ನು ಸಮರ್ಥವಾಗಿ ದುಡಿಸಿಕೊಂಡಿರುವ ಕಲಾದಿಗ್ಗಜನ ಕಲಾಭಿಜ್ಞತೆಗೆ ಸಾಕ್ಷಿ ಎಂಬಂತೆ ಇಲ್ಲಿನ ಎಲ್ಲ ಕೃತಿಗಳು ಚೆಟ್ಟಿಯವರ ಕಲಾಕೌಶಲ್ಯಕ್ಕೆ ಸಾಕ್ಷಿ ನುಡಿಯುತ್ತವೆ.

---

೨೨. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪು-೩೦

೨೩. ಡಾ. ಆರ್.ಸಿ. ಹಿರೇಮಠ : ಭೀಮಕವಿ ವಿರಚಿತ ಬಸವ ಪುರಾಣ, ಪು-೧೨೧, ೧೨೨

ಕೆಂಪು, ಹಳದಿ ಬಣ್ಣಗಳ ಅಂಚುಗಳನ್ನು ಹೊಂದಿರುವ ಬಿಳಿಯ ನಿಲುವಂಗಿ ಮತ್ತು ಪಂಚೆ, ಕೊರಳಲ್ಲಿ ರುದ್ರಾಕ್ಷಿ, ಹಣೆಯಲ್ಲಿ ಎದ್ದುತೋರದ ವಿಭೂತಿಯನ್ನು ಧರಿಸಿದ ಬಸವಣ್ಣ ತನ್ನ ಎರಡೂ ಕೈಗಳಿಂದ ಮುತ್ತುಗಳನ್ನು ಮಹದೇವಶೆಟ್ಟಿಗೆ ಧಾರೆಯೆರೆದು ಕೊಡುತ್ತಿರುವಂತೆ ಶೆಟ್ಟಿಯು ಅದನ್ನು ಮೇಲುವಸ್ತ್ರದಿಂದ ತನ್ನ ಎರಡೂ ಕೈಗಳ ಬೊಗಸೆಗಳಲ್ಲಿ ತುಂಬಿಸಿಕೊಳ್ಳುವಂತೆ ತೋರುವ ಸಂಗತಿ ಅರ್ಥವತ್ತಾಗಿ ಮೂಡಿಬಂದಿದೆ. ಬಾಗಿ ಕುಳಿತ ಮಹದೇವಶೆಟ್ಟಿಯು ಪಂಚೆ ಮತ್ತು ಮೇಲುವಸ್ತ್ರವನ್ನು ಮಾತ್ರ ಧರಿಸಿ, ತಲೆಯಲ್ಲಿ ಕೆಂಪುಬಣ್ಣದ ರುಮಾಲನ್ನು ಧರಿಸಿರುವುದು ಕಂಡುಬರುತ್ತದೆ. ಆತನ ಕಣ್ಣುಗಳಲ್ಲಿ ಕಾಣುವ ಹೊಳಪು ಧನ್ಯತಾ ಭಾವನೆಯನ್ನು ಪ್ರಕಟಿಸುತ್ತದೆ. ಹಿಂದೆ ಕೆಂಪುಬಣ್ಣ ಮತ್ತು ಕಡುನೀಲಿ ಬಣ್ಣದ ಸೀರೆಯನ್ನುಟ್ಟ ಇಬ್ಬರು ಮಹಿಳೆಯರು ತಮ್ಮ ತಲೆಯನ್ನು ಬಾಗಿಸಿ ಅಚ್ಚರಿಯನ್ನು ವ್ಯಕ್ತಪಡಿಸುವ ಭಂಗಿಯಲ್ಲಿ ನಿಂತಿದ್ದಾರೆ. ಬಸವಣ್ಣನ ಹಿಂದೆ ಒಬ್ಬ ವೃದ್ಧ ಮತ್ತು ಯುವಕ ಇಬ್ಬರು ಭಯ ಭಕ್ತಿಗಳಿಂದ ಕೈಯನ್ನು ಮುಗಿದು ಬಸವಣ್ಣನ ದಾನ ಮತ್ತು ಪವಾಡವನ್ನು ನೋಡಿ ಮೆಚ್ಚುಗೆ, ಆಶ್ಚರ್ಯಗಳನ್ನು ವ್ಯಕ್ತಪಡಿಸುವ ಭಂಗಿಯಲ್ಲಿ ನಿಂತಿರುವುದನ್ನು ಕಾಣುತ್ತೇವೆ. ಜಾಲಂದರಗಳಿಂದ ಕೂಡಿದ ಗೋಡೆ, ಭಿತ್ತಿಯಲ್ಲಿ ಚಲನಶೀಲವಾದ ಆನೆಯು ಗಮನಸೆಳೆಯುತ್ತದೆ. ಬಸವಣ್ಣನವರ ಬಲಬದಿಯಲ್ಲಿ ಮುತ್ತುಗಳಿಂದ ಕೂಡಿದ ಒಂದು ರಾಶಿಯೇ ಇದೆ. ಇಲ್ಲಿ ಧರಿಸಿರುವ ಎಲ್ಲ ವಸ್ತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕೆಂಪು, ಹಳದಿ ಮುಂತಾದ ಬಣ್ಣಗಳ ಸಮ್ಮಿಶ್ರಣದ ಮೆರುಗು ಕಂಡುಬರುತ್ತದೆ.

ಹಿರಿಯ ಕಲಾವಿದರಾದ ಎಂ.ಎ.ಚೆಟ್ಟಿ ಅವರು ರಚಿಸಿರುವ ಕಲಾಕೃತಿ ಇದು. ಅರಸೊತ್ತಿಗೆಯ ಹಿನ್ನೆಲೆ–ಮುನ್ನೆಲೆಯಲ್ಲಿ ಕಥಾಸನ್ನಿವೇಶಕ್ಕೆ ಸಂಬಂಧಪಟ್ಟ ಆಕೃತಿಗಳ ರಚನೆ, ಆಕೃತಿಗಳಲ್ಲಿ ಚಲನಶೀಲತೆ ಮತ್ತು ಭಾವಸ್ಫುರಣೆಗೆ ಆದ್ಯತೆ. ಮೃದುವಾದ ವರ್ಣಗಳ ಸಾಂಗತ್ಯ. ಈ ಚಿತ್ರದಲ್ಲಿ ಕಂಡುಬರುವ ಪ್ರಮುಖ ದೃಶ್ಯೋಪಚಾರಗಳು. ಒಂದು ಬಗೆಯಲ್ಲಿ ಜಿಗ್ ಜಾಗ್ ರೇಖಾಂಶದಲ್ಲಿ ಸಂಯೋಜನೆಗೊಂಡ ಇಲ್ಲಿನ ಆಕೃತಿಗಳು ಚಲನಶೀಲವಾಗಿ ರಚಿತಗೊಂಡಿರುವುದು ಸ್ಪಷ್ಟ. ಆ ಚಲನಶೀಲತೆಗೆ ಪೂರಕವಾಗಿ ಆಕೃತಿಗಳಲ್ಲಿ ರೂಪುಗೊಂಡ ವಸ್ತ್ರವಿನ್ಯಾಸದ ಮೈವಳಿಕೆ, ಅಲ್ಲಿನ ನೆರಳು–ಬೆಳಕಿನ ವ್ಯತ್ಯಾಸಗಳು ಆಕೃತಿಗಳಲ್ಲಿ ಜೀವಚೈತನ್ಯವನ್ನು ತುಂಬಿವೆ. ಬಸವಣ್ಣನವರನ್ನು, ಅವರ ಪರಿವಾರದವರನ್ನು ಶರಣ ಸಂಪನ್ನರಾಗಿಸಿರುವುದರ ಮೂಲಕ ಚಿತ್ರದಲ್ಲಿ ಅವರಿಗೆ ಮೇಲುಸ್ತರದ ದೃಶ್ಯಾತ್ಮಕ ಸ್ಥಾನ ಪ್ರಾಪ್ತವಾಗಿದೆ. ಈ ಹಿನ್ನೆಲೆಯ ಭಿತ್ತಿಯಲ್ಲಿ ಅರಸೊತ್ತಿಗೆಯ ವೈಭವದ ಸೂಚಕವಾಗಿ ಆನೆಯ ಚಿತ್ರವೊಂದು ರಚಿತಗೊಂಡಿದೆ. ಬಲಪಾರ್ಶ್ವದಲ್ಲಿ ರೂಪುಗೊಂಡಿರುವ ಜಾಲಂಧ್ರ ಚಿತ್ರವೊಂದರ ದೃಶ್ಯಾತ್ಮಕ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ.

೨.೪.೫. ಭಕ್ತಿ ಪರೀಕ್ಷೆ ಮಾಡಿದ ಬಸವಣ್ಣ

"ಚಿತ್ರಕಲೆ ತತಕ್ಷಣಕ್ಕೆ ಕಣ್ಣಿಗೆ ಮುದವನ್ನು ನೀಡುತ್ತ ಭಾವ ಪ್ರಪಂಚವನ್ನು ಸೇರಿಕೊಳ್ಳುತ್ತದೆ. ಅಂತರಂಗದಲ್ಲಿ ಅದರ ಬಾಹ್ಯ ಸೌಂದರ್ಯ ಹಾಗೂ ಆಂತರಿಕ ಅರ್ಥಗಳು ಬಹುಕಾಲದವರೆಗೆ ಉಳಿದುಬಿಡುತ್ತವೆ. ಈ ದೃಶ್ಯ ಪ್ರಪಂಚವೆಲ್ಲ ಒಂದು ಚಿತ್ರಶಾಲೆ ಆಗಿದ್ದು, ಕಣ್ಣು ತೆರೆದರೆ ಸಾಕು ಚಿತ್ರವೊಂದು

ಕಣ್ಮುಂದೆ ನಿಲ್ಲುತ್ತದೆ."[೭೪] ಅದರಲ್ಲೂ ಒಂದು ಉತ್ಕೃಷ್ಟ ಕಲಾಕೃತಿ ಆಕ್ರಮಣಕಾರಿಯಾದ ಆಕರ್ಷಣೆಯನ್ನು ಮಾಡುವುದು ಸಹಜ. ಹಾಗೆಯೇ ನಿರ್ಮಿತಗೊಂಡ ಎಂ. ಎ. ಚೆಟ್ಟಿಯವರ ಮತ್ತೊಂದು ಜಲವರ್ಣದ ಕಲಾಕೃತಿ ಇದಾಗಿದೆ. ಈ ಕೃತಿಯು ೩೦"x೨೨" ಅಳತೆಯಲ್ಲಿ ರಚನೆಗೊಂಡಿದೆ.

ಬಿಜ್ಜಳ ಮಹಾರಾಜನು ಬಸವಣ್ಣನ ಭಕ್ತಿ–ಶಕ್ತಿಗಳನ್ನು ಪರೀಕ್ಷಿಸಲು ತನ್ನ ಅರಮನೆಯ ಸ್ತ್ರೀಯರ ಸಮೂಹವನ್ನು ಬಸವಣ್ಣನಲ್ಲಿಗೆ ಕಳುಹಿಸಿಕೊಡುತ್ತಾನೆ. ಬಸವಣ್ಣನು ಬಿಜ್ಜಳನ ಅರಮನೆಯ ಸ್ತ್ರೀಯರನ್ನು ಶಿವಭಕ್ತೆಯರನ್ನಾಗಿ ಪರಿವರ್ತಿಸುವ ಸನ್ನಿವೇಶವನ್ನು ಈ ಚಿತ್ರದಲ್ಲಿ ಕಾಣಬಹುದು. ಈ ಚಿತ್ರದಲ್ಲಿ ಎರಡು ಭಾಗಗಳನ್ನು ಕಾಣುತ್ತೇವೆ. ಚಿತ್ರದ ಎಡಭಾಗದ ಅರ್ಧದಲ್ಲಿ ಬಿಜ್ಜಳ, ಬಸವಣ್ಣ, ಬಿಜ್ಜಳನ ಹೆಂಡತಿ, ಮತ್ತೊಬ್ಬ ವೃದ್ಧನಿದ್ದಾನೆ. ಕೆಂಪು ಬಣ್ಣದ ಮಿರುಗುವ ನಿಲುವಂಗಿ, ತಲೆಗೆ ಕಿರೀಟ, ಕೊರಳಲ್ಲಿ ರತ್ನದ ಹಾರ, ಸೊಂಟಕ್ಕೆ ಕಟ್ಟಿದ ಮೇಲು ಹೊದಿಕೆ, ಕಾಲುಗಳಲ್ಲಿ ಪಾದರಕ್ಷೆಯನ್ನು ಧರಿಸಿದ ಬಿಜ್ಜಳ ತನ್ನ ಬಲಗೈಯನ್ನು ಭುಜಕ್ಕೆ ಸಮಾನಾಂತರವಾಗಿ ಮೇಲೆತ್ತಿ ತನ್ನ ಎದುರಿನಲ್ಲಿ ಸಾಲಾಗಿ ಕುಳಿತಿರುವ ಸ್ತ್ರೀ ಸಮೂಹದ ಕಡೆಗೆ ತೋರುಬೆರಳನ್ನು ಮಾಡಿ, ಎಡಗೈಯನ್ನು ಸೊಂಟದ ಮೇಲಿಟ್ಟು ದರ್ಪದ, ಅಧಿಕಾರದ ಭಂಗಿಯಲ್ಲಿ ನಿಂತಿರುವಂತೆ ಚಿತ್ರಿತನಾಗಿದ್ದಾನೆ. ಮುಖದಲ್ಲಿ ಕೋಪದ ಭಾವವಿದೆ. ಆತನ ಹಿಂದೆ ಕಡುನೀಲಿಬಣ್ಣದ ಸೀರೆಯನ್ನು ಧರಿಸಿದ ಸ್ತ್ರೀ ಎದುರಿಗಿದ್ದ ಶರಣೆಯರ ಸಮೂಹವನ್ನು ನೋಡಿ ಬಾಯಮೇಲೆ ತನ್ನ ಕೈಯನ್ನು ಇಟ್ಟುಕೊಂಡು ಅಚ್ಚರಿಯಿಂದ ನೋಡುತ್ತಿದ್ದಾಳೆ.

ಬಿಜ್ಜಳನ ಎಡಬದಿಯ ವೃದ್ಧನು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದಾನೆ. ಆದರೆ ಬಸವಣ್ಣ ಮಾತ್ರ ತನ್ನ ಸೊಂಟವನ್ನು ತುಸುಬಾಗಿಸಿ, ತಲೆಗೆ ಕಿರೀಟವನ್ನು ಧರಿಸಿದ್ದರೂ ವಿನೀತವಾದ ಭಂಗಿಯಲ್ಲಿ ಕಣ್ಣುಗಳನ್ನು ಮುಚ್ಚಿ ಎದುರಿಗಿದ್ದ ಸ್ತ್ರೀಸಮೂಹದೆಡೆಗೆ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತಿದ್ದಾನೆ. ಆತನ ಮುಖ ಪ್ರಶಾಂತವಾಗಿದ್ದು ಯಾವುದೇ ಉದ್ವೇಗಕ್ಕೆ ಒಳಗಾದಂತೆ ತೋರುವುದಿಲ್ಲ. ಚಿತ್ರದ ಬಲಬದಿಯಲ್ಲಿ ಸ್ವಲ್ಪ ಎತ್ತರವಾದ ವೇದಿಕೆಯೊಂದರ ಮೇಲೆ ಸುಮಾರು ೨೫ಕ್ಕೂ ಹೆಚ್ಚು ಸ್ತ್ರೀಯರು ಕಾವಿ ಬಣ್ಣದ ಸೀರೆಯನ್ನು ಧರಿಸಿ, ಹಣೆಯಲ್ಲಿ ರುದ್ರಾಕ್ಷಿಯ ಮಾಲೆಯನ್ನು ಧರಿಸಿ ಹರ್ಷೋಲ್ಲಾಸ ಭಾವಗಳಿಂದ ಕುಳಿತಿದ್ದಾರೆ. ಒಬ್ಬೊಬ್ಬರ ಮುಖಗಳು ಒಂದೊಂದು ಭಾವವನ್ನು ವ್ಯಕ್ತಪಡಿಸಿದರೂ ಕ್ರೋಧ ಮತ್ತು ಕೋಪಕ್ಕೆ ಅವಕಾಶವಿಲ್ಲವೆಂಬುದನ್ನು ಗಮನಿಸಬಹುದು. ಇಬ್ಬರು ಸ್ತ್ರೀಯರು ನಿಂತಿದ್ದು ತಮ್ಮ ಎರಡೂ ಕೈಗಳನ್ನು ಬಸವಣ್ಣನೆಡೆಗೆ ಚಾಚಿ ತಮ್ಮನ್ನು ಶರಣೆಯರನ್ನಾಗಿ ಪರಿವರ್ತಿಸಿದ ಪವಾಡದಿಂದ ಬಿಡುಗಡೆ ಮಾಡಿಸು ಎಂದು ಕೇಳುವ ಭಂಗಿಯಲ್ಲಿರುವುದನ್ನು ಕಾಣುತ್ತೇವೆ.

ಈ ಕಲಾಕೃತಿಯು ಎಂ. ಎ. ಚೆಟ್ಟಿಯವರದು. ಭಾವಪ್ರದವಾಗಿರುವ ಈ ಚಿತ್ರದಲ್ಲಿ ಚಿತ್ರದ ಅರ್ಧಭಾಗ ಬಿಜ್ಜಳ, ಬಸವಣ್ಣ ಪರಿವಾರದವರು, ಇನ್ನರ್ಧ ಅವಕಾಶದಲ್ಲಿ ಬಸವಣ್ಣನನ್ನು ಪರೀಕ್ಷಿಸಲು ಬಂದ ಹೆಂಗಳೆಯರು ಶರಣೆಯರಾಗಿ ಪರಿವರ್ತನೆ ಹೊಂದಿದವರನ್ನು ಚಿತ್ರಿಸಲಾಗಿದೆ. ಅರಸೊತ್ತಿಗೆಯ ಒಳಾವರಣದಲ್ಲಿ ನಡೆವ ಘಟನೆಯನ್ನು ದೃಶ್ಯಾತ್ಮಕವಾಗಿ ನಿರೂಪಿಸುವ, ತನ್ಮೂಲಕ ಪೌರಾಣಿಕ

---

೭೪. ಡಾ. ಎಸ್. ಸಿ. ಪಾಟೀಲ : ವರ್ಣಸಂಚಯ, ಪು-೨೭

ಕಥಾನಕವೊಂದನ್ನು ದೃಶ್ಯರೂಪಕವಾಗಿ ಪ್ರಸ್ತುತಪಡಿಸುವ ಸಂದರ್ಭದಲ್ಲಿ ಆಕೃತಿಗಳ ರಚನೆ, ಭಾವಸ್ಫುರಣೆ, ಸಂಯೋಜನೆಗಳಿಗೆ ಯಾವ ಬಗೆಯಲ್ಲಿ ಆದ್ಯತೆ ನೀಡಿದರೆ ಪರಿಣಾಮಕಾರಿ ಚಿತ್ರವೊಂದು ಹೇಗೆ ಅಭಿವ್ಯಕ್ತಗೊಳ್ಳುತ್ತದೆ ಎಂಬುದಕ್ಕೆ ಈ ಚಿತ್ರ ಉತ್ತಮ ಮಾದರಿಯೂ ಹೌದು. ಚೆಟ್ಟಿಯವರ ಎಂದಿನ ಶೈಲಿಯಂತೆ ಎತ್ತರದ ನಿಲುವಿನ, ಸಪೂರವಾದ ಆಕೃತಿಗಳು ಮೈದಳೆದಿವೆ. ಮೂಲವರ್ಣಗಳನ್ನು ಬಹುವಾಗಿ ದುಡಿಸಿಕೊಂಡಿದ್ದರೂ ಇಡೀ ಚಿತ್ರ ಆಧ್ಯಾತ್ಮಿಕ ನೆಲೆಯ ದೃಶ್ಯಾತ್ಮಕ ಅನುಭವ ನೀಡುತ್ತದೆ.

೨.೪.೬. ನಂದಿ ಮುದ್ರೆಯುಂಗುರದ ಪವಾಡ

ಕಲಾತಪಸ್ವಿ ಎಂ.ಎ. ಚೆಟ್ಟಿಯವರು ಬಸವೇಶ್ವರ ಕುರಿತು ಸರಣಿ ಚಿತ್ರಗಳನ್ನು ಮಾಡಿದ್ದಾರೆ. ಅದರಲ್ಲೊಂದಾದ ಈ ಕಲಾಕೃತಿ ಜಲವರ್ಣದ ಮಾಧ್ಯಮದ ೩೦"x೨೨" ಅಳತೆಯಲ್ಲಿ ರಚನೆಗೊಂಡಿದೆ. ಪಂ॥ ಪುಟ್ಟರಾಜ ಗವಾಯಿಗಳ "ಶ್ರೀ ಬಸವೇಶ್ವರ ಪುರಾಣ"[೭೫] ಕನ್ನಡ ಅನುವಾದ ಗ್ರಂಥದಲ್ಲಿ ಈ ಕಲಾಕೃತಿ ದೊರಕಿದ್ದು, ಮೂಲ ಕಲಾಕೃತಿಯ ಕುರಿತು ಮಾಹಿತಿ ಲಭ್ಯವಾಗಿರುವುದಿಲ್ಲ. ಈ ಚಿತ್ರದ ಸಾರಾಂಶವೆಂದರೆ: ಒಮ್ಮೆ ಬಸವಣ್ಣ ಬಿಜ್ಜಳನ ಆಸ್ಥಾನದಲ್ಲಿ ಬಿಜ್ಜಳನಿಗೆ ಎರಡೂ ಕೈಗಳನ್ನು ಮುಗಿದು ವಂದಿಸುವಾಗ, ಚಾಡಿಕೋರ ಕೊಂಡೆಯ ಮಂಚಣ್ಣ ಬಿಜ್ಜಳನಿಗೆ, ಮಹಾರಾಜ ಬಸವಣ್ಣ ಎರಡೂ ಕೈಗಳನ್ನು ಮುಗಿದು ನಮಸ್ಕರಿಸುವುದು ನಿನಗೆ ತಿಳಿಯಬೇಡ, ಅದು ಆತ ತನ್ನ ಕೈಯಲ್ಲಿ ಧರಿಸಿದ ಶಿವನ ಮುದ್ರೆಯುಂಗುರಕ್ಕೆ ಕೈಮುಗಿದು ನಮಸ್ಕರಿಸುತ್ತಾನೆ ಎಂಬ ಚಾಡಿಯ ಮಾತುಗಳನ್ನು ಹೇಳುತ್ತಾನೆ. ಬಿಜ್ಜಳನು ಬಸವಣ್ಣನಿಗೆ "ನಿನ್ನ ಕೈಯಲ್ಲಿರುವ ನಂದಿಮುದ್ರೆಯುಂಗುರವನ್ನು ತೆಗೆದು ನನಗೆ ನಮಸ್ಕರಿಸು ಎನ್ನುತ್ತಾನೆ". ಆಗ ಬಸವಣ್ಣ ಸರಿ ಮಹಾಪ್ರಭು, ನೀವು ಈಗ ಸಿಂಹಾಸನದಿಂದ ಕೆಳಗಿಳಿದು ಬರಬೇಕು ಎನ್ನುತ್ತಾನೆ. ಬಿಜ್ಜಳನು ಒಲ್ಲದ ಮನಸ್ಸಿನಿಂದ ಸಿಂಹಾಸನವನ್ನು ಬಿಟ್ಟು ಕೆಳಗೆ ಇಳಿದು ಬರುತ್ತಾನೆ. ಬಸವಣ್ಣ ತನ್ನ ಎರಡೂ ಕೈಗಳನ್ನು ಜೋಡಿಸಿ ಸಿಂಹಾಸನಕ್ಕೆ ನಮಸ್ಕರಿಸಿದ ಕೂಡಲೇ ಬಿಜ್ಜಳನ ಸಿಂಹಾಸನವು ಬೆಂಕಿಹತ್ತಿ ಉರಿದು ಹೋಗುತ್ತದೆ. ಆ ಸನ್ನಿವೇಶವನ್ನು ಕಲಾವಿದ ಅರ್ಥಪೂರ್ಣವಾಗಿ ಚಿತ್ರಿಸಿದ್ದಾನೆ.

ಜಲವರ್ಣಕ್ಕೆ ಸೇರಿದ ಈ ಚಿತ್ರದಲ್ಲಿ ಹತ್ತಿ ಉರಿಯುತ್ತಿರುವ ಸಿಂಹಾಸನದ ಬೆಂಕಿಯ ಜ್ವಾಲೆಗಳು, ಅವುಗಳಿಗೆ ಬಳಸಿದ ಹಳದಿ ಮತ್ತು ಕೆಂಪು ಬಣ್ಣಗಳ ಸಂಯೋಜನೆ, ನೀಲಿ ಮತ್ತು ಬಿಳಿಮಿಶ್ರಿತ ಬಣ್ಣದಿಂದ ಚಿತ್ರಿಸಿದ ಹೊಗೆ ಕಲಾವಿದನ ಉದ್ದೇಶವನ್ನು ಸಾರುತ್ತದೆ. ಬಸವಣ್ಣ ಒಂದು ವೇಳೆ ಆತನು ಕೈಬೆರಳುಗಳಲ್ಲಿದ್ದ ನಂದಿಮುದ್ರೆಯನ್ನು ತೆಗೆದು ಬಿಜ್ಜಳನಿಗೆ ನಮಸ್ಕರಿಸಿದ್ದರೆ ತಾನು ಭಸ್ಮವಾಗಿಬಿಡುತ್ತಿದ್ದೆ ಎಂಬ ತಿಳಿವಳಿಕೆ ಬಂದ ಬಿಜ್ಜಳ ಬಸವಣ್ಣನ ಪಾದಗಳಿಗೆ ನಮಸ್ಕರಿಸುವ ಭಂಗಿಯಲ್ಲಿ ಕಲಾವಿದ ರಚಿಸಿದ್ದಾನೆ. ಆತನ ಕಣ್ಣುಗಳು ಮುಚ್ಚಿವೆಯೆಂಬಂತೆ ತೋರಿದರೂ ಶರಣಾಗತಿಯ ಮುಖಮುದ್ರೆಯು ಅಚ್ಚುಕಟ್ಟಾಗಿ ಮೂಡಿಬಂದಿದೆ. ಬಸವಣ್ಣ ಸಿಂಹಾಸನದೆಡೆಗೆ ಬಾಗಿ ತನ್ನ ಮುಗಿದ ಕೈಗಳನ್ನು ಹಾಗೆಯೇ ಇರಿಸಿಕೊಂಡು ಬಿಜ್ಜಳನತ್ತ ನೋಡುತ್ತಿದ್ದಾನೆ. ಆತನು ಧರಿಸಿದ ಮಂತ್ರಿಯ ಪೋಷಾಕು ಮಿರುಗುತ್ತಿದೆ.

---

೭೫. ಉಭಯ ಗಾಯನಾಚಾರ್ಯ ಪಂ. ಪುಟ್ಟರಾಜ (ಅನು) : ಶ್ರೀಬಸವೇಶ್ವರ ಪುರಾಣ, ಪ್ರ: ಶ್ರೀ ಕುಮಾರೇಶ್ವರ ಕೃಪಾಪೋಷಿತ ಸಂಗೀತ ಸಾಹಿತ್ಯ ಮಹಾವಿದ್ಯಾಲಯ, ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ. ೧೯೬೦

ಬಸವಣ್ಣನ ಎದುರಿಗೆ ರಾಜಭಟನೊಬ್ಬ ಕೆಂಪು ಬಣ್ಣದ ಸೈನ್ಯದ ಉಡುಗೆಯನ್ನು ಧರಿಸಿ, ಕತ್ತಿಯನ್ನು ಇಳಿಯಬಿಟ್ಟಿದ್ದಾನೆ. ಆತನ ಎರಡು ಕೈಗಳು ಮೇಲಕ್ಕೆತ್ತಿದಂತೆ ತೋರುತ್ತಿವೆ. ಬೆಂಕಿಬಿದ್ದಾಗ ನಮ್ಮ ವರ್ತನೆ ಹೇಗಿರುತ್ತದೆಯೋ ಹಾಗೆ ಸಹಜವೆಂಬಂತೆ ಮುಖದಲ್ಲಿ ಆಹಾಕಾರ ಎದ್ದಿರುವುದನ್ನು ತೋರಿಸಲು ಬಿಟ್ಟುಕೊಂಡ ಬಾಯಿಯೊಂದಿಗೆ ಕಲಾವಿದ ಸಮರ್ಥವಾಗಿ ಘಟನೆಯನ್ನು ನಿರೂಪಿಸಿದ್ದಾನೆ. ಹಿಂದೆ ಇದ್ದ ಇಬ್ಬರು ವ್ಯಕ್ತಿಗಳ ಕಣ್ಣುಗಳಲ್ಲಿ ಭಯಭೀತಿ ಮನೆಮಾಡಿವೆ. ಈ ಸನ್ನಿವೇಶದಲ್ಲಿ ಭಯಭೀತಿಯೊಂದಿಗೆ ಬಸವಣ್ಣನ ಪವಾಡದ ಬಗೆಗೆ ಅಪಾರವಾದ ಮೆಚ್ಚುಗೆಯೂ ಸೇರಿಕೊಂಡಿರುವುದನ್ನು ಗಮನಿಸಬಹುದು.

ಚಿತ್ರದ ಸಂಯೋಜನೆಯೇ ವಿಶಿಷ್ಟವಾದುದು. ಆಕೃತಿಗಳ ಮಧ್ಯಭಾಗಕ್ಕೆ ಹೊತ್ತುರಿಯುತ್ತಿರುವ ಸಿಂಹಾಸನದ ಎಡ ಬಲಪಾರ್ಶ್ವಗಳಲ್ಲಿ ಬಸವಣ್ಣ ಮತ್ತು ಬಿಜ್ಜಳನ ಪರಿವಾರದ ಆಕೃತಿಗಳು ಸಂಯೋಜನೆಗೊಂಡಿವೆ. ಪ್ರಸನ್ನವದನನಾಗಿ ಚಿತ್ರಿತಗೊಂಡಿರುವ ಬಸವಣ್ಣ, ಗಾಬರಿಯಿಂದ ರೂಪುಗೊಂಡ ಬಿಜ್ಜಳನ ಪರಿವಾರದ ಆಕೃತಿಗಳು ಪೌರಾಣಿಕ ಕಥಾನಕಕ್ಕೆ ದೃಶ್ಯಾತ್ಮಕ ಪ್ರತಿಕ್ರಿಯೆಯ ಪರಿ ಹೇಗಿರುತ್ತದೆ ಎಂಬುದಕ್ಕೆ ಈ ಚಿತ್ರ ಉತ್ತಮ ಮಾದರಿಯಾಗುತ್ತದೆ.

ಹಿನ್ನೆಲೆಯಲ್ಲಿ ಎಂದಿನಂತೆ ಅರಸೊತ್ತಿಗೆಯ ವೈಭವ, ಮುನ್ನೆಲೆಯಲ್ಲಿ ಆಕೃತಿಗಳ ವಿನ್ಯಾಸಗಳು ಚಲನಶೀಲ. ಮೂಲವರ್ಣಗಳ ಪಾರುಪತ್ಯ ಇಲ್ಲಿದ್ದರೂ ಕಥಾನಕವೊಂದಕ್ಕೆ ಪೂರಕವಾಗಿಯೇ ಇವೆ. ಒಟ್ಟು ಕಥಾನಕವೊಂದು ದೃಶ್ಯಾತ್ಮಕವಾಗಿ ಗೋಚರವಾದಾಗ ನೋಡುಗ ದಕ್ಕುವ ಅನುಭವವೇ ವಿಭಿನ್ನವಾದುದು. "ಯಾವುದೇ ಒಂದು ಚಿತ್ರದಲ್ಲಿ ಹಿನ್ನೆಲೆ ಅದರ ಮುಂದೆ ನಿಂತ ವಸ್ತುಗಳು, ವಸ್ತುಗಳ ಮುಂದಣ ಭಾಗ ಅಥವಾ ಮುನ್ನೆಲೆ ಇವನ್ನು ಕೂಡಿಕೊಂಡು ಇರುತ್ತವೆ. ಹೇಗಾದರೂ ಇದ್ದರೆ ತೃಪ್ತಿಕರವಾದ ಚಿತ್ರಸೃಷ್ಟಿ ಆಗಲಾರದು. ಚಿತ್ರದಲ್ಲಿರುವ ವಿವಿಧ ವಸ್ತುಗಳು, ತಮ್ಮ ಆಕಾರ ಬಣ್ಣಗಳ ದೃಷ್ಟಿಯಿಂದ ಮೇಳಗೊಂಡು ಕಾಣಿಸಿದಾಗ ಮಾತ್ರವೇ ಅವು ತೃಪ್ತಿ ಕೊಡಬಹುದು"[೭೬] ಎಂಬ ಡಾ. ಶಿವರಾಮ ಕಾರಾಂತರ ಮಾತು ತುಂಬಾ ಅರ್ಥಪೂರ್ಣವಾದುದು.

೨.೪.೭. ಬದನೆಕಾಯಿಗಳನ್ನು ಲಿಂಗಗಳನ್ನಾಗಿ ಪರಿವರ್ತನೆ ಮಾಡಿದ ಬಸವಣ್ಣ

"ಒಂದು ಕಥಾನಕವೇ ಇರಲಿ, 'ಸ್ಥಿತ ಜೀವ(still life)ಗಳ ಗುಂಪೇ ಇರಲಿ, ಅದು ಚಿತ್ರ ಬರೆಯುವವನ ವಿಷಯವಾಗಿರುವಾಗ, ಅದರಲ್ಲಿ ಬರುವ ವಿವಿಧ ಆಕೃತಿಗಳನ್ನು ಪರಸ್ಪರ ಹೊಂದಿಕೆಯಿಂದ ತೋರಿಸಲು ವಿಶೇಷ ತರಹದ ಕೌಶಲ ಬೇಕು."[೭೭] ಅಂತಹ ಕೌಶಲ ನಿಪುಣ ಎಂ. ಎ. ಚೆಟ್ಟಿಯವರು ಎಂದು ಹೇಳಿದರೆ ತಪ್ಪಾಗಲಾರದು. ಜಲವರ್ಣದ ಮಾಧ್ಯಮದ ಈ ಕೃತಿಯು ३೦"x೨೨" ಅಳತೆಯಲ್ಲಿ ರಚನೆಗೊಂಡಿದೆ. ಪಂ॥ ಪುಟ್ಟರಾಜ ಗವಾಯಿಗಳ "ಶ್ರೀ ಬಸವೇಶ್ವರ ಪುರಾಣ" ಕನ್ನಡ ಅನುವಾದ ಗ್ರಂಥದಲ್ಲಿ ಈ ಕಲಾಕೃತಿ ದೊರಕಿದ್ದು, ಮೂಲ ಕಲಾಕೃತಿಯ ಕುರಿತು ಮಾಹಿತಿ ಲಭ್ಯವಾಗಿರುವುದಿಲ್ಲ. ಬಸವಣ್ಣನ ಭಕ್ತಿ, ಪವಾಡಗಳನ್ನು ಪರೀಕ್ಷೆ ಮಾಡಬೇಕೆಂದು ಕೆಲ ಅನ್ಯಧರ್ಮೀಯರು ನಿರ್ಧರಿಸುತ್ತಾರೆ.

೭೬. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪು-೬೯

೭೭. ಅದೇ., ಪು-೭೪

ಶರಣರಂತೆ ವೇಷಭೂಷಣಗಳನ್ನು ಧರಿಸಿ, ಪಂಚೆ ಮೇಲುಹೊದಿಕೆಯನ್ನು ಹೊದ್ದು, ಬದನೆಕಾಯಿಯನ್ನು ಕೊರಳಲ್ಲಿ ಕಟ್ಟಿಕೊಂಡು ಬಂದು ಮಹಾಮನೆಯಲ್ಲಿ ಕುಳಿತುಕೊಳ್ಳುತ್ತಾರೆ. ಬಸವಣ್ಣನು ಹಣೆಯಲ್ಲಿ ವಿಭೂತಿ, ಕೊರಳಿನಲ್ಲಿ ರುದ್ರಾಕ್ಷಿ ಧರಿಸಿದ್ದರಿಂದ ಶರಣರೆಂಬ ಗೌರವ ನೀಡುತ್ತಾನೆ. ಮಹಾಮನೆಯಲ್ಲಿ ಇಷ್ಟಲಿಂಗಪೂಜೆ ಮಾಡಿಕೊಳ್ಳಲು ಎಲ್ಲರೂ ಕುಳಿತಿದ್ದಾಗ, ಡಾಂಭಿಕ ವೇಷಧಾರಿಗಳು ತಮ್ಮಲ್ಲಿದ್ದ ಬದನೆಕಾಯಿಯನ್ನು ಅಂಗೈಯಲ್ಲಿ ಹಿಡಿದು ಪೂಜಿಸಲು ತೊಡಗುತ್ತಾರೆ. ಆ ಸನ್ನಿವೇಶವನ್ನು ಕಲಾವಿದ ಅಭಿವ್ಯಕ್ತಗೊಳಿಸಿದ್ದಾನೆ.

ಈ ಚಿತ್ರದಲ್ಲಿ ಎಡ ಅರ್ಧಭಾಗದಲ್ಲಿ ಬಸವಣ್ಣ ಮತ್ತು ಆತನ ಪತ್ನಿಯರಾದ ಗಂಗಾಂಬಿಕೆ, ನೀಲಾಂಬಿಕೆಯರು ಬಸವಣ್ಣನ ಹಿಂದೆ ನಿಂತಿದ್ದಾರೆ. ಲಾಂಛನಕ್ಕೆ ಶರಣೆಂಬೆ ಎಂಬ ಬಸವಣ್ಣ ತನ್ನ ನಿಯಮದಂತೆ ಎದುರಿಗೆ ಚಿಕ್ಕ ವೇದಿಕೆಯ ಮೇಲೆ ಕುಳಿತ ವೇಷಧಾರಿ ಭಕ್ತರಿಗೆ ಭಕ್ತಿಯಿಂದ ಕೈಮುಗಿಯುತ್ತಾನೆ. ತಲೆಗೆ ಕಿರೀಟ, ಕೊರಳಲ್ಲಿ ರುದ್ರಾಕ್ಷಿ, ಇಷ್ಟಲಿಂಗದೊಂದಿಗೆ ಮಂತ್ರಿಪೋಷಾಕು ಧರಿಸಿದ ಬಸವಣ್ಣನ ಮುಖಮುದ್ರೆಯು ಶಾಂತವಾಗಿದೆ. ದೇಹವನ್ನು ಬಾಗಿಸಿ ಕುಳಿತಿರುವ ವೇಷಧಾರಿಗಳಿಗೆ ವಿನಮ್ರವಾಗಿ ಕೈಮುಗಿಯುವ ಸನ್ನಿವೇಶ ಅತ್ಯಂತ ಸಹಜವಾಗಿ ಮೂಡಿಬಂದಿದೆ. ಗಂಗಾಂಬಿಕೆ ನೀಲಾಂಬಿಕೆಯರಿಬ್ಬರು ಆತನ ಹಿಂದೆ ನಿಂತಿದ್ದು, ಕೆಂಪುಸೀರೆ ಧರಿಸಿ, ತಲೆತುಂಬ ಸೆರಗು ಹೊದ್ದಾಕೆ ಕೈಯಲ್ಲಿ ತಟ್ಟೆಯೊಂದನ್ನು ಹಿಡಿದಿದ್ದು ಅದರಲ್ಲಿ ಪೂಜಾಸಾಮಗ್ರಿಗಳಿರುವಂತೆ ತೋರುತ್ತದೆ. ಆಕೆಯ ಹಿಂದೆ ನೀಲಿಬಣ್ಣದ ಸೀರೆಯನ್ನು ಧರಿಸಿ ತಲೆಯನ್ನು ತುಸುಮೇಲಕ್ಕೆತ್ತಿ ಅಚ್ಚರಿಯಿಂದ ನೋಡುತ್ತಿರುವ ಸ್ತ್ರೀಯನ್ನು ಚಿತ್ರಿಸಲಾಗಿದೆ. ಹಿಂದೆ ಅಲಂಕೃತಗೊಂಡ ಬಾಗಿಲು, ತಲೆಬಾಗಿಲಿನಲ್ಲಿ ಇಳಿಯಬಿಟ್ಟ ತೋರಣ ಚಿತ್ರಕ್ಕೆ ಮೆರುಗು ನೀಡಿದೆ.

ಚಿತ್ರದ ಬಲಭಾಗದಲ್ಲಿ ಕಾವಿಬಣ್ಣದ ದೇಹ, ಪಂಚೆ, ಮೇಲುಹೊದಿಕೆಯನ್ನು ಹೊದ್ದು, ಕೊರಳಲ್ಲಿ ರುದ್ರಾಕ್ಷಿ, ಹಣೆಯಲ್ಲಿ ವಿಭೂತಿ ಧರಿಸಿ ಎಡಗೈಯಲ್ಲಿ ಇಷ್ಟಲಿಂಗದ ಬದಲು ಬದನೆಕಾಯಿಗಳನ್ನು ಪೂಜಿಸುವ ತವಕದಲ್ಲಿರುವ ವೇಷಧಾರಿ ಭಕ್ತರ ಒಂದು ಗುಂಪೇ ಇದೆ. ಕೆಲವರು ತದೇಕಚಿತ್ತದಿಂದ ಬದನೆಕಾಯಿಯನ್ನು ನೋಡುತ್ತಿರುವರು, ಕೆಲವರು ಅನುಮಾನ ಭಯಗಳಿಂದ, ಬಸವಣ್ಣ ಎಲ್ಲಿ ತಮಗೆ ಶಾಪ ನೀಡಿ ಬಿಡುತ್ತಾನೆಯೋ ಎಂಬ ಕಾತರದ ಭಾವನೆಯನ್ನು ಮುಖದಲ್ಲಿ ಹೊಂದಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ನೆಲಹಾಸು, ಇಳಿಯಬಿಟ್ಟ ಅಲಂಕಾರಿಕ ಕೆಂಪುಬಣ್ಣದ ಪರದೆಗಳು ಆಕರ್ಷಕವಾಗಿವೆ. ಮೇಲಿನ ವಿಶ್ಲೇಷಣೆಯ ಅನ್ವಯ ಹಿನ್ನೆಲೆಯಲ್ಲಿ ಅರಸೊತ್ತಿಗೆಯ ವೈಭವವನ್ನು ಸೂಚಿಸಲು ಕಂಭಗಳು, ಪರದೆಗಳು, ದ್ವಾರಪಾಲಕರ ಪ್ರತಿಮೆಗಳನ್ನು ಸೂಚ್ಯವಾಗಿ ತೋರ್ಪಡಿಸಲಾಗಿದೆ. ಮುನ್ನೆಲೆಯಲ್ಲಿ ಬಸವಣ್ಣ ಅವರ ಪರಿವಾರದವರ ಆಕೃತಿಗಳನ್ನು ಚಿತ್ರಿಸಲಾಗಿದೆ. ಅವಕಾಶದ ಅರ್ಧದ ಬಲ ಪಾರ್ಶ್ವದಲ್ಲಿ ಬಸವಣ್ಣನ ಪವಾಡಗಳನ್ನು ಪರೀಕ್ಷಿಸಲು ಬಂದ ಅನ್ಯಧರ್ಮದ ಪಂಡಿತರು ತಮ್ಮ ಎಡಗೈಯಲ್ಲಿ ಬದನೆಕಾಯಿಗಳನ್ನು ಶಿವಲಿಂಗದ ರೂಪದಲ್ಲಿ ಹಿಡಿದು ಕೂತಿರುವ ಭಂಗಿಯಲ್ಲಿ ಚಿತ್ರಿಸಲಾಗಿದೆ. ಚೆಟ್ಟಿಯವರ ಎಂದಿನ ರಚನಾಶೈಲಿಯು ಪುನರಾವರ್ತನೆಗೊಂಡಿದೆ. ಎತ್ತರ ನಿಲುವಿನ ಸಪೂರವಾದ ದೇಹಾಕೃತಿ, ತೊನೆದಾಡುತ್ತಿರುವಂತಹ ವಸ್ತ್ರವಿನ್ಯಾಸ, ಮೂಲವರ್ಣಗಳೊಂದಿಗೆ ಮೃದುವಾದ ವರ್ಣ ಸಾಂಗತ್ಯವನ್ನು ಚಿತ್ರಕೃತಿ ಹೊಂದಿದೆ. ಶರಣಸಂಪನ್ನವಾದ ಬಸವಣ್ಣನವರ ವಿನೀತಭಾವ ಸಮರ್ಪಕವಾಗಿ ಮೂಡಿಬಂದಿದೆ.

೨.೪.೮. ಭಕ್ತಿಯ ಮಹಿಮೆ

"ಕಲೆಯ ಗುಣಗ್ರಹಣ ಹಾಗೂ ಸೌಂದರ್ಯಾನುಭವಗಳು ಮನಸ್ಸು ಹಾಗೂ ಸ್ವಭಾವಗಳಿಗೆ ಸಂಬಂಧಿಸಿದ ವಿಷಯ"[೭೮]. "ಶರಣಸಾಹಿತ್ಯಕ್ಕೆ ದೃಷ್ಟಿಕಾವ್ಯ ಸೃಷ್ಟಿಸಿದ ಎಂ.ಎ.ಚೆಟ್ಟಿ"[೭೯]ಯವರ ಈ ಕಲಾಕೃತಿಯು ೩೦"x೨೨" ಅಳತೆ, ಜಲವರ್ಣ ಮಾಧ್ಯಮದಲ್ಲಿ ಚಿತ್ರಣಗೊಂಡಿದೆ. ಪಂ॥ ಪುಟ್ಟರಾಜ ಗವಾಯಿಗಳ "ಶ್ರೀ ಬಸವೇಶ್ವರ ಪುರಾಣ" ಕನ್ನಡ ಅನುವಾದ ಗ್ರಂಥದಲ್ಲಿ ಈ ಕಲಾಕೃತಿ ದೊರಕಿದ್ದು, ಮೂಲ ಕಲಾಕೃತಿಯ ಕುರಿತು ಮಾಹಿತಿ ಲಭ್ಯವಾಗಿಲ್ಲ. ಬಸವಣ್ಣನನ್ನು ಶಿವನು ವೇಷಧಾರಿ ಜಂಗಮನಾಗಿ ಬಂದು ಕಣ್ಣುಗಳನ್ನು ಬೇಡುತ್ತಾನೆ. ಆಗ ಬಸವಣ್ಣ ಇಂತಹ ಪರೀಕ್ಷೆಯನ್ನು ಶಿವನಲ್ಲದೆ ಮತ್ತಾರೂ ಮಾಡುವುದಿಲ್ಲವೆಂದು ಭಾವಿಸಿ ತನ್ನ ಕಣ್ಣನ್ನು ಕಿತ್ತು ಕೊಡಲು ಹೋಗುತ್ತಾನೆ. ಆ ಸಂದರ್ಭದಲ್ಲಿ ಶಿವನು ಪ್ರತ್ಯಕ್ಷನಾದ ಸನ್ನಿವೇಶವನ್ನು ಈ ಚಿತ್ರವು ಒಳಗೊಂಡಿದೆ. ಜಲವರ್ಣ ಸಂಪ್ರದಾಯಕ್ಕೆ ಸೇರಿದ ಚಿತ್ರವಿದಾಗಿದೆ. ಕಡುಗೆಂಪು, ತಿಳಿ ಕಾವಿ, ದಟ್ಟ ಹಸಿರು ಬಣ್ಣಗಳ ಬಳಕೆಯಿಲ್ಲಿದೆ. ಘಟನೆಯು ಹೊರಾಂಗಣದಲ್ಲಿ ನಡೆದಿರುವುದಕ್ಕೆ ಚಿತ್ರದ ಭಿತ್ತಿಯಲ್ಲಿ ಕಂಡು ಬರುವ ಹಸಿರುಬಣ್ಣದ ಮರಗಿಡಗಳು ಸಾಕ್ಷಿಯಾಗಿವೆ. ಚಿತ್ರದ ಎಡಭಾಗದಲ್ಲಿ ಬಸವಣ್ಣ ಪೂರ್ಣಪ್ರಮಾಣದ ಮಿರುಗುವ ಅಂಚುಗಳಿಂದ ಕೂಡಿದ ನಿಲುವಂಗಿ, ಕೊರಳಲ್ಲಿ ಕಂಡೂಕಾಣದಂತಿರುವ ರುದ್ರಾಕ್ಷಿಮಾಲೆ, ಕೊರಳಲ್ಲಿ ಹೊದ್ದುಕೊಂಡ ಮೇಲು ಹೊದಿಕೆಯನ್ನು ಹೊಂದಿದಂತೆ ಬಸವಣ್ಣನನ್ನು ಕಲಾವಿದ ಹಲವು ವರ್ಣಗಳಿಂದ ರೂಪಿಸಿದ್ದಾನೆ. ಬಸವಣ್ಣನ ಮುಖಭಾವವು ಅತ್ಯಂತ ವಿನಮ್ರವಾಗಿದ್ದು, ಆಳವಾದ ನೋವನ್ನು ವ್ಯಕ್ತಪಡಿಸುವಂತಿದೆ. ಬಸವಣ್ಣ ತನ್ನ ಎಡಗೈಯನ್ನು ಎಡಗಣ್ಣಿನ ಹತ್ತಿರ ಹಿಡಿದುಕೊಂಡಿದ್ದು, ಬಲಗೈಯಲ್ಲಿ ತನ್ನ ಕಣ್ಣನ್ನು ಕಿತ್ತು ಶಿವನಿಗೆ ಅರ್ಪಿಸುವ ಸನ್ನಿವೇಶವು ಮನಕಲಕುವಂತಿದೆ. ಆತನ ಎಡಬದಿಯಲ್ಲಿ ದಟ್ಟವಾದ ಕೆಂಪುಬಣ್ಣದ ಹಳದಿ ಚುಕ್ಕಿಗಳಿರುವ ಸೀರೆಯುಟ್ಟು, ತಲೆಯ ಮೇಲೆ ಸೆರಗು ಹೊದ್ದು ಕೈಮುಗಿದು ನಿಂತಿರುವ ಸ್ತ್ರೀ ಬಸವಣ್ಣನ ಇಬ್ಬರು ಪತ್ನಿಯರಲ್ಲಿ ಒಬ್ಬಳಾಗಿರಬೇಕು. ಇವರಿಬ್ಬರ ಹಿಂದೆ ಪ್ರಸ್ತುತ ಘಟನೆಯನ್ನು ನೋಡಿ ರೋದಿಸುವಂತೆ ಆಕ್ರಂದಿಸುವಂತೆ ವ್ಯಕ್ತಿಯೊಬ್ಬ ಬಾಯಿತೆರೆದು ಮುಖ ಮೇಲೆತ್ತಿ ನೋಡುತ್ತಿದ್ದಾನೆ. ಇಬ್ಬರು ಸ್ತ್ರೀಯರು ನಿರ್ವೇದ ಭಾವನೆಯಿಂದ ಘಟನೆಯನ್ನು ನೋಡುತ್ತಿರುವರು.

ಚಿತ್ರದ ಬಲ ಅರ್ಧಭಾಗದಲ್ಲಿ ಈಶ್ವರನು ಕೆಂಪುಬಣ್ಣದ ಕಾವಿಯ ಪಂಚೆಯನ್ನು ಧರಿಸಿ ಬರಿ ಮೈಯನ್ನು ಹೊಂದಿದ್ದಾನೆ. ತಲೆಯಲ್ಲಿ ಜಟೆ, ಅದರಲ್ಲಿ ಚಂದ್ರ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ನಾಗರಹಾವನ್ನು ಕಂಠಾಭರಣವನ್ನಾಗಿ ಧರಿಸಿದ್ದಾನೆ. ವಿಶೇಷವಾಗಿ ನಾಲ್ಕು ಕೈಗಳನ್ನು ಹೊಂದಿದ್ದು, ಎಡಭಾಗದ ಒಂದು ಕೈಯಲ್ಲಿ ತ್ರಿಶೂಲ, ಇನ್ನೊಂದು ಕೈಯಲ್ಲಿ ಭಿಕ್ಷಾಪಾತ್ರೆ, ಬಲಗೈ ಒಂದರಲ್ಲಿ ಬಸವಣ್ಣನು ತನ್ನ ಕಣ್ಣನ್ನು ಕಿತ್ತು ನೀಡುವುದನ್ನು ಪಡೆದುಕೊಳ್ಳುತ್ತಿರುವಂತೆ, ಇನ್ನೊಂದು ಕೈಯಿಂದ ಅಭಯಹಸ್ತ ನೀಡಲು ಸಿದ್ಧನಾಗಿರುವಂತೆ ಕಲಾವಿದ ರಚಿಸಿದ್ದಾನೆ. ಶಿವನ ಹಿಂದೆ ಕಡುಹಸಿರು ಬಣ್ಣದ, ಹಳದಿ ಚುಕ್ಕೆಗಳಿಂದ ಕೂಡಿದ ಸೀರೆಯುಟ್ಟು, ತಲೆತುಂಬ ಸೆರಗು ಹೊದ್ದು ಕುಳಿತ ಶಿವಭಕ್ತೆಯೊಬ್ಬಳಿದ್ದಾಳೆ. ಬಹುಶಃ ಈಕೆ

---

೭೮. ಶಂಕರ ಪಾಟೀಲ : ಚಿತ್ರಕಲಾ ಚಿಂತನೆ, ಪು-೩೧

೭೯. ಎಲ್. ಶಿವಲಿಂಗಪ್ಪ : ವಚನ ಸಾಹಿತ್ಯಕ್ಕೆ ಚಿತ್ರಕಾರರ ಕೊಡುಗೆ, ಪು-೨೬

ಬಸವಣ್ಣನ ಮತ್ತೊಬ್ಬ ಪತ್ನಿಯಿರಬಹುದು. ಶಿವನ ಹಿಂಭಾಗದಲ್ಲಿ ಕಾವಿಬಣ್ಣದ ನಿಲುವಂಗಿ, ತಲೆಗೆ ಅದೇ ಬಣ್ಣದ ಮುಂಡಾಸು ಧರಿಸಿದ ಮೂವರು ಶರಣರಿದ್ದಾರೆ. ಎಲ್ಲರೂ ಕೈಮುಗಿದು ಪ್ರಸ್ತುತ ಘಟನೆಯನ್ನು ಭಯಾಶ್ಚರ್ಯಗಳಿಂದ ನೋಡುತ್ತಿರುವಂತೆ ಕಾಣಿಸುತ್ತದೆ. ನಿಂತಿರುವ ವ್ಯಕ್ತಿಗಳ ನೆರಳುಗಳು ಅತ್ಯಂತ ಸ್ಪಷ್ಟವಾಗಿ ಮೂಡಿರುವಂತೆ ಕಲಾವಿದ ಚಿತ್ರಿಸಿದ್ದಾನೆ.

ಈ ಚಿತ್ರದ ಇಡೀ ಪ್ರಸಂಗವು ಬೆಳ್ಳಂಬೆಳಿಗ್ಗೆ ಅರುಣೋದಯದ ಕಾಲಕ್ಕೆ ಜರುಗಿದಂತೆ ಕಾಣುತ್ತದೆ. ಈ ಮಾತನ್ನು ಪುಷ್ಟೀಕರಿಸುವುದಕ್ಕೆ ಹಿನ್ನೆಲೆಯಲ್ಲಿನ ಆಕಾಶ ಹಳದಿ ರಂಗಿನಲ್ಲಿದೆ. ಮುಂಜಾನೆಯ ಸೂರ್ಯನ ಹೊನ್ನ ಕಿರಣಗಳು ನಿಂತಿರುವ ಎಲ್ಲ ವ್ಯಕ್ತಿಗಳ ಮೇಲ್ಬದಿಯಿಂದ ಛಾಯೆಯನ್ನು ಚೆಲ್ಲಿವೆ. ನೆಲವೂ ಕೂಡ ಬಂಗಾರದೋಕುಳಿಯ ಬಣ್ಣವನ್ನು ಪಡೆದಿದೆ. ಇಲ್ಲಿನ ವ್ಯಕ್ತಿಗಳು ತೊಟ್ಟಿರುವ ಬಟ್ಟೆಗಳಲ್ಲಿನ ಜರಿಯ ಅಂಚುಗಳು ಸ್ವರ್ಣಕಿರಣಗಳಿಂದಾಗಿ ಇನ್ನಷ್ಟು ಕಣ್ಣು ಕುಕ್ಕುವಂತೆ ಹೊಳೆಯುತ್ತಿವೆ. ಇಡೀ ಚಿತ್ರವು ಚೆಟ್ಟಿಯವರ ಚಿತ್ರ ಸಂಯೋಜನಾ ನಿಷ್ಠೆಗೊಂದು ಸ್ಪಷ್ಟ ನಿದರ್ಶನವಾಗಿದೆ. ಇಂಥ ಕೆಲವು ಚರಿತ್ರಾರ್ಹ ಸನ್ನಿವೇಶಗಳನ್ನು ಚಿತ್ರಿಸುವಾಗ ಹೆಚ್ಚು ಬಣ್ಣಗಳ ಆಯ್ಕೆಯಲ್ಲಿ ಸ್ವಾತಂತ್ರ್ಯವಿರುವುದಿಲ್ಲ. ಆದ್ದರಿಂದ ಕೆಲವೇ ಕೆಲವು ಬಣ್ಣಗಳನ್ನು ಬಳಸಿಯೂ ಚೆಟ್ಟಿಯವರು ಸಂಯೋಜನೆಯು ಹದಗೆಡದಂತೆ ಈ ಚಿತ್ರ ರಚಿಸಿದ್ದಾರೆ. ಚಿತ್ರದ ಎಡಬದಿಯಲ್ಲಿ ಕೆಂಪುವರ್ಣದ ಸೀರೆಯನುಟ್ಟ ಬಸವನ ಓರ್ವ ಸತಿ ನಿಂತಿದ್ದರೆ, ಬಲಬದಿಯಲ್ಲಿ ಹಸಿರು ಸೀರೆಯನ್ನುಟ್ಟ ವಿಶೇಷ ಭಂಗಿಯಲ್ಲಿ ಕುಳಿತಿರುವ ಇನ್ನೋರ್ವ ಸತಿ ಇದ್ದಾಳೆ. ಇವರಿಬ್ಬರ ಹೆಚ್ಚು ಕಡಿಮೆ ಮಧ್ಯಕ್ಕೆ ಶ್ವೇತವಸ್ತ್ರಧಾರಿ ಬಸವಣ್ಣನಿದ್ದಾನೆ. ಇಡೀ ಚಿತ್ರದಲ್ಲಿ ಎದ್ದು ಸೆಳೆಯುವುದು ಈ ಮೂರು ಆಕೃತಿಗಳೇ. ಒಂದಿಷ್ಟು ಗಮನಸೆಳೆಯುವುದು ಶಿವನ ಆಕೃತಿ. ದೇವತೆಗಳಿಗೆ, ದೈವೀ ಪುರುಷರಿಗೆ ದೇಹದ ನೆರಳು ಬೀಳುವುದಿಲ್ಲವೆಂಬ ಪ್ರತೀತಿಯಿದೆ. ಆದರೂ ಇಲ್ಲಿ ಶಿವನು ನಿಂತ ನೆರಳು ಚಿತ್ರಿತವಾಗಿರುವುದು ಕಲಾವಿದನ ಅಭಿವ್ಯಕ್ತಿ ಸ್ವಾತಂತ್ರ್ಯವಿರಬಹುದು. ಒಟ್ಟಿನಲ್ಲಿ ಕರುಣಾಜನಕ ಕಥಾನಕವನ್ನು ಚಿತ್ರಪಠ್ಯದಲ್ಲಿ ಸಮರ್ಥವಾಗಿ ಈ ಕಲಾಕೃತಿಯು ಹೊರಹೊಮ್ಮಿಸಿದೆ.

ಚೆಟ್ಟಿಯವರ ಈ ಕೃತಿ ಇತರ ಕೃತಿಗಳಿಗಿಂತ ತೀರಾ ವಿಭಿನ್ನ ನೆಲೆಯದ್ದು ಎಂಬುದು ಮೇಲ್ನೋಟದಲ್ಲಿಯೇ ಸುಳಿವು ನೀಡುತ್ತದೆ ಈ ಚಿತ್ರದಲ್ಲಿನ ವರ್ಣಸಂಯೋಜನೆ. ಒಂದು ಬಗೆಯಲ್ಲಿ ಅರಮನೆಯ ಮುಂಭಾಗದ ವರಾಂಡದಲ್ಲಿ ಮಹಿಮೆಗೆ ಸಂಬಂಧಪಟ್ಟಂತೆ ಈ ದೃಶ್ಯ ಸಂಯೋಜನೆ ಮಾಡಿದಂತಾಗಿದೆ. ವರಾಂಡದ ಕಂಭಗಳು ಅದರ ಹಿನ್ನೆಲೆಯಲ್ಲಿ ಪ್ರಾಕೃತಿಕ ವಿನ್ಯಾಸಗಳು ರಚನೆಗೊಂಡಿರುವುದರಿಂದ ವರಾಂಡದ ಅನುಭವ ದಕ್ಕುತ್ತದೆ. ವರಾಂಡದ ಒಳಾವರಣದಲ್ಲಿ ಆಕೃತಿಗಳ ಸಂಯೋಜನೆ ಜಿಗ್ ಜಾಗ್ ಮಾದರಿಯಲ್ಲಿ ರಚಿತಗೊಂಡಿವೆ. ಆಕೃತಿಗಳಲ್ಲಿ ಎಂದಿನಂತೆ ಚಲನಶೀಲತೆ ಕಂಡುಬರುತ್ತದೆ. ಆಕೃತಿಗಳ ಅಂಗಾಂಗಗಳಲ್ಲಿ ಪ್ರಬುದ್ಧ ರಚನೆ ಕಂಡುಬರುತ್ತದೆ. ಇನ್ನು ವಿಶೇಷವಾಗಿ ಈ ಕೃತಿಯ ವೈಶಿಷ್ಟ್ಯವನ್ನು ಗುರುತಿಸುವುದಾದರೆ ಇಲ್ಲಿನ ವರ್ಣಮೇಳದ್ದು. ಶಿವನ ಆಕೃತಿ, ಬಸವಣ್ಣನವರ ಆಕೃತಿ, ಇನ್ನುಳಿದ ಆಕೃತಿಗಳ ವರ್ಣಸಂಯೋಜನೆ ತುಂಬಾ ಮೃದುತ್ವದಿಂದ ಕೂಡಿದೆ. ಇಡೀ ಚಿತ್ರವೇ ಆ ಮೃದುತ್ವದ ಅನುಭೂತಿಯನ್ನು ಕೊಡುತ್ತದೆ.

೨.೪.೯. ಗೊಲ್ಲತಿಯ ಮೊಸರುಗಡಿಗೆಯನ್ನು ಬಸವಣ್ಣ ರಕ್ಷಿಸಿದ ಪವಾಡ

ಎಂ. ಎ. ಚೆಟ್ಟಿಯವರು ರಚಿಸಿದ ಈ ಕಲಾಕೃತಿಯು ೩೦"x೨೨" ಅಳತೆ, ಜಲವರ್ಣ ಮಾಧ್ಯಮದಲ್ಲಿ ಚಿತ್ರಣಗೊಂಡಿದೆ. ಪಂ॥ ಪುಟ್ಟರಾಜ ಗವಾಯಿಗಳ "ಶ್ರೀ ಬಸವೇಶ್ವರ ಪುರಾಣ" ಕನ್ನಡ ಅನುವಾದ ಗ್ರಂಥದಲ್ಲಿ ಈ ಕಲಾಕೃತಿ ದೊರಕಿದ್ದು, ಮೂಲ ಕಲಾಕೃತಿಯ ಕುರಿತು ಮಾಹಿತಿ ಲಭ್ಯವಾಗಿಲ್ಲ. ಬಸವಣ್ಣನು ಬಿಜ್ಜಳನ ಆಸ್ಥಾನದ ಗಂಭೀರ ಸಭೆಯಲ್ಲಿ ವಿನಾಕಾರಣ ತನ್ನ ಬಲಗೈ ಆಡಿಸಿದುದನ್ನು ನೋಡಿದ ಕೊಂಡೆಯ ಮಂಚಣ್ಣನು ಬಿಜ್ಜಳನಿಗೆ ದೂರು ನೀಡಿ, ಇದು ರಾಜಸಭೆಗೆ ಅವಮಾನವೆಂಬ ಆಕ್ಷೇಪಣೆ ಮಾಡುತ್ತಾನೆ. ಬಿಜ್ಜಳನು ಬಸವಣ್ಣನ ಆ ನಡತೆಗೆ ಕಾರಣ ಕೇಳಿದಾಗ, ಬಸವಣ್ಣನು ದಾರಿಯಲ್ಲಿ ಗೊಲ್ಲತಿಯೊಬ್ಬಳು ಮೊಸರಿನ ಗಡಿಗೆ ಹೊತ್ತು ಬರುವಾಗ ಬೀಳುವ ಸ್ಥಿತಿಯಲ್ಲಿದ್ದು ಬಸವಾ ಎಂದು ನನ್ನನ್ನು ನೆನೆದಳು. ಅದನ್ನು ಬೀಳದಂತೆ ತಡೆದೆ ಎಂದು ಹೇಳುತ್ತಾನೆ. ಆ ಘಟನೆಯನ್ನು ಪ್ರಸ್ತುತ ಚಿತ್ರ ಒಳಗೊಂಡಿದೆ.

ಈ ಚಿತ್ರವು ಜಲವರ್ಣ ಸಂಪ್ರದಾಯಕ್ಕೆ ಸೇರಿದುದಾಗಿದೆ. ಕಡುಗೆಂಪು, ತಿಳಿಹಸಿರು ಬಣ್ಣಗಳು ಪ್ರಧಾನವಾಗಿ ಬಳಕೆಗೊಂಡಿವೆ. ಕಲಾಕಾರ ತಾನು ಹೇಳಬೇಕೆಂದಿರುವ ಸಂಗತಿಯನ್ನು ಈ ಚಿತ್ರಪಠ್ಯದಲ್ಲಿ ಯಶಸ್ವಿಯಾಗಿ ಒಡಮೂಡಿಸಿದ್ದಾನೆ. ಜರತಾರಿ ಅಂಚಿನಿಂದ ಕೂಡಿದ ಕಡುಗೆಂಪು ಬಣ್ಣದ ಸೀರೆ, ಹಣೆಯಲ್ಲಿ ವಿಭೂತಿ, ಅತ್ತ ದುಂಡಗೆ, ಇತ್ತ ಕೋಲುಮುಖವಲ್ಲದ ಮಟ್ಟಸವಾದ ಮುಖ, ಎರಡೂ ಕೈಗಳಲ್ಲಿ ಇದ್ದು ಬಂಗಾರದ ಬಳೆಗಳ ಮಧ್ಯೆ ಹಸಿರುಬಣ್ಣದ ಗಾಜಿನ ಬಳೆಗಳಿಂದ ಗೊಲ್ಲತಿಯು ಸ್ಥಿತಿವಂತಳಾಗಿರಬಹುದೆಂದು ಊಹಿಸಬಹುದು.

ತಲೆಯ ಮೇಲೆ ಮೊಸರಿನ ಗಡಿಗೆ ಹೊತ್ತು ಬರುವಾಗ ಆಯ ತಪ್ಪಿ ತಲೆಯ ಮೇಲಿರುವ ಗಡಿಗೆಗಳು ಕೆಳಗೆ ಬೀಳುವಂತೆ ಕಲಾವಿದ ಅತ್ಯಂತ ನೈಜವಾಗಿ ಇಲ್ಲಿ ಚಿತ್ರಿಸಿದ್ದಾನೆ. ಗಡಿಗೆಗಳು ಪಿಂಗಾಣಿಯವುಗಳೆಂದು ತೋರುತ್ತದೆ, ಅವುಗಳು ಬೀಳುವ ಹಂತದಲ್ಲಿ ಚೆಲ್ಲಿದ ತುಸು ಹಾಲು ಹೊರಗೆ ಬಂದಿರುವುದನ್ನು ಗಮನಿಸಬಹುದು. ಗೊಲ್ಲತಿಯ ಮುಖವು ಮುಗ್ಧವಾಗಿದ್ದು, ಬಿದ್ದುಬಿಡುತ್ತೇನೆಂಬ ಗಾಬರಿಯು ಪ್ರಧಾನವಾಗಿ ಕಾಣಿಸುತ್ತದೆ. ಎಡಗಾಲು ನೆಲಕ್ಕೆ ತಾಗಿಯೂ ತಾಗದಂತೆ ಬಲಗಾಲು ಸ್ವಲ್ಪ ಮಡಿಚಿದಂತೆ ಕಂಡರೂ ಬಲಗಾಲಿನ ಪಾದವು ಸೀರೆಯ ಅಂಚಿನ ಬದಿಯಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಧರಿಸಿದ ಪಾರಂಪರಿಕ ಶೈಲಿಯ ಕುಪ್ಪಸ ಮತ್ತು ಸೀರೆಯ ಹೊಳೆಯುವ ಸೆರಗು, ನಿರಿಗೆಗಳ ವರ್ಣಸಂಯೋಜನೆ ಸಮರ್ಪಕವಾಗಿದೆ. ಬೀಳುತ್ತಿರುವ ಗಡಿಗೆಗಳನ್ನು ಬಸವಣ್ಣ ಅನಂತದಲ್ಲಿ ಉದ್ಭವಿಸಿ ಅವಳನ್ನು ರಕ್ಷಿಸುತ್ತಿರುವಂತೆ ಕಲಾವಿದನ ಸೃಷ್ಟಿಯಾಗಿದೆ. ಬಸವಣ್ಣನ ಅರ್ಧಭಾಗವು ಮಹಾಮನೆಯಲ್ಲಿದ್ದು, ಸೊಂಟದಿಂದ ಮೇಲಿನ ಭಾಗವು ಮಹಾಮನೆಯ ಮೇಲೆ ಎದ್ದುಕಾಣುತ್ತಿದೆ. ಬಸವಣ್ಣ ಶಾಂತವಾದ ಮುಖಮುದ್ರೆಯಿಂದ ಕೂಡಿದ್ದು, ಆತನ ತಲೆಯ ಸುತ್ತಲೂ ಬಿಳಿಯ ಬಣ್ಣದ ಪ್ರಭಾವಳಿಯನ್ನು ಕಾಣಬಹುದು. ಅರಮನೆಯ ಮುಂದೆ ಅಂಕುಡೊಂಕಾದ ಕಾಲುದಾರಿ, ಭಿತ್ತಿಯಲ್ಲಿ ಆಗಸದ ಕೆಂಪುಮಿಶ್ರಿತ ಹಳದಿಬಣ್ಣದ ಸಂಯೋಜನೆ ಕಲಾಕೃತಿಯ ಸೊಗಸಿಗೆ ಕಾರಣವಾಗಿದೆ.

ಒಂದು ಬಗೆಯ ವೇಗ (ಫೋರ್ಸ್) ಈ ಚಿತ್ರಕ್ಕಿದೆ. ಮೇಲೆ ಹೇಳಿದಂತೆ ಮಡಿಕೆ ಬೀಳುತ್ತಿರುವ ಆತಂಕದಲ್ಲಿ ಗೊಲ್ಲತಿಯು ತನ್ನ ದೇಹವನ್ನು ರಕ್ಷಣಾತ್ಮಕವಾಗಿ ತಡೆದು ನಿಲ್ಲಿಸುವ ಪ್ರಯತ್ನ ದೃಶ್ಯಾತ್ಮಕ ನೆಲೆಯಲ್ಲಿ ಬಹಳ ಪ್ರಬುದ್ಧವಾಗಿ ಚಿತ್ರಿಸಲ್ಪಟ್ಟಿದೆ. ಸೂರ್ಯನುದಯಿಸುತ್ತಿರುವ ಸಂದರ್ಭವೆಂಬಂತೆ ಹಿನ್ನೆಲೆಯಲ್ಲಿ ಆಕಾಶ ತೋರಿಸಲ್ಪಟ್ಟಿದ್ದು, ಮುನ್ನೆಲೆಯಲ್ಲಿ ಸುಂದರವಾದ ಇಳೆಯನ್ನು, ಮೇಲ್ಭಾಗದ ಬಲಪಾರ್ಶ್ವದಲ್ಲಿ ವಾಸ್ತುವಿನ್ಯಾಸಗಳನ್ನು ಅತ್ಯಂತ ಸಮರ್ಪಕವಾಗಿ ಸಂಯೋಜಿಸಲಾಗಿದೆ. ಆಕೃತಿಯ ಅಂಗರಚನೆ, ಅದಕ್ಕಿರುವ ಚಲನಶೀಲ ಚೈತನ್ಯ ಅನನ್ಯವಾದುದು. ವರ್ಣಮೇಳವೂ ಸಹ ಅಷ್ಟೇ ಮೃದುವಾಗಿ ಸಂಯೋಜಿತಗೊಂಡಿದೆ. ಒಟ್ಟಾರೆ ಕಲಾಕೃತಿಯು ಆಪ್ಯಾಯಮಾನವಾಗಿದೆ.

೨.೪.೧೦. ವಿಟಜಂಗಮ ಬಸವಣ್ಣನ ಹೆಂಡತಿಯ ಸೀರೆಯನ್ನು ಸೆಳೆದ ಪ್ರಸಂಗ

"ವಚನಕ್ಕೆ ಚಿತ್ರರೂಪ ನೀಡಿದ ಕಲಾವಿದ ಎಂ. ವೀರಪ್ಪ"[೮೦]ನವರು ರಚಿಸಿದ ಈ ಕಲಾಕೃತಿಯು ೧೨"x೧೮" ಅಳತೆಯ ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ. ಈ ಕೃತಿಯ ಕಾಲ ಲಭ್ಯವಾಗಿಲ್ಲ. ಬಸವಣ್ಣನನ್ನು ಪರೀಕ್ಷಿಸಲು ಶಿವನು ಜಂಗಮ ವಿಟನ ವೇಷದಲ್ಲಿ ಬಂದು, "ನಾನು ಸೂಳೆಯ ಮನೆಗೆ ಹೋಗಿದ್ದೆ. ಆ ಸೂಳೆಯು ಬಸವಣ್ಣನ ಮಡದಿ ಗಂಗಾಂಬಿಕೆಯು ಉಟ್ಟುಕೊಂಡ ಪಟ್ಟದ ಸೀರೆಯನ್ನು ತೆಗೆದುಕೊಂಡು ಬಂದರೆ ನಿನ್ನೊಂದಿಗೆ ಕೂಡುತ್ತೇನೆ ಎಂದು ಹೇಳಿದಳು. ಆದ್ದರಿಂದ ನೀನು ನಿನ್ನ ಹೆಂಡತಿಯಾದ ಗಂಗಾಂಬಿಕೆಯ ಸೀರೆಯನ್ನು ಸೆಳೆದುಕೊಡು" ಎಂದು ಬೇಡುವ ಸನ್ನಿವೇಶವನ್ನು ಪ್ರಸ್ತುತ ಚಿತ್ರವು ಹೊಂದಿದೆ. ಪ್ರಸ್ತುತ ಚಿತ್ರವು ತೈಲವರ್ಣದಿಂದ ಕೂಡಿದ್ದು, ನೈಜಚಿತ್ರ ಪರಂಪರೆಗೆ ಸೇರಿದೆ.

ಈ ಚಿತ್ರಕ್ಕೆ ಬಳಸಿದ ವರ್ಣಗಳು ಕಪ್ಪು ಮತ್ತು ಬಿಳುಪುಗಳಾದರೂ ಆಶಯದ ದೃಷ್ಟಿಯಿಂದ ಕಲಾಕೃತಿ ನೋಡುಗರ ಮನದಲ್ಲಿ ಅಚ್ಚೊತ್ತುತ್ತದೆ. ಚಿತ್ರದ ಎಡಭಾಗದಲ್ಲಿ ಬಸವಣ್ಣ ರಾಜಪೋಷಾಕನ್ನು ಧರಿಸಿ, ತಲೆಯ ಮೇಲೆ ಕಿರೀಟ ಧರಿಸಿದ್ದಾನೆ. ಆತನ ಎದುರಿಗಿರುವ ವಿಟವೇಷದ ಜಂಗಮನಿಗೆ ತನ್ನೆರಡೂ ಕೈಗಳನ್ನು ಮುಗಿದು ನಿಂತಿದ್ದಾನೆ. ತಲೆಗೆ ರುಮಾಲನ್ನು, ನಿಲುವಂಗಿಯನ್ನು ಪಾದದವರೆಗೆ ಧರಿಸಿದ ಜಂಗಮನು ಕೈಯಲ್ಲಿ ಕಪ್ಪುಬಣ್ಣದ ಬೆತ್ತವನ್ನು ಹಿಡಿದಿದ್ದಾನೆ. ತಾನು ಬೇಡಿದ ವಸ್ತ್ರವನ್ನು ನೀಡಿದ್ದೇನೆ. ತಾವು ಸ್ವೀಕರಿಸಬೇಕು ಎಂಬ ಭಾವನೆಯನ್ನು ಬಸವಣ್ಣ ಹೊಂದಿದ್ದಾನೆ. ಚಿತ್ರದ ಬಲಬದಿಯಲ್ಲಿ ಹೊಳೆಯುವ ಚಿತ್ತಾರಗಳಿಂದ ಕೂಡಿದ ರೇಷ್ಮೆಸೀರೆಯನ್ನು ಬಸವಣ್ಣ ವಿಟಜಂಗಮನಿಗಾಗಿ ಅರ್ಧಸೆಳೆದು ಬಿಟ್ಟಿರುವ ಸನ್ನಿವೇಶ ಕಾಣುತ್ತದೆ. ಗಂಗಾಂಬಿಕೆ ಬಸವಣ್ಣನ ಈ ಕೃತ್ಯಕ್ಕೆ ಪ್ರತಿಭಟಿಸದೆ, ತನ್ನೆರಡೂ ಕೈಗಳನ್ನು ಮುಗಿದು, ಮುಖವನ್ನು ಸ್ವಲ್ಪಬಾಗಿಸಿ ಓರೆಭಂಗಿಯಲ್ಲಿ ನಿಂತಿದ್ದಾಳೆ. ಚಿತ್ರದ ಮಧ್ಯಭಾಗದಲ್ಲಿ ದುಂಡಾದ ಪುಟ್ಟ ಮೇಜು, ಗಂಗಾಂಬಿಕೆಯ ಹಿಂದೆ ಆಸನಗಳಲ್ಲಿ ಕುಳಿತ ವಿವಿಧ ಹಿರಿಯ ಶರಣರು, ಶರಣೆಯರಲ್ಲಿ ಕೆಲವರು ಆಶ್ಚರ್ಯ, ಮೌನ, ಆತಂಕದ ಭಾವನೆಗಳನ್ನು ಹೊಂದಿದ್ದಾರೆ. ಅನೇಕ ಚಿತ್ರಪಟಗಳಿಂದ ಕೂಡಿದ ಭಿತ್ತಿಯು ಅಲಂಕೃತಗೊಂಡು ಗಮನಸೆಳೆಯುತ್ತದೆ. ಬೃಹತ್ ಅರಸೊತ್ತಿಗೆಯ ಒಳಾವರಣದಲ್ಲಿ, ಬಹುಶಃ ಮಹಾಮನೆಯಲ್ಲಿ ನಡೆದ ಘಟನೆಯನ್ನು ಆಧರಿಸಿದ ಚಿತ್ರವಾಗಿದ್ದು,

೮೦. ಎಲ್. ಶಿವಲಿಂಗಪ್ಪ : ವಚನಸಾಹಿತ್ಯಕ್ಕೆ ಚಿತ್ರಕಾರರ ಕೊಡುಗೆ, ಪು-೧

ಮಾರುವೇಷದ ಶಿವ, ಬಸವಣ್ಣ, ಗಂಗಾಂಬಿಕೆಯು ಸಮಾನಾಂತರವಾಗಿ ಸಂಯೋಜಿಸಲ್ಪಟ್ಟಿದ್ದರೆ, ಮಹಾಮನೆಯ ಶರಣ-ಶರಣೆಯರೆಲ್ಲ ಹಿನ್ನೆಲೆಯಲ್ಲಿ ಸಂಯೋಜನೆಗೊಂಡು ಘಟನೆಯ ಕುರಿತು ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಕೇವಲ ಕಪ್ಪು-ಬಿಳುಪು ಛಾಯೆಗಳಲ್ಲಿ ಚಿತ್ರಿತಗೊಂಡ ಈ ಚಿತ್ರದಲ್ಲಿ ಯಥಾರ್ದರ್ಶನದ ತಾತ್ವಿಕ ನಿಲುವನ್ನು ಬಿಟ್ಟುಕೊಡದ ಕಲಾವಿದರು ಎರಡು ಛಾಯೆಗಳಲ್ಲಿ ಏನೆಲ್ಲ ದೂರ ಮತ್ತು ಸಾಮೀಪ್ಯಗಳ ವ್ಯತ್ಯಾಸವನ್ನು ಹೇಗೆ ಪರಿಣಾಮಕಾರಿಯಾಗಿ ತೋರ್ಪಡಿಸಬಹುದು ಎಂಬುದಕ್ಕೆ ಈ ಚಿತ್ರ ಉತ್ತಮ ಮಾದರಿಯಾಗಬಲ್ಲದು.

೨.೪.೧೧. ವಿಟಜಂಗಮನ ಬಯಕೆಯಂತೆ ಸೀರೆಯನ್ನು ಸೆಳೆದು ಕೊಡುತ್ತಿರುವ ಬಸವಣ್ಣ

ಎಂ. ಎ. ಚೆಟ್ಟಿಯವರು ವೀರಶೈವ ಧರ್ಮಕ್ಕೆ ತಮ್ಮ ಕುಂಚಗಳ ಮೂಲಕ ನೀಡಿರುವ ಕಲಾಕೃತಿಗಳ ಕೊಡುಗೆ ಅಪೂರ್ವ ಮತ್ತು ಮಹತ್ವವಾದುದು. ಅವರು ರಚಿಸಿರುವ ಪ್ರಸ್ತುತ ಕಲಾಕೃತಿಯು ಜಲವರ್ಣ ಮಾಧ್ಯಮ, ೩೦"x೨೨" ಅಳತೆಯಲ್ಲಿ ರಚನೆಯಾಗಿದೆ. ಇದರ ಮೂಲ ಕೃತಿ ಲಭ್ಯವಾಗಲಿಲ್ಲ. ಅದರ ಛಾಯಾಪ್ರತಿ ಪಂ॥ ಪುಟ್ಟರಾಜ ಗವಾಯಿಗಳ "ಶ್ರೀ ಬಸವೇಶ್ವರ ಪುರಾಣ" ಕನ್ನಡ ಅನುವಾದ ಗ್ರಂಥದಲ್ಲಿ ಈ ಕಲಾಕೃತಿ ದೊರಕಿದೆ.

ಶಿವನು ಬಸವಣ್ಣನನ್ನು ಪರೀಕ್ಷಿಸಲು ಜಂಗಮ ವಿಟನ ವೇಷದಲ್ಲಿ ಬಂದು, "ನಾನು ಸೂಳೆಯ ಮನೆಗೆ ಹೋಗಿದ್ದೆ. ಆ ಸೂಳೆಯು ಬಸವಣ್ಣನ ಮಡದಿ ಗಂಗಾಂಬಿಕೆಯು ಉಟ್ಟುಕೊಂಡ ಪಟ್ಟದ ಸೀರೆಯನ್ನು ತೆಗೆದುಕೊಂಡು ಬಂದರೆ ನಿನ್ನೊಂದಿಗೆ ಕೂಡುತ್ತೇನೆ" ಎಂದು ಹೇಳಿದಳು. "ಆದ್ದರಿಂದ ನಿನ್ನ ಹೆಂಡತಿಯಾದ ಗಂಗಾಂಬಿಕೆಯ ಸೀರೆಯನ್ನು ಸೆಳೆದುಕೊಡು" ಎಂದು ಬೇಡುವ ಸನ್ನಿವೇಶವನ್ನು ಪ್ರಸ್ತುತ ಚಿತ್ರವು ಹೊಂದಿದೆ. ಬಸವಣ್ಣ ಹಳದಿ ಮತ್ತು ಕೆಂಪುಬಣ್ಣದಿಂದ ಮಿರುಗುವ ಅಂಚಿನ ತೆಳುನೀಲಿಮಿಶ್ರಿತ ಬಿಳಿ ನಿಲುವಂಗಿ ಮತ್ತು ಪಂಚೆಯನ್ನು ಧರಿಸಿದ್ದಾನೆ. ಕೊರಳಲ್ಲಿ ಇಷ್ಟಲಿಂಗದ ಗಂಟು, ಚಿಕ್ಕಚಿಕ್ಕ ಮಣಿಗಳಿಂದ ಕೂಡಿದ (ಕ್ಲೋಸ್ಡ್ ನೆಕ್) ಹಾರ, ತಲೆಗೆ ಮುತ್ತಿನ ಸರಗಳ ಕುಚ್ಚಿನಿಂದ ಕೂಡಿದ ಬಂಗಾರದ ಕಿರೀಟವನ್ನು ಧರಿಸಿದ ಬಸವಣ್ಣ ಈ ಚಿತ್ರದಲ್ಲಿ ತನ್ನ ಹೆಂಡತಿ ಗಂಗಾಂಬಿಕೆಯ ಸೀರೆಯನ್ನು ಸೆಳೆಯಲು ಮುಂದಾಗಿರುವುದನ್ನು ಚೆಟ್ಟಿಯವರು ಅತ್ಯಂತ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ.

ಬಸವಣ್ಣ ಎಡ ಮತ್ತು ಬಲಗೈ ಪಕ್ಕದಲ್ಲಿದ್ದ ಗಂಗಾಂಬಿಕೆಯ ಸೀರೆಯನ್ನು ಹಿಡಿದು ಎಳೆಯುತ್ತಿದ್ದಾನೆ. ಮಡದಿ ಗಂಗಾಂಬಿಕೆ ತನ್ನ ತಲೆಯನ್ನು ಎಡಭಾಗಕ್ಕೆ ಓರೆಯಾಗಿಸಿ, ಎರಡೂ ಕೈಗಳನ್ನು ಜೋಡಿಸಿ ಕೈಮುಗಿದು ಪ್ರಾರ್ಥಿಸುವ ಭಂಗಿಯಲ್ಲಿದ್ದಾಳೆ. ಮುಖದಲ್ಲಿ ಭಯ, ಆತಂಕ, ಗಾಬರಿಗಳಿಲ್ಲ, ಏಕೆಂದರೆ ಅವಳಿಗೆ ತನ್ನ ಸೀರೆಯನ್ನು ಸೆಳೆಯುತ್ತಿರುವ ಬಸವಣ್ಣನನ್ನು ಪ್ರತಿಭಟಿಸುವ ಇಚ್ಛೆಯಿಲ್ಲ. ಹಳದಿ ಮತ್ತು ಕೆಂಪು ಬಣ್ಣ ಮಿಶ್ರಿತ ಸೀರೆ, ನೀಲಿಬಣ್ಣದ ಕುಪ್ಪುಸ, ಕಿವಿ, ಕಂಠಗಳಲ್ಲಿ ಧರಿಸಿರುವ ಬಂಗಾರದ ಆಭರಣಗಳು ಕಲಾಕೃತಿಗೆ ಸಹಜತೆಯನ್ನು ತಂದುಕೊಟ್ಟಿವೆ. ಕೈಯಲ್ಲಿ ಧರಿಸಿರುವ ಬಳೆಗಳು ಗಮನಸೆಳೆಯುತ್ತವೆ. ಈ ಘಟನೆಯನ್ನು ನೋಡುತ್ತಿದ್ದ ಮೂವರು ಶರಣರು ಬಸವಣ್ಣನೆದುರಿಗೆ ತಮ್ಮ ಪ್ರತಿಕ್ರಿಯೆಗಳನ್ನು

ವ್ಯಕ್ತಪಡಿಸುತ್ತಿದ್ದಾರೆ. ಒಬ್ಬ ಶರಣ ಕೈಮುಗಿದು ಬಸವಣ್ಣನನ್ನು ಸೀರೆ ಸೆಳೆಯದಿರಲು ಪ್ರಾರ್ಥಿಸುವಂತಿದೆ. ಎರಡನೆಯ ಶರಣ ತನ್ನ ಬಲಗೈಯನ್ನು ಮೇಲಕ್ಕೆತ್ತಿ ಚಾಚಿ ಘಟನೆಯನ್ನು ಖಂಡಿಸುವ ಭಂಗಿಯಲ್ಲಿ ನಿಂತಿದ್ದಾನೆ. ಮೂರನೆಯ ಶರಣ ಕುಳಿತುಕೊಂಡಿದ್ದು, ತನ್ನ ಎಡಗೈಯಿಂದ ಬಸವಣ್ಣನಿಗೆ ಈ ಕೃತ್ಯ ಬೇಡವೆಂಬ ಸಂದೇಶವನ್ನು ಸಾರುವಂತೆ ಕಾಣಿಸುತ್ತಿದ್ದಾನೆ. ಆತನ ಮುಖ ಮತ್ತು ಕಣ್ಣುಗಳಲ್ಲಿ ಭಯ, ಗಾಬರಿ, ಆತಂಕಗಳು ಮನೆಮಾಡಿವೆ. ಬಸವಣ್ಣನ ಎಡಭಾಗದಲ್ಲಿ ನಿಂತಿರುವ ಸ್ತ್ರೀಯು ಬಹುಶಃ ನೀಲಾಂಬಿಕೆ ಹಿಂದಿರುವ ಹೆಣ್ಣುಮಗಳು ಅಕ್ಕನಾಗಮ್ಮನಿರಬೇಕೆಂದು ತೋರುತ್ತದೆ. ಎತ್ತರವಾದ ಅಲಂಕೃತ ಕಂಬಗಳು, ನೀಲಿಬಣ್ಣದಿಂದ ರಚಿಸಿದ ಮನೆಯ ಉಪ್ಪರಿಗೆ, ಇಳಿಯಬಿಟ್ಟ ಪರದೆಗಳು ಒಟ್ಟು ಚಿತ್ರದ ಆಶಯಕ್ಕೆ ಸಹಕರಿಸಿವೆ. ಎಂ.ಎ. ಚೆಟ್ಟಿಯವರ ಸಂಯೋಜನಾ ಕೌಶಲ್ಯಕ್ಕೆ ಉತ್ತಮ ನಿದರ್ಶನವಾಗುವ ಮತ್ತೊಂದು ಕೃತಿಯಿದು.

ಚಿತ್ರದಲ್ಲಿಯ ಗಂಗಾಂಬಿಕೆಯ ಭಂಗಿಯು ವಸ್ತ್ರಾಪಹರಣದಲ್ಲಿನ ದ್ರೌಪದಿಯನ್ನು ನೆನಪಿಗೆ ತರುತ್ತದೆ. ಆದರೆ ಆ ಸನ್ನಿವೇಶಕ್ಕೂ ಈ ಸನ್ನಿವೇಶಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅದರ ತಿಳುವಳಿಕೆಯಿಂದ ಕಲಾವಿದ ಗಂಗಾಂಬಿಕೆಯ ಮುಖದಲ್ಲಿ ಅಸಹನೆಯನ್ನಾಗಲಿ, ಆರ್ತತೆಯನ್ನಾಗಲಿ ಕಾಣಿಸಿಲ್ಲ. ಬದಲಾಗಿ ತನ್ಮಯತೆ ಹಾಗೂ ಶರಣಾಗತಿ ತುಂಬಿದ್ದಾನೆ. ಇದು ನಡೆಯುತ್ತಿರುವುದು ರಾತ್ರಿಯಲ್ಲಿ ಎಂಬಂತೆ ಗೋಡೆಗಳ ಮೇಲೆ ಮಾನವಾಕೃತಿಗಳ ದಟ್ಟವಾದ ನೆರಳುಗಳು ಗೋಚರಿಸಿವೆ. ಮೇಲ್ಭಾಗದಲ್ಲಿ ಹಾಕಲಾಗಿರುವ ಬಟ್ಟೆಯ ಜಾಲರಿಯು ಅತ್ಯಂತ ನೈಜವಾಗಿ ಮೂಡಿಬಂದಿದೆ. ಅದರ ನೆರಿಗೆಗಳು ಸಹಜತೆಗೆ ಇಂಬು ನೀಡಿವೆ. ಪ್ರಸ್ತುತ ಚಿತ್ರವು ಸಹ ಚೆಟ್ಟಿಯವರ ಅಭಿವ್ಯಕ್ತಿಯಾಗಿದೆ. ನೈಜ ಕಲೆಗೆ ಒಂದು ಉತ್ತಮ ಮಾದರಿಯಾಗಬಲ್ಲ ಈ ಚಿತ್ರದಲ್ಲಿ ಅರಸೊತ್ತಿಗೆಯ ವೈಭವ ಹಿನ್ನೆಲೆಯಲ್ಲಿ ಸಂಯೋಜನೆಗೊಂಡಿದೆ. ಮುನ್ನೆಲೆಯಲ್ಲಿ ಆಕೃತಿಗಳು ಸಮಾನಾಂತರ ಬಗೆಯಲ್ಲಿ ರಚನೆಗೊಂಡಿವೆ. ಆಕೃತಿಗಳ ಆಂಗಿಕ ರಚನೆ ಅತ್ಯಂತ ಚಲನಶೀಲವಾಗಿ ರಚನೆಯಾಗಿದೆ. ಕೈಮುಗಿದು ಭಕ್ತಿಪರವಶತೆಯಿಂದ ನಿಂತಿರುವ ಗಂಗಾಂಬಿಕೆ, ಸೀರೆಯನ್ನು ಎಳೆಯುತ್ತಿರುವ ಬಸವಣ್ಣನವರ ಆಕೃತಿಗಳಲ್ಲಿ ಕಂಡುಬರುವ ಭಾವವು ಅವರ ಎದುರಿಗೆ ಇರುವ ವಿಟ ಜಂಗಮನಿಗೆ ಆಗಲಿ, ಇನ್ನಿತರ ಆಕೃತಿಗಳಲ್ಲಿ ಕಂಡುಬರುವ ಭಾವ ಅತ್ಯಂತ ವಿಭಿನ್ನ. ಒಂದು ಬಗೆಯ ವ್ಯಂಗ್ಯ, ಅಪಹಾಸ್ಯದ ಭಾವವನ್ನು ಚೆಟ್ಟಿಯವರು ಅತ್ಯಂತ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

೨.೪.೧೨. ಮಾರುವೇಷದ ಬಿಜ್ಜಳನಿಂದ ಬಸವಣ್ಣನ ಕಾಯಕ ನಿಷ್ಠೆಯ ಪರೀಕ್ಷೆ

"ಚಿತ್ರದಲ್ಲಿ ದೈವತ್ವ ಕಾಣಬೇಕು"[೮೧] ಎಂಬ ಶಂಕರ ಪಾಟೀಲರವರ ಮಾತು ತುಂಬಾ ಅರ್ಥಪೂರ್ಣ ಮತ್ತು ಸತ್ಯ. ಯಾವುದೇ ಒಬ್ಬ ಕಲಾವಿದ ತಾನು ರಚಿಸಿರುವ ಕಲಾಕೃತಿಯಲ್ಲಿನ ತನ್ನ ಪ್ರಾಮಾಣಿಕವಾದ ಪ್ರಯತ್ನವು ಆ ಕಲಾವಿದನ ಕಾಯಕದ ನಿಷ್ಠೆಯನ್ನು ಗುರುತಿಸುತ್ತದೆ. ಮತ್ತು ಆ ನಿಷ್ಠೆಯೇ ದೇವರು. ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ.

೮೧. ಶಂಕರ ಪಾಟೀಲ : ಚಿತ್ರಕಲಾ ಚಿಂತನೆ, ಪು-೩೧

ಈ ಚಿತ್ರವು ಬಸವಣ್ಣನನ್ನು ದೊರೆ ಬಿಜ್ಜಳನು ಮಾರುವೇಷದಿಂದ ಬಂದು ಪರೀಕ್ಷೆ ಮಾಡುವ ಸನ್ನಿವೇಶವನ್ನು ಹೊಂದಿದೆ. ಕಲ್ಯಾಣದಲ್ಲಿ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಬಸವಣ್ಣ ಒಂದು ಲಕ್ಷದಾ ತೊಂಬತ್ತಾರು ಸಾವಿರ ಶರಣರಿಗೆ ಮಹಾಮನೆಯಲ್ಲಿ ದಾಸೋಹ ಮಾಡಲು ಬಿಜ್ಜಳನ ಭಂಡಾರದ ಹಣವನ್ನು ವಿನಿಯೋಗಿಸುತ್ತಾನೆಂಬ ಸುಳ್ಳು ಸುದ್ದಿಯನ್ನು ಬಸವಣ್ಣನ ವೈರಿಗಳು ಬಿಜ್ಜಳನಿಗೆ ನೀಡುತ್ತಾರೆ. ಅದರ ಮರ್ಮವನ್ನು ಅರಿತುಕೊಳ್ಳಲು ಬಿಜ್ಜಳನು ಇಲ್ಲಿ ಬಂದಿದ್ದಾನೆ.

ಮಾರುವೇಷದಲ್ಲಿರುವ ಬಿಜ್ಜಳ ಮತ್ತು ಬಸವಣ್ಣ ಗಹನವಾಗಿ ಚರ್ಚೆಯಲ್ಲಿ ತೊಡಗಿರುವಂತಿದೆ. ವಾಸ್ತವ ಚಿತ್ರಣಗಳನ್ನು ತುಂಬಾ ಆಸಕ್ತಿಕರವಾಗಿ ಚಿತ್ರಿಸುವ ಕಲಾವಿದರು ಇಲ್ಲಿ ಹೆಚ್ಚು ಆಭಾಸಗಳಿಲ್ಲದಂತೆ ಸಹಜತೆಗೆ ಧಕ್ಕೆಯಾಗದಂತೆ ನಿರೂಪಿಸಿದ್ದಾರೆ. ಇದು ರಾತ್ರಿಯ ಸನ್ನಿವೇಶವೆಂಬುದಕ್ಕೆ ಬಹುವಾದ ಗಾಢವರ್ಣಗಳ ಬಳಕೆ ಇದೆ. ಆದರೆ ಬಸವಣ್ಣ ಕುಳಿತಿರುವ ಸ್ಥಳದಿಂದ ವಿಶೇಷ ಬೆಳಕು ಚಿಮ್ಮಿದಂತೆ ಕಂಡುಬರುತ್ತಿದ್ದು, ಬಸವಣ್ಣ ಎದೆಮೇಲೆ ಹೊದ್ದುಕೊಂಡಿರುವ ಶ್ವೇತವಸ್ತ್ರವನ್ನು ಕಣ್ಣು ಕುಕ್ಕುವಂತೆ ಮಾಡಿದೆ. ಇದಕ್ಕೆ ವಿರುದ್ಧವಾಗಿ ಮಾರುವೇಷದಲ್ಲಿರುವ ಬಿಜ್ಜಳನು ಕತ್ತಲೆಗೆ ಬೆನ್ನುಮಾಡಿ ಕುಳಿತಿರುವುದರಿಂದ ಅವನ ಮೇಲೆ ಅಲ್ಲಲ್ಲಿ ಮಂದವಾದ ಛಾಯೆ ಆವರಿಸಿದೆ. ಅದನ್ನು ಕಲಾವಿದ ತುಂಬ ಇಂಪಾಗಿ ಕಾಣುವಂತೆ ಚಿತ್ರಿಸಿದ್ದಾನೆ. ಬಿಜ್ಜಳನ ಭಂಗಿಯಂತೂ ತದ್ರೂಪು ಮಾತಿಗೆ ತೊಡಗಿಕೊಂಡಂತೆ ಇದೆ. ಒಪ್ಪವಾಗಿ ಬಾಚಿಕೊಂಡ ಕಪ್ಪುಕೂದಲು, ಹಣೆಯಲ್ಲಿ ಎದ್ದುಕಾಣುವ ವಿಭೂತಿ, ಭ್ರೂಮಧ್ಯದಲ್ಲಿ ಭಸ್ಮದ ಬಿಂದಿ, ಕೊರಳಲ್ಲಿ ಕೆಂಪುವಸ್ತ್ರದಿಂದ ಕಟ್ಟಿದ ಇಷ್ಟಲಿಂಗದ ಬಟ್ಟೆಯ ಗಂಟು, ಎದ್ದುತೋರುವ ದಪ್ಪಗಾತ್ರದ ರುದ್ರಾಕ್ಷಿಗಳ ಮಾಲೆ, ಮಿರುಗುವ ಬಿಳಿಯ ಮೇಲುವಸ್ತ್ರಗಳಿಂದ ಬಸವಣ್ಣನ ವ್ಯಕ್ತಿಚಿತ್ರಣವನ್ನು ಕಲಾವಿದರು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

ಆತನ ಎದುರಿಗೆ ಬರೆಯುವ ಒಂದು ಕಟ್ಟಿಗೆಯ ಪುಟ್ಟ ಸಾಧನ, ಅದರ ಬದಿಗೆ ಬಂಗಾರದ ಅಲಂಕೃತ ದೀಪವಿದೆ. ಬಸವಣ್ಣನವರ ಬಲಮಗ್ಗುಲಲ್ಲಿ ಹೂದಾನಿಯೊಂದರಲ್ಲಿ ಐದಾರು ಗುಲಾಬಿ ಹೂವುಗಳು, ನೀರಿನ ಕಮಂಡಲವಿದೆ. ಬಸವಣ್ಣನ ಬಲಬದಿಗೆ ಕೆಂಪುವಸ್ತ್ರವನ್ನು ದೇಹದ ತುಂಬ ಧರಿಸಿ, ಬೆತ್ತವೊಂದನ್ನು ತನ್ನ ತೊಡೆಗೆ ಆನಿಸಿಕೊಂಡಿರುವಂತೆ, ಕಪ್ಪುಮಿಶ್ರಿತ ಬಿಳಿಬಣ್ಣದ ತಲೆಗೂದಲು, ಪೊಗದಸ್ತಾಗಿ ಬೆಳೆದಿರುವ ಗಡ್ಡ ಮೀಸೆಗಳಿಂದ ವೃದ್ಧನ ವೇಷದಲ್ಲಿ ಕುಳಿತಿರುವ ಬಿಜ್ಜಳನಿದ್ದಾನೆ. ಹಣೆಗೆ ವಿಭೂತಿಯನ್ನು ಧರಿಸಿದ ಆತನ ಮುಖದಲ್ಲಿ ಕಾಂತಿ ತುಂಬಿದೆ. ತನ್ನ ಎರಡೂ ಕೈಗಳನ್ನು ಅರ್ಧಮೇಲಕ್ಕೆತ್ತಿ ಬಲಗೈ ತೋರುಬೆರಳನ್ನು ಮುಂದೆ ಚಾಚಿ ಬಸವಣ್ಣನೊಂದಿಗೆ ಸಂವಾದದಲ್ಲಿ ತೊಡಗಿರುವಂತೆ ಕಲಾವಿದ ಈ ಚಿತ್ರಪಠ್ಯದಲ್ಲಿ ರೂಪಿಸಿದ್ದಾನೆ. ದಟ್ಟವಾದ ವರ್ಣಗಳ ಬಳಕೆ ಎದ್ದುತೋರುತ್ತದೆ. ನೆಳಲು ಬೆಳಕಿನ ಸಂಯೋಜನೆಯಂತೂ ಪ್ರಸ್ತುತ ಕಲಾಕೃತಿಗೆ ಕಳಸವಿಟ್ಟಂತಿದೆ. ಬಿಜ್ಜಳ ಬಸವಣ್ಣನ ಪರೀಕ್ಷೆ ಮಾಡುವ ಸನ್ನಿವೇಶವನ್ನು ಕಾಣುತ್ತಿದ್ದರೂ, ಆತನ ಪರೀಕ್ಷೆಗೆ ಬಸವಣ್ಣ ಕಿಂಚಿತ್ತೂ ಅಂಜದೆ, ಅಳುಕದೆ, ಶಾಂತವಾದ ಭಾವನೆಗಳಿಂದ ಉತ್ತರ ನೀಡುತ್ತಿರುವ ಆಶಯ ದೃಢವಾಗಿ ಪ್ರಕಟವಾಗುವುದರೊಂದಿಗೆ ಕಲಾವಿದನ ಪರಿಶ್ರಮ ಸಾರ್ಥಕವಾಗಿದೆ.

ಮಾರುವೇಷದಲ್ಲಿರುವ ಬಿಜ್ಜಳನ ಆಕೃತಿ ಅಕಾಡೆಮಿಕ್ ಶೈಲಿಯಲ್ಲಿ ಪ್ರಬುದ್ಧವಾಗಿ, ಹಾಗೆಯೇ ಬಸವಣ್ಣನವರ ಆಕೃತಿ ಸ್ವಲ್ಪ ರಮಣೀಯ ಸೆಳಕುಗಳಿಂದ ರಚಿತವಾಗಿವೆ. ಎಂದಿನಂತೆ ಗಂಗಾಧರ ಅವರು ಅರಸೊತ್ತಿಗೆಯ ಹಿನ್ನೆಲೆಯನ್ನು (ಪರ್ಷಿಯನ್ ಬ್ಲೂ) ನೀಲಿವರ್ಣದ ವಿವಿಧ ಛಾಯೆಗಳಿಂದ ರಚಿಸಿದ್ದಾರೆ. ಈ ಬಗೆಯ ರಚನೆ ಬಹುಶಃ ರಾತ್ರಿಯ ಸನ್ನಿವೇಶವನ್ನು ತೋರಲೂ ಇರಬಹುದು. ಕಾರಣಿಕ ಬಸವಣ್ಣ ಸಮಾಧಾನಚಿತ್ತದಿಂದ ಬಿಜ್ಜಳನ ಮಾತುಗಳನ್ನು ಆಲಿಸುತ್ತಿದ್ದಾನೆ. ಸಂಯೋಜನೆಯು ಪ್ರಬುದ್ಧವಾಗಿದ್ದು ಇವರಿಬ್ಬರ ಮಧ್ಯೆ ಅರಸೊತ್ತಿಗೆಯ ಸಂಕೇತವಾಗಿ ಹೂದಾನಿಯನ್ನು ಇಟ್ಟಿರುವ ಅಲಂಕೃತ ನಿಲುವು ಸುಂದರವಾಗಿ ಮೂಡಿಬಂದಿದೆ. ಒಟ್ಟು ಚಿತ್ರದಲ್ಲಿ ಪೌರಾಣಿಕ ಕಥಾಸನ್ನಿವೇಶವೊಂದು ದೃಶ್ಯಾತ್ಮಕ ನೆಲೆಯಲ್ಲಿ ಪ್ರಬುದ್ಧವಾಗಿ ನಿರೂಪಿಸಲ್ಪಟ್ಟಿದೆ.

೨.೫. ಬಸವಣ್ಣನವರ ಕಾಯಕದ ವರ್ಣಚಿತ್ರಗಳು

"ಶರಣನಿದ್ರೆಗೈದರೆ ಜಪ ಕಾಣಿರೋ; ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೋ;

ಶರಣ ನಡೆದರೆ ಪಾವನ ಕಾಣಿರೋ , ಶರಣ ನುಡಿದರೆ ಶಿವತತ್ವ ಕಾಣಿರೋ

ಕೂಡಲ ಸಂಗನ ಶರಣನ ಕಾಯಕವೇ ಕೈಲಾಸ ಕಾಣಿರೋ!"[೮೨]

ಶರಣರು ಪ್ರತಿಯೊಬ್ಬ ವ್ಯಕ್ತಿಯೂ ಕಾಯಕದಿಂದಲೇ ಆತನ ಅನ್ನವನ್ನು ಸಂಪಾದಿಸಿ, ಅದನ್ನು ಮೊದಲು ಜಂಗಮರಿಗೆ ಉಣಬಡಿಸಿ ಪ್ರಸಾದವನ್ನು ಸ್ವೀಕರಿಸುವ ಪರಿಪಾಠವನ್ನಿಟ್ಟುಕೊಂಡಿದ್ದರು. ಅಂತೆಯೇ ಯಾವೊಬ್ಬ ವ್ಯಕ್ತಿಯೂ ಯಾರಿಗೂ ಹೊರೆಯಾಗಬಾರದು ಎನ್ನುವ ವೈಚಾರಿಕತೆ ಈ ಸಿದ್ಧಾಂತದ ಹಿಂದಿರುವುದನ್ನು ಗಮನಿಸಬಹುದು. "ಕಾಯಕದಲ್ಲಿ ನಿರತನಾದೊಡೆ ಗುರುಲಿಂಗ ಜಂಗಮದ ಹಂಗನ್ನಾದರೂ ತೊರೆಯಬೇಕು" ಇಂತಹ ಕಠಿಣವಾದ ಕಾಯಕದ ತಪಸ್ಸು ಅವರದಾಗಿತ್ತು. ಅಂತೆಯೇ ಬಸವಣ್ಣನವರು ಸ್ವತಃ ತಾವೇ ಕಾಯಕಜೀವಿಯಾಗಿದ್ದು, ಶರಣಸಮೂಹವನ್ನು ತಮ್ಮ ಆಶಯದಂತೆ ಕಾಯಕದಲ್ಲಿ ತೊಡಗಿಸಲು ಮುಂದಾದರು. ಆ ನಿಟ್ಟಿನಲ್ಲಿ ಯಶಸ್ಸನ್ನೂ ಸಾಧಿಸಿದರು.

"ಕಾಸಿ ಕಮ್ಮಾರನಾದ; ಬೀಸಿ ಮಡಿವಾಳನಾದ;

ಹಾಸನಿಕ್ಕಿ ಸಾಲಿಗನಾದ;ವೇದವನೋದಿ ಹಾರುವನಾದ;

..ಇದು ಕಾರಣ ಕೂಡಲಸಂಗಮದೇವಾ,

ಅಂಗಸ್ಥ ಅವನರುದವನೆ ಕುಲಜನು" – ಎಂಬ ಮಾತನ್ನು ಹೇಳಿದ್ದಾರೆ. ಕಾಸುವುದು, ಬೀಸಿವುದು, ಹಾಸುವುದು, ವೇದವನೋದುವದು, ವೇದನೋದಿಸುವುದು, ಇವೆಲ್ಲವೂ ಒಂದೊಂದು ಉದ್ಯೋಗಗಳೇ ವಿನಾ ಕುಲಗಳಲ್ಲ; ಓ ಉದ್ಯೋಗಗಳಲ್ಲಿ ಮೇಲು ಕೀಳುಗಳಿಲ್ಲ; ಎಲ್ಲವೂ ಸಮಾನ ದರ್ಜೆಯವು ಎಂದು ಹೇಳಬೇಕಾಯ್ತು. ವಿದ್ಯೆ, ಗುಣ, ಜ್ಞಾನ ಧರ್ಮ, ಶೀಲ, ಆಚಾರಗಳನ್ನು ಸಾಧಿಸುವುದೇ ಹಿರಿತನದ ಲಕ್ಷಣವೆಂದೂ ಸಾರಿದರು.[೮೩]

---

೮೨. ಪ್ರೊ. ಬಸವರಾಜ ಚೆನ್ನವೀರಪ್ಪ ಜವಳಿ : ಧರ್ಮ ಭಂಡಾರಿ ಬಸವಣ್ಣನವರು, ಪು-೧೧೧

೮೩. ಅದೇ., ಪು-೧೧೨

೨.೫.೧. ಕಾಯಕ ನಿರತ ಶರಣರೊಂದಿಗೆ ಬಸವಣ್ಣ

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಸವಣ್ಣನವರು ಕಾಯಕವೇ ಕೈಲಾಸ ಎಂಬ ಸಂದೇಶವನ್ನು ಸಾರುತ್ತಿದ್ದಾರೆ. ಅವರ ಸುತ್ತ ಕಾಯಕ ಮಾಡುತ್ತಿರುವ ಶರಣರನ್ನು ಕುರಿತು ತಾವು ಮಾಡುತ್ತಿರುವ ಕಾಯಕವು ಕೈಲಾಸಕ್ಕೆ ಸಮಾನವಾದುದೆಂಬ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಬಿಳಿನಿಲುವಂಗಿ, ಬಿಳಿ ಪಂಚೆ, ಹೆಗಲಿಗೊಂದು ತಿಳಿ ಹಳದಿಯ ಬಣ್ಣದ ಮೇಲು ಹೊದಿಕೆ, ಕಾವಿಬಣ್ಣದ ವಸ್ತ್ರದಿಂದ ಕೊರಳಲ್ಲಿ ಲಿಂಗಧಾರಣೆ, ಕೊರಳಲ್ಲಿ ರುದ್ರಾಕ್ಷಿಯ ಸರ, ಮುಂಗೈ ಮಣಿಕಟ್ಟಿನಲ್ಲಿ ರುದ್ರಾಕ್ಷಿ, ಕಿವಿಯಲ್ಲಿ ರುದ್ರಾಕ್ಷಿಯ ಓಲೆಗಳು, ಹಣೆಯಲ್ಲಿ ವಿಭೂತಿ, ಭ್ರೂಮಧ್ಯದಲ್ಲಿ ವಿಭೂತಿಯ ತಿಲಕವನ್ನು ಧರಿಸಿ ನಿಂತಿರುವ ಅವರ ವ್ಯಕ್ತಿತ್ವ ಮನಸೆಳೆಯುವಂತಿದೆ. ಕಣ್ಣುಗಳಲ್ಲಿರುವ ಅಮಿತವಾದ ಕಾಂತಿ, ಮುಖದಲ್ಲಿ ಮಂದಹಾಸ, ಎಡಗೈಯಲ್ಲಿ ಹಸ್ತಪ್ರತಿಯ ಕಟ್ಟನ್ನು ಹಿಡಿದುಕೊಂಡಿರುವ ಭಂಗಿ ಆಕರ್ಷಕವಾಗಿದೆ.

ಬಸವಣ್ಣನವರು ಎಲ್ಲ ಕಾಯಕಜೀವಿಗಳಿಗೆ ಮಾರ್ಗದರ್ಶನ ನೀಡುತ್ತಿರುವಂತೆ ತೋರುತ್ತದೆ. ಬಸವಣ್ಣನವರ ಸುತ್ತಲೂ ಶರಣರು ತಮ್ಮ ತಮ್ಮ ಕಾಯಕದಲ್ಲಿ ನಿರತರಾಗಿದ್ದಾರೆ. ಇದರಲ್ಲಿ ಮಡಿವಾಳರು, ಚಮ್ಮಾರರು, ಕಟ್ಟಿಗೆ ಕಡಿಯುವವರು, ಅಕ್ಕಸಾಲಿಗರು, ಶಿಲ್ಪಿಗಳು ಮುಂತಾದ ಶರಣರು ತಮ್ಮ ಆಯುಧ ಅಥವಾ ಸಲಕರಣೆಗಳೊಂದಿಗೆ ಕರ್ತವ್ಯದಲ್ಲಿ ನಿರತರಾಗಿರುವುದು ಕಂಡುಬರುತ್ತದೆ. ಪ್ರತಿಯೊಬ್ಬ ಶರಣರಿಗೂ ಪ್ರತ್ಯೇಕವಾದ ಬಣ್ಣಗಳನ್ನು ಬಳಸಿದ್ದರೂ ಸಹ ಒಟ್ಟಾರೆ ಈ ಚಿತ್ರವನ್ನು ವೀಕ್ಷಿಸಿದಾಗ ಎಲ್ಲ ಶರಣರೂ ಒಂದೇ ಎಂಬ ಕಲ್ಪನೆ ಬರುವಂತೆ ಕಪ್ಪು ಮತ್ತು ಕಂದುಬಣ್ಣದ ಬಳಕೆಯನ್ನು ಮಾಡಲಾಗಿದೆ. ಅಲ್ಲಲ್ಲಿ ಬಿಳಿಬಣ್ಣದ ಪಂಚೆಗಳನ್ನು ಧರಿಸಿರುವುದನ್ನು ಚಿತ್ರಿಸಲಾಗಿದ್ದರೂ ಒಟ್ಟಾರೆ ಬಣ್ಣದಲ್ಲಿ ಅವು ಲೀನವಾದಂತೆ ಕಂಡುಬರುತ್ತವೆ.

'ಕಾಯಕವೇ ಕೈಲಾಸ' ಇದು ಬಸವಣ್ಣನವರ ಪ್ರಸಿದ್ಧವಾದ ಉಕ್ತಿ. ಅವರ ಅನುಯಾಯಿಗಳು ಸಹ ಬಸವಣ್ಣನವರ ಆಶಯಗಳನ್ನು ಸದಾ ಪರಿಪಾಲಿಸುತ್ತ ಬಂದವರು ಎಂಬುದನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ. ಕಲಾಕೃತಿಯಲ್ಲಿ ಮೂಲ ಪ್ರತಿಮೆಯಾಗಿ ಬಸವಣ್ಣನವರು ಗೋಚರವಾಗುತ್ತಾರೆ. ತಮ್ಮ ಬಲಗೈಯಲ್ಲಿ ಹಸ್ತಪ್ರತಿಯೊಂದರ ಕಟ್ಟನ್ನು ಹಿಡಿದು, ಎಡಗೈಯನ್ನು ಮೇಲೆತ್ತಿ ವಿಶ್ವಕ್ಕೆ ಸಂದೇಶವನ್ನು ನೀಡುವ ಪರಿ ದೃಶ್ಯಾತ್ಮಕವಾಗಿ ಗೋಚರವಾಗುತ್ತದೆ. ಎರಡನೆಯ ಆಶಯವಾಗಿ ಬಸವಣ್ಣನವರ ಅನುಯಾಯಿಗಳು ಚಿತ್ರದ ಅರ್ಧ ಭಾಗದಲ್ಲಿ ಸೂಚ್ಯವಾಗಿ ಚಿತ್ರಿತಗೊಂಡಿದ್ದಾರೆ. ಹೀಗೆ ಸೂಚ್ಯವಾಗಿ ಚಿತ್ರಿಸುವುದರ ಹಿಂದೆ ಕಲಾಕೃತಿಯೊಂದರ ಒಟ್ಟು ಉದ್ದೇಶವನ್ನು ಸಮಗ್ರವಾಗಿ ನಿರೂಪಿಸುವ ಆಶಯವೂ ಇರುತ್ತದೆ. ಹಿನ್ನೆಲೆಯ ಆಕೃತಿಗಳೆಲ್ಲವೂ ಮಸುಕಾಗಿದ್ದರೂ ಬಸವಣ್ಣನವರ ಕಾಯಕನಿಷ್ಠೆಯ ಪ್ರತೀಕವಾಗಿವೆ. ಮಹಾಮನೆಯ ಶರಣರೆಲ್ಲರೂ ತಮ್ಮ ತಮ್ಮ ಕಾಯಕದಲ್ಲಿ ನಿರತರಾದಂತೆ ಸಂಯೋಜಿಸಲಾಗಿದೆ. ಚಿತ್ರದ ಮೇಲ್ಭಾಗದ ಹಿನ್ನೆಲೆಯಲ್ಲಿ ಬಸವಣ್ಣನವರ ವ್ಯಕ್ತಿತ್ವಕ್ಕೆ ಪೂರಕವಾಗಿ ಪ್ರಕಾಶಮಾನವಾದ ಪ್ರಭಾವಳಿಯನ್ನು ತೋರ್ಪಡಿಸಿ ಚಿತ್ರದ ಒಟ್ಟಂದಕ್ಕೆ ಇಲ್ಲಿನ ಆಕೃತಿಗಳೆಲ್ಲವೂ ಬೆಂಬಲವಾಗಿರುವುದರಿಂದ ಚಿತ್ರವು ಸಾರ್ಥಕ್ಯವನ್ನು ಪಡೆದಿದೆ.

೨.೫.೨. ಕಾಯಕ ಮಾಡಿದವರಿಗೆ ಆಹಾರಧಾನ್ಯಗಳನ್ನು ಪೂರೈಸುತ್ತಿರುವುದು

ಕಲಾವಿದ ಕೆ. ಗಂಗಾಧರ ಅವರ ಮತ್ತೊಂದು ಕಲಾಕೃತಿ ಇದಾಗಿದ್ದು, ೪೮"x೩೬" ಅಳತೆಯ ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಬರಗಾಲದ ಸಮಯದಲ್ಲಿ ಮಳೆಬಾರದೆ ಗಿಡ–ಮರಗಳೆಲ್ಲವೂ ಒಣಗಿ ರಣಗುಡುತ್ತಿರುವ ಭೂಮಿಯ ಸನ್ನಿವೇಶವನ್ನು ಈ ಚಿತ್ರವು ಹೊಂದಿದೆ. ಬಸವಣ್ಣನವರು ಕಾಯಕಜೀವಿಗಳಿಗೆ ಭಂಡಾರದಲ್ಲಿರುವ ಆಹಾರಧಾನ್ಯಗಳನ್ನು ಉಚಿತವಾಗಿ ಹಂಚುವುದರಿಂದ ಕಾಯಕವಿಲ್ಲದೆ ಪ್ರಸಾದ ಸ್ವೀಕರಿಸುವುದು ತತ್ವಕ್ಕೆ ವಿರೋಧವುಂಟಾಗುತ್ತದೆಂದು ಭಾವಿಸಿ, ಊರಿನಲ್ಲಿ ಕೆರೆ–ಕಾಲುವೆಗಳನ್ನು ನಿರ್ಮಾಣ ಮಾಡಿಸಿ ಆ ಮೂಲಕ ಕಾಯಕದ ಅವಕಾಶವನ್ನು ಕಲ್ಪಿಸಿ ಆಹಾರಧಾನ್ಯಗಳನ್ನು ವಿತರಣೆ ಮಾಡಿಸುತ್ತಿರುವ ಸನ್ನಿವೇಶವು ಇಲ್ಲಿ ದಾಖಲಾಗಿದೆ.

ಪ್ರಸ್ತುತ ಚಿತ್ರದಲ್ಲಿ ಬಸವಣ್ಣನವರು ಕಾಯಕ ಜೀವಿಗಳತ್ತ ಮುಖಮಾಡಿ ತಮ್ಮ ಕಾರ್ಯಸಾಧನೆಯ ಬಗೆಗೆ ಹಸನ್ಮುಖಿಗಳಾಗಿ ನಿಂತಿರುವುದು ಕಂಡುಬರುತ್ತದೆ. ಹಳದಿ ಬಣ್ಣದ ಅಂಚನ್ನು ಹೊಂದಿರುವ ಹಸಿರು ಬಣ್ಣದ ನಿಲುವಂಗಿ, ಆಕಾಶನೀಲಿ ಬಣ್ಣದ ಧೋತರವನ್ನು ಬಸವಣ್ಣನವರು ಧರಿಸಿದ್ದಾರೆ. ಅವರ ತಲೆಯ ಸುತ್ತಲೂ ಬಿಳಿ ಮತ್ತು ಕೆಂಪು ಮಿಶ್ರಿತ ಬಣ್ಣದಿಂದ ಪ್ರಕಾಶ ಬಿದ್ದಂತೆ ಚಿತ್ರಿಸಲಾಗಿದೆ. ದುಡಿಯುವ ವರ್ಗದ ಎಲ್ಲಾ ಶರಣರಿಗೆ ಮಣ್ಣಿನೊಂದಿಗೆ ಬೆರೆತಾಗ ಶ್ರಮದ ಸಂಕೇತ ಈ ಬಣ್ಣಗಳಲ್ಲಿ ಎದ್ದು ಕಾಣುತ್ತದೆ. ಬಿಳಿಬಣ್ಣದ ಪಂಚೆಗೆ ಕಂದುಬಣ್ಣವನ್ನು ಲೇಪಿಸಿ, ಮೈಬಣ್ಣಕ್ಕೆ ಕಂದುಬಣ್ಣವನ್ನು ಸೇರಿಸಿ ಕೆಂಪುಬಣ್ಣದ ಸೀರೆಗೆ ಕಂದುಬಣ್ಣವನ್ನು ಸೇರಿಸಿ, ಹಸಿರು ಸೀರೆಗೆ ಕಂದುಬಣ್ಣವನ್ನು ಸೇರಿಸಿ, ಉಳಿದಂತೆ ಎಲ್ಲಾ ಶರಣರಿಗೂ ಕಲಾವಿದ ಕಂದುಬಣ್ಣವನ್ನು ಬಳಸಿಕೊಂಡಿರುವುದು ಎದ್ದುಕಾಣುತ್ತದೆ. ಭೂಮಿಯು ಒಣಗಿದ್ದರೂ, ಬರಗಾಲದ ಹೊತ್ತಿನಲ್ಲಿ ಕಾಯಕ ಮಾಡಿದ ಶರಣರ ಶ್ರಮವನ್ನು ಕಂಡು ಕಲಾವಿದ ಆಗತಾನೆ ದಟ್ಟವಾದ ಮೋಡಗಳು ಆವರಿಸಿರುವ ಹಾಗೆ ಚಿತ್ರಿಸಿರುವುದು ಇಲ್ಲಿಯ ವಿಶೇಷವಾಗಿದೆ.

ಕರ್ನಾಟಕ ಸರ್ಕಾರದ 'ಕೂಲಿಗಾಗಿ ಕಾಳು' ಎಂಬ ಯೋಜನೆ ಹೊಸದೇನಲ್ಲ. ಈ ಪರಿಕಲ್ಪನೆಯನ್ನು ೧೨ನೆಯ ಶತಮಾನದಲ್ಲಿಯೇ ಬಸವಣ್ಣನವರು ಪಾಲಿಸಿಕೊಂಡು ಬಂದಿದ್ದರು. 'ಕೂಲಿ' ಎಂಬ ಪದವನ್ನು ಅವರು ಬಳಸದೇ 'ಕಾಯಕ' ಎಂಬ ಪದವನ್ನು ಬಳಸಿ ಮನುಕುಲಕ್ಕೆ ಮಾದರಿಯಾಗಿದ್ದರು. ಬಸವಣ್ಣನವರು ಪ್ರತಿಯೊಬ್ಬ ಕೆಳವರ್ಗದ ಮನುಷ್ಯನಲ್ಲಿ 'ಶರಣಸಂಪನ್ನ'ತೆಯನ್ನು ಕಂಡುಕೊಂಡಿದ್ದರೆ, ಇಂದಿನ ಆಳುವ ವರ್ಗ ಹೇಗೆ ಕೆಳವರ್ಗದ ಜನರಲ್ಲಿ ಕೀಳುಸ್ತರದ ಭಾವನೆಗಳನ್ನು ಹೊಂದಿರುತ್ತದೆ ಎಂಬುದಕ್ಕೆ ಬಳಕೆಯಲ್ಲಿರುವ ಈ 'ಕೂಲಿ' ಪದವೇ ಸಾಕ್ಷಿ. ಪ್ರಸ್ತುತ ಚಿತ್ರದ ಸಂಯೋಜನೆಯು ಚಿತ್ರದ ಉದ್ದೇಶಕ್ಕಿಂತ ವಿಭಿನ್ನವಾದ ಅನುಭವವನ್ನೇ ನೀಡುತ್ತದೆ. ಬಸವಣ್ಣವರು ಒಂದು ಪಾರ್ಶ್ವದಲ್ಲಿ ನಿಂತಿರುವ ಬಗೆ ಹೇಗಿದೆಯೆಂದರೆ ಕಲ್ಯಾಣದಲ್ಲಿ ಕಾಯಕ ಮಾಡಿದವರಿಗೆ ಸರಿಯಾಗಿ ಆಹಾರಧಾನ್ಯಗಳನ್ನು ನೀಡುತ್ತಿದ್ದಾರೆಯೇ? ಎಂಬುದನ್ನು ಗೌಪ್ಯವಾಗಿ ಪರೀಕ್ಷಿಸುತ್ತಿರುವಂತೆ ಚಿತ್ರಿಸಲಾಗಿದೆ. ಚಿತ್ರ ಅವಕಾಶದ ಮುಕ್ಕಾಲುಭಾಗದಲ್ಲಿ ಬರಡು ಭೂಮಿ, ಮೇಲೆ ಬರಗಾಲದ ಸಂಕೇತವಾಗಿರುವ ಚದುರಿದ ಮೋಡಗಳು, ಸಾಲಾಗಿ ನಿಂತು ಕಾಯಕಕ್ಕೆ ಪ್ರತಿಯಾಗಿ ಧಾನ್ಯವನ್ನು ಪಡೆಯುತ್ತಿರುವ ಶ್ರಮಿಕ ವರ್ಗ ಮತ್ತು ಶ್ರಮಿಕರಿಗೆ

ಧಾನ್ಯವನ್ನು ವಿತರಿಸುತ್ತಿರುವ ಇನ್ನೊಬ್ಬ ಶ್ರಮಿಕ– ಹೀಗೆ ಈ ಅವಕಾಶದಲ್ಲಿ ರಚಿತಗೊಂಡ ಆಕೃತಿಗಳು. ಚಿತ್ರದ ಎಡಪಾರ್ಶ್ವದ ಭಾಗದಲ್ಲಿ ಬಸವಣ್ಣನವರ ಹಿನ್ನೆಲೆಯಲ್ಲಿ ದಟ್ಟವಾದ ವರ್ಣ ಸಂಯೋಜನೆ ಅನೌಪಚಾರಿಕವಾದುದು. ಚಿತ್ರದ ಒಟ್ಟಂದಕ್ಕೆ ಯಥಾದರ್ಶನದ ತಂತ್ರಗಾರಿಕೆಯನ್ನು ಸಮರ್ಪಕವಾಗಿ ದುಡಿಸಿಕೊಳ್ಳಬಹುದಿತ್ತು. ದಟ್ಟವರ್ಣದ ಹಿನ್ನೆಲೆಯನ್ನು ಹೊರತುಪಡಿಸಿದರೆ ಇನ್ನುಳಿದ ವರ್ಣ ಸಂಯೋಜನೆ ಮೃದುವಾಗಿದೆ.

೨.೫.೩. ಕಾಯಕನಿರತ ಶರಣರೊಂದಿಗೆ ಬಸವಣ್ಣ (ಕಾಮಿಕ್ಸ್ ಚಿತ್ರ)

ಶರಣರು ಕಲ್ಲು ಮಣ್ಣು ಹೊರುವ ಕಾಯಕದಲ್ಲಿ, ಭೂಮಿಯನ್ನು ಕಬ್ಬಿಣದ ಹಾರೆ, ಸಲಿಕೆಗಳಿಂದ ಅಗೆಯುವ ಸನ್ನಿವೇಶವನ್ನು ಪ್ರಸ್ತುತ ಚಿತ್ರವು ಹೊಂದಿದೆ. ಈ ಚಿತ್ರದಲ್ಲಿ ಬರಗಾಲವನ್ನು ಸಂಕೇತಿಸುವ ಒಣಗಿದ ಭೂಮಿ, ಎಲೆಯಿಲ್ಲದ ಮರ, ಮೋಡಗಳಿಲ್ಲದ ಶುಭ್ರವಾದ ಆಕಾಶ ಎದ್ದು ಕಾಣಿಸುತ್ತದೆ. ಈ ಸಂದರ್ಭದಲ್ಲಿ ಬಸವಣ್ಣನವರನ್ನು ಕಂಡ ಮೇಲ್ವಿಚಾರಕ "ಈ ಸೋಮಾರಿಗಳು ಕೆಲಸ ಮಾಡಲು ನಿರಾಕರಿಸುತ್ತಾರೆ ಸ್ವಾಮಿ" ಎಂದು ದೂರುತ್ತಾನೆ. ಮಾತಿಗೆ ಪ್ರತ್ಯುತ್ತರವಾಗಿ "ನಾವು ಪೂಜಾರಿಗಳು, ಶಿವನನ್ನು ಪೂಜಿಸುವ ಈ ಕೈಗಳನ್ನು ಕೊಳಕು ಮಾಡಲಾರೆವು" ಎಂದು ಹೇಳುತ್ತಾರೆ. ಇವರ ವಾದ ವಿವಾದಗಳನ್ನು ಬಸವಣ್ಣನವರು ತದೇಕಚಿತ್ತದಿಂದ ಆಲಿಸುತ್ತಿರುವಂತೆ ಬಸವಣ್ಣನವರನ್ನು ಚಿತ್ರಿಸಲಾಗಿದೆ. ಇವರ ವಾಗ್ವಾದವನ್ನು ಭೂಮಿಯನ್ನು ಅಗೆಯುತ್ತಲೇ ಇರುವ ಶರಣರು ಕುತೂಹಲದಿಂದ ಗಮನಿಸುತ್ತಿರುವುದನ್ನು ಕಾಣುತ್ತೇವೆ.

ಕಲಾವಿದ ಶ್ರಮವಹಿಸುತ್ತಿರುವ ಕಾಯಕ ಜೀವಿಗಳು ಬಿಸಿಲಲ್ಲಿ ಕಾರ್ಯ ನಿರ್ವಹಿ–ಸುತ್ತಿದ್ದಾರೆಂಬುದನ್ನು ಸೂಚಿಸಲು ವ್ಯಕ್ತಿಗಳ ಪಕ್ಕದಲ್ಲಿ ನೆರಳು ಬೀಳುವುದರ ಮೂಲಕ ಚಿತ್ರಿಸಿರುವುದು ವಿಶೇಷವಾಗಿದೆ. ಈ ಚಿತ್ರದಲ್ಲಿ ವಿಶಾಲವಾದ ಬಯಲು ಗಮನಸೆಳೆಯುತ್ತದೆ. ಬಿರು ಬಿಸಿಲಿನ ಕಾಲ ಎಂದು ಸೂಚಿಸುವುದಕ್ಕೆ ನೆಲದ ಮೇಲಿನ ಮನುಷ್ಯರ ನೆರಳುಗಳು ಸಾಕ್ಷಿ. ಸನ್ನಿವೇಶವನ್ನು ಮನಮುಟ್ಟಿಸುವಲ್ಲಿ ಚಿತ್ರವು ಅತ್ಯಂತ ಯಶಸ್ವಿಯಾಗಿದೆ. ಜಗಜ್ಯೋತಿ ಬಸವೇಶ್ವರ ಚಿತ್ರಕಥೆಯ (ಕಾಮಿಕ್ಸ್) ಮುಂದುವರೆದ ಈ ಚಿತ್ರದಲ್ಲಿ ಒಂದು ದುಡಿಯುವ ವರ್ಗ, ಇನ್ನೊಂದು ಭಾಗದಲ್ಲಿ ದುಡಿಯದೇ ತಿನ್ನುವ ಬ್ರಾಹ್ಮಣ ವರ್ಗ. ಈ ಎರಡೂ ವರ್ಗಗಳಲ್ಲಿನ ವ್ಯತ್ಯಾಸಗಳು ದೃಶ್ಯಾತ್ಮಕವಾಗಿ ಮೂಡಿಬಂದಿವೆ. ಒಂದೆಡೆ ಮೌನವಾಗಿ ನಿಂತು ಇವರ ದೂರುಗಳನ್ನು ಆಲಿಸುತ್ತಿರುವ ಬಸವಣ್ಣ ಹಾಗೂ ದೂರನ್ನು ನೀಡುತ್ತಿರುವ ಶ್ರಮಿಕವರ್ಗದ ಮುಖ್ಯಸ್ಥ ಹೀಗೆ ಆಕೃತಿಗಳು ಸುಂದರವಾಗಿ ಸಂಯೋಜಿಸಲ್ಪಟ್ಟಿವೆ. ಎಂದಿನ ಕಾಮಿಕ್ಸ್ ರಚನಾ ತಂತ್ರ, ಏಕರೂಪವಾಗಿ ಉಪಚಾರಕ್ಕೊಳಪಟ್ಟ ವರ್ಣಗಳ ಬಳಕೆ, ಆಕೃತಿಗಳಿಗೆ ಕಪ್ಪುಶಾಯಿಯ ಬಾಹ್ಯರೇಖೆಯೊಂದಿಗೆ ಆಕೃತಿಗಳ ನೆರಳನ್ನು ಸಹ ಅದೇ ಶಾಯಿಯಲ್ಲಿ ಚಿತ್ರಿಸಲಾಗಿದೆ. ಮೃದುವಾದ ವರ್ಣ ಸಂಯೋಜನೆ ಆಕೃತಿಗಳಲ್ಲಿನ ಭಾವಸ್ಫುರಣೆ ಮಕ್ಕಳಿಗೆ ಆಪ್ಯಾಯಮಾನವಾದ ಅನುಭವವನ್ನು ತಂದುಕೊಡುತ್ತದೆ.

೨.೫.೪. ಬರಗಾಲ ಮತ್ತು ಕಾಯಕ

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ

ಸಂಗ್ರಹಗೊಂಡಿದೆ. ಬರಗಾಲದಲ್ಲಿ ತತ್ತರಿಸುವ ಕಾಯಕಜೀವಿಗಳಿಗೆ ಬಸವಣ್ಣನವರು ಕಾಯಕ ನೀಡಿ ಅವರ ಹಸಿವು ಹಿಂಗಿಸುವ ಪ್ರಯತ್ನ ಪ್ರಸ್ತುತ ಚಿತ್ರದಲ್ಲಿ ಕಂಡುಬರುತ್ತದೆ.

ಬಸವಣ್ಣನವರು ಈ ಕಾಯಕ ಜೀವಿಗಳತ್ತ ಯೋಚಿಸುವ ಭಾವ ಬರುವಂತೆ ಅರ್ಧಮುಖಕ್ಕೆ ಬೆಳಕು ಚೆಲ್ಲಿದಂತೆ ಕಲಾವಿದ ಚಿತ್ರಿಸಿದ್ದಾನೆ. ಕಾಯಕಜೀವಿಗಳು ಶ್ರಮದಲ್ಲಿ ನಿರತರಾದ ಸಂದರ್ಭ ಎದ್ದು ಕಾಣುತ್ತದೆ. ಕೆಲವು ಕಾಯಕಜೀವಿಗಳು ಮಣ್ಣನ್ನು ಅಗೆಯುವುದು, ಭಾರವಾದ ಬುಟ್ಟಿಯನ್ನು ಮೇಲೆತ್ತುವುದು, ಮಹಿಳೆಯರು ಮಕ್ಕಳೊಂದಿಗೆ ಮಣ್ಣನ್ನು ಹೊತ್ತು ಬರುವ ದೃಶ್ಯ ಎದ್ದುಕಾಣುತ್ತದೆ. ಈ ಚಿತ್ರದಲ್ಲಿ ಮಣ್ಣನ್ನು ಅಗೆಯುವಾಗ ಮೂಲ ಇರುವ ಮಣ್ಣು ಅಗೆದ ಹೊಸ ಮಣ್ಣಿನ ವ್ಯತ್ಯಾಸವನ್ನು ತೋರಿಸಲಾಗಿದೆ. ಚಿತ್ರದ ಒಟ್ಟು ನೋಟವು ಕರ್ತವ್ಯನಿರತ ಕಾಯಕ ಜೀವಿಗಳ ಶ್ರಮವನ್ನು ಅನಾವರಣಗೊಳಿಸುತ್ತದೆ. ಈ ಚಿತ್ರ ಮೇಲ್ನೋಟಕ್ಕೆ ಆಧುನಿಕ ಚಿತ್ರದ ಅನುಭವವನ್ನು ನೀಡುತ್ತದೆ. ಒಂದು ಶ್ರಮಿಕ ವರ್ಗ ಹೇಗೆ ತನ್ನ ಶ್ರಮ ಸಂಸ್ಕೃತಿಯಲ್ಲಿ ತಲ್ಲೀನವಾಗಿದೆ. ಇದಕ್ಕೆ ಬೆಂಬಲವಾಗಿ ಬಸವಣ್ಣನವರ 'ಕಾಯಕ ದಾಸೋಹ'ದ ಪರಿಕಲ್ಪನೆ ಕಲ್ಯಾಣದಲ್ಲಿ ನಡೆಯುತ್ತಿರುವ ಬಗೆಯನ್ನು ಕಲಾವಿದ ಸಾಂಕೇತಿಕವಾಗಿ ದೃಶ್ಯಾತ್ಮಕ ನೆಲೆಯಲ್ಲಿ ತೋರಿಸಿ ಪ್ರಬುದ್ಧವಾದ ದೃಶ್ಯ ಸೆಳಕುಗಳು ನಿರೂಪಿತಗೊಂಡಿರುವುದರ ಹಿಂದೆ ಸಮರ್ಪಕವಾದ ವರ್ಣಸಂಯೋಜನೆಯೂ ಈ ಕಲಾಕೃತಿಗೆ ಮೆರುಗನ್ನು ತಂದಿದೆ. ವಿಶೇಷವಾಗಿ ನೆರಳು–ಬೆಳಕು ಛಾಯೆಗಳು ಅತ್ಯಂತ ಸಮರ್ಪಕ ರೀತಿಯಲ್ಲಿ ಆಕೃತಿಗಳಿಗೆ ಮತ್ತು ಸನ್ನಿವೇಶಕ್ಕೆ ಬೆಂಬಲವಾಗಿ ನಿಂತಿವೆ.

೨.೬. ಬಸವಣ್ಣನವರ ಪ್ರಸಾದ ಮತ್ತು ದಾಸೋಹದ ವರ್ಣಚಿತ್ರಗಳು

೨.೬.೧. ಮಹಾಮನೆ ಮತ್ತು ದಾಸೋಹ

'ಪ್ರಸಾದ' ಹಾಗೂ 'ದಾಸೋಹ'ವೆಂಬುವುದು ಆ ಶರಣರು ಕಟ್ಟಿಕೊಟ್ಟ ಬಹುದೊಡ್ಡ ಪರಿಕಲ್ಪನೆಗಳು. ಬಸವಣ್ಣನವರ ಒಂದು ವಚನ ಪ್ರಸಾದ ಹಾಗೂ ದಾಸೋಹದ ಮಹತ್ವವನ್ನು ಸಾರುತ್ತದೆ.

"ಪೂಜೆಯುಳ್ಳನ್ನಬರ ಲಿಂಗವ ಹಾಡಿದೆ

ಮಾಟವುಳ್ಳನ್ನಬರ ಜಂಗಮವ ಹಾಡಿದೆ

ಜಿಹ್ವೆಯುಳ್ಳನ್ನಬರ ಪ್ರಸಾದವ ಹಾಡಿದೆ

ಈ ತ್ರಿವಿಧ ನಾಸ್ತಿಯಾದ ಬಳಿಕ

ಎನ್ನ ನಾ ಹಾಡಿಕೊಂಡೆ ಕಾಣಾ ಕೂಡಲಸಂಗಮದೇವಾ"[೮೪] –ಎಂಬ ವಚನವನ್ನು ಸ್ಮರಿಸುವಂತೆ ಕಲಾವಿದ ಎಸ್. ಪ್ರಹ್ಲಾದರವರು ಚಿತ್ರಿಸಿದ್ದಾರೆ. ಚಿತ್ರದಲ್ಲಿ ಮಹಾಮನೆಯಲ್ಲಿ ನೂರಾರು ಕಾಯಕಜೀವಿಗಳು, ಜಂಗಮರು ತಮ್ಮ ತಮ್ಮ ಕಾಯಕಗಳನ್ನು ಪೂರೈಸಿ ಒಟ್ಟಿಗೆ ಪ್ರಸಾದ ಸ್ವೀಕರಿಸುವ ಸನ್ನಿವೇಶವು ಮೂಡಿಬಂದಿದೆ.

ನೀಡಿದ ಪ್ರಸಾದವನ್ನು ಸ್ವೀಕರಿಸಲು ಬಸವಣ್ಣನು ಬಿನ್ನವಿಸಿಕೊಳ್ಳುವ ಚಿತ್ರಣವಿಲ್ಲಿದೆ. ಬಸವಣ್ಣನವರು ಕಾವಿಬಣ್ಣದ ಬಟ್ಟೆ, ಕೊರಳಲ್ಲಿ ಲಿಂಗಧಾರಣೆಯ ಕಾವಿಬಣ್ಣದ ವಸ್ತ್ರ, ಕೊರಳಲ್ಲಿ ಕಂದುಬಣ್ಣದ ರುದ್ರಾಕ್ಷಿ

---

೮೪. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–), ಪು–

ಮಾಲೆ, ತಲೆಯಲ್ಲಿ ಉದ್ದನೆಯ ಕೂದಲು, ಹಣೆ, ಕೈ ಮತ್ತು ಮುಂಗೈನ ಮಣಿಕಟ್ಟುಗಳಲ್ಲಿ ಭಸ್ಮಧಾರಣೆಯ ಸಂಗತಿಗಳೊಂದಿಗೆ ಬಹುಸುಂದರವಾಗಿ ಚಿತ್ರಿತವಾಗಿದ್ದಾರೆ. ಬಸವಣ್ಣನವರ ಮುಖ ಕೋಲುಮುಖವನ್ನು ಹೋಲುವಂತಿರುವುದು ವಿಶೇಷವೆನ್ನಿಸಿದೆ. ಕಣ್ಣುಗಳಲ್ಲಿ ಶರಣರ ಪ್ರಸಾದ ಸೇವನೆಯ ತೃಪ್ತಿಯ ಧನ್ಯತಾ ಭಾವ ಒಡೆದು ತೋರುವಂತಿದೆ. ಬಸವಣ್ಣನವರ ಜೊತೆಯಲ್ಲಿ ಗಂಗಾಂಬಿಕೆಯನ್ನು ತನ್ನ ಬಿಳಿಬಣ್ಣದ ಸೀರೆಯನ್ನು ಧರಿಸಿ, ಹಣೆಯಲ್ಲಿ ವಿಭೂತಿ ಕುಂಕುಮ ಧರಿಸಿ, ಕೈಯಲ್ಲಿ ಹಸಿರುಬಣ್ಣದ ಬಳೆಗಳನ್ನು ಧರಿಸಿ, ಕೈಯಲ್ಲಿ ಪ್ರಸಾದದ ತಟ್ಟೆಯನ್ನು ಹಿಡಿದಿರುವಂತೆ ಚಿತ್ರಿಸಿದ ಪರಿಯು ನೋಡಲು ಮನಮೋಹಕವಾಗಿದೆ. ಕಣ್ಣುಗಳಲ್ಲಿ ಕಂಡುಬರುವ ಹೊಳಪು ಭಕ್ತರ ಪ್ರಸಾದ ಸೇವನೆಯ ತೃಪ್ತಿಯನ್ನು ಪ್ರತಿಫಲಿಸುವಂತಿದೆ. ಬಸವಣ್ಣನ ದೇಹ ಮತ್ತು ಮುಖಕ್ಕೂ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬರುತ್ತಿದೆ. ಮೊದಲನೆಯ ಪಂಕ್ತಿಯಲ್ಲಿ ಕುಳಿತು ಪ್ರಸಾದ ಸ್ವೀಕರಿಸುತ್ತಿರುವ ಶರಣರಲ್ಲಿ ಮೊದಲಿಬ್ಬರನ್ನು ಬಿಟ್ಟು ಉಳಿದ ಆಕೃತಿಗಳು ನೆಲದ ಮೇಲೆ ಕುಳಿತಂತೆ ಅನ್ನಿಸುವುದಿಲ್ಲ. ಚಿತ್ರದ ಮುಖ್ಯ ಆಕೃತಿಗಳಾದ ಬಸವಣ್ಣ ಮತ್ತು ಗಂಗಾಂಬಿಕೆಯರಿಗೆ ಮಾತ್ರ ಒತ್ತುಕೊಟ್ಟು ಉಳಿದವುಗಳನ್ನು ಸೂಚ್ಯವಾಗಿ ತೋರ್ಪಡಿಸಲಾಗಿದೆ.

ಬಸವಣ್ಣನವರು ಕಾಯಕಕ್ಕೆ ಒತ್ತು ನೀಡಿ ಇಡೀ ದಿನ ಕಾಯಕದಲ್ಲಿ ನಿರತ ಶರಣರನ್ನು ಸಂಜೆ ಮಹಾಮನೆಯಲ್ಲಿ ಕರೆಯಿಸಿ ಅನಂತರ ದಾಸೋಹದಲ್ಲಿ ಎಲ್ಲ ಜಾತಿಯವರಿಗೂ ಉಣಬಡಿಸುವ ವ್ಯವಸ್ಥೆ ಮಾಡಿದ್ದರು. ಪ್ರಸಾದವ್ಯವಸ್ಥೆಯನ್ನು ಕಲ್ಪಿಸಿದ ಬಸವಣ್ಣನವರು ತಮ್ಮ ಕಾರ್ಯದ ಬಗೆಗೆ ಗರ್ವಪಡದೆ ವಿನೀತರಾಗಿ ನನ್ನ ಸೇವೆ ಸ್ವೀಕರಿಸಿದ್ದಕ್ಕಾಗಿ ನಾನು ಶರಣರಿಗೆ ಋಣಿಯಾಗಿರುವೆ, ಭಕ್ತರ ಸೇವೆಯೇ ದೇವರ ಸೇವೆ ಎಂಬ ಮಾತನ್ನು ಪ್ರಸ್ತುತ ಚಿತ್ರದಲ್ಲಿ ಹೇಳುತ್ತಿರುವುದನ್ನು ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ಬಹುಬಣ್ಣಗಳ ಸಂಯೋಜನೆ ಇಲ್ಲದಿದ್ದರೂ ದಾಸೋಹದ ಕಲ್ಪನೆಯು ಸುಂದರವಾಗಿ ಮೂಡಿಬಂದಿದೆ. ದಾಸೋಹದಲ್ಲಿ ಪಾಲ್ಗೊಂಡ ಎಲ್ಲ ಶರಣರಿಗೂ ತಿಳಿ ಕಾವಿಬಣ್ಣವನ್ನು ಲೇಪಿಸಿ, ಕಪ್ಪುಬಣ್ಣ ರೇಖೆಗಳಿಂದ ಮುಕ್ತಾಯಗೊಳಿಸಲಾಗಿದೆ. ಅದರಂತೆ ಬಸವಣ್ಣನವರಿಗೂ ಮೈಗೆ ಒಂದೇ ತರಹದ ಬಣ್ಣವನ್ನು ಲೇಪಿಸಿ, ಕೊರಳಿನಲ್ಲಿ ಕೆಂಪುಬಣ್ಣದ ಬಟ್ಟೆಯಿಂದ ಲಿಂಗಧಾರಣ ಮಾಡಿಸಲಾಗಿದೆ. ಕೊರಳಿನಲ್ಲಿ ಕಪ್ಪುಬಣ್ಣದ ರುದ್ರಾಕ್ಷಿ ಮಾಲೆ, ಹಣೆಯಲ್ಲಿ ಸ್ಪಷ್ಟವಾಗಿ ಕಾಣುವ ವಿಭೂತಿ ಧಾರಣೆ, ಹಣೆಗೆ ಗಂಧ, ಕಿವಿಗೆ ಓಲೆಗಳನ್ನು ಉದ್ದನೆಯ ತಲೆಗೂದಲನ್ನು ಬಿಟ್ಟಿರುವಂತೆ ಚಿತ್ರಿಸಲಾಗಿದೆ. ದಾಸೋಹದ ಸೇವೆಯಲ್ಲಿ ಎಲ್ಲ ಶರಣರಿಗೂ ಮಣೆ ಹಾಕಿ ದುಂಡಗಿನ ಮತ್ತು ದೊಡ್ಡದಾದ ತಟ್ಟೆಯೊಳಗೆ ವಿವಿಧ ಬಗೆಯ ಪಕ್ವಾನ್ನಗಳನ್ನು ಬಡಿಸಲಾಗಿದೆ. ಇಬ್ಬರು ಶರಣರು ಪ್ರಸಾದ ನೀಡುವ ಕಾಯಕದಲ್ಲಿ ನಿರತರಾಗಿರುವುದು ಬಸವಣ್ಣನವರು ತಮ್ಮ ಬಲಗೈಯನ್ನು ಚಾಚುವ ಮೂಲಕ ಶರಣರಿಗೆ ಪ್ರಸಾದ ಸ್ವೀಕರಿಸಲು ಕೋರುವ ಸನ್ನಿವೇಶ ಇಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ.

ಬಸವಣ್ಣನವರ ಮಹಾಮನೆಯಲ್ಲಿ ಒಂದು ಲಕ್ಷ ತೊಂಬತ್ತಾರು ಸಾವಿರ ಶರಣಸಂಪನ್ನರಿರುವುದು ಪೌರಾಣಿಕ ಕಥಾನಕಗಳಿಂದ ತಿಳಿದುಬರುತ್ತದೆ. ಲಕ್ಷಾಂತರ ಶರಣರನ್ನು ಒಂದು ಅವಕಾಶದಲ್ಲಿ ತೋರ್ಪಡಿಸುವುದು ಸುಲಭ ಸಂಗತಿಯೇನಲ್ಲ. ಯಥಾದರ್ಶನದ ತಾಂತ್ರಿಕ ಸಾಧ್ಯತೆಗಳನ್ನೆಲ್ಲ ಸಮರ್ಥವಾಗಿ ದುಡಿಸಿಕೊಂಡರೆ ಮಾತ್ರ ಇಂಥ ಚಿತ್ರದ ರಚನೆ ಸಾಧ್ಯ ಎಂಬುದಕ್ಕೆ ಈ ಚಿತ್ರ ಸೂಕ್ತ ಮಾದರಿಯೂ ಹೌದು. ಬಸವದಂಪತಿಗಳು ಬಲಪಾರ್ಶ್ವದಲ್ಲಿ ಸಂಯೋಜನೆಗೊಂಡರೆ, ಇಡೀ ಶರಣ ಸಮೂಹ ಹಿನ್ನೆಲೆಯಲ್ಲಿ

ದಾಸೋಹಸಂಪನ್ನರಾಗಿ ಕುಳಿತು ಪ್ರಸಾದವನ್ನು ಸ್ವೀಕರಿಸುತ್ತಿದ್ದಾರೆ. ಹಿನ್ನೆಲೆಯಲ್ಲಿ ಶರಣರು ರಾತ್ರಿಯ ಮಂದಬೆಳಕಲ್ಲಿ ಪ್ರಸಾದಕ್ಕೆ ಸಾಲುಸಾಲಾಗಿ ಕುಳಿತಿರುವ, ಅವರ ಮುನ್ನೆಲೆಯಲ್ಲಿ ಶರಣ ಪ್ರಮುಖರೆಲ್ಲ ಕುಳಿತಿರುವ ಹಾಗೆ ಆಕೃತಿಗಳನ್ನು ಸಂಯೋಜಿಸಲಾಗಿದೆ. ಯಥಾದರ್ಶನದ ತಂತ್ರಗಾರಿಕೆಯನ್ನು ದುಡಿಸಿಕೊಳ್ಳುವಲ್ಲಿ ಕಲಾವಿದರು ಸ್ವಲ್ಪ ಮುಗ್ಗರಿಸಿದ್ದು ಪ್ರಸಾದಸ್ವೀಕಾರಕ್ಕೆ ಕುಳಿತವರ ರಚನೆಯಲ್ಲಿ ಕಂಡುಬರುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಅಂದಿನ ಕಲ್ಯಾಣದ ಪೌರಾಣಿಕ ಸಂದರ್ಭವನ್ನು, ತಕ್ಕಮಟ್ಟಿನ ಭಾವಸ್ಫುರಣೆಯನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ.

೨.೬.೨. ಅಲ್ಲಮಪ್ರಭುವಿಗೆ ಬಸವಣ್ಣ ನೈವೇದ್ಯವನ್ನು ಅರ್ಪಿಸುತ್ತಿರುವ ಪ್ರಸಂಗ (ಕಾಮಿಕ್ಸ್ ಚಿತ್ರ)

ಪ್ರಸಾದದ ಬಗೆಗೆ ಅತ್ಯಂತ ಗೌರವದ ಭಾವನೆಯನ್ನು ಶರಣರು ಹೊಂದಿದ್ದರು. ಹಸಿದು ಬಂದ ಜಂಗಮನಿಗೆ ತಮ್ಮ ಕಾಯಕದಿಂದ ಬಂದ ಹಣದಿಂದ ಅಂದಿನ ಅಡುಗೆಯನ್ನು ಮಾಡಿ ಉಣಬಡಿಸಿ ಶರಣರು ತಾವು ಪ್ರಸಾದಸೇವನೆಯನ್ನು ಮಾಡುತ್ತಿದ್ದರು. ಒಂದು ದಿನ ಪ್ರಭುದೇವರು ಬಸವಣ್ಣನು ನಿರ್ಮಿಸಿದ ಶೂನ್ಯ ಸಿಂಹಾಸನದ ಮೇಲೆ ಪೀಠಾರೋಹಣ ಮಾಡಿರುತ್ತಾರೆ. ಪ್ರಭುದೇವರು ಪೀಠಾರೋಹಣ ಮಾಡಿದ ಸಂದರ್ಭದಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದ ಬಸವಣ್ಣ ಅಲ್ಲಿ ನೆರೆದಿದ್ದ ಜಂಗಮಸಮೂಹಕ್ಕೆ ಪ್ರಸಾದ ವ್ಯವಸ್ಥೆಗೆ ತಡವಾದುದಕ್ಕೆ ಜಂಗಮರು ಬಸವಣ್ಣನ ಮೇಲೆ ಕೋಪಿಸಿಕೊಂಡು ಹೊರಟು ಹೋಗುತ್ತಾರೆ. ಅವರ ಹಸಿವೆಯನ್ನು ತಣಿಸಬೇಕಾಗಿತ್ತು ಎಂದು ಬಸವಣ್ಣನವರು ಚಿಂತಿಸುತ್ತಿರುವಾಗ ಪ್ರಭುದೇವರು, ಮೊದಲು ನನ್ನ ಹಸಿವನ್ನು ತಣಿಸು ಎಂದು ಅಪ್ಪಣೆ ಕೊಟ್ಟಾಗ ಬಸವಣ್ಣ ಪ್ರಭುದೇವರಿಗೆ ಪ್ರಸಾದವನ್ನು ಉಣಬಡಿಸುವ ಪ್ರಯತ್ನವನ್ನು ಮಾಡುತ್ತಿರುವ ದೃಶ್ಯ ಪ್ರಸ್ತುತ ಚಿತ್ರದಲ್ಲಿ ರೂಪಿತವಾಗಿದೆ.

ಪ್ರಭುದೇವರು ಪೀಠದ ಮೇಲೆ ಕುಳಿತಿದ್ದಾರೆ. ಪ್ರಭುದೇವರ ಪೀಠದ ಕೆಳಗಿನ ಸಾಲಿನಲ್ಲಿ ವಿವಿಧ ಬಗೆಯ ಭಕ್ಷ್ಯ ಭೋಜ್ಯಗಳನ್ನು ತಯಾರಿಸಿ ಒಂದೊಂದು ಪ್ರತ್ಯೇಕ ಪಾತ್ರೆಗಳಲ್ಲಿ ಇಡಲಾಗಿದೆ. ಬಸವಣ್ಣ ಅವುಗಳಲ್ಲಿಯ ಭಕ್ಷ್ಯಗಳನ್ನು ಒಂದೊಂದಾಗಿ ಅಲ್ಲಮಪ್ರಭುವಿಗೆ ಪ್ರಸಾದದ ರೂಪದಲ್ಲಿ ಉಣಬಡಿಸುತ್ತಿದ್ದಾನೆ. ಇದೇ ಚಿತ್ರದ ಕೆಳಗಿನ ಭಾಗದಲ್ಲಿ ಹಸಿವಿನಿಂದ ಜಂಗಮರು ಬಳಲುತ್ತಿರುವ ಸನ್ನಿವೇಶವನ್ನು ಚಿತ್ರಿಸಲಾಗಿದೆ. ಪ್ರಸ್ತುತ ಚಿತ್ರ ಜಗಜ್ಯೋತಿ ಬಸವೇಶ್ವರ ಕಾಮಿಕ್ಸ್‌ನ ಮುಂದುವರೆದ ರೂಪವಿದು. ಗೋಜಲುಗಳಿಲ್ಲದ ಸಂಪೂರ್ಣವಾಗಿ ಸ್ಪಷ್ಟವಾಗಿ ನಿರೂಪಿತವಾಗಿರುವ ಚಿತ್ರವಿದು. ಎಂದಿನ ಕಾಮಿಕ್ಸ್ ಚಿತ್ರ ರಚನೆಯ ತಂತ್ರಗಾರಿಕೆ ರಚನಾವಿಧಾನವನ್ನು ಅತ್ಯಂತ ಸಮರ್ಥವಾಗಿ ದುಡಿಸಿಕೊಂಡ ಚಿತ್ರವಿದು. ಪ್ರಮುಖ ಆಶಯವಾಗಿ ಅಲ್ಲಮಪ್ರಭುಗಳು ಮತ್ತು ಬಸವಣ್ಣನವರು ರೂಪುಗೊಂಡಿದ್ದು ಚಿತ್ರದ ಉದ್ದೇಶವನ್ನು ಸಾರ್ಥಕಗೊಳಿಸಿವೆ. ಆಕೃತಿಗಳಲ್ಲಿ ಪ್ರಬುದ್ಧವಾದ ಆಂಗಿಕ ರಚನೆಯನ್ನು ಕಲಾವಿದ ನಾಯಕ ಅವರು ಸಮರ್ಥವಾಗಿ ಚಿತ್ರಿಸಿದ್ದಾರೆ. ಮಹಾಮನೆಯ ಒಳಾವರಣವನ್ನು ಮೃದುವಾದ ವರ್ಣಗಳಿಂದ ಚಿತ್ರಿಸಿರುವ ಅಂಥದೇ ವರ್ಣಗಳಿಂದ ಆಕೃತಿಗಳನ್ನು ರಚಿಸಿರುವ ಈ ಚಿತ್ರ ಮಕ್ಕಳ ಮನಸ್ಸನ್ನು ತಟ್ಟುವುದರಲ್ಲಿ ಸಂಶಯವಿಲ್ಲ.

೨.೬.೩. ಎಷ್ಟು ನೀಡಿದರೂ ತೃಪ್ತಿಗೊಳ್ಳದ ಅಲ್ಲಮಪ್ರಭುದೇವರು (ಕಾಮಿಕ್ಸ್ ಚಿತ್ರ)

ಈ ಚಿತ್ರದಲ್ಲಿ ಹಸಿದ ಅಲ್ಲಮಪ್ರಭುದೇವರಿಗೆ ಬಸವಣ್ಣನವರು ಪ್ರಸಾದವನ್ನು ಬಡಿಸುವ

ಪ್ರಯತ್ನದಲ್ಲಿದ್ದಾರೆ. ಕೆಂಪುಬಣ್ಣದ ಕಾವಿಯನ್ನುಟ್ಟು ಜಟಾಶಿಖೆಯನ್ನು ಹೊಂದಿದ ಅಲ್ಲಮ ಪ್ರಭುದೇವರಿಗೆ ಕಡಿಮೆ ಎತ್ತರದ ಪೀಠದಲ್ಲಿ ಕುಳಿತು ಮಣೆಯ ಮುಂದೆ ಪ್ರಸಾದದ ತಟ್ಟೆಯನ್ನು ಇಟ್ಟಿರುವುದು ಕಂಡುಬರುತ್ತದೆ. ಪ್ರಸಾದದ ತಟ್ಟೆಯಲ್ಲಿ ಬಿಳಿಯ ಬಣ್ಣದ ಭಕ್ಷ್ಯ ಎದ್ದುತೋರುತ್ತಿದ್ದು ಕಮಂಡಲವನ್ನು ಅದರ ಪಕ್ಕದಲ್ಲಿ ಚಿತ್ರಿಸಲಾಗಿದೆ. ಬಸವಣ್ಣನವರು ಬಿಳಿಯ ಪಂಚೆಯನ್ನುಟ್ಟು ಮೇಲು ಹೊದಿಕೆಯನ್ನು ಹೊದ್ದು ಬಾಗಿ ವಿನೀತರಾಗಿ ಪ್ರಭುದೇವರಿಗೆ ಪ್ರಸಾದವನ್ನು ಬಡಿಸುವ ಸನ್ನಿವೇಶವು ಕಣ್ಣಿಗೆ ಕಟ್ಟುವಂತಿದೆ. ಪಕ್ಕದಲ್ಲಿಯೇ ದೊಡ್ಡಗಾತ್ರದ ಭಾಂಡೆಲೆಗಳಲ್ಲಿ ವಿವಿಧ ಆಹಾರ ಪದಾರ್ಥಗಳು ತುಂಬಿದ್ದು ಬಿಸಿಯಾಗಿರುವುದನ್ನು ಕಲಾತ್ಮಕವಾಗಿ ಚಿತ್ರಿಸಲಾಗಿದೆ. ಬಾಗಿಲ ಮೂಲಕ ಒಳಬರುತ್ತಿರುವ ಶರಣನನ್ನು ಕೂಡ ತಟ್ಟೆಯಲ್ಲಿ ಆಹಾರಪದಾರ್ಥವನ್ನು ಕೈಯಲ್ಲಿ ಹಿಡಿದು ಬರುವಂತೆ ಸನ್ನಿವೇಶವನ್ನು ರೂಪಿಸಲಾಗಿದೆ.

ಹಿಂದಿನ ಚಿತ್ರದ ಮುಂದುವರೆದ ಚಿತ್ರಕಥಾರೂಪವಿದು. ಈ ಹಿಂದೆ ಹೇಳಿದಂತೆ ಕಾಮಿಕ್ಸ್ ಚಿತ್ರಕಥಾರೂಪಗಳನ್ನು ಚಿತ್ರಿಸುವಾಗ ಆಕೃತಿಗಳಲ್ಲಿ, ವಿನ್ಯಾಸಗಳಲ್ಲಿ ಕಥಾರೂಪದ ಆದಿಯಿಂದ ಅಂತ್ಯದವರೆಗೂ ಏಕತಾನತೆ ಅಥವಾ ಸಾಮ್ಯತೆಯನ್ನು ಕಾಪಾಡಿಕೊಂಡು ಬರುವುದು ಮುಖ್ಯ. ಚಿತ್ರ ೪೦ ಮತ್ತು ೪೧ರಲ್ಲಿ ಅಂತಹ ಸಾಮ್ಯತೆಯನ್ನು ಕಾಣಬಹುದಾಗಿದೆ. ಮೊದಲನೆಯದಾಗಿ ಮಹಾಮನೆಯ ಒಳಾವರಣದ ರಚನೆ ಮತ್ತು ವರ್ಣ ಸಂಯೋಜನೆ, ಎರಡನೆಯದಾಗಿ ಆಕೃತಿಗಳ ರಚನೆ ಮತ್ತು ವರ್ಣ ಸಂಯೋಜನೆಗಳಲ್ಲಿ ಅಂತಹ ಸಾಮ್ಯತೆಯನ್ನು ಗುರುತಿಸಬಹುದಾಗಿದೆ. ಎಂದಿನಂತೆ ಕಾಮಿಕ್ಸ್ ಚಿತ್ರಗಳ ರಚನಾ ತಂತ್ರವೇ ಇಲ್ಲಿಯೂ ಮುಂದುವರೆದಿದೆ. ಅಲ್ಲಮಪ್ರಭುಗಳನ್ನು ತೀರ ಸಾಮೀಪ್ಯದಿಂದ ತೋರ್ಪಡಿಸುವುದರ ಮೂಲಕ ಪ್ರಾಶಸ್ತ್ಯ ನೀಡಿದರೆ, ಬಸವಣ್ಣನನ್ನು ಪೂರ್ಣವಾಗಿ ಚಿತ್ರಿಸಿ ಅವನ 'ದಾಸೋಹ' ನಿಷ್ಠೆಯನ್ನು ಅಭಿವ್ಯಕ್ತಪಡಿಸಿದ್ದಾರೆ ಕಲಾವಿದ ನಾಯಕ ಅವರು.

೨.೬.೪. ಪ್ರಭುದೇವರ ಪ್ರಸಾದ ಸೇವೆಗೆ ಮಾಡಿದ ಅಡುಗೆಯೆಲ್ಲ ಮುಗಿದು ಹೋದುದು(ಕಾಮಿಕ್ಸ್ ಚಿತ್ರ)

ಪ್ರಸ್ತುತ ಚಿತ್ರದಲ್ಲಿ ಬಸವಣ್ಣನವರು ಪ್ರಭುದೇವರ ಹಸಿವನ್ನು ನೀಗಿಸಲು ತಾವು ಜಂಗಮರಿಗೆ ನೀಡಲೆಂದು ಮಾಡಿಟ್ಟ ಅಡುಗೆಯೆಲ್ಲವನ್ನೂ ಬಡಿಸಬೇಕಾಯಿತು. ಆದೆಲ್ಲವನ್ನೂ ಸ್ವೀಕರಿಸಿದ ಪ್ರಭುದೇವರು ಇನ್ನೂ ತಮ್ಮ ಹಸಿವು ಇಂಗಲಿಲ್ಲ ಎಂದು ಹೇಳುತ್ತಾರೆ. ಆಗ ಮನೆಯಲ್ಲಿ ಮಾಡಿದ್ದ ಅಡುಗೆಯೆಲ್ಲವೂ ಮುಗಿದು ಹೋದ ನಂತರ ಬಸವಣ್ಣನವರು ಪ್ರಭುದೇವರ ಹಸಿವನ್ನು ನೀಗಿಸಲು ಕಲ್ಯಾಣದ ಜನರ ಮನೆಯಲ್ಲಿ ಸಿದ್ಧಪಡಿಸಿದ್ದ ಪ್ರಸಾದವನ್ನು ತರಲು ಹೇಳುತ್ತಾರೆ. ಕಲ್ಯಾಣದ ಜನರು ಬಸವಣ್ಣನವರ ಮಾತನ್ನು ಪ್ರೀತಿಯಿಂದ ಸ್ವೀಕರಿಸಿ, ಪ್ರಜೆಗಳ ಮನೆಯಲ್ಲಿ ಮಾಡಿಟ್ಟ ಅಡುಗೆಯೆಲ್ಲವನ್ನು ಪಾತ್ರೆ, ಕೊಳಗಗಳಲ್ಲಿ ಹೊತ್ತು ತಂದರು. ಆ ಸನ್ನಿವೇಶ ಪ್ರಸ್ತುತ ಚಿತ್ರದಲ್ಲಿ ಕಣ್ಣಿಗೆ ಕಟ್ಟುವಂತೆ ಮೂಡಿಬಂದಿದೆ. ಮೇಲಿನ ಎರಡು ಚಿತ್ರಗಳ ಮುಂದುವರೆದ ಚಿತ್ರವಿದು. ಪ್ರಭುದೇವರು ಮಹಾಮನೆಗೆ ಬಂದು ಬಸವಣ್ಣನವರಿಂದ ಪ್ರಸಾದ ಪಡೆಯುತ್ತಾರೆ. ಆದರೆ ಬಸವಣ್ಣನವರು ಬಡಿಸಿದ ಪ್ರಸಾದವು ಪ್ರಭುದೇವರಿಗೆ ತೃಪ್ತಿ ಎನಿಸುವುದಿಲ್ಲ. ಕಲ್ಯಾಣದ ಜನರ ಮನೆಯಲ್ಲಿರುವುದನ್ನು ತಂದು ಪ್ರಭುದೇವರಿಗೆ ಬಡಿಸಬೇಕಾದ ಪ್ರಸಂಗವನ್ನು ಕಲಾವಿದ ನಾಯ್ಕ ಅವರು ಅತ್ಯಂತ ಸಮರ್ಥವಾಗಿ ನಿರೂಪಿಸಿದ್ದಾರೆ. ಪ್ರಸಾದವನ್ನು ಬಡಿಸುತ್ತಿರುವ ಬಸವಣ್ಣ, ಸ್ವೀಕರಿಸುತ್ತಿರುವ ಅಲ್ಲಮಪ್ರಭುಗಳ ಹಿಂಭಾಗವನ್ನಷ್ಟೇ ಚಿತ್ರಿಸಿದರೂ ಹಿಂದಿನ ಚಿತ್ರದಲ್ಲಿದ್ದ ಗುಣಗಳು

(ಕ್ಯಾರೆಕ್ಟರ್) ಇಲ್ಲಿಯೂ ಪುನರಾವರ್ತನೆಯಾಗಿವೆ. ಹಾಗೆಯೇ ಬಾಗಿಲಲ್ಲಿ ಕಲ್ಯಾಣದ ಜನರು ತಂದಿಟ್ಟ ಅಡುಗೆಪಾತ್ರೆಗಳನ್ನು ತುಂಬ ಸೊಗಸಾಗಿ ಚಿತ್ರಿಸಿದ್ದು, ಅತ್ಯಂತ ಪ್ರಬುದ್ಧವಾಗಿ ಸಂಯೋಜಿಸಲ್ಪಟ್ಟ ಚಿತ್ರವಿದಾಗಿದೆ.

೨.೬.೫. ಪ್ರಭುದೇವರಿಗೆ ಬಸವಣ್ಣ ಮತ್ತು ಇತರ ಶರಣ-ಶರಣೆಯರು ಪ್ರಸಾದ ಮಾಡಿಸುತ್ತಿರುವ ಸನ್ನಿವೇಶ

ಪ್ರಸ್ತುತ ಚಿತ್ರದಲ್ಲಿ ಬಸವಣ್ಣ, ಆತನ ಪತ್ನಿಯರು, ಅಕ್ಕಮಹಾದೇವಿ, ಇತರ ಶರಣರು ಪ್ರಭುದೇವರಿಗೆ ಪ್ರಸಾದ ಮಾಡಿಸುತ್ತಿರುವ ಸನ್ನಿವೇಶವನ್ನು ಕಾಣುತ್ತೇವೆ. ಈ ಚಿತ್ರವು ಕಪ್ಪುಬಿಳಿಪಿನ ರೇಖಾಚಿತ್ರದ ಪ್ರಕಾರಕ್ಕೆ ಸೇರಿದುದ್ದಾಗಿದೆ. ಬಸವಣ್ಣನವರನ್ನು ಕುರಿತು ಈವರೆಗಿನ ಎಲ್ಲ ವರ್ಣ ಮತ್ತು ರೇಖಾಚಿತ್ರಗಳಿಗಿಂತ ಇದು ಭಿನ್ನವಾಗಿರುವುದು ಎದ್ದುತೋರುತ್ತದೆ. ಪ್ರಭುದೇವರನ್ನು ಆರು ಮಾನವಾಕೃತಿಗಳ ಮುಖಗಳ ಮೇಲಿರುವ ಶಿಖೆಯ ಆಕಾರದ ಕೂದಲಿನ ಮೇಲೆ ಕುಳಿತಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ಆರು ಮುಖಗಳು ಷಟ್ಸ್ಥಲದ ಸಂಕೇತವಾಗಿರುವಂತೆ ತೋರುತ್ತದೆ. ಕೌಪೀನ ಮತ್ತು ಕೊರಳಲ್ಲಿ ಲಿಂಗವಸ್ತ್ರವನ್ನು ಧರಿಸಿ ಅಲ್ಲಮಪ್ರಭುದೇವ ತನ್ನ ಬಲಗೈಯನ್ನು ಪಕ್ಕದಲ್ಲಿರುವ ಚಿಕ್ಕ ಬಂಡಿಯಲ್ಲಿ ಒಟ್ಟಿದ ಅನ್ನದ ರಾಶಿಯ ಕಡೆಗೆ ಕೈಚಾಚಿದ್ದಾನೆ. ಪ್ರಭುದೇವರ ಎಡಗೈಯಲ್ಲಿ ಇಷ್ಟಲಿಂಗವಿದ್ದು ಸುಖಾಸನದಲ್ಲಿ ಕುಳಿತಿರುವ ಭಂಗಿಯಲ್ಲಿ ಚಿತ್ರಿತವಾಗಿದ್ದಾನೆ. ಆತನ ಬಲಬದಿಯಲ್ಲಿ ಬಸವಣ್ಣ ಆತನ ಇಬ್ಬರು ಪತ್ನಿಯರು, ಮಡಿವಾಳ ಮಾಚಿದೇವ ನಿಂತಿರುವುದನ್ನು ಕಾಣುತ್ತೇವೆ.

ಬಸವಣ್ಣನ ಚಿತ್ತಾರದ ನಿಲುವಂಗಿ ಬೆನ್ನ ಹಿಂದೆ ನೀಳವಾಗಿ ಇಳಿಯಬಿದ್ದಿರುವ ಹೊದಿಕೆಯಂತೆ ಕಾಣುವ ವಸ್ತ್ರವನ್ನು ಧರಿಸಿದ್ದಾನೆ. ಬಸವಣ್ಣನ ಮುಖವು ಮುಂದೆ ಚಾಚಿದ ಗದ್ದವನ್ನು ಹೊಂದಿದ್ದು ನೀಳವಾದ ನಾಸಿಕ, ತಲೆಯಲ್ಲಿ ಕ್ರಿ.ಶ. ೧೫ನೆಯ ಶತಮಾನದ ಮೊಘಲರ ಅರಸರ ಕಾಲದಲ್ಲಿ ಧರಿಸುವಂಥ ಪೇಟವನ್ನು ಧರಿಸಿದ್ದಾನೆ. ಕೊರಳಲ್ಲಿ ರುದ್ರಾಕ್ಷಿಯ ಮಾಲೆಯಿದ್ದು, ಅದು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಆತನ ಮುಂದೆ ಬಸವಣ್ಣನ ಹೆಂಡತಿ ಸುಂದರವಾದ ಮುಖವನ್ನು ಹೊಂದಿರುವ ಆಕರ್ಷಕ ಭಂಗಿಯಲ್ಲಿ ನಿಂತಿರುವುದನ್ನು ಕಾಣುತ್ತೇವೆ.

ಚಿತ್ರದ ಎಡತುದಿಯಲ್ಲಿ ಮಡಿವಾಳ ಮಾಚಿದೇವ ಕೈಯಲ್ಲಿ ಖಡ್ಗ, ಗಂಟೆಯನ್ನು ಹಿಡಿದು ನಿಂತಿದ್ದಾನೆ. ಅಲ್ಲಮಪ್ರಭುದೇವರ ಎಡಬದಿಯಲ್ಲಿ ಅಕ್ಕಮಹಾದೇವಿ ತನ್ನ ನೀಳವಾದ ಕೇಶರಾಶಿಯನ್ನು ಮೊಣಕಾಲಿನವರೆಗೆ ಇಳಿಯಬಿಟ್ಟಿದ್ದು, ಬಲಸ್ತನದ ಅರ್ಧಭಾಗ ಗೋಚರಿಸುವಂತೆ ಕಲಾವಿದ ಚಿತ್ರಿಸಿದ್ದಾನೆ. ಆಕೆ ತನ್ನ ಬಲಗೈಯಿಂದ ಚಾಮರವನ್ನು ಎತ್ತಿಯಿಡಿದು ಅಲ್ಲಮಪ್ರಭುವಿಗೆ ಬೀಸುತ್ತಿರುವ ಭಂಗಿಯಲ್ಲಿ ನಿಂತಿದ್ದಾಳೆ. ಹಿಂದೆ ಸಾಂಪ್ರದಾಯಕ ಶೈಲಿಯ ಉಡುಪನ್ನು ಧರಿಸಿದ ಶರಣನೊಬ್ಬ ನಿಂತಿರುವುದು ಕಂಡುಬರುತ್ತದೆ.

ಪ್ರಸ್ತುತ ಚಿತ್ರವು ಮೊಗಲ್ ಚಿತ್ರಕಲೆಯ ಶೈಲಿಯ ಪರಂಪರೆಗೆ ಸೇರಿರಬಹುದು ಎಂದು ತೋರುತ್ತದೆ. ಕಂಡುಬರುವ ಆಕೃತಿಗಳೆಲ್ಲದರಲ್ಲಿಯೂ ಮುಘಲ್‌ಶೈಲಿಯ ಪ್ರಭಾವ ಸ್ಪಷ್ಟವಾಗಿ ಗೋಚರಿಸುತ್ತದೆ. ಆಕೃತಿಗಳೆಲ್ಲವೂ ಧರಿಸಿರುವ ಉಡುಗೆಗಳು ಚಿತ್ತರದಿಂದ ಕೂಡಿದ್ದು, ಸಂಕೀರ್ಣ ಸ್ವರೂಪದ ಮಾದರಿಯನ್ನು ಹೊಂದಿರುವುದು ವಿಶೇಷವಾಗಿದೆ. ಮುಖಭಾವಗಳಲ್ಲಿ ಚಾಚಿದ ಗದ್ದದ ಆಕೃತಿಯು ಗಮನಸೆಳೆಯುತ್ತದೆ.

ಎಲ್ಲ ಆಕೃತಿಗಳಲ್ಲಿಯೂ ಆಯಾ ಪಾತ್ರಕ್ಕೆ ತಕ್ಕುದಾದ ಸ್ಪಷ್ಟವಾದ ಭಾವದ ಅನಾವರಣ ವ್ಯಕ್ತವಾಗಿದೆ. ಬಸವಣ್ಣನನ್ನು ಇಂತಹ ಶೈಲಿಯ ಚಿತ್ರಗಳಲ್ಲಿ ಕಾಣಸಿಗುವುದು ತುಂಬ ಅಪರೂಪವೆನ್ನಿಸುತ್ತದೆ. ಈ ನಿಟ್ಟಿನಲ್ಲಿ ಮುಘಲ್‌ಚಿತ್ರಕಲಾ ಶೈಲಿಯಲ್ಲಿ ರೂಪಿತವಾಗಿರುವ ಬಸವಣ್ಣನ ಇನ್ನಿತರ ಚಿತ್ರಗಳು ಆ ಕಾಲಘಟ್ಟದಲ್ಲಿ ಸಾಕಷ್ಟು ರಚನೆಯಾಗಿರಬೇಕು. ಅವುಗಳನ್ನು ಶೋಧಿಸುವ ತುರ್ತು ನಮ್ಮ ಮುಂದಿದೆ.

೨.೭. ಬಸವಣ್ಣನವರ ಅನುಭವಮಂಟಪದ ವರ್ಣಚಿತ್ರಗಳು

"ಪ್ರಭುದೇವನು ಕಲ್ಯಾಣಕ್ಕೆ ಬಂದು ಅಧ್ಯಕ್ಷ ಪೀಠವನ್ನು ಅಲಂಕರಿಸುವ ಮುನ್ನವೇ ಬಸವೇಶ್ವರನು ಶೂನ್ಯಸಿಂಹಾಸನವನ್ನು ರಚಿಸಿ ಹನ್ನೆರಡು ವರ್ಷಗಳಾಗಿದ್ದವೆಂದು ಚಾಮರಸನು ತಿಳಿಸಿದ್ದಾನೆ. ಬಸವೇಶ್ವರನ ಮಹತ್ವ ಸಾಧನೆಗಳಲ್ಲಿ ಅನುಭವ ಮಂಟಪವೂ ಒಂದು."[೮೫] ೧೨ನೆಯ ಶತಮಾನದ ಜಗತ್ತಿನ ಮೊಟ್ಟ ಮೊದಲ (ಸಂಸತ್) ಪಾರ್ಲಿಮೆಂಟ್ ಎನ್ನಿಸಿಕೊಂಡಿರುವ ಅನುಭವ ಮಂಟಪವು ಹಲವಾರು ಕಲಾವಿದರ ಕಲ್ಪನಾಕುಶಲತೆಯಿಂದ ಹತ್ತು ಹಲವು ಬಗೆಯ ಚಿತ್ರಗಳಲ್ಲಿ ಒಡಮೂಡಿದೆ. ಹಲವಾರು ಚಿತ್ರಗಳನ್ನು ವಿವಿಧ ಆಯಾಮಗಳಲ್ಲಿ ನಿರ್ಮಿಸಿದ್ದರೂ ಎಲ್ಲವೂ ಅನುಭವಮಂಟಪವನ್ನು ಏಕರೂಪದಲ್ಲಿ ಬಿಂಬಿಸಿರುತ್ತವೆ. ಬಸವಣ್ಣನವರು ಸ್ಥಾಪಿಸಿದ ಈ ಅನುಭವಮಂಟಪಕ್ಕೆ ಅಧ್ಯಕ್ಷರನ್ನಾಗಿ ಅಲ್ಲಮಪ್ರಭುಗಳನ್ನು ನೇಮಿಸಿ, ಅವರ ಮಾರ್ಗದರ್ಶನದಲ್ಲಿ ಅನುಭವಮಂಟಪ ಕಾರ್ಯನಿರ್ವಹಿಸುತ್ತಿತ್ತು.

೨.೭.೧. ಅನುಭವಮಂಟಪ *(ಸಂಗ್ರಹ : ಶ್ರೀ ವೀರಭದ್ರಸ್ವಾಮಿ ದೇವಸ್ಥಾನ, ಮೈಸೂರು)*–೧

ಪ್ರಸ್ತುತ ಚಿತ್ರದಲ್ಲಿ ನಾಲ್ಕು ಪಟ್ಟಿಕೆಗಳಿವೆ. ಕ್ರಿ.ಶ. ೧೨ನೆಯ ಶತಮಾನದ ಶರಣರ ವಿಶಿಷ್ಟ ಕಲ್ಪನೆಯಾದ ಅನುಭವಮಂಟಪದ ಸಮಗ್ರ ಚಿತ್ರಣವನ್ನು ಕಲಾವಿದ ಒಟ್ಟುನೋಟಕ್ಕೆ ಲಭ್ಯವಾಗುವಂತೆ ಚಿತ್ರಿಸಿದ್ದಾನೆ. ಈ ಚಿತ್ರದಲ್ಲಿ ಮೇಲಿನಿಂದ ಕೆಳಕ್ಕೆ ನಾಲ್ಕು ಪಟ್ಟಿಕೆಗಳಿವೆ. ಒಂದೊಂದು ಪಟ್ಟಿಕೆಯು ಶರಣರ ಆಕೃತಿಗಳೊಂದಿಗೆ ಅವರು ಮಾಡುವ ಕಾಯಕವನ್ನು ಪ್ರತಿನಿಧಿಸುತ್ತಿವೆ.

ಪಟ್ಟಿಕೆ : ೧. ಪಟ್ಟಿಕೆ ಒಂದರಲ್ಲಿ, ಚಿತ್ರದ ಮಧ್ಯಭಾಗದಲ್ಲಿ ಅಲ್ಲಮಪ್ರಭುದೇವರು ಶೂನ್ಯ ಸಿಂಹಾಸನ ಪೀಠದ ಮೇಲೆ ಕುಳಿತಿದ್ದು ಅನುಭವಮಂಟಪದ ಅಧ್ಯಕ್ಷತೆಯನ್ನು ವಹಿಸಿರುವುದು ಕಂಡುಬರುತ್ತದೆ. ಕಪ್ಪು ಬಣ್ಣದ ತಲೆಗೂದಲಿನ ಜಟೆ, ಆ ಜಟೆಗೆ ರುದ್ರಾಕ್ಷಿಗಳಿಂದ ನಿರ್ಮಿಸಿದ ಕಿರೀಟ, ಮುಖದಲ್ಲಿ ಎದ್ದುಕಾಣುವ ಮೀಸೆ ಮತ್ತು ಗಡ್ಡಗಳು, ಕೊರಳಲ್ಲಿ, ಎರಡೂ ಕೈಗಳಲ್ಲಿ ರುದ್ರಾಕ್ಷಿಯ ಸರವನ್ನು ಧರಿಸಿದ್ದಾರೆ. ಸೊಂಟದಲ್ಲಿ ಕೌಪೀನವೊಂದನ್ನು ಹೊರತುಪಡಿಸಿದರೆ ಇಡಿಯ ದೇಹದಲ್ಲಿ ಮತ್ತಾವ ವಸ್ತ್ರಗಳೂ ಇಲ್ಲ. ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದು ತನ್ನ ಬಲಗೈಯ ತೋರು ಬೆರಳು ಹೆಬ್ಬೆರಳಿನ ಕೂಟದೊಂದಿಗೆ ಮೆಚ್ಚುಗೆಯನ್ನು ಸೂಚಿಸುವ ಭಂಗಿಯಲ್ಲಿ ಪ್ರಭುದೇವರು ಕುಳಿತಿದ್ದಾರೆ. ಆತನ ನೋಟ ನೋಡುಗರಿಗೆ ಎದುರಾಗಿದೆ. ಷಟ್ಕೋನಾಕೃತಿಯ ತೆಳುಹಸಿರು, ಹಳದಿಬಣ್ಣದ ಮಿಶ್ರಣದಿಂದ ಅಲಂಕೃತಗೊಂಡ ಪೀಠದ

---

೮೫. ಪ್ರೊ. ಬಸವರಾಜ ಚೆನ್ನವೀರಪ್ಪ ಜವಳಿ : ಧರ್ಮ ಭಂಡಾರಿ ಬಸವಣ್ಣನವರು, ಪು–xxxii (ಪ್ರಸ್ತಾವನೆ)

ಮುಂದೆ ನಕ್ಷತ್ರದ ಚಿಹ್ನೆಯೊಂದಿಗೆ ಸುರುಳಿಗಳನ್ನೊಳಗೊಂಡ ವೃತ್ತವಿದೆ. ಪಟ್ಟಿಕೆಯ ಎಡಬದಿಗೆ ಬಸವಣ್ಣ ತನ್ನೆರಡು ಕೈಗಳನ್ನು ಮುಗಿದು ತಲೆಯನ್ನು ಬಾಗಿಸಿ ವಿನಮ್ರ ಭಂಗಿಯಲ್ಲಿ ನಿಂತಿದ್ದಾನೆ. ಹಳದಿ ಬಣ್ಣದ ಪೇಟ, ತಿಳಿ ಬೂದುಬಣ್ಣದ ನಿಲುವಂಗಿ, ಪಂಚೆ, ಸೊಂಟಕ್ಕೆ ಸುತ್ತಿದ ಹಸಿರುಬಣ್ಣದ ಚಿತ್ತಾರದ ಮೇಲುಹೊದಿಕೆ, ಹಣೆಯಲ್ಲಿ ಕಂಡೂ ಕಾಣದಂತೆ ಧರಿಸಿರುವ ವಿಭೂತಿ, ಕಪ್ಪುಬಣ್ಣದ ಹುಬ್ಬು ಮತ್ತು ಸ್ಪಷ್ಟವಾಗಿ ತೋರುವ ಕಪ್ಪುಬಣ್ಣದ ಕಣ್ಣುಗಳು, ಗಡ್ಡ ಮೀಸೆಯಿಲ್ಲದ ಮುಖವಿರುವ ಬಸವಣ್ಣನ ಚಿತ್ರಣವನ್ನು ಕಲಾವಿದ ಮೂಡಿಸಿದ್ದಾನೆ.

ಪ್ರಸ್ತುತ ಚಿತ್ರದಲ್ಲಿರುವ ಬಸವಣ್ಣನನ್ನು ನೋಡಿದರೆ, ಮದುವೆಯಾಗದ ಹಾಲುಗಲ್ಲದ ಯುವಕನಂತೆ ಕಂಡುಬರುತ್ತಾನೆ. ಬಸವಣ್ಣನ ಬಲಬದಿಯಲ್ಲಿ ಆತನ ಮಡದಿಯರಾದ ಗಂಗಾಂಬಿಕೆ, ನೀಲಾಂಬಿಕೆಯರೀರ್ವರೂ ತಮ್ಮ ಕೈಗಳನ್ನು ಮುಗಿದು ತಲೆಯನ್ನು ಬಾಗಿಸಿ ಅಲ್ಲಮಪ್ರಭುವಿಗೆ ವಂದಿಸುವ ಭಂಗಿಯಲ್ಲಿ ನಿಂತಿದ್ದಾರೆ. ಹಣೆಯಲ್ಲಿ ಅರ್ಧಚಂದ್ರಾಕಾರದ ತಿಲಕ, ಕಿವಿಯಲ್ಲಿ ಎದ್ದುಕಾಣುವ ಓಲೆಗಳು, ಕೊರಳಿನಲ್ಲಿ ತೆಳುವಾದ ಮುತ್ತಿನ ಹಾರಗಳು, ಇಬ್ಬರೂ ವಿಭಿನ್ನ ಬಣ್ಣದ ಹಾಗೂ ಚಿತ್ತಾರದ ಸೀರೆಗಳನ್ನು ಧರಿಸಿರುವುದು ಗಮನಾರ್ಹವಾಗಿದೆ.

ಬಸವಣ್ಣನವರ ಮಗನಾದ ಬಾಲಸಂಗಯ್ಯನು ತನ್ನೆರಡು ಕೈಗಳನ್ನು ಜೋಡಿಸಿ ತಲೆಯನ್ನು ಮೇಲೆತ್ತಿ ನಿಂತಿದ್ದಾನೆ. ಬಸವಣ್ಣನವರ ಬಾಲಸಂಗಯ್ಯ ಬಿಳಿಯ ದೇಹವರ್ಣವನ್ನು ಹೊಂದಿದ್ದು ಈತನ ಸೊಂಟದಲ್ಲಿ ಮೇಖಲೆ (ಉಡುದಾರ), ಕೊರಳಲ್ಲಿ ಕೆಂಪುವಸ್ತ್ರದಿಂದ ಕಟ್ಟಿದ ಇಷ್ಟಲಿಂಗದ ಗಂಟು ಮಾತ್ರ ಇದೆ. ಆಕೃತಿಯಲ್ಲಿ ಬಾಲಕನೆಂದು ಕಂಡುಬಂದರೂ ಮುಖದ ಭಾವನೆಯನ್ನು ಗಮನಿಸಿದರೆ ಈತ ಪ್ರೌಢನೆಂಬ ಭಾವನೆ ತೋರುವುದು. ಈತನ ಹಿಂಬದಿಯಲ್ಲಿ ಅಕ್ಕಮಹಾದೇವಿಯು ಕಪ್ಪುಬಣ್ಣದ ನೀಳವಾದ ಕೂದಲನ್ನು ತನ್ನ ದೇಹದ ಮೇಲಿನಿಂದ ಕಾಲಿನವರೆಗೆ ಇಳಿಯಬಿಟ್ಟು ತಲೆಯನ್ನು ಮೇಲೆತ್ತಿ ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದು ತದೇಕಚಿತ್ತದಿಂದ ಅಲ್ಲಮಪ್ರಭುದೇವರ ಕಡೆಗೆ ನೋಡುತ್ತಿದ್ದಾಳೆ. ಕೊರಳಿನಲ್ಲಿ ಕಟ್ಟಿಕೊಂಡ ಬಿಳಿಯಬಣ್ಣದ ವಸ್ತ್ರವು ಇಷ್ಟಲಿಂಗವನ್ನು ಕಟ್ಟಿಕೊಳ್ಳುವುದಕ್ಕೆ ಇರಬಹುದು. ಹಿಂದೆ ವೇಶ್ಯೆ ನಂಬಕ್ಕ, ಅಮ್ಮವ್ವೆ, ವೇಶ್ಯೆ ಚೌಳಕ್ಕ ಮುಂತಾದ ಶರಣೆಯರು ಅವರೊಂದಿಗೆ ಶರಣರು ಹಣೆಯಲ್ಲಿ ವಿಭೂತಿ, ತಲೆಯಲ್ಲಿ ಪೇಟಗಳನ್ನು ಧರಿಸಿ ವಿವಿಧ ಬಗೆಯ ದಿರಿಸು, ಭಂಗಿಗಳಲ್ಲಿ ನಿಂತು ಪ್ರಭುದೇವರ ಕಡೆಗೆ ನೋಡುತ್ತಿದ್ದಾರೆ.

ಅಲ್ಲಮಪ್ರಭುದೇವರ ಎಡಬದಿಯಲ್ಲಿ ಚನ್ನಬಸವಣ್ಣ ಅಕ್ಕನಾಗಮ್ಮ ಇವರಿಬ್ಬರು ನಿಂತಿದ್ದಾರೆ. ಚನ್ನಬಸವಣ್ಣ ಕಡುಹಸಿರು ಬಣ್ಣದ ನಿಲುವಂಗಿ ಅದೇ ಬಣ್ಣದ ಪೇಟವೊಂದನ್ನು ಧರಿಸಿ, ತನ್ನ ಬಲಗೈಯಿಂದ ಪ್ರಭುದೇವರ ಪೀಠದ ತುದಿಯನ್ನು ಹಿಡಿದು ನಿಂತಿದ್ದಾನೆ. ಆತನ ಎಡಬದಿಯಲ್ಲಿ ಅಕ್ಕನಾಗಮ್ಮ ತನ್ನೆರಡೂ ಕೈಗಳನ್ನು ಮುಗಿದು ವಿನೀತ ಭಾವದಿಂದ ಪ್ರಭುದೇವರತ್ತ ನೋಡುತ್ತಿದ್ದಾಳೆ. ಎಡಬದಿಯಲ್ಲಿ ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಕಪ್ಪಡಿ ರೇಚಪ್ಪಾಜಿಯವರು, ಅವರ ಎಡಬದಿಯಲ್ಲಿ ನಿಂತಿರುವ ಸುಮಾರು ಹತ್ತಿಪ್ಪತ್ತು ಜನ ಶರಣರು ತಮ್ಮ ದೃಷ್ಟಿಗಳನ್ನು ಮೇಲುಮುಖವಾಗಿಸಿಕೊಂಡಿದ್ದಾರೆ.

ಪಟ್ಟಿಕೆ : ೨. ಎರಡನೆಯ ಪಟ್ಟಿಕೆಯಲ್ಲಿ, ಚಿತ್ರದ ಮಧ್ಯಭಾಗದಲ್ಲಿ ಅಂದರೆ ಮೇಲಿನ ಪಟ್ಟಿಕೆಯಲ್ಲಿ ಅಲ್ಲಮಪ್ರಭುದೇವರು ಕುಳಿತ ಕೆಳಭಾಗದಲ್ಲಿ ಶರಣವರೇಣ್ಯರಾದ ರೇಣುಕರು, ಗುರುಬಸವಸ್ವಾಮಿಗಳು, ರುದ್ರಮುನಿ ಸ್ವಾಮಿಗಳು, ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಪೀಠಗಳಲ್ಲಿ ಆಸೀನರಾಗಿದ್ದಾರೆ. ಕುಳಿತಿರುವ ನಾಲ್ಕು ಜನ ಸ್ವಾಮಿಗಳಲ್ಲಿ ರುದ್ರಮುನಿ ಸ್ವಾಮಿಗಳ ದೇಹಾಕೃತಿ ಮಾತ್ರ ಕಡುಗೆಂಪು ಬಣ್ಣದಿಂದ ಕೂಡಿದ್ದು ಉಳಿದವರ ದೇಹವರ್ಣ ತೆಳುಗುಲಾಬಿಯಿಂದ ಕೂಡಿದೆ. ನಾಲ್ವರೂ ಜಟೆಯ ಕೂದಲನ್ನು ಇಳಿಯಬಿಟ್ಟಿದ್ದು, ತಮ್ಮ ಕೈಗಳಲ್ಲಿ ಇಷ್ಟಲಿಂಗವನ್ನು ಹಿಡಿದು ಕುಳಿತಿದ್ದಾರೆ. ಎಡಬದಿಯಲ್ಲಿ ಶಿವನಾಗಮ್ಮನವರು, ಸಕಲೇಶ ಮಾದರಸರು, ಅಪ್ಪಣ್ಣನವರು, ಎಚ್ಚರಿಕೆಯ ಮುಕ್ತಾಯಣ್ಣನವರು, ಕಿನ್ನರಿ ಬೊಮ್ಮಯ್ಯನವರು, ಮುಗ್ಧ ಸಂಗಪ್ಪನವರು, ಆಯ್ದಕ್ಕಿ ಮಾರಯ್ಯನವರು ವಿವಿಧ ಭಂಗಿಗಳಲ್ಲಿ, ವಿವಿಧ ರೀತಿಯ ನೋಟಗಳನ್ನು ಬೀರುತ್ತಾ ನಿಂತಿದ್ದಾರೆ. ಪಟ್ಟಿಕೆಯಲ್ಲಿ ಕುಳಿತ ಸ್ವಾಮಿಗಳ ಎಡಭಾಗದಲ್ಲಿ ಶೂಲದ ಬ್ರಹ್ಮಯ್ಯನವರು, ಸೊಡ್ಡಳ ಬಾಚರಸರು, ಶಂಕರ ದಾಸಿಮಯ್ಯಗಳು, ಕ್ರಿಯಾಶಕ್ತಿ, ಜ್ಞಾನಶಕ್ತಿ ಹೆಸರಿನ ದೇವಿಯರು, ಅವರ ಎಡಭಾಗದಲ್ಲಿ ಢಕ್ಕೆ ಮಾರಯ್ಯನವರು ನಿಂತಿದ್ದಾರೆ.

ಪಟ್ಟಿಕೆ : ೩. ಮೂರನೆಯ ಪಟ್ಟಿಕೆಯಲ್ಲಿ ಚಿತ್ರದ ಮಧ್ಯಭಾಗದಲ್ಲಿ ಲೋಹದ ತೊಟ್ಟಿಯೊಂದಿದ್ದು ಅದರ ಎಡಬದಿಯಲ್ಲಿ ಧೂಪದ ಮಂಚರಸರು, ಸರ್ವಜ್ಞ ಮೂರ್ತಿಗಳು, ಅಗ್ನಿ ಪೊನ್ನೈಯ್ಯನವರು, ಮೋಳಿಗೆ ಮಾರಪ್ಪನವರು, ಮೇದಾರ ಕೇತಯ್ಯನವರು, ಬೊಮ್ಮಲದೇವಿ ತಾಯಿಯವರು ನಿಂತಿದ್ದಾರೆ. ಇಲ್ಲಿ ಬಂದಿರುವ ಶರಣರೆಲ್ಲರೂ ಹಣೆಯಲ್ಲಿ ಢಾಳವಾಗಿ ಎದ್ದು ಕಾಣುವ ವಿಭೂತಿ, ಕೊರಳಲ್ಲಿ ಇಷ್ಟಲಿಂಗದ ಗುಂಡುಗಡಿಗೆಯ(ಚೌಕ)ನ್ನು ಶರಣಧರ್ಮಕ್ಕೆ ಅನ್ವಯವಾಗುವಂತೆ ಧರಿಸಿದ್ದಾರೆ. ಕೈಯಲ್ಲಿ ಹಿಡಿದಿರುವ ಸಾಮಗ್ರಿಗಳಿಂದ ಯಾವ ವೃತ್ತಿಯನ್ನು ಮಾಡುವ ಶರಣರು ಎಂಬುದನ್ನು ಸುಲಭವಾಗಿ ಗುರುತಿಸಬಹುದು. ನೀರಿನ ತೊಟ್ಟಿಯ ಬಲಬದಿಯಲ್ಲಿ ಪತ್ನಿಯೊಂದಿಗೆ ಗಾಣದ ಕನ್ನಬೈಯ್ಯನವರು, ಪಡಿಪಹಾರಿ ಉತ್ತಣ್ಣನವರು, ಸುರುಗಿ ಚೌಡಯ್ಯನವರು, ಜಗದೇವ ಮೊಲ್ಲೆ ಬೊಮ್ಮಣ್ಣಗಳು, ಸೋಮಾಯಕ್ಕ, ಜೇಡರ ದಾಸಿಮಯ್ಯನವರು, ಹಲಾಯುಧರು ತಮ್ಮ ವೃತ್ತಿಗನುಗುಣವಾಗಿ ವಿವಿಧ ವೇಷಭೂಷಣಗಳನ್ನು ಧರಿಸಿ ನಿಂತಿದ್ದಾರೆ. ಈ ಪಟ್ಟಿಕೆಯಲ್ಲಿ ಬಂದಿರುವ ಶರಣರಲ್ಲಿ ಕೆಲವರು ತಮ್ಮ ವೃತ್ತಿಗನುಗುಣವಾದ ಸರಕು-ಸಾಮಗ್ರಿಗಳನ್ನು ಹಿಡಿದು ನಿಂತಿದ್ದು ಉಳಿದ ಶರಣರು ತಮ್ಮ ಕೈಗಳನ್ನು ಜೋಡಿಸಿ ನಿಂತಿದ್ದಾರೆ.

ಪಟ್ಟಿಕೆ : ೪. ಪಟ್ಟಿಕೆ ನಾಲ್ಕರಲ್ಲಿ ಮೈಸೂರು ಅರಸರಿಗೆ ಸಂಬಂಧಿಸಿದ ಅರಮನೆಯ ಚಿತ್ರದ ಎಡಭಾಗದಲ್ಲಿ ಕೆಂಚಮ್ಮಾಜಮ್ಮ ಒಡೆಯರು, ಪಕ್ಕದಲ್ಲಿ ಮಹಾಸ್ವಾಮಿ ರಾಮಕೃಷ್ಣರಾಜೇಂದ್ರ ಒಡೆಯರು, ನಂಜರಾಜ ಒಡೆಯರು, ಶ್ರೀಕಂಠರಾಜ ಒಡೆಯರು, ಲಿಂಗರಾಜ ಅರಸರು, ಕೆಂಪನಂಜಮ್ಮಣ್ಣಿಯವರು, ಬಸವರಾಜ ಅಮ್ಮಣ್ಣಿಯವರು, ಮೈಸೂರಿನ ಪುಟ್ಟನಂಜಿಯವರು ವಿವಿಧ ಭಂಗಿ, ವಿವಿಧ ಬಣ್ಣದ ವಸ್ತ್ರಗಳು, ಒಡವೆ, ಆಭರಣಗಳನ್ನು ಧರಿಸಿದ್ದಾರೆ. ಅವರೆಲ್ಲರೂ ಹಣೆಯಲ್ಲಿ ಎದ್ದು ಕಾಣುವಂತೆ ವಿಭೂತಿಯ ಪಟ್ಟಿಕೆಗಳನ್ನು ಧರಿಸಿರುವುದು ಕಂಡುಬರುತ್ತದೆ. ಪಟ್ಟಿಕೆಯ ಬಲಭಾಗದಲ್ಲಿ ಸ್ವಾಮಿಗಳು, ನಂಜುಂಡಯ್ಯ, ಮಧುವರಸ, ಕಲಕೇತ ಬೊಮ್ಮಯ್ಯ, ನುಲಿಯ ಚಂದಯ್ಯ, ಕಕ್ಕಯ್ಯ, ಗೊಗ್ಗಯ್ಯನವರು ಅರಮನೆಯತ್ತ ದೃಷ್ಟಿಸುತ್ತ ನಿಂತಿರುವುದನ್ನು ಕಲಾವಿದ ಚಿತ್ರಿಸಿದ್ದಾನೆ. ಈ ಚಿತ್ರವು ಮೈಸೂರು ಶೈಲಿಯನ್ನು ಹೋಲುತ್ತಿದ್ದು,

ವೃಷಭೇಂದ್ರ ವಿಳಾಸದ ಚಿತ್ರಕಾರನೇ ಈ ಚಿತ್ರವನ್ನು ರಚಿಸಿರಬಹುದಾದ ಸಾಧ್ಯತೆಗಳನ್ನು ಅಲ್ಲಗೆಳೆಯುವಂತಿಲ್ಲ. ಏಕೆಂದರೆ ವೃಷಭೇಂದ್ರ ವಿಳಾಸದಲ್ಲಿನ ಆಕೃತಿಗಳಿಗೂ ಈ ಚಿತ್ರದಲ್ಲಿ ರಚಿತವಾದ ಆಕೃತಿಗಳಿಗೂ ಸಾಮ್ಯತೆಯೂ ಇದೆ. ಹಾಗೆಯೇ ವರ್ಣಸಾಮ್ಯತೆಯು ಎರಡೂ ಚಿತ್ರಗಳಲ್ಲೂ ಏಕಪ್ರಕಾರವಾಗಿದೆ. ಭೌತಿಕ ವಿನ್ಯಾಸಗಳಲ್ಲಿ ಮೈಸೂರು ಅರಮನೆಯ ಕಮಾನುಗಳು, ಕಂಭಗಳ ಶೈಲಿಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಸಾಂಪ್ರದಾಯಿಕ ಶೈಲಿಯ ಚಿತ್ರಗಳ ಇನ್ನೊಂದು ವಿಶೇಷತೆ ಪ್ರತ್ಯೇಕ ಅವಕಾಶಗಳಲ್ಲಿ ಸಂಬಂಧಪಟ್ಟ ವಿಷಯಗಳ ಚಿತ್ರಗಳನ್ನು ಪ್ರತ್ಯೇಕವಾದ ಸ್ಥಳಾವಕಾಶದಲ್ಲಿಯೇ ಚಿತ್ರಿಸುವುದು. ಅಂತಹ ರಚನೆ ಇದಾಗಿದೆ. ನಾಲ್ಕು ಪಟ್ಟಿಕೆಗಳಲ್ಲಿ ಪ್ರತ್ಯೇಕವಾಗಿ ಅನುಭವಮಂಟಪದ ಬಸವಾದಿ ಪ್ರಮಥರನ್ನು ಚಿತ್ರಿಸಲಾಗಿದೆ. ಕೊನೆಯ ಪಟ್ಟಿಕೆಗಯಲ್ಲಿ ಮೈಸೂರುಅರಸರ ವಂಶಸ್ಥರನ್ನು ಚಿತ್ರಿಸಲಾಗಿದೆ. ಭೌತಿಕ ವಿನ್ಯಾಸಗಳಲ್ಲಿ ಸುವರ್ಣ ಲೇಪನವನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ವಿಶೇಷವಾಗಿ ಕೆಂಪು, ಹಸಿರು, ಹಳದಿವರ್ಣಗಳನ್ನು ಹಿನ್ನೆಲೆಗೆ ಬಳಸಿಕೊಳ್ಳಲಾಗಿದೆ. ಆಕೃತಿಗಳಿಗೆ ತರಾವರಿ ವರ್ಣಗಳನ್ನು ನೆರಳು–ಬೆಳಕಿನ ಪರಿಣಾಮದನ್ವಯ ಚಿತ್ರಿಸಲಾಗಿದೆ. ಆಕೃತಿಗಳೆಲ್ಲವೂ ಚಲನಶೀಲವಾಗಿ ಚಿತ್ರಿತ–ಗೊಂಡಿರುವುದಲ್ಲದೇ, ವ್ಯಕ್ತಿಗತವಾದ ಚಹರೆಯನ್ನು ವಿಭಿನ್ನವಾಗಿ ಚಿತ್ರಿಸಲಾಗಿದೆ. ಅನುಭವ ಮಂಟಪದ ಇತರೆ ಚಿತ್ರಗಳಲ್ಲಿ ಷಟ್‌ಸ್ಥಲದ ಪೀಠವಿದ್ದರೆ, ಮೈಸೂರು ಅರಸರ ರಾಜ ಸಿಂಹಾಸನವನ್ನು ಹೋಲುವ ಅಲಂಕಾರಿಕ ಸಿಂಹಾಸನ ಚಿತ್ರಣಗೊಂಡಿದೆ. ಸಿಂಹಾಸನದ ಕೆಳಭಾಗದಲ್ಲಿ ಷಟ್‌ಸ್ಥಲದ ಲಾಂಛನವನ್ನು ಚಿತ್ರಿಸಲಾಗಿದೆ. ಪೀಠದ ಮೇಲೆ ಅಲ್ಲಮಪ್ರಭು ದೇವರು ಆರೋಹಣ ಮಾಡಿದ್ದಾರೆ.

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಬಸವಪೀಠದಲ್ಲಿ ಕಂಡುಬಂದಿರುವ ಅನುಭವ ಮಂಟಪದ ಚಿತ್ರವು ಸಹ ಈ ಚಿತ್ರದ ಕಲಾವಿದನಿಂದಲೇ ರಚನೆಗೊಂಡಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಎರಡೂ ಚಿತ್ರಗಳ ರಚನಾತಂತ್ರ, ಶೈಲಿಗಳಲ್ಲಿ ಸಾಮ್ಯತೆ ಇದ್ದು, ಮುಂದಿನ ಅಂಕಣದಲ್ಲಿ ಪ್ರಸ್ತಾಪಿಸಲಾಗಿದೆ. ಒಟ್ಟಾರೆ "ಕಲಾವಿದನ ಬುದ್ಧಿಮತ್ತೆಯು ಚಿತ್ರಸಂಯೋಜನೆಯಿಂದಲೇ ಪ್ರಕಟಗೊಳ್ಳುತ್ತದೆ. ಕಲಾವಿದನ ರಚನಾತ್ಮಕ, ಕ್ರಿಯಾತ್ಮಕ ಅಭಿವ್ಯಕ್ತಿ ಕೌಶಲಗಳು ಚಿತ್ರಸಂಯೋಜನೆಯ ಮುಖಾಂತರವೇ ಬೆಳಕಿಗೆ ಬರುತ್ತದೆ. ಪ್ರಾಯಶಃ ಇದೇ ಕಾರಣದಿಂದಲೇ ಅನೇಕ ಪಂಥಗಳ ಸೃಷ್ಟಿಯಾಯಿತು"[೮೬] ಎನ್ನಬಹುದು.

ಅನುಭವ ಮಂಟಪ *(ಧಾರವಾಡ)*–೨

ಮೈಸೂರಿನ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಸಂಗ್ರಹಿಸಲ್ಪಟ್ಟಿರುವ ಅನುಭವ ಮಂಟಪದ ಚಿತ್ರವನ್ನು ಹೋಲುವ ಇನ್ನೊಂದು ಚಿತ್ರ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಬಸವಪೀಠದಲ್ಲಿ ಕಂಡುಬಂದಿದೆ. ಈ ಅನುಭವ ಮಂಟಪದ ಚಿತ್ರವನ್ನು ಜಲವರ್ಣದಲ್ಲಿ ರಚಿಸಿದ್ದು, ಮಧ್ಯದಲ್ಲಿ ಸಿಂಹಾಸನದ ಮೇಲೆ ಅಲ್ಲಮಪ್ರಭುದೇವರು ಬಸವಣ್ಣನತ್ತ ಕೈಮಾಡಿ ಸಂಭಾಷಣೆಯಲ್ಲಿ ನಿರತರಾಗಿದ್ದಾರೆ. ಅವರ ಕೈಗಳತ್ತ ನೋಡುತ್ತ ಬಸವಣ್ಣನವರು ಅಲ್ಲಮಪ್ರಭುದೇವರ ಮಾತುಗಳಿಗೆ ಮಾರುತ್ತರ ಕೊಡಲು

೮೬. ಎ. ಟಿ. ಕಾಳೆ : ಚಿತ್ರಕಲಾ ದರ್ಪಣ, ಪು–೧೨೯

ಅಣಿಯಾಗಿದ್ದಾರೆ. ಅವರೊಂದಿಗೆ ಗಂಗಾಂಬಿಕೆ ಮತ್ತು ನೀಲಾಂಬಿಕೆಯರು ಆ ದೃಶ್ಯದಲ್ಲಿ ಕಂಡುಬಂದಿದ್ದಾರೆ. ಸಿಂಹಾಸನದ ಅಕ್ಕಪಕ್ಕದಲ್ಲಿ ಶಿವಶರಣರ ಸಮೂಹ ನಿಂತಿದ್ದು ಈ ಅನುಭವ ಮಂಟಪದಲ್ಲಿ ಒಟ್ಟು ೪೬ ಮಂದಿ ಶರಣರ ವಿವಿಧ ಕಾಯಕದ ಲಾಂಛನಗಳನ್ನು ಚಿತ್ರಿಸಲಾಗಿದೆ. ತಂಬೂರಿ ನುಡಿಸುವವರು, ಕಟ್ಟಿಗೆ ಕಾಯಕದವರು, ರೈತರು, ರುದ್ರಾಕ್ಷಿ ಮಾರುವ ಕಾಯಕದವರು, ಮಾಚಿ ಕಾಯಕದವರೊಂದಿಗೆ ಇನ್ನೂ ಹಲವಾರು ಶಿವಶರಣರನ್ನು ಪ್ರಸ್ತುತ ಚಿತ್ರದಲ್ಲಿ ಕಾಣಬಹುದಾಗಿದೆ. ಈ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಲ್ಲಮಪ್ರಭು, ಬಸವಣ್ಣ, ಚನ್ನಬಸವಣ್ಣ ಮುಂತಾದ ಪ್ರಮುಖ ಶರಣರೊಂದಿಗೆ ವಿವಿಧ ಕಾಯಕದಲ್ಲಿ ನಿರತರಾದ ಎಲ್ಲಾ ಶರಣರನ್ನು ಒಟ್ಟಿಗೆ ಸೇರಿಸಿ ಅನುಭವಮಂಟಪದಲ್ಲಿ ಭಾಗವಹಿಸುವ ಮುಕ್ತ ಅವಕಾಶವನ್ನು ಎಲ್ಲರಿಗೂ ನೀಡಿರುವುದು ಹಾಗೂ ಇಲ್ಲಿ ಯಾವುದೇ ರೀತಿಯ ಜಾತಿಭೇದ ತೋರದೆ, ಪುರುಷ-ಸ್ತ್ರೀ ಎಂಬ ಭೇದ ತೋರದೆ ಸಮಾನತೆಯನ್ನು ಮೆರೆದಿರುವುದು ಕಂಡುಬರುತ್ತದೆ.

ಪ್ರಸ್ತುತ ಚಿತ್ರವು ಪ್ರಾಚೀನ ಹಸ್ತಪ್ರತಿ ಚಿತ್ರವಾಗಿದ್ದು, ಸಾಂಪ್ರದಾಯಿಕ ಶೈಲಿಯಲ್ಲಿ ರಚನೆಯಾಗಿದೆ. ಅನುಭವ ಮಂಟಪದ ಸಮಗ್ರ ಚಿತ್ರಣವನ್ನು ಕಟ್ಟಿಕೊಡುವ ಹಿನ್ನೆಲೆಯಲ್ಲಿ ಕಲಾವಿದ ಇಲ್ಲಿರುವ ಚಿತ್ರದ ಒಟ್ಟು ಸ್ಥಳಾವಕಾಶವನ್ನು ಸಮಾನಾಂತರವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾನೆ. ಮೊದಲ ಪಟ್ಟಿಕೆಯಲ್ಲಿ ಅಲ್ಲಮಪ್ರಭುಗಳು ಅನುಭವಮಂಟಪದ ಪೀಠದಲ್ಲಿ ಆಸೀನರಾಗಿರುವ ಸನ್ನಿವೇಶವನ್ನು ತೋರಿಸಿದರೆ, ಎರಡು, ಮೂರು ಮತ್ತು ನಾಲ್ಕನೆಯ ಪಟ್ಟಿಕೆಯಲ್ಲಿ ಅನುಭವಮಂಟಪದ ಶರಣಸಮೂಹವನ್ನು ತೋರಿಸಲಾಗಿದೆ. ಮೊದಲಪಟ್ಟಿಕೆಯಲ್ಲಿ ಅನುಭವಮಂಟಪದ ಸಭಾಧ್ಯಕ್ಷರ ಪೀಠವನ್ನು ವಿಶೇಷ ವಿನ್ಯಾಸದಿಂದ ತೋರಿಸಿ ಅಲ್ಲಮಪ್ರಭುಗಳ ಎರಡೂ ಪಾರ್ಶ್ವಗಳ ಬದಿಯಲ್ಲಿ ಶರಣರಿಬ್ಬರು ಕೈಮುಗಿದು ನಿಂತಿದ್ದಾರೆ. ಪಟ್ಟಿಕೆಯ ಅಗಲಕ್ಕೂ ಶರಣ ಸಮೂಹವನ್ನು ಭಕ್ತಿಯಿಂದ, ಒಂದು ಬಗೆಯಲ್ಲಿ ಮಿಲಿಟರಿ ಶಿಸ್ತಿನಲ್ಲಿ ನಿಂತಿರುವಂತೆ ಚಿತ್ರಿಸಲಾಗಿದೆ.

ಅನುಭವಮಂಟಪವನ್ನು ೨೧ನೇ ಶತಮಾನದ ಕಲಾವಿದರು ಚಿತ್ರಿಸಿದರೆ ವಾಸ್ತವ ಶೈಲಿಯಲ್ಲಿ ಚಿತ್ರಿಸುವಷ್ಟು ಅವರ ಜ್ಞಾನವೃದ್ಧಿಯಾಗಿದೆ. ಆದರೆ ಸಾಂಪ್ರದಾಯಿಕ ಕಲಾವಿದರು ಶಿಷ್ಟವಾದ ಕಲಾಶಿಕ್ಷಣ ಪಡೆಯದೇ ಇರುವದರಿಂದಲೂ ಒಂದು ಸಂದರ್ಭವನ್ನು ಬಿಡಿಬಿಡಿಯಾಗಿ ಚಿತ್ರಿಸುತ್ತಿದ್ದರಲ್ಲದೇ ಒಂದು ಸನ್ನಿವೇಶದ ದೃಶ್ಯಾತ್ಮಕ ವಿವರವನ್ನು ಸಹ ಬಿಡಿಬಿಡಿಯಾಗಿ ಮಂಡಿಸುತ್ತಿದ್ದರೆಂಬುದಕ್ಕೆ ಈ ಚಿತ್ರ ಒಂದು ಉತ್ತಮ ನಿದರ್ಶನ. ಕೇವಲ ಬಿಳಿ, ಹಳದಿ, ಕೆಂಪು ಮತ್ತು ಕಪ್ಪುವರ್ಣಗಳನ್ನು ದುಡಿಸಿಕೊಂಡು ಒಂದು ಪ್ರಬುದ್ಧವಾದ ಚಿತ್ರವನ್ನು ಸಾಂಪ್ರದಾಯಿಕ ಕಲಾವಿದರು ನೀಡಿದ್ದಾರೆ.

ಅನುಭವಮಂಟಪ *(ಕಾಮಿಕ್ಸ್)*-೩

ಬಸವಣ್ಣನವರು ಅನುಭವಮಂಟಪವನ್ನು ರೂಪಿಸಿ ಅದರ ಅಧ್ಯಕ್ಷತೆಯನ್ನು ಅಲ್ಲಮಪ್ರಭುದೇವರಿಗೆ ವಹಿಸಿದ್ದು, ಈ ವರ್ಣಚಿತ್ರದಲ್ಲಿ ಷಟ್‌ಸ್ಥಲಗಳನ್ನು ಆರೋಹಣ ಕ್ರಮದಲ್ಲಿರುವ ಮೆಟ್ಟಿಲುಗಳಲ್ಲಿ ಚಿತ್ರಿಸಿದ್ದಾರೆ. ೧. ಭಕ್ತ ೨. ಮಹೇಶ ೩. ಪ್ರಸಾದಿ ೪. ಪ್ರಾಣಲಿಂಗಿ ೫. ಶರಣ ೬. ಐಕ್ಯ -ಹೀಗೆ ಆರು ಮೆಟ್ಟಿಲುಗಳನ್ನು ಚಿತ್ರಿಸಿ, ಅದರ ಮೇಲೆ ಸಿಂಹಾಸನವನ್ನು ಸ್ಥಾಪಿಸಿ, ಅದರ ಮೇಲೆ ಅಲ್ಲಮಪ್ರಭುದೇವರು ಎಲ್ಲರಿಗೂ

ಕಾಣುವಂತೆ ಎತ್ತರದಲ್ಲಿ ಕುಳಿತಿರುವುದನ್ನು ಬಿಡಿಸಿರುತ್ತಾರೆ. ಈ ಚಿತ್ರದಲ್ಲಿ ಆರು ಮೆಟ್ಟಿಲುಗಳಲ್ಲಿ ಕ್ರಮಬದ್ಧವಾಗಿ ಭಕ್ತಸ್ಥಲದ ದುಂಡಾಗಿರುವ ಮೆಟ್ಟಿಲು ನೆಲಹಾಸುಗೆಗೆ ಹೊಂದಿಕೊಂಡಿದೆ. ಉಳಿದೆಲ್ಲವುಗಳಿಗಿಂತ ವಿಶಾಲವಾಗಿದ್ದು ನಂತರದ ಮೆಟ್ಟಿಲುಗಳು ಕಿರಿದಾಗುತ್ತ ಮೇಲೆ ಸಾಗುತ್ತವೆ. ಮೆಟ್ಟಿಲಿನ ಎದುರುಗಡೆ ಅಲಂಕೃತ ನೆಲಹಾಸುಗೆಯನ್ನು ಹಾಸಿದ್ದು ಎಡಗಡೆ ಶರಣೆಯರು ಮತ್ತು ಬಲಗಡೆ ಶರಣರು ಕುಳಿತಿರುವುದನ್ನು ಚಿತ್ರಿಸಲಾಗಿದೆ.

ಬಲಬದಿಯಲ್ಲಿರುವ ಶರಣರ ಗುಂಪಿನಲ್ಲಿ ಬಸವಣ್ಣನವರು "ನಿಮ್ಮನ್ನು ನೀವು ಅರಿತುಕೊಳ್ಳಿ, ಇತರರನ್ನು ತಿದ್ದುವ ಮುನ್ನ ನಮ್ಮನ್ನು ನಾವು ತಿದ್ದಿಕೊಳ್ಳೋಣ" ಎಂಬ ಸಂದೇಶವನ್ನು ಅಧ್ಯಕ್ಷರಾದ ಅಲ್ಲಮಪ್ರಭುದೇವರ ಸನ್ನಿಧಿಯಲ್ಲಿ ಶರಣ–ಶರಣೆಯರನ್ನು ಕುರಿತು ಹೇಳುತ್ತಿದ್ದಾರೆ. ಬಸವಣ್ಣನವರು ಹೇಳಿದ ವಾಕ್ಯವನ್ನು ಶರಣ–ಶರಣೆಯರು ಏಕಚಿತ್ತದಿಂದ ಕೇಳುತ್ತಿರುವುದು ಪ್ರಸ್ತುತ ಚಿತ್ರದಲ್ಲಿ ಎದ್ದುತೋರುತ್ತಿದೆ. ಈ ಚಿತ್ರದಲ್ಲಿ ಬಣ್ಣಗಳನ್ನು ಹೆಚ್ಚು ಬಳಸದಿದ್ದರೂ ಅನುಭವಮಂಟಪದ ಸ್ಪಷ್ಟ ಕಲ್ಪನೆಯನ್ನು ಕಾಣುವಂತೆ ರೂಪಿಸಲಾಗಿದೆ. ಶರಣ–ಶರಣೆಯರಿಗೆ ಬಟ್ಟೆ ಮತ್ತು ಮೈಬಣ್ಣ ಒಂದೇ ತೆರನಾಗಿರುವುದು ಕಂಡುಬರುತ್ತದೆ. ಬಸವಣ್ಣನವರು ಎಲ್ಲ ಶರಣರ ಕಡೆ ಕೈ ಮಾಡಿ ಸಂದೇಶ ನೀಡುತ್ತಿರುವ ದೃಶ್ಯವಿದೆ. ಅವರನ್ನು ಬಿಳಿಪಂಚೆಯನ್ನು ಧರಿಸಿರುವ ಹಾಗೆ ಚಿತ್ರಿಸಲಾಗಿದೆ. ಇದೇ ಚಿತ್ರದಲ್ಲಿ ಅಲ್ಲಮಪ್ರಭುದೇವರನ್ನು ಬಿಳಿಬಣ್ಣದ ಪಂಚೆ ಮತ್ತು ಬಿಳಿಬಣ್ಣದ ನಿಲುವಂಗಿಯನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಉಳಿದ ಶರಣ–ಶರಣೆಯರಿಗಿಂತ ಭಿನ್ನವಾಗಿ ಕಾಣುವಂತೆ ಕಲಾವಿದ ಚಿತ್ರಿಸಿರುವುದರಲ್ಲಿ ಸಾಂಕೇತಿಕತೆಯೂ ಎದ್ದು ತೋರುತ್ತದೆ. ಎತ್ತರವಾದ ಕಂಬಗಳಿಂದ ನಿರ್ಮಾಣವಾದ ಅನುಭವಮಂಟಪದಲ್ಲಿ ಎಲ್ಲಾ ಆಕೃತಿಗಳಿಗೆ ಕಪ್ಪುಬಣ್ಣದ ರೇಖೆಗಳನ್ನು ಬಳಸಿರುವುದು ವಿಶೇಷವಾಗಿ ತೋರುತ್ತದೆ.

ಈ ಚಿತ್ರ ೨೧ನೇ ಶತಮಾನದ ಶಿಷ್ಟ ಕಲಾವಿದನೊಬ್ಬನಿಂದ ಚಿತ್ರಿತವಾಗಿದ್ದು. ಇಲ್ಲಿ ಒಟ್ಟು ಸನ್ನಿವೇಶವೊಂದನ್ನು ಬಿಡಿ ಬಿಡಿಯಾಗಿ ಚಿತ್ರಿಸದೇ ಇಡೀ ವಿಷಯವೊಂದನ್ನು ಒಂದೇ ಸ್ಥಳಾವಕಾಶದಲ್ಲಿ ಯಥಾದರ್ಶನ ತಂತ್ರಗಳಡಿಯಲ್ಲಿ ಸಂಯೋಜನೆ–ಯೊಂದರ ಮೂಲಕ ಚಿತ್ರಿಸಿರುವುದಕ್ಕೆ ಈ ಚಿತ್ರ ಒಂದು ಮಾದರಿ. ಎರಡು ಮಾದರಿಯ ಶೈಲಿಗಳ ಚಿತ್ರಗಳು ಇಲ್ಲಿರುವುದುರಿಂದ ಅವುಗಳ ವ್ಯತ್ಯಾಸಗಳು ನೋಡುಗರಿಗೆ ದಕ್ಕುತ್ತವೆ. ಪ್ರಸ್ತುತ ಎಂದಿನ ಕಾಮಿಕ್ಸ್ ಶೈಲಿಯ ರಚನಾ ತಂತ್ರಗಾರಿಕೆ, ಸಂಯೋಜನೆಯಲ್ಲಿ ಪ್ರಬುದ್ಧತೆ ಈ ಎಲ್ಲ ಅಂಶಗಳು ಈ ಕಲಾಕೃತಿಯಲ್ಲಿವೆ. ಮಧ್ಯದಲ್ಲಿ ಆರು ಸ್ಥಲಗಳ ಶರಣತತ್ವಗಳಿದ್ದು ಪೀಠದ ಮೇಲೆ ಅಲ್ಲಮಪ್ರಭುಗಳು ಆಸೀನರಾಗಿದ್ದು, ಅನುಭವ ಮಂಟಪದ ಎರಡೂ ಪಾರ್ಶ್ವಗಳಲ್ಲಿ ಶರಣ–ಶರಣೆಯರು ಬಸವಣ್ಣನವರ ಸಂದೇಶವನ್ನು ಆಲಿಸುತ್ತಿದ್ದಾರೆ. ತೆಳುವಾದ ವರ್ಣಸಂಯೋಜನೆ ನೆಲಹಾಸು ಭಿತ್ತಿಗಳಲ್ಲಿ ಕಾಣಬರುತ್ತಿದ್ದು ಆಕೃತಿಗಳೆಲ್ಲವೂ ಶರಣಸಂಪನ್ನವಾದ ಉಡುಪಿನಲ್ಲಿ ಚಿತ್ರಿತಗೊಂಡಿವೆ. ಪ್ರಸ್ತುತ ಅಧ್ಯಯನದಲ್ಲಿ ಅತ್ಯಂತ ಪ್ರಬುದ್ಧ ಚಿತ್ರಗಳೆಂದು ಗುರುತಿಸಬಹುದಾಗಿದೆ ಈ ಕಾಮಿಕ್ಸ್ ಚಿತ್ರಗಳನ್ನು.

ಅನುಭವಮಂಟಪ–೪

"ನಾವು ಕಾಣುವ ಬಣ್ಣಗಳಿಂದಲೇ ವಿವಿಧ ವಸ್ತುಗಳ ಆಕೃತಿ, ಸೊಗಸು ಮೊದಲಾದವುಗಳ

ಪರಿಚಯ ಮಾಡಿಕೊಳ್ಳುತ್ತೇವೆ. ಕೆಲಕೆಲವು ಬಣ್ಣಗಳು ಯಾವುದೋ ಕಾರಣದಿಂದ ನಮ್ಮ ಮನಸ್ಸಿನಲ್ಲಿ ಆನಂದ ಹುಟ್ಟಿಸುತ್ತವೆ. ಕೆಲವು ಬಣ್ಣಗಳು ನಮಗೆ ಪ್ರಿಯವಾಗಿ ಕಾಣಿಸುತ್ತವೆ. ಅವುಗಳ ವೈಖರಿ ನಮಗೆ ಬೆರಗು ಬರಿಸುತ್ತದೆ. ಅಂತು, ಬಣ್ಣಗಳು ಒಂಟಿಯಾಗಿಯೋ, ಒಂದೇ ಬಣ್ಣದ ವಿವಿಧ ಛಾಯಗಳಾಗಿಯೋ (hues), ಇಲ್ಲವೆ ವಿವಿಧ ವರ್ಣಛಾಯೆಗಳ ಮೇಳವಾಗಿಯೋ ಕಣ್ಣಿಗೆ ಕಾಣಿಸುವಾಗ ನಮ್ಮ ಮನಸ್ಸಿನಲ್ಲಿ ಆನಂದಾದಿ ಭಾವಗಳನ್ನು ಮೂಡಿಸಬಹುದು."[೮೭] ಚಿತ್ರಕಲಾವಿದ ನಾಡೋಜ ಡಾ. ವಿ. ಟಿ. ಕಾಳೆಯವರು ತಮ್ಮ ಕಲಾಕೃತಿಗಳಲ್ಲಿ ಬಳಸುವ ವರ್ಣಗಳು ಮೇಲಿನ ಹೇಳಿಕೆಗೆ ಸರಿಹೊಂದುತ್ತದೆ.

ಕಾಳೆಯವರು ಈ ಕಲಾಕೃತಿಯನ್ನು ೨೪"x೩೬" ಅಳತೆಯ, ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ತೈಲವರ್ಣದಲ್ಲಿ ರಚಿತವಾದ ಈ ಚಿತ್ರದಲ್ಲಿ ಕಲಾವಿದ ಅನುಭವಮಂಟಪದ ಬಹುಮುಖ್ಯ ಸನ್ನಿವೇಶವೊಂದನ್ನು ಸೆರೆಹಿಡಿದಿದ್ದಾರೆ. ಬೆತ್ತಲೆಯಾದ ಅಕ್ಕಮಹಾದೇವಿಯು ಶರಣರ ಬಳಗದಲ್ಲಿ ಪ್ರವೇಶ ಮಾಡಿದುದನ್ನು ಕಂಡು ಕೆಲವು ಶರಣರು ಆಕ್ಷೇಪಿಸುತ್ತಾರೆ. ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ ಮುಂತಾದ ಶರಣರು ಅವಳನ್ನು ಹಲವು ಪ್ರಶ್ನೆಗಳ ಮೂಲಕ ಪರೀಕ್ಷಿಸುವ ಸನ್ನಿವೇಶವು ಮೂಡಿಬಂದಿದೆ. ನೀಲಿ, ಕಪ್ಪು, ಕೇಸರಿ, ಹಸಿರುಬಣ್ಣಗಳು ಇಲ್ಲಿ ಪ್ರಧಾನವಾಗಿ ಬಳಕೆಯಾಗಿವೆ. ಬಿಸಿ ವರ್ಣಗಳ ಬಳಕೆಯಿದ್ದರೂ ಕಣ್ಣಿಗೆ ರಾಚುವಂತೆ ಮೂಡಿ ಬಂದಿರುವುದಿಲ್ಲ. ವಿಶಾಲವಾದ ಒಳಾಂಗಣದಲ್ಲಿ ಪೀಠವೊಂದರ ಮೇಲೆ ಕಪ್ಪುಬಣ್ಣದ ಜಟೆ, ಗಡ್ಡ ಮೀಸೆಗಳು, ಕಾವಿ ಬಣ್ಣದ ಪಂಚೆ, ಮೇಲುವಸ್ತ್ರಗಳನ್ನು ಧರಿಸಿ ತನ್ನ ಬಲಗಾಲನ್ನು ಎಡತೊಡೆಯ ಮೇಲಿಟ್ಟು, ಗಂಭೀರವಾದ ಭಂಗಿಯಲ್ಲಿ ಅಲ್ಲಮಪ್ರಭುದೇವ ಕುಳಿತಿದ್ದಾನೆ. ಆತನ ಬಲಬದಿಯಲ್ಲಿ ಹಳದಿಬಣ್ಣದ ಕಿರೀಟ, ಬಿಳಿಬಣ್ಣದ ನಿಲುವಂಗಿ ಧರಿಸಿದ ಬಸವಣ್ಣ ನಿಂತು ತನ್ನ ಎಡಗೈಯನ್ನು ಮುಂದೆ ಚಾಚಿದ್ದಾನೆ. ಬಸವಣ್ಣನ ಪಕ್ಕದಲ್ಲಿ ಕೇಸರಿ, ಹಸಿರು ಹಳದಿಬಣ್ಣಗಳ ಸೀರೆಗಳನ್ನು ಧರಿಸಿ ಕುಳಿತ ನಾಲ್ಕೈದು ಶರಣೆಯರಿದ್ದು ಅವರ ಹಿಂದೆ ಹಲವು ಶರಣೆಯರ ಒಂದು ಗುಂಪೇ ಇದೆ. ಅಲ್ಲಮಪ್ರಭುದೇವರ ಎದುರಿನಲ್ಲಿ ಎತ್ತರದ ನಿಲುವಿನ ಬೆತ್ತಲೆದೇಹದ ಆದರೆ ತನ್ನ ತಲೆಗೂದಲುಗಳಿಂದ ಸೊಂಟ, ತೊಡೆಗಳನ್ನು ಮುಚ್ಚಿಕೊಂಡು ಅಲಂಕೃತ ಜಡೆಯಂತೆ ಹೆಣಿಕೆಗೊಂಡ ಅಕ್ಕಮಹಾದೇವಿ ತನ್ನ ಎಡಗೈಯನ್ನು ಮೇಲಕ್ಕೆತ್ತಿ ದಿಟ್ಟತನದ ನಿಲುವಿನ ಭಂಗಿಯಲ್ಲಿ ನಿಂತಿದ್ದಾಳೆ. ಸುತ್ತಲೂ ಅನೇಕ ಶರಣರು ತಲೆಯಲ್ಲಿ ಹಳದಿ, ತೆಳು ಕೇಸರಿಬಣ್ಣದ ರುಮಾಲು ಧರಿಸಿ ಅಲ್ಲಿ ನಡೆಯುವ ಸಂವಾದದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವಂತೆ ಕಂಡುಬರುತ್ತಾರೆ. ಮತ್ತೆ ಕೆಲವು ಶರಣರು ತಲೆಯನ್ನು ಬೋಳಿಸಿಕೊಂಡಿದ್ದರೆ ಮತ್ತೆ ಕೆಲವರು ಕಪ್ಪು ಬಣ್ಣದ ಕೂದಲಿನ ಜಟೆ, ಗಡ್ಡ ಮೀಸೆಯನ್ನು ಹೊಂದಿದ್ದಾರೆ.

ಸಭಾಂಗಣವು ತಿಳಿ ನೀಲಿಬಣ್ಣದ ಕಂಬಗಳು, ಮೇಲ್ಛಾವಣಿ, ನೆಲಹಾಸನ್ನು ಹೊಂದಿದೆ. ಅಲ್ಲಮಪ್ರಭುದೇವರ ಮೇಲಿರುವ ಹಳದಿ ಮತ್ತು ಕೇಸರಿಬಣ್ಣದ ಮಿಶ್ರಣದಿಂದ ರಚಿತವಾಗಿರುವ ಕೊಡೆಯು ಆಕರ್ಷಕವಾಗಿದೆ. ಕಲಾವಿದ ತಾಳ್ಮೆಯಿಂದ ಎಲ್ಲ ಸಂಗತಿಗಳನ್ನು ಕೂಲಂಕಷವಾಗಿ ಪ್ರತಿಪಾದಿಸಿರುವುದು ಮೆಚ್ಚತಕ್ಕ ಅಂಶವಾಗಿದೆ. ವಿಶಾಲವಾದ ಪ್ರಾಂಗಣವನ್ನು ಹೊಂದಿದ ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ, ಬಲಬದಿಗೆ ಅಲ್ಲಮಪ್ರಭುಗಳು ಮತ್ತು ಬಸವಣ್ಣನವರ ಆಕೃತಿಗಳು ಸಂಯೋಜನೆಗೊಂಡಿವೆ.

೮೭. ಡಾ. ಶಿವರಾಮ ಕಾರಂತ : ಚಿತ್ರಕಲಾ ಪ್ರಪಂಚ, ಪು-೩೬

ಅನುಭವ ಮಂಟಪದ ಪ್ರಾಂಗಣದ ಮಧ್ಯೆ ಅಂಡಾಕಾರದಲ್ಲಿ ಇಲ್ಲಿನ ಆಕೃತಿಗಳು ರಚನೆಗೊಂಡಿವೆ. ಮಧ್ಯದಲ್ಲಿ ಅಕ್ಕಮಹಾದೇವಿ ಇದ್ದು ಸುತ್ತಲೂ ಇರುವ ಶರಣ-ಶರಣೆಯರು, ಅಕ್ಕಮಹಾದೇವಿಯನ್ನು ಕಂಡು ಬೆಕ್ಕಸ ಬೆರಗಾಗಿದ್ದಾರೆ. ಎಲ್ಲ ಆಕೃತಿಗಳು ಆಂಗಿಕವಾಗಿ ಚಲನಶೀಲವಾಗಿವೆ. ಬಹುಸಂಖ್ಯೆಯ ಆಕೃತಿಗಳನ್ನು ಚಿತ್ರಿಸುವುದು ಕಷ್ಟಸಾಧ್ಯವೇ. ಆದರೂ ಬಹು ಸಂಖ್ಯೆಯ ಆಕೃತಿಗಳನ್ನು ಬಹಳ ತೂಕಬದ್ಧವಾಗಿ ಸಂಯೋಜಿಸಿರುವುದು ಸೋಜಿಗವೆನಿಸುತ್ತದೆ. ಅನುಭವಮಂಟಪದ ಒಟ್ಟು ಪರಿಸರವನ್ನು ಆಪ್ಯಾಯ-ಮಾನವಾಗಿಸುವ ನಿಟ್ಟಿನಲ್ಲಿ ಕಲಾವಿದರ ಶ್ರಮ ಸಾರ್ಥಕ.

ಅನುಭವಮಂಟಪ-೫

ಚಿತ್ರಕಲಾವಿದ ನಾಡೋಜ ಡಾ. ವಿ. ಟಿ. ಕಾಳೆಯವರು ಅನುಭವಮಂಟಪಕ್ಕೆ ಸಂಬಂಧಿಸಿದಂತೆ ಎರಡು ಕಲಾಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಎರಡನೆಯದು ಈ ಕಲಾಕೃತಿಯಾಗಿದೆ. ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಅನುಭವಮಂಟಪದ ಸನ್ನಿವೇಶವನ್ನು ವಿಭಿನ್ನವಾಗಿ ಮೂಡಿಸುವ ಪ್ರಯತ್ನವನ್ನು ಕಲಾವಿದ ಮಾಡಿದ್ದಾನೆ. ಅಕ್ಕಮಹಾದೇವಿಯು ಬೆತ್ತಲೆಯಾಗಿ ಅನುಭವಮಂಟಪದ ಎಲ್ಲ ಶರಣರ ಮುಂದೆ ಪ್ರವೇಶ ಮಾಡಿದಾಗ, ಅಲ್ಲಿಯ ಶರಣರು ಅಕ್ಕಮಹಾದೇವಿ ಬೆತ್ತಲೆಯಾಗಿರುವುದನ್ನು ಕಂಡು ಆಕ್ಷೇಪಣೆ ವ್ಯಕ್ತಪಡಿಸುತ್ತಾರೆ. ಅಲ್ಲಮಪ್ರಭು, ಬಸವಣ್ಣ ಮುಂತಾದ ಹಿರಿಯರು ಅವಳನ್ನು ಪರಿಪರಿಯಾಗಿ ಪ್ರಶ್ನಿಸುತ್ತಾರೆ. ಅವರ ಪ್ರಶ್ನೆಗಳಿಗೆ ಅಕ್ಕಮಹಾದೇವಿಯು ದಿಟ್ಟತನದಿಂದ ಉತ್ತರಿಸುವ ಸನ್ನಿವೇಶವನ್ನು ಇಲ್ಲಿ ಕಾಣುತ್ತೇವೆ. ಬಹುಸಂಖ್ಯೆಯ ಶರಣ-ಶರಣೆಯರ ಮಾನವಾಕೃತಿಗಳು ಮೂಡಿದ್ದರೂ ಅವರ ಮುಖಗಳೆಲ್ಲವೂ ಅತ್ಯಂತ ವಿವರವಾಗಿ ಕಾಣುವಂತಿವೆ. ಆದ್ದರಿಂದ ಅವರ ಮುಖದ ಭಾವನೆಗಳನ್ನೆಲ್ಲ ನೋಡುಗ ತುಂಬ ಸುಲಭವಾಗಿ ಗ್ರಹಿಸಲು ಸಾಧ್ಯವಾಗಿರುವುದು ಈ ಚಿತ್ರದ ವಿಶೇಷವಾಗಿದೆ.

ಕೇಸರಿ, ಹಸಿರು, ತೆಳು ನೀಲಿ, ಕಪ್ಪು ಮತ್ತು ಬಿಳಿಬಣ್ಣಗಳ ಪ್ರಧಾನ ಬಳಕೆಯಿಲ್ಲಿದೆ. ಎತ್ತರದ ಪೀಠದ ಮೇಲೆ ಅಲ್ಲಮಪ್ರಭುದೇವರು ಕುಳಿತಿದ್ದು ತಮ್ಮ ಬಲಗೈಯನ್ನು ಮೇಲಕ್ಕೆತ್ತಿ ತಮ್ಮೆದುರಿಗಿರುವ ಅಕ್ಕಮಹಾದೇವಿಯನ್ನು ಪ್ರಶ್ನಿಸುವ ಭಂಗಿಯಲ್ಲಿ ಕುಳಿತಿದ್ದಾರೆ. ಮುಖದಲ್ಲಿ ಸೌಮ್ಯತೆಯಿಲ್ಲ, ಕಠಿಣ ಭಾವವಿದೆ. ಆತನ ಪಕ್ಕದಲ್ಲಿ ತಲೆಗೆ ಬಂಗಾರದ ಕಿರೀಟ, ಹಳದಿ ಬಣ್ಣದ ತುಂಬುತೋಳಿನ ನಿಲುವಂಗಿಯನ್ನು ಧರಿಸಿ ನಿಂತು, ತನ್ನ ಕೈಯನ್ನು ಎತ್ತುವುದರ ಮೂಲಕ ಪ್ರಶ್ನಿಸುವ ಭಂಗಿಯಲ್ಲಿ ಬಸವಣ್ಣನಿದ್ದಾನೆ. ಆತನ ಪಕ್ಕದಲ್ಲಿ ಚನ್ನಬಸವಣ್ಣ ನಿಂತಿದ್ದಾನೆ. ಪ್ರಭುದೇವರ ಎದುರಿಗೆ ದಷ್ಟಪುಷ್ಟವಾದ ದೇಹಾಕೃತಿಯುಳ್ಳ ಅಕ್ಕಮಹಾದೇವಿ ತನ್ನ ಬಲಗೈಯನ್ನು ಮೇಲಕ್ಕೆತ್ತಿ ಉತ್ತರಿಸುವ ಭಂಗಿಯಲ್ಲಿ ನಿಂತಿದ್ದಾಳೆ. ಬೆತ್ತಲೆಯಾದ ಅವಳ ದೇಹವನ್ನು ಕಪ್ಪುಬಣ್ಣದ ತಲೆ ಕೂದಲು ಮೊಣಕಾಲಿನವರೆಗೂ ಆವರಿಸಿ ಬಹುಭಾಗವನ್ನು ಮುಚ್ಚಿವೆ. ಹಣೆಯಲ್ಲಿ ವಿಭೂತಿ, ಕುಂಕುಮದ ಬೊಟ್ಟು, ಕೊರಳಿನಲ್ಲಿ ಕೆಂಪುವಸ್ತ್ರದ ಗಂಟೊಂದು ಅಸ್ಪಷ್ಟವಾಗಿ ತೋರುತ್ತಿದೆ.

ಪ್ರಭುದೇವರ ಬಲಬದಿಗೆ ಬೋಳುತಲೆಯ ಐದಾರು ಶರಣರು ಕೊರಳಲ್ಲಿ ಕೆಂಪುವಸ್ತ್ರದ ಗಂಟಿನಲ್ಲಿ ಇಷ್ಟಲಿಂಗವನ್ನು ಕಟ್ಟಿಕೊಂಡು ಕುಳಿತಿದ್ದಾರೆ. ಅವರ ಮುಖಗಳೆಲ್ಲವೂ ಅಕ್ಕಮಹಾದೇವಿಯತ್ತ ಕುತೂಹಲದಿಂದ

ನೋಡುತ್ತಿವೆ. ಅಕ್ಕ ಮಹಾದೇವಿಯ ಬಲಬದಿಯಲ್ಲಿ ಕೆಂಪು, ನೀಲಿ, ಹಸಿರುಬಣ್ಣದ ಸೀರೆಗಳನ್ನು ಉಟ್ಟು ತಲೆತುಂಬ ಸೆರಗನ್ನು ಧರಿಸಿದ ಶರಣೆಯರ ಸಮೂಹ ಕುಳಿತಿದೆ. ಅವರಲ್ಲಿ ಪರಸ್ಪರ ಸಂವಾದದಲ್ಲಿ ಕೆಲವರು ತೊಡಗಿದ್ದಾರೆ. ಉಳಿದವರು ಅಕ್ಕಮಹಾದೇವಿಯತ್ತ ಕುತೂಹಲ, ಸಂಶಯ, ಮೆಚ್ಚುಗೆ ಮುಂತಾದ ಭಾವನೆಗಳಿಂದ ನಿರುಕಿಸುತ್ತಿದ್ದಾರೆ. ಅಕ್ಕಮಹಾದೇವಿಯ ಹಿಂಬದಿಯಲ್ಲಿ ತಲೆಗೆ ಬಿಳಿ ಮತ್ತು ಕಾವಿಬಣ್ಣದ ರುಮಾಲು ಸುತ್ತಿದ, ತಲೆ ಬೋಳಾಗಿರುವ ಶರಣರು ಅಲ್ಲಮ ಪ್ರಭುವಿನ ಕಡೆಗೆ ಮುಖಮಾಡಿ ಕುಳಿತಿದ್ದಾರೆ. ಭಿತ್ತಿಯಲ್ಲಿ ಹಸಿರು ಮತ್ತು ಕಪ್ಪು ಬಣ್ಣದ ಗೋಡೆ, ಚೌಕಾಕಾರದ ಬಾಗಿಲುಗಳ ಚಿತ್ರಣವಿದೆ. ನೂರು ಮಾತುಗಳನ್ನು ಒಂದು ಚಿತ್ರ ಹೇಳುತ್ತದೆ ಎಂಬ ಮಾತನ್ನು ಸಾಧಾರವಾಗಿ ಕಂಡುಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಕಲಾವಿದನ ಪ್ರತಿಭೆ, ತಾಳ್ಮೆ, ಶ್ರದ್ಧೆಗಳು ನೋಡುಗರ ಮೆಚ್ಚುಗೆಗೆ ಪಾತ್ರವಾಗುತ್ತವೆ. ಅಂಡಾಕಾರದಲ್ಲಿ ಆಕೃತಿಗಳು ಸಂಯೋಜನೆಗೊಂಡಿದ್ದು, ಒಂದು ಬದಿಯಲ್ಲಿ ಶರಣೆಯರು ಇನ್ನೊಂದು ಬದಿಯಲ್ಲಿ ಶರಣರು, ಎಡಪಾರ್ಶ್ವದಲ್ಲಿ ಬಸವಣ್ಣ ಮತ್ತು ಅಲ್ಲಮಪ್ರಭುದೇವರು ಆಸೀನರಾಗಿರುವ, ಮಧ್ಯದಲ್ಲಿ ಅಕ್ಕಮಹಾದೇವಿ ಆಕೃತಿ ರಚನೆಗೊಂಡಿದೆ.

ಅನುಭವ ಮಂಟಪದ ಹಿನ್ನೆಲೆಯನ್ನು ಸೂಚ್ಯವಾಗಿ ತೋರಿಸಲ್ಪಟ್ಟಿರುವ, ಮುನ್ನೆಲೆಯಲ್ಲಿ ಆಕೃತಿಗಳನ್ನು ಸಂಯೋಜಿಸಿರುವ ಕ್ರಮ ಮೆಚ್ಚುವಂಥದ್ದು. ಆಕೃತಿಗಳೆಲ್ಲವೂ ಆಂಗಿಕವಾಗಿ ಚಲನಶೀಲವಾಗಿರುವ ರೀತಿ ಅನನ್ಯವಾದುದು. ನೈಜ ಶೈಲಿಯ ಈ ಚಿತ್ರದ ಆಕೃತಿಗಳಲ್ಲಿ ಭಾವಪ್ರಧಾನವಾದ ಗುಣಲಕ್ಷಣಗಳನ್ನು ಸೆರೆ ಹಿಡಿಯುವುದು ಸುಲಭ ಸಾಧ್ಯವಲ್ಲವಾದರೂ, ಅದನ್ನು ಸುಲಭವಾಗಿ ಸಾಧ್ಯಗೊಳಿಸಿರುವ ಕ್ರಮ ಅನ್ಯೋನ್ಯ

ಅನುಭವಮಂಟಪ–೬

ಕಲಾವಿದ ಕೆ. ಅಮೀನರವರು ತೈಲವರ್ಣ ಮಾಧ್ಯಮದಲ್ಲಿ ಈ ಕಲಾಕೃತಿಯನ್ನು ರಚಿಸಿದ್ದಾರೆ. ಕಲಾಕೃತಿ ರಚನೆಯಾದ ಕಾಲ ಲಭ್ಯವಾಗಿಲ್ಲ ಮತ್ತು ಮೂಲ ಕೃತಿಯ ಕುರಿತು ಮಾಹಿತಿ ಅವಿವರ. ಆದರೆ ಇದರ ಛಾಯಾಪ್ರತಿ ಬಾಗಲಕೋಟೆಯ ಕಲಾವಿದ ಡಾ. ಬಸವರಾಜ ಗವಿಮಠ ಅವರಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಳಸಿದ ಬಣ್ಣಗಳಲ್ಲಿ ತೆಳುವಾದ ಕೇಸರಿ(ಕಾವಿ)ಬಣ್ಣವು ಪ್ರಧಾನ ಸ್ಥಾನ ಪಡೆದುಕೊಂಡಿದ್ದು, ತೆಳು ನೀಲಿ, ಗಾಢವಾದ ಕೇಸರಿ, ಕಡು ಕಂದು, ತೆಳುನೀಲಿ ಬಣ್ಣಗಳು ಕ್ರಮೇಣವಾಗಿ ತಮ್ಮ ಸ್ಥಾನಗಳನ್ನು ಪಡೆದುಕೊಂಡಿವೆ. ಅನುಭವಮಂಟಪದ ಸನ್ನಿವೇಶವು ಒಳಾಂಗಣದಲ್ಲಿ ನಡೆದಿದ್ದರೂ ನೋಡುಗರಿಗೆ ಅಲ್ಲಿಯ ಆಕೃತಿಗಳು ದೂರದಲ್ಲಿವೆ ಎಂಬಂತೆ ಕಾಣುತ್ತವೆ. ಎತ್ತರದ ಶೂನ್ಯಸಿಂಹಾಸನದ ಮೇಲೆ ಗಾಢವಾದ ಕೇಸರಿಬಣ್ಣದ ಪಂಚೆ ಮತ್ತು ಮೇಲುಹೊದಿಕೆಯನ್ನು ಹೊದ್ದ, ತಲೆಯಲ್ಲಿ ಕಪ್ಪು ಬಣ್ಣದ ಜಟೆ, ಗಡ್ಡ ಮೀಸೆಗಳಿಂದ ಕೂಡಿದ ಅಲ್ಲಮಪ್ರಭುದೇವ ಕೊರಳಲ್ಲಿ ಇಷ್ಟಲಿಂಗ, ಸುಂದರವಾದ ಹೂವಿನ ಹಾರವನ್ನು ಧರಿಸಿದ್ದಾನೆ. ಪೀಠದ ಮೇಲೆ ಕುಳಿತಿದ್ದರೂ, ನೋಡುಗರಿಗೆ ನಿಂತಭಂಗಿಯೆಂಬ ಸಂಶಯ ಬರುತ್ತದೆ. ಆತನ ಪಾದಗಳನ್ನು ಹರಿವಾಣದಲ್ಲಿಟ್ಟು ತೊಳೆದು ಪೂಜೆ ಮಾಡುವ ಕಾಯಕದಲ್ಲಿ ಬಸವಣ್ಣ, ಚನ್ನಬಸವಣ್ಣ, ಮಡಿವಾಳ ಮಾಚಿದೇವ ಶರಣರು ತೊಡಗಿದ್ದಾರೆ.

ಬಸವಣ್ಣ ತೆಳುವಾದ ದೇಹಾಕಾರವನ್ನು ಹೊಂದಿದ್ದು, ಬಿಳಿಪಂಚೆ ಮತ್ತು ಹಳದಿಮಿಶ್ರಿತ ಕೆಂಪುಬಣ್ಣದ ಮೇಲುಹೊದಿಕೆಯನ್ನು ಹೆಗಲಿಗೆ ಹೊದ್ದುಕೊಂಡಿದ್ದು, ಪ್ರಭುದೇವರ ಪಾದವನ್ನು ಬಲಗೈಯಿಂದ ಸ್ಪರ್ಶಿಸಿದ್ದಾನೆ. ಚನ್ನಬಸವಣ್ಣ ತಲೆಯಲ್ಲಿ ಜಟೆಯನ್ನು ಹೊಂದಿದ್ದು ಹಸಿರುಬಣ್ಣದ ಮೇಲುಹೊದಿಕೆ, ಕಾವಿಬಣ್ಣದ ಪಂಚೆಯನ್ನು ಧರಿಸಿದ್ದಾನೆ. ಕೈಯಲ್ಲಿ ಪತ್ರವನ್ನು ಹಿಡಿದು ಓದುತ್ತಿರುವ ಭಂಗಿಯಲ್ಲಿದ್ದಾನೆ. ಆತನ ಪಕ್ಕದಲ್ಲಿ ತಲೆಯ ತುಂಬ ಕಪ್ಪನೆಯ ಕೂದಲನ್ನು ಹಿಂದೆ ಬಾಚಿ ಕಟ್ಟಿ, ಗಡ್ಡ ಮೀಸೆ ಬಿಟ್ಟುಕೊಂಡಿರುವ ಮಡಿವಾಳ ಮಾಚಿದೇವ ಬಿಳಿ ಬಣ್ಣದ ಮೇಲುಹೊದಿಕೆ, ಕೆಂಪು ಬಣ್ಣದ ಪಂಚೆಯನ್ನು ಧರಿಸಿದ್ದಾನೆ. ಮಾಚಿದೇವ ತನ್ನ ಖಡ್ಗವನ್ನು ನೆಲದ ಮುಂದಿಟ್ಟಿರುವುದನ್ನು ಕಾಣುತ್ತೇವೆ. ಆತನ ಹಿಂದೆ ತೆಳುವಾದ ಕಾವಿಬಣ್ಣದ ಸೀರೆಯನ್ನು ಧರಿಸಿ, ತಲೆತುಂಬ ಮುಸುಕು ಹೊದ್ದಿರುವ ಶರಣೆಯರು, ಕಮಂಡಲುವನ್ನು ಹಿಡಿದ ಸಿದ್ಧರಾಮ ನಿಂತಿದ್ದಾನೆ. ಹಳದಿ ಮತ್ತು ಕೆಂಪುಬಣ್ಣದ ಮಿಶ್ರಿತ ಕಹಳೆಯನ್ನು ಶರಣನೊಬ್ಬ ಊದುತ್ತ ನಿಂತಿದ್ದಾನೆ. ಮತ್ತೊಬ್ಬನು ವೃತ್ತಾಕಾರದ ಅಲಂಕೃತ ಛತ್ರವನ್ನು ಪ್ರಭುದೇವರ ತಲೆಯ ಮೇಲೆ ಬರುವಂತೆ ಹಿಡಿದು ನಿಂತಿದ್ದಾನೆ.

ಬಸವಣ್ಣನ ಹಿಂಬದಿಯಲ್ಲಿ ಕಡುಗಪ್ಪುಬಣ್ಣದ ಸೀರೆ, ನೀಲಿಬಣ್ಣದ ರವಿಕೆಯನ್ನು ಧರಿಸಿದ ಸ್ತ್ರೀಯೊಬ್ಬಳು ಆರತಿತಟ್ಟೆಯನ್ನು ಹಿಡಿದು ನಿಂತಿದ್ದಾಳೆ. ಹಿಂಬದಿ ಮತ್ತು ಪಕ್ಕದಲ್ಲಿ ಮತ್ತೆ ಮೂವರು ಸ್ತ್ರೀಯರಿರುವುದನ್ನು ಕಾಣುತ್ತೇವೆ. ಮೂಡಿಬಂದಿರುವ ಮಾನವಾಕೃತಿಗಳ ಮುಖಗಳಲ್ಲಿ ತುಂಬು ಗಾಂಭೀರ್ಯ ಎದ್ದು ತೋರುತ್ತದೆ. ಬಹುಶಃ ಪ್ರಭುದೇವರ ಸನ್ನಿಧಿಯು ಅದಕ್ಕೆ ಕಾರಣವಾಗಿರಬಹುದು. ಕಲಾವಿದ ತನ್ನ ಆಶಯವನ್ನು ತಿಳಿಸುವ ಉತ್ತಮ ಪ್ರಯತ್ನವನ್ನು ಪ್ರಸ್ತುತ ಕಲಾಕೃತಿಯಲ್ಲಿ ಮಾಡಿದ್ದಾನೆ. ಒಂದು ಬಗೆಯಲ್ಲಿ ಅರಸೊತ್ತಿಗೆಯಂತೆ ಚಿತ್ರಿತವಾಗಿರುವ ಈ ಕೃತಿಯಲ್ಲಿ ಅನುಭವಮಂಟಪದಲ್ಲಿ ಅಲ್ಲಮಪ್ರಭುಗಳ ಪಾದಪೂಜೆಯನ್ನು ಬಸವಣ್ಣನವರು ಅವರ ಅನುಯಾಯಿಗಳು ಕೈಗೊಂಡಿದ್ದಾರೆ. ಆಕೃತಿಗಳ ಆಂಗಿಕ ರಚನೆಗಳು ಇನ್ನೂ ಪಕ್ವವಾಗಿ ಮೂಡಿ ಬಂದು, ವರ್ಣಸಂಯೋಜನೆಯಲ್ಲಿ ಮೃದುತ್ವವನ್ನು ತರುವ ಅಗತ್ಯ ಈ ಕೃತಿಗಿದೆ. ಪೌರಾಣಿಕವಾದ ಒಂದು ಸಾಮೂಹಿಕ ಘಟನೆಯು ದೃಶ್ಯಾತ್ಮಕವಾಗಿ ನಿರೂಪಣೆಗೊಂಡಾಗ ವ್ಯಕ್ತವಾಗುವ ದೃಶ್ಯಾನುಭವಗಳು ವಿಭಿನ್ನವಾದವು. ಈ ಬಗೆಯ ದೃಶ್ಯಾನುಭವಗಳು ನಿರಕ್ಷರರಿಗೆ ಅಥವಾ ಅಕ್ಷರಸ್ಥರಿಗೆ ವಿಭಿನ್ನವಾಗಿರದೇ ಎಲ್ಲ ವರ್ಗಕ್ಕೂ ಏಕರೂಪವಾದ ದೃಶ್ಯಾನುಭವ ದಕ್ಕುತ್ತದೆ ಎಂಬುದಕ್ಕೆ ಈ ಕಲಾಕೃತಿ ಒಂದು ಉತ್ತಮ ನಿದರ್ಶನವಾಗುತ್ತದೆ.

ಅನುಭವಮಂಟಪ–೭

“ಒಬ್ಬ ಕಲಾವಿದ ಕೇವಲ ಚಿತ್ರರಚನೆ ಮಾಡಿದರೆ ಮುಗಿಯಲಿಲ್ಲ. ಅವನ ಚಿತ್ರದಲ್ಲಿ ವ್ಯಕ್ತವಾಗುವ ಭಾವನೆಗಳು ಪ್ರಾಮಾಣಿಕವಾಗಿರಬೇಕು. ಆ ಪ್ರಾಮಾಣಿಕತೆ ಅವನ ಬದುಕಿನಲ್ಲೂ ಇರಬೇಕು. ಆಗಲೇ ಕಲೆಗೆ ಬೆಲೆ. ಅದೇ ಜೀವನದ ಸಾರ್ಥಕತೆ”.[೮೮] ಕಲಾವಿದ ಎಂ. ವೀರಪ್ಪನವರು ಈ ಕಲಾಕೃತಿಯನ್ನು ರಚಿಸಿದ್ದಾರೆ. ೧೨"x೧೮" ಅಳತೆಯ ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡ ಈ ಕೃತಿಯು ಕಲಾವಿದರ ಸ್ವಸಂಗ್ರಹದಲ್ಲಿದೆ.

---

೮೮. ಶಂಕರ ಪಾಟೀಲ : ಚಿತ್ರಕಲಾ ಚಿಂತನೆ, ಪು–೬೯

ಪ್ರಸ್ತುತ ಚಿತ್ರವು ಕಪ್ಪು-ಬಿಳುಪು ವರ್ಣಸಂಯೋಜನೆಯೊಂದಿಗೆ ಕಲ್ಯಾಣದ ಅನುಭವಮಂಟಪದ ಸನ್ನಿವೇಶವನ್ನು ನಿರೂಪಿಸುತ್ತದೆ. ತಳಹಾಸಿನಲ್ಲಿ ವಿಶಾಲವಾದ ಮೇಲಕ್ಕೆ ಹೋದಂತೆ ಕಿರಿದಾಗುತ್ತ ಸಾಗಿರುವ ಐದನೆಯ ಮೆಟ್ಟಿಲಿನ ಮೇಲೆ ಅಲ್ಲಮಪ್ರಭುದೇವರು ಕುಳಿತಿದ್ದಾರೆ. ಅಲ್ಲಮಪ್ರಭುದೇವರ ಆಕೃತಿ ಕಿರಿದಾಗಿ ಕಂಡರೂ ಹಣೆಯಲ್ಲಿ ಧರಿಸಿರುವ ವಿಭೂತಿ, ಕಪ್ಪುಕೂದಲಿನ ಜಟೆ, ಗಡ್ಡಮೀಸೆಗಳು ಸನ್ನಿವೇಶವನ್ನು ಪ್ರಕಟಪಡಿಸುವಲ್ಲಿ ಯಶಸ್ವಿಯಾಗಿವೆ. ತನ್ನ ಬಲದ ಹಸ್ತವನ್ನು ಅಭಯಮುದ್ರೆಯಾಕಾರದಲ್ಲಿ ತೋರಿಸಿದ್ದಾರೆ. ಪ್ರಭುದೇವರ ಕೆಳಗಿನ ಮೆಟ್ಟಿಲಿನಲ್ಲಿ ಇಬ್ಬರು ಶರಣರು ಬೋಳುತಲೆಯನ್ನು ಹೊಂದಿದ್ದು ಚರ್ಚೆಯಲ್ಲಿ ತೊಡಗಿರುವಂತೆ ಕಾಣುತ್ತಾರೆ. ಅವರ ಕೆಳಗಿನ ಮೆಟ್ಟಿಲುಗಳಲ್ಲಿ ಕುಳಿತಿರುವ ಬಸವಣ್ಣ, ಸಿದ್ಧರಾಮ, ಮೂವರು ಶರಣೆಯರು, ನಾಲ್ಕು ಜನ ಶರಣರು ಕುತೂಹಲದಿಂದ ಕೇಳುತ್ತಿರುವಂತೆ ಕಲಾವಿದ ಚಿತ್ರಿಸಿದ್ದಾನೆ.

ತಲೆಗೆ ಪೇಟವನ್ನು ಧರಿಸಿ, ಕೊರಳಲ್ಲಿ ಕಪ್ಪುಬಣ್ಣದ ರುದ್ರಾಕ್ಷಿ ಮಾಲೆಯನ್ನು ಧರಿಸಿ, ಪ್ರಭುದೇವರ ಬಲಬದಿಗೆ ಬಸವಣ್ಣ ಕುಳಿತಿದ್ದಾನೆ. ಆತನ ಎದುರಿಗೆ ಕಪ್ಪು ತಲೆಗೂದಲು, ಕಪ್ಪುಗಡ್ಡ ಮೀಸೆಗಳನ್ನು ಧರಿಸಿದ ಚನ್ನಬಸವಣ್ಣ ಕುಳಿತಿದ್ದಾನೆ. ಚನ್ನಬಸವಣ್ಣನ ಕೆಳಬದಿಯಲ್ಲಿ ಮೂರು ಜನಸ್ತ್ರೀಯರು ಕಪ್ಪು ಅಂಚಿನಿಂದ ಕೂಡಿದ ರವಿಕೆ, ಬಿಳಿಬಣ್ಣದ ಸೀರೆಯನ್ನು ಧರಿಸಿದ್ದಾರೆ. ಅವರಲ್ಲಿ ಒಬ್ಬಾಕೆ ತಲೆತುಂಬ ಸೆರಗು ಹೊದ್ದಿದ್ದಾಳೆ. ಉಳಿದಿಬ್ಬರು ಶರಣೆಯರನ್ನು ಮುಡಿಕಟ್ಟಿ ಮಲ್ಲಿಗೆ ಹೂವನ್ನು ಮುಡಿದಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ಬಸವಣ್ಣನ ಕೆಳಬದಿಯಲ್ಲಿ ಕುಳಿತ ನಾಲ್ಕು ಜನ ಶರಣರಲ್ಲಿ ಇಬ್ಬರು ತಲೆಯನ್ನು ಬೋಳಿಸಿಕೊಂಡು ಭಸ್ಮಲೇಪನ ಮಾಡಿಕೊಂಡಿದ್ದಾರೆ. ಉಳಿದಿಬ್ಬರು ವಯಸ್ಸಾದ ವ್ಯಕ್ತಿಗಳಾಗಿದ್ದು ತಲೆಗೆ ಮುಂಡಾಸನ್ನು, ಬಿಳಿಯ ಬಣ್ಣದ ಅಂಗಿಗಳನ್ನು ಧರಿಸಿದ ಶರಣರಾಗಿದ್ದಾರೆ. ಶೂನ್ಯಸಿಂಹಾಸನ ಪೀಠದ ಕಲ್ಪನೆಯನ್ನು ಕಟ್ಟಿಕೊಡಲು ಕಲಾವಿದ ಪ್ರಯತ್ನಿಸಿರುವುದು ಕಂಡುಬರುತ್ತದೆ. ಆಡಂಬರವಿಲ್ಲದ ಅನುಭವಮಂಟಪವಿದು. ಷಟಸ್ಥಲದ ಪೀಠದ ಮೇಲೆ ಕುಳಿತಿರುವ (ವಾಸ್ತವವಾಗಿ ಷಟ್‌ಸ್ಥಲಗಳ ಪೀಠಗಳು ಆರು, ರಚಿತಗೊಂಡಿರುವುದು ಐದು) ಅಲ್ಲಮಪ್ರಭುಗಳು, ಅವರ ಸುತ್ತಲೂ ಪೀಠದ ಇತರ ಮೆಟ್ಟಿಲುಗಳ ಮೇಲೆ ಕುಳಿತಿರುವ ಶರಣ-ಶರಣೆಯರು ಸಂಯೋಜನೆಗೊಂಡಿದ್ದಾರೆ. ಕಪ್ಪು-ಬಿಳುಪು ಛಾಯೆಯಲ್ಲಿ ರಚಿತವಾದ ಈ ಚಿತ್ರ ಒಂದು ಬಗೆಯಲ್ಲಿ ಗೌಪ್ಯಸ್ಥಳದ ಗಾಢಾಂಧಕಾರವನ್ನು ತೋರ್ಪಡಿಸುತ್ತದೆ. ಚಿತ್ರದ ಪ್ರಮುಖ ಆಶಯವಾಗಿ ಅಲ್ಲಮಪ್ರಭುಗಳು ತುಂಬ ಚಿಕ್ಕದಾಗಿ ರಚಿತವಾಗಿದ್ದು, ಇನ್ನುಳಿದ ಆಕೃತಿಗಳು ಗಾತ್ರದಲ್ಲಿ ದೊಡ್ಡದಾಗಿ ಚಿತ್ರಿತವಾಗಿರುವ ಈ ಚಿತ್ರ ನೋಡುಗರಿಗೆ ಪರಿಣಾಮವನ್ನು ಉಂಟು ಮಾಡುವುದಿಲ್ಲ.

೨.೭.೨. ಅನುಭವಮಂಟಪದಲ್ಲಿ ಅಕ್ಕಮಹಾದೇವಿ, ಅಲ್ಲಮಪ್ರಭುವಿನ ಸಂವಾದ

"ಒಂದು ನೆಲದ ಸಂಸ್ಕೃತಿಯನ್ನು ಆಧರಿಸಿ 'ಕಲಾಕೃತಿ' ಸೃಷ್ಟಿಯಾಗುತ್ತದೆ. ದೃಶ್ಯ, ಶಬ್ದ, ಚಲನೆ, ನೋಟ, ರಸ, ಭಾವ, ಚೈತನ್ಯಗಳ ಅಭಿವ್ಯಕ್ತಿ ಕಾಲಕ್ಕನುಗುಣವಾಗಿ ಭಿನ್ನ ಪ್ರಕಾರಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಭಿವ್ಯಕ್ತಿಸುವ ಮಾಧ್ಯಮ ಯಾವುದೇ ಇರಬಹುದು, ಅದು ಒಂದು ಸಮಾಜದ, ಸಂಸ್ಕೃತಿಯ, ಬದುಕಿನ ಪ್ರತಿಬಿಂಬವಾಗುತ್ತದೆ."[೮೯] ಕಲಾವಿದ ಬಸವರಾಜ ಮುಗಳಿಯವರ ಈ ಕಲಾಕೃತಿಯು ೪೮"x೩೬" ಅಳತೆಯ ತೈಲವರ್ಣ ಮಾಧ್ಯಮದಲ್ಲಿ ಚಿತ್ರಣಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲಸಂಗಮ

೮೯. ಡಾ. ಶಶಿಕಲಾ ನಂದನಗೌಡ : ಕರ್ನಾಟಕದ ಹುದುಗು ಕಲೆ (ಅಪ್ರ.ಪಿಎಚ್.ಡಿ.ಮ.ಪ್ರ), ಪು-೨

ಹಾಗೂ ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ. ಚಿತ್ರಿಸಿದ ಅನುಭವಮಂಟಪದಲ್ಲಿ, ಅಲ್ಲಮಪ್ರಭುದೇವರು ಕಾವಿಬಣ್ಣದ ಪಂಚೆ ವಸ್ತ್ರವನ್ನು ಧರಿಸಿ, ಸಿಂಹಾಸನದ ಮೇಲೆ ಕುಳಿತಿದ್ದು ಅದಕ್ಕೊಂದು ಹಳದಿ ಬಣ್ಣವನ್ನು ಹೊಂದಿದ ಛತ್ರವನ್ನು ಜೋಡಿಸಲಾಗಿದೆ. ಅಲ್ಲಮಪ್ರಭುದೇವರು ಅಕ್ಕಮಹಾದೇವಿಯೊಂದಿಗೆ ಚರ್ಚೆಯಲ್ಲಿ ನಿರತರಾಗಿದ್ದು ಅದನ್ನು ಉಳಿದ ಶರಣರು ಕುತೂಹಲದಿಂದ ಗಮನಿಸುತ್ತಿದ್ದಾರೆ. ಅಕ್ಕಮಹಾದೇವಿಯು ತನ್ನ ಕೇಶವನ್ನೇ ವಸ್ತ್ರವನ್ನಾಗಿ ಮಾಡಿಕೊಂಡಿದ್ದು ಕೈಯಲ್ಲಿ ತಾಳೆಗರಿಯ ಕಟ್ಟೊಂದನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿಯೂ ಬಲಗಡೆ ಶರಣರು, ಎಡಗಡೆ ಶರಣೆಯರು ಕುಳಿತಿದ್ದಾರೆ. ಶರಣೆಯರು ಹಳದಿ, ಕೆಂಪು, ನೀಲಿ, ತಿಳಿನೀಲಿ, ಹಸಿರು, ಕಂದು ಬಣ್ಣದ ಸೀರೆಗಳನ್ನು ಧರಿಸಿರುವುದನ್ನು ಕಾಣುತ್ತೇವೆ. ಪ್ರಭುದೇವರ ಎದುರಿನಲ್ಲಿ ಪ್ರಮುಖ ಶರಣರು ತಮ್ಮ ತಮ್ಮಲ್ಲೇ ಚರ್ಚಿಸುತ್ತಿರುವಂತೆ ಚಿತ್ರಿಸಲಾಗಿದೆ. ಅಲ್ಲಮಪ್ರಭುದೇವರು ಕುಳಿತಿರುವ ಸಿಂಹಾಸನದ ಬಲಗಡೆ ಇರುವ ಬಸವಣ್ಣನವರು ಬಿಳಿವರ್ಣದ ವಸ್ತ್ರದ ಪಂಚೆ ಧರಿಸಿದ್ದು, ತಾಳೆಗರಿಯ ಕಟ್ಟುಗಳ ಚಿಕ್ಕ ಗ್ರಂಥವನ್ನು ಹಿಡಿದಿದ್ದು, ಬಲಗೈಯಿಂದ ಅಕ್ಕಮಹಾದೇವಿಗೆ ಸಲಹೆಯನ್ನು ನೀಡುತ್ತಿರುವ ದೃಶ್ಯವನ್ನು ರೂಪಿಸಲಾಗಿದೆ.

ಈ ಚಿತ್ರದಲ್ಲಿ ಪ್ರಮುಖ ಅಲ್ಲಮಪ್ರಭುದೇವರು, ಬಸವಣ್ಣ, ಅಕ್ಕಮಹಾದೇವಿ, ಕೆಲವು ಪ್ರಮುಖ ಶರಣರು ಮಾತ್ರ ರುದ್ರಾಕ್ಷಿಯನ್ನು ತಮ್ಮ ತೋಳಿನಲ್ಲಿ ಧರಿಸಿರುವುದನ್ನು ಗಮನಿಸಬಹುದಾಗಿದೆ. ಇಡೀ ಚಿತ್ರವು ಒಳಾಂಗಣದಲ್ಲಿ ಅನುಭವಮಂಟಪದ ಸಭೆ ನಡೆದಿರುವುದನ್ನು ಸಾಕ್ಷೀಕರಿಸುತ್ತದೆ. ಈ ಚಿತ್ರವು ನೈಜತೆಯನ್ನು ಹೊಂದಿದೆ. ಈ ಚಿತ್ರದಲ್ಲಿ ವರ್ಣಮೇಳವು ಹೆಚ್ಚು ಆಪ್ಯಾಯಮಾನವೆನಿಸಲು, ಮೂಲವರ್ಣಗಳೊಂದಿಗೆ ಇತರ ಕೆಳವರ್ಗದ ವರ್ಣಗಳು ಆಕೃತಿ ವಾಸ್ತುವಿನ್ಯಾಸವನ್ನು ಆವರಿಸಿರುವದರಿಂದ ಚಿತ್ರ ನೇತ್ರಾನಂದಕರ ಅನುಭವವನ್ನು ನೀಡುತ್ತದೆ. ಸ್ಥಳಾವಕಾಶದ ಮಧ್ಯಭಾಗಕ್ಕೆ ಸಂಯೋಜನೆಗೊಂಡಿರುವ ಅಲ್ಲಮಪ್ರಭುಗಳು, ಎರಡೂ ಪಾರ್ಶ್ವಗಳಲ್ಲಿ ಸಂಯೋಜನೆಗೊಂಡಿರುವ ಶರಣ–ಶರಣೆಯರು ಹೀಗೆ ಒಟ್ಟು ಅನುಭವ ಮಂಟಪವನ್ನು ಅಂಡಾಕಾರದಲ್ಲಿ ಸಂಯೋಜಿಸಲಾಗಿದೆ. ಆಕೃತಿಗಳ ದೇಹಭಾಷೆಯನ್ನು ಸಹ ಕಲಾವಿದರು ಶರಣಸಂಪನ್ನವಾಗಿ ರಚಿಸಿರುವುದರಿಂದ ಚಿತ್ರದ ಒಟ್ಟಂದವು ನೋಟಕರ ಗಮನ ಸೆಳೆಯುತ್ತದೆ.

೨.೭.೩. ಅನುಭವಮಂಟಪ –ಅಧ್ಯಯನ ನಿರತ ಶರಣರು

ಈ ಕೃತಿಯನ್ನು ರಚಿಸಿದ ಕಲಾವಿದರ ಮಾಹಿತಿ ಲಭ್ಯವಿಲ್ಲ. ಆದರೆ ಈ ಕಲಾಕೃತಿಯಲ್ಲಿ ಬೆಂಗಳೂರಿನ ಯಜಮಾನ್ ಅಂಡ್ ಸನ್ ಎಂಬ ಸಂಸ್ಥೆಯ ಹೆಸರಿದ್ದು, ಬಹುಶಃ ಈ ಸಂಸ್ಥೆಯಿಂದಲೇ ರಚನೆಯಾಗಿರಬಹುದು. ಈ ಕಲಾಕೃತಿಯ ಛಾಯಾಪ್ರತಿ "ಯುಗ ಯುಗದ ಉತ್ಸಾಹ – ಬಸವಜಯಂತಿ ಆಚರಣೆಯ ಶತಮಾನೋತ್ಸವ ಸ್ಮರಣ ಸಂಪುಟ"[೯೦]ದಲ್ಲಿ ಲಭ್ಯವಾಗಿದೆ. ಒಳಾಂಗಣದಲ್ಲಿ ನಿರ್ಮಾಣಗೊಂಡಿರುವ ಅನುಭವಮಂಟಪವು ಕಲಾತ್ಮಕವಾಗಿ ರಚಿತಗೊಂಡಿದೆ. ಇದರಲ್ಲಿ ಎರಡು

---

೯೦. ಡಾ. ವೀರಣ್ಣ ರಾಜೂರ, ಶ್ರೀ ಬಸವರಾಜ ಹೂಗಾರ (ಸಂ.) : ಯುಗಯುಗದ ಉತ್ಸಾಹ (ಬಸವಜಯಂತಿ ಆಚರಣೆ ಶತಮಾನೋತ್ಸವ ಸ್ಮರಣ ಸಂಪುಟ), ಪ್ರ: ಶ್ರೀಮುರುಘಾಮಠ, ಮೃತ್ಯುಂಜಯನಗರ, ಧಾರವಾಡ. ೨೦೧೩ .

ಬೃಹದಾಕಾರದ ಕಲಾತ್ಮಕ ಕಂಬಗಳು, ಅವುಗಳ ಮಧ್ಯದಲ್ಲಿ ಷಟ್‌ಸ್ಥಲಗಳನ್ನು ಸಂಕೇತಿಸುವಂತೆ ಮೆಟ್ಟಿಲುಗಳನ್ನೊಳಗೊಂಡ ಸಿಂಹಾಸನವನ್ನು ಚಿತ್ರಿಸಲಾಗಿದೆ. ಅಲ್ಲಮಪ್ರಭುವಿನ ಎಡ ಮತ್ತು ಬಲಬದಿಯಲ್ಲಿ ಕುಳಿತಿರುವ ಸಿಂಹಗಳನ್ನು ಕಾಣುತ್ತೇವೆ. ಅಲ್ಲಮಪ್ರಭುದೇವರು ಎಡಗೈಯಲ್ಲಿ ಗ್ರಂಥದ ಪುಟವನ್ನು ತೆರೆದು ಸಭೆಯಲ್ಲಿ ಬೋಧಿಸುತ್ತಿರುವಂತೆ ತೋರುತ್ತದೆ. ಶರಣರು ತಮ್ಮ ತಮ್ಮ ಕೈಗಳಲ್ಲಿ ಶರಣರ ವಚನಗಳನ್ನು ರಚನೆ ಮಾಡುತ್ತಿರುವ, ಕೆಲವರು ಅಧ್ಯಯನ ಮಾಡುತ್ತಿರುವ ದೃಶ್ಯ ಪ್ರಮುಖವಾಗಿ ಕಾಣುತ್ತದೆ. ಈ ಅನುಭವಮಂಟಪದ ಚಿತ್ರದಲ್ಲಿ ಅಲ್ಲಮಪ್ರಭುದೇವರು, ಬಸವಣ್ಣ ಹಾಗೂ ಇತರ ಶರಣ–ಶರಣೆಯರ ಮೈಬಣ್ಣವನ್ನು ತಿಳಿಯಾದ ಕೆಂಪುಬಣ್ಣದಿಂದ ಬಹುತೇಕ ಶರಣರು ಧರಿಸಿದ ವರ್ಣದ ಬಣ್ಣವೂ ಅದೇ ಆಗಿರುವುದು ಕಂಡುಬರುತ್ತದೆ. ಇಲ್ಲಿ ನೆರಳು ಬೆಳಕಿನ ಚಿತ್ರದ ಸಂಯೋಜನೆ ಮಾಡಲಾಗಿದೆ. ಕೆಲವು ಶರಣೆಯರಿಗೆ ಕಾವಿಬಣ್ಣದ ಸೀರೆ, ಹಳದಿ ವರ್ಣದ ದಡಿಯನ್ನು, ಕೆಲವು ಶರಣೆಯರಿಗೆ ಹಸಿರುಬಣ್ಣದ ಸೀರೆ ಅದಕ್ಕೆ ಹಳದಿಬಣ್ಣದ ಅಂಚನ್ನು ಹೊಂದಿದ ಸೀರೆಯನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಇಲ್ಲಿ ಭಾಗವಹಿಸಿದ ಅಲ್ಲಮಪ್ರಭುದೇವರು ಸೇರಿದಂತೆ ಎಲ್ಲಾ ಶರಣರನ್ನು ಕೊರಳಲ್ಲಿ ಇಷ್ಟಲಿಂಗವನ್ನು ಬಲತೋಳಿನಲ್ಲಿ, ಹಾಗೂ ಕೊರಳಿನಲ್ಲಿ ರುದ್ರಾಕ್ಷಿಯ ಸರವನ್ನು ಧರಿಸಿರುವಂತೆ ಚಿತ್ರಿಸಲಾಗಿದೆ.

ಈ ಚಿತ್ರ ಮೊದಲ ನೋಟಕ್ಕೆ ಆಕರ್ಷಿಸುತ್ತದೆ. ಅದಕ್ಕೆ ಹಲವು ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು. ಮೊದಲನೆಯದಾಗಿ ಮೃದುವಾದ ವರ್ಣಸಂಯೋಜನೆಯನ್ನು ಹೊಂದಿದ ಕಲಾಕೃತಿ ಇದು. ಎರಡನೆಯದಾಗಿ ಇಡೀ ಅನುಭವಮಂಟಪವನ್ನು ಸಾಮೀಪ್ಯದ ನೆಲೆಯಲ್ಲಿ ಚಿತ್ರಿಸಿರುವುದು. ಮೂರನೆಯದಾಗಿ ಅಲ್ಲಮಪ್ರಭುಗಳ ಪೂರ್ಣಾಕೃತಿಯೊಂದನ್ನು ಹೊರತುಪಡಿಸಿದರೆ ಇನ್ನುಳಿದ ಶರಣ–ಶರಣೆಯರ ಆಕೃತಿಗಳು ಅರ್ಧರ್ಧ ಭಾಗ ಮಾತ್ರ ರಚನೆಯಾಗಿರುವುದರಿಂದ, ಸಾಮೀಪ್ಯವಾಗಿ ವಿವರಗಳು ದಕ್ಕುತ್ತವೆ. ನಾಲ್ಕನೆಯದಾಗಿ ಮಧ್ಯದಲ್ಲಿ ಅಲ್ಲಮಪ್ರಭುಗಳು ಬೋಧಪ್ರದವಾಗಿ ಚಿತ್ರಿತಗೊಂಡಿದ್ದು ಸುತ್ತಲೂ ಶರಣ–ಶರಣೆಯರು ಸಂಯೋಜನೆಗೊಂಡಿದ್ದಾರೆ. ನೈಜತೆಯ ಪ್ರತಿಪಾದನೆಯಡಿಯಲ್ಲಿ ಚಿತ್ರಿತವಾದ ಈ ಅನುಭವಮಂಟಪದ ಶರಣಸಂಪನ್ನತೆಯ ಪರಿಸರವನ್ನು ದೃಶ್ಯಾತ್ಮಕವಾಗಿ ಹದಗೊಳಿಸಿ, ಸೌಂದರ್ಯವನ್ನು ನೂರ್ಮಡಿಗೊಳಿಸಿದೆ.

೨.೭.೪. ಅಲ್ಲಮಪ್ರಭುದೇವರ ಪಾದಪೂಜೆಯ ಸನ್ನಿವೇಶ

"ಕಲಾಕಾರನ ಪ್ರತಿಭೆಯಿಂದ ಅವನಲ್ಲಿ ಕಲೆಯ ಕ್ರಿಯಾಶೀಲತೆಯು ಪ್ರಾರಂಭವಾಗುತ್ತದೆ"[೯೧]. "ಕಲಾವಿದ ಬಿ.ಆರ್. ಕೋಟ್ಯಾಳಕರ ಅವರ ಬೃಹತ್ ಆಕೃತಿಗಳನ್ನು ಹಾಕಿ ಸಂಯೋಜನೆ ಮಾಡುವುದರಲ್ಲಿ ಸಿದ್ಧಹಸ್ತರು. ಅಂಥಹ ಅನೇಕ ಸಂಯೋಜನಾ ಚಿತ್ರಗಳಲ್ಲಿ (Mass Composition) ಇದೂ ಒಂದು. ಇದರ ಮೂಲ ಕೃತಿ ಲಭ್ಯವಾಗಿಲ್ಲ. ವರ್ಣದ ಛಾಯಾಪ್ರತಿ ಮಾತ್ರ ಸೋಲಾಪುರದ ಮಹಾಜನ ಅವರ ಸಂಗ್ರಹದಿಂದ ಪಡೆಯಲಾಗಿದೆ."[೯೨] ಈ ಚಿತ್ರದಲ್ಲಿ ಶೂನ್ಯಸಿಂಹಾಸನಾಧೀಶ್ವರ ಅಲ್ಲಮಪ್ರಭುದೇವರ ಪಾದಪೂಜೆಯ ಸನ್ನಿವೇಶವನ್ನು ಕಲಾವಿದ ಚಿತ್ರಿಸಿದ್ದಾನೆ. ಪ್ರಸ್ತುತ ಸನ್ನಿವೇಶವು ಬಸವಣ್ಣನ ಮಹಾಮನೆಯಲ್ಲಿ ನಡೆದಿರುವಂತೆ ತೋರುತ್ತದೆ. ಇದೊಂದು ಅತ್ಯಂತ ಸಹಜವಾಗಿ ಮೂಡಿಬಂದಿರುವ ಚಿತ್ರಕೃತಿಯಾಗಿದೆ.

---

೯೧. ವಿ. ಕೃ. ಗೋಕಾಕ್ : ಕಲಾಸಿದ್ಧಾಂತ, ಪು–೨೪

೯೨. ಡಾ. ಜಿ. ಎಸ್. ಭೂಸಗೊಂಡ : ಚಿತ್ರಕಲಾವಿದ ಚಂದ್ರವರ್ಮ ಬಿ.ಆರ್. ಕೋಟ್ಯಾಳಕರ ಒಂದು ಅಧ್ಯಯನ (ಅ.ಪ್ರ.ಡಿ.ಲಿಟ್.ಮ.ಪ್ರ), ಪು–೧೮೮

ಈ ಕೃತಿಯ ಕೇಂದ್ರ ವ್ಯಕ್ತಿ ಅಲ್ಲಮಪ್ರಭುವಾಗಿದ್ದಾರೆ. ಚಿತ್ರದಲ್ಲಿರುವ ಉಳಿದವರೆಲ್ಲರೂ ಒಂದಿಲ್ಲ ಒಂದು ಬಗೆಯ ಸೇವೆಗೆ ನಿಂತವರಾಗಿದ್ದಾರೆ. ಹಾಗೆ ನೆರೆದವರನ್ನೆಲ್ಲ ಬೇಕಾಬಿಟ್ಟಿಯಾಗಿ ಚಿತ್ರಿಸದೆ ಒಪ್ಪ-ಓರಣವಾಗಿ, ಅಚ್ಚುಕಟ್ಟು-ತನದಿಂದ ಚಿತ್ರಿಸಿ ಈ ಕೃತಿಯನ್ನೊಂದು ಚೆಂದದ ಸಂಯೋಜನಾ ಕೃತಿಯನ್ನಾಗಿಸಲಾಗಿದೆ. ಹಿನ್ನೆಲೆಯಲ್ಲಿ ಮೂಡಿಬಂದಿರುವ ಮಹಾಮನೆಯ ಕಂಬ, ತೊಲೆ, ನಾಗವಂದಿಗೆಗಳ ಕಲಾತ್ಮಕತೆ, ಕುಸುರಿತನವು ಮನಸೆಳೆಯುತ್ತದೆ. ಇಡಿಯಾಗಿ ನೋಡಿದಾಗ ಇದೊಂದು ಸುಂದರ ಛಾಯಾಚಿತ್ರದಂತೆ ಕಾಣಿಸುತ್ತದೆ. ಅದಕ್ಕೆ ಸಾಕ್ಷಿಯಾಗಿ ಅಲಂಕೃತಗೊಂಡ ಮೇಲ್ಛಾವಣಿ, ಚದುರಂಗದ ರೀತಿಯ ನೆಲಕ್ಕೆ ಹಾಸಿದ ಚಚ್ಚೌಕಾರದ ಕಲ್ಲುಗಳು, ಅಲಂಕೃತ ಕಿಟಕಿಗಳು ಕಂಡುಬರುತ್ತವೆ.

ಬಂಗಾರದ ಬಣ್ಣದ ಸಿಂಹಾಸನದ ಮೇಲೆ ಅಲ್ಲಮಪ್ರಭು ವಿರಾಜಮಾನನಾಗಿದ್ದಾನೆ. ಕಡುಗಪ್ಪು ಬಣ್ಣದ ಜಟೆಯ ಕೂದಲು, ಗಡ್ಡಮೀಸೆಗಳು, ಹಣೆಯಲ್ಲಿ ಕಂಡುಬರುವ ವಿಭೂತಿಧಾರಣೆ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ತೆಳು ಗುಲಾಬಿಬಣ್ಣದ ವಸ್ತ್ರಗಳನ್ನು ಧರಿಸಿದ ಅಲ್ಲಮಪ್ರಭುದೇವ ತನ್ನ ತಲೆಯನ್ನು ಎಡಕ್ಕೆ ತುಸು ಓರೆಯಾಗಿರಿಸಿಕೊಂಡಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ಎಡಬದಿಯಲ್ಲಿ ಬಸವಣ್ಣ ತಲೆಯಲ್ಲಿ ಕಪ್ಪುವರ್ಣದ ಕಿರುಗೂದಲು, ದಪ್ಪನೆಯ ಮೀಸೆ, ಹಣೆಯಲ್ಲಿ ಕಂಡೂ ಕಾಣದಂತೆ ಧರಿಸಿರುವ ವಿಭೂತಿ, ತೆಳುವರ್ಣದ ಕಾಷಾಯವಸ್ತ್ರಧರಿಸಿ ಕುಳಿತಿದ್ದಾನೆ. ಹಿಂದೆ ತೆಳುಗುಲಾಬಿ ಬಣ್ಣದ ಸೀರೆಯನ್ನು ಧರಿಸಿದ ಗಂಗಾಂಬಿಕೆ, ಕಡುಹಸಿರು ಬಣ್ಣದ ಸೀರೆ ಧರಿಸಿದ ನೀಲಾಂಬಿಕೆ, ಪಕ್ಕದಲ್ಲಿ ಅಕ್ಕನಾಗಮ್ಮ, ಕಾಲಿನ ಮುಂಭಾಗದಲ್ಲಿ ಕಿರಿಯ ವಯಸ್ಸಿನ ಚನ್ನಬಸವಣ್ಣ, ಆತನ ಎದುರಿಗೆ ಮಡಿವಾಳ ಮಾಚಿದೇವ, ಬಸವಣ್ಣನ ಎದುರಿಗೆ ತೆಳುವರ್ಣದ ಕಾಷಾಯ ವಸ್ತ್ರಧರಿಸಿದ ಸಿದ್ಧರಾಮ ಕಂಡುಬರುತ್ತಾರೆ.

ಸಿದ್ಧರಾಮನ ಹಿಂದಿನಿಂದ ಸೇವಕರು ಕಹಳೆಯೊಂದನ್ನು ಮೊಳಗಿಸುತ್ತಿದ್ದಾರೆ. ಬದಿಯಲ್ಲಿರುವ ಸೇವಕನೊಬ್ಬನು ದುಂಡಾಕಾರದ ಹಸಿರುಬಣ್ಣದ ಅಂಚನ್ನು ಹೊಂದಿರುವ ಚಾಮರವೊಂದನ್ನು ಪ್ರಭುದೇವರ ತಲೆಯ ಮೇಲೆ ಇರುವಂತೆ ಹಿಡಿದಿದ್ದಾನೆ. ಪ್ರಭುದೇವರ ಹಿಂದಿರುವ ಶರಣೆಯರಿಬ್ಬರು ತಮ್ಮ ತಲೆಗೂದಲನ್ನು ಜಟೆಯ ರೀತಿಯಲ್ಲಿ ಮೇಲಕ್ಕೆ ಕಟ್ಟಿ ಬಿಳಿವಸ್ತ್ರಗಳನ್ನು ಧರಿಸಿದ್ದಾರೆ. ಬಸವಣ್ಣನ ಮುಂದೆ ಪ್ರಭುದೇವರ ಪಾದಾಭಿಷೇಕ ಮಾಡಲು ಅಗತ್ಯವಿರುವ ಪೂಜಾಸಾಮಗ್ರಿಗಳನ್ನು ಕಲಾವಿದ ಅತ್ಯಂತ ಎಚ್ಚರಿಕೆಯಿಂದ ಜೋಡಿಸಿರುವಂತೆ ರಚಿಸಿರುವುದು ನೋಡುಗರ ಗಮನಸೆಳೆಯುತ್ತದೆ. ಪ್ರಬುದ್ಧವಾದ ವರ್ಣಸಂಯೋಜನೆ, ಆಕೃತಿಗಳ ಆಂಗಿಕ ರಚನೆ, ಸೂಕ್ತ ಒಳಾಂಗಣದ ಪರಿಸರವಿನ್ಯಾಸ ಇಂತಹ ವಿಶೇಷಣಗಳಿಂದ ಈ ಚಿತ್ರ ಮೇರುಕೃತಿಯಾಗುತ್ತದೆ. ಮಧ್ಯದಲ್ಲಿ ಅಲ್ಲಮಪ್ರಭುಗಳು, ಕೆಳಭಾಗದಲ್ಲಿ ಬಸವಣ್ಣ, ಹಿಂಭಾಗದಲ್ಲಿ ಶರಣೆಯರು ಹೀಗೆ ಆಕೃತಿಗಳು ಅತ್ಯಂತ ಸಮರ್ಪಕವಾಗಿ ಸಂಯೋಜನೆಗೊಂಡಿವೆ. ಹಿನ್ನೆಲೆಯಲ್ಲಿ ಅನುಭವ ಮಂಟಪದ ಸನ್ನಿವೇಶವನ್ನು ಪ್ರತಿಬಿಂಬಿಸಲು ವಾಸ್ತುವಿನ್ಯಾಸವನ್ನು ಶ್ವೇತ ವರ್ಣದಿಂದ ರಚಿಸಲಾಗಿದೆ. ನೈಜವಾದ ಚಿತ್ರಶೈಲಿಯನ್ನು ಹೊಂದಿದ, ಆಕೃತಿಗಳಲ್ಲಿ ಆಂಗಿಕವಾದ ಗುಣಲಕ್ಷಣಗಳನ್ನು ಸಮರ್ಪಕವಾಗಿ ಚಿತ್ರಿಸಿದ ಈ ಕೃತಿ ದೃಶ್ಯಾತ್ಮಕವಾಗಿ ಮಹತ್ವದ್ದು.

"ಕೋಟ್ಯಾಳಕವರ ಈ ಚಿತ್ರವೂ ರೂಢಿಗತ ಶೈಲಿಯಲ್ಲಿ ಮೂಡಿದ ಸಂಸ್ಕೃತಿಯ ನಯಗಾರಿಕೆ-ಯೊಂದಿಗೆ(Cultural beauty) ಕಲ್ಪನಾ ಸೌಂದರ್ಯದಲ್ಲಿ(Imaginative beauty) ಮೂಡಿಬಂದ ಕೃತಿ. ಒಟ್ಟಾರೆ ಈ ಬೃಹತ್ ಸಂಯೋಜನೆಯ ಚಿತ್ರದಲ್ಲಿ ಯಥಾದರ್ಶನ(Perspective) ಆಕೃತಿಗಳ ಸಮೋನ(Figure balance) ಕಾಯ್ದುಕೊಂಡು ಅತ್ಯಂತ ಸಮರ್ಥ ರೀತಿಯಲ್ಲಿ ಭಾವನೆಗಳನ್ನು (Feelings) ವ್ಯಕ್ತಪಡಿಸಿದ್ದು ಅಲ್ಲಮರತ್ತ ಕೇಂದ್ರೀಕೃತವಾಗಿದ್ದು ಕಂಡುಬರುತ್ತದೆ."[೯೩]

೨.೭.೫. ಅನುಭವಮಂಟಪದಲ್ಲಿ ಬಸವಣ್ಣ-ಶರಣರ ಸಂವಾದ

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಅನುಭವಮಂಟಪದ ಈ ಚಿತ್ರದಲ್ಲಿ ಕತ್ತಲು ಮತ್ತು ಬೆಳಕಿನ ಅನನ್ಯ ಸಂಯೋಜನೆಯನ್ನು ಮಾಡಲಾಗಿದೆ. ಈ ಅನುಭವಮಂಟಪವು ಕಲಾತ್ಮಕ ಕಂಬಗಳಿಂದ ಕೂಡಿದ್ದು ಮಂಟಪದಲ್ಲಿ ಅಲ್ಲಲ್ಲಿ ದೀಪಗಳ ಬೆಳಕು ಎದ್ದುತೋರುವಂತೆ ಚಿತ್ರಿಸಲಾಗಿದೆ. ಆರು ಮೆಟ್ಟಿಲುಗಳನ್ನುಳ್ಳ ವೇದಿಕೆಯ ಮೇಲೆ ಅಲ್ಲಮಪ್ರಭುದೇವರು ಷಟ್‌ಸ್ಥಲ ಪೀಠದ ಮೇಲೆ ಕುಳಿತಿರುವುದು ಕಂಡುಬರುತ್ತದೆ. ವೇದಿಕೆಯ ಮೆಟ್ಟಿಲುಗಳಿಗೆ ದೀಪದ ಬೆಳಕು ಅರ್ಧಭಾಗಕ್ಕೆ ಮಾತ್ರ ಚಲ್ಲುವಂತೆ ರೂಪಿಸಲಾಗಿದ್ದು ಉಳಿದರ್ಧ ಮೆಟ್ಟಿಲುಗಳು ಕತ್ತಲಿನಿಂದ ಕೂಡಿರುವಂತೆ ಕಾಣುತ್ತವೆ. ದೀಪದ ಬೆಳಕು ಸಿಂಹಾಸನ ಪ್ರಭುದೇವರ ಪಾರ್ಶ್ವಭಾಗದ ಮೇಲೆ ಮಾತ್ರ ಬೀಳುವಂತೆ ಚಿತ್ರಿಸಲಾಗಿದೆ.

ದೀವಟಿಗೆಯ ಬೆಳಕಿನಿಂದ ದೀವಟಿಗೆಯ ಹಿಡಿಯನ್ನು ಕಾಣಬಹುದು. ಅಲ್ಲಮಪ್ರಭುದೇವರ ಬಲಭಾಗದಲ್ಲಿ ಬಿಳಿ ಬಣ್ಣದ ಅಂಗಿ ತಲೆಗೆ ಬಿಳಿಬಣ್ಣದ ರುಮಾಲು ಸುತ್ತಿರುವುದನ್ನು ಕಾಣುತ್ತೇವೆ. ವಯಸ್ಸಿನಲ್ಲಿ ಹಿರಿಯರಂತೆ ತೋರುವ ಶರಣರು ಕಂಡುಬರುತ್ತಾರೆ. ಒಂದಿಬ್ಬರು ಶರಣರು ಬಿಳಿಮೀಸೆಯುಳ್ಳವರಾಗಿದ್ದಾರೆ. ಕೊರಳಲ್ಲಿ ಇಷ್ಟಲಿಂಗವನ್ನು ಶರಣನೊಬ್ಬ ಧರಿಸಿರುವುದು ಎದ್ದು ತೋರುತ್ತದೆ. ವೇದಿಕೆಯ ಮೆಟ್ಟಿಲಿನ ಎಡಭಾಗದಲ್ಲಿ ನಿಂತಿರುವ ಕೆಲವು ಶರಣರ ಮೇಲೆ ನೆರಳು ಬಿದ್ದಿರುವುದರಿಂದ ಮುಖಗಳು ಅಸ್ಪಷ್ಟವಾಗಿವೆ. ವೇದಿಕೆಯ ಮೆಟ್ಟಿಲಿನ ಮುಂದೆ ಬಸವಣ್ಣ ಬಿಳಿ ಪಂಚೆ, ನಿಲುವಂಗಿ ಧರಿಸಿ ವಚನದ ಕಟ್ಟುಗಳನ್ನು ಹಿಡಿದಿರುವುದು ಕಾಣಿಸುತ್ತದೆ.

ಬಸವಣ್ಣನ ಮುಂಭಾಗದಲ್ಲಿ ತುಳಸಿ ಕಟ್ಟೆಯ ಮಾದರಿಯಲ್ಲಿ ವಚನಗಳ ಹಸ್ತಪ್ರತಿಗಳ ಗಂಟನ್ನು ಬಿಚ್ಚಿಟ್ಟಿದ್ದು ಕಾಣುತ್ತದೆ. ವಚನಗಳ ಹಸ್ತಪ್ರತಿಗಳು ಕಂದುಬಣ್ಣದ್ದಾಗಿದ್ದು ಅವುಗಳನ್ನು ಕಟ್ಟಿರುವ ಬಟ್ಟೆಯು ಕಾವಿ ಬಣ್ಣದ್ದಾಗಿದೆ. ಹಸ್ತಪ್ರತಿಗಳನ್ನು ಹಿಡಿದಿರುವ ದೃಶ್ಯವನ್ನು ಆತನ ಎದುರಿಗಿರುವ ಮೂರು ಮಂದಿ ಶರಣರು ಕುತೂಹಲದಿಂದ ವೀಕ್ಷಿಸುತ್ತಿರುವುದನ್ನು ಚಿತ್ರಿಸಲಾಗಿದೆ. ಅಂತೆಯೇ ಬಸವಣ್ಣನ ಎದುರಿಗೆ ಇಬ್ಬರು ಶರಣರು ನಿಂತಿದ್ದು ಅದರಲ್ಲಿ ಒಬ್ಬಾತ ತಲೆಗೆ ರುಮಾಲು ಧರಿಸಿ ಬಿಳಿಪಂಚೆಯುಟ್ಟಂತೆ ಚಿತ್ರಿಸಲಾಗಿದೆ.

---

೯೩. ಡಾ. ಜಿ. ಎಸ್. ಭೂಸಗೊಂಡ : ಚಿತ್ರಕಲಾವಿದ ಚಂದ್ರವರ್ಮ ಬಿ.ಅರ್. ಕೋಟ್ಯಾಳಕರ ಒಂದು ಅಧ್ಯಯನ (ಅ.ಪ್ರ.ಡಿ.ಲಿಟ್.ಮ.ಪ್ರ), ಪು-೧೪೯

ಅವರು ಯಾವುದೋ ಜಿಜ್ಞಾಸೆಯಲ್ಲಿ ತೊಡಗಿರುವಂತೆ ತೋರುತ್ತದೆ. ಬಸವಣ್ಣನ ಎಡಬದಿಯಲ್ಲಿ ಕೆಲವು ಜನ ಶರಣರು ನಿಂತಿದ್ದು ಅವರ ಮೇಲೆ ನೆರಳು ಬಿದ್ದಿರುವುದರಿಂದ ಮುಖಗಳು ಅಸ್ಪಷ್ಟವಾಗಿವೆ. ಅಲ್ಲಮಪ್ರಭುದೇವರ ಎಡಬದಿಯಲ್ಲಿ ಬಿಳಿಬಣ್ಣದ ವಸ್ತ್ರವನ್ನು ಧರಿಸಿರುವಂತೆ ತೋರುವ ಸ್ತ್ರೀಯ ಆಕೃತಿಯೊಂದು ಕಾಣುತ್ತದೆ. ಬಹುಶಃ ಅಕ್ಕಮಹಾದೇವಿಯ ರೂಪವಾಗಿರಬಹುದು. ವಾಸ್ತವಿಕ ನೆಲೆಗಟ್ಟಿನಲ್ಲಿ ತುಂಬ ಸಹಜವಾಗಿ ಮೂಡಿಬಂದಿರುವ ಕೃತಿ ಇದಾಗಿದೆ. ಬಸವಣ್ಣನವರು ಕೃತಿಯ ಕೇಂದ್ರಭಾಗದಲ್ಲಿದ್ದು ಗಮನಸೆಳೆಯುತ್ತದೆ.

ಈ ಹಿನ್ನೆಲೆಯಲ್ಲಿ ಅಕ್ಕಮಹಾದೇವಿಯಂತೆ ತೋರುವ ಅಸ್ಪಷ್ಟ ಆಕೃತಿಯೊಂದಿದ್ದು ಅತ್ಯುತ್ತಮ ರಚನಾ ಕೌಶಲ್ಯವನ್ನು ಹೊಂದಿದೆ. ಅತ್ಯಲ್ಪ ವರ್ಣಗಳನ್ನು ದುಡಿಸಿಕೊಂಡು, ಅತ್ಯಂತ ಪ್ರಬುದ್ಧ ಕಲಾಕೃತಿಯೊಂದನ್ನು ಹೇಗೆ ರಚಿಸಬೇಕೆಂಬುದಕ್ಕೆ ಈ ಚಿತ್ರ ಒಂದು ಮಾದರಿ. ಇಡೀ ಅನುಭವಮಂಟಪವನ್ನು ಮೀನುಗಣ್ಣಿನ ದೃಷ್ಟಿಯಲ್ಲಿ ಸೆರೆಹಿಡಿದ ಕಲಾವಿದ ಬಸವಣ್ಣನವರನ್ನು ಪ್ರಧಾನವಾಗಿ ಚಿತ್ರಿಸಿ ಇತರರನ್ನು ಗೌಣವಾಗಿಸುವ ಮೂಲಕ ಕಥಾನಕವೊಂದರ ದೃಶ್ಯಾತ್ಮಕ ಆಶಯಗಳನ್ನು ಈಡೇರಿಸಿದ್ದಾರೆ. ಚಿತ್ರದ ಎಡಪಾರ್ಶ್ವದ ಮಬ್ಬುಬೆಳಕಿನಲ್ಲಿ ಷಟ್‌ಸ್ಥಲ ಪೀಠದ ಮೇಲೆ ಆಸೀನರಾದ ಅಲ್ಲಮಪ್ರಭುಗಳು, ಬಲಪಾರ್ಶ್ವದ ಮಬ್ಬು ಬೆಳಕಲ್ಲಿ ಶರಣ-ಶರಣೆಯರನ್ನು, ಮಧ್ಯ ಭಾಗದ ಬೆಳಕಲ್ಲಿ ಸೂಚ್ಯವಾಗಿ ಶರಣೆಯೊಬ್ಬಳನ್ನು ಚಿತ್ರಿಸಿದ ಪರಿ ನಿಜಕ್ಕೂ ಅನನ್ಯ. ಚಿತ್ರದ ಕೆಳ ಅಂಚಿನಲ್ಲಿ ಶ್ವೇತ ವಸ್ತ್ರಧಾರಿಗಳಾದ ಶರಣರು ಬಸವಣ್ಣನವರ ಮಾತುಗಳನ್ನು ಕೇಳುತ್ತಿರುವ ರೀತಿಯಲ್ಲಿ ಚಿತ್ರಿತವಾಗಿದ್ದಾರೆ. ನೈಜ ಶೈಲಿಯಲ್ಲಿ, ಭಾರತೀಯ ಗುಣಲಕ್ಷಣಗಳನ್ನು ಅಳವಡಿಸಿಕೊಂಡು ರಚಿಸಿದ ಚಿತ್ರವಿದು.

೨.೭.೬. ಅನುಭವಮಂಟಪದಲ್ಲಿ ಅಕ್ಕನೊಂದಿಗೆ ಸಂವಾದ

"ಸೃಜನಶೀಲ ಮನುಷ್ಯನ ಅಭಿವ್ಯಕ್ತಿಗೆ ಸರಿಯಾದ ಪ್ರೋತ್ಸಾಹ, ಅವಕಾಶಗಳು ಅವನ ನಿರಂತರ ಪರಿಶ್ರಮ, ಪ್ರಯತ್ನಗಳಿದ್ದರೆ ಆ ವ್ಯಕ್ತಿಯ ಪ್ರತಿಭೆ ಬಹುಶೃತವಾಗಿ ಬೆಳೆದು ದೈತ್ಯರೂಪದಲ್ಲಿ ಬೆಳಕಿಗೆ ಬರುತ್ತದೆ. ಇಂತಹ ವ್ಯಕ್ತಿಗಳು ಅಪರೂಪವಾಗಿ ಕಾಣಸಿಗುತ್ತಾರೆ. ಸಾಮನ್ಯವಾಗಿ ಸಾಧಕರು ತಮ್ಮ ಎಲ್ಲ ಸಾಮರ್ಥ್ಯವನ್ನು ಒಂದೆಡೆಗೆ ಕೇಂದ್ರೀಕರಿಸಿ, ಒಂದೊಂದು ಕ್ಷೇತ್ರದಲ್ಲಿಯೇ ಯಶಸ್ಸಿನ ಮೆಟ್ಟಿಲೇರುತ್ತ ಹೋದವರಿಗೇನು ಕಡಿಮೆಯಿಲ್ಲ. ಹಲವಾರು ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿ ಆಯಾ ಕ್ಷೇತ್ರದ ದಿಗಂತವನ್ನು ವಿಸ್ತರಿಸುವಲ್ಲಿ ಸಕ್ರಿಯ ಕಾಣಿಕೆ ನೀಡುವ ವ್ಯಕ್ತಿಗಳು ಬೆರಳೆಣಿಕೆಯಷ್ಟು"[೯೪] ಇಂತಹ ಅಪರೂಪದ ಬಹುಮುಖ ವ್ಯಕ್ತಿತ್ವವನ್ನು ಹೊಂದಿದ ಕರ್ನಾಟದ ಹಿರಿಯ ತಲೆಮಾರಿನ ಕಲಾವಿದರಲ್ಲಿ ನಾಡೋಜ ಡಾ. ಜೆ. ಎಸ್. ಖಂಡೇರಾವ್ ಒಬ್ಬರು. ಖಂಡೇರಾವ್ ಅವರ ಈ ಕಲಾಕೃತಿಯು ೨೪"x೩೬" ಅಳತೆಯ, ತೈಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಶ್ರೀ ಶರಣಬಸವೇಶ್ವರ ದೃಶ್ಯಕಲಾಮಹಾವಿದ್ಯಾಲಯ, ಕಲಬುರ್ಗಿಯಲ್ಲಿ ಸಂಗ್ರಹಗೊಂಡಿದೆ.

---

೯೪. ಡಾ. ಎಸ್. ಸಿ. ಪಾಟೀಲ : ವಿ. ಟಿ. ಕಾಳೆ, ಪು-೧

ಅನುಭವಮಂಟಪದಲ್ಲಿ ನಡೆಯುತ್ತಿರುವ ಚರ್ಚೆಯೊಂದನ್ನು ಕಾಣಿಸುವ ಈ ಚಿತ್ರವು ಚರ್ಚೆಯಲ್ಲಿ ತೊಡಗಿದವರನ್ನು ಕಾಣಿಸುವಷ್ಟೆ ಪ್ರಮುಖವಾಗಿ ಆ ಚರ್ಚೆ ನಡೆಯುತ್ತಿದ್ದ ಮಹಾಮನೆಯನ್ನು ಅಷ್ಟೇ ಪ್ರಮುಖವಾಗಿ ಕಾಣಿಸಬೇಕೆಂಬ ಉದ್ದೇಶ ಕಲಾವಿದನದ್ದಾಗಿರುವಂತೆ ಕಂಡುಬರುತ್ತದೆ. ಏಕೆಂದರೆ ಇಡೀ ಚಿತ್ರಭಿತ್ತಿಯಲ್ಲಿ ಕಾಲುಭಾಗದಷ್ಟು ಜಾಗದಲ್ಲಿ ಮಾತ್ರ ಶರಣ ಸಮೂಹವಿದ್ದರೆ ಉಳಿದ ಮುಕ್ಕಾಲುಪಾಲು ಭಿತ್ತಿಯಲ್ಲಿ ಈ ಮನೆಯೇ ಆವರಿಸಿದೆ. ಚರಿತ್ರಾರ್ಹವಾದ 'ಮಹಾಮನೆ' ಹೇಗಿತ್ತು ಎಂಬುದನ್ನು ಈ ಚಿತ್ರ ನೋಡಿದರು ಕಲ್ಪಿಸಿಕೊಳ್ಳಬಹುದು. ನೆರೆದಿರುವ ಶರಣಗಣದಲ್ಲಿ ಮೂವರು ಕೇಂದ್ರವ್ಯಕ್ತಿಗಳಂತೆ ಕಂಡುಬರುತ್ತಾರೆ. ಅವರೆಂದರೆ– ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ. ಈ ಮೂವರು ಪ್ರಮುಖವಾದ, ಗಹನವಾಗಿದ ಸಂವಾದದಲ್ಲಿ ತೊಡಗಿಕೊಂಡಿದ್ದಾರೆ. ಉಳಿದವರೆಲ್ಲರೂ ಮೂಕಪ್ರೇಕ್ಷಕರು ಎನ್ನುವಂತೆ ಕಂಡುಬರುತ್ತಾರೆ. ಈ ಚಿತ್ರದಲ್ಲಿ ಅನುಭವಮಂಟಪವು ಒಳಾಂಗಣದಲ್ಲಿ ಕಲ್ಲಿನ ಕಂಭಗಳಿಂದ ನಿರ್ಮಾಣಗೊಂಡಿದೆ. ಆ ಕಂಭಗಳು ಚಿತ್ರದ ಪ್ರಮುಖ ಆಕರ್ಷಣೆಯಾಗಿದ್ದು ಕಲ್ಯಾಣ ಚಾಲುಕ್ಯರ ವಾಸ್ತುಶೈಲಿಯನ್ನು ಪ್ರತಿಬಿಂಬಿಸುತ್ತಿವೆ. ಅನುಭವಮಂಟಪವು ಶಿಲಾಸಿಂಹಾಸನವನ್ನು ಹೊಂದಿದ್ದು ಅದರ ಮೇಲೆ ಅಲ್ಲಮಪ್ರಭು ಕುಳಿತಿರುವುದನ್ನು ಕಾಣುತ್ತೇವೆ. ಪ್ರಭುದೇವರು ತಮ್ಮ ಬಲಗೈಯನ್ನು ಮೇಲಕ್ಕೆತ್ತಿ ಅಕ್ಕಮಹಾದೇವಿಯೊಂದಿಗೆ ಸಂವಾದ ನಡೆಸುತ್ತಿದ್ದಾರೆ. ಬಸವಣ್ಣನವರು ಕಿರೀಟವನ್ನು ಧರಿಸಿದ್ದು ವಿಶೇಷವಾಗಿದೆ.

ಬಸವಣ್ಣನವರು ಅಕ್ಕಮಹಾದೇವಿಯತ್ತ ಎರಡೂ ಕೈಗಳನ್ನು ಮುಂದುಮಾಡಿ ಚರ್ಚಿಸುತ್ತಿದ್ದಾರೆ. ರಾಜಪೋಷಾಕು ಧರಿಸಿದ್ದು ಬಿಳಿ ಶಲ್ಯವು ಕೈಗಳಿಂದ ಇಳಿಬಿದ್ದಿರುವಂತೆ ಕಂಡುಬರುತ್ತದೆ. ಸಾಮಾನ್ಯವಾಗಿ ಪ್ರತಿ ಅನುಭವಮಂಟಪದ ಸಿಂಹಾಸನದ ಎಡಗಡೆಗೆ ಶರಣೆಯರು, ಬಲಗಡೆಗೆ ಶರಣರು ಬಂದಿರುವಂತೆ ಇಲ್ಲಿಯೂ ಅದೇ ಕ್ರಮವನ್ನು ಅನುಸರಿಸಲಾಗಿದೆ. ಧಾರವಾಡದ ಬಸವಪೀಠದ ಪ್ರಾಚೀನ ಅನುಭವಮಂಟಪದ ಚಿತ್ರದಲ್ಲಿ ಕಂಡುಬಂದಂತೆ ಇಲ್ಲಿಯೂ ಅನೇಕ ಶರಣರು ತಮ್ಮ ತಮ್ಮ ಕಾಯಕದ ಲಾಂಛನಗಳನ್ನು ಅಥವಾ ಗುರುತುಗಳನ್ನು ಹೊಂದಿರುವಂತೆ ಆಯಾ ಕಾಯಕಕ್ಕೆ ಸಂಬಂಧಪಟ್ಟ ಉಡುಪುಗಳನ್ನು ಧರಿಸಿರುವುದು ವಿಶೇಷವಾಗಿ ತೋರುತ್ತದೆ. ಎಡಗಡೆಯಲ್ಲಿ ಶರಣೆಯರ ಗುಂಪಿನಲ್ಲಿ ತಿಳಿ ನೀಲಿಬಣ್ಣದ, ಬಿಳಿಬಣ್ಣದ, ಕೆಂಪುಬಣ್ಣದ ಸೀರೆ –ಹೀಗೆ ವಿವಿಧ ವರ್ಣಗಳಿಂದ ತಯಾರಿಸಿದ ಉಡುಪುಗಳನ್ನು ಕಾಣಬಹುದು. ಆದರೆ ಶರಣೆಯರ ಗುಂಪಿಯಲ್ಲಿ ಅಕ್ಕಮಹಾದೇವಿಯು ವಿವಸ್ತ್ರಳಾಗಿದ್ದು ತನ್ನ ಕೇಶವನ್ನೇ ವಸ್ತ್ರವನ್ನಾಗಿ ಇಳಿಯಬಿಟ್ಟುಕೊಂಡಿರುವುದು ಸ್ಪಷ್ಟವಾಗಿ ಕಾಣುತ್ತದೆ. ಈ ಅನುಭವಮಂಟಪವು ಒಳಗೋಡೆಯಲ್ಲಿ ನಾಲ್ಕು ಕಿಟಕಿಗಳು, ಅಲ್ಲಮಪ್ರಭುದೇವರ ಸಿಂಹಾಸನದ ಹಿಂದೆ ಒಂದು ಬಾಗಿಲನ್ನು ಹೊಂದಿದೆ. ಕಪ್ಪುಬಣ್ಣದ ಗಡಾಯಿ ಕಲ್ಲಿನಿಂದ ನಿರ್ಮಾಣಗೊಂಡ ಬೃಹತ್ ಗೋಡೆ ಕಂಡುಬರುತ್ತದೆ. ಇಡೀ ಚಿತ್ರವು ನೆಳಲು ಬೆಳಕಿನ ಸಂಯೋಜನೆಯನ್ನು ಹೊಂದಿದೆ.

ಬಹಳ ಸುಂದರವಾಗಿ ಚಿತ್ರಿಸಿದ ಚಿತ್ರವಿದು. ಅಸ್ಪಷ್ಟವಾಗಿದ್ದರೂ ಅನುಭವಮಂಟಪ ಹೇಗಿದ್ದೀತು? ಎಂಬ ಕುತೂಹಲವನ್ನು ತಣಿಸುವ ನಿಟ್ಟಿನಲ್ಲಿ ಈ ಚಿತ್ರದ್ದು ಮಹತ್ವದ ಪಾತ್ರ. ಕಲ್ಲಿನಂತಹ ಪೀಠದಲ್ಲಿ

ಅಲ್ಲಮಪ್ರಭುಗಳು ಆಸೀನರಾಗಿದ್ದು, ಎದುರಿನಲ್ಲಿ ಬಸವಣ್ಣನವರು, ಅಕ್ಕಮಹಾದೇವಿಯವರ ಸಂವಾದವನ್ನು ತದೇಕಚಿತ್ತದಿಂದ ಆಲಿಸುತ್ತಿರುವ ಅಲ್ಲಮಪ್ರಭುಗಳು, ಇವರೆಲ್ಲರ ಸಂವಾದವನ್ನು ಕುತೂಹಲದಿಂದ ನೋಡುತ್ತಿರುವ ಶರಣಗಣ. ಪ್ರಸ್ತುತ ಸನ್ನಿವೇಶಕ್ಕೆ ಪೂರಕವಾದ ಶರಣಸಂಪನ್ನ ಪರಿಸರವನ್ನು ಕಲಾವಿದರು ಅತ್ಯಂತ ನೈಜವಾಗಿ ಬಿಂಬಿಸಲು ಯತ್ನಿಸಿದ್ದಾರೆ. ಹಿನ್ನೆಲೆಯಲ್ಲಿ ನೆರಳಿನ ಮಹಾಮನೆಯಾಗಿ ಕಂಭಗಳ ನಡುವೆ ಸುಂದರವಾಗಿ ನಿರೂಪಿಸಲ್ಪಟ್ಟ ಅನುಭವ ಮಂಟಪ, ಮುನ್ನೆಲೆಯಲ್ಲಿ ಅನುಭವ ಮಂಟಪದ ಶರಣರ ನಡುವಿನ ಸಂವಾದ ಸನ್ನಿವೇಶ ಒಂದಕ್ಕೊಂದು ಬೆಸೆದುಕೊಂಡ ಹಾಗೆ ಚಿತ್ರಿತಗೊಂಡಿವೆ. ಬಹುಶಃ ಜಲವರ್ಣದಲ್ಲಿ ಚಿತ್ರಿಸಿದ ಈ ಕಲಾಕೃತಿ ಇನ್ನೂ ಸ್ಪಷ್ಟವಾಗಿದ್ದರೆ ಇದರ ಮಹತ್ವ ಇಮ್ಮಡಿಯಾಗಿ ನೂರ್ಮಡಿಯಾಗಿರುತ್ತಿತ್ತು.

೨.೭.೭. ಅನುಭವ ಮಂಟಪದಲ್ಲಿ ಪ್ರಭುದೇವರೊಂದಿಗೆ ಅಕ್ಕನ ಸಂವಾದ

ಕಲಾವಿದ ಬಸವರಾಜ ಮುಗಳಿ ಅವರ ೬೬"x೪೮" ಅಳತೆಯ ಈ ಕೃತಿಯು ತೈಲವರ್ಣದ (ಎನಾಮೆಲ್) ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಅನುಭವ ಮಂಟಪದ ಒಳಾಂಗಣವು ಎರಡು ಬಾಗಿಲುಗಳನ್ನು ಹೊಂದಿದೆ. ಎರಡು ಕಲ್ಯಾಣ ಚಾಲುಕ್ಯ ಶೈಲಿಯ ಕಂಬಗಳು ಬಾಗಿಲುಗಳ ಮಧ್ಯದಲ್ಲಿ ಶಿಲಾಬಾಲಕಿಯರನ್ನು ಹೋಲುವ ಅರೆಬೆತ್ತಲಿನ ಶಿಲ್ಪಶೈಲಿಯ ಚಿತ್ರಗಳನ್ನು ನಿಲ್ಲಿಸಿರುವ ರೀತಿಯಲ್ಲಿ ಚಿತ್ರಿಸಲಾಗಿದೆ. ಕಂಭಗಳ ಮಧ್ಯದಲ್ಲಿ ಅಚ್ಚುಕಟ್ಟಾದ ದುಂಡನೆಯ ಮೆಟ್ಟಿಲುಗಳು ಷಟ್‌ಸ್ಥಲಗಳನ್ನು ಸಂಕೇತಿಸುತ್ತಿವೆ. ಒಂದೊಂದು ಮೆಟ್ಟಿಲಿನ ಮೇಲೆ ಒಂದೊಂದು ಸ್ಥಲದ ಹೆಸರನ್ನು ಬರೆಯಲಾಗಿದೆ. ಮೆಟ್ಟಿಲುಗಳ ಮಧ್ಯದಲ್ಲಿ ಮೆಟ್ಟಿಲಿಗೆ ಹಾಸಿಗೆ ಹೊದಿಸಿದಂತೆ ವರ್ಣಸಂಯೋಜನೆ ಮಾಡಲಾಗಿದೆ. ಮೆಟ್ಟಿಲು ಹಾಸಿಗೆಯ ಅಂಚಿಗೆ ಕೆಂಪು ಬಣ್ಣವನ್ನು ಕೊಡಲಾಗಿದೆ. ಅಲ್ಲಮಪ್ರಭುದೇವರ ಪೀಠವು ಷಟ್‌ಸ್ಥಲದ ಮೆಟ್ಟಿಲುಗಳ ತುದಿಯಲ್ಲಿ ನಿರ್ಮಿತವಾಗಿದ್ದು, ಪೀಠದ ಹಿಂದೆ ಓಂ ಅಕ್ಷರಗಳನ್ನೊಳಗೊಂಡ ಚಿತ್ರದೊಂದಿಗೆ ಪ್ರಭಾವಳಿಯನ್ನು ರೂಪಿಸಲಾಗಿದೆ. ಸಿಂಹಾಸನದ ಎಡ ಮತ್ತು ಬಲಬದಿಯ ತೋಳುಗಳು ಹಕ್ಕಿಯ ಮುಖವನ್ನು ಹೊಂದಿವೆ. ಪ್ರಭುದೇವರ ಎಡಗಡೆಗೆ ಶರಣೆಯರ ಒಂದು ಗುಂಪು, ಬಲಗಡೆಗೆ ಶರಣರ ಒಂದು ಗುಂಪನ್ನು ಚಿತ್ರಿಸಲಾಗಿದೆ.

ಪ್ರಮುಖ ಶರಣರು ಮುಂದಿನ ಸಾಲಿನಲ್ಲಿ ಕುಳಿತಿದ್ದು ವಚನಗಳನ್ನು ಬರೆಯುವ ಕಾಯಕದಲ್ಲಿ ನಿರತರಾಗಿದ್ದು ಬಸವಣ್ಣನು ಕೈ ಮುಗಿದು ನಿಂತಿರುವ ದೃಶ್ಯ ಈ ಚಿತ್ರದಲ್ಲಿ ಎದ್ದು ಕಾಣಿಸುತ್ತದೆ. ಎಡಬದಿಯಲ್ಲಿರುವ ಪ್ರಮುಖ ಶರಣೆಯರು ಮುಂದಿನ ಸಾಲಿನಲ್ಲಿ ವಚನಗಳನ್ನು ಬರೆಯುವ ದೃಶ್ಯ ಕಂಡುಬರುತ್ತದೆ. ಈ ಚಿತ್ರದಲ್ಲಿ ಅಲ್ಲಮಪ್ರಭುದೇವರ ಎದುರಿನಲ್ಲಿ ಅಕ್ಕಮಹಾದೇವಿಯು ತನ್ನ ಕೇಶಗಳನ್ನು ದೇಹವಸ್ತ್ರಗಳನ್ನಾಗಿ ಧರಿಸಿ, ಪ್ರಭುದೇವರತ್ತ ಮೆಲ್ಲನೆ ಹೆಜ್ಜೆಗಳನ್ನಿಟ್ಟು ಸಾಗುತ್ತಿರುವುದು ಕಂಡುಬರುತ್ತದೆ. ಅಲ್ಲಮಪ್ರಭುದೇವರ ಎದುರಿನ ಬಲಭಾಗದಲ್ಲಿ ಕುಳಿತ ನಾಲ್ಕು ಜನ ಶರಣರಲ್ಲಿ ಮೂರು ಜನ ಶರಣರು

ಅಕ್ಕಮಹಾದೇವಿಯತ್ತ ನೋಡಿದರೆ, ಒಬ್ಬ ಶರಣನನ್ನು ಉಳಿದ ಮೂವರು ಶರಣರತ್ತ ಮುಖ ಮಾಡಿ ಏನನ್ನೋ ಹೇಳುತ್ತಿರುವಂತೆ ಚಿತ್ರಿಸಲಾಗಿದೆ. ಪ್ರಭುದೇವರ ಎದುರಿನ ಎಡಭಾಗದಲ್ಲಿ ಕುಳಿತ ಶರಣೆಯರಿಬ್ಬರಲ್ಲಿ ಒಬ್ಬಾಕೆ ಕಡುನೀಲಿ ಬಣ್ಣದ ಸೀರೆ ಧರಿಸಿದ್ದಾಳೆ. ಆ ಸೀರೆಗಿರುವ ಹಳದಿಬಣ್ಣದ ಅಂಚುಗಳಿಂದ ಕೂಡಿದ ಆಕರ್ಷಕ ಸೆರಗು ಗಮನಸೆಳೆಯುತ್ತದೆ. ಕೈಗಳಿಗೆ ಕೆಂಪುಬಣ್ಣದ ಬಳೆಗಳನ್ನು ಧರಿಸಿ ಕೈಮುಗಿಯುತ್ತಿರುವ ಚಿತ್ರಣ ಎದ್ದು ಕಾಣುತ್ತಿದೆ. ಎಡಭಾಗದಲ್ಲಿ ಕುಳಿತ ಶರಣೆಯರು ಕಾವಿ ಬಣ್ಣ, ಕೆಂಪು ಮಿಶ್ರಿತ ಕಾವಿಬಣ್ಣ, ಹಳದಿ ಹಸಿರು ಬಣ್ಣದ ಸೀರೆಗಳನ್ನು ಧರಿಸಿದ್ದಾರೆ. ಬಲಭಾಗದಲ್ಲಿ ಕುಳಿತ ಪ್ರಮುಖ ಶರಣರಲ್ಲಿ ಬಸವಣ್ಣ ಬಿಳಿಪಂಚೆ ಕೊರಳಲ್ಲಿ ಲಿಂಗವನ್ನು ಧರಿಸಿದ್ದಾನೆ.

ಈ ಚಿತ್ರದಲ್ಲಿ ವರ್ಣಸಂಯೋಜನೆಯ ಹಿಡಿತ ಅನನ್ಯವಾದುದು. ಮೂಲವರ್ಣಗಳನ್ನೂ ಸಹ ಮೃದುವಾಗಿಸಿಕೊಂಡು ಆಕೃತಿಗಳಿಗೆ ದುಡಿಸಿಕೊಂಡ ಬಗೆ, ಅನುಭವಮಂಟಪವನ್ನು ಸಮಗ್ರವಾಗಿ ತೋರ್ಪಡಿಸಿರುವ ಬಗೆಯೂ ಕೂಡ ಸಮರ್ಪಕವೇ. ಮಧ್ಯದಲ್ಲಿ ಷಟ್‌ಸ್ಥಲ ಪೀಠಾರೋಹಣ ಮಾಡಿದ ಅಲ್ಲಮಪ್ರಭುಗಳು, ಹಿಂಭಾಗದಲ್ಲಿ ಶರಣಗಣ, ಮುಂಭಾಗದಲ್ಲಿಯೂ ಸಹ ಶರಣ-ಶರಣೆಯರ ಮಧ್ಯೆ ಅಕ್ಕಮಹಾದೇವಿ. ಅನುಭವ ಮಂಟಪದ ಇತರ ಚಿತ್ರಗಳಿಗಿಂತ ತೀರಾ ವಿಭಿನ್ನ. ಚಾಲುಕ್ಯರ ಗುಹಾಂತರ ದೇವಾಲಯಗಳಲ್ಲಿ ಕಂಡುಬರುವ ಬೃಹತ್ ಶಿಲ್ಪಗಳನ್ನು ನೆನಪಿಸುವಂತಹ ಶಿಲ್ಪಗಳನ್ನು ಹಿನ್ನೆಲೆಯಲ್ಲಿ ಭಿತ್ತಿಗೆ ಆಸರೆಯಾಗಿ ಕೆತ್ತಿರುವುದನ್ನು ಇಲ್ಲಿ ಚಿತ್ರರೂಪದಲ್ಲಿ ತೋರ್ಪಡಿಸಿದ್ದಾರೆ. ಶಿಲ್ಪಗಳ ಮುಂಭಾಗದಲ್ಲಿ ಛಾವಣಿಗೆ ಆಸರೆಯಾಗಿ ಕಲ್ಲಿನ ಕಂಭಗಳು ಮೃದುವಾದ ವರ್ಣಗಳಿಂದ ರಚಿತಗೊಂಡಿವೆ. ಅಂಡಾಕಾರದಲ್ಲಿ ಸಂಯೋಜನೆಗೊಂಡ ಅನುಭವ ಮಂಟಪದ ಮುನ್ನೆಲೆಯ ಆಕೃತಿಗಳು ವಿವರಕ್ಕೆ ದಕ್ಕುತ್ತವೆ. ಜೊತೆಗೆ ಭಾವಪ್ರದವಾಗಿ, ಆಂಗಿಕವಾಗಿ ಪ್ರಬುದ್ಧ ರಚನೆಗಳೂ ಹೌದು.

೨.೭.೮. ಅನುಭವಮಂಟಪದಲ್ಲಿ ಬಸವಣ್ಣ-ಅಕ್ಕಮಹಾದೇವಿಯರ ಉಭಯಕುಶಲೋಪರಿ

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರವು ಅನುಭವಮಂಟಪದ ಒಳಾಂಗಣದಿಂದ ಹೊರಾಂಗಣದ ಪರಿಸರ ಕಾಣುವಂತೆ ಚಿತ್ರಿತವಾಗಿದ್ದು ವಿಶೇಷವಾಗಿದೆ. ಅಲ್ಲಮಪ್ರಭುದೇವರು ಶೂನ್ಯ ಪೀಠಾರೋಹಣ ಮಾಡಿದ್ದು, ಎದುರಿನಲ್ಲಿ ಬಿಳಿಬಣ್ಣದ ಅಂಗಿ, ಪಂಚೆಯನ್ನು, ಕೊರಳಿಗೆ ಇಷ್ಟಲಿಂಗವನ್ನು ಧರಿಸಿದ ಬಸವಣ್ಣ, ಕೇಶಾಂಬರವನ್ನು ಧರಿಸಿದ ಅಕ್ಕಮಹಾದೇವಿಯನ್ನು ಆತ್ಮೀಯವಾಗಿ ಕೈಹಿಡಿದು ಬರಮಾಡಿಕೊಳ್ಳುವ ಸನ್ನಿವೇಶದ ಸ್ಪಷ್ಟ ಚಿತ್ರಣವಿದೆ. ಅಷ್ಟೇ ಸಂತೋಷದ ಭಾವವನ್ನು ವ್ಯಕ್ತಪಡಿಸುವ ಅಕ್ಕಮಹಾದೇವಿಯ ಮುಖವನ್ನು ಇಲ್ಲಿ ಕಾಣಬಹುದು. ಅಲ್ಲಮಪ್ರಭುದೇವರ ಎಡಭಾಗದಲ್ಲಿ ಕಾವಿಬಣ್ಣದ ವಸ್ತ್ರಗಳನ್ನು ಧರಿಸಿ ಕುಳಿತ ಸಿದ್ಧರಾಮೇಶ್ವರ, ಎಡಭಾಗದ ಆಸನದಲ್ಲಿ ಕುಳಿತ ಚನ್ನಬಸವಣ್ಣ ಚಿತ್ರದ ಎರಡನೆಯ ಆಕರ್ಷಣೆಯಾಗಿದ್ದಾರೆ. ಅನುಭವಮಂಟಪವು ಕಲ್ಲಿನ ಕಂಬಗಳಿಂದ ನಿರ್ಮಿತವಾಗಿದ್ದು, ಕಲ್ಯಾಣ ಚಾಲುಕ್ಯರ ವಾಸ್ತು ಶೈಲಿಯನ್ನು ನೆನಪಿಸುತ್ತವೆ. ಅನುಭವಮಂಟಪಕ್ಕೆ ಹೊಂದಿಕೊಂಡ ಹೊರಾಂಗಣವು ಗಿಡಗಂಟೆಗಳಿಂದ

ಕೂಡಿದ್ದು, ಪೀಠದ ಹಿಂದಿನ ಭಾಗದ ಆಕಾಶವನ್ನು ಸ್ಪಷ್ಟವಾಗಿ ಕಾಣುವಂತೆ ಚಿತ್ರಿಸಲಾಗಿದೆ. ಅನುಭವ ಮಂಟಪದ ಮುಂಭಾಗದಲ್ಲಿ ಎಡಬದಿಯಲ್ಲಿ ಇಬ್ಬರು ಶರಣರು ಬಿಳಿ ಅಂಗಿ, ತಲೆಗೆ ಬಿಳಿಬಣ್ಣದ ಚಿಕ್ಕ ರುಮಾಲನ್ನು ಧರಿಸಿ ಕುಳಿತಿರುವುದನ್ನು ಕಾಣುತ್ತೇವೆ. ಅಂತೆಯೇ ಎಡಬದಿಯಲ್ಲಿ ಒಬ್ಬಳು ಶರಣೆ ಹಸಿರು ಸೀರೆಯನ್ನು ಧರಿಸಿ ಕೈಮುಗಿದು ಕುಳಿತಿರುವ ದೃಶ್ಯ ಕಾಣಿಸುತ್ತದೆ.

ಹೊರಗಿನ ಪರಿಸರದಲ್ಲಿ ಬೆಳಕಿದ್ದರೂ, ಒಳಾಂಗಣ ಮಾತ್ರ ದಟ್ಟ ನೆರಳಿನಲ್ಲಿ ಅನುಭವಮಂಟಪದ ಸನ್ನಿವೇಶವನ್ನು ಕಟ್ಟಿಕೊಡಲಾಗಿದೆ. ಶೂನ್ಯಪೀಠಾರೋಹಣ ಮಾಡಿದ ಅಲ್ಲಮಪ್ರಭುಗಳು ಸೂಚ್ಯವಾಗಿ ಗೋಚರವಾದರೆ, ಕಲಾಕೃತಿಯ ಪ್ರಧಾನ ಆಶಯವಾಗಿ ಬಸವಣ್ಣ, ಅಕ್ಕಮಹಾದೇವಿ ಅತ್ಯಂತ ಆತ್ಮೀಯವಾಗಿ ಪರಸ್ಪರ ಕೈಗಳನ್ನು ಹಿಡಿದು ಉಭಯಕುಶಲೋಪರಿಯೊಂದಿಗೆ ಸಂಭಾಷಿಸುತ್ತಿರುವ ದೃಶ್ಯ ಚಿತ್ರಿತವಾಗಿದೆ. ಪರಸ್ಪರರ ದೃಷ್ಟಿಗಳು ವಿಭಿನ್ನ ಕೋನದಲ್ಲಿ ಚಿತ್ರಿತಗೊಂಡಿವೆ. ಎರಡೂ ಪಾರ್ಶ್ವಗಳಲ್ಲಿ ಚಿತ್ರಿತಗೊಂಡಿರುವ ಶರಣಸಂಕುಲವನ್ನು ಅಂಡಾಕಾರದಲ್ಲಿ ಎನ್ನುವುದಕ್ಕಿಂತ ಚಕ್ರದ ರೂಪದಲ್ಲಿ ಇಲ್ಲಿನ ಆಕೃತಿಗಳ ರಚನೆಗೊಂಡಿವೆ. ತಕ್ಕಮಟ್ಟಿಗೆ ಭಾವಪ್ರದವಾಗಿರುವ ಚಿತ್ರವು ಬೆಳಕಿನ ಛಾಯೆಯನ್ನು ಬೇಡುತ್ತಿರುವಂತೆ ಹಾಗೂ ಯಥಾರ್ದರ್ಶನ ರಚನಾತಂತ್ರದಲ್ಲಿ ಪಕ್ವತೆಯನ್ನು ಬಯಸುವಂತೆ ಭಾಸವಾಗುತ್ತಿದೆ.

೨.೭.೯. ಸಿದ್ಧರಾಮನಿಗೆ ಲಿಂಗದೀಕ್ಷೆ

ಈ ದೃಶ್ಯದಲ್ಲಿ "ಅಲ್ಲಮಪ್ರಭು ಬಸವಣ್ಣ ಮೊದಲಾದ ಅಸಂಖ್ಯಾತ ಪ್ರಮಥರು ಭಾಗವಹಿಸಿದ್ದು ಚನ್ನಬಸವಣ್ಣನು ಸಿದ್ಧರಾಮನ ಮುಕುಟವೆನ್ನಿತ್ತಿದ ಕೂಡಲೇ ಅಲಂಕೃತವಾದ ತಂಡೊಲದ ಚೌಕ ಮಧ್ಯವು ರಚಿತವಾಯಿತು. ಈ ಕಲಾಕೃತಿಯು ಉತ್ತಮ ಸಂಯೋಜನೆಯಿಂದ ರಚನೆಗೊಂಡಿದ್ದು. ಅನುಭವ ಮಂಟಪದ ಅಧ್ಯಕ್ಷರಾದ ಅಲ್ಲಮ ಪ್ರಭುವಿನ ಅಧ್ಯಕ್ಷತೆಯಲ್ಲಿ ಬಸವಣ್ಣ ಆದಿ ಆಗಿ ಶಿವಶರಣರ ಮಧ್ಯದಲ್ಲಿ ಚನ್ನಬಸವಣ್ಣ ಸಿದ್ರಾಮನಿಗೆ ಮಂಟಪ ರಚಿಸಿ. ಅದರಲ್ಲಿ ಕೂಡಿಸಿ ಪಂಚ ಕಳಸಹೂಡಿ ಶಾಸ್ತ್ರೋತ್ಸವವಾಗಿ ದೀಕ್ಷೆಯನ್ನು ನೀಡುತ್ತಿರುವ ದೃಶ್ಯ ಶಿವಶರಣರ ಬಳಗವೆಲ್ಲಾ ತದೇಕಚಿತ್ತದಿಂದ ಈ ದೀಕ್ಷಾ ಸಂದರ್ಭದ ದೃಶ್ಯವನ್ನು ವೀಕ್ಷಿಸುತ್ತಿದ್ದು ಅನುಭವ ಮಂಟಪ ಸಿಂಹಾಸನ ರೂಢನಾದ ಅಲ್ಲಮಪ್ರಭು ಎಲ್ಲವೂ ಉತ್ತಮವಾಗಿಯೇ ದೃಶ್ಯ ಮೂಡಿಬಂದಿದೆ. ಈ ಚಿತ್ರದಲ್ಲಿ ತನ್ನ ಹೃದಯವನ್ನು ಬಗಿದು ಬಸವೇಶನನ್ನು ತೋರಿಸಿದನು ಎಂದು ಹೇಳಿ ಸಿದ್ರಾಮೇಶನು ಮಹಾತ್ಮೆಯನ್ನು ಕೊಂಡಾಡಿದನು. ಇದನ್ನು ಕೇಳಿ ಸಿದ್ರಾಮನು ಗುರು ಚನ್ನಬಸವೇಶ ನಿಮ್ಮ ಭೃತ್ಯರ ಭೃತ್ಯನೆಂದು ನನ್ನನ್ನು ಭಾವಿಸಿ ನನಗೆ ಇಷ್ಟಲಿಂಗವನ್ನು ಪಾಲಿಸಿ"[೯೫] ಎಂದನು. ಈ ಚಿತ್ರದಲ್ಲಿ ವರ್ಣಗಾರಿಕೆ ವ್ಯಕ್ತಿಗಳ ವೈಶಿಷ್ಟ್ಯಕ್ಕನುಗುಣವಾಗಿ ಸ್ಥಳಗಳ ವಿಂಗಡಣೆ ಹಾಗೂ ಜೋಡಣೆ ವಿಶಿಷ್ಟವಾಗಿ ಮೂಡಿಬಂದಿದೆ. ಈ ದೃಶ್ಯದಲ್ಲಿ ಅನುಭವ ಮಂಟಪದ ಅಲ್ಲಮ ಪ್ರಭುವಿನ ಪೀಠ ಬಂಗಾರ ವರ್ಣ ಲೇಪಿಸಿದಂತೆ ಕಂಡುಬಂದಿದೆ. ಅಲ್ಲಮಪ್ರಭು ವಿಶಿಷ್ಟ ಶೈಲಿಯಲ್ಲಿ ಕುಳಿತಿರುವ ಭಂಗಿ ಅಲ್ಲಮಪ್ರಭು ದೇವರು ಪೂಜೆಯ ವಿಧಾನ ವೀಕ್ಷಿಸುವಂತೆ ಎದ್ದು ಕಂಡುಬರುತ್ತದೆ. ಈ ಮಂಟಪದಲ್ಲಿ ಶರಣೆಯರು ಭಾಗವಹಿಸಿದ್ದು ಇಡೀ ಚಿತ್ರವು ಸುಂದರವಾಗಿ ರಚಿಸಲಾಗಿದೆ.

---

೯೫. ವೀರಭದ್ರಪ್ಪ ಹಾಲಭಾವಿ (ಸಂ.) : ವಿರುಪಾಕ್ಷ ಪಂಡಿತ ಕೃತಿ: ಚನ್ನಬಸವ ಪುರಾಣ, ಪು–೭೧

೨.೮. ಬಸವಣ್ಣನವರ ಪಾದುಕಾ ಪ್ರಸಂಗದ ವರ್ಣಚಿತ್ರಗಳು

ಭಕ್ತಿ, ನಿಷ್ಠೆ, ಪ್ರೀತಿ, ಪ್ರೇಮಗಳ ಪರಾಕಾಷ್ಠೆಯನ್ನು ಬಿಂಬಿಸುವ ಪ್ರಸಂಗವಿದು. ಇಡೀ ವಿಶ್ವಸಾಹಿತ್ಯದಲ್ಲಿಯೇ ಇಂತಹದೊಂದು ಸನ್ನಿವೇಶವನ್ನು ಕಾಣಲಾಗುವುದಿಲ್ಲ. ಯಾರ ಮೇಲೆ ಯಾರೂ ದಬ್ಬಾಳಿಕೆ ಮಾಡುವುದಿಲ್ಲ. ಅರ್ಪಣಾಭಾವವು ಎಂತಹ ಪ್ರಭಾವಶಾಲಿಯಾದುದು ಎನ್ನುವುದನ್ನು ಹರಳಯ್ಯ, ಆತನ ಹೆಂಡತಿ ಬಸವಣ್ಣನಿಗೆ ತೋರಿದ ಪ್ರೀತಿ, ನಿಷ್ಠೆ, ಅವರ ಪ್ರೀತಿ, ನಿಷ್ಠೆಗೆ ಪ್ರತಿಯಾಗಿ ಬಸವಣ್ಣ ನಡೆದುಕೊಳ್ಳುವ ರೀತಿಯೂ ಅಷ್ಟೇ ಮಹತ್ವದ್ದಾಗಿದೆ. ಬಸವಣ್ಣನ ಇದಿರಿಗೆ ಹರಳಯ್ಯ ಬರುತ್ತಾನೆ. ಆತನನ್ನು ಕಂಡಕೂಡಲೆ ಹರಳಯ್ಯ ಶರಣು ಎನ್ನುತ್ತಾನೆ. ಪ್ರತಿಯಾಗಿ ಬಸವಣ್ಣ ಶರಣು ಶರಣು ಎಂದು ಎರಡು ಸಾರಿ ಹೇಳಿದಾಗ ಇದರಿಂದ ಮನನೊಂದ ಹರಳಯ್ಯ ಬಸವಣ್ಣ ಒಂದು ಸಾರಿ ಶರಣು ಎಂದಿದ್ದಕ್ಕೆ ಶರಣು ಎಂದ. ಸರಿ, ಮತ್ತೊಂದು ಸಾರಿ ಶರಣು ಎಂದು ಹೇಳಿದ್ದು ಅಧಿಕವಾಯಿತು. ಯಾಕೆ ಇನ್ನೊಂದು ಸಾರಿ ಬಸವಣ್ಣ ಹೀಗೆ ಹೇಳಿದ ಎಂದ ಚಿಂತಗೊಳಗಾಗುತ್ತಾನೆ.

ತಪ್ಪು ಮಾಡಿದ ಭಾವನೆಗೆ ಒಳಗಾಗಿ ತನ್ನ ಹೆಂಡತಿಯ ತೊಡೆಯ ಭಾಗದಿಂದ ಚರ್ಮವನ್ನು ತೆಗೆದು ಪಾದುಕೆಗಳನ್ನು ಮಾಡಿ ಬಸವಣ್ಣನಿಗೆ ಅರ್ಪಿಸಲು ಬರುತ್ತಾನೆ. ಮಹಾಮನೆಯ ಮುಂದೆ ಬಸವಣ್ಣ ಹರಳಯ್ಯನನ್ನು ಅಪ್ಪಿಕೊಳ್ಳುತ್ತಾನೆ. ನಾನು ಹೊಲೆಯ, ನನ್ನನ್ನು ಮುಟ್ಟಬೇಡ ಎಂದು ಹರಳಯ್ಯ ಹೇಳುತ್ತಾನೆ. ಅದಕ್ಕೆ ಬಸವಣ್ಣ ಹೊಲೆತನದಿಂದಲೇ ಜಗತ್ತು ಹುಟ್ಟಿದೆ, ಹರಭಕ್ತರಿಗೆ ಹೊಲೆ ಎಂಬುದಿಲ್ಲ ಎಂದಾಗ, ಹರಳಯ್ಯ ಹಾಗಾದರೆ ನಾನು ತಂದ ಪಾದುಕೆಗಳನ್ನು ನೀನು ಮೆಟ್ಟಿಕೊ ಎನ್ನುತ್ತಾನೆ. ಬಸವಣ್ಣ, ಇವು ನಾನು ತೊಡುವ ಪಾದರಕ್ಷೆಗಳಲ್ಲ, ಶಿವನು ಧರಿಸುವ ಶ್ರೇಷ್ಠವಾದ ಪಾದರಕ್ಷೆಗಳಿವು ಎಂದು ಹೇಳಿ ಪಾದರಕ್ಷೆಗಳನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡು ಗೌರವ ಸೂಚಿಸುವ ಪ್ರಸಂಗವನ್ನು ಕೆಲವು ಕವಿಗಳು ಹೇಳಿದರೆ, ನಂಜುಂಡ ಕವಿ ತನ್ನ ಯಕ್ಷಗಾನದಲ್ಲಿ ಆ ಪಾದುಕೆಗಳು ಶಿವನಿಗೆ ಅರ್ಹವಾದವು ಎಂದು ಹೇಳಿ ಅವುಗಳನ್ನು ಹರಳಯ್ಯನಿಗೆ ಮರಳಿಸುವಂತೆ ನಿರೂಪಿಸಿದ್ದಾನೆ. ಪ್ರಸ್ತುತ ಕಲಾವಿದರ ಕಲ್ಪನೆಯಲ್ಲಿ ಈ ಘಟನೆಯು ಹೇಗೆ ಅಭಿವ್ಯಕ್ತವಾಗಿದೆ ಎಂಬುದನ್ನು ಕೆಳಗಿನ ಚಿತ್ರಪಠ್ಯಗಳ ಮೂಲಕ ನೋಡಬಹುದು. ಈ ವಿಷಯಕ್ಕೆ ಸಂಬಂಧಿಸಿದಂತೆ ಒಟ್ಟು ಮೂರು ಕಲಾಕೃತಿಗಳು ಲಭ್ಯವಾಗಿವೆ. ಕಲಾವಿದ ಬಸವರಾಜ ಮುಗಳಿಯವರು ೪೮"x೩೬" ಅಳತೆಯ ತೈಲವರ್ಣದ (ಎನಾಮೆಲ್) ಮಾಧ್ಯಮದಲ್ಲಿ ರಚಿಸಿದವುಗಳಾಗಿವೆ. ಪ್ರಸ್ತುತ ಈ ಕಲಾಕೃತಿಗಳು ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿವೆ.

೨.೮೧. ಹರಳಯ್ಯನಿಗೆ ಶರಣಾರ್ಥಿ ಎಂದ ಬಸವಣ್ಣ

ಈ ಚಿತ್ರದಲ್ಲಿ ಶರಣ ಹರಳಯ್ಯನು ತನ್ನ ತೊಡೆಯ ಚರ್ಮದಿಂದ ಪಾದರಕ್ಷೆಗಳನ್ನು ತಯಾರಿಸಿ ಬಸವಣ್ಣನಿಗೆ ಸಮರ್ಪಿಸಲು ಬಂದ ಸನ್ನಿವೇಶವನ್ನು ಕಲಾವಿದ ಚಿತ್ರಿಸಲು ಪ್ರಯತ್ನಿಸಿದ್ದಾನೆ. ಆದರೆ ಇದರಲ್ಲಿ ಸಂಪೂರ್ಣ ಯಶಸ್ವಿಯಾಗಿಲ್ಲ. ಪಾದರಕ್ಷೆಗಳನ್ನು ಬಸವಣ್ಣನಿಗೆ ಸಮರ್ಪಿಸಲು ಬಂದ ಹರಳಯ್ಯ ಆ ಜೋಡುಗಳನ್ನು ಕೈಯಲ್ಲಿಡಿದು ಸಮರ್ಪಣಾಭಾವದಿಂದಿರಬೇಕಾಗಿತ್ತು. ಇಲ್ಲವೇ ಆ ಜೋಡುಗಳನ್ನು

ಬಸವಣ್ಣನವರ ಪಾದಗಳ ಬಳಿಯೇ ಇಟ್ಟಿರುವಂತೆ ಚಿತ್ರಿಸಬೇಕಾಗಿತ್ತು. ಈ ರೀತಿಯಾಗಿರದೆ ಜೋಡುಗಳು ಹರಳಯ್ಯನವರ ಪಾದದ ಬಳಿಯೇ ಇರುವುದರಿಂದ ಹರಳಯ್ಯ ತಾನು ಮೆಟ್ಟಿರುವ ಜೋಡುಗಳನ್ನು ಕಳಚಿ ಬಸವಣ್ಣನವರಿಗೆ ನಮಸ್ಕರಿಸುವಂತೆ ಮಾತ್ರ ಇಲ್ಲಿ ಕಾಣಿಸುತ್ತದೆ. ಹಾಗಾಗಿ ಚಿತ್ರದ ನಿರ್ದಿಷ್ಟ ಉದ್ದೇಶ ಸಫಲವಾಗಿಲ್ಲ. ಈ ಘಟನೆಯು ರಾಜಬೀದಿಯಲ್ಲಿ ನಡೆದಿರುವಂತೆ ಕಂಡುಬರುತ್ತದೆ.

ಅಲಂಕೃತ ಕೆಂಪುಬಣ್ಣದ ಅಂಚುಳ್ಳ ಗಾಢವಾದ ಹಳದಿಬಣ್ಣದ ನಿಲುವಂಗಿ, ಬಿಳಿ ಪಂಚೆ, ಕೆಂಪುಬಣ್ಣದ ಪಾದರಕ್ಷೆಗಳು, ತಲೆಯಲ್ಲಿ ಬಂಗಾರದ ಕಿರೀಟ, ಕೊರಳಲ್ಲಿ ಇಷ್ಟಲಿಂಗವನ್ನು ಧರಿಸಿದ ಬಸವಣ್ಣ ಕುದುರೆಯ ಪಕ್ಕಕ್ಕೆ ನಿಂತಿದ್ದಾನೆ. ಬಹುಶಃ ಕುದುರೆಯ ಮೇಲೆ ಹೊರಟ ಬಸವಣ್ಣ ಹರಳಯ್ಯನನ್ನು ಕಂಡು ಕುದುರೆಯಿಂದ ಕೆಳಗಿಳಿದು ನಿಂತು ಆತನಿಗೆ ತನ್ನೆರಡು ಕೈಗಳನ್ನು ಜೋಡಿಸಿ ನಮಸ್ಕರಿಸುವಂತೆ ಚಿತ್ರಪಠ್ಯವು ಸನ್ನಿವೇಶವನ್ನು ನೋಡುಗರಿಗೆ ಮನವರಿಕೆ ಮಾಡಿಕೊಡುತ್ತದೆ. ಬಸವಣ್ಣನ ಮುಖವು ಧನ್ಯತಾಭಾವವನ್ನು ಪ್ರಕಟಿಸುವಂತಿದೆ. ಎದುರಿಗೆ ನಿಂತ ಹರಳಯ್ಯ ಕಪ್ಪು ಕೂದಲನ್ನು ತಲೆಯ ಹಿಂದಕ್ಕೆ ಚಾಚಿ ಬಾಚಿಕೊಂಡು, ಗಡ್ಡ ಮೀಸೆಗಳನ್ನು ಹೊಂದಿದ್ದಾನೆ. ಬಿಳಿ ಬಣ್ಣದ ಪಂಚೆ, ಮೇಲುದವನ್ನು ಮಾತ್ರ ಧರಿಸಿದ ಹರಳಯ್ಯನ ಪಾದದ ಕೆಳಗೆ ಹೊಸದಾಗಿ ರಚಿಸಿದ ಪಾದರಕ್ಷೆಗಳನ್ನು ಕಾಣುತ್ತೇವೆ. ಅವುಗಳನ್ನು ಸ್ವೀಕರಿಸುವಂತೆ ಹರಳಯ್ಯ ಬಸವಣ್ಣನನ್ನು ಕೇಳುತ್ತಿದ್ದಾನೆ. ಹಸಿರು ಮಿಶ್ರಿತ ಬಿಳಿಬಣ್ಣದ ಕುದುರೆಯು ಸರಳವಾಗಿ ಅಲಂಕೃತವಾಗಿದೆ. ಅದರ ಕಣ್ಣು, ಲಗಾಮು, ತಲೆಯಿಂದ ಬೆನ್ನವರೆಗೆ ಹರಡಿದ ಕೂದಲುಗಳ ಗುಚ್ಛ, ಅಚ್ಚುಕಟ್ಟಾಗಿ ರೂಪುಗೊಂಡಿದೆ. ನೆಲಕ್ಕೆ ಕಡುಹಸಿರು ಬಣ್ಣವನ್ನು, ಹಿನ್ನೆಲೆಗೆ ತಿಳಿಹಸಿರು ಬಣ್ಣದಿಂದ ಕೂಡಿದ ಒಂದು ಅಂತಸ್ತಿನ ಮಹಾಮನೆಯನ್ನು ಚಿತ್ರಿಸಲಾಗಿದೆ. ಬೀದಿಯಲ್ಲಿ ವಿರಳವಾದ ಜನಸಂಚಾರ ಇರುವಂತೆ ಕಲಾವಿದ ಚಿತ್ರಿಸಿರುವ ರೀತಿ ಗಮನಸೆಳೆಯುತ್ತದೆ. ಯಥಾದರ್ಶನದ ರಚನಾ ತಂತ್ರವನ್ನು ಸಮರ್ಪಕವಾಗಿ ಒಳಗೊಳ್ಳದ ಈ ಚಿತ್ರ ಆಕೃತಿಗಳಲ್ಲಿಯೂ ಸಹ ಸನ್ನಿವೇಶಕ್ಕೆ ಪೂರಕವಾದ ರಚನೆಯಿಲ್ಲ. ಭಕ್ತಿಯಿಂದ ಪರಸ್ಪರ ಶರಣೆನ್ನುವ ಹರಳಯ್ಯ ಬಸವಣ್ಣನವರ ಆಕೃತಿಗಳು ಮುನ್ನೆಲೆಯಲ್ಲಿ ಸಂಯೋಜನೆಗೊಂಡಿದ್ದರೆ, ಹಿನ್ನೆಲೆಯಲ್ಲಿ ಕಲ್ಯಾಣದ ಶ್ರೀಮಂತಿಕೆಯ ವೈಭವ ಸೂಚಕವಾದ ಒಂದಂತಸ್ತಿನ ಕಟ್ಟಡವನ್ನು ಚಿತ್ರಿಸಿದ್ದು ಅಭಾಸವೆನಿಸುತ್ತದೆ.

೨.೮.೨. ಬಸವಣ್ಣನಿಗೆ ಪಾದುಕೆ ನೀಡುತ್ತಿರುವ ಹರಳಯ್ಯ

ಪ್ರಸ್ತುತ ಚಿತ್ರವು ಹರಳಯ್ಯ ದಂಪತಿಗಳು ಗಂಗಾಂಬಿಕೆ, ನೀಲಾಂಬಿಕೆಯರ ಜೊತೆಯಿರುವ ಬಸವಣ್ಣನಿಗೆ ತಮ್ಮ ತೊಡೆಯ ಚರ್ಮದಿಂದ ತಯಾರಿಸಿದ ಹೊಸ ಪಾದರಕ್ಷೆಗಳನ್ನು ನೀಡುತ್ತಿರುವ ಸನ್ನಿವೇಶವನ್ನು ಒಳಗೊಂಡಿದೆ. ಇದು ಎನಾಮಲ್ ಪೇಂಟ್ ಸಂಪ್ರದಾಯಕ್ಕೆ ಸೇರಿದ ಚಿತ್ರವಾಗಿದ್ದು ಘಟನೆಯನ್ನು ತುಂಬ ಹತ್ತಿರದಿಂದ ನೋಡುತ್ತಿರುವಂತೆ (ಕ್ಲೋಸ್ ಅಪ್)ಕಲಾವಿದ ರಚಿಸಿದ್ದಾನೆ. ತೆಳುಹಸಿರು ಬಿಳಿಬಣ್ಣದ ಮಿಶ್ರಣದಿಂದ ಕೂಡಿದ ಪಂಚೆ, ಮೇಲುಹೊದಿಕೆಯನ್ನು ಧರಿಸಿದ ಬಸವಣ್ಣ ಮಟ್ಟಸವಾದ ಕಪ್ಪು ಕೂದಲು, ಹಣೆಯಲ್ಲಿ ನೀಟಾಗಿ ಧರಿಸಿದ ವಿಭೂತಿ, ಭ್ರೂಮಧ್ಯದಲ್ಲಿ ಭಸ್ಮದ ಬೊಟ್ಟು, ಕಿವಿಯಲ್ಲಿ ರುದ್ರಾಕ್ಷಿಯ ಓಲೆ, ಕೊರಳಲ್ಲಿ ಇಷ್ಟಲಿಂಗದ ಕೆಂಪುವಸ್ತ್ರದ ಗಂಟು, ರುದ್ರಾಕ್ಷಿ ಮಾಲೆ ಧರಿಸಿದ ಬಸವಣ್ಣ ದೇಹವನ್ನು ಸ್ವಲ್ಪ ಬಾಗಿಸಿ ಕಣ್ಣುಗಳನ್ನು ಅರ್ಧಮುಚ್ಚಿ, ಪ್ರೀತಿ ಮತ್ತು ಸಂತೃಪ್ತ ಭಾವದಿಂದ ಹರಳಯ್ಯನು

ತಟ್ಟೆಯಲ್ಲಿ ನೀಡಿದ ಕೆಂಪುಬಣ್ಣದ ವಿಶೇಷವಾಗಿ ರಚಿಸಿದ ಪಾದರಕ್ಷೆಗಳನ್ನು ಸ್ವೀಕರಿಸುತ್ತಿರುವುದು ನೈಜವಾಗಿ ಮೂಡಿಬಂದಿದೆ. ಬಂಗಾರದ ಅಂಚಿನಿಂದ ಕೂಡಿದ ಕಡುಕೆಂಪು ವರ್ಣದ ಸೀರೆಯನ್ನು ಧರಿಸಿದ ಗಂಗಾಂಬಿಕೆಯು ಬಸವಣ್ಣನ ಬಲಬದಿಗೆ ನಿಂತಿದ್ದಾಳೆ. ಹಣೆಯಲ್ಲಿ ವಿಭೂತಿ ಧರಿಸಿದ ಆಕೆ ಎರಡೂ ಕೈಗಳನ್ನು ಮುಗಿದು ಹರಳಯ್ಯ ದಂಪತಿಗಳತ್ತ ನೋಟ ಬೀರಿದ್ದಾಳೆ. ಕಣ್ಣುಗಳು ತುಂಬ ಆಕರ್ಷಣೆಯನ್ನು ಹೊಂದಿವೆ. ಸೂಕ್ಷ್ಮವಾಗಿ ಗಮನಿಸಿದರೆ, ಮೂಗಿನಲ್ಲಿ ಧರಿಸಿರುವ ಮೂಗುತಿಯು ಹೊಳೆಯುವುದು ಕಾಣುತ್ತದೆ. ಬಸವಣ್ಣನ ಎಡಭಾಗದಲ್ಲಿ ಕಿರಿಯವಳಾದ ನೀಲಾಂಬಿಕೆಯು ತಿಳಿಹಸಿರು ಮಿಶ್ರಿತ ಬಿಳಿಬಣ್ಣದ ಸೀರೆಯನ್ನು ಧರಿಸಿದ್ದು, ಹೊಳೆಯುವ ಹಸಿರುಬಣ್ಣದ ಕುಪ್ಪಸವನ್ನು ಧರಿಸಿದ್ದಾಳೆ. ಕಲಾವಿದ ಕುಪ್ಪಸದ ಹೊಳಪನ್ನು ಕಲಾತ್ಮಕವಾಗಿ ಚಿತ್ರಿಸಿದ್ದಾನೆ. ತಲೆಯ ಅರ್ಧಭಾಗಕ್ಕೆ ಹೊದ್ದ ಸೆರಗು, ಧನ್ಯತಾಭಾವವನ್ನು ಸೂಸುವ ಮುಖ, ಮುಗಿದ ಎರಡೂ ಕೈಗಳು ಸನ್ನಿವೇಶವನ್ನು ಸ್ಪಷ್ಟಪಡಿಸುತ್ತವೆ.

ಬಸವಣ್ಣನ ಎದುರಿಗೆ ನಿಂತಿರುವ ಹರಳಯ್ಯ ದಂಪತಿಗಳಲ್ಲಿ, ಹರಳಯ್ಯನು ಪಂಚೆ, ಮೇಲುವಸ್ತ್ರವನ್ನು ಮಾತ್ರ ಧರಿಸಿದ್ದಾನೆ. ಮಟ್ಟಸವಾಗಿ ಬಾಚಿದ ಕಂದುಬಣ್ಣದ ಕೂದಲು, ಗಡ್ಡ ಮೀಸೆ, ಕೋಲುಮುಖವನ್ನು ಹೊಂದಿರುವ ಆತನ ಮುಖಭಾವವು ಪಾದುಕೆಗಳನ್ನು ಅರ್ಪಿಸಿದ ಧನ್ಯತಾ ಭಾವವನ್ನು ಹೊರಸೂಸುತ್ತಿದೆ. ಆತನ ಪಕ್ಕದಲ್ಲಿರುವ ಹರಳಯ್ಯನ ಹೆಂಡತಿಯು ತಿಳಿಹಸಿರು ಬಣ್ಣದ ಸೀರೆಯನ್ನು ಉಟ್ಟಿದ್ದು ಆಕೆಯೂ ಕೋಲುಮುಖವನ್ನು ಹೊಂದಿ ಭಯ-ಭಕ್ತಿಗಳಿಂದ ಬಸವಣ್ಣನೆಡೆಗೆ ನೋಡುತ್ತಿರುವಂತೆ ಕಲಾವಿದ ಉತ್ತಮವಾಗಿ ಸನ್ನಿವೇಶವನ್ನು ನಿರೂಪಿಸಿದ್ದಾನೆ. ಪ್ರಸ್ತುತ ಚಿತ್ರದ ವಿಶ್ಲೇಷಣೆಯನ್ವಯ ಈ ಚಿತ್ರದಲ್ಲಿರುವ ಆಕೃತಿಗಳು ಎಡಪಾರ್ಶ್ವದಿಂದ ಬಲಪಾರ್ಶ್ವದೆಡೆಗೆ ಇಳಿಕೆಕ್ರಮದಲ್ಲಿ ಸಂಯೋಜನೆಗೊಂಡಿವೆ. ಚಿತ್ರದಲ್ಲಿರುವ ಐದು ಮಾನವಾಕೃತಿಗಳನ್ನು ಆಂಗಿಕವಾಗಿ ಶಕ್ತವಾಗಿಸುವ, ಭಾವಪ್ರದವಾಗಿಸುವ ನಿಟ್ಟಿನಲ್ಲಿ ಕಲಾವಿದರ ಶ್ರಮ ಬೇಕಿತ್ತು. ಇದ್ದುದರಲ್ಲಿಯೇ ಕಲ್ಯಾಣದ ಅಥವಾ ಅನುಭವಮಂಟಪದ ಹಿನ್ನೆಲೆಯನ್ನು ಸೂಚ್ಯವಾಗಿ ತೋರಿಸುವದಕ್ಕೂ ಅವಕಾಶವಿತ್ತು. ಒಟ್ಟಿನಲ್ಲಿ ಚಿತ್ರವು ಇದ್ದುದರಲ್ಲಿಯೇ ಭಾವಪ್ರದವಾಗಿದೆ.

೨.೮.೩. ಹರಳಯ್ಯ ತಂದ ಪಾದುಕೆಗಳನ್ನು ತನ್ನ ತಲೆಯ ಮೇಲೆ ಹೊತ್ತ ಬಸವಣ್ಣ

ಈ ಚಿತ್ರವು ಹರಳಯ್ಯ ದಂಪತಿಗಳು ನೀಡಿದ ಪಾದುಕೆಗಳನ್ನು ಬಸವಣ್ಣ ತನ್ನ ತಲೆಯ ಮೇಲೆ ಹೊತ್ತುಕೊಂಡಿರುವ ಸನ್ನಿವೇಶವನ್ನು ನಿರೂಪಿಸುತ್ತದೆ. ಈ ಚಿತ್ರದಲ್ಲಿ ಲಘು ಕಾವಿ, ದಟ್ಟ ಹಸಿರು, ತಿಳಿಹಸಿರು, ಬಿಳಿಬಣ್ಣಗಳ ಸಂಯೋಜನೆ, ಬಳಕೆಯನ್ನು ಕಾಣುತ್ತೇವೆ. ಬಂಗಾರದ ಅಂಚನ್ನುಳ್ಳ ಪಂಚೆ, ತೆಳುಗುಲಾಬಿ ಬಣ್ಣದ ನಿಲುವಂಗಿ, ಕೊರಳಲ್ಲಿ ತಿಳಿಗೆಂಪು ಬಣ್ಣದ ವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗ, ರುದ್ರಾಕ್ಷಿ ಮಾಲೆಯನ್ನು ಧರಿಸಿದ ಬಸವಣ್ಣ ತನ್ನ ತಲೆಯ ಮೇಲೆ ಹರಳಯ್ಯ-ಕಲ್ಯಾಣಮ್ಮ ದಂಪತಿಗಳು ನೀಡಿದ ಪಾದರಕ್ಷೆಗಳನ್ನು ಹೊತ್ತು ನಿಂತಿದ್ದಾನೆ. ಮುಖದಲ್ಲಿ ಧನ್ಯತಾ ಭಾವವು ಪ್ರಕಟಗೊಂಡಿದೆ. ಬಸವಣ್ಣನ ಎಡಬದಿಯಲ್ಲಿ ದಟ್ಟವಾದ ಹಸಿರುಬಣ್ಣದ ಸೀರೆಯನ್ನು ಧರಿಸಿದ ಗಂಗಾಂಬಿಕೆ ತೆಳು ಹಸಿರು, ಬಿಳಿ ಬಣ್ಣದ ಸೀರೆಯನ್ನು ಧರಿಸಿದ ನೀಲಾಂಬಿಕೆಯರನ್ನು ಕಾಣುತ್ತೇವೆ. ಬಸವಣ್ಣನ ಪಕ್ಕದಲ್ಲಿ ಬಿಳಿಬಣ್ಣದ ಪಂಚೆ, ನಿಲುವಂಗಿ, ಕಪ್ಪು ಬಣ್ಣದ ಬಾಚಿ ಕಟ್ಟಿದ ಕೂದಲು, ಗಡ್ಡ ಮೀಸೆಗಳನ್ನು ಹೊಂದಿರುವ ಮುಖ, ಎರಡು ಕೈಗಳನ್ನು ಸ್ವಲ್ಪ ಮೇಲೆತ್ತಿ ನಮಸ್ಕರಿಸುವ ಭಂಗಿಯಲ್ಲಿ ನಿಂತ ಹರಳಯ್ಯನನ್ನು ಇಲ್ಲಿ ಕಲಾವಿದ

ಚಿತ್ರಿಸಿದ್ದಾನೆ. ಹಿಂದೆ ಮಡದಿ ಕಲ್ಯಾಣಮ್ಮ, ಪಕ್ಕದಲ್ಲಿ ಅಲ್ಲಮಪ್ರಭುದೇವರು ನಿಂತಿರುವಂತೆ ತೋರುತ್ತದೆ. ಮುಗಳಿಯವರ ಚಿತ್ರಗಳಲ್ಲಿ ವಿಶೇಷವಾಗಿರುವುದು ಮೃದುವಾದ ವರ್ಣಮೇಳ. ಆಕೃತಿಗಳಿಗಾಗಲಿ, ಹಿನ್ನೆಲೆಯಲ್ಲಾಗಲಿ ಅತ್ಯಂತ ಮೃದುವಾದ ವರ್ಣಗಳನ್ನು ದುಡಿಸಿಕೊಳ್ಳುವುದರ ಮುಖೇನ ಚಿತ್ರವನ್ನು ಶ್ರೀಸಾಮಾನ್ಯನಿಗೂ ಆಪ್ಯಾಯಮಾನವೆನಿಸುವ ನಿಟ್ಟಿನಲ್ಲಿ ಕಲಾಕೃತಿಗಳು ಮೇಲುಗೈ ಸಾಧಿಸುತ್ತವೆ. ಅಂತೆಯೇ ಕಲಾಕೃತಿಯು ಸಹ ಮೇಲೆ ಹೇಳಿದ ಅಂಶಗಳನ್ನೇ ಪಾಲಿಸುತ್ತದೆ. ನೆಲಹಾಸು ಆಧುನಿಕವಾಗಿ ರೂಪು–ಗೊಂಡಿದ್ದು, ಹಿನ್ನೆಲೆಯಲ್ಲಿ ಜಾಲಂಧ್ರ, ಕಂಭಗಳು ರಚನೆಗೊಂಡಿವೆ. ಆಕೃತಿಗಳು ಭಾವಪ್ರದವಾಗಿ ರಚನೆಯಾಗಿವೆ. ಚಿತ್ರದಲ್ಲಿ ಆಕೃತಿಗಳು ಸಮಾನಾಂತರವಾಗಿ ಸಂಯೋಜನೆಗೊಂಡಿದ್ದು, ನೋಟಕರಿಗೆ ಆಪ್ಯಾಯಮಾನವೆನಿಸುತ್ತವೆ.

೨.೯. ಬಸವಣ್ಣನವರು ಮತ್ತು ಅಂತರ್ಜಾತೀಯ ವಿವಾಹದ ವರ್ಣಚಿತ್ರಗಳು

“ಹರಳಯ್ಯನವರ ಮಗ ಮತ್ತು ಮಧುವರಸರ
ಮಗಳ ಮದುವೆಯ ವಿಷಯದಲ್ಲಿ ಭಿನ್ನಾಭಿಪ್ರಾಯ
ತಲೆದೋರಿರುವುದರಿಂದಲೂ ಕಲ್ಯಾಣದಲ್ಲಿಬಾರದೆಂದು
ತಾವೊರ್ವರ ಕಪ್ಪಡಿಸಂಗಮಕ್ಕೆ, ಅರಸನಿಗೆ
ಎಲ್ಲ ಲೆಕ್ಕಪತ್ರ ಒಪ್ಪಿಸಿ, ಹೋಗುತ್ತಾರೆಂದು ಹೇಳಿದ.”[೯೬]

೨.೯.೧. ಅಂತರ್ಜಾತಿ ವಿವಾಹ

ಕಲಬುರ್ಗಿಯ ಕಲಾವಿದ ಡಾ. ಸುಬ್ಬಯ್ಯ ಎಂ. ನೀಲಾ ಅವರು ರಚಿಸಿದ ಈ ಕಲಾಕೃತಿಯು ೨.೧/೨’x೩’ ಅಳತೆಯ, ಅಕ್ರಲಿಕ್ ವರ್ಣ ಮಾಧ್ಯಮದಲ್ಲಿ ರಚನೆಯಾಗಿದೆ. ಪ್ರಸ್ತುತ ಕಲಾಕೃತಿಯು ಕಲಬುರ್ಗಿಯ ಶರಣಬಸವೇಶ್ವರ ಸ್ನಾತಕೋತ್ತರ ಪದವಿ ಮಹಾವಿದ್ಯಾಲಯದಲ್ಲಿ ಸಂಗ್ರಹಗೊಂಡಿದೆ. ಹರಳಯ್ಯ–ಮಧುವರಸರ ಮಕ್ಕಳ ಮದುವೆಯನ್ನು ಕಾಣಿಸುವುದಾಗಿದ್ದು ವಧು–ವರರು ಮತ್ತು ಸಂಬಂಧಿಕರು ಚಿತ್ರದ ಕೇಂದ್ರಸ್ಥಾನದಲ್ಲಿದ್ದರೂ ಗಮನ ಸೆಳೆಯುತ್ತಿರುವವರು ಬಸವಣ್ಣ, ಅಲ್ಲಮಪ್ರಭುವಾಗಿದ್ದಾರೆ. ಒಟ್ಟುನೋಟದಿಂದ ಅತ್ಯುತ್ತಮ ಚಿತ್ರವೆನ್ನಬಹುದಾದ ಎಲ್ಲ ಲಕ್ಷಣಗಳನ್ನು ಇದು ಒಳಗೊಂಡಿದೆ. ಹರಳಯ್ಯ, ಮಧುವರಸನ ಮಕ್ಕಳೊಂದಿಗೆ ನಡೆಸುವ ಅಂತರ್ಜಾತೀಯ ವಿವಾಹವು ಈ ಕಲಾಕೃತಿಯ ಪ್ರಧಾನ ವಸ್ತುವಾಗಿದೆ.

ಈ ಚಿತ್ರವನ್ನು ನೋಡಿದಾಕ್ಷಣ ನೋಡುಗನಲ್ಲಿ ವಿಜೃಂಭಣೆ ವೈಭವದ ಭಾವಗಳು ಒಂದುಕ್ಷಣ ತಾಕುತ್ತವೆ. ಯಾಕೆಂದರೆ ಭವ್ಯವಾದ ಅರಮನೆ, ಸುಂದರವಾದ ಸ್ವರ್ಣಖಚಿತವಾದ ಮದುವೆ ಮಂಟಪ, ವಾದ್ಯಮೇಳ ಎಲ್ಲವೂ ಸೇರಿ ಚಿತ್ರವೂ ಶ್ರೀಮಂತವಾಗಿ ಕಂಗೊಳಿಸುತ್ತಿದೆ. ಚಿತ್ರದ ಮಧ್ಯಭಾಗದಲ್ಲಿ ಮದುಮಗನಾದ ಹರಳಯ್ಯನ ಮಗ, ಮದುವಣಿಗಿತ್ತಿಯಾದ ಮಧುವರಸನ ಮಗಳು ಇಬ್ಬರೂ ಹಾರವನ್ನು ಕೈಯಲ್ಲಿ ಹಿಡಿದು ನಿಂತಿದ್ದಾರೆ. ಇಬ್ಬರ ಮುಖಗಳು ವಿರುದ್ಧದಿಕ್ಕಿನಲ್ಲಿವೆ. ನೀಲಿಬಣ್ಣದ ಪಂಚೆ, ಹಳದಿ

---

೯೬. ಪ್ರೊ. ಬಸವರಾಜ ಚೆನ್ನವೀರಪ್ಪ ಜವಳಿ : ಧರ್ಮ ಭಂಡಾರಿ ಬಸವಣ್ಣನವರು, ಪು–xli (ಪ್ರಸ್ತಾವನೆ)

ಲಘು ಕೆಂಪುಮಿಶ್ರಿತ ಬಣ್ಣದ ನಿಲುವಂಗಿ, ತಲೆಯ ಮೇಲೆ ಬಾಸಿಂಗ, ಕೈಯಲ್ಲಿ ಹೂವಿನ ಹಾರವನ್ನು ಹಿಡಿದು ನಿಂತಿರುವ ಹರಳಯ್ಯನ ಮಗ ತನ್ನ ತಂದೆಯೊಂದಿಗೆ ಸಂಭಾಷಣೆಯಲ್ಲಿ ನಿರತವಾದಂತಿದೆ. ಹರಳಯ್ಯನು ತನ್ನ ಹೆಂಡತಿಯೊಂದಿಗೆ ವೇದಿಕೆಯ ಎರಡನೆಯ ಮೆಟ್ಟಿಲಿನಲ್ಲಿ ನಿಂತಿದ್ದಾನೆ. ಆಕೆಯು ಕೆಂಪುಬಣ್ಣದ ಸೀರೆಯನ್ನು ಉಟ್ಟಿದ್ದು ಮಗನೆಡೆಗೆ ದೃಷ್ಟಿ ಬೀರುತ್ತಿದ್ದಾಳೆ. ಅವರಿಗೆ ಎದುರಾಗಿ ಮಧುವರಸನ ಮಗಳು ಅಲಂಕೃತ ಕೆಂಪುಬಣ್ಣದ ಸೀರೆಯನ್ನು ಉಟ್ಟು ತಲೆಯ ತುಂಬ ಸೆರಗನ್ನು ಹೊದ್ದು, ತಲೆಯ ಮೇಲೆ ಕಿರು ಬಾಸಿಂಗವನ್ನು ಕಟ್ಟಿಕೊಂಡು ಕೈಯಲ್ಲಿ ಹೂವಿನ ಹಾರವನ್ನು ಹಿಡಿದು ನಿಂತು ತಾಯಿಯೊಂದಿಗೆ ಏನನ್ನೋ ಹೇಳುವಂತೆ ಕಲಾವಿದ ಚಿತ್ರಿಸಿದ್ದಾನೆ.

ಬಿಳಿಬಣ್ಣದ ಪಂಚೆ ಅಂಗಿ, ತಲೆಗೆ ಪೇಟವನ್ನು ಧರಿಸಿ ಮಧುವರಸ ಆತನ ಪಕ್ಕ ಕೆಂಪು ಸೀರೆಯನ್ನು ಉಟ್ಟ ಆತನ ಹೆಂಡತಿ ನಿಂತಿದ್ದಾಳೆ. ಮಧುವರಸ ದಂಪತಿಗಳ ಪಕ್ಕದಲ್ಲಿ ಕೆಲವು ಭಟರು ರಾಜಪೋಷಾಕನ್ನು ಧರಿಸಿ ತಲೆಗೆ ಲಘುಶಿರಸ್ತ್ರಾಣವನ್ನು ಧರಿಸಿದ್ದಾರೆ. ಕೆಂಪು, ಹಸಿರು, ಹಳದಿ ಬಣ್ಣದ ಉಡುಪುಗಳನ್ನು ಧರಿಸಿದ ಅವರು ತಮ್ಮ ಎರಡೂ ಕೈಗಳನ್ನು ಮುಗಿದು ನಿಂತಿದ್ದಾರೆ. ಪಕ್ಕದಲ್ಲಿ ಬೃಹತ್ತಾದ ಎತ್ತರದ ಅರಮನೆ ಕಾಣುತ್ತಿದೆ. ಅದು ಬಸವಣ್ಣನ ಮಹಾಮನೆ ಇರಬಹುದು. ಅಲಂಕೃತಗೊಂಡ ಗೋಡೆಗಳು, ಉಪ್ಪರಿಗೆ, ಹಜಾರವನ್ನೊಳಗೊಂಡ ಮಹಾಮನೆಯ ಕೆಳಗೆ ಮೆಟ್ಟಿಲುಗಳ ಮೇಲೆ ಬಸವಣ್ಣ, ಅಲ್ಲಮಪ್ರಭು ವಿಶೇಷವಾಗಿ ಗಮನ ಸೆಳೆಯುತ್ತಾರೆ. ತಲೆಗೆ ಕಿರೀಟ, ಪ್ರಭಾವಳಿಯನ್ನು ಹೊಂದಿದ ಬಸವಣ್ಣ ನಿರಿಗೆಯುಳ್ಳ ನಿಲುವಂಗಿ, ಹೆಗಲ ಮೇಲೆ ಮೇಲುಹೊದಿಕೆ ಧರಿಸಿ, ತನ್ನ ಬಲಗೈಯನ್ನು ತುಸು ಎತ್ತಿ ನವ ದಂಪತಿಗಳಿಗೆ ಆಶೀರ್ವಾದ ಮಾಡುವ ಭಂಗಿಯಿಂದ ಚಿತ್ರಿತನಾಗಿದ್ದಾನೆ.

ಬಸವಣ್ಣನ ಎದಿರಿನಲ್ಲಿ ಕೆಳಗೆ ಒಬ್ಬ ಸೇವಕ ಕೆಂಪು ಬಣ್ಣದ ಬೆಳ್ಗೊಡೆಯನ್ನು ಬಸವಣ್ಣನ ತಲೆಯ ಮೇಲೆ ಇರುವಂತೆ ಹಿಡಿದು ನಿಂತಿದ್ದಾನೆ. ಅಲ್ಲಮಪ್ರಭು ಕಾವಿ ಬಣ್ಣದ ಉಡುಪಿನೊಂದಿಗೆ, ಕೊರಳಲ್ಲಿ ರುದ್ರಾಕ್ಷಿ, ಇಷ್ಟಲಿಂಗವನ್ನು ಧರಿಸಿ ಬಸವಣ್ಣನ ಪಕ್ಕದಲ್ಲಿ ನಿಂತಿದ್ದಾನೆ. ಆತನ ತಲೆಯ ಮೇಲೆ ಕಪ್ಪುಕೂದಲಿನ ಜಟೆ ಎದ್ದುಕಾಣುತ್ತದೆ. ಪ್ರಭಾವಳಿಯೂ ಅಲ್ಲಿದೆ. ಬಲಗೈಯನ್ನು ಮೇಲೆತ್ತಿ ಆಶೀರ್ವಾದ ಮಾಡುವ ಭಂಗಿ ಆತನದಾಗಿದೆ. ಹಿಂದೆ ರಾಜಲಾಂಛನವನ್ನೊಳಗೊಂಡ ವ್ಯಕ್ತಿಯಿದ್ದಾನೆ. ಚಾಮರಗಳನ್ನು ಬೀಸುತ್ತಿರುವ ವ್ಯಕ್ತಿ, ತಟ್ಟೆಯಲ್ಲಿ ಹಣ್ಣು ಹಂಪಲುಗಳನ್ನು ಹಿಡಿದು ನಿಂತಿರುವ ಸ್ತ್ರೀಯರಿದ್ದಾರೆ. ಅವರ ಹಿಂದೆ ಏಳೆಂಟು ಜನ ಶರಣರು ಕಾಷಾಯ ವಸ್ತ್ರಧರಿಸಿ ನಿಂತಿದ್ದಾರೆ. ವೇದಿಕೆಯ ಮುಂಭಾಗದಲ್ಲಿ ಶಹನಾಯಿ, ಡೋಲು, ಕೊಂಬು, ಕಹಳೆಗಳನ್ನು ನುಡಿಸುತ್ತಿರುವ ವಾದ್ಯ ವೃಂದದವರಿದ್ದಾರೆ. ನುಡಿಸುತ್ತಿರುವ ಭಂಗಿ ಆಕರ್ಷಕವಾಗಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ತಲೆಗೆ ಪೇಟಗಳನ್ನು ಧರಿಸಿದ ಅವರು ಕೆಂಪು, ನೀಲಿಬಣ್ಣದ ವಸ್ತ್ರಗಳನ್ನು ಧರಿಸಿದ್ದಾರೆ.

ಚಿತ್ರದ ಎಡಬದಿಯಲ್ಲಿ ಹರಳಯ್ಯ ಉಳಿದ ಶರಣರ ದೊಡ್ಡ ಬಳಗವೇ ಇದೆ. ತೆಳು ನೀಲಿ, ಕಡುಗೆಂಪು, ತೆಳು ಹಳದಿ ಬಣ್ಣಗಳ ಉಡುಪುಗಳನ್ನು ಧರಿಸಿದ ವಿವಿಧ ವಯೋಮಾನದ ದಲಿತ ಸಮುದಾಯದ ವ್ಯಕ್ತಿಗಳಿರುವುದನ್ನು ಕಾಣಬಹುದು. ನಿಂತಿರುವವರೆಲ್ಲರೂ ತಮ್ಮ ಎರಡೂ ಕೈಗಳನ್ನು

ಮುಗಿದು ಬಸವಣ್ಣನತ್ತ ಕೆಲವರು, ವಧು-ವರರತ್ತ ಕೆಲವರು ನೋಡುತ್ತಿದ್ದಾರೆ. ಬಸವಣ್ಣನವರನ್ನು ಹೊರತುಪಡಿಸಿದರೆ ಒಟ್ಟೂ ಚಿತ್ರದ ಎಲ್ಲ ವ್ಯಕ್ತಿಗಳ ಮುಖದಲ್ಲಿ ಮದುವೆಯ ಮನೆಯಲ್ಲಿ ಸಹಜವಾಗಿ ಇರಬೇಕಾದ ಸಂಭ್ರಮ ಇಲ್ಲದಿರುವುದು ಎದ್ದುತೋರುತ್ತದೆ. ಚಿತ್ರದ ಭಿತ್ತಿಯು ಲಘುನೀಲಿ ಬಣ್ಣ ಮಿಶ್ರಿತ ಬಿಳಿಯ ಮೋಡಗಳಿಂದ ಆಚ್ಛಾದಿತವಾಗಿದೆ. ಚಿತ್ರದ ಎಡಭಾಗದಲ್ಲಿ ಕೋಟೆಯ ಗೋಡೆಯು ಸ್ವಲ್ಪ ಪ್ರಮಾಣದಲ್ಲಿ ಕಾಣಿಸುತ್ತದೆ. ಚಿತ್ರದ ಒಟ್ಟು ಆಕರ್ಷಣೆಗಳಲ್ಲಿ ವಿವಾಹ ಮಂಟಪದ ಎಡ ಬದಿಯಲ್ಲಿ ನಂದಿಯ ಮೂರ್ತಿಯು, ಬಲ ಬದಿಯಲ್ಲಿ ಅಲಂಕೃತಗೊಂಡ ಆನೆಯ ಶಿಲ್ಪಗಳು ಪ್ರಧಾನವಾಗಿವೆ. ಬಣ್ಣಗಳ ಸಂಯೋಜನೆ, ಪ್ರಮಾಣ, ನೆರಳು ಬೆಳಕಿನ ಹದವರಿತ ಚಿತ್ರವನ್ನು ಮಾಡುವಲ್ಲಿ ಕಲಾವಿದ ಯಶಸ್ವಿಯಾಗಿದ್ದಾನೆ. ಕಲಾವಿದನ ಸೂಕ್ಷ್ಮ ಕುಸುರಿ ಕೆಲಸವು ನೋಡುನೋಡುತ್ತಿದ್ದಂತೆಯೇ ಗೋಚರಿಸುತ್ತದೆ.

ಬಲಪಾರ್ಶ್ವದಲ್ಲಿ ವೈಭವೋಪೇತ ಮಹಾಮನೆ (ಅರಮನೆ?) ಎಡಪಾರ್ಶ್ವದಲ್ಲಿ ಮದುವೆ ಮಂಟಪ, ಹಿನ್ನೆಲೆಯ ಆಕಾಶದಲ್ಲಿ ಚದುರಿದ ಮೋಡಗಳು, ಮುನ್ನೆಲೆಯಲ್ಲಿ ಮದುವೆ ಸಂಭ್ರಮದಲ್ಲಿ ಪಾಲ್ಗೊಂಡ ದಿಬ್ಬಣದವರು, ಹೀಗೆ ಈ ಚಿತ್ರದ ವರ್ಣನೆಯನ್ನು ಮಾಡುತ್ತಾ ಸಾಗಿದರೆ ಅಂತರ್ಜಾತಿಯ ವಿವಾಹದ ಸಂಭ್ರಮ ಕಲ್ಯಾಣದಲ್ಲಿ ಕ್ರಾಂತಿಯನ್ನೇ ಮಾಡಿತು. ಚಿತ್ರದ ಸ್ಥಳಾವಕಾಶದ ಅರ್ಧಭಾಗದಲ್ಲಷ್ಟೇ ಆಕೃತಿಗಳು ಸಂಯೋಜನೆಗೊಂಡಿವೆ. ಬಸವಣ್ಣ ಅಲ್ಲಮಪ್ರಭುಗಳು ಮಾತ್ರವೇ ಪ್ರಮುಖರಾಗಿ ಗೋಚರವಾಗಿದ್ದಾರೆ. ಇನ್ನುಳಿದ ಆಕೃತಿಗಳೆಲ್ಲವೂ ವಿವಾಹದ ರೂಪಕಗಳಾಗಿ ಪ್ರಕಟವಾಗಿದ್ದಾರೆ. ಮೂಲವರ್ಣಗಳೊಂದಿಗೆ ಉಪವರ್ಣಗಳನ್ನು ಸಹ ಸಮರ್ಥವಾಗಿ ದುಡಿಸಿಕೊಂಡ ಕಲಾವಿದರು ಪ್ರಕೃತಿ ವಾಸ್ತು ಪ್ರಧಾನವಾದ ಪೌರಾಣಿಕ ಕಥಾನಕವೊಂದನ್ನು ಚಿಕಣಿ ಚಿತ್ರಶೈಲಿಯಲ್ಲಿ ರಚಿಸಿದ್ದು ಶ್ರೀಸಾಮಾನ್ಯನನ್ನು ಸಹ ಆಕರ್ಷಿಸುವ ಸಾಮರ್ಥ್ಯ ಈ ಚಿತ್ರಕ್ಕಿದೆ.

"ಈ ತೆರಿದೊಳಿರೆ ಪುರದಿ ಗುಜಂಗುಜಿಸಿ ಪಾರ್ವಕುಲ
ಪಾತಕರ್ನೃಪನೊಡನೆ ಕೊಂಡೆಯವನುಸುರುತಂ
ನೀತಿಗೆಟ್ಟವನ ಚೆಂಡಾಲರಿಗೆ ಮಧುವರಸ ಪ್ರೀತಿಯಿಂ ಹೆಣ್ಣುಕೊಟ್ಟು
ಜಾತಿಸಂಕರವಳಿದು ಹಳ್ಳುಗನ ಮನೆಯೊಕ್ಕು
ಸೋತೆಂಜಲಂ ಪಡೆದು ವಸ್ತು ವಾಹನವಿತ್ತು
ಭೀತಿಯಿಲ್ಲದೆ ಹೊಲಗಲಿಸಿ ವಿಪ್ರತನವಳಿದ ಘಾತಕಂ ಮಧುವರಸನು"[೯೭] ಅಲ್ಲದೆ ಈ ವಿವಾಹದ ನಂತರ ಇಡೀ ಸಾಮಾಜಿಕ ವಲಯದಲ್ಲಿ ಕೋಲಾಹಲವೇ ಪ್ರಾರಂಭವಾಗುತ್ತದೆ. ಇದಕ್ಕೆ ಸಾಕ್ಷಿಯಾಗಿ ಲಿಂಗ ಪುರಾಣದ ಈ ಪದ್ಯ.

೨.೯.೨. ಅಂತರ್ಜಾತೀಯ ವಿವಾಹಕ್ಕೆ ಸಾಕ್ಷಿಯಾದ ಬಸವಣ್ಣ

ಕಲಾವಿದ ಬಸವರಾಜ ಮುಗಳಿ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ (ಎನಾಮೆಲ್) ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಬಸವಕಲ್ಯಾಣದ

೯೭. ಜಿ. ಜಿ. ಮಂಜುನಾಥ (ಸಂ.) : ಲಿಂಗಪುರಾಣ, ಪು-೩೬೨

೨.೯.೩. ವಧೂ-ವರರನ್ನು ಆಶೀರ್ವದಿಸುತ್ತಿರುವ ಬಸವಣ್ಣ

ಕಲಾವಿದ ಬಸವರಾಜ ಮುಗಳಿಯವರ ಮತ್ತೊಂದು ಕಲಾಕೃತಿಯಿದಾಗಿದ್ದು, ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ (ಎನಾಮೆಲ್) ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ. ಹರಳಯ್ಯ, ಮಧುವರಸರ ಮಕ್ಕಳಾದ ಶೀಲ, ಕಲಾವತಿ ಇವರ ಅಂತರ್ಜಾತೀಯ ವಿವಾಹವು ನಡೆದು ಬಸವಣ್ಣ ಮೊದಲಾದವರಿಂದ ಆಶೀರ್ವಾದ ಪಡೆಯುವ ಸನ್ನಿವೇಶವನ್ನು ಹೊಂದಿದೆ.

ಈ ಚಿತ್ರವು ತೈಲವರ್ಣಕ್ಕೆ ಸೇರಿದ್ದಾಗಿದ್ದು ಕೆಂಪು, ಹಳದಿ, ಹಸಿರು, ಬಿಳಿ ಮತ್ತು ಕಪ್ಪು ವರ್ಣಗಳನ್ನು ಮುಖ್ಯವಾಗಿ ಬಳಸಲಾಗಿದೆ. ಮಟ್ಟಸ ಕೂದಲನ್ನು ಹೊಂದಿದ ಬಸವಣ್ಣ ಹಳದಿ ಬಣ್ಣದ ಮೇಲುಹೊದಿಕೆ ಬಿಳಿ ಬಣ್ಣದ ಪಂಚೆಯನ್ನು ಧರಿಸಿದ್ದಾನೆ. ಅರೆ ನಿಮೀಲಿತ ಕಣ್ಣುಗಳಿಂದ ತನ್ನ ಪಾದಕ್ಕೆ ನಮಸ್ಕರಿಸುತ್ತಿರುವ ದಂಪತಿಗಳನ್ನು ಅತ್ಯಂತ ಶಾಂತ ಮುಖಮುದ್ರೆಯಿಂದ ಆಶೀರ್ವದಿಸುವಂತೆ ಚಿತ್ರಿತನಾಗಿದ್ದಾನೆ. ದಂಪತಿಗಳಿಬ್ಬರು ತಮ್ಮ ಸೊಂಟವನ್ನು ಬಗ್ಗಿಸಿ ಬಸವಣ್ಣನ ಪಾದಗಳಿಗೆ ನಮಸ್ಕರಿಸುವಾಗ ಅವರಿಬ್ಬರ ಕೊರಳಿನ ಹಾರಗಳು ನೇತಾಡುವ ಸಹಜತೆಯನ್ನು ಕಲಾವಿದ ಚಿತ್ರಿಸಿದ್ದಾನೆ.

ವಧುವಿನ ಹಳದಿಬಣ್ಣದ ಅಂಚಿನಿಂದ ಕೂಡಿದ ಕೆಂಪು ಸೀರೆ, ಮುಖದಲ್ಲಿ ವಿನೀತವಾದ ಭಾವ, ಸ್ಪಷ್ಟವಾಗಿವೆ. ಅಲ್ಲಮಪ್ರಭುದೇವರು ಬಸವಣ್ಣನ ಪಕ್ಕದಲ್ಲಿದ್ದು ವಧುವರರನ್ನು ದೃಷ್ಟಿಯಿಟ್ಟು ನಿರುಕಿಸುವಂತಿದೆ. ಬಸವಣ್ಣನ ಹಿಂದೆ ಶರಣ-ಶರಣೆಯರು ನಿಂತಿದ್ದಾರೆ. ಅವರ ಮುಂದೆ ನಾಲ್ಕು ಜನ ಬ್ರಾಹ್ಮಣರು ಬರಿಮೈಯ ಮೇಲೆ ಮೇಲುಹೊದಿಕೆಯನ್ನು ಧರಿಸಿ ಕುತೂಹಲದಿಂದ ಅಲ್ಲಿಯ ಘಟನೆಗಳನ್ನು ನೋಡುತ್ತಾ ಕುಳಿತಿದ್ದಾರೆ. ವೇದಿಕೆಯ ಸ್ವಲ್ಪ ಭಾಗವು ಚಿತ್ರದಲ್ಲಿ ಕಾಣುತ್ತಿದ್ದು ಅದರ ಮೇಲೆ ವಾದ್ಯಗಳನ್ನು ನುಡಿಸುತ್ತಿರುವ ಇಬ್ಬರು ವ್ಯಕ್ತಿಗಳು ಗೋಚರಿಸುತ್ತಾರೆ. ವೇದಿಕೆಯ ಕೆಳಗೆ ಅಪಾರ ಸಂಖ್ಯೆಯ ಜನರು ಕುಳಿತು ತಮ್ಮತಮ್ಮಲ್ಲಿಯೇ ಸಂಭಾಷಣೆಯಲ್ಲಿ ತೊಡಗಿರುವಂತೆ ಕಲಾವಿದ ಸೊಗಸಾಗಿ ರೂಪಿಸಿದ್ದಾನೆ. ಚಿತ್ರವು ಹೊರಾಂಗಣದಲ್ಲಿ ಚಿತ್ರಿತವಾಗಿದೆ. ತಳಿರು ತೋರಣಗಳಿಂದ ಹಿತಮಿತವಾಗಿ ಅಲಂಕೃತಗೊಂಡ ವೇದಿಕೆ ಆಕರ್ಷಕವಾಗಿದೆ.

ಚಿತ್ರದ ಎಡಭಾಗಕ್ಕೆ ನೋಡುಗರ ಗಮನ ಕೇಂದ್ರಿತಗೊಳ್ಳುವ ಹಾಗೆ ಈ ಚಿತ್ರ ರಚನೆಯಾಗಿದೆ. ಕಲಾಕೃತಿಯ ಪ್ರಮುಖ ಆಶಯವಾಗಿ ಬಸವಣ್ಣ, ಅಲ್ಲಮಪ್ರಭುಗಳು ಅನುಯಾಯಿಗಳ ಗುಂಪು ಅವಕಾಶದ ಎಡಭಾಗಕ್ಕೆ ಸಂಯೋಜನೆಗೊಂಡರೆ, ದಿಬ್ಬಣದ ಮಂದಿ ಬಲ ಪಾರ್ಶ್ವದಲ್ಲಿ ಮಂದವಾಗಿ ಚಿತ್ರಿತಗೊಂಡಿದ್ದಾರೆ. ಅವಕಾಶದ ಮೇಲ್ಭಾಗದಲ್ಲಿ ಮದುವೆ ಸಂಭ್ರಮದ ದ್ಯೋತಕವಾಗಿ ತಳಿರು-ತೋರಣಗಳನ್ನು ಸೂಚ್ಯವಾಗಿಸಿ ಚಿತ್ರಿಸಲಾಗಿದೆ. ಒಂದು ಬಗೆಯಲ್ಲಿ ಇಡೀ ಚಿತ್ರವು ಸ್ಪಷ್ಟವಾಗಿ ಮೂರುಭಾಗಗಳಾಗಿ ಚಿತ್ರಿತಗೊಂಡಿರುವುದು ಸದ್ಯದ ಸಂದರ್ಭದಲ್ಲಿ ಈ ಬಗೆಯ ಸಂಯೋಜನೆಗಳು ಅಪರೂಪವೇ. ಆದರೆ ಒಟ್ಟು ಚಿತ್ರವು ಭಾವಪ್ರದವಾಗಿದೆ, ಶ್ರೀಸಾಮಾನ್ಯನಿಗೆ ಬಸವಭೂತಿ ಎಟುಕುವಂತೆ ಚಿತ್ರಿತವಾಗಿದೆ.

೨.೯.೪. ಬಿಜ್ಜಳನೊಂದಿಗೆ ಚರ್ಚೆಯಲ್ಲಿ ನಿರತನಾದ ಬಸವಣ್ಣ

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಬಸವಣ್ಣ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ. ಬಸವಣ್ಣ ತನ್ನ ನೇತೃತ್ವದಲ್ಲಿ ಹರಳಯ್ಯ ಮತ್ತು ಮಧುವರಸ ದಂಪತಿಗಳ ಮಕ್ಕಳಿಗೆ ಅಂತರ್ಜಾತೀಯ ವಿವಾಹವನ್ನು ಏರ್ಪಡಿಸುತ್ತಾನೆ. ಈ ವಿಷಯವನ್ನು ಬಿಜ್ಜಳನ ಆಸ್ಥಾನದ ಕೊಂಡೆ ಮಂಚಣ್ಣ ಮುಂತಾದ ಬಸವಣ್ಣನ ವಿರೋಧಿ ಬ್ರಾಹ್ಮಣರು ಬಿಜ್ಜಳನಿಗೆ ಚಾಡಿ ಹೇಳುತ್ತಾರೆ. ಅದರ ಫಲವಾಗಿ ಬಿಜ್ಜಳನು ಬಸವಣ್ಣನನ್ನು ಕರೆಸಿ ವಿಚಾರಣೆ ಮಾಡುತ್ತಿರುವ ಸನ್ನಿವೇಶವನ್ನು ಕಲಾವಿದ ಚಿತ್ರಿಸಿದ್ದಾನೆ.

ಈ ಕಲಾಕೃತಿಯಲ್ಲಿ ಬಸವಣ್ಣ ತಲೆಯ ಮೇಲೆ ಹಸಿರು ಹರಳಿನಿಂದ ಕೂಡಿದ ಹೊಳೆಯುವ ಬಂಗಾರದ ಕಿರೀಟ, ಹಣೆಯಲ್ಲಿ ಎದ್ದುತೋರುವಂತೆ ವಿಭೂತಿ, ಕೊರಳಲ್ಲಿ ಇಷ್ಟಲಿಂಗದ ಗಂಟು, ಬಂಗಾರದ ಮಿರುಗುವ ಅಂಚಿನಿಂದ ಕೂಡಿದ ನಿಲುವಂಗಿ, ಪಂಚೆ, ಹೊಳೆಯುವ ಪಾದರಕ್ಷೆಗಳನ್ನು ಧರಿಸಿ ಬಿಜ್ಜಳನ ಎದುರು ನಿಂತಿದ್ದಾನೆ. ಬಿಜ್ಜಳನ ಮಾತಿಗೆ ಪ್ರತ್ಯುತ್ತರ ನೀಡುವಂತೆ ಎರಡು ಕೈಗಳ ಹಸ್ತಗಳು ಆಕಾಶವನ್ನು ನೋಡುತ್ತಿವೆ. ಎರಡೂ ಕೈಗಳ ನೀಳವಾದ ಬೆರಳುಗಳು ಅತ್ಯಂತ ಸ್ಪಷ್ಟವಾಗಿ ಕಾಣುವಂತೆ ಮಾಡಲು ಕಲಾವಿದ ಕಲಾಕುಸುರಿಯನ್ನು ಹೆಣೆದಿದ್ದಾನೆ. ಎದುರಿಗೆ ಕುಳಿತಿರುವ ಬಿಜ್ಜಳನು ಕಡುನೀಲಿಬಣ್ಣದ, ತುಂಬುತೋಳಿನ ನಿಲುವಂಗಿ, ತಲೆಗೆ ರತ್ನಖಚಿತ ಮಿರುಗುವ, ಸುಂದರವಾಗಿ ಕಾಣುವ ಬಂಗಾರದ ಕಿರೀಟ ಧರಿಸಿ ಸಿಂಹಾಸನದ ಮೇಲೆ ಕುಳಿತಿದ್ದಾನೆ. ಹೆಗಲ ಮೇಲೆ ಮೇಲುಹೊದಿಕೆಯನ್ನು ಇಳಿಯಬಿಟ್ಟು, ತನ್ನ ಎಡಗೈಯನ್ನು ಸಿಂಹಾಸನದ ಸಿಂಹದ ಮುಖದ ಮೇಲೆ ಇಟ್ಟಿದ್ದಾನೆ. ಮುಖದಲ್ಲಿ ಕೋಪ, ಅಸಹನೆಗಳು ಉಕ್ಕುವಂತೆ ತೋರಿಸಲು ಕಲಾವಿದ ಮಾಡಿದ ಪ್ರಯತ್ನ ಶ್ಲಾಘನೀಯವಾಗಿದೆ. ಬಿಜ್ಜಳನ ಪಕ್ಕದಲ್ಲಿ ಕಡುಹಸಿರು ಬಣ್ಣದ ಎರಡು ಕಂಬಗಳಿಂದ ಕೂಡಿದ ಅಲಂಕೃತ ಮಂಟಪವಿದೆ. ಬಿಜ್ಜಳನ ಮೇಲೆ ಅತ್ಯಂತ ಸುಂದರವಾಗಿ ಕಾಣುವ ಬಂಗಾರ ಬಣ್ಣದ ಅಂಚಿನಿಂದ ಕೂಡಿರುವ ಕೆಂಪುಬಣ್ಣದ ಕೊಡೆಯು ರಾರಾಜಿಸುತ್ತಿದೆ.

ಬಸವಣ್ಣನ ಹಿಂದೆ ಕಡಿಮೆ ಎತ್ತರದ ಪೀಠವೊಂದಿದ್ದು, ಹಿಂದೆ ರಾಜಭಟನೊಬ್ಬ ನೀಲಿಬಣ್ಣದ ದಿರಿಸನ್ನು ಧರಿಸಿದ್ದಾನೆ. ಕಂಭವೊಂದರಲ್ಲಿ ಅಳವಡಿಸಲಾದ ದೀಪವೊಂದರ ಬೆಳಗು ನಕ್ಷತ್ರದ ಬೆಳಕಿನಂತೆ ಹೊಳೆಯುವುದನ್ನು ಕಲಾವಿದ ಅತ್ಯಂತ ಚಾಣಾಕ್ಷತೆಯಿಂದ ಪರಿಣಾಮಕಾರಿಯಾಗಿ ಚಿತ್ರಿಸಿರುವುದು ಈ ಕಲಾಕೃತಿಗೆ ಮುಕುಟವಿಟ್ಟಂತಿದೆ. ಬಸವಣ್ಣನ ಮೇಲೆ ಗಾಜಿನ ಅಲಂಕೃತ ತೂಗುದೀಪ, ಬಿಜ್ಜಳನ ಮುಂದೆ ಮೂರು ಕಾಲಿನ ವೃತ್ತಾಕಾರದ ಒಂದು ಚಿಕ್ಕ ಮೇಜು, ನೆಲಕ್ಕೆ ಹಾಸಿದ ದಟ್ಟ ಹಸಿರುಬಣ್ಣದ ಹಾಸು ಇವೆಲ್ಲವುಗಳನ್ನು ಚಿತ್ರಿಸುವಲ್ಲಿ ಕಲಾವಿದ ತುಂಬ ಎಚ್ಚರಿಕೆ ವಹಿಸಿರುವಂತೆ ಕಂಡುಬರುತ್ತದೆ.

ಶ್ರೀಮಂತವಾದ ಬಣ್ಣಗಳನ್ನು ಬಳಸಿ, ಸಹಜಶೈಲಿಯಲ್ಲಿರುವ ಈ ಚಿತ್ರವು ನೋಡುಗರನ್ನು ಸೆಳೆಯುತ್ತದಾದರೂ ಅದೇ ಹೊತ್ತಿಗೆ ತುಸು ಸೂಕ್ಷ್ಮವಾಗಿ ನಿರುಕಿಸಿದಾಗ ಬಿಜ್ಜಳನ ಆಕೃತಿಯ ರಚನೆಯಲ್ಲಿ

ತುಸು ಏರುಪೇರಾದಂತೆ ಕಾಣುತ್ತದೆ. ಉದಾ: ಬಿಜ್ಜಳನ ಬಲತೊಡೆ, ಅದರ ಮೇಲೆ ಕೈ ಇಟ್ಟಿರುವುದು ಇವೆಲ್ಲ ಪ್ರಮಾಣಬದ್ಧವಾಗಿ ಮೂಡಿಬಂದಿಲ್ಲ. ಸಿಂಹಾಸನದ ಮೇಲಿಂದ ಮುಂಚಾಚಿರುವ ಛತ್ರಿಯು ಕುಂತಿರುವ ಬಿಜ್ಜಳನು ಮೇಲಕ್ಕೆದ್ದರೆ ಕಿರೀಟಕ್ಕೆ ತಾಗುವಂತಿದೆ. ಇಂತಹ ಅನೇಕ ಅಪಸವ್ಯಗಳು ಕಲಾಕೃತಿಯಲ್ಲಿದ್ದರೂ ಗಂಗಾಧರರು ದೃಶ್ಯವನ್ನು ನಿರ್ವಹಣೆ ಮಾಡುವ ರೀತಿಯಿಂದ ಅವೆಲ್ಲ ಇದ್ದೂ ಇಲ್ಲದಂತೆ ಕಾಣಿಸುತ್ತವೆ.

ಆಕೃತಿಗಳನ್ನು ಸ್ಪಷ್ಟವಾಗಿ ಗೋಚರಿಸಲು ಮಾರ್ಗವೆಂದರೆ ಹಿನ್ನೆಲೆಯನ್ನು ದಟ್ಟವಾಗಿಸುವುದು. ಹಾಗೆಯೇ ಈ ಚಿತ್ರದಲ್ಲಿಯೂ ಸಹ ಅರಸೊತ್ತಿಗೆಯನ್ನು ದಟ್ಟ ಛಾಯೆಯಲ್ಲಿ ತೋರಿಸಿ ಆಕೃತಿಗಳನ್ನು ಪ್ರಖರವಾಗಿಸುವ ಕಲಾವಿದರ ಚಿತ್ರವೈಖರಿ ಇಲ್ಲಿದೆ. ಅರಸೊತ್ತಿಗೆಯ ವೈಭವ ದಟ್ಟತೆಯಲ್ಲಿಯೂ ತನ್ನ ವೈಭವವನ್ನು ನಿರೂಪಿಸುತ್ತಿದೆ. ಸೂಕ್ಷ್ಮ ಕುಸುರಿಯಂತಹ ಕಾರ್ಯವನ್ನು ಕಲಾವಿದರು ನೆರವೇರಿಸಿಕೊಟ್ಟಿದ್ದಾರೆ. ಸಂಯೋಜನೆಯ ದೃಷ್ಟಿಯಿಂದ ಈ ಕಲಾಕೃತಿ ಮಹತ್ವದ್ದು. ಬಸವಣ್ಣನು ತನಗಿರುವ ಪೀಠದ ಮುಂದೆ ನಿಂತು ಬಿಜ್ಜಳನಲ್ಲಿ ತಾನು ಮಾಡಿದ ಕಾರ್ಯವನ್ನು ಸಮರ್ಥಿಸಿಕೊಳ್ಳುವಂತೆ ಆಂಗಿಕ ರಚನೆಯನ್ನು ಹೊಂದಿದ್ದಾನೆ. ಬಿಜ್ಜಳನ ಗಾಂಭೀರ್ಯ ಚಿತ್ರದ ಒಟ್ಟಂದಕ್ಕೆ ಭಾವಪ್ರದವಾಗಿದೆ. ಇಡೀ ಚಿತ್ರದ ವರ್ಣಸಂಯೋಜನೆಯು ತಾಜಾತನದಿಂದ ಕೂಡಿದ್ದು ಪ್ರೇಕ್ಷಕರನ್ನು ಸಹಜವಾಗಿ ಆಕರ್ಷಿಸಬಹುದು.

೨.೧೦. ಬಸವಣ್ಣನವರು ಮಂತ್ರಿಪದವಿಯನ್ನು ಹಿಂದಿರುಗಿಸುವುದು ಹಾಗೂ ಕಲ್ಯಾಣವನ್ನು ತೊರೆಯುವ ವರ್ಣಚಿತ್ರಗಳು

ಹನ್ನೆರಡನೆಯ ಶತಮಾನದಲ್ಲಿಯೇ, ಮಂತ್ರಿಯ ಸ್ಥಾನದಲ್ಲಿದ್ದ ಬಸವಣ್ಣನವರು ಅರಸನು ದಾರೀ ತಪ್ಪಿ ನಡೆಯುತ್ತದ್ದರೆ ಅಂತಹನಿಗೆ ಅಂಜಿ ನಡೆಯಲಾಗದು ಎಂಬ ಮಹಾ ಸ್ವಾತಂತ್ರಯದ ಬೀಜವನ್ನೇ ಬಿತ್ತಿದ್ದಾರೆ. ಅರಸೊತ್ತಿಗೆಗೆ ಬಲವಾದ ಪೆಟ್ಟು ಕೊಡಲು ಜನರನ್ನು ಸಂಘಟಿಸಿರಬೇಕು. ಸ್ವಾತಂತ್ರ್ಯದ ಜೀವನಕ್ಕಾಗಿ ಎಲ್ಲ ಆಸೆ ತೋರೆದ ಬಸವಣ್ಣನವರಿಗೆ ಇಂತಹ ಮಾತುಗಳನ್ನಾಡುವುದು ಕಠಿಣವಾಗಿರಲ್ಲ. ಅರಸನ ಅಧಿಕಾರವನ್ನೇ ಮಾನ್ಯಮಾಡದ ರೀತಿಯಲ್ಲಿ ಬಸವಣ್ಣನವರು ಮಾತನಾಡಿದುದರಿಂದ ಅವರ ಸಂಬಂಧವು (ಬೀಗತನವು) ಇನ್ನೂ ಹದೆಗಟ್ಟ, ವೈಮನಸ್ಸು ಬೆಳೆಸುತ್ತಾ ನಡೆದಿರಬೇಕು. ಈ ಕೆಳಗಿನ ವಚನದಲ್ಲಿ ಈ ಭಾವ ಪ್ರಕಟಗೊಂಡಿವೆ.

"ಆರು ಮುನಿದು ನಮ್ಮನೇನ ಮಾಡುವರು?

ಊರು ಮುನಿದು ನಮ್ಮನೆಂತು ಮಾಡುವರು?

ನಮ್ಮ ಕುನ್ನಿಗೆ ಕೂಸ ಕೊಡಬೇಡ;

ನಮ್ಮ ಸೊಣಕಂಗೆ ತಳಿಗೆಯಲಿಕ್ಕಬೇಡ!

ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೇ,

ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನ್ನಕ್ಕ?"

ಬಸವಣ್ಣನವರು ಆನೆಯಂತೆ ಸತ್ಯದ ಹಾದಿಯಲ್ಲಿ ನಡೆದರೆ ಹೀನ ಮಾನವರು ಶ್ವಾನನಂತೆ ಬೊಗಳಿಯಾದರೂ ಏನು ಫಲ ಎಂದಿದ್ದಾರೆ. ಹೀಗಾಗಿ ಬಸವಣ್ಣನವರು ಬಿಜ್ಜಳ ರಾಜನಿರುವಾಗಲೇ ಕಲ್ಯಾಣವನ್ನು ತೊರೆಯುವ ಪ್ರಸಂಗ ಬಂದಿರಬೇಕು.[೯೮]

"ಹೋಗಬಿಟ್ಟು, ಮರಳಿ ಹಿಂದ ನೋಡಿ,
ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ
ಅದೆ ಪಾರದ್ವಾರ, ನಾಯಕ ನರಕ, ತಪ್ಪದು!
ಅನ್ಯ ವಧುವೆಂಬ ನಿಮ್ಮ ರಾಣಿವಾಸ: ಇದೆ ದಿಬ್ಬ,
ಕೂಡಲಸಂಗಮದೇವಾ"

ಈ ವಚನದಲ್ಲಿ ಬಸವಣ್ಣನವರು ಒಮ್ಮೆ ಕಲ್ಯಾಣವನ್ನು ಬಿಟ್ಟು ಹೊರಟು ಮತ್ತೆ ಹಿಂದಕ್ಕೆ ಆಸೆ ಮಾಡಲಿಲ್ಲವೇನೋ ಎಂಬ ಭಾವವು ಬರುವಂತಿದೆ. ಹೀಗಾಗಿ ಬಸವಣ್ಣನವರು ಕಲ್ಯಾಣವನ್ನು ಬಿಟ್ಟದ್ದು ಅವರ ರಾಜಕೀಯ ಈ ಕೆಲ ವಿಚಾರಗಳಿಂದೆಂಬ ಊಹೆಯು ಇಲ್ಲಿ ಬರುವಂತಿದೆ.[೯೯]

ಬಿಜ್ಜಳನ ಆಸ್ಥಾನದಲ್ಲಿ ಮಹಾಮಂತ್ರಿಯಾಗಿ ಕಾರ್ಯನಿರ್ವಹಿಸಿದ ಬಸವಣ್ಣ ಹಲವು ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಾಹಿತ್ಯಕ ಕ್ರಾಂತಿಗಳನ್ನು ಮಾಡಿದ. ಈ ತೆರನಾದ ಕ್ರಾಂತಿಗಳು ಪಟ್ಟಭದ್ರ ಹಿತಾಸಕ್ತಿಗಳ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ. ಮಂಚಣ್ಣ ಕ್ರಮಿತ ವೈದಿಕ ಬಳಗದ ಮನಸ್ಸುಗಳು ಬಸವಣ್ಣನವರನ್ನು ಅಧಿಕಾರದಿಂದ ಕೆಳಗಿಳಿಸುವಲ್ಲಿ ಸತತ ಪ್ರಯತ್ನ ಮಾಡುತ್ತಲೇ ಇದ್ದವು. ಇಂತಹ ಹೊತ್ತಿನಲ್ಲಿ ಬಸವಣ್ಣ ದಲಿತ ಕುಟುಂಬದ ಹರಳಯ್ಯ ಬ್ರಾಹ್ಮಣಮನೆತನದ ಮಧುವರಸನ ಮಕ್ಕಳಿಗೆ ಅಂತರ್ಜಾತೀಯ ವಿವಾಹವನ್ನು ಮಾಡಿಸಿದ. ಇದೇ ಘಟನೆಯನ್ನು ಪ್ರಮುಖವಾಗಿಟ್ಟುಕೊಂಡು ಬಸವಣ್ಣನ ವಿರೋಧಿಗಳು ಬಿಜ್ಜಳ ಮಹಾರಾಜನಿಗೆ ಇಲ್ಲಸಲ್ಲದ ದೂರುಗಳನ್ನು ಹೇಳಿದರು. ಅವರ ಮಾತುಗಳು ನಿಜವೆಂದು ನಂಬಿ ಬಿಜ್ಜಳನು ಬಸವಣ್ಣನಿಗೆ, ಮಂತ್ರಿಪದವಿಯನ್ನು ವಾಪಸ್ಸು ನೀಡಿ, ಕಲ್ಯಾಣವನ್ನು ಬಿಟ್ಟು ಹೋಗಬೇಕೆಂದು ಆಜ್ಞಾಪಿಸುತ್ತಾನೆ. ಈ ಗಡಿಪಾರು ಸನ್ನಿವೇಶವನ್ನು ಆಧರಿಸಿ ಕಲಾವಿದರನೇಕರು ಕಲಾಕೃತಿಗಳನ್ನು ಚಿತ್ರಿಸಿದ್ದು ಅವುಗಳಲ್ಲಿ ಆಯ್ದ ಕಲಾಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಬಸವಣ್ಣನ ಜೀವನಚರಿತ್ರೆಯಲ್ಲಿ ಬೀಳ್ಕೊಡುಗೆ ಘಟನೆಯು ಅತ್ಯಂತ ನೋವಿನ ದುರಂತದ ಸಂಗತಿಯಾಗಿದೆ. ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣ ಹಲವು ವರ್ಷಗಳವರೆಗೆ ಮಂತ್ರಿಯಾಗಿ ಸಮರ್ಥ ಆಡಳಿತ ನಿರ್ವಹಿಸಿ, ಜನರ ಮೆಚ್ಚುಗೆಗೆ ಪಾತ್ರವಾಗಿ, ವೀರಶೈವ ಧರ್ಮದ ಉದ್ಧಾರ ಮಾಡುವುದರ ಮೂಲಕ ಮನುಕುಲದ ಹಿತವನ್ನು ಬಯಸಿದ್ದಾತ. ಹರಳಯ್ಯ ಮಧುವರಸ ಎಂಬ ಇಬ್ಬರು ಮಕ್ಕಳಿಗೆ ಅಂತರ್ಜಾತೀಯ ವಿವಾಹ ಮಾಡಿಸಿದನೆಂಬ ಕಾರಣದಿಂದ ಬಿಜ್ಜಳನ ಮುನಿಸಿಗೆ ಕಾರಣವಾಗುತ್ತಾನೆ. ಕನ್ನಡ ಕಾವ್ಯ, ನಾಟಕ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಈ ಘಟನೆಯನ್ನು ಮನಕಲಕುವಂತೆ

೯೮. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೨೫೩), ಪು–೧೮೮

೯೯. ಅದೇ., (ವ.ಸಂ.–೨೫೬), ಪು–೧೮೯

ಉಲ್ಲೇಖಿಸಲಾಗಿದೆ. ತನ್ನದಲ್ಲದ ತಪ್ಪಿಗೆ ಮಂತ್ರಿ ಪದವಿಗೆ ತಲೆದಂಡ ಕೊಡಬೇಕಾಯಿತಲ್ಲದೆ, ಬಿಜ್ಜಳನು ಬಸವಣ್ಣನನ್ನು ಗಡೀಪಾರು ಮಾಡಿದನೆಂಬಂತೆ ಕೆಲವು ಸಾಹಿತ್ಯ ಪ್ರಕಾರಗಳಲ್ಲಿ ಚಿತ್ರಿಸಲಾಗಿದೆ. ಕೆಲವು ಕಾವ್ಯಗಳಲ್ಲಿ ಬಸವಣ್ಣನೇ ಬಿಜ್ಜಳನ ವರ್ತನೆಗೆ ನೊಂದು ಮಂತ್ರಿಪದವಿಯನ್ನು ಬಿಜ್ಜಳನಿಗೆ ಮರಳಿ ನೀಡಿ, ನಂತರ ಕೂಡಲಸಂಗಮಕ್ಕೆ ನಡೆದನೆಂದು ಹೇಳುತ್ತವೆ. ಬಿಜ್ಜಳನು ಬಸವಣ್ಣನಿಂದ ಕಿರೀಟ, ಅಧಿಕಾರದ ದಂಡ, ಮುದ್ರೆಯುಂಗುರಗಳನ್ನು ವಾಪಸು ಪಡೆಯುವಂತೆ ಕೆಲವು ಕಲಾವಿದರು ಚಿತ್ರಿಸಿದ್ದಾರೆ. ಅವುಗಳ ಸಂಖ್ಯೆ ಬೆರಳೆಣಿಕೆಯಷ್ಟು. ಆದರೆ ಉಳಿದ ಕಲಾವಿದರಿಗೆ ಅದು ಮುಖ್ಯವಾಗಿಲ್ಲ. ಬಸವಣ್ಣ ಕಲ್ಯಾಣದಿಂದ ಕೂಡಲಸಂಗಮಕ್ಕೆ ತೆರಳುವಾಗ ಕಲ್ಯಾಣದ ಜನತೆ ಆತನನ್ನು ಎಷ್ಟರಮಟ್ಟಿಗೆ ಹಚ್ಚಿಕೊಂಡಿದ್ದರು ಎಂಬುದನ್ನು, ಜೊತೆಗೆ ಬಸವಣ್ಣನ ಜನಪ್ರಿಯತೆ, ಜನರ ಬಗೆಗೆ ಇದ್ದ ಅಭಿಮಾನವನ್ನು ಪ್ರಸ್ತುತಪಡಿಸುವಲ್ಲಿ ಹೆಚ್ಚು ಆಸಕ್ತಿ ತೋರಿ ಕಲಾಕೃತಿಗಳನ್ನು ರಚಿಸಿದ್ದಾರೆ. ಅಂಥ ಕಲಾಕೃತಿಗಳಲ್ಲಿ ಕೆಲವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

"ಉತ್ತರ ಕರ್ನಾಟಕ ಕಲಾಕ್ಷೇತ್ರಕ್ಕೆ ತನ್ನದೇ ಆದ ವೈಶಿಷ್ಟ್ಯಪೂರ್ಣವಾದ ಅನನ್ಯತೆಗಳನ್ನು ಹೊಂದಿದ ಕಲಾವಿದರನ್ನು ದೇಶಕ್ಕೆ ನೀಡಿದೆ."[೧೦೦] ಅಂತಹ ಕಲಾವಿದರುಗಳಲ್ಲಿ ಒಬ್ಬರಾದ ಕಲಾವಿದ ಬಸವರಾಜ ಮುಗಳಿಯವರು ಬಸವಕಲ್ಯಾಣದ ಅನುಭವಮಂಟಪದಲ್ಲಿ ರಚಿಸಿರುವ ಕಲಾಕೃತಿಗಳನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ. ಇವೆಲ್ಲವೂ ೪೮"x೩೬" ಅಳತೆಯ, ತೈಲವರ್ಣದ (ಎನಾಮೆಲ್) ಮಾಧ್ಯಮದಲ್ಲಿ ರಚನೆಗೊಂಡಿವೆ. ಅವುಗಳನ್ನು ವ್ಯವಸ್ಥಿತವಾಗಿ ಈ ಕೆಳಗೆ ವಿಶ್ಲೇಷಿಸಲಾಗಿದೆ.

೨.೧೦.೧. ಮಂತ್ರಿ ಪದವಿ ಹಿಂತಿರುಗಿಸುತ್ತಿರುವ ಬಸವಣ್ಣ–೧

"ಯಾವುದೇ ಸುಂದರ ವಸ್ತು ನಮ್ಮ ಕಣ್ಣಿಗೆ ಆಕರ್ಷಣೆಯಾಗುವುದು ಅದರ ಗುಣ. ಅಂಥ ಸುಂದರ ವಸ್ತುಗಳ, ಆಕೃತಿಗಳ, ಸನ್ನಿವೇಶಗಳ ಚಿತ್ರಗಳು ಸಾಮಾನ್ಯವಾಗಿ ಎಲ್ಲರ ಮನಸ್ಸಿಗೂ ಆನಂದವನ್ನು ನೀಡುತ್ತವೆ."[೧೦೧] ಈ ಚಿತ್ರವು ಕಡುವರ್ಣಗಳನ್ನು ಬಳಸಿದ್ದರಿಂದ ನೈಜಚಿತ್ರ ಪರಂಪರೆಗೆ ಸೇರುತ್ತದೆ. ಅಚ್ಚುಕಟ್ಟಾಗಿ ತನ್ನ ಕಲಾಕೃತಿಯ ಉದ್ದೇಶವನ್ನು ಮೊದಲ ನೋಟಕ್ಕೆ ಗೋಚರವಾಗುವಂತೆ ಕಲಾವಿದ ವ್ಯಕ್ತಪಡಿಸಿದ್ದಾನೆ. ತೆಳು ಹಸಿರುಬಣ್ಣದ ಮಿರುಗುವ ಜರತಾಗಿ ನಿಲುವಂಗಿ, ಗುಲಾಬಿಬಣ್ಣದ ಮೇಲುವಸ್ತ್ರ, ಕೊರಳಲ್ಲಿ ಮುತ್ತಿನ ಹಾರ, ರುದ್ರಾಕ್ಷಿ ಮಾಲೆಯನ್ನು ಧರಿಸಿದ ಬಸವಣ್ಣನವರ ಮುಖ ಮುದ್ರೆಯು ನೋವಿನಿಂದ ಕೂಡಿರುವಂತೆ ಕಾಣುತ್ತದೆ. ತಲೆಯನ್ನು ತುಸು ಬಾಗಿಸಿ, ಮುತ್ತಿನ ಕುಚ್ಚುಗಳಿಂದ ಅಲಂಕೃತವಾದ ಬಂಗಾರದ ಕಿರೀಟವನ್ನು ಬಸವಣ್ಣ ಆಗ ತಾನೆ ಚಿಕ್ಕ ಮೇಜಿನ ಮೇಲೆ ಇಡುತ್ತಿದ್ದಾನೆಂಬ ಭಾವನೆ ವ್ಯಕ್ತವಾಗುತ್ತದೆ.

ಅದಕ್ಕೂ ಮೊದಲು ತನ್ನಲ್ಲಿರುವ ಖಡ್ಗ ಮತ್ತು ಅಧಿಕಾರದ ಸಂಕೇತವಾದ ಮುದ್ರೆಯುಂಗುರವನ್ನು ಕಳಚಿ ಇಟ್ಟಿದ್ದಾನೆ. ದೇಹ ಸ್ವಲ್ಪ ಬಾಗಿದಾಗ ಬಲಪಾದ ತುಸು ಮೇಲಕ್ಕೆದ್ದಿರುವಂತೆ ಚಿತ್ರಿಸಿರುವ ಸೂಕ್ಷ್ಮಚಿತ್ರಣ ಮನಸೆಳೆಯುತ್ತದೆ. ಬಂಗಾರದ ಹಾರವೂ ಮೇಜಿನ ಮೇಲಿಂದ ಇಳಿಯಬಿದ್ದಿರುವುದು ಸೂಕ್ಷ್ಮವಾಗಿ

---

೧೦೦. ಡಾ. ಎಸ್. ಸಿ. ಪಾಟೀಲ, ಪ್ರೊ, ಸುರೇಶ ಜಯರಾಂ (ಸಂ.) : ಕರ್ನಾಟಕ ಕಲಾವಾರ್ತೆ (ಜಿ.ಎಸ್. ಭೂಸಗೊಂಡ ಅವರ ಲೇಖನ), ಪು–೧೨

೧೦೧. ಡಾ. ಎಸ್. ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು (ಪ್ರೊ, ಶಂಕರ ಪಾಟೀಲರ ಲೇಖನ), ಪು–೧

ಗಮನಿಸಿದರೆ ಕಾಣುತ್ತದೆ. ಬಸವಣ್ಣನ ಪಕ್ಕದಲ್ಲಿ ಪೀಠದ ಮೇಲೆ ಕುಳಿತ ಇಬ್ಬರು ಅಧಿಕಾರಿಗಳು ತಮ್ಮ ತಲೆಯನ್ನು ಸ್ವಲ್ಪ ಕೆಳಕ್ಕೆ ಬಾಗಿಸಿ ಚಿಂತಾಕ್ರಾಂತರಾಗಿರುವ ಚಿತ್ರಣ ಕಾಣಿಸುತ್ತದೆ. ಬಸವಣ್ಣನ ಹಿಂದೆ ಶರಣರು ಅಥವಾ ಅಧಿಕಾರಿವರ್ಗದವರು ಹತಾಶಭಾವನೆಯನ್ನು ವ್ಯಕ್ತಪಡಿಸುವವರಂತೆ ತೋರುತ್ತಿದ್ದಾರೆ. ಎತ್ತರದ ಸಿಂಹಾಸನದ ಪೀಠದ ಮೇಲೆ ಕುಳಿತಿರುವ ಬಿಜ್ಜಳನ ಎರಡೂ ಬದಿಗೆ ಗುಲಾಬಿಬಣ್ಣದ ಎರಡು ಮೆತ್ತನೆಯ ದಿಂಬುಗಳಿವೆ. ಎಡಬದಿಯ ದಿಂಬಿನ ಮೇಲೆ ಕಡುಗೆಂಪು ಬಣ್ಣದ ರಾಜಪೋಷಾಕನ್ನು ಧರಿಸಿದ ಬಿಜ್ಜಳ ಕುಳಿತಿದ್ದಾನೆ. ತನ್ನ ಎಡಗೈಯನ್ನು ಗದ್ದಕ್ಕೆ ಆನಿಸಿ ಚಿಂತಾಕ್ರಾಂತನಾಗಿರುವಂತೆ ಕಾಣಿಸುತ್ತಾನೆ. ಬಸವಣ್ಣನ ಗಡೀಪಾರು ಆತನಿಗೂ ಇಷ್ಟವಿಲ್ಲವೆಂದು ತೋರುವ ಭಾವ ಪ್ರಕಟವಾಗಿದೆ.

ಬಿಜ್ಜಳನ ಬಲಬದಿಯಲ್ಲಿ ಒಬ್ಬ ಚಾಮರ ಬೀಸುತ್ತಿದ್ದಾನೆ. ನಿಂತಿರುವ ಮೂವರು ತಮ್ಮತಮ್ಮಲ್ಲಿ ಚರ್ಚೆಯಲ್ಲಿ ತೊಡಗಿರುವಂತೆ ಕಾಣಿಸುತ್ತದೆ. ಎರಡು ಪೀಠಗಳಲ್ಲಿ ಕುಳಿತ ಬ್ರಾಹ್ಮಣರು ತಮ್ಮ ಬಲಗೈಯನ್ನು ಸ್ವಲ್ಪ ಮೇಲಕ್ಕೆತ್ತಿ ಬಸವಣ್ಣನ ಗಡಿಪಾರನ್ನು, ಅಧಿಕಾರ ತ್ಯಾಗವನ್ನು ಕುರಿತು ವ್ಯಂಗ್ಯ ಇಲ್ಲವೆ ಅಪಹಾಸ್ಯ ಮಾಡುವ ಮುಖಭಾವವನ್ನು ವ್ಯಕ್ತಪಡಿಸುವಂತೆ ಕಲಾವಿದ ಚಿತ್ರಿಸಿದ್ದಾನೆ. ಚಿತ್ರದ ಭಿತ್ತಿಯು ಅಪೂರ್ವವಾಗಿ ಮೂಡಿಬಂದಿದೆ. ಹಸಿರು ಬಣ್ಣದ ಕಂಬಗಳು, ಕಿಟಕಿಗಳು, ಅವುಗಳ ಹಿಂದೆ ಇಳಿಯಬಿಟ್ಟ ಬಿಳಿಯ ಬಣ್ಣದ ಪರದೆಗಳು, ಹಸಿರು, ನೀಲಿಮಿಶ್ರಿತ ಬಣ್ಣದ ಅಲಂಕೃತ ನೆಲಹಾಸು ಅತ್ಯಾಕರ್ಷಕವಾಗಿ ಮೂಡಿಬಂದಿವೆ. ಇದೆಲ್ಲದರ ಮಧ್ಯೆಯೇ ಬಸವಣ್ಣನವರು ಕಿರೀಟವನ್ನು ಇಡುತ್ತಿರುವ ವೃತ್ತಾಕಾರದ ಕಿರುಮೇಜಿನ ಚಿತ್ರಣವು ತುಸು ನೋಡುಗನಿಗೆ ಕಿರಿಕಿರಿಯುಂಟುಮಾಡುತ್ತದೆ. ಆ ಕಿರುಮೇಜಿನ ಮೇಲಿನ ಸಮತಳ ಭಾಗವು ಬಸವಣ್ಣನವರ ತೀರ ಎದುರಿಗೇ ಇದ್ದಂತೆ ಕಂಡರೂ ಅದರ ಕಾಲುಗಳು ಅವರ ಪಕ್ಕದಿಂದ ತುಸು ದೂರವಿರುವಂತೆ ಕಾಣಿಸುತ್ತದೆ. ಅದರಂತೆ ಹಿನ್ನೆಲೆಯ ಅರಮನೆಯ ಗೋಡೆ, ಕಂಬ ಇತ್ಯಾದಿಗಳನ್ನು ಇನ್ನಷ್ಟು ತಿಳಿವರ್ಣದಿಂದ ಮುಕ್ತಾಯಗೊಳಿಸಿದ್ದರೆ ಚಿತ್ರ ಇನ್ನಷ್ಟು ಉತ್ಕೃಷ್ಟವಾಗುತ್ತಿತ್ತು.

ಆಕೃತಿಗಳ ಸಂಯೋಜನೆಯ ದೃಷ್ಟಿಯಿಂದ ಈ ಕೃತಿ ಮಹತ್ವದ್ದು. ಬಿಜ್ಜಳನ ಆಸ್ಥಾನದಲ್ಲಿ ಕನ್ನಡದ '೧' ಅಂಕಿಯ ರೂಪದಲ್ಲಿ ಆಕೃತಿಗಳನ್ನು ಸಂಯೋಜಿಸಲಾಗಿದೆ. ಚಿಂತಾಕ್ರಾಂತನಾಗಿ ಕುಳಿತಿರುವ ಬಿಜ್ಜಳ, ಕಿರೀಟವನ್ನು ಹಿಂದಿರುಗಿಸುತ್ತಿರುವ ಬಸವಣ್ಣ, ಚಿತ್ರದ ಬಲಪಾರ್ಶ್ವದಲ್ಲಿ ಅಪಹಾಸ್ಯ ಮಾಡುತ್ತಿರುವ ಬಸವಣ್ಣನ ವಿರೋಧಿಗಳಾದ ಬ್ರಾಹ್ಮಣವರ್ಗ, ಬಸವಣ್ಣನಿಗೆ ಎಂತಹ ದುರ್ಗತಿ ಬಂದಿತೆಂದು ಅಪಹಾಸ್ಯ ಮಾಡುವಂತೆ ಕಲಾವಿದರು ಇಲ್ಲಿ ಚಿತ್ರಿಸಿದ್ದಾರೆ. ಭಾವಪ್ರದವಾಗಿರುವ ಇಲ್ಲಿನ ಆಕೃತಿಗಳು ಆಂಗಿಕವಾದ ಸ್ಪಷ್ಟತೆಯನ್ನು ಬಯಸಿವೆ. ತಾಜಾತನದಿಂದ ಕೂಡಿದ ವರ್ಣಯೋಜನೆ ಇಡೀ ಚಿತ್ರವನ್ನು ಶ್ರೀಸಾಮಾನ್ಯನಿಗೆ ಆಪ್ಯಾಯಮಾನವಾಗಿಸುತ್ತದೆ. ಯಥಾದರ್ಶನದ ರಚನಾ ಸಾಧ್ಯತೆಗಳನ್ನು ಸ್ಪಷ್ಟವಾಗಿಸಿಕೊಳ್ಳುವ ಅಗತ್ಯ ಈ ಚಿತ್ರಕ್ಕಿದೆ.

ಮಂತ್ರಿಪದವಿ ಹಿಂತಿರುಗಿಸುತ್ತಿರುವ ಬಸವಣ್ಣ–೨

"ಕಲಾಪ್ರೇರಣೆ ಮಾನವನ ಮೂಲಭೂತ ಅಂಶಗಳಲ್ಲೊಂದು."[೧೦೨] "ತನ್ನ ಕಣ್ಣಿಗೆ ಗೋಚರವಾಗುವ ಸುಂದರ ಪದಾರ್ಥಗಳನ್ನು ತಾನು ಸೃಷ್ಟಿಸಿ ನೋಡಬೇಕೆಂಬುದು ಮಾನವನಲ್ಲಿ ಲೀನವಾಗಿರುವ

೧೦೨. ಡಾ. ಎಸ್. ಸಿ. ಪಾಟೀಲ (ಸಂ.): ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು(ಪ್ರಿ. ಸದಾನಂದ ಕನವಳ್ಳಿಯವರ ಲೇಖನ), ಪು–೧೪

ಸಹಜಗುಣ."[೧೦೩] ಈ ಮಾತು ಕಲಾವಿದ ಬಸವರಾಜ ಮುಗಳಿ ಅವರಿಗೆ ಅನ್ವಯಿಸುತ್ತದೆ. ಮೇಲಿನ ವಿಷಯಕ್ಕೆ ಸಂಬಂಧಿಸಿದ ಮತ್ತೊಂದು ಕಲಾಕೃತಿ ಇದಾಗಿದೆ. ಬಸವಣ್ಣ ತನ್ನ ಅಧಿಕಾರತ್ಯಾಗದ ಸಂಕೇತವಾಗಿ ಕಿರೀಟವನ್ನು ಬಿಜ್ಜಳನಿಗೆ ಒಪ್ಪಿಸುತ್ತಿರುವ ಸನ್ನಿವೇಶವು ದಾಖಲುಗೊಂಡಿದೆ.

ನೀಲಿ, ಬಿಳಿ, ಕೆಂಪು ಮುಂತಾದ ಲಘುವರ್ಣಗಳ ಸಂಯೋಜನೆಯನ್ನು ನೋಡಬಹುದು. ಈ ಚಿತ್ರವು ಜಲವರ್ಣಪರಂಪರೆಗೆ ಸೇರಿದೆ. ಹೆಚ್ಚಿನ ವಿವರಗಳಿಲ್ಲದಿದ್ದರೂ ತನ್ನ ಆಶಯವನ್ನು ತೋರ್ಪಡಿಸುವಲ್ಲಿ ಕಲಾಕೃತಿಯು ಯಶಸ್ವಿಯಾಗಿದೆ. ಹಸಿರುಬಣ್ಣದ ಮೇಲುಹೊದಿಕೆ, ತಿಳಿ ಕಾವಿಬಣ್ಣದ ನಿಲುವಂಗಿ, ಬಿಳಿಬಣ್ಣದ ಪಂಚೆಯನ್ನು ಧರಿಸಿ ಅವನತ ಮುಖಮುದ್ರೆಯೊಂದಿಗೆ ಬಸವಣ್ಣ ತನ್ನ ಕಿರೀಟವನ್ನು ಈಗಾಗಲೇ ಬಿಜ್ಜಳನಿಗೆ ಒಪ್ಪಿಸಿದ್ದಾನೆ. ಈಗ ಖಡ್ಗವನ್ನು ಒಪ್ಪಿಸುತ್ತಿರುವಂತೆ ಕಲಾವಿದನ ಕಲ್ಪನೆಯು ಮೂಡಿಬಂದಿದೆ. ಚಿಕ್ಕ ದುಂಡುಮೇಜಿನ ಮೇಲೆ ಕಿರೀಟ, ಮುದ್ರೆಯುಂಗುರ, ಕೊರಳ ಹಾರ ಪ್ರಮುಖವಾಗಿ ಗೋಚರಿಸುತ್ತವೆ. ಬಿಜ್ಜಳನು ಕೆಂಪುಬಣ್ಣದ ಸಿಂಹಾಸನದ ಮೇಲೆ ತನ್ನ ಮೊಣಕೈಯನ್ನು ದಿಂಬಿಗೆ ಒರಗಿಸಿ, ಎಡಹಸ್ತವನ್ನು ಗದ್ದಕ್ಕೆ ಆನಿಸಿಕೊಂಡಿರುವಂತೆ ಚಿತ್ರಿತನಾಗಿದ್ದಾನೆ. ಬಿಜ್ಜಳನು ಬಸವಣ್ಣನ ಅಧಿಕಾರ ತ್ಯಾಗವನ್ನು ಮೌನವಾಗಿ ಅಸಹಾಯಕ ಸ್ಥಿತಿಯಿಂದ ವೀಕ್ಷಿಸುತ್ತಿದ್ದಾನೆ ಎನಿಸುತ್ತದೆ. ಆಸ್ಥಾನದ ಎಡಬದಿಯಲ್ಲಿ ಮೂರು ಜನ ಪೀಠದ ಮೇಲೆ ಕುಳಿತ ವ್ಯಕ್ತಿಗಳನ್ನು ಬ್ರಾಹ್ಮಣ ಅಧಿಕಾರಿಗಳಾಗಿರಬೇಕೆಂದು ಊಹಿಸಬಹುದು. ಅದರಲ್ಲಿ ಒಬ್ಬಾತ ಕೊಂಡೆಯ ಮಂಚಣ್ಣನಂತೂ ಇರಲೇಬೇಕು. ಬಸವಣ್ಣನ ಅಧಿಕಾರತ್ಯಾಗಕ್ಕೆ ಆತನೇ ಸೂತ್ರಧಾರಿ. ಆ ಮೂವರು ತದೇಕಚಿತ್ತದಿಂದ ಬಸವಣ್ಣನೆಡೆಗೆ ಮೌನವಾಗಿ ವೀಕ್ಷಿಸುತ್ತಿದ್ದರೆ, ಅವರ ಹಿಂಬದಿಯಲ್ಲಿ ಇಬ್ಬರು ವ್ಯಕ್ತಿಗಳು ಪರಸ್ಪರ ಪಿಸುಮಾತಿನಲ್ಲಿ ಸಂಭಾಷಣೆಯಲ್ಲಿ ತೊಡಗಿರುವುದು ಕಂಡುಬರುತ್ತದೆ.

"ಜಲವರ್ಣ ಉಂಟುಮಾಡುವ ಪರಿಣಾಮವೇ ಒಂದು ಬಗೆಯಾದರೆ, ಅಕ್ರಲಿಕ್, ತೈಲವರ್ಣ, ಪೇಸ್ಟಲ್, ಪೆನ್ಸಿಲ್, ಕೊಲಾಜ್, ಗ್ರಾಫಿಕ್‌ಗಳು ಸೇರಿದಂತೆ ಪ್ರತಿಯೊಂದು ಮಾಧ್ಯಮವೂ ಒಂದರಿಂದ ಭಿನ್ನವಾದ ಪರಿಣಾಮಗಳನ್ನು ಉಂಟುಮಾಡುತ್ತವೆ."[೧೦೪] ಚಿತ್ರದಲ್ಲಿ ತೆಳುನೀಲಿ ಬಣ್ಣವನ್ನು ಗೋಡೆಗೆ ಬಳಸಲಾಗಿದ್ದು, ಪರದೆಗಳು ಪಾರದರ್ಶಕವಾಗಿರುವುದು ಆಕರ್ಷಕವಾಗಿದೆ. ಉಪವರ್ಗಗಳ ವರ್ಣಯೋಜನೆ, ನೆಲಹಾಸು, ವಾಸ್ತುವಿನ್ಯಾಸದಲ್ಲಿ ಸಮರ್ಪಕವಾಗಿ, ಸ್ಪಷ್ಟವಾಗಿ ಮೂಡಿಬಂದಿದೆ. ಹಿಂದಿನ ಚಿತ್ರಕ್ಕಿಂತ ಈ ಚಿತ್ರವು ವರ್ಣಯೋಜನೆಯಲ್ಲಿ ಅತ್ಯಂತ ಪ್ರಬುದ್ಧವಾದುದು. ತುಂಬಾ ಮೃದುವಾದ ವರ್ಣಗಳ ಬಳಕೆಯಿಂದ ಈ ಕಲಾಕೃತಿ ನೋಡುಗರಿಗೆ ಹೆಚ್ಚು ಆಪ್ಯಾಯಮಾನವಾಗುತ್ತದೆ. ಬಿಜ್ಜಳ ಸಿಂಹಾಸನದ ಮೇಲೆ ಆಸೀನನಾಗಿದ್ದು, ಬಸವಣ್ಣನವರು ಬಿಜ್ಜಳನ ಮುಂದೆ ಇರುವ ಮೇಜಿನ ಮೇಲೆ ಕಿರೀಟ, ಮುದ್ರೆಯುಂಗುರ, ಕಂಠೀಹಾರ ಮತ್ತು ಖಡ್ಗವನ್ನು ಅರ್ಪಿಸುತ್ತಿರುವ ಸಂಯೋಜನೆಯನ್ನು ಸ್ಥಳಾವಕಾಶದ ಎಡಪಾರ್ಶ್ವದಲ್ಲಿ ಮಾಡಲಾಗಿದೆ. ಸ್ಥಳಾವಕಾಶದ ಇನ್ನರ್ಧ ಬಲಪಾರ್ಶ್ವದಲ್ಲಿ ರಾಜಪ್ರಮುಖರನ್ನು ಸಂಯೋಜಿಸಿದ್ದು ಯಥಾದರ್ಶನ ರಚನಾ ಪದ್ಧತಿಯನ್ವಯ ಅವರು ಸ್ವಲ್ಪ ಹಿಂಭಾಗಕ್ಕೆ ಸಂಯೋಜನೆಗೊಂಡಂತಿದೆ. ಅಂತಹ ವೈಭವವೂ ಅಲ್ಲದ ಅರಮನೆಯ ವಿನ್ಯಾಸವೂ ಸಹ ತಂಪುವರ್ಣಗಳಿಂದ ರಚಿಸಲ್ಪಟ್ಟಿದೆ. ಒಟ್ಟು ಚಿತ್ರವು ಆಕರ್ಷಕ ಶಕ್ತಿಯನ್ನು ಹೊಂದಿದೆ.

---

೧೦೩. ಅ.ನ.ಕೃ : ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ, ಪು-೩೧
೧೦೪. ಚಿ. ಸು. ಕೃಷ್ಣಶೆಟ್ಟಿ : ವರ್ಣಾವರ್ಣ, ಪು-೪

೨.೧೦.೨. ಚನ್ನಬಸವಣ್ಣನಿಂದ ಬಸವಣ್ಣನಿಗೆ ಬೀಳ್ಕೊಡುಗೆ

"ಮಾನವನ ಚಿತ್ರೇತಿಹಾಸದ ಹಿಂದೆ ಅಡಕವಾಗಿರುವ ನಿಯಮಗಳ ಜೊತೆಗೆ ಹೇಗೆ ಅವನ ಕಾರ್ಯಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತದೆಯೆಂಬುದೂ ಗೊತ್ತಾಗುತ್ತದೆ. ಚಿತ್ರಕರ್ಮದ ಒಂದೊಂದೇ ಘಟನೆಗಳನ್ನು ಅಭ್ಯಾಸ ಮಾಡದೆ ಒಟ್ಟು ಸಮಾಜ ಆಯಾ ಕಾಲದ ಪರಿಸ್ಥಿತಿಯನ್ನೇ ಪ್ರಧಾನವಾಗಿಟ್ಟುಕೊಂಡು ಅಭ್ಯಾಸ ಮಾಡಿದಲ್ಲಿ ಘಟನೆಗಳ ಹಿಂದಿರುವ ಸಾಮಾನ್ಯ ನಿಯಮಗಳನ್ನು ಗುರುತಿಸಲು ಸಾಧ್ಯ".[೧೦೫] ಕಲ್ಯಾಣಪಟ್ಟಣದಲ್ಲಿ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಪದವಿಯನ್ನು ತ್ಯಜಿಸಿ ಕೂಡಲಸಂಗಮಕ್ಕೆ ಪ್ರಯಾಣಿಸ ಹೊರಟ ಬಸವಣ್ಣನನ್ನು ಆತನ ಸೋದರಳಿಯನಾದ ಚನ್ನಬಸವಣ್ಣನು ಆತ್ಮೀಯತೆಯಿಂದ ಬೀಳ್ಕೊಡುವ ಸನ್ನಿವೇಶವನ್ನು ಕಲಾವಿದ ಚಿತ್ರಿಸಿದ್ದಾನೆ.

ಹೊರಾಂಗಣದಲ್ಲಿ ಚಿತ್ರಿತವಾದ ಈ ಕಲಾಕೃತಿಯಲ್ಲಿ ತೆಳುಗುಲಾಬಿ, ತೆಳುಹಸಿರು ಮುಂತಾದ ತಂಪುವರ್ಣಗಳ ಬಳಕೆಯನ್ನು ಕಾಣುತ್ತೇವೆ. ತೈಲವರ್ಣ ಪರಂಪರೆಗೆ ಸೇರಿದ ಚಿತ್ರವಿದಾಗಿದೆ. ಬಾಚಿ ಹಿಂಚಾಚಿದ ತಲೆಗೂದಲು, ಉದ್ದವಾದ ಕಿವಿ, ಕೋಲುಮುಖ, ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ, ಇಷ್ಟಲಿಂಗದ ಗಂಟು, ತೆಳು ಕಾವಿವಸ್ತ್ರದ ಮೇಲುಹೊದಿಕೆ, ಬಿಳಿಬಣ್ಣದ ಪಂಚೆಯನ್ನು ಧರಿಸಿದ ಬಸವಣ್ಣ ಒಬ್ಬ ಯೋಗಿಯಂತೆ ಕಂಡುಬರುತ್ತಾನೆ. ಹಸನ್ಮುಖಿಯಾದ ಆತನ ಎಡಗೈ ತನ್ನ ಅಳಿಯ ಚನ್ನಬಸವಣ್ಣನ ಮೇಲಿದೆ. ಬಲಗೈಯನ್ನು ಆಪ್ಯಾಯಮಾನವಾದ ರೀತಿಯಲ್ಲಿ ಚನ್ನಬಸವಣ್ಣನ ಎಡಗೈಯ ಹಸ್ತದ ಮೇಲೆ ಇಟ್ಟು ಪ್ರಮಾಣವನ್ನು ಮಾಡುವಂತೆ ತೋರುತ್ತದೆ. ಬಹುಶಃ ಕಲಾವಿದ ಇಲ್ಲಿ ಬಸವಣ್ಣ ಅಧಿಕಾರ ತೊರೆದು ಕೂಡಲಸಂಗಮಕ್ಕೆ ಹೋದ ಮೇಲೆ ತನ್ನ ಕಾರ್ಯವನ್ನು ಚನ್ನಬಸವಣ್ಣನಿಗೆ ಒಪ್ಪಿಸುವ ಆಶಯವನ್ನು ಹೊಂದಿದಂತೆ ತೋರುತ್ತದೆ. ತಲೆಯ ಮೇಲೆ ಕಿರುಜಟೆಯನ್ನು ಹೊಂದಿದ ಚನ್ನಬಸವಣ್ಣ ತೆಳುಬಿಳಿಬಣ್ಣದ ವಿಭೂತಿ ಧರಿಸಿದ್ದಾನೆ. ಕೊರಳಲ್ಲಿ ಇಷ್ಟಲಿಂಗ, ರುದ್ರಾಕ್ಷಿ ಮಾಲೆಯಿದೆ. ಸ್ವಲ್ಪ ಮಂದವಾದ ಕಾವಿಯ ಬಣ್ಣದ ಮೇಲುಹೊದಿಕೆ ತೆಳುಗುಲಾಬಿ ಬಣ್ಣದ ಪಂಚೆಯನ್ನು ಧರಿಸಿರುವ ಚನ್ನಬಸವಣ್ಣನ ಮುಖದಲ್ಲಿ ನೋವಿನ ಛಾಯೆಯನ್ನು ಕಾಣುತ್ತೇವೆ. ಪಕ್ಕದಲ್ಲಿ ಜಾತ್ಯಶ್ವದಂತೆ ತೋರುವ ಕುದುರೆಯೊಂದು ಬಿಳಿಬಣ್ಣದಿಂದ ಕೂಡಿದ್ದು, ಸೊಗಸಾದ ವಸ್ತ್ರಗಳ ಪಟ್ಟಿಕೆಯ ಅಲಂಕಾರವನ್ನು ಹೊಂದಿದೆ. ಎತ್ತರದ ನಿಲುವಿನ, ಬಸವಣ್ಣ, ಚನ್ನಬಸವಣ್ಣ ಅವರಿಬ್ಬರ ಸಂಭಾಷಣೆಯನ್ನು ನೋಡುತ್ತಿರುವಂತೆ ಕುದುರೆಯ ಮುಖವನ್ನು ಕಲಾವಿದ ರೂಪಿಸಿದ್ದಾನೆ.

ಸನ್ನಿವೇಶ, ಸಂದರ್ಭವನ್ನು ಸರಿಯಾಗಿ ಗ್ರಹಿಸಿ, ಪಾತ್ರಗಳ ಆಂಗಿಕ ಚಲನವಲನ, ಮುಖಭಾವ, ಎಲ್ಲವನ್ನು ಸಮರ್ಪಕವಾಗಿ ಕಲಾವಿದ ಮುಗಳಿಯವರು ನಿರ್ವಹಿಸಿದ್ದಾರೆ. ಶೋಕವೇ ಮಡುಗಟ್ಟಿ ನಿಂತಂತಹ ಇಂತಹ ಸನ್ನಿವೇಶದಲ್ಲಿ ಎಲ್ಲಿಯೂ ಅತಿಯಾದ ವರ್ಣಗಳ, ಗಾಢವರ್ಣಗಳ ಬಳಕೆ ಮಾಡದೆ ಹಿತಮಿತವಾದ ಬಣ್ಣಗಳನ್ನು ಚಿತ್ರಗಳನ್ನು ನೋಡಿದವನಿಗೆ ತೀವ್ರವಾಗಿ ತಟ್ಟುವಂತೆ ಚಿತ್ರವನ್ನು ರಚಿಸಲಾಗಿದೆ. ಸಂಯೋಜನೆಯ ದೃಷ್ಟಿಯಿಂದಲೂ ಸಹ ಹಿನ್ನೆಲೆಯ ಪರಿಸರವನ್ನು ಬಹು ಸೂಚ್ಯವಾಗಿ,

---

೧೦೫. ಡಾ. ಎಸ್. ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕಕ್ಷೇತ್ರಗಳು (ಪ್ರೊ. ಎಚ್.ಆರ್. ರಘುನಾಥಭಟ್ ಅವರ ಲೇಖನ), ಪು-೪೦

ಮೃದುವಾದ ವರ್ಣಯೋಜನೆಯಿಂದ ನಿರ್ವಹಿಸಿದ್ದಾರೆ. ಆಕೃತಿಗಳು ಭಾವಪ್ರದವಾಗಿ ರಚನೆಗೊಂಡಿದ್ದು, ಶರಣರಲ್ಲಿನ ಮುಗ್ಧತೆ, ಸಾತ್ವಿಕತೆಯನ್ನು ಚೆನ್ನಾಗಿ ಗ್ರಹಿಸಿದ್ದಾರೆ.

೨.೧೦.೩. ಶರಣಸಮೂಹಕ್ಕೆ ಸಂದೇಶ ನೀಡುತ್ತಿರುವ ಬಸವಣ್ಣ-೧

ಪ್ರಸ್ತುತ ಚಿತ್ರವು ಜಲವರ್ಣ ಸಂಪ್ರದಾಯಕ್ಕೆ ಸೇರಿದೆ. ಪ್ರಧಾನವಾಗಿ ಬಿಳಿ, ಕಂದು, ತೆಳು ಕಂದು, ಕಡು ಹಸಿರು, ತೆಳು ಹಸಿರು ವರ್ಣಗಳನ್ನು ಬಳಸಲಾಗಿದೆ. ಬಸವಣ್ಣನು ಮಂತ್ರಿ ಪದವಿಯನ್ನು ಬಿಜ್ಜಳನಿಗೆ ವಾಪಸು ನೀಡಿ, ಕಲ್ಯಾಣದಿಂದ ಕೂಡಲಸಂಗಮಕ್ಕೆ ತೆರಳುವ ಮುನ್ನ ತನ್ನ ಭಕ್ತಸಮೂಹವನ್ನು ಉದ್ದೇಶಿಸಿ ಮಾತನಾಡುವ ಸನ್ನಿವೇಶವನ್ನು ಇಲ್ಲಿ ಕಾಣುತ್ತೇವೆ. ಕೊರಳಲ್ಲಿ ಕೆಂಪು ಬಣ್ಣದ ಬಟ್ಟೆಯ ಗಂಟಿನಲ್ಲಿ ಕಟ್ಟಿದ ಇಷ್ಟಲಿಂಗ, ರುದ್ರಾಕ್ಷಿಮಾಲೆ, ಕಿವಿಯಲ್ಲಿ ರುದ್ರಾಕ್ಷಿಯ ಕರ್ಣಕುಂಡಲಗಳು, ಹಣೆಯಲ್ಲಿ ವಿಭೂತಿ, ತಲೆಯ ಹಿಂಬದಿಯಲ್ಲಿ ತೆಳುಬಿಳಿವರ್ಣದ ಪ್ರಭಾವಳಿಯಿಂದ ಬಸವಣ್ಣನ ಇರುವನ್ನು ಕಲಾವಿದ ಚಿತ್ರಿಸಿದ್ದಾನೆ. ಯಾವುದೇ ಉದ್ವೇಗಗಳಿಲ್ಲದೆ, ಶಾಂತಚಿತ್ತದಿಂದ ಬಸವಣ್ಣ, ಮರದ ಕೆಳಗೆ ಕುಳಿತಿರುವ ಶರಣ ಶರಣೆಯರಿಗೆ ತಾನು ಕೂಡಲಸಂಗಮಕ್ಕೆ ಹೊರಡುವ ಸೂಚನೆಗಳನ್ನು ನೀಡುತ್ತಿರುವಂತೆ ಭಾಸವಾಗುತ್ತದೆ.

ಬಸವಣ್ಣನ ಎದುರಿಗೆ ಕುಳಿತ ಒಬ್ಬ ಪುರುಷ ನಾಲ್ಕೈದು ಜನ ಸ್ತ್ರೀಯರ ಹಿಂಭಾಗ ಮಾತ್ರ ಕಾಣುವಂತೆ ಚಿತ್ರಿಸಿರುವುದು ಕಲಾವಿದನ ನೈಜ ನಿರೂಪಣೆಗೆ ಸಾಕ್ಷಿಯಾಗಿದೆ. ಬಸವಣ್ಣನ ಎಡಬದಿಯಲ್ಲಿ ಕುಳಿತವರಲ್ಲಿ ಶರಣೆಯರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಅವರೆಲ್ಲರೂ ತುಂಬ ಆತಂಕದ, ದುಃಖದ ಮುಖಮುದ್ರೆಯ ಭಾವನೆಯನ್ನು ಹೊಂದಿರುವಂತೆ ಚಿತ್ರಿಸುವುದು ಕಲಾವಿದನ ಉದ್ದೇಶವಾಗಿದೆ. ಒಬ್ಬ ಶರಣೆ ಕಡುವರ್ಣದ ಹಸಿರುಬಣ್ಣದ ಸೀರೆಯನ್ನು ಧರಿಸಿದ್ದಾಳೆ, ಉಳಿದವರ ಮುಖಗಳು ಮಾತ್ರ ಒಡೆದು ತೋರುತ್ತಿವೆ. ಶರಣರ ಮುಖದಲ್ಲಿಯೂ ತೀವ್ರ ಆತಂಕದ ಕ್ಷಣಗಳನ್ನು ಹೊಂದಿರುವ ಭಾವನೆ ಅಭಿವ್ಯಕ್ತಗೊಂಡಿದೆ. ಮರದ ಕೆಳಗೆ ಪ್ರಸ್ತುತ ಘಟನೆ ಜರುಗುತ್ತಿರುವಂತೆ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಊರಿನ ಮನೆಗಳು ಕಂಡುಬರುತ್ತವೆ. ಅಂದರೆ ಬಸವಣ್ಣ ಕಲ್ಯಾಣವನ್ನು ಬಿಟ್ಟು ಹೊರವಲಯಕ್ಕೆ ದಾಟಿ ಬಂದಿರುವಂತೆ ತೋರುತ್ತದೆ. ಬಸವಣ್ಣನನ್ನು ಸುತ್ತುವರಿದಿರುವ ಶರಣಸಮೂಹದಲ್ಲಿ ದುಃಖ ಮಡುಗಟ್ಟಿದೆ. ಕಲ್ಯಾಣದ ಪರಿಸರವನ್ನು ಹಿನ್ನೆಲೆಯಲ್ಲಿ ಸಂಯೋಜಿಸಿ, ಮುನ್ನೆಲೆಯಲ್ಲಿ ಶರಣಸಮೂಹವನ್ನು ಚಿತ್ರಿಸಲಾಗಿದೆ. ಬಸವಣ್ಣ ನಿಂತುಕೊಂಡು ಶರಣ ಸಮೂಹವನ್ನುದ್ದೇಶಿಸಿ ಮಾತನಾಡುತ್ತಿರುವ ಸನ್ನಿವೇಶಕ್ಕೆ ಪೂರಕವಾಗಿ ಆಕೃತಿಗಳನ್ನು ಸ್ಥಳಾವಕಾಶದ ಮುಕ್ಕಾಲು ಭಾಗದಲ್ಲಿ ಬಿಂಬಿಸಲಾಗಿದೆ. ಕೆಲವು ಆಕೃತಿಗಳಿಗೆ ಮೂಲವರ್ಣಗಳನ್ನು ದುಡಿಸಿಕೊಂಡಿದ್ದರೆ, ಮಿಕ್ಕುಳಿದ ಆಕೃತಿಗಳಿಗೆ ಉಪವರ್ಗದ ವರ್ಣಗಳ ಯೋಜನೆಯನ್ನು ದುಡಿಸಿ-ಕೊಳ್ಳಲಾಗಿದೆ. "ಒಬ್ಬ ಕಲಾವಿದ ಯಾವ ಭಾವ ಹೇಳುತ್ತಿದ್ದಾನೆ, ಯಾವ ಅನುಭವ ಚಿತ್ರಿಸುತ್ತಿದ್ದಾನೆ ಎಂಬುದನ್ನು ಮೊದಲು ಗುರುತಿಸಬೇಕು."[೧೦೬] ನೈಜವಾದ ರಚನಾಶೈಲಿಯನ್ನು ಹೊಂದಿದ ಈ ಕಲಾಕೃತಿ ವೀಕ್ಷಕರಿಗೆ, ಬಸವಣ್ಣನಿಗೆ ಒದಗಿದ ದುರ್ಗತಿಯ ಕುರಿತು ಅನುಕಂಪ ವ್ಯಕ್ತಪಡಿಸುವಷ್ಟು ಭಾವ ಸ್ಫುರಿಸುತ್ತದೆ.

---

೧೦೬. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪು-೧೩೧

ಶರಣರಿಗೆ ಸಂದೇಶವನ್ನು ನೀಡುತ್ತಿರುವ ಬಸವಣ್ಣ-೨

ಪ್ರಸ್ತುತ ಚಿತ್ರದಲ್ಲಿ ಬಸವಣ್ಣ ಕಲ್ಯಾಣಪಟ್ಟಣದಿಂದ ಕೂಡಲಸಂಗಮಕ್ಕೆ ಹೊರಡುವ ಮುನ್ನ ತನ್ನ ಪ್ರೀತಿಯ ಭಕ್ತಬಾಂಧವರು ಮತ್ತು ಅಭಿಮಾನಿಗಳನ್ನುದ್ದೇಶಿಸಿ ಮಾತನಾಡುವ ಸನ್ನಿವೇಶವನ್ನು ಕಲಾವಿದ ಚಿತ್ರಿಸಿದ್ದಾನೆ. ಬೀಳ್ಕೊಡುಗೆಯು ಎಂತಹ ಸಂದರ್ಭದಲ್ಲಿಯಾದರೂ, ಯಾವ ಕಾಲಘಟ್ಟದಲ್ಲಿಯಾದರೂ ಹೃದಯದ ಮಾತು ಹೆಪ್ಪುಗಟ್ಟಿರುತ್ತದೆ. ಮೌನವೇ ಮಾತಾಗಿರುತ್ತದೆ. ಈ ಚಿತ್ರದಲ್ಲಿ ಭಕ್ತರ ಹೃದಯಾಳದ ನೋವನ್ನು ಅವರ ಮುಖ, ಕಣ್ಣುಗಳ ಅಭಿವ್ಯಕ್ತಿಯಿಂದ ಅರ್ಥಮಾಡಿಕೊಳ್ಳಲು ಕಷ್ಟವೇನೂ ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ಕಲಾವಿದನ ಶ್ರಮ ಸಾರ್ಥಕವಾಗಿದೆ. ಮರವೊಂದರ ಕೆಳಗೆ ಸಾಮಾನ್ಯ ಎತ್ತರದ ಕಟ್ಟೆಗೆಯ ಪೀಠದ ಮೇಲೆ ಶುಭ್ರವಾದ ನಿಲುವಂಗಿ, ಪಂಚೆ, ಕೊರಳಲ್ಲಿ ಕೆಂಪುವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗ, ರುದ್ರಾಕ್ಷಿ ಮಾಲೆ, ಕಿವಿಯಲ್ಲಿ ರುದ್ರಾಕ್ಷಿಯ ಓಲೆ, ಮಂದವಾದ ಕಣ್ಣುಗಳು, ತಲೆಯ ಸುತ್ತ ದುಂಡಗಿನ ಬಿಳಿಯ ಬಣ್ಣದ ಪ್ರಭಾವಳಿ ಬಸವಣ್ಣನ ವ್ಯಕ್ತಿತ್ವವನ್ನು ಪರಿಚಯಿಸುತ್ತವೆ. ತಮ್ಮ ಬಲದ ಹಸ್ತವನ್ನು ಸ್ವಲ್ಪ ಮೇಲಕ್ಕೆ ಎತ್ತಿ ಅಂಗೈಯನ್ನು ಆಕಾಶಕ್ಕೆ ಮುಖಮಾಡಿ, ಎಡಗೈಯಲ್ಲಿ ತಾಳೆಯ ಪ್ರತಿಯನ್ನು ಹಿಡಿದುಕೊಂಡು ನೆರೆದ ಭಕ್ತಸಮೂಹಕ್ಕೆ ಬೋಧನೆ ಮಾಡುತ್ತಿದ್ದಾರೆ. ಬಹುಶಃ ತಾನು ಕಲ್ಯಾಣವನ್ನು ಬಿಟ್ಟುಹೋಗುವ ಕಾರಣ, ಮುಂದಿನ ಗುರಿ, ಉದ್ದೇಶಗಳನ್ನು ಸ್ಪಷ್ಟಪಡಿಸುತ್ತಿರಬೇಕೆಂದು ಊಹಿಸಬಹುದು. ಅವರ ಎಡಭಾಗದಲ್ಲಿ ಅಸಂಖ್ಯ ಶರಣಸಮೂಹದಲ್ಲಿ ಇಬ್ಬರನ್ನು ಹೊರತುಪಡಿಸಿ ಉಳಿದದವರು ತಲೆಗೆ ಪೇಟ ಇಲ್ಲವೆ ರುಮಾಲನ್ನು ಸುತ್ತಿಕೊಂಡಿದ್ದಾರೆ. ಅವರ ಹಣೆಯಲ್ಲಿ ವಿಭೂತಿ ರಾರಾಜಿಸುತ್ತಿದೆ. ಅವರ ವಸ್ತ್ರಗಳನ್ನು ಚಿತ್ರಿಸಲು ಕಲಾವಿದ ತೆಳುವಾದ ಲಘು ಬಿಳಿ, ಕಾವಿಬಣ್ಣವನ್ನು ಬಳಸಿದ್ದಾನೆ. ಹೆಗಲ ಮೇಲೆ ಧರಿಸಿರುವ ಮೇಲುಹೊದಿಕೆಗಳಲ್ಲಿ ಕೆಲವು ಮಾತ್ರ ನೀಲಿ ಬಣ್ಣದವುಗಳಾಗಿದ್ದು ಇಡೀ ಚಿತ್ರದಲ್ಲಿ ನೋಡುಗರಿಗೆ ಆಕರ್ಷಿಸುತ್ತವೆ. ಬಸವಣ್ಣನವರ ಮುಂದೆ ಸಾಲಾಗಿ ಕುಳಿತ ವೃದ್ಧರಲ್ಲಿ ಮಹಿಳೆಯರು ಸೇರಿದ್ದು ಅವರು ಬಸವಣ್ಣನೆಡೆಗೆ ಮುಖ ಮಾಡಿರುವುದರಿಂದ ಓರೆಮುಖವನ್ನು ಮಾತ್ರ ಕಲಾವಿದ ಚಿತ್ರಿಸಲು ಸಾಧ್ಯವಾಗಿದೆ. ಬಸವಣ್ಣನ ಬಲಭಾಗದಲ್ಲಿ ಕುಳಿತ ಸ್ತ್ರೀಸಮೂಹದಲ್ಲಿ ಸ್ತ್ರೀಯರು ತಲೆತುಂಬಾ ಸೆರಗನ್ನು ಹೊದ್ದಿದ್ದು ಕೆಂಪು ಮತ್ತು ನೀಲಿ ಬಣ್ಣಗಳ ರವಿಕೆಗಳನ್ನು ಧರಿಸಿರುವುದು ಚಿತ್ರದ ಸೌಂದರ್ಯಕ್ಕೆ ಕಾರಣವಾಗಿದೆ. ಬಸವಣ್ಣನ ಹಿಂದೆ ದೇವಾಲಯ ಮತ್ತು ಮಂಟಪಗಳನ್ನು ದೂರದಿಂದ ಕಾಣುತ್ತಿದೆಯೆಂಬಂತೆ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಚಿತ್ರಫಲಕದಲ್ಲಿ ಹಲವಾರು ಆಕಾರಗಳು ಇದ್ದು, ಅವುಗಳು ಪರಸ್ಪರ ಸಂಬಂಧ ಹೊಂದಿ ಜೋಡಣೆಗೊಂಡಿರುವುದನ್ನು ಸಂಯೋಜನೆ ಎಂದು ಹೇಳಬಹುದು. ಆಕಾರಗಳು ತನ್ನಷ್ಟಕ್ಕೆ ಪರಿಪೂರ್ಣವಾಗಿರುವುದಲ್ಲದೆ ಇನ್ನೊಂದು ಆಕೃತಿಯೊಂದಿಗೆ ಸಂಬಂಧವನ್ನೂ ಹೊಂದಿರುತ್ತದೆ. ಲಭ್ಯವಿರುವ ಸ್ಥಳಾವಕಾಶದಲ್ಲಿ ಹಲವಾರು ಮಾನವಾಕೃತಿಗಳನ್ನು ಸಂಯೋಜಿಸುವುದು, ತೋರ್ಪಡಿಸುವುದು ಸುಲಭ ಸಾಧ್ಯವಲ್ಲ ಎಂಬುದಕ್ಕೆ ಈ ಚಿತ್ರ ಮಾದರಿ ಮಾತ್ರ. ಇರುವ ಸ್ಥಳಾವಕಾಶದ ಹಿನ್ನೆಲೆಯಲ್ಲಿ ಕಲ್ಯಾಣದ ನೋಟವನ್ನು ಸೂಚ್ಯವಾಗಿ ತೋರಿಸಿದ್ದು, ಮುನ್ನೆಲೆಯಲ್ಲಿ ಮರದ ಕೆಳಗೆ ಬಸವಣ್ಣನವರು ಸಂದೇಶ

ನೀಡುತ್ತಿರುವಂತೆ, ಈ ಸಂದೇಶವನ್ನು ಆಲಿಸುತ್ತಿರುವ ಶರಣಗಣವನ್ನು ಸುತ್ತಲೂ ಚಿತ್ರಿಸಿದ್ದು ನಿಜಕ್ಕೂ ಅನನ್ಯವಾದುದು. ಪ್ರತಿಯೊಂದು ಆಕೃತಿಯಲ್ಲೂ ಶರಣಸಂಪನ್ನತೆಯನ್ನು ಸಹ ಕಲಾವಿದರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ವರ್ಣಸಂಯೋಜನೆಯ ಕುರಿತು ಹೇಳುವುದಾದರೆ ಅತ್ಯಂತ ಮೃದುವಾದ ವರ್ಣ ಸಾಂಗತ್ಯ ಇಲ್ಲಿನ ಕೃತಿಗಳಲ್ಲಿದೆ. ಇಂತಹ ದೃಶ್ಯಸಂಯೋಜನೆಗೆ ಮೃದುವಾದ ವರ್ಣಯೋಜನೆಗಳೇ ಹೆಚ್ಚು ಸೂಕ್ತ ಎಂಬುದನ್ನು ಕಲಾವಿದರು ತಮ್ಮ ಅಭಿವ್ಯಕ್ತಿಯನ್ನಾಗಿ ತೋರಿಸಿದ್ದಾರೆ.

೨.೧೦.೪. ಬಸವಣ್ಣನನ್ನು ಬೀಳ್ಕೊಡುತ್ತಿರುವ ಶರಣವೃಂದ–೧

ಕಲ್ಯಾಣ ಪಟ್ಟಣದಿಂದ ಕೂಡಲಸಂಗಮಕ್ಕೆ ಬಸವಣ್ಣ ಹೊರಟು ಹೋಗುತ್ತಿದ್ದು, ಆತನ ಹಿಂದೆ ಶರಣ ಶರಣೆಯರ ಸಮೂಹವೇ ಹಿಂಬಾಲಿಸಿ ಬರುತ್ತಿರುವ ಸಂಗತಿಯನ್ನು ಚಿತ್ರಪಠ್ಯ ವಸ್ತುವನ್ನಾಗಿ ಹೊಂದಿದೆ. ಬಿಳಿಯ ಬಣ್ಣದ ಪಂಚೆ, ನಿಲುವಂಗಿ, ಹಣೆಯಲ್ಲಿ ಅಸ್ಪಷ್ಟವಾಗಿ ಕಾಣುವ ವಿಭೂತಿ, ಕೊರಳಲ್ಲಿ ಎದ್ದು ಕಾಣುವ ಇಷ್ಟಲಿಂಗ, ರುದ್ರಾಕ್ಷಿ ಮಾಲೆ, ಕಡುಗೆಂಪುಬಣ್ಣದ ಮೇಲುಹೊದಿಕೆಯನ್ನು ಸೊಂಟಕ್ಕೆ ಕಟ್ಟಿಕೊಂಡಿರುವ ಬಸವಣ್ಣ ಇಲ್ಲಿ ಚಲಿಸುವ ಭಂಗಿಯಲ್ಲಿದ್ದಾನೆ. ತನ್ನ ಎಡಗಾಲನ್ನು ಮುಂದಿಟ್ಟು ಬಲಗಾಲನ್ನು ಮೇಲೆತ್ತಿದಂತೆ ನಿಂತಿರುವುದು, ಕೂಡಲಸಂಗಮಕ್ಕೆ ಹೊರಟಿರುವುದನ್ನು ಕಾಣುತ್ತೇವೆ. ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರನು ರಾಜ್ಯವನ್ನು ತ್ಯಜಿಸಿ ಹೋಗುವಾಗ 'ಪುರದ ಪುಣ್ಯಂ ಪುರುಷರೂಪಿಂದ ಪೋಗುತಿರೆ' ಎಂದು ಕವಿ ರಾಘವಾಂಕ ವರ್ಣಿಸುತ್ತಾನೆ. ಅಂಥಹದೇ ಸನ್ನಿವೇಶವನ್ನು ಪ್ರಸ್ತುತ ಚಿತ್ರದಲ್ಲಿ ಬಸವಣ್ಣನವರು ಪುರವನ್ನು ತ್ಯಜಿಸಿ ಹೋಗುವುದನ್ನು ನೆನಪಿಸುತ್ತದೆ. ಶಿವನಾಮ ಸ್ಮರಣೆ ಮಾಡುತ್ತಾ ಆತ ಮೆಲ್ಲನೆಯ ಅಡಿಗಳನ್ನಿಟ್ಟು ಹೋಗುತ್ತಿದ್ದರೆ, ಹಿಂದೆ ಅಪಾರವಾದ ಶರಣಸಮೂಹವೇ ಹಿಂಬಾಲಿಸುತ್ತಿದೆ. ಇಲ್ಲಿಯೂ ಶರಣರಿಗಿಂತ ಶರಣೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದುದನ್ನು ಗಮನಿಸಬಹುದು. ಈ ಚಿತ್ರದಲ್ಲಿ ಬಸವಣ್ಣನನ್ನು ಹೊರತುಪಡಿಸಿ ಎಲ್ಲರೂ ತಮ್ಮ ಮುಖವನ್ನು ಬಾಗಿಸಿದ್ದಾರೆ. ಯಾರ ಮುಖದಲ್ಲಿಯೂ ಸಂತಸವಿಲ್ಲ. ದುಃಖವನ್ನು, ನೋವನ್ನು ಬಹುಶಃ ಇದಕ್ಕಿಂತ ಹೆಚ್ಚಾಗಿ ಚಿತ್ರಪಠ್ಯದಲ್ಲಿ ಚಿತ್ರಿಸುವುದಕ್ಕೆ ಸಾಧ್ಯವಿಲ್ಲವೇನೋ ಎನ್ನಿಸುತ್ತದೆ. ಆ ಮಟ್ಟಿಗೆ ಕಲಾವಿದನ ಕಲಾಕೃತಿಯ ಉದ್ದೇಶ, ಆಶಯ ಸಫಲವಾಗಿದೆ. ವರ್ಣಗಳ ಸಂಯೋಜನೆಯು ಅದಕ್ಕೆ ಪೂರಕವಾಗಿದೆ. ಗಾಢವರ್ಣಗಳನ್ನು ಇಲ್ಲಿ ಹೆಚ್ಚಾಗಿ ಬಳಸಿರುವುದಿಲ್ಲ. ತೆಳುವರ್ಣಗಳಲ್ಲಿ ಏನೆಲ್ಲ ಭಾವನೆಗಳನ್ನು ಅಭಿವ್ಯಕ್ತಿಸಬಹುದೆಂಬುದಕ್ಕೆ ಈ ಚಿತ್ರವು ಸಾಕ್ಷಿಯಾಗಿದೆ.

ಸಂಯೋಜನೆಯ ದೃಷ್ಟಿಯಿಂದ ಈ ಕಲಾಕೃತಿಯಲ್ಲಿ ಇನ್ನೂ ಕೆಲವೊಂದು ಅಂಶಗಳು ಸೇರ್ಪಡೆಗೊಂಡಿದ್ದರೆ ಚಿತ್ರ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿರುತ್ತಿತ್ತು. ಬಸವಣ್ಣ ಪ್ರಮುಖ ಆಶಯವಾಗಿ ಗೋಚರವಾದ ಈ ಚಿತ್ರದಲ್ಲಿ ಹಿನ್ನೆಲೆಯಲ್ಲಿ ಶರಣಸಮೂಹ ಅವನನ್ನು ಹಿಂಬಾಲಿಸುತ್ತಿದೆ. ವಾಯುಮಂಡಲದ ಕಣ್ಣೆಲೆಯಲ್ಲಿ ಶರಣ ಸಮೂಹವನ್ನು, ಹಿನ್ನೆಲೆಯ ಪರಿಸರವನ್ನೂ ತೋರಿಸಲಾಗಿದೆ. ಆ ಹಿನ್ನೆಲೆಯ ಪರಿಸರದಲ್ಲಿ ಕಲ್ಯಾಣವನ್ನು ಸೂಚ್ಯವಾಗಿ ತೋರ್ಪಡಿಸಿದ್ದರೆ, ಈ ಚಿತ್ರ ಇನ್ನೂ ಹೆಚ್ಚು ಪರಿಣಾಮಕಾರಿ-ಯಾಗಿರುತ್ತಿತ್ತು. ಬಿಜ್ಜಳನ ದುರ್ನಡತೆಯಿಂದ ಸ್ವಲ್ಪವೂ ವಿಚಲಿತನಾಗದ ಬಸವಣ್ಣ ಕೂಡಲಸಂಗಮನನ್ನು

ನೆನೆಯುತ್ತಾ, ಸಂಭ್ರಮದಿಂದ ಕೂಡಲಸಂಗಮದತ್ತ ಹೆಜ್ಜೆ ಹಾಕುತ್ತಿರುವಂತೆ ಈ ಚಿತ್ರ ಅರ್ಥವಿಸ್ತಾರವನ್ನು ಹೊಂದಿದೆ. ಎಂದಿನಂತೆ ಮುಗಳಿಯವರು ತಮ್ಮ ಅತ್ಯಂತ ಭಾವನಾತ್ಮಕವಾದ ಮೃದುವಾದ ವರ್ಣಯೋಜನೆಯನ್ನು ಸಮರ್ಥವಾಗಿ ದುಡಿಸಿಕೊಂಡಿರುವುದು ಕಂಡುಬರುತ್ತದೆ.

ಶರಣರು ಬಸವಣ್ಣನನ್ನು ಬೀಳ್ಕೊಡುವ ಸನ್ನಿವೇಶ–೨

ಇಲ್ಲಿ ಪ್ರಧಾನವಾಗಿ ಬಿಳಿ, ಕಡುಹಸಿರು, ತೆಳುಹಸಿರು ಮತ್ತು ಗುಲಾಬಿವರ್ಣಗಳನ್ನು ಬಳಸಲಾಗಿದೆ. ಬಸವಣ್ಣನು ಮಂತ್ರಿಪದವಿಯನ್ನು ಬಿಜ್ಜಳನಿಗೆ ವಾಪಸು ನೀಡಿ, ಕಲ್ಯಾಣದಿಂದ ಕೂಡಲಸಂಗಮಕ್ಕೆ ತೆರಳುವ ಮುನ್ನ ತನ್ನ ಭಕ್ತಸಮೂಹವನ್ನು ಉದ್ದೇಶಿಸಿ ಮಾತನಾಡುವ ಸನ್ನಿವೇಶವನ್ನು ಇಲ್ಲಿ ಕಾಣುತ್ತೇವೆ. ಕೊರಳಲ್ಲಿ ಕಾವಿ ಬಣ್ಣದ ಬಟ್ಟೆಯ ಗಂಟಿನಲ್ಲಿ ಕಟ್ಟಿದ ಇಷ್ಟಲಿಂಗ, ರುದ್ರಾಕ್ಷಿಮಾಲೆ, ಕಿವಿಯಲ್ಲಿ ರುದ್ರಾಕ್ಷಿಯ ಕರ್ಣಕುಂಡಲಗಳು, ಹಣೆಯಲ್ಲಿ ವಿಭೂತಿ, ತಲೆಯ ಹಿಂಬದಿಯಲ್ಲಿ ತೆಳುಬಿಳಿವರ್ಣದ ಪ್ರಭಾವಳಿಯನ್ನು ಹೊಂದಿದ ಬಸವಣ್ಣ ಇಲ್ಲಿ ಕಂಡುಬರುತ್ತಾನೆ. ಆತನ ಸುತ್ತಲೂ ಶರಣ–ಶರಣೆಯರು ಊರಿನ ಜನರು ತಮ್ಮ ಕೈಗಳನ್ನು ಮುಗಿದು ಕುಳಿತಿದ್ದಾರೆ. ಬಸವಣ್ಣನು ತನ್ನ ಎರಡೂ ಕೈಗಳನ್ನು ಮುಗಿದು ಅವರಲ್ಲಿ ಪ್ರಾರ್ಥನೆ ಮಾಡುತ್ತಿರುವಂತೆ ಕಂಡುಬರುತ್ತದೆ.

ಬಸವಣ್ಣನ ಎದುರಿಗೆ ಕುಳಿತವರಲ್ಲಿ ಶರಣೆಯೊಬ್ಬಳು ತಾನು ಧರಿಸಿದ ಕಡುವರ್ಣದ ಹಸಿರುಬಣ್ಣದ ಸೀರೆಯಿಂದ ಎಲ್ಲರಿಗಿಂತ ಎದ್ದುತೋರುತ್ತಾಳೆ. ಉಳಿದ ಶರಣೆಯರು ತೆಳುವಾದ ಬಣ್ಣದ ಉಡುಗೆಗಳನ್ನು ಧರಿಸಿ ತಲೆಯ ತುಂಬ ಸೆರಗು ಹೊದ್ದಿರುವುದು ಕಾಣಿಸುತ್ತದೆ. ಎಡಬದಿಯಲ್ಲಿ ಶರಣರಲ್ಲಿ ಇಬ್ಬರನ್ನು ಹೊರತುಪಡಿಸಿ ಉಳಿದವರು ಬಿಳಿಯ ರುಮಾಲುಗಳನ್ನು ಧರಿಸಿದ್ದಾರೆ. ಎಲ್ಲ ಶರಣ–ಶರಣೆಯರ ಮುಖದಲ್ಲಿ ನೋವಿನ ಭಾವ ಒಡೆದುತೋರುತ್ತದೆ. ಈ ಹಿಂದಿನ ಚಿತ್ರಕ್ಕಿಂತ ಈ ಚಿತ್ರ ಭಿನ್ನವಾದುದು. ಆ ಚಿತ್ರದಲ್ಲಿ ಆಕೃತಿಗಳೆಲ್ಲವನ್ನೂ ಸಾಮೀಪ್ಯದ ನೆಲೆಯಲ್ಲಿ ಚಿತ್ರಿಸಿ ಹಿನ್ನೆಲೆಯನ್ನು ಗೌಣವಾಗಿಸಿದ್ದರೆ, ಇಲ್ಲಿ ಆಕೃತಿಗಳನ್ನು ಸಹ ಸಾಮೀಪ್ಯದಲ್ಲಿ ಚಿತ್ರಿಸಿದ್ದರೂ ಹಿನ್ನೆಲೆಯ ಪರಿಸರವನ್ನು ಸುಂದರವಾದ ಆಶಯಗಳೊಂದಿಗೆ ಚಿತ್ರಿಸಿರುವುದು ಕಂಡುಬರುತ್ತದೆ. ಈ ಬಗೆಯ ಚಿತ್ರಗಳು ನೋಟಕರ ಮನಸ್ಸಿನಲ್ಲಿ ಹೆಚ್ಚು ಕಾಲ ಉಳಿಯುತ್ತವೆ ಎಂಬುದಕ್ಕೆ ಈ ಚಿತ್ರ ಉತ್ತಮ ನಿದರ್ಶನವಾಗುತ್ತದೆ. ಮಧ್ಯದಲ್ಲಿ ಬಸವಣ್ಣನವರು, ಸುತ್ತಲೂ ಶರಣಗಣ ಕೈಮುಗಿದು ಬಸವಣ್ಣವರಲ್ಲಿ ಬೇಡಿಕೊಳ್ಳುವ ಪರಿಯನ್ನು ಈ ಚಿತ್ರ ಹೊಂದಿದೆ. ಚಿತ್ರದ ಪ್ರಧಾನ ಆಶಯವಾಗಿ ಬಸವಣ್ಣನವರು ಕಣ್ಮುಚ್ಚಿ ಪ್ರಾರ್ಥಿಸುವಂತೆ ಚಿತ್ರಿತಗೊಂಡಿದ್ದು, ಭಾವಪ್ರದವೂ ಆಗಿ ಗೋಚರವಾಗಿದ್ದಾರೆ. ಮುಗಳಿಯವರು ಎಂದಿನಂತೆ ತಮ್ಮ ನೆಚ್ಚಿನ ಮೃದುವರ್ಣಗಳನ್ನು ಸಮರ್ಥವಾಗಿ ಆಕೃತಿಗಳಿಗೆ ದುಡಿಸಿಕೊಂಡಿದ್ದಾರೆ.

೨.೧೦.೫. ಬೀಳ್ಕೊಡುವ ಸಂದರ್ಭದಲ್ಲಿ ಹರಳಯ್ಯನನ್ನು ಅಪ್ಪಿಕೊಂಡಿರುವ ಬಸವಣ್ಣ

ಕಲ್ಯಾಣ ಪಟ್ಟಣದಿಂದ ಕೂಡಲಸಂಗಮಕ್ಕೆ ಪ್ರಯಾಣ ಬೆಳೆಸಿದ ಸಂದರ್ಭದಲ್ಲಿ ತನ್ನ ಆಪ್ತ ಶರಣಬಂಧುಗಳನ್ನು ಆಪ್ಯಾಯತೆಯಿಂದ ಅಪ್ಪಿಕೊಂಡು ಬೀಳ್ಕೊಡುವ ಸನ್ನಿವೇಶವನ್ನು ಕಲಾವಿದ ಇಲ್ಲಿ

ಚಿತ್ರಿಸಿದ್ದಾನೆ. ಇಲ್ಲಿಯೂ ತೆಳುವರ್ಣಗಳ ಸಂಯೋಜನೆಯು ಪರಿಣಾಮಕಾರಿಯಾಗಿದೆ. ತೆಳುಗೆಂಪು ಬಣ್ಣದ ನಿಲುವಂಗಿ, ಬಿಳಿಬಣ್ಣದ ಪಂಚೆಗಳನ್ನು ಬಸವಣ್ಣ ಧರಿಸಿದ್ದಾನೆ. ಮಟ್ಟಸವಾಗಿ ಬಾಚಿದ ಕಪ್ಪು ತಲೆಗೂದಲು, ಹಣೆಯಲ್ಲಿ ಕಂಡೂ ಕಾಣದಂತಿರುವ ವಿಭೂತಿಧಾರಣೆಯಿದೆ. ಶರಣನೊಬ್ಬನನ್ನು ಎದೆಗೆ ಅಪ್ಪಿಕೊಂಡು ತಲೆಯ ಮೇಲೆ ತನ್ನ ಬಲಗೈಯನ್ನು ಪ್ರೀತಿಯಿಂದ ನೇವರಿಸುತ್ತಿರುವ ದೃಶ್ಯವು ಮನಸ್ಸನ್ನು ಕಲಕುವಂತಿದೆ. ಬಸವಣ್ಣ ಧರಿಸಿದ ಇಷ್ಟಲಿಂಗ, ರುದ್ರಾಕ್ಷಿಯ ಮಾಲೆಗಳ ಅರ್ಧಭಾಗ ಮಾತ್ರ ಗೋಚರಿಸುತ್ತದೆ. ಬಸವಣ್ಣ ಮತ್ತು ಶರಣ ಇಬ್ಬರೂ ತಮ್ಮ ಕಣ್ಣುಗಳನ್ನು ಮುಚ್ಚಿದ್ದಾರೆ. ಶರಣನು ಬಿಳಿ ನಿಲುವಂಗಿ, ಪಂಚೆ, ಹೆಗಲ ಮೇಲೆ ಕಾವಿಬಣ್ಣದ ಮಡಿಚಿದ ಮೇಲುಹೊದಿಕೆ, ರುದ್ರಾಕ್ಷಿ, ಮಾಲೆ, ಇಷ್ಟಲಿಂಗವನ್ನು ಧರಿಸಿದ್ದಾನೆ. ಮುಖದಲ್ಲಿ ಕಪ್ಪು ಬಣ್ಣದ ಗಡ್ಡಗಳನ್ನು ಬಿಟ್ಟಿದ್ದು ಆತನ ಮುಖವು ಅಪಾರ ನೋವಿನಿಂದ ಕೂಡಿರುವಂತೆ ಕಲಾವಿದ ಚಿತ್ರಿಸಿದ್ದಾನೆ. ಆತನ ಎಡಬದಿಯಲ್ಲಿ ಎರಡು ಕೈಗಳನ್ನು ಕಟ್ಟಿಕೊಂಡು ನಿಂತ ಮತ್ತೊಬ್ಬ ಗಡ್ಡಧಾರಿ ಶರಣ ನಿಂತಿದ್ದಾನೆ. ಆತನ ಹಿಂದೆ ಕಾವಿವಸ್ತ್ರವನ್ನು ಧರಿಸಿದ ಮತ್ತೊಬ್ಬ ಶರಣನಿದ್ದಾನೆ. ಈತ ಸಿದ್ಧರಾಮನಿರಬಹುದು. ಬಸವಣ್ಣನ ಹಿಂದೆ ನೀಲಿಬಣ್ಣದ ಸೀರೆಯನ್ನು ಧರಿಸಿದ ಸ್ತ್ರೀ ಬಹುಶಃ ಬಸವಣ್ಣನ ಪತ್ನಿಯಿರಬಹುದು. ಬಸವಣ್ಣನ ಹಿಂದೆ ನಿಂತ ಶರಣರ ಮುಖಗಳು ಮಾತ್ರ ಕಾಣುತ್ತಿದ್ದು ಅವರು ಬಸವಣ್ಣ ತನ್ನ ಆಪ್ತಶರಣನನ್ನು ಅಪ್ಪಿಕೊಂಡಿರುವುದನ್ನು ನೆಟ್ಟನೋಟದಿಂದ ನೋಡುತ್ತಿದ್ದಾರೆ.

ಈ ಚಿತ್ರದ ಆಕೃತಿಗಳೆಲ್ಲವೂ ಸಾಮೀಪ್ಯದ ನೆಲೆಯಲ್ಲಿ ಚಿತ್ರಿತಗೊಂಡಿವೆ. ಕಲಾವಿದರು ಪೌರಾಣಿಕ ಘಟನೆಗೆ ಹೆಚ್ಚು ಒತ್ತು ನೀಡಿರುವ ದೃಷ್ಟಿಯಿಂದ ಹಿನ್ನೆಲೆಯಲ್ಲಿ ಯಾವೊಂದು ವಿನ್ಯಾಸವು ಗೋಚರವಾಗುವುದಿಲ್ಲ. ಎಲ್ಲ ಆಕೃತಿಗಳಲ್ಲಿ ಬಸವಣ್ಣನವರು ತಮ್ಮನ್ನು ತೊರೆದು ಹೋಗುತ್ತಿರುವ ಕಾರಣವಾಗಿ ಮಾನಸಿಕವಾಗಿ ನೊಂದುಕೊಂಡ ಭಾವನೆಯನ್ನು ಕಲಾವಿದ ಸ್ಪಷ್ಟವಾಗಿ ಗ್ರಹಿಸಿ ಅಭಿವ್ಯಕ್ತಿಪಡಿಸಿದ್ದಾನೆ. ಘಟನೆಯೊಂದನ್ನು ಆಧರಿಸಿ ಚಿತ್ರಿಸುವಾಗ ಆಕೃತಿಗಳ ಭಾವಚಹರೆಯನ್ನು ಸೆರೆ ಹಿಡಿದು ಅಭಿವ್ಯಕ್ತಪಡಿಸುವುದು ಸುಲಭಸಾಧ್ಯವಲ್ಲದ ಕ್ರಿಯೆ. ಆದರೆ ಮುಗಳಿಯವರು ತಮ್ಮ ಎಲ್ಲ ಚಿತ್ರಗಳಲ್ಲಿ ಆಯಾ ಪೌರಾಣಿಕ ಹಿನ್ನೆಲೆಯು ಘಟನೆಗೆ ಸಂಬಂಧಿಸಿದಂತೆ ಆಕೃತಿಗಳಲ್ಲಿ ಭಾವವನ್ನು ಸ್ಪಷ್ಟವಾಗಿ ಗ್ರಹಿಸುವ ಸೂಕ್ಷ್ಮಮತಿಗಳಾಗಿದ್ದಾರೆ ಎಂಬುದಕ್ಕೆ ಇಲ್ಲಿನ ಅವರ ಚಿತ್ರಸರಣಿಗಳೇ ಉತ್ತಮ ನಿದರ್ಶನವಾಗುತ್ತವೆ. ಎಂದಿನಂತೆ ಮುಗಳಿಯವರು ತಮ್ಮ ನೆಚ್ಚಿನ ಮೃದುವಾದ ವರ್ಣಯೋಜನೆಯನ್ನೂ ಇಲ್ಲಿನ ಚಿತ್ರದಲ್ಲಿ ಮರುನಿರೂಪಿಸಿದ್ದಾರೆ.

೨.೧೧.೬. ಬಸವಣ್ಣನನ್ನು ಬೀಳ್ಕೊಡುತ್ತಿರುವುದು

ಕಲ್ಯಾಣ ಪಟ್ಟಣವನ್ನು ಬಿಟ್ಟು ಕೂಡಲಸಂಗಮಕ್ಕೆ ಹೊರಟ ಬಸವಣ್ಣನು ಇಲ್ಲಿ ಅಶ್ವಾರೂಢನಾಗಿ ಕುಳಿತಿರುವ ಸನ್ನಿವೇಶವನ್ನು ಕಲಾವಿದ ಸೆರೆಹಿಡಿದಿದ್ದಾನೆ. ಇಲ್ಲಿ ಬಳಸಿರುವ ಕುದುರೆಯ ಬೆನ್ನ ಮೇಲೆ ಹಾಸಿರುವ ವಸ್ತ್ರವನ್ನು ಹೊರತುಪಡಿಸಿ ಉಳಿದೆಲ್ಲ ಬಣ್ಣಗಳು ತುಂಬ ಮೃದುವಾದ ಸಂಯೋಜನೆಯಿಂದ ಕೂಡಿವೆ. ಬಸವಣ್ಣನ ಈ ಹಿಂದಿನ ಎಲ್ಲ ಚಿತ್ರಗಳಿಗಿಂತಲೂ ಇಲ್ಲಿ ಭಿನ್ನವಾದ ರಚನೆಯೆಂತೆ ತೋರುತ್ತದೆ. ಸುಪುಷ್ಟವಾದ ಬಿಳಿಬಣ್ಣದ ಜಾತ್ಯಶ್ವದ ಮೇಲೆ ಕುಳಿತ ಬಸವಣ್ಣ ಬಿಳಿಯ ನಿಲುವಂಗಿ, ಪಂಚೆ, ಪಾದರಕ್ಷೆ,

ಕೊರಳಲ್ಲಿ ರುದ್ರಾಕ್ಷಿ, ಇಷ್ಟಲಿಂಗವನ್ನು ಧರಿಸಿದ್ದಾನೆ. ಕಪ್ಪುಬಣ್ಣದ ಆತನ ತಲೆಗೂದಲನ್ನು ಮಟ್ಟಸವಾಗಿ ಹಿಂದಕ್ಕೆ ಬಾಚಿ ಜುಟ್ಟು ಕಟ್ಟಿಕೊಂಡಂತಿದೆ. ತನ್ನ ಎರಡೂ ಕೈಗಳನ್ನು ಮುಗಿದು ವಿನೀತಭಾವದಿಂದ ಅಲ್ಲಿ ನೆರೆದ ಭಕ್ತಸಮೂಹಕ್ಕೆ ತನ್ನ ಕೊನೆಯ ನಮಸ್ಕಾರವನ್ನು ಹೇಳುವ ಭಂಗಿಯಲ್ಲಿ ಬಸವಣ್ಣನನ್ನು ಕಲಾವಿದ ಚಿತ್ರಿಸಿದ್ದಾನೆ.

ಬಸವಣ್ಣ ಕುಳಿತ ಕುದುರೆಯ ಪಕ್ಕದಲ್ಲಿ ಮತ್ತೊಂದು ಕುದುರೆಯ ಮೇಲೆ ಕಾಷಾಯವಸ್ತ್ರವನ್ನು ಧರಿಸಿ, ಜಟೆಗೂದಲನ್ನು ಬಿಟ್ಟಿರುವ ಚನ್ನಬಸವಣ್ಣ ಮತ್ತು ಆತನ ಹಿಂದೆ ಮತ್ತೊಂದು ಕುದುರೆಯ ಮೇಲೆ ಸೈನಿಕನೊಬ್ಬನು ಹತ್ತಿ ಕುಳಿತಿದ್ದಾನೆ. ಬಸವಣ್ಣನ ಕುದುರೆಯ ಬಾಲದ ಬಳಿ ಇಬ್ಬರು ವಟುಗಳು ಪರಸ್ಪರ ಸಂಭಾಷಣೆಯಲ್ಲಿ ತೊಡಗಿದ್ದಾರೆ. ಅವರ ಪಕ್ಕದಲ್ಲಿ ಉದ್ದವಾದ ಭರ್ಚಿಯನ್ನು ಹಿಡಿದ ಭಟರು ತಿಳುಗುಲಾಬಿ ಬಣ್ಣದ ವಸ್ತ್ರಗಳನ್ನು ಧರಿಸಿ ಸಾಲಾಗಿ ನಿಂತಿದ್ದಾರೆ. ಬಸವಣ್ಣನ ಕುದುರೆಯ ಮುಂದೆ ಭಟನೊಬ್ಬ ಕುದುರೆಯ ಲಗಾಮನ್ನು ಹಿಡಿದು ನಿಂತಿದ್ದಾನೆ. ಅವನ ಬಲಬದಿಯಲ್ಲಿ ಮಹಿಳೆಯರ ಸಮೂಹವೇ ಇದೆ. ಅವರಲ್ಲಿ ಇಬ್ಬರು ಶರಣರು ಮಾತ್ರ ತಮ್ಮ ಕೊರಳಿನಲ್ಲಿ ಇಷ್ಟಲಿಂಗವನ್ನು ಧರಿಸಿರುವುದು ಕಂಡುಬರುತ್ತದೆ. ಶರಣಸಮೂಹವೆಲ್ಲವೂ ತಮ್ಮ ಎರಡೂ ಕೈಗಳನ್ನು ಮುಗಿದು ತಮ್ಮ ಕೃತಜ್ಞತೆಯನ್ನು ಪ್ರಕಟಪಡಿಸುವವರಂತೆ ಕಲಾವಿದ ಚಿತ್ರಿಸಿದ್ದಾನೆ. ಹೃದಯಸ್ಪರ್ಶಿ ಸನ್ನಿವೇಶವನ್ನು ಈ ಚಿತ್ರದಲ್ಲಿ ಕಲಾವಿದ ಉತ್ತಮವಾಗಿ ಮೂಡಿಸಿದ್ದಾನೆ.

ಕಲ್ಯಾಣ ಪಟ್ಟಣದಿಂದ ಹೊರಟ ಬಸವಣ್ಣನಿಗೆ ಶರಣಗಣ ಅಂತಿಮ ವಿದಾಯ ಹೇಳುತ್ತಿರುವ ಮನೋಜ್ಞ ಸನ್ನಿವೇಶವನ್ನು ಈ ಚಿತ್ರ ಕಟ್ಟಿಕೊಟ್ಟಿದೆ. ಬಿಜ್ಜಳನ ಭಟರು ಬಸವಣ್ಣನನ್ನು ಕೂಡಲಸಂಗಮಕ್ಕೆ ಬಿಟ್ಟುಬರುವಂತೆ ಇಲ್ಲಿ ಚಿತ್ರಿಸಲಾಗಿದೆ. ಚಿತ್ರದ ಎಡಪಾರ್ಶ್ವದಲ್ಲಿ ಶರಣಗಣಧಾರಿಗಳು, ಹಿನ್ನೆಲೆಯಲ್ಲಿ ಕಲ್ಯಾಣದ ಮನೆಗಳೆಂಬಂತೆ ಸೂಚ್ಯವಾಗಿ ತೋರಿಸಲ್ಪಟ್ಟ ಮನೆಯೊಂದರ ಭಿತ್ತಿ, ಹೀಗೆ ಒಂದು ಪೌರಾಣಿಕ ಸನ್ನಿವೇಶವೊಂದನ್ನು ದೃಶ್ಯಾತ್ಮಕವಾಗಿ ಮಂಡಿಸುವಾಗ ಇಂತಹ ವಿನ್ಯಾಸಗಳನ್ನು ದುಡಿಸಿಕೊಳ್ಳುವುದು ಸಹಜವೆಂಬಂತೆ ಇಲ್ಲಿಯೂ ಅಂತಹ ವಿನ್ಯಾಸಗಳನ್ನು ಅತ್ಯಂತ ಪ್ರಬುದ್ಧವಾಗಿ ದುಡಿಸಿಕೊಳ್ಳಲಾಗಿದೆ. ಮುಗಳಿಯವರು ಎಂದಿನಂತೆ ತಮ್ಮ ಶೈಲಿಯ ಮೃದುವಾದ ವರ್ಣಯೋಜನೆಯನ್ನು ಈ ಚಿತ್ರದಲ್ಲಿಯೂ ಮುಂದುವರೆಸಿರುವುದರಿಂದ ಶ್ರೀಸಾಮಾನ್ಯನಿಗೆ ಈ ಚಿತ್ರದ ಅರ್ಥವಿಸ್ತಾರ ಎಟಕುತ್ತದೆ.

೨.೧೧. ಬಸವಣ್ಣನವರು ಕೂಡಲಸಂಗಮನಾಥನಲ್ಲಿ ಐಕ್ಯವಾಗುವ ವರ್ಣಚಿತ್ರಗಳು

೨.೧೧.೧. ಬಸವಣ್ಣ ಸಂಗಮನಾಥನಲ್ಲಿ ಐಕ್ಯ

ಕಲಾವಿದ ಎಂ. ಬಿ. ಜೋಸೆಫ್ ಅವರು ಈ ಕಲಾಕೃತಿಯನ್ನು ರಚಿಸಿದ್ದಾರೆ. ತೈಲವರ್ಣ ಮಾಧ್ಯಮದಲ್ಲಿ ರಚನೆಗೊಂಡ ಈ ಕೃತಿಯು ಪ್ರಸ್ತುತ ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ. ಬಸವಣ್ಣ ಕೂಡಲಸಂಗಮದ ತ್ರಿವೇಣಿ ಸಂಗಮದಲ್ಲಿ ಐಕ್ಯನಾಗುವ ಸನ್ನಿವೇಶವನ್ನು ಪ್ರಸ್ತುತ ಚಿತ್ರವು ಸಾರುತ್ತಿದೆ. ನೋಡಲು ತುಂಬ ಸರಳವೆನ್ನಿಸಿದರೂ ಪರಿಣಾಮದ ದೃಷ್ಟಿಯಲ್ಲಿ ಉತ್ತಮ ಕಲಾಕೃತಿಯೆನಿಸಿದ ಈ ಚಿತ್ರ ಸೂಕ್ಷ್ಮ ತಂತ್ರ ಮತ್ತು ಸಂಗತಿಗಳನ್ನು ಒಳಗೊಂಡಿದೆ.

ನೀಲಿ ಮತ್ತು ಬಿಳಿಬಣ್ಣಗಳನ್ನು ಕಲಾವಿದ ಇಲ್ಲಿ ಯಥೇಚ್ಛವಾಗಿ ದುಡಿಸಿಕೊಂಡಿರುವುದನ್ನು ಕಾಣುತ್ತೇವೆ. ಹಣೆಯ ಮೇಲೆ ಢಾಳವಾಗಿ ಕಾಣುವ ವಿಭೂತಿ, ಭ್ರೂಮಧ್ಯದಲ್ಲಿ ಒಂದು ಭಸ್ಮದ ಬೊಟ್ಟು, ಅರೆನಿಮೀಲಿತವಾಗಿ ಮಂದದೃಷ್ಟಿಯನ್ನು ಬೀರುವ ಕಣ್ಣುಗಳು, ಉದ್ದವಾದ ಕಿವಿಗಳು, ಕಿರುಮೀಸೆ, ಮಟ್ಟಸವಾದ ಮೂಗು, ತೆಳುವಾದ ಹುಬ್ಬುಗಳು, ತಲೆಯಲ್ಲಿ ಮಟ್ಟಸವಾಗಿ ಕತ್ತರಿಸಿದ ಕಪ್ಪಾದ ಕಿರುಕೂದಲು, ಕಿವಿಯಲ್ಲಿ ರುದ್ರಾಕ್ಷಿಯ ಓಲೆಗಳು, ಕೊರಳಲ್ಲಿ ನಿರಿಗೆಗಳಿಂದ ಕೂಡಿದ ಕಾವಿವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ರುದ್ರಾಕ್ಷಿಸರವನ್ನು ಧರಿಸಿದ ಬಸವಣ್ಣ ಎದೆಯ ಮಟ್ಟದವರೆಗಿನ ನೀರಿನಲ್ಲಿ ನಿಂತಂತೆ ಕಲಾವಿದ ಅದ್ಭುತವಾಗಿ ಚಿತ್ರಿಸಿದ್ದಾನೆ. ಬಸವಣ್ಣನ ಐಕ್ಯದ ಆಶಯಕ್ಕಿಂತಲೂ ಕಲಾತಂತ್ರಗಳ ಪರಿಣಾಮ ಇಲ್ಲಿ ಎದ್ದುಕಾಣಿಸುತ್ತದೆ.

ಎದೆಯ ಮಟ್ಟದವರೆಗೆ ನಿಂತ ನೀರು ಕಿರು ಅಲೆಯಾಗಿ ನಿಧಾನವಾಗಿ ಚಲಿಸುವಂತೆ, ಅದರಲ್ಲಿ ಬಸವಣ್ಣನ ಪ್ರತಿಬಿಂಬ ಚೂರುಚೂರಾಗಿ ಬಿಂಬಿತವಾದಂತೆ, ರುದ್ರಾಕ್ಷಿ, ಇಷ್ಟಲಿಂಗದ ಕೆಂಪುಬಣ್ಣದ ಗಂಟುಗಳು ಪ್ರತಿಫಲನಗೊಂಡ ರೀತಿ ಸಹೃದಯರ, ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಹಿನ್ನೆಲೆಯಾಗಿ ನೀಲಿಬಣ್ಣದ ಕಪ್ಪುಬಣ್ಣದ ಸಂಯೋಜನೆಯಿಂದ ಆಕಾಶದ ಚಿತ್ರಣವನ್ನು ರೂಪಿಸಲಾಗಿದೆ. ಈ ಲೋಕದ ಜಂಜಡ ಸಾಕು, ಲೌಕಿಕದ ಜೀವನ ಮತ್ತೆ ಬೇಡ ಎಂಬ ಭಾವವನ್ನು ಪ್ರಕಟಿಸುವ ಬಸವಣ್ಣನ ಐಕ್ಯದ ಈ ಸನ್ನಿವೇಶ ಅಚ್ಚುಕಟ್ಟಾಗಿ ಮೂಡಿಬಂದಿದೆ. ಕೇವಲ ಕೆಲವೇ ಬಣ್ಣಗಳನ್ನು ಬಳಸಿಯೂ ಕಲಾವಿದ ತಾನಿಲ್ಲಿ ಸಾಧಿಸಬೇಕಾದದ್ದನ್ನು ಯಶಸ್ವಿಯಾಗಿ ಸಾಧಿಸಿದ್ದಾನೆ.

ಬಸವಣ್ಣನ ಐಕ್ಯವನ್ನು ಹೇಳಹೊರಟ ಕಲಾವಿದನಿಲ್ಲಿ ಪವಾಡಗಳನ್ನು ತೊರೆದು, ತಂತ್ರಗಳನ್ನು ತೊರೆದು ನೇರವಾಗಿ ವಸ್ತುನಿರೂಪಣೆ ಮಾಡಿದ್ದಾನೆ. ಹಾಗೆಂದು ಚಿತ್ರದ ಆಶಯ ಸಾಧಾರಣವೆಂದು ಕಾಣುತ್ತಿಲ್ಲ. ಚಿತ್ರದಲ್ಲಿ ಚಿತ್ರಿತಗೊಂಡ ನೀರು ಒಂದು ಬಹುದೊಡ್ಡ ರೂಪಕವಾಗಿ ಮಾರ್ಪಾಡಾಗಿದೆ. ಬಸವಣ್ಣನ ಹಿಂದೆ ಕಾಣುವ ಹಿನ್ನೆಲೆಯೂ ಅದು ಏಕಕಾಲಕ್ಕೆ ನೀರು ಮತ್ತು ದಟ್ಟವಾಗಿ ಮೋಡ ಕಟ್ಟಿಕೊಂಡಿರುವ ಆಕಾಶವೂ ಕಂಡಂತೆ ಕಾಣುತ್ತಿದೆ. ಅದು ನೀರೋ, ಆಕಾಶವೋ ಅಂತ ಎಣಿಸುವ ಬದಲು ಅದೊಂದು 'ಅನಂತ' ಎಂದು ಪರಿಭಾವಿಸಿಕೊಂಡರೆ ಸಾಕೆನಿಸುತ್ತದೆ. ಈ ಸಮಾಜದ ಕೆಟ್ಟ ವ್ಯವಸ್ಥೆಗೆ ರೋಸಿಹೋದ ಬಸವಣ್ಣ ಕೊನೆಗೆ ಅನಂತದಲ್ಲಿ ಲೀನವಾಗುತ್ತಾನೆ. ಹೀಗೆ ಅನಂತದಲ್ಲಿ ಲೀನವಾದರೂ ಅವನು ಹಚ್ಚಿಟ್ಟ ಬೆಳಕು ಮಾತ್ರ ಆರುವಂಥದ್ದಲ್ಲ, ತೀರುವಂಥದ್ದಲ್ಲ ಎಂಬುದಕ್ಕೆ ಅವನು ನೀರಿನಲ್ಲಿ ಮುಳುಗುತ್ತಿದ್ದರೂ ಅವನಿಂದ ಹೊರಟ ಬೆಳಕಿನ ಛಾಯೆ ನೀರಿನಲ್ಲಿಯೂ, ಅನಂತದಲ್ಲಿಯೂ ಅಲೆ ಅಲೆಯಾಗಿ ಪ್ರತಿಫಲನಗೊಳ್ಳುವಂತೆ ಭಾಸವಾಗುತ್ತಿದೆ. ಕಲಾವಿದ ಇದನ್ನು ಅರಿತುಕೊಂಡು ಬೇಕೆಂದೇ ಇಂಥ ಪರಿಣಾಮ ಉಂಟುಮಾಡಬೇಕೆಂದು ಮಾಡಿದನೋ ಅಥವಾ ಅರಿಯದೆ ಮಾಡಿದನೋ ತಿಳಿಯದು. ಚಿತ್ರ ಮಾತ್ರ ಬಸವಣ್ಣನ ತೇಜಪುಂಜ ಅಲೆಅಲೆಯಾಗಿ ಹೊಮ್ಮುತ್ತ ಅನಂತವನ್ನು ವ್ಯಾಪಿಸುತ್ತಿರುವಂತೆ ತೋರುತ್ತಿದೆ.

ನೀರಿನಲ್ಲಿ ಆಕಾಶ ಪ್ರತಿಫಲನಗೊಂಡಾಗ ನೀರು ಸಹಜವಾಗಿ ಪಾಚಿಹಸಿರಿನಂತೆ ಅಥವಾ ನೀಲವರ್ಣದಂತೆ ಗೋಚರವಾಗುತ್ತದೆ. ಚಿತ್ರದ ವರ್ಣಸಂಯೋಜನೆಯನ್ನು ನೋಡಿದರೆ ಬಸವಣ್ಣ

ಮಧ್ಯರಾತ್ರಿ ತ್ರಿವೇಣಿ ಸಂಗಮದಲ್ಲಿ ಮುಳುಗಿ ಲಿಂಗೈಕ್ಯನಾದ ಎಂಬ ಕಥೆಯ ಸಾರವನ್ನು ದೃಶ್ಯಾತ್ಮಕವಾಗಿ ಕಲಾವಿದ ಹೇಳಲುಬಯಸಿದ್ದಾನೆ. ಸ್ಥಳಾವಕಾಶದ ಮಧ್ಯಭಾಗದಲ್ಲಿ ಭಾವಚಿತ್ರದ ರೀತಿಯಲ್ಲಿ ಚಿತ್ರಿತಗೊಂಡ ಬಸವಣ್ಣ ಧ್ಯಾನಸ್ಥನಾಗಿ ಇನ್ನೇನು ಮುಳುಗಿಹೋಗುತ್ತಾನೆ ಎಂಬಂತೆ ಕಲಾವಿದ ಚಿತ್ರಿಸಿದ್ದಾನೆ. ಅರೆ ನಿಮೀಲಿತ ಕಣ್ಣುಗಳನ್ನು ಹೊಂದಿದ ಬಸವಣ್ಣನ ಮುಖ ಇಲ್ಲಿಯೂ ಹಸನ್ಮುಖದಿಂದ ಕೂಡಿದೆ. ಅವನ ಪ್ರತಿಬಿಂಬ ನದಿಯ ನೀರಿನಲ್ಲಿ ಪ್ರತಿಫಲಿಸುತ್ತಲಿದೆ. ಇದೊಂದು ಪ್ರಬುದ್ಧವಾದ ಸಂಯೋಜನೆ.

೨.೧೧.೨. ಬಸವಣ್ಣ ಸಂಗಮನಾಥನಲ್ಲಿ ಐಕ್ಯ

"ಜೀವನದ ಬಗ್ಗೆ ಒಂದು ಮಾತಿನಲ್ಲಿ ಹೇಗೆ ವಿವರಿಸುವುದು ಅಸಾಧ್ಯವೋ ಹಾಗೆ ಕಲೆ."[೧೦೭] ಕಲಾವಿದ ಬಸವರಾಜ ಮುಗಳಿ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ (ಎನಾಮೆಲ್) ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ.

ಪ್ರಸ್ತುತ ಚಿತ್ರ ಬಸವಣ್ಣ ಕೂಡಲಸಂಗಮದ ತ್ರಿವೇಣಿ ಸಂಗಮದಲ್ಲಿ ಐಕ್ಯವಾದ ಘಟನೆಯನ್ನು ನಿರೂಪಿಸುತ್ತದೆ. ನೆಳಲು ಬೆಳಕಿನ ಉತ್ತಮ ಸಂಯೋಜನೆಯನ್ನು ಈ ಚಿತ್ರದಲ್ಲಿ ನೋಡುತ್ತೇವೆ. ದಟ್ಟವಾದ ಕೆಂಪುಬಣ್ಣ ಮತ್ತು ಕಡುನೀಲಿ, ತೆಳುಹಳದಿ ಬಣ್ಣಗಳನ್ನು ಇಲ್ಲಿ ಹೆಚ್ಚು ಬಳಸಲಾಗಿದೆ. ಎತ್ತರದ ನಿಲುವಿನ ಬಸವಣ್ಣ ಕುಳಿತಾಗಲೂ ಎತ್ತರವಾಗಿಯೇ ಗೋಚರಿಸುತ್ತಾನೆ. ಕಡುನೀಲಿ ಬಣ್ಣದ ನಾಲ್ಕು ಕಂಭಗಳ ಶಿಲಾಮಂಟಪದೊಳಗೆ ಬಸವಣ್ಣ ಎಡಗೈಯಲ್ಲಿ ತನ್ನ ಇಷ್ಟಲಿಂಗವನ್ನು ಹಿಡಿದು ಅದಕ್ಕೆ ಪುಷ್ಪ, ಪತ್ರೆಗಳನ್ನು ಏರಿಸಿ, ಅರ್ಧಮುಚ್ಚಿದ ಕಣ್ಣುಗಳಿಂದ ತದೇಕಚಿತ್ತದಿಂದ ಪಂಚಾಕ್ಷರ ಮಂತ್ರವನ್ನು ಪಠಿಸುತ್ತಿರುವಂತೆ ಕಾಣಿಸುತ್ತದೆ. ಹಾಗೆ ನೋಡಿದರೆ ಸಾಮಾನ್ಯ ನೋಡುಗರಿಗೆ ಬಸವಣ್ಣ ತನ್ನೆರಡು ಕಣ್ಣುಗಳನ್ನು ಮುಚ್ಚಿದಂತೆ ತೋರುವುದು ಸಹಜ. ಬಂಗಾರದ ಹೊಳೆಯುವ ಅಂಚಿನ ದಟ್ಟವಾದ ಕೆಂಪುಬಣ್ಣದಿಂದ ಕೂಡಿದ ವಸ್ತ್ರವನ್ನು ಧರಿಸಿ, ಹೆಗಲಮೇಲೆ ಹೊದ್ದು, ಹಣೆ, ಎದೆ, ಕೈಗಳಲ್ಲಿ ವಿಭೂತಿ, ರುದ್ರಾಕ್ಷಿಗಳನ್ನು ಧರಿಸಿದ ಬಸವಣ್ಣನ ಚಿತ್ರವನ್ನು ನೋಡಿದ ಕೂಡಲೇ ಮನಸ್ಸಿನಲ್ಲಿ ಉಳಿಯುವಂತೆ ಮಾಡುವ ಕಲಾವಿದನ ಪ್ರಯತ್ನ ಇಲ್ಲಿ ಯಶಸ್ಸು ಪಡೆದಿದೆ.

ಬಸವಣ್ಣನ ತಲೆಯ ಸುತ್ತ ಬಿಳಿಬಣ್ಣದಿಂದ ಕೂಡಿದ ಪ್ರಕಾಶಮಾನವಾದ ತೇಜಸ್ಸಿನ ಕಿರಣಗಳು ಗೋಚರಿಸುತ್ತವೆ. ಸೂರ್ಯನ ಹೊಂಗಿರಣಗಳಿಂದ ನೀಲಿಯಾಗಿರುವ ನೀರು ಅಲ್ಲಲ್ಲಿ ಹಳದಿಮಿಶ್ರಿತ ಕೆಂಪು ಬಣ್ಣದಿಂದ ಪ್ರಕಾಶಿಸುತ್ತಿದೆ. ಆತನ ಮುಂದೆ ಪೂಜಾಸಾಮಗ್ರಿಗಳಾದ ತಟ್ಟೆ, ಗಂಟೆ, ನೀರಿನ ಕಮಂಡಲ, ಒಂದು ಪುಟ್ಟ ಲೋಹದ ಬಟ್ಟಲು ಇವು ನೈಜವಾಗಿ ಚಿತ್ರಿತವಾಗಿವೆ.

ಇಲ್ಲಿ ಚಿತ್ರಿತಗೊಂಡಿರುವದು ಐಕ್ಯ ಮಂಟಪದಲ್ಲಿ ಬಸವಣ್ಣನವರು ಲಿಂಗಪೂಜಾನುಷ್ಠಾನ ಕೈಗೊಂಡಿದ್ದನ್ನು ಸೂಚಿಸುತ್ತದೆ. ತ್ರಿವೇಣಿ ಸಂಗಮದಲ್ಲಿ ಕೂಡಲಸಂಗಮನಾಥನ ದೇಗುಲದ ಎದುರು

---

೧೦೭. ಡಾ. ಎಸ್. ಸಿ. ಪಾಟೀಲ (ಸಂ.) : ಚಿತ್ರಾಕ್ಷಿ (ಶ್ರೀ ಶಂಕರ ಪಾಟೀಲರ ಲೇಖನ), ಪು-೩೦

ಭಾಗದ ನದಿಗಳ ಸಂಗಮದಲ್ಲಿ ಈ ಐಕ್ಯಮಂಟಪ ಈಗಲೂ ಇದೆ. ಈ ಐಕ್ಯಮಂಟಪದ ಹಿನ್ನೆಲೆಯಲ್ಲಿ ಸೂರ್ಯಾಸ್ತಸೂಚಕವಾಗಿ ಹಿನ್ನೆಲೆಯ ನೀರಿನಲ್ಲಿ ಹಳದಿ ಮತ್ತು ಕಿತ್ತಳೆವರ್ಣದ ಸೂರ್ಯನ ಪ್ರತಿಫಲನವನ್ನು ಚಿತ್ರಿಸಲಾಗಿದೆ. ಚಿತ್ರ ಸ್ಥಳಾವಕಾಶದ ತುಂಬೆಲ್ಲ ಐಕ್ಯಮಂಟಪವನ್ನು ಮತ್ತು ಲಿಂಗಪೂಜಾನಿಷ್ಠರಾದ ಬಸವಣ್ಣನವರನ್ನು ಚಿತ್ರಿಸುವುದರ ಮೂಲಕ ಅವರ ಐಕ್ಯದ ದಿನಗಳನ್ನು ಇಲ್ಲಿ ಪ್ರತಿಬಿಂಬಿಸಲಾಗಿದೆ. ಐಕ್ಯಮಂಟಪದ ಗೋಪುರದಲ್ಲಿ ಷಟ್‌ಸ್ಥಲದ ಸಂಕೇತವನ್ನು ಚಿತ್ರಿಸಲಾಗಿದೆ. ಭಾವಪ್ರದವಾದ ರಚನಾತಂತ್ರವನ್ನು ಹೊಂದಿದ ಈ ಕೃತಿಯು ಯಥಾದರ್ಶನದ ರಚನಾಸಾಧ್ಯತೆಗಳನ್ನು ಇನ್ನಷ್ಟು ಪಕ್ವಗೊಳಿಸುವ ಅವಕಾಶವನ್ನು ಹೊಂದಿದೆ.

೨.೧೧.೩. ಬಸವಣ್ಣ ಸಂಗಮನಾಥನಲ್ಲಿ ಐಕ್ಯ

"ಶ್ರೀಕಾಶಿನಾಥ ಮಹಾಜನ ಸಾ॥ ಸೋಲಾಪುರ ಇವರ ಮನೆಯಲ್ಲಿನ ಸಂಗ್ರಹದಿಂದ ಫೋಟೋದ ಪ್ರತಿಕೃತಿ ಈ ಕಲಾಕೃತಿಯಾಗಿದೆ. ಕಲಾವಿದ ಬಿ.ಆರ್. ಕೋಟ್ಯಾಳಕರವರು ೧೯೨೧ರಲ್ಲಿ ಈ ಕೃತಿ ರಚಿಸಿರುವುದರ ಬಗ್ಗೆ ತಿಳಿದುಬರುತ್ತದೆ."[೧೦೮] ಇದರ ಮೂಲಪ್ರತಿ ಲಭ್ಯವಿಲ್ಲ. ಆದುದರಿಂದ ಇದರ ಅಳತೆಯ ಮತ್ತು ರಚನೆಯಾದ ವರ್ಣಮಾಧ್ಯಮದ ಮಾಹಿತಿ ದೊರೆಯಲಿಲ್ಲ. ಆದರೂ ಮೇಲ್ನೋಟಕ್ಕೆ ಇಲ್ಲಿ ತೈಲವರ್ಣ ಮಾಧ್ಯಮದಲ್ಲಿ ರಚಿಸಿರಬಹುದಾಗಿದೆ.

ಬಸವಣ್ಣನವರ ಐಕ್ಯದ ಸನ್ನಿವೇಶವನ್ನು ಪ್ರತಿಬಿಂಬಿಸುವ ಈ ಚಿತ್ರವು ಉಳಿದ ಚಿತ್ರಗಳಿಗಿಂತ ಆಶಯ ಮತ್ತು ನಿರೂಪಣೆಯಲ್ಲಿ ಭಿನ್ನತೆಯನ್ನು ಪಡೆದಿದೆ. ಕಡುಗುಲಾಬಿ ಬಣ್ಣದ ಪಂಚೆಯನ್ನು ಧರಿಸಿದ ಶಿವ ತಾನು ನಾಲ್ಕು ಕೈಗಳನ್ನು ಹೊಂದಿದವನಾಗಿದ್ದಾನೆ. ಬಲಗೈಯೊಂದರಲ್ಲಿ ತ್ರಿಶೂಲ, ಎಡಭಾಗದ ಮೇಲುಗೈಯಲ್ಲಿ ಡಮರುಗ, ಕೊರಳಲ್ಲಿ ಸರ್ಪದ ಆಭರಣ, ಕಪ್ಪಾದ ಜಟೆಯಲ್ಲಿ ಬೆಳ್ಳಗೆ ಹೊಳೆಯುವ ಅರ್ಧಚಂದ್ರ ಎದ್ದುತೋರುತ್ತದೆ.

ಸಂಗಮನಾಥನು ಬಸವಣ್ಣನನ್ನು ಕರುಣಾಪೂರಿತ ದೃಷ್ಟಿಯಿಂದ ತನ್ನ ಉಳಿದೆರಡು ಕೈಗಳಿಂದ ಬಾಚಿ ತಬ್ಬಿಕೊಂಡಿರುವ ದೃಶ್ಯವನ್ನು ಕಲಾವಿದ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಪಾಣಿಪೀಠವನ್ನು ಹೊಂದಿದ ಲಿಂಗದ ಪಕ್ಕದಲ್ಲಿಯೇ ಬಸವಣ್ಣ ಮತ್ತು ಶಿವ ಪರಸ್ಪರ ಅಪ್ಪಿಕೊಂಡಿದ್ದಾರೆ. ವಿನೀತಭಾವದಿಂದಿರುವ ಬಸವಣ್ಣನ ಮುಖವು ಶಿವನ ಎದೆಯ ಭಾಗಕ್ಕೆ ಪುಟ್ಟ ಮಗುವಿನಂತೆ ಅಂಟಿಕೊಂಡಿದೆ. ಬಿಳಿಯ ಪಂಚೆಯನ್ನು ಮಾತ್ರ ಉಟ್ಟಿರುವ ಬಸವಣ್ಣ ತಲೆಯಲ್ಲಿ ಚಿನ್ನದ ಕಿರೀಟವನ್ನು ಧರಿಸಿರುವುದು ಅಚ್ಚರಿ ತಂದರೂ ಕಲಾವಿದನ ದೃಷ್ಟಿಕೋನ ಬೇರೆಯೇ ಇರಬಹುದೆಂದು ಭಾವಿಸಬಹುದು. ಏಕೆಂದರೆ, ಬಸವಣ್ಣ ಐಕ್ಯವಾಗುವ ವೇಳೆಗೆ ಕಲ್ಯಾಣದಲ್ಲಿ ಮಂತ್ರಿ ಪೋಷಾಕು, ಕಿರೀಟ, ಕತ್ತಿ, ಮುದ್ರೆಯುಂಗುರ ಮುಂತಾದ ರಾಜಾಧಿಕಾರದ ಚಿಹ್ನೆಗಳನ್ನುಳ್ಳ ವಸ್ತುಗಳನ್ನು ಬಿಜ್ಜಳನಿಗೆ ಒಪ್ಪಿಸಿ ಬಂದಿರುವುದರಿಂದ ಕಿರೀಟವು ಹೇಗೆ ಇಲ್ಲಿ ಮೂಡಿಬಂತು ಎಂಬುದು ಪ್ರಶ್ನೆಯಾಗುತ್ತದೆ. ವಿಶೇಷವಾಗಿ ಇಲ್ಲಿ ಜೋಡು ನಂದಿವಿಗ್ರಹಗಳನ್ನು ಕಲ್ಪಿಸಿರುವುದು ಸರಿಯಾಗಿಯೇ ಇದೆ. ಏಕೆಂದರೆ ಇಲ್ಲಿ ಶಿವ ಮತ್ತು ಬಸವಣ್ಣ ಇಬ್ಬರೂ ಭಿನ್ನರಲ್ಲ ಎಂದು ಹೇಳುವುದು ಕಲಾವಿದನ

---

೧೦೮. ಡಾ. ಜಿ.ಎಸ್. ಭೂಸಗೊಂಡ : ಚಿತ್ರಕಲಾವಿದ ಚಂದ್ರವರ್ಮ ಬಿ.ಆರ್.ಕೋಟ್ಯಾಳಕರ – ಒಂದು ಅಧ್ಯಯನ (ಅ.ಪ್ರ.ಡಿ.ಲಿಟ್.ಮಪ್ರ, ಕ.ವಿ.ವಿ.ಹಂಪಿ), ಪು–೧೭೮

ಉದ್ದೇಶವಿರುವಂತೆ ತೋರುತ್ತದೆ. ಅಲ್ಲಿಯೇ ಪೂಜೆಗೊಂಡ ಶಿವಲಿಂಗ, ಅದರ ಪಕ್ಕದಲ್ಲಿ ಚಿಕ್ಕ ನಿಲುವು ದೀಪ, ಅವರ ಹಿಂಬದಿಯಲ್ಲಿ ವಿಶಾಲವಾಗಿ ಹರಿಯುತ್ತಿರುವ ನದಿ, ಬಿಳಿಬಣ್ಣದಿಂದ ರಚಿತವಾದ ಬೃಹದಾಕಾರದ ತೆರೆಗಳು, ದಂಡೆಯ ಮೇಲೆ ಹಸಿರು, ಹಳದಿ ಬಣ್ಣಗಳಿಂದ ಕೂಡಿದ ಮರಗಳ ಸಾಲು ಮುಂತಾದ ಅಂಶಗಳು ಚಿತ್ರದ ಸೂಕ್ಷ್ಮ ಸಂಗತಿಗಳನ್ನು ಪರಿಚಯಿಸುವಲ್ಲಿ ನೆರವಾಗಿವೆ. ಸಂಯೋಜನೆಯ ದೃಷ್ಟಿಯಿಂದ ಈ ಕಲಾಕೃತಿ ಮಹತ್ವದ್ದು. ಮೊದಲನೆಯದಾಗಿ ಆಕೃತಿಗಳ ರಚನೆಯಲ್ಲಿ ಪ್ರಬುದ್ಧತೆ ಇದೆ. ನೈಜ ಶೈಲಿಯಲ್ಲಿ ರಚಿತಗೊಂಡ ಇಲ್ಲಿನ ಆಕೃತಿಗಳು ಆಂಗಿಕ ಮತ್ತು ವಸ್ತ್ರವಿನ್ಯಾಸದಲ್ಲೂ ಅತ್ಯಂತ ನೈಜ ಅನುಭವವನ್ನು ಕಟ್ಟಿಕೊಡುತ್ತವೆ.

ಎರಡನೆಯದಾಗಿ ಹಿನ್ನೆಲೆಯ ಪರಿಸರವೂ ಸಹ ಸಂಗಮನಾಥನ ಪರಿಸರವನ್ನು ಕಣ್ಮುಂದೆ ತರುತ್ತದೆ. ಮೂರನೆಯದಾಗಿ ಇಲ್ಲಿ ದುಡಿಸಿಕೊಂಡ ವರ್ಣಮೇಳ. ಮೃದುವಾದ ವರ್ಣಗಳನ್ನು ಅತ್ಯಂತ ಸಮರ್ಥವಾಗಿ ದುಡಿಸಿಕೊಂಡಿರುವುದಲ್ಲದೇ, ಅಗತ್ಯಕ್ಕೆ ತಕ್ಕಷ್ಟು ವರ್ಣಗಳನ್ನು ಆಕೃತಿಗಳಿಗೆ ಬಳಸಿಕೊಳ್ಳಲಾಗಿದೆ. ನಾಲ್ಕನೆಯದಾಗಿ ಯಥಾದರ್ಶನದ ಪಕ್ವತೆಯ ಕುರಿತು ಹೇಳುವುದಾದರೆ–ಹಿನ್ನೆಲೆಯ ಪರಿಸರವನ್ನು ಸೂಚ್ಯವಾಗಿಸಿಕೊಂಡು ಮುನ್ನೆಲೆಯ ಪರಿಸರವನ್ನು ಸಾಮೀಪ್ಯದ ಬಗೆಯಲ್ಲಿ, ಅದೂ ವಿವರವಾಗಿ ದಕ್ಕುವಂತೆ ಚಿತ್ರಿಸಲಾಗಿದೆ. ಹೀಗಾಗಿ ಒಟ್ಟು ಚಿತ್ರವು ನೇತ್ರಾನಂದಕರವಾಗಿಯೂ ತನ್ನೊಳಗಿನ ಅರ್ಥವಿಸ್ತಾರವನ್ನು ಯಥಾವತ್ತಾಗಿ ನೋಟಕರಿಗೆ ತಲುಪಿಸುವುದರಲ್ಲಿ ಎರಡು ಮಾತಿಲ್ಲ.

೨.೧೧.೪. ಬಸವಣ್ಣನಿಗೆ ಶರಣನೊಬ್ಬ ಕಲ್ಯಾಣದ ಸುದ್ದಿಯನ್ನು ತಿಳಿಸುತ್ತಿರುವುದು (ಕಾಮಿಕ್ಸ್ ಚಿತ್ರ)

ಪ್ರಸ್ತುತ ಚಿತ್ರದಲ್ಲಿ ಬಸವಣ್ಣನವರು ಮಂತ್ರಿಪದವಿಯನ್ನು ತ್ಯಜಿಸಿ ಕಲ್ಯಾಣದಿಂದ ಕೂಡಲಸಂಗಮಕ್ಕೆ ಬಂದು ಐಕ್ಯವಾಗುವ ಮುನ್ನ ಘಟಿಸಿದ ಸಂಗತಿಯೊಂದನ್ನು ಇಲ್ಲಿ ಕಲಾವಿದ ಚಿತ್ರಪಠ್ಯದ ಮೂಲಕ ನಿರೂಪಿಸಿದ್ದಾನೆ. ಇದು ಜಲವರ್ಣಚಿತ್ರಕ್ಕೆ ಸೇರಿದ್ದಾಗಿದ್ದರೂ ಕಪ್ಪುಬಣ್ಣದ ರೇಖೆಗಳು ಇಲ್ಲಿ ಪ್ರಧಾನ ಪಾತ್ರವನ್ನು ವಹಿಸಿರುವುದನ್ನು ನೋಡುತ್ತೇವೆ. ಕೂಡಲಸಂಗಮದ ಸಂಗಮನಾಥ ದೇವಸ್ಥಾನದ ಪಕ್ಕದಲ್ಲಿ ನದಿ, ನದಿಯ ದಂಡೆಯ ಮೇಲೆ ಒಂದು ಕಟ್ಟೆ, ಕಟ್ಟೆಯ ಮೇಲೆ ಒಂದು ಆಲದ ಮರದ ಕೆಳಗೆ ಬಸವಣ್ಣ ಕುಳಿತುಕೊಂಡಿದ್ದಾನೆ. ಹಣೆಯಲ್ಲಿ ವಿಭೂತಿ, ರುದ್ರಾಕ್ಷಿ, ಕೆಂಪು ಬಣ್ಣದ ಪಂಚೆಯನ್ನೇ ದೇಹದ ತುಂಬ ಬರುವಂತೆ ಧರಿಸಿದ್ದಾನೆ. ತನ್ನೆದುರಿಗೆ ಕಟ್ಟೆಯ ಕೆಳಗೆ ನಿಂತಿರುವ ಹಿರಿಯ ಶರಣ ಮತ್ತು ಬಸವಣ್ಣನ ಅನುಯಾಯಿಯಾದ ವ್ಯಕ್ತಿಯೊಬ್ಬ, ಕಲ್ಯಾಣದಿಂದ ಸುದ್ದಿಯೊಂದನ್ನು ತಂದು, 'ರಾಜಕೀಯ ವೈರಿಗಳಿಂದ ಬಿಜ್ಜಳ ಕೊಲ್ಲಲ್ಪಟ್ಟ, ಆದರೆ ಕೊಲೆಯ ಆಪಾದನೆ ಶರಣರ ಮೇಲೆ ಬಂದಿದೆ, ಅವರನ್ನು ಹಿಂಸಿಸಲಾಗುತ್ತಿದೆ, ಅವರ ಕಗ್ಗೊಲೆಯಾಗುತ್ತಿದೆ!' ಎಂಬ ಆಘಾತಕಾರಿ ಸುದ್ದಿಯನ್ನು ಹೇಳುತ್ತಾನೆ. ಶರಣರ ಮುಖದಲ್ಲಿ ಆತಂಕ, ಗಾಬರಿ, ಭಯ ಈ ಭಾವನೆಗಳು ಮಡುಗಟ್ಟಿರುವುದನ್ನು ಕಲಾವಿದ ತುಂಬ ಚೆನ್ನಾಗಿ ಚಿತ್ರಿಸಿದ್ದಾನೆ. ಬಸವಣ್ಣ ಈ ಸಂಗತಿಗಳನ್ನು ಭಾರವಾದ ಮನಸ್ಸಿನ ಭಾವನೆಗಳಿಂದ ಕೇಳುವವನಂತೆ ಕಂಡುಬರುತ್ತಾನೆ.

ಬಸವಣ್ಣನನ್ನು ಕಲ್ಯಾಣದಿಂದ ಹೊರಹಾಕಿದ ಬಿಜ್ಜಳನ ಅಂತ್ಯವೂ ಆಗುವುದು ಕಾಕತಾಳಿಯ. ಮಕ್ಕಳ ಮೇಲೆ ಅತ್ಯಂತ ಪರಿಣಾಮ ಬೀರುವ ಕಾಮಿಕ್ಸ್ ಚಿತ್ರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಿದ್ದು,

ಆ ಚಿತ್ರಗಳ ಮುಂದುವರಿದ ಚಿತ್ರ ಇದಾಗಿದೆ. ಬಸವಣ್ಣನ್ನು ಪೂರ್ಣವಾಗಿಸಿಕೊಂಡು ಸಂದೇಶವನ್ನು ತಂದ ಬಸವಣ್ಣನ ಅನುಯಾಯಿಯನ್ನು ಮಾತ್ರ ಅರ್ಧಭಾಗ ಮಾತ್ರ ಚಿತ್ರಿಸಿದ್ದರೂ ಈ ಚಿತ್ರ ಪರಿಣಾಮಕಾರಿಯಾದುದು. ಬಸವಣ್ಣನ ಅನುಯಾಯಿ ಬಹಳ ಆತಂಕದಿಂದ ಬಿಜ್ಜಳ ಕೊಲ್ಲಲ್ಪಟ್ಟ ಸುದ್ದಿಯನ್ನು ಹೇಳುತ್ತಿರುವುದನ್ನು ದೃಶ್ಯಾತ್ಮಕವಾಗಿ ಚಿತ್ರಿಸಿರುವ ಬಗೆ ಕಲಾವಿದನಲ್ಲಿ ಇರಬಹುದಾದ ಮಾನವಅಂಗಶಾಸ್ತ್ರದ ಪರಿಣಿತಿಯ ಬಗ್ಗೆ ಹುಬ್ಬೇರಿಸುವಂತಿದೆ. ಅತ್ಯಂತ ನೈಜ ಬಗೆಯಲ್ಲಿ ಸಂದೇಶಕಾರನ ದೇಹವನ್ನು, ಜೊತೆಗೆ ಭಾವವನ್ನು ಸ್ಫುಟವಾಗಿ ಚಿತ್ರಿಸಿದ ಕಲಾವಿದ ನಾಯ್ಕರು ಬಸವಣ್ಣನನ್ನು ಸಹ ಅಷ್ಟೇ ಭಾವಪ್ರದವಾಗಿ ಚಿತ್ರಿಸಿದ್ದಾರೆ. ಕಲ್ಯಾಣ ಕದನದ ವಿಷಯವನ್ನು ಕುತೂಹಲದಿಂದ ಪದ್ಮಾಸನದಲ್ಲಿ ಕುಳಿತು ಕೇಳುತ್ತಿರುವ ಬಸವಣ್ಣನ ಹಿನ್ನೆಲೆಯಲ್ಲಿ ಮರ, ಹರಿಯುತ್ತಿರುವ ನದಿ, ಹಸಿರುಟ್ಟ ಬೆಟ್ಟ–ಗುಡ್ಡ, ದೂರದಲ್ಲಿ ಕಾಣುತ್ತಿರುವ ಸಂಗಮನಾಥನ ದೇಗುಲ ಹೀಗೆ ಇವೆಲ್ಲವುಗಳನ್ನು ಯಥಾದರ್ಶನದ ನೀತಿಯ ಪ್ರಕಾರವೇ ಇಲ್ಲಿ ಚಿತ್ರಿಸಲಾಗಿದೆ. ಎಂದಿನಂತೆ ಕಾಮಿಕ್ಸ್‌ಗಳಲ್ಲಿ ಬಳಸುವ ಚಪ್ಪಟೆಯಾದ ವರ್ಣಮೇಳ, ರೇಖಾಲಾಲಿತ್ಯಗಳ ಪ್ರಬುದ್ಧತೆ ಈ ಚಿತ್ರದ ಒಳಸತ್ವ

೨.೧೧.೫. ಬಸವಣ್ಣ ಸಂಗಮನಾಥನಲ್ಲಿ ಐಕ್ಯ (ಕಾಮಿಕ್ಸ್ ಚಿತ್ರ)

ಅಮರ ಚಿತ್ರಕಥಾ ಪ್ರೈ.ಲಿ. ಇವರ "ಬಸವೇಶ್ವರ" ಎಂಬ ಆಂಗ್ಲ ಕೃತಿಯಲ್ಲಿ ಈ ಮೇಲಿನ ಚಿತ್ರವು ಮುದ್ರಣಗೊಂಡಿದೆ. ಕಲಾವಿದ ಜಿ. ಆರ್. ನಾಯಕ್ ಅವರು ಈ ಕಲಾಕೃತಿಯನ್ನು ಜಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಕಥಾರೂಪದಲ್ಲಿ ಚಿತ್ರಿಸಿರುವ ಈ ಕಲಾಕೃತಿಯು ಗ್ರಂಥದಲ್ಲಿನ ಚಿಕ್ಕ ಚಿಕ್ಕ ಪಟ್ಟಿಕೆಗಳಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ. ಬಸವಣ್ಣನ ಐಕ್ಯದ ವಿಚಾರದ ಒಂದು ವಚನದಂತೆ ತೋರಬಹುದಾದ ವಚನವೊಂದು ಇಂತಿದೆ:

"ಶರಣಸನ್ನಿ ಹಿತನೈಕ್ಯವಹಲ್ಲಿ ಹರಿಬ್ರಹ್ಮಾದಿಗಳು ಮೊದಲಾದ
ಶೆತ್ತೀಸಾದ ದೇವರ್ಕಳು 'ಉಘೇ ಉಘೇ' ಎನುತಿರಲು
"ಐಕ್ಯ ಬಸವಣ್ಣಂಗೆ ಠಾವಾದಯ್ಯಾ"? ಎಂದೊಡೆ

ಹೃದಯ ಕಮಳಮಧ್ಯ ಅಂತರಾಳದ
ಏಕಪೀಠದ ಸಿಂಹಾಸನದೆ ತೇರುಗೊಡು.
ಕೂಡಲಸಂಗಮದೇವಾ!" – ಈ ವಚನದಲ್ಲಿ ಮತ್ತು ಹರಿಹರಕವಿಯು ಮಾತಿನಲ್ಲಿ ಬಸವಣ್ಣನು'ಕೂಡಲ ಸಂಗಮೇಶ್ವರನ ಹೃದಯಕಮಲಮಧ್ಯ'ವನ್ನು ಪ್ರವೇಶಿಸಿದನೆಂಬ ಆಂಶವೇ ಇದೆ. ಸದ್ಯದಮಟ್ಟಿಗೆ ಈ ಅಭಿಪ್ರಾಯವನ್ನಿಟ್ಟುಕೊಳ್ಳುವುದೇ ಹೆಚ್ಚು ಸೂಕ್ತವೆನಿಸುತ್ತದೆ.[೧೯]

"ಶಿವದ್ರೋಹವಂಗೃದ ಬಿಜ್ಜಳನ ಕೊಲಿಸುತಂ, ಭವ ಹರನ ಶರಣದ್ಗೋಷ್ಠಿಯಂ
ಸಲಿಸುತಂ, ಕಪ್ಪಡಿಯ ಸಂಗಮೇಶ್ವರನಲ್ಲಿಗೈತಂದು, ಗಾಢದಿಂ ಶಿವನೊಳಗೆ
ಬೆರೆದು ತಾ ಬಯಲಾದ."[೧೧೦]

೧೦೯. ಪ್ರೊ. ಬಸವರಾಜ ಚನ್ನವೀರಪ್ಪ ಜವಳಿ : ಧರ್ಮ ಭಂಡಾರಿ ಬಸವಣ್ಣನವರು, ಪು–೪೭, ೪೮
೧೧೦. ಅದೇ. ಪು–xxxix (ಪ್ರಸ್ತಾವನೆ)

ಅಹಿಂಸಾವಾದಿಗಳಾದ ಬಸವಣ್ಣನವರಿಗೆ ಉಗ್ರಹಿಂಸಾ ಪ್ರವೃತ್ತಿ ಸಮ್ಮತವಾಗಿರಲಿಲ್ಲ. ಅದಕ್ಕಾಗಿ ನಿರಾಶರಾಗಿ ಕಲ್ಯಾಣವನ್ನು ಬಿಟ್ಟು ಕಪ್ಪಡಿ ಸಂಗಮದತ್ತ ಕ್ರಿ.ಶ. ೧೧೬೭-೬೮ರ ಸುಮಾರಿಗೆ ಬಯಲಾದರೆಂದು ತಿಳಿದುಬರುತ್ತದೆ.[೧೧೧]

ಈ ಚಿತ್ರ ಬಸವಣ್ಣ ಕೂಡಲ ಸಂಗಮದಲ್ಲಿ ಐಕ್ಯನಾಗುವ ಸನ್ನಿವೇಶವನ್ನು ಕುರಿತದ್ದಾಗಿದೆ. ಶಿಲಾ ಮಂಟಪದ ಸುತ್ತಲೂ ನದಿಯ ನೀರು ಹರಿಯುತ್ತಿರುವಂತೆ ಅದು ತೆಳು ನೀಲಿಬಣ್ಣದಿಂದ ಚಿತ್ರಿತವಾಗಿದೆ. ಕಪ್ಪುರೇಖೆಗಳು ಅದರ ಚಲನೆಯನ್ನು ಸೂಚಿಸುತ್ತವೆ. ಮಂಟಪದಲ್ಲಿ ಕುಳಿತ ಬಸವಣ್ಣನ ತಲೆಯು ಬೋಳಾಗಿದೆ. ತನ್ನ ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದುಕೊಂಡು ತದೇಕಚಿತ್ತದಿಂದ ನೋಡುತ್ತ ಮೈಮರೆತಿದ್ದಾನೆ. ಕೆಂಪು ವಸ್ತ್ರವನ್ನು ಧರಿಸಿದ ಆತನ ಬಲಗೈಯಲ್ಲಿ ರುದ್ರಾಕ್ಷಿಗಳ ಜಪಮಣಿಸರವೊಂದರ ಅರ್ಧಭಾಗ ಮಾತ್ರ ಕಾಣಿಸುತ್ತದೆ. ಕೆಂಪು ಮತ್ತು ಕಪ್ಪುಬಣ್ಣ ಮಿಶ್ರಿತ ಚೌಕಾಕಾರದ ಮಣೆಯ ಮೇಲೆ ಬಸವಣ್ಣ ಕುಳಿತಿದ್ದು, ಆತನ ಎಡಗಾಲಿನ ಪಾದವೊಂದು ಸ್ವಲ್ಪಭಾಗ ನೋಡುಗರಿಗೆ ಕಾಣಿಸುತ್ತದೆ. ಆತನ ಎದುರಿಗೆ ಕೆಂಪುಬಣ್ಣದಿಂದ ಕೂಡಿದ ಹಳದಿ ಪ್ರಭಾವಳಿಯನ್ನು ಹೊಂದಿದ ಉದಯಿಸುವ ಸೂರ್ಯನನ್ನು ನೋಡಿದರೆ ಇದು ಸುಪ್ರಭಾತದ ಸಮಯವೆಂದು ಥಟ್ಟನೆ ಅನಿಸುತ್ತದೆ.

ಸೂರ್ಯಾಭಿಮುಖವಾಗಿ ಕುಳಿತಿರುವ ಬಸವಣ್ಣನ ಮುಖದ ಮೇಲೆ ಒಂದಿಷ್ಟು ಹಳದಿ ಬಣ್ಣದ ಛಾಯೆಯು ಕಾಣಿಸುತ್ತಿದೆ. ಬಸವಣ್ಣನ ಆಕೃತಿಯನ್ನು ಬಿಟ್ಟು ನೋಡಿದರೆ ಇದೊಂದು ಸುಂದರ ನಿಸರ್ಗ ಚಿತ್ರದಂತೆ ಕಾಣಿಸುತ್ತದೆ. ಕೂಡಲಸಂಗಮದ ಆ ವಿಹಂಗಮ ನೋಟ, ನದಿಯ ಅಂಚಿನಿಂದ ಹುಟ್ಟುತ್ತಿರುವ ಸೂರ್ಯ, ಇತ್ತಕಡೆಯ ಅಂಚಿನಲ್ಲೊಂದು ಶಿಲಾಮಂಟಪ, ಶಾಂತವಾಗಿ ಹರಿಯುತ್ತಿರುವ ನದಿ ಇದೆಲ್ಲವೂ ಒಂದು ತೂಕವಾದರೆ, ಇದಕ್ಕೆ ಸಮವಾಗಿ ಪದ್ಮಾಸನ ಭಂಗಿಯಲ್ಲಿ ಕುಳಿತಿರುವ ಬಸವಣ್ಣನ ಭಂಗಿಯೂ ಒಂದು ತೂಕವಾಗಿ ನಿಲ್ಲುತ್ತದೆ. ತಮ್ಮ ಮನಸ್ಸಿನಲ್ಲಿ "ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕೂಡಲ ಸಂಗಮದೇವಾ, ನಿಮ್ಮ ಚರಣಕಮಲದೊಳಗಾನು ತುಂಬಿ" ಎಂಬ ವಚನವನ್ನು ಮನಸ್ಸಿನಲ್ಲಿ ನೆನೆಯುತ್ತಿರುವಂತೆ ಕಲಾವಿದ ನಿರೂಪಿಸಿದ್ದಾನೆ. ಬಹುಶಃ ನಿಮ್ಮ ಚರಣಕಮಲದೊಳಗಾನು ತುಂಬಿ ಎಂಬುದು ಐಕ್ಯವನ್ನು ಸೂಚಿಸುವ ಮಾತೆಂಬಂತೆ ಚಿತ್ರಕಾರ ಇಲ್ಲಿ ಗ್ರಹಿಸಿದ್ದಾನೆ.

ಈ ಚಿತ್ರವು ಬಸವಣ್ಣನ ಲಿಂಗಪೂಜಾನುಷ್ಠಾನ ನಡೆದ ಪ್ರಾತಃಕಾಲವನ್ನು ಸೂಚಿಸುತ್ತದೆ ಎಂಬುದಕ್ಕೆ ಈ ಒಂದು ಪುರಾವೆಯನ್ನು ಒದಗಿಸಬಹುದಾಗಿದೆ. ಕೂಡಲಸಂಗಮನಾಥನ ದೇಗುಲ ಪೂರ್ವಾಭಿ-ಮುಖವಾಗಿ ನಿರ್ಮಾಣಗೊಂಡಿದೆ. ದೇಗುಲದ ಮುಂಭಾಗದಲ್ಲಿಯೇ ಐಕ್ಯಮಂಟಪ ನಿರ್ಮಾಣವಾಗಿದೆ. ಐಕ್ಯಮಂಟಪದಲ್ಲಿ ಕುಳಿತ ಬಸವಣ್ಣ ಪೂರ್ವದತ್ತ ಮುಖಮಾಡಿ ಲಿಂಗಪೂಜಾನುಷ್ಠಾನ ಮಾಡುತ್ತಿರುವದು ದಿಟ. ರೇಖಾಚಿತ್ರವಾಗಿ ನಂತರ ವರ್ಣಚಿತ್ರವಾಗಿ ಪರಿವರ್ತಿತವಾಗಿರುವ ಎಂದಿನ ಕಾಮಿಕ್ಸ್ ಚಿತ್ರವಿದು. ಪ್ರಬುದ್ಧವಾದ ಅಂಗರಚನೆಗಳು, ಯಥಾದರ್ಶನದ ಕೇಂದ್ರಬಿಂದುವಿನಿಂದ ನಿಂತು ನೋಡಿದಾಗ ಕಾಣುವ ವಾಯುಮಂಡಲದ ನೋಟ ಇವು ಪ್ರಬುದ್ಧ ಕಲಾವಿದರಿಗೆ ಮಾತ್ರ ದಕ್ಕುವ ವಿನ್ಯಾಸಗಳು. ಇಲ್ಲಿ ಅವೆಲ್ಲವೂ

೧೧೧. ಪ್ರೊ. ಬಸವರಾಜ ಚನ್ನವೀರಪ್ಪ ಜವಳಿ : ಧರ್ಮ ಭಂಡಾರಿ ಬಸವಣ್ಣನವರು, ಪು-xli (ಪ್ರಸ್ತಾವನೆ)

ಇವೆ. ಸಾಮೀಪ್ಯದಲ್ಲಿ ಬಸವಣ್ಣ ಮತ್ತು ಐಕ್ಯಮಂಟಪ, ದೂರದಲ್ಲಿ ಸೂರ್ಯ, ನದಿ, ಗುಡ್ಡ-ಬೆಟ್ಟ ಹೀಗೆ ಚಿತ್ರಿತಗೊಂಡಿವೆ. ಎಂದಿನಂತೆ ಚಪ್ಪಟೆಯಾಗಿ ದುಡಿಸಿಕೊಂಡ ಮೃದುವಾದ ವರ್ಣಯೋಜನೆ, ಹೀಗೆ ಹಲವು ವಿಶೇಷತೆಗಳಿಂದ ಈ ಚಿತ್ರ ಆಪ್ಯಾಯಮಾನವಾಗುತ್ತದೆ.

೨.೧೧.೬. ಬಸವಣ್ಣ ಸಂಗಮನಾಥನಲ್ಲಿ ಐಕ್ಯ

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ.

ಕೂಡಲಸಂಗಮದಲ್ಲಿ ಬಸವಣ್ಣ ತನ್ನ ಪ್ರಾಣವನ್ನು ಪರಮಾತ್ಮನಲ್ಲಿ ಐಕ್ಯಗೊಳಿಸುವ ಪ್ರಸಂಗವನ್ನು ಈ ಚಿತ್ರದಲ್ಲಿ ಕಾಣುತ್ತೇವೆ. ಅನನ್ಯವಾದ ವರ್ಣಸಂಯೋಜನೆಯನ್ನು ಹೊಂದಿದ ತೈಲವರ್ಣ ಸಂಪ್ರದಾಯಕ್ಕೆ ಸೇರಿದ ನೈಜಚಿತ್ರವಿದಾಗಿದೆ. ವರ್ಣದ ಹಲವು ಸಾಧ್ಯತೆಗಳನ್ನು ಇಲ್ಲಿ ಕಲಾವಿದ ಅನಾವರಣಗೊಳಿಸಿರುವುದನ್ನು ಕಾಣುತ್ತೇವೆ. ನೀಲಿ ಮತ್ತು ಬಿಳಿಮಿಶ್ರಿತ ಕಡುನೀಲಿಯ ಬಣ್ಣದ ಸಂಯೋಜನೆ ಇಲ್ಲಿ ಪ್ರಧಾನವಾಗಿದೆ. ಕೂಡಲಸಂಗಮದ ನದಿಯಲ್ಲಿ ಬಸವಣ್ಣ ಲಿಂಗಾಕಾರದಲ್ಲಿ ಇಷ್ಟಲಿಂಗಪೂಜಾ ನಿರತನಾಗಿದ್ದಾನೆ. ಬಿಳಿಯ ಪಂಚೆ, ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ, ಎಡಗೈಯಲ್ಲಿ ಇಷ್ಟಲಿಂಗ, ಬಲಮುಂಗೈಯಲ್ಲಿ ರುದ್ರಾಕ್ಷಿ ಜಪಮಾಲೆಯನ್ನು ಹಿಡಿದು ತದೇಕಚಿತ್ತದಿಂದ ಬಸವಣ್ಣ ಇಷ್ಟಲಿಂಗಾರ್ಚನೆಯಲ್ಲಿ ತೊಡಗಿರುವಂತೆ ಕಲಾವಿದ ಇಲ್ಲಿ ಚಿತ್ರಿಸಿದ್ದಾನೆ. ತಲೆಯನ್ನು ಎಡಭಾಗಕ್ಕೆ ತಿರುಗಿಸಿದ್ದು, ಕಪ್ಪುವರ್ಣದ ಮಟ್ಟಸವಾದ ತಲೆಗೂದಲನ್ನು ಹೊಂದಿದ್ದಾನೆ. ಆತ ನೀರಿನ ಮಧ್ಯೆ ಇರುವ ಮಂಟಪವೊಂದರಲ್ಲಿ ಕುಳಿತು ಇಷ್ಟಲಿಂಗ ಪೂಜೆ ಮಾಡುತ್ತಿದ್ದರೂ ಒಂದು ಹನಿ ನೀರು ಆತನ ದೇಹವನ್ನು ಸೋಕಿದಂತೆ ಕಾಣಿಸುವುದಿಲ್ಲ. ಕಮಲದ ಎಲೆಯ ಮೇಲೆ ನಿಂತ ನೀರಿನ ಹನಿ ಅದಕ್ಕೆ ಹೇಗೆ ಅಂಟಿಕೊಳ್ಳುವುದಿಲ್ಲವೋ ಹಾಗೆಯೇ ಬಸವಣ್ಣ ಸಂಸಾರದಲ್ಲಿದ್ದು, ಲೌಕಿಕದ ಜೀವನವನ್ನು ಅನುಭವಿಸಿಯೂ ಅದಕ್ಕೆ ಅಂಟಿಕೊಳ್ಳಲಿಲ್ಲ ಎಂಬ ಸಾಂಕೇತಿಕತೆ ಇಲ್ಲಿ ಅಭಿವ್ಯಕ್ತವಾಗಿದೆ.

ಕಲಾವಿದ ಇಲ್ಲಿ ಕಡುನೀಲಿ, ಬಿಳಿಮಿಶ್ರಿತ ನೀಲಿಯ ವರ್ಣಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಸಂಯೋಜಿಸಿದ್ದಾನೆ. ನದಿಯ ನೀರಿಗೆ ಸಮುದ್ರದ ತೆರೆಯ ಕಲ್ಪನೆಯನ್ನು ಬಿಂಬಿಸಲು ಯತ್ನಿಸಿದ್ದಾನೆ. ನೀರಿನೊಳಗಿನಿಂದ ಬಸವಣ್ಣನು ಲಿಂಗೈಕ್ಯನಾಗುತ್ತ ಸಾಕ್ಷಾತ್ ಕೂಡಲಸಂಗಮೇಶ್ವರನನ್ನು ಸೇರಿದ ಎಂಬುದನ್ನು ತೋರಿಸಲು ಕಲಾವಿದನು ಇಲ್ಲಿ ಸರಿಯಾದ ತಂತ್ರವನ್ನೇ ಆಯ್ಕೆ ಮಾಡಿಕೊಂಡಿದ್ದಾನೆ. ಬಸವಣ್ಣನು ನೀರಿನೊಳಗೆ ಇಳಿಯುತ್ತಿದ್ದರೂ ಅವನನ್ನು ಇಷ್ಟಲಿಂಗಾಕಾರದ ಪ್ರಭಾವಳಿ ಆವರಿಸಿದೆ. ಜತೆಯಲ್ಲೇ ನದಿಯ ದಡದಿಂದಾಚೆ ಸಂಗಮೇಶ್ವರ ದೇವಸ್ಥಾನದ ಶಿಖರವನ್ನು ಕಾಣಿಸುತ್ತ ಅದರ ಮೇಲೆ ಆಕಾಶದಲ್ಲಿ ಮಿಂಚೊಂದು ಹೊಳೆದು, ಆ ಮಿಂಚಿನ ಬಳ್ಳಿಯು ಬಸವಣ್ಣನನ್ನು ಸೋಕುತ್ತದೆ. ಈ ಎಲ್ಲ ಸಂಕೇತಗಳನ್ನು ಕಲಾವಿದ ತಾನು ಹೇಳಹೊರಟಿರುವ ವಿಷಯಕ್ಕೆ ಸರಿಯಾಗಿ ದುಡಿಸಿಕೊಂಡಿದ್ದಾನೆನ್ನಬೇಕು. ನದಿಯ ನೀರು ನೀಲಿಬಣ್ಣದಿಂದ ಕೂಡಿದೆ.

ವಾಸ್ತವವಾಗಿ ನದಿನೀರು ನೀಲಿಬಣ್ಣವನ್ನು ಹೊಂದಿರುವುದಿಲ್ಲ. ಕಲಾವಿದ ನೀಲಿಬಣ್ಣದ ಅಲೆಯನ್ನು ಬಳಸಿ ಮತ್ತೇನೋ ಗೂಢವಾದ, ಇಲ್ಲವೆ ಸಾಂಕೇತಿಕವಾದ ತನ್ನ ಭಾವನೆಯನ್ನು ಇಲ್ಲಿ ಹೇಳಲು ಯತ್ನಿಸಿದ್ದಾನೆ. ನದಿಯ ದಂಡೆಯ ಮೇಲೆ ಪೊದೆಗಳಂತೆ ಬೆಳೆದು ನಿಂತ ಮರಗಳ ಸಾಲಿಗೆ ದಟ್ಟ ಕಡುಹಸಿರು ಬಣ್ಣವನ್ನು ಬಳಸಿದ್ದು, ಅವುಗಳ ಹಿಂದೆ ಸೂರ್ಯನ ಕಿರಣಗಳು ಕೆಂಪು ಮತ್ತು ಹಳದಿಮಿಶ್ರಿತ ಬಣ್ಣದಿಂದ ಮಂದವಾದ ಪ್ರಭೆಯನ್ನು ಸೂಸಲು ಪ್ರಯತ್ನಿಸಿವೆ. ಆದರೂ ಕೂಡ ಈ ಚಿತ್ರದ ದೊಡ್ಡ ದೌರ್ಬಲ್ಯವೆಂದರೆ ಬಸವಣ್ಣ ಲಿಂಗಪೂಜಾನುಷ್ಠಾನಕ್ಕೆ ಕುಳಿತ ಭಂಗಿ ವಿಚಿತ್ರವಾಗಿದೆ. ಈ ಬಗೆಯಲ್ಲಿ ಯಾವ ವೀರಶೈವರೂ ಕೂಡ ಲಿಂಗಪೂಜೆಗೆ ತೊಡಗಿಸಿಕೊಳ್ಳುವುದಿಲ್ಲ. ತನ್ನ ಮುಖವನ್ನು ಎಡಪಾರ್ಶ್ವಕ್ಕೆ ಹೊರಳಿಸಿ, ತನ್ನ ಎಡಗೈಯನ್ನು ಎಡಪಾರ್ಶ್ವಕ್ಕೆ ತಿರುಗಿಸಿ ಪೂಜಿಸುವುದು ವೀರಶೈವರಲ್ಲಿ ಅಪ್ರಸ್ತುತವೂ ಹೌದು, ಅಸಭ್ಯವೂ ಹೌದು. ಮುಂಬೈನ ಕಲಾವಿದ ನಾಯ್ಕ ಅವರು ಬಸವಣ್ಣನನ್ನು (ಚಿತ್ರ. ೫) ಲಿಂಗಪೂಜಾನುಷ್ಠಾನಕ್ಕೆ ಕುಳಿತಿರುವ ಭಂಗಿಯನ್ನು ಚಿತ್ರಿಸಿರುವ ರೀತಿ ಸರಿಯಾದದ್ದು. ಈ ವಿಚಾರ ಕಲಾಕೃತಿಯನ್ನು ರಚಿಸಿದ ಕಲಾವಿದರಿಗೆ ಇರದೇ ಇರಬಹುದು. ಆದರೂ ಚಿತ್ರದ ಉಲ್ಲೇಖಗಳನ್ನು ಪರಿಶೀಲಿಸಿ, ಸರಿಯಾದ ಕ್ರಮದಲ್ಲಿ ಚಿತ್ರವನ್ನು ರಚಿಸಬಹುದಿತ್ತು.

೨.೧೧.೭. ಬಸವಣ್ಣ ಸಂಗಮನಾಥನಲ್ಲಿ ಐಕ್ಯ

ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ. ಇದರ ಮೂಲ ಕೃತಿ ಲಭ್ಯವಿಲ್ಲ. ಆದರೆ "ಶರಣ ಲೀಲಾಮೃತ"[೧೧೨] ಕೃತಿಯಲ್ಲಿ ಇದರ ಛಾಯಾಪ್ರತಿ ದೊರಕಿದೆ. ಈ ಚಿತ್ರದಲ್ಲಿ ಬಸವಣ್ಣನ ಐಕ್ಯದ ಸನ್ನಿವೇಶವನ್ನು ಚಿತ್ರಿಸಲಾಗಿದೆ. ಸಾಂಪ್ರದಾಯಿಕ ಆಲೋಚನೆ ಮತ್ತು ಆಶಯದಿಂದ ಈ ಕಲಾಕೃತಿಯು ಕಲಾವಿದನ ದೃಷ್ಟಿಯಲ್ಲಿ ಭಿನ್ನವಾಗಿ ಮೂಡಿಬಂದಿದೆ. ಸಾಂಪ್ರದಾಯಿಕ ಚಿತ್ರಗಳಲ್ಲಿ ಬಸವಣ್ಣ ಕೂಡಲಸಂಗಮದಲ್ಲಿ ಲಿಂಗದೊಳಗೆ ಸೇರಿಕೊಳ್ಳುವ ಇಲ್ಲವೆ ನೀರಿನಲ್ಲಿ ಮುಳುಗುವ ದೃಶ್ಯಗಳು ಕಂಡುಬರುತ್ತವೆ. ಲಿಂಗವನ್ನು ಸೀಳಿಕೊಂಡು ಬಸವಣ್ಣ ತನ್ನ ಮೇಲಿರುವ ಶಿವನೊಂದಿಗೆ ಲೀನವಾಗುವುದು ಇಲ್ಲಿಯ ವಿಶೇಷವಾಗಿದೆ. ಈ ಚಿತ್ರದಲ್ಲಿ ಹೆಚ್ಚು ಬಣ್ಣಗಳ ಬಳಕೆಯಿಲ್ಲ. ಕೇವಲ ಕಡು ಕಂದು, ತೆಳು ನೀಲಿ ಬಣ್ಣಗಳು ಪ್ರಧಾನವಾಗಿ ಕಂಡುಬರುತ್ತವೆ. ನದಿಯ ಮಧ್ಯದಲ್ಲಿರುವ ಕಂದು ಮತ್ತು ಕಪ್ಪು ಬಣ್ಣಗಳ ಮಿಶ್ರಣದ ಶಿವಲಿಂಗದ ಪೀಠಭಾಗವು ಎರಡು ಹೋಳಾಗಿದ್ದು ಅದಕ್ಕೆ ಹಚ್ಚಿದ ವಿಭೂತಿಯು ಕೂಡ ಎರಡು ಭಾಗವಾಗಿ ಕಂಡುಬರುವುದು ಸಹಜವಾಗಿದೆ. ಅದರೊಳಗಿಂದ ಬಸವಣ್ಣನ ಸೊಂಟದಿಂದ ಮೇಲಿನ ಭಾಗ ಮಾತ್ರ ಗೋಚರಿಸುತ್ತಿದ್ದು ಬಸವಣ್ಣ ತನ್ನ ಮೇಲಿರುವ ಶಿವನ ಸೊಂಟಭಾಗವನ್ನು ತನ್ನ ಕೈಗಳಿಂದ ಬಾಚಿ ತಬ್ಬಿ ಹಿಡಿದಿರುವ ದೃಶ್ಯವು ಅರ್ಥವತ್ತಾಗಿದೆ. ನೀಲಿ ದೇಹವರ್ಣವನ್ನು ಹೊಂದಿದ ಬಸವಣ್ಣ ಬರಿಯ ಮೈಯಲ್ಲಿದ್ದು ಕೇವಲ ಪಂಚೆಯನ್ನು ಮಾತ್ರ ಧರಿಸಿದ್ದಾನೆ. ಶಿವನನ್ನು ತಬ್ಬಿ ಹಿಡಿದಿರುವ ಬಸವಣ್ಣನ ನೋಟವು ತನ್ನನ್ನು ಶಿವನಲ್ಲಿ ಸೇರಿಸಿಕೊಳ್ಳುವ ಆರ್ತನಾದವನ್ನು ಸೂಚಿಸುವಂತೆ ಕಲಾವಿದ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ.

---

೧೧೨. ಶ್ರೀ ಶಿವಬಸವಸ್ವಾಮಿಗಳು (ಸಂ.) : ಶರಣಲೀಲಾಮೃತ. ಪ್ರ: ಶಿವಶರಣ ವಾಙ್ಮಯ ಪ್ರಕಾಶ ಕಾರ್ಯಾಲಯ, ಮೈಸೂರು. ೧೯೪೫


ತಲೆಯಲ್ಲಿ ಜಟೆ, ಚಂದ್ರ, ಕೊರಳಲ್ಲಿ ಸರ್ಪ, ನಾಲ್ಕು ಕೈಗಳನ್ನು ಹೊಂದಿರುವ ಶಿವನು ಬಲಭಾಗದ ಕೈಗಳಲ್ಲಿ ಒಂದರಲ್ಲಿ ಡಮರುಗ, ಮತ್ತೊಂದು ಕೈಯಿಂದ ಬಸವಣ್ಣನ ತಲೆಯ ಮೇಲೆ ಕೃಪಾಪೂರಿತ ಆಶೀರ್ವಾದ ಮಾಡುವಂತೆ ನಿಂತಿದ್ದಾನೆ. ಶಿವನು ತನ್ನ ದೇಹವನ್ನು ತುಸು ಬಾಗಿಸಿ ನಿಂತಿರುವುದು ಒಟ್ಟು ಚಿತ್ರದ ಉದ್ದೇಶಕ್ಕೆ ತುಂಬ ಸಹಜವೆನ್ನುವಂತೆ ಕಾಣುತ್ತದೆ. ಎಡಭಾಗದ ಎರಡು ಕೈಗಳಲ್ಲಿ ಒಂದರಲ್ಲಿ ಬಸವನನ್ನು ಹೋಲುವ ಒಂದು ವಿಗ್ರಹವಿದ್ದು, ಮತ್ತೊಂದರಲ್ಲಿ ಉದ್ದನೆಯ ತ್ರಿಶೂಲವನ್ನು ಹಿಡಿದಿದ್ದಾನೆ. ಶಿವನು ಬಸವಣ್ಣನನ್ನು ಕರುಣೆಯಿಂದ ನೋಡುವ ಭಾವನೆಯನ್ನು ಕಲಾವಿದ ಇನ್ನಿಲ್ಲದಂತೆ ಅಭಿವ್ಯಕ್ತಿಗೊಳಿಸಿದ್ದಾನೆ. ಚಿತ್ರದ ಸನ್ನಿವೇಶಕ್ಕೆ ತಕ್ಕಂತೆ ಅಲ್ಲಿಯ ಪರಿಸರದ ಸಂಗತಿಗಳು ಸಮರ್ಪಕವಾಗಿ ಮೂಡಿಬಂದಿವೆ. ನದಿಯ ದಡದಲ್ಲಿ ಹರಿಯುವ ನೀರಿನ ಮಧ್ಯೆ ಶಿವಲಿಂಗವಿರುವುದು, ಅದನ್ನು ಬಳಸಿ ಸಾಗುವ ನೀರಿನ ಅಲೆಗಳು, ದಂಡೆಯಲ್ಲಿರುವ ಚಿಕ್ಕ ಚಿಕ್ಕ ಗುಂಡು ಕಲ್ಲುಗಳು, ಅವುಗಳ ಮಧ್ಯೆ ಬೆಳೆದ ಗಿಡಗಂಟೆಗಳು, ನದಿಯ ಇನ್ನೊಂದು ದಡದಲ್ಲಿ ಬೆಟ್ಟ, ಮರಗಿಡಗಳು ಇವೆಲ್ಲವುಗಳು ಸನ್ನಿವೇಶದ ಸಹಜತೆಗೆ ತುಂಬು ಸಹಕಾರಿಯಾಗಿವೆ. ಶಿವನ ತಲೆಯಿಂದ ಕೆಳಗೆ ಬೀಳುತ್ತಿರುವ ನೀರಿನ ಧಾರೆ ಲಿಂಗದ ಮೇಲೆ ಬೀಳುತ್ತಿರುವ ದೃಶ್ಯವಂತೂ ನೋಡುಗನ ಮನಸೆಳೆಯುವುದರ ಹಿಂದೆ ಈ ಚಿತ್ರ ನೈಜತೆಗೆ ಹತ್ತಿರವಾಗಿದೆ. ಶ್ರೀಸಾಮಾನ್ಯನು ಸಹಿತ ಅರ್ಥೈಸಿಕೊಳ್ಳಬಹುದಾದ ಈ ಚಿತ್ರದಲ್ಲಿ ಯಥಾದರ್ಶನದ ನೀತಿಯನ್ವಯ ಹಿನ್ನೆಲೆಯ-ಮುನ್ನೆಲೆಯ ರಚನೆಗೆ ವ್ಯತ್ಯಾಸಗಳನ್ನು ತೋರಿಸಿದ್ದಾರೆ. ವಿವರವಾಗಿ ಹೇಳುವುದಾದರೆ ದೂರ ಮತ್ತು ಸಾಮೀಪ್ಯದ ಅನುಭವ ಇಲ್ಲಿ ಸ್ಪಷ್ಟ. ಸಾಮೀಪ್ಯದ ನೆಲೆಯಲ್ಲಿ ನೀರೊಳಗಿನ ಲಿಂಗವನ್ನು, ಶಿವನನ್ನು ಮತ್ತು ಬಸವಣ್ಣನನ್ನು, ನದಿತೀರದ ಗಿಡಗಂಟೆಗಳನ್ನು ತೋರಿಸಿದರೆ, ದೂರದ ವಾಯುಮಂಡಲದಲ್ಲಿ ಬೆಟ್ಟ-ಗುಡ್ಡಗಳನ್ನು, ನದಿಯನ್ನು ಚಿತ್ರಿಸಲ್ಪಟ್ಟಿರುವುದು ಕಾಣುತ್ತದೆ. ಕಲಾವಿದನಿಗೆ ಯಥಾದರ್ಶನದ ಅರಿವು ಇದ್ದರೆ ಇಂತಹ ಚಿತ್ರಗಳ ರಚನೆ ಸಾಧ್ಯ ಎಂಬುದನ್ನು ಈ ಚಿತ್ರದಿಂದ ಅರಿಯಬಹುದಾಗಿದೆ.

೨.೧೧.೮. ಬಸವಣ್ಣ ಸಂಗಮನಾಥನಲ್ಲಿ ಐಕ್ಯ

ವೃಷಭೇಂದ್ರ ವಿಳಾಸ ಕೃತಿಯ ಒಂದು ಭಾಗವಾಗಿರುವ ಪ್ರಸ್ತುತ ಚಿತ್ರವು ಕೂಡಲಸಂಗಮದಲ್ಲಿ ಬಸವಣ್ಣನ ಐಕ್ಯದ ಸನ್ನಿವೇಶವನ್ನು ತಿಳಿಸುತ್ತದೆ. ಈ ಚಿತ್ರದಲ್ಲಿ ವರ್ಣಗಳಿಗಿಂತ, ಚಿತ್ರದಲ್ಲಿರುವ ರೇಖೆಗಳೇ ಪ್ರಧಾನ ಪಾತ್ರವಹಿಸಿರುವುದನ್ನು ಕಾಣುತ್ತೇವೆ. ತೆಳು ನೀಲಿಬಣ್ಣದ ಶಿವಲಿಂಗದ ಕೆಳಗಿನ ಅರ್ಧಭಾಗ ಅನೇಕ ಚಿತ್ತಾರಗಳಿಂದ ಕೂಡಿದ್ದು, ಸಾಂಪ್ರದಾಯಿಕ ಪೀಠವು ಇಬ್ಭಾಗವಾಗಿದೆ. ಅದರ ಮಧ್ಯದಲ್ಲಿ ತಲೆಗೆ ಹಸಿರುಬಣ್ಣದ ಬಟ್ಟೆಯ ಅಲಂಕೃತ ಪೇಟ, ಕೊರಳಿನಲ್ಲಿ ತಾಯಿತದ ಆಕಾರದಲ್ಲಿರುವ ಇಷ್ಟಲಿಂಗ, ರುದ್ರಾಕ್ಷಿಯ ಮಾಲೆ, ತುಂಬುತೋಳಿನ ಬಿಳಿಯ ಬಣ್ಣದ ನಿಲುವಂಗಿ, ಹೆಗಲ ಮೇಲೆ ಹಳದಿ ಚುಕ್ಕೆಗಳಿರುವ ಕೆಂಪು ಬಣ್ಣದ ಮೇಲು ಹೊದಿಕೆಯನ್ನು ಇಳಿಯಬಿಟ್ಟುಕೊಂಡಿರುವ ಬಸವಣ್ಣ ಪ್ರಶಾಂತ ನೋಟವನ್ನು ಬೀರುತ್ತಿದ್ದಾನೆ. ಆತನ ಬಲಗೈಹಸ್ತದ ತೋರುಬೆರಳು ಮತ್ತು ಹೆಬ್ಬೆರಳು ಕೂಡಿಕೊಂಡಿದ್ದು ಆಶೀರ್ವದಿಸುವ ಭಂಗಿಯಲ್ಲಿದೆ. ಶಿವಲಿಂಗದ ಸುತ್ತಲಿನ ಆವರಣದಲ್ಲಿ ರಾಜಗೋಪುರದ ಬಾಗಿಲನ್ನು ನೆನಪಿಸುವ ಚೌಕಟ್ಟುಗಳಿವೆ. ಎಡ ಮತ್ತು ಬಲಬದಿಯ ಚೌಕಟ್ಟಿನಲ್ಲಿ ಎರಡು ಇಷ್ಟಲಿಂಗಗಳಿದ್ದು, ಮೇಲಿನ ಭಾಗ ಚಿತ್ತಾರಗಳಿಂದ ಅಲಂಕೃತವಾಗಿದೆ.

ಬಸವಣ್ಣನ ಐಕ್ಯದ ಸನ್ನಿವೇಶವನ್ನು ತುಂಬ ಸರಳವಾಗಿ ಮತ್ತು ಸಾಂಕೇತಿಕವಾಗಿ ಕಲಾವಿದ ಇಲ್ಲಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಮೈಸೂರುಶೈಲಿಯ ಪೇಟ ಸುತ್ತಿಕೊಂಡಿರುವ ಬಸವಣ್ಣ ಶಿವಲಿಂಗದಲ್ಲಿ ಇನ್ನೇನು ಐಕ್ಯನಾಗುತ್ತಾನೆ ಎನ್ನುವಂತೆ ಇಲ್ಲಿ ಚಿತ್ರಿತವಾಗಿದೆ. ವಾಸ್ತುವಿನ್ಯಾಸವೊಂದನ್ನು ಚಿತ್ರದ ಸ್ಥಳಾವಕಾಶದಲ್ಲಿ ಚಿತ್ರಿಸಿರುವ ಕಲಾವಿದರು ದ್ವಾರದ ವಿನ್ಯಾಸದಲ್ಲಿ ಬಸವಣ್ಣನನ್ನು ಮತ್ತು ಶಿವಲಿಂಗದಲ್ಲಿ ಐಕ್ಯಗೊಳ್ಳುವ ಸಂಗತಿಯನ್ನು ದೃಶ್ಯಾತ್ಮಕವಾಗಿ, ಸಾಂಪ್ರದಾಯಿಕ ಶೈಲಿಯಲ್ಲಿ ನಿರೂಪಿಸಿದ್ದಾರೆ.

❑❑❑



ಚಿತ್ರ ೨.೧.೧ ಬಸವ ಪೂರ್ವ ಯುಗದ ಹಿಂದೂ ಧರ್ಮದ ಚಿತ್ರಣ



ಚಿತ್ರ ೨.೧.೨ ದಲಿತರ ಕೇರಿಯ ದೃಶ್ಯ




ಚಿತ್ರ ೨.೧.೩ ದಲಿತರಿಗೆ ದೇವಾಲಯ ಪ್ರವೇಶ ನಿಷೇದ ಸನ್ನಿವೇಶ



ಚಿತ್ರ ೨.೧.೪ ದಲಿತರಿಗೆ ಕೆರೆ ಭಾವಿಯ ನಿಷೇದ



ಚಿತ್ರ ೨.೧.೫ ದಲಿತರಿಗೆ ಶಿಕ್ಷಣ ನಿಷೇದ ಸನ್ನಿವೇಶ




ಚಿತ್ರ ೨.೨.೧ ಬಸವಣ್ಣನ ಜನನ




ಚಿತ್ರ ೨.೨.೨ ಅಳದಿರುವ ಮಗು ಬಸವೇಶನನ್ನು ಹೊತ್ತ ಸೂಲಗಿತ್ತಿ



ಚಿತ್ರ ೨.೨.೩ ಬಾಲಕ ಬಸವಣ್ಣನನ್ನು ಮಾದಲಾಂಬಿಕೆ ಎತ್ತಿಕೊಂಡಿರುವುದು



ಚಿತ್ರ ೨.೨.೪ ವೈದ್ಯ ಪಂಡಿತರು ಮಗುವಿನ ಪರೀಕ್ಷೆ ಮಾಡುತ್ತಿರುವುದು



ಚಿತ್ರ ೨.೨.೫ ಗುರುಗಳಿಂದ ಮಂತ್ರೋಪದೇಶ



ಚಿತ್ರ ೨.೨.೧ ಬಾಲಕ ಬಸವಣ್ಣನಿಗೆ ಗುರುಗಳ ಆಶೀರ್ವಾದ



ಚಿತ್ರ ೨.೨.೨ ಗುರುವಿನ ಪಾದಕಮಲದಲ್ಲಿ ಶಿಶು ಬಸವೇಶ




ಚಿತ್ರ ೨.೨.೮ ಕಣ್ತೆರೆದು ಆಡುವ ಮಗುವನ್ನು ಕಂಡು ಸಂತಸಗೊಂಡ ತಂದೆ-ತಾಯಿ-೧



ಕಣ್ತೆರೆದು ಆಡುವ ಮಗುವನ್ನು ಕಂಡು ಸಂತಸಗೊಂಡ ತಂದೆ-ತಾಯಿ-೨



ಚಿತ್ರ ೨.೨.೯ ಶಿಶು ಬಸವೇಶನನ್ನು ಆಶೀರ್ವದಿಸುತ್ತಿರುವ ಗುರುಗಳು ೧



ಶಿಶು ಬಸವೇಶನನ್ನು ಆಶೀರ್ವದಿಸುತ್ತಿರುವ ಗುರುಗಳು ೨



ಶಿಶು ಬಸವೇಶನನ್ನು ಆಶೀರ್ವದಿಸುತ್ತಿರುವ ಗುರುಗಳು ೩




ಚಿತ್ರ ೨.೨.೧೦ ಶಿಶು ಬಸವೇಶನಿಗೆ ನಾಮಕರಣ ೧




ಶಿಶು ಬಸವೇಶನಿಗೆ ನಾಮಕರಣ ೨




ಚಿತ್ರ ೨.೨.೧೧ ಸತ್ತ ಗೆಳೆಯನನ್ನು ಬದುಕಿಸಿದ ಬಾಲಕ ಬಸವೇಶ ೧



ಸತ್ತ ಗೆಳೆಯನನ್ನು ಬದುಕಿಸಿದ ಬಾಲಕ ಬಸವೇಶ ೨



ಚಿತ್ರ ೨.೨.೧೨ ಈ ಜನಿವಾರ ನನಗೇಕೆ ಎಂದು ಪ್ರಶ್ನಿಸುತ್ತಿರುವ ಬಸವಣ್ಣ (ಕಾ.ಚಿ.)




ಚಿತ್ರ ೨.೨.೧೩ ಬಾಲಕ ಬಸವಣ್ಣನಿಂದ ಜನಿವಾರ ನಿರಾಕರಣೆ ೧



ಬಾಲಕ ಬಸವಣ್ಣನಿಂದ ಜನಿವಾರ ನಿರಾಕರಣೆ ೨



ಚಿತ್ರ ೨.೨.೧೪ ಮೂಢ ಆಚರಣೆಗಳನ್ನು ಪ್ರಶ್ನಿಸುತ್ತಿರುವ ಬಾಲಕ ಬಸವೇಶ



ಚಿತ್ರ ೨.೨.೧೫ ಜನಿವಾರವನ್ನು ತೊರೆದು ಹೊರಟಿರುವ ಬಸವಣ್ಣ



ಚಿತ್ರ ೨.೨.೧೬ ಅರ್ಥವಿಲ್ಲದ ಆಚರಣೆಗಳನ್ನು ನಿರಾಕರಿಸಿ ಹೊರಟ ಬಸವಣ್ಣ



ಚಿತ್ರ ೨.೨.೧೭ ಉಪನಯನ ನಿರಾಕರಿಸುತ್ತಿರುವ ಬಸವಣ್ಣ ೧



ಉಪನಯನ ನಿರಾಕರಿಸುತ್ತಿರುವ ಬಸವಣ್ಣ ೨



ಚಿತ್ರ ೨.೨.೧೮ ದಲಿತ ಸ್ನೇಹಿತನೊಂದಿಗೆ ಸಹಭೋಜನ ಮಾಡುತ್ತಿರುವ ಬಸವಣ್ಣ



ಚಿತ್ರ ೨.೨.೧೯ ಕೂಡಲಸಂಗಮದತ್ತ ಪಯಣ (



ಕೂಡಲ ಸಂಗಮದತ್ತ ಪಯಣ ೨



ಚಿತ್ರ ೨.೨.೨೦ ಸಂಗಮನಾಥ ಬಸವಣ್ಣನನ್ನು ಕೃಷ್ಣಾನದಿ



ಚಿತ್ರ ೨.೨.೨೧ ಸಂಗಮನಾಥನ ದರ್ಶನ (ಕಾ.ಚಿ.)




ಚಿತ್ರ ೨.೨.೨೨ ಸಂಗಮನಾಥನ ಪೂಜೆ (ಕಾ.ಚಿ.)



ಚಿತ್ರ ೨.೨.೨೩ ಸಂಗಮನಾಥನ ಸನ್ನಿಧಿಯಲ್ಲಿ ಗುರುಗಳಿಂದ ಆಶೀರ್ವಾದ



ಚಿತ್ರ ೨.೨.೨೪ ಅಧ್ಯಯನದಲ್ಲಿ ನಿರತನಾದ ಬಸವಣ್ಣ



ಚಿತ್ರ ೨.೨.೩೫ ಗುರುಸನ್ನಿಧಿಯಲಿ ಬಸವಣ್ಣನ ಅಧ್ಯಯನ



ಚಿತ್ರ ೨೨೨೬ ಗುರುಗಳಿಗೆ ನಮಸ್ಕರಿಸುತ್ತಿರುವ ಬಸವಣ್ಣ



ಚಿತ್ರ ೨.೨.೨೭ ಧ್ಯಾನ ನಿರತ ಬಸವಣ್ಣ




ಚಿತ್ರ ೨.೨.೨೮ ಗುರುಗಳಿಂದ ಬಸವಣ್ಣನಿಗೆ ಉಪದೇಶ



ಚಿತ್ರ ೨.೩.೧ ಕೂಡಲಸಂಗಮದಿಂದ ಮಂಗಳವಾಡೆಯತ್ತ ಪಯಣ ೧



ಕೂಡಲಸಂಗಮದಿಂದ ಮಂಗಳವಾಡೆಯತ್ತ ಪಯಣ ೨



ಚಿತ್ರ ೨.೩.೨ ಬಸವಣ್ಣನಿಗೆ ಬಲದೇವನು ಉಡುಗೊರೆಗಳನ್ನು ಕೊಡುತ್ತಿರುವುದು



ಚಿತ್ರ ೨.೩.೩ ಬಸವಣ್ಣನಿಗೆ ಗಂಗಾಂಬಿಕೆಯನ್ನು ಧಾರೆಯೆರೆಯುತ್ತಿರುವುದು



ಚಿತ್ರ ೨.೩.೪ ಬಸವಣ್ಣ–ಗಂಗಾಂಬಿಕೆಯ ವಿವಾಹ ೧



ಬಸವಣ್ಣ–ಗಂಗಾಂಬಿಕೆಯ ವಿವಾಹ ೨



ಗಂಗಾಂಬಿಕೆಯೊಂದಿಗೆ ಬಸವಣ್ಣನ ವಿವಾಹ ೩.



ಚಿತ್ರ ೨.೩.೫ ಶಿವನು ಲಿಂಗದಿಂದ ಪ್ರತ್ಯಕ್ಷನಾಗಿ ಬಸವಣ್ಣನನ್ನು ಹರಸುತ್ತಿರುವುದು



ಚಿತ್ರ ೭.೩.೧ ಬಸವಣ್ಣನಿಗೆ ಮಂತ್ರಿಪಟ್ಟ



ಚಿತ್ರ ೭.೩.೨ ಬಿಜ್ಜಳ ಮಹಾರಾಜನು ಬಸವಣ್ಣನನ್ನು ಎದುರುಗೊಳ್ಳುತ್ತಿರುವುದು



ಚಿತ್ರ ೨.೩.೮ ಬಿಜ್ಜಳ ಮಹಾರಾಜ ಬಸವಣ್ಣನನ್ನು ಮೆರವಣಿಗೆಯೊಂದಿಗೆ ಕರೆದೊಯ್ಯುತ್ತಿರುವುದು




ಚಿತ್ರ ೨.೩.೯ ಗೂಢಲಿಪಿಯನ್ನು ಓದುತ್ತಿರುವ ಬಸವಣ್ಣ ೧



ಗೂಢಲಿಪಿಯನ್ನು ಓದುತ್ತಿರುವ ಬಸವಣ್ಣ ೨




ಗೂಢಲಿಪಿಯನ್ನು ಓದುತ್ತಿರುವ ಬಸವಣ್ಣ ೩



ಚಿತ್ರ ೨.೩.೧೦ ನಿಧಿಶೋಧನೆ ೧



ನಿಧಿಶೋಧನೆ ೨



ಚಿತ್ರ ೨.೩.೧೧ ಶೋಧಗೊಂಡ ನಿಧಿಯನ್ನು ವೀಕ್ಷಿಸುತ್ತಿರುವ ಬಸವಣ್ಣ ಮತ್ತು ಬಿಜ್ಜಳ



ಚಿತ್ರ ೨.೩.೧೨ ಚನ್ನಬಸವಣ್ಣನ ಜನನ ಪ್ರಸಂಗ



ಚಿತ್ರ ೨.೩.೧೩ ಬಸವಣ್ಣ–ನೀಲಾಂಬಿಕೆ ವಿವಾಹ ೧ (ಕಾ.ಚಿ)



ಬಸವಣ್ಣ ನಿಲಾಂಬಿಕೆಯರ ವಿವಾಹ ೨



ಚಿತ್ರ ೨.೩.೧೪ ಅನ್ಯೋನ್ಯ ಸಂಸಾರ



ಚಿತ್ರ ೨.೩.೧೫ ಲೆಕ್ಕ ಪತ್ರಗಳ ವ್ಯವಹಾರವನ್ನು ಸರಿಪಡಿಸುತ್ತಿರುವ ಬಸವಣ್ಣ



ಚಿತ್ರ ೨.೩.೧೬ ಬಸವಣ್ಣ ಹರಳಯ್ಯನ ಮನೆಗೆ ಬಂದಾಗ ಆತ್ಮೀಯ ಅಪ್ಪುಗೆ



ಚಿತ್ರ ೨.೩.೧೭ ಹರಳಯ್ಯನ ಮನೆಯಲ್ಲಿ ಬಸವಣ್ಣ ಪ್ರಸಾದ ಸ್ವೀಕಾರ ಮಾಡುತ್ತಿರುವುದು



ಚಿತ್ರ ೨.೩.೧೮ ಚನ್ನಬಸವೇಶರನ ಪುಸ್ಪಕೋತ್ಸವ



ಚಿತ್ರ ೨.೪.೧ ಬಸವಣ್ಣನನ್ನ ಕೊಲ್ಲಲು ಬಂದ ಆಗಂತುಕ



ಚಿತ್ರ ೨.೪.೨ ಕಳ್ಳನಿಗೆ ಮನಃಪರಿವರ್ತನೆ ಮಾಡುತ್ತಿರುವ ಬಸವಣ್ಣ ೦೧



ಕಳ್ಳನ ಮನಃಪರಿವರ್ತನೆ ಮಾಡುತ್ತಿರುವುದು ೨



ಚಿತ್ರ ೨.೪.೩ ಕಳ್ಳರನ್ನು ಬಸವಣ್ಣ ಕ್ಷಮಿಸುವ ಸನ್ನಿವೇಶ



ಚಿತ್ರ ೨.೪.೪ ಜೋಳದ ರಾಶಿಯನ್ನು ಮುತ್ತಿನ ರಾಶಿಯನ್ನಾಗಿ ಮಾಡುತ್ತಿರುವುದು



ಚಿತ್ರ ೨.೪.೫ ಭಕ್ತಿ ಪರೀಕ್ಷೆ ಮಾಡಿದ ಬಸವಣ್ಣ



ಚಿತ್ರ ೨.೪.೬ ನಂದಿ ಮುದ್ರೆಯುಂಗುರದ ಪವಾಡ



ಚಿತ್ರ ೨.೪.೭ ಬದನೆಕಾಯಿಗಳನ್ನು ಲಿಂಗಗಳನ್ನಾಗಿ ಪರಿವರ್ತನೆ ಮಾಡಿದ ಬಸವಣ್ಣ



ಚಿತ್ರ ೨.೪.೮ ಭಕ್ತಿಯ ಮಹಿಮೆ



ಚಿತ್ರ ೨.೪.೯ ಗೊಲ್ಲತಿಯ ಮೊಸರುಗಡಿಗೆಯನ್ನು ಬಸವಣ್ಣ ರಕ್ಷಿಸಿದ ಪವಾಡ



ಚಿತ್ರ ೨.೪.೧೦ ವಿಟ ಜಂಗಮ ಬಸವಣ್ಣನ ಹೆಂಡತಿಯ ಸೀರೆಯನ್ನು ಸೆಳೆದ ಪ್ರಸಂಗ



ಚಿತ್ರ ೨.೪.೧೧ ವಿಟಜಂಗಮನ ಬಯಕೆಯಂತೆ ಸೀರೆಯನ್ನು ಸೆಳೆದು ಕೊಡುತ್ತಿರುವ ಬಸವಣ್ಣ




ಚಿತ್ರ ೨.೪.೧೧ ಮಾರು ವೇಷದ ಬಿಜ್ಜಳನಿಂದ ಬಸವಣ್ಣನ ಕಾಯಕ ನಿಷ್ಠೆಯ ಪರೀಕ್ಷೆ



ಚಿತ್ರ ೨.೫.೧ ಕಾಯಕ ನಿರತ ಶರಣರೊಂದಿಗೆ ಬಸವಣ್ಣ



ಚಿತ್ರ ೨.೫.೨ ಕಾಯಕ ಮಾಡಿದವರಿಗೆ ಆಹಾರಧಾನ್ಯಗಳನ್ನು ಪೂರೈಸುತ್ತಿರುವುದು



ಚಿತ್ರ ೨.೫.೩ ಕಾಯಕ ನಿರತ ಶರಣರೊಂದಿಗೆ ಬಸವಣ್ಣ



ಚಿತ್ರ ೨.೫.೪ ಬರಗಾಲ ಮತ್ತು ಕಾಯಕ




ಚಿತ್ರ ೨.೬.೧ ಮಹಾಮನೆ ಮತ್ತು ದಾಸೋಹ



ಚಿತ್ರ ೨.೬.೨ ಅಲ್ಲಮಪ್ರಭುವಿಗೆ ಬಸವಣ್ಣ ನೈವೇದ್ಯವನ್ನು ಅರ್ಪಿಸುತ್ತಿರುವ ಪ್ರಸಂಗ (ಕಾ.ಚಿ.)



ಚಿತ್ರ ೨.೬.೩ ಎಷ್ಟು ನೀಡಿದರೂ ತೃಪ್ತಿಗೊಳ್ಳದ ಅಲ್ಲಮಪ್ರಭುದೇವರು (ಕಾ.ಚಿ.)



ಚಿತ್ರ ೨.೬.೪ ಪ್ರಭುದೇವರ ಪ್ರಸಾದಸೇವೆಗೆ ಮಾಡಿದ ಅಡುಗೆಯೆಲ್ಲ ಮುಗಿದು ಹೋದುದು (ಕಾ.ಚಿ.)



ಚಿತ್ರ ೨.೬.೫ ಪ್ರಭುದೇವರಿಗೆ ಬಸವಣ್ಣ ಮತ್ತು ಇತರ ಶರಣ-ಶರಣೆಯರ ಪ್ರಸಾದ ಮಾಡಿಸುತ್ತಿರುವ ಸನ್ನಿವೇಶ




ಪಟ್ಟಿಕೆ -೧

ಪಟ್ಟಿಕೆ-೨


ಪಟ್ಟಿಕೆ-೩

ಪಟ್ಟಿಕೆ-೪

ಚಿತ್ರ ೨.೭.೧ ಅನುಭವ ಮಂಟಪ ಮೈಸೂರ ೧



ಅನುಭವ ಮಂಟಪ ಧಾರವಾಡ ೨



ಅನುಭವ ಮಂಟಪ ೩. (ಕಾ.ಚಿ)




ಅನುಭವ ಮಂಟಪ ೪



ಅನುಭವ ಮಂಟಪ ೫



ಅನುಭವ ಮಂಟಪ ೧



ಅನುಭವ ಮಂಟಪ ೨



೨.೭.೨ ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ–ಅಲ್ಲಮಪ್ರಭುವಿನ ಸಂವಾದ




ಚಿತ್ರ ೨.೭.೩ ಅನುಭವಮಂಟಪ –ಅಧ್ಯಯನ ನಿರತ ಶರಣರು



ಚಿತ್ರ ೨.೭.೪ ಅಲ್ಲಮಪ್ರಭುದೇವರ ಪಾದಪೂಜೆಯ ಸನ್ನಿವೇಶ



ಚಿತ್ರ ೨.೭.೫ ಅನುಭವ ಮಂಟಪದಲ್ಲಿ ಬಸವಣ್ಣ–ಶರಣರ ಸಂವಾದ



ಚಿತ್ರ ೨.೭.೬ ಅನುಭವಮಂಟಪದಲ್ಲಿ ಅಕ್ಕನೊಂದಿಗೆ ಸಂವಾದ



ಚಿತ್ರ ೨.೭.೭ ಅನುಭವ ಮಂಟಪದಲ್ಲಿ ಪ್ರಭುದೇವರೊಂದಿಗೆ ಅಕ್ಕನ ಸಂವಾದ



ಚಿತ್ರ ೨.೭.೮ ಅನುಭವಮಂಟಪದಲ್ಲಿ ಬಸವಣ್ಣ ಅಕ್ಕಮಹಾದೇವಿಯರ ಉಭಯಕುಶಲೋಪರಿ



ಚಿತ್ರ ೨.೭.೯ ಸಿದ್ಧರಾಮನಿಗೆ ಲಿಂಗದೀಕ್ಷೆ



ಚಿತ್ರ ೨.೮.೧ ಹರಳಯ್ಯನಿಗೆ ಶರಣಾರ್ಥಿ ಎಂದ ಬಸವಣ್ಣ



ಚಿತ್ರ ೨.೮.೨ ಬಸವಣ್ಣನಿಗೆ ಪಾದುಕೆ ನೀಡುತ್ತಿರುವ ಹರಳಯ್ಯ



ಚಿತ್ರ ೨.೮.೩ ಹರಳಯ್ಯ ತಂದ ಪಾದುಕೆಗಳನ್ನು ತನ್ನ ತಲೆಯಮೇಲೆ ಹೊತ್ತ ಬಸವಣ್ಣ




ಚಿತ್ರ ೨.೯.೧ ಅಂತರ್‌ಜಾತಿ ವಿವಾಹ



ಚಿತ್ರ ೨.೯.೨ ಅಂತರ್ಜಾತೀಯ ವಿವಾಹಕ್ಕೆ ಸಾಕ್ಷಿಯಾದ ಬಸವಣ್ಣ



ಚಿತ್ರ ೨.೯.೩ ವಧೂ-ವರರನ್ನು ಆಶೀರ್ವದಿಸುತ್ತಿರುವ ಬಸವಣ್ಣ



ಚಿತ್ರ ೨.೯.೪ ಬಿಜ್ಜಳನೊಂದಿಗೆ ಚರ್ಚೆಯಲ್ಲಿ ನಿರತನಾದ ಬಸವಣ್ಣ ೧



ಬಿಜ್ಜಳನೊಂದಿಗೆ ಚರ್ಚೆಯಲ್ಲಿ ನಿರತನಾದ ಬಸವಣ್ಣ ೨



ಚಿತ್ರ ೨.೧೦.೧ ಮಂತ್ರಿ ಪದವಿ ಹಿಂತಿರುಗಿಸುತ್ತಿರುವ ಬಸವಣ್ಣ ೧



ಮಂತ್ರಿ ಪದವಿ ಹಿಂತಿರುಗಿಸುತ್ತಿರುವ ಬಸವಣ್ಣ ೨



ಚಿತ್ರ ೨.೧೦.೨ ಚನ್ನಬಸವಣ್ಣನಿಂದ ಬಸವಣ್ಣನಿಗೆ ಬೀಳ್ಕೊಡುಗೆ



ಶರಣರಿಗೆ ಸಂದೇಶವನ್ನು ನೀಡುತ್ತಿರುವ ಬಸವಣ್ಣ ೧



ಚಿತ್ರ ೨.೧೦.೩ ಶರಣ ಸಮೂಹಕ್ಕೆ ಸಂದೇಶ ನೀಡುತ್ತಿರುವ ಬಸವಣ್ಣ ೨



ಚಿತ್ರ ೨.೧೦.೪ ಬಸವಣ್ಣನನ್ನು ಬೀಳ್ಕೊಡುತ್ತಿರುವ ಶರಣ ವೃಂದ ೧



ಶರಣರು ಬಸವಣ್ಣನನ್ನು ಬೀಳ್ಕೊಡುವ ಸನ್ನಿವೇಶ ೨



ಚಿತ್ರ ೨.೧೦.೫ ಬೀಳ್ಕೊಡುವ ಸಂದರ್ಭದಲ್ಲಿ ಹರಳಯ್ಯನನ್ನು ಅಪ್ಪಿಕೊಂಡಿರುವ ಬಸವಣ್ಣ



ಚಿತ್ರ ೨.೧೦.೬ ಬಸವಣ್ಣನನ್ನು ಬೀಳ್ಕೊಡುತ್ತಿರುವುದು




ಚಿತ್ರ ೨.೧೧.೧ ಬಸವಣ್ಣ ಸಂಗಮನಾಥನಲ್ಲಿ ಐಕ್ಯ




ಚಿತ್ರ ೨.೧೧.೨ ಬಸವಣ್ಣ ಸಂಗಮನಾಥನಲ್ಲಿ ಐಕ್ಯ



ಚಿತ್ರ ೨.೧೧.೩ ಬಸವಣ್ಣ ಸಂಗಮನಾಥನಲ್ಲಿ ಐಕ್ಯ



ಚಿತ್ರ ೨.೧೧.೪ ಬಸವಣ್ಣನಿಗೆ ಶರಣನೊಬ್ಬ ಕಲ್ಯಾಣದ ಸುದ್ದಿಯನ್ನು ತಿಳಿಸುತ್ತಿರುವುದು




ಚಿತ್ರ ೨.೧೧.೫ ಬಸವಣ್ಣ ಸಂಗಮನಾಥನಲ್ಲಿ ಐಕ್ಯ



ಚಿತ್ರ ೨.೧೧.೬ ಸಂಗಮನಾಥನಲ್ಲಿ ಐಕ್ಯ



ಚಿತ್ರ ೨.೧೧.೭ ಸಂಗಮನಾಥನಲ್ಲಿ ಐಕ್ಯ



ಚಿತ್ರ ೨.೧೧.೮ ಸಂಗಮನಾಥನಲ್ಲಿ ಐಕ್ಯ

ಅಧ್ಯಾಯ : ಮೂರು

ಬಸವಣ್ಣನವರ ವಚನಗಳ ಆಧಾರಿತ ವರ್ಣಚಿತ್ರಗಳು

೧೨ನೆಯ ಶತಮಾನದ ಸಹಜ ಬದುಕಿನಲ್ಲೇ ಮುಂದಿನ ಶತಮಾನಗಳ ಪ್ರಸ್ತುತ ಜಗತ್ತಿಗೆ ಹಾಸುಹೊಕ್ಕಾಗಿ ದೀಪವಾಗುವ ಜೀವನದ ತತ್ತ್ವವನ್ನು ಸರಳ ಆಡುಮಾತಿನ ವಚನವನ್ನು ಮುತ್ತಾಗಿ ಜೋಡಿಸಿರುವ ಬಸವಣ್ಣನವರ ವ್ಯಕ್ತಿತ್ವವನ್ನು ಅವರ ವಚನಗಳ ಮೂಲಕ ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಸಾಹಿತ್ಯಾಭ್ಯಾಸಿಗಳು ಮಾಡುತ್ತಾರೆ. ಆ ವಚನಗಳ ಸಾಲುಗಳ ವಾಚ್ಯಾರ್ಥ ಮತ್ತು ವ್ಯಂಗ್ಯಾರ್ಥಗಳನ್ನು ಗ್ರಹಿಸಿ ವರ್ಣಚಿತ್ರಗಳ ಮೂಲಕ ಬಸವಣ್ಣನ ಜೀವನವ್ಯಕ್ತಿತ್ವವನ್ನು ಕಟ್ಟಿಕೊಡುವ ಪ್ರಯತ್ನವನ್ನು ದೃಶ್ಯಕಲಾವಿದರು ಇಲ್ಲಿ ಮಾಡಿದ್ದಾರೆ. ಸಾಹಿತ್ಯವಿಮರ್ಶಕರು ಅರ್ಥ ಮಾಡಿಕೊಳ್ಳಲಾಗದ ಸತ್ಯ ಇಲ್ಲವೆ ವಾಸ್ತವಾಂಶಗಳನ್ನು ಕಲಾವಿದರು ತಮ್ಮ ಕಲಾಭಿವ್ಯಕ್ತಿಯ ಮೂಲಕ ತಮ್ಮದೇ ನೆಲೆಗಳಲ್ಲಿ ಅರ್ಥೈಸುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಭಾಷೆ ತಾನು ಅರ್ಥವನ್ನು ಹೇಳುವ ಸೋತ ಸಮಯದಲ್ಲಿ ವರ್ಣಚಿತ್ರಗಳು ಅದರ ಅರ್ಥವನ್ನು ಮುಂದುವರೆಸುತ್ತವೆ. ಹೀಗಾಗಿ ಕಲಾವಿದರು ಬಸವಣ್ಣನ ವಚನಗಳ ಆಶಯವನ್ನು ಗ್ರಹಿಸಿ ತಮ್ಮ ಅಭಿವ್ಯಕ್ತಿಗಳನ್ನು ವರ್ಣಚಿತ್ರಗಳ ಮೂಲಕ ರೂಪಿಸಿದ್ದಾರೆ. ಅಂಥವುಗಳಲ್ಲಿ ಮುಖ್ಯವಾದ ಕೆಲವು ವರ್ಣಚಿತ್ರಗಳ ಅಧ್ಯಯನಕ್ಕೆ ಪೂರಕವಾದ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ.

ಬಸವಣ್ಣನವರ ವಚನಗಳನ್ನು ಆಧರಿಸಿ ಹಲವು ಸಂದರ್ಭಗಳಲ್ಲಿ ನಮ್ಮ ನಡುವಿನ ಕಲಾವಿದರಲ್ಲಿ ಕೆಲವರು **ನೈಜಶೈಲಿ**ಯಲ್ಲಿ ಕಲಾಕೃತಿಗಳನ್ನು ರಚಿಸಿದರೆ, ಇನ್ನೂ ಕೆಲ ಕಲಾವಿದರು **ಆಧುನಿಕ ಶೈಲಿ**ಯಲ್ಲಿ ಬಸವಣ್ಣನವರ ವಚನಗಳಿಗೆ **ದೃಶ್ಯಾತ್ಮಕ ಪ್ರತಿಕ್ರಿಯೆ**ಯನ್ನು ನೀಡಿದ್ದಾರೆ. ಅಂತಹ ಕಲಾಕೃತಿಗಳ ಅಧ್ಯಯನದ ವಿಶ್ಲೇಷಣೆ ಇಲ್ಲಿದೆ.

೩.೧. ವಚನದಲ್ಲಿ ನಾಮಾಮೃತ ತುಂಬಿ... – ೧

ವಚನದಲ್ಲಿ ನಾಮಾಮೃತ ತುಂಬಿ

ನಯನದಲ್ಲಿ ನಿಮ್ಮ ಮೂರುತಿ ತುಂಬಿ

ಮನದಲ್ಲಿ ನಿಮ್ಮ ನೆನಹು ತುಂಬಿ ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ

ಕೂಡಲಸಂಗಮದೇವಾ ನಿಮ್ಮ ಚರಣಕಮಲದೊಳಗಾನು ತುಂಬಿ[೧]

ವಚನದ ಸಾರಾಂಶ : ನಿಜ ಭಕ್ತನ ಇಂದ್ರಿಯಗಳಲ್ಲೆಲ್ಲಾ ಪರಮಾತ್ಮನೇ ಆವರಿಸಿರುವನು. ಪರಮಾತ್ಮನಿಲ್ಲದ ದೇಹ ವ್ಯರ್ಥವಾದುದು. ಮಾತಾಡಿದರೆ ಆ ಮಾತೆಲ್ಲವೂ ಶಿವನ ನಾಮವೇ ಆಗಬೇಕು. ನಯನದಲ್ಲೆಲ್ಲ ಶಿವನ ಮೂರುತಿ(ಪ್ರತಿಮೆ)ಯೇ ತುಂಬಬೇಕು. ಮನದಲ್ಲೇ ಶಿವನ ನೆನಪನ್ನೇ ತುಂಬಿರಬೇಕು. ಕಿವಿಯಲ್ಲಿ ಶಿವನ ಕೀರುತಿ(ಕೀರ್ತಿ)ಯೇ ತುಂಬಬೇಕು. ಶಿವನಾಮ, ಶಿವಧ್ಯಾನ, ಶಿವಾರಾಧನೆ ಹೊರತು ಅನ್ಯ ದೈವಂಗಳ ಸುಳಿವು ಕೂಡಾ ಬೇಡ. ಶಿವನ ಪಾದಕಮಲಗಳಲ್ಲಿ ಸಂತಸಪಡುವ ಭ್ರಮರದಂತೆ ನಿನ್ನ ದಾಸಾನುದಾಸನಾಗಿ ನಾನು ಬದುಕುವೆನೆಂದು ಆ ಕೂಡಲಸಂಗಮನಲ್ಲಿ ಬೇಡಿಕೊಳ್ಳುವರು. ಬಸವಣ್ಣ ತನ್ನ ಆರಾಧ್ಯ ದೈವವಾದ ಕೂಡಲ ಸಂಗಮನಾಥನಲ್ಲಿ ಸರ್ವಸಮರ್ಪಣಾ ಭಾವವನ್ನು ಮೆರೆದಿರುವ ಭಾವವನ್ನು ಪ್ರಸ್ತುತ ಚಿತ್ರದಲ್ಲಿ ಕಲಾವಿದರು ಒಡಮೂಡಿಸಿದ್ದಾರೆ.

"ಅವಕಾಶ ವಿಭಜನೆಯಿಂದ ಪ್ರಾರಂಭವಾಗಿ ಆಕೃತಿಗಳ ಮೈವಳಿಕೆಯ ಅಧ್ಯಯನದವರೆಗೆ ಸಂಯೋಜನೆಯ ಎಲ್ಲ ಮೂಲತತ್ವಗಳು ಇದರಲ್ಲಿ, ಈ ಪ್ರಕಾರದಲ್ಲಿ ಒಳಗೊಂಡಿರುತ್ತದೆ. ಚಿತ್ರಿಸುವ ಮೊದಲು ಆಕೃತಿಗಳನ್ನು ಜೋಡಿಸುವ ಕ್ರಮ ಮತ್ತು ಚಿತ್ರರಚಿಸಲು ಕೂಡವ ಕೋನ ಇವೆರಡನ್ನೂ ಅವಲಂಬಿಸಿ ಕಲಾವಿದನಲ್ಲಿರುವ ಸಂಯೋಜನೆಯ ಪರಿಪಕ್ವತೆ ಗುರುತಿಸಲಾಗುತ್ತದೆ."[೨] ಕಲಾವಿದ ಡಿ.ಎ. ಉಪಾಧ್ಯ ಅವರು ಈ ಕಲಾಕೃತಿಯನ್ನು ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ.

ಚಿತ್ರದ ವಿಶ್ಲೇಷಣೆ : ಮೂಲ ಮತ್ತು ಮಿಶ್ರವರ್ಣಗಳ ಬಳಕೆಯನ್ನು ಈ ಕಲಾಕೃತಿಯಲ್ಲಿ ಮಾಡಲಾಗಿದೆ. ಪಾರಂಪರಿಕ ಕಲ್ಪನೆಯ ಶಿವಲಿಂಗ ಮೂಲದಲ್ಲಿದ್ದು ಅದರಲ್ಲಿ ಮಾನವನ ಪಂಚೇಂದ್ರಿಯಗಳನ್ನು ಸಂಕೇತಿಸುವ ಕಣ್ಣು, ಕಿವಿ, ಮೂಗುಗಳನ್ನು ಅಳವಡಿಸಲಾಗಿದೆ. ಶಿವಲಿಂಗದ ನೆತ್ತಿಯ ಮೇಲೆ ಕಡುಹಸಿರು ಬಣ್ಣದ ಬಳಕೆಯಿದೆ. ಚಿತ್ರದ ಎದುರಿಗೆ ಶಿವಲಿಂಗದ ಮೇಲ್ಭಾಗದಲ್ಲಿ ಎಲೆಯಾಕಾರದ ಎರಡು ಕಣ್ಣುಗಳು ಶಿವಲಿಂಗದಾಚೆಗೆ ಹೊರಚಾಚಿದಂತೆ ಚಿತ್ರಿತವಾಗಿವೆ. ಎಡಭಾಗದ ಚೂಪಾದ ಎಲೆಯಾಕಾರದ ಕಣ್ಣಿನಲ್ಲಿ ಹಳದಿ ಮತ್ತು ಕೇಸರಿಬಣ್ಣದ ಓಂ ಎಂಬ ಅಕ್ಷರವನ್ನು ರಚಿಸಲಾಗಿದೆ. ಬಲಭಾಗದ ಹಳದಿ ಬಣ್ಣದ ಅರ್ಧಚಂದ್ರನನ್ನು ಹೋಲುವ ಅರ್ಧವೃತ್ತಾಕಾರದಲ್ಲಿ ತೆಳುವಾದ ಆಕಾರದ ಸರ್ಪವೊಂದು ಕಣ್ಣುಗುಡ್ಡೆಯ ಮೇಲೆ ಇರುವಂತೆ ಕಲಾವಿದ ಚಿತ್ರಿಸಿದ್ದಾನೆ. ಕಣ್ಣುಗಳಲ್ಲಿ ಕೂಡಲಸಂಗಮನ ಮೂರ್ತಿಯು ಕಣ್ತುಂಬಿ ಬರುವಂತೆ ಕಲಾವಿದನ ಕಲ್ಪನೆಯಾಗಿದೆ. ಕಣ್ಣುಗಳ ಕೆಳಗೆ ಕಿವಿಯಲ್ಲಿ ನೀಲಿಮಿಶ್ರಿತ ಬಿಳಿಬಣ್ಣದ ಒಂದು ಶಂಖವಿದೆ. ಕಿವಿಯ ಆವರಣವು ಹಳದಿಬಣ್ಣದಿಂದ ಕೂಡಿದ್ದು ಅದರ ಪಕ್ಕದಲ್ಲಿ ಕಡುಗೆಂಪು ಬಣ್ಣದ ಡಮರುಗವನ್ನೊಳಗೊಂಡ ತ್ರಿಶೂಲವು ನಾದಕ್ಕೆ ಸಂಕೇತವಾಗಿ ಬಂದಿದೆ. ಶಿವಲಿಂಗದ ಪಾಣಿಪೀಠದ ಕೆಳಭಾಗದಲ್ಲಿ ಬಹುಶಃ ಫಲವಂತಿಕೆಗೆ ಸಂಕೇತವಾದ, ಕತ್ತರಿಸಿದ ಒಂದು ಸೇಬುಹಣ್ಣಿನಂತಹ ವಿನ್ಯಾಸ

೦೧. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೪೯೨), ಪು-೧೧೮

೦೨. ಬಸವರಾಜ ಕಿಶೋರ : ಕರ್ನಾಟಕದಲ್ಲಿ ಸಂಯೋಜನಾ ಚಿತ್ರಕಲೆ – ಉತ್ತರಕರ್ನಾಟಕವನ್ನು ಅನುಲಕ್ಷಿಸಿ (ಅ.ಪ್ರ.ಎಂ.ಫಿಲ್.ಸಂ.ಪ್ರ), ಪು-೩೩

ಹಳದಿಬಣ್ಣದ ಜ್ಯೋತಿಯ ಸುತ್ತಲೂ ಕೆಂಪುಬಣ್ಣದ ಲೇಪನವಿದೆ. ಭಿತ್ತಿಯಲ್ಲಿ ತೆಳುಹಳದಿ, ಕಡುಗೆಂಪು, ಕಡುಗಪ್ಪು ಬಣ್ಣಗಳು ಚೆಲ್ಲಾಪಿಲ್ಲಿಯಾದಂತೆ ಅಂದರೆ ಆಕಾಶಸೂಚಿಯಾಗಿಯೂ ಬಳಕೆಯಾಗಿವೆ. ಪ್ರಾಯಃ ಮನಸ್ಸಿನ ಚಂಚಲತೆಯನ್ನು ಕಲಾವಿದ ಇಲ್ಲಿ ಸಾಂಕೇತಿಕವಾಗಿ ಸೂಚಿಸಿರಬಹುದೆನ್ನಿಸುತ್ತದೆ.

ಬಸವಣ್ಣನ ತನು, ಮನದಲ್ಲಿ ಕೂಡಲ ಸಂಗಮದೇವನೇ ತುಂಬಿಕೊಂಡಿರುವುದನ್ನು ಪ್ರಕಟಿಸಲು ಕಲಾವಿದರು ಈ ಕಲಾಕೃತಿಯನ್ನು ಸಾರ್ಥಕಗೊಳಿಸಲು ಚಿತ್ರಕ್ಕೆ ಮೈವಳಿಕೆಯನ್ನು ಸೃಷ್ಟಿಸಿದ್ದಾರೆ. ಬಸವಣ್ಣನವರ ವಚನಗಳಿಂದ ಪ್ರೇರಣೆಗೊಂಡು, ಸ್ಥಳಾವಕಾಶದ ಮಧ್ಯಭಾಗಕ್ಕೆ ವಚನದ ಶಬ್ದಗಳಿಗೆ ಹೊಂದುವಂತಹ ಸೂಚ್ಯವಾದ ವಿನ್ಯಾಸಗಳನ್ನು ಆಧುನಿಕ ಸಂವೇದನೆಗೆ ಪೂರಕವಾಗಿ ಸಂಯೋಜಿಸಿದ್ದು, ಆಧುನಿಕವಾಗಿ ಹಳಗನ್ನಡದ ವಚನಸಾಹಿತ್ಯವನ್ನು ದೃಶ್ಯಾತ್ಮಕವಾಗಿ ಹೇಗೆ ಗ್ರಹಿಸಬೇಕೆಂಬ ಪ್ರಯೋಗಕ್ಕೆ ಈ ಕಲಾಕೃತಿ ಒಂದು ಮಾದರಿ.

ವಚನದಲ್ಲಿ ನಾಮಾಮೃತ ತುಂಬಿ... – ೨

"ಹೇಳುವ ವಿಷಯವೇ ಕಲೆಯ ಜೀವಾಳ. ಅದು ಎಂಥದನ್ನೂ ಹೇಳಬಹುದು. ಈ ವಿಷಯ ಹೇಳಬೇಕು, ಇದನ್ನು ಹೇಳಬಾರದು ಎಂಬ ನಿಯಮವಿಲ್ಲ. ಒಂದೊಂದು ಜೀವ ತನ್ನ ಅನುಭವದಲ್ಲಿ ಕಂಡದ್ದನ್ನು ಹೇಳುತ್ತದೆ. ಹೇಳಬೇಕೆನಿಸಿದ್ದನ್ನು ಹೇಳುತ್ತದೆ. ನಮಗೆ ಒಪ್ಪಿಗೆಯಿದ್ದರೆ, ಕೇಳುತ್ತೇವೆ; ಇಲ್ಲವಾದರೆ ಬಿಡುತ್ತೇವೆ. ಆದರೆ ಹೇಳುವಾತ ತನ್ನ ಅನುಭವ ಹೇಳಬೇಕಾದ್ದು ತೀರ ಮುಖ್ಯ".[೩] ಈ ಮಾತು ಕಲಾವಿದ ಎ. ಎಸ್. ಪಾಟೀಲರಿಗೆ ಅನ್ವಯಿಸುತ್ತದೆ. ಇರುವ ಸ್ಥಳಾವಕಾಶದಲ್ಲಿ ಅತ್ಯಂತ ಕಲಾತ್ಮಕವಾಗಿ ಎಲ್ಲೂ ಖಾಲಿ ಸ್ಥಳ ಬಿಡದೇ ಆಕೃತಿಗಳನ್ನು ಸಂಯೋಜಿಸಿ ಸರಳವಾಗಿ ವಚನದ ವಿಷಯವನ್ನು ತಮ್ಮ ಈ ಕಲಾಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಕಲಬುರ್ಗಿಯ ಡಾ. ಎ. ಎಸ್. ಪಾಟೀಲರವರು A4 (೮.೧/೨" x ೧೧.೧/೨") ಅಳತೆಯ ಕಾಗದದಲ್ಲಿ ಈ ಚಿತ್ರವನ್ನು ರಚಿಸಿದ್ದಾರೆ. ಪ್ರಸ್ತುತ ಈ ಕೃತಿಯು ಕಲಾವಿದರ ಸಂಗ್ರಹದಲ್ಲಿದೆ.

ಚಿತ್ರದ ವಿಶ್ಲೇಷಣೆ : ಈ ಚಿತ್ರ ನವ್ಯಕಲೆಗೆ ಸೇರಿದ್ದಾಗಿದೆ. ಆದರೂ ಕಲಾವಿದನ ಈ ನವ್ಯ ಕಲ್ಪನೆ ವಚನದ ಹಿನ್ನೆಲೆಯನ್ನು ಸಾರುವುದರಲ್ಲಿ ಸ್ಪಷ್ಟವಾಗಿದೆ. ಮಾನವನ ಅಂಗಗಳಾದ ಕಿವಿ, ಕಣ್ಣು, ತುಟಿ, ಪಾದಗಳನ್ನು ಇಲ್ಲಿ ಚಿತ್ರಿಸಿದ್ದು, ವಿಶೇಷವೆಂದರೆ ಕಿವಿಯ ಹತ್ತಿರ ಓಂ ಅಕ್ಷರವನ್ನು, ಕಣ್ಣು ಗುಡ್ಡೆಯೊಳಗೆ ಲಿಂಗದ ಬಿಂಬವನ್ನು, ಮುಗುಳ್ನಗುತ್ತಿರುವ ತುಟಿ, ಪಾದಗಳ ಕೆಳಗೆ ಅರಳಿದ ಕಮಲವನ್ನು ಸಂಯೋಜಿಸಲಾಗಿದೆ. ಈ ಕಲಾಕೃತಿಯ ಎಡ ಭಾಗದಲ್ಲಿ ಬಸವಣ್ಣನನ್ನು ಚಿತ್ರಿಸಿದ್ದು, ಶಾಂತ ಭಾವ, ಕೊರಳಲ್ಲಿ ಲಿಂಗ ಮತ್ತು ರುದ್ರಾಕ್ಷಿ ಮಾಲೆ, ಶರಣರ ಉಡುಪನ್ನು ಧರಿಸಿದ್ದು, ಬಸವಣ್ಣನ ಹಿಂಭಾಗದಲ್ಲಿ ಪ್ರಭಾವಳಿ, ತಲೆಯ ಎಡಭಾಗದ ಮೇಲ್ಭಾಗದಲ್ಲಿ ಲಿಂಗವನ್ನು ಚಿತ್ರಿಸಲಾಗಿದೆ. ಒಟ್ಟಾರೆ ಚಿತ್ರದಲ್ಲಿ ಯಥಾದರ್ಶನಕ್ಕೆ ಪ್ರಾಮುಖ್ಯತೆ ನೀಡಿರುವುದನ್ನು ಕಾಣಬಹುದು. ಆಕೃತಿಗಳ ವಿನ್ಯಾಸ, ಪ್ರಮಾಣಗಳು ಅಚ್ಚುಕಟ್ಟಾಗಿದ್ದು, ನಾರ್ವೆ ಪೇಪರ್‌ನ ಮೇಲೆ ಪೆನ್ಸಿಲ್‌ನಿಂದ ಈ ಚಿತ್ರವನ್ನು ರಚಿಸಲಾಗಿದೆ.

೦೩. ಬಿ. ಮಾಲಿನಿ ಮಲ್ಯ (ಸಂ.) : ಶಿವರಾಮ ಕಾರಂತರ ಲೇಖನಗಳು –ಸಂಪು–೩, ಕಲಾಜಗತ್ತು, ಪು–೨೧

೩.೨. ಹಾಲೆಂಜಲು ಪೆಯ್ಯನ ಉದಕವೆಂಜಲು...

ಹಾಲೆಂಜಲು ಪೆಯ್ಯನ ಉದಕವೆಂಜಲು ಮತ್ಸ್ಯದ

ಪುಷ್ಪವೆಂಜಲು ತುಂಬಿಯ ಎಂತು ಪೂಜಿಸುವೆನಯ್ಯಾ

ಶಿವ ಶಿವಾ ಎಂತು ಪೂಜಿಸುವೆ?

ಈ ಎಂಜಲವನತಿಗಳೆವಡೆ ಎನ್ನವಲ್ಲ

ಬಂದುದ ಕೈಕೋ ಕೂಡಲಸಂಗಮದೇವಾ[೧೪]

ವಚನದ ಸಾರಾಂಶ : ಸಮಾಜದಲ್ಲಿ ಬದುಕುವ ಜನರ ಮನೋಭಾವನೆಯನ್ನು ಇಲ್ಲಿ ಬಸವಣ್ಣನವರು ಅಭಿವ್ಯಕ್ತಿಸಿದ್ದಾರೆ. ಶಿವನ ಪೂಜೆಗೆ ಎಂಜಲಾದುದು ಯೋಗ್ಯವಲ್ಲವೆಂಬ ನಂಬಿಕೆ ಇಂದಿಗೂ ಜನಮನದಲ್ಲಿದೆ. ಆದರೆ ಹಸುವಿನ ಕಾರ್ಯ ಹಾಲನ್ನು ಕೊಡುವುದಾದರೂ ಅದು ತೊರೆಯನ್ನು ಬಿಡುವುದು ತನ್ನ ಕರು ಚೀಪಿದಾಗಲೇ. ಹಾಗಾಗಿ ಎಂಜಲಾಗದೇ ಹಾಲನ್ನು ಹಿಂಡಲಾಗದು. ನೀರು ಪವಿತ್ರವಾದುದು. ನೀರಲ್ಲಿ ಮುಳುಗಿ ನಮ್ಮ ಪಾಪವನ್ನು ಕಳೆದುಕೊಳ್ಳುವ ನಾವು ಮೂಢರು. ಏಕೆಂದರೆ ನಮಗಿಂತ ಮುಂಚೆ ಅದೆಷ್ಟು ಜನ ತಮ್ಮ ಪಾಪ ಕಳೆದುಕೊಂಡಿರುವರೋ, ಅದೆಷ್ಟು ಜಲಚರ ಜೀವಿಗಳು ಅಲ್ಲಿರುವವೋ? ಹೀಗಾಗಿ ಉದಕವೂ ಎಂಜಲೇ ಆಗಿರುವುದು. ಶಿವನ ಪೂಜೆಗೆ ಬಳಸುವ ಪುಷ್ಪವೂ ಭ್ರಮರಗಳ ಚುಂಬನದಿಂದ ಎಂಜಲಾಗಿರುವುದು. ಈ ಎಂಜಲನ್ನು ಯಾರಿಂದಲೂ ಬೇರ್ಪಡಿಸಲು ಸಾಧ್ಯವಿಲ್ಲ. ನನ್ನಿಂದಲೂ ಸಾಧ್ಯವಿಲ್ಲ. ಹಾಗಾಗಿ ಅದು ದೊರೆಯುವ ರೀತಿಯಲ್ಲಿಯೇ ನಿನಗೆ ಅರ್ಪಿಸುವೆನು ಎಂದು ಬಸವಣ್ಣ ಕೂಡಲ ಸಂಗಮನಲ್ಲಿ ಕೋರುತ್ತಾನೆ.

ಚಿತ್ರದ ವಿಶ್ಲೇಷಣೆ : ಕಲಾವಿದ ಡಿ.ಎ. ಉಪಾಧ್ಯ ಅವರು ಈ ಕಲಾಕೃತಿಯನ್ನು ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಮಿತವಾದ ಮತ್ತು ಮೃದುವರ್ಣಗಳ ಬಳಕೆ ಇಲ್ಲಿ ಪ್ರಧಾನವಾಗಿದೆ. ಬಸವಣ್ಣ ಎಂಜಲು ಎನ್ನುವ ಪರಿಭಾಷೆಗೆ ವಿಭಿನ್ನ ಆಯಾಮಗಳಲ್ಲಿ ಮಾಡಿರುವ ವ್ಯಾಖ್ಯಾನವನ್ನು ಸಮರ್ಥವಾಗಿ ಕಲಾವಿದ ಸಾಂಕೇತಿಕವಾಗಿ ಇಲ್ಲಿ ನೋಡುಗರ ಮುಂದಿರಿಸಿದ್ದಾನೆ. ಲಘು ಕಂದುವರ್ಣಮಿಶ್ರಿತ ಬಿಳಿಬಣ್ಣದಿಂದ ಕೂಡಿದ ಹಸುವಿನ ಕೆಚ್ಚಲು ಮತ್ತು ಒಂದು ಕಾಲಿನ ತೊಡೆಯ ಭಾಗ ಮಾತ್ರ ಇಲ್ಲಿ ಚಿತ್ರಿತವಾಗಿದೆ. ಅಮಾಯಕ ಭಾವನೆಯನ್ನು ಸೂಚಿಸುವ ಕಣ್ಣುಗಳಿಂದ ಕೂಡಿರುವ ಆಕಳ ಕರುವು ತನ್ನ ತಾಯಿಯ ಮೊಲೆಹಾಲನ್ನು ಕುಡಿಯಲು ತನ್ನ ನಾಲಿಗೆಯನ್ನು ಮುಂಚಾಚಿರುವ ದೃಶ್ಯವಿದೆ. ಚಿತ್ರದ ಮಧ್ಯಭಾಗದಲ್ಲಿ ತೆಳುಬೂದುಬಣ್ಣದಲ್ಲಿ ರಚಿತವಾದ ಶಿವಲಿಂಗವಿದೆ. ಪಾಣಿಪೀಠದ ಕೆಳಭಾಗದಲ್ಲಿ ಹಳದಿಬಣ್ಣದ ಎರಡು ಹೂವುಗಳ ಮಧ್ಯೆ ದುಂಬಿಯೊಂದು ಮಕರಂದವನ್ನು ಹೀರುತ್ತಿರುವುದನ್ನು ನೋಡುತ್ತೇವೆ. ದುಂಬಿಯ ಪಕ್ಕದಲ್ಲಿ ಬಿಳಿಯ ಬಣ್ಣದ ಮೊಲವನ್ನು ಕಲಾವಿದ ಚಿತ್ರಿಸಿದ್ದಾನೆ. ಅದರ ಕೆಳಭಾಗದಲ್ಲಿ ಹರಿಯುತ್ತಿರುವ ನೀರು ಮತ್ತು ಅದರಲ್ಲಿ ತೆಳು ಗುಲಾಬಿಬಣ್ಣದ ಮೀನು ತನ್ನ ಬಾಯಿ ತೆರೆದು ಈಜುತ್ತಿರುವಂತೆ ರಚಿಸಿರುವುದು ಗಮನಸೆಳೆಯುತ್ತದೆ. ಅಲ್ಲದೆ ಹರಿಯುತ್ತಿರುವ ನೀರನ್ನು ಚಿತ್ರಿಸಲು ಪಾರದರ್ಶಕ ಬಣ್ಣಗಳನ್ನು ಬಳಸಿ

೧೪. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೮೮೬), ಪು–೨೩೧

ಕಲಾವಿದ ತನ್ನ ಪ್ರತಿಭೆಯನ್ನು ಮೆರೆದಿದ್ದಾನೆ. ಆಶಯದ ದೃಷ್ಟಿಯಿಂದ ಪ್ರಸ್ತುತ ಕಲಾಕೃತಿಯಲ್ಲಿ ಆಕಳು, ದುಂಬಿ ಮುಂತಾದ ಜೀವಿಗಳನ್ನು ನೈಜವಾಗಿ ಚಿತ್ರಿಸಿ ಇಡೀ ವಚನದ ಸಾರಕ್ಕೆ ಪೂರಕವಾಗಿ ಆಧುನಿಕ ನೆಲೆಯ ಸಂಯೋಜನೆಯನ್ನು ಇಲ್ಲಿ ದುಡಿಸಿಕೊಳ್ಳಲಾಗಿದೆ. ಪಾರದರ್ಶಕ ತಂತ್ರವನ್ನು ಸಮರ್ಪಕವಾಗಿ ಬಳಸಿಕೊಂಡು ಆಕೃತಿಗಳನ್ನು ಕ್ರಮವಾಗಿ ಕೆಳಗಿನಿಂದ ಮೇಲ್ಭಾಗಕ್ಕೆ ಸಂಯೋಜಿಸಿಲಾಗಿದೆ. ತೀಕ್ಷ್ಣವಾಗಿ ಕಲಾಕೃತಿಯ ಒಳಹೊಕ್ಕು ನೋಡಿದರೆ ಉಲ್ಲೇಖಿತ ವಚನದ ದೃಶ್ಯಾತ್ಮಕ ಪ್ರತಿಕ್ರಿಯೆಯಾಗಿ ಈ ಕೃತಿ ದಕ್ಕುತ್ತದೆ.

೩.೩. ಭಕ್ತಿಯೆಂಬ ಪೃಥ್ವಿಯ ಮೇಲೆ... – ೧

ಭಕ್ತಿಯೆಂಬ ಪೃಥ್ವಿಯ ಮೇಲೆ,
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ[೫]

ವಚನದ ಸಾರಾಂಶ : ಪೃಥ್ವಿಯನ್ನು ಭಕ್ತಿಗೂ, ಬೀಜವನ್ನು ಗುರುವಿಗೂ, ಎಲೆಯನ್ನು ಲಿಂಗಕ್ಕೂ, ಹೂವನ್ನು ವಿಚಾರಕ್ಕೂ, ಕಾಯಿಯನ್ನು ಆಚಾರಕ್ಕೂ, ಹಣ್ಣನ್ನು ನಿಷ್ಪತ್ತಿಗೂ ಹೋಲಿಕೆಯನ್ನು ನೀಡುತ್ತಲೇ, ಮನುಷ್ಯ ಸಾಧಿಸಬೇಕಾದ ಪರಿಪಕ್ವ ಬದುಕಿನ ನಿದರ್ಶನ ನೀಡಿದ್ದಾರೆ. ಇಡೀ ಪೃಥ್ವಿಯನ್ನು ಭಕ್ತಿಮಯವಾಗಿಸಿ, ಅರಿವಿನ ಸಾಕಾರರೂಪವಾದ ಗುರುವೆಂಬ ಬೀಜ ಅಂಕುರಿಸಿದರೆ, ಉದ್ಭವಿಸುವದು ಲಿಂಗವೆಂಬ ಎಲೆ. ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಗಿ, ಆಚಾರವೆಂಬ ಕಾಯಾಗಿ, ನಿಷ್ಪತ್ತಿಯೆಂಬ ಹಣ್ಣಾಗಿ ಪರಿಪೂರ್ಣಗೊಂಡಾಗ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡು ಉದ್ಧರಿಸುವನು. ಇಲ್ಲಿ ಭಕ್ತಿ, ಗುರು, ಲಿಂಗ, ವಿಚಾರ, ಆಚಾರ, ನಿಷ್ಪತ್ತಿಯೆಂಬ ಮೌಲ್ಯಗಳ ಕುರಿತ ಚಿಂತನೆಯಿದೆ.

"ಜೀವನವು ಸಾವಿರಾರು ಅನುಭವಗಳಿಂದ ತುಂಬಿರುವಲ್ಲಿ ಅವುಗಳಲ್ಲಿ ಹಿಂದಾದುದನ್ನು, ದಾರುಣವಾದುವನ್ನು, ಸತ್ಯವಾದುದನ್ನು, ಸುಂದರವಾದುದನ್ನು ಅರಸಿ, ತನ್ನ ಸ್ಮೃತಿಯಲ್ಲಿರಿಸಿಕೊಳ್ಳುವ ಶಕ್ತಿಬೇಕು; ಸಮಯ ಒದಗಿದಾಗ, ಬಯಸಿದ ಅನುಭವ ತನ್ನ ಸಂಪೂರ್ಣ ಅಲಂಕಾರದೊಡನೆ, ಸಶರೀರವಾಗಿ ಕಲಾಕೃತಿಯಲ್ಲಿ ಜೀವ ತಾಳಬೇಕು. ಹೀಗೆ ಅನುಭವಕ್ಕೆ ಜೀವ ಕೊಡಬಲ್ಲ ವ್ಯಕ್ತಿ ಮಾತ್ರ ಕಲಾವಿದನಾಗಬಲ್ಲ, ಉಳಿದವರು ಆಗಲಾರರು"[೬] ಎಂದು ಹೇಳುವ ಡಾ. ಶಿವರಾಮ ಕಾರಂತರ ಮಾತು ಅರ್ಥಪೂರ್ಣವಾದುದು.

೦೫. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೫೨೬), ಪು–೧೨೭

೦೬. ಬಿ. ಮಾಲಿನಿ ಮಲ್ಯ (ಸಂ.) : ಶಿವರಾಮ ಕಾರಂತರ ಲೇಖನಗಳು –ಸಂಪು–೩, ಕಲಾಜಗತ್ತು, ಪು–೨೧

ಚಿತ್ರದ ವಿಶ್ಲೇಷಣೆ : ಕಲಾವಿದ ಕಿಶೋರ ಕುಮಾರ್ ಅವರು ಈ ಕಲಾಕೃತಿಯನ್ನು ರಚಿಸಿದ್ದಾರೆ. ಈ ಚಿತ್ರವು ತೈಲವರ್ಣಸಂಪ್ರದಾಯಕ್ಕೆ ಸೇರಿದೆ. ಬಸವಣ್ಣನವರ ಚಿಂತನೆಯನ್ನು ಇಲ್ಲಿ ಸಾಕಾರಗೊಳಿಸಲಾಗಿದೆ. ಗಾಢವಾದ ಕಂದುಬಣ್ಣದ ಬಳಕೆ ಪ್ರಧಾನವಾಗಿದೆ. ಕಪ್ಪು ಮತ್ತು ಕೆಂಪು ವರ್ಣಗಳ ಸಂಯೋಜನೆಯು ಎದ್ದು ತೋರುತ್ತದೆ. ಭಕ್ತಿ–ಪೃಥ್ವಿ, ಗುರು–ಬೀಜ, ಲಿಂಗ–ಎಲೆ, ವಿಚಾರ–ಹೂವು, ಆಚಾರ–ಕಾಯಿ, ನಿಷ್ಪತ್ತಿ–ಹಣ್ಣು ಇವೇ ಮುಂತಾದ ಆಧ್ಯಾತ್ಮಿಕ ಪಾರಿಭಾಷಿಕ ಪದಗಳು ಇಲ್ಲಿ ವಿನ್ಯಾಸರೂಪದಲ್ಲಿ ಮೂಡಿಬಂದಿವೆ. ಪದ್ಮಾಸನವನ್ನು ಹಾಕಿ ಅನಂತ ಸುಖವನ್ನು ಸೂರೆಮಾಡುವ ಭಾವವನ್ನು ಇಲ್ಲಿ ಕಲಾವಿದ ಬಸವಣ್ಣನವರ ಈ ಕಲಾಕೃತಿಯ ಮೂಲಕ ಪ್ರಕಟಿಸಿದ್ದಾನೆ. ಹಣೆಯಲ್ಲಿ ಅಷ್ಟೇನೂ ಎದ್ದು ತೋರದಂತಿರುವ ವಿಭೂತಿ, ಕೊರಳಿನಲ್ಲಿ ಕಂಡೂ ಕಾಣದಂತಿರುವ ಇಷ್ಟಲಿಂಗ, ಸುಂದರವಾದ ದುಂಡುಮುಖ, ಮಟ್ಟಸವಾದ, ಕಿರಿದಾಗಿರುವ ತಲೆಗೂದಲು, ಕೆಂಪು ಕಾವಿವಸ್ತ್ರವನ್ನು ಪಂಚೆಯಂತೆ ಧರಿಸಿದ, ತನ್ನೆರಡು ಕಣ್ಣುಗಳನ್ನು ಮುಚ್ಚಿ ಪ್ರಶಾಂತ ಮುಖಮುದ್ರೆಯನ್ನು ಹೊಂದಿರುವ ಈ ಚಿತ್ರ ನೋಡುಗರ ಮನಸೆಳೆಯುತ್ತದೆ. ತನ್ನೆರಡು ತೋಳುಗಳ ಕಂಕುಳುಗಳಲ್ಲಿ ನಾಲ್ಕು ಎಲೆಗಳು, ಎದೆಯ ಮೇಲೆ ಅಸ್ಪಷ್ಟವಾಗಿ ಕಾಣುವ ಹಣ್ಣು, ಅದರ ಪಕ್ಕದಲ್ಲಿ ಮತ್ತು ಕೆಳಗೆ ಎರಡು ಚಿಕ್ಕ ಚಿಕ್ಕ ಹೂವುಗಳು ಇಲ್ಲಿ ಮೂಡಿಬಂದಿವೆ. ಹಣೆ ಮತ್ತು ಕಣ್ಣುಗಳ ರೆಪ್ಪೆಗಳವರೆಗೆ ನೆರಳು ಬಿದ್ದಿರುವಂತೆ ವರ್ಣಸಂಯೋಜನೆ ಮಾಡಿದ್ದು, ಕೆನ್ನೆ ಮತ್ತು ಗದ್ದಗಳ ಪೂರ್ತಿಭಾಗವು ಪ್ರಕಾಶಮಾನವಾಗಿ ಕಾಣುವಂತೆ ಬಿಳಿ ಮತ್ತು ಕೆಂಪುವರ್ಣಗಳ ಮಿಶ್ರಣದ ಸಂಯೋಜನೆ ಮಾಡಲಾಗಿದೆ.

ಬಸವಣ್ಣನು ಕುಳಿತಿರುವ ಪೀಠವು ಕಮಾನಿನ ಮಾದರಿಯನ್ನು ಹೊಂದಿದ್ದು ಅಲ್ಲಿಯೂ ಗಾಢವಾದ ಕಂದು ಮತ್ತು ತಿಳಿಗೆಂಪು ಬಣ್ಣಗಳ ಬಳಕೆಯಿದೆ. ಬಸವಣ್ಣನ ಅಕ್ಕ–ಪಕ್ಕದಲ್ಲಿ ಲಘು ಕೆಂಪು ವರ್ಣಮಿಶ್ರಿತ ಹಳದಿ ಬಣ್ಣದ ಬಳಕೆಯಿದ್ದು ಬೆಂಕಿಯನ್ನು ಸೂಚಿಸುವಂತೆ ಕಲಾವಿದ ಚಿತ್ರಿಸಿದ್ದಾನೆ. ಪೃಥ್ವಿಯು ತನ್ನೊಡಲಲ್ಲಿ ಅಗ್ನಿಯನ್ನು ಸದಾ ಧರಿಸಿರುವುದರಿಂದ ಕಡುಗೆಂಪು ಮತ್ತು ಹಳದಿಬಣ್ಣಗಳನ್ನು ಬಳಸಿರುವುದು ಸರಿಯಾಗಿದೆ. ಆದರೆ, ಭಕ್ತಿಯೆಂಬ ಪೃಥ್ವಿ ಎಂದಿರುವಲ್ಲಿ ಭಕ್ತಿಯನ್ನು ಸೂಚಿಸಲು ತಂಪುವರ್ಣಗಳ ಬಳಕೆ ಇಲ್ಲಿ ಅಗತ್ಯವಾಗಿತ್ತು ಎನ್ನಿಸುತ್ತದೆ. ಹಣ್ಣು ತೊಟ್ಟು ಕಳಚಿ ಬೀಳುವುದನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಹೇಳಲು ಅವಕಾಶವಿದ್ದರೂ ಸೂಚ್ಯವಾಗಿಸುವುದು ಆಧುನಿಕ ಶೈಲಿಯ ಚಿತ್ರ ರಚನಾಪದ್ಧತಿ. ಇಡೀ ಕಲಾಕೃತಿ ಆಧುನಿಕ ಶೈಲಿಯಲ್ಲಿ ರಚಿತವಾಗಿದೆ. ಸ್ಥಳಾವಕಾಶದ ಮಧ್ಯಭಾಗಕ್ಕೆ ಸಂಯೋಜನೆಗೊಂಡಿರುವ ಬಸವಣ್ಣ ಧ್ಯಾನಸ್ಥ ಸ್ಥಿತಿಯಲ್ಲಿದ್ದಾನೆ. ಅವನ ಹಿನ್ನೆಲೆಯಲ್ಲಿ ಇಷ್ಟಲಿಂಗ ಸೂಚಿಯಾದ ಅರ್ಧ ವರ್ತುಲ ರಚನೆಯಾಗಿದೆ. ಕಡುವರ್ಣವನ್ನು ಭಕ್ತಿಯ ಸೂಚಕವಾಗಿ ದುಡಿಸಿಕೊಂಡಿರುವ ಕಲಾವಿದರು ದೇಹವನ್ನು ಭಕ್ತಿಗೆ ಹೋಲಿಸಿದ್ದಾರೆ. ಹಿನ್ನೆಲೆಯಲ್ಲಿ ಹಳದೀವರ್ಣದ ಮೇಲ್ಮೈಯಲ್ಲಿ ಬಿಳಿವರ್ಣದ ಕುಂಚದ ಬೀಸುಗಳು ಒರಟಾದ ಮೈವಳಿಕೆಯನ್ನು ಸೃಷ್ಟಿಸಿವೆ. ದೇಹವೇ ಪೃಥ್ವಿಯೆಂಬಂತೆ ಚಿತ್ರಿಸಿದ ಈ ಕಲಾಕೃತಿ ಆಧುನಿಕ ಸಂದರ್ಭದ ಅತ್ಯುನ್ನತ ಅಭಿವ್ಯಕ್ತಿಯಾಗಿದೆ.

ಭಕ್ತಿಯೆಂಬ ಪೃಥ್ವಿಯ ಮೇಲೆ... – ೨

"ಬಿಂದು ಶೂನ್ಯದ ಸಂಕೇತವಾಗುತ್ತದೆ. ಆದರೆ ಬಿಂದು ರೇಖೆಯಾಗಿ ಆಗುವಾಗ ಅದು ಅನಂತತೆಗೂ ಸಂಕೇತವಾಗುತ್ತದೆ. ರೇಖೆಯ ಗತಿ ಕಲಾವಿದನ ಸೃಜನಶೀಲತೆಯನ್ನು ಸರಿಸುವಾಗ ಅದರಲ್ಲಿ ವ್ಯಕ್ತವಾಗುವ

ಭಾವ ಸಂಚಾರವೂ ಅನಂತವೆನಿಸುತ್ತದೆ. ಹೃದಯವನ್ನು ತಟ್ಟುತ್ತದೆ. ಅಂತಹ ರೇಖೆಯೂ ಆನಂದಾನುಭೂತಿಗೆ ಕಾಣವಾಗುತ್ತದೆ."[೭]

ಕಲಾವಿದ ಜಿ. ಕೆ. ಶಿವಣ್ಣ ಅವರ ಈ ಚಿತ್ರವನ್ನು "ವಚನ ಚಿತ್ತಾರ" ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. ಮೂಲ ಕೃತಿಯು ಲಭ್ಯವಾಗಿರುವುದಿಲ್ಲ. ಕಾಗದದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. ಈ ಚಿತ್ರದಲ್ಲಿನ ಎರಡು ಮರಗಳಲ್ಲಿ ಕೆಲವು ಅಂಶಗಳನ್ನು ಸೃಜಿಸಿ ಇಡೀ ವಚನದ ಸಾರವನ್ನು ಸರಳವಾಗಿ ಪ್ರತಿಬಿಂಬಿಸುವ ರೀತಿ ಈ ಚಿತ್ರವನ್ನು ರಚಿಸುವಲ್ಲಿ ಕಲಾವಿದನ ಕ್ರಿಯಾಶೀಲತೆ, ಕಲಾತ್ಮಕತೆ ಎದ್ದು ಕಾಣುತ್ತದೆ. ಈ ಚಿತ್ರದ ದೊಡ್ಡ ಗಾತ್ರದ ಮರದ ಕೆಳಗಡೆ ಬೀಜವು ಮೊಳಕೆಯೊಡೆದು, ಹಳೆ ಬಡ್ಡಿಗೆ ಹೊಸ ಚಿಗುರು ಬಂದ ಎಲೆಗಳಲ್ಲಿ ಲಿಂಗವನ್ನು, ಅದರ ಮೇಲ್ಭಾಗದಲ್ಲಿ ಹೂವುಗಳನ್ನು, ಇದರ ಎಡಭಾಗದಲ್ಲಿ ಲಿಂಗವು ಕಾಯಿಯ ಆಕಾರದಲ್ಲಿದ್ದು, ಮರದ ಮೇಲ್ಭಾಗದಲ್ಲಿ ಹಣ್ಣಿನ ಗುಂಪುಗಳಲ್ಲಿ ಒಂದು ಹಣ್ಣು ಗೊಂಚಲಿನಿಂದ ಕಳಚಿ ಬೀಳುತ್ತಿರುವಂತೆ, ಕೆಳಭಾಗದಲ್ಲಿ ಸಣ್ಣ ಗಾತ್ರದ ಗಿಡದಲ್ಲಿ ಬೀಳುತ್ತಿರುವ ಹಣ್ಣನ್ನು ಎರಡು ಕೈಗಳಿಂದ ಹಿಡಿಯುತ್ತಿರುವ ರೀತಿ ಸಂಯೋಜಿಸಲಾಗಿದೆ.

೩.೪. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ... – ೧

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ [೮]

ವಚನದ ಸಾರಾಂಶ : ಬಸವಣ್ಣನವರ ಜನಪ್ರಿಯ ವಚನಗಳಲ್ಲಿ ಇದೊಂದು. ಪರಮಾತ್ಮನನ್ನು ಒಲಿಸಿಕೊಳ್ಳಲು ಉಗ್ರ ತಪಸ್ಸನ್ನಾಚರಿಸಬೇಕಾಗಿಲ್ಲ, ತಲೆ ಕೆಳಗೆ, ಕಾಲು ಮೇಲೆ ಮಾಡಿ ಧ್ಯಾನ ಮಾಡುವ ಅಗತ್ಯವಿಲ್ಲ. ಕಳ್ಳತನ ಮಾಡದೆ, ಜೀವಹಿಂಸೆ ಮಾಡದೆ, ಸುಳ್ಳು ಹೇಳದೆ, ಕೋಪಿಸಿಕೊಳ್ಳದೆ, ಮತ್ತೊಬ್ಬರನ್ನು ತಿರಸ್ಕಾರದಿಂದ ಕಾಣದೆ, ತನ್ನನ್ನು ಬಣ್ಣಿಸಿಕೊಳ್ಳದೆ, ಇತರರನ್ನು ನಿಂದಿಸದೆ ಜೀವನ ಮಾಡಿದರೆ ಸಾಕು. ಅದರಿಂದ ದೇಹದ ಅಂತರಂಗ ಹಾಗೂ ಬಹಿರಂಗಗಳೆರಡೂ ಶುದ್ಧಗೊಳ್ಳುವವು. ದೇಹ ಪರಮಾತ್ಮನ ಆವಾಸಸ್ಥಾನವಾಗುವುದು. ಎಲ್ಲಿ ಪರಮಾತ್ಮ ನೆಲೆಸುವನೋ ಅಲ್ಲೆಲ್ಲ ಆನಂದ, ಸಿದ್ಧಿ, ಸಂತೃಪ್ತಿ ಗೌರವ ತಾನೇ ತಾನಾಗಿ ನೆಲೆಸುವುದು. ಭಕ್ತಿಯೆಂಬುದು ಆಡಂಬರದ, ಜನತೋರಿಕೆಗಾಗಬಾರದು. ಅದು ಗರಗಸದಂತೆ ಹೋಗುತ್ತಾ ಕೊರೆಯುವದು. ಬರುತ್ತಾ ಕೊರೆಯುವದು. ದೇವರ ಒಲುಮೆಯೆಂಬುದು ಸುಖಭೋಗಿಗೆ, ಆಲಸಿಗೆ, ನಿದ್ದೆಬಡುಕನಿಗೆ, ನಿಷ್ಕ್ರಿಯಾವಂತನಿಗೆ ಎಂದೆಂದೂ ಲಭಿಸಲಾರದು. ಕಳ್ಳತನ

೦೭. ವ್ಯಾಸರಾಯ ಬಲ್ಲಾಳ : ಕಲಾವಿದ ಹೆಬ್ಬಾರರ ರೇಖಾಲಾವಣ್ಯ, ಪು-

೦೮. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೨೩೫), ಪು-೫೯

ಮಾಡದ, ಸುಳ್ಳು ಹೇಳದ ಭಕ್ತನನ್ನು ಪರಮಾತ್ಮ ತಾನಾಗಿ ಬಂದು ಎತ್ತಿಕೊಳ್ಳುವನು. ದೇವರು ನೋಡುವದು ಸುಜ್ಞಾನ ಸಹಿತವಾದ ಸತ್ಕ್ರಿಯೆಯನ್ನು ಮತ್ತು ಸುಜ್ಞಾನವನ್ನು.

ಚಿತ್ರದ ವಿಶ್ಲೇಷಣೆ : ಕಡುಕಿತ್ತಳೆ, ಲಘು ಹಳದಿ, ನಸುಗಪ್ಪು ಬಣ್ಣಗಳು ಇಲ್ಲಿ ಪ್ರಧಾನವಾಗಿ ಬಳಕೆಗೊಂಡಿವೆ. ಸುಂದರವಾದ ಮುಖದಲ್ಲಿ ಅಸ್ಪಷ್ಟವಾಗಿ ತೋರುವ ವಿಭೂತಿ, ಕುಸುರಿ ಕೆಲಸದೊಂದಿಗೆ ಅಲಂಕೃತಗೊಂಡ ಮಟ್ಟಸವಾದ ಅಳತೆಯ ಕಿರೀಟ, ಭ್ರೂಮಧ್ಯದಲ್ಲಿ ಬೊಟ್ಟು, ಕಣ್ಣುಗಳಲ್ಲಿ ಕಾಂತಿ, ನೀಳವಾದ ನಾಸಿಕ, ಕಿರುಮೀಸೆ ಹೊಂದಿರುವ ಬಸವಣ್ಣನ ನಿಂತ ಭಂಗಿಯನ್ನು ಕಲಾವಿದ ಒಡಮೂಡಿಸಿದ್ದಾನೆ. ಮೊಣಕಾಲಿನಿಂದ ಮೇಲ್ಭಾಗದ ದೇಹ ಮಾತ್ರ ನೋಡುಗರಿಗೆ ಲಭ್ಯವಿದ್ದು, ಕೆಂಪು ಬಣ್ಣದ ನಿಲುವಂಗಿ, ಕೊರಳಲ್ಲಿ ರುದ್ರಾಕ್ಷಿ, ಇಷ್ಟಲಿಂಗದ ಗಂಟು, ಪದಕದೊಂದಿಗಿರುವ ಮುತ್ತಿನಹಾರ, ಎಡಗೈಯಲ್ಲಿ ತಾಳೆಗರಿಯ ಕಟ್ಟು ಬಲಗೈಯನ್ನು ಅರ್ಧ ಮೇಲಕ್ಕೆತ್ತಿ ಬೋಧನೆ ಮಾಡುವ ಭಂಗಿಯಲ್ಲಿ ಬಸವಣ್ಣ ನಿಂತಿದ್ದಾನೆ. ಬಸವಣ್ಣನ ಎಡಭಾಗದಲ್ಲಿ ಚೌಕಾಕಾರದಲ್ಲಿ ಹಳದಿ ಬಣ್ಣದ ಎರಡು ವೃತ್ತಾಕಾರದ ಗೋಲಗಳು, ಅವುಗಳ ಮಧ್ಯೆ ಅದೇ ಗಾತ್ರದ ಕೆಂಪು ಬಣ್ಣದ ಒಂದು ಗೋಲಾಕೃತಿಯನ್ನು ಕಾಣುತ್ತೇವೆ. ಅವುಗಳ ಕೆಳಗೆ ಷಟ್‌ಕೋನಾಕೃತಿಯ ರಂಗವಲ್ಲಿಯಲ್ಲಿ ಓಂಕಾರವನ್ನು ಬರೆಯಲಾಗಿದೆ. ಎಡಬದಿಯಲ್ಲಿ ಹೋತದ ಮರಿಯೊಂದರ ಕೊರಳಿಗೆ ಹಗ್ಗವೊಂದನ್ನು ಹಾಕಿರುವುದನ್ನು ನೋಡುತ್ತೇವೆ. ಷಟ್ ಕೋನಾಕೃತಿಯ ಕೆಳಬದಿಯಲ್ಲಿ ಒಂದು ಕೈಯಲ್ಲಿ ಇಷ್ಟಲಿಂಗ, ಮತ್ತೊಂದು ಕೈಯಲ್ಲಿ ಜಪಮಾಲೆಯನ್ನು ಒಳಗೊಂಡ ಚಿತ್ರವಿದೆ.

ಬಸವಣ್ಣನ ಎಡಬದಿಯಲ್ಲಿ ಕೋಣ ಅಥವಾ ವೃಷಭನನ್ನು ಹೋಲುವ ಆಕೃತಿಯೊಂದಿದೆ. ಬಸವಣ್ಣನ ಬಲಭಾಗದ ಭಿತ್ತಿಯಲ್ಲಿ ಹಳದಿ ಮತ್ತು ಕೆಂಪುವರ್ಣಗಳ ಮಿಶ್ರಣದ ಸಂಯೋಜನೆ ಇದೆ. ಕಲಾಕೃತಿಯ ಭಿತ್ತಿ ವಿಶಾಲವಾಗಿದ್ದರೂ ಬಳಕೆಯಾಗಿರುವ ಬಣ್ಣಗಳು ಅತ್ಯಂತ ಕಡಿಮೆಯಾಗಿವೆ. ಮೂಲವರ್ಣಗಳನ್ನೇ ಪ್ರಾಥಮಿಕವಾಗಿ ದುಡಿಸಿಕೊಂಡು ರಚಿಸಿದ ಈ ಕಲಾಕೃತಿಯು ಆಧುನಿಕ ನೆಲೆಯಲ್ಲಿ ತನ್ನೊಳಗೆ ನೈಜವಾದ ರೇಖಾತ್ಮಕ ಆಕೃತಿ-ವಿನ್ಯಾಸಗಳನ್ನು ಒಳಗೊಂಡ ಒಂದು ಬಗೆಯಲ್ಲಿ ಸಮ್ಮಿಶ್ರ ಶೈಲಿಯ ಚಿತ್ರವಿದು. ಚಪ್ಪಟೆಯಾಗಿ ಲೇಪಿಸಲಾದ ಕೇಸರೀ ವರ್ಣದ ಅವಕಾಶದ ಮೇಲ್ಮೈಯಲ್ಲಿ ಬಸವಣ್ಣನವರು ಚಿತ್ರಿತಗೊಂಡಿದ್ದು, ಅವರ ಎರಡೂ ಪಾರ್ಶ್ವಗಳಲ್ಲಿ ವಿವಿಧ ಬಗೆಯ ಆಕೃತಿಗಳ ರಚನೆಗಳು ಇವೆ. ಉಲ್ಲೇಖಿತ ವಚನದ ತಿರುಳನ್ನು ಸಾಂಕೇತಿಕವಾಗಿ ತೋರ್ಪಡಿಸಲಾಗಿದೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ...... – ೨

ಕಲಾವಿದ ಜಿ. ಕೆ. ಶಿವಣ್ಣ ಅವರ ಈ ಚಿತ್ರವನ್ನು "ವಚನ ಚಿತ್ತಾರ" ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. ಮೂಲ ಕೃತಿಯು ಲಭ್ಯವಾಗಿರುವುದಿಲ್ಲ. ಕಾಗದದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. ಈ ಚಿತ್ರದ ಬಲಭಾಗಕ್ಕೆ ಧ್ಯಾನಸ್ತ ಬಸವಣ್ಣ ಎರಡೂ ಕಾಲುಗಳನ್ನು ಮಡಚಿ, ಕೊರಳಲ್ಲಿ ಲಿಂಗವನ್ನು ಧರಿಸಿ, ಕುಳಿತಿದ್ದಾನೆ. ಆತನ ಸುತ್ತಲೂ ಪ್ರಭಾವಳಿಯಿದೆ. ಎಡಭಾಗದಲ್ಲಿ ವ್ಯಕ್ತಿಯೊಬ್ಬ ತನ್ನ ಬಲಗೈಯನ್ನು ಎದೆಯ ಮೇಲಿಟ್ಟುಕೊಂಡು ಎಡಗೈಯನ್ನು ಮುಂಚಾಚಿ ಕಳವು ಮಾಡಬೇಡಿರೆಂದು ಸಂದೇಶಕೊಡುತ್ತಿದ್ದಾನೆ.

ಮತ್ತೊಬ್ಬ ವ್ಯಕ್ತಿ ಮೇಲ್ಮುಖಮಾಡಿ ನಿಂತಿದ್ದಾನೆ. ಅವನ ಕೆಳಭಾಗದಲ್ಲಿ ವ್ಯಕ್ತಿಯೊಬ್ಬ ಎಡಗೈಯಿಂದ ನಿರಾಕರಿಸುವಂತೆ ಮುಂಚಾಚಿದ್ದು, ಅವನನ್ನೇ ನೊಡುತ್ತ ಬಿಕ್ಷುಕನೊಬ್ಬ ನಿಂತಿದ್ದಾನೆ. ಅವರ ಕೆಳಭಾಗದಲ್ಲಿ ಇಬ್ಬರು ವ್ಯಕ್ತಿಗಳು ಮುಖಾಮುಖಿಯಾಗಿ ನಿಂತಿದ್ದಾರೆ. ಅವರ ಕೆಳಭಾಗಕ್ಕೆ ಬಾಗಿದ ವ್ಯಕ್ತಿಯೊಬ್ಬನ ಬಲಗೈಯಲ್ಲಿ ಹರಿತವಾದ ಕತ್ತಿಯಿದೆ. ಅವನ ಮುಂದೆ ವ್ಯಕ್ತಿಯೊಬ್ಬ ಮಲಗಿದ್ದಾನೆ. ಚಿತ್ರದ ಬಲಭಾಗಕ್ಕೆ ಬಾಗಿದ ವ್ಯಕ್ತಿ ಬೇಡುವ ದೃಶ್ಯವಿದೆ. ಮೇಲ್ಭಾಗಕ್ಕೆ ವ್ಯಕ್ತಿಗಳಿಬ್ಬರು ಕೈಮುಗಿದು ಭಕ್ತಿಯಿಂದ ಬಸವಣ್ಣನವರನ್ನು ಆರಾಧಿಸುತ್ತಿದ್ದಾರೆ. ಒಟ್ಟಾರೆ ವಚನದ ಎಲ್ಲ ಅಂಶಗಳೂ ಈ ಕಲಾಕೃತಿಯಲ್ಲಿ ಸಂಯೋಜನೆಗೊಂಡಿರುವುದು ವಿಶೇಷವಾಗಿದೆ.

೩.೫. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ....

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ

ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ

ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು

ಕೂಡಲಸಂಗಮದೇವಾ

ವಚನದ ಸಾರಾಂಶ : ನರಲೋಕ ಸಂಗಮನಾಥನ ಟಂಕಸಾಲೆ. ಈ ಟಂಕಸಾಲೆಯಲ್ಲಿ ನಿರ್ಮಿತ ನರನೆಂಬ ನಾಣ್ಯ ಸದಾಕಾಲ ಭಕ್ತಿಯೆಂಬ ಸೇವೆಗೆ ವಿನಿಯೋಗಿಸಲ್ಪಟ್ಟರೆ, ಈ ಲೋಕದಲ್ಲೂ, ಆ ಲೋಕದಲ್ಲೂ ಶ್ರೇಷ್ಠನೆನಿಸುವರು. ವ್ಯಕ್ತಿಯು ಉತ್ತಮವಾಗಿ ಬದುಕನ್ನು ಸಾಗಿಸುವ ಅಗತ್ಯವಿದೆ. ಅಂದಾಗ ಮಾತ್ರ ಶಿವನ ಒಲುಮೆ ಪಡೆಯಲು ಸಾಧ್ಯ. ಈ ಚಿತ್ರವು ಜಲವರ್ಣಸಂಪ್ರದಾಯಕ್ಕೆ ಸೇರಿದೆ. ಬಸವಣ್ಣ ಮರ್ತ್ಯಲೋಕ ಮತ್ತು ಸ್ವರ್ಗಲೋಕಗಳ ವ್ಯಾಖ್ಯಾನವನ್ನು ಮಾಡುವ ವಚನದ ಸನ್ನಿವೇಶವನ್ನು ಕಲಾವಿದ ಎಂ. ವೀರಪ್ಪ ಅವರು ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ.

ಚಿತ್ರದ ವಿಶ್ಲೇಷಣೆ : ಬೋಳು ತಲೆ, ವಿಭೂತಿ, ಬೊಟ್ಟು, ಕೊರಳಲ್ಲಿ ಮೂರು ರುದ್ರಾಕ್ಷಿಗಳಿಂದ ಕೂಡಿದ ರುದ್ರಾಕ್ಷಿಯ ಮಾಲೆ, ಮತ್ತು ಎದೆಯ ಮಧ್ಯಭಾಗದವರೆಗೆ ಇಳಿಯಬಿಟ್ಟ ಮತ್ತೊಂದು ರುದ್ರಾಕ್ಷಿಯ ಸರವನ್ನು ಧರಿಸಿದ ಬಸವಣ್ಣ, ಇಲ್ಲಿ ತನ್ನ ಬಲಗಾಲನ್ನು ಎಡತೊಡೆಯ ಮೇಲಿಟ್ಟುಕೊಂಡ ಭಂಗಿಯಲ್ಲಿ ಚಿತ್ರಿತನಾಗಿದ್ದಾನೆ. ಕೊರಳಲ್ಲಿ ಧರಿಸಿದ ಇಷ್ಟಲಿಂಗವು ಬಸವಣ್ಣನ ಸಾಂಪ್ರದಾಯಿಕ ಚಿತ್ರಗಳಲ್ಲಿ ಕಂಡುಬರುವಂತೆ ಕೆಂಪುವಸ್ತ್ರದಲ್ಲಿ ಸುತ್ತಿದ ಇಷ್ಟಲಿಂಗದಂತೆ ಇಲ್ಲಿ ಮೂಡಿಬರದೆ, ಬೆಳ್ಳಿಯ ಚೌಕದಲ್ಲಿ ಧರಿಸಿದಂತೆ ಕಲಾವಿದ ಇಲ್ಲಿ ಚಿತ್ರಿಸಿದ್ದಾನೆ. ಬಂಗಾರದ ಜರಿಯ ಅಂಚುಗಳಿಂದ ಕೂಡಿದ ಕೆಂಪು ಗುಲಾಬಿ ಬಣ್ಣದ ಮೇಲುವಸ್ತ್ರವನ್ನು ಹೊದೆದು, ಹಳದಿ ಬಣ್ಣದ ಪಂಚೆಯನ್ನು ಬಸವಣ್ಣ ಇಲ್ಲಿ ಧರಿಸಿದ್ದಾನೆ. ತನ್ನ ಬಲಗೈಯನ್ನು ಅರ್ಧಕ್ಕೆ ಎತ್ತಿ, ತನ್ನ ಹಸ್ತದ ತೋರುಬೆರಳನ್ನು ಮೇಲುಮುಖವಾಗಿ ಚಾಚಿರುವುದು, ಮತ್ತು ತನ್ನ ಎಡಗೈಯನ್ನು ಪಾದದ ಮೇಲಿಟ್ಟು ತೋರುಬೆರಳನ್ನು ಸೂಚಿಸುವಂತೆ ಬಸವಣ್ಣನನ್ನು ಚಿತ್ರಿಸುವ ಮೂಲಕ ಕಲಾವಿದ

೦೯. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೧೧೫), ಪು-೩೧

ತುಂಬ ಜಾಣ್ಮೆಯಿಂದ ತನ್ನ ಉದ್ದೇಶವನ್ನು ಒಂದೇ ಭಂಗಿಯಲ್ಲಿ ಸಾಧಿಸಿ ತೋರಿಸಿದ್ದಾನೆ. ಹಸಿರು ಬಣ್ಣದ ಎಲೆ, ಚಿತ್ತಾರ ಬಳ್ಳಿ ಮುಂತಾದ ಸುಳುಹು ಚಿತ್ರಗಳಿಂದ ಅಲಂಕೃತವಾದ ವಿಶಾಲವಾದ ಪೀಠದ ಮೇಲೆ ಬಸವಣ್ಣ ಕುಳಿತಿದ್ದು, ಆತನ ಪೀಠದ ಹಿಂಬದಿಯ ಕಮಾನು ಕುತ್ತಿಗೆಗಿಂತಲೂ ಕೆಳಮಟ್ಟದಲ್ಲಿರುವುದು ವಿಶೇಷವಾಗಿದೆ. ಭಿತ್ತಿಯಲ್ಲಿ ಹಸಿರುಬಣ್ಣದ ಪರದೆಯನ್ನು ಇಳಿಯಬಿಡಲಾಗಿದೆ. ಅದರ ಎಡಬದಿಯಲ್ಲಿ ಕಿಟಕಿಯಲ್ಲಿ ಭೂಲೋಕದ ಅಂದರೆ ಮರ್ತ್ಯಲೋಕದ ಹೊಲ, ಗದ್ದೆಗಳು, ಗಿಡ ಮರಗಳು ತಿಳಿ ಹಸಿರುಬಣ್ಣದಿಂದ ರಚಿತವಾಗಿವೆ. ಅಲ್ಲಿಯೂ ತಿಳಿನೀಲಿ ಬಣ್ಣದ ಆಕಾಶವು ಗಮನ ಸೆಳೆದರೆ, ಬಸವಣ್ಣ ಇಲ್ಲಿ ವಿಭಿನ್ನವಾಗಿ ತುಂಬ ಮೃದುವಾದ ವರ್ಣಸಂಯೋಜನೆಯಡಿಯಲ್ಲಿ ಕಾಣಿಸಿಕೊಂಡಿದ್ದಾನೆ. ಹಿಂದಿನ ಚಿತ್ರಗಳಲ್ಲಿದ್ದಂತೆ ಇಲ್ಲಿ ಇಲ್ಲ. ನೈಜ ನೆಲೆಯಲ್ಲಿ ರಚಿತಗೊಂಡಿರುವ, ಬಸವಣ್ಣನವರು ಮರ್ತ್ಯಲೋಕದ ಸಂಗತಿಗಳನ್ನು ಅರುಹುತ್ತಿರುವ ಈ ಚಿತ್ರ ಶ್ರೀಸಾಮಾನ್ಯನಿಗೆ ಎಟಕುವ ನಿಟ್ಟಿನಲ್ಲಿ ಚಿತ್ರಿಗೊಂಡಿದೆ.

೩.೬. ಕಲ್ಲನಾಗರ ಕಂಡರೆ ಹಾಲೆರೆಯೆಂಬರು.... – ೧

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು,

ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ

ಉಂಬ ಜಂಗಮ ಬಂದಡೆ ನಡೆಯೆಂಬರೆ,

ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ

ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ

ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ[೧೦]

ವಚನದ ಸಾರಾಂಶ : ಮೂಢನಂಬಿಕೆಯಿಂದ ಬದುಕುವ ಮನುಷ್ಯನ ತದ್ವಿರುದ್ಧ ಮನೋಭಾವವನ್ನು ಅಭಿವ್ಯಕ್ತಿಸಿದ್ದಾರೆ. ನಾಗರಪಂಚಮಿಯಂದು ಕಲ್ಲ ನಾಗಪ್ಪನಿಗೆ ಹಾಲೆರೆದರೆ, ಕಲ್ಲನಾಗರ ಬಲಗೊಂಡು ಹರಿದಾಡಬಹುದೇ? ದಿಟದ ನಾಗರ ಬಂದರೆ ಕೊಲ್ಲೆನ್ನುವ ಮನುಜನ ಜೀವಪರ ಕಾಳಜಿ ವಿಡಂಬನಾತ್ಮಕವಾದುದು. ಪರಮಾತ್ಮನೇ ಜೀವರೂಪದಲ್ಲಿ ನಾನಾ ಬಗೆಯ ಜೀವಧಾರಣ ಮಾಡಿ ಜಂಗಮರೂಪದಲ್ಲಿ ಜಗವೆಲ್ಲ ಸಂಚರಿಸುವ ಸಂತರನ್ನು, ಶರಣರನ್ನು ಮುಂದೆ ನಡೆಯೆಂಬ ಮನುಷ್ಯ, ಉಣ್ಣದ ಲಿಂಗಕ್ಕೆ ಪಕ್ವಾನ್ನಗಳನ್ನು ಮಾಡಿ ನೈವೇದ್ಯ ಹಿಡಿಯುವ ಪರಿಯನ್ನು ಇಲ್ಲಿ ಚಿತ್ರಿಸಲಾಗಿದೆ.

ಕಲಾವಿದ ಬಸವರಾಜ ಮುಗಳಿ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ (ಎನಾಮೆಲ್) ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ.

ಚಿತ್ರದ ವಿಶ್ಲೇಷಣೆ : ಈ ಚಿತ್ರದಲ್ಲಿ ಬಸವಣ್ಣ ಮೂಢನಂಬಿಕೆ ಮತ್ತು ಜನರ ಮೌಢ್ಯಗಳನ್ನು ಹೀಗಳೆಯುವ ಸನ್ನಿವೇಶವನ್ನು ಚಿತ್ರಿಸಲಾಗಿದೆ. ಮಟ್ಟಸವಾದ ಕಪ್ಪುಕೂದಲು, ಮಂದ ದೃಷ್ಟಿ ಬೀರುವ

---

೧೦. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೧೯೪), ಪು–೪೯

ನೇತ್ರಗಳು, ತಿದ್ದಿತೀಡಿದಂತಿರುವ ಹುಬ್ಬುಗಳು, ಹಣೆಯಲ್ಲಿ ವಿಭೂತಿ, ಕಿರುಮೀಸೆ, ಕೆಂಪುಬಣ್ಣದ ತುಟಿಗಳು, ಸುಂದರವಾದ ಮುಖ, ಉದ್ದವಾದ ಕಿವಿಗಳು, ಅವುಗಳಲ್ಲಿ ರುದ್ರಾಕ್ಷಿಯ ಓಲೆಗಳು, ಕೊರಳಲ್ಲಿ ಕೆಂಪುಬಣ್ಣದ ಇಷ್ಟಲಿಂಗದ ನೀಳವಾಗಿ ಇಳಿಯಬಿಟ್ಟಿರುವ ಗಂಟು, ಅದಕ್ಕಿಂತಲೂ ಸ್ವಲ್ಪ ಕಿರಿದಂತರದ ಮೇಲಿರುವ ರುದ್ರಾಕ್ಷಿಯ ಮಾಲೆಗಳಿಂದ ಕೂಡಿರುವ ಬಸವಣ್ಣ ಎತ್ತರದ ನಿಲುವಿನ ಆಕೃತಿಯನ್ನು ಹೊಂದಿದ್ದಾನೆ. ಕಡುಹಳದಿ ಬಣ್ಣದ ಅಂಚುಗಳನ್ನೊಳಗೊಂಡ ತಿಳಿಹಳದಿ ಬಣ್ಣದ ನಿಲುವಂಗಿ, ಸೊಂಟಕ್ಕೆ ಕಟ್ಟಿರುವ ಕೆಂಪು ಕಟಿವಸ್ತ್ರ ಧರಿಸಿರುವ ಬಸವಣ್ಣ ತನ್ನೆರಡೂ ಕೈಗಳನ್ನು ಅರ್ಧಕ್ಕೆ ಎತ್ತಿ ತನ್ನ ಪಕ್ಕದಲ್ಲಿ ನಡೆಯುತ್ತಿರುವ ಒಂದೆಡೆ ಹಾವಿಗೆ ಹಾಲೆರೆಯುವ ಮತ್ತು ಇನ್ನೊಂದೆಡೆ ಹಾವನ್ನು ಕೊಲ್ಲುತ್ತಿರುವ ದೃಶ್ಯಕ್ಕೆ ಸಾಕ್ಷಿಯಾಗಿದ್ದಾನೆ. ಈ ಎರಡೂ ಘಟನೆಗಳನ್ನು ತನ್ನೆರಡು ಹಸ್ತಗಳಿಂದ ಟೀಕಿಸುವ ಭಂಗಿಯಿದೆಯಾದರೂ ಕಣ್ಣುಗಳ ನಿರ್ವಿಕಾರ ದೃಷ್ಟಿ ಒಟ್ಟು ಘಟನೆಗೆ ಅಸಹಜವೆಂಬಂತೆ ತೋರುತ್ತದೆ.

ಬಸವಣ್ಣನ ಎಡಭಾಗದಲ್ಲಿ ಹಸಿರುಬಣ್ಣದ ಸೀರೆ, ಹಣೆಯಲ್ಲಿ ಢಾಳಾಗಿ ತೋರುವ ವಿಭೂತಿ, ಕುಂಕುಮ, ಮೂಗಿನಲ್ಲಿ ಎದ್ದುಕಾಣುವ ಮೂಗುತಿಯನ್ನು ಧರಿಸಿರುವ ಸ್ತ್ರೀಯೊಬ್ಬಳು ಕಲ್ಲನಾಗರಕ್ಕೆ ಹಾಲೆರೆಯುವ ಭಂಗಿಯಲ್ಲಿ ಕುಳಿತಿದ್ದಾಳೆ. ಅವಳ ಮುಂದೆ ಹೊಳೆಯುವ ಚಿಕ್ಕ ತಂಬಿಗೆ, ಒಂದು ಬುಟ್ಟಿಯಲ್ಲಿರುವ ಹಣ್ಣುಹಂಪಲುಗಳು ಗಮನಸೆಳೆಯುತ್ತವೆ. ಆದರೆ ಪ್ರಮಾಣದ ದೃಷ್ಟಿಯಿಂದ ಅವಳ ಆಕೃತಿ ತುಸು ದೊಡ್ಡದಾಗಿದೆಯೆನ್ನಿಸದೆ ಇರಲಾರದು. ಅವಳ ಪಕ್ಕದಲ್ಲಿ ಕೆಂಪುಬಣ್ಣದ ಹುಡುಗಿಯೊಬ್ಬಳು ಪುಟ್ಟ ಬಿಂದಿಗೆಯಿಂದ ಹಾಲನ್ನು ಎರೆಯುತ್ತಿದ್ದಾಳೆ. ಅವಳ ಹಿಂಬದಿಯಲ್ಲಿ ಇಬ್ಬರು ಸ್ತ್ರೀಯರು ನಿಂತಿದ್ದಾರೆ. ಅವರಲ್ಲಿ ಒಬ್ಬಳ ಮುಖವನ್ನು ಕಲಾವಿದ ತುಂಬ ತಾದಾತ್ಮ್ಯದಿಂದ ಚಿತ್ರಿಸಿದ್ದು ಅವಳ ಮೂಗಿನ ನತ್ತು ಅತ್ಯಂತ ಆಕರ್ಷಕವಾಗಿದೆ. ಅವಳ ಹಿಂದಿರುವ ಮತ್ತೊಬ್ಬ ಸ್ತ್ರೀ ತಲೆತುಂಬ ಸೆರಗು ಹೊದ್ದು ತನ್ನ ಬಲಗೈಯಲ್ಲಿ ಪೂಜಾಸಾಮಗ್ರಿಗಳನ್ನು ಹಿಡಿದು ನಿಂತಿದ್ದಾಳೆ. ಇತ್ತ ಬಸವಣ್ಣನ ಬಲಬದಿಯಲ್ಲಿ ಮೂರು ಜನರ ಆಕೃತಿಗಳು ತಮ್ಮ ಕೆಳಗೆ ಹೆಡೆಯೆತ್ತಿ ನಿಂತಿರುವ ಕಪ್ಪುಬಣ್ಣದ ನಾಗರಹಾವನ್ನು ಹಾರೆಯಿಂದ ಕೊಲ್ಲುವ ಸನ್ನಿವೇಶವಿದೆ. ಆ ಮೂವರು ಪಂಚೆಯನ್ನು ಮಾತ್ರ ಉಟ್ಟು ಬರಿ ಮೈಯಲ್ಲಿದ್ದಾರೆ. ಅವರ ಮುಖಗಳಲ್ಲಿ ಗಾಬರಿ, ರೋಷಗಳಿವೆ. ತಲೆಯ ಮೇಲೆ ಬಿಳಿಯ ಪೇಟಗಳನ್ನು ಮೂವರೂ ಧರಿಸಿದ್ದು, ಒಬ್ಬಾತ ತನ್ನ ಉದ್ದವಾದ ಹಾರೆಯನ್ನು ಹಾವಿನ ಮಧ್ಯಭಾಗದಲ್ಲಿ ಚುಚ್ಚಿ ಹಿಡಿದಿದ್ದು, ಅದರಿಂದ ರಕ್ತ ಚಿಮ್ಮುವ ಸನ್ನಿವೇಶವನ್ನು ಕಲಾವಿದ ಚಿತ್ರಿಸಿದ್ದಾನೆ. ಉದ್ದವಾದ ಬಿಳಲುಗಳನ್ನು ಬಿಟ್ಟ ಆಲದ ಮರವು ನೀಲಿ ಆಕಾಶದ ಹಿಂಬದಿಯೊಂದಿಗೆ ಅತ್ಯಾಕರ್ಷಕವಾಗಿ ಮೂಡಿಬಂದಿದೆ.

ವರ್ಣಸಂಯೋಜನೆಯು ಉತ್ತಮವಾಗಿದೆ. ಗಾಢವಾದ ವರ್ಣಗಳ ಬಳಕೆ ನೋಡುಗನ ಚಿತ್ತಭಿತ್ತಿಯಲ್ಲಿ ಚಿತ್ರವು ನೆಲೆನಿಲ್ಲುವಂತೆ ಮಾಡಿದೆ. ಹೊರಾವರಣದಲ್ಲಿ ರಚಿತವಾದ ಈ ಚಿತ್ರದಲ್ಲಿ ಬಸವಣ್ಣನವರು ಮಧ್ಯಕ್ಕೆ ಸಂಯೋಜನೆಗೊಂಡರೆ ಎರಡೂ ಸಂಗತಿಗಳನ್ನು ಅಂದರೆ ಕಲ್ಲನಾಗರವನ್ನು ಪೂಜಿಸುವುದು ಹಾಗೂ ದಿಟನಾಗರ ಕಂಡರೆ ಕೊಲ್ಲುವ ಸಂಗತಿಗಳನ್ನು ಪ್ರತ್ಯೇಕವಾಗಿ ಸ್ಥಳಾವಕಾಶದ ಎರಡೂ ಪಾರ್ಶ್ವದಲ್ಲಿ ದೃಶ್ಯಾತ್ಮಕವಾಗಿ ಸಂಯೋಜಿಸಲಾಗಿದೆ. ಎಂದಿನಂತೆ ಮುಗಳಿಯವರ ಮೃದುವಾದ ವರ್ಣಯೋಜನೆ ಕಲಾಕೃತಿಯನ್ನು ಆಪ್ಯಾಯಮಾನಗೊಳಿಸಿದೆ.

ಕಲ್ಲನಾಗರ ಕಂಡರೆ ಹಾಲೆರೆಯೆಂಬರು... - ೨

ಈ ಚಿತ್ರವನ್ನು ಅಂತರ್ಜಾಲದಿಂದ ಪಡೆದುಕೊಳ್ಳಲಾಗಿದೆ. ಸಾಂಪ್ರದಾಯಿಕ ವರ್ಣಚಿತ್ರಶೈಲಿಯನ್ನು ನೆನಪಿಸುವಂತಹ ಈ ಚಿತ್ರದಲ್ಲಿ ಬಸವಣ್ಣನ ಭಾವಚಿತ್ರ ಪ್ರಮುಖ ಆಶಯವಾಗಿದೆ. ಉಳಿದಂತೆ ಕಲ್ಲು ನಾಗರಗಳಿಗೆ ಹಾಲನೆರೆಯುವ, ನಿಜದ ನಾಗರ ಕಂಡರೆ ಕೊಲ್ಲುವ ಮತ್ತು ಸ್ಥಾವರಲಿಂಗವನ್ನು ಪೂಜಿಸುವ ಸನ್ನಿವೇಶಗಳಿವೆ. ಮಟ್ಟಸವಾಗಿ ಕತ್ತರಿಸಿದಂತಿರುವ ಕಪ್ಪುಮಿಶ್ರಿತ ಕಂದುಬಣ್ಣದ ತಲೆಗೂದಲು, ಅಂಕುಡೊಂಕಾಗಿರುವ ವಿಭೂತಿಯ ಮೂರು ಗೆರೆಗಳು, ಅವುಗಳ ಮಧ್ಯೆ ವಿಭೂತಿಯ ಬೊಟ್ಟು, ತೆಳುವಾದ ಕಪ್ಪು ಬಣ್ಣದ ಹುಬ್ಬುಗಳು, ಕಮಲದ ದಳದ ಆಕಾರದಲ್ಲಿರುವ ಮಂದಹಾಸವನ್ನು ಬೀರುವ ಕಣ್ಣುಗಳು, ನೀಳವಾದ ಮೂಗು, ಕಿರುಮೀಸೆ, ಪುಟ್ಟದಾದ ಆಕಾರದ ಬಾಯಿ, ತುಟಿಗಳು, ಕಿವಿಗಳಲ್ಲಿ ರುದ್ರಾಕ್ಷಿಯ ಓಲೆ, ಕೊರಳಲ್ಲಿ ರುದ್ರಾಕ್ಷಿಯ ಒಂದು ಮಾಲೆಯನ್ನು ಧರಿಸಿದ ಬಸವಣ್ಣ ಇಲ್ಲಿ ಇಷ್ಟಲಿಂಗ ಪೂಜೆಯಲ್ಲಿ ತೊಡಗಿರುವ ಸನ್ನಿವೇಶವಿದೆ.

ತಲೆಯ ಸುತ್ತಲೂ ಕೇಸರಿ ಬಣ್ಣದ ದುಂಡಾಕಾರದ ಪ್ರಭಾವಳಿಯಿದೆ. ಬಿಳಿಯ ಬಣ್ಣದ ಪಂಚೆ, ಹಸಿರುಬಣ್ಣದ ಮೇಲುವಸ್ತ್ರ ಮತ್ತು ಕೆಂಪು ಬಣ್ಣದ ಮತ್ತೊಂದು ಮೇಲುವಸ್ತ್ರವನ್ನು ಸೊಂಟಕ್ಕೆ ಸುತ್ತಿಕೊಂಡಿರುವ ಬಸವಣ್ಣನ ಬಲಗೈಯಲ್ಲಿ ಪುಷ್ಪವಿದ್ದು, ಅದನ್ನು ಇನ್ನೇನು ತನ್ನ ಎಡಗೈಯಲ್ಲಿರುವ ಇಷ್ಟಲಿಂಗಕ್ಕೆ ಅರ್ಪಿಸಬೇಕೆನ್ನುವ ಭಾವನೆ ಇಲ್ಲಿ ಕಂಡುಬರುತ್ತದೆ. ಮಟ್ಟಸವಾದ ಒಂದು ಮಣೆಯ ಮೇಲೆ ಬಸವಣ್ಣ ಕುಳಿತಿದ್ದಾನೆ. ಆತನ ಮುಂದಿನ ಭಾಗದಲ್ಲಿ ತಟ್ಟೆಯಲ್ಲಿ ಅಲಂಕೃತಗೊಂಡ ಬೆಳ್ಳಿಯ ತಂಬಿಗೆ, ಉದ್ಧರಣೆ, ಮಜ್ಜನಪಾತ್ರೆ, ಪುಷ್ಪಗಳನ್ನು ಹಾಕಲು ಬಿದಿರಿನ ಪುಟ್ಟಿ, ಕೆಂಪು ಬಣ್ಣದ ಕಂಬಿಯನ್ನು ಹೊಂದಿದ ದೀಪಸ್ತಂಭದ ಮೇಲೆ ಬೆಳಗುತ್ತಿರುವ ದೀಪ, ಬಸವಣ್ಣನ ಎಡಬದಿಯಲ್ಲಿ ಹಸ್ತಪ್ರತಿಯ ಕಟ್ಟುಗಳು, ಕಂತಗಳಿದ್ದು ಪರಿಸರಕ್ಕೆ ಅಗತ್ಯವಾದ ಅಂಶಗಳಾಗಿ ಕಂಡುಬರುತ್ತವೆ.

ಬಸವಣ್ಣನ ಬಲಬದಿಯ ಮೇಲ್ಭಾಗದಲ್ಲಿ ಕಲ್ಲು ನಾಗರವನ್ನು ಪೂಜಿಸುವ ಒಂದು ಗಂಡು ಮತ್ತು ಹೆಣ್ಣುಗಳ ಚಿತ್ರವಿದೆ. ಅವರ ಮೇಲುಬದಿಯಲ್ಲಿ ಒಬ್ಬ ವ್ಯಕ್ತಿ ಹುತ್ತದ ಬಳಿ ಬಿಳಿಪಂಚೆಯನ್ನು ಧರಿಸಿ ಕೈಯಲ್ಲಿ ದೊಣ್ಣೆ ಹಿಡಿದು ಹಾವನ್ನು ಹೊಡೆಯುವ ಭಂಗಿಯಲ್ಲಿ ನಿಂತಿದ್ದಾನೆ. ಆತನ ಹಿಂದೆ ನಿಂತ ಸ್ತ್ರೀಯೊಬ್ಬಳು ಕುತೂಹಲದಿಂದ ಆ ದೃಶ್ಯವನ್ನು ಗಮನಿಸುತ್ತಿದ್ದಾಳೆ. ಬಸವಣ್ಣನ ಹಿಂಬದಿಯಲ್ಲಿ ಕಟ್ಟೆಯೊಂದಿದ್ದು ಆತನ ಎಡಭಾಗದಲ್ಲಿ ಎರಡು ದೃಶ್ಯಗಳಿವೆ. ಹಸಿರು ಮತ್ತು ಕಪ್ಪುಬಣ್ಣಗಳಿಂದ ಕೂಡಿರುವ (ಪಚ್ಚೆವರ್ಣ) ಶಿವಲಿಂಗವಿದೆ. ಅದಕ್ಕೆ ರುದ್ರಾಕ್ಷಿ ಮಾಲೆಯೊಂದನ್ನು ಹಾಕಲಾಗಿದ್ದು ಅದರ ಮುಂಬದಿಯಲ್ಲಿ ಹರಿವಾಣದಲ್ಲಿ ಪೂಜಾಸಾಮಗ್ರಿಗಳಿವೆ. ಅದರ ಬದಿಯಲ್ಲಿ ತೆಳು ಹಸಿರು ಬಣ್ಣದ ಸೀರೆಯುಟ್ಟ ಹೆಂಗಸೊಬ್ಬಳು ಭಕ್ತಿಯಿಂದ ಕೈಮುಗಿದು ಕುಳಿತಿರುವ ಚಿತ್ರಣವಿದೆ. ಅದರ ಬದಿಯಲ್ಲಿ ಎರಡು ಮೆಟ್ಟಿಲುಗಳಿದ್ದು, ಕೆಂಪು ಬಣ್ಣದ ಎದೆಯನ್ನು ಮುಚ್ಚಿದ ವಸ್ತ್ರ ಮತ್ತು ಹಳದಿ ಮತ್ತು ಕೇಸರಿ ಬಣ್ಣದ ಲಂಗವನ್ನು ಧರಿಸಿದ ಸ್ತ್ರೀಯೊಬ್ಬಳ ಕೈಯಲ್ಲಿ ತಟ್ಟೆಯಲ್ಲಿ ನೈವೇದ್ಯದ ಸಾಮಗ್ರಿಗಳಿದ್ದು ಆಕೆ ತನ್ನ ಬಲಗೈಯನ್ನು ತನ್ನ ಮುಂದಿರುವ ಭಿಕ್ಷುಕನೊಬ್ಬನಿಗೆ ಭಿಕ್ಷೆ ಹಾಕುವುದಿಲ್ಲ, ಮುಂದೆ ಹೋಗು ಎಂಬ ಭಂಗಿಯಲ್ಲಿ ನಿಂತಿದ್ದಾಳೆ. ಬಹುಶಃ

"ಉಂಬ ಜಂಗಮ ಬಂದರೆ ಹೋಗೆಂಬರು, ಉಣ್ಣದ ಲಿಂಗಕ್ಕೆ ಬೋನವಿಡಿವರು" ಎಂಬ ವಚನದ ಸಾಲಿನ ಆಶಯವನ್ನು ಕಲಾವಿದ ಇಲ್ಲಿ ಸಮರ್ಥವಾಗಿ ಹಿಡಿದಿಟ್ಟಿದ್ದಾನೆ.

ಕಲಾವಿದ ಪ್ರತಿಯೊಂದು ಅಂಶಗಳಿಗೂ ಸಾಕಷ್ಟು ಗಮನ ನೀಡಿ, ತಾಳ್ಮೆಯಿಂದ ಈ ಕಲಾಕೃತಿಯನ್ನು ರಚಿಸಿರುವ ಹಿನ್ನೆಲೆಯಲ್ಲಿ ಸಂಯೋಜನೆಗೂ ಬಹಳ ಪ್ರಾಮುಖ್ಯತೆಯನ್ನು ನೀಡಿದ್ದಾನೆ. ಲಿಂಗಪೂಜಾನುಷ್ಠಾನದಲ್ಲಿ ನಿರತರಾಗಿರುವ ಬಸವಣ್ಣನವರು ಪ್ರಮುಖ ಆಕೃತಿಯಾಗಿ ಪ್ರಕಟಗೊಂಡಿದ್ದಾರೆ. ಅವರ ಹಿಂದೆ ಅರ್ಧವರ್ತುಲಾಕಾರದಲ್ಲಿ ಕಲ್ಲಿನ ನಾಗರಕ್ಕೆ ಹಾಲನೆರೆಯುವ, ನಿಜನಾಗರ ಕಂಡು ಅದನ್ನು ಕೊಲ್ಲುವ ಹಾಗೂ ಇನ್ನೊಂದೆಡೆ ಕಲ್ಲಿನ ದೇವರಿಗೆ ನೈವೇದ್ಯ ಅರ್ಪಿಸುವ ಹೆಣ್ಣೊಬ್ಬಳು ಭಿಕ್ಷುಕನಿಗೆ ಅನ್ನ ನೀಡಲು ಹಿಂದೇಟು ಹಾಕುವ ದೃಶ್ಯಗಳು ಅತ್ಯಂತ ಪ್ರಬುದ್ಧವಾಗಿ ಸಂಯೋಜಿಸಲ್ಪಟ್ಟಿವೆ. ಹಿನ್ನೆಲೆಯಲ್ಲಿ ದಟ್ಟವರ್ಣದ ಲೇಪನ, ಮುನ್ನೆಲೆಯಲ್ಲಿ ದೇಗುಲದ ಕಂಭಗಳು, ವಚನದಲ್ಲಿರುವ ಉಕ್ತಿಗಳಿಗೆ ಸಂಬಂಧಪಟ್ಟ ಆಕೃತಿಗಳು ಪ್ರಬುದ್ಧ ಸಾಂಪ್ರದಾಯಿಕ ಶೈಲಿಯ ರಚನೆಗಳಾಗಿವೆ. ಒಟ್ಟು ಸಂಯೋಜನೆಯಲ್ಲಿ ಕಂಡುಬರುವ ವರ್ಣಯೋಜನೆ ಅತ್ಯಂತ ಮೃದುತ್ವದಿಂದ ಕೂಡಿದೆ. ಒಟ್ಟು ಚಿತ್ರವು ಪ್ರಾಚೀನತೆಯ ಅನುಭವವನ್ನು ತಂದುಕೊಡುತ್ತದೆ. ವಚನವೊಂದಕ್ಕೆ ಸಾಂಪ್ರದಾಯಿಕ ಶೈಲಿಯಲ್ಲಿ ದೃಶ್ಯಾತ್ಮಕ ಪ್ರತಿಕ್ರಿಯೆಯನ್ನು ಹೇಗೆ ನೀಡಬೇಕೆಂಬುದಕ್ಕೆ ಈ ಚಿತ್ರ ಒಂದು ಒಳ್ಳೆಯ ಮಾದರಿಯಾಗಿರುತ್ತದೆ. ಹೀಗೆ "ಕಲಾವಿಕಾಸದ ಬೆಳವಣಿಗೆಯಿಂದ ಮಾನವನ ಪ್ರಗತಿಯ ವಿವಿಧ ಹಂತಗಳು ಕಲೆಯಲ್ಲಿ ವ್ಯಕ್ತಿಗೊಂಡಿರುವುದನ್ನು"[೧೧] ನಾವು ಕಾಣಬಹುದು.

ಕಲ್ಲುನಾಗರ ಕಂಡರೆ ಹಾಲೆರೆಯೆಂಬರು... – ೩

ಮೈಸೂರಿನ ಚಿತ್ರಕಲಾವಿದ ಶ್ರೀ ಎಲ್. ಶಿವಲಿಂಗಪ್ಪನವರು ಈ ಕಲಾಕೃತಿಯನ್ನು ೧೨"x೧೮" ಅಳತೆಯ ಜಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಈ ಚಿತ್ರದಲ್ಲಿ ಕಲ್ಲಿನ ನಾಗರಕ್ಕೆ ಹಾಲೆರೆಯುವ, ನಿಜವಾದ ಹಾವನ್ನು ಕೊಲ್ಲುವ, ಶಿವಲಿಂಗವಿರುವ ಚಿಕ್ಕ ದೇಗುಲದ ಬಾಗಿಲಿನಲ್ಲಿ ಬಿಳಿಬಣ್ಣದ ಸ್ತ್ರೀಯೊಬ್ಬಳು ನಿಂತಿರುವ ಒಟ್ಟು ಮೂರು ಪ್ರಧಾನ ಸನ್ನಿವೇಶಗಳಿವೆ. ಅಶ್ವತ್ಥ ವೃಕ್ಷದ ಕಟ್ಟೆಯೊಂದರ ಮೇಲೆ ಮೂರು ನಾಗದೇವತೆಗಳ ಶಿಲಾವಿಗ್ರಹಗಳಿವೆ. ಕೆಂಪುಬಣ್ಣದ ಸೀರೆ ಮತ್ತು ಚಿತ್ತಾರದ ರವಿಕೆಯನ್ನುಟ್ಟು, ತಲೆಯಲ್ಲಿ ಮಲ್ಲಿಗೆ ಹೂವನ್ನು ಮುಡಿದ ಸ್ತ್ರೀಯೊಬ್ಬಳು ಚಿಕ್ಕ ಬಿಂದಿಗೆಯಿಂದ ಹಾಲನ್ನು ನಾಗದೇವತೆಯ ಶಿಲೆಯ ಮೇಲೆ ಎರೆಯುತ್ತಿದ್ದಾಳೆ. ಅವಳು ಎರೆದ ಹಾಲು ನಾಗಶಿಲೆಯ ಮೇಲೆ ಬಿದ್ದು ಹರಿಯುತ್ತ ಕಟ್ಟೆಯ ಕೆಳಗೆ ಬರುತ್ತಿರುವ ನೈಜದೃಶ್ಯವಿಲ್ಲಿದೆ. ನಾಗಶಿಲೆಯ ಎದುರಿಗೆ ನಿಜವಾದ ನಾಗರಹಾವೊಂದು ಹೆಡೆಯೆತ್ತಿ ಚಲಿಸುತ್ತಿದೆ. ಬಿಳಿಯ ಬಣ್ಣದ ಅಂಗಿ ಮತ್ತು ಲುಂಗಿಯನ್ನು ಧರಿಸಿದ ವ್ಯಕ್ತಿಯೊಬ್ಬ ಆ ಹಾವನ್ನು ಕಟ್ಟಿಗೆಯಿಂದ ಹೊಡೆದು ಸಾಯಿಸಲು ತುಸು ಬಾಗಿರುವ ಭಂಗಿಯಲ್ಲಿದ್ದಾನೆ. ಅಶ್ವತ್ಥ ಕಟ್ಟೆಯ ಕೆಳಗೆ ಶಿವಾಲಯವೊಂದಿದೆ. ಅದರಲ್ಲಿರುವ ಶಿವಲಿಂಗವು ನೋಡುಗರಿಗೆ ಕಾಣಿಸುವುದಿಲ್ಲವಾದ್ದರಿಂದ ಗೋಡೆಯ ಮೇಲೆ ಛಾಯಾರೂಪದಿಂದ ಕಪ್ಪುಬಣ್ಣದ ಎತ್ತರವಾದ ಶಿವಲಿಂಗವಿದ್ದು ಅದರ ಇಬ್ಬದಿಗಳಲ್ಲಿ ಹಳದಿ

೧೧. ಡಾ. ಸುನಿತಾ ಪಾಟೀಲ : ವಿಜಯ ಸಿಂಧೂರರ ಕಲಾಕೃತಿಗಳ ಒಳನೋಟಗಳು (ಅ.ಪ್ರ.ಪಿಎಚ್.ಡಿ.ಮ.ಪ್ರ), ಪು–೮೭

ಮತ್ತು ಬಿಳಿಬಣ್ಣದ ಸೀರೆಗಳನ್ನು ಧರಿಸಿದ ಸ್ತ್ರೀಯರು ಪೂಜಿಸುತ್ತಿರುವಂತೆ ಚಿತ್ರಿಸಿದ್ದಾನೆ. ಅಚ್ಚುಕಟ್ಟಾದ ಕಲ್ಲಿನಿಂದ ನಿರ್ಮಿತವಾದ ಈ ದೇವಾಲಯದ ಮುಂಬದಿಯಲ್ಲಿ ಕೆಂಪು ಮತ್ತು ನೀಲಿಬಣ್ಣದ ಸೀರೆಯನ್ನು ಧರಿಸಿದ ಸ್ತ್ರೀಯರಿಬ್ಬರು ಪೂಜೆ ಮಾಡಿಸಲು ಬಾಗಿಲಿನಲ್ಲಿ ನಿಂತ ಅರ್ಚಕನಿಗೆ ಪೂಜಾಸಾಮಗ್ರಿಗಳನ್ನು ಕೊಡುವ ಭಂಗಿಯಲ್ಲಿ ನಿಂತಿದ್ದಾರೆ. ಕಟ್ಟೆಯ ಒಳಗಿನಿಂದ ಬಂದ ಅಶ್ವತ್ಥ ವೃಕ್ಷ ಮತ್ತು ಭಿತ್ತಿಯಲ್ಲಿ ನೀಲಿಬಣ್ಣದ ಆಕಾಶ, ಹಸಿರುಬಣ್ಣದಿಂದ ಕಂಗೊಳಿಸುವ ನೆಲದ ಚಿತ್ರಣ ಪರಿಣಾಮಕಾರಿಯಾಗಿ ಮೂಡಿಬಂದಿದೆ.

ಒಂದೇ ಸ್ಥಳಾವಕಾಶದಲ್ಲಿ ಒಂದರ ಮೇಲೊಂದರಂತೆ ವಿವಿಧ ಸನ್ನಿವೇಶಗಳನ್ನು ಪ್ರಕಟಿಸುವ ಇರಾದೆ ಕಲಾವಿದರದು. ಗರ್ಭಗುಡಿಯ ಒಳಗಿನ ದೃಶ್ಯವನ್ನು ಗುಡಿಯ ಗೋಡೆಯ ಮೇಲೆ, ಗುಡಿಯ ಮೇಲೆ ಅಶ್ವತ್ಥಮರದ ಸನ್ನಿವೇಶಗಳನ್ನು ಸಂಯೋಜಿಸಿದ್ದಾರೆ. ಪ್ರಖರವರ್ಣಗಳನ್ನು ತಾಜಾತನದಿಂದ ದುಡಿಸಿಕೊಂಡ ಕಲಾವಿದರು ಉಲ್ಲೇಖಿತ ವಚನದ ತಿರುಳನ್ನು ದೃಶ್ಯಾತ್ಮಕ ನೆಲೆಯಲ್ಲಿ ಸಮರ್ಥವಾಗಿ ಚಿತ್ರಿಸಿದ್ದಾರೆ.

ಕಲ್ಲನಾಗರ ಕಂಡರೆ ಹಾಲೆರೆಯೆಂಬರು... – ೪

"ಕಲಾವಿದನ ಮಾನಸದ ಸ್ಥಿತಿಯಲ್ಲಿ ವ್ಯಕ್ತಪಡಿಸುವಷ್ಟೇ ಅಲ್ಲದೇ, ಚಿತ್ರ ಸೃಷ್ಟಿಕಾಲದ ಅವನ ಮನಃಸ್ಥಿತಿ ಚಿತ್ರವೃತ್ತಿ, ಭಾವನೆಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ."[೧೨] ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ.

ಈ ಚಿತ್ರದಲ್ಲಿ ಕಲ್ಲು ನಾಗರವನ್ನು ಪೂಜಿಸುವ ಮತ್ತು ದಿಟ ನಾಗರವನ್ನು ಕೊಲ್ಲುವ ಎರಡು ಸನ್ನಿವೇಶಗಳನ್ನು ಒಟ್ಟಿಗೆ ಹೊಂದಿದೆ. ಎಲ್ಲ ಸಂಗತಿಗಳನ್ನು ಕಲಾವಿದ ಇಲ್ಲಿ ತುಂಬ ಅಚ್ಚುಕಟ್ಟಾಗಿ ಮತ್ತು ಪರಿಣಾಮಕಾರಿಯಾಗಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾನೆ. ನೋಡುಗರ ಎದುರಿಗೆ ನಾಲ್ಕು ನಾಗಶಿಲೆಗಳಿವೆ. ಪೂಜೆಗೊಂಡ ಮತ್ತು ವಿಭೂತಿ, ಕುಂಕುಮಗಳಿಂದ ಅಲಂಕೃತಗೊಂಡ ಇವುಗಳು ನೈಜವಾಗಿ ನಮ್ಮೆದುರಿಗೆ ಇವೆ ಎನ್ನುವಷ್ಟರ ಮಟ್ಟಿಗೆ ಕಲಾವಿದ ತುಂಬ ತಾಳ್ಮೆ ಮತ್ತು ಪರಿಶ್ರಮದಿಂದ ನಿರ್ಮಿಸಿದ್ದಾನೆನ್ನುವುದರಲ್ಲಿ ಸಂಶಯವಿಲ್ಲ. ಜಲವರ್ಣದಲ್ಲಿ ಈ ನೈಜತೆಯನ್ನು ಸಾಧಿಸುವುದು ತುಸು ಕಷ್ಟದ ಕೆಲಸವೆಂದು ತೋರುತ್ತದೆ. ಹಸಿರುಬಣ್ಣದ ಸೆರಗಿನ, ಹಳದಿ ಬಣ್ಣದ ಸೀರೆಯೊಂದನ್ನು ಧರಿಸಿದ ಸ್ತ್ರೀಯೊಬ್ಬಳು ತಂಬಿಗೆಯಿಂದ ನಾಗಶಿಲೆಗೆ ಹಾಲನ್ನು ಎರೆಯುತ್ತಿದ್ದಾಳೆ. ಅವಳು ಧರಿಸಿದ ಕಡುಹಳದಿಬಣ್ಣದ ಸೀರೆಯ ನಿರಿಗೆಗಳನ್ನು ಅತ್ಯಂತ ಸಹಜವಾಗಿ ಚಿತ್ರಿಸಿರುವುದು ನೋಡುಗರ ಮನಸ್ಸಿಗೆ ಹಿತವೆನ್ನಿಸುತ್ತದೆ. ಅವಳ ಹಿಂಬದಿಯಲ್ಲಿ ಕೆಂಪು ಸೀರೆಯನ್ನುಟ್ಟ ಸ್ತ್ರೀಯೊಬ್ಬಳು ಕೈಮುಗಿದು ನಿಂತಿದ್ದಾಳೆ. ಚಿತ್ರದ ಎಡಬದಿಯಲ್ಲಿ ಕೆಂಪುಬಣ್ಣದ ಅಂಗಿ ಮತ್ತು ಹಸಿರುಬಣ್ಣದ ಪಂಚೆಯನ್ನು ಉಟ್ಟ ವ್ಯಕ್ತಿಯೊಬ್ಬ ಕೈಯಲ್ಲಿ ಕೋಲನ್ನು ಹಿಡಿದು ತನಗೆ

---

೧೨. ಡಾ. ಸುನಿತಾ ಪಾಟೀಲ : ವಿಜಯ ಸಿಂಧೂರರ ಕಲಾಕೃತಿಗಳ ಒಳನೋಟಗಳು (ಅ.ಪ್ರ.ಪಿಎಚ್.ಡಿ.ಮ.ಪ್ರ), ಪು-೨೨೯

ಅಭಿಮುಖವಾದ ಹಾವನ್ನು ಕೊಲ್ಲಲು ಬಾಗಿ ನಿಂತಿರುವ ದೃಶ್ಯವಿದೆ. ನೋಡುಗರ ಎದುರಿಗೆ ಹಳದಿಬಣ್ಣದ ಅಂಚನ್ನುಳ್ಳ ಕಡುನೀಲಿಬಣ್ಣದ ಸೀರೆಯನ್ನುಟ್ಟ ಎತ್ತರದ ಆಕೃತಿಯ ಸ್ತ್ರೀಯೊಬ್ಬಳು ಬೆನ್ನುಮಾಡಿ ನಿಂತು ಹಾವನ್ನು ಹೊಡೆಯುವ ಸನ್ನಿವೇಶವನ್ನು ನೋಡುತ್ತಿದ್ದಾಳೆ. ಅವಳ ಪಕ್ಕದಲ್ಲಿ ಪುಟ್ಟ ಮಗುವೊಂದು ಈ ಘಟನೆಯನ್ನು ನೋಡುವ ಸನ್ನಿವೇಶವಿದೆ. ಚಿತ್ರದ ಬಲಬದಿಗೆ ಪಂಚೆಯನ್ನು ಉಟ್ಟು ಬರಿಮೈಯಲ್ಲಿ ಜೋಳಿಗೆ, ಕೋಲನ್ನು ಊರಿ ನಿಂತ ವ್ಯಕ್ತಿ ಹಾವನ್ನು ಕೊಲ್ಲುವ ದೃಶ್ಯವನ್ನು ನೋಡುತ್ತಿದ್ದಾನೆ. ಕಟ್ಟೆಯ ಕೆಳಗೆ ಹಸಿರುಬಣ್ಣದ ಅಗಲವಾದ ಎಲೆಗಳಿರುವ ಚಿಕ್ಕ ಗಿಡವೊಂದು ಗಮನಸೆಳೆಯುತ್ತದೆ. ಅದರ ಪಕ್ಕದಲ್ಲಿರುವ ಮುರಿದ ಕಲ್ಲಿನ ಒಂದು ಗುಂಡು ಅತ್ಯಂತ ಸಹಜವಾಗಿ ಮೂಡಿಬಂದಿದೆ. ಕಟ್ಟೆಯ ಮೇಲಿರುವ ಆಲದ ಮರವು ಗಾತ್ರದಲ್ಲಿ ದೊಡ್ಡದೆನ್ನಿಸಿದೆ. ಭಿತ್ತಿಯಲ್ಲಿ ಹಸಿರು ಬಣ್ಣದ ಗಿಡಮರಗಳು, ಬಂಡೆಗಳಿರುವ ಬೆಟ್ಟವೊಂದು ಗೋಚರಿಸುತ್ತಿರುವುದನ್ನು ಅತ್ಯಂತ ನೈಜಶೈಲಿಯಲ್ಲಿ ಚಿತ್ರಿಸಲಾಗಿದೆ. ಸಂಯೋಜನೆಯ ದೃಷ್ಟಿಯಿಂದ ಈ ಕೃತಿಯು ಸಾಮೀಪ್ಯದ ನೆಲೆಯಲ್ಲಿ ಚಿತ್ರಿಸಲ್ಪಟ್ಟಿದೆ. ಮುನ್ನೆಲೆಯ ದೃಶ್ಯಕ್ಕೆ ಪೂರಕವಾಗಿ ಹಿನ್ನೆಲೆಯ ದೃಶ್ಯವನ್ನು ಯಥಾದರ್ಶನದ ನೀತಿಯನ್ವಯ ಪ್ರಬುದ್ಧವಾಗಿ ಚಿತ್ರಿಸಲಾಗಿದೆ. ಆಕೃತಿಗಳು ಪ್ರಮಾಣಬದ್ಧವಾಗಿ ರೂಪುಗೊಂಡಿದ್ದು ಸಹಜವಾಗಿ ಸೂಕ್ತ ಸ್ಥಳಗಳಲ್ಲಿ ಸಂಯೋಜನೆಗೊಂಡಿವೆ. ಅರಳೀಮರದ ಕಾಂಡವನ್ನು ಅತ್ಯಂತ ನೈಜತೆಯಿಂದ ಚಿತ್ರಿಸಿದ ಕಲಾವಿದ ತನ್ನ ಕೌಶಲವನ್ನು ಒರೆಗೆ ಹಚ್ಚಿದ್ದಾನೆ. ಮೃದುವಾದ ವರ್ಣಯೋಜನೆಯನ್ನು ಸಮರ್ಥವಾಗಿ ದುಡಿಸಿಕೊಂಡ ಕಲಾವಿದರು, ವಚನದ ಆಶಯದ ದೃಷ್ಟಿಯಿಂದ ಪ್ರಸ್ತುತ ಕಲಾಕೃತಿ ಸಾರ್ಥಕಗೊಳಿಸಿದ್ದಾರೆ.

ಕಲ್ಲನಾಗರ ಕಂಡರೆ ಹಾಲೆರೆಯೆಂಬರು... – ೫

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಕಲ್ಲನಾಗರಕ್ಕೆ ಹಾಲೆರೆಯುವ ಮತ್ತು ದಿಟದ ನಾಗರವನ್ನು ಕೊಲ್ಲುವ ಎರಡು ದೃಶ್ಯಗಳನ್ನು ಕಲಾವಿದ ಪ್ರತ್ಯೇಕವಾಗಿ ನಿರೂಪಿಸಿದ್ದಾನೆ. ನಿಜದ ಹಾವನ್ನು ಕೊಲ್ಲುವ ಸನ್ನಿವೇಶವನ್ನು ಕೇಂದ್ರೀಕೃತಗೊಳಿಸಲಾಗಿದೆ. ಕಪ್ಪುಬಣ್ಣದ ನಾಗರಹಾವೊಂದು ಹೆಡೆಯನ್ನೆತ್ತಿ ಗಾಬರಿಯಿಂದ ಚಲಿಸುವ ಭಂಗಿಯಲ್ಲಿದೆ. ಅದನ್ನು ಹೊಡೆಯಲು ಬಿಳಿ ವಸ್ತ್ರ ಮತ್ತು ಬಿಳಿಪೇಟವನ್ನು ಧರಿಸಿದ ವ್ಯಕ್ತಿಯೊಬ್ಬ ತನ್ನೆರಡು ಕೈಗಳನ್ನು ಮೇಲಕ್ಕೆತ್ತಿ ಕಲ್ಲನ್ನು ಹಾವಿನ ಮೇಲೆ ಎತ್ತಿಹಾಕಿ ಸಾಯಿಸುವ ಭಂಗಿಯಲ್ಲಿ ನಿಂತಿದ್ದಾನೆ. ಆತನ ಬಲಭಾಗದಲ್ಲಿ ಬ್ರಾಹ್ಮಣನೊಬ್ಬ ಕೆಂಪು ಮೇಲುಹೊದಿಕೆಯನ್ನು ಹೆಗಲಿನಿಂದ ಇಳಿಯಬಿಟ್ಟು, ಕೈಯಲ್ಲಿ ಪುಸ್ತಕವನ್ನು ಹಿಡಿದಿದ್ದಾನೆ. ಚಿತ್ರದ ಬಲಭಾಗದಲ್ಲಿ ಹಣೆಗೆ ವಿಭೂತಿ, ಕೊರಳಲ್ಲಿ ಇಷ್ಟಲಿಂಗ, ಹಳದಿಬಣ್ಣದ ಜರಿಯಿಂದ ಕೂಡಿದ ತೆಳುಗುಲಾಬಿ ಬಣ್ಣದ ರೇಷ್ಮೆಯ ನಿಲುವಂಗಿಯನ್ನು ಧರಿಸಿದ ಬಸವಣ್ಣ ಹಾವನ್ನು ಕೊಲ್ಲುವುದು ಬೇಡ ಎಂದು ನಿರಾಕರಿಸುವ ಭಂಗಿಯಲ್ಲಿ ತನ್ನ ಕೈಯನ್ನೆತ್ತಿ ತುಸು ಬಾಗಿ ನಿಂತಿದ್ದಾನೆ. ಆತನ ಮುಖದಲ್ಲಿ ಆತಂಕವಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ತಲೆಯಲ್ಲಿ ಹೊಳೆಯುವ ಕಿರೀಟ ಮತ್ತು ತೆಳು ಬಿಳಿಮಿಶ್ರಿತ ನೀಲಿ ಬಣ್ಣದ ಪಾರದರ್ಶಕ ಮೇಲುಹೊದಿಕೆ ಅತ್ಯಂತ

ಸಹಜವಾಗಿ ಮೂಡಿಬಂದಿದೆ. ಚಿತ್ರದ ಬಲಬದಿಯಲ್ಲಿ ನೀಲಿ ಮತ್ತು ಕೆಂಪುಬಣ್ಣದ ಸೀರೆಯನ್ನುಟ್ಟ ಸ್ತ್ರೀಯರು ಕಲ್ಲಿನ ನಾಗರಕ್ಕೆ ಹಾಲೆರೆಯುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಮಂದವರ್ಣದಿಂದ ಚಿತ್ರಿಸಿದ ಅವರನ್ನು ದೂರದ ಛಾಯೆಯಲ್ಲಿರಿಸಲಾಗಿದೆ. ಸಾಮೀಪ್ಯದಲ್ಲಿ ಬಸವಣ್ಣನು ಪ್ರಧಾನವಾಗಿ ತೋರಿಸಲ್ಪಟ್ಟಿದ್ದು, ದ್ವಿತೀಯ ಆಶಯವಾಗಿ ಹಾವು ಹೊಡೆಯುವವರನ್ನು ತೋರಿಸಲಾಗಿದೆ. ಚಿತ್ರದ ಉದ್ದೇಶಕ್ಕೆ ಪೂರಕವಾಗಿ ಬಸವಣ್ಣನವರ ಆಕೃತಿ ರೂಪುಗೊಂಡಿಲ್ಲವಾದರೂ, ಒಟ್ಟು ಚಿತ್ರವು ವಚನದ ಸಾರವನ್ನು ಶ್ರೀಸಾಮಾನ್ಯನಿಗೆ ದೃಶ್ಯಾತ್ಮಕವಾಗಿ ಕಟ್ಟಿಕೊಡುತ್ತದೆ.

ಕಲ್ಲನಾಗರ ಕಂಡರೆ ಹಾಲೆರೆಯೆಂಬರು... – ೬

೨೦೦೬ರಲ್ಲಿ ಮುಂಬೈನ ಕಲಾವಿದ ಸುಹಾಸ ಬಾಹುಲ್ಕರ್ ಅವರು ಈ ಕೃತಿಯನ್ನು ರಚಿಸಿದ್ದಾರೆ. ೪೮"x೩೬" ಅಳತೆಯ ಈ ಕೃತಿಯು ಅಕ್ರಲಿಕ್ ವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ನಿಜವಾದ ನಾಗರಹಾವನ್ನು ಕೊಲ್ಲುವ ದೃಶ್ಯವು ಪ್ರಧಾನವಾಗಿದ್ದು, ಕಲ್ಲನಾಗರಕ್ಕೆ ಹಾಲೆರೆಯುವ ದೃಶ್ಯವು ಆನುಷಂಗಿಕವಾಗಿ ಬಂದಿದೆ. ಬಹುಮುಖ್ಯವಾಗಿ ನೇಪಥ್ಯದಲ್ಲಿ ತ್ರಿಶೂಲವನ್ನು ಹಿಡಿದಿರುವ ಶಿವ, ಮತ್ತು ಆತನ ತಲೆಯೊಳಗಿನಿಂದ ಬಾಗಿ ಚಿಮ್ಮುತ್ತಿರುವ ಗಂಗೆ, ಕೊರಳಲ್ಲಿ ನಾಗರಹಾವು ಹೊಂದಿರುವ ಶಿವನನ್ನು ಪಾರದರ್ಶಕವಾಗಿ ಚಿತ್ರಿಸಿ ಶಿವನಿಂದ ಬಸವಣ್ಣ ಬಂದಿದ್ದಾನೆ ಎಂಬ ಕಲ್ಪನೆಯನ್ನು ಕಲಾವಿದ ಇಲ್ಲಿ ಸುಲಭವಾಗಿ ಸಾಕಾರಗೊಳಿಸಿದ್ದಾನೆ.

ಚಿತ್ರದಲ್ಲಿ ಬಂದಿರುವ ಸ್ತ್ರೀಯನ್ನು ಹೊರತುಪಡಿಸಿದರೆ, ಐದು ಜನರ ಆಕೃತಿಗಳಲ್ಲಿ ಅತ್ಯಂತ ಗಾಬರಿ, ಆತಂಕಗಳ ಭಾವನೆ ದಟ್ಟವಾಗಿ ಕಂಡುಬರುತ್ತದೆ. ವರ್ಣಗಳ ಸಂಯೋಜನೆ ಮತ್ತು ಚಿತ್ರದ ಅಂತಿಮ ಸ್ಪರ್ಶವು ಚೆನ್ನಾಗಿ ಮೂಡಿಬಂದಿದೆ. ಮಟ್ಟಸವಾದ ತಲೆಗೂದಲು, ವಿಭೂತಿ, ಹಣೆಯಲ್ಲಿ ಬೊಟ್ಟು, ಕಿರುಮೀಸೆ, ಬಿಳಿಬಣ್ಣದ ತುಂಬುತೋಳಿನ ನಿಲುವಂಗಿ, ಸೊಂಟಕ್ಕೆ ಸುತ್ತಿದ ಲಘು ಕಾವಿಬಣ್ಣದ ವಸ್ತ್ರ ಧರಿಸಿದ ಬಸವಣ್ಣನ ಆಕೃತಿ ಆಕರ್ಷಕವಾಗಿದೆ. ತನ್ನ ಮುಂದೆ ಚಲಿಸುತ್ತಿರುವ ಹಾವನ್ನು ಕೊಲ್ಲಲು ಉದ್ದವಾದ ಈಟಿಯೊಂದನ್ನು ಹಿಡಿದು ಇನ್ನೇನು ಕೊಲ್ಲಬೇಕೆಂದು ಹೊರಟಿರುವವನ ಈಟಿಯನ್ನು ಬಸವಣ್ಣ ತನ್ನ ಎಡಗೈಯಲ್ಲಿ ಹಿಡಿದು ತಡೆದಿರುವ ದೃಶ್ಯವು ಅತ್ಯಂತ ಸಹಜವಾಗಿದೆ. ಕೊಲ್ಲುವವನ ಮುಖದಲ್ಲಿ ಬಂದಿರುವ ಆಕ್ರೋಶ, ರೋಷ, ಭಯವನ್ನು ಕಲಾವಿದ ನೈಜವೆಂಬಂತೆ ಚಿತ್ರಿಸಿದ್ದಾನೆ. ಬಸವಣ್ಣನ ಕಾಲಬಳಿಯಲ್ಲಿರುವ ಹಳದಿ ಪೇಟವನ್ನು ಧರಿಸಿದ ವ್ಯಕ್ತಿ ಹಾವನ್ನು ಕೊಲ್ಲು ಎಂದು ಸೂಚಿಸಲು ತನ್ನ ಬಲಗೈಯನ್ನು ಹಾವಿನೆಡೆಗೆ ಮುಂದೆ ಚಾಚಿದ್ದಾನೆ. ನೀಲಿಬಣ್ಣದ ನಿಲುವಂಗಿಯನ್ನು ಧರಿಸಿದ ವ್ಯಕ್ತಿಯು ಕೈಯಲ್ಲಿ ಕೋಲನ್ನು ಹಿಡಿದಿರುವನಾದರೂ ಭಯದಿಂದ ಹಿಂದೆ ಸರಿಯುವ ಹಂತದಲ್ಲಿದ್ದಾನೆ. ಆತನ ಪಕ್ಕದಲ್ಲಿ ಬರಿಯ ಮೈಯ ಕೇಸರಿಬಣ್ಣದ ರುಮಾಲು ಧರಿಸಿರುವ ವ್ಯಕ್ತಿಯ ಬೆನ್ನು ಮಾತ್ರ ನೋಡುಗರಿಗೆ ಕಂಡರೂ, ಆತ ನಿಂತಿರುವ ಭಂಗಿಯು ಹಾವನ್ನು ತಡೆಯುವ ಭಾವನೆಯನ್ನು ಅನಾಯಾಸವಾಗಿ ಪ್ರಕಟಿಸುತ್ತದೆ. ಬಸವಣ್ಣನ ಬಲಭಾಗದಲ್ಲಿ ಕಲ್ಲ ನಾಗರಕ್ಕೆ ಹಾಲೆರೆಯಲು ಕೆಂಪುಬಣ್ಣದ

ಸೀರೆಯನ್ನು ಧರಿಸಿದ ಸ್ತ್ರೀಯೊಬ್ಬಳು ನಿಂತಿದ್ದಾಳೆ. ಹಾಲೆರೆಯುವ ಸನ್ನಿವೇಶಕ್ಕೆ ಕಲಾವಿದ ಹೆಚ್ಚು ಪ್ರಾಮುಖ್ಯತೆ ನೀಡಿಲ್ಲ.

ಗುಣಾತ್ಮಕತೆಯ ದೃಷ್ಟಿಯಿಂದ ಈ ಕಲಾಕೃತಿ ಮಹತ್ವದ್ದು. ಭೂಲೋಕದಲ್ಲಿ ನಡೆಯುವ ಅನಾಚಾರಗಳನ್ನು ತಡೆಯಲೆಂದು ಧರೆಗಿಳಿದು ಬಂದಂತೆ ಬಸವಣ್ಣನವರನ್ನು ಚಿತ್ರಿಸಲಾಗಿದೆ. ಒಟ್ಟು ಸ್ಥಳಾವಕಾಶದ ಮುಕ್ಕಾಲುಪಾಲು ಮಾತ್ರ ಆಕೃತಿಗಳನ್ನು ಸಂಯೋಜಿಸಿದ ಕಲಾವಿದ ವಚನದ ಸಾರವನ್ನು ದೃಶ್ಯಾತ್ಮಕವಾಗಿ ಪ್ರತಿಬಿಂಬಿಸಲು ತನ್ನ ಚಿತ್ತವನ್ನು ಕೇಂದ್ರೀಕರಿಸಿದ್ದಾನೆ. ತಿಳಿವಳಿಕೆಯಿಲ್ಲದ ಶ್ರಮಿಕ ವರ್ಗವೊಂದು ಹಾವನ್ನು ಹೊಡೆದು ಸಾಯಿಸುವಂತೆ, ಬಸವಣ್ಣ ಅದನ್ನು ತಡೆಯಲು ಬಂದಂತೆ ಹೀಗೆ ಚಿತ್ರದ ಮುಖ್ಯಾಶಯವೊಂದನ್ನು ತ್ರಿಭುಜಾಕೃತಿಯ ಸಂಯೋಜನೆಯ ಮೂಲಕ ತೋರ್ಪಡಿಸಲಾಗಿದೆ. ಮೃದುವಾದ ಹಾಗೂ ಮಿತವಾದ ವರ್ಣಯೋಜನೆಯ ಸಹ ಈ ಚಿತ್ರದ ಆಂತರಿಕ ಮೌಲಿಕತೆಯನ್ನು ಹೆಚ್ಚಿಸಿದರೆ, ಯಥಾದರ್ಶನದ ನೀತಿಯನ್ವಯ ಚಿತ್ರದಲ್ಲಿ ಆಕೃತಿಗಳು ವಿನ್ಯಾಸಗಳು ರಚನೆಗೊಂಡು ನೋಡುಗರಿಗೆ ಆಪ್ಯಾಯಮಾನವೆನಿಸುತ್ತವೆ.

ಕಲ್ಲನಾಗರ ಕಂಡರೆ ಹಾಲೆರೆಯೆಂಬರು... – ೭

ಕಲಾವಿದ ಜಿ. ಕೆ. ಶಿವಣ್ಣ ಅವರ ಈ ಚಿತ್ರವನ್ನು "ವಚನ ಚಿತ್ತಾರ"[೧೩] ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. A4 (೮.೧/೩" x ೧೧.೧/೩") ಕಾಗದದಲ್ಲಿ ಈ ರೇಖಾಚಿತ್ರವನ್ನು ರಚಿಸಲಾಗಿದೆ. ಈ ರೇಖಾಚಿತ್ರದಲ್ಲಿ ಮೇಲ್ಭಾಗದಿಂದ ಕೆಳಭಾಗದತ್ತ ಚಿತ್ರಗಳನ್ನು ರಚಿಸಿದ್ದು, ಮರದ ಕೆಳಗಡೆ ನಾಲ್ಕು ನಾಗಕಲ್ಲುಗಳ ಮಧ್ಯಭಾಗದಲ್ಲಿ ಎತ್ತರವಾದ ನಾಗಕಲ್ಲು ಇದ್ದು, ಈ ನಾಗನಿಗೆ ಮಹಿಳೆಯೊಬ್ಬಳು ಹಾಲನ್ನೆರೆಯುತ್ತಿದ್ದಾಳೆ. ಮಹಿಳೆ ಚಿತ್ರ ಪೂರ್ಣಪ್ರಮಾಣದಲ್ಲಿ ಇಲ್ಲದೆ ಸಾಂದರ್ಭಿಕ ಮಹಿಳೆ ಚಿತ್ರವಿದೆ. ಆ ಸ್ತ್ರೀಯ ಕೆಳಭಾಗದಲ್ಲಿ ಪುರುಷ ತನ್ನ ಕೈಯಲ್ಲಿ ಕೋಲನ್ನು ಹಿಡಿದು, ಜೀವಂತ ಹೆಡೆಯೆತ್ತಿ ನಿಂತು ಆ ಯುವಕನನ್ನೇ ತದೇಕಚಿತ್ತದಿಂದ ದೃಷ್ಟಿಸುತ್ತಾ, ತನ್ನ ಪ್ರಾಣವನ್ನುಳಿಸಲು ತನ್ನೆಲ್ಲ ದೇಹವನ್ನು ಮುದ್ದೆಯಾಗಿಸಿಕೊಂಡು ನೋಡುತ್ತದೆ. ಅದರ ಕೆಳಗಡೆ ಜಂಗಮರು ಭಿಕ್ಷೆಗೆ ಬಂದಿದ್ದು, ಆವರಿಗೆ ಏನನ್ನು ನೀಡದೆ ಹೊರಹಾಕುವ ದೃಶ್ಯವಿದೆ. ಅದರ ಕೆಳಭಾಗದಲ್ಲಿ ಲಿಂಗವೊಂದಿದ್ದು, ಉಣ್ಣದ ಲಿಂಗಕ್ಕೆ ಸ್ತ್ರೀಯೊಬ್ಬಳು ಮಂಡಿಹಾಕಿ ಎಡೆ ಹಿಡಿದು ನಮಸ್ಕರಿಸುವ ದೃಶ್ಯವಿದೆ.

ಕಲ್ಲನಾಗರ ಕಂಡರೆ ಹಾಲೆರೆಯೆಂಬರು... – ೮

ಕಲಬುರ್ಗಿಯ ಡಾ. ಎ. ಎಸ್. ಪಾಟೀಲರವರು A4 (೮.೧/೩" x ೧೧.೧/೩") ಅಳತೆಯ ಕಾಗದದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಸಂಗ್ರಹದಲ್ಲಿದೆ. ಈ ಚಿತ್ರದಲ್ಲಿ ಸ್ತ್ರೀಯೊಬ್ಬಳ ಅರ್ಧ ದೇಹಭಾಗದ ಚಿತ್ರ ಮತ್ತು ಪುರುಷನ ತಲೆ ಈ ಎರಡೂ ಆಕೃತಿಗಳು ವಿರುದ್ಧ(opposite) ದಿಕ್ಕಿನಲ್ಲಿ ಸಂಯೋಜಿಸಿದ್ದು, ಸ್ತ್ರೀಯ ಮುಂದೆ ಹಣ್ಣುಹಂಪಲು, ಮೇಲೆ ತನ್ನ ಎರಡೂ ಕೈಗಳಿಂದ ನಾಗರಹಾವಿನ ಶಿಲೆಗೆ ಹಾಲೆರೆಯುವಂತೆ, ಪುರುಷನು ಜೀವಂತ ಹಾವಿಗೆ ಕೋಲಿನ

---

೧೩. ಜಿ. ಕೆ. ಶಿವಣ್ಣ : ವಚನ ಚಿತ್ತಾರ, ಓನಿಯರ್ಸ್ ಪ್ರಕಾಶನ, ಬೆಂಗಳೂರು. ೨೦೧೧

ಮೂಲಕ ಹೊಡೆಯುತ್ತಿರುವಂತೆ ಚಿತ್ರಿಸಲಾಗಿದೆ. ಚಿತ್ರದ ಎಡ ಮೇಲ್ಭಾಗದಲ್ಲಿ ದೇವಾಲಯದ ಮಂಟಪವನ್ನು ರಚಿಸಲಾಗಿದೆ. ನಾಗರ ಕಲ್ಲಿನ ಮುಂದೆ ದೀಪವನ್ನು ರಚಿಸಲಾಗಿದೆ. ಈ ಚಿತ್ರದಲ್ಲಿ ವಿಶೇಷತೆಯೆಂದರೆ ನಿರ್ಜೀವ ವಸ್ತುಗಳನ್ನು ಮಾತ್ರ ಪೂರ್ಣಪ್ರಮಾಣದಲ್ಲಿ ರಚಿಸಿದ್ದು, ಹಾವನ್ನು ಹೊರತುಪಡಿಸಿ ಉಳಿದಂತೆ ಜೀವಂತ ವಸ್ತುಗಳು ಯಾವುದೇ ಪೂರ್ಣ ಪ್ರಮಾಣದಲ್ಲಿ ಚಿತ್ರ ರಚಿಸಲಿಲ್ಲ. ಒಟ್ಟಾರೆ ವಚನಕ್ಕೆ ಸಂಬಂಧಪಟ್ಟಂತೆ ಪ್ರಾತಿನಿಧಿಕವಾಗಿ ಇಲ್ಲಿ ಆಕೃತಿಗಳನ್ನು ಸಂಯೋಜಿಸಲಾಗಿದೆ.

೩.೭. ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯ.... –೧

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ

ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ

ಒಮ್ಮನವಾದಡೆ ಒಡನೆ ನುಡಿವನು

ಇಮ್ಮನವಾದಡೆ ನುಡಿಯನು

ಕಾಣಿಯ ಸೋಲ,ಅರ್ಧಕಾಣಿಯ ಗೆಲ್ಲ

ಜಾಣ ನೋಡವ್ವಾ, ನಮ್ಮ ಕೂಡಲಸಂಗಮದೇವ [೧೪]

ವಚನದ ಸಾರಾಂಶ : ಲೋಕವೆಂಬುದೊಂದು ಅಂಗಡಿ. ಈ ಅಂಗಡಿಯ ಮಾಲಿಕ ಸರ್ವಜ್ಞಾನಿಯಾದ ಪರಮಾತ್ಮ. ಈ ಮಹಾದೇವಶೆಟ್ಟಿಯು ಏಕನಿಷ್ಠೆಯ, ಒಮ್ಮನದ ಸದ್ಭಕ್ತ, ಸದಾಚಾರಿಗಳೊಂದಿಗೆ ಒಡನೆ ನುಡಿವನು. ಚಂಚಲ ಮನೋಭಾವದವರೊಂದಿಗೆ ಮಹಾದೇವಶೆಟ್ಟಿ ಮಾತನಾಡದೇ, ಮೌನ ವಹಿಸುವನು. ಕೂಡಲಸಂಗಮನಾಥನು ಭಕ್ತಿ, ಸತ್ಪಥದ ತಕ್ಕಡಿಯಲ್ಲಿ ಭಕ್ತರ ನಿಷ್ಠೆಯನ್ನು ಅಳೆದು ಫಲನೀಡುವ ಮಹಾಮೇಧಾವಿ. ಉತ್ತರ ಕರ್ನಾಟಕದ ಹಿರಿಯ ಕಲಾವಿದರುಗಳಲ್ಲೊಬ್ಬರಾದ ಶ್ರೀ ಎಂ. ಆರ್. ಬಾಳೀಕಾಯಿಯವರು ೪೮"x೩೬" ಅಳತೆಯ ತೈಲವರ್ಣ ಮಾಧ್ಯಮದಲ್ಲಿ ಚಿತ್ರಿಸಿದ್ದಾರೆ. ಪ್ರಸ್ತುತ ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ಅವರ ಮನೆಯಲ್ಲಿ ಈ ಕಲಾಕೃತಿ ಸಂಗ್ರಹಗೊಂಡಿದೆ.

ಚಿತ್ರದ ವಿಶ್ಲೇಷಣೆ : ಈ ವಚನದಲ್ಲಿ ಬಸವಣ್ಣ, ಶಿವ ಅಥವಾ ಕೂಡಲಸಂಗಮದೇವನನ್ನು ಧರಣಿಯ ಜಾಣ ವ್ಯಾಪಾರಿ ಎಂಬ ರೂಪಕ ನೀಡಿದ್ದಾರೆ. ಆದರೆ ಪ್ರಸ್ತುತ ಚಿತ್ರದಲ್ಲಿ ಕಲಾವಿದ ಶಿವನ ಅಪರಾವತಾರವಾದ ಬಸವಣ್ಣನೆ ಈ ಭೂಲೋಕದ ವ್ಯಾಪಾರಿ ಎಂಬಂತೆ ಬಿಂಬಿಸಿರುವುದು ವಿಶೇಷವಾಗಿದೆ. ತೈಲವರ್ಣದ ಈ ಚಿತ್ರದಲ್ಲಿ ಕಲಾವಿದ ತಿಳಿಗೆಂಪು, ನೀಲಿ, ಬಿಳಿ, ಹಸಿರು ಮುಂತಾದ ಬಣ್ಣಗಳನ್ನು ಬಳಸಿದ್ದರೂ ಅವು ಕಣ್ಣಿಗೆ ರಾಚುವಂತಿಲ್ಲ. ವಿಶಾಲವಾದ ಅಂಗಡಿಯಲ್ಲಿ ಬಸವಣ್ಣ ಬಿಳಿಬಣ್ಣದ ಶುಭ್ರವಾದ ವಸ್ತ್ರಗಳು, ಕೊರಳಲ್ಲಿ ಇಷ್ಟಲಿಂಗ, ರುದ್ರಾಕ್ಷಿ ಮಾಲೆಗಳನ್ನು ಧರಿಸಿ, ಕಟ್ಟೆಯ ಕೆಳಗೆ ನಿಂತಿರುವ ಶರಣ ಗ್ರಾಹಕನನ್ನು ತದೇಕಚಿತ್ತದಿಂದ ನೋಡುತ್ತಿರುವ ಸನ್ನಿವೇಶವಿದೆ. ಬಸವಣ್ಣನ ಕಾಲಬಳಿ ಕೆಂಪು, ನೀಲಿ, ಹಳದಿ ಬಣ್ಣದ ಹೂವುಗಳ ಒಂದು ಪುಟ್ಟಿಯಿದೆ. ಅದರ ಪಕ್ಕದಲ್ಲಿ ತಕ್ಕಡಿಯಿದೆ. ಬಸವಣ್ಣನ ಬಲಬದಿಯಲ್ಲಿ

೧೪. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೬೨), ಪು–೧೮

ತಿಳಿಗುಲಾಬಿಬಣ್ಣದ ತುಂಬುತೋಳಿನ ನಿಲುವಂಗಿ, ಹಣೆಯಲ್ಲಿ ವಿಭೂತಿ, ಕಿವಿಯಲ್ಲಿ ರುದ್ರಾಕ್ಷಿಯ ಓಲೆಯನ್ನು ಧರಿಸಿ, ಅಲಂಕೃತವಾದ ಒಂದು ಚೀಲವನ್ನು ಹಿಡಿದಿರುವ ಶರಣನಂತಿರುವ ಗ್ರಾಹಕ ತಲೆಬಾಗಿಸಿ ತನ್ನ ಕೈಚೀಲದಲ್ಲಿರುವ ವಸ್ತುಗಳು ಸರಿಯಾಗಿವೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸುವ ರೀತಿಯಲ್ಲಿ ನಿಂತಿದ್ದಾನೆ. ಈತ ವ್ಯಾಪಾರದ ಅಂದರೆ ಭಕ್ತಿಯ ನಿಯಮಗಳನ್ನು ಒಪ್ಪಿಕೊಂಡಿರುವಂತೆ ಕಾಣುತ್ತಿದೆ. ಆತನ ಎದುರಿಗೆ ಮತ್ತೊಬ್ಬ ಕಿರುಮೀಸೆಯ, ಅಚ್ಚುಕಟ್ಟಾದ ನಿಲುವಂಗಿಯನ್ನು ಧರಿಸಿದ ವ್ಯಕ್ತಿಯೊಬ್ಬ ತಲೆಯನ್ನು ತುಸು ಮೇಲಕ್ಕೆತ್ತಿ ಆಕ್ಷೇಪಣೆಯ ಭಂಗಿಯಲ್ಲಿ ನಿಂತಿದ್ದಾನೆ. ಬಹುಶಃ ಈತ ಭವಿ ಎಂದು ಸೂಚಿಸಲು ಕಲಾವಿದ ಪ್ರಯತ್ನಿಸಿರಬೇಕು.

ಬಸವಣ್ಣನ ಹಿಂದೆ ಹಳದಿಬಣ್ಣದ ಪ್ರಭಾವಳಿ, ನೀಲಿ, ಹಳದಿಬಣ್ಣದ ದುಂಡಾಕಾರದ ಪೃಥ್ವಿಯ ಚಿತ್ರವಿದ್ದು, ಹಿನ್ನೆಲೆಯ ಕಪಾಟುಗಳಲ್ಲಿ ಸಾಮಗ್ರಿಗಳಿವೆ ಎಂಬುದನ್ನು ಸೂಚ್ಯವಾಗಿಸಿದ್ದಾನೆ. ವರ್ಣಸಂಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗಿದ್ದು, ತ್ರಿಭುಜಾಕೃತಿಯಲ್ಲಿ ಆಕೃತಿಗಳನ್ನು ಸಂಯೋಜಿಸಲಾಗಿದೆ. ಬಸವಣ್ಣನವರ ಆಕೃತಿಯನ್ನು ಚಲನಶೀಲವಾಗಿಸುವ ಹಿನ್ನೆಲೆಯಲ್ಲಿ, ಮಣೆಯ ಮೇಲೆ ಕೂರಿಸಿ, ಕಾಲುಗಳನ್ನು ಅಗಲಗೊಳಿಸಿದಂತೆ ಚಿತ್ರಿಸಲಾಗಿದೆ. ಅವರ ದೇಹಾಕೃತಿಯ ರಚನೆ, ಉಡುಪಿನ ರಚನೆ ಹೀಗೆ ಉತ್ತಮ ಉಪಚಾರವನ್ನೇ ಈ ಕಲಾಕೃತಿ ಹೊಂದಿದೆ. ಚಿತ್ರದ ಎಡಪಾರ್ಶ್ವದಲ್ಲಿ ಕಾಣುವ ಪಿಕಾಕ್ ಬ್ಲೂ ವರ್ಣವೊಂದನ್ನು ಹೊರತುಪಡಿಸಿದರೆ ಇತರೆ ವರ್ಣಮೇಳ ಮೃದು ಸಂರಚನೆಯನ್ನು ಹೊಂದಿದೆ. ಅಂಗಡಿಯಲ್ಲಿ ಕಾಣಬರುವ ತಕ್ಕಡಿ, ಪುಟ್ಟಿ ಹಾಗೂ ಸಾಮಗ್ರಿಗಳನ್ನು ನೈಜ ಶೈಲಿಯಲ್ಲಿ ಪಕ್ವಯುತವಾಗಿ ರಚಿಸಲಾಗಿದೆ. ಭಾವಪ್ರದವಾಗಿರುವ ಇಲ್ಲಿನ ಆಕೃತಿಗಳಿಂದ ಈ ಚಿತ್ರಕೃತಿಗೆ ಶರಣಸಂಪನ್ನತೆಯೊದಗಿದೆ.

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯ.... –೨

ನಾಡೋಜ ಡಾ. ಜೆ.ಎಸ್. ಖಂಡೇರಾವ್ ಅವರು ತೈಲವರ್ಣದಿಂದ ಈ ಚಿತ್ರವನ್ನು ರಚಿಸಿದ್ದಾರೆ. ಮಧ್ಯದಲ್ಲಿ ಬಸವಣ್ಣ ಚಿತ್ರವು ಬಾಹುಕರಾಗಿ ಮುಖಕ್ಕೆ ಕೆಂಪು ಮಿಶ್ರಿತ ಬಣ್ಣವು ಲೇಪಿಸಿ ಉದ್ದನೆಯ ಕೂದಲು ಕೊರಳಲ್ಲಿ ಲಿಂಗ ರುದ್ರಾಕ್ಷಿ ಧರಿಸಿ ಆಕಾಶದತ್ತ ನೋಡುವ ದೃಶ್ಯ ಎದ್ದು ಕಾಣುತ್ತದೆ. ಆಕಾಶದ ವರ್ಣಗಳು ಕಾರ್ಮೋಡದಂತೆ ಕಪ್ಪುಬಣ್ಣದಿಂದ ಕಂದುಬಣ್ಣದ ಮಿಶ್ರಿತ ಮೋಡ ಮಧ್ಯದಲ್ಲಿ ತಿಳಿ ನೀಲಿಯ ಆಕಾಶವು ಬಣ್ಣದ ಮುಂಭಾಗದಲ್ಲಿ ಋಷಿಮುನಿಗಳು ಬಲಗೈಯಲ್ಲಿ ವಚನದ ಕಟ್ಟು ಹಿಡಿದು ಋಷಿಮುನಿಗಳತ್ತ ಕೈಮುಗಿಯುವ ಭಂಗಿಯಲ್ಲಿ ಬಿಳಿ ಬಣ್ಣ ಮಿಶ್ರಿತ ಶಾಲು ಧರಿಸಿದ ಚಿತ್ರವು ಬಸವಣ್ಣನವರನ್ನು ಹೋಲುತ್ತದೆ. ಕೆಳಭಾಗದಲ್ಲಿ ವ್ಯಾಪಾರಿ ತಕ್ಕಡಿಯ ಆಕಾರದಂತಿರುವ ಚಿತ್ರವು ಒಂದು ಕುಂಬಾರ ಗಡಿಗಿಯ ಮಾಡುವ ದೃಶ್ಯ ಇನ್ನೊಂದಡೆ ವಚನ ಪ್ರತಿಗಳನ್ನು ತೂಗುವ ಚಿತ್ರ ಇವು ಎರಡನ್ನೂ ಹೊತ್ತು ನಿಲುವ ನಡುಗಂಬವು ಋಷಿಮುನಿಗಳ ಕೈ ಬೆತ್ತದಂತೆ ಕಂಡುಬರುತ್ತದೆ. ಒಂದೆಡೆ ಹಗ್ಗ ನೇಯುವ ಚಿತ್ರ ಇನ್ನೊಂದೆಡೆ ವಚನ ಗ್ರಂಥದ ಮೇಲೆ ದೀಪದ ಬೆಳಕಿನಲ್ಲಿ ಪ್ರಕಾಶಗೊಳ್ಳುತ್ತಿರುವ ಲಿಂಗದ ಚಿತ್ರ ರಚಿಸಲಾಗಿದೆ. ಒಟ್ಟು ಈ ಚಿತ್ರದ ಸಂಯೋಜನೆಯು ಕಾಯಕ ಮತ್ತು ಆಧ್ಯಾತ್ಮಿಕತೆ ಎತ್ತಿ ತೋರಿಸುವ ಚಿತ್ರ ಇದಾಗಿದೆ.

೩.೮. ಸೆಗಣಿಯ ಬೆನಕಂಗೆ ಸಂಪಿಗೆಯರಳಿ ಪೂಜಿಸಿದಡೆ....

ಸೆಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದಡೆ
ರಂಜನೆಹುದಲ್ಲದೆ ಅದರ ಗಂಜಳ ಬಿಡದಣ್ಣಾ,
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟಡೆ
ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವ[೧೫]

ವಚನದ ಸಾರಾಂಶ : ಶಿವದೀಕ್ಷೆ ಶಿವಾರಾಧಕರ ಪಾಲಾಗಬೇಕೇ ವಿನಾ ಅನ್ಯರಿಗಲ್ಲ. ಅಯೋಗ್ಯನಿಗೆ ಶಿವದೀಕ್ಷೆ ಕೊಟ್ಟರೆ ಆತ ಸದ್ಭಕ್ತನಾಗಲು ಸಾಧ್ಯವಿಲ್ಲ. ಅಯೋಗ್ಯ ನಿಜ ಭಕ್ತಿಯನ್ನು ಮೆರೆಯನು. ಆತ ಭಕ್ತನೇ ಅಲ್ಲವೆಂಬ ವಿಚಾರವನ್ನು ಬಸವಣ್ಣನವರು ಸೆಗಣಿಯ ಬೆನಕ ಹಾಗೂ ಮಣ್ಣಿನ ಮೂರ್ತಿಯ ಪ್ರತೀಕಗಳ ಮೂಲಕ ಬಿಂಬಿಸಿದ್ದಾರೆ. ಸೆಗಣಿಯಿಂದ ಮಾಡಿದ ಬೆನಕನನ್ನು ಸುವಾಸಿತ ಸಂಪಿಗೆ ಹೂವುಗಳಿಂದ ಪೂಜಿಸಿದರೆ ಸೆಗಣಿಯ ವಾಸನೆ ಕಡಿಮೆಯಾಗುವದೇ? ಮಣ್ಣಿನ ಬೊಂಬೆಯನ್ನು ಮಾಡಿ ನೀರಿನಿಂದ ತೊಳೆದರೆ ಬರೀ ರಾಡಿಯಾದೀತಲ್ಲದೇ ದೈವತ್ವ ಬಾರದು. ಜಗತ್ತಿನಲ್ಲಿ ಹೀನರಿಗೆ ಲಿಂಗಧಾರಣೆ ಮಾಡಿದರೆ ಶಿವಭಕ್ತನೆನಿಸಬಹುದೇ? ಎನ್ನುವರು. ಕಲಾವಿದ ಶ್ರೀ ಮನೋಹರ ಅವರ ೪೮"x೩೬" ಅಳತೆಯ ತೈಲವರ್ಣ ಮಾಧ್ಯಮದ ಈ ಕಲಾಕೃತಿಯು ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ.

ಚಿತ್ರದ ವಿಶ್ಲೇಷಣೆ : ಈ ಚಿತ್ರವು ತೈಲವರ್ಣ ಪರಂಪರೆಗೆ ಸೇರಿದ್ದು, ಕಲಾವಿದ ಇಲ್ಲಿ ಅತ್ಯಂತ ಕಡಿಮೆ ಬಣ್ಣಗಳನ್ನು ಬಳಸಿ ಕಲಾಕೃತಿ ರೂಪಿಸಿದ್ದಾನೆ. ಹಳದಿ, ಹಸಿರು, ಬಿಳಿ, ಮತ್ತು ಕಪ್ಪು ಬಣ್ಣಗಳ ಸಂಯೋಜನೆ ಆಕರ್ಷಕವಾಗಿದೆ. ಈ ವಚನದ ಆಶಯವನ್ನು ಚಿತ್ರಪರ್ಯದಲ್ಲಿ ಒಡಮೂಡಿಸುವುದು ತುಸು ಕಷ್ಟವೆಂದು ತೋರುತ್ತದೆ. ಆದರೂ ಕಲಾವಿದ ತನ್ನ ಮಿತಿಯಲ್ಲಿ ಪ್ರಯತ್ನಿಸಿದ್ದಾನೆ. ಮಣ್ಣಿನ ಗಣಪವಿದಾದ್ದರಿಂದ ವಿಶಾಲವಾದ ಕಿವಿಗಳು, ಕಣ್ಣುಗಳು, ತಲೆಯ ಮೇಲಿನ ಕಿರೀಟ, ಕೈಯಲ್ಲಿರುವ ಕಡುಬು ಇವುಗಳು ಕರಗಿಹೋಗಿರುವಂತೆ ಚಿತ್ರಿಸಲಾಗಿದೆ. ತಿಳಿಹಸಿರು ಮತ್ತು ತಿಳಿಹಳದಿ ಬಣ್ಣಗಳಿಂದ ರೂಪಿತವಾಗಿರುವ ಗಣೇಶನ ಮೂರ್ತಿಯ ಹಣೆಯಲ್ಲಿ ಮಾತ್ರ ಗಾಢ ಕೆಂಪುವರ್ಣದ ಬೊಟ್ಟು ಎದ್ದು ತೋರುತ್ತಿದೆ. ಡೊಳ್ಳುಹೊಟ್ಟೆಯು ಗಣೇಶನ ಒಟ್ಟು ಆಕೃತಿಯ ಪ್ರಮಾಣಕ್ಕೆ ತುಸು ಅಗಲವಾಗಿರುವಂತೆ ತೋರುತ್ತದೆ. ಆತನ ಬಲಬದಿಗೆ ನೋಡುಗರಿಗೆ ಪಾರ್ಶ್ವನೋಟಕ್ಕೆ ದೊರಕುವ ಸ್ತ್ರೀಯೊಬ್ಬಳನ್ನು ಕಲಾವಿದ ಅತ್ಯಂತ ಸುಂದರವಾಗಿ ಚಿತ್ರಿಸಿದ್ದಾನೆ. ಓರೆಮುಖದಲ್ಲಿ ಕಂಡುಬರುವ ಸ್ಪಷ್ಟವಾದ ಕಣ್ಣು, ಮೂಗು, ಮೂಗುತಿ, ಕೆಂಪುವರ್ಣದ ತುಟಿಗಳು, ಕೆಂಪುಬಣ್ಣದ ಸಿಂಧೂರ, ಬೊಟ್ಟು, ಮಲ್ಲಿಗೆ ಹೂವು, ಕೈಯಲ್ಲಿ ಹಿಡಿದಿರುವ ಹೂವು–ಹಣ್ಣುಗಳು ಉತ್ತಮವಾಗಿ ಮೂಡಿಬಂದಿವೆ.

ಸಂಯೋಜನೆ, ಮೈವಳಿಕೆ, ವರ್ಣಯೋಜನೆಯ ದೃಷ್ಟಿಯಿಂದ ಈ ಕಲಾಕೃತಿ ಮಹತ್ವದ್ದಾಗುತ್ತದೆ. ಸ್ಥಳಾವಕಾಶವನ್ನು ಎರಡು ಭಾಗವನ್ನಾಗಿ ವಿಂಗಡಿಸಿಕೊಂಡು ಎಡಪಾರ್ಶ್ವದಲ್ಲಿ ಪೂಜಾನಿರತ ಸ್ತ್ರೀ

೧೫. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೬೩೮), ಪು–೧೬೦

ಆಕೃತಿ, ಬಲಪಾರ್ಶ್ವದಲ್ಲಿ ಸೂಚ್ಯವಾದ ಗಣಪನ ಆಕೃತಿ ಮೂಡಿಬಂದಿರುವ ಸಮತೋಲಿತ ಸಂಯೋಜನೆ ಇದಾಗಿದೆ. ಕಲಾಕೃತಿಯ ಮೈವಳಿಕೆಮಯವಾಗಿದೆ. ಒರಟಾದ ಕುಂಚಗಳನ್ನು ತೆಗೆದುಕೊಂಡು ವರ್ಣ ಹಸಿ ಇರುವಾಗಲೇ ಅಸ್ತವ್ಯಸ್ತವಾಗಿ ಕುಂಚದ ಬೀಸುಗಳನ್ನು ಕ್ಯಾನ್ವಾಸ್ ಮೇಲೆ ಮೂಡಿಸಿದರೆ ಈ ಬಗೆಯ ಮೈವಳಿಕೆ ಮೂಡುತ್ತದೆ. ಇಲ್ಲಿನ ಮೈವಳಿಕೆ ಆಕೃತಿಗಳಲ್ಲೂ ಮತ್ತು ಹಿನ್ನೆಲೆಯಲ್ಲೂ ಮೂಡಿರುವುದರಿಂದ ವಿಶಿಷ್ಟವಾದ ಅನುಭವವನ್ನು ನೀಡುತ್ತದೆ ಈ ಚಿತ್ರ. ಕಲಾಕೃತಿಯೊಂದು ಯಶಸ್ಸನ್ನು ಕಾಣಬೇಕಾದರೆ ಅಲ್ಲಿ ವರ್ಣಯೋಜನೆಯೂ ಅಷ್ಟೇ ಮುಖ್ಯ. ಇಲ್ಲಿ ಅವಾಸ್ತವ ವರ್ಣಗಳದ್ದೇ ಪ್ರಾಬಲ್ಯ. ಹಳದಿವರ್ಣದ ಸರಣಿಯಲ್ಲಿನ ವರ್ಣಗಳನ್ನು ಅತ್ಯಂತ ಸಮರ್ಥವಾಗಿ, ಸಮತೋಲಿತವಾಗಿ ದುಡಿಸಿ–ಕೊಳ್ಳಲಾಗಿದೆ. ಸ್ತ್ರೀ ಆಕೃತಿ ನೈಜ (ವರ್ಣಯೋಜನೆಯನ್ನು ಹೊರತುಪಡಿಸಿ) ಬಗೆಯಲ್ಲಿ ಗಣಪ ಆಧುನಿಕ ನೆಲೆಯಲ್ಲಿ ಚಿತ್ರಿತಗೊಂಡಿರುವುದರಿಂದ ಇದನ್ನು ಸಮ್ಮಿಶ್ರ ನೆಲೆಯ ಚಿತ್ರವೆಂದು ಪರಿಗಣಿಸಬಹುದು.

೩.೯. ಇವನಾರವ, ಇವನಾರವ ಇವನಾರವ ಎಂದೆನಿಸದಿರಯ್ಯ... – ೧

ಇವನಾರವ ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ
ಕೂಡಲಸಂಗಮದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ [೧೬]

ವಚನದ ಸಾರಾಂಶ : 'ವಸುಧೈವ ಕುಟುಂಬಕಂ' ಎಂಬಂತೆ ಜಗವೇ ಕುಟುಂಬ. ಪ್ರತಿಯೊಂದು ಜೀವಿಯೂ ಇಲ್ಲಿಯ ನಿವಾಸಿ. ಇಲ್ಲಿ ಮೇಲು–ಕೀಳು, ಬಡವ–ಶ್ರೀಮಂತನೆಂಬ ಭೇದವಿಲ್ಲದೇ ಬದುಕು ಸಾಗಿಸಬೇಕು. ಯಾರೊಬ್ಬರನ್ನು ಇವನಾರು? ಎಂದು ಪ್ರಶ್ನಿಸದೇ, ಇವರೂ ನಮ್ಮವರು, ಅವರೂ ನಮ್ಮವರೆಂಬ ಉದಾರ ಮನೋಭಾವವನ್ನು ತಾಳುವ ಅಗತ್ಯವಿದೆ ಎನ್ನುತ್ತಲೇ ಬಸವಣ್ಣನವರು ಜಗದಲ್ಲಿ ಇವನಾರು, ಎಲ್ಲಿಯವನೆಂದು ಜನ ಅಲಕ್ಷ್ಯ ಮಾಡಿ ಮುನಿಸುವಂತೆ ಮಾಡಬೇಡ. ಇವನು ನಮ್ಮವನೆಂದು ಎಲ್ಲರೂ ಅಪ್ಪಿಕೊಳ್ಳುವಂತೆ ಈ ನಿಮ್ಮ ಮಗನನ್ನು ಯೋಗ್ಯನನ್ನಾಗಿಸು ಸಂಗಮನಾಥ ಎನ್ನುತ್ತಾ, ಎಲ್ಲರೂ ನಮ್ಮವರೇ, ಎಂಬ ಘನ ವ್ಯಕ್ತಿತ್ವವನ್ನು ಹೊಂದುವ ಅಗತ್ಯವಿದೆ.

ಚಿತ್ರದ ವಿಶ್ಲೇಷಣೆ : ಕಲಬುರ್ಗಿಯ ಹಿರಿಯ ಕಲಾವಿದರಲ್ಲೊಬ್ಬರಾದ ಡಾ. ವಿ. ಜಿ. ಅಂದಾನಿಯವರು ಈ ಕಲಾಕೃತಿಯನ್ನು ರಚಿಸಿದ್ದಾರೆ. ೪೮"x೩೬" ಅಳತೆಯ ಈ ಕೃತಿಯು ಅಕ್ರಲಿಕ್ ವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಸವಣ್ಣ ತನ್ನನ್ನು ಈ ಜಗತ್ತಿನಲ್ಲಿ ಗುರುತು, ಪರಿಚಯವಿಲ್ಲದವನು ಎಂದು ಎನ್ನಿಸಬೇಡ, ತನ್ನನ್ನು ನಿಮ್ಮ ಮನೆಯ ಮಗನೆಂದು ಭಾವಿಸುವಂತೆ ಕೂಡಲಸಂಗಮದೇವನಲ್ಲಿ ಕೇಳುವ ಸನ್ನಿವೇಶವನ್ನು ಇಲ್ಲಿ ದಲಿತ ಶರಣನೊಬ್ಬನಿಗೆ ಬಿನ್ನೈಸುವಂತೆ ಕಲಾವಿದ ಸನ್ನಿವೇಶವನ್ನು ರೂಪಿಸಿದ್ದಾನೆ. ಮಟ್ಟಸವಾದ ಲಘುಕಂದುವರ್ಣದ ತಲೆಗೂದಲು, ಹಣೆಯಲ್ಲಿ ಕಂಡೂ ಕಾಣದಂತಿರುವ ವಿಭೂತಿ, ಉದ್ದವಾದ ಕಿವಿ,

೧೬. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೮೩), ಪು–೨೪

ನೀಳವಾದ ಮೂಗು, ಕೊರಳಲ್ಲಿ ಬಿಳಿಬಣ್ಣದ ವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ಕೃಶವಾದ ದೇಹ, ಬಿಳಿಬಣ್ಣದ ಪಂಚೆ, ನಿಲುವಂಗಿ ಧರಿಸಿದ ಬಸವಣ್ಣ ನೋಡುಗರಿಗೆ ಗೋಚರಿಸುತ್ತಾನೆ. ಆತನ ಎಡಗೈಯು ತನಗೆ ತೀರ ಹತ್ತಿರದಲ್ಲಿರುವ ದಲಿತ ಶರಣನೊಬ್ಬನ ಹೆಗಲ ಮೇಲಿದೆ, ಬಲಗೈಯು ಶರಣನ ಎದೆಗೆ ತಾಕುವಂತಿದೆ. ಆತ್ಮೀಯವಾದ ಅಪ್ಪುಗೆ ಇಲ್ಲಿ ಪ್ರಧಾನವಾದ ಭಾವವಾಗಿ ಹೊರಹೊಮ್ಮಿದೆ.

ಹಣೆಗೆ ವಿಭೂತಿ, ತಲೆಗೆ ಪಾರದರ್ಶಕ ವರ್ಣದ ಬಿಳಿ ಪೇಟ, ಕಿರುಮೀಸೆ, ಕೊರಳಲ್ಲಿ ಬಿಳಿವಸ್ತ್ರದಿಂದ ಕಟ್ಟಿಕೊಂಡ ಇಷ್ಟಲಿಂಗ, ಕಪ್ಪುದೇಹವರ್ಣ, ಬಿಳಿ ಪಂಚೆಯೊಂದಿಗೆ ಬಸವಣ್ಣನಿಗೆ ತೀರ ಸನಿಹದಲ್ಲಿ ನಿಂತಿರುವ ಶರಣನೊಂದಿಗೆ ಬಸವಣ್ಣನನ್ನು ಆತ್ಮೀಯವಾಗಿ ಸಂಭಾಷಣೆ ನಡೆಸುತ್ತಿರುವಂತೆ ಇಲ್ಲಿ ಚಿತ್ರಿಸಲಾಗಿದೆ. ಶರಣನ ಮುಖಮುದ್ರೆಯು ಬಸವಣ್ಣನ ಮಾತುಗಳನ್ನು ನಿರ್ವೇದವಾಗಿ ಕೇಳುತ್ತಿದ್ದಂತೆ ಇದೆ. ಶರಣನ ಮುಖಭಾವವು ಮತ್ತಷ್ಟು ಕುತೂಹಲಭರಿತವಾಗಿ ಕಂಡುಬರುವಂತೆ ಚಿತ್ರಿಸಲು ಅವಕಾಶವಿತ್ತೆಂದು ತೋರುತ್ತದೆ. ಭಿತ್ತಿಯು ಕೇಸರಿಬಣ್ಣದಿಂದ ಕೂಡಿದ್ದು, ಬಸವಣ್ಣನ ದೇಹವರ್ಣ ಮತ್ತು ಭಿತ್ತಿಯ ವರ್ಣವು ಒಂದೇ ಆಗಿರುವುದನ್ನು ಗಮನಿಸಬಹುದು. ಬಲಬದಿಯಲ್ಲಿ ಹಸಿರು ಎಲೆಗಳಿಂದ ಕೂಡಿರುವ ದಟ್ಟವಾದ ಬಳ್ಳಿಯ ಚಿತ್ರಣವಿದೆ.

ವಿ.ಜಿ.ಅಂದಾನಿಯವರಿಂದ ಆಧುನಿಕ ಶೈಲಿಯಲ್ಲಿ ರಚಿತವಾದ ಕಲಾಕೃತಿಯಿದು. ಅವರ ಎಂದಿನ ಶೈಲಿಯ ಕೆಲವಾರು ಅಂಶಗಳು ಈ ಚಿತ್ರದಲ್ಲಿಯೂ ಪುನರಾವರ್ತನೆಯಾಗಿವೆ. ಸಾಮೀಪ್ಯದಲ್ಲಿ ಆಕೃತಿಗಳನ್ನು ತೋರ್ಪಡಿಸಲಾಗಿದ್ದು, ಬಸವಣ್ಣನವರನ್ನು ಮತ್ತು ದಲಿತನೊಬ್ಬನನ್ನು ವರ್ಣಭೇದಗಳ ಹಾಗೂ ವೇಷಭೂಷಣಗಳ ಮೂಲಕ ಚಿತ್ರಿಸಿದ್ದಾರೆ. ಬಲಭಾಗದಲ್ಲಿ ತಾಜಾ ಪರ್ಣಗಳ ಪಟ್ಟಿಕೆಯ ರೂಪದ ವಿನ್ಯಾಸವನ್ನು ಈ ಕಲಾಕೃತಿಗೆ ಸಂಯೋಜಿಸಿದ್ದಾರೆ. ಕೇಸರೀ ವರ್ಣದ ಹಿನ್ನೆಲೆಯಲ್ಲಿ ಜೋಡು ಪಾದರಕ್ಷೆಗಳನ್ನು ಸೂಚ್ಯವಾಗಿರಿಸುವುದರ ಮೂಲಕ ದಲಿತ ಆಕೃತಿಯನ್ನು ಚರ್ಮಕಾರನೆಂದು ಸೂಚಿಸುವ ಆಶಯ ಇಲ್ಲಿದೆ. ಮೃದುವಾದ ವರ್ಣಯೋಜನೆಯನ್ನು ಹೊಂದಿರುವ ಇಲ್ಲಿ ವರ್ಣಗಳನ್ನು ಅತ್ಯಲ್ಪ ಹಾಗೂ ಹಿತವಾಗಿ ದುಡಿಸಿಕೊಂಡಿದ್ದಾರೆ. ತೈಲವರ್ಣವನ್ನು ಪಾರದರ್ಶಕ ತಂತ್ರದಲ್ಲಿ ಬಳಸಿಕೊಂಡು ಆಕೃತಿ ಮತ್ತು ವಿನ್ಯಾಸಗಳಲ್ಲಿ ನೆರಳು ಬೆಳಕಿನ ವ್ಯತ್ಯಾಸವನ್ನು ಸಮರ್ಪಕವಾಗಿ ಸಂಯೋಜಿಸಿದ್ದಾರೆ.

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ... – ೨

ಈ ಚಿತ್ರದಲ್ಲಿ ಬಸವಣ್ಣನ ಸುಪ್ರಸಿದ್ಧ 'ಇವನಾರವ ಇವನಾರವ ಎಂದೆನಿಸದಿರಯ್ಯ...' ಎಂಬ ವಚನದ ಆಶಯವನ್ನು ಸಮರ್ಥವಾಗಿ ಕಲಾವಿದ ಚಿತ್ರಪಠ್ಯದ ಮೂಲಕ ಅಭಿವ್ಯಕ್ತಿಸಿದ್ದಾನೆ. ಜಾತಿ, ಕುಲ, ಧರ್ಮ, ಮತ ಮುಂತಾದವುಗಳನ್ನು ಮೀರಿ ವಿಶ್ವಮಾನವಪಥದೆಡೆಗೆ ಸಾಗುವ ಮಹತ್ವದ ಆಶಯವನ್ನು ಈ ವಚನವು ಹೊಂದಿದೆ. ಅದಕ್ಕೆ ಗರಿ ಮೂಡಿಸುವಂತೆ ಕಲಾವಿದ ಬಸವಣ್ಣನ ಮನದ ಉದ್ದೇಶ, ಸಿದ್ಧಾಂತಗಳನ್ನೆಲ್ಲ ಪ್ರತಿಬಿಂಬಿಸುವಲ್ಲಿ ಸಫಲನಾಗಿದ್ದಾನೆ.

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ

ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಪ್ರಸ್ತುತ ಚಿತ್ರವು ತೈಲವರ್ಣಸಂಪ್ರದಾಯಕ್ಕೆ ಸೇರಿದ್ದಾಗಿದ್ದು, ಇಲ್ಲಿ ಹಳದಿಬಣ್ಣವೇ ಪ್ರಧಾನವಾಗಿ ಬಳಕೆಯಾಗಿದೆ. ಉಳಿದಂತೆ ಕೆಂಪು, ಕಪ್ಪು, ಹಸಿರುಗಳ ಮಿಶ್ರಣ, ಕೆಂಪು ಹಳದಿಯ ಮಿಶ್ರಣ, ತಿಳಿಗುಲಾಬಿ ಬಣ್ಣಗಳನ್ನು ಬಳಸಲಾಗಿದೆ. ಚಿಕ್ಕ ಮುಖ, ಅದಕ್ಕೆ ತಕ್ಕುದಾದ ದೇಹಾಕಾರವನ್ನು ಹೊಂದಿದ ಬಸವಣ್ಣನ ದೇಹದ ಅರ್ಧಭಾಗ ಮಾತ್ರ ನೋಡುಗರಿಗೆ ಇಲ್ಲಿ ಲಭ್ಯವಾಗಿದೆ. ತಿಳಿ ಕಂದುಬಣ್ಣದ ಕತ್ತರಿಸಿದಂತಿರುವ ತಲೆಗೂದಲು, ಹಣೆಯಲ್ಲಿ ಎದ್ದುತೋರುವ ವಿಭೂತಿ, ಭಸ್ಮದ ಬೊಟ್ಟು, ನೀಳವಾದ ಮೂಗು, ತಿಳಿಕಂದು ಬಣ್ಣದ ಹುಬ್ಬು ಮತ್ತು ಮೀಸೆಗಳು, ದೇಹವರ್ಣದ ತುಟಿಗಳು, ಚಿಕ್ಕ ಮುಖ, ದೊಡ್ಡ ಕಿವಿಗಳನ್ನು ಹೊಂದಿರುವ ಬಸವಣ್ಣನ ಒಟ್ಟು ಆಕೃತಿ ನೋಡಿದೊಡನೆಯೇ ಸಹೃದಯನ ಮನದಲ್ಲಿ ಅಚ್ಚೊತ್ತುವಂತಿದೆ. ಚಿತ್ರದ ಬಲಮೂಲೆಯಲ್ಲಿ ಮಸುಕು ಮಸುಕಾಗಿ ಕಾಣುವ ಮಾನವಾಕೃತಿಯ ಮುಖವೊಂದು ಗೋಚರಿಸುತ್ತದೆ. ಅಸ್ಪಷ್ಟವಾದ ಮೂಗು, ಕಣ್ಣು, ಕುತ್ತಿಗೆಯಿದ್ದರೂ ಹಣೆಯಲ್ಲಿ ಬಳಿದ ವಿಭೂತಿ ಮಾತ್ರ ಸ್ಪಷ್ಟವಾಗಿದೆ.

ಈ ಆಕೃತಿಯನ್ನು ನೋಡಿದ ಕೂಡಲೇ ಇವನು ಅಪರಿಚಿತ ಎಂಬ ಭಾವನೆ ಮೂಡುವುದು ಸಹಜವಾಗಿದೆ. ಹಾಗೆ ಅಪರಿಚಿತ ಎನಿಸಿಕೊಳ್ಳಬಾರದೆಂದು ಬಸವಣ್ಣನ ಆಶಯ. ಬಸವಣ್ಣನ ಬಲಬದಿಯಲ್ಲಿ ಚರ್ಚಿನ ಗೋಪುರವನ್ನು ಮತ್ತು ಎಡಬದಿಯಲ್ಲಿ ತೆಳು ಹಳದಿ ಬಣ್ಣದ ಗುಮ್ಮಟಾಕಾರದ ಮಸೀದಿಯ ಚಿತ್ರವನ್ನು, ಕೆಳಬದಿಯಲ್ಲಿ ಕೂಡಲ ಸಂಗಮದೇವನ ಐಕ್ಯಮಂಟಪ ಮತ್ತು ದೇವಾಲಯ, ಶಿಖರವನ್ನು ಕಾಣುತ್ತೇವೆ. ದೇವಾಲಯಕ್ಕೆ ಅಂಟಿಕೊಂಡಂತೆ ದಟ್ಟವಾದ ಹಸಿರು ಮತ್ತು ಕಪ್ಪುಬಣ್ಣಗಳ ಮಿಶ್ರಣವನ್ನು ಕಾಣುತ್ತೇವೆ. ಹಿನ್ನೆಲೆಯಲ್ಲಿ ತೆಳುಹಳದಿ ಬಣ್ಣದ ಅರ್ಧವೃತ್ತಾಕಾರದ ಚಿತ್ರವು ಸೂರ್ಯನನ್ನು ಸೂಚಿಸುತ್ತಿರಬಹುದು. ಬಸವಣ್ಣ ಕೇವಲ ವೀರಶೈವ ಧರ್ಮಕ್ಕೆ ಸೇರಿದವನು ಅಲ್ಲ, ಎಲ್ಲ ಧರ್ಮ, ಜಾತಿ–ಮತಗಳಿಗೂ ಮೀರಿದವನು, ಮತ್ತು ಸೇರಿದವನು ಎಂಬ ಮಹೋನ್ನತ ವಿಚಾರವನ್ನು ಬಿಂಬಿಸಲು ಬಸವಣ್ಣನವರನ್ನು ಸ್ಥಳಾವಕಾಶದ ಮಧ್ಯದಲ್ಲಿ ಸಂಯೋಜಿಸಿ, ಅವರ ಸುತ್ತಲೂ ಬೇರೆ ಬೇರೆ ಧರ್ಮಗಳ ಸಂಕೇತಗಳನ್ನು ಸೂಚ್ಯವಾಗಿ ಚಿತ್ರಿಸಿದ್ದಾರೆ. ಶರಣಸಂಪನ್ನ ಭಾವವನ್ನು ಕಲಾವಿದರು ಬಸವಣ್ಣನವರಲ್ಲಿ ತುಂಬಿಕೊಟ್ಟಿದ್ದು, ಮೃದುವಾದ ವರ್ಣಗಳ ಸಾಂಗತ್ಯವನ್ನು ಇಲ್ಲಿ ಸಾಧಿಸಲಾಗಿದೆ. ಯಥಾದರ್ಶನದ ನೀತಿಪಾಲನೆಯಲ್ಲಿಯೂ ತಕ್ಕಮಟ್ಟಿನ ಯಶಸ್ಸನ್ನು ಪಡೆದಿರುವ ಕಲಾವಿದ ಸಮರ್ಥವಾಗಿ ಬಸವಣ್ಣನವರ ವಚನಗಳ ಸಾರವನ್ನು ಈ ಚಿತ್ರದ ಮೂಲಕ ಕಟ್ಟಿಕೊಟ್ಟಿದ್ದಾನೆ.

೩.೧೦. ಆನೆಯನೇರಿಕೊಂಡು ಹೋದಿರೇ ನೀವು...

ಆನೆಯನೇರಿಕೊಂಡು ಹೋದಿರೇ ನೀವು
ಕುದುರೆಯನೇರಿಕೊಂಡು ಹೋದಿರೇ ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೇ ಅಣ್ಣಾ
ಸತ್ಯದ ನಿಲುವನರಿಯದೆ ಹೋದಿರಲ್ಲಾ
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ

ಅಹಂಕಾರವೆಂಬ ಸದಮದಗಜವೇರಿ

ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ

ನಮ್ಮ ಕೂಡಲಸಂಗಮದೇವರನರಿಯದೆ

ನರಕಕ್ಕೆ ಭಾಜನವಾದಿರಲ್ಲಾ![೧೭]

ವಚನದ ಸಾರಾಂಶ : ಅಹಂಕಾರದ ಅಮಲಿನಲ್ಲಿ ಬದುಕುವ ಮನುಷ್ಯನ ಸ್ಥಿತಿ ದಾರುಣವೇ. ಅಹಂಕಾರದ ಅಮಲಿನಿಂದ ಮದ್ದಾನೆಯನ್ನೇರಿ, ಕುದುರೆಯನ್ನೇರಿಕೊಂಡು ಹೋದರೆ, ಕುಂಕುಮ, ಕಸ್ತೂರಿಯನ್ನು ಪೂಸಿಕೊಂಡರೆ ಯಾವುದೂ ಪ್ರಯೋಜನವಾಗುವದಿಲ್ಲ. ಸತ್ಯ, ಶಾಶ್ವತ ಸುಖವನ್ನು ಮರೆತ ಮನುಷ್ಯ ಸದ್ಗುಣಗಳೆಂಬ ಹಣ್ಣುಗಳನ್ನು ಬೆಳೆಸದೇ, ಕಾಲಹರಣ ಮಾಡುವ ಅಹಂಕಾರಿಗಳು ಕೂಡಲಸಂಗಮನಾಥನನ್ನು ಅರಿಯದೇ, ನರಕಕ್ಕೆ ಭಾಜನರಾದಿರಲ್ಲ ಎಂದು ವಿಷಾದ ವ್ಯಕ್ತಪಡಿಸುವರು.

ಆಂಧ್ರಪ್ರದೇಶದ ಗುಂಟೂರಿನ ಕಲಾವಿದ ಆರ್. ಗಿರಿಧರಗೌಡ ಅವರು ಈ ಕಲಾಕೃತಿಯನ್ನು ೪೮"x೩೬" ಅಳತೆಯಲ್ಲಿ ರಚಿಸಿದ್ದು, ಈ ಕೃತಿಯು ಅಕ್ರಲಿಕ್ ವರ್ಣದ ಮಾಧ್ಯಮದಲ್ಲಿ ಚಿತ್ರಿಸಲಾಗಿದೆ. ಪ್ರಸ್ತುತ ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ.

ಚಿತ್ರದ ವಿಶ್ಲೇಷಣೆ : ಮಿಶ್ರವರ್ಣ ಮಾಧ್ಯಮದಲ್ಲಿ ರಚಿತವಾದ ಈ ಚಿತ್ರದಲ್ಲಿ ಅಹಂಕಾರದ ಕುದುರೆಯನ್ನೇರಿ, ಶ್ರೀಮಂತಿಕೆಯ ದರ್ಪವನ್ನು ತೋರಿ, ಕೊನೆಗೆ ನರಕಕ್ಕೆ ಸೇರಿಕೊಂಡವರ ಚಿತ್ರಣವನ್ನು ಇಲ್ಲಿ ಕಲಾವಿದ ಚಿತ್ರಿಸಿದ್ದಾನೆ. ನೋಡುಗರಿಗೆ ಎದುರಿನಲ್ಲಿ ನೀಲಿಬಣ್ಣದ ಮದಿಸಿದ ಆನೆಯೊಂದು ತನ್ನ ದೇಹದ ಮುಂಭಾಗವನ್ನು ನೆಲಕ್ಕೆ ಬಾಗಿಸಿದಂತಿದೆ. ಬಾಲ ಕಿರಿದಾಗಿದ್ದು, ಆನೆಯ ಮೇಲೆ ಬತ್ತಲೆಯಾದ ವ್ಯಕ್ತಿಯೊಬ್ಬ ಬೀಳುತ್ತಿರುವ ಭಂಗಿಯಲ್ಲಿದ್ದಾನೆ. ಆತನ ಗುಪ್ತಾಂಗಗಳು ಕಾಣಿಸದಂತೆ ತಿಳಿಗುಲಾಬಿ ಬಣ್ಣದ ಮೇಲುವಸ್ತ್ರವು ಗಾಳಿಯಲ್ಲಿ ಹಾರಿಬಂದು ಮುಚ್ಚಿರುವಂತೆ ಕಾಣಿಸುತ್ತದೆ. ಚಿತ್ರದಲ್ಲಿ ಸುಮಾರು ಮೂರು ನಾಲ್ಕು ಚಿಕ್ಕ ಗಾತ್ರದ ಆನೆಗಳನ್ನು ಕಾಣುತ್ತೇವೆ. ಅವುಗಳ ಕೆಳಗೆ ಸಿಕ್ಕಿಕೊಂಡು ಆರ್ತನಾದ ಮಾಡುತ್ತಿರುವ ವ್ಯಕ್ತಿಗಳ ಅಸ್ಪಷ್ಟ ಆಕೃತಿಗಳಿವೆ. ಬೆತ್ತಲೆಯಾಗಿ ಬೀಳುತ್ತಿರುವ ಮನುಷ್ಯನ ಎದುರಿನಲ್ಲಿ ಮೋಡದಲ್ಲಿ ಪಾರದರ್ಶಕವಾಗಿ ಚಿತ್ರಿತವಾಗಿರುವ ಬಸವಣ್ಣನಿದ್ದಾನೆ. ಹಳದಿ, ಕೆಂಪು ಇತ್ಯಾದಿ ಬಣ್ಣಗಳ ಚುಕ್ಕೆಗಳಿಂದ ಆತನ ಚಿತ್ರಣವನ್ನು ಮಾಡಲಾಗಿದೆ.

ಚಿತ್ರದ ಬಲಭಾಗದಲ್ಲಿ ತಿಳಿಹಳದಿ, ಹಸಿರು, ತಿಳಿಗೆಂಪು ಬಣ್ಣಗಳ ಸಂಯೋಜನೆಯಿದೆ. ಕೂಡಲಸಂಗಮನಾಥನನ್ನು ಅರಿಯದೇ ಹೋದ ವಿಷಾದಭಾವವನ್ನು ಬೆತ್ತಲೆಯಾಗಿರುವ ವ್ಯಕ್ತಿಯ ಮೂಲಕ ಕಲಾವಿದ ಯಶಸ್ವಿಯಾಗಿ ಪ್ರಕಟಿಸುವಲ್ಲಿ ಆಕೃತಿಗಳನ್ನು ಸಮರ್ಪಕವಾಗಿ, ಅದೂ ಆಧುನಿಕವಾಗಿ ಚಿತ್ರಿಸಿದ್ದಾನೆ. ಇಲ್ಲಿ ಬಸವಣ್ಣನೆಂಬ ಪ್ರತಿಮೆ ಸೂಚ್ಯವಾಗಿ ರಚಿತಗೊಂಡಿದೆ. ಅವಕಾಶದ ಅರ್ಧಭಾಗದಲ್ಲಿ ದಟ್ಟವಾದ ವರ್ಣಗಳಲ್ಲಿ ಆಧುನಿಕ ಶೈಲಿಯ ಮಾನವಾಕೃತಿಗಳನ್ನು ಚಲನಶೀಲವಾಗಿ ಚಿತ್ರಿಸಲಾಗಿದೆ.

---

೧೭ ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೧೮೮), ಪು-೪೮

ಪ್ರಾಣಿಗಳ ಆಕೃತಿಗಳೊಂದಿಗೆ ಮಾನವಾಕೃತಿಗಳನ್ನು ವಚನದ ಸಾರಕ್ಕೆ ಪೂರಕವಾಗಿ ದುಡಿಸಿಕೊಳ್ಳಲಾಗಿದೆ. ಮೂಲವರ್ಣಗಳನ್ನೇ ತರತಮ ರೀತಿಯಲ್ಲಿ ಅವಕಾಶದಲ್ಲಿ ವಿಸ್ತರಿಸಿಕೊಂಡ ಬಗೆ ಅನನ್ಯವಾದುದು.

೩.೧೧. ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯ...

ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ

ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ

ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ[೧೮]

ವಚನದ ಸಾರಾಂಶ : ಕೂಡಲಸಂಗನ ಶರಣರ ವ್ಯಕ್ತಿತ್ವ ಘನವಾದುದು. ಅಸಾಧ್ಯವೆಂಬ ಮಾತೇ ಇವರಲ್ಲಿಲ್ಲ. ಶರಣರು ನುಡಿದುದೇ ಶುಭ ಲಗ್ನ. ಶುಭ ಸಮಯ. ಅವರ ವಾಣಿಯೇ ಸತ್ಯ. ಅವರ ವಾಣಿಯಿಂದ ರಾಶಿಕೂಟ, ಋಣಸಂಬಂಧವೆಲ್ಲವೂ ಕೈಗೂಡುವವು. ಚಂದ್ರಬಲ, ತಾರಾಬಲವೆಲ್ಲವೂ ಉಂಟಾಗುವವು. ನಾಳೆಗಿಂತ ಇಂದು ಲೇಸು. ಇಂದಿಗಿಂತ ಈ ಕ್ಷಣ ಲೇಸು ಎಂಬಂತೆ ಇವತ್ತಿನ ಕಾರ್ಯ ಈಗಲೇ ಆಗಬೇಕಾಗಿದೆ. ಕೂಡಲಸಂಗಮನನ್ನು ಪೂಜಿಸಿದರೆ ಯೋಗ್ಯ ಫಲ ದೊರೆಯುವುದು. ಮೂಲತಃ ತಮಿಳುನಾಡಿನ ಕಲಾವಿದರಾದ ದಿ. ಕೆ. ಎನ್. ರಾಮಚಂದ್ರನ್ ಅವರ ಕಲಾಕೃತಿ ಇದಾಗಿದೆ. ೪೮"x೩೬" ಅಳತೆಯ ಈ ಕೃತಿಯು ಅಕ್ರಲಿಕ್ ವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ.

ಚಿತ್ರದ ವಿಶ್ಲೇಷಣೆ : ತೈಲವರ್ಣದಲ್ಲಿ ರಚಿತವಾದ ಈ ಚಿತ್ರದಲ್ಲಿ ಬಸವಣ್ಣನು ಪದ್ಮಾಸನದಲ್ಲಿ ಕುಳಿತಿರುವ ಚಿತ್ರವಿದ್ದು, ಆತನ ಹಿಂಬದಿಯಲ್ಲಿ ವಿವಾಹವನ್ನು ಮಾಡಿಕೊಳ್ಳಲಿರುವ ದಂಪತಿಗಳು, ಅವರೊಂದಿಗೆ ಇತರ ಜನರು ನಿಂತಿರುವ ಸನ್ನಿವೇಶವನ್ನು ಕಾಣುತ್ತೇವೆ. ಬಸವಣ್ಣ ಧರಿಸಿದ ಬಿಳಿಬಣ್ಣದ ಹಳದಿಯಂಚಿನ ರೇಷ್ಮೆ ಪಂಚೆ ಮತ್ತು ಮೇಲುವಸ್ತ್ರಗಳು ಇಲ್ಲಿ ಪ್ರಧಾನ ಆಕರ್ಷಣೆಗಳಾಗಿವೆ. ಮಟ್ಟಸವಾದ ಕಪ್ಪುತಲೆಗೂದಲು, ಹಣೆಯಲ್ಲಿ ವಿಭೂತಿ, ಭ್ರೂಮಧ್ಯೆ ಬೊಟ್ಟು, ಕಿರುಮೀಸೆ, ಮಂದನೇತ್ರಗಳು, ನೀಳವಾದ ಮೂಗು, ಉದ್ದವಾದ ಕಿವಿಗಳು, ಕೊರಳಲ್ಲಿ ಇಷ್ಟಲಿಂಗದ ಕೆಂಪುವಸ್ತ್ರ, ರುದ್ರಾಕ್ಷಿ ಮಾಲೆಯನ್ನು ಧರಿಸಿರುವ ಬಸವಣ್ಣ ತನ್ನೆರಡು ಹಸ್ತಗಳನ್ನು ಒಂದರ ಮೇಲೊಂದಿಟ್ಟು ಧ್ಯಾನದಲ್ಲಿ ಕುಳಿತಿರುವಂತಿದೆ. ಬಸವಣ್ಣನ ದೇಹದ ಬಲಪಾರ್ಶ್ವದಲ್ಲಿ ಮಾಂಸಖಂಡಗಳು ವ್ಯಾಯಾಮ ಮಾಡಿ ಸುಪುಷ್ಟವಾಗಿರುವ ಜಟ್ಟಿಯ ದೇಹವನ್ನು ನೆನಪಿಸುವಂತಿವೆ. ಪಾದದ ಅಳತೆಯನ್ನು ಗಮನಿಸಿದರೆ ಒಟ್ಟು ಚಿತ್ರಕ್ಕೆ ಸ್ವಲ್ಪ ದೊಡ್ಡದಾಗಿರುವಂತೆ ತೋರುತ್ತದೆ. ಆತನ ಮುಂದೆ ಮೂರು ತಾಳೆಗರಿಯ ಕಟ್ಟುಗಳಿವೆ. ಬಸವಣ್ಣನ ಎಡಬದಿಯಲ್ಲಿ ಎತ್ತರದ ಕಮಾನುಗಳ ಅರ್ಧಭಾಗ ಮಾತ್ರ ಕಾಣಿಸುತ್ತದೆ. ರಾಜಪೋಷಾಕನ್ನು ಧರಿಸಿದ ವ್ಯಕ್ತಿಯೊಬ್ಬ ನಿಂತಿದ್ದು, ಆತನ ಪಕ್ಕದಲ್ಲಿ ಕೆಂಪು ಬಣ್ಣದ ಸೀರೆಯನ್ನು ಧರಿಸಿ, ಕೈಯಲ್ಲಿ ಹೂಮಾಲೆಯನ್ನು ಹಿಡಿದು ತಲೆಬಾಗಿಸಿ ನಿಂತಿರುವ ವಧುವಿನ ಪಕ್ಕದಲ್ಲಿ ಬಿಳಿಬಣ್ಣದ ರುಮಾಲು, ನಿಲುವಂಗಿ, ಪಂಚೆಯನ್ನು ಧರಿಸಿರುವ ವರನ ಕೈಯಲ್ಲಿ ಹೂವಿನ ಹಾರವು ಅಸ್ಪಷ್ಟವಾಗಿ ಕಾಣಿಸುತ್ತದೆ. ಅವರೆಲ್ಲರೂ ವಿವಾಹವನ್ನು ಮಾಡಿಕೊಳ್ಳುವ ಕೊನೆಯ

---

೧೮. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೮೩), ಪು-೨೪

ಹಂತದಲ್ಲಿದ್ದು, ಹಾರವನ್ನು ಬದಲಾಯಿಸಿಕೊಳ್ಳುವ ತವಕದಲ್ಲಿದ್ದಾರೆ. ಮದುವೆಯಾಗಲು ಶುಭಘಳಿಗೆ, ಮಹೂರ್ತಗಳನ್ನು ನೋಡದೆ ಯಾರಾದರೂ ಶುಭಘಳಿಗೆ ಯಾವುದೆಂದು ಕೇಳಿದರೆ ಅದೇ ಘಳಿಗೆ ಶುಭವಾಗಿದೆ ಎಂದು ಹೇಳಿ ಎನ್ನುವ ಆಶಯವನ್ನು ಹೊಂದಿದ ಈ ಚಿತ್ರದಲ್ಲಿ ಬಸವಣ್ಣನವರ ಆಕೃತಿ ಈ ಕೃತಿಯ ಪ್ರಮುಖ ಆಶಯವಾಗಿದೆ.

ಬಹುಶಃ ಅನುಭವ ಮಂಟಪದ ಹಿನ್ನೆಲೆಯಲ್ಲಿ ಈ ಚಿತ್ರರೂಪಕ ರಚನೆಗೊಂಡಿರಬಹುದು. ಅನುಭವಮಂಟಪ ಕೇವಲ ಉಪನ್ಯಾಸ-ಚರ್ಚೆಗೆ ಮಾತ್ರ ಸೀಮಿತವಾಗಿರಲಿಲ್ಲ. ಅಲ್ಲಿ ಶರಣರು ಸಮಾಜವನ್ನು ಸರಿದಾರಿಗೆ ತರಬೇಕೆನ್ನುವ ಹಂಬಲದಲ್ಲಿ ವಚನಗಳನ್ನು ಬರೆದು ಮಂಡಿಸಿದರು. ಅಂತಹ ವಚನವೊಂದಕ್ಕೆ ಈ ಚಿತ್ರ ಪ್ರಬುದ್ಧ ದೃಶ್ಯಾತ್ಮಕ ಪ್ರತಿಕ್ರಿಯೆಯಾಗಿದೆ. ಹಿನ್ನೆಲೆಯಲ್ಲಿ ಅನುಭವಮಂಟಪವನ್ನು ಸೂಚಿಸುವ ಕಂಬಾಧಾರಿತ ಕಮಾನುಗಳು, ಅವುಗಳ ಮಧ್ಯೆ ರಾಜಪೋಷಾಕಿನಲ್ಲಿ ಕಾಣುವ ಮಾನವಾಕೃತಿಗಳು ಇವರು ಬೆರಗುಗೊಂಡಂತೆ ಇಲ್ಲಿ ಚಿತ್ರಿಸಲಾಗಿದೆ. ಯಥಾದರ್ಶನ ನೀತಿಯನ್ನು ಅತ್ಯಂತ ಪರಿಪಕ್ವವಾಗಿ ದುಡಿಸಿಕೊಂಡ ಕಲಾಕೃತಿ ಇದು ಎಂಬ ಅಗ್ಗಳಿಕೆಯೊಂದಿಗೆ ಮೃದುವಾದ ವರ್ಣಮೇಳ ಜೀವನ ಚಿತ್ರಗಳಲ್ಲಿ ಇರಬೇಕಾದ ನೈಪುಣ್ಯತೆಗಳೆಲ್ಲವೂ ಈ ಕಲಾಕೃತಿಯಲ್ಲಿ ಒಡಮೂಡಿವೆ.

೩.೧೨. ಗೀತವ ಹಾಡಿದಡೇನು, ಶಾಸ್ತ್ರ ಪುರಾಣವ ಕೇಳಿದಡೇನು...

ಗೀತವ ಹಾಡಿದಡೇನು, ಶಾಸ್ತ್ರ- ಪುರಾಣವ ಕೇಳಿದಡೇನು,

ವೇದವೇದಾಂತವನೋದಿದಡೇನು?

ಮನವೊಲಿದು ಲಿಂಗಜಂಗಮವ ಪೂಜಿಸಲರಿಯದವರು

ಎಲ್ಲರಲ್ಲಿ ಪ್ರಾಜ್ಞರಾದಡೇನು?

ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ [೧೯]

ವಚನದ ಸಾರಾಂಶ : ವೇದ-ವೇದಾಂತ, ಶಾಸ್ತ್ರ-ಪುರಾಣ, ಗೀತೆಯನ್ನು ಹಾಡುವ ಪಾರಂಗತನಾದ ವ್ಯಕ್ತಿ ಸಮಾಜದಲ್ಲಿ ಅತ್ಯುನ್ನತ ಸ್ಥಾನ-ಮಾನ ಗಳಿಸಿಕೊಂಡಿದ್ದರೂ, ಎಲ್ಲವನ್ನು ತಿಳಿದ ಅನುಭಾವಿಯೆಂದೂ ಜನ ಮೆಚ್ಚಿಕೊಂಡರೂ ಭಕ್ತಿಯಿಲ್ಲದ ಅವನ ವಿದ್ಯೆ ವ್ಯರ್ಥವಾಗುವದು. ಏಕಾಗ್ರತೆಯ ಮನದಿಂದ ಗುರು, ಲಿಂಗ, ಜಂಗಮನನ್ನು ಪೂಜಿಸುವವರನ್ನು ಕೂಡಲಸಂಗಮನಾಥ ಮೆಚ್ಚುವನು. ಹುಬ್ಬಳ್ಳಿಯ ಕಲಾವಿದ ಶ್ರೀ. ಎಂ. ಸಿ. ಚೆಟ್ಟಿಯವರು ಈ ಕಲಾಕೃತಿಯನ್ನು ೪೮"x೩೬" ಅಳತೆಯಲ್ಲಿ ಈ ಕೃತಿಯನ್ನು ಚಿತ್ರಿಸಿದ್ದಾರೆ. ಅಕ್ರಲಿಕ್ ವರ್ಣದ ಮಾಧ್ಯಮದಲ್ಲಿ ರಚಿಸಿದ್ದು, ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ.

ಚಿತ್ರದ ವಿಶ್ಲೇಷಣೆ : ತೈಲವರ್ಣ ಸಂಪ್ರದಾಯಕ್ಕೆ ಸೇರಿದ ಈ ಚಿತ್ರದಲ್ಲಿ ಮನಸ್ಸಿಲ್ಲದೆ ಮಾಡುವ ಲಿಂಗಪೂಜೆ-ಜಂಗಮಪೂಜೆಗಳು ವ್ಯರ್ಥ ಎನ್ನುವ ಸಂದೇಶವನ್ನು ಸಾರುವ ಸನ್ನಿವೇಶವನ್ನು ಕಲಾವಿದ

---

೧೯. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೧೮೮), ಪು-೪೮

ಚಿತ್ರಿಸಿದ್ದಾನೆ. ಬಿಳಿಮಿಶ್ರಿತ ನೀಲಿ, ಲಘುಕೆಂಪು, ಮತ್ತು ಕಂದುಮಿಶ್ರಿತ ಹಳದಿ ಬಣ್ಣಗಳ ಪ್ರಧಾನ ಬಳಕೆಯಿಲ್ಲಿದೆ. ಇಲ್ಲಿ ಎರಡು ಭಾಗಗಳಿದ್ದು, ಚಿತ್ರದ ಕೆಳಭಾಗದಲ್ಲಿ ಮಟ್ಟಸವಾದ ಕಪ್ಪುಬಣ್ಣದ ತಲೆಗೂದಲು, ಅರ್ಧತೆರೆದ ಕಣ್ಣುಗಳು, ದಪ್ಪವೂ ಅಲ್ಲದ ತೆಳುವೂ ಅಲ್ಲದ ಮೀಸೆ, ನೀಳವಾದ ಮೂಗು, ಕೊರಳಲ್ಲಿ ಎದ್ದು ತೋರುವ ಕೆಂಪುವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ಬಿಳಿಮಿಶ್ರಿತ ನೀಲಿಬಣ್ಣದ ನಿಲುವಂಗಿಯನ್ನು ಧರಿಸಿದ ಬಸವಣ್ಣ ಕಂಡುಬರುತ್ತಾನೆ. ಆತನ ಎಡಗೈಯಲ್ಲಿ ತಾಳೆಗರಿಯ ಓಲೆಯಿದ್ದು, ಬಲಗೈಯ ಹಸ್ತವು ಉಪದೇಶವನ್ನು ಮಾಡುವ ಭಂಗಿಯನ್ನು ಸೂಚಿಸುತ್ತದೆ.

ಬಸವಣ್ಣನ ತಲೆಯ ಎಡ ಮತ್ತು ಬಲಬದಿಯಲ್ಲಿ ನಾಲ್ಕು ತಲೆಗಳ ಚಿತ್ರಗಳಿವೆ. ಅವು ಗೀತ, ಶಾಸ್ತ್ರ, ಪುರಾಣಗಳನ್ನು ಓದಿಕೊಂಡಿರುವುದಕ್ಕೆ ಸಂಕೇತಗಳಾಗಿರಬಹುದು. ಚಿತ್ರದ ಮೇಲಿನ ಭಾಗದಲ್ಲಿ ಕಂದುಮಿಶ್ರಿತ ಮಸುಕಾದ ಹಳದಿಬಣ್ಣದಲ್ಲಿ ರಚಿತವಾದ ಇಷ್ಟಲಿಂಗವನ್ನು ಪೂಜಿಸುವ ಬಸವಣ್ಣನ ಚಿತ್ರವಿದೆ. ತಲೆಯಲ್ಲಿ ಕಿರುಗೂದಲು, ಹಣೆಯಲ್ಲಿ ವಿಭೂತಿ, ಮಗುವಿನಂತಹ ಮುಖ, ಉದ್ದವಾದ ಕಿವಿಗಳು, ಹಳದಿಮಿಶ್ರಿತ ಪಂಚೆ ಮತ್ತು ಮೇಲುಹೊದಿಕೆಯನ್ನು ಹೊದ್ದಿರುವ ಬಸವಣ್ಣನ ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದು ಬಲಗೈಯ ಮೂರು ಬೆರಳುಗಳನ್ನು ಮಡಿಚಿ ಹಿಡಿದು ಪೂಜಿಸುವ ಭಂಗಿಯಲ್ಲಿದ್ದಾನೆ. ದೇಹವರ್ಣ ಮತ್ತು ವಸ್ತ್ರವರ್ಣದ ಜೊತೆಗೆ ಮರ, ಪ್ರಭಾವಳಿ, ದೇಗುಲ, ಆಕಾಶ ಇವೆಲ್ಲವೂ ಕಂದುಮಿಶ್ರಿತ ಮಸುಕಾದ ಹಳದಿಬಣ್ಣದಲ್ಲಿ ಚಿತ್ರಿತವಾಗಿರುವುದು ಈ ಕಲಾಕೃತಿಯ ವಿಶೇಷವಾಗಿದೆ.

ಎಲೆಗಳಿಲ್ಲದ ಬೋಳು ಮರ, ಮರದ ಅಕ್ಕಪಕ್ಕದಲ್ಲಿ ಸ್ವಲ್ಪ ಭಾಗ ಮಾತ್ರ ಕಾಣುವ ದೇಗುಲದ ಗೋಡೆಗಳು ಪರಿಣಾಮಕಾರಿಯಾಗಿ ಮೂಡಿಬಂದಿದ್ದು, ವರ್ಣಗಳಲ್ಲಿ ಏಕವರ್ಣ ಮತ್ತು ಸಮ್ಮಿಶ್ರವರ್ಣಗಳನ್ನು ದುಡಿಸಿಕೊಂಡ ಚಿತ್ರವಿದಾಗಿದೆ. ಸ್ಥಳಾವಕಾಶದ ಮೇಲ್ಭಾಗದ ಅರ್ಧ ಏಕವರ್ಣದಲ್ಲಿ ರಚಿತಗೊಂಡ ಬಸವಣ್ಣ ಆಂಗಿಕವಾಗಿ ಅತ್ಯಂತ ಪ್ರಬುದ್ಧವಾಗಿ ರಚಿತವಾಗಿದೆ. ಲಿಂಗಪೂಜಾನುಷ್ಠಾನದಲ್ಲಿ ತಲ್ಲೀನನಾದ ಬಸವಣ್ಣನ ಹಿಂದೆ ಮರದ ವಿನ್ಯಾಸವೊಂದನ್ನು ಚಿತ್ರಿಸಲಾಗಿದೆ. ಕೆಳಭಾಗದಲ್ಲಿ ತಾಳೆಗರಿಗಳ ಕಟ್ಟುಹಿಡಿದು ಅಂತರ್ಧಾನಗೊಂಡ ಭಾವದಲ್ಲಿ ಚಿತ್ರಿತಗೊಂಡಿದ್ದು, ಸಂಯೋಜನೆಗಿಂತ ಮೃದುವಾದ ವರ್ಣಯೋಜನೆ, ವರ್ಣೋಪಚಾರ, ಆಕೃತಿಗಳ ರಚನೆ ಮತ್ತು ಪ್ರಬುದ್ಧ ಆಂಗಿಕತೆಯಿಂದಾಗಿ ಈ ಚಿತ್ರ ಮಹತ್ವ ಪಡೆದಿದೆ.

೩.೧೩. ಹಾವಿನ ಬಾಯಿಯ ಕಪ್ಪೆ ಹಸಿದು... – ೧

ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆ ಮಾಡುವಂತೆ

ಸೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು

ಮೇಲೇಸು ಕಾಲ ಬದುಕುವನೊ?

ಕೆಡುವೊಡಲ ನಚ್ಚಿ ಕಡು ಹುಸಿಯನೆ ಹುಸಿದು ಒಡಲ ಹೊರೆವರ

ಕೂಡಲಸಂಗಮದೇವರನೊಲ್ಲ ಕಾಣಿರಣ್ಣ[೨೦]

೨೦. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೧೩೦), ಪು-೩೩

ವಚನದ ಸಾರಾಂಶ : ನಶ್ವರವಾದ ಈ ಶರೀರದ ಅನಿತ್ಯತೆಯನ್ನು ಬಸವಣ್ಣನವರು ಹಲವು ಪ್ರತಿಮೆಗಳ ಮೂಲಕ ಬಿಂಬಿಸಿದ್ದಾರೆ. ಇಲ್ಲಿಯ ಹಾವು–ಯಮನ ಪ್ರತಿರೂಪ, ನೊಣ–ಸಂಸಾರ ವಿಷಯ, ಕಪ್ಪೆ–ಜೀವದ ಪ್ರತೀಕವಾದುದು. ಶರೀರದ ನಶ್ವರತೆಯ ಅರಿವಿದ್ದಾಗಲೂ ಮನುಷ್ಯ ಸಹಜವಾಗಿ ಆಶೆ–ಆಮಿಷಕ್ಕೆ ಒಳಗಾಗುವ ಪರಿಯನ್ನು ಇಲ್ಲಿ ಚಿತ್ರಿಸಲಾಗಿದೆ. ಇಂಥ ಮನುಷ್ಯಗುಣವನ್ನು ಟೀಕಿಸುವ ಬಸವಣ್ಣನವರು ಹಾವಿನ ಬಾಯಲ್ಲಿರುವ ಕಪ್ಪೆ ಇನ್ನೇನು ಸಾಯುವದು. ಆದರೂ ಹಸಿದ ಆ ಕಪ್ಪೆ ತನ್ಮುಂದೆ ಹಾರುವ ನೊಣಕ್ಕೆ ಆಶೆ ಮಾಡಿದರೆ ಅದು ಬದುಕುವದಾದರೂ ಎಷ್ಟೊತ್ತು ? ಎಂಬ ಪ್ರಶ್ನೆಯಿದೆ. ಶೂಲವನ್ನೇರುವ ಕಳ್ಳನು ಹಾಲು, ತುಪ್ಪವ ಕುಡಿದು ಗಳಿಸಿಕೊಂಡ ಶಕ್ತಿಯು ಉಪಯೋಗವಾಗುವುದೇ? ಕೆಟ್ಟ ಹೊಟ್ಟೆಗಾಗಿ ಖೊಟ್ಟಿ ನುಡಿದು ಹೊಟ್ಟೆ ತುಂಬಿಸಿಕೊಳ್ಳುವವರು ಎಷ್ಟು ಕಾಲ ಬದುಕಬಹುದು. ಇಂಥವರನ್ನು ಕೂಡಲಸಂಗಮದೇವ ಮೆಚ್ಚುವುದಿಲ್ಲ.

ಚಿತ್ರದ ವಿಶ್ಲೇಷಣೆ : ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ. ಸರಳ ಮತ್ತು ನೇರ ನಿರೂಪಣೆಯ ಜಲವರ್ಣ ಚಿತ್ರವಿದಾಗಿದೆ. ಹಸಿರು, ಬಿಳಿ, ನೀಲಿ ಮತ್ತು ಕಂದು ಬಣ್ಣಗಳ ಬಳಕೆಯಿಲ್ಲಿದ್ದು, ಎಲ್ಲವೂ ಕಣ್ಣಿಗೆ ಹಿತವನ್ನುಂಟು ಮಾಡುವಂತಿವೆ. ವಚನದ ಆಶಯ ಸಂಸಾರದ ಅನಿತ್ಯತೆಯನ್ನು ಹೇಳುವುದಾಗಿದೆ. ಅದರಲ್ಲಿ ಹಲವು ಪ್ರತಿಮೆಗಳ ಬಳಕೆಯಿದೆ. ಕಲಾವಿದ ಆ ಪ್ರತಿಮೆಗಳನ್ನು ಯಥಾವತ್ತಾಗಿ ಚಿತ್ರಿಸುವಲ್ಲಿ ತನ್ನ ಶ್ರದ್ಧೆಯನ್ನು ಪ್ರಕಟಿಸಿದ್ದಾನೆ. ತೆಳುನೀಲಿ ಬಣ್ಣದ ನಿಕ್ಕರು, ಅರ್ಧತೋಳಿನ ಬಿಳಿಬಣ್ಣದ ಕೊರಳುಪಟ್ಟಿಯಿಲ್ಲದ ಅಂಗಿಯನ್ನು ಧರಿಸಿದ ಅಪರಾಧಿಯೊಬ್ಬನು ಇನ್ನೇನು ನೇಣುಗಂಬದಲ್ಲಿ ಗಲ್ಲಿಗೇರಿಸಿಕೊಳ್ಳುವ ಹಂತದಲ್ಲಿದ್ದಾನೆ. ಕಣ್ಣುಗಳು ಸ್ಪಷ್ಟವಾಗಿ ಅರಳಿಕೊಂಡಿದ್ದು, ಅವುಗಳಲ್ಲಿ ನೋವಿನ ಛಾಯೆಯನ್ನು ಗುರುತಿಸಬಹುದು.

ಎಣ್ಣೆಯಿಲ್ಲದ, ಬಾಚಿಕೊಳ್ಳದಿರುವ ಕೆದರಿದ ತಲೆಗೂದಲು, ಗಡ್ಡ ಮೀಸೆಗಳು ಆತನೊಬ್ಬ ಕೈದಿಯೆಂಬುದನ್ನು ಸ್ಪಷ್ಟವಾಗಿ ಸಾರುತ್ತವೆ. ಎಡಗೈಯಲ್ಲಿ ಒಂದು ಲೋಟವನ್ನು ಹಿಡಿದುಕೊಂಡು, ಬಲಗೈಯನ್ನು ತನ್ನ ಬಾಯಿಯ ಹತ್ತಿರ ತಂದುಕೊಂಡಿರುವುದು, ತುಪ್ಪವನ್ನು ಕುಡಿದು ಬಾಯಿಯನ್ನು ಒರೆಸಿಕೊಳ್ಳುವ ಭಂಗಿಯಲ್ಲಿದ್ದಾನೆ. ಆತನ ಕೆಳಗಡೆ ನೊಣವನ್ನು ನುಂಗಲು ಕಪ್ಪೆ ಹಾತೊರೆಯುತ್ತಿರುವುದು, ಕಪ್ಪೆಯ ಅರ್ಧಶರೀರವನ್ನು ಹಸಿರುಬಣ್ಣದ ದೊಡ್ಡದಾದ ಹಾವೊಂದು ಹಿಡಿದಿರುವುದು ಕಂಡುಬರುತ್ತದೆ. ಹಿನ್ನೆಲೆಯಲ್ಲಿ ಬೆಳೆದಿರುವ, ಅಸ್ಪಷ್ಟವಾಗಿ ಕಾಣುತ್ತಿರುವ ಗಿಡ–ಹುಲ್ಲನ್ನು ಸೂಚ್ಯವಾಗಿಸಿ ಚಿತ್ರಿಸಲಾಗಿದೆ. ಕಾರಾಗೃಹದ ಗೋಡೆಯು ಕಲ್ಲಿನಿಂದ ರಚಿತವಾಗಿರುವುದನ್ನು ಸಹಜವೆನ್ನುವಂತೆ ಚಿತ್ರಿಸಲಾಗಿದೆ. ಗಲ್ಲಿಗೇರಲು ನಿಂತವನ ಸುತ್ತಲಿರುವ ಕಟ್ಟಿಗೆಯ ಇಲ್ಲವೆ ಲೋಹದ ಚೌಕಟ್ಟು, ಅದಕ್ಕೆ ಹೊಂದಿಕೊಂಡಂತೆ ಎರಡು ಚಕ್ರಗಳು, ಆ ಚಕ್ರಗಳಿಂದ ಹಾಯ್ದುಹೋದ ನೇಣಿನ ಹಗ್ಗವನ್ನು ಚಿತ್ರಿಸುವಲ್ಲಿ ಕಲಾವಿದ ತೋರಿದ ತಾಳ್ಮೆ ಮತ್ತು ಶ್ರದ್ಧೆ ಮೆಚ್ಚುವಂತಿದ್ದು, ಚಿತ್ರದಲ್ಲಿ ದೂರ ಮತ್ತು ಸಾಮೀಪ್ಯದ ಅನುಭವವನ್ನು, ಪಕ್ವಯುತವಾದ ವರ್ಣಸಂಯೋಜನೆಯನ್ನು ಸಮರ್ಪಕವಾಗಿ ದುಡಿಸಿಕೊಳ್ಳಲಾಗಿದೆ. "ಹಾವಿನ ಬಾಯಿಯ ಕಪ್ಪೆ ಹಸಿದು....."

ಎಂಬ ವಚನದ ಸಾರವನ್ನು ನೈಜ ಶೈಲಿಯ ಈ ಚಿತ್ರರೂಪಕದ ಮೂಲಕ ಅಭಿವ್ಯಕ್ತಪಡಿಸಲಾಗಿದೆ. ಒಟ್ಟು ಆಶಯದ ದೃಷ್ಟಿಯಿಂದ ಪ್ರಸ್ತುತ ಕಲಾಕೃತಿಯು ಯಶಸ್ವಿಯಾಗಿದೆ.

ಹಾವಿನ ಬಾಯಿಯ ಕಪ್ಪೆ ಹಸಿದು.... – ೨

ಮೇಲಿನ ಚಿತ್ರದಲ್ಲಿನ ಉಲ್ಲೇಖಿತ ವಚನವನ್ನು ಆಧರಿಸಿ ಕಲಾವಿದ ಡಿ. ಎ. ಉಪಾಧ್ಯಯವರು ಈ ಕಲಾಕೃತಿಯನ್ನು ರಚಿಸಿದ್ದಾರೆ. ಪ್ರಸ್ತುತ ಮೈಸೂರಿನ ಕಲಾವಿದರ ಸ್ವ ಸಂಗ್ರಹದಲ್ಲಿದೆ. ತೈಲವರ್ಣದ ಈ ಚಿತ್ರದಲ್ಲಿ ಸಂಸಾರದ ಅನಿತ್ಯತೆಯನ್ನು ಸಾಂಕೇತಿಕವಾಗಿ ಸೂಚಿಸಲಾಗಿದೆ. ದಟ್ಟವಾದ ಕೆಂಪು, ಕಪ್ಪು, ಹಳದಿ ಮತ್ತು ಕಂದುಬಣ್ಣಗಳನ್ನು ಇಲ್ಲಿ ಕಲಾವಿದ ಬಳಸಿದ್ದಾನೆ. ೧೫ನೆಯ ಚಿತ್ರದಲ್ಲಿ ಬಂದಿರುವ ವರ್ಣಸಂಯೋಜನೆ ಮತ್ತು ಈ ಚಿತ್ರದಲ್ಲಿ ಬಂದಿರುವ ವರ್ಣಸಂಯೋಜನೆಗೆ ಬಹಳ ಅಂತರವಿದೆ. ೧೫ನೆಯ ಚಿತ್ರದಲ್ಲಿ ವಿಷಯಸಂಗತಿಗಳ ನೇರನಿರೂಪಣೆಯಿದ್ದರೆ, ಇಲ್ಲಿ ಅವುಗಳ ಸಾಂಕೇತಿಕತೆ ಮಾತ್ರವಿದೆ. ಸಾವಿನ ಕೊನೆಯ ಹಂತದಲ್ಲಿ ತುಪ್ಪವನ್ನು ಕುಡಿಯುವ ವ್ಯಕ್ತಿಯನ್ನು ಹೊರತುಪಡಿಸಿದರೆ ಉಳಿದೆಲ್ಲ ಅಂಶಗಳು ಸಮಾನವಾಗಿ ಮೂಡಿಬಂದಿವೆ.

ಲಘು ಮತ್ತು ಗಾಢವಾದ ಕಂದುಬಣ್ಣದಿಂದ ರೂಪಿತವಾದ ದೊಡ್ಡ ಹೆಡೆಯುಳ್ಳ ಸರ್ಪವು ತನ್ನ ಬಾಯಿಯಲ್ಲಿ ಕಪ್ಪೆಯನ್ನು ಕಚ್ಚಿ ಹಿಡಿದಿದೆ. ಹಾವಿನ ಕ್ರೌರ್ಯ, ಕ್ರೋಧ, ಸಿಟ್ಟು, ಆಕ್ರೋಶದ ತೀವ್ರತೆಗಳು ಅದರ ಒಂದು ಕಣ್ಣಿನ ಮೂಲಕ ಸ್ಪಷ್ಟವಾಗಿ ಮತ್ತು ಪರಿಣಾಮಕಾರಿಯಾಗಿ ಪ್ರಕಟಗೊಳ್ಳುವಂತೆ ಮಾಡಿದ ಕಲಾವಿದನ ಪ್ರತಿಭೆ ನೋಡುಗರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಹಾವಿನ ಬಾಯಿಯಲ್ಲಿರುವ ಕಪ್ಪೆಯು ಕಪ್ಪುಬಣ್ಣದ್ದಾಗಿರುವುದರಿಂದ ಹೆಚ್ಚು ಸ್ಪಷ್ಟವಾಗಿ ಕಾಣಿಸದೆ, ಕೇವಲ ಅದರ ಕೆಂಪು ಬಣ್ಣದ ನಾಲಿಗೆಯು ನೊಣವನ್ನು ಹಿಡಿದಿರುವುದು ಸುಲಭ ನೋಟಕ್ಕೆ ಲಭ್ಯವಾಗುವುದಿಲ್ಲ. ಹಾವಿನ ಸುತ್ತಲೂ ಒಂದು ತಿಳಿಗಪ್ಪು ಬಣ್ಣದ ಪ್ರಭಾವಳಿಯಿದ್ದು ಅದರಲ್ಲಿ ಶಿವಲಿಂಗವಿದೆ. ಚಿತ್ರದ ಎಡಬದಿಯಲ್ಲಿ ತುಪ್ಪದ ಒಂದು ಬಟ್ಟಲು, ಅದರ ಸುತ್ತಲೂ ದಪ್ಪವಾದ ಕಪ್ಪುಬಣ್ಣದ ಹುರಿಗೊಂಡ ನೇಣಿನ ಹಗ್ಗದ ಕುಣಿಕೆಯೊಂದು ಚಿತ್ರಿತವಾಗಿದೆ. ಹಿನ್ನೆಲೆಯಲ್ಲಿ ಹಳದಿ, ಕೆಂಪು, ಹಸಿರು ಮತ್ತು ಕಪ್ಪು ವರ್ಣಗಳ ಸಂಯೋಜನೆ ಉತ್ತಮವಾಗಿ ಮೂಡಿಬಂದಿದೆ. ಅವಕಾಶದ ಉದ್ದಗಲಕ್ಕೂ ಚಾಚಿದ ಹಾವು, ಕುಣಿಕೆ, ತುಪ್ಪದ ಬಟ್ಟಲು ಇವೆಲ್ಲವನ್ನೂ ಸೂಚ್ಯವಾಗಿಸಿ, "ಹಾವಿನ ಬಾಯಿಯ ಕಪ್ಪೆ ಹಸಿದು..." ಎಂಬ ವಚನದ ಸಾರವನ್ನು ದೃಶ್ಯಾತ್ಮಕವಾಗಿ ನಿರೂಪಿಸಿದ ಈ ಚಿತ್ರದ ಸ್ಥಳಾವಕಾಶದ ಬಲಪಾರ್ಶ್ವದಲ್ಲಿ ದೃಶ್ಯಕೇಂದ್ರಿತ ಭಾಗವನ್ನು ಚಿತ್ರಿಸಿದರೆ, ಇತರ ಭಾಗದಲ್ಲಿ ಅದಕ್ಕೆ ಸಂಬಂಧಿತ ಭಾಗವನ್ನು, ಹಾವಿನ ಬಾಲ, ತುಪ್ಪದ ಬಟ್ಟಲು, ಕುಣಿಕೆ ಇಂತಹ ವಿನ್ಯಾಸಗಳನ್ನು ದುಡಿಸಿಕೊಂಡು ಈ ಚಿತ್ರವನ್ನು ರಚಿಸಲಾಗಿದೆ.

ಹಾವಿನ ಬಾಯಿಯ ಕಪ್ಪೆ ಹಸಿದು... – ೩

ಕಲಾವಿದ ಜಿ. ಕೆ. ಶಿವಣ್ಣ ಅವರ ಈ ಚಿತ್ರವನ್ನು "ವಚನ ಚಿತ್ತಾರ"[೨೧] ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. A4 (೮.೧/೨" x ೧೧.೧/೨") ಕಾಗದದಲ್ಲಿ ಈ ರೇಖಾಚಿತ್ರವನ್ನು ರಚಿಸಲಾಗಿದೆ.

೨೧. ಜಿ. ಕೆ. ಶಿವಣ್ಣ : ವಚನ ಚಿತ್ತಾರ, ಓನಿಯರ್ಸ್ ಪ್ರಕಾಶನ, ಬೆಂಗಳೂರು. ೨೦೧೧

ಆಕಾಶದತ್ತ ಹಾರುವ ನೊಣಕ್ಕೆ ಹಾವಿನ ಬಾಯಿಯೊಳಗಿದ್ದ ಕಪ್ಪೆ ಆ ನೊಣವನ್ನು ತಿನ್ನುವ ಬಯಕೆ. ಅದರ ಪಕ್ಕದಲ್ಲಿ ನೇಣುಬಿಗಿದ ಕಂಬವಿದ್ದು, ಅದರ ಕೆಳಗೆ ಇನ್ನೇನು ನೇಣಿಗೆ ಬಿಗಿದು ಒಡ್ಡುವ ಪುರುಷನೊಬ್ಬ ಕುಂಭದಲ್ಲಿಯ ಅಮೃತವನ್ನು ಕುಡಿಯುತ್ತಿರುವಂತೆ ಚಿತ್ರ ರಚಿಸಲಾಗಿದೆ. ಇಲ್ಲಿ ಕಪ್ಪೆ ನುಂಗುವ ಹಾವು ಗಮನ ಸೆಳೆಯುತ್ತದೆ. ಕಪ್ಪು ಮಶಿಯ ಪೆನ್ನಿನಿಂದ ಚಿತ್ರಿಸಲಾದ ಈ ಕಲಾಕೃತಿಯು ಸಂಪೂರ್ಣ ರೇಖಾಚಿತ್ರವಾಗಿದೆ. ಈ ಚಿತ್ರದಲ್ಲಿನ ನೇಣಿಗೆ ಶರಣಾಗುವವನು ಒಬ್ಬ ಬೇಡನ ರೂಪದ ಒಬ್ಬ ವ್ಯಕ್ತಿ ಎಂದು ಹೇಳಬಹುದು. ಹೇಗೆಂದರೆ, ಅವನ ದೇಹ, ಅವನು ತೊಟ್ಟಿರುವ ವಸ್ತ್ರ ಹಾಗೂ ಆಯುಧದಿಂದ ತಿಳಿದುಬರುತ್ತದೆ.

ಹಾವಿನ ಬಾಯಿಯ ಕಪ್ಪೆ ಹಸಿದು... – ೪

ಕಲಬುರ್ಗಿಯ ಡಾ. ಎ. ಎಸ್. ಪಾಟೀಲರವರು A4 (೮.೧/೨" x ೧೧.೧/೨") ಅಳತೆಯ ಕಾಗದದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಸಂಗ್ರಹದಲ್ಲಿದೆ. ಈ ಚಿತ್ರದಲ್ಲಿ ದೊಡ್ಡಗಾತ್ರದ ಕಪ್ಪೆಯನ್ನು ನುಂಗುತ್ತಿರುವಾಗ ಕಪ್ಪೆಯು ತನ್ನ ಜೀವವನ್ನು ಉಳಿಸಿಕೊಳ್ಳುವುದಕ್ಕಿಂತ ತನ್ನ ಮುಂದೆ ನೆಲದಿಂದ ಹಾರಿ ಹೋಗುವ ನೊಣವನ್ನು ನುಂಗುವ ಆಸೆಯ ಚಿತ್ರಣವನ್ನು ಇಲ್ಲಿ ನೈಜತೆಯಿಂದ ಚಿತ್ರಿಸಲಾಗಿದೆ. ಕಪ್ಪುಬಿಳುಪಿನ ಚಿತ್ರವಿದ್ದರೂ ಸರಳವಾಗಿ ಅರ್ಥಮಾಡಿಕೊಳ್ಳುವಂತೆ ಮೂಡಿಬಂದಿದೆ. ಜೀವಿಗಳಂತೆ ಮಾನವನೂ ಸಹ ಅಷ್ಟೇ ಆಸೆವಂತ ಎಂಬುದು ಈ ಚಿತ್ರದಲ್ಲಿ ಕಂಡುಬರುತ್ತದೆ.

ಒಬ್ಬ ವ್ಯಕ್ತಿಗೆ ಇನ್ನೇನು ಕೆಲವೇ ಸಮಯದಲ್ಲಿ ಸೂಲವನ್ನೇರಿಸುವ ಸಮಯ. ಆದರೂ ಅವನಿಗೆ ಅಮೃತ ಕುಡಿಯುವ ಆಸೆಯಂತೆ ಚಿತ್ರದಲ್ಲಿ ರಚಿಸಲಾಗಿದೆ. ಸೂಲಿಗೇರುವವನು ತಲೆಗೆ ಟೋಪಿ, ಕಾರಾಗೃಹ ವಸ್ತ್ರ, ಧರಿಸಿರುವಂತೆ, ಇದರ ಮುಂದೆ ಸುಳ್ಳು ಹೇಳಿ ಹೊಟ್ಟೆ ತುಂಬಿಸಿಕೊಳ್ಳುವವನ ಚಿತ್ರವು ಕಲಾವಿದನ ಕಲ್ಪನೆಯು ಸಾರ್ಥಕಗೊಳಿಸಿದೆ. ನಮ್ಮ ಕೂಡಲ ಸಂಗಮದೇವ ಸುಳ್ಳು ಹೇಳುವವರನ್ನು, ವಂಚನೆ ಮಾಡುವವರನ್ನು, ಆಸೆ ತೋರುವವರನ್ನು ಮೆಚ್ಚುವುದಿಲ್ಲವೆಂದು ಚಿತ್ರದ ಮೇಲ್ಭಾಗದಲ್ಲಿ ವೃತ್ತಾಕಾರದ ಪ್ರಭಾವಳಿಯಲ್ಲಿ ಇಷ್ಟಲಿಂಗ ಪೂಜಿಸುತ್ತಿರುವಂತೆ ಚಿತ್ರ ರಚಿಸಿದ್ದು ಕಂಡುಬರುತ್ತದೆ.

೩.೧೪. ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ... – ೧

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ

ಅಂಬುಜಕ್ಕೆ ಭಾನುವಿನುದಯದ ಚಿಂತೆ

ಭ್ರಮರಂಗೆ ಪರಿಮಳ {ದ} ಬಂಡುಂಬ ಚಿಂತೆ

ಎನಗೆ ನಮ್ಮ ಕೂಡಲಸಂಗಮದೇವರ ನೆನೆವುದೇ ಚಿಂತೆ [೨೨]

ವಚನದ ಸಾರಾಂಶ : ಈ ಲೋಕದಲ್ಲಿ ಬದುಕುವ ಪ್ರತಿಯೊಬ್ಬನಿಗೂ ಒಂದೊಂದರ ಚಿಂತೆ.

೨೨. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೩೬೫), ಪು–೮೭

ಕ್ಷಣಿಕ ಸುಖಕ್ಕಾಗಿ ಚಿಂತೆ ಮಾಡುವ ಮನುಜ ಶಾಶ್ವತ ಸುಖದ ಚಿಂತೆ ಮಾಡುವದಿಲ್ಲ. ಚಕೋರ ಪಕ್ಷಿಗೆ ಚಂದ್ರಮನ ಉದಯದ ಚಿಂತೆ. ಕಮಲಕ್ಕೆ ಸೂರ್ಯನ ಉದಯದ ಚಿಂತೆ. ಭ್ರಮರಕ್ಕೆ ಹೂವಿನ ಪರಿಮಳವನ್ನು ಹೀರುವ ಚಿಂತೆ. ನನಗೆ ಮಾತ್ರ ಕೂಡಲಸಂಗಮ ದೇವರ ನಾಮಸ್ಮರಣೆಯ ಚಿಂತೆ ಎನ್ನುವ ಬಸವಣ್ಣನವರು ಕೂಡಲಸಂಗಮನ ನಾಮಸ್ಮರಣೆಯಲ್ಲಿಯೇ ಶಾಶ್ವತ ಸುಖವಡಗಿದೆ ಎನ್ನುವರು.

ಚಿತ್ರದ ವಿಶ್ಲೇಷಣೆ : ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಸವಣ್ಣನಿಗೆ ಕೂಡಲ ಸಂಗಮದೇವನನ್ನು ನೆನೆಯುವುದೇ ಚಿಂತೆ ಎಂಬ ಪ್ರಧಾನ ಆಶಯವನ್ನು ಕಲಾವಿದ ವ್ಯಕ್ತಪಡಿಸಿದ್ದಾನೆ. ಅದಕ್ಕೆ ಪೂರಕವಾಗಿ ಇನ್ನುಳಿದ ಚಿಂತೆಗಳನ್ನು ವಚನದಲ್ಲಿ ಉಲ್ಲೇಖಿಸಿರುವಂತೆ ಚಕೋರಂಗೆ ಚಂದ್ರನ ಚಿಂತೆಯನ್ನು ಚಿತ್ರದ ಬಲಮೇಲ್ಭಾಗದಲ್ಲಿ, ಕಮಲದ ಹೂವಿಗೆ ಸೂರ್ಯನ ಉದಯದ ಚಿಂತೆಯನ್ನು ಮೇಲ್ಭಾಗದಲ್ಲಿ, ಭ್ರಮರಕ್ಕೆ ಮಧುವಿನ ಮಕರಂದವನ್ನು ಹೀರುವ ಚಿಂತೆಯನ್ನು ಚಿತ್ರದ ಎಡ ಕೆಳಭಾಗದಲ್ಲಿ, ಕೂಡಲ ಸಂಗಮನನ್ನು ನೆನೆಯುವುದನ್ನು ಚಿತ್ರದ ಕೆಳಗಿನ ಬಲಭಾಗದಲ್ಲಿ ಕಾಣುತ್ತೇವೆ. ತೈಲವರ್ಣ ಸಂಪ್ರದಾಯಕ್ಕೆ ಸೇರಿದ ಈ ಚಿತ್ರದಲ್ಲಿ ಕಡುಹಸಿರು, ತಿಳಿಹಸಿರು, ಗುಲಾಬಿ, ಕೆಂಪು, ತೆಳುನೀಲಿ ಬಣ್ಣಗಳನ್ನು ಪ್ರಮುಖವಾಗಿ ಬಳಸಲಾಗಿದೆ.

ತೆಳುವಾದ ಕೊಂಬೆಯ ಮೇಲೆ ಚಕೋರ ಪಕ್ಷಿಯು ಚಂದಿರನೆಡೆಗೆ ಮುಖ ಮಾಡಿ ಆತನ ಉದಯವನ್ನು ನಿರೀಕ್ಷಿಸುವಂತಿದೆ. ಹಿನ್ನೆಲೆಯಲ್ಲಿ ಪಾರದರ್ಶಕ ವರ್ಣದಲ್ಲಿ ರೂಪಿಸಿದ ದೇವಾಲಯವು ಮಸುಕು ಮಸುಕಾಗಿ ಕಾಣುತ್ತಿದೆ. ಬಲ ಮೇಲ್ಭಾಗದಲ್ಲಿ ಸರೋವರದಲ್ಲಿ ಕೆಂಪು ಗುಲಾಬಿಬಣ್ಣದ ಆರು ತಾವರೆಗಳಿವೆ. ಅವುಗಳಲ್ಲಿ ಮೊಗ್ಗುಗಳಿದ್ದು ಒಂದು ಮಾತ್ರ ಅರಳುವ ಹಂತದಲ್ಲಿದೆ. ಭಿತ್ತಿಯಲ್ಲಿ ಆಗ ತಾನೆ ಉದಯಿಸುವ ಸೂರ್ಯನ ಬೆಳಕು ಮಸುಕು ಮಸುಕಾಗಿದೆ. ಕೆಳ ಬಲಭಾಗದಲ್ಲಿ ಹಳದಿ ಮತ್ತು ಕೆಂಪುಬಣ್ಣದ ಹೂವುಗಳು ಆಕರ್ಷಕವಾಗಿ ಚಿತ್ರಿತವಾಗಿದ್ದು, ಅವುಗಳ ಬದಿಯ ಎರಡು ಹಳದಿಬಣ್ಣದ ರೆಕ್ಕೆಗಳನ್ನು ಮತ್ತು ಕಪ್ಪು ಬಣ್ಣದ ಶರೀರವನ್ನು ಹೊಂದಿರುವ ದುಂಬಿಗಳು ಮಕರಂದವನ್ನು ಹೀರುವ ಸನ್ನಾಹದಲ್ಲಿವೆ. ಚಿತ್ರದ ಕೆಳಗಿನ ಎಡಭಾಗದಲ್ಲಿ ಅಂದರೆ ನೋಡುಗರಿಗೆ ಕೆಳಗಿನ ಬಲಭಾಗದಲ್ಲಿ ಆಕಾಶದತ್ತ ಮುಖ ಮಾಡಿ ತನ್ನೆರಡೂ ಕೈಗಳ ಬೊಗಸೆಗಳನ್ನು ಜೋಡಿಸಿ ಶಿವನನ್ನು ಪ್ರಾರ್ಥಿಸುವ ಬಸವಣ್ಣನ ಆಕೃತಿಯಿದೆ. ನೇರಳೆ ಬಣ್ಣದ ಮೇಲುಹೊದಿಕೆ, ಬಿಳಿಬಣ್ಣದ ಪಂಚೆಯನ್ನು ಉಟ್ಟು ಹಸಿರು ನೆಲದ ಮೇಲೆ ಮರದ ಕೊಂಬೆಯೊಂದಕ್ಕೆ ಬೆನ್ನನ್ನು ಆನಿಸಿ ಕುಳಿತಿರುವ ಬಸವಣ್ಣನ ಮುಖವು ದಿಗಂತದತ್ತ ಮುಖ ಮಾಡಿದೆ. ನೋಡುಗರಿಗೆ ಅದು ಗೋಚರಿಸುವುದಿಲ್ಲ. ಪ್ರಸ್ತುತ ಚಿತ್ರದಲ್ಲಿ ಕಲಾವಿದ ವಚನದ ಆಶಯವನ್ನು ಚಿತ್ರಪಠ್ಯದಿಂದ ಸರಳವಾಗಿ ಗ್ರಹಿಸಲು ಅನುವು ಮಾಡಿಕೊಟ್ಟಿರುವುದು ವಿಶೇಷವಾಗಿದ್ದು, ಒಂದು ಬಗೆಯಲ್ಲಿ ಮಕ್ಕಳ ಪಠ್ಯಪುಸ್ತಕಗಳಲ್ಲಿ ಪಂಚತಂತ್ರದ ಕಥೆಯೊಂದನ್ನು ಬಿಡಿಬಿಡಿಯಾಗಿ ಚಿತ್ರಿಸಿರುವಂತೆ ಇಲ್ಲಿಯೂ ಸಹ ವಿವರವಾಗಿ, ಬಿಡಿಬಿಡಿಯಾಗಿ ಚಿತ್ರಿಸಿದ್ದಾರೆ. ಇಂತಹ ಚಿತ್ರಗಳು ಅನಕ್ಷರಸ್ಥರನ್ನು ಅಕ್ಷರಶಃ ತಲುಪುವುದರಲ್ಲಿ ಸಂದೇಹವಿಲ್ಲ. ಇಲ್ಲಿ ಚಿತ್ರಿಸಿರುವ ವಸ್ತು, ಆಶಯ, ವರ್ಣಸಂಯೋಜನೆ ಉತ್ತಮವಾಗಿ ಮೂಡಿಬಂದಿವೆ.

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ... – ೨

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಮೈಸೂರಿನ ಹಿರಿಯ ಕಲಾವಿದರಾದ ಎಂ. ವೀರಪ್ಪನವರು ಕೃತಿಯನ್ನು ರಚಿಸಿದ್ದು, ಆದರೂ ಮತ್ತೋರ್ವ ಕಲಾವಿದ ಉತ್ತರಕರ್ನಾಟಕದ ಕಲಬುರ್ಗಿಯ ಶ್ರೀ. ಎ. ಎಸ್. ಪಾಟೀಲರು ಈ ವಚನವನ್ನಾಧರಿಸಿ ತಮ್ಮದೇ ಆದ ಕಲಾತ್ಮಕ ನೆಲೆಯಲ್ಲಿ ಚಿತ್ರವನ್ನು ರಚಿಸಿದ್ದಾರೆ. ಇಲ್ಲಿ ತಿಳಿ ಕೆಂಪು ವರ್ಣದಲ್ಲಿ ಅರಳಿದ ಹೂವಿನ ಮಧ್ಯದಲ್ಲಿ ಹಳದಿ ವರ್ಣವನ್ನು ಲೇಪಿಸಿದ್ದು, ಇದು ನೋಡುಗರಲ್ಲಿ ಹೂವಿನ ಮಧ್ಯ ಯಾವುದೋ ಒಂದು ಬೆಳಕಿನ ಪ್ರಕಾಶಮಾನದಲ್ಲಿ ಒಂದು ಹುಳ ಹೂವಿನ ಪರಿಮಳವನ್ನು ಹೀರುವಂತೆ ಕಾಣುತ್ತದೆ. ಇದರ ಕೆಳಭಾಗದಲ್ಲಿ ಒಂದು ಪಕ್ಷಿ ಚಂದ್ರನನ್ನು ನೋಡುತ್ತಿರುವಂತೆ ಚಿತ್ರಿಸಿದ್ದು, ಆಕಾಶದಲ್ಲಿ, ಅಂಗೈಯಲ್ಲಿ ಇಷ್ಟಲಿಂಗವನ್ನು ಪೂಜಿಸುತ್ತಿರುವ ಚಿತ್ರವಿದ್ದು, ಅಂಗೈಯೊಳಗಿನ ಇಷ್ಟಲಿಂಗದ ಸುತ್ತಲೂ ಪ್ರಕಾಶ ಬಿದ್ದಂತೆ ಇಲ್ಲಿ ಕಲಾವಿದ ವರ್ಣದ ಮೂಲಕ ಸಂಯೋಜಿಸಿದ್ದು ಎದ್ದು ಕಾಣುತ್ತದೆ.

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ... – ೩

ಕಲಬುರ್ಗಿಯ ಡಾ. ಎ. ಎಸ್. ಪಾಟೀಲರವರು A4 ಅಳತೆಯ ಕಾಗದದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಸಂಗ್ರಹದಲ್ಲಿದೆ. ಚಿತ್ರದ ಮೇಲ್ಭಾಗದಲ್ಲಿ ಚಂದ್ರನಿದ್ದು, ಚಂದ್ರನ ಸುತ್ತಲೂ ಕಪ್ಪು ಚುಕ್ಕೆಗಳನ್ನಿಟ್ಟು, ಚಂದ್ರನ ಕಾಂತಿಯನ್ನು ಹೆಚ್ಚಿಸಿದ್ದಾನೆ. ಆ ಚಂದ್ರನನ್ನೇ ನೋಡುವ ಚಕೋರ ಗಿಡದ ಮೇಲೆ ಕುಳಿತಂತೆ ಚಿತ್ರಿಸಲಾಗಿದೆ. ಕೆಸರಿನ ಕಮಲವು ಸೂರ್ಯನ ಕಾಂತಿಯಿಂದ ಅರಳುತಿದೆ. ಅಲ್ಲಿ ಅರಳಿದ ಹೂಗಳ ಮಕರಂದವನ್ನು ಹೀರಲು ದುಂಬಿಗಳು ಬರುತ್ತಿರುವಂತೆ ಸೂಕ್ಷ್ಮವಾಗಿ ಕಲಾವಿದ ರಚಿಸಿದ್ದಾನೆ. ಅದರ ಕೆಳಭಾಗದಲ್ಲಿ ದೇವಾಲಯವೊಂದಕ್ಕೆ ಸೂರ್ಯನ ಪ್ರಕಾಶವು ಎಲ್ಲ ದಿಕ್ಕಿಗೂ ಆವರಿಸಿ, ಇಡೀ ಚಿತ್ರಕ್ಕೆ ಕೇಂದ್ರಬಿಂದುವಾಗಿದ್ದು, ಅದರ ಕೆಳಗೆ ವ್ಯಕ್ತಿಯೊಬ್ಬ ಎಡಗೈ ಅಂಗೈಯಲ್ಲಿ ಲಿಂಗವನ್ನು ಇಟ್ಟುಕೊಂಡು ಬಲಗೈಯಿಂದ ಪೂಜಿಸುತ್ತಾ ಕುಳಿತಿದ್ದಾನೆ. ತೋಳಿಗೆ ರುದ್ರಾಕ್ಷಿ ಧರಿಸಿದ ವ್ಯಕ್ತಿ ಆಕರ್ಷಕವಾಗಿದ್ದಾನೆ.

೩.೧೫. ಹಬ್ಬಕ್ಕೆ ತಂದ ಹರಕೆಯ ಕುರಿ... – ೧

ಹಬ್ಬಕ್ಕೆ ತಂದ ಹರಕೆಯ ಕುರಿ

ತೋರಣಕ್ಕೆ ತಂದ ತಳಿರ ಮೇಯಿತ್ತು ಕೊಂದಹರೆಂಬುದನರಿಯದೆ

ಬೆಂದೊಡಲ ಹೊರೆಯ ಹೋಯಿತ್ತು

ಕೊಂದವರುಳಿದರೆ ಕೂಡಲಸಂಗಮದೇವಾ [೨೩]

ವಚನದ ಸಾರಾಂಶ : ಮನುಜನ ಬಾಳ್ವೆ ಅಸ್ಥಿರವಾದುದು. 'ಹುಟ್ಟುವುದು ಆಕಸ್ಮಿಕ, ಸಾಯುವುದು ಅನಿವಾರ್ಯ'ವೆಂಬಂತೆ ಹುಟ್ಟಿದ ಪ್ರತಿಯೊಬ್ಬನು ಸಾಯಲೇಬೇಕು. ಇದು ವಿಧಿನಿಯಮ. ಸಾವು ಯಾವತ್ತೂ

---

೨೩. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೧೨೯), ಪು–೩೫

ವ್ಯಕ್ತಿಯ ಬೆನ್ನ ಹಿಂದೆ ಸುತ್ತುತ್ತಿರುತ್ತದೆ. ಅದರ ಅರಿವಿಲ್ಲದೆ ಬದುಕುವ ವ್ಯಕ್ತಿಯ ಬಾಳ್ವೆ ವಿಡಂಬನಾತ್ಮಕವಾದುದು. ತನ್ನ ಸ್ವಾರ್ಥಸಾಧನೆಗೆ ಹರಕೆ ಹೊರುವ ಮನುಜ, ಹರಕೆಗೆ ಬಲಿ ಮಾಡುವದು ಏನೂ ಅರಿಯದ, ಮುಗ್ಧ ಜೀವಿಯನ್ನು. ಹರಕೆಗೆ ತಂದ ಕುರಿಯನ್ನು ಅತ್ಯಂತ ಸುಂದರವಾಗಿ ಸಿಂಗರಿಸಿ, ಬಲಿ ಕೊಡಲು ಸಿದ್ಧತೆ ನಡೆಸಿದರೆ, ತೋರಣಕ್ಕೆ ಕಟ್ಟಿದ ತಳಿರನ್ನೆ ಹಸಿದು ತಿನ್ನುವ ಕುರಿ ಅದೇಸು ಕಾಲ ಬದುಕುವದು? ಆ ಕುರಿಯನ್ನು ಕೊಂದು, ಹಬ್ಬವನ್ನಾಚರಿಸುವ ಮನುಷ್ಯನಾದರೂ ಏಸು ಕಾಲ ಬದುಕುವವ. ಸಾವು ತನ್ನ ಕಣ್ಮುಂದೆ ಸುತ್ತುವದನ್ನರಿಯದ ಕುರಿ ತನ್ನ ಹಸಿವಿನುರಿಯನ್ನು ಹಿಂಗಿಸಿಕೊಳ್ಳುವ ಪರಿ. ದೇವನಿಂದ ಹುಟ್ಟಿದ ಜೀವಿಯನ್ನು ಕೊಂದು ಬದುಕುವ ಮನುಷ್ಯನ ಬದುಕಿನ ಪರಿ ಹಾಸ್ಯಾತ್ಮಕವಾಗಿದೆ.

ಚಿತ್ರದ ವಿಶ್ಲೇಷಣೆ : ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಭಗವಂತನಿಂದ ನಿರ್ಮಿತವಾದ ಜೀವರಾಶಿಗಳು ಆತ್ಮಸಂಬಂಧದಲ್ಲಿ ಒಂದೇ ಆದರೂ ಅವುಗಳನ್ನು ಪರಸ್ಪರ ಕೊಂದು ತಿಂದು ಬದುಕುವ ಮಾನವನ ಹೀನ ಗುಣವನ್ನು ವಿಡಂಬಿಸುವ ವಚನದ ಆಶಯವನ್ನು ವರ್ಣಗಳಲ್ಲಿ ಪ್ರತಿಪಾದಿಸಿರುವುದನ್ನು ಕಾಣುತ್ತೇವೆ. ನಸುಗೆಂಪು, ಹಸಿರು, ಆಕಾಶ ನೀಲಿ, ತಿಳಿಹಸಿರು ಮುಂತಾದ ತಂಪು ಬಣ್ಣಗಳು ಇಲ್ಲಿ ಪ್ರಧಾನವಾಗಿ ಬಳಕೆಯಾಗಿವೆ.

ವಿಶೇಷವಾಗಿ ತಿಳಿಹಸಿರು ಬಣ್ಣವೇ ಕೃತಿಯಲ್ಲಿ ಸಿಂಹಪಾಲು ಪಡೆದಿದೆ. ಪೀಠವೊಂದರಲ್ಲಿ ಬಂಗಾರದ ಕಿರೀಟ, ಹಣೆಯಲ್ಲಿ ಕಾಸಿನಗಲದ ಕೆಂಪು ಕುಂಕುಮ, ಕೊರಳಲ್ಲಿ ಬಣ್ಣದ ಹೂವುಗಳ ಹಾರ, ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಹಳದಿ ಬಣ್ಣದ ವೃತ್ತಾಕಾರದ ಗುರಾಣಿ, ಮೂಗಿನಲ್ಲಿ ದೊಡ್ಡದಾದ ಮೂಗುತಿ, ಬಾಯಿಯಲ್ಲಿ ಕಂಡೂ ಕಾಣದಂತಿರುವ ಕೋರೆಹಲ್ಲುಗಳು, ನೆಟ್ಟದೃಷ್ಟಿ, ತೆರೆದ ಬಾಯಿ, ಹಸಿರು ಕುಪ್ಪಸ ಧರಿಸಿದ ಮಾರಿದೇವತೆಯೊಬ್ಬಳ ಆಕೃತಿಯಿದೆ. ಅವಳಿಗೆ ಮನುಷ್ಯರಂತೆ ಎರಡು ಕೈಗಳು ಮಾತ್ರ ಇವೆ. ಅವಳ ಎದುರಿಗೆ ಕೆಳಭಾಗದಲ್ಲಿ ಕಪ್ಪು ಗುಂಗುರು ಕೂದಲು, ಮಧ್ಯಮಗಾತ್ರದ ಮೀಸೆಯನ್ನುಳ್ಳ ವ್ಯಕ್ತಿಯೊಬ್ಬ ತಲೆಯನ್ನು ಬಾಗಿಸಿ, ತನ್ನ ಕೈಯಲ್ಲಿರುವ ಕತ್ತಿಯನ್ನು ಕಲ್ಲಿನ ಮೇಲೆ ಮಸೆಯುವ ಕಾಯಕದಲ್ಲಿ ತೊಡಗಿದ್ದಾನೆ. ಅವನ ಮುಖದಲ್ಲಿ ಆವೇಶ, ಉತ್ಸಾಹದ ಭಾವನೆಗಳಿದ್ದಿದ್ದರೆ ಉತ್ತಮವಾಗಿತ್ತು ಎನ್ನಿಸುತ್ತದೆ. ಆತನ ಎದುರಿಗೆ ಮಂಟಪದ ತೆಳುವಾದ ಕಂಭವೊಂದಕ್ಕೆ ಕಟ್ಟಿದ ಬಾಳೆಯ ದಿಂಡಿಗೆ ಸಿಕ್ಕಿಸಿದ ಮಾವಿನ ಎಲೆಗಳನ್ನು ಕಪ್ಪು ಬಣ್ಣದ ಹೋತವೊಂದು ತಿನ್ನುತ್ತಿರುವ ದೃಶ್ಯವಿದೆ. (ವಚನದಲ್ಲಿ ಹಬ್ಬಕ್ಕೆ ತಂದ ಹರಕೆಯ ಕುರಿ ಎಂಬ ಸಾಲಿದೆ. ಆದರೆ ಕಲಾವಿದ ಇಲ್ಲಿ ಕುರಿಯ ಬದಲು ಹೋತಿನ ಚಿತ್ರಣವನ್ನು ತಂದಿರುವುದು ಅಚ್ಚರಿಯೆನಿಸಿದೆ.) ಹೋತಿನ ಕೆಳಭಾಗದಲ್ಲಿ ಒಂದು ಪುಟ್ಟಿಯಲ್ಲಿ ಹೂವು, ಬಾಳೆಯ ಎಲೆಗಳು, ಮತ್ತು ಚಿಕ್ಕ ತಂಬಿಗೆಳಿರುವ ಪೂಜಾ ಪರಿಕರವಿದೆ. ತಳಿರು ಮಂಟಪ, ಹಸಿರು ಬಾಳೆ ಎಲೆಗಳು, ಹಿಂಬದಿಯಲ್ಲಿ ತೆಳುನೀಲಿ ಬಣ್ಣದಿಂದ ರಚಿತವಾದ ಚಿಕ್ಕ ಬೆಟ್ಟ ಇವೆಲ್ಲವೂ ಪ್ರಕೃತಿಯ ಮಡಿಲಲ್ಲಿ ನಡೆಯುವ ಬಲಿ ಪ್ರಕರಣವನ್ನು ಸೂಚಿಸುತ್ತವೆಯಾದರೂ ಇಲ್ಲಿರುವ ದೇವತಾ ಪ್ರತಿಮೆ, ಪ್ರತಿಮೆ ಎನಿಸುವುದಿಲ್ಲ. ಪ್ರಾಕೃತಿಕ ವಿನ್ಯಾಸಗಳೆಲ್ಲವೂ ವಾಸ್ತವವೆಂಬಂತೆ ಚಿತ್ರಿತವಾಗಿರುವುದು ಸೋಜಿಗವೆನಿಸುತ್ತದೆ.

ಹಬ್ಬಕ್ಕೆ ತಂದ ಹರಕೆಯ ಕುರಿ... – ೨

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಒಟ್ಟು ಐದು ಸನ್ನಿವೇಶಗಳಿವೆ. ತೈಲವರ್ಣ ಮಾಧ್ಯಮದಲ್ಲಿ ರಚಿತವಾದ ಈ ಚಿತ್ರವು ಕೊಲಾಜ್ ಮಾದರಿಯದಾಗಿದೆ. ಚಿತ್ರದ ಬಲಬದಿಯಲ್ಲಿ ಚೌಕಾಕಾರ ಮುಖದ, ದಟ್ಟವಾದ ಕಪ್ಪು ತಲೆ ಕೂದಲಿನ, ಹಣೆಯಲ್ಲಿ ವಿಭೂತಿಯನ್ನು ಢಾಳಾಗಿ ಬಳಿಯಲಾಗಿದೆ. ನೀಳವಾದ ಮೂಗು, ದಪ್ಪನೆಯ ತಿದ್ದಿದ ಮೀಸೆ, ದೃಢತೆಯನ್ನು ಸೂಸುವ ತುಟಿಗಳಿಂದ ಕೂಡಿರುವ, ಮುಖವನ್ನು ಎಡಬದಿಗೆ ಓರೆಯಾಗಿಸಿರುವ ಬಸವಣ್ಣನ ಭಾವಚಿತ್ರವು ಕಂಡುಬರುತ್ತದೆ. ಬಿಳಿವಸ್ತ್ರದ ನಿಲುವಂಗಿ, ಕೆಂಪುವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ಕಂದು ಮತ್ತು ಹಳದಿ ವರ್ಣ ಮಿಶ್ರಣದ ರುದ್ರಾಕ್ಷಿಯ ಮಾಲೆಯನ್ನು ಹೊಂದಿರುವ ಬಸವಣ್ಣನ ಚಿತ್ರ ಈ ಹಿಂದಿನ ಕಲಾವಿದರ ರಚನೆಗಳಂತಿರದೆ, ಸಾಮಾನ್ಯ (ಚಿತ್ರನಟ ಶ್ರೀಧರ) ಮನುಷ್ಯನೊಬ್ಬನನ್ನು ನೆನಪಿಗೆ ತರುವಂತಿದೆ. ಹಿಂಬದಿಯ ಭಿತ್ತಿಯಲ್ಲಿ ಹಸಿರು ಬಣ್ಣದ ಎಲೆಗಳನ್ನು ಕಾಣಬಹುದಾಗಿದೆ.

ಬಸವಣ್ಣನ ಕೆಳಬದಿಯಲ್ಲಿ ವಯಸ್ಸಾದ ಹೆಂಗಸೊಬ್ಬಳು ತಲೆಯ ಮೇಲೆ ಹೂವುಗಳ ಗುಚ್ಛವನ್ನು ಹೊಂದಿರುವ ಬಿಂದಿಗೆಯನ್ನು ಹೊತ್ತಿರುವ ದೃಶ್ಯವಿದೆ. ಇದರಲ್ಲಿ ಕಪ್ಪು, ಕೆಂಪು ಮತ್ತು ಹಳದಿ ಬಣ್ಣಗಳ ಮಿಶ್ರಣವಿದೆ. ಚಿತ್ರದ ಮಧ್ಯಭಾಗದಲ್ಲಿ ಎತ್ತರದ ಪೀಠದ ಮೇಲೆ ಕುಳಿತಿರುವ ಉಗ್ರ ದೇವತೆಯು ಚಿತ್ರವಿದ್ದು, ಅದರ ಕೆಳಗೆ ಇಬ್ಬರು ವ್ಯಕ್ತಿಗಳು ಬಲಿಕಂಭದಲ್ಲಿ ಹೋತದ ಮುಖವನ್ನು ಸಿಕ್ಕಿಸಿ, ಒಬ್ಬ ಕತ್ತಿಯಿಂದ ಅದನ್ನು ಕಡಿಯಲು ನಿಂತಿರುವ ಭಂಗಿಯಲ್ಲಿದ್ದಾನೆ. ಇನ್ನೊಬ್ಬ ಹೋತ ಮಿಸುಕಾಡದಂತೆ ಅದರ ಕಾಲುಗಳನ್ನು ಹಿಡಿದು ಕುಳಿತಿದ್ದಾನೆ. ಇದೆಲ್ಲವೂ ಕೆಂಪುವರ್ಣದಲ್ಲಿ ರಚಿತವಾಗಿದ್ದು ಹಿಂಸೆಯನ್ನು ಸೂಚಿಸಲು ಪ್ರಧಾನವಾಗಿ ಕೆಂಪುಬಣ್ಣವನ್ನು ಇಲ್ಲಿ ಕಲಾವಿದ ಬಳಸಿರುವುದು ಯೋಗ್ಯವಾಗಿದೆ. ಅದೇ ಚಿತ್ರದ ಕೆಳಗೆ ನಿಂತಿರುವ ಜನರ ಮೇಲೆ ಬಲಿಯಾದ ಪ್ರಾಣಿಯ ರಕ್ತದ ಹನಿಗಳು ಬೀಳುತ್ತಿರುವ ಸನ್ನಿವೇಶವಿದೆ.

ಚಿತ್ರದ ಎಡಭಾಗದ ಕೊನೆಯಲ್ಲಿ ಮುಖದಲ್ಲಿ ನೋವು, ವಿಷಾದದ ಭಾವನೆಯನ್ನು ಹೊತ್ತು ನಿಂತಿರುವ ಹಿರಿಯ ವಯಸ್ಸಿನ ಇಬ್ಬರು ವೃದ್ಧರಿದ್ದಾರೆ. ಅವರ ಮೇಲುಗಡೆಯ ಚಿತ್ರದಲ್ಲಿ ಕಡುಹಸಿರು, ಕಪ್ಪು ವರ್ಣಗಳ ಮಿಶ್ರಣದ ಹೋತ ಚಲನೆಯ ಭಂಗಿಯಲ್ಲಿದ್ದು ತನ್ನ ಮುಖವನ್ನು ಹಿಂದಕ್ಕೆ ತಿರುಗಿಸಿದ ದೃಶ್ಯವಿದೆ. ಹಿನ್ನೆಲೆಯಲ್ಲಿ ತೆಳು ಹಳದಿ, ತೆಳು ಹಸಿರು, ತೆಳು ಕೇಸರಿ ಬಣ್ಣಗಳನ್ನು ಬಳಸಲಾಗಿದೆ. ಚಿತ್ರದ ಒಟ್ಟು ಆಶಯವನ್ನು ಅಭಿವ್ಯಕ್ತಪಡಿಸಲು ಕಲಾವಿದ ಇಲ್ಲಿ ಸಮರ್ಪಕವಾದ ವರ್ಣಸಂಯೋಜನೆಯನ್ನು ಮಾಡಿರುವುದು ಒಂದೆಡೆಯಾದರೆ, ಇನ್ನೊಂದೆಡೆ ಚಿತ್ರನಟನೊಬ್ಬನ ಭಾವಚಿತ್ರವನ್ನೇ ಹೋಲುವ ಚಿತ್ರಕ್ಕೂ ಇತರೆ ಭಾಗದ ಚಿತ್ರಗಳಿಗೂ ಆಂತರಿಕವಾದ ಸಂಬಂಧ ಕಡಿದುಹೋದಂತೆ ಭಾಸವಾಗುತ್ತಿರುವುದು ಸಹ ಈ ಚಿತ್ರದ ವಿಶೇಷ.

ಹಬ್ಬಕ್ಕೆ ತಂದ ಹರಕೆಯ ಕುರಿ... – ೩

ಕಲಾವಿದ ಜಿ. ಕೆ. ಶಿವಣ್ಣ ಅವರ ಈ ಚಿತ್ರವನ್ನು "ವಚನ ಚಿತ್ತಾರ" ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. ಕಾಗದದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. ಈ ಚಿತ್ರದಲ್ಲಿ ಸದೃಢವಾದ ಮೈಕಟ್ಟನ್ನು ಹೊಂದಿದ ಪುರುಷನೊಬ್ಬ ಚೂಪಾದ ಕೊಡಲಿಯನ್ನು ಎರಡೂ ಕೈಯಲ್ಲಿ ಹಿಡಿದು ಕೈಮೇಲೆತ್ತಿದ್ದಾನೆ. ಹರಕೆಗಾಗಿ ತಂದ ಮೈ ತುಂಬಿದ ಕುರಿಯನ್ನು ಕೊಲ್ಲಲು, ಮೈತುಂಬಿಕೊಂಡ ಆ ಕುರಿಯು ಸಮೃದ್ಧವಾಗಿ ಬೆಳೆದು ನಿಂತ ಹೂಬಳ್ಳಿಯನ್ನು ತಿನ್ನುತ್ತಿದೆ.

೩.೧೬. ಉಳ್ಳವರು ಶಿವಾಲಯವ ಮಾಡುವರು...

ಉಳ್ಳವರು ಶಿವಾಲಯವ ಮಾಡುವರು

ನಾನೇನು ಮಾಡಲಿ ಬಡವನಯ್ಯಾ

ಎನ್ನ ಕಾಲೇ ಕಂಭ ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯಾ

ಕೂಡಲಸಂಗಮದೇವ ಕೇಳಯ್ಯ

ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲಾ [೨೪]

ವಚನದ ಸಾರಾಂಶ : ಸಾಮಾಜಿಕ ಏಣಿ-ಶ್ರೇಣಿಯಲ್ಲಿ ಬದುಕುವ ಮನುಷ್ಯರಲ್ಲಿ ಬಡವ, ಶ್ರೀಮಂತನೆಂಬ ಅಂತರಗಳಿವೆ. ಶ್ರೀಮಂತನಾದವನು ಸ್ಥಾವರದ ರೂಪವಾದ ದೇವಾಲಯವನ್ನು ನಿರ್ಮಾಣ ಮಾಡುವನು. ಆದರೆ ಬಡವನ ಬದುಕಿನ ನಿರ್ವಹಣೆಯೇ ಕಷ್ಟವಾಗಿರುವಾಗ ಆತ ದೇವಾಲಯವನ್ನು ನಿರ್ಮಿಸಲು ಸಾಧ್ಯವಿಲ್ಲ. ಸ್ಥಾವರ ರೂಪಿಯಾದ ದೇವಾಲಯಕ್ಕೆ ಅಳಿವಿದೆ. ಆದರೆ ಸದಾ ಚಲನಶೀಲವಾಗಿರುವ ಜಂಗಮಕ್ಕೆ ಅಳಿವಿಲ್ಲ ಎಂಬ ವಿಚಾರವನ್ನು ಬಸವಣ್ಣ ತನ್ನ ಈ ವಚನದಲ್ಲಿ ವ್ಯಕ್ತಪಡಿಸಿದ್ದಾನೆ.

ಚಿತ್ರದ ವಿಶ್ಲೇಷಣೆ : ಕಲಾವಿದ ಡಿ. ಎ. ಉಪಾಧ್ಯ ಅವರು ಈ ಕೃತಿಯನ್ನು ರಚಿಸಿರುವರು. ಈ ಚಿತ್ರವು ತೈಲವರ್ಣ ಸಂಪ್ರದಾಯಕ್ಕೆ ಸೇರಿದ್ದಾಗಿದೆ. ವಸ್ತುವನ್ನು ಚಿತ್ರಪಠ್ಯದಲ್ಲಿ ಅಳವಡಿಸಿರುವ ಕಲಾವಿದನ ರೀತಿ ಮತ್ತು ತಂತ್ರ ಇಲ್ಲಿ ನೋಡುಗರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಕಡುನೀಲಿ, ಕಡುಗೆಂಪು, ತಿಳಿಹಳದಿ ವರ್ಣಗಳ ಬಳಕೆಯಿಲ್ಲಿದೆ. ಕೋಲುಮುಖದ ಅರ್ಧಭಾಗ ನೋಡುಗರಿಗೆ ಗೋಚರಿಸುತ್ತದೆ. ದೊಡ್ಡದಾದ ಒಂದು ಕಣ್ಣು ಗಮನಸೆಳೆಯುತ್ತದೆ. ಮಾನವನ ನಿಂತ ದೇಹಾಕೃತಿಯಲ್ಲಿ ದೇವಾಲಯದ ಕಲ್ಪನೆ ಮಾಡಿಕೊಳ್ಳುವುದು ಕಷ್ಟವೆನ್ನಿಸಬಹುದು. ಆದರೆ, ಆತ ತನ್ನ ಕಾಲುಗಳನ್ನು ಮಡಿಚಿ ಮಂಡಿಯ ಮೇಲೆ ತನ್ನ ಎರಡೂ ಕೈಗಳನ್ನು ಒಂದರ ಮೇಲೊಂದು ಹಾಕಿ, ಅದರ ಮೇಲೆ ತನ್ನ ಮುಖದ ಗದ್ದದ ಭಾಗವನ್ನು ಊರಿದಾಗ ಮಾತ್ರ ದೇಹವು ದೇವಾಲಯದಂತೆ ಗೋಚರಿಸುತ್ತದೆ. ಈ ಭಂಗಿಯಲ್ಲಿ ನಾವು ಕುಳಿತರೆ ಎರಡು ಮಂಡಿಗಳ ಮಧ್ಯದಲ್ಲಿ ಟೊಳ್ಳಾದ ಜಾಗವು ನಿರ್ಮಾಣವಾಗುತ್ತದೆ. ಅದು ದೇವಾಲಯದ

೨೪. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೮೨೧), ಪು-೨೧೧

ಒಳಭಾಗವಾಗಿ ತೋರುತ್ತದೆ. ಸಹಜವಾಗಿ ಇಲ್ಲಿ ಮೊಣಕಾಲುಗಳ ಮಧ್ಯದಲ್ಲಿ ಹೃದಯದ ಚಿತ್ರವನ್ನು ಕಲಾವಿದ ನಿರ್ಮಿಸಿ ಅದನ್ನು ಗರ್ಭಗುಡಿಗೆ ಸಾಂಕೇತಿಕವಾಗಿ ಹೋಲಿಸುವ ಪ್ರಯತ್ನ ಮಾಡಿದ್ದಾನೆ. ಕೆಂಪು ಬಣ್ಣಗಳಿಂದ ಕೂಡಿದ ಮೂರು ವೃತ್ತಗಳ ಚಕ್ರವೊಂದು ಅದರ ಮಧ್ಯದಿಂದ ಪ್ರಭಾಕಿರಣಗಳನ್ನು ಸೂಸುತ್ತಿದೆ. ಇದು ಚಕ್ರದಂತೆ ಕಂಡುಬರುವುದರಿಂದ ಆತ್ಮ ಅಥವಾ ಜಂಗಮಕ್ಕೆ ಸಂಕೇತವಾಗಿ ಕಲಾವಿದ ರೂಪಿಸಿರಬಹುದು.

ಚಿತ್ರದ ಬಲಬದಿಯಲ್ಲಿ ಚಾಲುಕ್ಯರ ಕಾಲದ ಶೈಲಿಯ ದೇವಾಲಯದ ಕಂಭಗಳನ್ನು ನೆನಪಿಸುವಂತಿರುವ ಕಡುನೀಲಿ ಬಣ್ಣದ ಕಂಭಗಳಲ್ಲಿ ಒಂದು ನೆಟ್ಟನೆ ನಿಂತಿದ್ದು, ಮತ್ತೊಂದು ಕೆಳಗೆ ಬಿದ್ದಿದೆ. ಅದರ ಪಕ್ಕದಲ್ಲಿ ಅರ್ಧಭಾಗ ಮಾತ್ರ ಕಾಣುವ ಅದೇ ಬಣ್ಣದ ಶಿವಲಿಂಗವು ಗೋಚರಿಸುತ್ತದೆ. ಹೃದಯದ ಎರಡು ತೆರೆದ ಕವಾಟಗಳು, ಅತ್ಯಂತ ಸೂಕ್ಷ್ಮವಾಗಿರುವ ಕೆಂಪುರಕ್ತನಾಳಗಳ ಚಿತ್ರಣ ಮೂಡಿಬಂದಿದೆ. ಸಂಯೋಜನೆಯ ದೃಷ್ಟಿಯಿಂದ ಈ ಚಿತ್ರವನ್ನು ಲಂಬವಾಗಿ ಎರಡು ಭಾಗಗಳನ್ನಾಗಿಸಿಕೊಂಡು, ಬಲಪಾರ್ಶ್ವದಲ್ಲಿ ಬೌದ್ಧಿಕ ವಿನ್ಯಾಸಗಳು, ಎಡಪಾರ್ಶ್ವದಲ್ಲಿ ಭೌತಿಕ ವಿನ್ಯಾಸಗಳನ್ನು ಚಿತ್ರಿಸಲಾಗಿದೆ. ಸಾಂಕೇತಿಕತೆ ಈ ಚಿತ್ರದ ವೈಶಿಷ್ಟ್ಯವಾದರೆ, ಪ್ರಾಥಮಿಕ ವರ್ಣಗಳನ್ನೇ ತೆಳುವಾಗಿಸಿಕೊಂಡು ಇಲ್ಲಿನ ವಿನ್ಯಾಸಗಳಿಗೆ ದುಡಿಸಿಕೊಳ್ಳಲಾಗಿದೆ.

೩.೧೭. ಜನಿತಕ್ಕೆ ತಾಯಾಗಿ, ಹೆತ್ತವಳು ಮಾಯೆ....

ಜನಿತಕ್ಕೆ ತಾಯಾಗಿ ಹೆತ್ತವಳು ಮಾಯೆ
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ
ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ
ಈ ಮಾಯೆಯ ಕಳೆವೊಡೆಯೆನ್ನಳವಲ್ಲ
ನೀವೆ ಬಲ್ಲಿರಿ ಕೂಡಲಸಂಗಮದೇವ [೨೫]

ವಚನದ ಸಾರಾಂಶ : ಜಗವೆಲ್ಲ ಆವರಿಸಿರುವ ಮಾಯೆಯಿಂದ ಮುಕ್ತಿ ಬಯಸುವ ಬಸವಣ್ಣನವರು ತನ್ನನ್ನು ಹೆತ್ತ ತಾಯಿಯು ಮಾಯೆ. ತಾಯಾಗಿ, ಮಗಳಾಗಿ, ಸ್ತ್ರೀಯಾಗಿ ಹೀಗೆ ಹಲವು ವಿಧದಲ್ಲಿ ಮಾಯೆ ಕಾಡಿದ ಪರಿಯ ಚಿತ್ರಣವಿಲ್ಲಿದೆ. ಹೀಗೆ ಹಲವು ಪರಿಯಲ್ಲಿ ಆವರಿಸಿದ ಮಾಯೆಯಿಂದ ಬಿಡುಗಡೆ ಬಯಸುವ ಬಸವಣ್ಣನವರು ಕೂಡಲಸಂಗಮನಲ್ಲಿ ತಮ್ಮ ಅಳಲನ್ನು ತೋಡಿಕೊಳ್ಳುವರು. ಮಾಯೆಯ ವಿವಿಧ ರೂಪಗಳನ್ನು ಬಸವಣ್ಣ ತನ್ನ ವಚನದಲ್ಲಿ ನಿರೂಪಿಸಿರುವ ಸಂಗತಿಗಳನ್ನು ಪ್ರಸ್ತುತ ಚಿತ್ರದಲ್ಲಿ ಕಲಾವಿದ ಅತ್ಯಂತ ಸ್ಪಷ್ಟವಾಗಿ ವರ್ಣಗಳ ಮೂಲಕ ಅಭಿವ್ಯಕ್ತಿಸಿದ್ದಾನೆ.

ಚಿತ್ರದ ವಿಶ್ಲೇಷಣೆ : ಕಲಾವಿದ ಡಿ. ಎ. ಉಪಾಧ್ಯ ಅವರು ಈ ಕೃತಿಯನ್ನು ರಚಿಸಿರುವರು.

---

೨೫. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೧೫), ಪು-೮

ತೈಲವರ್ಣದ ಈ ಚಿತ್ರದಲ್ಲಿ ಕಡುನೀಲಿ, ಕಡುಹಳದಿ ಮತ್ತು ದಟ್ಟವಾದ ಕಂದುವರ್ಣಗಳು ಬಳಕೆಯಾಗಿವೆ. ಹಿನ್ನೆಲೆಯ ಬಹುಭಾಗವನ್ನು ಪೂರ್ಣವಾಗಿ ಉಪಯೋಗಿಸಿಕೊಂಡ ಚಿತ್ರವಿದು. ಇಲ್ಲಿ ಒಟ್ಟು ಮೂರು ಆಯಾಮಗಳಿವೆ. ಒಂದನೆಯದು ತಾಯಿ. ಎರಡನೆಯದು ಮಗಳು, ಮೂರನೆಯದು ಹೆಂಡತಿ. ಚಿತ್ರದ ಬಲಮೇಲ್ಭಾಗದಲ್ಲಿ ಹಳದಿ ವರ್ಣದಿಂದ ರಚಿತವಾದ ಸ್ತ್ರೀಯ ಮುಖದ ಅರ್ಧಭಾಗ ಗೋಚರಿಸುತ್ತಿದ್ದು, ಅದರ ಪಾರ್ಶ್ವಭಾಗದಲ್ಲಿ ಕಂದುಮಿಶ್ರಿತ ಕೆಂಪುಬಣ್ಣದ ಅಂಡಾಶಯದಲ್ಲಿ ಭ್ರೂಣಶಿಶುವೊಂದು ತಲೆಕೆಳಗಾಗಿ ಮಲಗಿರುವ ಸನ್ನಿವೇಶವಿದೆ. ಅದರ ಕೆಳಗೆ ಕಡುನೀಲಿ ಬಣ್ಣದಿಂದ ರಚಿತವಾದ, ತಲೆಯನ್ನು ಬಾಗಿಸಿ ನಿಂತ ಹೆಣ್ಣಿನ ಆಕೃತಿಯೊಂದು ಕಾಣಿಸುತ್ತದೆ.

ಬಹುಶಃ ಮಾಯೆಯು ಮಗಳ ರೂಪದಲ್ಲಿದ್ದಾಳೆಂಬುದು ಕಲಾವಿದನ ಕಲ್ಪನೆಯಾಗಿದೆ. ಅವಳ ಪಕ್ಕದಲ್ಲಿ ತೆಳುಗುಲಾಬಿ ಬಣ್ಣದ ಅರಳಿದ ಕಮಲವೊಂದಿದೆ. ಚಿತ್ರದ ಎಡಭಾಗದಲ್ಲಿ ಕಡುಹಳದಿ ಬಣ್ಣದ ಗಂಡು-ಹೆಣ್ಣಿನ ಮಾನವಾಕೃತಿಗಳ ಒಂದು ಜೊತೆಯಿದೆ. ಇದು ದೇವಾಲಯದಲ್ಲಿ ಕಾಣುವ ಮಿಥುನಶಿಲ್ಪಗಳನ್ನು ನೆನಪಿಸುತ್ತದೆ. ಮಾಯೆಯು ಹೆಂಡತಿಯ ರೂಪದಲ್ಲಿರುವುದನ್ನು ಕಲಾವಿದ ಇಲ್ಲಿ ಚಿತ್ರಿಸಿದ್ದಾನೆ. ಗಂಡು-ಹೆಣ್ಣಿನ ಆಕೃತಿಗಳು ಪೂರ್ಣವಾಗಿ ಬೆತ್ತಲೆಯಾಗಿದ್ದು, ಹೆಣ್ಣು ತನ್ನ ಬಲತೊಡೆಯನ್ನು ಅರ್ಧ ಮಡಿಚಿ, ತನ್ನ ಶರೀರವನ್ನು ಗಂಡಿನ ಶರೀರಕ್ಕೆ ಅಪ್ಪಿಕೊಂಡು, ತನ್ನ ಬಲಗೈಯನ್ನು ಗಂಡಸಿನ ಕುತ್ತಿಗೆಯನ್ನು ಬಳಸಿ ಮಿಥುನದ ಭಂಗಿಯಲ್ಲಿ ಪುರುಷನನ್ನು ಹಿಡಿದು ನಿಂತಿದ್ದಾಳೆ. ಅವಳ ಮುಖವು ಪುರುಷನ ಮುಖವನ್ನು ಪ್ರೀತಿ, ಕಾತರಗಳಿಂದ ನೋಡುತ್ತಿರುವಂತಿದೆ. ಗಂಡಸು ಉದ್ದೀಪ್ತನಾಗಿ ಅವಳ ಮುಖವನ್ನು ತದೇಕಚಿತ್ತದಿಂದ ತನ್ನ ತಲೆಯನ್ನು ಬಾಗಿಸಿ ನೋಡುತ್ತಿದ್ದಾನೆ. ಎಡಗೈಯು ಅವಳ ಮಡಿಚಿದ ತೊಡೆಯ ಮೇಲಿದ್ದು, ಬಲಗೈಯು ಅವಳನ್ನು ಬಾಚಿ ಹಿಡಿದಿರುವ ಭಂಗಿಯಲ್ಲಿ ಆತ ನಿಂತಿದ್ದಾನೆ. ಇಬ್ಬರ ಕೈಗಳಲ್ಲಿ ಲೋಹದ ಅಗಲವಾದ ಬಳೆಗಳಿವೆ. ಮಗಳು ಮತ್ತು ಮಿಥುನ ದಂಪತಿಗಳನ್ನು ಬಳಸಿಕೊಂಡಂತೆ ಅಗಲವಾದ ಹೆಡೆಯ ಕಂದುಬಣ್ಣದ ಹಾವೊಂದು ಸುತ್ತಿಕೊಂಡಿದೆ. ಮಾಯೆಯು ಕಾಮನ ರೂಪದಲ್ಲಿ ಮನುಷ್ಯರನ್ನು ಹೇಗೆ ಬಂಧಿಸುತ್ತದೆ ಎಂಬುದನ್ನು ಕಲಾವಿದ ಇಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ.

ಮಾಯೆ-ಸ್ತ್ರೀಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬ ಬಸವಣ್ಣನವರ ಮನದ ವೇದನೆಯನ್ನು ನಿವೇದಿಸಿಕೊಳ್ಳಲು ಇದೇ ಚಿತ್ರದಲ್ಲಿ ಕಡುನೀಲಿಬಣ್ಣದ ಶಿವಲಿಂಗವು ಚಿತ್ರಿತವಾಗಿರುವುದು ಸಮರ್ಪಕವಾದರೂ, ಇಡೀ ಸ್ಥಳಾವಕಾಶವನ್ನು ಒಂದಿಂಚೂ ಬಿಡದೇ ಆಕೃತಿಗಳು ಆವರಿಸಿಕೊಂಡಿವೆ. ಒತ್ತೊತ್ತಾಗಿ ಆಕೃತಿಗಳನ್ನು ಸಂಯೋಜಿಸುವ ಅನಿವಾರ್ಯತೆಗೆ ಕಲಾವಿದರ ಅಭಿವ್ಯಕ್ತಿ ಸಿಲುಕಿತೇ? ಹೀಗೊಂದು ಪ್ರಶ್ನೆ ಈ ಚಿತ್ರವನ್ನು ನೋಡಿದಾಕ್ಷಣ ಮಿಂಚಿನಂತೆ ಹೊಳೆಯುತ್ತದೆ. ಹಿನ್ನೆಲೆ-ಮುನ್ನೆಲೆಯ ವ್ಯತ್ಯಾಸಗಳು ಇಲ್ಲಿಲ್ಲ. ಒಂದರ ಮೇಲೊಂದರಂತೆ ಆಕೃತಿಗಳು ಪರಸ್ಪರ ಮೇಲೆರಗಿವೆಯಾದರೂ, ಸ್ತ್ರೀಯನ್ನು ಮಿಥುನಸನ್ನಿವೇಶದಲ್ಲಿಯೇ ಪ್ರಧಾನವಾಗಿ ತೋರಿಸಲಾಗಿದೆ.

೩.೧೮. ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುಹೋಗದ...

ನೆರೆ ಕೆನ್ನೆಗೆ ತೆರೆ ಗಲ್ಲಕೆ ಶರೀರ ಗೂಡುವೋಗದ ಮುನ್ನ
ಹಲ್ಲು ಹೋಗಿ ಬೆನ್ನುಬಾಗಿ ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ
ಮುಪ್ಪಿಂದೊಪ್ಪವಳಿಯದ ಮುನ್ನ ಮೃತ್ಯು ಮುಟ್ಟದ ಮುನ್ನ
ಪೂಜಿಸು ನಮ್ಮ ಕೂಡಲಸಂಗಮದೇವನ [೨೬]

ವಚನದ ಸಾರಾಂಶ : ಹುಟ್ಟಿನಿಂದ ಸಾಯುವವರೆಗಿನ ಈ ಬದುಕು ಹಲವು ಅವಸ್ಥೆ ಹೊಂದುವದು ಅನಿವಾರ್ಯ. ಶಿವನ ಒಲುಮೆಯಿಂದ ಜನ್ಮ ಪಡೆದ ಈ ದೇಹ ವ್ಯರ್ಥವಾಗಿ ಮಣ್ಣಲ್ಲಿ ಮಣ್ಣಾಗುವದು ಬೇಡ. ಈ ದೇಹ ಶಿವಕಾರುಣ್ಯವನ್ನು ಪಡೆಯಬೇಕು ಎನ್ನುವ ಬಸವಣ್ಣನವರು ಬದುಕು ನಾಶವಾಗದ ಮುನ್ನ, ಈ ಶರೀರ ಅಳಿದು ಹೋಗುವ ಮುನ್ನ ಕೂಡಲಸಂಗಮನನ್ನು ಪೂಜಿಸಬೇಕೆಂಬ ಹಂಬಲ ವ್ಯಕ್ತಪಡಿಸಿದ್ದಾರೆ. ಕೆನ್ನೆಗೆ ಗೆರೆ ಮೂಡುವುದು, ಗಲ್ಲಕ್ಕೆ ನಿರಿಗೆ ಬೀಳುವದು, ಕಾಲಮೇಲೆ ಕೈಯೂರಿ ಕೋಲು ಹಿಡಿಯುವದು ಎಂದರೆ ದೇಹಕ್ಕೆ ವಯಸ್ಸಾಗುತ್ತಿದೆ ಎಂದರ್ಥ. ಸ್ಮಶಾನಪ್ರವೇಶ ಹತ್ತಿರವಾಗುತ್ತಿದೆ ಎಂದೇ ಅರ್ಥ. ಶರೀರ ಗೂಡು ಸೇರದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ, ಮುಪ್ಪು ದೇಹಕ್ಕೆ ಆವರಿಸಿ, ದೇಹದೆಣ್ಣೆ ತೀರಿ ಸಾವು ಆವರಿಸುವ ಮೊದಲೇ ಕೂಡಲಸಂಗಮನಾಥನನ್ನು ಪೂಜಿಸಿ ಶಿವಸಾಯುಜ್ಯವನ್ನು ಪಡೆಯುವ ಅಗತ್ಯವಿದೆ. ಮಾನವ ತನ್ನ ಜೀವಿತದ ಕಾಲದಲ್ಲಿ ಬಾಲ್ಯ, ಯೌವ್ವನ, ಮುಪ್ಪಿನ ಅವಸ್ಥೆಯನ್ನು ಕಾಲವಶದಿಂದ ಪಡೆದು ಕೊನೆಗೆ ಮಣ್ಣಿನೊಂದಿಗೆ ಮಣ್ಣಾಗುತ್ತಾನೆ. ಮಣ್ಣಾಗುವ ಮೊದಲೆ ಅಂದರೆ ವೃದ್ಧಾಪ್ಯವು ಬರುವ ಮೊದಲೆ ಕೂಡಲಸಂಗಮನನ್ನು ಪೂಜಿಸಿ ಮುಕ್ತಿಯನ್ನು ಪಡೆಯುವ ಸಂದೇಶವನ್ನು ತನ್ನ ವಚನದಲ್ಲಿ ಹೇಳಿದ್ದಾನೆ.

ಚಿತ್ರದ ವಿಶ್ಲೇಷಣೆ : ಈ ಮೇಲಿನ ಸಂದೇಶವನ್ನು ಕಲಾವಿದ ಡಿ. ಎ. ಉಪಾಧ್ಯ ಅವರು ಅತ್ಯಂತ ಪರಿಣಾಮಕಾರಿಯಾಗಿ ನೋಡುಗರ ಸುಲಭ ಗ್ರಹಿಕೆಗೆ ಸಾಧ್ಯವಾಗುವಂತೆ ಇಲ್ಲಿ ಚಿತ್ರಿಸಿದ್ದಾನೆ. ತೈಲವರ್ಣದ ಈ ಚಿತ್ರದಲ್ಲಿ ಕೆಂಪು, ತಿಳಿನೀಲಿ, ಕಪ್ಪು, ತಿಳಿಹಳದಿ ಮುಂತಾದ ವರ್ಣಗಳ ಸಂಯೋಜನೆಯಿದೆ. ಬಾಲ್ಯ, ಮುಪ್ಪು, ಮತ್ತು ಸಾವಿನ ಮೂರು ಅವಸ್ಥೆಗಳನ್ನು ಇಲ್ಲಿ ಕಾಣುತ್ತೇವೆ. ಬಿಳಿತಲೆಗೂದಲು, ಸುಕ್ಕುಗಟ್ಟಿರುವ ಕಾಂತಿಹೀನವಾದ ಮುಖ, ಎತ್ತರದ ನಿಲುವಿನ ಆಕೃತಿಯಿಂದ ಕೂಡಿರುವ ವಯಸ್ಸಾಗಿರುವ ವ್ಯಕ್ತಿಯ ಚಿತ್ರಣವಿಲ್ಲಿದೆ. ಕೆಂಪು ಮೇಲುವಸ್ತ್ರ ಮತ್ತು ಕೆಂಪುಪಂಚೆ, ಬಿಳಿಬಣ್ಣದ ತುಂಬುತೋಳಿನ ನಿಲುವಂಗಿಯನ್ನು ಧರಿಸಿದ ವೃದ್ಧನ ಬೆನ್ನು ಬಾಗಿದೆ. ತನ್ನ ಬಲಗೈಯಲ್ಲಿ ಕೋಲನ್ನು ಹಿಡಿದು ನೆಲಕ್ಕೆ ಊರಿ ನಿಂತಿದ್ದಾನೆ. ಆತನ ಮುಂದೆ ಬಾಲಕನಂತೆ ತೋರುವ ವ್ಯಕ್ತಿಯ ಚಿತ್ರವಿದೆ. ವೃದ್ಧ ಮತ್ತು ಬಾಲಕ ಇಬ್ಬರ ಕಾಲಕೆಳಗೆ ನೆಲದಲ್ಲಿ ಶವವಾಗಿ ಮಲಗಿರುವ ಆಕೃತಿಯೊಂದು ಬಿಳಿಯ ವಸ್ತ್ರವನ್ನು ಹೊದ್ದು ಮಲಗಿದೆ. ಈ ಎಲ್ಲ ಅವಸ್ಥೆಗಳಲ್ಲಿ ಜೀವನವನ್ನು ವ್ಯರ್ಥ ಮಾಡಿಕೊಂಡು ಸಾವನ್ನಪ್ಪುವ ಮೊದಲು ಕೂಡಲ ಸಂಗಮನನ್ನು

೨೬. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೧೬೧), ಪು-೪೨

ಪೂಜಿಸಲು ಹೇಳಿದ ಬಸವಣ್ಣನ ಆಶಯದಂತೆ ಶಿವಲಿಂಗ ಮತ್ತು ಶಿಲಾಮಂಟಪವು ರೂಪುಗೊಂಡಿದ್ದು, ಆಕೃತಿಗಳನ್ನು ಪರಸ್ಪರ ಒಂದರ ಮೇಲೊಂದರಂತೆ ಚಿತ್ರಿಸಲಾಗಿದೆ. ಐಕ್ಯಮಂಟಪವನ್ನೂ ಸೇರಿಸಿದಂತೆ ಮುನ್ನೆಲೆಯ ಮಾನವಾಕೃತಿಗಳನ್ನು ಸಹ ಸಾಮೀಪ್ಯದಿಂದ ಚಿತ್ರಿಸಲಾಗಿದೆ. ಇಡೀ ಚಿತ್ರದ ವರ್ಣಯೋಜನೆಯು ತುಂಬ ಪ್ರಾಥಮಿಕ ನಿರ್ವಹಣೆಯನ್ನು ಹೊಂದಿದ್ದು, ಮೈವಳಿಕೆಯನ್ನು ಸಹ ಸೃಷ್ಟಿಸಲಾಗಿದೆ. ಒಟ್ಟಿನಲ್ಲಿ ಕಲಾವಿದ ಇಲ್ಲಿ ತಾನು ಹೇಳಬೇಕೆಂದಿರುವುದನ್ನೆಲ್ಲ ನೇರವಾಗಿ ಮತ್ತು ಸ್ಪಷ್ಟವಾಗಿ ಪ್ರಕಟಿಸಿರುವುದು ಕಂಡುಬರುತ್ತದೆ.

೩.೧೯. ನೀರ ಕಂಡಲ್ಲಿ ಮುಳುಗುವರಯ್ಯ... – ೧

ನೀರ ಕಂಡಲ್ಲಿ ಮುಳುಗುವರಯ್ಯಾ

ಮರವ ಕಂಡಲ್ಲಿ ಸುತ್ತುವರಯ್ಯಾ

ಬತ್ತುವ ಜಲವನೊಣಗುವ ಮರನ ಮೆಚ್ಚಿದವರು

ನಿಮ್ಮನೆತ್ತಬಲ್ಲರು ಕೂಡಲಸಂಗಮದೇವ[೨೭]

ವಚನದ ಸಾರಾಂಶ : ಸಮಾಜದಲ್ಲಿ ಬದುಕುವ ಮನುಜನ ವ್ಯತಿರಿಕ್ತ ಮನೋಭಾವವನ್ನು, ಅಂಥ ಆಚರಣೆಗಳಿಂದ ವ್ಯರ್ಥ ಕಾಲಹರಣ ಮಾಡುವವರನ್ನು ಕಟುವಾಗಿ ಟೀಕಿಸುತ್ತಾರೆ. ಆತ್ಮಶುದ್ಧವಿಲ್ಲದೇ ಆಚರಿಸುವ ಮೂಢನಂಬಿಕೆಗಳು ಅರ್ಥಹೀನವಾದವು. ನೀರನ್ನು ಕಂಡಲ್ಲೆಲ್ಲ ಮುಳುಗುವ ಮನುಷ್ಯನ ದೇಹ ಸ್ವಚ್ಛವಾಗುವದೇ ವಿನಾ ಮನಸ್ಸಲ್ಲ. ಮರವ ಕಂಡಲ್ಲೆಲ್ಲ ಸುತ್ತಿದರೆ ಏನು ಪ್ರಯೋಜನ? ಬತ್ತುವ ಜಲ, ಒಣಗುವ ಮರವನ್ನು ನಂಬಿದ ಮೂಢ ಮನುಜರು ಕೂಡಲಸಂಗಮನನ್ನು ಹೇಗೆ ಅರ್ಥೈಸಿಕೊಳ್ಳಲು ಸಾಧ್ಯ?

ಚಿತ್ರದ ವಿಶ್ಲೇಷಣೆ : ಕಲಾವಿದ ಬಸವರಾಜ ಮುಗಳಿ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ (ಎನಾಮೆಲ್) ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಸವಣ್ಣನ ಮೂಢನಂಬಿಕೆಗಳ ವಿರೋಧಿ ನೀತಿಯನ್ನು ವರ್ಣಗಳಲ್ಲಿ ಅಭಿವ್ಯಕ್ತಿಸಿದ್ದಾನೆ. ಒಟ್ಟು ನಾಲ್ಕು ಭಾಗಗಳನ್ನು ಹೊಂದಿರುವ ಈ ಚಿತ್ರದಲ್ಲಿ, ಮೊದಲನೆಯದಾಗಿ ಗಾಢವಾದ ನೀಲಿಬಣ್ಣದ ನೀರಿನಲ್ಲಿ ಇಬ್ಬರು ಬೋಳುತಲೆಯ ವ್ಯಕ್ತಿಗಳು ತಮ್ಮ ಎಡಗೈಯಿಂದ ಮೂಗನ್ನು ಹಿಡಿದು ಎದೆಮಟ್ಟದವರೆಗಿನ ನೀರಿನಲ್ಲಿ ನಿಂತಿದ್ದಾರೆ. ಉಳಿದ ಕೆಲವರು ಸ್ನಾನವನ್ನು ಮಾಡುತ್ತಿರುವ ಚಲನಶೀಲ ಭಂಗಿಯಲ್ಲಿದ್ದಾರೆ. ಅವರ ಹಿಂದೆ ನದಿಯ ಕೊನೆಯ ಭಾಗದಲ್ಲಿ ದೇವಾಲಯವೊಂದು ಅಸ್ಪಷ್ಟವಾಗಿ ಕಾಣಿಸುತ್ತಿದೆ. ಚಿತ್ರದ ಮೇಲಿನ ಎಡಭಾಗದಲ್ಲಿ ಕೆರೆಯೊಂದು ಬತ್ತಿಹೋಗಿರುವ ಸನ್ನಿವೇಶವಿದೆ. ದೂರದಲ್ಲಿ ಸುಂದರವಾದ ದೇವಾಲಯವೊಂದಿದ್ದು ಅದರ ಬದಿಯಲ್ಲಿ ಒಣಗಿದ ಮರವೊಂದಿದೆ. ಜಲ ಬತ್ತಿದ್ದರಿಂದ ಮರ ಒಣಗಿರುವುದರ ವಾಸ್ತವ ನಿರೂಪಣೆಯು ಇಲ್ಲಿ

೨೭. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೫೮೦), ಪು–೧೪೪

ಗಮನಸೆಳೆಯುತ್ತದೆ.

ಚಿತ್ರದ ಬಲಗಡೆಯ ಕೆಳಭಾಗದಲ್ಲಿ ಹಸಿರು ಎಲೆಗಳಿಂದ ಕೂಡಿದ ಮರವನ್ನು ಹಸಿರು ಮತ್ತು ತೆಳು ಗುಲಾಬಿ ಬಣ್ಣದ ಸೀರೆ, ವಸ್ತ್ರಗಳನ್ನು ಧರಿಸಿದ ಸ್ತ್ರೀಯರು ಸುತ್ತುತ್ತಿರುವ ದೃಶ್ಯವಿದೆ. ಅವರ ಮುಖಗಳು ಸ್ಪಷ್ಟವಾಗಿ ಕಾಣಿಸದಿದ್ದರೂ ಅವರು ತಮ್ಮ ಕೈಗಳನ್ನು ಮುಗಿದು ತಲೆಯನ್ನು ಬಾಗಿಸಿ, ಸುತ್ತುತ್ತಿರುವುದು ಅವರ ಶ್ರದ್ಧೆ ಮತ್ತು ಭಕ್ತಿಯ ಭಾವಗಳನ್ನು ಪರಿಣಾಮಕಾರಿಯಾಗಿ ಸೂಚಿಸುತ್ತಿದೆ. ಅವರ ಬದಿಯಲ್ಲಿ ಅಸ್ಪಷ್ಟವಾದ ಎಲೆಗಳಿಂದ ಕೂಡಿರುವ ಮರವಿದ್ದು, ನೆಳಲು ಬೆಳಕಿನ ಸಂಯೋಜನೆಯು ಅಲ್ಲಿ ಗಮನಸೆಳೆಯುವಂತಿದೆ. ಚಿತ್ರದ ಎಡಗಡೆಯ ಕೆಳಮೂಲೆಯಲ್ಲಿ ಒಣಗಿ ಹೋದ ಮರದ ಚಿತ್ರಣವಿದೆ. ಒಣಗಿಹೋದ ಮರದ ಟೊಂಗೆ, ಟಿಸಿಲುಗಳನ್ನು ಅತ್ಯಂತ ಸೂಕ್ಷ್ಮವಾದ ನೆಲೆಯಲ್ಲಿ ಚಿತ್ರಿಸಿದ ಕಲಾವಿದನ ಪರಿಶ್ರಮ ಇಲ್ಲಿ ಸಾರ್ಥಕವಾಗಿದೆ.

ನೀರ ಕಂಡಲ್ಲಿ ಮುಳುಗುವರಯ್ಯ... – ೨

ಕಲಾವಿದ ಡಿ. ಎ. ಉಪಾಧ್ಯ ಅವರ ಈ ಕಲಾಕೃತಿಯು ತೈಲವರ್ಣದಲ್ಲಿ ಚಿತ್ರಣಗೊಂಡಿದೆ. "ನೀರ ಕಂಡಲ್ಲಿ ಮುಳುಗುವರಯ್ಯ" ಎಂಬ ಬಸವಣ್ಣನ ವಚನದ ವಸ್ತುವಿನ ನೇರ ನಿರೂಪಣೆಯನ್ನು ಪ್ರಸ್ತುತ ಚಿತ್ರದಲ್ಲಿ ಕಾಣಲಾಗುವುದಿಲ್ಲ. ಇಲ್ಲಿ ನೀರು, ಒಣಗಿದ ಮರ, ಬತ್ತಿದ ನೆಲ, ಪ್ರದಕ್ಷಿಣೆ ಹಾಕುವ ಪಾದ ಮುಂತಾದ ರೂಪಕಗಳಿವೆ. ತೈಲವರ್ಣದ ಈ ಚಿತ್ರದ ಬಲಭಾಗದಲ್ಲಿ ಹಸಿರು ಬಣ್ಣದಲ್ಲಿ ಚಿತ್ರಿತವಾದ ಚೌಕಾಕಾರದ ತೊಟ್ಟಿಯೊಂದರಲ್ಲಿ ಎರಡು ಭಾಗಗಳಿವೆ. ಅದರ ಇನ್ನೊಂದು ಭಾಗದಲ್ಲಿ ಬಿರುಕು ಬಿಟ್ಟ ನೆಲವನ್ನು ಸೂಚಿಸಲಾಗಿದೆ. ತೊಟ್ಟಿಯ ಗೋಡೆಯು ಕಡಿಮೆ ಎತ್ತರವನ್ನು ಹೊಂದಿದ್ದು ಚೌಕಾಕಾರದ ಕಲ್ಲುಗಳಿಂದ ಅಚ್ಚುಕಟ್ಟಾಗಿ ರಚಿತವಾಗಿದೆ. ತೊಟ್ಟಿಗೆ ಹೊಂದಿಕೊಂಡಂತೆ ಪಾರದರ್ಶಕವಾಗಿ ಕಾಣುವಂತೆ ದೊಡ್ಡ ಪಾದವೊಂದು ತೊಟ್ಟಿಯ ಎರಡು ಭಾಗಗಳನ್ನು ಆವರಿಸಿದೆ. ಮರ ಕಂಡಲ್ಲಿ ಸುತ್ತುವುದನ್ನು ಹೀಗೆ ಪಾದದ ಮೂಲಕ ಕಲಾವಿದ ಸಾಂಕೇತಿಕವಾಗಿ ತೋರಿಸಿದ್ದಾನೆ.

ಒಂದು ಭಾಗ ನೀಲಿಬಣ್ಣದ ನೀರಿನೊಂದಿಗೆ ಸಂಪರ್ಕ ಹೊಂದಿದ್ದು ಅದರ ಬಣ್ಣ ತಿಳಿಹಸಿರಿನದಾಗಿದೆ. ಪಾದದ ಹಿಮ್ಮಡಿಯು ಕೆಂಪುಬಣ್ಣದಿಂದ ಕೂಡಿದ್ದು, ಬರ, ಸಂಕಟ, ತಾಪಗಳನ್ನು ಪ್ರತಿನಿಧಿಸುವಂತಿದೆ. ಚಿತ್ರದ ಮಧ್ಯಭಾಗದಲ್ಲಿ ಮರವೊಂದು ಕಂದುವರ್ಣದಲ್ಲಿದೆ. ಆದರೆ ಅದರ ಅರ್ಧಭಾಗ ತುಂಬ ಹಸಿರಿನ ಎಲೆಗಳಿಂದ ಕಂಗೊಳಿಸಿದರೆ, ಮತ್ತೊಂದು ಭಾಗ ಬೋಳುಬೋಳಾಗಿ ಎಲೆಗಳಿಲ್ಲದೆ ಒಣಗಿನಿಂತ ಪರಿಯಲ್ಲಿದೆ. ನೀರಿನ ತೊಟ್ಟಿಯ ಎಡಭಾಗದಲ್ಲಿ ಕಪ್ಪು ಬಣ್ಣದ ಎತ್ತರವಾದ ಶಿವಲಿಂಗವಿದ್ದು ಅದರ ಆಂತರ್ಯದಲ್ಲಿ ಅಂದರೆ ಪಾಣಿಪೀಠದ ಕೆಳಭಾಗದಲ್ಲಿ ಚಕ್ರವೊಂದು ಕಾಣಿಸುತ್ತದೆ. ಅನಿತ್ಯವಾದುದನ್ನು ನಂಬುವ ಜನರು ಕೂಡಲಸಂಗಮನನ್ನು ಎಂತು ನಂಬುವರು ಎಂಬ ಭಾವದ ಸಾರವನ್ನು ಪ್ರಸ್ತುತ ಚಿತ್ರದಲ್ಲಿ ಕಲಾವಿದ ಸೂಚ್ಯವಾಗಿ ವ್ಯಕ್ತಪಡಿಸಿದ್ದು, ಆಧುನಿಕ ನೆಲೆಯಲ್ಲಿ ಚಿತ್ರಿತವಾಗಿರುವ ಇದರಲ್ಲಿ ಸಂಯೋಜನೆಯ ಕುರಿತು ಹೀಗೆ ಹೇಳಬಹುದಾಗಿದೆ. ಇಡೀ ಚಿತ್ರದ ಅವಕಾಶದಲ್ಲಿ ವಚನದ ಸಾರಕ್ಕೆ

ಪೂರಕವಾದ ಸಂಕೇತಗಳನ್ನೆಲ್ಲ ಸಾಮೀಪ್ಯದಿಂದ ಚಿತ್ರಿಸಲಾಗಿದೆ. ಹೀಗಾಗಿ ದೂರದ ಅನುಭವ ಇಲ್ಲಿ ಗೌಣ. ಮೇಲ್ನೋಟಕ್ಕೆ ಆಧುನಿಕ ಈಜುಕೊಳದಂತೆ ಕಾಣುವ ಇಲ್ಲಿನ ಪ್ರಧಾನ ಆಕೃತಿ ಕ್ರಮೇಣ ತನ್ನ ಒಳಗುಟ್ಟನ್ನು ಬಿಟ್ಟುಕೊಡುವುದು ನೋಡುಗ ಕಲಾಕೃತಿಯನ್ನೆಲ್ಲ ಜಾಲಾಡಿದಾಗ! ಚಿತ್ರಕ್ಕೆ ಶೀರ್ಷಿಕೆ ಇಲ್ಲದೇ ಇದ್ದರೆ ಈ ಚಿತ್ರವನ್ನು ಗ್ರಹಿಸುವುದೇ ಕಷ್ಟಸಾಧ್ಯ. ಆದರೂ ಮೃದುವಾದ ವರ್ಣಗಳ ಸಾಂಗತ್ಯವಿದೆ, ತಾಜಾತನವಿಲ್ಲ. ವಿನ್ಯಾಸಗಳಲ್ಲಿ ಸ್ಪಷ್ಟಗ್ರಹಿಕೆ, ರಚನೆಗೆ ಈ ಚಿತ್ರ ಹಂಬಲಿಸುತ್ತಿದೆ.

ನೀರ ಕಂಡಲ್ಲಿ ಮುಳುಗುವರಯ್ಯ... – ೩

ಚಿತ್ರದ ಮೇಲ್ಭಾಗದಲ್ಲಿ ಒಂದು ದೊಡ್ಡ ಮರದ ಬೊಡ್ಡೆಯನ್ನು ಭಕ್ತಿ ಪೂರ್ವಕವಾಗಿ ಕೈ ಮುಗಿದು, ಸುತ್ತುತ್ತಿರುವ ಇಬ್ಬರು ಸ್ತ್ರೀಯರ ಚಿತ್ರವಿದೆ. ಬೊಡ್ಡೆಯ ಕೆಳಭಾಗದಲ್ಲಿ ಬ್ರಾಹ್ಮನೊಬ್ಬ ನೀರಲ್ಲಿ ಮುಳುಗುವ ದೃಶ್ಯವಿದೆ. ಆ ಬ್ರಾಹ್ಮಣ ಜುಟ್ಟನ್ನು ಬಿಟ್ಟುಕೊಂಡು, ಕೊರಳಲ್ಲಿ ಜನಿವಾರ ಹಾಕಿಕೊಂಡು, ರುದ್ರಾಕ್ಷಿ ಮಾಲೆಯನ್ನು ಧರಿಸಿದ್ದಾನೆ. ಅವನ ಬಾಗಿದ ದೇಹ, ಬಲಗೈಯಿಂದ ಮೂಗನ್ನು ಹಿಡಿದು, ಎಡಗೈಯಿಂದ ಬಲಗೈಯ ಮೊಣಕೈಯನ್ನು ಹಿಡಿದು ಮುಳುಗಲು ಅಣಿಯಾಗಿದ್ದಾನೆ. ಆತನ ಮೊಣಕಾಲಿನ ಕೆಳಭಾಗವೆಲ್ಲ ನೀರಿನಲ್ಲಿ ಮುಳುಗಿದ್ದು, ನೀರಿನ ಅಲೆಗಳು ಕಾಣುತ್ತಿವೆ. ಅದರ ಮೇಲ್ಭಾಗದಲ್ಲಿ ಪುಟ್ಟ ಪುಟ್ಟ ಗೆರೆಗಳಿಂದ ವೃತ್ತಾಕಾರ ಮಾಡಲಾಗಿದೆ. ಕಲಾವಿದ ಜಿ. ಕೆ. ಶಿವಣ್ಣ ಅವರ ಈ ಚಿತ್ರವನ್ನು "ವಚನ ಚಿತ್ತಾರ" ಎಂಬ ಕೃತಿಯಿಂದ ಈ ಕಲಾಕೃತಿಯನ್ನು ಆಯ್ದುಕೊಳ್ಳಲಾಗಿದೆ.

೩.೨೦. ಕೆಸರಿನಲ್ಲಿ ಬಿದ್ದ ಪಶುವಿನಂತೆ ಆನು... – ೧

ಕೆಸರಿನಲ್ಲಿ ಬಿದ್ದ ಪಶುವಿನಂತೆ ಆನು
ದೆಸೆ ದೆಸೆಗೆ ಬಾಯಿಬಿಡುತ್ತಿದ್ದೇನಯ್ಯಾ.
ಅಯ್ಯಾ; ಆರಯ್ವರಿಲ್ಲ.ಅಕಟಕಟಾ!
ಪಶುವೆಂದೆನ್ನ ಕೂಡಲಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ[೨೮]

ವಚನದ ಸಾರಾಂಶ : ಸಂಸಾರವೆಂಬುವದೊಂದು ಕೆಸರು. ಕೆಸರಿನಲ್ಲಿ ಸಿಕ್ಕ ದೇಹ ಹೊರಬರಲು ಎಷ್ಟೇ ಒದ್ದಾಡಿದರೂ ಅದರಿಂದ ಬಿಡುಗಡೆ ಹೊಂದಲು ಅಸಾಧ್ಯ. ಇಲ್ಲಿ ಬಸವಣ್ಣನವರು ತಮ್ಮನ್ನು ಪಶು ಎಂದುಕೊಳ್ಳುತ್ತಾರೆ. ಇಡೀ ಮನುಜಕುಲವೇ ಪಶು. ಸಂಸಾರದ ಜಂಜಡಗಳಿಂದ ಬಿಡುಗಡೆ ಬಯಸಿದರೂ ಅದರಿಂದ ಬಿಡುಗಡೆ ಅಸಾಧ್ಯ. ಕೆಸರಿನಲ್ಲಿ ಬಿದ್ದ ಪಶು ಒದ್ದಾಡುತ್ತಾ ದಿಕ್ಕು ದಿಕ್ಕಿಗೂ ತನ್ನನ್ನು ಯಾರಾದರೂ ಅಲ್ಲಿಂದ ಮೇಲೆತ್ತುವರೇ ಎಂದು ಬಾಯಿಬಿಡುವದು. ಯಾರೂ ತನ್ನನ್ನು ಎತ್ತುವವರಿಲ್ಲ. ಪಶುವಿನಂತೆ ಬಿದ್ದ ನನ್ನ ಕೊಂಬನ್ನು ಹಿಡಿದು ಎತ್ತಬೇಕೆಂದು ಕೂಡಲಸಂಗಮನಲ್ಲಿ ಬಿನ್ನವಿಸಿಕೊಳ್ಳುವನು.

ಚಿತ್ರದ ವಿಶ್ಲೇಷಣೆ : ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು

೨೮. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೫೨), ಪು–೧೬

ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಸವಣ್ಣನ ವಚನದ ಆಶಯದಂತೆ ಎರಡು ಪ್ರತಿಮೆಗಳಿವೆ. ಒಂದು ಕೆಸರಿನಲ್ಲಿ ಸಿಕ್ಕಿ ತೊಳಲಿ ಬಳಲುವ ಪಶುವೊಂದು ಹೊರಬರಲಾರದೆ ಆರ್ತನಾದ ಮಾಡುವುದು. ಅದರಂತೆ ಬಸವಣ್ಣ ತಾನು ಈ ಭವಬಂಧನದ ಸಂಸಾರವೆಂಬ ಕೆಸರಿನಲ್ಲಿ ಬಿದ್ದು ಹೊರಬರಲಾರದೆ ಚಡಪಡಿಸಿ, ಶಿವನಲ್ಲಿ ಮೊರೆಯಿಡುವುದು. ಹಳದಿ, ಕೆಂಪು, ಹಸಿರು ಬಣ್ಣಗಳ ತೆಳುವಾದ ವರ್ಣಸಂಯೋಜನೆಯನ್ನು ಇಲ್ಲಿ ಕಾಣುತ್ತೇವೆ. ಕೆಂಪು ಬಣ್ಣದ ತಾವರೆ ಹೂವುಗಳು, ಹಸಿರು ಬಣ್ಣದ ಎಲೆಗಳನ್ನು ನೋಡಿದ ಕೂಡಲೆ ಇದು ತಾವರೆಯ ಕೊಳವೆಂಬುದು ನೋಡುಗನಿಗೆ ಸುಲಭವೇದ್ಯವಾಗುತ್ತದೆ. ಅದರ ಮಧ್ಯದಲ್ಲಿ ಜೊಂಡುಹುಲ್ಲು ಬೆಳೆದಂತಿದ್ದು ಅದರ ಮಧ್ಯೆ ಬಿಳಿಬಣ್ಣದ ದಷ್ಟಪುಷ್ಟವಾದ ಹಸುವೊಂದು ತನ್ನೆದುರಿಗೆ ಇರುವ ಬಸವಣ್ಣನನ್ನು ದೃಷ್ಟಿಸುವಂತಿದೆ. ಹಸುವಿನ ಕಣ್ಣು, ಮೂಗು, ಮೂಗುದಾರ, ಕೋಡುಗಳು ಅತ್ಯಂತ ಸಹಜವಾಗಿ ಮೂಡಿಬಂದಿವೆ. ಅದರ ಅರ್ಧದೇಹ ಕೆಸರೊಳಗೆ ಸಿಲುಕಿದ್ದರಿಂದ ಅದರ ಕಾಲಿನ ಅರ್ಧಭಾಗ ಮಾತ್ರ ಕಾಣುತ್ತಿದೆ. ಕೆಸರಿನಲ್ಲಿ ಬಿದ್ದ ಪಶುವಿನ ಮುಖದಲ್ಲಿ ಅಥವಾ ಚಲನೆಯಲ್ಲಿ ಯಾವ ಗಾಬರಿ, ಆತಂಕ, ಇಲ್ಲವೆ ಕೆಸರಿನಿಂದ ಹೊರಬರಬೇಕೆನ್ನುವ ತವಕಗಳಾಗಲಿ ಇಲ್ಲ. ಇದೊಂದು ಅಂಶವನ್ನು ಹೊರತುಪಡಿಸಿದರೆ, ಚಿತ್ರದ ಉಳಿದೆಲ್ಲ ಸಂಗತಿಗಳು ಅಚ್ಚುಕಟ್ಟಾಗಿವೆ.

ಚಿತ್ರದ ಬಲಭಾಗದಲ್ಲಿ ಮಟ್ಟಸವಾದ ಕಪ್ಪು ತಲೆಗೂದಲು, ಕೊರಳಲ್ಲಿ, ಕಿವಿಯಲ್ಲಿ, ಕೈಗಳಲ್ಲಿ ರುದ್ರಾಕ್ಷಿ ಮಾಲೆ, ಇಷ್ಟಲಿಂಗದ ಕೆಂಪುವಸ್ತ್ರದ ಗಂಟು, ಗುಲಾಬಿಬಣ್ಣದ ಮೇಲುವಸ್ತ್ರ, ರೇಷ್ಮೆಯ ಪಂಚೆಯನ್ನು ಧರಿಸಿ ನಿಂತಿರುವ ಬಸವಣ್ಣ ತನ್ನ ತಲೆಯನ್ನು ತುಸು ಮೇಲೆತ್ತಿ, ತನ್ನೆರಡೂ ಕೈಗಳನ್ನು ಆಕಾಶದತ್ತ ಎತ್ತಿ ಶಿವನನ್ನು ಬೇಡುವ ಭಂಗಿ ನೋಡುಗರ ಮನಮುಟ್ಟುವಂತಿದೆ. ಭಿತ್ತಿಯಲ್ಲಿ ಹಳದಿ, ಕೆಂಪು ಬಣ್ಣಗಳಿಂದ ಮಿಶ್ರಿತವಾದ ಆಕಾಶ, ತಿಳಿಹಸಿರು ಬಣ್ಣದ ಗಿಡಗಳ ಗುಂಪು, ಬಸವಣ್ಣನ ಹಿಂಬದಿಯಲ್ಲಿ ತಿಳಿ ಕಂದು ಬಣ್ಣದ ಮರದ ಆಕೃತಿಯಿರುವುದನ್ನು ಕಾಣುತ್ತೇವೆ. ಚಿತ್ರದ ಎಡಪಾರ್ಶ್ವದಲ್ಲಿ ಮರದ ಬದಿಯಲ್ಲಿ ಬಸವಣ್ಣನವರು "ಕೆಸರಿನಲ್ಲಿ ಬಿದ್ದ ಪಶುವಿನಂತೆ ಆನು" ಎಂದು ಕೂಡಲಸಂಗಮನಲ್ಲಿ ಮೊರೆಯಡುತ್ತಿ-ರುವುದನ್ನು ಇಲ್ಲಿ ಸಂಯೋಜಿಸಿದ್ದಾರೆ. ವಚನದ ಸಾರಕ್ಕೆ ಪೂರಕವಾಗಿ ಆಕೃತಿ ಸಂಯೋಜನೆಗೊಂಡರೆ, ವರ್ಣಯೋಜನೆ ದುರ್ಬಲಗೊಂಡಿರುವುದು ವೇದ್ಯವಾದುದು. ವರ್ಣಯುಕ್ತ ಕುಂಚದ ನಿರ್ವಹಣೆಯಲ್ಲಿ ಗಟ್ಟಿತನವಿದೆ. ಆಕೃತಿಯ ಆಂಗಿಕ ರಚನೆಯಲ್ಲಿ ಪಕ್ವತೆಯೂ ಇದೆ. ಹೀಗಾಗಿ ಈ ಚಿತ್ರ ಗಮನದಲ್ಲಿಟ್ಟು-ಕೊಳ್ಳಬಹುದು.

ಕೆಸರಿನಲ್ಲಿ ಬಿದ್ದ ಪಶುವಿನಂತೆ ಆನು... – ೨

ಕಲಾವಿದ ಜಿ. ಕೆ. ಶಿವಣ್ಣ ಅವರ ಈ ಚಿತ್ರವನ್ನು "ವಚನ ಚಿತ್ತಾರ" ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. ಕೆಸರಿನಲ್ಲಿ ಪಶುವಿನ ಕಾಲು ಹಾಗೂ ದೇಹದ ಅರ್ಧಭಾಗ ಮುಳುಗಿದ್ದು, ಗೋಣನ್ನು ಮೇಲಕ್ಕೆತ್ತಿ, ಒದರುತ್ತಿದೆ. ಆ ಪಶುವಿನ ಮುಖಭಾಗವು ಮನುಷ್ಯನ ಬಲಬದಿಯ ದೇಹದ ಎದೆಯ ಭಾಗವನ್ನು ಮುಚ್ಚಿದ್ದು, ಆ ವ್ಯಕ್ತಿಯು ಬಲಗೈಯನ್ನು ಮೇಲಕ್ಕೆತ್ತಿ ಎಡಗೈಯಲ್ಲಿ ಲಿಂಗವನ್ನು ಹಿಡಿದು,

ಕಾಲನ್ನು ಮಡಚಿ ಕುಳಿತಿದ್ದಾನೆ. ಕೈಯಲ್ಲಿ, ಕೊರಳಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿ, ಮೇಲ್ಮುಖವಾಗಿ ಕುಳಿತಿದ್ದಾನೆ.

೩.೨೧. ದೇವನೊಬ್ಬ ನಾಮ ಹಲವು...

ದೇವನೊಬ್ಬ ನಾಮ ಹಲವು ; ಪರಮ ಪತಿವ್ರತೆಗೆ ಗಂಡನೊಬ್ಬ

ಮತ್ತೊಂದಕ್ಕೆ ಎರಗಿದರೆ ಕಿವಿ ಮೂಗ ಕೊಯ್ಯುವನು

ಹಲವು ದೈವದ ಎಂಜಲ ತಿಂಬವರನೇನೆಂಬೆ ಕೂಡಲಸಂಗಮದೇವಾ![೨೯]

ವಚನದ ಸಾರಾಂಶ : ಇರುವವನು ಒಬ್ಬನೇ ಶಿವ. ಹುಟ್ಟಿಸುವವನೂ ಅವನೇ, ಸಾಯಿಸುವವನೂ ಅವನೇ. "ಇಬ್ಬರು ದೇವರೆಂದು ಉಬ್ಬಿ ಮಾತಾಡಬೇಡ"ವೆಂಬ ಸರ್ವಜ್ಞನ ನುಡಿಯಂತೆ ಹಲವು ದೈವಗಳನ್ನು ಆರಾಧಿಸಬಾರದು. ಇರುವ ಒಬ್ಬ ದೇವರನ್ನು ಕೂಡಲಸಂಗಮದೇವಾ, ಗುಹೇಶ್ವರ, ಚೆನ್ನ ಸಂಗಮದೇವ, ಚೆನ್ನಮಲ್ಲಿಕಾರ್ಜುನ, ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬುದಾಗಿ ಬೇರೆ ಬೇರೆ ಹೆಸರಿನಿಂದ ಕರೆಯಬಹುದೇ ಹೊರತಾಗಿ ಚಾರಿತ್ರ್ಯ ಬೇರೆಯೆಂದು ಭಾವಿಸಬೇಕಾಗಿಲ್ಲ. ಶಿವನೇ ಬೇರೆ, ಬ್ರಹ್ಮನೇ ಬೇರೆ, ವಿಷ್ಣುವೇ ಬೇರೆ ಎಂಬ ಭಿನ್ನತೆ ಇಲ್ಲ. ಹಲವು ನಾಮಗಳಿಂದ ಕರೆಯಲ್ಪಡುವ ಈ ದೇವರುಗಳೆಲ್ಲರೂ ಒಂದೇ. ಪರಮ ಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದರೆ ಕಿವಿ, ಮೂಗನ್ನು ಕತ್ತರಿಸುವರು. ಹಲವು ದೈವಗಳಿಗೆ ಮೊರೆ ಹೋಗುವವರನ್ನು ಏನೆನ್ನಬೇಕೆಂದು ಕೇಳುವನು.

ಚಿತ್ರದ ವಿಶ್ಲೇಷಣೆ : ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರವು ನೇರ ಮತ್ತು ಸರಳ ನಿರೂಪಣೆಯ ಅಚ್ಚುಕಟ್ಟಾದ ಕಲಾಕೃತಿಯಾಗಿದೆ. ನೋಡುಗರಿಗೆ ಎದುರಾಗಿ ನಿಂತ ಬಸವಣ್ಣ ಹಳದಿಬಣ್ಣದ ಅಂಚಿನ ಕೆಂಪು ಮೇಲುವಸ್ತ್ರ, ಮತ್ತು ಬಿಳಿ ಪಂಚೆ, ಹಣೆಯಲ್ಲಿ ವಿಭೂತಿ, ರುದ್ರಾಕ್ಷಿ, ಇಷ್ಟಲಿಂಗವನ್ನು ಧರಿಸಿ, ತನ್ನ ಮುಖವನ್ನು ಓರೆಮಾಡಿ, ಬಲಗೈಯನ್ನು ಮೇಲಕ್ಕೆತ್ತಿ ತೋರುಬೆರಳನ್ನು ಚಾಚಿದ್ದಾನೆ. ಮತ್ತು ತನ್ನ ಎಡಗೈಯ ಹಸ್ತವನ್ನು ತನ್ನ ಹಿಂದಿರುವ ದೇವತಾಮೂರ್ತಿಗಳೆಡೆಗೆ ಎತ್ತಿ ಹಿಡಿದಿದ್ದಾನೆ. ಬಸವಣ್ಣನ ಹಿಂದೆ ಕಟ್ಟಿಗೆಯ ಇಲ್ಲವೆ ಸಿಮೆಂಟಿನಿಂದ ಮಾಡಿದ ಕಟ್ಟೆಯಂತಿರುವ ಎತ್ತರದ ಭಾಗದಲ್ಲಿ ಐದು ದೇವತಾ ವಿಗ್ರಹಗಳಿವೆ. ಅವುಗಳಲ್ಲಿ ಮಧ್ಯದಲ್ಲಿ ಕೆಂಪುವರ್ಣದಲ್ಲಿ ರಚಿತವಾದ, ನಾಲ್ಕು ಕೈಗಳು ಮತ್ತು ಪ್ರಭಾವಳಿ, ಕಿರೀಟವುಳ್ಳ ಮೂರ್ತಿಯೊಂದು ಗೋಚರಿಸುತ್ತದೆ. ಇದು ವಿಷ್ಣುವಿನ ಮೂರ್ತಿಯೆಂದು ಹೇಳಬಹುದಾದರೂ, ನಾಲ್ಕು ಕೈಗಳಲ್ಲಿ ಒಂದು ಕೈಯಲ್ಲೂ ಚಕ್ರವು ಕಾಣಿಸದೆ ಇರುವುದರಿಂದ ಸಂಶಯ ತೋರುತ್ತದೆ. ಅದರ ಎಡಬದಿಯಲ್ಲಿ ಚಿಕ್ಕದಾದ ಹೆಣ್ಣು ದೇವತಾವಿಗ್ರಹವು ನಿಂತ ಭಂಗಿಯಲ್ಲಿದೆ. ಅದರ ಪಕ್ಕದಲ್ಲಿ ಹಳದಿ ಬಣ್ಣದಿಂದ ರಚಿತವಾದ ಎರಡು ಕೈಗಳಲ್ಲಿ ಶಂಖ, ಕಮಲ ಮತ್ತೆರಡು ಕೈಗಳನ್ನು ಕೆಳಗೆ ಇಳಿಯಬಿಟ್ಟ ವಿಗ್ರಹವೊಂದಿದೆ. ಬಸವಣ್ಣನ

---

೨೯. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೬೧೪), ಪು-೧೫೪

ಬಲಗೈಯ ಹಿಂಬದಿಯಲ್ಲಿ ಹಳದಿ ಬಣ್ಣದ ಸ್ತ್ರೀ ವಿಗ್ರಹವೊಂದು ವೃತ್ತಾಕಾರದ ಪೀಠದಲ್ಲಿ ನಿಂತಿದ್ದು ಅದರ ಪಕ್ಕದಲ್ಲಿ ಅಸ್ಪಷ್ಟವಾಗಿ ತೋರುವ ಮತ್ತೊಂದು ಕೆಂಪುವರ್ಣದ ಸ್ತ್ರೀ ವಿಗ್ರಹವಿದೆ. ದೇವನೊಬ್ಬ ಎಂದರೆ ಬಸವಣ್ಣನ ಪ್ರಕಾರ ಶಿವನೊಬ್ಬನೇ ಎಂದು ಹೇಳಿದ್ದಾನೆಯೆ ಹೊರತು, ಇಲ್ಲಿ ಶಿವಲಿಂಗ ಅಥವಾ ಈಶ್ವರನ ಪ್ರತೀಕವಾದ ವಿಗ್ರಹವೊಂದನ್ನು ಬಸವಣ್ಣನು ಸೂಚಿಸಿಲ್ಲ, ಅಂತೆಯೇ ಇಲ್ಲಿ ಕಲಾವಿದನೂ ಸೂಚಿಸಿರುವುದಿಲ್ಲ. ವಚನದ ಮತ್ತೊಂದು ಭಾಗವಾದ ಪತಿವ್ರತೆಗೆ ಗಂಡನೊಬ್ಬನಿರುವಂತೆ, ಭಕ್ತನಾದವನು ಅನ್ಯದೈವಕ್ಕೆ ಎರಗಿದರೆ ಕೂಡಲ ಸಂಗಮದೇವನು ಅವರ ಕಿವಿ, ಮೂಗುಗಳನ್ನು ಕೊಯ್ಯುವನು ಎಂಬ ಭಾವವನ್ನು ಸೂಚಿಸುವ ಚಿತ್ರಣವನ್ನು ಇಲ್ಲಿ ಅಭಿವ್ಯಕ್ತಪಡಿಸಲು ಕಲಾವಿದನಿಗೆ ಅವಕಾಶವಿದ್ದರೂ ಸಾಧ್ಯವಾಗದೇ ಇರಬಹುದು. ಒಂದು ಬಗೆಯಲ್ಲಿ ಈ ಚಿತ್ರವು ತಕ್ಷಣದ ನೋಟಕ್ಕೆ ವಸ್ತುಸಂಗ್ರಹಾಲಯದಲ್ಲಿ ಬಸವಣ್ಣನವರನ್ನು ನಿಂತಿರುವಂತೆ ಚಿತ್ರಿಸಲಾಗಿದೆ. ಆಂಗಿಕವಾಗಿ ತಕ್ಕಮಟ್ಟಿನ ಉತ್ತಮ ರಚನೆ ಇದ್ದರೂ, ವಚನಕ್ಕೆ ಈ ಬಗೆಯ ದೃಶ್ಯಾತ್ಮಕ ಪ್ರತಿಕ್ರಿಯೆ ಸೂಕ್ತವೇ? ಚಿತ್ರವು ನಿರೂಪಣಾತ್ಮಕವಾಗಿದ್ದರೆ, ನೈಜನೆಲೆಯಲ್ಲಿ ವಿವರಣಾತ್ಮಕವಾಗಿದ್ದರೆ ಮಹಾಪುರುಷರ ಸಂದೇಶಗಳು, ಒಳಸಂವೇದನೆಗಳು, ತುಡಿತಗಳು ಶ್ರೀಸಾಮಾನ್ಯನ ತನು–ಮನಕ್ಕೆ ತಟ್ಟಬಹುದು.

೩.೨೨. ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ...

ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ

ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ

ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಹ ಮಾಡಿ

ನೀವಿರಿಸಿದಿರಿ ಕೂಡಲಸಂಗಮದೇವಾ [೩೦]

ವಚನದ ಸಾರಾಂಶ : ಮನುಷ್ಯನ ಅಂತರಂಗದ ಅವಗುಣಗಳನ್ನು ಅತ್ತಿಯ ಹಣ್ಣಿಗೆ ಹೋಲಿಸುವದರ ಮೂಲಕ ಬಸವಣ್ಣನವರು ಆತ್ಮಾವಲೋಕನ ಮಾಡಿಕೊಳ್ಳುವರು. ನನ್ನ ಮನಸ್ಸಿನಲ್ಲಿ ಅನೇಕ ಕೆಟ್ಟ ವಿಚಾರಗಳು ತುಂಬಿಕೊಂಡಿವೆ. ಅತ್ತಿಯ ಹಣ್ಣು ನೋಡಲು ಸುಂದರವಾದ ಕೆಂಪುಬಣ್ಣದಿಂದ ಕೂಡಿದ್ದು, ಅದರೊಳಗೆಲ್ಲಾ ಹುಳುಗಳೇ ತುಂಬಿಕೊಂಡಿರುತ್ತವೆ. ಹಾಗೆಯೇ ಮನುಷ್ಯನ ಜೀವನವೂ ಇದೆ. ಹೊರಗಣ ಭೌತಿಕ ಚಹರೆ ಅತ್ಯಂತ ಆಕರ್ಷಕವಾದುದು. ಆಂತರಂಗದಲ್ಲಿ ಸತ್ವವೇ ಇಲ್ಲದ ಬದುಕು. ಇಂಥ ಪ್ರಪಂಚದಲ್ಲಿ ಕೂಡಲಸಂಗಮದೇವನು ನನ್ನನ್ನು ಒಂದು ರೂಪವನ್ನು ಕೊಟ್ಟು ಜೀವಂತವಾಗಿಸಿದಿರಿ ಎನ್ನುವನು.

ಚಿತ್ರದ ವಿಶ್ಲೇಷಣೆ : ಕಲಾವಿದ ಎಂ. ವೀರಪ್ಪನವರ ಈ ಕಲಾಕೃತಿಯು ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಕಣ್ಣಿಗೆ ಹಿತವನ್ನುಂಟು ಮಾಡುವ ವರ್ಣಗಳ ಬಳಕೆ, ವಚನದ ವಸ್ತು ಆಶಯವನ್ನು ನೇರವಾಗಿ, ಸರಳವಾಗಿ ಅಚ್ಚುಕಟ್ಟಾಗಿ ರಚಿಸಿದ ಕಲಾಕೃತಿಯಿದಾಗಿದೆ. ನೋಡುಗರ ಎದುರಿಗೆ ಚಿತ್ರದ ಎಡಭಾಗದಲ್ಲಿ ತನ್ನೆರಡೂ ಕೈಗಳನ್ನು ಮುಗಿದ, ಕಣ್ಣು ಮುಚ್ಚಿದ ಭಂಗಿಯಲ್ಲಿ

೩೦. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೨೯), ಪು–೧೧

ಬಸವಣ್ಣ ಕುಳಿತಿದ್ದಾನೆ. ಹಣೆಯಲ್ಲಿ ರುದ್ರಾಕ್ಷಿ, ಭ್ರೂಮಧ್ಯದಲ್ಲಿ ಬೊಟ್ಟು, ತಿಳಿ ಕಾವಿಬಣ್ಣದ ಮೇಲುವಸ್ತ್ರ, ಪಂಚೆಯನ್ನು ಧರಿಸಿದ ಬಸವಣ್ಣನ ಎದುರಿಗೆ ಶಿವಲಿಂಗದ ಅತ್ಯಂತ ಸುಂದರವಾದ ಚಿತ್ರವಿದೆ. ಅದರ ನೆತ್ತಿಯ ಮೇಲೆ ಬಿಲ್ವಪತ್ರೆ, ಕೆಂಪು ಹೂವುಗಳು, ಹೂವಿನ ಹಾರ, ಅದರ ಕೆಳಗೆ ಚಿಕ್ಕ ಚೌಕಾಕಾರದ ಪೀಠವಿದೆ. ಶಿವಲಿಂಗದ ಪಕ್ಕದಲ್ಲಿ ಹಸಿರು ಎಲೆಗಳಿಂದ ಕೂಡಿದ ತೆಳುವಾದ ಕಾಂಡದ ಅತ್ತಿಯ ಮರವೊಂದಿದೆ. ವಾಸ್ತವವಾಗಿ ಅತ್ತಿ ಹಣ್ಣಿನ ಮರ ಅಷ್ಟು ತೆಳುವಾದ ಕಾಂಡವನ್ನು ಹೊಂದಿರುವುದಿಲ್ಲ. ಅದರಲ್ಲಿ ನಿಜವಾಗಿಯೂ ತೋರುವಂತಿರುವ ಅತ್ತಿಯ ಹಣ್ಣುಗಳ ಒಂದು ಗೊಂಚಲಿದೆ. ಮತ್ತು ಚಿತ್ರದ ಎಡಬದಿಯಲ್ಲಿ ಅತ್ತಿಮರದ ಕಾಂಡವೊಂದು ಹಸಿರು ಎಲೆಗಳಿಂದ ಕೂಡಿದ್ದು ಅಲ್ಲಿಯೂ ಎರಡು ಅತ್ತಿಯ ಹಣ್ಣುಗಳಿವೆ. ಅತ್ತಿಯ ಹಣ್ಣುಗಳ ಚಿತ್ರಣ ಕಲಾವಿದನ ಪ್ರತಿಭೆಗೆ ಕನ್ನಡಿ ಹಿಡಿದಂತಿವೆ. ಆದರೆ ಇಲ್ಲಿ ಚಿತ್ರಿತವಾಗಿರುವ ಎರಡೂ ಭಾಗದಲ್ಲಿರುವ ಅತ್ತಿಯ ಮರದ ಎಲೆಗಳು ನಿಜವಾಗಿಯೂ ಅತ್ತಿಯ ಗಿಡದ ಎಲೆಗಳಲ್ಲ. ಅವು ಔಡಲ ಅಥವಾ ಇನ್ನಾವುದೋ ಗಿಡದ ಎಲೆಗಳೆಂದು ತೋರುತ್ತವೆ. ಅತ್ತಿಯ ಮರದ ಎಲೆಗಳು ಆಲದ ಮರದ ಎಲೆಗಳಿಗೆ ಸಮೀಪಸಾದೃಶ್ಯವನ್ನು ಹೊಂದಿರುತ್ತವೆ.

ಇಲ್ಲಿ ಚಿತ್ರಿತವಾಗಿರುವ ಬಸವಣ್ಣನವರ ಆಕೃತಿ ನೋಡಲು ಸುಂದರವಾಗಿದ್ದು, ಭಾವ, ಭಂಗಿಯಲ್ಲಿ ಯಾವ ಕೊರತೆಯೂ ಇಲ್ಲ. ಆದರೆ ಪ್ರಮಾಣದಲ್ಲಿ ಬಸವಣ್ಣನ ಕೋಲುಮುಖಕ್ಕೆ ತಕ್ಕಂತೆ ದೇಹಾಕೃತಿ ಇನ್ನಷ್ಟು ಎತ್ತರವಾಗಿ ರಚಿತವಾಗಬೇಕಿತ್ತು ಎನ್ನಿಸುತ್ತದೆ. ಭಿತ್ತಿಯಲ್ಲಿ ನೀರಿನ ಸರೋವರ, ಅದಕ್ಕೆ ಹೊಂದಿಕೊಂಡಂತೆ ಚಿಕ್ಕದಾದ ಗುಡ್ಡ ಇವು ಸಹಜವಾಗಿ ನಿರೂಪಿತಗೊಂಡಿದ್ದು, ನೈಜ ಶೈಲಿಯ ಕಲಾಕೃತಿಗಳಲ್ಲಿಯೇ ಇದೊಂದು ಮಾದರಿಯಾಗುತ್ತದೆ. ಈಶ್ವರ ಶಿಲ್ಪ, ಅದಕ್ಕೆ ಹೊಂದಿಕೊಂಡಂತಿರುವ ಗಾರೆಯ ಪೀಠ, ಏಕಾಗ್ರತೆಯಿಂದ ದೇವರಲ್ಲಿ ಮೊರೆಯಿಡುತ್ತಿರುವ ಬಸವಣ್ಣ, ದೂರದಲ್ಲಿ ಕಾಣುವ ಹಸಿರುಟ್ಟ ಇಳೆ ಹೀಗೆ ಪ್ರಮಾಣಬದ್ಧ, ತರ್ಕಬದ್ಧ ರಚನೆಯನ್ನು ಈ ಚಿತ್ರ ಹೊಂದಿದೆ. ವರ್ಣಗಳ ಬಳಕೆಯ ಮೇಲೆ ಹಿಡಿತ ಸಾಧಿಸಿರುವ ಕಲಾವಿದರು, ಅಗತ್ಯಕ್ಕೆ ತಕ್ಕಷ್ಟು ವರ್ಣಗಳಲ್ಲಿ ಮೃದುತ್ವವನ್ನು ನಿರ್ವಹಿಸಿದ್ದಾರೆ. ಕಲಾವಿದ ಸಾಕಷ್ಟು ಶ್ರಮವಹಿಸಿ, ಶ್ರದ್ಧೆಯಿಂದ ಈ ಚಿತ್ರವನ್ನು ರಚಿಸಿರುವುದು ಶ್ಲಾಘ್ಯವಾಗಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ.

೩.೨೩. ಒಡೆಯನಿಲ್ಲದ ಮನೆ ತುಡುಗಣಿ ನಾಯಿ ಹೊಗುವಂತೆ....

ಒಡೆಯನಿಲ್ಲದ ಮನೆಯ ತುಡುಗಣಿ ನಾಯಿ ಹೊಗು

ವಂತೆ ನೀವಿಲ್ಲದವರ ಮನೆಯ ಹೋಗೆನು ಸಂಗಯ್ಯಾ

ಶ್ವಪಚೋಪಿಗಳಾಗಲಿ ಕೂಡಲಸಂಗಯ್ಯಾ ನೀವಿದ್ದವನೇ ಕುಲಜನು [೩೧]

ವಚನದ ಸಾರಾಂಶ : ಮನೆಯೆಂಬ ದೇಗುಲಕ್ಕೆ ಒಡೆಯನೇ ಕೂಡಲಸಂಗಯ್ಯಾ. ಒಡೆಯನಿಲ್ಲದ ಮನೆಯನ್ನು ಕಳ್ಳತನದಿಂದ ಪ್ರವೇಶಿಸುವ ನಾಯಿಯು ಮನೆಯಲ್ಲಿ ಸ್ವೇಚ್ಛೆಯಾಗಿ ವರ್ತಿಸುವುದು. ಒಡೆಯನಿಲ್ಲದ ಮನೆಯನ್ನು ನಾನು ಪ್ರವೇಶಿಸಲಾರೆನು. ಸ್ವೇಚ್ಛಾಚಾರದ ಬದುಕು ನನಗೆ ಬೇಡ. ನೀವಿದ್ದ

---

೩೧. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೭೧೫), ಪು-೧೭೯

ಮನೆಯೇ ಶ್ರೇಷ್ಠ ಮನೆ ಎನ್ನುವನು. ಜಲವರ್ಣದ ಈ ಚಿತ್ರದಲ್ಲಿ ಒಡೆಯನಿಲ್ಲದ ಅಂದರೆ ಕೂಡಲಸಂಗಮನಿಲ್ಲದ ಮನೆಯನ್ನು ಪ್ರವೇಶಿಸುವುದಿಲ್ಲ ಎಂಬ ಭಾವವನ್ನು ವಸ್ತುವಾಗುಳ್ಳ ದೃಶ್ಯವನ್ನು ಕಾಣುತ್ತೇವೆ.

ಚಿತ್ರದ ವಿಶ್ಲೇಷಣೆ : ಮೈಸೂರಿನ ಕಲಾವಿದ ಶ್ರೀ. ಎಂ. ವೀರಪ್ಪನವರ ೧೨"x೧೮" ಅಳತೆಯ ಈ ಜಲವರ್ಣ ಚಿತ್ರದಲ್ಲಿ ತಿಳಿ ಹಳದಿಬಣ್ಣವೇ ಸಿಂಹಪಾಲನ್ನು ಪಡೆದಿದೆ. ಕಮಾನಿನ ಮತ್ತು ಚೌಕಾಕಾರದ ಕಿಟಕಿಗಳನ್ನುಳ್ಳ ಶ್ರೀಮಂತರ ಉಪ್ಪರಿಗೆಯ ಮನೆ, ಅದರ ಪಕ್ಕದಲ್ಲಿಯೇ ಬಡವರದೆಂದು ತೋರುವ ನಾಡಹೆಂಚಿನ ಮನೆಯಿದ್ದು ಅದರ ಗೋಡೆ ಅಲ್ಲಲ್ಲಿ ಹಾಳಾಗಿದೆ. ಕಿಟಕಿಗಳು ತೆರೆದಿವೆ, ಬಾಗಿಲು ತೆರೆದಿದೆ, ಬಾಗಿಲಿನ ಬಳಿಯಲ್ಲಿ ಬಿಳಿಪಂಚೆಯನ್ನು ಮಾತ್ರ ಧರಿಸಿದ ವೃದ್ಧನೊಬ್ಬ ಊರುಗೋಲನ್ನು ಹಿಡಿದು ನಿ೦ತಿದ್ದಾನೆ.

ಚಿತ್ರದ ಮಧ್ಯಭಾಗದಲ್ಲಿ ತಲೆಗೆ ಪೇಟ, ಹಣೆಯಲ್ಲಿ ವಿಭೂತಿ, ಗಾಢವಾದ ಹಸಿರು ಮತ್ತು ಕಪ್ಪು ಬಣ್ಣ ಮಿಶ್ರಿತ ಕೋಟು, ಮೇಲುವಸ್ತ್ರ, ಪಂಚೆ, ಕಾಲಿಗೆ ಪಾದರಕ್ಷೆಗಳನ್ನು ಧರಿಸಿ, ಬಲಗೈಯಲ್ಲಿ ಕಪ್ಪುಬಣ್ಣದ ಛತ್ರಿ, ಎಡಗೈಯಲ್ಲಿ ಕೆಂಪು ಪುಸ್ತಕವನ್ನು ಒತ್ತಿ ಹಿಡಿದು ಸಾಗುತ್ತಿರುವ ವ್ಯಕ್ತಿಯು ಬಸವಣ್ಣನಿರಬೇಕೆಂದು ಹೇಳಲು ಮತ್ತಷ್ಟು ಆಧಾರಗಳ ಕೊರತೆಯಿದೆ. ಎಂತಹುದೇ ಮಹಲಿನ ಮನೆಯಾದರೂ ಶಿವನಿಲ್ಲದಿದ್ದರೆ ತಾನು ಹೋಗುವುದಿಲ್ಲ ಎಂದು ಹೇಳುವ ಬಸವಣ್ಣ ಆ ಉಪ್ಪರಿಗೆಯ ಮನೆಯ ಕಡೆಗೆ ತಿರುಗಿಯೂ ನೋಡದಿರುವ ವ್ಯಕ್ತಿಯ ಚಿತ್ರವನ್ನು ವಚನದಲ್ಲಿ ವ್ಯಕ್ತಪಡಿಸಿದರೆ, ಕಲಾವಿದರು ಅದಕ್ಕೆ ದೃಶ್ಯಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ. ಒಡೆಯನಿಲ್ಲದ ಮನೆಯನ್ನು ತುಡುಗಣಿ ನಾಯಿಯು ಪ್ರವೇಶಿಸುವುದನ್ನು ಸೂಚಿಸಲು ನಾಯಿಯ ಚಿತ್ರವೊಂದು ಮನೆಯ ಗೋಡೆಯ ಬದಿಯಲ್ಲಿದೆ.

ಸಂಯೋಜನೆಯ ದೃಷ್ಟಿಯಿಂದ ಈ ಚಿತ್ರ ಮಹತ್ವದ್ದು. ಹಿನ್ನೆಲೆಯಲ್ಲಿ ಉಪ್ಪರಿಗೆಯ ಮನೆಯನ್ನು ತೆಳುವಾದ ವರ್ಣದಿಂದ ತೋರ್ಪಡಿಸಿ, ಅದನ್ನು ಹಿನ್ನೆಲೆಯಾಗಿಸಿಕೊಂಡು, ಮುನ್ನೆಲೆಯಾಗಿ ನಾಡಹಂಚಿನ ಮನೆಯನ್ನು ಯಥಾದರ್ಶನದ ನೀತಿಯಡಿ ಸಮರ್ಪಕವಾಗಿ ಚಿತ್ರಿಸಲಾಗಿದೆ. ವರ್ಣವನ್ನು ಪಾರದರ್ಶಕವಾಗಿ ದುಡಿಸಿಕೊಂಡಿರುವುದರಿಂದ ಚಿತ್ರಕ್ಕೆ ಒಂದು ನೈಜತೆಯ ಮೆರಗು ಬಂದಿದೆ. ಆದರೆ ಪ್ರಥಮ ವರ್ಣವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಂಡಿದ್ದು ಅಸಮರ್ಪಕ. ಒಟ್ಟಾರೆ ಚಿತ್ರದಲ್ಲಿನ ಮನೆಗಳ ವಾಸ್ತು ಶೈಲಿ, ಅಲ್ಲಿನ ಜನರ ಉಡುಗೆ–ತೊಡುಗೆಗಳು ಮೈಸೂರು ಶೈಲಿಯನ್ನು ಪ್ರತಿಬಿಂಬಿಸುವಂತಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ.

೩.೨೪. ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ !...

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ !

ಸಂಸಾರಸಂಗವ ಬಿಡದು ನೋಡೆನ್ನ ಮನವು.

ಈ ನಾಯಿತನವ ಮಾಣಿಸು,

ಕೂಡಲ ಸಂಗಮದೇವಾ, ನಿಮ್ಮ ಧರ್ಮ![೩೨]

ವಚನದ ಸಾರಾಂಶ : ಖಡ್ಗದ ಮೇಲೆ ಅಂಟಿರುವ ತುಪ್ಪವನ್ನು ನೆಕ್ಕಲು ನಾಯಿ ಮುಂದಾಗುತ್ತದೆ. ಇದ್ದ ಸ್ವಲ್ಪ ತುಪ್ಪವು ಬರಿದಾಗಿ ಅದರ ನಾಲಿಗೆಯು ಖಡ್ಗಕ್ಕೆ ತಾಕಿ ನಾಯಿಯ ನಾಲಿಗೆಯಿಂದಲೇ ರಕ್ತ ಒಸರುತ್ತದೆ. ಆದರೆ ಅದು ತನ್ನದೇ ರಕ್ತ ಎಂದು ತಿಳಿಯದ ನಾಯಿ ಖಡ್ಗವನ್ನು ನೆಕ್ಕಿ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತದೆ.

ಚಿತ್ರದ ವಿಶ್ಲೇಷಣೆ: ಕೇರಳ ಕಲಾವಿದ ಅಜಯ ಕುಮಾರ್ ಅವರು ಈ ಕಲಾಕೃತಿಯನ್ನು ರಚಿಸಿದ್ದಾರೆ. ೪೮"x೩೬" ಅಳತೆಯ ಈ ಕೃತಿಯು ಅಕ್ರಲಿಕ್ ವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಧಾರವಾಡದ ಶಾಸಕರಾದ ಅರವಿಂದ ಬೆಲ್ಲದ ಅವರ ಮನೆಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಗಾಢವಾದ ನೀಲಿ ಬಣ್ಣದ ಭಿತ್ತಿಯ ಚೌಕಟ್ಟಿನಲ್ಲಿ ಕಂದು ಬಣ್ಣದ ನಾಯಿಯ ಚಿತ್ರಣವಿದೆ. ಅದರ ಎದುರುಬದಿಯಲ್ಲಿ ಖಡ್ಗವೊಂದಿದೆ. ಸೂಕ್ಷ್ಮವಾಗಿ ಗಮನಿಸಿದರೆ ನಾಯಿಯ ಮುಖವು ಒಂದು ರೀತಿಯಲ್ಲಿ ಮನುಷ್ಯನ ಮುಖವೇ ಆಗಿರುವುದು ಕಂಡುಬರುತ್ತದೆ. ಆಸೆಬುರುಕ ತನದಲ್ಲಿ ನಾಯಿ ಮತ್ತು ಮನುಷ್ಯ ಒಂದೇ ಎಂಬ ಭಾವವನ್ನು ಪ್ರಕಟಿಸಲು ಕಲಾವಿದ ಇಲ್ಲಿ ನಾಯಿಯ ದೇಹದಲ್ಲಿ ಮನುಷ್ಯನ ಮುಖವನ್ನು ಅಳವಡಿಸುವ ಪ್ರಯತ್ನ ಮಾಡಿದ್ದಾನೆ. ನಾಲಿಗೆಯನ್ನು ಚಾಚಿದ ನಾಯಿಯ ನಾಲಗೆ ಖಡ್ಗಕ್ಕೆ ತುಸು ದೂರದಲ್ಲಿರುವುದರಿಂದ ನೋಡುಗರು ಸಾಂಕೇತಿಕವಾಗಿ ವಚನ ಮತ್ತು ಚಿತ್ರಪಠ್ಯದ ಆಶಯವನ್ನು ಗ್ರಹಿಸಬೇಕಾದ ಅನಿವಾರ್ಯತೆಯಿದೆ.

೩.೨೫. ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ...

ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ

ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ

ಛಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ

ಛಲ ಬೇಕು ಶರಣಂಗೆ ಲಿಂಗ-ಜಂಗಮವೊಂದೆಯೆಂಬ

ಛಲ ಬೇಕು ಶರಣಂಗೆ ಪ್ರಸಾದವೆಲ್ಲ ದಿಟವೆಂಬ

ಛಲ ವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ [೩೩]

ವಚನದ ಸಾರಾಂಶ : ಶರಣನಾದವನು ಇತರರಿಗಿಂತಲೂ ಭಿನ್ನ ಸಂಸ್ಕಾರಗಳನ್ನು ಹೊಂದಿದವನು. ಕಾಮ, ಕ್ರೋಧ, ಲೋಭ, ಮೋಹ ಮದ, ಮತ್ಸರಗಳು ಎಲ್ಲರನ್ನು ಕಾಡುವುದು ಸಹಜವಾಗಿದೆ. ಶರಣನು

---

೩೨. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೩೫), ಪು-೧೨

೩೩. ಅದೇ. (ವ.ಸಂ.-೬೭೭), ಪು-೧೪೯

ಈ ಅರಿಷಡ್ವರ್ಗಗಳಲ್ಲಿ ಒಂದಾದ ಆಸೆ, ಮೋಹಗಳನ್ನು ಮೀರಿ ನಿಲ್ಲಬೇಕು. ಹಾಗೆ ಮೀರುವುದಕ್ಕೆ ಛಲ ಬೇಕು. ಬೇರೆಯರವರ ಧನವನ್ನು ಬೇಡವೆಂದು ಹೇಳುವ ಛಲ, ಬೇರೆಯವರ ಹೆಂಡತಿಯನ್ನು ಆಶಿಸದ ಛಲ, ಶಿವನನ್ನು ಬಿಟ್ಟು ಅನ್ಯ ದೈವವನ್ನು ಪೂಜಿಸುವುದಿಲ್ಲವೆಂಬ ಛಲ, ಲಿಂಗ ಮತ್ತು ಜಂಗಮಗಳು ಬೇರೆ ಬೇರೆಯಲ್ಲ ಎಂದು ಗಾಢವಾಗಿ ನಂಬುವ ಛಲ, ಗುರು–ಲಿಂಗ–ಜಂಗಮಕ್ಕೆ ಅರ್ಪಿಸಿದ ಎಡೆಯು ಪ್ರಸಾದವಾಗುವುದು ನಿಜವೆಂದು ನಂಬುವ ಛಲವನ್ನು ಶರಣನಾದವನು ಹೊಂದಿರಬೇಕಾದುದು ಶರಣಧರ್ಮಪಾಲನೆಗೆ ಅಗತ್ಯವಾದ ಅಂಶ. ಛಲವಿಲ್ಲದವನನ್ನು ನಮ್ಮ ಕೂಡಲಸಂಗಮದೇವನು ಮೆಚ್ಚುವುದಿಲ್ಲವೆಂದು ಬಸವಣ್ಣ ಈ ವಚನದ ಮೂಲಕ ಹೇಳಿದ್ದಾರೆ. ಈ ಚಿತ್ರದಲ್ಲಿ ಒಟ್ಟು ಆರು ದೃಶ್ಯಗಳಿವೆ.

ಚಿತ್ರದ ವಿಶ್ಲೇಷಣೆ : ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದ ಮೇಲಿನ ಮೂರು ದೃಶ್ಯಗಳಲ್ಲಿ (ಎಡದಿಂದ ಬಲಕ್ಕೆ) **ಒಂದನೆಯದರಲ್ಲಿ** ಪರಧನವನ್ನು ನಾನು ತೆಗೆದುಕೊಳ್ಳುವುದಿಲ್ಲ ಎಂದು ಸೂಚಿಸುವ ಸನ್ನಿವೇಶವಿದೆ. ಕೆಂಪು ಬಣ್ಣದ ರುಮಾಲು, ಪಂಚೆ, ನಿಲುವಂಗಿ, ಕೊರಳಲ್ಲಿ ರುದ್ರಾಕ್ಷಿ, ಕೈಯಲ್ಲಿ ಬೆತ್ತವನ್ನು ಹಿಡಿದು, ಕೆಳಗೆ ಕುಂಭದಿಂದ ಸುರಿದು ಬಿದ್ದಿರುವ ನಾಣ್ಯದ ರಾಶಿಗಳನ್ನು ತಿರುಗಿಯೂ ಕೂಡ ನೋಡದೆ ಸಾಗುವ ನಿರ್ವೇದ ಮನೋಭಾವ ಇಲ್ಲಿ ಪ್ರಕಟಗೊಂಡಿದೆ. ಆತನ ಪಕ್ಕದಲ್ಲಿ ದಪ್ಪವಾದ ಮರದ ಬೊಡ್ಡೆಗಳನ್ನು ಹೊಂದಿರುವ ಮೂರು ಮರಗಳಿವೆ.

ಎರಡನೆಯ ಚಿತ್ರದಲ್ಲಿ ಪರಸತಿಯರನ್ನು ಕಣ್ಣೆತ್ತಿ ನೋಡದಿರುವ ಛಲದ ವ್ರತವನ್ನು ಕಲಾವಿದ ಇಲ್ಲಿ ಮೂಡಿಸಿದ್ದಾನೆ. ಕೆಂಪು ಕುಪ್ಪಸ, ನೀಲಿಬಣ್ಣದ ಸೀರೆ, ಕಪ್ಪುತಲೆಗೂದಲಿನ ಮುಡಿಯಲ್ಲಿ ಹೂವಿನ ದಂಡೆಯನ್ನು ಧರಿಸಿದ ಸ್ತ್ರೀಯೊಬ್ಬಳು ತನ್ನ ಎಡಗೈಯನ್ನು ಸೊಂಟದ ಬಳಿಯಿಟ್ಟುಕೊಂಡು ಬಲಗೈಯನ್ನು ತನ್ನ ಕೊರಳಿಗೆ ತಾಗಿಸಿ ಹಿಡಿದು ತನ್ನ ಮುಂದಿರುವ ಶರಣನನ್ನು ನೋಡುತ್ತಿದ್ದಾಳೆ. ಕಾವಿ ಬಣ್ಣದ ರುಮಾಲು, ಮೇಲುಹೊದಿಕೆ, ನಿಲುವಂಗಿ, ಪಂಚೆಯನ್ನು ಧರಿಸಿದ ಶರಣನು ಕೈಯಲ್ಲಿ ಬೆತ್ತವನ್ನು ಹಿಡಿದು ತನ್ನ ಬಲಗೈಯಿಂದ ಕಣ್ಣನ್ನು ಮುಚ್ಚಿಕೊಳ್ಳುವ ಭಂಗಿಯಲ್ಲಿ ನಿಂತಿದ್ದಾನೆ. ಹೊರವಲಯದಲ್ಲಿ ನಡೆದಿರುವ ಸನ್ನಿವೇಶದ ಚಿತ್ರಣ ನೈಜವಾಗಿದೆ.

ಮೂರನೆಯ ದೃಶ್ಯದಲ್ಲಿ ಹಿಂದಿನ ಎರಡೂ ಚಿತ್ರಗಳಲ್ಲಿರುವ ಶರಣನೇ ಇಲ್ಲಿಯೂ ಬಂದಿದ್ದು, ಶಿವನನ್ನು ಹೊರತುಪಡಿಸಿರುವ ಇತರ ದೈವವನ್ನು ಪೂಜಿಸದೆ ನಿರಾಕರಿಸುವ ಭಂಗಿಯಲ್ಲಿ ನಿಂತಿದ್ದಾನೆ. ಕೆಳಗಿನ ಹಂತದ **ಮೊದಲನೆಯ** ಚಿತ್ರದಲ್ಲಿ (ಎಡದಿಂದ ಬಲಕ್ಕೆ) ತೆಂಗಿನ ಕಾಯಿಯ ಜುಟ್ಟಿನಂತೆ ಮುಂದೆ ಬೋಳಾಗಿದ್ದು ಹಿಂದೆ ಸ್ವಲ್ಪ ಕೂದಲಿರುವ ವಯಸ್ಸಾದಂತೆ ತೋರುವ ಭಕ್ತನೊಬ್ಬ ತನ್ನ ಎದುರಿಗೆ ಕಾವಿಬಣ್ಣದ ವಸ್ತ್ರಗಳನ್ನು ಧರಿಸಿದ ಜಂಗಮನ ಪಾದಪೂಜೆಯಲ್ಲಿ ತೊಡಗಿರುವ ಸನ್ನಿವೇಶವಿದೆ. ಜಂಗಮನ ಪಾದದಲ್ಲಿ ಗುಲಾಬಿಬಣ್ಣದ ಹಲವು ಹೂವುಗಳು, ಹಸಿರು ಬಣ್ಣದ ಪತ್ರೆಗಳು ಗುಂಪಾಗಿ ಬಿದ್ದಿವೆ.

ಗುರುವಿನ ಪಕ್ಕದಲ್ಲಿ ಪೂಜಾಸಾಮಗ್ರಿಗಳಾದ ತಂಬಿಗೆ, ತಟ್ಟೆ, ಬಟ್ಟಲು, ದೀಪ ಮುಂತಾದವುಗಳಿವೆ. ಸನ್ನಿವೇಶ ಅರ್ಥಪೂರ್ಣವಾಗಿ ಚಿತ್ರಣಗೊಂಡಿದೆ.

ಎರಡನೆಯ ಚಿತ್ರದಲ್ಲಿ ಇದೇ ಸನ್ನಿವೇಶ ಮುಂದುವರೆದು ಜಂಗಮನು ತನ್ನ ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದು ಪೂಜೆ ಮಾಡಿಕೊಳ್ಳುತ್ತಿದ್ದು, ಆತನ ಮುಂದೆ ಬೋಳುತಲೆಯ ಭಕ್ತನೊಬ್ಬ ಪಾದಪೂಜೆ ಮಾಡುವ ಸನ್ನಿವೇಶ ಅಭಿವ್ಯಕ್ತವಾಗಿದೆ.

ಮೂರನೆಯ ಚಿತ್ರದಲ್ಲಿ ಕಲ್ಲಿನ ಐಕ್ಯಮಂಟಪವೊಂದಿದ್ದು, ಅದರಲ್ಲಿ ಕಪ್ಪು ಬಣ್ಣದ ಗುಂಡಾದ ಶಿವಲಿಂಗವಿದೆ. ಅದರ ಮುಂದೆ ಚಿಕ್ಕ ಆಕೃತಿಯ ಶರಣನೊಬ್ಬ ಕಂಡುಬರುತ್ತಾನೆ. ಭಿತ್ತಿಯಲ್ಲಿ ಹಸಿರು ಗಿಡಮರಗಳು, ದೇವಸ್ಥಾನದ ಶಿಖರಗಳು ಗೋಚರಿಸುತ್ತವೆ. ವಚನದ ಆಶಯವನ್ನು ಕಲಾವಿದ ಈ ಚಿತ್ರದಲ್ಲಿ ಪೂರ್ಣಗೊಳಿಸಿದ್ದಾನೆ. ಆಕೃತಿಗಳು ಪ್ರಮಾಣಬದ್ಧತೆಯಿಂದ ಸ್ವಲ್ಪ ಸೊರಗಿವೆ. ಸಂಯೋಜನೆಯ ದೃಷ್ಟಿಯಿಂದ ಎಲ್ಲ ಚಿತ್ರಗಳಲ್ಲಿ ಯಥಾದರ್ಶನದ ನೀತಿಯನ್ವಯ ದೂರ ಮತ್ತು ಸಾಮೀಪ್ಯದ ಹಾಗೂ ವಾಸ್ತುರಚನೆಯಲ್ಲಿ ಪಕ್ವತೆಯ ಅನುಭವ ಸ್ಪಷ್ಟವಾಗಿ ದಕ್ಕುತ್ತದೆ. ಅಲ್ಲಲ್ಲಿ ಪ್ರಥಮ ವರ್ಣದ ಬಳಕೆ ಅಪ್ರಸ್ತುತವೆನಿಸುತ್ತದೆ. ಪರಿಸರದ ರಚನೆಯಲ್ಲಿ ಪ್ರಬುದ್ಧತೆಯೂ ಈ ಚಿತ್ರಗಳಲ್ಲಿರುವುದು ವಿಶೇಷ ಕ್ರಿಯೆ.

೩.೨೬. ಉಂಬ ಜಂಗಮ ಬಂದಡೆ ನಡೆಯೆಂಬರು...

ಉಂಬ ಜಂಗಮ ಬಂದಡೆ ನಡೆಯೆಂಬರೆ,

ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ

ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ

ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ

ವಚನದ ಸಾರಾಂಶ : ಮೂಢನಂಬಿಕೆಯಿಂದ ಬದುಕುವ ಮನುಷ್ಯನ ತದ್ವಿರುದ್ಧ ಮನೋಭಾವವನ್ನು ಅಭಿವ್ಯಕ್ತಿಸಿದ್ದಾರೆ. ನಾಗರಪಂಚಮಿಯಂದು ಕಲ್ಲ ನಾಗಪ್ಪನಿಗೆ ಹಾಲೆರೆದರೆ, ಕಲ್ಲನಾಗರ ಬಲಗೊಂಡು ಹರಿದಾಡಬಹುದೆ? ದಿಟದ ನಾಗರ ಬಂದರೆ ಕೊಲ್ಲೆನ್ನುವ ಮನುಜನ ಜೀವಪರ ಕಾಳಜಿ ವಿಡಂಬನಾತ್ಮಕವಾದುದು. ಪರಮಾತ್ಮನೇ ಜೀವರೂಪದಲ್ಲಿ ನಾನಾ ಬಗೆಯ ಜೀವಧಾರಣ ಮಾಡಿ ಜಂಗಮರೂಪದಲ್ಲಿ ಜಗವೆಲ್ಲ ಸಂಚರಿಸುವ ಸಂತರನ್ನು, ಶರಣರನ್ನು ಮುಂದೆ ನಡೆಯೆಂಬ ಮನುಷ್ಯ, ಉಣ್ಣದ ಲಿಂಗಕ್ಕೆ ಪಕ್ವಾನ್ನಗಳನ್ನು ಮಾಡಿ ನೈವೇದ್ಯ ಹಿಡಿಯುವ ಪರಿಯನ್ನು ಇಲ್ಲಿ ಚಿತ್ರಿಸಲಾಗಿದೆ.

ಚಿತ್ರದ ವಿಶ್ಲೇಷಣೆ : ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ. ತೆರೆದ ಬಾಗಿಲಿನಲ್ಲಿ ಹಸಿರು ಬಣ್ಣದ ಅಂಚಿನ ತಿಳಿಹಳದಿ ಬಣ್ಣದ ಸೀರೆಯನ್ನು ಉಟ್ಟು, ತಲೆತುಂಬ ಸೆರಗು ಹೊದ್ದಿರುವ ಎತ್ತರದ ಸ್ತ್ರೀಯೊಬ್ಬಳು ತನ್ನ ಮನೆಯ ಪಡಸಾಲೆಯ ಕೋಣೆಯ

ಬಾಗಿಲಿಗೆ ಬಂದ ಜಂಗಮನನ್ನು ಹೊರಗೆ ಕಳಿಸುತ್ತಿರುವ ದೃಶ್ಯವಿದೆ. ಈ ಘಟನೆಯನ್ನು ತಿಳಿಹಸಿರು, ಗಾಢವಾದ ಹಸಿರು ಬಣ್ಣದ ಲಂಗ, ಚೋಲಿಯನ್ನು ಧರಿಸಿದ ಚಿಕ್ಕ ಹುಡುಗಿಯೊಬ್ಬಳು ಕುತೂಹಲದಿಂದ ಗಮನಿಸುತ್ತಿದ್ದಾಳೆ. ಕಾವಿ ಬಣ್ಣದ ಉಡುಗೆಯನ್ನು ಧರಿಸಿದ ಜಂಗಮ ಕೈಯಲ್ಲಿ ಬೆತ್ತವನ್ನು ಹಿಡಿದು ನಿಂತಿದ್ದಾನೆ. ಬೇಡುವ ಭಾವನೆ ಆತನಲ್ಲಿ ಕಾಣದಿದ್ದರೂ ತನ್ನ ಬಲಗೈ ಹಸ್ತವನ್ನು ಎತ್ತಿ ಹಿಡಿದಿರುವುದು ಬೋಧನೆಯನ್ನು ಮಾಡುತ್ತಿರುವ ಭಂಗಿಯೆಂದು ತೋರುತ್ತದೆ. ಚಿತ್ರದ ಬಲಭಾಗದಲ್ಲಿ ಅಲಂಕೃತಗೊಂಡ ಕಂದುವರ್ಣದ ಕಟ್ಟಿಗೆಯ ಮಂಟಪವೊಂದು ಬಾಳೆದಿಂಡುಗಳಿಂದ ಅಲಂಕೃತಗೊಂಡಿದೆ. ಅದರ ಮಧ್ಯೆ ವಿಭೂತಿ ಧರಿಸಿದ ಕಪ್ಪುಬಣ್ಣದ ಶಿವಲಿಂಗ ಪತ್ರೆ–ಪುಷ್ಪಗಳಿಂದ ಅಲಂಕೃತಗೊಂಡು ನಳನಳಿಸುತ್ತಿದೆ. ಮನೆಯ ಒಳಾಂಗಣದಲ್ಲಿ ಈ ಸನ್ನಿವೇಶ ಜರುಗುತ್ತಿರುವಂತೆ ಇಲ್ಲಿ ಚಿತ್ರರಚನೆಯಾಗಿರುವುದು ಕಂಡುಬರುತ್ತದೆ.

ಕೆಂಪು ಮತ್ತು ಹಳದಿ ಬಣ್ಣದ ಪೀತಾಂಬರದ ಸೀರೆಯನ್ನುಟ್ಟು ತಲೆತುಂಬ ಸೆರಗನ್ನು ಹೊದ್ದಿರುವ ಸ್ತ್ರೀಯೊಬ್ಬಳು ಕೈಯಲ್ಲಿ ತಟ್ಟೆಯೊಂದನ್ನು ಹಿಡಿದು ಅದರಲ್ಲಿರುವ ಅನ್ನವನ್ನು ಶಿವನಿಗೆ ನೈವೇದ್ಯ ನೀಡಲು ನಿಂತಿದ್ದಾಳೆ. ಅವಳ ಮುಖ ಲಿಂಗದ ಕಡೆಗಿರುವುದರಿಂದ ನೋಡುಗರಿಗೆ ಗೋಚರಿಸುವುದಿಲ್ಲ. ಅವಳ ಎರಡೂ ಪಕ್ಕಗಳಲ್ಲಿ ಆಳೆತ್ತರದ ಹಿತ್ತಾಳೆಯ ದೀಪಗಳು ಉರಿಯುತ್ತಿದ್ದು ಅಲ್ಲಿನ ಧಾರ್ಮಿಕ ಪರಿಸರ ಕಳೆಗಟ್ಟುವಂತೆ ಮಾಡಿದೆ. ಭಿತ್ತಿಯಲ್ಲಿ ನೀಲಿಬಣ್ಣದ ಗೋಡೆಯಲ್ಲಿ ಎರಡು ಕಲಾಕೃತಿಗಳನ್ನು ತೂಗು ಹಾಕಲಾಗಿದ್ದು ಅವುಗಳಲ್ಲಿ ಒಂದು, ಅಲ್ಲಿ ಸಲ್ಲುವವರು ಇಲ್ಲಿಯೂ ಸಲ್ಲುವರು ಎಂಬ ವಚನದ ಸಂದೇಶವನ್ನು ಸಾರುವ ಬಸವಣ್ಣನ ಛಾಯಾಚಿತ್ರವಿದೆ. ಮತ್ತೊಂದು ಚಿತ್ರದಲ್ಲಿ ಅಕ್ಕಮಹಾದೇವಿಯು ಕೈಯಲ್ಲಿ ಇಷ್ಟಲಿಂಗವನ್ನು ಹಿಡಿದು ಪೂಜಿಸುತ್ತಿರುವ ದೃಶ್ಯವಿದೆ. ನೀಲಿ, ಹಸಿರು, ಕೆಂಪು, ಹಳದಿ ಮುಂತಾದ ವರ್ಣಗಳ ಸಂಯೋಜನೆಯನ್ನು ಕಲಾವಿದ ಇಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದು, ನೈಜವಾಗಿ ಚಿತ್ರಿಸಲು ಆಸ್ಥೆಯನ್ನು ವಹಿಸಿದ್ದಾನೆ. ಮನೆಯೊಳಗಿನ ಪೂಜಾ ಸಂದರ್ಭ, ಬಾಗಿಲಿನಲ್ಲಿ ಜಂಗಮನೊಬ್ಬ ಬಂದಿರುವುದನ್ನು ನೈಜವಾಗಿ ಚಿತ್ರಿಸಲಾಗಿದೆ. ಮಾನವಾಕೃತಿಗಳಲ್ಲಿ ನೈಜಭಾವ ಕಾಣದೇ ಇರುವುದಕ್ಕೆ ಆಕೃತಿಗಳೆಲ್ಲವೂ ದೂರದಲ್ಲಿ ರಚನೆಯಾಗಿರುವುದು ಕಾರಣ. ಎಂದಿನ ಸಹಜವಾದ ವರ್ಣಯೋಜನೆಯು ಇಲ್ಲಿನ ಆಕೃತಿಗಳಲ್ಲಿ ಕಂಡು ಬಂದಿದ್ದು, ಈ ಕಲಾಕೃತಿ ಶ್ರೀಸಾಮಾನ್ಯನಿಗೆ ಎಟಕುವಂತಿದೆ.

೩.೨೭. ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು...

ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು.

ಧರೆ ಘನವೆಂಬೆನೆ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು

ನಾಗೇಂದ್ರ ಘನವೆಂಬೆನೆ?

ಪಾರ್ವತಿಯ ಕಿರುಕುಣಿಕೆಯ ಮುದ್ರಿಕೆಯಾಯಿತ್ತು.

ಅಂತಹ ಪಾರ್ವತಿ ಘನವೆಂಬೆನೆ?

ಪರಮೇಶ್ವರನ ಅರ್ಧಾಂಗಿಯಾದಳು,

ಅಂತಹ ಪರಮೇಶ್ವರನ ಘನವೆಂಬೆನೆ?

ನಮ್ಮ ಕೂಡಲ ಸಂಗನ ಶರಣರ

ಮನದ ಕೊನೆಯ ಮೊನೆಯ ಮೇಲಡಗಿದನು![೩೪]

ವಚನದ ಸಾರಾಂಶ : ಈ ಬ್ರಹ್ಮಾಂಡದಲ್ಲಿ ಸಮುದ್ರವನ್ನು ದೊಡ್ಡದೆಂದು ಹೇಳಲು ಸಾಧ್ಯವೇ? ಇಲ್ಲ; ಅದಕ್ಕಿಂತಲೂ ದೊಡ್ಡದಾದ ಈ ಭೂಮಿಯ ಮೇಲೆ ಅದು ಅಡಗಿ ಕುಳಿತಿದೆ. ಹಾಗಾದರೆ ಈ ಭೂಮಿಯನ್ನು ದೊಡ್ಡದೆಂದು ಹೇಳಬಹುದೆ? ಇಲ್ಲ, ಅದು ನಾಗೇಂದ್ರನ ಹಣೆಯ ಮೇಲೆ ಅಡಗಿ ಕುಳಿತಿದೆ. ನಾಗೇಂದ್ರನನ್ನು ದೊಡ್ಡದೆಂದು ಹೇಳಬಹುದೆ? ಇಲ್ಲ, ಅದು ಪಾರ್ವತಿಯ ಕಿರುಬೆರಳ ಉಂಗುರದಲ್ಲಿ ಮುದ್ರೆಯಾಗಿ ಅಡಗಿ ಕುಳಿತಿದೆ. ಪಾರ್ವತಿ ದೊಡ್ಡವಳೆಂದು ಹೇಳಬಹುದೆ? ಇಲ್ಲ, ಅವಳು ಶಿವನ ದೇಹದ ಅರ್ಧಭಾಗದಲ್ಲಿ ಅಡಗಿಕೊಂಡಿದ್ದಾಳೆ. ಹಾಗಾದರೆ ಶಿವನನ್ನು ದೊಡ್ಡವನೆಂದು ಹೇಳಬಹುದೇ? ಇಲ್ಲ ಅವನು ಭಕ್ತನ ಹೃದಯಕಮಲದಲ್ಲಿ ಅಡಗಿ ಕುಳಿತಿದ್ದಾನೆ. ಅಂದರೆ ಇಲ್ಲಿ ಸಮುದ್ರ, ಭೂಮಿ, ನಾಗೇಂದ್ರ, ಪಾರ್ವತಿ, ಶಿವ ಇವರೆಲ್ಲರಿಗಿಂತಲೂ ಭಕ್ತನಾದವನು ದೊಡ್ಡವನೆಂಬ ವಿಚಾರವನ್ನು ಬಸವಣ್ಣ ತನ್ನ ಈ ವಚನದ ಮೂಲಕ ಹೇಳಿದ್ದಾನೆ.

ಚಿತ್ರದ ವಿಶ್ಲೇಷಣೆ : ಮೇಲಿನ ವಚನದ ವಸ್ತುವನ್ನೊಳಗೊಂಡ ಈ ಚಿತ್ರವು ಅತ್ಯಂತ ಮಾರ್ಮಿಕವಾಗಿದೆ. ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಈ ಚಿತ್ರದಲ್ಲಿನ ವಸ್ತು, ಆಶಯ, ತಂತ್ರ, ವರ್ಣ, ಭಾವ ಈ ಎಲ್ಲ ಅಂಶಗಳ ಒಂದು ಅಪೂರ್ವ ಸಂಗಮವಿದಾಗಿದೆ. ಆಶಯದ ದೃಷ್ಟಿಯಿಂದ ಪ್ರಸ್ತುತ ಚಿತ್ರಕ್ಕೆ ಹೆಚ್ಚಿನ ವಿವರಣೆಯ ಅಗತ್ಯವಿಲ್ಲ. ಆಕಾಶನೀಲಿ, ನೀಲಿಮಿಶ್ರಿತ ಬಿಳುಪು, ಗುಲಾಬಿ, ಕೆಂಪು, ತೆಳು ಹಸಿರು ಮುಂತಾದ ತಂಪು ಬಣ್ಣಗಳ ಬಳಕೆಯಿಂದ ನೋಡುಗರ ಕಣ್ಣಿಗೆ ಮತ್ತು ಮನಸ್ಸಿಗೆ ಒಂದು ಹಿತಕರವಾದ ಅನುಭೂತಿಯನ್ನು ನೀಡುತ್ತದೆ. ಒಂದಕ್ಕಿಂತ ಒಂದು ದೊಡ್ಡದು ಎಂದು ಪಠ್ಯದಲ್ಲಿ ಹೇಳುವುದು ಸುಲಭ. ಆದರೆ ಚಿತ್ರಪಠ್ಯದಲ್ಲಿ ಇದನ್ನು ತಾಂತ್ರಿಕವಾಗಿ ಹೇಳುವುದು ಕಷ್ಟಕರವೆನ್ನಿಸುತ್ತದೆ. ಅದನ್ನು ಕಲಾವಿದ ಅದೆಷ್ಟು ಸುಲಭವಾಗಿ ಸಾಧಿಸಿದ್ದಾನೆಂದರೆ ಭಕ್ತನನ್ನು ಕೆಳಮಟ್ಟದಲ್ಲಿ ಕುಳ್ಳಿರಿಸಿ, ಭೂಮಂಡಲವನ್ನು ಮೇಲೆ ಇರಿಸಿದಂತೆ ಚಿತ್ರಿಸಿದರೂ ಅವುಗಳಿಗೆ ಆಧಾರವಾದವನು ಭಕ್ತನೇ ಎಂದು ತರ್ಕಬದ್ಧವಾಗಿ ಸಾಬೀತುಪಡಿಸಿದ್ದಾನೆ.

ಗುಂಡಾಕಾರದ ನೀಲಿ ಮತ್ತು ಬಿಳಿ ಬಣ್ಣಗಳಿಂದ ಕೂಡಿದ ಪೃಥ್ವಿ, ಅದನ್ನು ಹೊತ್ತ ಏಳು ಹೆಡೆಯ ಸರ್ಪ, ಸರ್ಪದ ಬಾಲವು ಪಾರ್ವತಿಯ ಎಡಗೈಯ ಮುದ್ರೆಯುಂಗುರಕ್ಕೆ ಅಂಟಿಕೊಂಡ ರೀತಿ, ಅವಳ ಪಕ್ಕ ಶಿವನು ಜಟಾಧಾರಿಯಾಗಿ, ತಲೆಯಲ್ಲಿ ಚಂದ್ರನನ್ನು ಮುಡಿದು, ಕೈಯಲ್ಲಿ ತ್ರಿಶೂಲವನ್ನು ಹಿಡಿದು, ಪಾರ್ವತಿಯನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡಿರುವ ಭಂಗಿ ಚೆನ್ನಾಗಿ ಮೂಡಿಬಂದಿದೆ. ಕೆಳಗಡೆ ಭಕ್ತನೊಬ್ಬಾತ ತನ್ನೆರಡು ಕೈಗಳನ್ನು ಮುಗಿದು ಕಣ್ಣುಮುಚ್ಚಿ ದೇವರನ್ನು ಪ್ರಾರ್ಥಿಸುವ ಭಂಗಿಯಲ್ಲಿ ಕುಳಿತಿದ್ದಾನೆ. ಆತನ ಹೃದಯದ ಭಾಗದಿಂದ ಹೊರಟ ತಾವರೆ ಬಳ್ಳಿಯ ಹಸಿರು ಬಣ್ಣದ ಕಾಂಡ

೩೪. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೮೭೭), ಪು-೨೨೮

ಮೇಲಕ್ಕೆ ಹೊರಟು ಅಲ್ಲಿ ಸುಂದರವಾದ ಕಮಲದ ಹೂವಿನೊಂದಿಗೆ ಬೆಸುಗೆಗೊಂಡಿದೆ. ಕಲಾವಿದ ಇಲ್ಲಿ ಶಿವ-ಪಾರ್ವತಿಯರನ್ನು ಭಕ್ತನ ಹೃದಯದಲ್ಲಿ ಚಿತ್ರಿಸಲು ಸಾಧ್ಯವಾಗದಿರುವುದನ್ನು ಕಮಲದ ಹೂವು ಮತ್ತು ಕಾಂಡದ ನಂಟಿನ ಮೂಲಕ ಬೆಸೆದು ಚಿತ್ರಿಸಿದ್ದಾರೆ. ಆಕೃತಿ ರಚನೆ, ವಿನ್ಯಾಸಗಳೆಲ್ಲವೂ ಸಂದರ್ಭೋಚಿತವಾಗಿ ಮೂಡಿವೆಯಾದರೂ, ಹಿನ್ನೆಲೆಯ ರಚನೆ ಕೊಠಡಿಯೊಳಗೆ ದೃಶ್ಯ ಸಂದರ್ಭವನ್ನು ಚಿತ್ರಿಸಿದಂತೆ ಕಾಣುತ್ತದೆ. "ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು..." ವಚನದಲ್ಲಿ ಹಲವಾರು ಪ್ರತಿಮೆಗಳು ಒಡಮೂಡಿರುವುದರಿಂದ ಅದಕ್ಕೆ ಪೂರಕವಾದ ಆಶಯವನ್ನು ದೃಶ್ಯಾತ್ಮಕವಾಗಿ ಅಭಿವ್ಯಕ್ತಿಸುವಾಗ ಇಂತಹ ಗೊಂದಲಗಳು ಮೂಡುವುದು ಸಹಜ. ಆದರೂ ಇದೊಂದು ಅಕ್ಷರಶಃ ಎಲ್ಲರಿಗೂ ತಲುಪುವ ಕಲಾಕೃತಿ.

೩.೨೮. ನೀನೊಲಿದರೆ ಕೊರಡು ಕೊನರುವುದಯ್ಯ... – ೧

ನೀನೊಲಿದರೆ ಕೊರಡು ಕೊನರುವುದಯ್ಯ

ನೀನೊಲಿದರೆ ಬರಡು ಹಯನಹುದಯ್ಯ

ನೀನೊಲಿದರೆ ವಿಷವು ಅಮೃತವಹುದಯ್ಯ

ನೀನೊಲಿದರೆ ಸಕಲ ಪಡಿಪದಾರ್ಥ ಇದಿರಲಿಹುದಯ್ಯ ಕೂಡಲಸಂಗಮದೇವಾ [೩೫]

ವಚನದ ಸಾರಾಂಶ : ಈ ವಚನದಲ್ಲಿ ದೇವನೊಲಿದರೆ ಈ ಜಗತ್ತಿನಲ್ಲಿ ಅಸಾಧ್ಯವಾದುದೆಲ್ಲವೂ ಸಾಧ್ಯವಾಗುತ್ತದೆಂಬ ಭಾವನೆ ಇದೆ. ಆದರೆ ದೇವ ಮಾನವರಿಗೆ ಒಲಿಯುವುದು ಅಷ್ಟು ಸುಲಭಸಾಧ್ಯವಲ್ಲವೆಂಬುದು ಈ ಮಾತಿನ ಹಿಂದಿನ ಆಂತರ್ಯವೂ ಆಗಿದೆ. ಶಿವ ಒಲಿದರೆ ಒಣಗಿರುವ ಕೊರಡು ಮತ್ತೆ ತನ್ನ ಜೀವಂತಿಕೆಯನ್ನು ಪಡೆದು ಹಸಿರು ಎಲೆಗಳಿಂದ ಚಿಗಿಯುತ್ತದೆ. ಶಿವನೊಲಿದರೆ ಬಂಜೆಯಾಗಿರುವ ಹಸು ಮತ್ತೆ ಗರ್ಭ ಧರಿಸಿ ಇಲ್ಲವೆ ಗರ್ಭ ಧರಿಸದೆ ಹಾಲು ನೀಡಬಲ್ಲುದು. ಶಿವನೊಲಿದರೆ ವಿಷವು ಕೂಡ ಅಮೃತವಾಗಿ ಪರಿವರ್ತನೆಯಾಗುತ್ತದೆ. ಶಿವನೊಲಿದರೆ ಬಯಸಿದ ಹಲವು ವಸ್ತು, ಒಡವೆ, ಧನ, ಕನಕಗಳೆಲ್ಲವೂ ಆ ಕ್ಷಣದಲ್ಲಿಯೇ ಎದುರಿನಲ್ಲಿ ಬಂದು ಸೇರುತ್ತವೆ ಕೂಡಲಸಂಗಮದೇವಾ ಎಂದು ಬಸವಣ್ಣ ಶಿವನ ದಯಾಗುಣದ ಮಹಿಮೆಯನ್ನು ಇಲ್ಲಿ ಸಾರಿದ್ದಾನೆ.

ಚಿತ್ರದ ವಿಶ್ಲೇಷಣೆ : ಕಲಾವಿದ ಎಂ. ವೀರಪ್ಪ ಅವರ ೧೨"x೧೮" ಅಳತೆಯ ಈ ಕೃತಿಯು ಜಲವರ್ಣ ಮಾಧ್ಯಮದಲ್ಲಿ ರಚನೆಗೊಂಡಿದೆ. ಈ ಚಿತ್ರದಲ್ಲಿ ಜೀವಂತಿಕೆಯೇ ಪ್ರಧಾನ ಆಕರ್ಷಣೆಯಾಗಿ ನೋಡುಗರಿಗೆ ಗೋಚರಿಸಿದೆ. ದೇವನೊಲಿದರೆ ಒಣಗಿ ಹೋದ ಮರವೂ ಕೂಡ ಚಿಗಿತು ಮತ್ತೆ ಮೊದಲಿನ ಜೀವಕಳೆಯನ್ನು ಪಡೆಯಬಲ್ಲದು ಎಂಬುದಕ್ಕೆ ಸಾಕ್ಷಿಯಾಗಿ ಕಂದುವರ್ಣದ ಒಣಗಿಹೋದ ಮರದಲ್ಲಿ ಚಿಕ್ಕ ಚಿಕ್ಕ ಚಿಗುರು ಹಸಿರೆಲೆಗಳನ್ನು ಇಲ್ಲಿ ಕಾಣುತ್ತೇವೆ. ಶಿವನೊಲಿದರೆ ಬರಡು ಆಕಳು ಹಾಲು ನೀಡಬಲ್ಲದು ಎಂಬುದನ್ನು ತೋರಿಸಲು ಹಾಲು ಕರೆಯುವ ಸನ್ನಿವೇಶವನ್ನು ಕಲಾವಿದ ಇಲ್ಲಿ ಚಿತ್ರಿಸಿಲ್ಲ. ಬದಲಾಗಿ ಕಂದು ಬಣ್ಣದ ಮೂಗುದಾರವನ್ನು ಹಾಕಿಸಿಕೊಂಡ ಸಾಧು ಹಸುವೊಂದು ತನ್ನ

---

೩೫. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.-೬೬), ಪು-೧೯

ಪಕ್ಕದಲ್ಲಿರುವ ಜೋಳದ ತೆನೆಗಳನ್ನು ಕಚ್ಚಿ ಹಿಡಿದಿದೆ. ಹಸುವಿನ ಎದುರಿಗೆ ಬೋಳುತಲೆಯ, ಬಿಳಿ ಬಣ್ಣದ ಜುಟ್ಟನ್ನು ತಲೆಯ ಹಿಂಭಾಗದಲ್ಲಿ ಕಟ್ಟಿಕೊಂಡ ಶಿವಶರಣನೊಬ್ಬ ತನ್ನ ಬಲಗೈಯಲ್ಲಿ ಹಾಲಿನಿಂದ ತುಂಬಿರುವ ಬಿಳಿಯ ಬಟ್ಟಲನ್ನು ಹಿಡಿದಿದ್ದಾನೆ. ಬಿಳಿ ಪಂಚೆ, ಕೆಂಪು ಮೇಲುವಸ್ತ್ರವನ್ನು ಧರಿಸಿದ ಆತ ಹಸುವಿನತ್ತ ದೃಷ್ಟಿ ನೆಟ್ಟಿರುವುದರಿಂದ ನೋಡುಗರಿಗೆ ಆತನ ಮುಖದ ಅರ್ಧಭಾಗ ಮಾತ್ರ ಗೋಚರಿಸುತ್ತದೆ. ಭಿತ್ತಿಯಲ್ಲಿ ನೀಲಿ ಬಣ್ಣದ ಚಿಕ್ಕ ಚಿಕ್ಕ ಬೆಟ್ಟಗಳು, ತಿಳಿಯಾದ ಆಕಾಶವಿದೆ. ನಳನಳಿಸುವ ಜೋಳದ ತೆನೆಗಳನ್ನು ಹೊತ್ತ ಗಿಡಗಳು ಪ್ರಕೃತಿಯ ಭಾಗವಾಗಿ ರಚಿತವಾಗಿವೆ.

"ನೀನೊಲಿದರೆ ಕೊರಡು ಕೊನರುವುದಯ್ಯ" ವಚನದ ಸಾರವನ್ನೆಲ್ಲ ಹೀರಿ ಅದನ್ನು ನೈಜವಾಗಿ ದೃಶ್ಯಾತ್ಮಕ ನೆಲೆಯಲ್ಲಿ, ಪ್ರಬುದ್ಧವಾಗಿ ಕಟ್ಟಿಕೊಟ್ಟಿರುವ ಈ ಚಿತ್ರ ಅನನ್ಯವಾದುದು. ಆಕೃತಿಯಲ್ಲಿ ಆಂಗಿಕ ಪ್ರಬುದ್ಧತೆ ಈ ಚಿತ್ರದ ಪ್ರಮುಖ ಯಶಸ್ಸೂ ಹೌದು. ಬೌದ್ಧಿಕ ಮತ್ತು ಭೌತಿಕ ವಿನ್ಯಾಸಗಳಲ್ಲಿ ಪಕ್ವತೆಯನ್ನು ಸಾಧಿಸಿದ ಕಲಾವಿದರು ಅದನ್ನು ನೇತ್ರಾನಂದಕರವಾಗಿ ಅಭಿವ್ಯಕ್ತಿಸಿದ್ದಾರೆ. ವಯ್ಯಾರಯುಕ್ತವಾದ ಮರದ ವಿನ್ಯಾಸ, ತೊನೆದಾಡುತ್ತಿರುವ ಜೋಳದ ಫಸಲು, ಶರಣರತ್ತ ಮುಗ್ಧನೋಟ ಬೀರಿದ ಹಸು ಇವೆಲ್ಲವೂ ಈ ಚಿತ್ರದ ಜೀವಾತ್ಮಗಳು. ದೂರ ಮತ್ತು ಸಾಮೀಪ್ಯವನ್ನು ಕಲಾವಿದರು ಸಮರ್ಪಕವಾಗಿ ಗ್ರಹಿಸಿ ಅಭಿವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಈ ಕೃತಿಯು ಕಲಾವಿದರ ಮನೆಯಲ್ಲಿ ಸಂಗ್ರಹಗೊಂಡಿದೆ.

ನೀನೊಲಿದರೆ ಕೊರಡು ಕೊನರುವುದಯ್ಯ... – ೨

ಕಲಾವಿದ ಬಸವರಾಜ ಗರಡಿಯವರು ತೈಲವರ್ಣ ಮಾಧ್ಯಮದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. "ನೀನೊಲಿದರೆ ಕೊರಡು ಕೊನರುವುದಯ್ಯ, ಬರಡು ಹಯನಹುದಯ್ಯ" ಎಂಬ ವಚನದ ಎರಡು ಪ್ರಮುಖ ಅಂಶಗಳನ್ನು ಪ್ರತಿಪಾದಿಸಿದೆ. ಕಣ್ಣಿಗೆ ರಾಚುವ ಯಾವ ಬಣ್ಣಗಳೂ ಇಲ್ಲಿ ಬಳಕೆಯಾಗಿಲ್ಲ. ಬಿಳಿ, ನೀಲಿ, ಹಸಿರು, ಕಪ್ಪು ಮುಂತಾದ ಮಿಶ್ರವರ್ಣಗಳು ಇಲ್ಲಿ ರಾರಾಜಿಸಿವೆ. ಮೋಟು ಮರವೊಂದರಲ್ಲಿ ಕೇವಲ ಎರಡು ಕಡೆಗೆ ಹಸಿರು ಬಣ್ಣದ ಚಿಗುರು ಮಾತ್ರ ಗೋಚರಿಸುತ್ತಿದೆ. ಮರದಲ್ಲಿ ಪೊಟರೆಗಳು, ಸುಳಿಗಳು, ಕತ್ತರಿಸಿದ ಕೊಂಬೆಗಳು ಸಹಜವಾಗಿ ಮೂಡಿಬಂದಿವೆ. ಅದೇ ಮೋಟು ಮರದೊಳಗೆ ಹಸುವಿನ ಚಿತ್ರವನ್ನು ಕಲಾವಿದ ಚಾಕಚಕ್ಯತೆಯಿಂದ ಅಡಕಗೊಳಿಸಿದ್ದಾನೆ. ದೊಡ್ಡದಾದ ಹೊಟ್ಟೆ, ಬಾಲ, ನಾಲ್ಕು ಕಾಲುಗಳುನ್ನು ಹೊಂದಿರುವ ಹಸುವಿನ ಮುಖದಲ್ಲಿ ಮಾನವನ ಮುಖವನ್ನು ಚಿತ್ರಿಸಲಾಗಿದೆ. ಮರದ ಎಡಬದಿಯಲ್ಲಿ ದೊಡ್ಡ ಆಕಾರದ ಹಸಿರು ಬಣ್ಣದ ಎಲೆಗಳಿಂದ ಮುತ್ತಿನಾಕಾರದ ಎರಡು ತೊಟ್ಟು ಹನಿ ನೀರು ಬೀಳುತ್ತಿದೆ. ಆ ನೀರನ್ನು ಪೊಟರೆಯೊಳಗೆ ಅಡಕವಾಗಿರುವ ಹಸುವಿನ ದೇಹದ ಮಾನವನ ಮುಖವು ಬಾಯಿತೆರೆದು ನೀರನ್ನು ಕುಡಿಯುವ ಹಂತದಲ್ಲಿದೆ. ಹಸುವಿನ ಕೆಚ್ಚಲಿನಿಂದ ಹಾಲು ಧಾರಾಕಾರವಾಗಿ ಹರಿಯುತ್ತಿದ್ದು, ಆ ಹಾಲು ಅದರ ಕೆಳಗಿರುವ ಚೌಕಾಕಾರದ ತೊಟ್ಟಿಯೊಳಗೆ ಶೇಖರಣೆಯಾಗಿದೆ. ಆ ಹಾಲಿನ ತೊಟ್ಟಿಯ ಬಳಿಯಲ್ಲಿ ಎರಡು ಹೋಳು ಕೊಬ್ಬರಿ ಬಟ್ಟಲುಗಳು, ತಟ್ಟೆಯಲ್ಲಿ ಹಣ್ಣು ಹಂಪಲುಗಳಿರುವ ಒಂದು ತಟ್ಟೆಯಿದೆ. ಕಲಾವಿದ ಇಲ್ಲಿ ಎರಡು ಮೂರು ವಿಷಯಗಳನ್ನು ಒಂದೇ ಚಿತ್ರದಲ್ಲಿ ಅಡಕಗೊಳಿಸಿ ವಚನದ ಮೂಲ ಉದ್ದೇಶವನ್ನು ಚಿತ್ರಪಥ್ಯದ ಮೂಲಕ ತಿಳಿಸಿಕೊಡುವಲ್ಲಿ ಯಶಸ್ಸು ಪಡೆದಿದ್ದಾನೆ ಎಂದು ಹೇಳುವರು ಆಧುನಿಕ ಕಲೆಯನ್ನರಿತವರು. ಆದರೆ ಸಾಮಾನ್ಯನಿಗೆ ಈ

ಕಲಾಕೃತಿ ಸ್ಪಂದಿಸುವುದಿಲ್ಲ. ಏಕೆಂದರೆ ಆಕೃತಿಗಳ ರಚನೆಯಲ್ಲಿ ದ್ವಂದ್ವಗಳಿವೆ. ಪ್ರಾಕೃತಿಕ ವಿನ್ಯಾಸಗಳನ್ನು ಮತ್ತು ಮಾನವಿಕ ವಿನ್ಯಾಸಗಳನ್ನು ವಚನಾಧಾರಿತ ನಿರೂಪಣಾ ಶೈಲಿಯ ಚಿತ್ರಗಳಿಗೆ ದುಡಿಸಿಕೊಳ್ಳುವಾಗ ಸ್ಪಷ್ಟತೆಯೂ ಬಹು ಮುಖ್ಯ. ನಾನು ಯಾರಿಗಾಗಿ ಚಿತ್ರವನ್ನು ರಚಿಸುತ್ತಿದ್ದೇನೆ ಎಂಬ ಅರಿವಿನ ಬೆಳಕಲ್ಲಿ ಚಿತ್ರ ರಚಿಸಿದಾಗ ಮಾತ್ರ ಆ ಚಿತ್ರ ಸರ್ವರನ್ನೂ ಸ್ಪಂದಿಸುತ್ತದೆ.

ನೀನೊಲಿದರೆ ಕೊರಡು ಕೊನರುವುದಯ್ಯ... – ೩

ಕಲಾವಿದ ಜಿ. ಕೆ. ಶಿವಣ್ಣ ಅವರ ಈ ರೇಖಾಚಿತ್ರವನ್ನು "ವಚನ ಚಿತ್ತಾರ" ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. ಈ ರೇಖಾಚಿತ್ರದಲ್ಲಿ ಬರಡಾದ ಮರದಲ್ಲಿ ಚಿಗುರೊಡೆದ ಎಲೆಗಳಿವೆ. ಬಂಜೆಯಾದ ಹಸುವು ಚಿಗುರೊಡೆದ ಹುಲ್ಲನ್ನು ತಿನ್ನುತ್ತಿದ್ದು, ಅದರ ಮೂಲೆಯಲ್ಲಿ ಹಾಲು ಹೊರಬರುತ್ತಿದೆ. ಅದರ ಕೆಳಭಾಗದಲ್ಲಿ ವ್ಯಕ್ತಿಯೊಬ್ಬ ತಲೆಯ ಮೇಲೆ ಗಂಟನ್ನು ಹೊತ್ತು ಬಲಗೈಯಿಂದ ಗಂಟನ್ನು ಹಿಡಿದಿದ್ದಾನೆ. ಸೊಂಟದ ಕೆಳಭಾಗಕ್ಕೆ ವಸ್ತ್ರವಿದೆ. ಅವನ ಎದುರಿಗೆ ವ್ಯಕ್ತಿಯೊಬ್ಬ ತನ್ನೆರಡು ಕೈ ಮುಗಿದು ನಿಂತಿದ್ದು, ಅವನ ಪಕ್ಕದಲ್ಲಿ ಸ್ತ್ರೀ ನಿಂತಿದ್ದು, ಇವರ ತಲೆ ಹಿಂಭಾಗ ಜಪಮಾಲೆ ಧರಿಸಿದ ಮುಂಗೈಯೊಂದಿದೆ.

ನೀನೊಲಿದರೆ ಕೊರಡು ಕೊನರುವುದಯ್ಯ... – ೪

"ಮನುಷ್ಯ ಹುಟ್ಟಿದ ಕ್ಷಣದಿಂದಲೇ ವಿವಿಧ ರೀತಿಯ ಅನುಭವಕ್ಕೆ ಒಳಗಾಗುತ್ತಾನೆ. ಅನುಭವಗಳಿಂದ ಅವನಲ್ಲಿ ದೈಹಿಕ ಮತ್ತು ಮಾನಸಿಕ ಬದಲಾವಣೆಗಳಾಗುತ್ತವೆ. ಈ ಬದಲಾವಣೆಗಳಿಂದ ಅವನ ಪ್ರಗತಿಯ ಮಾರ್ಗ ಪ್ರಶಸ್ತವಾಗುತ್ತದೆ" (ಚಂದ್ರಕಾಂತ ಕುಸನೂರು : ಸಾಹಿತ್ಯ ಮತ್ತು ಚಿತ್ರಕಲೆ, ಪು–೧) ಈ ಮಾತಿಗೆ ಅನ್ವಯಿಕಗೊಳ್ಳುವ ಕಲಬುರ್ಗಿಯ ಹಿರಿಯ ಚಿತ್ರಕಲಾವಿದ ಡಾ. ಎ. ಎಸ್. ಪಾಟೀಲರವರು ಈ ಕಲಾಕೃತಿಯನ್ನು ರಚಿಸಿದ್ದಾರೆ. A4 (೮.೧/೨" x ೧೧.೧/೨") ಅಳತೆಯ ಕಾಗದದಲ್ಲಿ ಈ ಚಿತ್ರವನ್ನು ಚಿತ್ರಿಸಲಾಗಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಸಂಗ್ರಹದಲ್ಲಿದೆ. ವಚನದ ಹಿನ್ನೆಲೆಯಲ್ಲಿ ರಚನೆಗೊಂಡ ಈ ಕಲಾಕೃತಿಯಲ್ಲಿ ಕಲಾವಿದರು ದೊಡ್ಡ ಮರದ ನಡುವೆ ಲಿಂಗವನ್ನು ಚಿತ್ರಿಸಿ ಅದರ ಮಧ್ಯಭಾಗದಿಂದ ಒಂದು ಕಿರಣವು ಮುಂದುವರೆದು ಕೆಳಗೆ ಒಬ್ಬ ಮನುಷ್ಯ ಧ್ಯಾನಸಕ್ತನಾಕಾರದಲ್ಲಿ ಆ ಕಿರಣವನ್ನು ರಚಿಸಿ ಅದರೊಳಗೆ ಒಂದು ಹಸು ಹಾಲು ಕೊಡುತ್ತಿರುವಂತೆ, ಪಕ್ಕದಲ್ಲಿ ಹಾಲು ತುಂಬಿದ ಪಾತ್ರೆ, ಕೆಳಗಡೆ ಹಣ್ಣು–ಹಂಪಲು ಮುಂತಾದ ಅಂಶಗಳನ್ನು ಸಂಯೋಜಿಸಿದ್ದಾರೆ. ಇಲ್ಲಿನ ಎಲ್ಲ ವಸ್ತುಗಳ ಸಾದೃಶ್ಯ ಅತ್ಯಂತ ನೈಜ ರೀತಿಯಲ್ಲಿ ಮೂಡಿಬಂದಿವೆ. ಕಪ್ಪು ಬಿಳುಪು ಪೆನ್ಸಿಲ್ ಮಾಧ್ಯಮದ ಕಲಾಕೃತಿಯಿದಾಗಿದ್ದು, ಈ ಚಿತ್ರದಲ್ಲಿನ ನೆರಳು ಬೆಳಕಿನ ಯಥಾದರ್ಶನ, ಆಕೃತಿಗಳ ಸಂಯೋಜನೆಯು ಕಲಾವಿದರ ಚಿತ್ರರಚನೆಯ ಎಲ್ಲ ಅಂಶಗಳು ಅಚ್ಚುಕಟ್ಟಾಗಿ ಮೂಡಿವೆ ಎಂದು ಹೇಳಬಹುದು.

೩.೨೯. ಜಗದಗಲ ಮುಗಿಲಗಲ...

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,

ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ,

ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮಕುಟ.

ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲಸಂಗಮದೇವಯ್ಯಾ,

ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ.[೩೬]

ವಚನದ ಸಾರಾಂಶ : ಈ ವಚನದಲ್ಲಿ ಪರಮಾತ್ಮನ ಸಗುಣ–ನಿರ್ಗುಣ, ಸಾಕಾರ–ನಿರಾಕಾರ ಮತ್ತು ವಿಶ್ವವ್ಯಾಪಿ ಸ್ವರೂಪವನ್ನು ವಿವರಿಸಲಾಗಿದೆ. ಲಿಂಗವೆಂಬುದು ಪರಮಾತ್ಮನ ನಿಜದೇಹ, ಪರಮಾತ್ಮನ ಘನತೇಜ, ಲಿಂಗವೆಂಬುದು ಸರ್ವ ಲೋಕೋತ್ಪತ್ತಿಗೆ ಕಾರಣ. ಲಿಂಗದ ವಿಸ್ತಾರವು ಜಗದುದ್ದಗಲಕ್ಕೂ ವ್ಯಾಪಿಸಿದೆ. ಮುಗಿಲಾಚೆಗೂ ಮೀರಿ ನಿಂತಿದೆ. ನಿಮ್ಮ ಪಾದಗಳು ಪಾತಾಳಕ್ಕಿಂತ ಕೆಳಗಿದ್ದು, ನಿಮ್ಮ ಶಿರ(ಮುಕುಟ) ಬ್ರಹ್ಮಾಂಡಕ್ಕಿಂತ ಮೇಲಿದೆ. ನಿಮ್ಮ ಸ್ವರೂಪವನ್ನು ಅಳೆಯಲು ಸಾಧ್ಯವಾಗದು. ಅದು ಅಪ್ರಮಾಣ, ಮಾತು, ಮನಸ್ಸುಗಳಿಗೆ ಮೀರಿದ, ಇಂದ್ರಿಯಗಳಿಗೆ ಕಾಣದ ನಿಮ್ಮ ಸ್ವರೂಪ ಅಗೋಚರವಾದುದು, ಅಪ್ರತಿಮವಾದುದು, ಅಗಮ್ಯವಾದುದು. ಇಂಥ ವಿಶ್ವವ್ಯಾಪಿಯ ನಿರಾಕಾರ ಸ್ವರೂಪನು ಆದ ಪರಮಾತ್ಮ ಇಷ್ಟಲಿಂಗವೆಂಬ ಸಾಕಾರ ರೂಪದಲ್ಲಿ ಭಕ್ತರ ಭಕ್ತಿಯನ್ನು ಸ್ವೀಕರಿಸುತ್ತಾನೆ. ವಿಶ್ವವ್ಯಾಪಿ ಸ್ವರೂಪ ಹೊಂದಿದ ಆರಾಧ್ಯ ಲಿಂಗವೇ । ನನ್ನ ಭಕ್ತಿಯ ಆತಿಥ್ಯ ಕೈಗೊಳ್ಳಲು ಸಾಕಾರ ರೂಪ ಪಡೆದು ಕರಸ್ಥಳ(ಅಂಗೈ)ಕ್ಕೆ ಚುಳುಕಾಗಿ(ಚಿಕ್ಕಗಾತ್ರ) ಬಂದಿರುವಿರಿ ಎನ್ನುತ್ತಾರೆ.

ಚಿತ್ರದ ವಿಶ್ಲೇಷಣೆ : ಡಾ. ಎ. ಎಸ್. ಪಾಟೀಲರವರು A4 (೮.೧/೨" x ೧೧.೧/೨") ಅಳತೆಯ ಕಾಗದದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಸಂಗ್ರಹದಲ್ಲಿದೆ. ಈ ಮೇಲಿನ ವಚನದ ಹಿನ್ನೆಲೆಯಲ್ಲಿ ರಚನೆಗೊಂಡ ಈ ಚಿತ್ರದ ಬಲಭಾಗಕ್ಕೆ ಸೂರ್ಯ, ಸೂರ್ಯನ ಕಿರಣಗಳು ಎಲ್ಲ ದಿಕ್ಕಿಗೂ ಹರಡಿವೆ. ಪಕ್ಕದಲ್ಲಿಯೇ ರತ್ನ ಖಚಿತವಾದ ಕಿರೀಟವಿದೆ. ಎಡಭಾಗಕ್ಕೆ ಅರ್ಧಾಕೃತಿಯ ಚಂದ್ರನಿದ್ದು, ಸುತ್ತಲೂ ಮೋಡಗಳು ಆವೃತವಾಗಿವೆ. ಮಧ್ಯದಲ್ಲಿ ಶ್ವೇತ ವರ್ಣದಿಂದ ಆಚ್ಛಾದಿತ ವಲಯದಲ್ಲಿ ಎಡಗೈಯ ಅಂಗೈಯಲ್ಲಿ ಲಿಂಗವೊಂದಿದೆ. ಕೆಳಭಾಗದಲ್ಲಿ ಸಾಗರದ ಜಲಚರ ಜೀವಿಗಳಾದ ಮೀನುಗಳಿದ್ದು, ಪೀಠದ ಮೇಲೆ ಬಲಗಾಲಿನ ಪಾದವೊಂದು ಚಿತ್ರಣಗೊಂಡಿದೆ. ಈ ಚಿತ್ರದ ವಿಶೇಷವೆಂದರೆ ಆಕಾಶ, ಭೂಮಿ ಮತ್ತು ಜಲ ಈ ಮೂರು ಅಂಶಗಳೊಂದಿಗೆ, ಮಾನವನ ಕಣ್ಣು, ಪಾದ, ಹಾಗೂ ಜಲಚರ ಪ್ರಾಣಿಗಳನ್ನು ಬಳಸಿಕೊಂಡು ತುಂಬಾ ಅರ್ಥವತ್ತಾಗಿ ಕಲಾಕೃತಿಯನ್ನು ಚಿತ್ರಿಸಲಾಗಿದೆ.

೩.೩೦. ನಾದಪ್ರಿಯ ಶಿವನೆಂಬರು...

ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯಾ,

ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯಾ,

ನಾದವ ನುಡಿಸಿದ ರಾವಳಂಗೆ ಅರೆ ಆಯುಷ್ಯವಾಯಿತ್ತು.

---

೩೬. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೭೪೪), ಪು–೧೮೬

ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು,

ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ

ಭಕ್ತಪ್ರಿಯ ನಮ್ಮ ಕೂಡಲಸಂಗಮದೇವ.[೩೭]

ವಚನದ ಸಾರಾಂಶ : ಶಿವನಾದಂಥವನಿಗೆ ವೇದವಾಗಲಿ, ನಾದವಾಗಲಿ, ಪ್ರಿಯವಾದುದಲ್ಲ, ಭಕ್ತಿಯೇ ಪ್ರಿಯವಾದುದು ಎನ್ನುವ ಬಸವಣ್ಣನವರು. ಶಿವನು ನಾದಪ್ರಿಯನೆನ್ನುವರು ಆದರೆ ಶಿವ ನಾದಪ್ರಿಯನಲ್ಲ, ವೇದ ಪ್ರಿಯನೆನ್ನುವರು ಆತ ವೇದಪ್ರಿಯನೂ ಅಲ್ಲ, ನಾದವ ನುಡಿಸುವ ಪಾಂಡಿತ್ಯವಿದ್ದರೇನು? ಭಕ್ತಿಯಿಲ್ಲದಿದ್ದರೆ, ವೇದ ಶಾಸ್ತ್ರಗಳನ್ನು ಓದಿ ಪಾಂಡಿತ್ಯ ಸಾಧಿಸಿದರೇನು ಪ್ರಯೋಜನವಿಲ್ಲ. ಸಂಗೀತ ಪಾರಂಗತನಾದ ರಾವಣನಿಗೆ ಭಕ್ತಿಯಿಲ್ಲದ ಕಾರಣ ಅರೆ ಆಯುಷ್ಯವಾಯ್ತು. ವೇವನ್ನೋದಿದ ಬ್ರಹ್ಮ ತನ್ನ ಶಿರವನ್ನೇ ಕಳೆದುಕೊಂಡನು. ಹಾಗಾಗಿ ಶಿವ ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ. ಆತ ಭಕ್ತಿ ಪ್ರಿಯನಾದವನು. ಭಕ್ತಿಯೇ ಬಹುಮುಖ್ಯವಾದುದು ಎಂಬ ಧೋರಣೆ ಇಲ್ಲಿದೆ.

ಚಿತ್ರದ ವಿಶ್ಲೇಷಣೆ : ೨೦೦೫ರಲ್ಲಿ ಕಲಬುರ್ಗಿಯ ಡಾ. ಎ. ಎಸ್. ಪಾಟೀಲರವರು A4 (೮. ೧/೨" x ೧೧. ೧/೨") ಅಳತೆಯ ಕಾಗದದಲ್ಲಿ ಈ ಚಿತ್ರವನ್ನು ರಚಿಸಿದ್ದಾರೆ. ಪ್ರಸ್ತುತ ಈ ಕೃತಿಯು ಕಲಾವಿದರ ಸಂಗ್ರಹದಲ್ಲಿದೆ. ಈ ಚಿತ್ರದ ಬಲಭಾಗಕ್ಕೆ ಲಿಂಗಾಕಾರದ ಬಿಳಿದಾದ ಛಾಯೆಯಲ್ಲಿ ಬಸವಣ್ಣ ತನ್ನ ಎಡಗೈಯಲ್ಲಿ ಲಿಂಗವನ್ನಿಟ್ಟು ಇಷ್ಟಲಿಂಗ ಪೂಜೆಯಲ್ಲಿ ನಿರತರಾಗಿದ್ದು, ಎಡಭಾಗಕ್ಕೆ ತ್ರಿಶೂಲ ಹಾಗೂ ಒಬ್ಬ ವ್ಯಕ್ತಿಯನ್ನು ಪಾದದಿಂದ ತುಳಿಯುತ್ತಿರುವಂತೆ ಸಂಯೋಜಿಸಲಾಗಿದೆ. ಅದರ ಕೆಳಗೆ ವೀಣೆಯನ್ನು ನುಡಿಸುವ ಸ್ತ್ರೀಯ ಎರಡು ಕೈಗಳಿವೆ. ಬಲಗೈ ತಂತಿಯ ಮೇಲಿದೆ. ಬಲಗೈ ಪಕ್ಕದಲ್ಲಿ ತಬಲಾಗಳೆರಡಿವೆ. ಪಕ್ಕದಲ್ಲಿ ಪುಸ್ತಕಗಳನ್ನಿಡುವ ಪೀಠವಿದೆ. ಅದರ ಪಕ್ಕದಲ್ಲಿ ಒಬ್ಬ ವ್ಯಕ್ತಿಯನ್ನು ಚಿತ್ರಿಸಿದ್ದು, ಆದರೆ ಈ ಚಿತ್ರ ಅಷ್ಟು ಸ್ಪಷ್ಟವಾಗಿ ಕಾಣುವುದಿಲ್ಲ. ಒಟ್ಟಾರೆ ವಚನದ ಹಿನ್ನೆಲೆಯಲ್ಲಿ ರಚಿಸಿರುವಂತ ಈ ಕಪ್ಪು ಬಿಳುಪಿನ ಪೆನ್ಸಿಲ್ ಮಾಧ್ಯಮದ ಕಲಾಕೃತಿಯಲ್ಲಿ ವಸ್ತುಗಳ ಸಂಯೋಜನೆ, ಸ್ಥಳಾವಕಾಶ, ಆಕೃತಿಗಳ ಶೈಲಿ ಇವೆಲ್ಲವೂ ತುಂಬಾ ಅರ್ಥಪೂರ್ಣವಾಗಿದ್ದು. ನೋಡುಗರನ್ನು ತನ್ನತ್ತ ಗಮನ ಸೆಳೆಯುವಲ್ಲಿ ಎರಡು ಮಾತಿಲ್ಲ.

೩.೩೧. ದಯವಿಲ್ಲದ ಧರ್ಮದೇವುದಯ್ಯಾ?...

ದಯವಿಲ್ಲದ ಧರ್ಮವದೇವುದಯ್ಯಾ?

ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ,

ದಯವೇ ಧರ್ಮದ ಮೂಲವಯ್ಯಾ,

ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.[೩೮]

೩೭. ಡಾ. ಎಂ. ಎಂ. ಕಲಬುರ್ಗಿ (ಸಂ.) : ಬಸವಣ್ಣನವರ ವಚನಸಂಪುಟ, (ವ.ಸಂ.–೧೮೧), ಪು–೪೬


೩೮. ಅದೇ. (ವ.ಸಂ.–೨೪೭), ಪು–೬೧

ವಚನದ ಸಾರಾಂಶ : ಪ್ರತಿಯೊಬ್ಬ ಮನುಷ್ಯ ಇದಹದಲ್ಲಿ ಸುಖ, ಪರದಲ್ಲಿ ಶಾಂತಿಯನ್ನು ಪಡೆದು ಪರಮಾತ್ಮನಿಗೆ ಒಪ್ಪಿತವಾದ ಬದುಕನ್ನು ಸಾಗಿಸಲು ಧರ್ಮವನ್ನು ಆಚರಿಸಬೇಕಾಗುವುದು. ಮಾನವನ ಜೀವನಕ್ಕೆ ಅಡಿಗಲ್ಲು ಧರ್ಮ. ಮನುಷ್ಯ ಸ್ವಭಾವತಃ ಸ್ವಾರ್ಥಿಯಾಗಿದ್ದರೂ ಧಾರ್ಮಿಕ ಭಾವದಿಂದ ಪ್ರೇರಿತನಾದಾಗ ತನ್ನ ನಡೆನುಡಿಗಳನ್ನು ಪವಿತ್ರಗೊಳಿಸಿಕೊಳ್ಳುತ್ತಾನೆ. ಪರೋಪಕಾರಕ್ಕೆ ಮುಂದಾಗುತ್ತಾನೆ. ಆದರ್ಶ ಹಾಗೂ ಮೌಲ್ಯಗಳ ರಕ್ಷಣೆಗಾಗಿ ಸರ್ವಸ್ವವನ್ನು ತ್ಯಾಗ ಮಾಡುತ್ತಾನೆ. ಯಾವುದೇ ಧರ್ಮವನ್ನು ನೋಡಿದರೂ ಅಲ್ಲಿ ದಯೆಯ ಬಗ್ಗೆ ಪ್ರಸ್ತಾಪವಿದ್ದೆ ಇರುತ್ತದೆ. "ಅಹಿಂಸಾ ಪರಮೋ ಧರ್ಮಃ" ಎಂಬಂತೆ ಧರ್ಮದ ಗುರಿ ಅಹಿಂಸೆಯಾಗಬೇಕು. ಸಕಲ ಪ್ರಾಣಿಗಳಲ್ಲೂ ಪ್ರೀತಿ, ದಯೆ, ಕರುಣೆಯಿರಬೇಕು. ಸಕಲ ಪ್ರಾಣಿಗಳನ್ನು ಪ್ರೀತಿಸುವ ಮನೋಭಾವ ನಮ್ಮದಾಗಬೇಕು. ಧರ್ಮದ ಮೂಲ ಬೇರು ದಯೆಯೇ ಆಗಿದೆ.

ಚಿತ್ರದ ವಿಶ್ಲೇಷಣೆ : ಮೇಲಿನ ವಚನಾಧಾರಿತ ಈ ಚಿತ್ರವನ್ನು ೨೦೦೫ರಲ್ಲಿ ಕಲಾವಿದ ಎ. ಎಸ್. ಪಾಟೀಲರವರು A4 (೮.೧/೨" x ೧೧.೧/೨") ಅಳತೆಯ ಕಾಗದದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. ಪ್ರಸ್ತುತ ಈ ಕೃತಿಯು ಕಲಾವಿದರ ಸಂಗ್ರಹದಲ್ಲಿದೆ. ಒಂದು ದೊಡ್ಡ ಮರದ ಕೆಳಗೆ ಬಸವಣ್ಣನವರು ಕುಳಿತು ಪುಟ್ಟ ಕರುವನ್ನು ತನ್ನ ಮಡಿಲಲ್ಲಿರಿಸಿಕೊಂಡಿರುವಂತೆ ಚಿತ್ರಿಸಲಾಗಿದೆ. ಜೊತೆಗೆ ಪಕ್ಕದ ಒಂದು ಹಸುವಿನ ತಲೆಯ ಮೇಲೆ ಕೈ ಸವರುವಂತೆ, ಇನ್ನುಳಿದ ಆಕಳುಗಳು ಬಸವಣ್ಣನವರ ಪಕ್ಕದಲ್ಲಿ ಬರುತ್ತಿರುವಂತೆ ಚಿತ್ರದಲ್ಲಿ ಭಾಸವಾಗುತ್ತದೆ.

ಈ ಚಿತ್ರದಲ್ಲಿನ ನಾಯಿ, ಬೆಕ್ಕು, ಅಳಿಲು, ಮೊಲ, ಹಾವು, ಬಾತುಕೋಳಿ ಮುಂತಾದ ಪ್ರಾಣಿಗಳು ಭಕ್ತಿಯಲ್ಲಿ ಮೈಮರೆತು ಎಲ್ಲವೂ ಒಂದೇ ಸ್ಥಳದಲ್ಲಿ ಕೂಡಿಕೊಂಡು ಬಸವಣ್ಣನವರ ಹತ್ತಿರ ಸಾಗುತ್ತಿರುವಂತೆ ಆಕೃತಿಗಳನ್ನು ಸಂಯೋಜಿಸಲಾಗಿದೆ. ಚಿತ್ರದ ಎಡಭಾಗದ ಕೆಳಗೆ ತರಕಾರಿ, ಹಣ್ಣು ಹಂಪಲಗಳಿದ್ದು, ಬಲಭಾಗದಲ್ಲಿ ನೀರಿನ ಅರವಟಿಗೆಯಲ್ಲಿ ಎರಡು ಬಾತುಕೋಳಿಗಳು ಆಡುತ್ತಿರುವಂತೆ ಚಿತ್ರವನ್ನು ರಚಿಸಲಾಗಿದೆ. ಒಟ್ಟಾರೆ ಪೆನ್ಸಿಲ್ ಮಾಧ್ಯಮದಲ್ಲಿ ಈ ಚಿತ್ರ ರಚನೆಯಾದರೂ ಚಿತ್ರಗಳ ರಚನೆ ಮತ್ತು ಅವುಗಳ ನೆರಳು ಬೆಳಕಿನ ಕ್ರಿಯೆಯು ಅತ್ಯಂತ ನೈಜ ರೂಪದಲ್ಲಿ ಮೂಡಿಬಂದಿದ್ದು ಮತ್ತು ಹಿಂಭಾಗದಲ್ಲಿ ಸುಂದರ ನಿಸರ್ಗ, ಸೂರ್ಯೋದಯದ ಸಮಯದಲ್ಲಿ ಈ ಘಟನೆ ನಡೆಯುತ್ತಿರುವಂತೆ ಭಾಸವಾಗುತ್ತದೆ. ನೋಡುವ ಕಣ್ಮನಗಳ ಸೆಳೆಯುವಲ್ಲಿ ಯಶಸ್ವಿಯಾಗಿದೆ.

□□□





ಚಿತ್ರ ೩.೧ ವಚನದಲ್ಲಿ ನಾಮಾಮೃತ ತುಂಬಿ ೧



ವಚನದಲ್ಲಿ ನಾಮಾಮೃತ ತುಂಬಿ ೨



ಚಿತ್ರ ೩.೨ ಹಾಲೆಂಜಲು ಪೆಯ್ಯನ ಉದಕವೆಂಜಲು




ಚಿತ್ರ ೩.೩ ಭಕ್ತಿಯೆಂಬ ಪೃಥ್ವಿಯ ಮೇಲೆ ೧



ಭಕ್ತಿಯೆಂಬ ಪೃಥ್ವಿಯ ಮೇಲೆ ೨



ಚಿತ್ರ ೩.೪ ಕಳಬೇಡ, ಕೊಲಬೇಡ, ಹುಸಿಯ ನುಡಿಯಬೇಡ ೧



ಕಳಬೇಡ, ಕೊಲಬೇಡ, ಹುಸಿಯ ನುಡಿಯಬೇಡ ೨



ಚಿತ್ರ ೩.೫ ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ



ಚಿತ್ರ ೩.೬ ಕಲ್ಲುನಾಗರ ಕಂಡರೆ ಹಾಲೆರೆಯೆಂಬರು ೧







ಕಲ್ಲು ನಾಗರ ಕಂಡರೆ ಹಾಲೆರೆಯೆಂಬರು ೨







ಕಲ್ಲು ನಾಗರ ಕಂಡರೆ ಹಾಲೆರೆಯೆಂಬರು ೩





ಕಲ್ಲು ನಾಗರ ಕಂಡರೆ ಹಾಲೆರೆಯೆಂಬರು ೪



ಕಲ್ಲು ನಾಗರ ಕಂಡರೆ ಹಾಲೆರೆಯೆಂಬರು ೫



ಕಲ್ಲುನಾಗರ ಕಂಡರೆ ಹಾಲೆರೆಯೆಂಬರು ೬




ಕಲ್ಲುನಾಗರ ಕಂಡರೆ ಹಾಲೆರೆಯೆಂಬರು ೭



ಕಲ್ಲುನಾಗರ ಕಂಡರೆ ಹಾಲೆರೆಯೆಂಬರು ೮



ಚಿತ್ರ ೩.೭ ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯ ೧



ಚಿತ್ರ ೩.೮ ಸಗಣಿಯ ಬೆನಕಂಗೆ ಸಂಪಿಗೆಯರಳಿ ಪೂಜಿಸಿದಡೆ



ಚಿತ್ರ ೩.೯ ಇವನಾರವ, ಇವನಾರವ ಇವನಾರವ ಎಂದೆನಿಸದಿರಯ್ಯ ೧



ಇವನಾರವ, ಇವನಾರವ ಇವನಾರವ ಎಂದೆನಿಸದಿರಯ್ಯ ೨



ಚಿತ್ರ ೩.೧೦ ಆನೆಯನೇರಿಕೊಂಡು ಹೋದಿರೇ ನೀವು



ಚಿತ್ರ ೩.೧೧ ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯ



ಚಿತ್ರ ೩.೧೨ ಗೀತವ ಹಾಡಿದರೇನು, ಶಾಸ್ತ್ರ ಪುರಾಣವ ಕೇಳಿದಡೇನು



ಚಿತ್ರ ೩.೧೩ ಹಾವಿನ ಬಾಯಿಯ ಕಪ್ಪೆ ಹಸಿದು ೦೧



ಹಾವಿನ ಬಾಯಿಯ ಕಪ್ಪೆ ಹಸಿದು ೨



ಹಾವಿನ ಬಾಯಿಯ ಕಪ್ಪೆ ಹಸಿದು ೩



ಹಾವಿನ ಬಾಯಿಯ ಕಪ್ಪೆ ಹಸಿದು ೪



ಚಿತ್ರ ೩.೧೪ ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ ೧



ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ ೨



ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ ೩




ಚಿತ್ರ ೩.೧೫ ಹಬ್ಬಕ್ಕೆ ತಂದ ಹರಕೆಯ ಕುರಿ ೧



ಹಬ್ಬಕ್ಕೆ ತಂದ ಹರಕೆಯ ಕುರಿ ೨



ಹಬ್ಬಕ್ಕೆ ತಂದ ಹರಕೆಯ ಕುರಿ ೩



ಚಿತ್ರ ೩.೧೬ ಉಳ್ಳವರು ಶಿವಾಲಯವ ಮಾಡುವರು



ಚಿತ್ರ ೩.೧೮ ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುಹೋಗದ



ಚಿತ್ರ ೩.೧೭ ಜನಿತಕ್ಕೆ ತಾಯಾಗಿ, ಹೆತ್ತವಳು ಮಾಯೆ



ಚಿತ್ರ ೩.೧೯ ನೀರ ಕಂಡಲ್ಲಿ ಮುಳುಗುವರಯ್ಯ ೧



ನೀರ ಕಂಡಲ್ಲಿ ಮುಳುಗುವರಯ್ಯ ೨




ನೀರ ಕಂಡಲ್ಲಿ ಮುಳುಗುವರಯ್ಯ ೩






ಚಿತ್ರ ೩.೨೦ ಕೆಸರಿನಲ್ಲಿ ಬಿದ್ದ ಪಶುವಿನಂತೆ ಆನು ೧



ಕೆಸರಿನಲ್ಲಿ ಬಿದ್ದ ಪಶುವಿನಂತೆ ಆನು ೨



ಚಿತ್ರ ೩.೨೧ ದೇವನೊಬ್ಬ ನಾಮ ಹಲವು



ಚಿತ್ರ ೩.೨೨ ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ





ಚಿತ್ರ ೩.೨೩ ಒಡೆಯನಿಲ್ಲದ ಮನೆ ತುಡುಗಣಿ ನಾಯಿ ಹೊಗುವಂತೆ



ಚಿತ್ರ ೩.೨೪ ತುಪ್ಪದ ಸವಿಗೆ ಅಲುಗ ನೆಕ್ಕುವ ಸೊಣಗನಂತೆನ್ನ ಬಾಳುವೆ !




ಚಿತ್ರ ೩.೨೫ ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ



ಚಿತ್ರ ೩.೨೬ ಉಂಬ ಜಂಗಮ ಬಂದಡೆ ನಡೆಯೆಂಬರು



ಚಿತ್ರ ೩.೨೭ ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು



ಚಿತ್ರ ೩.೨೮ ನೀನೊಲಿದರೆ ಕೊರಡು ಕೊನರುವುದಯ್ಯ ೧



ನೀನೊಲಿದರೆ ಕೊರಡು ಕೊನರುವುದಯ್ಯ ೨



ನೀನೊಲಿದರೆ ಕೊರಡು ಕೊನರುವುದಯ್ಯ ೩



ನೀನೊಲಿದರೆ ಕೊರಡು ಕೊನರುವುದಯ್ಯ ೪



೩.೨೯ ಜಗದಗಲ ಮುಗಿಲಗಲ



೩.೩೦ ನಾದಪ್ರಿಯ ಶಿವನೆಂಬರು



೩.೩೧ ದಯವಿಲ್ಲದ ಧರ್ಮದೇವುದಯ್ಯಾ ?

ಅಧ್ಯಾಯ : ನಾಲ್ಕು

ಇತರೆ ಮಾಧ್ಯಮಗಳಲ್ಲಿ ಅಭಿವ್ಯಕ್ತಗೊಂಡ ಬಸವಣ್ಣನವರು

ಮಾನವನ ಉಗಮದೊಂದಿಗೆ ದೃಶ್ಯ ಮತ್ತು ಶ್ರವಣ ಮಾಧ್ಯಮಗಳು ತಮ್ಮ ಅಸ್ತಿತ್ವವನ್ನು ಪಡೆದುಕೊಂಡು ಬಂದಿವೆ. ನಾಗರಿಕತೆ, ಸಂಸ್ಕೃತಿ, ವೈಚಾರಿಕತೆ, ವಿಜ್ಞಾನ-ತಂತ್ರಜ್ಞಾನಗಳು ಬೆಳೆದು ಬಂದಂತೆಲ್ಲ ಅವುಗಳ ಸ್ವರೂಪ, ವ್ಯಾಪ್ತಿಯೂ ವಿಶಾಲತೆಯನ್ನು ಪಡೆದುಕೊಂಡಿವೆ. ಆದಿಮ ಸಂಸ್ಕೃತಿಯ ಮಾನವ ತನ್ನ ಮನಸ್ಸಿನ ಭಾವನೆಗಳನ್ನು ರೇಖಾಚಿತ್ರಗಳ ಮೂಲಕ ಬಂಡೆಯ ಮೇಲೆ ಚಿತ್ರಿಸಿರುವುದನ್ನು ಕಲಾ ಇತಿಹಾಸ ದಾಖಲಿಸುತ್ತದೆ. ಕಾಡಿನಲ್ಲಿ ಜೀವನ ನಡೆಸುತ್ತಿದ್ದ ಮಾನವ ಕಾಲಕ್ರಮೇಣ ತನ್ನ ಚಿಂತನೆ ಮತ್ತು ಆವಿಷ್ಕಾರಗಳಿಂದ ತನ್ನ ಜೀವನಶೈಲಿಯಲ್ಲಿ ಬದಲಾವಣೆಯನ್ನು ಮಾಡಿಕೊಂಡ. ಅಲ್ಲಿಂದ ಅವನ ಜೀವನ ನಾಗರಿಕತೆಯತ್ತ ಸಾಗತೊಡಗಿತು. ಆಗ ದೃಶ್ಯ ಮತ್ತು ಶ್ರವಣ ಮಾಧ್ಯಮಗಳು ಒಂದು ನಿರ್ದಿಷ್ಟ ಸ್ವರೂಪವನ್ನು ಪಡೆಯಲಾರಂಭಿಸಿದವು. ಹೀಗೆ ಮಾಧ್ಯಮಗಳು ಒಂದು ಜನಾಂಗದ ಸಂಸ್ಕೃತಿಯನ್ನು ತಮ್ಮ ಮುಂದಿನ ಪೀಳಿಗೆಗೆ ಹೊತ್ತೊಯ್ಯುವ ಜವಾಬ್ದಾರಿಯನ್ನು ವಹಿಸಿಕೊಂಡವು.

ಭಾರತದಲ್ಲಿ ೬೦-೭೦ರ ದಶಕದಲ್ಲಿ ದೃಶ್ಯಮಾಧ್ಯಮಗಳಿಗಿಂತಲೂ ಶ್ರವ್ಯ ಮಾಧ್ಯಮವೇ ಮೇಲುಗೈ ಸಾಧಿಸಿದ್ದುದನ್ನು ಆಕಾಶವಾಣಿಯ ಸಂದರ್ಭದಲ್ಲಿ ಗುರುತಿಸಬಹುದು. ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ತಂತ್ರಜ್ಞಾನ ಬೆಳೆದಂತೆಲ್ಲ ಶ್ರವ್ಯಮಾಧ್ಯಮದ ಪ್ರಭಾವ ಕಡಿಮೆಯಾಯಿತು. ೨೧ನೆಯ ಶತಮಾನದ ವಿಜ್ಞಾನ ಮತ್ತು ತಂತ್ರಜ್ಞಾನ ಯುಗದ ಈ ಹೊತ್ತಿನಲ್ಲಿ ಈ ಎರಡೂ ಮಾಧ್ಯಮಗಳು ಅಸ್ತಿತ್ವದಲ್ಲಿದ್ದರೂ ಸಿಂಹಪಾಲು ದೃಶ್ಯಮಾಧ್ಯಮದ್ದೇ ಆಗಿದೆ ಎಂಬುದನ್ನು ಮರೆಯುವಂತಿಲ್ಲ. ಬಸವಣ್ಣನ ಜೀವನ ಚಿತ್ರಣವನ್ನು ಜಗತ್ತಿಗೆ ಸಾರಲು ಸಾಹಿತಿಗಳು, ಕಲಾವಿದರು, ಲೇಖಕರು, ಕವಿಗಳು, ಚಿಂತಕರು ಅಕ್ಷರ ಮಾಧ್ಯಮ, ದೃಶ್ಯ ಮಾಧ್ಯಮ, ಶ್ರವಣ ಮಾಧ್ಯಮಗಳನ್ನು ಪ್ರತ್ಯೇಕವಾಗಿ ಇಲ್ಲವೆ ಬಹುಮಾಧ್ಯಮಗಳನ್ನು ಬಳಸಿಕೊಂಡು ನಿರೂಪಿಸಲು ಪ್ರಯತ್ನಿಸಿದ್ದಾರೆ. ಯಾವುದೇ ಚಿತ್ರ ಅಥವಾ ಒಂದು ಕಲಾಕೃತಿಯನ್ನು ಪರಿಚಯಿಸುವ

ಸಂದರ್ಭದಲ್ಲಿ ಸಹೃದಯರು, ವಿಮರ್ಶಕರು ಈ ಕಲಾಕೃತಿಗೆ ಬಳಸಿದ ಮಾಧ್ಯಮ ಯಾವುದೆಂದು ಅತ್ಯಂತ ಕುತೂಹಲದಿಂದ ಪರಾಮರ್ಶಿಸತೊಡಗುತ್ತಾರೆ. ಮಾಧ್ಯಮಗಳು ಸಂಗತಿಗಳ ಅಭಿವ್ಯಕ್ತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆಂಬುದನ್ನು ಇಲ್ಲಿ ನೆನೆಯಬಹುದು. ಪ್ರಸ್ತುತ ಅಧ್ಯಯನದ ಮುಖ್ಯ ಆಶಯ ಬಸವಣ್ಣನ ವರ್ಣಚಿತ್ರಗಳನ್ನು ಅಧ್ಯಯನ ಮಾಡುವುದಾಗಿದ್ದರೂ ಅದಕ್ಕೆ ಪೂರಕವಾದ ಇತರ ಮಾಧ್ಯಮಗಳನ್ನು ಗಮನಿಸುವುದು ವಿಷಯದ ಪೂರ್ಣತೆಗೆ ಸಹಕಾರಿಯಾಗುತ್ತದೆಂದು ಗ್ರಹಿಸಿ ಪ್ರಸ್ತುತ ಸಂಕೀರ್ಣ ಮಾಧ್ಯಮಗಳಲ್ಲಿ ಬಸವಣ್ಣನವರನ್ನು ಹಲವು ಆಯಾಮಗಳಿಂದ ನೋಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಬಸವಣ್ಣನವರನ್ನು ದೃಶ್ಯಮಾಧ್ಯಮದ ಇತರ ಬಗೆಗಳಾದ ಮೂರ್ತಿಶಿಲ್ಪ, ಉಬ್ಬುಶಿಲ್ಪ, ನಾಟಕ, ಜನಪದ ದೃಶ್ಯಕಲೆಗಳಾದ ತೊಗಲುಗೊಂಬೆಯಾಟ, ಮತ್ತು ಚಲನಚಿತ್ರ ಮಾಧ್ಯಮಗಳ ಹಿನ್ನೆಲೆಯಲ್ಲಿ ಪ್ರಾಸಂಗಿಕವಾಗಿ ಇಲ್ಲಿ ಗಮನಿಸಲಾಗಿದೆ.

೪.೧. ಶಿಲಾ ಮಾಧ್ಯಮದಲ್ಲಿ ಬಸವಣ್ಣನವರು

ಶಿಲಾಮಾಧ್ಯಮದಲ್ಲಿ ರಚಿಸಿದ ಕಲಾಕೃತಿಗಳು ಬಹುಕಾಲ ನಿಲ್ಲಬಲ್ಲವುಗಳಾಗಿರುತ್ತವೆ. ಇದರಲ್ಲಿ ಕಲಾಕೃತಿಗಳನ್ನು ನಿರ್ಮಿಸುವುದು ಕಠಿಣವಾಗಿದ್ದರೂ ಅವು ಮಳೆ, ಬಿಸಿಲು, ಗಾಳಿಗಳಿಗೆ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಳ್ಳದೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತವೆ. ಉಳಿದೆಲ್ಲ ಕಲಾಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಏನಾದರೂ ಲೋಪದೋಷಗಳು ಕಂಡುಬಂದರೆ ಅವುಗಳನ್ನು ಸರಿಪಡಿಸಿಕೊಳ್ಳುವ ಅವಕಾಶವಿರುತ್ತದೆ. ಆದರೆ ಶಿಲಾಮಾಧ್ಯಮದಲ್ಲಿ ಒಂದು ವ್ಯಕ್ತಿಯ ಮೂರ್ತಿಯನ್ನು ನಿರ್ಮಿಸುವಾಗ ಒಂದು ಚಿಕ್ಕ ಅಂಶದಲ್ಲಿ ವ್ಯತ್ಯಾಸವಾಗಿ ಲೋಪವಾದರೆ ಇಡೀ ಕಲಾಕೃತಿಯೇ ವ್ಯರ್ಥವಾಗುತ್ತದೆ. ಅದನ್ನು ಸರಿಪಡಿಸಲು ಅಸಾಧ್ಯವೇ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಲಾವಿದರು ಈ ಮಾಧ್ಯಮದಲ್ಲಿ ಹೆಚ್ಚು ಜಾಗರೂಕನಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗಿರುತ್ತದೆ. ಶಿಲೆಗಳಲ್ಲಿ ಕಠಿಣ ಶಿಲೆ, ಮಧ್ಯಮ ಮತ್ತು ಮೃದು ಶಿಲೆಗಳೆಂದು ವಿಭಾಗವಿದೆ. ಒಬ್ಬೊಬ್ಬ ಕಲಾವಿದರು ತಮಗೆ ಇಷ್ಟವಾಗುವ ಶಿಲೆಗಳಲ್ಲಿ ತಮ್ಮ ಶಿಲ್ಪಗಳನ್ನು, ಮೂರ್ತಿಶಿಲ್ಪಗಳನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಗುತ್ತಾರೆ.

೪.೧.೧. ಕೂಡಲಸಂಗಮದತ್ತ ಬಸವಣ್ಣನವರ ಪಯಣ

ಪ್ರಸ್ತುತ ಕಲಾಕೃತಿಯು ದಪ್ಪನೆಯ ಅಗ್ನಿಶಿಲೆಯಲ್ಲಿ ಕೆತ್ತಿದ ಉಬ್ಬು ಚಿತ್ರವಾಗಿದೆ. ಬಾಲಕ ಬಸವಣ್ಣ ಬಾಗೇವಾಡಿಯಲ್ಲಿ ಜನಿವಾರ ನಿರಾಕರಣೆಯನ್ನು ಮಾಡಿ ಕೂಡಲ ಸಂಗಮದತ್ತ ಹೋಗುತ್ತಿರುವ ಸನ್ನಿವೇಶವಿಲ್ಲಿದೆ. ಆತನ ಹಿಂಬದಿಯಲ್ಲಿ ದಂಪತಿಗಳಿಬ್ಬರಿದ್ದಾರೆ. ದಾರಿಯುದ್ದಕ್ಕೂ ಗಿಡಮರಗಳ ಸಾಲಿರುವುದನ್ನು ಗುರುತಿಸಬಹುದು. ಎದುರಿಗೆ ನದಿಯೊಂದಿದೆ. ಈ ಕಲಾಕೃತಿಯನ್ನು ಮಹಾಬಲಿಪುರಂನ ರಾಜೇಂದ್ರನ್ ಕೆತ್ತಿದ್ದಾರೆ. ಇದು ಬಾಗೇವಾಡಿಯ ಬಸವೇಶ್ವರ ಸ್ಮಾರಕ ಕಲಾಕೃತಿಗಳಲ್ಲಿ ಒಂದಾಗಿದ್ದು ಯಥಾದರ್ಶನದ ನೀತಿಯನ್ವಯ ಇಲ್ಲಿ ಕೂಡಲಸಂಗಮದ ಪರಿಸರವನ್ನು ಚಿತ್ರಿಸಲಾಗಿದೆ. ಆಕೃತಿಗಳಲ್ಲಿ ಅಂಗರಚನಾ ಪಕ್ವತೆಯನ್ನು ಇನ್ನೂ ನಿರೀಕ್ಷಿಸಬಹುದಾಗಿದ್ದು, ಗಿಡ–ಮರಗಳು ನೈಜವಾಗಿ, ಸಮರ್ಪಕವಾಗಿ

ಮೂಡಿಬಂದಿವೆ. ಯಥಾದರ್ಶನದ ನೀತಿಯ ಪ್ರಕಾರವಾಗಿ ದೂರ ಮತ್ತು ಸಾಮೀಪ್ಯದ ಪ್ರಾಯೋಗಿಕ ಸಿದ್ಧಾಂತ ಇಲ್ಲಿ ಸ್ಪಷ್ಟ. ದೂರದಲ್ಲಿ ಕೂಡಲಸಂಗಮನಾಥನ ದೇಗುಲ, ಅದರ ಈಚೆ ಕೃಷ್ಣಾ ನದಿ ಮತ್ತೆ ಅದರ ಈಚೆ ಕಾನನ, ಹುಲ್ಲುಗಾವಲು. ಆಕೃತಿಗಳು ಸಾಮೀಪ್ಯದ ನೆಲೆಯಲ್ಲಿ ಉಬ್ಬು ಶಿಲ್ಪದಲ್ಲಿ ಚಿತ್ರಿತಗೊಂಡಿವೆ. ಪ್ರಸ್ತುತ ಈ ಶಿಲ್ಪಕಲಾಕೃತಿಯು ಬಸವನ ಬಾಗೇವಾಡಿಯ ಬಸವ ಸ್ಮಾರಕದಲ್ಲಿ ಸಂಗ್ರಹಗೊಂಡಿದೆ.

೪.೧.೨. ಸಂಗಮನಾಥ ಮತ್ತು ಗುರುಗಳ ಸಾನ್ನಿಧ್ಯದಲ್ಲಿ ಬಾಲಕ ಬಸವಣ್ಣ

ಈ ಕಲಾಕೃತಿಯು ಉಬ್ಬುಶಿಲ್ಪ ಮಾದರಿಯಾಗಿದ್ದು, ಶಿಲೆಯಲ್ಲಿ ನಿರ್ಮಿತವಾದದ್ದಾಗಿದೆ. ಬಾಲಕ ಬಸವಣ್ಣ ಗುರುಗಳ ಎದುರಲ್ಲಿ ಕೂಡಲಸಂಗಮನಾಥನ ಗುಡಿಯಲ್ಲಿ ಕೈಜೋಡಿಸಿ ನಿಂತ ಚಿತ್ರವಿದು. ಬಾಲಕ ಬಸವಣ್ಣನು ಸಂಗಮನಾಥನನ್ನು ಪ್ರಾರ್ಥಿಸುವ ಮತ್ತು ಧರ್ಮಗುರುಗಳಲ್ಲಿ ಆಶ್ರಯ ನೀಡುವಂತೆ ಬೇಡುತ್ತಿರುವ ಎರಡು ಸಂಗತಿಗಳನ್ನು ಏಕಕಾಲಕ್ಕೆ ಕಾಣಬಹುದು. ಅವಕಾಶದ ಕೇಂದ್ರಭಾಗಕ್ಕೆ ಸಂಯೋಜನೆಗೊಳ್ಳುವ ಗರ್ಭಗುಡಿಯಿಂದ ಸಮಾನಾಂತರವಾಗಿ ಸಂಯೋಜನೆ ವಿಸ್ತೃತಗೊಂಡಿದೆ. ಮಧ್ಯದಲ್ಲಿ ಗರ್ಭಗುಡಿಯೊಳಗೆ ಶಿವಲಿಂಗ, ಎಡಪಾರ್ಶ್ವದಲ್ಲಿ ಗುರುಗಳು ಬಲಪಾರ್ಶ್ವದಲ್ಲಿ ಬಾಲಬಸವ, ಮಧ್ಯದಲ್ಲಿ ನಂದಿಯ ವಿಗ್ರಹ, ಅವಕಾಶದ ಎಡ ಮತ್ತು ಬಲಪಾರ್ಶ್ವಗಳಲ್ಲಿ ಚಾಲುಕ್ಯ ಶೈಲಿಯ ಕಂಭಗಳು ರಚನೆಗೊಂಡಿವೆ. ವಾಸ್ತುವಿನ ನಿರ್ಮಾಣದಲ್ಲಿ ಯಥಾದರ್ಶನದ ನೀತಿಯಲ್ಲಿ ಅಲ್ಪವಾಗಿ ಕಲಾವಿದರು ಎಡವಿರುವುದನ್ನು ದೇಗುಲದ ಗೋಡೆಯ ವಿನ್ಯಾಸದಲ್ಲಿ ಕಾಣಬಹುದು. ಈ ಕೃತಿಯೂ ಬಸವನ ಬಾಗೇವಾಡಿಯ ಬಸವ ಸ್ಮಾರಕದಲ್ಲಿ ಸಂಗ್ರಹಗೊಂಡಿದೆ.

೪.೧.೩. ಥೇಮ್ಸ್ ನದಿಯ ದಡದಲ್ಲಿರುವ ಅರ್ಧ ಭಾವಶಿಲ್ಪ

ಭಾರತ ಸರ್ಕಾರ ಥೇಮ್ಸ್‌ನದಿಯ ದಂಡೆಯ ಮೇಲೆ ಬಸವಣ್ಣನವರ ಪ್ರತಿಮೆಯನ್ನು ಸ್ಥಾಪಿಸಲು ಬ್ರಿಟೀಷ್ ಸರ್ಕಾರವನ್ನು ಕೇಳಿಕೊಂಡಿದ್ದಕ್ಕೆ, ಆ ಸರ್ಕಾರವು ಬಸವಣ್ಣನವರ ಪ್ರತಿಮೆಯನ್ನು ಯಾವ ಯಾವ ಕಾರಣಗಳಿಂದ ಪ್ರತಿಷ್ಠಾಪಿಸಬೇಕೆಂದು ಭಾರತ ಸರ್ಕಾರವನ್ನು ಪ್ರಶ್ನಿಸಿತು. ಅದಕ್ಕೆ ಭಾರತ ಸರ್ಕಾರವು ಬಸವಣ್ಣನವರ ವಿಗ್ರಹವನ್ನು ಪ್ರತಿಷ್ಠಾಪಿಸಲು ಒಟ್ಟು ಅರವತ್ಮೂರು ಕಾರಣಗಳನ್ನು ಬ್ರಿಟೀಷ್ ಸರ್ಕಾರಕ್ಕೆ ಒದಗಿಸಿತು. ಬಸವಣ್ಣವರ ವ್ಯಕ್ತಿತ್ವದಲ್ಲಿ ಇದ್ದಂತಹ ಆ ಕಾರಣಗಳು ಇಂತಿವೆ: ವಿಚಾರವಂತರು, ಧರ್ಮ ಸಂಸ್ಥಾಪಕರು, ಧಾರ್ಮಿಕ ಸಹಿಷ್ಣು, ವಚನಕಾರರು, ಕವಿ, ಸಾಮಾಜಿಕ ಚಿಂತಕ, ಸಮಾಜವಾದಿ, ಸಮತಾವಾದಿ, ಯೋಗಿ, ಋಷಿ, ಭಂಡಾರಿ, ದಂಡನಾಯಕ, ಕರಣಿಕ , ಸ್ತ್ರೀಸ್ವಾತಂತ್ರ್ಯವಾದಿ, ಆರ್ಥಿಕ ತಜ್ಞ, ವಿಜ್ಞಾನಿ, ಪ್ರಜಾಪ್ರಭುತ್ವ ಸಂಸ್ಥಾಪಕ, ಪ್ರಜಾ ಸಂವಿಧಾನ ಸಂಸ್ಥಾಪಕ, ಇತಿಹಾಸ ಪುರುಷ, ಪುರಾಣ ಪುರುಷ, ಕನ್ನಡ ಪಂಡಿತ, ಕನ್ನಡ ಹೋರಾಟಗಾರ, ಜಾನಪದ ತಜ್ಞ, ಅಸ್ಪೃಶ್ಯತಾ ನಿವಾರಕ, ಅಭಿವೃದ್ಧಿ ಚಿಂತಕ, ಸಸ್ಯತಜ್ಞ, ಅಹಿಂಸಾವಾದಿ, ಪವಾಡ ಪುರುಷ, ೬೪ ವಿದ್ಯೆಗಳಲ್ಲಿ ಪೈಕಿ ೬೩ ವಿದ್ಯೆಗಳ ಪಾರಂಗತ, ಕಾಲಜ್ಞಾನಿ, ಪ್ರಕೃತಿರಕ್ಷಕ, ಸಾಹಿತ್ಯ ರಚನೆಕಾರ, ಸಾಮಾಜಿಕ ಮಾರ್ಗದರ್ಶಕ, ಧಾರ್ಮಿಕ ಕ್ರಾಂತಿಕಾರಿ, ಸ್ಥಿತಪ್ರಜ್ಞ, ದೈವಾಂಶಸಂಭೂತ, ಸಾಮಾಜಿಕ ವೈದ್ಯ, ಕಾಯಕಯೋಗಿ, ಶರಣ, ಶಿಷ್ಟಾಚಾರಿ, ಏಕದೇವೋಪಾಸಕ, ವಿಭೂತಿ ಪುರುಷ, ಮಾನವಹಕ್ಕು ಹೋರಾಟಗಾರ, ಪ್ರಕೃತಿ ಧರ್ಮ ಆರಾಧಕ, ಶಿಕ್ಷಣ ತಜ್ಞ, ದಾಸೋಹ

ತತ್ತ್ವದ ಹರಿಕಾರ, ಗಣಿತಜ್ಞ, ದಾರ್ಶನಿಕ, ಕಲಿ, ತತ್ತ್ವಶಾಸ್ತ್ರಜ್ಞ, ಮಹಾ ಮಾನವತಾವಾದಿ ಹೀಗೆ ಬಸವಣ್ಣನವರಲ್ಲಿ ಕಂಡುಬಂದ ವಿಶೇಷಣಗಳಿವು. ಇಂತಹ ವಿಶೇಷಣಗಳ ಕಾರಣಗಳನ್ನು ಗಮನಿಸಿದ ಬ್ರಿಟೀಷ್ ಸರ್ಕಾರ ವಿಗ್ರಹವನ್ನು ಸ್ಥಾಪಿಸಲು ಅನುಮತಿಯನ್ನು ಕೊಟ್ಟಿದ್ದರಿಂದ, ೨೦೧೫ರ ಮಾರ್ಚ್ ತಿಂಗಳಿನಲ್ಲಿ ಲಂಡನ್ನಿನ ಪ್ರತಿಷ್ಠಿತ ಸ್ಥಳವಾದ ಥೇಮ್ಸ್ ನದಿಯ ದಂಡೆಯ ಮೇಲೆ ವಿಶ್ವಮಾನವ, ಮಹಾಮಾನವತಾವಾದಿ ಬಸವಣ್ಣನವರ ವಿಗ್ರಹ ಭಾರತದ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಇವರಿಂದ ಅನಾವರಣಗೊಳ್ಳುವುದರ ಮೂಲಕ ಕನ್ನಡನಾಡಿನ ಶರಣಪರಂಪರೆ, ವಚನಪರಂಪರೆ, ಸಮಾನತೆಯ ಪರಂಪರೆಯು ಸಾಗರದಾಚೆ ವಿಸ್ತೃತಗೊಂಡಂತಾಗಿದೆ. ಕಪ್ಪು ಬಣ್ಣದ ಶಿಲೆಯಿಂದ ನಿರ್ಮಿತವಾಗಿದೆ. ಬಸವಣ್ಣನ ಪಾರಂಪರಿಕ ಶಿಲ್ಪದ ಲಕ್ಷಣಗಳು ಇಲ್ಲಿಯೂ ತಪ್ಪದೆ ಕಾಣಿಸಿಕೊಂಡಿವೆ. ಕೋಲುಮುಖ, ತಲೆಯಲ್ಲಿ ಕಿರೀಟ, ಹಣೆಯಲ್ಲಿ ಅಂಟಿಸಿದಂತಿರುವ ಉಬ್ಬು ವಿಭೂತಿಯ ಗೆರೆಗಳು, ನೀಳವಾದ ನಾಸಿಕ, ತುಟಿಗಳಲ್ಲಿ ಮಂದಹಾಸ ಮತ್ತು ಒಟ್ಟೂ ಮುಖದಲ್ಲಿ ಅನಿರ್ವಚನೀಯವಾದ ಸಂತಸದ ಭಾವನೆಯಿಂದ ಪ್ರಸ್ತುತ ಬಸವಣ್ಣನ ಶಿಲ್ಪವು ಚಿತ್ತಾಕರ್ಷಕವಾಗಿದೆ. ಅರ್ಧಭುಜಾಕೃತಿಯ ಬಸವಣ್ಣನ ಮೂರ್ತಿಯನ್ನು ಎತ್ತರದ ಪೀಠದ ಮೇಲೆ ನಿರ್ಮಿಸಲಾಗಿದೆ. ಶಿಲ್ಪದ ಪ್ರತಿಯೊಂದು ಸಂಗತಿಗಳನ್ನು ಕಲಾವಿದ ಇಲ್ಲಿ ತಾಳ್ಮೆ ಮತ್ತು ಶ್ರದ್ಧೆಯಿಂದ ನಿರ್ಮಿಸುವುದರ ಮೂಲಕ ನೋಡುಗರ, ವಿಮರ್ಶಕರ ಮೆಚ್ಚುಗೆ ಗಳಿಸಿದ್ದಾನೆ. ಇತ್ತೀಚೆಗೆ ಲಂಡನ್‌ನಲ್ಲಿ ಅನಾವರಣಗೊಂಡ ಮೂರ್ತಿ ಇದಾಗಿದೆ.

೪.೨. ಲೋಹ ಮಾಧ್ಯಮದಲ್ಲಿ ಬಸವಣ್ಣನವರು

ಲೋಹಮಾಧ್ಯಮದಲ್ಲಿ ಮೂರ್ತಿಗಳನ್ನು ಹೆಚ್ಚಾಗಿ ಮಹಾರಾಷ್ಟ್ರದ ಮಿರಜ್ ಮತ್ತು ಕೊಲ್ಲಾಪುರಗಳಲ್ಲಿ ತಯಾರು ಮಾಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲೂ ಈ ತೆರನಾಗಿ ಲೋಹಮಾಧ್ಯಮದ ಬಳಕೆಯನ್ನು ಮಾಡಲಾಗುತ್ತಿದೆ. ಈ ಮಾಧ್ಯಮವು ಕಠಿಣ ಮಾಧ್ಯಮವಾಗಿದ್ದರೂ ಬಿಸಿಲು, ಗಾಳಿ, ಮಳೆಯ ಹೊಡೆತದಿಂದ ತಡೆದುಕೊಳ್ಳುವ ಶಕ್ತಿಯನ್ನು ಪಡೆದಿದೆ. ಇಲ್ಲಿ ಕಲಾವಿದರು ನಿರ್ಮಿಸುವ ಕಲಾಕೃತಿಗಳು ಬಹುಕಾಲ ಉಳಿಯುವುದರಿಂದ ಅವರಿಗೆ ಇಷ್ಟವಾಗುವ ಮಾಧ್ಯಮವಾಗಿ ಪರಿಣಮಿಸಿದೆ. ಈ ಮಾಧ್ಯಮದ ಕಲಾವಿದರು ಮೊದಲು ಕ್ಲೇ (ಮಣ್ಣು)ನಿಂದ ಶಿಲ್ಪವನ್ನು ನಿರ್ಮಿಸುತ್ತಾರೆ. ಮಣ್ಣನ್ನು ಸರಿಯಾಗಿ ಹದ ಮಾಡಿ ತಮಗೆ ಬೇಕಾದ ಕಲಾಕೃತಿಗಳನ್ನು ತಮ್ಮ ಅನುಕೂಲ ಮತ್ತು ಅಳತೆಗೆ ತಕ್ಕಂತೆ ಸಿದ್ಧಪಡಿಸಿಕೊಳ್ಳುತ್ತಾರೆ. ನಂತರ ಇಡೀ ಕಲಾಕೃತಿಯ ಆಯಾ ಭಾಗಗಳ ಫೈಬರ್ ಗ್ಲಾಸ್ ಮತ್ತು ಪಿ.ಒ.ಪಿ.ಗಳಿಂದ ಮೌಲ್ಡ್ ಮಾಡಿಕೊಂಡು ಇಡೀ ಮೂರ್ತಿಯನ್ನು ಹಲವು ಭಾಗಗಳಾಗಿ ಕತ್ತರಿಸಿ, ವಿಂಗಡಿಸಿಕೊಳ್ಳುತ್ತಾರೆ. ನಂತರ ವಿಂಗಡಿಸಿದ ಮೌಲ್ಡ್‌ಗೆ ಪಂಚಲೋಹದ ತುಂಡುಗಳನ್ನು ಕುಲುಮೆಯಲ್ಲಿ ಕರಗುವಂತೆ ಮಾಡಿ ಕರಗಿಸಿದ ದ್ರಾವಣದಂತಿರುವ ಲೋಹವನ್ನು ವಿಂಗಡಿಸಿದ ತುಂಡುಗಳ ಒಳಗೆ ಸುರಿಯುತ್ತಾರೆ. ನಂತರ ಆ ಭಾಗಗಳನ್ನು ಇದೇ ರೀತಿಯಾಗಿ ತಯಾರಿಸಿ ಒಂದಕ್ಕೊಂದು ಬೆಸೆದು ಪೂರ್ಣಗೊಳಿಸುತ್ತಾರೆ.

೪.೨.೧. ಬಸವನ ಬಾಗೇವಾಡಿಯಲ್ಲಿ ಬಸವಣ್ಣನ ಜನನದ ಸನ್ನಿವೇಶ

ಬಸವನ ಬಾಗೇವಾಡಿಯಲ್ಲಿ ಬಸವಣ್ಣನ ಜನನದ ದೃಶ್ಯವನ್ನು ಪಂಚಲೋಹದ ಮಾಧ್ಯಮದಲ್ಲಿ ಮೂರ್ತಿಚಿತ್ರಗಳಿಂದ ಪ್ರಸ್ತುತ ಕಲಾಕೃತಿಯನ್ನು ನಿರ್ಮಿಸಲಾಗಿದೆ. ಇಲ್ಲಿ ಮೂಡಿಬಂದಿರುವ ಆಕೃತಿಗಳು ಪಂಚಲೋಹದಿಂದ ಮೊದಲು ರೂಪಗೊಂಡು ನಂತರದಲ್ಲಿ ಬಂಗಾರದ ಹಳದಿ ವರ್ಣದ ಲೇಪನವನ್ನು ಹೊಂದಿರುವುದರಿಂದ ಆಕರ್ಷಕವೆನ್ನಿಸಿವೆ. ನೋಡುಗರ ಎದುರಿಗೆ ಮಂಚವೊಂದರ ಮೇಲೆ ಬಸವಣ್ಣನ ತಾಯಿ ಮಾದಲಾಂಬಿಕೆ ತನ್ನ ತೊಡೆಯ ಮೇಲೆ ಶಿಶು ಬಸವೇಶನನ್ನು ಮಲಗಿಸಿಕೊಂಡಿದ್ದಾಳೆ. ಅವಳ ಅಕ್ಕಪಕ್ಕದಲ್ಲಿ ಒರಗುವ ದಿಂಬುಗಳಿವೆ. ಅವಳ ಬಲಬದಿಯಲ್ಲಿ ಸಿಂಹಾಸನವನ್ನು ಹೋಲುವ ಪೀಠವೊಂದರಲ್ಲಿ ಜಟೆ, ಗಡ್ಡ ಮೀಸೆಗಳನ್ನು ಹೊಂದಿರುವ, ಬಲಗೈಯ ಹಸ್ತವನ್ನು ಆಶೀರ್ವದಿಸುವ ಭಂಗಿಯಲ್ಲಿ ಕುಳಿತಿರುವ ಹಿರಿಯ ಗುರುಗಳೊಬ್ಬರ ಮೂರ್ತಿಶಿಲ್ಪವಿದೆ. ಅವರ ಎದುರಿಗೆ ತನ್ನೆರಡು ಕೈಗಳನ್ನು ಮುಗಿದು ವಿನೀತವಾದ ಭಂಗಿಯಲ್ಲಿ ನಿಂತು ತಲೆಯನ್ನು ತುಸು ಬಾಗಿಸಿರುವ ವ್ಯಕ್ತಿ ಮಾದರಸನಾಗಿದ್ದಾನೆ. ಬಸವಣ್ಣನ ಜನನದ ಸನ್ನಿವೇಶವನ್ನು ಪ್ರಸ್ತುತ ಮೂರ್ತಿಶಿಲ್ಪಗಳು ಪರಿಣಾಮಕಾರಿಯಾದ ರೀತಿಯಲ್ಲಿ ಅಭಿವ್ಯಕ್ತಿಸಿವೆ. ಮೂರ್ತಿಶಿಲ್ಪಗಳ ಪ್ರಮಾಣ, ಮುಖದ ಭಾವನೆಗಳು ಸಮರ್ಪಕವಾದ ರೀತಿಯಲ್ಲಿ ಮೂಡಿಬಂದಿವೆ. ಇವುಗಳನ್ನು ಸಂಯೋಜಿಸಿದ ಪರಿಸರವು ಆಧುನಿಕ ನೆಲೆಯಲ್ಲಿ ರಚಿತವಾಗಿದೆ. ವಾಸ್ತವವಾಗಿ ಈ ಶಿಲ್ಪಗಳಿಗೆ ೧೨ನೇ ಶತಮಾನದ ಪರಿಸರವನ್ನು ಅಂದರೆ, ಆಗಿನ ಕಾಲದ ಸಾಂಪ್ರದಾಯಿಕ ಮನೆಗಳಂತಹ ರಚನೆಯನ್ನು ಮಾಡಿ, ಈ ಶಿಲ್ಪಗಳನ್ನು ಅಲ್ಲಿ ಸಂಯೋಜಿಸಿದ್ದರೆ ಬಸವಣ್ಣನ ಜನನದ ನೈಜ ಪರಿಸರ ದಕ್ಕುತ್ತಿತ್ತು, ಹೆಚ್ಚು ಅರ್ಥಪೂರ್ಣವೂ ಆಗುತ್ತಿತ್ತು. ಪ್ರಸ್ತುತ ಈ ಶಿಲ್ಪಕಲಾಕೃತಿಯು ಬಸವನ ಬಾಗೇವಾಡಿಯ ಬಸವ ಸ್ಮಾರಕದಲ್ಲಿ ಸಂಗ್ರಹಗೊಂಡಿದೆ.

೪.೨.೨. ಬಾಲಕ ಬಸವಣ್ಣನಿಂದ ಜನಿವಾರ ನಿರಾಕರಣೆ

ಮಹಾಬಲಿಪುರಂನ ಕಲಾವಿದ ರಾಜೇಂದ್ರನ್ ಅವರು ಪ್ರಸ್ತುತ ಕಲಾಕೃತಿಯನ್ನು ನಿರ್ಮಿಸಿದ್ದಾರೆ. ಬಾಲಕ ಬಸವಣ್ಣ ಉಪನಯನವನ್ನು ನಿರಾಕರಿಸುವ ಸನ್ನಿವೇಶವಿಲ್ಲಿದೆ. ಇಲ್ಲಿಯ ಉಬ್ಬು ಶಿಲ್ಪವು ಕಂಚಿನ ಲೋಹದಿಂದ ನಿರ್ಮಿತಿಗೊಂಡಿದೆ. ಈ ಕಲಾಕೃತಿಯನ್ನು ಬಸವಣ್ಣನ ಜನ್ಮಸ್ಥಳವಾದ ಬಾಗೇವಾಡಿಯಲ್ಲಿ ರೂಪಿಸಲಾಗಿದೆ. ನೋಡುಗರಿಗೆ ಚಿತ್ರದ ಎಡಬದಿಯಲ್ಲಿ ಮಾದಲಾಂಬಿಕೆ ಮತ್ತು ಮಾದರಸ ದಂಪತಿಗಳು ಬಾಲಕ ಬಸವಣ್ಣನಿಗೆ ಉಪನಯನವನ್ನು ಮಾಡಿಸಿಕೊಳ್ಳಲು ಸೂಚಿಸುತ್ತಿದ್ದು, ಬಸವಣ್ಣ ತನ್ನ ಎಡಗೈಯನ್ನು ಮೇಲೆತ್ತಿ, ತನ್ನ ಎದುರಿಗೆ ಇರುವ ಪುರೋಹಿತನ ಮಾತನ್ನು ನಿರಾಕರಿಸುತ್ತಿರುವ ಸನ್ನಿವೇಶವನ್ನು ಇಲ್ಲಿ ಕಾಣುತ್ತೇವೆ. ಬಸವಣ್ಣನ ಹಿಂದೆ ಹಲವು ಜನ ನಿಂತಿರುವ ದೃಶ್ಯವನ್ನು ಇಲ್ಲಿ ಕಾಣುತ್ತೇವೆ. ಸಂಯೋಜನೆಯ ದೃಷ್ಟಿಯಿಂದ ಈ ಚಿತ್ರದಲ್ಲಿ ದೂರ ಮತ್ತು ಸಾಮೀಪ್ಯದ ಅಭ್ಯಾಸವಿದೆ. ಪ್ರಧಾನ ಆಕೃತಿಗಳನ್ನು ಮುನ್ನೆಲೆಯಲ್ಲಿ ಚಿತ್ರಿಸಿರುವ, ಸಂಯೋಜನೆ ಬೆಂಬಲವಾಗಿರುವ ಇತರ ಆಕೃತಿಗಳನ್ನು ಗೌಣವಾಗಿಸುವ ರಚನಾ ತಂತ್ರ ಇಲ್ಲಿದೆ. ಆಂಗಿಕ ರಚನೆಗಳಲ್ಲಿ ಪಕ್ವತೆಯನ್ನು ಬಯಸುವ ಈ ಕಲಾಕೃತಿಯಲ್ಲಿ ಲೋಹವನ್ನು ನವಿರಾಗಿರಿಸಿರುವುದರಿಂದ ಆಕೃತಿಗಳು ಸ್ಪಷ್ಟವಾದ ಭಾವ ಸ್ಫುರಿಸುವುದರಲ್ಲಿ ಹಿಂದೇಟು ಹಾಕುತ್ತವೆ.

ಒರಟಾದ ಮೈವಳಿಕೆಗಳು ಶಿಲ್ಪದಲ್ಲಿ ಭಾವವನ್ನು ಸ್ಪಷ್ಟವಾಗಿ ಸ್ಫುರಿಸುತ್ತವೆ. ಈ ಕೃತಿಯು ಪ್ರಸ್ತುತ ಬಸವನ ಬಾಗೇವಾಡಿಯ ಬಸವ ಸ್ಮಾರಕದಲ್ಲಿ ಸಂಗ್ರಹಗೊಂಡಿದೆ.

೪.೨.೩. ಗುರುಗಳ ಸನ್ನಿಧಿಯಲ್ಲಿ ಅಧ್ಯಯನ ನಿರತ ಬಾಲಕ ಬಸವಣ್ಣ

ಈ ಉಬ್ಬುಶಿಲ್ಪವು ಬಸವಣ್ಣನ ಸ್ಮಾರಕದ ಸಂಗ್ರಹಗಳಲ್ಲಿ ಒಂದಾಗಿದ್ದು ಇದು ಬಾಗೇವಾಡಿಯಲ್ಲಿದೆ. ಬಸವಣ್ಣ ಕೂಡಲಸಂಗಮನಾಥನ ದೇವಸ್ಥಾನದಲ್ಲಿ ಜಾತವೇದ ಮುನಿಗಳ ಸಮ್ಮುಖದಲ್ಲಿ ಅಧ್ಯಯನ ಮಾಡುತ್ತಿರುವ ದೃಶ್ಯವನ್ನು ಒಳಗೊಂಡಿದೆ. ಚಿತ್ರದ ಬಲಬದಿಗೆ ಜಟಾಧಾರಿಯಾಗಿ ಕುಳಿತಿರುವ ವೃದ್ಧವ್ಯಕ್ತಿ ಜಾತವೇದಮುನಿಗಳಾಗಿದ್ದು, ಎಡಬದಿಯಲ್ಲಿ ಇಬ್ಬರು ದಂಪತಿಗಳಿದ್ದಾರೆ. ಅವರು ಬಸವಣ್ಣನ ಅಕ್ಕ-ಭಾವ ಅಕ್ಕನಾಗಮ್ಮ ಮತ್ತು ಶಿವನಾಗದೇವ ದಂಪತಿಗಳಿರಬಹುದೆಂದು ಊಹಿಸಬಹುದು. ಅವರ ಪಕ್ಕದಲ್ಲಿ ಬಸವಣ್ಣನ ಉಬ್ಬುಶಿಲ್ಪದ ಮೂರ್ತಿಯು ತನ್ನ ಎಡ ತೊಡೆಯ ಮೇಲೆ ತಾಳೆಯ ಗರಿಯೊಂದನ್ನು ಹಿಡಿದು, ಬಲಗೈಯಿಂದ ಬರೆಯುತ್ತಿರುವ ಭಂಗಿಯಲ್ಲಿದೆ. ಉಬ್ಬು ಆಕೃತಿಗಳು ಪ್ರಧಾನವಾಗಿ ಹಿನ್ನೆಲೆಯಿಂದ ಪ್ರಕಟವಾಗಿವೆ. ಆಕೃತಿಗಳಲ್ಲಿ ಅಂಗರಚನೆ ಪರಿಪಕ್ವತೆಯಿಂದ ಕೂಡಿದೆಯಲ್ಲದೇ ಭಾವಸ್ಪರ್ಶಿಯಾಗಿದೆ. ಸಂಯೋಜನೆಯು ಸಹ ಒಟ್ಟು ಸ್ಥಳಾವಕಾಶಕ್ಕೆ ಪೂರಕವಾಗಿ ಅರ್ಧ ವರ್ತುಲಾಕಾರವಾಗಿ ರಚನೆಯಾಗಿದೆ. ಒಟ್ಟಾರೆ ಶಿಲ್ಪವು ನೇತ್ರಾನಂದಕರವಾಗಿ ರೂಪುಗೊಂಡಿದೆ. ಪ್ರಸ್ತುತ ಈ ಶಿಲ್ಪಕಲಾಕೃತಿಯು ಬಸವನ ಬಾಗೇವಾಡಿಯ ಬಸವ ಸ್ಮಾರಕದಲ್ಲಿ ಸಂಗ್ರಹಗೊಂಡಿದೆ.

೪.೨.೪. ಮಂಗಳವಾಡೆಯತ್ತ ಬಸವಣ್ಣನ ಪ್ರಯಾಣ

ಬಸವಣ್ಣ ತನ್ನ ಅಧ್ಯಯನದ ಅಂತ್ಯದಲ್ಲಿ ಗುರುಗಳಿಗೆ ವಂದಿಸಿ ಅವರ ಆಶೀರ್ವಾದ ಪಡೆದು ಸೋದರ ಮಾವನೊಂದಿಗೆ ಕೂಡಲಸಂಗಮದಿಂದ ಹೊರಟು ಹೋಗುವ ಸನ್ನಿವೇಶವನ್ನು ಕಲಾವಿದ ಇಲ್ಲಿ ಪಂಚಲೋಹದ ಉಬ್ಬುಶಿಲ್ಪದಲ್ಲಿ ಒಡಮೂಡಿಸಿದ್ದಾನೆ. ಜಾತವೇದಮುನಿಗಳು ತಮ್ಮ ಬಲಗೈಯ ಹಸ್ತವನ್ನು ಎತ್ತಿ ಅವರ ಕೆಳಗೆ ಮಂಡಿಯೂರಿ ನಮಸ್ಕರಿಸುತ್ತಿರುವ ಬಸವಣ್ಣನನ್ನು ಆಶೀರ್ವದಿಸುವ ಘಟನೆಯನ್ನು ಇಲ್ಲಿ ಕಾಣುತ್ತೇವೆ. ಬಸವಣ್ಣನ ಹಿಂದೆ ಅವನ ಅಕ್ಕ ಅಕ್ಕನಾಗಮ್ಮ, ಶಿವನಾಗದೇವ ಮುಂತಾದವರಿದ್ದಾರೆ. ಒಂದೇ ನೋಟಕ್ಕೆ ನೋಡುಗರಿಗೆ ರಸಾಸ್ವಾದನೆಯನ್ನು ಒದಗಿಸುವ ಕಲಾಕೃತಿಯಿದಾಗಿದೆ. ಸ್ಥಳಾವಕಾಶದ ಕೇಂದ್ರದಲ್ಲಿ ಬಸವಣ್ಣನವರ ಬೀಳ್ಕೊಡುಗೆಯ ಸಂದರ್ಭ ರಚಿತಗೊಂಡಿದೆ. ಸಂಯೋಜನೆಯ ದೃಷ್ಟಿಯಿಂದ ಈ ಕಲಾಕೃತಿ ಮಹತ್ವದ್ದು. ಜಿಗ್‌ಜಾಗ್ ಬಗೆಯಲ್ಲಿ ಆಕೃತಿಗಳನ್ನು ಸಂಯೋಜಿಸಲ್ಪಟ್ಟಿರುವ ಈ ಉಬ್ಬುಶಿಲ್ಪದಲ್ಲಿ ಆಕೃತಿಗಳ ಭಾವಚಹರೆ ಗಮನಾರ್ಹವಾದದ್ದು. ಹಿನ್ನೆಲೆಯಲ್ಲಿ ಬಾಳೆಗಿಡ ಸೇರಿದಂತೆ ಪರಿಸರವನ್ನು ಸೂಚ್ಯವಾಗಿಸಿ ಶಿಲ್ಪವನ್ನು ರಚಿಸಲಾಗಿದೆ. ಈ ಕೃತಿಯೂ ಬಸವನ ಬಾಗೇವಾಡಿಯ ಬಸವ ಸ್ಮಾರಕದಲ್ಲಿ ಸಂಗ್ರಹಗೊಂಡಿದೆ

೪.೨.೫. ಅಶ್ವಾರೂಢ ಬಸವಣ್ಣನವರ ಕಂಚಿನ ಪ್ರತಿಮೆ

ಬೆಂಗಳೂರಿನ ವಿಧಾನಸೌಧದ ಬಳಿ ಚಾಲುಕ್ಯ ವೃತ್ತದ ಪಾರ್ಶ್ವದಲ್ಲಿ ಪ್ರತಿಷ್ಠಾಪಿತವಾಗಿರುವ

ಅಶ್ವಾರೂಢ ಬಸವೇಶ್ವರ ಪ್ರತಿಮೆಯು ಜನರ ಆಕರ್ಷಣೆಯ ಕೇಂದ್ರಬಿಂದುವಾಗಿದೆ. ತಲೆಯ ಮೇಲೆ ಬಂಗಾರವರ್ಣದ ಕುಸುರಿ ಕೆತ್ತನೆಯ ಕಿರೀಟ, ಹಣೆಯಲ್ಲಿ ಕಂಡೂ ಕಾಣದಂತಿರುವ ವಿಭೂತಿ, ಶಾಂತಮುಖಮುದ್ರೆ, ಕೊರಳಲ್ಲಿ ರುದ್ರಾಕ್ಷಿ ಮತ್ತು ಇಷ್ಟಲಿಂಗ ಧರಿಸಿ ಕುದುರೆಯ ಮೇಲೆ ಬಸವಣ್ಣ ಕುಳಿತಿರುವ ಪ್ರತಿಮೆಯು ಸುಂದರವಾಗಿ ನಿರ್ಮಿತವಾಗಿದೆ. ತನ್ನ ಬಲಗೈಯ ಹಸ್ತವನ್ನು ಎತ್ತಿ ಆಶೀರ್ವಾದ ಮಾಡುತ್ತಿರುವಂತೆಯೂ, ತನ್ನ ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದು ಕುಳಿತಿರುವ ಭಂಗಿ ಶಿಲ್ಪದ ನಿಯಮಾನುಸಾರವಾಗಿದೆ.

ಪ್ರತಿಮೆಯಲ್ಲಿ ತಕ್ಷಣಕ್ಕೆ ಗೋಚರವಾಗುವುದು ಬಸವಣ್ಣ ಧರಿಸಿದ ಮೇಲುಡುಗೆ. ಇದು ಒಂದು ಬಗೆಯಲ್ಲಿ ಮೈಸೂರಿನ ಕೃಷ್ಣರಾಜ ವೃತ್ತದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮೇಲುಡುಗೆ ಮೈವಳಿಕೆಯನ್ನೇ ಹೊಂದಿದೆ. ಮುಖದಲ್ಲಿ, ಅಂಗಾಂಗದಲ್ಲಿ, ಉಡುಗೆ-ತೊಡುಗೆಯಲ್ಲಿ, ಆಭರಣಗಳಲ್ಲಿ ಅತ್ಯಂತ ಸೂಕ್ಷ್ಮವಾದ ಕುಸುರಿಯ ಕೆಲಸವಿದೆ. ಭಾವಪ್ರಚೋದಕವಾಗಿರುವ ಬಸವಣ್ಣ ಕುಳಿತಿರುವ ಕುದುರೆಯು ಬಲಿಷ್ಠವಾದ ಮಾಂಸಖಂಡಗಳನ್ನು ಹೊಂದಿದ್ದು ಅದರ ಎಲ್ಲ ಅವಯವಗಳು ಪ್ರಮಾಣಬದ್ಧವಾಗಿವೆ. ಲಗಾಮು ಹಿಡಿದು ಎಳೆದುದರಿಂದ ಮುಖದಲ್ಲಿ ಉಂಟಾದ ನೋವಿನ ಪ್ರತಿಬಿಂಬವು ಕುದುರೆಯ ಮೂರ್ತಿಯಲ್ಲಿ ಕಾಣುತ್ತದೆ. ಬಲಗಾಲನ್ನು ಮಡಿಚಿ ಚಲನೆಯಲ್ಲಿದ್ದ ಕುದುರೆಯು ಒಮ್ಮೆಗೆ ನಿಂತ ಭಂಗಿಯಲ್ಲಿರುವಂತೆ ಕಾಣುತ್ತದೆ. ಉತ್ತಮ ಶಿಲ್ಪಗಳ ಸಾಲಿನಲ್ಲಿ ಪ್ರಸ್ತುತ ಶಿಲ್ಪವು ಸೇರುತ್ತದೆ. ಬೆಂಗಳೂರಿನ ಬಸವೇಶ್ವರ ವೃತ್ತದಲ್ಲಿ ಈ ಶಿಲ್ಪಕೃತಿ ಅನಾವರಣಗೊಂಡಿದೆ.

೪.೨.೬. ಸಂಸತ್ ಭವನದ ಮುಂಭಾಗದಲ್ಲಿರುವ ಅಶ್ವಾರೂಢ ಬಸವಣ್ಣನ ಕಂಚಿನ ಪ್ರತಿಮೆ

ದೆಹಲಿಯ ಸಂಸತ್‌ಭವನದ ಬಳಿ ಬಸವಣ್ಣನವರ ಕಂಚಿನ ವಿಗ್ರಹವನ್ನು ಸ್ಥಾಪಿಸಲು ರಾಜಕೀಯ, ಧಾರ್ಮಿಕ ನಾಯಕರು ಸಾಕಷ್ಟು ಹೋರಾಟ ನಡೆಸಬೇಕಾಯಿತು. ಈ ಹೋರಾಟದ ಫಲವಾಗಿ ಬೆಂಗಳೂರಿನ ಚಾಲುಕ್ಯ ವೃತ್ತದಲ್ಲಿರುವ ಕಂಚಿನ ಬಸವಣ್ಣನವರನ್ನು ಹೋಲುವಂತಹ ಬಸವಣ್ಣನವರ ವಿಗ್ರಹವನ್ನು ಸಂಸತ್ತಿನ ಮುಂಭಾಗದಲ್ಲಿ ಪ್ರತಿಷ್ಠಾಪಿಸಲಾಗಿದೆ.

ಈ ಬಸವಣ್ಣನವರ ಕಂಚಿನ ವಿಗ್ರಹಕ್ಕೆ ಅಸಿಡ್ ವಾಶ್ ಮಾಡಿ, ಒಂದು ಬಗೆಯ ದಟ್ಟ ಕಂದು, ಹಸಿರುವರ್ಣವನ್ನು ಕೃತಕವಾಗಿ ಸೃಷ್ಟಿಸಿರುವುದರಿಂದ ವಿಗ್ರಹಕ್ಕೆ ಪ್ರಾಚೀನತೆಯ ಮೆರಗು ಬಂದಿದೆ. ಬಸವಣ್ಣನ ಮೂರ್ತಿ ಮತ್ತು ಕುದುರೆಯ ಬಣ್ಣವು ಒಂದೇ ಆಗಿದೆ. ತಲೆಯಲ್ಲಿ ಅಲಂಕೃತ ಲೋಹದ ಕಿರೀಟ, ಹಣೆಯಲ್ಲಿ ಪೇಂಟ್‌ನಿಂದ ಲೇಪಿಸಿದ ಬಿಳಿಬಣ್ಣದ ವಿಭೂತಿ, ಕಿವಿಯಲ್ಲಿ ದುಂಡಗಿನ ಕರ್ಣಕುಂಡಲಗಳು, ಮುಖದಲ್ಲಿ ನಸುನಗೆಯನ್ನು ಬೀರಿ ಪ್ರಶಾಂತವಾಗಿರುವ ಭಾವವನ್ನು ಹೊಂದಿದ ಬಸವಣ್ಣ ತನ್ನ ಬಲಗೈ ಹಸ್ತವನ್ನು ಕೆಳಭಾಗಕ್ಕೆ ಇಳಿಸಿ ಆಶೀರ್ವದಿಸುವ ಭಂಗಿಯಲ್ಲಿದ್ದಾನೆ. ಬಸವಣ್ಣನ ಒಟ್ಟು ಆಕೃತಿಯ ಪ್ರಮಾಣವನ್ನು ಗಮನಿಸಿದರೆ ಆತನ ಬಲಗೈ ಹಸ್ತದ ಪ್ರಮಾಣ ತುಸು ಹೆಚ್ಚಾಗಿರುವಂತೆ ಕಂಡುಬರುವುದರ ಹಿಂದೆ ಯಥಾದರ್ಶನದ ನೋಟದ ಪರಿಣಾಮವಾಗಿ ಬಲಗೈ ಹಿಂದೆ ದೇಹ ಮತ್ತು ರುಂಡ ಚಿಕ್ಕದಾಗಿ

ತೋರುತ್ತದೆ. ತುಂಬುತೋಳಿನ ನಿಲುವಂಗಿ, ಕೊರಳಲ್ಲಿ ಎರಡು ಎಳೆಗಳ ರುದ್ರಾಕ್ಷಿಯ ಮಾಲೆ, ವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ನಿಲುವಂಗಿಯನ್ನು ಧರಿಸಿದ ಬಸವಣ್ಣನ ಮೂರ್ತಿ ಆಕರ್ಷಕವಾಗಿದೆ. ನಿಲುವಂಗಿಯ ಬಲತೋಳಿನ ಮೇಲೆ ಮುತ್ತು, ಮಣಿಗಳಿಂದ ಅಲಂಕೃತವಾದ ಕಸೂತಿ, ಮತ್ತು ಬಲಗಾಲಿನ ಪಾದದವರೆಗೆ ಇಳಿಯಬಿದ್ದ ಮೇಲುವಸ್ತ್ರದ ಕೊನೆಯ ಅಂಚಿನ ಕುಸುರಿ ಕೆಲಸವು ಕಲಾವಿದನ ತಾಳ್ಮೆ ಮತ್ತು ಪರಿಶ್ರಮವನ್ನು ಪ್ರಕಟಿಸಿದೆ. ಕುದುರೆಯು ತನ್ನ ಬಲಗಾಲನ್ನು ಮಡಿಚಿ ತುಸು ಮೇಲಕ್ಕೆತ್ತಿರುವುದು ಚಲನೆಯ ಸ್ಥಿತಿಯನ್ನು ಸೂಚಿಸುತ್ತದೆ. ಬಲಿಷ್ಟವಾದ ಕಾಲಿನ ಮತ್ತು ಕೊರಳಿನ ಮಾಂಸಖಂಡಗಳು ಗಮನಸೆಳೆಯುತ್ತವೆ. ಕುದುರೆಗೆ ತೊಡಿಸಿರುವ ಜೀನು, ವಸ್ತ್ರಗಳ ಅಲಂಕಾರಗಳು ಆಕರ್ಷಕವೆನ್ನಿಸಿವೆ.

೪.೨.೭. ನಾಣ್ಯದ ಮೇಲೆ ಬಸವಣ್ಣನ ಉಬ್ಬುಶಿಲ್ಪ

ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಆಯಾ ದೇಶಗಳ ವ್ಯವಹಾರಗಳಿಗೆ ನಾಣ್ಯಗಳನ್ನು ಬಳಸುವ ಪದ್ಧತಿ ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಭಾರತದ ಸಂದರ್ಭದಲ್ಲಿ ರಾಜಪ್ರಭುತ್ವದಲ್ಲಿ ರಾಜರು ತಮ್ಮ ಆಡಳಿತ ವ್ಯವಸ್ಥೆಯ ಒಂದು ಭಾಗವನ್ನಾಗಿ ನಾಣ್ಯಗಳನ್ನು ಚಲಾವಣೆಗೆ ತಂದಿರುವುದು ಕಂಡುಬರುತ್ತದೆ. ಅವುಗಳಲ್ಲಿ ರಾಜಮನೆತನದ ಮುದ್ರೆಗಳು, ಇಲ್ಲವೆ ದೇವ ದೇವತೆಗಳ ಚಿತ್ರಗಳನ್ನು ಮುದ್ರಿಸಲಾಗಿದೆ. ಬಸವಣ್ಣನ ಭಾವಚಿತ್ರವನ್ನು ಭಾರತದಲ್ಲಿ ಐದು ರೂಪಾಯಿ ಮುಖಬೆಲೆಯ ನಾಣ್ಯದ ಮೇಲೆ ಉಬ್ಬುಶಿಲ್ಪದ ಮಾದರಿಯಲ್ಲಿ ನಿರ್ಮಿಸಲಾಗಿದೆ. ನಾಣ್ಯದಲ್ಲಿ ಮಹಾತ್ಮ ಬಸವೇಶ್ವರ ಎಂದು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮುದ್ರಿಸಲಾಗಿದೆ. ಬಸವಣ್ಣನ ಇದೇ ಚಿತ್ರವನ್ನು ನೂರು ರೂಪಾಯಿ ಮುಖಬೆಲೆಯ ನಾಣ್ಯದ ಮೇಲೂ ಮುದ್ರಿಸಲಾಗಿದೆ. ತಲೆಯಲ್ಲಿ ಕಿರೀಟ, ಹಣೆಯಲ್ಲಿ ರುದ್ರಾಕ್ಷಿ, ಇಷ್ಟಲಿಂಗ ಧರಿಸಿದ ಬಸವಣ್ಣ ತನ್ನ ಮುಖವನ್ನು ಬಲಭಾಗಕ್ಕೆ ಮಾಡಿರುವಂತೆ ರೂಪಿಸಲಾಗಿದೆ. ಅರ್ಧಭುಜಾಕೃತಿಯ ಶಿಲ್ಪದ ಮಾದರಿಯಲ್ಲಿರುವ ಬಸವಣ್ಣನ ಈ ಚಿತ್ರದಲ್ಲಿ ಆತನ ಮುಖಭಾವವು ಪ್ರಸನ್ನತೆಯಿಂದ ಕೂಡಿದೆ.

೪.೩. ಕಾಷ್ಠ ಮಾಧ್ಯಮದಲ್ಲಿ ಬಸವಣ್ಣನವರು

"ನಮ್ಮ ದೇಶದಲ್ಲಿ ಚಿತ್ರಕಲೆಗೆ, ಶಿಲ್ಪಕಲೆಗೆ ಸುದೀರ್ಘವಾದ ಚರಿತ್ರೆ ಮತ್ತು ಪರಂಪರೆ ಇದೆ. ನಮ್ಮ ಜನ ತಮ್ಮ ಬದುಕಿನ ಒಂದು ಭಾಗವಾಗಿ ಈ ಕಲೆಯನ್ನು ಪೋಷಿಸಿಕೊಂಡು ಬಂದಿದ್ದಾರೆ. ಈ ಜನ ಸಾಮಾನ್ಯರ ಸೌಂದರ್ಯ ಪ್ರಜ್ಞೆಗೆ ಪೂರಕವಾಗಿ ಅವರ ಜೀವನದ ಒಡನಾಡಿಯಾಗಿ ಇದು ಬೆಳೆದು ಬಂದಿರುವುದು ಚಾರಿತ್ರಿಕ ಸತ್ಯವಾಗಿದೆ. ಮಾನವ ತನ್ನ ಜೀವಿತಾವಧಿಯಲ್ಲಿ ಅನೇಕ ಆವಿಷ್ಕಾರಗಳನ್ನು ಕಂಡು, ಅನುಭವಿಸಿ ಅವುಗಳೊಂದಿಗೆ ತನ್ನ ಒಡನಾಟವನ್ನು ಇಟ್ಟುಕೊಂಡಿಕೊಂಡಿದ್ದಾನೆ. ಜೊತೆಗೆ ಆಂತರಿಕ ಭಾವನೆಗಳನ್ನು ವಿಕಾಸಗೊಳಿಸಿಕೊಳ್ಳುವುದರ ಜೊತೆಗೆ ಅನೇಕ ಮನದ ಹಂಬಲಗಳನ್ನು ಅಭಿವ್ಯಕ್ತಿಸಲು ಕಲೆಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಅಂತಹ ಕಲೆಗಳಲ್ಲಿ ದೃಶ್ಯಕಲೆಗಳು ಮುಖ್ಯವಾದವು. ಹೀಗೆ ರಾಜ್ಯಾಶ್ರಯದಲ್ಲಿ ಬೆಳೆದ ಕರಕುಶಲೆಯು ಹೊರತಾಗಿಲ್ಲ. ಭಾರತೀಯ ಕಲಾ ಪರಂಪರೆಯಲ್ಲಿ ಕರ್ನಾಟಕವು ತನ್ನದೇ ಕಲಾ ವಿಶಿಷ್ಟತೆಯನ್ನು ಉಳಿಸಿಕೊಂಡು ಬಂದಿದೆ. ತನ್ನ ನೆಲೆಯಲ್ಲಿ ಅನೇಕ

ಕರಕುಶಲ ಕಲೆಗಳನ್ನು ನಗರಿಕತೆಯ ಹಾದಿಯಿಂದ ಹಿಡಿದು ಆಧುನಿಕ ಕಾಲದವರಿಗೆ ವಿವಿಶ ಕಲಾತ್ಮಕ ನೆಲೆಯಲ್ಲಿ ಸೌಂದರ್ಯ ಪ್ರಜ್ಞೆಯ ವ್ಯವಹರಿಕ ನೆಲೆಗಳಲ್ಲಿ ಹಾಗೂ ಇನ್ನೂ ಅನೇಕ ಕರಣಗಳಿಂದಾಗಿ ಸೃಷ್ಟಿಸಿಕೊಂಡು ಬಂದಿರುವುದು ಕಾಂಬಹುದು. ಕಲಗಟ್ಟಿಗೆ ಕಲೆ, ಗೋಕಾಕ ಕಲೆ, ಚನ್ನಪಟ್ಟಣದ ಗೊಂಬೆಗಳು, ಬೀದರಿನ ಬಿದರಿನ ಕಲೆ, ಕಿನ್ನಾಳ ಕಲೆ, ಮೈಸೂರಿನ ಹುದುಗು ಕಲೆ, ಹಾಗೂ ಇತ್ಯಾದಿ ಕರಕುಶಲ ಕಲೆಗಳು ಈ ನಾಡಿನ ಕಲೆಯ ಕೊರತೆಯನ್ನು ಭತ್ತದಂತೆ ಜೀವಂತವಾಗಿರಿಸಿಕೊಂಡಿವೆ."[೧]

ಕರಕುಶಲ ಕಲೆಯಲ್ಲಿ ಹಲವು ಮಾಧ್ಯಮಗಳಿದ್ದು, ಪ್ರಸ್ತುತ ಅವುಗಳಲ್ಲೊಂದಾದ ಈ ಕಾಷ್ಠ ಮಾಧ್ಯಮವೆಂದರೆ ಕಲಾಕೃತಿಗಳನ್ನು ಕಟ್ಟಿಗೆಯಲ್ಲಿ ನಿರ್ಮಿಸುವ ಮಾಧ್ಯಮವೆಂದರ್ಥ. ಈ ಮಾಧ್ಯಮದಡಿಯಲ್ಲಿ ಬರುವ ಒಂದು ಕಲಾಪ್ರಕಾರವೇ ಹುದುಗು ಕಲೆ. ಇದರಲ್ಲಿ ಶ್ರೀಗಂಧ, ಬೀಟೆ, ಮತ್ತಿ, ಹೊನ್ನೆ, ತೇಗದ ಮರಗಳನ್ನು ಹೆಚ್ಚು ಬಳಸಲಾಗುತ್ತದೆ. ಇವು ಬಹುಕಾಲ ಬಾಳಿಕೆ ಬರುವುದಾದರೂ ಶಿಲೆ ಮತ್ತು ಲೋಹ ಮಾಧ್ಯಮಗಳಷ್ಟು ಕಾಲ ಬಾಳಲಾರವು. ಕಾಷ್ಠಮಾಧ್ಯಮದಲ್ಲಿ ನಿರ್ಮಿತವಾಗುವ ಕಲಾಕೃತಿಗಳಲ್ಲಿ ತಲೆಬಾಗಿಲು, ಕಿಟಕಿಗಳು, ತೊಲೆ, ಕಂಭಗಳು ಮುಂತಾದ ಒಳಾಂಗಣ ನಿರ್ಮಿತಿಗಳೇ ಹೆಚ್ಚು ಕಂಡುಬರುತ್ತವೆ. ಇತ್ತೀಚಿನ ದಿನಗಳಲ್ಲಿ ನೆನಪಿನ ಕಾಣಿಕೆ ಕೊಡುವ ಸ್ಮರಣಿಕೆಗಳಲ್ಲಿ ಕಾಷ್ಠಮಾಧ್ಯಮದ ಶಿಲ್ಪಗಳನ್ನು ಬಳಸಿಕೊಳ್ಳಲಾಗುತ್ತಿದೆ. ಈ ಮಾಧ್ಯಮದಲ್ಲಿ ಕಲಾವಿದರು ತಮ್ಮ ಅಳತೆಗೆ ತಕ್ಕಂತೆ ಹಲಗೆಗಳ ಮೇಲೆ ಪೆನ್ಸಿಲ್‌ನಿಂದ ಅಥವಾ ಪೆನ್‌ನಿಂದ ಲೈನ್ ಡ್ರಾಯಿಂಗ್ ಮಾಡಿಕೊಂಡು, ನಂತರ ತಮ್ಮ ಸಲಕರಣೆಯಿಂದ ಮೃದುವಾಗಿ ಮತ್ತು ಸೂಕ್ಷ್ಮವಾಗಿ ತಮಗೆ ಬೇಕಿಲ್ಲದ ಭಾಗಗಳನ್ನು ಕತ್ತರಿಸಿ ಹಾಕುತ್ತಾರೆ. ಉಳಿದ ಭಾಗದಲ್ಲಿ ತಮಗೆ ಬೇಕಾದ ರೀತಿಯಲ್ಲಿ ಸೂಕ್ಷ್ಮವಾದ ರೀತಿಯಲ್ಲಿ ಮೂರ್ತಿಯ ವಿವಿಧ ಭಾಗಗಳನ್ನು ಕೆತ್ತನೆ ಮಾಡುತ್ತಾರೆ. ಇಲ್ಲಿ ಹುದುಗು ಕಲೆಯಲ್ಲಿ ರೂಪುಗೊಂಡ ಬಸವಣ್ಣನವರ ಚಿತ್ರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೪.೩.೧. ಸಿಂಹಾಸನದಲ್ಲಿ ಕುಳಿತ ಬಸವಣ್ಣನವರು – ೧ & ೨

ಸಿಂಹಾಸನದ ಮೇಲೆ ಸ್ವರ್ಣದ ಕಿರೀಟ ಧರಿಸಿ ಕುಳಿತಿರುವ ಬಸವಣ್ಣನವರು ಆಲೋಚನೆಯಲ್ಲಿ ತೊಡಗಿರುವಂತೆ ಭಾವ ಇಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಈ ಕೃತಿಯಲ್ಲಿ ಮರದ ತುಣುಕು ಹುದುಗಿಸಿರುವುದನ್ನು ಗಮನಿಸಿದರೆ ಯಥಾದರ್ಶನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಲಾಗಿದೆ. ಸುವರ್ಣ ಪ್ಲಾಸ್ಟಿಕ್ ವಸ್ತುವನ್ನು ಚಿತ್ರದಲ್ಲಿನ ಬಸವಣ್ಣ, ಶಿವ ಮತ್ತು ಪಾರ್ವತಿಯರ ಆಕೃತಿಗಳ ಮುಖ, ದೇಹ ಮತ್ತು ಕೈಗಳಿಗೆ ಬಳಸಿಕೊಳ್ಳಲಾಗಿದೆ. ಇನ್ನುಳಿದಂತೆ ಕೇಸರಿ, ತೆಳು ಹಳದಿ, ಕಂದುಗೆಂಪು, ಬಂಗಾರದ ವರ್ಣಗಳಿಗೆ ಆಯಾ ಕಟ್ಟಿಗೆಯ ತುಣುಕುಗಳನ್ನು ಸುಂದರವಾಗಿ ಹುದುಗಿಸಿ ರಚಿಸಲಾಗಿದೆ. ಅದರಂತೆ ಕೂಡಲಸಂಗಮ ಬಸವಣ್ಣನ ಐಕ್ಯಸ್ಥಳದ ಮಂಟಪವನ್ನು ರಚಿಸಿದ್ದು, ಈ ಚಿಕ್ಕ ಆಕೃತಿಯೊಳಗೆ ಇಷ್ಟಲಿಂಗವು ಎದ್ದು ಕಾಣುವಂತೆ ಕಂದು ಬಣ್ಣದ ಕಟ್ಟಿಗೆಗಳ ತುಣುಕುಗಳನ್ನು ಹುದುಗಿಸಿರುವುದು ಕಲಾವಿದನ ಸೂಕ್ಷ್ಮವಾದ ಕಲಾಕುಸುರಿಯನ್ನು ಗಮನಿಸಬಹುದು. ದೂರದಲ್ಲಿ ಬಿಳಿವರ್ಣದ ಹಂಸ ಪಕ್ಷಿಗಳು ನೀರಿನಲ್ಲಿ ತೇಳುತ್ತಿರುವಂತಿದ್ದು, ಇಲ್ಲಿ ಕಲಾವಿದನು ಸಂಯೋಜನೆಯ ಹಿನ್ನೆಲೆಯಲ್ಲಿ ಗುಡ್ಡದ ಮೇಲೆ ತನ್ನ ಕಲ್ಪನೆಯ

೦೧. ಡಾ. ಶಶಿಕಲಾ ನಂದನಗೌಡ : ಕರ್ನಾಟಕದ ಹುದುಗು ಕಲೆ (ಅಪ್ರ.ಪಿಎಚ್.ಡಿ.ಮಪ್ರ., ಕ.ವಿ.ವಿ. ಹಂಪಿ). ಪು-೨

ಸಂಗಮೇಶ್ವರ ದೇವಾಲಯವನ್ನು ಚಿತ್ರಿಸಿರುವುದು ವಿಶೇಷವೆನಿಸುತ್ತದೆ. ಹಾಗೆಯೇ ಆಕಾಶದಲ್ಲಿ ಪರಮೇಶ್ವರ ಮತ್ತು ಪಾರ್ವತಿ ಇಬ್ಬರೂ ಬಲಗೈಯಿಂದ ಆಶೀರ್ವದಿಸುತ್ತಿರುವ ರೀತಿಯಲ್ಲಿ ಈ ಕಲಾಕೃತಿಯನ್ನು ರಚಿಸಲಾಗಿದೆ. ಈ ಎರಡೂ ಕಲಾಕೃತಿಗಳು ಕಾವೇರಿ ಎಂಪೋರಿಯಮ್, ಮೈಸೂರಿನಲ್ಲಿ ಮಾರಾಟಕ್ಕಾಗಿ-ರಿಸಲಾಗಿದೆ.

೪.೪. ಫೈಬರ್ ಮಾಧ್ಯಮದಲ್ಲಿ ಬಸವಣ್ಣನವರು

ಫೈಬರ್ ಮಾಧ್ಯಮವು ಈಚಿನ ದಿನಗಳಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿದೆ. ಅತ್ಯಂತ ಕಡಿಮೆ ಸಮಯದಲ್ಲಿ ನಿರ್ಮಿಸಬಹುದಾದ ಈ ಫೈಬರ್ ಮಾಧ್ಯಮದ ಚಿತ್ರಗಳು ಪರಿಣಾಮದಲ್ಲಿ ಶಿಲಾಮಾಧ್ಯಮ, ಕಾಷ್ಠಮಾಧ್ಯಮ ಮತ್ತು ಲೋಹ ಮಾಧ್ಯಮಗಳನ್ನು ಮೀರಿಸಬಲ್ಲವಾಗಿರುತ್ತವೆ. ಗಾತ್ರದಲ್ಲಿ ಎಷ್ಟು ದೊಡ್ಡದಿದ್ದರೂ ತೂಕದಲ್ಲಿ ಲೋಹ ಮತ್ತು ಶಿಲೆಯ ಮಾಧ್ಯಮದ ಕಲಾಕೃತಿಗಳಿಗಿಂತ ಕಡಿಮೆಯಾಗಿರುತ್ತವೆ. ಆದ್ದರಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಈ ಕಲಾಕೃತಿಗಳನ್ನು ಸುಲಭವಾಗಿ ಸ್ಥಳಾಂತರಿಸಬಹುದಾಗಿದೆ. ರೆಜಿನ್ ಎನ್ನುವ ರಾಸಾಯನಿಕ ವಸ್ತುವು ಗಟ್ಟಿಯಾಗಲು ನೀಲಿದ್ರಾವಣದ ಜೊತೆಗೆ ಕೆಟಲಿಸ್ಟ್‌ನ್ನು (ವೇಗವರ್ಧಕ) ಬಳಸುತ್ತಾರೆ. ಆಗ ರೆಜಿನ್ ಘನವಾಗಿ ಪರಿವರ್ತಿತವಾಗುತ್ತದೆ. ನಮಗೆ ಬೇಕಾದ ಕಲಾಕೃತಿಯನ್ನು ನಿರ್ಮಿಸಲು ಮೊದಲು ಮಣ್ಣಿನಿಂದ ಕಲಾಕೃತಿಯನ್ನು ತಯಾರಿಸಿ, ನಂತರ ಫೈಬರ್ ಮತ್ತು ಪಿ.ಓ.ಪಿ. ಯಿಂದ ಮೌಲ್ಡ್ ಮಾಡಿಕೊಂಡು (ಅಚ್ಚು ತಯಾರಿಸಿ) ಆಯಾ ಭಾಗಗಳನ್ನು ಕತ್ತರಿಸಲಾಗುತ್ತದೆ. ಕತ್ತರಿಸಿದ ಭಾಗಗಳಿಗೆ ರೆಜಿನ್‌ನಿಂದ ಸವರಿ ಆಕೃತಿಗಳನ್ನು ತಯಾರಿಸಿ, ಮತ್ತೆ ತುಂಡಾದ ಆಕೃತಿಯ ಬಿಡಿಭಾಗಗಳನ್ನು ಕ್ರಮಬದ್ಧವಾಗಿ ಜೋಡಿಸಿ, ಬೆಸೆಯಲಾಗುತ್ತದೆ. ಫೈಬರ್ ಮಾಧ್ಯಮದಲ್ಲಿ ಸಿದ್ಧಪಡಿಸುವ ಕಲಾಕೃತಿಯ ತಯಾರಿಕೆ ವಿಧಾನ ಮತ್ತು ಲೋಹಮಾಧ್ಯಮದಲ್ಲಿ ಕಲಾಕೃತಿಗಳ ನಿರ್ಮಾಣದ ವಿಧಾನಗಳು ಒಂದೇ ಆಗಿವೆ.

೪.೪.೧. ಗುರುಗಳ ಸನ್ನಿಧಿಯಲ್ಲಿ ಧ್ಯಾನನಿರತ ಬಸವಣ್ಣ

ಈ ಕಲಾಕೃತಿಯು ಬಸವ ಶರಣ ಕಲಾ ಸಂಗ್ರಹಾಲಯ, ಕೂಡಲಸಂಗಮದಲ್ಲಿದೆ. ಫೈಬರ್ ಗ್ಲಾಸ್ ಮಾಧ್ಯಮದಲ್ಲಿ ನಿರ್ಮಿತವಾದ ಉಬ್ಬುಶಿಲ್ಪವಿದಾಗಿದೆ. ಕೂಡಲಸಂಗಮದಲ್ಲಿ ಜಾತವೇದ ಮುನಿಗಳು ಬಸವಣ್ಣನಿಗೆ ತಮ್ಮ ಕೈಯನ್ನೆತ್ತಿ ಆಶೀರ್ವದಿಸುವ ಭಂಗಿಯಲ್ಲಿ ಬೋಧನೆ ಮಾಡುತ್ತಿರುವ ಸನ್ನಿವೇಶವನ್ನು ಪ್ರಸ್ತುತ ಕಲಾಕೃತಿ ಹೊಂದಿದೆ. ಚರ್ಮದ ಆಸನದ ಮೇಲೆ ಕುಳಿತಿರುವ ಮುನಿಗಳು ತಲೆಯಲ್ಲಿ ಜಟೆ, ಗಡ್ಡ ಮೀಸೆಯನ್ನು ಬಿಟ್ಟಿದ್ದಾರೆ. ಅವರ ಬಲಬದಿಯಲ್ಲಿ ಗುಡಿಸಲು ಇದ್ದು ಆಶ್ರಮದ ಪ್ರಶಾಂತತೆಯನ್ನು ಸೂಚಿಸಲು ಜಿಂಕೆಯ ಉಬ್ಬುಚಿತ್ರವನ್ನು ಇಲ್ಲಿ ಕೆತ್ತಲಾಗಿದೆ. ಮುನಿಗಳ ಎದುರಿಗೆ ಆಗತಾನೆ ಹರೆಯಕ್ಕೆ ಕಾಲಿಡುತ್ತಿರುವ ಬಸವಣ್ಣ ಪದ್ಮಾಸನದಲ್ಲಿ ಕುಳಿತು, ತನ್ನೆರಡು ಕೈಗಳನ್ನು ತೊಡೆಯ ಮೇಲಿಟ್ಟು, ಕಣ್ಣುಮುಚ್ಚಿ ಧ್ಯಾನಸಮಾಧಿಯಲ್ಲಿ ತಲ್ಲೀನನಾಗಿರುವ ದೃಶ್ಯವಿದೆ. ಆತನ ಮುಖದಲ್ಲಿ ಕಂಡುಬರುವ ಶಾಂತತೆ ಇಡೀ ಕಲಾಕೃತಿಯ ಕೇಂದ್ರಬಿಂದುವಾಗಿರುವುದಕ್ಕೆ, ಯಥಾದರ್ಶನ ನೀತಿಯನ್ವಯ ಇಲ್ಲಿನ ಸ್ಥಳಾವಕಾಶವನ್ನು

ಸಮರ್ಪಕವಾಗಿ ದುಡಿಸಿಕೊಂಡಿರುವುದು ಸಹ ಕಾರಣ. ಪ್ರಧಾನ ಆಕೃತಿಗಳನ್ನು ಮುನ್ನೆಲೆಗೆ ತಂದಿರುವ, ಹಿನ್ನೆಲೆಯಲ್ಲಿ ಆಶ್ರಮವನ್ನು ಸೂಚ್ಯವಾಗಿಸಿರುವುದರಿಂದ ಈ ಉಬ್ಬುಶಿಲ್ಪವು ನೇತ್ರಾನಂದಕರವಾಗಿದೆ.

೪.೪.೨. ಗಂಗಾಂಬಿಕೆಯು, ಬಸವಣ್ಣನನ್ನು ನೀಲಾಂಬಿಕೆಯನ್ನು ಮದುವೆಯಾಗಲು ಒಪ್ಪಿಸುತ್ತಿರುವುದು

ಇದೊಂದು ಅಪರೂಪದ ಕಲಾಕೃತಿಯಾಗಿದೆ. ಪ್ರಸ್ತುತ ಕಲಾಕೃತಿಯು ಕೂಡಲಸಂಗಮದ ಬಸವ ಶರಣ ಕಲಾ ಸಂಗ್ರಹಾಲಯದಲ್ಲಿದೆ. ಫೈಬರ್ ಗ್ಲಾಸ್ ಮಾಧ್ಯಮದಲ್ಲಿ ನಿರ್ಮಿತವಾದ ಈ ಕಲಾಕೃತಿಯು ನೈಜತೆಯಿಂದ ಕೂಡಿದೆ. ಮಂಚದ ಮೇಲೆ ಬಸವಣ್ಣನ ಮೊದಲ ಪತ್ನಿ ಮಲಗಿದ ಭಂಗಿಯಲ್ಲಿದ್ದು ತನ್ನ ಎಡಗಾಲನ್ನು ಮಡಿಚಿ, ಬಲಗಾಲನ್ನು ಚಾಚಿದ್ದಾಳೆ. ಆಕೆ ತನ್ನ ಎಡಗೈಯಿಂದ ಬಸವಣ್ಣನ ಬಲಗೈಯನ್ನು ಹಿಡಿದಿದ್ದಾಳೆ. ಅವರಿಬ್ಬರ ಕೈಯನ್ನು ನೀಲಾಂಬಿಕೆ ಹಿಡಿದಿದ್ದಾಳೆ. ಬಿಜ್ಜಳನ ಸಾಕುತಂಗಿ ನೀಲಾಂಬಿಕೆಯನ್ನು ಮದುವೆಯಾಗುವಂತೆ ಕೋರುತ್ತಿರುವ ಗಂಗಾಂಬಿಕೆಯ ಮುಖಭಾವವನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಾದರೆ ಕಲಾವಿದನ ಪರಿಶ್ರಮ ಸಾರ್ಥಕವಾದಂತೆಯೇ ಸರಿ. ಅದು ಇಲ್ಲಿ ಸಾಧ್ಯವಾಗಿದೆ. ತಲೆಯಲ್ಲಿ ಹಿಂದೆ ಬಾಚಿದ ಕೂದಲು, ಹಣೆಯಲ್ಲಿ ವಿಭೂತಿ, ಕೊರಳಲ್ಲಿ ಇಷ್ಟಲಿಂಗ, ರುದ್ರಾಕ್ಷಿ ಸರಗಳನ್ನು ಧರಿಸಿದ ಬಸವಣ್ಣ ಬಾಗಿದ ಭಂಗಿಯಲ್ಲಿ ನಿಂತಿದ್ದಾನೆ. ಸನ್ನಿವೇಶಕ್ಕೆ ಅದು ಬಹಳ ಸಹಜವಾಗಿ ಕಾಣಿಸುತ್ತದೆ. ಆತನ ಪಕ್ಕದಲ್ಲಿ ನೀಲಾಂಬಿಕೆ ನಿಂತಿದ್ದಾಳೆ. ಆಕೆಯ ಮುಖದಲ್ಲಿ ನಗು, ಸಂತಸಗಳಿಲ್ಲ. ಬಹುಶಃ ಇವರಿಬ್ಬರ ದಾಂಪತ್ಯದಲ್ಲಿ ತಾನು ಪ್ರವೇಶಿಸುವುದು ಸರಿಯಲ್ಲವೇನೋ ಎಂಬ ಭಾವ ಪ್ರಧಾನವಾಗಿ ಕಾಣಿಸುತ್ತದೆ. ಗಂಗಾಂಬಿಕೆಯು ಮತ್ತೊಂದು ಮದುವೆಯಾಗಲು ಬಸವಣ್ಣನನ್ನು ಒಪ್ಪಿಸುವ ಸನ್ನಿವೇಶ ಕಾವ್ಯಗಳಲ್ಲಿ ದಾಖಲಾದಂತೆ ಕಂಡುಬರುವುದಿಲ್ಲ. ಎಡದಿಂದ ಏರುಗತಿಯಲ್ಲಿ ಸಂಯೋಜನೆಗೊಂಡಿರುವ ಇಲ್ಲಿನ ಶಿಲ್ಪಗಳ ಹಿನ್ನೆಲೆಯಲ್ಲಿ ಅರಸೊತ್ತಿಗೆಯ ಸೂಚಕವಾಗಿ ಕಂಬಗಳನ್ನು, ತೂಗುಹಾಕಿದ ಪರದೆಗಳನ್ನು ವಿನ್ಯಾಸಗೊಳಿಸಲಾಗಿದೆ. ಗಂಗಾಂಬಿಕೆ ಹೆಗಲ ಮೇಲೆ ಹೊದ್ದಿರುವ ಹೊದಿಕೆಯು ಅತಿಯಾದ ನೆರಿಗೆಗಳಿಂದ ಕೂಡಿರುವುದರಿಂದ ಈ ಕಲಾಕೃತಿಯ ನೇತ್ರಾನಂದಕರ ಅನುಭವಕ್ಕೆ ಅಡ್ಡಿಯಾಗುತ್ತಲಿರುವುದನ್ನು ಹೊರತುಪಡಿಸಿದರೆ ಒಟ್ಟು ಉಬ್ಬುಶಿಲ್ಪವು ತನ್ನ ಸಾರ್ಥಕತೆಯನ್ನು ಸಾಧಿಸಿದೆ.

೪.೪.೩. ಬಸವಣ್ಣ ಗುಪ್ತಲಿಪಿ ಓದುತ್ತಿರುವುದು

ಬಿಜ್ಜಳನ ಆಸ್ಥಾನದಲ್ಲಿ ಒಂದು ಬಾರಿ ಆಕಾಶದಿಂದ ಶಿವಲಿಖಿತ ಗೂಢಲಿಪಿಯ ಪತ್ರವೊಂದು ಬೀಳುತ್ತದೆ. ಅದರ ಬರವಣಿಗೆ ಯಾರಿಗೂ ಅರ್ಥವಾಗುವುದಿಲ್ಲ. ಬಸವಣ್ಣ ಮಾತ್ರ ಅದನ್ನು ಸುಲಭವಾಗಿ ಓದುವ ಸನ್ನಿವೇಶವನ್ನು ಕಲಾವಿದ ಇಲ್ಲಿ ಮೂರ್ತಿಶಿಲ್ಪಗಳ ಕಲಾಕೃತಿಯ ಮೂಲಕ ಪ್ರಕಟಿಸಿದ್ದಾನೆ. ಈ ಕಲಾಕೃತಿಯು ಉಬ್ಬುಶಿಲ್ಪ ಮಾದರಿಗೆ ಸೇರಿದ್ದು, ಫೈಬರ್ ಗ್ಲಾಸ್ ಬಳಕೆಯಿಂದ ನಿರ್ಮಿತವಾಗಿದೆ.

ಮೊದಲ ನೋಟಕ್ಕೆ ಕಂಚಿನಿಂದ ತಯಾರಿಸಿದ ಕಲಾಕೃತಿಯೆಂಬಂತೆ ನೋಡುಗರಿಗೆ ತೋರಿದರೆ ಅಚ್ಚರಿಯೇನಲ್ಲ. ಸಿಂಹಾಸನದ ಮೇಲೆ ಬಿಜ್ಜಳ ಮಹಾರಾಜ ಕುಳಿತಿದ್ದು, ಆತನ ಕೆಳಗೆ ಬಲಬದಿಯಲ್ಲಿ ಬಸವಣ್ಣ ಹಿಂಬದಿಯಲ್ಲಿ ಚಕ್ರವನ್ನು ಹೊಂದಿದ ಕಿರೀಟವನ್ನು ಧರಿಸಿ, ತನ್ನ ಎಡಗೈ ಮತ್ತು ಬಲಗೈಗಳಿಂದ

ಓಲೆಯನ್ನು ಹಿಡಿದು ಓದುತ್ತಿರುವ ಭಂಗಿಯಲ್ಲಿದ್ದಾನೆ. ಅವನ ಮುಖದಲ್ಲಿ ನಗುವಿಲ್ಲ. ಬಹಳ ಗಂಭೀರವಾದ ಮುಖಮುದ್ರೆಯಿದೆ. ಬಿಜ್ಜಳನ ಮುಖದಲ್ಲಿಯೂ ಗಂಭೀರತೆಯು ಎದ್ದು ತೋರುತ್ತದೆ. ಬಸವಣ್ಣನ ಹಿಂದೆ ರಾಜಭಟನೊಬ್ಬ ನಿಂತಿದ್ದಾನೆ. ಈ ಘಟನೆಯನ್ನು ಬಸವಣ್ಣನ ಎದಿರು ನಿಂತಿರುವ ಇಬ್ಬರು ವ್ಯಕ್ತಿಗಳು ತದೇಕಚಿತ್ತರಾಗಿ ನೋಡುತ್ತಿದ್ದಾರೆ. ಬಿಜ್ಜಳನು ರಾಜಠೀವಿಯಿಂದ ಕುಳಿತ ಭಂಗಿ ಅತ್ಯಾಕರ್ಷಕವಾಗಿ ಮೂಡಿಬಂದಿದೆ. ಕಲಾವಿದ ಎಲ್ಲ ಸಂಗತಿಗಳನ್ನು ಸೂಕ್ಷ್ಮವಾಗಿ ಅಭಿವ್ಯಕ್ತಪಡಿಸಿರುವುದು ನೋಡುಗರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಸ್ಥಳಾವಕಾಶದ ಮಧ್ಯೆ ಬಿಜ್ಜಳನ ಆಸ್ಥಾನವು ಸಂಯೋಜನೆಗೊಂಡಿದ್ದು ಎಡಪಾರ್ಶ್ವದಲ್ಲಿ ಬಸವಣ್ಣ ನಿಗೂಢ ಲಿಪಿಯನ್ನು ಓದುತ್ತಿರುವ, ಬಲಭಾಗದಲ್ಲಿ ಆಸ್ಥಾನದ ಇತರ ಪಂಡಿತರು ನಿಂತಿರುವುದನ್ನು ರಚಿಸಲಾಗಿದೆ. ತ್ರಿಭುಜಾಕೃತಿಯಲ್ಲಿ ಸಂಯೋಜನೆಗೊಂಡಿರುವ ಇಲ್ಲಿನ ಆಕೃತಿಗಳು, ಅರಸೊತ್ತಿಗೆಯ ಸೂಚಕವಾಗಿರುವ ಹಿನ್ನೆಲೆಯಲ್ಲಿ ಮೂಡಿಬಂದಿವೆ. ಒಟ್ಟು ಶಿಲ್ಪವು ನೇತ್ರಾನಂದಕರವಾಗಿದ್ದು ರಾಜದರ್ಬಾರಿನ ವೈಭವವನ್ನು ಮುಕ್ತವಾಗಿಸಿದೆ.

೪.೪.೪. ಬಸವಣ್ಣ ಗುಪ್ತನಿಧಿಯನ್ನು ಹೊರತೆಗೆಸುತ್ತಿರುವುದು

ಈ ಕಲಾಕೃತಿಯು ಕೂಡಲಸಂಗಮದ ಬಸವ ಶರಣ ಕಲಾ ಸಂಗ್ರಹಾಲಯದಲ್ಲಿದೆ. ಫೈಬರ್ ಗ್ಲಾಸ್ ಮಾಧ್ಯಮದಲ್ಲಿ ನಿರ್ಮಿತವಾಗಿದ್ದು, ಇಲ್ಲಿ ಬಸವಣ್ಣ ಬಿಜ್ಜಳನ ಆಸ್ಥಾನದಲ್ಲಿ ಗೂಢಲಿಪಿಯನ್ನು ಓದಿ, ಅದರಂತೆ ಸಿಂಹಾಸನದ ಕೆಳಗಿರುವ ಗುಪ್ತನಿಧಿಯನ್ನು ಶೋಧಿಸಿ ತೋರಿಸಿದ ಸನ್ನಿವೇಶವನ್ನು ಕಲಾವಿದ ಇಲ್ಲಿ ಉಬ್ಬುಶಿಲ್ಪದ ಮೂಲಕ ಪ್ರತಿಪಾದಿಸಿದ್ದಾನೆ. ಗುಪ್ತನಿಧಿಯನ್ನು ಈಗಾಗಲೇ ಅಗೆದದ್ದರಿಂದ ದೊರಕಿದ ಹಲವು ಲೋಹದ ಕೊಡಗಳು, ನಾಣ್ಯಗಳ ರಾಶಿಯನ್ನು ಇಲ್ಲಿ ಒಟ್ಟುಗೂಡಿಸಿ ಹಾಕಲಾಗಿದೆ. ಆದರೂ ಬಸವಣ್ಣ ಬಾಗಿದ ಭಂಗಿಯಲ್ಲಿ ನಿಂತಿದ್ದು ತನ್ನ ಬಲಗೈಯ ತೋರುಬೆರಳಿನಿಂದ ಇನ್ನೂ ನಿಧಿ ಇದೆ ಎಂಬುದನ್ನು ಸೂಚಿಸುವಂತೆ ಕಂಡುಬರುತ್ತಾನೆ. ತಲೆಗೆ ಪೇಟ, ತುಂಬು ತೋಳಿನ ನಿಲುವಂಗಿ, ಸೊಂಟಕ್ಕೆ ಕಟ್ಟಿದ ವಸ್ತ್ರವು ಬಸವಣ್ಣನ ಪಾರಂಪರಿಕ ಕಲಾಕೃತಿಗಿಂತ ತುಸು ಭಿನ್ನವಾಗಿ ಮೂಡಿದೆ. ತಲೆಯಲ್ಲಿ ಕಿರೀಟದ ಬದಲು ಪೇಟವಿದೆ. ಮುಖದಲ್ಲಿ ಪ್ರಸನ್ನಭಾವನೆ ಕಂಡುಬರದೆ ಕಾಂತಿಹೀನತೆ ಎದ್ದುತೋರುತ್ತದೆ. ಆತನ ಎದುರಿಗೆ ವ್ಯಕ್ತಿಯೊಬ್ಬ ಗುದ್ದಲಿ ಹಿಡಿದು ಬಾಗಿ ಭೂಮಿಯನ್ನು ಅಗೆಯುವ ಭಂಗಿಯಲ್ಲಿ ನಿಂತಿದ್ದಾನೆ. ಆತನ ಹಿಂದೆ ಇಬ್ಬರು ರಾಜಭಟರನ್ನು ಪ್ರತಿಮೆಗಳಂತೆ ನೋಡುತ್ತ ನಿಂತಿರುವಂತೆ ಸಂಯೋಜಿಸಲಾಗಿದೆ. ಆಂಗಿಕ ರಚನೆಗಳಲ್ಲಿ ಇನ್ನಷ್ಟು ಪ್ರಬುದ್ಧತೆಯನ್ನು ಕಲಾಕೃತಿಯು ಬಯಸುತ್ತಿರುವಂತೆ ಗೋಚರವಾಗುತ್ತಿದೆ.

೪.೪.೫. ಅನುಭವ ಮಂಟಪದಲ್ಲಿ ಬಸವಣ್ಣ

ಕೂಡಲಸಂಗಮದ ಬಸವ ಶರಣ ಕಲಾ ಸಂಗ್ರಹಾಲಯದಲ್ಲಿರುವ ಈ ಕಲಾಕೃತಿಯು ಫೈಬರ್ ಗ್ಲಾಸ್ ಮಾಧ್ಯಮದ ಉಬ್ಬುಶಿಲ್ಪ ಪ್ರಕಾರವಾಗಿದೆ. ನೈಜತೆಯ ಎಲ್ಲ ಆಯಾಮಗಳನ್ನು ಒಟ್ಟಿಗೆ ಹಿಡಿದಿಟ್ಟಿರುವಂತೆ ನಿರ್ಮಿಸಿರುವುದು ಕಲಾವಿದನ ಪ್ರೌಢ ಕುಶಲತೆಗೆ ಸಾಕ್ಷಿಯಾಗಿದೆ. ಈ ಉಬ್ಬುಶಿಲ್ಪದ ಮಧ್ಯಭಾಗದಲ್ಲಿ ಅಲ್ಲಮಪ್ರಭು ಪೀಠದ ಮೇಲೆ ಕುಳಿತಿದ್ದಾನೆ. ತಲೆಯ ಮೇಲೆ ಶಿಖಾಕಿರೀಟ, ಹಣೆಯಲ್ಲಿ ವಿಭೂತಿ, ಗಡ್ಡ

ಮೀಸೆಗಳು, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಗಂಭೀರವಾದ ಮತ್ತು ನಿರ್ದೇಶನ ಮಾಡುವ ಭಂಗಿಯಲ್ಲಿ ಎತ್ತಿದ ಬಲಗೈ ತೋರುಬೆರಳು–ಇವು ಚಿತ್ರದ ಗಾಂಭೀರ್ಯತೆಗೆ ಸಹಕಾರಿಯಾಗಿವೆ. ಪ್ರಭುದೇವರ ಬಲಬದಿಯಲ್ಲಿ ತಲೆಗೆ ಪೇಟ ಸುತ್ತಿದ ಹಲವು ಶರಣರು ಅತ್ಯಂತ ಕುತೂಹಲ, ವಿನಯ, ಪೂಜ್ಯತೆಯ ಭಾವನೆ ಹೊಂದಿ ಕುಳಿತಿರುವುದು ಸಹಜವಾಗಿ ಮೂಡಿಬಂದಿದೆ. ಪ್ರಭುದೇವರ ಎಡಬದಿಯಲ್ಲಿ ಬಸವಣ್ಣ ತಲೆಗೆ ಪೇಟ, ತುಂಬುತೋಳಿನ ನಿಲುವಂಗಿ ಧರಿಸಿ ಪ್ರಭುದೇವರೊಂದಿಗೆ ತೋರುಬೆರಳನ್ನು ಎತ್ತಿ ತೋರಿಸುತ್ತ ಕುಳಿತಿರುವುದು ಅವರ ಸಂವಾದದ ವೈಖರಿ ಉತ್ತಮವಾಗಿ ನಿರೂಪಿತವಾಗಿದೆ.

ಬಸವಣ್ಣನ ಕೆಳಗೆ ಮತ್ತು ಹಿಂದೆ ಕೆಲವು ಶರಣರ ಮೂರ್ತಿಗಳು ಕುಳಿತಿರುವ ಭಂಗಿಯಲ್ಲಿವೆ. ಆಶಯ, ಪ್ರಮಾಣಗಳ ದೃಷ್ಟಿಯಿಂದ ಪ್ರಸ್ತುತ ಕಲಾಕೃತಿ ಪ್ರಬುದ್ಧವಾಗಿದ್ದು, ಸಂಯೋಜನೆಯನ್ನೂ ಸಹ ಸಮರ್ಪಕವಾಗಿಸಲು ಹಿನ್ನೆಲೆಯಲ್ಲಿ ಅರ್ಧದವರೆಗೆ ಗೋಡೆಯನ್ನು, ಅದರ ಹಿಂದೆ ಗಿಡಗಳನ್ನು, ಎರಡು ಕಂಭಗಳಿಗೆ ಆಸರೆಯಾಗಿ ಇಳಿಬಿದ್ದಿರುವ ಪರದೆಯನ್ನು ರಚಿಸಲಾಗಿದೆ. ಹಿಂದಿನ ಎಲ್ಲ ಚಿತ್ರಗಳಲ್ಲಿ ಅಲ್ಲಮಪ್ರಭುಗಳು ಷಟ್‌ಸ್ಥಲ ಪೀಠದ ಮೇಲೆ ಆಸೀನರಾಗಿದ್ದರೆ, ಇಲ್ಲಿ ಸಾಮಾನ್ಯ ಪೀಠವೊಂದರ ಮೇಲೆ ಆಸೀನರಾಗಿದ್ದಾರೆ. ಒಟ್ಟು ಕಲಾಕೃತಿಯು ಅನುಭವಮಂಟಪದ ದೃಶ್ಯವನ್ನು ಭಾವಪ್ರದವಾಗಿ ತೋರ್ಪಡಿಸುತ್ತದೆ.

೪.೪.೬. ಮೂಢನಂಬಿಕೆಗಳನ್ನು ಖಂಡಿಸುತ್ತಿರುವ ಬಸವಣ್ಣ

ಫೈಬರ್ ಗ್ಲಾಸ್ ಮತ್ತು ಉಬ್ಬುಶಿಲ್ಪ ಮಾಧ್ಯಮದಲ್ಲಿ ನಿರ್ಮಿತಿಗೊಂಡ ಈ ಕಲಾಕೃತಿ ಕೂಡಲಸಂಗಮದ ಬಸವ ಶರಣ ಕಲಾಸಂಗ್ರಹಾಲಯದಲ್ಲಿದೆ. ಈ ಉಬ್ಬುಶಿಲ್ಪದಲ್ಲಿ ಮೂರು ಭಾಗಗಳಿವೆ. ನೋಡುಗರಿಗೆ ಎದುರಿಗೆ ಬಸವಣ್ಣ ತನ್ನ ಎರಡು ಕೈಗಳನ್ನು ಸ್ವಲ್ಪ ಮೇಲಕ್ಕೆತ್ತಿ ಹಸ್ತಗಳಿಂದ ಅಲ್ಲಿ ನಡೆಯುವ ಘಟನೆಗಳನ್ನು ಖಂಡಿಸುವ ಭಂಗಿಯಲ್ಲಿ ನಿಂತಿದ್ದಾನೆ. ಆತನ ಬಲಬದಿಯಲ್ಲಿ ಮರವೊಂದಿದ್ದು ಅದರ ಕೆಳಗೆ ಕಲ್ಲಿನ ನಾಗರಶಿಲ್ಪಕ್ಕೆ ಮಹಿಳೆಯೊಬ್ಬಳು ಹಾಲೆರೆಯುವ ಭಂಗಿಯಲ್ಲಿ ಕುಳಿತಿದ್ದಾಳೆ. ಅವಳ ಹಿಂದೆ ವಿವಿಧ ವಯೋಮಾನದ ಮೂರು ಜನ ಸ್ತ್ರೀಯರು ಅಲ್ಲಿರುವ ಎತ್ತರವಾದ ಹುತ್ತಕ್ಕೆ ಹಾಲೆರೆಯುವ ಕಾಯಕದಲ್ಲಿ ತೊಡಗಿದ್ದಾರೆ. ಬಸವಣ್ಣನ ಎಡಬದಿಯಲ್ಲಿ ಮರವೊಂದರ ಕೆಳಗೆ ಹಾವೊಂದಿದ್ದು, ಅದನ್ನು ಕೊಲ್ಲಲು ಬಡಿಗೆಗಳನ್ನು ಹಿಡಿದ ಇಬ್ಬರು ವ್ಯಕ್ತಿಗಳು ಮುಂದಾಗಿದ್ದಾರೆ. "ಕಲ್ಲನಾಗರ ಕಂಡರೆ ಹಾಲೆರೆಯೆಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರು" ಎಂಬ ಬಸವಣ್ಣನ ವಚನದ ಆಶಯವನ್ನು ಪ್ರಸ್ತುತ ಕಲಾಕೃತಿಯು ಶಿಲ್ಪಮಾಧ್ಯಮದ ಮೂಲಕ ಅನಾವರಣಗೊಳಿಸಿರುವುದು ಕಂಡುಬರುತ್ತದೆ. ಕಲಾವಿದ ವಚನ ಸಂದರ್ಭವೊಂದರಲ್ಲಿ ಬರುವ ಮೂರು ಸಂಗತಿಗಳನ್ನು ಪ್ರತ್ಯೇಕವಾಗಿ ಹೇಳುವಂತೆ ತೋರುತ್ತಿದ್ದರೂ ಒಟ್ಟು ಉಬ್ಬುಶಿಲ್ಪವು ವಚನದ ಸಾರವನ್ನು ದೃಶ್ಯಾತ್ಮಕವಾಗಿ ಯಥಾವತ್ತಾಗಿ ಹೇಳುತ್ತಿದೆ. ಎಡಪಾರ್ಶ್ವದಲ್ಲಿ ಕಲ್ಲನಾಗರಕ್ಕೆ ಹಾಲೆರೆಯುವ ಮತ್ತು ಬಲ ಪಾರ್ಶ್ವದಲ್ಲಿ ನಿಜನಾಗರವನ್ನು ಬಡಿಯುವ ಸನ್ನಿವೇಶಗಳಿಗೆ ಮಧ್ಯದಲ್ಲಿರುವ ಬಸವಣ್ಣನವರು ತಮ್ಮ ಎರಡೂ ಕೈಗಳನ್ನು ತಡೆಯ ರೂಪದಲ್ಲಿ ಹಿಡಿದಿರುವ ಹಾಗೆ ಚಿತ್ರಿಸಲಾಗಿದೆ.

೪.೪.೭. ಹರಳಯ್ಯ ಮತ್ತು ಕಲ್ಯಾಣಮ್ಮ ದಂಪತಿಗಳ ಪಾದರಕ್ಷೆಗಳನ್ನು ಬಸವಣ್ಣ ತಲೆಯ ಮೇಲೆ ಹೊತ್ತುಕೊಂಡಿರುವುದು

ಫೈಬರ್ ಗ್ಲಾಸ್ ಮತ್ತು ಉಬ್ಬುಶಿಲ್ಪ ಮಾಧ್ಯಮದಲ್ಲಿ ನಿರ್ಮಿತಿಗೊಂಡ ಕಲಾಕೃತಿಯಿದಾಗಿದೆ. ಇದು ಕೂಡಲಸಂಗಮದ ಬಸವ ಶರಣ ಕಲಾಸಂಗ್ರಹಾಲಯದಲ್ಲಿದೆ. ಬೀದಿಯಲ್ಲಿ ಬಸವಣ್ಣ ನಡೆದುಬರುತ್ತಿರುವಾಗ ಮಾದಾರ ಹರಳಯ್ಯ ಶರಣು ಎಂದು ಹೇಳುತ್ತಾನೆ. ಅದಕ್ಕೆ ಪ್ರತಿಯಾಗಿ ಬಸವಣ್ಣ ಎರಡು ಬಾರಿ ಶರಣು ಶರಣು ಎಂದು ನುಡಿದುದನ್ನು ಕೇಳಿದ ಹರಳಯ್ಯ ತನ್ನಿಂದ ಏನೋ ತಪ್ಪಾಗಿರಬೇಕೆಂದು ಭಾವಿಸಿ ತನ್ನ ಮತ್ತು ತನ್ನ ಹೆಂಡತಿಯ ತೊಡೆಯಿಂದ ಚರ್ಮವನ್ನು ತೆಗೆದು ಬಸವಣ್ಣನಿಗೆ ಪಾದರಕ್ಷೆಗಳನ್ನು ಹೊಲಿದುಕೊಂಡು ಬಂದು ಅರ್ಪಿಸುತ್ತಾನೆ. ಅವು ಶಿವನು ಧರಿಸುವ ಪಾದರಕ್ಷೆ, ನಾನು ಧರಿಸುವಂಥವಲ್ಲ, ಎಂದು ಹೇಳಿ ಅವುಗಳ ಪವಿತ್ರತೆಯನ್ನು ಮನದಟ್ಟು ಮಾಡಲು ಬಸವಣ್ಣ ಅವುಗಳನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡಿರುವ ದೃಶ್ಯವನ್ನು ಇಲ್ಲಿ ನಿರೂಪಿಸಲಾಗಿದೆ. ಅವುಗಳನ್ನು ಹೊತ್ತಿರುವ ಬಸವಣ್ಣನ ಮುಖದಲ್ಲಿ ಧನ್ಯತೆಯ ಭಾವವು ವ್ಯಕ್ತಗೊಂಡಿದೆ. ಹಿನ್ನೆಲೆಯಲ್ಲಿ ಗಂಗಾಂಬಿಕೆ, ನೀಲಾಂಬಿಕೆ ಮತ್ತು ಅಕ್ಕನಾಗಮ್ಮ ಇವರ ಮೂರ್ತಿಗಳಿವೆ. ಅಕ್ಕನಾಗಮ್ಮನಿಗೆ ಅವರಲ್ಲಿ ಹೆಚ್ಚಾದ ವಯಸ್ಸನ್ನು ಕಲಾವಿದ ಸೂಚಿಸಿರುವುದು ಸರಿಯಾಗಿದೆ. ಉಳಿದಿಬ್ಬರು ಪತ್ನಿಯರು ಈ ಘಟನೆಗೆ ಮೂಕಸಾಕ್ಷಿಯಾಗಿ ನಿಂತಿರುವಂತೆ ಕಾಣುತ್ತದೆ. ಬಸವಣ್ಣನ ಎದುರಿಗೆ ತಲೆಯಲ್ಲಿ ಹಿಂದಕ್ಕೆ ಬಾಚಿದ ಕೂದಲು, ಮುಖದಲ್ಲಿ ಗಡ್ಡ ಮೀಸೆಗಳಿಂದ ಕೂಡಿದ ಅಗಲವಾದ ಹರಳಯ್ಯನ ಮುಖವು ನೋಡುಗರಿಗೆ ಅರ್ಧಭಾಗ ಮಾತ್ರ ಕಾಣಿಸುತ್ತದೆ. ಆತನ ಎರಡು ಕೈಗಳು ಬಸವಣ್ಣನಿಗೆ, ನಾನು ತಂದ ಚಪ್ಪಲಿಗಳನ್ನು ಕಾಲಿನಲ್ಲಿ ಧರಿಸು, ತಲೆಯ ಮೇಲೆ ಹೊತ್ತುಕೊಳ್ಳಬೇಡ ಎಂದು ಹೇಳುವ ತವಕವನ್ನು ಸೂಚಿಸುತ್ತವೆ. ಮುಖದಲ್ಲಿ ಆಳವಾದ ನೋವು ವ್ಯಕ್ತವಾಗಿರುವುದು ಕಂಡುಬರುತ್ತದೆ. ಆಂಗಿಕವಾದ ರಚನೆಗಳಲ್ಲಿ ಇನ್ನಷ್ಟು ಪಕ್ವತೆಯನ್ನು ಬಯಸುವಂತಿದ್ದು ತಕ್ಕ ಮಟ್ಟಿನಲ್ಲಿ ಭಾವಪ್ರದವಾಗಿವೆ. ಹರಳಯ್ಯನನ್ನು ದಲಿತರೂಪದಲ್ಲಿ ಪ್ರಬುದ್ಧವಾಗಿ ಚಿತ್ರಿಸಲಾಗಿದೆ. ಬಸವಣ್ಣನಲ್ಲಿ ಶಿವನನ್ನು ಸ್ಫುರಿಸುವ ಭಾವಸ್ಪಷ್ಟವಾಗಿ ಪ್ರಕಟವಾಗಿದೆ.

೪.೪.೮. ಬಸವಣ್ಣ ಮಂತ್ರಿಪದವಿ ತ್ಯಾಗ ಮಾಡುತ್ತಿರುವುದು

ಕೂಡಲಸಂಗಮದ ಬಸವ ಶರಣ ಕಲಾ ಸಂಗ್ರಹಾಲಯದಲ್ಲಿರುವ ಇದು ಫೈಬರ್ ಗ್ಲಾಸ್ ಮತ್ತು ಉಬ್ಬುಶಿಲ್ಪ ಮಾಧ್ಯಮದಲ್ಲಿ ನಿರ್ಮಿತಿಗೊಂಡ ಉತ್ತಮ ಕಲಾಕೃತಿಯಾಗಿದೆ. ಹರಳಯ್ಯ ಮತ್ತು ಮಧುವರಸ ದಂಪತಿಗಳ ಮಕ್ಕಳಿಗೆ ವಿವಾಹ ಮಾಡಿಸಿ ಅಂತರ್ಜಾತೀಯ ವಿವಾಹವನ್ನು ಮಾಡಿಸಿದ ಅಪಖ್ಯಾತಿಯನ್ನು ಬಿಜ್ಜಳನಿಂದ ಬಸವಣ್ಣ ಪಡೆಯಬೇಕಾಯಿತು. ಅದರ ಪರಿಣಾಮವನ್ನು ಇಲ್ಲಿ ಕಲಾವಿದ ಉಬ್ಬುಶಿಲ್ಪ ಮಾದರಿಯಲ್ಲಿ ರಚಿಸಿ ಅಭಿವ್ಯಕ್ತಗೊಳಿಸಿದ್ದಾನೆ. ಬಿಜ್ಜಳನ ಅರಮನೆಯ ಒಳಾಂಗಣದಲ್ಲಿ ನಡೆದ ಘಟನೆಯನ್ನು ಅಲ್ಲಿನ ಕಂಭಗಳು, ಕಮಾನುಗಳು, ಕಿಟಕಿಗಳು ಸೂಚಿಸುತ್ತವೆ. ಬಿಜ್ಜಳ, ಬಸವಣ್ಣ ಮತ್ತು ಮತ್ತೊಬ್ಬ ಬ್ರಾಹ್ಮಣ ಈ ಮೂವರು ಇಲ್ಲಿ ಮೂರ್ತಿಶಿಲ್ಪಗಳ ರೂಪದಲ್ಲಿ ನಿಂತಿರುವಂತೆ ಕಲಾವಿದ ನಿರ್ಮಿಸಿದ್ದಾನೆ. ಇವರಲ್ಲಿ ಬಿಜ್ಜಳನ ಮುಖಭಾವ, ಉಡುಪುಗಳು ವಾಸ್ತವತೆಗೆ ತುಂಬಾ ಹತ್ತಿರವಾಗಿವೆ

ಎಂಬುದು ನೋಡುಗನ ಮೊದಲ ನೋಟಕ್ಕೆ ತಿಳಿಯುತ್ತದೆ. ರಾಜಪೋಷಾಕಿನ ನಿರಿಗೆಗಳು, ಧರಿಸಿದ ಆಭರಣಗಳು, ಪಾದರಕ್ಷೆಗಳು ಮತ್ತು ಬಸವಣ್ಣನನ್ನು ಕೈಯೆತ್ತಿ ನಿಂದಿಸುವಂತೆ ತೋರಿಸುವ ಭಂಗಿ ಉತ್ತಮವಾಗಿ ಮೂಡಿಬಂದಿವೆ. ಬಿಜ್ಜಳನ ಮುಖದಲ್ಲಿ ಕಠೋರತೆ ಎದ್ದು ತೋರುತ್ತದೆ. ಆತನ ಎದುರಿಗೆ ಬಸವಣ್ಣ ನಿಂತಿದ್ದು ಹಿಂದಕ್ಕೆ ಬಾಚಿದ ತಲೆಗೂದಲು, ಎಡಗೈಯನ್ನು ಹಿಂದಕ್ಕೆ ಅಂದರೆ ಬಾಗಿಲಿನ ಕಡೆಗೆ ತೋರಿಸಿ, ನಾನಿನ್ನು ಹೊರಡುವೆ ಎಂದು ಹೇಳುವ ಭಾವ, ಮುಖದಲ್ಲಿ ಸ್ಥಿತಪ್ರಜ್ಞತೆಯ ಮಂದಹಾಸಗಳನ್ನು ಕಲಾವಿದ ಅತ್ಯಂತ ಸೂಕ್ಷ್ಮವಾಗಿ ಮತ್ತು ಜಾಣ್ಮೆಯಿಂದ ಪ್ರಕಟಪಡಿಸಿದ್ದಾನೆ. ಬಸವಣ್ಣನ ಕಾಲಿನ ಬಳಿ ಪುಟ್ಟ ಮೇಜೊಂದರ ಮೇಲಿರುವ ಕಿರೀಟವು ಗಮನಿಸುವಂಥದ್ದಾಗಿದೆ. ಸಂಯೋಜನೆಯಲ್ಲಿ ಸ್ವಲ್ಪ ಮಟ್ಟಿನ ತೊಡಕುಗಳು ಇಲ್ಲಿ ಸೃಷ್ಟಿಯಾಗಿವೆ. ಬಿಜ್ಜಳ ಮತ್ತು ಬಸವಣ್ಣ ಸ್ಥಳಾವಕಾಶದ ಬಲಪಾರ್ಶ್ವದಲ್ಲಿ ಸಂಯೋಜನೆಗೊಂಡಿದ್ದರಿಂದ ಸ್ಥಳಾವಕಾಶದ ಎಡಪಾರ್ಶ್ವ ಕೇವಲ ಕಂಬಗಳಿಂದ ಆವೃತವಾಗಿದೆ. ಆದರೂ ಪ್ರತಿಮೆಗಳು ಗುಣಾತ್ಮಕವಾಗಿ ಮೂಡಿಬಂದಿದ್ದು, ಉತ್ತಮ ಕಲಾಕೃತಿಗಳ ಸಾಲಿನಲ್ಲಿ ಇದು ನಿಲ್ಲುವ ಎಲ್ಲ ಅರ್ಹತೆಗಳನ್ನು ಪಡೆದಿದೆ.

೪.೪.೯. ಬಸವಣ್ಣನವರ ಭಾವಶಿಲ್ಪ – ೧ & ೨

ಅತ್ಯುತ್ತಮ ಮೂರ್ತಿಶಿಲ್ಪಗಳ ಸಾಲಿಗೆ ಸೇರುವ ಬಸವಣ್ಣನವರ ಭಾವಶಿಲ್ಪದ ಈ ಕಲಾಕೃತಿ ವಿಮರ್ಶೆಯ ಎಲ್ಲ ಮಾನದಂಡಗಳನ್ನು ಪೂರ್ಣಗೊಳಿಸಿದಂತೆ ಕಂಡುಬರುತ್ತದೆ. ನೋಡಿದ ಕೂಡಲೇ ಬಂಗಾರದ ಲೋಹದಿಂದ ತಯಾರಿಸಿದ ಪುತ್ಥಳಿ ಎಂದು ನೋಡುಗರಿಗೆ ಆ ಕ್ಷಣಕ್ಕೆ ಅನ್ನಿಸದಿರಲಾರದು. ಆದರೆ ಇದು ಫೈಬರ್ ಗ್ಲಾಸ್ ಮಾಧ್ಯಮದಲ್ಲಿ ರಚಿಸಿದ ಮೂರ್ತಿಶಿಲ್ಪವಾಗಿದೆ. ಅದಕ್ಕೆ ಬಂಗಾರದ ವರ್ಣವನ್ನು ಲೇಪಿಸಿದ್ದು, ಶುದ್ಧ ಬಂಗಾರದ ಪುತ್ಥಳಿಯೆಂಬ ಅನುಮಾನಕ್ಕೆ ಕಾರಣವಾಗಿದೆ. ಬಂಗಾರದ ಬಣ್ಣದ ಕಿರೀಟ ಮತ್ತು ಅದೇ ಬಣ್ಣದ ದೇಹದ ಎಲ್ಲ ಅವಯವಗಳನ್ನು ಇಲ್ಲಿ ಕಾಣುತ್ತೇವೆ. ಕಿರೀಟ, ತೋಳು, ಎದೆಯ ಅರ್ಧ ಭಾಗ ಮಾತ್ರವಿದ್ದು ನಿಲುವಂಗಿಯ ತೋಳುಗಳ ಭಾಗ ಮಾತ್ರವಿದ್ದು ತೋಳುಗಳಿಲ್ಲದೆಯೂ ತನ್ನ ಅಸ್ತಿತ್ವವನ್ನು ನೋಡುಗರಿಗೆ ಮನನವಾಗುವ ಮಾದರಿಯನ್ನು ಈ ಶಿಲ್ಪವು ಹೊಂದಿರುವುದು ವಿಶೇಷವಾಗಿದೆ. ಹಣೆಯಲ್ಲಿ ವಿಭೂತಿ, ದಪ್ಪವಾದ ದೃಢವಾದ ತುಟಿಗಳು, ಹೊಳೆಯುವ ಕಣ್ಣುಗಳು, ಕೊರಳಿಗೆ ಪೂರ್ತಿಯಾಗಿ ಆವರಿಸಿದ ಅರ್ಧತೋಳಿನ ನಿಲುವಂಗಿ, ಕೊರಳಲ್ಲಿ ಇಷ್ಟಲಿಂಗ, ರುದ್ರಾಕ್ಷಿಯ ಸರವನ್ನು ಧರಿಸಿದ ಬಸವಣ್ಣನ ಈ ಶಿಲ್ಪದಲ್ಲಿ ಕಿವಿಯಲ್ಲಿಯ ಕರ್ಣಕುಂಡಲಗಳು ಸಮರ್ಪಕವಾಗಿ ಮೂಡಿಬಂದಿವೆ. ಆದರೆ ಬಸವಣ್ಣನವರ ಭಾವ ಸಂಪೂರ್ಣವಾಗಿ ಪ್ರಕಟವಾಗಿಲ್ಲವೆಂಬುದು ದಿಟವಲ್ಲವೇ? ಮುಖದಲ್ಲಿ ಒಂದು ಬಗೆಯ ಆಯಾಸದ ಭಾವವಿದ್ದರೆ ತುಟಿಗಳು ದಪ್ಪವಾಗಿ ಚಿತ್ರಿತವಾಗಿರುವುದರಿಂದ ಬಸವಣ್ಣನವರ (ಕ್ಯಾರೆಕ್ಟರ್) ಮುಖಚಹರೆಯನ್ನು ಹೋಲುತ್ತಿಲ್ಲ. ಇಂತಹ ನ್ಯೂನತೆಗಳನ್ನು ಸರಿಪಡಿಸಿಕೊಂಡರೆ ಈ ಕೃತಿಯನ್ನು ಮತ್ತೆ ಮತ್ತೆ ನೋಡಬೇಕೆನ್ನಿಸುವ ಬಗೆಯಲ್ಲಿ ರಚಿಸಬಹುದು.

೪.೪.೧೦. ಬಸವಣ್ಣ (ನೆನಪಿನ ಕಾಣಿಕೆ)

ಯಾವುದೇ ಶೈಕ್ಷಣಿಕ ಮತ್ತು ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಹಾತ್ಮರನ್ನು ಪ್ರತಿಪಾದಿಸುವ ಹಿನ್ನೆಲೆಯಲ್ಲಿ ನೆನಪಿನ ಕಾಣಿಕೆಗಳನ್ನು ನೀಡುವುದು ಸಹಜ. ಅದೇ ರೀತಿಯಲ್ಲಿ ಬಸವಣ್ಣನವರ

ನಾನಾ ಭಾವ ಭಂಗಿಗಳಲ್ಲಿರುವ ಮೂರ್ತಿಗಳನ್ನು ವಿವಿಧ ಮಾಧ್ಯಮಗಳಲ್ಲಿ ರಚಿಸಿರುವುದು ಕಂಡುಬರುತ್ತದೆ. ಇಲ್ಲಿ ಬಸವಣ್ಣನವರ ಅರ್ಧ ಶರೀರದ ಭಾವಚಿತ್ರವನ್ನು ರಚಿಸಲಾಗಿದ್ದು, ಕಲಾಕೃತಿಯಿಡೀ ಬಂಗಾರ ವರ್ಣವನ್ನು ಬಳಸಿಕೊಳ್ಳಲಾಗಿದೆ. ಅತ್ಯಂತ ಕಲಾತ್ಮಕ ರೀತಿಯಲ್ಲಿ ಮೂಡಿಬಂದಿರುವ ಈ ಕಲಾಕೃತಿಯು ನೋಡುಗರ ಮನಸೆಳೆಯುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು. ನೆನಪಿನ ಕಾಣಿಕೆಯಲ್ಲಿ ಬಂಗಾರದ ಮೂರ್ತಿಯಂತೆ ಕಂಚು, ಹಿತ್ತಾಳೆ, ಪ್ಲಾಸ್ಟರ್ ಆಫ್ ಪ್ಯಾರಿಸ್, ಬೆಳ್ಳಿ, ಟೀಕ್ ವುಡ್ (ಸಾಗವಾನಿ), ಶ್ರೀಗಂಧ ಮುಂತಾದ ರೀತಿಯಲ್ಲಿ ಗೋಚರಿಸುವಂತೆ ಮೂರ್ತಿಗಳನ್ನು ತಯಾರಿಸುತ್ತಾರೆ.

೪.೫. ಗಾಜಿನ ಮಾಧ್ಯಮದಲ್ಲಿ ಬಸವಣ್ಣನವರು

ಕಲಾಕೃತಿಗಳನ್ನು ಗಾಜಿನಲ್ಲಿ ನಿರ್ಮಿಸುವ ಪದ್ಧತಿ ಬಹು ಹಿಂದಿನಿಂದಲೂ ಕಂಡುಬರುತ್ತದೆ. ಗಾಜಿನ ಮೇಲೆ ಚಿತ್ರಕಲೆಯನ್ನು ರಚಿಸುವ ಪದ್ಧತಿಗೆ ಗ್ಲಾಸ್ ಪೇಂಟಿಂಗ್ ಎಂಬ ಹೆಸರು ರೂಢಿಯಲ್ಲಿದೆ. ಸಾಮಾನ್ಯ ಚಿತ್ರರಚನೆಯಲ್ಲಿ ಕಲಾವಿದ ಮೊದಲಿಗೆ ಭಿತ್ತಿಯ ಮೇಲೆ ಲಘು ವರ್ಣಗಳಿಂದ ಗಾಢವರ್ಣಗಳೆಡೆಗೆ ವರ್ಣಗಳನ್ನು ಬಳಸುತ್ತಾ ಹೋಗುತ್ತಾನೆ. ಆದರೆ ಗ್ಲಾಸ್ ಮಾಧ್ಯಮದಲ್ಲಿ ಗ್ಲಾಸ್‌ನ ಹಿಂಬದಿಯಲ್ಲಿ ಮೊದಲು ಕಪ್ಪು ಅಥವಾ ದಟ್ಟವಾದ ಬಣ್ಣದ ರೇಖೆಗಳನ್ನು ತಮಗೆ ಬೇಕಾದ ಆಕಾರದಲ್ಲಿ ರೂಪಿಸಿಕೊಳ್ಳುತ್ತಾರೆ. ನಂತರ ಬೆಳಕು ಬೀಳುವ ಕಡೆಗಳಲ್ಲಿ ಲಘುವರ್ಣಗಳನ್ನು ಬಳಸುತ್ತಾ ಬಳಸುತ್ತಾ ನಂತರ ಗಾಢವರ್ಣಗಳನ್ನು ಪ್ರಯೋಗಿಸುತ್ತಾ ಹೋಗುತ್ತಾರೆ. ಪೂರ್ಣಗೊಂಡ ಚಿತ್ರದ ಮೇಲೆ ಒಂದು ಪೂರ್ಣ ಪ್ರಮಾಣದ ಬಣ್ಣವನ್ನು ಬಳಿಯುತ್ತಾರೆ.

೪.೫.೧. ವಚನ ರಚನೆಯಲ್ಲಿ ನಿರತನಾದ ಬಸವಣ್ಣ

ಕೊಲ್ಲಾಪುರದ ಕಲಾವಿದರಾದ ಮಾರುತಿ ಅವರು ಬಸವಣ್ಣನವರು ವಚನರಚನೆಯಲ್ಲಿ ನಿರತರಾದ ಸನ್ನಿವೇಶವನ್ನು ಗ್ಲಾಸ್ ಪೇಯಿಂಟಿಂಗ್‌ನಲ್ಲಿ ಚಿತ್ರಿಸಿದ್ದಾರೆ. ಕಪ್ಪಾದ ತಲೆಗೂದಲು, ಬಿಳಿಯ ಬಣ್ಣದ ವಸ್ತ್ರಗಳು, ರುದ್ರಾಕ್ಷಿ, ಇಷ್ಟಲಿಂಗ ಧರಿಸಿ, ಕೈಯಲ್ಲಿ ಲೇಖನಿಯನ್ನು ಹಿಡಿದು ತಾಳೆಗರಿಗಳಲ್ಲಿ ಬರವಣಿಗೆ ಮಾಡುತ್ತಿರುವ ದೃಶ್ಯವಿಲ್ಲಿದೆ. ತಲೆಯನ್ನು ಎಡಬದಿಗೆ ತುಸು ಬಾಗಿಸಿದಂತೆ ಚಿತ್ರಿಸಿರುವುದರಿಂದ ನೈಜ ಪರಿಣಾಮವನ್ನು ಈ ಚಿತ್ರವು ನೋಡುಗರಿಗೆ ನೀಡುತ್ತದೆ. ಅವರ ಹಿಂಬದಿಯಲ್ಲಿ ನೀಲಿ ಹಾಗೂ ಕೆಂಪು ಬಣ್ಣದಿಂದ ಅಲಂಕೃತಗೊಂಡ ಕಟ್ಟಿಗೆಯ ಮಂಚದ ಭಾಗವು ಗೋಚರಿಸುತ್ತದೆ. ಬಸವಣ್ಣನ ಬಲಬದಿಗೆ ಜ್ಯೋತಿಯು ಕೆಂಪುಬಣ್ಣದ ಪ್ರಭೆಯನ್ನು ಸೂಸುತ್ತ ಪ್ರಕಾಶಮಾನವಾಗಿ ಉರಿಯುತ್ತಿರುವ ಸಂಗತಿ ಆಕರ್ಷಕವಾಗಿದೆ.

ಒಟ್ಟು ಈ ಚಿತ್ರವನ್ನು ಗಮನಿಸಿದಾಗ ಕಲಾವಿದ ಇಲ್ಲಿ ಕೇವಲ ಬಸವಣ್ಣನಿಗೆ ಮಾತ್ರ ಪ್ರಕಾಶಮಾನವಾದ ಬಿಳಿ ವರ್ಣವನ್ನು ಬಳಸಿದ್ದು ಉಳಿದಂತೆ ಕಿತ್ತಳೆ ಗಾಢವರ್ಣದಿಂದ ಉಳಿದ ಘಟನೆಗಳನ್ನು ಗೌಣವಾಗಿಸಿದ್ದಾನೆ. ಕ್ಯಾನ್ವಾಸ್ ಮೇಲಿನ ಚಿತ್ರಣಕ್ಕೂ, ಗಾಜಿನ ಮೇಲಿನ ಚಿತ್ರಣಕ್ಕೂ ಸಾಕಷ್ಟು ಅಜಗಜಾಂತರವಿದೆ. ಗಾಜಿನಮೇಲಿನ ಚಿತ್ರಗಳು ಹಿಂಬರಹ ವಿಧಾನದಲ್ಲಿ ಚಿತ್ರಿಸುವುದಾಗಿದೆಯಲ್ಲದೇ ಅತ್ಯಂತ ಕ್ಲಿಷ್ಟಕರ ಮಾಧ್ಯಮವೂ ಹೌದು. ಈ ಚಿತ್ರವನ್ನು ಚಿತ್ರಿಸಿದ ಕಲಾವಿದರಿಗೆ ವರ್ಣವ್ಯಾಕರಣ,

ಅಂಗರಚನಾಶಾಸ್ತ್ರದ ಪ್ರಬುದ್ಧತೆ ಇರುವುದರಿಂದ ಇಂತಹ ಉತ್ಕೃಷ್ಟವಾದ ಚಿತ್ರ ಅಭಿವ್ಯಕ್ತಗೊಂಡಿದೆ. ಆಧುನಿಕವಾದ ಹಲವು ವಿವಿಧ ರಸಾಯನಗಳಿಂದ ಹಾಗೂ ಸಲಕರಣೆಗಳ (ಮುಖ್ಯವಾಗಿ ಸ್ಪ್ರೇ ಗನ್) ಬಳಕೆಯಿಂದ ಇಂತಹ ಉತ್ತಮ ಚಿತ್ರ ಸಾಧ್ಯವಾಗಿದೆ. ಸಂಯೋಜನೆಯು ಸಹ ಅತ್ಯಂತ ಪ್ರಬುದ್ಧವಾಗಿದೆ. ಅರಸೊತ್ತಿಗೆಯ ಪರಿಸರದಲ್ಲಿ ದೀಪದ ಬೆಳಕಿನಡಿ ಬಸವಣ್ಣ ಕಂಠ ಹಿಡಿದು ತಾಳೆಗರಿ ಮೇಲೆ ಬರೆಯುತ್ತಿರುವುದು ಪ್ರಸನ್ನವಾಗಿ–ಪ್ರಬುದ್ಧವಾಗಿ ಮೂಡಿಬಂದಿದ್ದು, ಸರ್ವರಿಗೂ ಆಪ್ಯಾಯಮಾನವಾಗುವ ಚಿತ್ರವಿದು.

೪.೫.೨. ಅಶ್ವಾರೂಢ ಬಸವಣ್ಣ

ಈ ಚಿತ್ರವನ್ನು ಡಾ. ಎನ್. ಎಂ. ಅಂಗಡಿಯವರು ತಮ್ಮ "ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ" ಎಂಬ ಪಿಎಚ್.ಡಿ ಮಹಾಪ್ರಬಂಧದಿಂದ ಬಳಸಿಕೊಳ್ಳಲಾಗಿದೆ. ಈ ಚಿತ್ರದಲ್ಲಿ ಆಕೃತಿಗಳ ತಾಳಮಾನವು ಸಮತೋಲನವಿಲ್ಲ. ಕುದುರೆಗೆ ಹೆಚ್ಚು ಒತ್ತು ನೀಡಲಾಗಿದೆ. ವಾಸ್ತವದಲ್ಲಿ ಕುದುರೆಯ ಗಾತ್ರ ಮನುಷ್ಯನಿಗಿಂತ ಎತ್ತರವಿದ್ದರೂ, ಕಲಾಕೃತಿಯಲ್ಲಿ ಆಕೃತಿಗಳ ಸಂಯೋಜನಾ ರೀತಿ ಆಯಾ ಕೃತಿಗಳ ಗಾತ್ರವನ್ನು ಸರಿದೂಗಿಸುತ್ತವೆ. ಕಾಗದ ಹಾಗೂ ಕ್ಯಾನ್ವಾಸ್ ಮೇಲೆ ಚಿತ್ರ ರಚಿಸುವಷ್ಟು ಸುಲಭ ಇಲ್ಲಿ ಸಾಧ್ಯವಿಲ್ಲ. ಈ ಚಿತ್ರದಲ್ಲಿನ ಪ್ರಸಂಗವು ಕಲ್ಯಾಣದಲ್ಲಿ ಬಸವಣ್ಣನವರು ಮಂತ್ರಿ ಪದವಿಯನ್ನು ಹೊಂದಿದ್ದ ಸಂದರ್ಭದಲ್ಲಿದ್ದು, ಆದರೆ ಕಲಾವಿದ ಬಸವಣ್ಣನವರ ಹಿಂದೆ ಸಂಗಮೇಶ್ವರ ದೇವಾಲಯ ರಚಿಸಿರುವುದನ್ನು ಗಮನಿಸದಲ್ಲಿ, ಬಸವಣ್ಣನವರು ಕಲ್ಯಾಣದಿಂದ ಸಂಗಮಕ್ಕೆ ಬರುವ ಅಥವಾ ಅಲ್ಲಿಂದ ಮತ್ತೇ ಕಲ್ಯಾಣಕ್ಕೆ ಕುದುರೆಯ ಮೇಲೆ ಹಿಂದಿರುಗುವಂತೆ ಭಾಸವಾಗುತ್ತದೆ. ಇಲ್ಲಿ ಬೂದು, ಹಸಿರು, ನೀಲಿ, ಕಂದು ಹಾಗೂ ಕಪ್ಪು ವರ್ಣಗಳನ್ನು ಮಿತವಾಗಿ ಬಳಸಿಕೊಳ್ಳಲಾಗಿದೆ. ಇನ್ನುಳಿದಂತೆ ಬಸವಣ್ಣನವರು ಧರಿಸಿರುವ ನಿಲುವಂಗಿ ಮತ್ತು ಕುದುರೆಯ ತಲೆಯ ಮೇಲ್ಭಾಗದಲ್ಲಿನ ಹೂವಿನ ಗುಚ್ಚಕ್ಕೆ ಕೆಂಪು ವರ್ಣವನ್ನು ಗಾಢವಾಗಿ ಲೇಪಿಸಿರುವುದು ಕಂಡುಬರುತ್ತದೆ. ಸ್ವಲ್ಪಮಟ್ಟಿಗೆ ಕುದುರೆಯ ಹೊರತು ಪಡಿಸಿದಂತೆ ಬಸವಣ್ಣನವರ ಅಂಗ ರಚನೆಯು ಸರಿಯಾದ ತಾಳಮಾನದಲ್ಲಿ ಚಿತ್ರಗೊಂಡಿರುವುದಿಲ್ಲ. ಒಟ್ಟಾರೆ ಪ್ರಮಾಣವನ್ನು ಬಿಟ್ಟು ಚಿತ್ರಕಲೆಯ ಇನ್ನುಳಿದ ಐದು ಷಡಂಗಗಳನ್ನು ಈ ಚಿತ್ರದಲ್ಲಿ ಅಳವಡಿಸಿ–ಕೊಂಡಿರುವುದನ್ನು ಕಾಣಬಹುದು.

೪.೬. ಸಮ್ಮಿಶ್ರ ಮತ್ತು ಸಿಮೆಂಟ್ ಮಾಧ್ಯಮದಲ್ಲಿ ಬಸವಣ್ಣನವರು

ಸಮ್ಮಿಶ್ರ ಮಾಧ್ಯಮವೆಂದರೆ ಬಹು ಬಗೆಯ ಮಾಧ್ಯಮಗಳನ್ನು ದುಡಿಸಿಕೊಂಡು ರಚಿಸುವುದು. ಉದಾಹರಣೆಗೆ ಕಾಷ್ಠ, ಫೈಬರ್, ಸಿಮೆಂಟ್ ಹೀಗೆ ವಿವಿಧ ಮಾಧ್ಯಮಗಳನ್ನು ಸೇರಿಸಿ ರಚಿಸಿದ ಕಲಾಕೃತಿಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

೪.೬.೧. ಬಸವಣ್ಣನಿಗೆ ನಾಮಕರಣ ಮಾಡುವ ಸನ್ನಿವೇಶ (ಸಮ್ಮಿಶ್ರ)

ಪ್ರಸ್ತುತ ಕಲಾಕೃತಿಯು ಮೂರ್ತಿಶಿಲ್ಪಗಳ ಮಾದರಿಗೆ ಸೇರಿದ್ದು ಕೂಡಲಸಂಗಮದ ಬಸವ ಶರಣ ಕಲಾ ಸಂಗ್ರಹಾಲಯದಲ್ಲಿದೆ. ಶಿಶು ಬಸವಣ್ಣನಿಗೆ ನಾಮಕರಣ ಮಾಡುವ ಘಟನೆಯನ್ನು ಈ

ಕಲಾಕೃತಿ ಬಿಂಬಿಸುತ್ತದೆ. ಬಸವಣ್ಣನ ತಾಯಿ ಮಾದಲಾಂಬಿಕೆಯು ಶಿಶು ಬಸವಣ್ಣನನ್ನು ತನ್ನ ಎದೆಗೆ ಅವುಚಿ ಹಿಡಿದು ಎತ್ತಿಕೊಂಡಿದ್ದಾಳೆ. ಅವಳ ಎದುರಿಗೆ ತೊಟ್ಟಿಲು, ಅದಕ್ಕೆ ಕಟ್ಟಿದ ಹಗ್ಗಗಳು, ಅವಳ ಎಡ ಮತ್ತು ಬಲದಲ್ಲಿ ಕೆಂಪು ಮತ್ತು ನೀಲಿಬಣ್ಣದ ಸೀರೆಗಳನ್ನು ಧರಿಸಿದ ಸ್ತ್ರೀಯರಿದ್ದಾರೆ. ಒಟ್ಟು ಸನ್ನಿವೇಶವು ಒಂದು ಮೇಲ್ವರ್ಗದವರ ಮನೆಯೆಂಬುದನ್ನು ಸೂಚಿಸುತ್ತಿದ್ದು, ಹೊಳೆಯುವ ಕಂಭಗಳಿಂದ ಕೂಡಿರುವ ಮನೆಯ ಹಜಾರವು ಹೊಳೆಯುವ ಮತ್ತು ಅಲಂಕೃತ ಕಂಭಗಳಿಂದ ಅತ್ಯಾಕರ್ಷಕವಾಗಿ ಕಾಣುತ್ತಿದೆ. ಹಜಾರದ ಕಟ್ಟೆಯ ಮೇಲಿರುವ ಮಾನವಾಕೃತಿಗಳು ಆಕಾರ, ಎತ್ತರ, ವರ್ಣ ಮತ್ತು ಪ್ರಮಾಣದಲ್ಲಿ ಯೋಗ್ಯ ಸಂಯೋಜನೆಯನ್ನು ಹೊಂದಿದ್ದು ಕಲಾವಿದನ ಸಂಯಮ ಮತ್ತು ಶ್ರದ್ಧೆಯನ್ನು ಪ್ರಕಟಪಡಿಸುತ್ತವೆ. ಕಟ್ಟೆಯ ಮೇಲೆ ನಡೆಯುವ ಘಟನೆಗಳಲ್ಲಿ ಪಾಲ್ಗೊಂಡ ವ್ಯಕ್ತಿಗಳು ಮೇಲ್ವರ್ಗದವರನ್ನು ಪ್ರತಿನಿಧಿಸಿದರೆ, ಕಟ್ಟೆಯ ಕೆಳಗಡೆ ಮೂರು ಜನ ರಂಗವಲ್ಲಿಯ ಸುತ್ತ ಕುಳಿತಿರುವವರು ಕೆಳಜಾತಿಯ ಜನರು ಇರಬಹುದೆಂಬುದನ್ನು ಊಹಿಸಬಹುದು.

ಬಸವಣ್ಣನ ಹುಟ್ಟಿದ ಸಂದರ್ಭದಲ್ಲಿ ಜಾತಿ ಮತ್ತು ವರ್ಗವ್ಯವಸ್ಥೆ ಇನ್ನೂ ಸಜೀವವಾಗಿದ್ದುದರ ಸಂಕೇತವನ್ನು ಪ್ರಸ್ತುತ ಕಲಾಕೃತಿ ಬಿಂಬಿಸುತ್ತದೆ. ಚಿತ್ರದ ಎಡಭಾಗದಲ್ಲಿ ಒಬ್ಬ ವ್ಯಕ್ತಿಯು ಆಸನದ ಮೇಲೆ ಕುಳಿತಿದ್ದು ಆತನ ಪಕ್ಕದಲ್ಲಿ ಸ್ತ್ರೀಯೊಬ್ಬಳು ನಿಂತಿದ್ದಾಳೆ. ಮನೆಯ ಹಜಾರದ ಬಲಭಾಗದ ಮಂಟಪದಲ್ಲಿ ತೋಳುಗಳಿಲ್ಲದ ನೀಲಿ ಅಂಗಿಯನ್ನು ಧರಿಸಿದ ವ್ಯಕ್ತಿ ನಾಮಕರಣದ ಘಟನೆಯನ್ನು ಪೀಠದಲ್ಲಿ ಕುಳಿತು ನೋಡುತ್ತಿರುವಂತೆ ಒಡಮೂಡಿದ್ದಾನೆ. ಅವನ ಎಡಬದಿಯಲ್ಲಿ ತಲೆತುಂಬ ಸೆರಗು ಹೊದ್ದಿರುವ, ಮಿರುಗುವ ಸಿಮೆಂಟಿನ ಬಣ್ಣದ ಸೀರೆಯನ್ನು ಧರಿಸಿದ ಸ್ತ್ರೀಯೊಬ್ಬಳು ತಲೆಬಾಗಿಸಿ ನಾಮಕರಣದ ಘಟನೆಯನ್ನು ನೋಡುತ್ತಿದ್ದಾಳೆ. ಅವಳ ಸೀರೆಯ ಹೊಳಪು, ನಿರಿಗೆಗಳು ವರ್ಣನೆಗೆ ನಿಲುಕದಷ್ಟು ನೈಜವಾಗಿ ಮೂಡಿಬಂದಿವೆ. ಇಲ್ಲಿ ಬಂದಿರುವ ಪ್ರತಿಯೊಂದು ಕಂಭಗಳು ವಾಸ್ತವವಾಗಿ ತೇಗ, ಬೀಟೆ ಮುಂತಾದ ಉತ್ಕೃಷ್ಟ ಮರಗಳಿಂದ ನಿರ್ಮಾಣ ಮಾಡಿದವುಗಳಲ್ಲ. ಆದರೆ ಅವು ನಿಜವಾಗಿಯೂ ಮರದ ಕಂಭಗಳೆನ್ನುವಂತೆ ನೋಡುಗನಿಗೆ ಭಾಸವಾಗುವುದು ಖಂಡಿತ. ಇಲ್ಲಿ ಫೈಬರ್ ಗ್ಲಾಸ್ ಮಾಧ್ಯಮವನ್ನು ಕಲಾವಿದ ಅಚ್ಚುಕಟ್ಟಾಗಿ ದುಡಿಸಿಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

೪.೬.೨. ವಿಶ್ವಗುರು ಬಸವಣ್ಣನ ೧೧೦೮ ಅಡಿ ಎತ್ತರದ ಸಿಮೆಂಟ್ ಶಿಲ್ಪ

ಬಸವಣ್ಣನ ೧೧೦೮ ಅಡಿ ಎತ್ತರದ ಈ ಪುತ್ಥಳಿಯು ಬೀದರ್ ಜಿಲ್ಲೆಯ ಬಸವಕಲ್ಯಾಣದ ಬಸವ ಧರ್ಮ ಪೀಠದಲ್ಲಿ ಅನಾವರಣಗೊಂಡಿದೆ. ಪದ್ಮಾಸನದಲ್ಲಿ ಎಡಗೈಯಲ್ಲಿ ಹಸ್ತಪ್ರತಿ, ಬಲಗೈ ಹಸ್ತದ ತೋರುಬೆರಳು ಮತ್ತು ಹೆಬ್ಬೆರಳನ್ನು ಜೋಡಿಸಿ ಎದೆಯ ಮಟ್ಟಕ್ಕೆ ಹಿಡಿದು ಉಪದೇಶ ಮಾಡುವ ಭಂಗಿಯಲ್ಲಿ ಬಸವಣ್ಣ ಇಲ್ಲಿ ಕುಳಿತಿದ್ದಾನೆ. ಒಪ್ಪವಾಗಿ ಜೋಡಿಸಿದಂತಿರುವ ಕಪ್ಪುಮಿಶ್ರಿತ ಕಂದುವರ್ಣದ ತಲೆಗೂದಲು, ಪ್ರಮಾಣಬದ್ಧವಾದ ಕಿವಿಗಳು ಮತ್ತು ಅವುಗಳಲ್ಲಿ ರುದ್ರಾಕ್ಷಿಯ ಓಲೆಗಳು, ಕೊರಳಲ್ಲಿ ಬಟ್ಟೆಯಲ್ಲಿ ಕಟ್ಟಿದ ಇಷ್ಟಲಿಂಗ ಮತ್ತು ರುದ್ರಾಕ್ಷಿಯ ಏಕಮಣಿ ಸರ ಇವು ಬಸವಣ್ಣನ ಸಾಂಪ್ರದಾಯಿಕ

ಗುರುತಿನ ವಿವಿಧ ಚಿಹ್ನೆಗಳಾಗಿವೆ. ಕುಳಿತರೂ ನಿಂತಂತೆ ತೋರುವ ದೇಹ, ಚಪ್ಪಟೆಯಾದ ಮುಖ, ನೀಳವಾದ ಮೂಗು, ಕಾಂತಿಯುಕ್ತವಾದ, ಸಹಜವೆಂಬಂತೆ ತೋರುವ ಕಣ್ಣುಗಳ ದೃಷ್ಟಿ ಕಠಾರುವಾಕ್ಕಾಗಿ ರಚಿತಗೊಂಡಿವೆ. ಕಂದುಬಣ್ಣದ ತಲೆಗೂದಲು, ಮೀಸೆ, ರುದ್ರಾಕ್ಷಿಯ ಸರವೊಂದನ್ನು ಹೊರತುಪಡಿಸಿದರೆ, ಬಸವಣ್ಣನ ದೇಹವರ್ಣ ಮತ್ತು ಆತ ಧರಿಸಿದ ಪಂಚೆ, ಮೇಲುವಸ್ತ್ರಗಳು ಅರಿಶಿಣ (ಹಳದಿ) ಬಣ್ಣದಿಂದ ಕೂಡಿವೆ. ಪ್ರಮಾಣಬದ್ಧತೆಯನ್ನು ಕಾಯ್ದುಕೊಳ್ಳುವಲ್ಲಿ, ಕಲಾಕೃತಿ ತರ್ಕಬದ್ಧ ನಿಲುವನ್ನು ಹೊಂದಲು ಕೃತಿಕಾರನಿಗೆ ಮಾನವ ಅಂಗರಚನಾ ಪಕ್ವತೆ ಪ್ರಬುದ್ಧವಾಗಿರಬೇಕು ಎಂಬುದಕ್ಕೆ ಈ ಸಿಮೆಂಟ್ ಶಿಲ್ಪವು ಸೂಕ್ತ ನಿದರ್ಶನವಾಗುತ್ತದೆ. ೧೦೮ ಅಡಿಯ ಶಿಲ್ಪವನ್ನು ರಚಿಸುವುದು ಸಾಮಾನ್ಯ ವಿಷಯವೂ ಏನಲ್ಲ. ಅತೀ ಹತ್ತಿರದಲ್ಲೇ ನಿಂತುಕೊಂಡು ಶಿಲ್ಪವನ್ನು ರಚಿಸಬೇಕಾಗುತ್ತದೆ. ಹೀಗಾಗಿ ದೇಹಾಕೃತಿಯ ಅಂಗಗಳ ಪ್ರಮಾಣಬದ್ಧತೆಗಳನ್ನು ಸುಲಭವಾಗಿ ಗ್ರಹಿಸಲು ಆಗುವುದಿಲ್ಲ. ಕರಡು ಪ್ರತಿಯಲ್ಲಿ ಅಂಗಾಂಗಗಳ ಉದ್ದಗಲಗಳನ್ನು ಪರಿಪಕ್ವವಾಗಿ ರಚಿಸಿಕೊಂಡು ಇಂತಹ ಶಿಲ್ಪಗಳ ರಚನೆಗೆ ತೊಡಗುತ್ತಾರೆ. ಕೆಳಗಡೆ ಪೀಠ, ಅದರ ಮೇಲೆ ಬೃಹದಾಕಾರದ ಬಸವಣ್ಣ ಆಂಗಿಕವಾಗಿ ಬಹು ಪ್ರಬುದ್ಧವಾಗಿ ರಚಿಸಲ್ಪಟ್ಟಿದ್ದಾನೆ. ದೇಹದ ಅವಯವಗಳು, ದೇಹದ ಮೇಲೆ ಧರಿಸಿರುವ ತೆಳುವಾದ ಬಟ್ಟೆಗಳು, ಮುಖದಲ್ಲಿನ ಮಂದಹಾಸ ಹೀಗೆ ಎಲ್ಲವೂ ಪಕ್ವಯುತವಾಗಿ ರಚನೆಗೊಂಡಿರುವುದರಿಂದ ಸಾರ್ವತ್ರಿಕವಾಗಿ ಈ ಶಿಲ್ಪ ಗಮನಾರ್ಹ-ವಾದುದಾಗಿದೆ.

೪.೭. ಮುದ್ರಣ ಮಾಧ್ಯಮಗಳಲ್ಲಿ ಬಸವಣ್ಣನವರ ಕುರಿತ ವರ್ಣಚಿತ್ರಗಳು

ಬಸವಣ್ಣನ ವ್ಯಕ್ತಿತ್ವವನ್ನು ನಾಡಿಗೆ ಪರಿಚಯಿಸುವ ನಿಟ್ಟಿನಲ್ಲಿ ಸಾಹಿತಿಗಳು, ಕವಿಗಳು, ಲೇಖಕರು, ಕಲಾವಿದರು ಅವರವರ ಮಾಧ್ಯಮಗಳ ಮೂಲಕ ದಾಖಲಿಸಲು ಯತ್ನಿಸಿದ್ದಾರೆ. ಸಾಹಿತಿಗಳು, ಲೇಖಕರು ಬಸವಣ್ಣನ ಜೀವನ, ಸಾಧನೆಗಳನ್ನು ಅಕ್ಷರಮಾಧ್ಯಮಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಅವರ ಸಾಹಿತ್ಯ ಕೃತಿ ಮತ್ತಷ್ಟು ಪರಿಣಾಮಕಾರಿಯಾಗಲು ತಮ್ಮ ಕೃತಿಗಳ ಮುಖಪುಟಗಳಲ್ಲಿ ಬಸವಣ್ಣನ ರೇಖಾಚಿತ್ರ, ಕಪ್ಪು ಬಿಳುಪು ಚಿತ್ರ ಇಲ್ಲವೆ ವರ್ಣಚಿತ್ರಗಳನ್ನು ಅಳವಡಿಸುತ್ತಾರೆ. ಕಲಾವಿದರು ಬಸವಣ್ಣನ ಬಗೆಗೆ ಇರುವ ತಮ್ಮ ಪ್ರೀತಿ, ಅಭಿಮಾನಗಳನ್ನು ವ್ಯಕ್ತಪಡಿಸಲು ಹೆಚ್ಚು ವರ್ಣಚಿತ್ರ ಮಾಧ್ಯಮವನ್ನೇ ಬಳಕೆ ಮಾಡಿಕೊಂಡಿರುವುದು ಕಂಡುಬರುತ್ತದೆ. ದೀನಬಂಧು ಬಸವಣ್ಣ, ಬಸವ ಮಹಾದರ್ಶನ, ವಚನಾಂಜಲಿ, ಎನ್ನ ನಾ ಹಾಡಿಕೊಂಡೆ, ಬಸವಣ್ಣನವರ ವಚನಗಳಲ್ಲಿ ಮಾನವತಾವಾದ ಕೃತಿಗಳ ಮುಖಪುಟಗಳಲ್ಲಿ ಬಸವಣ್ಣನ ವರ್ಣಚಿತ್ರಗಳನ್ನು ಅಳವಡಿಸಿರುವುದನ್ನು ಕಾಣುತ್ತೇವೆ. ಇದರೊಟ್ಟಿಗೆ ಕನ್ನಡದ ಪ್ರತಿಷ್ಠಿತ ನಿಯತಕಾಲಿಕೆಗಳಾದ ಬಸವಬೆಳಗು, ಬಸವ ಜರ್ನಲ್, ಬಸವಪಥಗಳ ಮುಖಪುಟಗಳಲ್ಲಿ ಬಸವಣ್ಣನ ವರ್ಣಚಿತ್ರಗಳ ಬಳಕೆಯಿದೆ. ಅವುಗಳಲ್ಲಿ ಪ್ರಮುಖವಾದ ಮತ್ತು ಸಾಂಕೇತಿಕವಾದ ಬಸವಣ್ಣನ ವರ್ಣಚಿತ್ರಗಳ ವಿಶ್ಲೇಷಣೆಯನ್ನು ಇಲ್ಲಿ ನೀಡಲಾಗಿದೆ.

೪.೭.೧. ದೀನಬಂಧು ಬಸವಣ್ಣ

ದೀನಬಂಧು ಬಸವಣ್ಣ ಎಂಬ ಕೃತಿಯ ಮುಖಪುಟದಲ್ಲಿ ಬಸವಣ್ಣ ಕಪ್ಪುಬಣ್ಣದ ವ್ಯಕ್ತಿಯೊಬ್ಬನನ್ನು ಆಲಿಂಗಿಸಿಕೊಂಡ ಚಿತ್ರಣವಿದೆ. ಜಲವರ್ಣ ಸಂಪ್ರದಾಯಕ್ಕೆ ಸೇರಿದ ಈ ಚಿತ್ರದ ಹಿನ್ನೆಲೆಯಲ್ಲಿ ಕಂದು-

ಕೆಂಪು ಬಣ್ಣದ ಕುಂಚದ ಬೀಸುಗಳ ಮಿಶ್ರಣವಿದೆ. ಕಪ್ಪು ಬಣ್ಣದ ಇಳಿಯಬಿಟ್ಟ ತಲೆಗೂದಲು, ತಲೆಯ ಮಧ್ಯೆ ಅಸ್ಪಷ್ಟವಾಗಿ ಕಾಣುವ ಬೈತಲೆ, ಹಣೆಯಲ್ಲಿ ಬಿಳಿಬಣ್ಣದ ವಿಭೂತಿ ಧಾರಣೆ, ಕಪ್ಪು ಬಣ್ಣದ ಹುರಿಮೀಸೆ, ಮುಚ್ಚಿದ ಕಣ್ಣು ರೆಪ್ಪೆಗಳು, ತೆಳುಹಳದಿ ಬಣ್ಣದ ತುಂಬು ತೋಳಿನ ನಿಲುವಂಗಿಯನ್ನು ಧರಿಸಿದ ಬಸವಣ್ಣ ಕಪ್ಪುಬಣ್ಣದ ದಲಿತನೊಬ್ಬನನ್ನು ತನ್ನೆರಡು ಬಾಹುಗಳಿಂದ ಆಲಿಂಗಿಸಿಕೊಂಡಿರುವ ಸನ್ನಿವೇಶವಿಲ್ಲಿದೆ. ದೀನರಿಗೆ ಬೆಳಕಾಗಿರುವ ಬಸವಣ್ಣ ಅಸ್ಪೃಶ್ಯತೆಯನ್ನು ತೊಡೆದುಹಾಕಿ, ಮಾನವಪ್ರೇಮವನ್ನು ಬೆಂಬಲಿಸಿ ಮೂರ್ತರೂಪಗೊಳಿಸಿರುವುದಕ್ಕೆ ಕುರುಹಾಗಿ ಈ ಚಿತ್ರ ಮೂಡಿಬಂದಿದೆ.

ನೋಡುಗರಿಗೆ ಬಹು ಹತ್ತಿರದಿಂದ ಕಾಣುವಂತೆ ಚಿತ್ರಿಸಿದ ಈ ಚಿತ್ರದಲ್ಲಿ ಬಸವಣ್ಣನು ದಲಿತ ವ್ಯಕ್ತಿಯನ್ನು ಪ್ರೀತಿ–ಆದರಗಳಿಂದ ಅಪ್ಪಿಕೊಂಡು ಕಣ್ಣನ್ನು ಮುಚ್ಚಿರುವ ಸನ್ನಿವೇಶವು ಹೃದಯತುಂಬಿ ಬರುವಂತಿದೆ. ದಲಿತ ವ್ಯಕ್ತಿಯು ತನ್ನ ಬೋಳುತಲೆಯನ್ನು ಬಸವಣ್ಣನ ಭುಜದ ಮೇಲಿರಿಸಿದ್ದಾನೆ. ಬಸವಣ್ಣನ ಮುಖಮುದ್ರೆಯು ದಲಿತನ ಎಲ್ಲ ಸಂಕಷ್ಟಗಳನ್ನು ತಾನು ತೆಗೆದುಕೊಂಡಿದ್ದೇ ಎನ್ನುವಂತೆ ವ್ಯಕ್ತವಾಗಿದೆ. ಆಶಯದ ದೃಷ್ಟಿಯಿಂದ ಈ ಚಿತ್ರವು ತನ್ನ ಉದ್ದೇಶವನ್ನು ಬಹುಪಾಲು ಯಶಸ್ವಿಗೊಳಿಸಿದೆ. ಮಾನವಾಕೃತಿಗಳ ಪ್ರಮಾಣದ ದೃಷ್ಟಿಯಿಂದ ಕಲಾವಿದ ಇಲ್ಲಿ ಎಚ್ಚರಿಕೆ ವಹಿಸಿಲ್ಲದಿರುವುದು ಮೇಲ್ನೋಟಕ್ಕೆ ಗೋಚರವಾಗುತ್ತದೆ. ಬಸವಣ್ಣನ ಭುಜ ಮತ್ತು ತೋಳುಗಳು ಅಗತ್ಯಕ್ಕಿಂತ ಹೆಚ್ಚು ವಿಶಾಲವಾಗಿವೆ. ಕತ್ತು ಮತ್ತು ತಲೆಯ ಪ್ರಮಾಣವು ಒಟ್ಟು ದೇಹಪ್ರಮಾಣಕ್ಕೆ ತುಸು ಕಡಿಮೆಯಾದಂತೆ ತೋರುತ್ತದೆ. ಮೇಲ್ಭಾಗದಲ್ಲಿ ಶೀರ್ಷಿಕೆಯನ್ನು ಅಳವಡಿಸುವ ಕಾರಣವಾಗಿ ಆಕೃತಿಗಳನ್ನು ಸ್ಥಳಾವಕಾಶದ ಕೆಳಭಾಗಕ್ಕೆ ಸಂಯೋಜಿಸಿದ್ದು ಉದ್ದೇಶಪೂರ್ವಕ. ಇದೊಂದು ಅಂಶವನ್ನು ಹೊರತುಪಡಿಸಿದರೆ ಆಶಯ, ವರ್ಣಸಂಯೋಜನೆ, ಭಾವನೆಗಳ ಅಭಿವ್ಯಕ್ತಿಯಲ್ಲಿ ಪ್ರಸ್ತುತ ಚಿತ್ರವು ನೋಡುಗನಿಗೆ ಇಷ್ಟವಾಗುತ್ತದೆ.

೪.೭.೨. ವಚನಾಂಜಲಿ (ಭಾಗ–೧)

ವಚನಾಂಜಲಿ ಭಾಗ–೧, ಎಂಬ ಕೃತಿಯಲ್ಲಿ ಬಸವಣ್ಣನ ಭಕ್ತಿಯ ವಚನಗಳನ್ನು ನಿರ್ವಚಿಸಲಾಗಿದ್ದು, ಆ ಕೃತಿಯ ಮುಖಪುಟದಲ್ಲಿ ಸುಂದರ ಪ್ರಕೃತಿಯಲ್ಲಿ ಬಸವಣ್ಣ ಇಷ್ಟಲಿಂಗಪೂಜೆ ಮಾಡುತ್ತಿರುವ ಸನ್ನಿವೇಶವನ್ನು ನಿರೂಪಿಸಲಾಗಿದೆ. ಜಲವರ್ಣದ ಈ ಚಿತ್ರದಲ್ಲಿ ಬಸವಣ್ಣ ಧರಿಸಿದ ವಸ್ತ್ರಗಳಿಗೆ ಗಾಢವಾದ ಕಾವಿಬಣ್ಣವನ್ನು ಹೊರತುಪಡಿಸಿದರೆ ಉಳಿದ ನೀಲಿ, ಹಸಿರು, ಹಳದಿ ಮುಂತಾದ ವರ್ಣಗಳು ಈ ಕಲಾಕೃತಿಯಲ್ಲಿ ಸಿಂಹಪಾಲು ಪಡೆದಿವೆ. ಆಗ ತಾನೆ ಉದಯಿಸುತ್ತಿರುವ ಸೂರ್ಯ ತಿಳಿಕೇಸರಿ ಬಣ್ಣದಿಂದ ಕೂಡಿದ್ದು, ಸೂರ್ಯನ ಸುತ್ತಲಿನ ಪ್ರಭೆ ತಿಳಿಹಳದಿ ಬಣ್ಣದಿಂದ ಕೂಡಿದೆ. ಬಸವಣ್ಣ ಇಷ್ಟಲಿಂಗಪೂಜೆಯಲ್ಲಿ ತೊಡಗಿದ ಈ ಸ್ಥಳವು ಕೂಡಲಸಂಗಮವೆನ್ನುವುದಾದರೆ, ಇಲ್ಲಿ ವಾಸ್ತವವಾಗಿ ಬೆಟ್ಟಗಳು ಕಂಡುಬರುವುದಿಲ್ಲ. ಆದರೆ ಕಲಾವಿದ ಇಲ್ಲಿ ಬೆಟ್ಟಗಳ ಸಾಲನ್ನು ಚಿತ್ರಿಸುವುದರ ಮೂಲಕ ಹೊಸದೃಷ್ಟಿ ಬೀರಿದ್ದಾನೆ. ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಸಂಗಮವನ್ನು ಕಲಾವಿದ ವಾಸ್ತವಿಕ ನೆಲೆಯಲ್ಲಿ ಚಿತ್ರಿಸಿದ್ದಾನೆ. ತಲೆಯಿಂದ ಇಳಿಯಬಿಟ್ಟ ಕಪ್ಪುತಲೆಗೂದಲು, ಹಣೆಯಲ್ಲಿ ಸ್ಪಷ್ಟವಾಗಿ ಕಾಣುವ ವಿಭೂತಿ ಧಾರಣೆ, ಕೊರಳಲ್ಲಿ ದಪ್ಪವಾಗಿರುವ ರುದ್ರಾಕ್ಷಿಗಳ ಸರ, ಕಿರುಮೀಸೆ, ಎಡಗೈಯಲ್ಲಿ ಇಷ್ಟಲಿಂಗ, ಅದರ ಸುತ್ತಲೂ ಹಲವು ಬಣ್ಣದ ಹೂವುಗಳು, ಕಾವಿ ಬಣ್ಣದ ಪಂಚೆ, ಮೇಲುವಸ್ತ್ರವನ್ನು ದೇಹದ ತುಂಬ ಹೊದ್ದುಕೊಂಡು ಬಲಗೈಯಲ್ಲಿ ಕರ್ಪೂರದ

ಆರತಿಯನ್ನು ಇಷ್ಟಲಿಂಗಕ್ಕೆ ಬೆಳಗುತ್ತ, ಇಷ್ಟಲಿಂಗಪೂಜೆಯಲ್ಲಿ ತಲ್ಲೀನನಾಗಿರುವ ಬಸವಣ್ಣನ ವ್ಯಕ್ತಿತ್ವ ಆಕರ್ಷಕವಾಗಿದೆ. ಕೆಂಪು ಕಂಬಳಿಯ ಮೇಲೆ ಚಿಕ್ಕದಾದ ದೀಪ, ತಟ್ಟೆಯಲ್ಲಿ ಹೂವುಗಳು, ಲೋಟದಲ್ಲಿ ಹುದುಗಿಸಿದ ಊದುಬತ್ತಿಗಳು, ಅವುಗಳಿಂದ ಅಂಕುಡೊಂಕಾಗಿ ಹೊರಡುತ್ತಿರುವ ಬಿಳಿಯ ಬಣ್ಣದ ಹೊಗೆ, ಘಂಟೆ, ಛತ್ರಿಗಳು ನೋಡುಗರ ಗಮನಸೆಳೆಯುತ್ತವೆ.

ಬಸವಣ್ಣನ ತಲೆಯ ತುಂಬ ವೃತ್ತಾಕಾರದ ಹಸಿರು ಮತ್ತು ಹಳದಿ ಬಣ್ಣಗಳಿಂದ ಕೂಡಿದ ಪಾರದರ್ಶಕವಾದ ಪ್ರಭಾವಳಿಯಿದ್ದು, ಭಿತ್ತಿಯಲ್ಲಿ ಹಸಿರು ಮತ್ತು ನೀಲಿಬಣ್ಣಗಳು ಎದ್ದುಕಾಣುತ್ತವೆ. ಅವುಗಳ ಮಧ್ಯೆ ಕೂಡಲಸಂಗಮದ ಐಕ್ಯಮಂಟಪವು ಸಾಂಕೇತಿಕವಾಗಿ ಚಿತ್ರಿಸಲ್ಪಟ್ಟಿದ್ದು, ಯಾಥಾದರ್ಶನದ ನೀತಿಯನ್ವಯ ದೂರ ಮತ್ತು ಸಾಮೀಪ್ಯಗಳನ್ನು ಕಲಾವಿದರು ಅತ್ಯಂತ ಸಮರ್ಪಕವಾಗಿ ಚಿತ್ರಿಸಿದ್ದಾರೆ. ವರ್ಣನಿರ್ವಹಣೆಯಲ್ಲಿ ತಾಜಾತನವನ್ನು ಉಳಿಸಿಕೊಂಡು ಬಂದ ಕಲಾವಿದರು, ತಮ್ಮಲ್ಲಿರುವ ಅಕಾಡೆಮಿಕ್ ಅನುಭವವನ್ನು ಇಲ್ಲಿ ಮರುಸ್ಥಾಪಿಸಿ ಅನನ್ಯತೆಯನ್ನು ಮೆರೆದಿದ್ದಾರೆ.

೪.೭.೩. ಬಸವಣ್ಣನವರ ವಚನಗಳಲ್ಲಿ ಮಾನವತಾವಾದ

"ಬಸವಣ್ಣನವರ ವಚನಗಳಲ್ಲಿ ಮಾನವತಾವಾದ" ಕೃತಿಯ ಮುಖಪುಟ, ಮೂಲತಃ ವಿ.ಟಿ. ಕಾಳೆಯವರು ರಚಿಸಿದ ಇಷ್ಟಲಿಂಗಪೂಜೆಯಲ್ಲಿ ನಿರತನಾದ ಬಸವಣ್ಣನ ಚಿತ್ರವನ್ನು ಆಧಾರವಾಗಿಟ್ಟುಕೊಂಡು, ಎರಡನೆಯ ಕಲಾವಿದರು ಕಂಪ್ಯೂಟರ್ ಗ್ರಾಫಿಕ್ಸ್ ಎಫೆಕ್ಟ್ಸ್‌ನ ಮೂಲಕ ಈ ಮುಖಪುಟವನ್ನು ವಿನ್ಯಾಸಗೊಳಿಸಲಾಗಿದೆ. ಅದಕ್ಕೆ ಪೂರಕವಾಗಿ ನಿರ್ಮಾಣವಾದ ಸನ್ನಿವೇಶವು ಉತ್ತಮವಾಗಿದ್ದು ಉನ್ನತ ಮಟ್ಟದ ಆಲೋಚನೆಗಳನ್ನು ಕಲಾವಿದ ಇಲ್ಲಿ ಕಂಪ್ಯೂಟರ್ ಗ್ರಾಫಿಕ್ಸ್ ಮೂಲಕ ಸಾಕಾರಗೊಳಿಸಿದ್ದಾನೆ. ಒಟ್ಟು ಕಲಾಕೃತಿಯಲ್ಲಿ ಹಾಲುಬಿಳುಪು, ಗಾಢನೀಲಿ, ಹಸಿರು, ಮುಂತಾದ ತಂಪುವರ್ಣಗಳ ಬಳಕೆಯು ಪ್ರಧಾನವಾಗಿದೆ. ಮಟ್ಟಸವಾದ ಕಪ್ಪಾದ ಕಿರುಗೂದಲನ್ನು ಹೊಂದಿದ ತಲೆ, ಹಣೆಯಲ್ಲಿ ತೆಳುವಾದ ವಿಭೂತಿಯ ಗೆರೆಗಳು, ಕಿರುಮೀಸೆ, ಬಿಲ್ಲಿನಂತೆ ಬಾಗಿದ ಹುಬ್ಬು, ಅರೆಮುಚ್ಚಿದ ಕಣ್ಣುಗಳು, ನೀಳವಾದ ಮೂಗು, ಕಪ್ಪುಬಣ್ಣದ ಅಚ್ಚುಕಟ್ಟಾದ ಕಿರುಮೀಸೆ, ಕೊರಳಲ್ಲಿ ಕೆಂಪು ಬಣ್ಣದ ಇಷ್ಟಲಿಂಗದ ಗಂಟು, ರುದ್ರಾಕ್ಷಿಮಾಲೆ, ಹೊಳೆಯುವ ಹಳದಿ ಅಂಚಿನ ಬಿಳಿಯ ಮೇಲುವಸ್ತ್ರ ಧರಿಸಿದ ಬಸವಣ್ಣ, ತನ್ನ ಎಡಗೈಯಲ್ಲಿ ಕಪ್ಪು ಬಣ್ಣದ ಇಷ್ಟಲಿಂಗವನ್ನು ಹಿಡಿದು ಪೂಜೆಯಲ್ಲಿ ನಿರತನಾಗಿದ್ದಾನೆ.

ಬಸವಣ್ಣನ ಎದೆಯಿಂದ ಕೆಳಗೆ ಅತ್ಯಂತ ಸುಂದರವಾದ ನೀಲಿಬಣ್ಣದ ನೀರಿನಿಂದ ಆವೃತವಾದ ಭೂಮಿಯ ಆಕೃತಿಯನ್ನು ಇಲ್ಲಿ ಕಂಪ್ಯೂಟರ್ ಗ್ರಾಫಿಕ್ಸ್ ಮೂಲಕ ಆಕರ್ಷಕವಾಗಿ ಕಲಾವಿದ ಸಂಯೋಜಿಸಿದ್ದಾನೆ. ಭೂಮಿಯನ್ನು ಬಿಳಿಬಣ್ಣದ ವಿಶಾಲವಾದ ರೆಕ್ಕೆಗಳ ಮೇಲೆ ಹೊತ್ತು ಹಾರುತ್ತಿರುವ ಪಕ್ಷಿಯ ಛಾಯಾಚಿತ್ರವನ್ನು ಇಲ್ಲಿ ಸಂಯೋಜಿಸಲಾಗಿದೆ. ಈವರೆಗಿನ ಸಾಹಿತ್ಯ, ಕಾವ್ಯ, ಶಾಸ್ತ್ರ, ಪುರಾಣಗಳಲ್ಲಿ ಭೂಮಿಯನ್ನು ಆದಿಶೇಷನು ತನ್ನ ಹೆಡೆಯ ಮೇಲೆ ಹೊತ್ತಿದ್ದಾನೆ ಇಲ್ಲವೆ ವರಾಹವು (ಹಂದಿ) ತನ್ನ ಕೋರೆಗಳ ಮೇಲೆ ಭೂಮಿಯನ್ನು ಹಿಡಿದು ನಿಂತಿರುವ ಸನ್ನಿವೇಶಗಳನ್ನು ಮಾತ್ರ ಗ್ರಹಿಸಿದ್ದ ಸಹೃದಯರಿಗೆ

ಈ ಚಿತ್ರದಲ್ಲಿ ಭೂಮಿಯನ್ನು ಪಕ್ಷಿಯೊಂದು ಹೊತ್ತು ಹಾರುತ್ತಿರುವುದು ಅಪರೂಪವೆನ್ನಿಸಿದೆ. ಪಕ್ಷಿಯ ರೆಕ್ಕೆಯ ಮೇಲೆ ಭೂಮಿ, ಅದರ ಹಿಂದೆ ಬಸವಣ್ಣ, ಬಸವಣ್ಣನ ಹಿಂದೆ ಮಾನವಾಕೃತಿಯ ಆತ್ಮದ ಚಿತ್ರಣವನ್ನು ಕಲಾವಿದ ಇಲ್ಲಿ ಚಿತ್ರಿಸಿದ್ದಾನೆ. ಭಿತ್ತಿಯಲ್ಲಿ ಬಸವಣ್ಣನ ಪ್ರಭಾವಳಿಯು ದುಂಡಾಗಿರದೆ ಗುಲಾಬಿ, ನೀಲಿ, ಹಸಿರು, ಹಳದಿ ಮುಂತಾದ ಲಘುವರ್ಣಗಳ ಸಂಯೋಜನೆಯೊಂದಿಗೆ ರೇಖೆಗಳ ಮೂಲಕ ಮೆದುವಾಗಿ ಹೊರಹೊಮ್ಮಿದೆ. ಗಗನದಲ್ಲಿ ಪಕ್ಷಿಗಳ ಸಾಲು ಹಾರುತ್ತಿರುವುದು ಛಾಯಾಚಿತ್ರವಾಗಿದ್ದು, ಮುಖಪುಟ ವಿನ್ಯಾಸಕಾರನ ಒಟ್ಟು ಕಲ್ಪನೆಯ ಉದ್ದೇಶವು, ಭೂಮಿಯು ಜಂಗಮಸ್ವರೂಪಿಯೆಂಬುದನ್ನು ತಿಳಿಯಪಡಿಸಲು ಪ್ರಯತ್ನಿಸಿರುವಂತಿದೆ. ಒಟ್ಟಿನಲ್ಲಿ ಪ್ರಸ್ತುತ ಕಲಾಕೃತಿಯು ವರ್ಣಚಿತ್ರ ಮತ್ತು ಕಂಪ್ಯೂಟರ್ ಗ್ರಾಫಿಕ್ಸ್‌ಗಳ ಒಂದು ಅಪೂರ್ವ ಸಂಯೋಗವೆನ್ನಿಸಿದೆ.

೪.೭.೪. ಬಸವ ಮಹಾದರ್ಶನ

'ಬಸವಮಹಾದರ್ಶನ' ಎಂಬ ಕೃತಿಯ ಮುಖಪುಟದಲ್ಲಿ ಬಸವಣ್ಣನ ಭಾವಚಿತ್ರವನ್ನು ಕಲಾವಿದ ಅಳವಡಿಸಿದ್ದಾನೆ. ತೈಲವರ್ಣಕ್ಕೆ ಸೇರಿದ ಈ ಚಿತ್ರವು ಬಸವಣ್ಣನ ಇತರ ಭಾವಚಿತ್ರಗಳಿಗಿಂತ ಕೆಲವು ಅಂಶಗಳಲ್ಲಿ ಭಿನ್ನವಾಗಿ ಕಂಡುಬರುತ್ತದೆ. ತೈಲವರ್ಣದ ಈ ಚಿತ್ರದಲ್ಲಿ ಹಳದಿ ಮತ್ತು ಕೆಂಪು, ಸ್ವಲ್ಪ ಬಿಳಿಬಣ್ಣಗಳೇ ಪ್ರಧಾನವಾಗಿ ಬಳಕೆಯಾಗಿವೆ. ತಲೆ ಮಟ್ಟಸವಾದ ಕಪ್ಪು ಬಣ್ಣದ ಕಿರು ತಲೆಗೂದಲು, ಹಣೆಯಲ್ಲಿ ಧರಿಸಿದ ವಿಭೂತಿಯ ಗೆರೆಗಳು, ತಿದ್ದಿ ತೀಡಿದಂತಿರುವ ಹುಬ್ಬುಗಳು, ಬೆಕ್ಕಿನ ಕಣ್ಣುಗಳಂತೆ ಕಂಡುಬರುವ, ಮಂದದೃಷ್ಟಿಯನ್ನು ಬೀರುವ ನೇತ್ರಗಳು, ಸ್ವಲ್ಪ ಅಗಲವಾದರೂ ನೀಳವಾಗಿರುವ ಮೂಗು, ಕೆಂಪುಬಣ್ಣದ, ದೃಢತೆಯನ್ನು ಸೂಚಿಸುವ ದಪ್ಪ ತುಟಿಗಳು, ಲಘುಕಂದುಬಣ್ಣದ ಮೀಸೆ, ನೀಳವಾದ ಕಿವಿಗಳು, ಅವುಗಳ ಕೆಳಗೆ ನೇತಾಡುತ್ತಿರುವ ರುದ್ರಾಕ್ಷಿಯ ಓಲೆಗಳು, ಕೊರಳಲ್ಲಿ ದಟ್ಟವಾದ ಕೆಂಪುಬಣ್ಣದಲ್ಲಿ ಸುತ್ತಿರುವ ಇಷ್ಟಲಿಂಗ, ರುದ್ರಾಕ್ಷಿಯ ಮಾಲೆಯನ್ನು ಧರಿಸಿರುವ ಬಸವಣ್ಣನನ್ನು ಇಲ್ಲಿ ಕಾಣುತ್ತೇವೆ.

ಅಗಲವಾದ ಮುಖ, ದಪ್ಪವಾದ ಬಲಿಷ್ಠವಾದ ಕೊರಳು, ಅದರಲ್ಲಿ ಎದ್ದುತೋರುವ ಕೊರಳಿನ ಗಂಟು, ಬಲವಾದ ಭುಜಗಳು ಬಸವಣ್ಣನನ್ನು ಒಬ್ಬ ಜಟ್ಟಿಯಂತೆ ಬಿಂಬಿಸುತ್ತಿವೆ. ರೌದ್ರವಾದ ವರ್ಣಗಳನ್ನು ಹಿನ್ನೆಲೆಯಲ್ಲಿ ಬಳಸಿರುವುದರಿಂದ ಬಸವಣ್ಣನ ಮುಖದ ಭಾವನೆಯು ಸೌಮ್ಯವಾಗಿರುವಂತೆ ಕಂಡುಬರುವುದಿಲ್ಲ. ಗಡುಸಾದ ಭಾವನೆಗಳು ಹೊರನೋಟಕ್ಕೆ ಆತನ ಮುಖದಲ್ಲಿ ಕಂಡುಬರುತ್ತವೆ. ಬಹುಶಃ ಇದಕ್ಕೆ ಕೆಂಪು, ಹಳದಿ ಮತ್ತು ಬಣ್ಣಗಳ ಬಳಕೆ ಕಾರಣವಾಗಿರಬಹುದು. ಹೊಳೆಯುವ ಹಳದಿಬಣ್ಣದ ಅಂಚಿನ ನೀಲಿಮಿಶ್ರಿತ ಬಿಳಿಬಣ್ಣದ ಮೇಲುವಸ್ತ್ರವನ್ನು ಧರಿಸಿದ ಬಸವಣ್ಣನ ಎದೆಮಟ್ಟದ ಆಕೃತಿ ಮಾತ್ರ ನೋಡುಗರಿಗೆ ಲಭ್ಯವಾಗಿದೆ. ಬಸವಣ್ಣನ ತಲೆಯ ಸುತ್ತಲೂ ಪ್ರಕಾಶಮಾನವಾದ ಹಳದಿ ಮತ್ತು ಬಿಳಿಬಣ್ಣದ ವರ್ಣದ ಮಿಶ್ರಣದಿಂದ ಪ್ರಭಾವಳಿಯನ್ನು ರೂಪಿಸಲಾಗಿದ್ದು, ಅದರಿಂದ ಕಿರಣಗಳು ಹೊರಸೂಸುವಂತಿವೆ. ಸದೃಢವಾದ ವ್ಯಕ್ತಿತ್ವವನ್ನು ಬಸವಣ್ಣ ಹೊಂದಿದ್ದನೆಂದು ಬಿಂಬಿಸಲು ಕಲಾವಿದ ಇಲ್ಲಿ ಸಾಕಷ್ಟು ಶ್ರಮವಹಿಸಿದ್ದಾನೆ.

೪.೭.೫. ಬಸವ ಬೆಳಗು

'ಬಸವ ಬೆಳಗು' ಎಂಬ ನಿಯತಕಾಲಿಕೆಯ ಮುಖಪುಟದಲ್ಲಿ ಪ್ರಕಟವಾದ ಚಿತ್ರದಲ್ಲಿ ಮಡಿವಾಳ ಮಾಚಿದೇವ ಮತ್ತು ಬಸವಣ್ಣ ಇಬ್ಬರೂ ಮುಖಾಮುಖಿಯಾಗಿ ವಾದದಲ್ಲಿ ತೊಡಗಿರುವ ಸನ್ನಿವೇಶವನ್ನು ಕಾಣುತ್ತೇವೆ. ಹೊರವಲಯದಲ್ಲಿ ಚಿತ್ರಣಗೊಂಡ ಈ ಕಲಾಕೃತಿಯಲ್ಲಿ ಬಂಗಾರ ಬಣ್ಣದ ಕಿರೀಟ, ಕೊರಳಲ್ಲಿ ಹಲವು ಎಳೆಗಳಿಂದ ಕೂಡಿದ ಮುತ್ತಿನ ಹಾರ, ಬಿಳಿಯ ಬಣ್ಣದ ಬಟ್ಟೆಯಲ್ಲಿ ಕಟ್ಟಿಕೊಂಡ ಇಷ್ಟಲಿಂಗ, ಹಳದಿ ಬಣ್ಣದ ಜರಿಯ ಅಂಚುಗಳಿಂದ ಕೂಡಿದ ಬಿಳಿಯ ಬಣ್ಣದ ರೇಷ್ಮೆ ನಿಲುವಂಗಿ, ಹೆಗಲಿನಿಂದ ಮೊಣಕಾಲಿನವರೆಗೂ ಇಳಿಯಬಿಟ್ಟ ಕೆಂಪುಬಣ್ಣದ ಮೇಲುಹೊದಿಕೆ, ವಸ್ತ್ರಗಳನ್ನು ಉಟ್ಟ ಬಸವಣ್ಣನ ಮುಖ ಸುಂದರವಾಗಿದೆ. ತನ್ನೆದುರಿಗೆ ನಿಂತ ಮಡಿವಾಳ ಮಾಚಿದೇವನೊಂದಿಗೆ ಸಂವಾದದಲ್ಲಿ ತೊಡಗಿರುವ ದೃಶ್ಯವನ್ನು ಇಲ್ಲಿ ಕಾಣುತ್ತೇವೆ. ತಲೆಯಿಂದ ಬೆನ್ನಿನವರೆಗೂ ಇಳಿಯಬಿಟ್ಟ ಗುಂಗುರು ತಲೆಗೂದಲು, ಕಪ್ಪು ಮೀಸೆ, ಕಪ್ಪು ಬಣ್ಣದ ಗಡ್ಡ, ಕೊರಳಿನಲ್ಲಿ ತೆಳುವಾದ ಬಣ್ಣದ ಕಾವಿವಸ್ತ್ರದಲ್ಲಿ ಧರಿಸಿದ ಇಷ್ಟಲಿಂಗ, ಹೆಗಲ ಮೇಲೆ ಅದೇ ವರ್ಣದ ಮೇಲುಹೊದಿಕೆ, ಪಂಚೆಯನ್ನು ಉಟ್ಟ ಮಾಚಿದೇವನ ಆಕೃತಿ ಗಂಭೀರವಾದ ಮುಖಮುದ್ರೆಯಿಂದ ಕೂಡಿದೆ.

ಬಲಿಷ್ಠವಾದ ತೋಳು, ಎದೆಯ ಭಾಗಗಳು ತೆಳುನೀಲಿ ಬಣ್ಣದಿಂದ ರಚಿತವಾಗಿವೆ. ತನ್ನ ಎಡಗೈಯನ್ನು ಅರ್ಧಮಡಿಚಿ, ಕೈಯಲ್ಲಿ ಕತ್ತಿಯನ್ನು ಹಿಡಿದು, ಬಲಗೈಯನ್ನು ಸ್ವಲ್ಪ ಬಲಬದಿಗೆ ಚಾಚಿದ್ದಾನೆ. ಮಡಿವಾಳ ಮಾಚಿದೇವನ ಕಾಲಿನ ಬಳಿ, ತಲೆಯ ಮೇಲೆ ಬಂಗಾರದ ಕಿರೀಟ, ಬೆನ್ನಿನವರೆಗೆ ಇಳಿಯಬಿದ್ದ ಕಪ್ಪಾದ ಗುಂಗುರು ತಲೆಗೂದಲು, ಕಡುಗೆಂಪು ಬಣ್ಣದ ನಿಲುವಂಗಿ, ಹಳದಿ ಬಣ್ಣದ ಅಂಚಿನಿಂದ ಕೂಡಿದ ದಟ್ಟವಾದ ಹಸಿರುಬಣ್ಣದ ಸೊಂಟಕ್ಕೆ ಸುತ್ತಿಕೊಂಡ ಮೇಲುಹೊದಿಕೆ, ಹಳದಿಬಣ್ಣದ ಹೊಳೆಯುವ ರೇಷ್ಮೆ ಪಂಚೆ ಉಟ್ಟು ತನ್ನೆರಡು ಕೈಗಳನ್ನು ಮುಗಿದು ತನ್ನ ಮಂಡಿಯೂರಿ ಬಿಜ್ಜಳ ಮಹಾರಾಜ ಕುಳಿತಿದ್ದಾನೆ. ಆತನ ಹಿಂದೆ ಆನೆಯೊಂದು ನೆಲಕ್ಕೆ ಮಂಡಿಯೂರಿ, ತನ್ನ ಸೊಂಡಿಲನ್ನು ನೆಲಕ್ಕೆ ತಾಗಿಸಿ ವಿನಮ್ರ ಭಂಗಿಯಲ್ಲಿ ಕುಳಿತಿದೆ. ಬಸವಣ್ಣನ ಹಿಂದೆ ಬಿಳಿ ಬಣ್ಣದ ವಸ್ತ್ರಗಳನ್ನು ಧರಿಸಿದ ಸುಮಾರು ಜನರ ಗುಂಪೊಂದು ಕೈಗಳನ್ನು ಮುಗಿದು ನಮಸ್ಕರಿಸುವ ಭಂಗಿಯಲ್ಲಿ ನಿಂತಿದೆ. ಅವರ ಹಿಂದೆ ಅರಮನೆಯ ಚಿತ್ರ, ಅದರ ಬದಿಯಲ್ಲಿ ಸೊಂಡಿಲನ್ನು ಎತ್ತಿ ನಿಂತಿರುವ ಆನೆ ಮತ್ತು ಜನರ ಗುಂಪು ನಿಂತಿರುವುದು ಕಂಡುಬರುತ್ತದೆ. ಅತ್ಯಂತ ಪ್ರಣೀತ ಕಲಾವಿದ ಈ ಚಿತ್ರವನ್ನು ರಚಿಸಿರಬಹುದಾಗಿರುತ್ತದೆ. ಏಕೆಂದರೆ ಮೊದಲನೆಯದಾಗಿ, ಆಕೃತಿಗಳಲ್ಲಿ ಕಂಡು ಬರುವ ಆಂಗಿಕ ರಚನೆಗಳಲ್ಲಿ ಪ್ರಬುದ್ಧತೆ ಇದೆ. ಎರಡನೆಯದಾಗಿ, ಇಡೀ ಚಿತ್ರದಲ್ಲಿ ಯಥಾದರ್ಶನದ ನೀತಿಯನ್ವಯ ದೂರ ಮತ್ತು ಸಾಮೀಪ್ಯಗಳ ಸಾಂಗತ್ಯವಿದೆ. ವರ್ಣಗಳ ನಿರ್ವಹಣೆಯು ಸಹ ಅತ್ಯಂತ ಮೃದುವಾಗಿದ್ದು ಸಮರ್ಪಕವಾಗಿ, ಸಂದರ್ಭೋಚಿತವಾಗಿ ನಿರ್ವಹಿಸಲಾಗಿದೆ. ಆಕೃತಿಗಳಲ್ಲಿ ಭಾವಪ್ರದವಾಗಿರುವ ಹಾಗೂ ಒಟ್ಟು ಭಾವಪ್ರಚೋದಕವಾಗಿರುವ ಕಲಾಕೃತಿ ಇದಾಗಿದ್ದು, ಬಸವ ಬೆಳಗು ತ್ರೈಮಾಸಿಕ ಪತ್ರಿಕೆಯನ್ನು ಸತ್ವಯುತವಾಗಿಸಿದೆ.

೪.೭.೬. ಬಸವ ಜರ್ನಲ್ – ೧

ಬಸವ ಜರ್ನಲ್ ಪತ್ರಿಕೆಯ ಮುಖಪುಟದಲ್ಲಿ ಬಸವಣ್ಣನ ಪೂರ್ಣಪ್ರಮಾಣದ (ಲೈಫ್‌ಸೈಜ್) ಚಿತ್ರವನ್ನು ಕಲಾವಿದ ನಿರೂಪಿಸಿದ್ದಾನೆ. ಗಾಢವಾದ ಹಸಿರು, ತೆಳು ನೀಲಿ, ಮತ್ತು ಕೆಂಪು, ಹಳದಿ ವರ್ಣಗಳ ಮಿಶ್ರಣಗಳ ಬಣ್ಣಗಳು ಬಹುಪಾಲು ಬಳಕೆಗೊಂಡಿವೆ. ಎತ್ತರದ ನಿಲುವಿನ ಬಸವಣ್ಣ ಆಕರ್ಷಕ ನಿಲುವನ್ನು ಹೊಂದಿದ್ದಾನೆ. ಕೋಲು ಮುಖ, ಹಲವು ಬಣ್ಣಗಳಿಂದ ಅಲಂಕೃತಗೊಂಡ ಬಂಗಾರದ ಕಿರೀಟ, ಕಿರೀಟದ ಬಲಭಾಗದಲ್ಲಿ ಕೆಳಗೆ ಇಳಿಯಬಿದ್ದಿರುವ ಮುತ್ತಿನ ಸರದ ಗುಚ್ಛ, ಹಣೆಯಲ್ಲಿ ವಿಭೂತಿ, ನೀಳನಾಸಿಕ, ಕಿರುಮೀಸೆ, ಕೊರಳಲ್ಲಿ ರೇಡಿಯಂ ನೀಲಿ ಬಣ್ಣದ ಪದಕಗಳ ಹಾರ, ಬಿಳಿಯ ಗಂಟಿನಲ್ಲಿ ಕಟ್ಟಿಕೊಂಡಿರುವ ಇಷ್ಟಲಿಂಗ ಧರಿಸಿದ ಬಸವಣ್ಣ ಇಲ್ಲಿ ಆಕರ್ಷಕ ಭಂಗಿಯಲ್ಲಿ ನಿಂತುಕೊಂಡಿರುವಂತೆ ಕಲಾವಿದ ಚಿತ್ರಿಸಿದ್ದಾನೆ.

ಬಸವಣ್ಣ ಹಳದಿ, ಕೆಂಪುಮಿಶ್ರಿತ ಬಣ್ಣಗಳಿಂದ ಹೊಳೆಯುವ ರೇಷ್ಮೆವಸ್ತ್ರದ ತುಂಬು ತೋಳಿನ ನಿಲುವಂಗಿ, ಬಿಳಿಯ ಪಂಚೆ ಉಟ್ಟು, ಎರಡೂ ಕೈಗಳಿಂದ ಕಪ್ಪು ಬಣ್ಣದ ಬೆತ್ತವನ್ನು ಹಿಡಿದು ನೋಡುಗರಿಗೆ ಎದುರಾಗಿ ಕಾಣಿಸುವಂತೆ ನಿಂತಿದ್ದರೂ ತನ್ನ ಮುಖವನ್ನು ಬಲಬದಿಗೆ ಸ್ವಲ್ಪಭಾಗ ಓರೆಯಾಗಿಸಿ ನಿಂತಿದ್ದಾನೆ. ಮುಖದಲ್ಲಿ ನಗುವಿಲ್ಲ, ಚಿಂತಾಕ್ರಾಂತನಾಗಿರುವಂಥ ಭಾವನೆಯನ್ನು ಮುಖದಲ್ಲಿ ಹೊಂದಿದ್ದಾನೆ. ಎಡಬದಿಯಲ್ಲಿ ಬೆಲೆಬಾಳುವ ವಸ್ತ್ರಗಳಿಂದ ಕೂಡಿದ ಕಟ್ಟಿಗೆಯ ಕುರ್ಚಿಯಿದ್ದು, ಅದರ ತುದಿಗೆ ತನ್ನ ಎಡಗೈಯನ್ನು ಆನಿಸಿಕೊಂಡು ಬಸವಣ್ಣ ನಿಂತಿದ್ದಾನೆ. ಚಾಲುಕ್ಯ ಶೈಲಿಯ ವಾಸ್ತುಶಿಲ್ಪವನ್ನು ನೆನಪಿಸುವ ಕಂಭದ ಕೆಳಭಾಗ ಮಾತ್ರ ಬಸವಣ್ಣನ ಬಲಬದಿಯಲ್ಲಿದೆ. ಕೆಳಭಾಗ ಮಾತ್ರ ಕಾಣುವಂತೆ ನೆರಳು ಬೆಳಕಿನ ಚಮತ್ಕಾರವನ್ನು ಕಲಾವಿದ ಇಲ್ಲಿ ನಡೆಸಿದ್ದಾನೆ. ಬಸವಣ್ಣನ ಎಡಬದಿಯ ಕಿಟಕಿಯಲ್ಲಿ ಕೂಡಲಸಂಗಮನಾಥನ ದೇವಸ್ಥಾನದ ಗೋಪುರದ ಹಿನ್ನೆಲೆ ಸಾಂಕೇತಿಕವಾಗಿ ಮೂಡಿಬಂದಿದೆ. ಆತ ಧರಿಸಿರುವ ನಿಲುವಂಗಿಯ ಕುಸುರಿ ಕೆಲಸ ಕಲಾವಿದನ ತಾಳ್ಮೆ ಮತ್ತು ಪ್ರತಿಭೆಗೆ ಸಾಕ್ಷಿಯಾಗಿದೆ.

ಬಸವ ಜರ್ನಲ್ – ೨

ಪ್ರಸ್ತುತ ಮುಖಪುಟದಲ್ಲಿ ಬಸವಣ್ಣನ ಕುಳಿತ ಭಂಗಿಯ ಚಿತ್ರ ಮಾತ್ರವಿರುವುದು ವಿಶೇಷವಾಗಿದೆ. ತೈಲವರ್ಣ ಮಾಧ್ಯಮದಲ್ಲಿ ಈ ಚಿತ್ರವು ರಚಿತವಾಗಿದೆ. ಸಹಜ ದೇಹವರ್ಣ, ಮಟ್ಟಸವಾಗಿ ಕತ್ತರಿಸಿದಂತೆ ಕಾಣುವ ತಲೆಯ ಕಪ್ಪಾದ ಕಿರುಗೂದಲು, ಹಣೆಯಲ್ಲಿ ಸ್ಪಷ್ಟವಾಗಿ ಕಾಣುವ ವಿಭೂತಿಯ ಗೆರೆಗಳು, ಹುಬ್ಬುಗಳ ಮಧ್ಯದಲ್ಲಿ ದೊಡ್ಡದಾಗಿರುವ ಬೊಟ್ಟು, ಉದ್ದವಾದ ಕಿವಿ, ಅದರಲ್ಲಿ ನೇತಾಡುವ ರುದ್ರಾಕ್ಷಿಯ ಓಲೆ, ನೀಳವಾದ ಮೂಗು, ಕೊನೆಯಲ್ಲಿ ಹುರಿಮಾಡಿ ಕೆಳಮುಖ ಮಾಡಿರುವ ಕಪ್ಪು ಮೀಸೆ, ಒಪ್ಪವಾದ ತುಟಿಗಳನ್ನು ಹೊಂದಿರುವ ಬಸವಣ್ಣನ ಮುಖವು ಆಕರ್ಷಕವಾಗಿದೆ. ಬಲಬದಿಗೆ ತುಸು ಬಾಗಿಸಿದಂತೆ ತೋರುವ ಮುಖದಲ್ಲಿರುವ ಕಣ್ಣುಗಳು ನೈಜತೆಯ ಪರಮಾವಧಿ ಮತ್ತು ಜೀವಂತಿಕೆಯನ್ನು ಸೂಚಿಸುತ್ತಿವೆ. ಎಡಗೈಯಲ್ಲಿ ಹಿಡಿದ ಬಿಳಿಯ ಬಣ್ಣದ ತಾಳೆಗರಿಯ ಕಟ್ಟಿನಲ್ಲಿರುವ ಒಕ್ಕಣೆಯನ್ನು ತದೇಕಚಿತ್ತದಿಂದ ಓದುತ್ತಿರುವ ಭಂಗಿಯಂತೂ ಮೋಹಕವಾಗಿದೆ. ಕೊರಳಲ್ಲಿ ಕಾವಿಬಣ್ಣದ ವಸ್ತ್ರದ ಗಂಟಿನಲ್ಲಿ ಕಟ್ಟಿಕೊಂಡಿರುವ

ಇಷ್ಟಲಿಂಗ, ಕಪ್ಪಾದ ಅಂದವಾಗಿ ತೋರುವ ರುದ್ರಾಕ್ಷಿಯ ಮಾಲೆ, ಹಳದಿ ಬಣ್ಣದ ಅಂಚಿನಿಂದ ಕೂಡಿರುವ ಮಿರುಗುವ ಬಿಳಿ ಮಿಶ್ರಿತ ಕಾವಿಯ ಬಣ್ಣದ ಪಾರದರ್ಶಕವಾದ ಮೇಲು ಹೊದಿಕೆ ಮತ್ತು ಅದರ ನಿರಿಗೆಗಳು ಅದ್ಭುತವಾಗಿ ಮೂಡಿಬಂದಿವೆ.

ತನ್ನ ಬಲಗಾಲನ್ನು ಮಡಿಚಿ ಸುಖಾಸನದಲ್ಲಿ ಕುಳಿತಿರುವ ಬಸವಣ್ಣನ ಬಲಗೈ ಲೇಖನಿ ಹಿಡಿದಿದೆ. ಆದರೆ ಬಲಗೈಯ ಆಕಾರ ಕುಳಿತಿರುವ ಭಂಗಿಗೆ ಸಹಜವಾಗಿದೆಯೆನ್ನಿಸುವುದಿಲ್ಲ, ಅದನ್ನು ಬೇರೆಡೆಯಿಂದ ಅಂಟಿಸಿದಂತೆ ಕಾಣುತ್ತದೆ. ಬಸವಣ್ಣನ ಮುಂದಿರುವ ತಾಳೆಗರಿಯ ಗ್ರಂಥದಲ್ಲಿ ಬರೆದಿರುವ ಅಕ್ಷರಗಳ ಸಾಲು ಸ್ಪಷ್ಟವಾಗಿ ಗೋಚರಿಸುತ್ತದೆ. ಎಡಗೈಯಲ್ಲಿ ಹಿಡಿದಿರುವ ಹಸ್ತಪ್ರತಿಯ ಬಣ್ಣವು ಬಿಳಿಯ ಬಣ್ಣದ ಬದಲು ಸಹಜ ಹಸ್ತಪ್ರತಿಯ ಬಣ್ಣವಾಗಿದ್ದರೆ ಸರಿಯಾಗುತ್ತಿತ್ತು. ಕಲಾವಿದ ಚಿತ್ರದ ಆಶಯ, ವಿಷಯ ನಿರೂಪಣೆ, ಭಂಗಿ, ಭಾವನೆಗಳ ಪ್ರಕಟಣೆ ಈ ಎಲ್ಲ ಅಂಶಗಳನ್ನು ತುಂಬ ಎಚ್ಚರಿಕೆಯಿಂದ ಗಮನಿಸಿ ಚಿತ್ರಿಸಿದ್ದಾನೆ. ಆದರೆ ಪ್ರಮಾಣದ ದೃಷ್ಟಿಯಿಂದ ಚಿತ್ರ ನೋಡಿದರೆ, ಕುಳಿತಿರುವ ಭಂಗಿ ನಿಂತಿರುವ ಭಂಗಿಗೆ ಸಮನಾಗಿದೆ. ದೇಹಾಕೃತಿಯ ಎತ್ತರದ ಪ್ರಮಾಣವನ್ನು ಕಡಿಮೆ ಮಾಡಿದ್ದರೆ ಚಿತ್ರಕ್ಕೆ ಇನ್ನಷ್ಟು ಮೆರುಗು ಬರುತ್ತಿತ್ತು.

೪.೭.೭. ಬಸವಪಥ – ೧

ಬಸವಪಥ ನಿಯತಕಾಲಿಕೆಯ ಮುಖಪುಟದಲ್ಲಿರುವ ಬಸವಣ್ಣನ ಚಿತ್ರದಲ್ಲಿ ವರ್ಣಕ್ಕಿಂತ ರೇಖೆಗಳೇ ಪ್ರಧಾನವಾಗಿ ಮೂಡಿಬಂದಿರುವುದು ಕಂಡುಬರುತ್ತದೆ. ಈ ಚಿತ್ರದಲ್ಲಿ ಕಪ್ಪು ಬಣ್ಣದ ರೇಖೆಗಳಿಂದ ಬಸವಣ್ಣನ ಮುಖ ಮತ್ತು ಕತ್ತಿನ ಭಾಗಗಳು ಮಾತ್ರ ನೋಡುಗರಿಗೆ ಗೋಚರವಾಗುತ್ತಿವೆ. ತುಂಬ ಸರಳವಾಗಿ ಮತ್ತು ಸಾಂಕೇತಿಕವಾಗಿ ಕಲಾವಿದ ತನ್ನ ಕಲಾಕೃತಿಯ ಆಶಯವನ್ನು ಅಭಿವ್ಯಕ್ತಪಡಿಸಿದ್ದಾನೆ. ಬಂಗಾರದ ಕಿರೀಟ, ಕಿರೀಟದ ಬಲಬದಿಯಲ್ಲಿ ಮುತ್ತಿನ ಸರದ ಗುಚ್ಛ, ಹಣೆಯಲ್ಲಿ ರೇಖೆಮಾತ್ರದಿಂದ ಕಂಡುಬರುವ ಭಸ್ಮಧಾರಣೆ, ಭ್ರೂಮಧ್ಯದಲ್ಲಿ ವಿಭೂತಿಯ ಬೊಟ್ಟು, ಕಪ್ಪು ಆಲಿಗಳಿಲ್ಲದ ಬಿಳಿಯ ಕಣ್ಣುಗಳು, ಸುಂದರ ನಾಸಿಕ, ಕಪ್ಪಾದ ದಟ್ಟವರ್ಣದ ಆಕರ್ಷಕ ಮೀಸೆಗಳು, ಕೊರಳಲ್ಲಿ ವಿಭೂತಿಯ ಮೂರು ಗೆರೆಗಳು, ಈ ಸಂಗತಿಗಳು ಮಾತ್ರ ನೋಡುಗರಿಗೆ ಸ್ಪಷ್ಟವಾಗಿ ಕಂಡುಬರುತ್ತವೆ. ಬಸವಣ್ಣನ ಹಿನ್ನೆಲೆಯಲ್ಲಿ ದುಂಡಾಗಿರುವ ಪಾರದರ್ಶಕವಾದ ಪ್ರಭಾವಳಿಯಿದ್ದು, ಕೆಂಪು ಮತ್ತು ಹಳದಿ ವರ್ಣಗಳ ಮಿಶ್ರಣದ ತ್ರಿಕೋನಾಕಾರದ ಮೆಟ್ಟಿಲುಗಳು ಕೆಳಮುಖವಾಗಿವೆ. ಬಹುಶಃ ಇವು ಷಟ್ಸ್ಥಲಗಳನ್ನು ಸಾಂಕೇತಿಕವಾಗಿ ಸೂಚಿಸುತ್ತಿದ್ದಿರಬೇಕು.

ಬಸವಣ್ಣನ ಕೆಳಭಾಗದಲ್ಲಿ ಹಲವು ಕಾಯಕಗಳನ್ನು ಮಾಡುವ ಹತ್ತಾರು ಕೈಗಳಲ್ಲಿ ಎರಡು ಹೆಣ್ಣಿನ ಕೈಗಳು, ಉಳಿದವು ಗಂಡಸಿನ ಕೈಗಳಾಗಿವೆ. ಮೊದಲನೆಯ ಕೈಯಲ್ಲಿ ಹಸಿರುಬಣ್ಣದ ತೆನೆಗಳಿವೆ, ಅದರ ಬದಿಯಲ್ಲಿ ಕುಡುಗೋಲನ್ನು ಹಿಡಿದ ಕೈ, ನಂತರ ಘಂಟೆಯನ್ನು ಹಿಡಿದಿರುವ ಕೈ, ಅದರ ಪಕ್ಕದಲ್ಲಿ ಬಳೆಗಳನ್ನು ಧರಿಸಿದ ಇಷ್ಟಲಿಂಗವನ್ನು ಪೂಜಿಸುವ ಕೈ, ಪರಶು (ಕಿರುಕೊಡಲಿ)ವನ್ನು ಹಿಡಿದ ಕೈ, ಹಗ್ಗವನ್ನು ಹಿಡಿದಿರುವ ಕೈ, ಕುಂಬಾರನ ಚಕ್ರದಲ್ಲಿ ಮಡಕೆಯನ್ನು ರೂಪಿಸುತ್ತಿರುವ ಕೈ, ನೇಯ್ಗೆಯನ್ನು

ಮಾಡುವ ಕೈ, ಕೊನೆಯದಾಗಿ ತಾಳೆಗರಿಗಳಲ್ಲಿ ಪಾರಿವಾಳದ ಗರಿಯಿಂದ ಬರೆಯುತ್ತಿರುವ ಕೈ–ಹೀಗೆ ಕಲಾವಿದ ಇಲ್ಲಿ ಬಸವಣ್ಣನೊಂದಿಗೆ ಕಾಯಕದಲ್ಲಿ ನಿರತರಾದ ಶರಣರನ್ನು ಕೇವಲ ಅವರ ಮೊಣಕೈ ಹಾಗೂ ಮಣಿಕಟ್ಟುಗಳ ಮೂಲಕ ವೃತ್ತಿಯನ್ನು ನಿರ್ದೇಶಿಸುವ ಚಮತ್ಕಾರವನ್ನು ಇಲ್ಲಿ ಮೆರೆದಿದ್ದಾನೆ. ಭಿತ್ತಿಯಲ್ಲಿ ತಿಳಿ ಹಸಿರುಬಣ್ಣವು ನೋಡುಗರಿಗೆ ಮುದವನ್ನು ನೀಡುತ್ತದೆ. ಬಸವಣ್ಣ, ಷಟ್‌ಸ್ಥಲ, ಹಾಗೂ ಕಾಯಕಜೀವಿಗಳನ್ನೊಳಗೊಂಡ ಆಶಯವನ್ನು ಕಲಾವಿದ ಇಲ್ಲಿ ಯಶಸ್ವಿಯಾಗಿ ಒಡಮೂಡಿಸಿದ್ದಾನೆ.

ಬಸವಪಥ – ೨

ಕಂಪ್ಯೂಟರ್ ಗ್ರಾಫಿಕ್ಸ್ ಎಫೆಕ್ಟ್ಸ್ ಬಳಸಿಕೊಂಡು ವಿನ್ಯಾಸಗೊಳಿಸಿದ, ಡಿಸೆಂಬರ್ ೨೦೧೦ರ ಸಂಚಿಕೆಯ ಮುಖಪುಟದಲ್ಲಿ ಬಾಲಕ ಬಸವಣ್ಣನ ಬಾಲ್ಯಜೀವನದ ಸನ್ನಿವೇಶವೊಂದನ್ನು ನಿರೂಪಿಸಲಾಗಿದೆ. ಈ ಚಿತ್ರದಲ್ಲಿ ಅಚ್ಚ ಬಿಳಿ, ಕಡುನೀಲಿ, ಕಡು ಹಳದಿ, ನಸುಗೆಂಪು, ಹಸಿರು ವರ್ಣಗಳು ಬಳಕೆಯಾಗಿದ್ದರೂ ಹಿನ್ನೆಲೆಯ ನೀಲಿ ಮತ್ತು ಬಸವಣ್ಣನ ದೇಹ ವರ್ಣ, ನಿಲುವಂಗಿಯ ಬಿಳಿವರ್ಣಗಳೇ ಎದ್ದು ಕಾಣಿಸುತ್ತವೆ. ಬೋಳು ತಲೆಯ, ಮಿರುಗುವ ಕಂದು ಬಣ್ಣದ ಕಣ್ಣುಗಳು, ಒಪ್ಪವಾದ ಮೂಗು, ಬಾಲ್ಯದ ಕೋಮಲತೆಯನ್ನು ಸೂಚಿಸುವ ಕೆಂಪು ತುಟಿಗಳು, ಕೊರಳಲ್ಲಿ ಇಷ್ಟಲಿಂಗದ ಕೆಂಪುವಸ್ತ್ರದ ಗಂಟು, ಕೈಗಳ ಮಣಿಕಟ್ಟುಗಳೆರಡರಲ್ಲಿ ರುದ್ರಾಕ್ಷಿ ಮತ್ತು ಮುತ್ತಿನ ಅಥವಾ ಕಡಗದಂತೆ ತೋರುವ ಕಂಕಣಗಳು, ಹೊಳೆಯುವ ಬಿಳುಪಾದ ಕುತ್ತಿಗೆಯವರೆಗೆ ಕಟ್ಟಿ ಗಂಟು ಹಾಕಿಕೊಂಡ ಮೇಲುವಸ್ತ್ರಗಳು ಬಸವಣ್ಣನ ಬಾಲ್ಯದ ಚಿತ್ರಣವನ್ನು ಕಟ್ಟಿಕೊಡುತ್ತವೆ. ಆದರೆ ಹೊಳೆಯುವ ಬಲಿಷ್ಟವಾದ ಕಾಲುಗಳು ಬಾಲ್ಯದ ಮೃದುತನವನ್ನು ಸೂಚಿಸದೆ ಪ್ರಾಯದ ವ್ಯಕ್ತಿಯ ಕಾಲುಗಳನ್ನು ಹೋಲುವಂತಿವೆ. ಬಾಲಕ ಬಸವಣ್ಣ ತನಗೆ ಜನಿವಾರವನ್ನು ಹಾಕುವ ಪದ್ಧತಿಯನ್ನು ವಿರೋಧಿಸಿ, ತನ್ನೆರಡೂ ಕೈಗಳಿಂದ ನಿರಾಕರಣೆ ಮಾಡಿ ಹೊರಡುವ ಭಂಗಿಯಲ್ಲಿದ್ದಾನೆ. ಈ ಘಟನೆಗೆ ಪೂರಕವಾಗಿ ಕೆಳಗೆ ಕುಳಿತಿರುವ ಮಾದರಸ, ಮಾದಲಾಂಬಿಕೆ, ಮತ್ತು ಬಲಬದಿಯಲ್ಲಿ ಮಣೆಯ ಮೇಲೆ ಠೀವಿಯಿಂದ ಕುಳಿತಿರುವ ಬ್ರಾಹ್ಮಣನೊಬ್ಬ, ಅಗ್ನಿಕುಂಡದ ಮುಂದೆ ಉಪನಯನದ ಸಿದ್ಧತೆಯಲ್ಲಿ ತೊಡಗಿ, ಆದೇಶಿಸುವ ಭಂಗಿಯಲ್ಲಿದ್ದಾನೆ. ಮಾದಲಾಂಬಿಕೆ, ಮಾದರಸ, ಇವರ ಹಿಂಬದಿಯಲ್ಲಿ ಕೆಂಪು, ನೀಲಿ, ಹಸಿರು ಬಣ್ಣದ ಸೀರೆ, ವಸ್ತ್ರಗಳನ್ನು ಧರಿಸಿದ ಹೆಂಗಸರು, ಅವರ ಎದುರಿಗೆ ಬಿಳಿ ವಸ್ತ್ರವನ್ನು ಧರಿಸಿ ಮಸುಕಾಗಿ ಕಾಣುವ ಮಾನವಾಕೃತಿಗಳು ಒಟ್ಟು ಚಿತ್ರದ ಆಶಯಕ್ಕೆ ಪೂರಕವಾಗಿ ಮೂಡಿಬಂದಿವೆ.

ಬಸವಪಥ – ೩

ಪ್ರಸ್ತುತ ಮುಖಪುಟದಲ್ಲಿ ಬಸವಣ್ಣ ಮತ್ತು ಮಹಾತ್ಮಾಗಾಂಧಿಯ ಎರಡು ಚಿತ್ರಗಳಿವೆ. ಮೇಲೆ ಚಿತ್ರಿತವಾಗಿರುವ ಬಸವಣ್ಣ ಕಲಾವಿದನ ಕುಂಚದಿಂದ ತಿದ್ದಿತೀಡಿದಂತಿದೆ. ತೈಲವರ್ಣದಲ್ಲಿ ರಚಿಸಿರುವ ಈ ಚಿತ್ರದಲ್ಲಿ ಹೊಳೆಯುವ ಬಂಗಾರದ ಕಿರೀಟ, ಅದರಲ್ಲಿ ಕೆಂಪು ಹಸಿರು ಬಣ್ಣದ ಹರಳುಗಳು, ಒಪ್ಪವಾದ ಆಕಾರದ ಮುಖದಲ್ಲಿ ಹಣೆಯಲ್ಲಿ ವಿಭೂತಿ, ಭ್ರೂಮಧ್ಯದಲ್ಲಿ ವಿಭೂತಿಯ ಬೊಟ್ಟು, ಹೊಳೆಯುವ ಅಂದವಾದ ಕಪ್ಪು ಕಣ್ಣುಗಳು, ಸುಂದರವಾದ ಮೂಗು, ಅಚ್ಚುಕಟ್ಟಾಗಿ ತಿದ್ದಿದ ಮೀಸೆ, ದಪ್ಪವೆಂದು

ಕಂಡುಬರುವ ತುಟಿಗಳು, ನೋಡುಗನ ಕಣ್ಣಿಗೆ ಗೋಚರಿಸುವ ಎಡಗಿವಿಯಲ್ಲಿ ರುದ್ರಾಕ್ಷಿಯ ಓಲೆಯನ್ನು ಧರಿಸಿದ ಬಸವಣ್ಣನ ಮುಖ ಓರೆಯಾಗಿ ಕಂಡುಬರುತ್ತದೆ. ಕೊರಳನ್ನು ಆವರಿಸಿದ ಹೊಳೆಯುವ ಬಂಗಾರದ ಬಣ್ಣದ ಅಂಚಿನ ಬಿಳಿಯ ನಿಲುವಂಗಿ, ಕಾವಿಬಣ್ಣದಲ್ಲಿ ಎದ್ದುತೋರುವಂತೆ ಧರಿಸಿದ ಇಷ್ಟಲಿಂಗದ ಗಂಟು, ಕಪ್ಪಾದ, ಮಧ್ಯಮಗಾತ್ರದ ಆಕಾರದ ರುದ್ರಾಕ್ಷಿಯ ಸರ, ಮುತ್ತಿನ ಹಾರ, ಹೆಗಲ ಮೇಲೆ ಇಳಿಯಬಿದ್ದ ಕೆಂಪು ಮತ್ತು ಹಳದಿ ಮಿಶ್ರಿತ ಬಣ್ಣದ ಮೇಲುಹೊದಿಕೆಯು ಚಿತ್ರಕ್ಕೆ ಮತ್ತಷ್ಟು ರಂಗು ಮೂಡಿಸಿದೆ. ಬಸವಣ್ಣನ ಚಿತ್ರದ ಕೆಳಗೆ ಬಿಳಿ ಕೂದಲಿನ ದಪ್ಪ ಮೀಸೆ, ದುಂಡಾಕಾರದ ಕನ್ನಡಕ ಧರಿಸಿದ ಗಾಂಧಿಯ ಮುಖಚಿತ್ರ ಆಕರ್ಷಕವಾಗಿ ಮೂಡಿಬಂದಿದ್ದು, ⅛ ಕ್ರೌನ್ ಅಳತೆಯ ಪುಸ್ತಕದ ಮುಖಪುಟದಲ್ಲಿ ಈ ಎರಡೂ ಭಾವಚಿತ್ರಗಳನ್ನು ಯಾವುದೇ ಪರಿಣಾಮಗಳನ್ನು ಬಳಸದೇ ಮಧ್ಯದಲ್ಲಿ ಸಂಯೋಜಿಸಲಾಗಿದೆ. ಕೆಳಭಾಗದ ಮೂಲೆಗೆ ಬಳ್ಳಿಯಂತಹ ವಿನ್ಯಾಸಗಳನ್ನು ದುಡಿಸಿಕೊಳ್ಳಲಾಗಿದೆ.

೪.೭.೮. ಎನ್ನ ನಾ ಹಾಡಿಕೊಂಡೆ

'ಎನ್ನ ನಾ ಹಾಡಿಕೊಂಡೆ' ಕೃತಿಯ ಮುಖಪುಟದಲ್ಲಿ ಬಸವಣ್ಣ ಅಧ್ಯಯನದಲ್ಲಿ ತೊಡಗಿರುವ ಚಿತ್ರವನ್ನು ಮೂಲ ಕಲಾಕೃತಿಯಾಗಿಸಿಕೊಂಡು, ಕಂಪ್ಯೂಟರ್ ಗ್ರಾಫಿಕ್ಸ್‌ನಲ್ಲಿ ಈ ರಕ್ಷಾಪುಟವನ್ನು ವಿನ್ಯಾಸ ಮಾಡಲಾಗಿದೆ. ನೀಲಿಬಣ್ಣದಲ್ಲಿ ಅದ್ದಿದ ಬಿಳಿಯ ಪಂಚೆ, ಮೇಲುಹೊದಿಕೆ, ಕೊರಳಲ್ಲಿ ನೀಲಿ ಬಣ್ಣದ ಇಷ್ಟಲಿಂಗದ ಗಂಟು, ಒತ್ತೊತ್ತಾಗಿ ಬೆಸೆದಂತಿರುವ ರುದ್ರಾಕ್ಷಿಗಳ ಮಾಲೆ, ತೆಳುವಾದ ದೇಹ, ವಿಶಾಲವಾದ ಭುಜ, ತಲೆಯಲ್ಲಿ ಕಪ್ಪು ಬಣ್ಣದ ಮಟ್ಟಸವಾಗಿ ಕತ್ತರಿಸಿದಂತೆ ಕಾಣುವ ಕೂದಲು, ಎದ್ದುಕಾಣದಂತೆ ಧರಿಸಿರುವ ವಿಭೂತಿ, ಗಾಢವಾಗಿ ಆಲೋಚನೆ ಮಾಡುವಾಗ ಬಲವಂತದಿಂದ ಮುಚ್ಚಿ ಕಿರುನೋಟವನ್ನು ಬೀರುವ ಕಣ್ಣುಗಳು, ಬಲಗೈಯಲ್ಲಿ ಕಂಠ, ಎಡಗೈಯಲ್ಲಿ ತಾಳೆಗರಿಯ ಕೆಲವು ಓಲೆಗಳನ್ನು ತೊಡೆಯ ಮೇಲಿಟ್ಟು ಕುಳಿತಿರುವ ಬಸವಣ್ಣನ ಭಂಗಿಯು ತೀವ್ರವಾದ ಆಲೋಚನೆ ಮಾಡುವ ರೀತಿಯಲ್ಲಿ ಅಭಿವ್ಯಕ್ತವಾಗಿದೆ. ತಾಳೆಗರಿಯ ಕಟ್ಟನ್ನು ಎರಡು ಭಾಗವನ್ನಾಗಿ ಮಾಡಿ ಒಂದು ಭಾಗವನ್ನು ಬಸವಣ್ಣನ ಎದುರಿಗೆ ಕೆಳಗಿರುವ ಕಾವಿಬಣ್ಣದ ಕಟ್ಟಿಗೆಯ ಪೀಠವೊಂದರ ಮೇಲಿಡಲಾಗಿದೆ. ಉಳಿದ ತಾಳೆಗರಿಯ ಕಟ್ಟಿನ ಎಲೆಗಳನ್ನು ತೊಡೆಯ ಮೇಲೆ ಇಟ್ಟುಕೊಂಡಿದ್ದು, ಅವೆರೆಡು ಕಟ್ಟುಗಳಿಗೆ ದಾರವನ್ನು ಬಂಧಿಸಿರುವುದನ್ನು ಕಾಣಬಹುದಾಗಿದೆ. ಬಸವಣ್ಣನ ಹಿಂಬದಿಯಲ್ಲಿ ನೆರಳಿನ ಆಕೃತಿಯು ಕಪ್ಪುವರ್ಣದಿಂದ ರೂಪಿತಗೊಂಡಿದೆ. ಇಲ್ಲಿ ಪ್ರಭಾವಳಿಯಿಲ್ಲದಿರುವುದು ವಿಶೇಷವಾಗಿದೆ. ಭಿತ್ತಿಯಲ್ಲಿ ಗಾಢವಾದ ಕಂದು ಬಣ್ಣ ಮತ್ತು ಹಳದಿ ಮಿಶ್ರಿತ ಬಿಳಿಬಣ್ಣದ ಸಂಯೋಜನೆಯಿಂದ ಕಲಾಕೃತಿಯು ನೋಡುಗರ ಗಮನಸೆಳೆಯುವಲ್ಲಿ ಯಶಸ್ವಿಯಾಗಿದೆ.

೪.೭.೯. ಬಸವಣ್ಣ ಮತ್ತು ಅಂಬೇಡ್ಕರ್

ಕಂಪ್ಯೂಟರ್ ಗ್ರಾಫಿಕ್ಸ್‌ನಲ್ಲಿ ವಿನ್ಯಾಸಗೊಂಡ ಈ ಚಿತ್ರದಲ್ಲಿ ಬಸವಣ್ಣನ ಸಾಂಪ್ರದಾಯಿಕ ಚಿತ್ರ ಮತ್ತು ಅಂಬೇಡ್ಕರ್ ಅವರ ಛಾಯಾಚಿತ್ರ, ಕಪ್ಪು ವರ್ಣದ ಮೂವರು ನಿಂತ ಭಂಗಿಯಲ್ಲಿರುವ ವ್ಯಕ್ತಿಗಳನ್ನು ಮುಖಪುಟದಲ್ಲಿ ಅಳವಡಿಸಿದ್ದಾನೆ. ಚಿತ್ರದ ಎಡಭಾಗದಲ್ಲಿ ಬಂಗಾರದ ಕಿರೀಟ, ಹಣೆಯಲ್ಲಿ ವಿಭೂತಿ, ಸ್ಪಷ್ಟವಾಗಿ ಕಾಣುವ ಕಪ್ಪು ಕಣ್ಣುಗಳು, ಕಿರುಮೀಸೆ, ಸುಂದರವಾದ ಮುಖವನ್ನು ಹೊಂದಿರುವ ಬಸವಣ್ಣನ

ಚಿತ್ರವಿದೆ. ಕೊರಳಲ್ಲಿ ರುದ್ರಾಕ್ಷಿಯ ಮಾಲೆ, ಕೆಂಪುವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ಮಿರುಗುವ ಜರತಾರಿ ವಸ್ತ್ರಗಳನ್ನು ಧರಿಸಿದ ಬಸವಣ್ಣನ ದೇಹದ ಅರ್ಧಭಾಗದ ಚಿತ್ರ ಗೋಚರಿಸಿದೆ. ಇಡೀ ಚಿತ್ರದಲ್ಲಿ ಕೆಂಪು ಮತ್ತು ಕಂದು ಬಣ್ಣಗಳ ಬಳಕೆಯಿದ್ದರೂ ಹೆಚ್ಚು ಕಾವಿ ಬಣ್ಣದ ಛಾಯೆಯೇ ಪ್ರಧಾನವಾಗಿ ಕಂಡುಬಂದಿದೆ. ಬಸವಣ್ಣನ ಪಕ್ಕದಲ್ಲಿರುವ ಅಂಬೇಡ್ಕರ್ ಚಿತ್ರವು ಗದ್ದಕ್ಕೆ ಕೈಹೊತ್ತು ಆಲೋಚನಾ ಭಂಗಿಯಲ್ಲಿದೆ. ಎರಡೂ ಚಿತ್ರಗಳನ್ನು ಲಂಬವಾಗಿರುವ ಎರಡು ಪಟ್ಟಿಕೆಗಳಲ್ಲಿ ಸಂಯೋಜಿಸಲಾಗಿದೆ. ಅಂಬೇಡ್ಕರ್ ಚಿತ್ರದ ಕೆಳಗೆ ಮೂರು ಆಕೃತಿಗಳನ್ನು ಸೂಚ್ಯವಾಗಿಸಿಕೊಂಡು ಚಿತ್ರಿಸಲಾಗಿದೆ.

೪.೭.೧೦. ಅರಿವು–ಆಚಾರ

ಈ ಮುಖಪುಟದ ಮಧ್ಯಭಾಗದಲ್ಲಿ ಪೀಠದಲ್ಲಿ ಕುಳಿತಿರುವ ಬಸವಣ್ಣನ ಚಿತ್ರವಿದೆ. ಇದರ ಸುತ್ತಲೂ ವಿವಿಧ ಶರಣರ ೧೬ ಚಿತ್ರಗಳಿವೆ. ಚಿತ್ರದ ಮಧ್ಯದಲ್ಲಿರುವ ಬಸವಣ್ಣ ಬಂಗಾರದ ಬಣ್ಣದ ಅಂಚನ್ನುಳ್ಳ ಹಸಿರುಬಣ್ಣದ ಮೆತ್ತೆಯ ಕುರ್ಚಿಯ ಮೇಲೆ ಕುಳಿತಿದ್ದಾರೆ. ಹಸಿರುಬಣ್ಣದ ಅಂಚನ್ನುಳ್ಳ ಬಿಳಿಬಣ್ಣದ ತುಂಬುತೋಳಿನ ನಿಲುವಂಗಿ, ಪಂಚೆಯನ್ನು ಉಟ್ಟು ತನ್ನ ಬಲ ಪಾದವನ್ನು ನೀಲಿಬಣ್ಣದ ಚಿಕ್ಕ ಪೀಠವೊಂದರ ಮೇಲಿರಿಸಿದ್ದಾನೆ. ನೆಲಕ್ಕೆ ಹಾಸಿದ ಕಡುಹಸಿರು ಬಣ್ಣದ ಹಾಸುಗೆ, ಗೋಡೆಗೆ ತಿಳಿಹಸಿರು ಬಣ್ಣವನ್ನು ಲೇಪಿಸಲಾಗಿದೆ. ಚಿತ್ರವು ನೋಡುಗರಿಗೆ ದೂರದಿಂದ ಕಾಣುತ್ತಿರುವಂತೆ ಭಾಸವಾಗುತ್ತದೆ. ಬಸವಣ್ಣನ ಮುಖ ಚಿಕ್ಕದಾಗಿದ್ದರೂ ಆಕರ್ಷಕವಾಗಿದೆ. ತಲೆಯಲ್ಲಿ ಕಿರೀಟ, ಕೊರಳಲ್ಲಿ ಇಷ್ಟಲಿಂಗದ ಕೆಂಪು ವಸ್ತ್ರದ ಗಂಟು, ರುದ್ರಾಕ್ಷಿ ಮಾಲೆಗಳು ಗಮನ ಸೆಳೆಯುತ್ತವೆ. ತಾನು ಕುಳಿತ ಬಲಭಾಗದಲ್ಲಿ ಚಿಕ್ಕ ಮೇಜೊಂದರ ಮೇಲೆ ಹಸ್ತಪ್ರತಿಗಳ ಗಂಟುಗಳನ್ನು ಕಾಣುತ್ತೇವೆ. ಮುಖಪುಟದಲ್ಲಿರುವ ಎಲ್ಲ ಚಿತ್ರಗಳನ್ನು ನೋಡಿದರೆ, ಕಲಾವಿದ ಇಲ್ಲಿ ಜ್ಞಾನ ಮತ್ತು ಕ್ರಿಯೆ –ಇವುಗಳ ಸಂಗಮವನ್ನು ಬಿಂಬಿಸಿದ್ದಾನೆ.

೪.೭.೧೧. ಬಸವಕೃಪ

ಈ ಮುಖಪುಟದಲ್ಲಿ ತೆಲುಗುಭಾಷೆಯ ಬಸವಕೃಪ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಲಾರ್ಡ್ ಬಸವ ಎಂಬ ಮುದ್ರಣವಿದೆ. ಮುಖಪುಟದಲ್ಲಿ ಬಸವಣ್ಣನ ಚಿತ್ರವೇ ಪ್ರಧಾನವಾಗಿದೆ. ಲೈನ್ ಡ್ರಾಯಿಂಗ್ (ರೇಖಾಚಿತ್ರ)ನಲ್ಲಿ ರಚಿತವಾದ ಈ ಕಲಾಕೃತಿಯು ಪೂರ್ಣವಾಗಿ ಕೆಂಪು ಬಣ್ಣದಿಂದ ಕೂಡಿದೆ. ಅರ್ಧಶಿಲ್ಪದ ರೀತಿಯಲ್ಲಿ ಕಂಡುಬರುವ ಬಸವಣ್ಣನ ದೇಹಭಾಗ ತಲೆಯಿಂದ ಅರ್ಧ ಎದೆಮಟ್ಟದವರೆಗೆ ಮಾತ್ರವಿದೆ. ಮುಖವನ್ನು ಬಲಬದಿಗೆ ಓರೆಯಾಗಿರಿಸಿಕೊಂಡಿರುವುದರಿಂದ ಎಡಬದಿಯ ಕಿವಿ ಮತ್ತು ಓಲೆ ಮಾತ್ರ ಕಾಣಿಸುತ್ತದೆ. ಅಲಂಕೃತ ಕಿರೀಟ, ಅದರ ಬಲಬದಿಗೆ ಇಳಿಯಬಿದ್ದಿರುವ ಮುತ್ತಿನ ಹಾರದ ಗೊಂಚಲು, ಕಿರೀಟದ ಹಣೆಯಲ್ಲಿ ಎದ್ದು ತೋರುವ ಕೆಂಪು ಮಣಿ, ಹಣೆಯಲ್ಲಿ ವಿಭೂತಿಯ ಗೆರೆಗಳು, ಮುಖಕ್ಕೆ ತಕ್ಕದಾದ ಮೂಗು, ಕಿರುಮೀಸೆ, ತುಟಿಗಳು, ಕೊರಳನ್ನು ಪೂರ್ತಿಯಾಗಿ ಆವರಿಸಿದ ಪಟ್ಟಿಯನ್ನುಳ್ಳ ನಿಲುವಂಗಿ, ರುದ್ರಾಕ್ಷಿ ಮಾಲೆ, ಇಷ್ಟಲಿಂಗ, ಮುತ್ತಿನ ಹಾರ –ಇವೆಲ್ಲ ಸಂಗತಿಗಳನ್ನು ಕಲಾವಿದ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾನೆ. ಇಡೀ ಚಿತ್ರದ ಬಹುಮುಖ್ಯ ಆಕರ್ಷಣೆಯೆಂದರೆ, ಕಣ್ಣುಗಳ ಹೊಳಪು. ಚಿತ್ರದಲ್ಲಿ

ಕಂಡುಬರುವ ಎಲ್ಲ ರೇಖೆಗಳು ಕೆಂಪು ಬಣ್ಣದಿಂದ ಕೂಡಿವೆಯಾದರೂ ಅದರಲ್ಲಿಯೇ ಕಲಾವಿದ ಕಣ್ಣುಗಳಿಗೆ ಜೀವಂತಿಕೆಯನ್ನು ತುಂಬುವ ಪ್ರಯತ್ನ ಮಾಡಿ ಅದರಲ್ಲಿ ಯಶಸ್ವಿಯಾಗಿದ್ದಾನೆ.

೪.೭.೧೨. ಅಂಚೆ ಚೀಟಿಯ ಮೇಲಿರುವ ಬಸವಣ್ಣನ ಭಾವಚಿತ್ರ

ಬಸವಣ್ಣನ ಸಾಧನೆಯ ನೆನಪಿಗಾಗಿ ವಿವಿಧ ಮಾಧ್ಯಮಗಳಲ್ಲಿ ಆತನ ಚಿತ್ರಗಳನ್ನು ಅಳವಡಿಸುವ ಪರಿಪಾಠ ರೂಢಿಯಲ್ಲಿದೆ. ಒಬ್ಬ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ಅಮೋಘ ಸಾಧನೆಗಳನ್ನು ಮಾಡಿದ್ದರೆ, ಅವುಗಳನ್ನು ಸದಾಕಾಲ ನೆನಪಿಸಿಕೊಳ್ಳಲು ಅಂಚೆಚೀಟಿಯ ಮೇಲೆ ಅವರ ಭಾವಚಿತ್ರವನ್ನು ಮುದ್ರಿಸುವ ಪದ್ಧತಿಯನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಭಾರತೀಯ ಅಂಚೆ ಇಲಾಖೆಯು ಬಸವಣ್ಣನವರ ಭಾವಚಿತ್ರವನ್ನು ಅಂಚೆ ಚೀಟಿಯ ಮೇಲೆ ಮುದ್ರಿಸಲಾಗಿದೆ. ಹದಿನೈದು ಪೈಸೆಯ ಬೆಲೆಯ ಅಂಚೆ ಚೀಟಿಯ ಮೇಲೆ ಬಸವಣ್ಣನ ಭಾವಚಿತ್ರದೊಂದಿಗೆ, ೧೨ನೆಯ ಶತಮಾನ ಎಂಬ ಬರಹದ ಸಾಲೊಂದಿದೆ. ನೆಲಹಾಸುಗೆಯ ಮೇಲೆ ಕುಳಿತು, ಹಸ್ತಪ್ರತಿಗಳನ್ನು ತನ್ನ ಎರಡೂ ಕೈಗಳಲ್ಲಿ ಹಿಡಿದು ಅಧ್ಯಯನ ಮಾಡುತ್ತಿರುವ ಬಸವಣ್ಣನ ಚಿತ್ರವನ್ನು ಇಲ್ಲಿ ಚಿತ್ರಿಸಲಾಗಿದೆ. ಆತನ ಎದುರಿಗೆ ನೆಲದ ಮೇಲೆ ಹಸ್ತಪ್ರತಿಯ ಕಟ್ಟೊಂದು ಕಂಡುಬರುತ್ತದೆ. ಮಟ್ಟಸವಾದ ತಲೆಗೂದಲು, ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿದ ಬಸವಣ್ಣ ತನ್ನ ತಲೆಯನ್ನು ತುಸು ಎಡಕ್ಕೆ ಬಾಗಿಸಿದ್ದಾನೆ.

ಚಿತ್ರದ ವಿಶ್ಲೇಷಣೆ : ಎರಡು ರೂಪಾಯಿ ಮುಖಬೆಲೆಯಿರುವ ಭಾರತೀಯ ಅಂಚೆ ಚೀಟಿಯ ಮೇಲೆ ಬಸವಣ್ಣನ ಭಾವಚಿತ್ರವಿದ್ದು, ಇದು ಕ್ರಿ.ಶ. ೧೯೯೭ರ ಕಾಲಘಟ್ಟದ್ದಾಗಿದೆ. ಈ ಅಂಚೆಚೀಟಿಯಲ್ಲಿ ಬಸವಣ್ಣ ತಲೆಯಲ್ಲಿ ಬಹಳ ಚಿಕ್ಕದಾಗಿ ಕತ್ತರಿಸಿದಂತೆ ಕಾಣುವ ಕಿರುಗೂದಲು, ಹಣೆಯಲ್ಲಿ ಮೂರು ವಿಭೂತಿಯ ಗೆರೆಗಳು, ಅರ್ಧಬಿಲ್ಲಿನಾಕಾರದಲ್ಲಿರುವ ಹುಬ್ಬುಗಳು, ನೀಳವಾದ ಮೂಗು, ಕಿರುಮೀಸೆ, ಉದ್ದವಾದ ಕಿವಿಗಳನ್ನು ಹೊಂದಿದ್ದಾನೆ. ದುಂಡಾಗಿರುವ ಕಣ್ಣುಗಳು ಮತ್ತು ಅವುಗಳಿಂದ ಹೊರಚಾಚಿದಂತಿರುವ ಕಣ್ಣಿನ ರೆಪ್ಪೆಗಳನ್ನು ಹೊಂದಿದ ಬಸವಣ್ಣ ತನ್ನ ತಲೆಯನ್ನು ಬಲಭಾಗಕ್ಕೆ ಬಾಗಿಸಿ, ತನ್ನ ಎಡಗೈಯನ್ನು ಭುಜದವರೆಗೆ ಎತ್ತಿ ಬೋಧನೆಯನ್ನು ಮಾಡುವ ಭಂಗಿಯಲ್ಲಿದ್ದಾನೆ. ಎದೆಮಟ್ಟದವರೆಗಿನ ಈ ಚಿತ್ರದಲ್ಲಿ ಬಸವಣ್ಣ ಕೊರಳಲ್ಲಿ ರುದ್ರಾಕ್ಷಿಮಾಲೆ, ಇಷ್ಟಲಿಂಗದ ಗಂಟು, ಮೇಲುವಸ್ತ್ರವನ್ನು ಧರಿಸಿದ್ದಾನೆ. ನೋಡುಗನಿಗೆ ಆತನ ಬಲಗೈ ಮಾತ್ರ ಕಾಣಿಸುತ್ತದೆ. ಅಂಚೆ ಚೀಟಿಯ ಮೇಲೆ ಹಿಂದಿ ಮತ್ತು ಇಂಗ್ಲೀಶ್ ಭಾಷೆಯಲ್ಲಿ ಶ್ರೀ ಬಸವೇಶ್ವರ ಎಂಬ ಬರಹವನ್ನು ಕಾಣುತ್ತೇವೆ.

೪.೮. ಚರ್ಮದ ಮಾಧ್ಯಮ(ತೊಗಲುಗೊಂಬೆ)ದಲ್ಲಿ ಬಸವಣ್ಣನವರು

"ಭಾರತೀಯ ಕಲಾ ಚರಿತ್ರೆಯಲ್ಲಿ ತೊಗಲುಗೊಂಬೆ ಚಿತ್ರಕಲೆಗೂ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಉಳಿಸಿಕೊಂಡಿದೆ. ಪ್ರದರ್ಶನಾತ್ಮಕವಾದ ಈ ಕಲೆ ಜನಜೀವನದ ಆಯಾಮಗಳನ್ನು ಒಳಗೊಂಡಿದೆಯಲ್ಲದೇ ಚಿತ್ರಕಲೆಯ ಹಲವು ವೈಶಿಷ್ಟ್ಯಗಳು ಇದರಲ್ಲಿ ಅಡಕವಗಿವೆ. ಹೀಗಾಗಿ ತೊಗಲುಗೊಂಬೆಯ ಅಧ್ಯಯನದಿಂದ ನಾಗರಿಕ ಬದುಕಿನ ಬಗೆಗಿನ ವಿವರಗಳನ್ನು ತಿಳಿಸುವುದರ ಜೊತೆಗೆ ಮಾನವನ ಕಲಾಜೀವನಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ವಿವರಗಳನ್ನು ತಿಳಿದುಕೊಳ್ಳಬಹುದು. ಈ ಕಲೆಯು ಒಬ್ಬ ವ್ಯಕ್ತಿಯಿಂದ ನಿರ್ಮಾಣಗೊಳ್ಳದೆ

ಕುಟುಂಬದ ಎಲ್ಲ ಜನರು ಈ ತೊಗಲುಗೊಂಬೆಯಾಟದ ಕಲೆಯಲ್ಲಿ ಭಾಗವಹಿಸುತ್ತಾರೆ. ತೊಗಲು ಗೊಂಬೆಯ ಚಿತ್ರಗಳನ್ನು ತಯಾರಿಸುವುದರಿಂದ ತೊಡಗಿ, ಅವುಗಳನ್ನು ಪ್ರದರ್ಶನಗೊಳಿಸುವವರೆಗೆ ಕುಟುಂಬದ ಅನೇಕ ಸದಸ್ಯರು ಇದರಲ್ಲಿ ಪಾಲ್ಗೊಳ್ಳುತ್ತಾರೆ. ಈ ಮೂಲಕ ಕುಟುಂಬದ ಐಕ್ಯತೆ, ಸಾಮರಸ್ಯವನ್ನು ಸಾಧಿಸುವ ಮಹತ್ವದ ಕಲಾಪ್ರಕಾರ ಇದಾಗಿದೆ. ತೆರೆಯ ಹಿಂದೆ ಬೆಳಕಿನ ಅದ್ಭುತ ಲೋಕವನ್ನು ಸೃಷ್ಟಿಸಿ, ಗೊಂಬೆ ಚಿತ್ರಗಳ ಮೂಲಕ ಧಾರ್ಮಿಕ, ಸಾಮಾಜಿಕ, ಐತಿಹಾಸಿಕ, ಸಮಕಾಲೀನ ಹೀಗೆ ಅನೇಕ ಕಥಾ ಪ್ರಸಂಗಗಳನ್ನು ನಿರೂಪಿಸಿ, ಅದರಿಂದ ಜನರ ಜೀವನ ವಿಧಾನವನ್ನು ತಿದ್ದುವ ಕೆಲಸವನ್ನು ಈ ತೊಗಲು ಗೊಂಬೆಯಾಟದ ಕಲೆ ಮಾಡುತ್ತ ಬಂದಿದೆ."[೨]

ತೊಗಲುಗೊಂಬೆಯಾಟದ ಮಾಧ್ಯಮವು ಸ್ಥಿರ ಚಿತ್ರಣಗಳ ಬಳಕೆಯನ್ನೊಳಗೊಂಡು ಚಲನಚಿತ್ರ ಮಾಧ್ಯಮವಾಗಿ ಪರಿಣಮಿಸುತ್ತದೆ. ಇಲ್ಲಿ ಬಳಸುವ ಮೂಲವಸ್ತುವಾದ ಮೇಕೆಯ ಚರ್ಮವನ್ನು ಹದ ಮಾಡಿ ಅದನ್ನು ಮತ್ತಷ್ಟು ತೆಳುಗೊಳಿಸುತ್ತಾರೆ. ಅದು ಪಾರದರ್ಶಕ ಹಂತದವರೆಗೆ ಬರುವವರೆಗೂ ಸಂಸ್ಕರಣ ಮಾಡುತ್ತಾರೆ. ನಂತರದಲ್ಲಿ ರೇಖಾಚಿತ್ರಗಳನ್ನು ನಿರ್ಮಿಸಿ ಅವುಗಳೊಳಗೆ ವಿವಿಧ ಬಣ್ಣಗಳನ್ನು ತುಂಬುತ್ತಾರೆ. ಈ ಹಂತದವರೆಗೆ ಇದನ್ನು ಸ್ಥಿರ ಚಿತ್ರಣ ಮಾಧ್ಯಮವೆಂದು ಗುರುತಿಸಬಹುದು. ಇದೇ ಸ್ಥಿರಚಿತ್ರಗಳನ್ನು ವೇದಿಕೆಯ ಮೇಲೆ ಕಟ್ಟಿದ ಪರದೆಯ ಹಿಂಬದಿಯಲ್ಲಿ ಚಲಿಸುವಂತೆ ಮಾಡಿದಾಗ ಅದು ಚಲನಚಿತ್ರ ಮಾಧ್ಯಮವಾಗಿ ರೂಪ ಪಡೆಯುತ್ತದೆ. ಈ ಕೆಳಗಿನ ಎಲ್ಲ ತೊಗಲುಗೊಂಬೆ ಕಲಾಕೃತಿಗಳನ್ನು ಬಳ್ಳಾರಿಯ ನಾಡೋಜ ಶ್ರೀ ಬೆಳಗಲ್ ವೀರಣ್ಣರವರು ಮತ್ತು ಅವರ ತಂಡದವರು ರಚಿಸಿದ್ದಾರೆ. ಇವೆಲ್ಲವು ಅವರ ವೈಯಕ್ತಿಕ ಸಂಗ್ರಹದಲ್ಲಿವೆ.

೪.೮.೧. ಜನಿವಾರ ನಿರಾಕರಣೆ

ತೊಗಲು ಗೊಂಬೆಯಾಟದಲ್ಲಿ ಬಳಕೆಯಾಗಿರುವ ಬಸವಣ್ಣನ ಅಪರೂಪದ ಚಿತ್ರಗಳ ಸಂಗ್ರಹವಿಲ್ಲಿದೆ. ತೆಳುವಾದ ಮೇಕೆಯ ಚರ್ಮದ ಮೇಲೆ ಮೊದಲು ಚಿತ್ರದ ಆಕೃತಿಯನ್ನು ಬರೆದು, ತಲೆ, ಕೈ, ಕಾಲು, ದೇಹದ ಇತರ ಭಾಗಗಳಾಗಿ ಕತ್ತರಿಸಿ, ನಂತರ ಅವುಗಳಿಗೆ ತಕ್ಕ ಬಣ್ಣವನ್ನು ಬಳಿದು, ಕೊನೆಯಲ್ಲಿ ಅವುಗಳನ್ನು ಜೋಡಿಸಿ ಹೊಲಿದಿರುವ ಕಲಾಕೃತಿಗಳಿವು. ಪ್ರಸ್ತುತ ಚಿತ್ರದಲ್ಲಿ ಬೋಳುತಲೆ, ಹಿಂಬದಿಯಲ್ಲಿ ತೆಳ್ಳನೆಯ ಜುಟ್ಟು, ಹಣೆಯಲ್ಲಿ ವಿಭೂತಿ, ನೀಳವಾದ ಮತ್ತು ಮುಂಬದಿಯಲ್ಲಿ ಚೂಪಾದ ಮೂಗು, ಒಳಸೇರಿದಂತಿರುವ ಬಾಯಿ, ತುಟಿಗಳು, ದಪ್ಪ ಕೊರಳು, ಕೊರಳಲ್ಲಿ ಇಷ್ಟಲಿಂಗದ ವಸ್ತ್ರದ ಗಂಟು, ಕಂದು ಬಣ್ಣದ ರುದ್ರಾಕ್ಷಿಯ ಒಂದು ಮಾಲೆ, ಜಟ್ಟಿಯಂತಿರುವ ದಷ್ಟಪುಷ್ಟವಾದ ಮಾಂಸಖಂಡಗಳಿಂದ ಕೂಡಿರುವ ದೇಹಾಕೃತಿ, ಬಲಿಷ್ಠವಾದ ಕೈಗಳು, ಅಗಲವಾದ ಹಸ್ತಗಳಿಂದ ಕೂಡಿರುವ ಬಸವಣ್ಣನ ವ್ಯಕ್ತಿ ಚಿತ್ರವನ್ನು ಇಲ್ಲಿ ಕಾಣುತ್ತೇವೆ. ಪಾರ್ಶ್ವನೋಟಕ್ಕೆ ಒದಗುವ ಬಸವಣ್ಣ ತನ್ನೆದುರಿಗಿರುವ ತನ್ನ ತಂದೆ ಮಾದರಸನಿಗೆ ಜನಿವಾರ ನಿರಾಕರಣೆಯನ್ನು ಕುರಿತು ಹೇಳುತ್ತಿರುವ ಸನ್ನಿವೇಶವಿದೆ.

---

೦೨. ಡಾ. ಶಶಿಕಲಾ ಹೂಗಾರ : ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ–ಒಂದು ಅಧ್ಯಯನ (ಅಪ್ರ. ಪಿಎಚ್.ಡಿ ಮ.ಪ್ರ, ಕ.ವಿ.ವಿ. ಹಂಪಿ), ಪು–೧, ೨

ಎದುರುಬದಿಯಲ್ಲಿ ಕಂದುಬಣ್ಣದ ನೀಳವಾದ, ಬಾಚಿ ಹಿಂದಕ್ಕೆ ಕಟ್ಟಿದ ಕೂದಲು, ದುಂಡಾಗಿರುವ ದೊಡ್ಡದಾದ ಕಣ್ಣುಗಳು, ನೀಳವಾದ ಮೂಗು, ಎದ್ದು ತೋರುವ ತುಟಿಗಳನ್ನು ಹೊಂದಿರುವ ಮಾದರಸ ತನ್ನೆದುರಿಗಿರುವ ಬಸವಣ್ಣನಿಗೆ ನಿವೇದನೆಯನ್ನು ಮಾಡುವ ಭಂಗಿಯಲ್ಲಿ ನಿಂತಿದ್ದಾನೆ. ಕುತ್ತಿಗೆಯ ತುಂಬ ಸುತ್ತುವರಿದಿರುವ ಕಡುಗೆಂಪು ಮತ್ತು ಕಪ್ಪು-ಬಿಳಿಪು ಬಣ್ಣದ ಚಿತ್ತಾರದ ತುಂಬು ತೋಳಿನ ನಿಲುವಂಗಿಯನ್ನು ಧರಿಸಿದ ಮಾದರಸ ತನ್ನ ಸೊಂಟಕ್ಕೆ ಮೇಲುವಸ್ತ್ರದ ಪಟ್ಟಿಯನ್ನು ಕಟ್ಟಿಕೊಂಡಿದ್ದಾನೆ. ಚಿತ್ರದ ಮಧ್ಯದಲ್ಲಿರುವ ಕೋಲುಗಳು ಸೂತ್ರವನ್ನು ಕಟ್ಟಿ ರಂಗದ ಪರದೆಯ ಮೇಲೆ ಕುಣಿಸಲು ಕಟ್ಟಿದವುಗಳಾಗಿವೆ.

೪.೮.೨. ಅಕ್ಕಮಹಾದೇವಿಯೊಂದಿಗೆ ಬಸವಣ್ಣನ ಸಂಭಾಷಣೆ

ಇದೊಂದು ಅಪರೂಪದ ಚಿತ್ರಗಳ ಸಾಲಿಗೆ ಸೇರುತ್ತದೆ. ಕಲಾವಿದ ತೊಗಲುಗೊಂಬೆಯ ಮಾಧ್ಯಮದಲ್ಲಿ ಬಸವಣ್ಣನನ್ನು ಸಾಂಪ್ರದಾಯಿಕ ಶೈಲಿಯಲ್ಲಿ ಅಂದರೆ ವರ್ಣಮಾಧ್ಯಮದಲ್ಲಿ ಚಿತ್ರಿತವಾದ ಬಸವಣ್ಣನ ಆಕೃತಿ, ಉಡುಪುಗಳನ್ನು ಅನುಸರಿಸಿದ್ದಾನೆ. ಬಸವಣ್ಣ ತನ್ನೆದುರಿಗಿರುವ ಅಕ್ಕಮಹಾದೇವಿಯ ಕೈಗಳನ್ನು ಹಿಡಿದು ಸಂವಾದದಲ್ಲಿ ತೊಡಗಿರುವ ಸಂದರ್ಭವನ್ನು ಈ ಚಿತ್ರದಲ್ಲಿ ಕಾಣುತ್ತೇವೆ. ಹಣೆಯಲ್ಲಿ ಎದ್ದು ಕಾಣದ ವಿಭೂತಿಯ ಪಟ್ಟಿಗಳು, ಅಲಂಕೃತ ಲೋಹದ ಹೆಚ್ಚು ಎತ್ತರವಲ್ಲದ ಕಿರೀಟ, ತಲೆಯ ಹಿಂಭಾಗದಲ್ಲಿ ಇಳಿಯಬಿದ್ದ ಕಪ್ಪು ಬಣ್ಣದ ತಲೆಗೂದಲು, ಕಿವಿಯಲ್ಲಿ ದಪ್ಪನೆಯ ರುದ್ರಾಕ್ಷಿಯ ಓಲೆ, ಅಗಲವಾದ ಕಮಲದಂತಿರುವ ಕಣ್ಣುಗಳು, ಮಟ್ಟಸವಾದ ಮೂಗು, ಕಿರುಮೀಸೆ, ಚೌಕಾಕಾರದ ಮುಖದಲ್ಲಿ ಉಬ್ಬಿದ ಹಣೆಯನ್ನು ಹೊಂದಿರುವ ಬಸವಣ್ಣನ ಚಿತ್ರವನ್ನು ಇಲ್ಲಿ ಕಾಣುತ್ತೇವೆ.

ಕಡುನೀಲಿ, ತೆಳುನೀಲಿ, ಕೆಂಪು, ಕಪ್ಪು ಬಣ್ಣಗಳ ಬಳಕೆ ಇಲ್ಲಿ ಪ್ರಧಾನವಾಗಿದೆ. ತೋಳು, ಎದೆಯ ಭಾಗದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಕುಸುರಿ ಕೆಲಸ ಮಾಡಿರುವ ತುಂಬು ತೋಳಿನ ನಿಲುವಂಗಿಯ ಬಣ್ಣವು ಒಮ್ಮೊಮ್ಮೆ ಗಾಢವಾಗಿ, ಮತ್ತೊಮ್ಮೆ ಮಾಸಿದಂತೆ ಕಂಡುಬರುತ್ತದೆ. ಕೆಂಪು ಬಣ್ಣದ ಪಂಚೆ ಮತ್ತು ಕಾಲಿನಲ್ಲಿ ಧರಿಸಿದ ಚೂಪಾದ ಮುಂಬದಿಯುಳ್ಳ ಚರ್ಮದ ಪಾದರಕ್ಷೆಗಳು ನೋಡುಗನ ಗಮನಸೆಳೆಯುತ್ತವೆ. ಬಸವಣ್ಣನ ದೇಹವರ್ಣವು ನೀಲವರ್ಣವನ್ನು ಹೋಲುತ್ತಿದೆ. ಕೊರಳಲ್ಲಿ ರುದ್ರಾಕ್ಷಿ ಮಾಲೆ, ಇಷ್ಟಲಿಂಗಗಳು ಕಾಣುವುದಿಲ್ಲ. ಬಲ ಹಸ್ತದಲ್ಲಿರುವ ನೀಳವಾದ ಬೆರಳುಗಳು ಅತ್ಯಂತ ಸ್ಪಷ್ಟವಾಗಿ ಇಲ್ಲಿ ಚಿತ್ರಣಗೊಂಡಿವೆ. ಚರ್ಮದ ಮೇಲೂ ಬಸವಣ್ಣನ ಉಡುಗೆ-ತೊಡುಗೆಯ ಮೇಲೆ ಕುಸುರಿ ಬಗೆಯ ವಿನ್ಯಾಸಗಳನ್ನು ಜನಪದರು ಅತ್ಯಂತ ಪ್ರಬುದ್ಧವಾಗಿ ರಚಿಸಿರುವರು. ಬಸವಣ್ಣನ ಎದುರಿಗೆ ಕಂಡುಬರುವ ಅಕ್ಕಮಹಾದೇವಿ ಹರೆಯದ ಸುಪುಷ್ಟ ದೇಹಾಕೃತಿಯುಳ್ಳವಳಾಗಿದ್ದು, ಹಣೆಯಲ್ಲಿ ವಿಭೂತಿ, ಕುಂಕುಮ, ಕೊರಳಲ್ಲಿ ವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ರುದ್ರಾಕ್ಷಿಯ ಮಾಲೆಯನ್ನು ಧರಿಸಿದ್ದಾಳೆ. ತೋಳುಗಳಲ್ಲಿ ವಿಭೂತಿ ಧಾರಣೆ ಮತ್ತು ಬಳೆಗಳನ್ನು ಧರಿಸಿದವಳಾಗಿದ್ದಾಳೆ. ತಲೆಯಿಂದ ದೇಹದ ಪೂರ್ಣಭಾಗದಲ್ಲಿ ಕಪ್ಪುಮಿಶ್ರಿತ ಕಂದುಬಣ್ಣದ ಕೂದಲು ದಟ್ಟವಾಗಿ ಮೊಣಕಾಲಿನವರೆಗೆ ಮಾತ್ರ ಇಳಿಯಬಿದ್ದಿದೆ. ಬಸವಣ್ಣ ಮತ್ತು ಅಕ್ಕಮಹಾದೇವಿಯ ಸಂವಾದದ ಸನ್ನಿವೇಶವನ್ನು ಇಲ್ಲಿ ಕಲಾವಿದ ಕಲ್ಪಿಸಿರುವುದನ್ನು ಕಾಣುತ್ತೇವೆ.

೪.೮.೩. ಬಿಜ್ಜಳನು ಬಸವಣ್ಣನವರನ್ನು ಗಡೀಪಾರು ಮಾಡುವ ಸನ್ನಿವೇಶ

ಬಸವಣ್ಣ ಮಂತ್ರಿಪದವಿಯಲ್ಲಿರುವಾಗ ಅಂತರ್ಜಾತೀಯ ವಿವಾಹವನ್ನು ಮಾಡಿಸಲು ಒಪ್ಪಿಗೆ ನೀಡಿದ ಮತ್ತು ಖಜಾನೆಯ ಹಣದ ದುರ್ಬಳಕೆಯನ್ನು ಮಾಡಿಕೊಂಡ ಆರೋಪದ ಮೇಲೆ ಬಿಜ್ಜಳನು ಬಸವಣ್ಣನವರನ್ನು ಅಧಿಕಾರ ತ್ಯಜಿಸಲು ಹೇಳುವ ಸನ್ನಿವೇಶವನ್ನು ಇಲ್ಲಿ ಕಾಣುತ್ತೇವೆ. ಬಿಜ್ಜಳನ ಎದುರಿಗೆ ಬಸವಣ್ಣ ಎಡಗೈಯನ್ನು ಮಡಿಚಿ, ಬಲಗೈಯನ್ನು ತುಸು ಮೇಲಕ್ಕೆತ್ತಿ ಎದೆಗೆ ಆನಿಸಿಕೊಂಡ ಭಂಗಿಯಲ್ಲಿ ನಿಂತಿದ್ದಾರೆ. ಹಣೆಯಲ್ಲಿ ಎದ್ದು ಕಾಣದ ವಿಭೂತಿಯ ಪಟ್ಟಿಗಳು, ಅಲಂಕೃತ ಲೋಹವನ್ನು ಹೋಲುವ ಕಿರೀಟದ ವಿನ್ಯಾಸ, ತಲೆಯ ಹಿಂಭಾಗದಲ್ಲಿ ಇಳಿಯಬಿದ್ದ ಕಪ್ಪು ಬಣ್ಣದ ತಲೆಗೂದಲು, ಕಿವಿಯಲ್ಲಿ ದಪ್ಪನೆಯ ರುದ್ರಾಕ್ಷಿಯ ಓಲೆ, ಅಗಲವಾದ ಕಮಲದಂತಿರುವ ಕಣ್ಣುಗಳು, ಮಟ್ಟಸವಾದ ಮೂಗು, ಕಿರುಮೀಸೆ, ಚೌಕಾಕಾರದ ಮುಖದಲ್ಲಿ ಉಬ್ಬಿದ ಹಣೆಯನ್ನು ಹೊಂದಿರುವ ಬಸವಣ್ಣನವರ ಚಿತ್ರವನ್ನು ಇಲ್ಲಿ ಕಾಣುತ್ತೇವೆ. ಕಡುನೀಲಿ, ತೆಳುನೀಲಿ, ಕೆಂಪು, ಕಪ್ಪು ಬಣ್ಣಗಳ ಬಳಕೆ ಇಲ್ಲಿ ಪ್ರಧಾನವಾಗಿದೆ. ತೋಳು, ಎದೆಯ ಭಾಗದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಕುಸುರಿ ಕೆಲಸ ಮಾಡಿರುವ ತುಂಬು ತೋಳಿನ ನಿಲುವಂಗಿಯ ಬಣ್ಣವು ಒಮ್ಮೊಮ್ಮೆ ಗಾಢವಾಗಿ ಮತ್ತೊಮ್ಮೆ ಮಾಸಿದಂತೆ, ಕೆಂಪು ಬಣ್ಣದ ಪಂಚೆ ನೋಡುಗನ ಗಮನಸೆಳೆಯುತ್ತವೆ.

ತಲೆಯಲ್ಲಿ ಬಂಗಾರದ ಕಿರೀಟ, ದಪ್ಪನೆಯ ಮೀಸೆ, ಮುಖದಲ್ಲಿ ಕೋಪದ ಭಾವನೆಯ, ಗಂಟಿಕ್ಕಿದ ಹುಬ್ಬು, ಹಣೆಯಲ್ಲಿ ತಿಲಕ, ಕಣ್ಣುಗಳಲ್ಲಿ ಅಸಹನೆ, ಅಸಮಾಧಾನವನ್ನು ಹೊಂದಿರುವ ಬಿಜ್ಜಳ ಇಲ್ಲಿ ಸಿಂಹಾಸನದ ಮೇಲೆ ತನ್ನ ಬಲಗೈಯನ್ನು ನೀಳವಾಗಿ ಚಾಚಿ ಬಸವಣ್ಣರಿಗೆ ಆಕ್ಷೇಪಣೆ ಮಾಡುವ ಭಂಗಿಯಲ್ಲಿ ಕುಳಿತಿದ್ದಾನೆ. ಕೆಂಪುಮಿಶ್ರಿತ ಬಿಳಿ ಬಣ್ಣದ ಅಂಚುಗಳಿಂದ ಕೂಡಿರುವ ಬಿಜ್ಜಳನ ಹಸಿರುಬಣ್ಣದ ತುಂಬು ತೋಳಿನ ನಿಲುವಂಗಿ ಆಕರ್ಷಕವಾಗಿ ಚಿತ್ರಿತವಾಗಿದೆ. ಆತನ ಹಿಂಬದಿಯಲ್ಲಿ ರಾಜಸೇವಕನೊಬ್ಬ ರಾಜಭಟನ ಪೋಷಾಕನ್ನು ಧರಿಸಿ, ಪ್ರಸ್ತುತ ಘಟನೆಯನ್ನು ನೋಡುತ್ತಿರುವ ಭಂಗಿಯಲ್ಲಿ ನಿಂತಿದ್ದಾನೆ. ಈ ತೊಗಲುಗೊಂಬೆ ಚಿತ್ರಗಳು ಪ್ರಣೀತ ಕಲಾವಿದರು ರಚಿಸದಂಥವುಗಳಲ್ಲ. ಕಿಳ್ಳೇಕ್ಯಾತರೆಂಬ ಅಲೆಮಾರಿ ಜನಪದರು ರಚಿಸಿದ ಚಿತ್ರಗಳಿವು. ಇಲ್ಲಿ ಆಂಗಿಕ ರಚನೆಗಳಿಗಿಂತ ಮುಖ್ಯವಾಗಿ ಸನ್ನಿವೇಶವೊಂದು ಮೌಖಿಕ ಕಥನಗಳ ಹಿನ್ನೆಲೆಯಲ್ಲಿ ನೋಡುಗರ ದೃಶ್ಯಪ್ರಜ್ಞೆಯನ್ನು ತಟ್ಟುವುದು ಮುಖ್ಯವಾಗಿರುತ್ತದೆ. ಚಿತ್ರ ೨೫೭ರಲ್ಲಿ ಬಿಜ್ಜಳನ ಆಕೃತಿಯಲ್ಲಿ ಅಸಮಾಧಾನ, ಅತೃಪ್ತಿ, ಆಕ್ರೋಶವನ್ನೆಲ್ಲ ಒಟ್ಟುಗೂಡಿಸಿದ ತೊಗಲುಗೊಂಬೆ ಚಿತ್ರಕಾರರು ನಿಜಕ್ಕೂ ಅನನ್ಯರು. ಹಸಿರು ನಿಲುವಂಗಿ ಧರಿಸಿದ ಬಿಜ್ಜಳನನ್ನು ಅತ್ಯಂತ ಭಾವಪ್ರದವಾಗಿ ಚಿತ್ರಿಸುವುದರ ಮೂಲಕ ಶಿಷ್ಟ ಕಲಾವಿದರಿಗೆ ಪರೋಕ್ಷವಾಗಿ ಸವಾಲು ಹಾಕುತ್ತಾರೆ ಎನ್ನುವುದಕ್ಕೆ ಈ ತೊಗಲುಗೊಂಬೆ ಚಿತ್ರಗಳು ಸೂಕ್ತ ಮಾದರಿಗಳಾಗುತ್ತವೆ.

೪.೯. ನಾಟಕ ಮಾಧ್ಯಮದಲ್ಲಿ ಬಸವಣ್ಣನವರು

ನಾಟಕ ಮಾಧ್ಯಮವು ರಂಗಭೂಮಿಯ ಒಂದು ಪ್ರಕಾರವಾಗಿದೆ. ಅಕ್ಷರ ಮಾಧ್ಯಮದಲ್ಲಿ ರಚಿತವಾದ ಬಸವಣ್ಣನವರ ವ್ಯಕ್ತಿ ಚಿತ್ರ ಇಲ್ಲವೆ ಜೀವನ ಚರಿತ್ರೆಗಳನ್ನು ನಾಟಕಮಾಧ್ಯಮದಲ್ಲಿ ಅಳವಡಿಸಿ ರಂಗದ ಮೇಲೆ ಪ್ರಯೋಗ ಮಾಡಲಾಗುತ್ತದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈ ಮಾಧ್ಯಮವು ಅತ್ಯಂತ

ಜನಪ್ರಿಯ ಮಾಧ್ಯಮವಾಗಿ ಪ್ರಸಿದ್ಧವಾಗಿದೆ. ಶಿಲ್ಪ ನಿರ್ಮಾಣ ಮಾಡುವ ಸಂದರ್ಭದಲ್ಲಿ ಕಲಾವಿದನು ಎಷ್ಟು ಜಾಗರೂಕತೆಯಿಂದ ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾಗಿರುತ್ತದೆಯೋ ಅಷ್ಟೇ ಜಾಗರೂಕತೆಯನ್ನು ನಾಟಕದಲ್ಲಿ ಬರುವ ಪಾತ್ರಗಳು ತುಂಬ ಎಚ್ಚರಿಕೆಯಿಂದ ತಮ್ಮ ಸಂಭಾಷಣೆಗಳನ್ನು ಉಚ್ಚರಿಸಬೇಕಾಗಿರುತ್ತದೆ. ಜೊತೆಗೆ ತಮ್ಮ ಆಂಗಿಕ ಅಭಿನಯದ ಮೂಲಕ ಭಾವನೆಗಳನ್ನು ಪ್ರಕಟಪಡಿಸಬೇಕಾದ ಅನಿವಾರ್ಯತೆ ಇಲ್ಲಿರುತ್ತದೆ.

ಮಾನವನು ಉಗಮದ ಮೊದಲನೆಯ ಮಾತು ಚಿತ್ರಕಲೆ. ಮುಂದಿನ ಭಾಗವೇ ರಂಗಕಲೆ. ಆದಿಮಾನವರ ಸಮುದಾಯಗಳು ದಿನನಿತ್ಯದ ಬೇಟೆಯನ್ನಾಡಿ, ಮರಳಿ ವಸತಿಯ ಆವರಣಕ್ಕೆ ಬಂದು ಬೇಟೆಯಾಡುವ ಹಾಗೂ ಹಲವಾರು ಸಂದರ್ಭಗಳನ್ನು ಹೇಳಿಕೊಳ್ಳಲು ಯಾವುದೇ ಭಾಷೆ ಹುಟ್ಟಿಕೊಂಡಿರಲಿಲ್ಲ. ಹಾಗಾಗಿ ಆದಿಮಾನವರು ಇಡೀ ಬೇಟೆಯ ಘಟನೆಯನ್ನು ಮತ್ತೊಮ್ಮೆ ತೋರಿಸಬೇಕಾಗಿತ್ತು. ಅದಕ್ಕಾಗಿ ಆದಿಮಾನವ ಬೇಟೆಯಾಡಿದ ಪ್ರಾಣಿಗಳ ಚರ್ಮ, ಮುಖವಾಡ, ಕೊಂಬು, ಗಿಡ–ಮರದ ಎಲೆಗಳು, ತಮ್ಮ ದೇಹಕ್ಕಲಂಕರಿಸಿಕೊಂಡು ಬೇಟೆಯ ಕ್ರಿಯೆಯನ್ನು ಅಭಿವ್ಯಕ್ತಿಸುತ್ತಿರುವುದು ಮಾನವಶಾಸ್ತ್ರ ತಜ್ಞರ ತಮ್ಮ ಸಂಶೋಧನೆಗಳಲ್ಲಿ, ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ.

ಆದಿಮಾನವರು ತಮ್ಮ ಆಹಾರ ಸಂಪಾದನೆಯೇ ಅವರ ಮುಖ್ಯ ಉದ್ಯೋಗವಾಗಿತ್ತು. ಆಹಾರ ಸಂಪಾದನೆಯ ಸಂದರ್ಭದಲ್ಲಿ ಸಾಕಷ್ಟು ಸಮಸ್ಯೆಗಳು ಎದುರಾಗುತ್ತಿದ್ದವು. ಅವುಗಳನ್ನು ಚಿತ್ರಕಲೆ, ರಂಗಕಲೆ ಮೂಲಕ ಪುನಃ ನೆನಪಿಸಿಕೊಳ್ಳುವ ಮತ್ತು ಉಳಿದ ಸಮಯವನ್ನು ಬಳಕೆಮಾಡಿಕೊಂಡು ತಮ್ಮ ಬಯಕೆಯನ್ನು ಈಡೇರಿಸಿಕೊಳ್ಳುತ್ತಿದ್ದರು. ಇದಕ್ಕೆ ಕಾರಣ ಹೀಗಿದೆ: ಭಾಷೆ ಇಲ್ಲದಿದ್ದಾಗ ಅನಿವಾರ್ಯ ಚಿತ್ರಕಲೆ ಒಂದು ಭಾಷೆ, ರಂಗಕಲೆ ಮತ್ತೊಂದು ಭಾಷೆಯಾಗಿ ಬಳಸಿಕೊಂಡಿರಬಹುದು. ಮೌಖಿಕ ಪರಂಪರೆಗಳೇ ರಂಗಮಾಧ್ಯಮಕ್ಕೆ ಮೂಲವೆಂದು ಅಭಿಪ್ರಾಯವಿದೆ. ಈ ಕಥೆ ಹೇಳುವ ಪದ್ಧತಿಗಳೇ ಮುಂದೆ ಪಾತ್ರಗಳನ್ನು ಬಳಸಿಕೊಂಡು, ಸನ್ನಿವೇಶಗಳನ್ನು ವಿಭಾಗಿಸಿಕೊಂಡು ಒಂದೊಂದಾಗಿ ರಂಗಮಾಧ್ಯಮದ ಅಂಗಾಂಗಗಳನ್ನು ಸ್ವೀಕರಿಸುತ್ತಾ ಬೆಳೆದವು. ಈ ಸಿದ್ಧಾಂತದ ಅಭಿಪ್ರಾಯ ಒಟ್ಟಿನಲ್ಲಿ ನಾಗರೀಕ ಪೂರ್ವ ರಂಗಕ್ರಿಯೆಗಳೇ ಮುಂದೆ ರಂಗ ಉತ್ಸವಗಳಾಗಿವೆ ಎಂಬುದನ್ನು ಖಚಿತವಾಗಿ ಹೇಳಬಹುದು.

ನಾಗರೀಕ ಪೂರ್ವದಿಂದ ಸಮಕಾಲೀನವರೆಗೂ ರಂಗಭೂಮಿ ಹೊಸ ಹೊಸ ಆಲೋಚನೆ–ಯೊಂದಿಗೆ ಮುನ್ನಡೆದಿದೆ. ಇಂದು ರಂಗಭೂಮಿಯು ಸಾಮಾಜಿಕ, ಧಾರ್ಮಿಕ, ಪೌರಾಣಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಮಹಾತ್ಮರ ಬಗ್ಗೆ ರಂಗಭೂಮಿ ಮುಖಾಂತರ ನಮ್ಮ ದೃಷ್ಟಿಗೆ ಕಂಗೊಳಿಸಿ ಹೃದಯ ಮುಟ್ಟುವಂತೆ ಮಾಡುತ್ತವೆ. ಬಸವಣ್ಣನವರು ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಸಮಾನತೆಯ ಚಿಂತಕರಾಗಿ ೧೨ನೆಯ ಶತಮಾನವನ್ನು ಸ್ವರ್ಣ ಶತಮಾನವೆಂದು ಹೇಳಬಹುದು. ಇಂಥ ಮಹಾನ ಮಾನವತಾವಾದಿ ಬಸವಣ್ಣನವರನ್ನು ಕುರಿತು ಸಂಘ–ಸಂಸ್ಥೆಗಳು ಬಸವ ಜಯಂತಿ ನಿಮಿತ್ತವಾಗಿ ಪ್ರತಿವರ್ಷವೂ ಹಲವಾರು ಗ್ರಾಮಗಳಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಾರೆ. ಹಾಗೆ ನಾಟಕ ಕಂಪನಿಯವರು ೨–೩ ಗಂಟೆಯೊಳಗಾಗಿ ಬಸವಣ್ಣನವರ ಬಗ್ಗೆ ನಾಟಕಗಳನ್ನು ಪ್ರದರ್ಶಿಸುತ್ತಾರೆ. ಇಲ್ಲಿ ಸಾಣೆಹಳ್ಳಿ ಶಿವರಾತ್ರಿ ನಾಟಕ ಸಂಸ್ಥೆ, ಮೈಸೂರು ನಿರಂತರ ಫೌಂಡೇಶನ್ ಹಾಗೂ ಗದಗಿನ ಜಗದ್ಗುರು

ಶ್ರೀ ತೋಂಟದಾರ್ಯ ನಾಟಕ ಸಂಸ್ಥೆ ಪ್ರಮುಖವಾಗಿವೆ. ಈ ನಾಟಕಗಳಲ್ಲಿ ಇತರ ಶರಣರ ನಾಟಕಗಳನ್ನಾಡುವ ಸಂದರ್ಭದಲ್ಲಿ ಶರಣರೊಂದಿಗೆ ಬಸವಣ್ಣನವರ ಪಾತ್ರವೂ ಮುಖ್ಯವಾಗಿರುತ್ತವೆ. ಹೀಗೆ ನಾಟಕಗಳಲ್ಲಿ ಪ್ರದರ್ಶನಗೊಂಡ ಬಸವಣ್ಣನವರ ಪಾತ್ರದ ಛಾಯಾಚಿತ್ರಗಳ ವಿಶ್ಲೇಷಣೆಯನ್ನು ಈ ಕೆಳಗಿನಂತೆ ಮಾಡಲಾಗಿದೆ.

೪.೯.೧. ನಾಟಕದಲ್ಲಿ ಬಸವಣ್ಣನ ಪಾತ್ರ – ೧

ಬಸವಣ್ಣನವರು ಶರಣರಿಗೆ ವಚನಗಳ ಮೂಲಕ ತತ್ವವನ್ನು ಹೇಳುತ್ತಿರುವ ಸಂದರ್ಭದ ದೃಶ್ಯ ಇದಾಗಿದ್ದು, ಇಲ್ಲಿನ ಎಲ್ಲ ಪಾತ್ರದಾರಿಗಳು ಆಯಾ ಪಾತ್ರಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಉಡುಗೆ-ತೊಡುಗೆಗಳನ್ನುಟ್ಟಿದ್ದು, ಕೆಲವರು ಕುಳಿತು ನಮಸ್ಕರಿಸುತ್ತ, ಇನ್ನೂ ಕೆಲವರು ನಿಂತ ಭಂಗಿಯಲ್ಲಿ ಬಸವಣ್ಣನವರ ತತ್ವಗಳನ್ನು ತುಂಬಾ ಭಕ್ತಿಯಿಂದ ಆಸ್ವಾದಿಸುತ್ತಿರುವಂತೆ ಚಿತ್ರಣ ಇಲ್ಲಿ ಮೂಡಿಬಂದಿದೆ. ಅದೇ ರೀತಿ ಬಸವಣ್ಣನವರ ಮುಖದಲ್ಲಿ ತತ್ವಗಳನ್ನು ಸಾರುತ್ತಿರುವ ಭಾವ ಅತ್ಯಂತ ನೈಜರೀತಿಯಲ್ಲಿ ಬಂದಿದೆ. ಅಕ್ಕಪಕ್ಕದಲ್ಲಿ ಕೆಲವು ವಸ್ತುಗಳನ್ನು ಆ ಸಂದರ್ಭಕ್ಕೆ ತಕ್ಕಂತೆ ಸಂಯೋಜಿಸಿರುವುದು ಕಲಾತ್ಮಕವೆನಿಸುತ್ತದೆ.

ನಾಟಕದಲ್ಲಿ ಬಸವಣ್ಣನ ಪಾತ್ರ – ೨

೧೨ನೆಯ ಶತಮಾನದ ಸಂದರ್ಭದಲ್ಲಿ ಅಸ್ಪೃಶ್ಯತೆ ಸಮಸ್ಯೆಯ ಚಿತ್ರಣ ಇಂದು ಎಲ್ಲರಿಗೂ ಗೊತ್ತಿರುವ ವಿಷಯ. ಇದರ ವಿರುದ್ಧ ಹೋರಾಡಿದ ಬಸವಣ್ಣನವರು ತಮ್ಮ ಅವಧಿಯಲ್ಲಿ ಹರಳಯ್ಯ ಎಂಬ ಶರಣರ ಭುಜಮುಟ್ಟಿ ಅವರೊಂದಿಗೆ ಸಮಾಲೋಚಿಸುವ ಮೂಲಕ ಎಲ್ಲರೂ ಸಮಾನ ಎಂಬ ತತ್ವವನ್ನು ಸಾರುತ್ತಾರೆ. ಈ ಸಂದರ್ಭಕ್ಕೆ ಸಂಬಂಧಪಟ್ಟ ನಾಟಕದಲ್ಲಿನ ದೃಶ್ಯವೇ ಇದು. ಇಲ್ಲಿ ಅಲ್ಲಮಪ್ರಭು ದೇವರ ಸಾನಿಧ್ಯದಲ್ಲಿ ಈ ಸನ್ನಿವೇಶ ಜರುಗತ್ತಿದೆ. ಒಟ್ಟು ಐದು ಪಾತ್ರದಾರಿಗಳಿದ್ದು, ಎಲ್ಲರೂ ಆಯಾ ಪಾತ್ರಕ್ಕೆ ಸಂಬಂಧಿಸಿದ ಉಡುಪುಗಳನ್ನು ಧರಿಸಿದ್ದಾರೆ. ಯಾವುದೇ ಆಭರಣಗಳು ಇಲ್ಲಿ ಕಂಡುಬರುವುದಿಲ್ಲ. ಕೊರಳಲ್ಲಿ ರುದ್ರಾಕ್ಷಿ ಮಾಲೆ, ಇಷ್ಟಲಿಂಗ ಹಾಗೂ ಹಣೆಯಲ್ಲಿ ವಿಭೂತಿಯಿರುವುದುನ್ನು ಎಲ್ಲ ಪಾತ್ರಧಾರಿಗಳಲ್ಲಿ ಕಂಡುಬರುತ್ತದೆ.

ನಾಟಕದಲ್ಲಿ ಬಸವಣ್ಣನ ಪಾತ್ರ – ೩

ಮೇಲಿನ ಸನ್ನಿವೇಶಕ್ಕೆ ಸಂಬಂಧಿಸಿದ ಮುಂದಿನ ದೃಶ್ಯ ಇದಾಗಿದೆ. "ಬಸವಣ್ಣನವರಿಗೆ ಹರಳಯ್ಯನವರು ಶರಣು ಎಂದು ತಲೆಬಾಗಿಸಿದಾಗ, ಬಸವಣ್ಣನವರು ಶರಣು, ಶರಣಾರ್ಥಿಯೆಂದು" ಹರಳಯ್ಯನವರಿಗೆ ಹೇಳಿದ್ದಕ್ಕಾಗಿ, ಹರಳಯ್ಯನು ಒಂದು ಜೋಡಿ ಪಾದರಕ್ಷೆಯನ್ನು ತಯಾರಿಸಿ, ಅದರಲ್ಲಿ ಹರಳಯ್ಯ ದಂಪತಿಗಳ ತೊಡೆಯ ಭಾಗದ ಚರ್ಮವನ್ನು ಲೇಪಿಸಿ ಬಸವಣ್ಣನವರಿಗೆ ಅರ್ಪಿಸುತ್ತಿರುವ ದೃಶ್ಯವನ್ನು ಇಲ್ಲಿ ಕಾಣಬಹುದು. ಮೂಲದ ಈ ಸನ್ನಿವೇಶದಲ್ಲಿ ಹರಳಯ್ಯನೊಂದಿಗೆ ತನ್ನ ಪತ್ನಿ ಕಲ್ಯಾಣಮ್ಮ ಅವರೂ ಉಪಸ್ಥಿತರಿರಬೇಕಿತ್ತು. ಆದರೆ ಇಲ್ಲಿರುವುದಿಲ್ಲ. ಈ ಪಾತ್ರದ ಕೊರತೆ ಇಲ್ಲಿ ಎದ್ದು ಕಾಣುತ್ತದೆ. ಉಳಿದಂತೆ ಬಸವಣ್ಣ ಮತ್ತು ಹರಳಯ್ಯನವರ ವಸ್ತ್ರಲಂಕಾರ, ಭಾವ, ಉಡುಪುಗಳು ಆಯಾ ಪಾತ್ರಕ್ಕೆ ಸಂಬಂಧಪಟ್ಟಂತೆ ಸಂಯೋಜಿಸಿರುವುದು ನೋಡುಗರಿಗೆ ನೈಜತೆಯನ್ನು ರೂಪಿಸುತ್ತದೆ.

ನಾಟಕದಲ್ಲಿ ಬಸವಣ್ಣನ ಪಾತ್ರ – ೪

ಹರಳಯ್ಯ ದಂಪತಿಗಳ ತೊಡೆ ಭಾಗದ ಚರ್ಮ ಲೇಪಿತ ಪಾದರಕ್ಷೆಯನ್ನು ಬಸವಣ್ಣನವರಿಗೆ ಅರ್ಪಿಸಿದಾಗ, ಬಸವಣ್ಣನವರು ಅದನ್ನು ಪಾದಕ್ಕೆ ಹಾಕಿಕೊಳ್ಳದೇ ತಲೆಯ ಮೇಲೆ ಹೊತ್ತುಕೊಂಡಿರುವುದನ್ನು ನೋಡಿ ಹರಳಯ್ಯನು ತುಂಬಾ ಭಾವೋದ್ವೇಗಕ್ಕೊಳಗಾಗುತ್ತಾನೆ. ಪ್ರಸ್ತುತ ದೃಶ್ಯದ ಹಿನ್ನೆಲೆ ಇದಾಗಿದೆ. ಇಲ್ಲಿ ಬಸವಣ್ಣನ ಪಾತ್ರದಾರಿ ಆ ಪಾತ್ರಕ್ಕೆ ಸಂಬಂಧಪಟ್ಟಂತೆ ಅಲಂಕೃತಗೊಂಡಿರುವರು. ಅದೇ ರೀತಿ ಹರಳಯ್ಯನ ಪಾತ್ರವೂ ಮೂಡಿಬಂದಿದೆ. ಮೂಲದ ಈ ಸನ್ನಿವೇಶದಲ್ಲಿ ಹರಳಯ್ಯನೊಂದಿಗೆ ತನ್ನ ಪತ್ನಿ ಕಲ್ಯಾಣಮ್ಮ ಅವರೂ ಉಪಸ್ಥಿತರಿರಬೇಕಿತ್ತು. ಆದರೆ ಇಲ್ಲಿರುವುದಿಲ್ಲ. ಈ ಪಾತ್ರದ ಕೊರತೆ ಇಲ್ಲಿ ಎದ್ದು ಕಾಣುತ್ತದೆ. ಈ ಮೇಲಿನವುಗಳಲ್ಲದೇ ಇನ್ನೂ ವಿವಿಧ ರೂಪದಲ್ಲಿ ಬಸವಣ್ಣನವರ ಕುರಿತು ನಾಟಕಗಳು ನಿರ್ಮಿತಗೊಂಡಿವೆ. ಇಲ್ಲಿ ಉದಾಹರಣೆಗಾಗಿ ಮಾತ್ರ ಕೆಲವು ದೃಶ್ಯಗಳನ್ನು ನೀಡಿ ಅವುಗಳನ್ನು ವಿಶ್ಲೇಷಿಸಲಾಗಿದೆ.

೪.೧೦. ಚಲನಚಿತ್ರ ಮಾಧ್ಯಮದಲ್ಲಿ ಬಸವಣ್ಣನವರು

ಚಲನಚಿತ್ರ ಮಾಧ್ಯಮವು ರಂಗಭೂಮಿಯ ಮುಂದುವರೆದ ಭಾಗವಾಗಿದೆ. ವೈಜ್ಞಾನಿಕ ತಂತ್ರಜ್ಞಾನದ ಆವಿಷ್ಕಾರದ ಫಲವಾಗಿ ನಿರ್ಮಿತವಾದ ಚಲನಚಿತ್ರ ಮಾಧ್ಯಮ ಇಂದು ಅತ್ಯಂತ ಜನಪ್ರಿಯ ಮಾಧ್ಯಮವಾಗಿದೆ. ನಾಟಕದ ಪಾತ್ರಗಳು ವಹಿಸಬೇಕಾದ ಎಚ್ಚರಿಕೆಯನ್ನು ಚಲನಚಿತ್ರ ಮಾಧ್ಯಮದ ಪಾತ್ರಗಳು ವಹಿಸಬೇಕಾದ ಅವಶ್ಯಕತೆಯಿರುವುದಿಲ್ಲ. ತಪ್ಪು ಉಚ್ಚಾರಣೆ ಮಾಡಿದರೆ ಅದನ್ನು ತಿದ್ದಿ ಸರಿಪಡಿಸಬಹುದಾದ ವಿಪುಲ ಅವಕಾಶಗಳು ಸಂಪಾದನೆ ಸಂದರ್ಭದಲ್ಲಿ ಇವೆ. ಬಸವಣ್ಣನನ್ನು ಕುರಿತ ಅನೇಕ ಚಲನಚಿತ್ರಗಳು ಕನ್ನಡದಲ್ಲಿ ಸಿದ್ಧಗೊಂಡು ಪ್ರದರ್ಶನ ಕಂಡಿವೆ.

೧೯೫೯ರಲ್ಲಿ ಬಸವಣ್ಣನವರ ಕುರಿತು ಪ್ರಪ್ರಥಮ ಕಪ್ಪುಬಿಳುಪಿನ ಚಲನಚಿತ್ರವು ಬಿಡುಗಡೆಯಾಗಿದೆ. ಈ ಚಿತ್ರದಲ್ಲಿ ಬಸವಣ್ಣನವರ ಪಾತ್ರವನ್ನು ಶ್ರೀ ಹೊನ್ನಪ್ಪ ಭಾಗವತ ಅವರು ವಹಿಸಿರುತ್ತಾರೆ. ತದನಂತರ ಮರಾಠಿ ಭಾಷೆಯಲ್ಲಿಯೂ "ಜಗಜ್ಯೋತಿ ಬಸವೇಶ್ವರ" ಚಲನಚಿತ್ರ ನಿರ್ಮಾಣವಾಗಿದೆ. ಮುಂದೆ ಕನ್ನಡದಲ್ಲಿ "ಕಲ್ಯಾಣಕ್ರಾಂತಿ" ಎಂಬ ಚಲನಚಿತ್ರವು ಪ್ರಥಮವಾಗಿ ವರ್ಣರಂಜಿತದಲ್ಲಿ ನಿರ್ಮಾಣವಾಯಿತು. ಇಲ್ಲಿ ಹಿರಿಯ ನಟ ಶ್ರೀಧರ ಅವರು ಬಸವಣ್ಣನವರ ಪಾತ್ರವಹಿಸಿರುತ್ತಾರೆ. ಅಲ್ಲದೇ ಚಿತ್ರನಟ ರಮೇಶ ಅವರೂ ಕೂಡಾ ಇತ್ತೀಚೆಗೆ ಬಸವಣ್ಣನವರ ಪಾತ್ರದಲ್ಲಿ ನಟಿಸಿರುತ್ತಾರೆ. ಉದಾಹರಣೆಗಾಗಿ ಆ ಚಲನಚಿತ್ರಗಳಲ್ಲಿ ಬಸವಣ್ಣನವರ ಪಾತ್ರದಾರಿಗಳ ಛಾಯಾಚಿತ್ರಗಳನ್ನು ಇಲ್ಲಿ ನೀಡಲಾಗಿದೆ.

❑❑❑



ಚಿತ್ರ ೪.೧.೧ ಕೂಡಲ ಸಂಗಮದತ್ತ ಬಸವಣ್ಣನ ಪಯಣ



ಚಿತ್ರ ೪.೧.೨ ಸಂಗಮನಾಥ ಮತ್ತು ಗುರುಗಳ ಸಾನಿಧ್ಯದಲ್ಲಿ ಬಾಲಕ ಬಸವಣ್ಣ



ಚಿತ್ರ ೪.೧.೩ ಥೇಮ್ಸ್ ನಿದಿ ದಡದಲ್ಲಿರುವ ಅರ್ಧ ಭಾವ ಚಿತ್ರ



ಚಿತ್ರ ೪.೨.೧ ಬಸವನ ಬಾಗೇವಾಡಿಯಲ್ಲಿ ಬಸವಣ್ಣನ ಜನನದ ಸನ್ನಿವೇಶ



ಚಿತ್ರ ೪.೨.೨ ಬಾಲಕ ಬಸವಣ್ಣನಿಂದ ಜನಿವಾರ ನಿರಾಕರಣೆ



ಚಿತ್ರ ೪.೨.೩ ಗುರುಗಳ ಸನ್ನಿಧಿಯಲ್ಲಿ ಅಧ್ಯಯನ ನಿರತ ಬಾಲಕ ಬಸವಣ್ಣ



ಚಿತ್ರ ೪.೨.೪ ಮಂಗಳವಾಡೆಯತ್ತ ಬಸವಣ್ಣನ ಪ್ರಯಾಣ



ಚಿತ್ರ ೪.೨.೫ ಅಶ್ವಾರೂಢ ಬಸವಣ್ಣನವರ ಕಂಚಿನ ಪ್ರತಿಮೆ



ಚಿತ್ರ ೪.೨.೬ ಸಂಸತ್ ಭವನದ ಮುಂಬಾಗದಲ್ಲಿರುವ ಅಶ್ವಾರೂಢ
ಬಸವವಣ್ಣನವರ ಕಂಚಿನ ಪ್ರತಿಮೆ



ಚಿತ್ರ ೪.೨.೭ ನಾಣ್ಯದ ಮೇಲೆ ಬಸವಣ್ಣನವರ ಉಬ್ಬುಶಿಲ್ಪ



ಚಿತ್ರ ೪.೪.೧ ಗುರುಗಳ ಸನ್ನಿಧಿಯಲ್ಲಿ ಧ್ಯಾನನಿರತ ಬಸವಣ್ಣ



ಚಿತ್ರ ೪.೪.೨ ಗಂಗಾಂಬಿಕೆಯು ಬಸವಣ್ಣನು ನೀಲಾಂಬಿಕೆಯನ್ನು ಮದುವೆಯಾಗಲು ಒಪ್ಪಿಸುತ್ತಿರುವುದು



ಚಿತ್ರ ೪.೪.೩ ಬಸವಣ್ಣ ಗುಪ್ತಲಿಫಿ ಒದುತ್ತಿರುವುದು



ಚಿತ್ರ ೪.೪.೪ ಗುಪ್ತನಿಧಿಯನ್ನು ಹೊರತೆಗೆಸುತ್ತಿರುವುದು



ಚಿತ್ರ ೪.೪.೫ ಅನುಭವ ಮಂಟಪದಲ್ಲಿ ಬಸವಣ್ಣ




ಚಿತ್ರ ೪.೪.೬ ಮೂಢನಂಬಿಕೆಗಳನ್ನು ಖಂಡಿಸುತ್ತಿರುವ ಬಸವಣ್ಣ



ಚಿತ್ರ ೪.೪.೭ ಹರಳಯ್ಯನ ಮತ್ತು ಕಲ್ಯಾಣಮ್ಮ ದಂಪತಿಗಳ ಪಾದರಕ್ಷೆಗಳನ್ನು ಬಸವಣ್ಣ ತಲೆಯಮೇಲೆ ಹೊತ್ತುಕೊಂಡಿರುವುದು



ಚಿತ್ರ ೪.೪.೮ ಬಸವಣ್ಣ ಮಂತ್ರಿಪದವಿ ತ್ಯಾಗಮಾಡುತ್ತಿರುವುದು



ಚಿತ್ರ ೪.೪.೯ ಬಸವಣ್ಣನವರ ಭಾವಶಿಲ್ಪ ೧



ಬಸವಣ್ಣನವರ ಭಾವಶಿಲ್ಪ ೨



ಚಿತ್ರ ೪.೪.೧೦ ವಿಶ್ವಗುರು ಬಸವಣ್ಣ ನನೆಪಿನ ಕಾಣಿಕೆ



ಚಿತ್ರ ೪.೫.೧ ವಚನ ರಚನೆಯಲ್ಲಿ ನಿರತ ಬಸವಣ್ಣ



ಚಿತ್ರ ೪.೫.೨ ಅಶ್ವಾರೂಢ ಬಸವಣ್ಣ



ಚಿತ್ರ ೪.೬.೧ ಬಸವಣ್ಣನಿಗೆ ನಾಮಕರಣ ಮಾಡು ಸನ್ನಿವೇಶ



ಚಿತ್ರ ೪.೬.೨ ವಿಶ್ವಗುರು ಬಸವಣ್ಣನ ೧೦೮ ಅಡಿ ಎತ್ತರದ ಸಿಮೆಂಟ್ ಶಿಲ್ಪ



ಚಿತ್ರ ೪.೭.೧ ದೀನ ಬಂಧು ಬಸವಣ್ಣ



ಚಿತ್ರ ೪.೭.೨ ವಚನಾಂಜಲಿ (ಭಾಗ-೧)



ಚಿತ್ರ ೪.೭.೩ ಬಸವಣ್ಣನವರ ವಚನಗಳಲ್ಲಿ ಮಾನವರಾವಾದ




ಚಿತ್ರ ೪.೭.೪ ಬಸವ ಮಹಾದರ್ಶನ




ಚಿತ್ರ ೪.೭.೫ ಬಸವ ಬೆಳಗು



ಚಿತ್ರ ೪.೭.೬ ಬಸವ ಜರ್ನಲ್ ೧



ಬಸವ ಜರ್ನಲ್ ೨




ಚಿತ್ರ ೪.೭.೭ ಬಸವಪಥ ೧




ಬಸವಪಥ ೨



ಬಸವಪಥ – ಬಸವಣ್ಣ ಮತ್ತು ಮಹಾತ್ಮಾ ಗಾಂಧಿ ೩




ಚಿತ್ರ ೪.೭.೮ ಎನ್ನನಾ ಹಾಡಿಕೊಂಡೆ



ಚಿತ್ರ ೪.೭.೯ ಬಸವಣ್ಣ ಮತ್ತು ಅಂಬೇಡ್ಕರ್



ಚಿತ್ರ ೪.೭.೧೦ ಅರಿವು-ಆಚಾರ



ಚಿತ್ರ ೪.೭.೧೧ ಬಸವ ಕೃಪ



ಚಿತ್ರ ೪.೭.೧೨ ಅಂಚೆ ಚೀಟಿಯಲ್ಲಿ ಬಸವಣ್ಣನ ಭಾವಚಿತ್ರ



ಚಿತ್ರ ೪.೭.೧೩ ಅಂಚೆ ಚೀಟಿಯಲ್ಲಿ ಬಸವಣ್ಣನ ಭಾವಚಿತ್ರ



ಚಿತ್ರ ೪.೮.೧ ಜನಿವಾರ ನಿರಾಕರಣೆ



ಚಿತ್ರ ೪.೮.೨ ಅಕ್ಕಮಹಾದೇವಿಯೊಂದಿಗೆ ಬಸವಣ್ಣನವರ ಸಂಭಾಷಣೆ



ಚಿತ್ರ ೪.೮.೩ ಬಿಜ್ಜಳನು ಬಸವಣ್ಣನನ್ನು ಗಡೀಪಾರು ಮಾಡುವ ಸನ್ನಿವೇಶ



ಚಿತ್ರ ೪.೯.೧ ನಾಟಕದಲ್ಲಿ ಬಸವಣ್ಣ ಪಾತ್ರ ೧



ನಾಟಕದಲ್ಲಿ ಬಸವಣ್ಣ ಪಾತ್ರ ೨



ನಾಟಕದಲ್ಲಿ ಬಸವಣ್ಣ ಮತ್ತು ಹರಳಯ್ಯನ ಪಾತ್ರ ೩



ನಾಟಕದಲ್ಲಿ ಬಸವಣ್ಣ ಮತ್ತು ಹರಳಯ್ಯನ ಪಾತ್ರ ೪



ಚಿತ್ರ ೪.೧೦.೧ ಚಲನಚಿತ್ರದಲ್ಲಿ ಬಸವಣ್ಣನ ಪಾತ್ರ ೧



ಚಲನಚಿತ್ರದಲ್ಲಿ ಬಸವಣ್ಣನ ಪಾತ್ರ ೨



ಚಲನಚಿತ್ರದಲ್ಲಿ ಬಸವಣ್ಣನ ಪಾತ್ರ ೩



ಚಲನಚಿತ್ರದಲ್ಲಿ ಬಸವಣ್ಣನ ಪಾತ್ರ ೪



ಚಲನಚಿತ್ರದಲ್ಲಿ ಬಸವಣ್ಣನ ಪಾತ್ರ ೫

ಅಧ್ಯಾಯ : ಐದು

ಬಸವಣ್ಣನವರ ಕುರಿತ ಭಾವಚಿತ್ರಗಳು

ಕವಿಗಳು, ಸಾಹಿತಿಗಳು, ವಚನಕಾರರು ಬಸವಣ್ಣನವರನ್ನು ಕುರಿತು ಸಾಕಷ್ಟು ರೀತಿಯಲ್ಲಿ ತಮ್ಮ ಕೃತಿಗಳಲ್ಲಿ ಪರಿಚಯಿಸುತ್ತಾ ಬಂದಿದ್ದಾರೆ. ಅವರನ್ನು ತತ್ವಜ್ಞಾನಿ, ವಚನಕಾರ, ಸಮಾಜ ಸುಧಾರಕ, ಆರ್ಥಿಕ ತಜ್ಞ ಮುಂತಾದ ದೃಷ್ಟಿಕೋನಗಳಿಂದ ನೋಡುತ್ತ ಬಂದಿದ್ದಾರೆ. ಅವರ ಗ್ರಹಿಕೆ ಮತ್ತು ನೋಟಗಳೆರಡೂ ಸಹಜವಾದವುಗಳೇ ಆಗಿವೆ. ಆದರೆ ಬಸವಣ್ಣನವರನ್ನು ಕಲಾವಿದರು ಸಾಹಿತಿಗಳಿಗಿಂತ ಭಿನ್ನ ನೆಲೆಯಲ್ಲಿ ಗ್ರಹಿಸಲು ಪ್ರಯತ್ನಿಸಿದ್ದಾರೆ. ಅದಕ್ಕಾಗಿ ಅವರು ವರ್ಣಚಿತ್ರಗಳಲ್ಲಿ, ರೇಖಾಚಿತ್ರಗಳಲ್ಲಿ ಮತ್ತು ದೃಶ್ಯಕಲೆಯ ಇತರ ಮಾಧ್ಯಮಗಳಲ್ಲಿ ಬಸವಣ್ಣನವರ ರೂಪವನ್ನು, ವ್ಯಕ್ತಿತ್ವವನ್ನು ಪ್ರತಿಬಿಂಬಿಸಲು ಯತ್ನಿಸಿದ್ದಾರೆ. ಬಸವಣ್ಣನವರ ಕುರಿತ ವರ್ಣಚಿತ್ರಗಳೆಲ್ಲವು ವರ್ಣಗಳಲ್ಲಿ, ಆಕಾರ, ಪ್ರಮಾಣಗಳಲ್ಲಿ ಭಿನ್ನವಾಗಿ ಕಂಡರೂ ಆಶಯದಲ್ಲಿ ಏಕರೂಪವನ್ನು ಹೊಂದಿವೆ.

ಬಸವಣ್ಣನವರನ್ನು ಸಾಹಿತಿಗಳು, ಕಲಾವಿದರು, ಜನಪದರು ಎಷ್ಟೇ ಆಯಾಮಗಳಲ್ಲಿ ನೋಡಿದರೂ ಅವರ ಅಂತಸ್ಸತ್ವ, ಮೂಲಗುಣಗಳಲ್ಲಿ ಬದಲಾವಣೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೋಡಲು ಆಗುವುದಿಲ್ಲ. ಬಹುಪಾಲು ಕಲಾವಿದರು ಬಸವಣ್ಣನವರನ್ನು ಬಿಜ್ಜಳನ ಆಸ್ಥಾನದ ಮಂತ್ರಿಯಾಗಿ ನೋಡಲು ಇಚ್ಛಿಸಿದಂತಿದೆ. ರಾಜಪೋಷಾಕು, ತಲೆಯಲ್ಲಿ ಕಿರೀಟ, ಸಿಂಹಾಸನದ ಮೇಲೆ ಕುಳಿತಿರುವುದು, ರಾಜಗಾಂಭೀರ್ಯದಿಂದ ಅಶ್ವಾರೋಹಿಯಾಗಿ ಕುಳಿತಿರುವ ಇವೇ ಮುಂತಾದ ಭಂಗಿಯಲ್ಲಿ ರಚಿತವಾಗಿರುವ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಇದನ್ನು ಹೊರತುಪಡಿಸಿ ಬಸವಣ್ಣನವರು ಲಿಂಗಪೂಜೆಯಲ್ಲಿ ನಿರತರಾಗಿರುವಂತೆ ಇಲ್ಲವೆ ಕೂಡಲ ಸಂಗಮನಾಥನಲ್ಲಿ ಐಕ್ಯರಾಗುವಂತೆ ಮೂಡಿಸಿದ ವರ್ಣಚಿತ್ರಗಳು ದೊರೆಯುತ್ತವೆ. ಬಸವಣ್ಣನವರ ವ್ಯಕ್ತಿತ್ವವನ್ನು ಕಲಾವಿದ ಯಾವ ಭಾವನೆಯಲ್ಲಿ ನೋಡಲು ಇಚ್ಛಿಸಿದ್ದಾನೆಯೋ ಅಂಥ ಭಾವನೆಗಳನ್ನು ಪ್ರಕಟಪಡಿಸಲು ಅರ್ಧಭಾವಚಿತ್ರ ಇಲ್ಲವೆ ಪೂರ್ಣ ಭಾವಚಿತ್ರಗಳನ್ನು ಮಾಧ್ಯಮವಾಗಿ ಇಲ್ಲಿ ಬಳಸಿಕೊಂಡಿರುವುದು ಕಂಡುಬರುತ್ತದೆ.

ಬಸವಣ್ಣನವರು ತಮ್ಮ ಜೀವನ–ಸಾಧನೆಗಳ ಮೂಲಕ ನಾಡಿನ ಜನತೆಯ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದಾರೆ. ಅವರ ಸಾಧನೆಗಳು ಎಲ್ಲರ ಗಮನ ಸೆಳೆಯುತ್ತವೆ. ಅವರೊಬ್ಬ ಧಾರ್ಮಿಕ ನಾಯಕರಾಗಿ, ಸಾಂಸ್ಕೃತಿಕ ನಾಯಕರಾಗಿ ಇಲ್ಲವೆ ಸಾಮಾಜಿಕ ನೇತಾರರಾಗಿ ಜನರ ಮನಸ್ಸಿನಲ್ಲಿ ನೆಲೆಯೂರಿದ್ದಾರೆ. ಈ ಹಿನ್ನೆಲೆಯಲ್ಲಿ ಕಲಾವಿದರ ಮನಸ್ಸಿನ ಮೇಲೆ ಬಸವಣ್ಣ ತಮ್ಮ ಛಾಪನ್ನು ಮೂಡಿಸಿರುವುದು ಸಹಜವಾದುದೇ ಆಗಿದೆ. ತಮ್ಮ ವರ್ಣಚಿತ್ರ ಕಲಾಕೃತಿಗಳ ರಚನೆಯ ಸಂದರ್ಭದಲ್ಲಿ ಕಲಾವಿದರು ಬಸವಣ್ಣನವರ ವ್ಯಕ್ತಿತ್ವವನ್ನು ರೂಪಿಸುವ ಭಾವಚಿತ್ರಗಳ ರಚನೆಗೆ ಹೆಚ್ಚು ಮಹತ್ವ ನೀಡಿದ್ದಾರೆ. ಅಂಥಹ ಚಿತ್ರಗಳ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ.

೫.೧. ಬಸವಣ್ಣನವರ ಕುರಿತ ಭಾವ ವರ್ಣಚಿತ್ರಗಳ ವಿಶ್ಲೇಷಣೆ

೫.೧.೧. ಅರ್ಧ ಭಾವಚಿತ್ರ – ೧

ಬಹುಕಾಲದಿಂದ ಪ್ರಚಲಿತದಲ್ಲಿರುವ, ಬಸವಣ್ಣ ಎಂದರೆ ತಕ್ಷಣಕ್ಕೆ ನಮ್ಮ ಸ್ಮೃತಿಪಟಲದಲ್ಲಿ ಮೂಡುವ ಚಿತ್ರವಿದು. ಲಕ್ಷಲಕ್ಷಗಳ ಸಂಖ್ಯೆಯಲ್ಲಿ ಮುದ್ರಿತವಾಗಿ ಬಸವ ಅನುಯಾಯಿಗಳ ಮನೆಯಲ್ಲಿ ಶೋಭಿಸುತ್ತಿರುವ ಈ ಚಿತ್ರದಲ್ಲಿ ಬಸವಣ್ಣನವರನ್ನು ತುಸು ಓರೆಮುಖವಾಗಿ ಚಿತ್ರಿಸಲಾಗಿದೆ. ಬಸವಣ್ಣನವರ ಮುಖವನ್ನು ಚಿತ್ರಿಸಲು ಕಂದುಬಣ್ಣಕ್ಕೆ ತಿಳಿಗೆಂಪು, ಅದರೊಂದಿಗೆ ಬಿಳಿಬಣ್ಣವನ್ನು ಮಿಶ್ರಣ ಮಾಡಲಾಗಿದೆ. ಕುತ್ತಿಗೆಯ ಕೆಳಭಾಗದಲ್ಲಿ ಕಂದುಬಣ್ಣ ಮತ್ತು ಕಪ್ಪು ಬಣ್ಣಗಳನ್ನು ಮಿಶ್ರಮಾಡಿ ನೆರಳು ಬಿದ್ದಂತೆ ಚಿತ್ರಿಸಿದ್ದಾನೆ. ತಲೆಗೆ ಧರಿಸಿದ ಬಂಗಾರದ ಕಿರೀಟವು ಹಣೆಯ ಮಧ್ಯದಲ್ಲಿ ಕೆಂಪು ಹರಳು ಮತ್ತು ಅದರ ಕೆಳಗೆ ಹಸಿರು ಬಣ್ಣದ ಹರಳನ್ನು ಹೊಂದಿದ್ದು ಕಾಂತಿಯಿಂದ ಕೂಡಿದೆ.

ಬಸವಣ್ಣನವರನ್ನು ಹಣೆಗೆ ಎದ್ದುಕಾಣುವ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ ಮತ್ತು ಮುತ್ತಿನ ಸರಗಳು, ಕಿವಿಯಲ್ಲಿ ಮುತ್ತಿನಿಂದ ಒಡಗೂಡಿದ ರುದ್ರಾಕ್ಷಿಯ ಓಲೆಗಳನ್ನು ಧರಿಸಿರುವಂತೆ ಇಲ್ಲಿ ಚಿತ್ರಿಸಲಾಗಿದೆ. ಅವರ ಮುಖವು ಗುಂಡಾಗಿದೆ. ಮುಖವನ್ನು ಕಲಾವಿದ ಓರೆಯಾಗಿ ಚಿತ್ರಿಸಿರುವುದರಿಂದ ಎಡಗಿವಿಯ ಭಾಗ ಮಾತ್ರ ನೋಡುಗರಿಗೆ ಗೋಚರಿಸುತ್ತದೆ. ಕಾಂತಿಯಿಂದ ಕೂಡಿದ ಕಣ್ಣುಗಳುಳ್ಳ ಪ್ರಕಾಶಮಾನವಾದ ಮುಖವನ್ನು ಕಲಾವಿದ ಇಲ್ಲಿ ಅಚ್ಚುಕಟ್ಟಾಗಿ ಚಿತ್ರಿಸಿದ್ದಾನೆ. ಆದರೆ ಮೀಸೆ, ಕಣ್ಣುಹುಬ್ಬು ಇವುಗಳಿಗೆ ನೇರವಾಗಿ ಕಪ್ಪುಬಣ್ಣ ಉಪಯೋಗಿಸಿರುವುದರಿಂದ ಅವು ಒಂದಿಷ್ಟು ಪ್ರಖರವಾಗಿ ಕಾಣುತ್ತಿವೆ. ಕಿರೀಟಕ್ಕೆ ಹಿಂದುಗಡೆಯಿಂದ ಎಡಬದಿಯಲ್ಲಿ ತಿಳಿಗೆಂಪು ಛಾಯೆಯನ್ನು ತೋರಿಸಿದ್ದುದು ಒಂದಿಷ್ಟು ವಿಶೇಷ ಪರಿಣಾಮ ಉಂಟುಮಾಡಿದೆ. ಬಸವಣ್ಣನವರು ಕುತ್ತಿಗೆಯವರೆಗೆ ತುಂಬು ನಿಲುವಂಗಿ ಧರಿಸಿದ್ದು, ಅದರ ಮೇಲೆ ಬಂಗಾರದ ಅಂಚಿನಿಂದ ಕೂಡಿದ ಕೆಂಪುಬಣ್ಣದ ಮೇಲು ವಸ್ತ್ರವನ್ನು ಧರಿಸಿರುವುದರಿಂದ ಧರಿಸಿದ ನಿಲುವಂಗಿಯ ಅಲ್ಪಭಾಗ ಮಾತ್ರ ನೋಡುಗರಿಗೆ ಗೋಚರಿಸುತ್ತದೆ. ಆಧುನಿಕ ಸಂದರ್ಭದಲ್ಲಿ ಇದು ಅತ್ಯಂತ ಜನಪ್ರಿಯ ಚಿತ್ರವಾಗಿ ತನ್ನದೇಯಾದ ಅಸ್ತಿತ್ವವನ್ನು ಉಳಿಸಿಕೊಂಡಿದೆ.

ಅರ್ಧ ಭಾವಚಿತ್ರ – ೨

ಈ ಚಿತ್ರದಲ್ಲಿ ಬಸವಣ್ಣನವರು ಕೊರಳಲ್ಲಿ ಮೂರು ಎಳೆಯ ಮುತ್ತಿನ ಹಾರ, ಕಿವಿಯಲ್ಲಿ

ಮುತ್ತಿನ ಓಲೆ, ಕಾವಿಬಣ್ಣದ ಬಟ್ಟೆಯಲ್ಲಿ, ಲಿಂಗಧಾರಣೆ, ಮಂತ್ರಿಯ ಪೋಷಾಕನ್ನು ಧರಿಸಿದ್ದಾರೆ. ತಲೆಗೆ ಮುತ್ತಿನಿಂದ ಅಲಂಕೃತ ಕಿರೀಟ, ಹಣೆಗೆ ವಿಭೂತಿ ಧರಿಸಿದ್ದಾರೆ. ಇತರ ಬಸವಣ್ಣನವರ ಚಿತ್ರಗಳಿಗಿಂತ ಭಿನ್ನವಾಗಿ ಉದ್ದನೆಯ ತಲೆಗೂದಲು ಬಿಟ್ಟಿರುವುದು ಹಾಗೂ ಮುಖ ಅತಿ ಉದ್ದವಾಗಿ ರಚಿತವಾಗಿದ್ದು, ಅಂಗರಚನೆ ದುರ್ಬಲವಾಗಿದೆ. ಸಮಾನಾಂತರವಾಗಿ ರಚಿತವಾಗದ ಕಣ್ಣುಗಳಲ್ಲಿ ವ್ಯಕ್ತವಾದ ಶಾಂತಭಾವ, ತುಟಿಗಳಲ್ಲಿ ಮಿನುಗುತ್ತಿರುವ ಮಂದಹಾಸ, ಮುಖದಲ್ಲಿ ಒಟ್ಟಾರೆಯಾಗಿ ವ್ಯಕ್ತವಾಗುವ ಸೌಮ್ಯತೆ ಈ ಚಿತ್ರದ ಆಕರ್ಷಣೆಯಾಗಿದೆ. ಇಲ್ಲಿ ಕಲಾವಿದ ಮುಖಕ್ಕೆ ಬಳಸಿದ ಬಣ್ಣವನ್ನು ಸ್ವಲ್ಪ ಪ್ರಮಾಣದಲ್ಲಿ ಕಿರೀಟಕ್ಕೆ ಬಳಸಿದ್ದಾನೆ. ಈ ಭಾವಚಿತ್ರದ ಹಿಂದೆ ತಿಳಿನೀಲಿ ಬಣ್ಣ ಲೇಪಿಸಿದ್ದಾನೆ. ಬಸವಣ್ಣನವರು ಈ ಚಿತ್ರದಲ್ಲಿ ಮಂತ್ರಿಪದವಿಯ ಪೋಷಾಕು, ಕಿರೀಟಗಳನ್ನು ಧರಿಸಿದ್ದರೂ ಅಧಿಕಾರದ ಗತ್ತು, ಗಮ್ಮತ್ತುಗಳು ಪ್ರಕಟವಾಗದೆ, ಶರಣನ ಶಾಂತಮುಖ ಮುದ್ರೆಯು ಇಲ್ಲಿ ನೋಡುಗರ ಗಮನಸೆಳೆಯುತ್ತದೆ.

ಅರ್ಧ ಭಾವಚಿತ್ರ – ೩

ಅತ್ಯಂತ ಪ್ರಚಲಿತದಲ್ಲಿರುವ ಈ ಚಿತ್ರದಲ್ಲಿ ಬಸವಣ್ಣನವರನ್ನು ಎಡಮುಖ ಓರೆಯಾಗಿ ಚಿತ್ರಿಸಲಾಗಿದೆ. ಬಸವಣ್ಣನವರ ಮುಖವನ್ನು ಚಿತ್ರಿಸಲು ಕಂದುಬಣ್ಣಕ್ಕೆ ತಿಳಿಗೆಂಪು, ಅದರೊಂದಿಗೆ ಬಿಳಿಬಣ್ಣವನ್ನು ಮಿಶ್ರಣ ಮಾಡಲಾಗಿದೆ. ಕುತ್ತಿಗೆಯ ಕೆಳಭಾಗದಲ್ಲಿ ಕಂದುಬಣ್ಣ ಮತ್ತು ಕಪ್ಪು ಬಣ್ಣಗಳನ್ನು ಮಿಶ್ರಮಾಡಿ ನೆರಳು ಬಿದ್ದಂತೆ ಚಿತ್ರಿಸಿದ್ದಾನೆ. ತಲೆಗೆ ಧರಿಸಿದ ಬಂಗಾರದ ಕಿರೀಟವು ಕಡುಹಳದಿ ಬಣ್ಣದ್ದಾಗಿದೆ. ಹಣೆಯ ಮಧ್ಯದಲ್ಲಿ ಹಸಿರು ಹರಳು ಮತ್ತು ಅದರ ಕೆಳಗೆ ಕೆಂಪು ಬಣ್ಣದ ಹರಳನ್ನು ಹೊಂದಿದ್ದು ಕಾಂತಿಯಿಂದ ಕೂಡಿದೆ. ಬಸವಣ್ಣನವರು ಹಣೆಗೆ ವಿಭೂತಿ, ಕೊರಳಲ್ಲಿ ಒಂದೆಳೆಯ ರುದ್ರಾಕ್ಷಿ ಮತ್ತು ಎರಡು ಎಳೆಯ ಮುತ್ತಿನ ಹಾರ, ಕೊರಳಲ್ಲಿ ಇಷ್ಟಲಿಂಗ, ಕಿವಿಯಲ್ಲಿ ಮುತ್ತಿನಿಂದ ಒಡಗೂಡಿದ ರುದ್ರಾಕ್ಷಿಯ ಓಲೆಗಳನ್ನು ಧರಿಸಿರುವಂತೆ ಇಲ್ಲಿ ಚಿತ್ರಿಸಲಾಗಿದೆ. ಅವರ ಮುಖವು ಗುಂಡಾಗಿದೆ. ಅದರಲ್ಲಿ ಸಾತ್ವಿಕ ಕಳೆಯು ಪೂರ್ಣವಾಗಿ ಆವರಿಸಿದೆ. ಮುಖವನ್ನು ಕಲಾವಿದ ಎಡಭಾಗಕ್ಕೆ ಓರೆಯಾಗಿ ಚಿತ್ರಿಸಿರುವುದರಿಂದ ಬಲಗಿವಿಯ ಭಾಗ ಮಾತ್ರ ನೋಡುಗರಿಗೆ ಗೋಚರಿಸುತ್ತದೆ. ಕಾಂತಿಯಿಂದ ಕೂಡಿದ ಕಣ್ಣುಗಳುಳ್ಳ ಪ್ರಕಾಶಮಾನವಾದ ಮುಖವನ್ನು ಕಲಾವಿದ ಇಲ್ಲಿ ಅಚ್ಚುಕಟ್ಟಾಗಿ ಚಿತ್ರಿಸಿದ್ದಾನೆ. ಬಸವಣ್ಣನವರು ಕುತ್ತಿಗೆಯವರೆಗೆ ತುಂಬು ನಿಲುವಂಗಿ ಧರಿಸಿದ್ದಾರೆ. ಅದರ ಮೇಲೆ ಬಂಗಾರದ ಅಂಚಿನಿಂದ ಕೂಡಿದ ಬಿಳಿಬಣ್ಣದ ಮೇಲು ವಸ್ತ್ರವನ್ನು ಧರಿಸಿರುವುದರಿಂದ ಧರಿಸಿದ ನಿಲುವಂಗಿಯ ಅಲ್ಪಭಾಗ ಮಾತ್ರ ನೋಡುಗರಿಗೆ ಗೋಚರಿಸುತ್ತದೆ. ಬಸವಣ್ಣನವರ ಹಿಂದುಗಡೆ ಸಿಂಹಾಸನದ ವೃತ್ತಾಕಾರದ ಅಲ್ಪಭಾಗ ಮಾತ್ರ ಗೋಚರಿಸುತ್ತಿದೆ. ಸದ್ಯದ ಸಂದರ್ಭದಲ್ಲಿ ಅತ್ಯಂತ ಜನಪ್ರಿಯ ಚಿತ್ರವಾಗಿ ಇದು ರೂಪುಗೊಂಡಿದೆ.

ಅರ್ಧ ಭಾವಚಿತ್ರ – ೪

ಬಸವಣ್ಣನವರು ಈ ಚಿತ್ರದಲ್ಲಿ ತಮ್ಮ ಬಲಗೈಯಲ್ಲಿ ಹಸ್ತಪ್ರತಿಯೊಂದನ್ನು ಹಿಡಿದಿದ್ದಾರೆ. ಸಾಮಾನ್ಯ ಚಿತ್ರಗಳಲ್ಲಿ ಚಿತ್ರಿತವಾದಂತೆ ಇಲ್ಲಿಯೂ ಬಸವಣ್ಣನವರು ಕೊರಳಲ್ಲಿ ರುದ್ರಾಕ್ಷಿಯ ಹಾರ, ರುದ್ರಾಕ್ಷಿಯ ಓಲೆ, ಕೊರಳಲ್ಲಿ ಪ್ರತ್ಯೇಕವಾದ ಒಂದು ರುದ್ರಾಕ್ಷಿಯೊಂದಿಗೆ ಕಾವಿ ಬಣ್ಣದ ಬಟ್ಟೆಯಲ್ಲಿ ಧರಿಸಿದ ಇಷ್ಟಲಿಂಗ,

ಹಣೆಯಲ್ಲಿ ಎದ್ದುಕಾಣುವಂತೆ ತುಸು ಢಾಳಾಗಿ ಎನ್ನುವಂತೆ ವಿಭೂತಿಯನ್ನು ಧರಿಸಿದ್ದಾರೆ. ಅಲ್ಲದೆ ತೋಳು ಮತ್ತು ಮುಂಗೈಗಳಲ್ಲಿ ರುದ್ರಾಕ್ಷಿಯನ್ನು ಧರಿಸಲಾಗಿದೆ. ಬಸವಣ್ಣನವರನ್ನು ಚಿತ್ರಿಸಲು ಇಲ್ಲಿ ಲಘು ಕಾವಿಬಣ್ಣವನ್ನು ಬಳಸಲಾಗಿದೆ. ಅವರು ಧರಿಸಿದ ವಸ್ತ್ರವು ಬಂಗಾರ ಬಣ್ಣದ ಅಂಚಿನಿಂದ ಕೂಡಿದ್ದು ಗಾಢವಾದ ಕಾವಿಬಣ್ಣವನ್ನು ಹೊಂದಿದೆ. ನೀಳವಾದ ನಾಸಿಕ, ಹೊಳೆಯುವ ಕಣ್ಣುಗಳು, ಕಾಂತಿಯುಕ್ತ ಮುಖವು ಪ್ರಸ್ತುತ ಚಿತ್ರದಲ್ಲಿ ಚಿತ್ರಿತವಾಗಿದೆ. ಬಸವಣ್ಣನವರ ಹಿಂಬದಿಯಲ್ಲಿ ಬಿಳಿಬಣ್ಣವನ್ನು ಲೇಪಿಸಿರುವುದರಿಂದ ಅವರ ಒಟ್ಟು ಚಿತ್ರವು ಎದ್ದು ಕಾಣುತ್ತಿದೆ. ಇಲ್ಲಿ ಬಸವಣ್ಣ ಕಿರೀಟವನ್ನು ಧರಿಸದೇ ಇದ್ದು, ಶುದ್ಧ ಶರಣರ ಮನಸ್ಸನ್ನು ಹೊಂದಿದ ಭಾವನೆ ಪ್ರಕಟವಾಗಿದೆ.

ಅರ್ಧ ಭಾವಚಿತ್ರ – ೫

ಕಲಾವಿದ ಕೆ. ಗಂಗಾಧರವರು ಈ ಚಿತ್ರವನ್ನು ತೈಲವರ್ಣ ಮಾಧ್ಯಮದಲ್ಲಿ ರಚಿಸಿದ್ದಾರೆ. ಪ್ರಸ್ತುತ ಈ ಕಲಾಕೃತಿಯು ವೈಯಕ್ತಿಕ ಸಂಗ್ರಹದಲ್ಲಿದೆ. ಈ ಚಿತ್ರದಲ್ಲಿ ಬಸವಣ್ಣನವರು ಇಷ್ಟಲಿಂಗಪೂಜೆಯಲ್ಲಿ ನಿರತರಾದ ಸನ್ನಿವೇಶವನ್ನು ಕಾಣುತ್ತೇವೆ. ಬಸವಣ್ಣನವರ ಒಟ್ಟು ಚಿತ್ರವೇ ಲಿಂಗಾಕಾರದ ಒಳಗೆ ಮೂಡಿರುವುದು ಸ್ಪಷ್ಟವಾಗಿದೆ. ಇಷ್ಟಲಿಂಗದ ಅಂಚನ್ನು ಕಪ್ಪುಬಣ್ಣದಿಂದಲೂ ಮತ್ತು ಇಷ್ಟಲಿಂಗದ ಒಳಭಾಗಕ್ಕೆ ತೆಳು ನೀಲಿಬಣ್ಣವನ್ನು ಬಳಸಲಾಗಿದೆ. ಬಸವಣ್ಣನವರನ್ನು ಹೆಚ್ಚು ಬಿಳಿಬಣ್ಣದೊಂದಿಗೆ ಸ್ವಲ್ಪ ಹಳದಿ, ಕೆಂಪು, ಕಂದು ಬಣ್ಣಗಳ ಮಿಶ್ರಣದ ಸಂಯೋಜನೆಯೊಂದಿಗೆ ಚಿತ್ರಿಸಲಾಗಿದೆ. ತುಂಬ ಸರಳವಾದ ಹಿನ್ನೆಲೆಯೊಂದಿಗೆ ಬಸವಣ್ಣನವರು ಕೊರಳಲ್ಲಿ ಒಂದು ಎಳೆಯ ರುದ್ರಾಕ್ಷಿಯ ಸರ, ಕಿವಿಯಲ್ಲಿ ಬಂಗಾರದ ಲೋಹದಿಂದ ಒಡಗೂಡಿದ ರುದ್ರಾಕ್ಷಿಯ ಓಲೆಗಳನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಹಳದಿಯ ಬಣ್ಣದ ಅಂಚಿನ ಬಿಳಿಬಣ್ಣದ ಪಂಚೆಯನ್ನು ದೇಹದ ಅರ್ಧಭಾಗಕ್ಕೆ ಉಟ್ಟಿದ್ದಾರೆ. ತಮ್ಮ ಎಡಗೈಯಲ್ಲಿ ಇಷ್ಟಲಿಂಗವನ್ನು ಇರಿಸಿ ಅದನ್ನು ಅರೆನಿಮೀಲಿತ ಕಣ್ಣುಗಳಿಂದ ದೃಷ್ಟಿಸುತ್ತಾ ಇರುವ ದೃಶ್ಯವು ಮನಸ್ಸಿನ ಏಕಾಗ್ರತೆಗೆ ಸಾಕ್ಷಿಯಾಗಿದೆ. ನೋಡುಗರಿಗೆ ಭಕ್ತಿಭಾವ ಸ್ಫುರಿಸುವಂತೆ ಚಿತ್ರವು ರೂಪಿತಗೊಂಡಿದೆ. ಇಷ್ಟಲಿಂಗದ ಮೇಲೆ ಬಿಲ್ವಪತ್ರೆಯ ದಳದ ಒಂದು ಭಾಗ ಮಾತ್ರ ಗೋಚರಿಸುತ್ತದೆ. ಬಸವಣ್ಣನವರ ತಲೆಯ ಹಿಂಬದಿಯಲ್ಲಿನ ಹಾಲುಬಿಳುಪಿನ ಪ್ರಭಾವಳಿಯು ನೋಡುಗರ ಗಮನಸೆಳೆದರೆ, ಲಿಂಗದ ಆಕೃತಿಗೆ ಮತ್ತು ಹಿನ್ನೆಲೆ ಕಂಪ್ಯೂಟರ್ ಗ್ರಾಫಿಕ್ಸ್ ಪರಿಣಾಮವನ್ನು ಸ್ಪರ್ಶಿಸಲಾಗಿದೆ. ಬಸವಣ್ಣನವರ ಆಕೃತಿ ಮಾತ್ರ ಕೈಗೆಲಸವಾಗಿದ್ದು ಇನ್ನುಳಿದ ಭಾಗಕ್ಕೆ ಗ್ರಾಫಿಕ್ಸ್‌ನ್ನು ದುಡಿಸಿಕೊಳ್ಳಲಾಗಿದೆ.

ಅರ್ಧ ಭಾವಚಿತ್ರ – ೬

ಕಲಾವಿದ ಬಸವರಾಜ ಮುಗಳಿ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ (ಎನಾಮೆಲ್) ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಬಸವ ಧರ್ಮ ಪೀಠದಲ್ಲಿ ಸಂಗ್ರಹಗೊಂಡಿದೆ. ಪ್ರಸ್ತುತ ಭಾವಚಿತ್ರವು ಬಸವಣ್ಣನವರು ಇಷ್ಟಲಿಂಗಪೂಜೆಯಲ್ಲಿ ನಿರತರಾಗಿರುವ ಸನ್ನಿವೇಶವನ್ನು ದಾಖಲಿಸಿದೆ. ಮಿಶ್ರವರ್ಣಗಳನ್ನು ಬಳಸಿ ರಚಿಸಿದ ಈ ಚಿತ್ರದಲ್ಲಿ

ಬಸವಣ್ಣನವರನ್ನು ಪ್ರಧಾನವಾಗಿ ಕಾಣುವಂತೆ ಚಿತ್ರಿಸಿದ್ದು ಅವರ ಹಿಂಬದಿಯಲ್ಲಿ ಇಡೀ ಬ್ರಹ್ಮಾಂಡದ ಕಲ್ಪನೆಯನ್ನು ಸೊಗಸಾಗಿ ಕಟ್ಟಿಕೊಡಲಾಗಿದೆ.

ಬ್ರಹ್ಮಾಂಡ – ಪಿಂಡಾಂಡ ಮತ್ತು ಅಜಾಂಡವೆಂಬ ಅಂಡಗಳ ಕಲ್ಪನೆಯನ್ನು ಇಲ್ಲಿ ಸಾಕಾರ–ಗೊಳಿಸಲಾಗಿದೆ. ಬಸವಣ್ಣನವರು ಈ ಚಿತ್ರದಲ್ಲಿ ಹಣೆ, ಕೊರಳು, ಬಲಭುಜದ ಮೇಲೆ ವಿಭೂತಿ ಧಾರಣೆ, ಕೊರಳಲ್ಲಿ ರುದ್ರಾಕ್ಷಿಯ ಸರ, ಕಿವಿಯಲ್ಲಿ ಲೋಹಾಲಂಕೃತ ರುದ್ರಾಕ್ಷಿಯ ಓಲೆಗಳನ್ನು ಧರಿಸಿದ್ದಾರೆ. ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದ ಅವರ ಹಸ್ತದ ಬೆರಳುಗಳು ಅತ್ಯಂತ ಕೋಮಲವಾದ ಸ್ತ್ರೀಯ ಬೆರಳುಗಳಂತೆ ಚಿತ್ರಿತವಾಗಿರುವುದು ಇಲ್ಲಿಯ ವಿಶೇಷ. ಕೈಯಲ್ಲಿ ಹಿಡಿದ ಇಷ್ಟಲಿಂಗವು ಗಾಢವಾದ ಕಪ್ಪು ಬಣ್ಣವನ್ನು ಹೊಂದಿದ್ದು ಅದರ ಮೇಲೆ ಧರಿಸಿದ ವಿಭೂತಿಯ ಪಟ್ಟಿಕೆಗಳು ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತವೆ. ಹಾಗೆಯೇ ಇಷ್ಟಲಿಂಗಕ್ಕೆ ಏರಿಸಿದ ಬಿಲ್ವಪತ್ರೆಯ ಮೂರು ದಳಗಳನ್ನು ಅನಾಯಾಸವಾಗಿ ಗ್ರಹಿಸಬಹುದಾಗಿದೆ. ಬಸವಣ್ಣನವರು ಬಿಳಿ, ಕೆಂಪು, ನೀಲಿ ಮಿಶ್ರಿತ ಮೋಡಗಳ ಮಧ್ಯೆ ಇಷ್ಟಲಿಂಗಪೂಜೆಯಲ್ಲಿ ತೊಡಗಿರುವಂತೆ ಕಲಾವಿದ ಚಿತ್ರಿಸಿದ್ದಾನೆ.

ಬಸವಣ್ಣನವರ ಮುಂದೆ ಕೂಡಲ ಸಂಗಮದ ಮಂಟಪವು ಬೆಳಕಿನ ಪುಂಜದಿಂದ ಹೊಳೆಯುವಂತೆ ಕಂಡುಬರುತ್ತದೆ. ಮಂಟಪದಲ್ಲಿರುವ ಶಿವಲಿಂಗವು ಗಮನಸೆಳೆಯುತ್ತದೆ. ಬಸವಣ್ಣನವರ ಎಡಭಾಗದ ಮೇಲೆ ಬ್ರಹ್ಮಾಂಡದ ಅನೇಕ ಗ್ರಹಗಳನ್ನು, ನಕ್ಷತ್ರಗಳನ್ನು ಚಿತ್ರಿಸಲಾಗಿದ್ದು, ಇಷ್ಟಲಿಂಗದ ಕಲ್ಪನೆಯು ವಿಶಿಷ್ಟ ಅನುಭೂತಿಯನ್ನು ನೀಡುವಲ್ಲಿ ಸಫಲವಾಗಿದೆ. ಬಸವಣ್ಣನವರ ಕಣ್ಣುಗಳು ಇಷ್ಟಲಿಂಗವನ್ನು ತದೇಕಚಿತ್ತದಿಂದ ದೃಷ್ಟಿಸುವಂತೆ ಚಿತ್ರಿಸಲಾಗಿದೆ. ಈ ಚಿತ್ರವನ್ನು ಭಾವಚಿತ್ರವೆನ್ನುವುದಕ್ಕಿಂತ ಒಂದು ಬಗೆಯಲ್ಲಿ ಸಂಯೋಜನಾ ಚಿತ್ರವೆಂದೂ ಪರಿಗಣಿಸಬಹುದಾಗಿದೆ. ಭಾವಚಿತ್ರಣ ಭಾವಪ್ರದವಾಗಿ ಮೂಡಿಬಂದರೂ, ಹಿನ್ನೆಲೆಯ ದಟ್ಟ ವರ್ಣಗಳು ಭಾವಚಿತ್ರದ ವೀಕ್ಷಣೆಗೆ ಅಡ್ಡಿಯುಂಟುಮಾಡುತ್ತಿವೆ. ಭಾವಚಿತ್ರದಲ್ಲಿರುವ ಮೃದುತ್ವ ಹಿನ್ನೆಲೆಯಲ್ಲಿಯೂ ಇದ್ದಿದ್ದರೆ ಈ ಚಿತ್ರದ ಸೊಬಗೇ ಬೇರೆಯಾಗಿರುತ್ತಿತ್ತು.

ಅರ್ಧ ಭಾವಚಿತ್ರ – ೭

ವಿಜಯಪುರದ ಶ್ರೀ. ಪಿ. ಎಸ್. ಕಡೇಮನಿಯವರು ಈ ಚಿತ್ರವನ್ನು ರಚಿಸಿದ್ದಾರೆ. ೨೪"x೩೦" ಅಳತೆಯ ತೈಲವರ್ಣ ಮಾಧ್ಯದಮದಲ್ಲಿ ಚಿತ್ರಣಗೊಂಡಿದೆ. ಜಗದ್ಗುರು ಪಂಚಮಸಾಲಿ ಸಮಾಜದ ಗುರುಪೀಠ, ಕೂಡಲಸಂಗಮದಲ್ಲಿ ಸಂಗ್ರಹಗೊಂಡಿದೆ. ಈ ಭಾವಚಿತ್ರದಲ್ಲಿ ಬಸವಣ್ಣನವರನ್ನು ಧ್ಯಾನಸ್ಥರಾಗಿ ಮತ್ತು ಮುಗುಳ್ನಗುತ್ತಿರುವಂತೆ ಚಿತ್ರಿಸಲಾಗಿದೆ. ಸಾಮಾನ್ಯವಾಗಿ ಇಲ್ಲಿಯೂ ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ ಮತ್ತು ಇಷ್ಟಲಿಂಗವನ್ನು ವಿಶೇಷ ಮಾದರಿಯಲ್ಲಿ ಬಿಂಬಿಸಲಾಗಿದೆ. ತಿಳಿ ಕೇಸರಿ ವರ್ಣದ ವಸ್ತ್ರವನ್ನು ಮೇಲೊದಿಸಿದ್ದು, ಚಿತ್ರದ ಬಲಭಾಗದಲ್ಲಿ ಮಂಡಿ ಹಾಕಿ ಕುಳಿತ ಬಿಳಿ ಮತ್ತು ಕಂದು ವರ್ಣ ಮಿಶ್ರಿತ ನಂದಿಯಿದ್ದು, ಅದರ ಹಿಂಭಾಗದಲ್ಲಿ ಬಿಳಿ ವರ್ಣದಲ್ಲಿ ದೊಡ್ಡ ಗಾತ್ರದ ನಂದಿಯು ವಂದಿಸುತ್ತಿರುವಂತೆ ಇಲ್ಲಿ ಭಾಸವಾಗುತ್ತದೆ.

ಅರ್ಧ ಭಾವಚಿತ್ರ-೮

ರೇಖಾಚಿತ್ರ ಮಾಧ್ಯಮ (ಲೈನ್ ಡ್ರಾಯಿಂಗ್)ದಲ್ಲಿ ರಚಿತವಾದ ಬಸವಣ್ಣನವರ ಪ್ರಸ್ತುತ ಭಾವಚಿತ್ರವು ಕಲಾವಿದ ಸಿ. ಸೋಮಶೆಟ್ಟಿಯವರು ರಚಿಸಿದ್ದಾರೆ. ಸರಳವಾದ ರಚನೆಯೆಂದು ತೋರಿದರೂ ಹಲವು ಸೂಕ್ಷ್ಮತೆಗಳಿವೆ. ಬೋಳುತಲೆ, ತೆಳುವಾದ ಕಡ್ಡಿಯಂತಿರುವ ಮೂರು ವಿಭೂತಿಯ ಗೆರೆಗಳು, ಹಣೆಯ ಮಧ್ಯದಲ್ಲಿ ವಿಭೂತಿಯ ಬೊಟ್ಟು, ಅಂಕುಡೊಂಕಾದ ಹುಬ್ಬುಗಳು, ನೀಳವಲ್ಲದ ಮೂಗು, ದಪ್ಪ ಮೀಸೆಗಳು, ಉದ್ದವಾದ ಎಡಕಿವಿಯಲ್ಲಿ ರುದ್ರಾಕ್ಷಿಯ ಓಲೆ, ದುಂಡುಮುಖ, ಕೊರಳಮಧ್ಯದಲ್ಲಿ ವಿಭೂತಿಯ ಪಟ್ಟಿ, ಏಕರುದ್ರಾಕ್ಷಿಯ ಸರ, ವಸ್ತ್ರದಲ್ಲಿ ಸುತ್ತಿ ಕಟ್ಟಿಕೊಂಡಿರುವ ಇಷ್ಟಲಿಂಗದ ಗಂಟು, ದಪ್ಪನೆಯ ರುದ್ರಾಕ್ಷಿಗಳಿರುವ ಮಾಲೆಯನ್ನು ಧರಿಸಿರುವ ಬಸವಣ್ಣನವರು ತಮ್ಮ ಬಲಹಸ್ತವನ್ನು ಎತ್ತಿ ಆಶೀರ್ವದಿಸುವ ಭಂಗಿಯಲ್ಲಿ ಚಿತ್ರಿತವಾಗಿದ್ದಾರೆ. ನೆರಿಗೆಗಳಿಂದ ಕೂಡಿರುವ ಮೇಲುವಸ್ತ್ರ, ತಲೆಯ ಹಿಂಬದಿಯಲ್ಲಿ ಸೂರ್ಯ ಮತ್ತು ಆತನ ಕಿರಣಗಳನ್ನು ಪ್ರತಿನಿಧಿಸುವ ವೃತ್ತಾಕಾರದ ಪ್ರಭಾವಳಿಯಿದೆ. ಎದೆಮಟ್ಟದವರೆಗೆ ಮಾತ್ರ ಚಿತ್ರಿತರಾಗಿರುವ ಬಸವಣ್ಣನವರ ಈ ಭಾವಚಿತ್ರದ ಹೃದಯಭಾಗದ ಕೆಳಬದಿಯಲ್ಲಿ ಕೂಡಲಸಂಗಮದ ಐಕ್ಯಮಂಟಪ, ಅದರ ಪಕ್ಕದಲ್ಲಿ ಹರಿಯುತ್ತಿರುವ ನದಿ, ದಂಡೆಯಲ್ಲಿ ಬೆಳೆದಿರುವ ಗಿಡಗಂಟೆಗಳನ್ನು ಕಲಾವಿದ ಚಿತ್ರಿಸಿದ್ದಾನೆ. ಈ ಚಿತ್ರವು ಕಪ್ಪುಬಣ್ಣದ ರೇಖೆಗಳಿಂದ ಕೂಡಿದ ರೇಖಾಚಿತ್ರವಾದರೂ ಬಸವಣ್ಣನವರ ಕಣ್ಣುಗಳಲ್ಲಿರುವ ಕಾಂತಿ ಮತ್ತು ಮುಖದ ಪ್ರಶಾಂತ ಭಾವವನ್ನು ಸುಲಭವಾಗಿ ನೋಡುಗ ಗ್ರಹಿಸಲು ಸಾಧ್ಯವಾಗಿರುವುದು ಕಲಾವಿದನ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ.

ಅರ್ಧ ಭಾವಚಿತ್ರ-೯

ಬಸವಣ್ಣನವರನ್ನು ಕುರಿತು ಶ್ರೀಯುತ ಎಂ.ಬಿ. ಪಾಟೀಲರು ರಚಿಸಿದ ಈ ಅರ್ಧ ಭಾವಚಿತ್ರವು ತೈಲವರ್ಣದಿಂದ ರಚಿಸಿದ್ದಾರೆ. ಬಸವಣ್ಣನವರ ಶಾಂತ ಚಿತ್ತದಿಂದ ಆಲೋಚನೆಯಲ್ಲಿ ತೊಡಗಿರುವ ಬಸವಣ್ಣನವರ ಭಾವನೆ ಬಿಂಬಿಸುವಂತೆ ಈ ಚಿತ್ರವು ರಚನೆಗೊಂಡಿದ್ದು ಬಸವಣ್ಣನವರ ಕಿವಿಓಲೆಯೂ ಬಿಳಿ ಬಣ್ಣದ ರುದ್ರಾಕ್ಷಿಯಂತೆ ಕಂಡುಬಂದಿದ್ದು ಬಂಗಾರ ವರ್ಣದ ಅಂಚೆಯ ನಿಲುವಂಗಿ ಧರಿಸಿದ್ದು ಕೊರಳಲ್ಲಿ ನೀಲಿವರ್ಣದಿಂದ ನೆರಳು ಬೆಳಕು ಇಷ್ಟಲಿಂಗ ಧರಿಸಿದ್ದು ಇದರೊಂದಿಗೆ ರುದ್ರಾಕ್ಷಿ ಸರ ಧರಿಸಿದ್ದು ಎದ್ದುಕಾಣುತ್ತದೆ. ಬಸವಣ್ಣನವರ ಬಣಗಾರ ವರ್ಣದಿಂದ ಪೂರ್ಣಗೊಂಡ ಕಿರೀಟ ಮಧ್ಯದಲ್ಲಿ ಕೆಂಪು ಮತ್ತು ನೀಲಿ ಹವಳಗಳನ್ನು ಜೋಡಿಸಿ ಬಲಭಾಗಕ್ಕೆ ಬಿಳಿ ಮುತ್ತುಗಳನ್ನು ಜೋತುಬಿದ್ದಂತೆ ಒಟ್ಟಾರೆ ಮುಖದ ಹಿಂಭಾಗದಲ್ಲಿ ವೃತ್ತಾಕಾರದ ಕಡುನೀಲಿ ವರ್ಣದ ಪ್ರಭಾವಳಿ ಇದ್ದು ಒಟ್ಟಾರೆ ಈ ಕಲಾಕೃತಿಯಲ್ಲಿ ಇದನ್ನು ಯಥಾದರ್ಶನವು ತಪ್ಪಿರುವುದು ಇಲ್ಲಿ ಕಂಡುಬರುತ್ತದೆ.

೫.೧.೨. ಇಷ್ಟಲಿಂಗ ಪೂಜೆಯಲ್ಲಿ ನಿರತನಾದ ಬಸವಣ್ಣನವರ ಪೂರ್ಣ ಭಾವಚಿತ್ರ -೧

ಕಲಾವಿದ ಕೆ. ಗಂಗಾಧರ ಅವರ ೪೮"x೩೬" ಅಳತೆಯ ಈ ಕೃತಿಯು ತೈಲವರ್ಣದ ಮಾಧ್ಯಮದಲ್ಲಿ ರಚನೆಗೊಂಡಿದೆ. ಪ್ರಸ್ತುತ ಈ ಕೃತಿಯು ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಮಂಡಳಿಯ

ಕಛೇರಿಯಲ್ಲಿ ಸಂಗ್ರಹಗೊಂಡಿದೆ. ಈ ಚಿತ್ರದಲ್ಲಿ ಬಸವಣ್ಣನವರು ಇಷ್ಟಲಿಂಗಪೂಜೆಯಲ್ಲಿ ತೊಡಗಿರುವ ಸನ್ನಿವೇಶವನ್ನು ಕಾಣುತ್ತೇವೆ. ಕೆಂಪು ಮಿಶ್ರಿತ ಬಿಳಿ ಮೈಬಣ್ಣ, ಕೊರಳಲ್ಲಿ ರುದ್ರಾಕ್ಷಿ ಸರ, ಇಷ್ಟಲಿಂಗದ ಕಾವಿವಸ್ತ್ರದ ಗಂಟು, ಎಡಗೈ ತೋಳಿನಲ್ಲಿ ಮತ್ತು ಬಲಗೈ ಮಣಿಕಟ್ಟಿನಲ್ಲಿ ರುದ್ರಾಕ್ಷಿ, ಹಣೆಯಲ್ಲಿ, ಕೊರಳಲ್ಲಿ, ತೋಳು ಮತ್ತು ಕೈಗಳಲ್ಲಿ ಎದ್ದುಕಾಣುವಂತೆ ವಿಭೂತಿ ಧರಿಸಿರುವ ಬಸವಣ್ಣನವರು ಅರೆನಿಮೀಲಿತ ಕಣ್ಣುಗಳಿಂದ ಎಡಗೈಯಲ್ಲಿರುವ ಇಷ್ಟಲಿಂಗವನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದಾರೆ. ಸಾತ್ವಿಕ ಶಿವಯೋಗಿಯ ಎಲ್ಲ ಲಕ್ಷಣಗಳನ್ನು ಕಲಾವಿದ ಇಲ್ಲಿ ಐಕ್ಯಗೊಳಿಸಿರುವುದನ್ನು ಕಾಣಬಹುದು.

ಬಿಳಿಯ ಪಂಚೆ, ಮೇಲುಹೊದಿಕೆ, ಅದಕ್ಕೆ ಹೊಂದಿಕೊಂಡಂತೆ ಬಂಗಾರವರ್ಣದ ಅಂಚಿನ ವಸ್ತ್ರಗಳನ್ನು ಬಸವಣ್ಣನವರು ಧರಿಸಿದಂತೆ ಚಿತ್ರಿಸಲಾಗಿದೆ. ಅವರ ತಲೆಯ ಸುತ್ತ ಬಿಳಿ ಮತ್ತು ಹಸಿರು ಮತ್ತು ಗಾಢಹಸಿರು ಬಣ್ಣಗಳ ಪ್ರಕಾಶಮಾನವಾದ ಪ್ರಭಾವಳಿಯನ್ನು ಚಿತ್ರಿಸಲಾಗಿದೆ. ಎಡಗೈಯಲ್ಲಿರುವ ಇಷ್ಟಲಿಂಗವು ಗಾಢ ಕಪ್ಪುಬಣ್ಣವನ್ನು ಹೊಂದಿದ್ದು ಅದು ಸಹ ಬಿಳಿಯ ಬಣ್ಣದ ಪ್ರಭಾವಳಿಯನ್ನು ಹೊಂದಿದೆ. ಬಸವಣ್ಣನವರು ಕುಳಿತಿರುವ ಪೀಠದಲ್ಲಿ ಅವರ ಎಡಗಾಲಿನ ಪಾದದ ಅರ್ಧಭಾಗ ಮಾತ್ರ ಕಾಣುತ್ತಿದ್ದು ಉಳಿದವು ವಸ್ತ್ರಗಳಿಂದ ಮರೆಯಾಗಿವೆ. ಹಿನ್ನೆಲೆಯಲ್ಲಿ ಭವ್ಯ ಸೌಧವೊಂದನ್ನು ಚಿತ್ರಿಸಿದ್ದು ಅದು ಭಾವಚಿತ್ರವನ್ನು ಆಸ್ವಾದಿಸಲು ಸ್ವಲ್ಪ ಅಡ್ಡಿಯುಂಟುಮಾಡುತ್ತಿದೆ. ಬಲಪಾರ್ಶ್ವದಲ್ಲಿ ದೀಪ, ಅದರ ಬೆಳಕಲ್ಲಿ ನಂದಿಯ ವಿಗ್ರಹವನ್ನು ತೋರ್ಪಡಿಸಲಾಗಿದೆ. ಹಸ್ತಪ್ರತಿಗಳನ್ನು ಇಟ್ಟಿರುವಂತಹ ವಿನ್ಯಾಸಯುಕ್ತ ಮಣೆ, ಮಜ್ಜನ ಬುಟ್ಟಿ, ಹೂದಾನಿಗಳೆಲ್ಲವೂ ಆಕರ್ಷಕವಾಗಿ ಮೂಡಿವೆ. ಸದೃಢ ದೈಹಿಕರಚನೆಯನ್ನು ಹೊಂದಿದ ಬಸವಣ್ಣನವರಲ್ಲಿ ಭಾವಸ್ಫುರಣೆ ಇದೆ.

ಇಷ್ಟಲಿಂಗ ಪೂಜೆಯಲ್ಲಿ ನಿರತರಾದ ಪೂರ್ಣ ಭಾವಚಿತ್ರ–೨

ಬಸವಣ್ಣನವರು ಪ್ರಸ್ತುತ ಚಿತ್ರದಲ್ಲಿ ಇಷ್ಟಲಿಂಗ ಪೂಜೆಯಲ್ಲಿ ತಾದಾತ್ಮ್ಯದಿಂದ ತೊಡಗಿರುವ ದೃಶ್ಯವನ್ನು ಕಾಣುತ್ತೇವೆ. ಬಿಳಿ ಮತ್ತು ಕೆಂಪು ಮಿಶ್ರಿತ ದೇಹವರ್ಣವನ್ನು ಹೊಂದಿದ ಬಸವಣ್ಣನವರು ಕೊರಳಲ್ಲಿ, ಕೈ, ಮಣಿಕಟ್ಟುಗಳಲ್ಲಿ ರುದ್ರಾಕ್ಷಿ, ಹಣೆಗೆ ವಿಭೂತಿ ಧಾರಣೆಯೊಂದಿಗೆ ಕಂಗೊಳಿಸುತ್ತಿದ್ದಾರೆ. ಬಿಳಿಬಣ್ಣದ ಪಂಚೆ ಮತ್ತು ಮೇಲುಹೊದಿಕೆಯು ಕೆಂಪು ಮತ್ತು ಹಳದಿ ಬಣ್ಣದ ಅಂಚನ್ನು ಹೊಂದಿದೆ. ಅರೆ ಪದ್ಮಾಸನದಲ್ಲಿ ಕುಳಿತ ಬಸವಣ್ಣನವರ ಎಡಗೈಯಲ್ಲಿ ಇಷ್ಟಲಿಂಗವಿದ್ದು ಅದಕ್ಕೆ ಅವರು ತಮ್ಮ ಬಲಗೈಯಿಂದ ಕರ್ಪೂರದಾರತಿಯನ್ನು ಬೆಳಗುತ್ತಿರುವಂತೆ, ಚಲನೆಯನ್ನು ಗುರುತಿಸಬಹುದಾಗಿದೆ. ಅರೆನಿಮೀಲಿತ ಕಣ್ಣುಗಳು, ಎದ್ದುಕಾಣುವ ದುಂಡಾಗಿರುವ ಹುಬ್ಬುಗಳು, ನೀಳವಾದ ನಾಸಿಕ, ಅದರ ಕೆಳಗೆ ಕಿರುಮೀಸೆ, ಪ್ರಮಾಣಬದ್ಧವಾದ ತುಟಿಗಳಲ್ಲಿ ಮಿಂಚುವ ಮಂದ ಪ್ರಕಾಶ, ತಲೆಯ ಸುತ್ತ ಬಿಳಿ ಮತ್ತು ಕಂದುಮಿಶ್ರಿತ ಪ್ರಭಾವಳಿಯು ಕಲಾವಿದನ ಶ್ರಮವನ್ನು ಸಾರ್ಥಕಗೊಳಿಸಿವೆ. ಅಂತೆಯೇ ಅವರ ಮುಂದೆ ಒಂದು ಚಿಕ್ಕ ಮಣೆಯ ಮೇಲೆ ಪೂಜಾಸಾಮಗ್ರಿಗಳಾದ ಕಿರುಘಂಟೆ, ವಿಭೂತಿ, ಅಗ್ಘವಣಿ, ಚೊಂಬು, ಊದುಬತ್ತಿಯನ್ನಿಡುವ ಸಾಧನಗಳು ಅತ್ಯಂತ ಸ್ಪಷ್ಟವಾಗಿ ಚಿತ್ರಿತಗೊಂಡಿವೆ. ಬಸವಣ್ಣನವರ ಪಕ್ಕದಲ್ಲಿ ಎತ್ತರವಾದ ದೀಪವೊಂದಿದ್ದು ಅದು ಹೆಚ್ಚು ಪ್ರಕಾಶವನ್ನು ಬೀರದೆ ಕುಡಿಜ್ಯೋತಿಯಂತೆ

ರಾರಾಜಿಸುತ್ತಿದೆ. ಬಸವಣ್ಣನವರ ಹಿಂಬದಿಯಲ್ಲಿ ಕೂಡಲಸಂಗಮದ ಐಕ್ಯಮಂಟಪದ ಚಿತ್ರವು ರೂಪುಗೊಂಡಿದೆ. ನದಿಯ ನೀರಿನಿಂದ ಆವೃತವಾದ ಮಂಟಪದ ಪಕ್ಕದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ನದಿಯ ನೀರಿನ ದಂಡೆಯಲ್ಲಿ ಕೂಡಲಸಂಗಮೇಶ್ವರನ ದೇವಾಲಯವೊಂದು ಕಾಣುತ್ತಲಿದೆ. ಒಟ್ಟಾರೆ ಚಿತ್ರವು ಕಪ್ಪು ಬಣ್ಣದ ಶಿವಲಿಂಗದ ಒಳಗೆ ಬಸವಣ್ಣನವರು ಕುಳಿತಿರುವಂತೆಯೂ ಅವರ ಪಕ್ಕದಲ್ಲಿ ಐಕ್ಯಮಂಟಪ ಮತ್ತು ಕೂಡಲಸಂಗಮ ದೇವಸ್ಥಾನವನ್ನು ಒಳಗೊಂಡಿರುವಂತೆ ರಚಿಸಲಾಗಿದೆ. ಇಲ್ಲಿ ಕಲಾವಿದ ಬಸವಣ್ಣ, ಕೂಡಲಸಂಗಮ, ಐಕ್ಯಮಂಟಪ, ನದಿ ಇವೆಲ್ಲವುಗಳನ್ನು ಒಂದೇ ಅವಕಾಶದಲ್ಲಿ ತರುವ ಪ್ರಯತ್ನವನ್ನು ಮಾಡಿ, ಅದರಲ್ಲಿ ಯಶಸ್ವಿಯಾಗಿರುವುದನ್ನು ಕಾಣುತ್ತೇವೆ.

ಇಷ್ಟಲಿಂಗ ಪೂಜೆಯಲ್ಲಿ ನಿರತರಾದ ಪೂರ್ಣ ಭಾವಚಿತ್ರ–೩

ಕಲಾವಿದ ರಾಮಚಂದ್ರ ಇಲಕಲ್ಲ ಅವರು ಈ ಕಲಾಕೃತಿಯನ್ನು ತೈಲವರ್ಣದಲ್ಲಿ ರಚಿಸಿದ್ದಾರೆ. ಪ್ರಸ್ತುತ ಈ ಕಲಾಕೃತಿಯು ಬಳಗಾನೂರ ಚಿಕ್ಕೆನಕೊಪ್ಪ ಶರಣರ ಮಠದಲ್ಲಿ ಸಂಗ್ರಹಗೊಂಡಿದೆ. ಸಾಂಪ್ರದಾಯಿಕ ಶೈಲಿಯಲ್ಲಿ ಚಿತ್ರತಗೊಂಡಿರುವ ಈ ಕಲಾಕೃತಿಯು ೨೪"x೩೬" ಅಳತೆಯಲ್ಲಿ ರಚನೆಯಾಗಿದೆ. ಯೌವನಾವಸ್ಥೆಯ ಬಸವಣ್ಣನವರು ಕುಳಿತು ಭಂಗಿಯಲ್ಲಿ ಇಷ್ಟಲಿಂಗ ಪೂಜೆಯನ್ನು ಮಾಡುತ್ತಿರುವಂತೆ ಇಲ್ಲಿ ಚಿತ್ರಣಗೊಂಡಿದೆ. ಪೂಜೆಗೆ ಸಂಬಂಧಿಸಿದಂತ ಸಾಮಾಗ್ರಿಗಳು ಅವರ ಸುತ್ತಲಿದ್ದು, ಎಡಗೈಲ್ಲಿ ಇಷ್ಟಲಿಂಗ, ಬಲಗೈಯಲ್ಲಿ ಹೂವನ್ನು ಹಿಡಿದು ಇಷ್ಟಲಿಂಗಕ್ಕೆ ಸಮರ್ಪಿಸುವಂತೆ ಭಾಸವಾಗುತ್ತದೆ. ಕಲಾವಿದ ಇಲ್ಲಿ ಬಸವಣ್ಣನವರ ಮುಖಭಾವವನ್ನು ಅತ್ಯಂತ ನೈಜ ರೀತಿಯಲ್ಲಿ ಚಿತ್ರಿಸಿದ್ದು, ಹಣೆಯಲ್ಲಿ ವಿಭೂತಿ, ಕೊರಳಲ್ಲಿ ಲಿಂಗ ಮತ್ತು ಕೈಗಳಲ್ಲಿ ರುದ್ರಾಕ್ಷಿ ಸರಗಳು, ಕೆಂಪು ವರ್ಣದ ಶಾಲನ್ನು ಮೇಲೊದಿಸಿ, ಕೆಂಪು ವರ್ಣ ಅಂಚೆ ಹೊಂದಿದ ಬಿಳಿವರ್ಣದ ಪಂಜೆಯನ್ನು ಧರಿಸಿದ್ದಾರೆ. ಭಕ್ತಿಪೂರ್ವ ಪೂಜೆಯಲ್ಲಿರುವಂತೆ ಈ ಚಿತ್ರ ರೂಪುಗೊಂಡಿದೆ. ಈ ಕಲಾಕೃತಿಯ ವಿಶೇಷತೆಯೆಂದರೆ ಕೂದಲು ಇಲ್ಲದ ತಲೆಗೆ ಮುತ್ತಿನ ಪಟ್ಟಿಯನ್ನು ಧರಿಸಿದ್ದು, ಶರೀರದಲ್ಲಿ ಆಭರಣಗಳಿಲ್ಲದಿದ್ದರೂ ವಿಭೂತಿ ಮತ್ತು ರುದಾಕ್ಷಿ ಸರಗಳನ್ನು ಕಲಾತ್ಮಕವಾಗಿ ಸಂಯೋಜಿಸಿ ಆಕರ್ಷಪೂರ್ಣ ಕೃತಿಯನ್ನಾಗಿ ರಚಿಸಲಾಗಿದೆ.

೫.೧.೩. ವಚನರಚನೆಯಲ್ಲಿ ನಿರತರಾದ ಬಸವಣ್ಣನವರ ಪೂರ್ಣ ಭಾವಚಿತ್ರ–೧

ಕಲಾತಪಸ್ವಿ ಎಂ.ಎ.ಚೆಟ್ಟಿಯವರು ಈ ಕಲಾಕೃತಿಯನ್ನು ತೈಲವರ್ಣದಲ್ಲಿ ರಚಿಸಿರುತ್ತಾರೆ. ದಿನದರ್ಶಿಕೆಯಾಗಿ ಮುದ್ರಣಗೊಂಡಿರುವ ಈ ಕಲಾಕೃತಿಯು ಅಡವಿ ಸೋಮಾಪುರದ ಒಂದು ಚಿಕ್ಕ ಕಿರಾಣಿ ಅಂಗಡಿಯಲ್ಲಿ ಅಭ್ಯವಾಗಿದೆ. ಈ ಕಲಾಕೃತಿಯಲ್ಲಿ ಬಸವಣ್ಣನವರು ವಚನವನ್ನು ರಚಿಸುತ್ತಿರುವ ಚಿತ್ರಣವಿದ್ದು ಹೆಚ್ಚು ಹಳದಿ ವಣ್ಣವನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಕೃತಿಯಲ್ಲಿ ಬಸವಣ್ಣನವರು ಶಾಂತಮುಖ ಭಾವವಿರುವಂತೆ ಕಂಡುಬಂದಿದ್ದು ಹಣೆಯಲ್ಲಿ ವಿಭೂತಿ ಕೊರಳಲ್ಲಿ ಇಷ್ಟಲಿಂಗ ರುದ್ರಾಕ್ಷಿ ಸರ ಬಹುಶಃ ಬಿಳಿವರ್ಣದ ಶಾಲನ್ನು ಬುಜದ ಮೇಲೆ ಹೊದಿಸಿರುವಂತಿದೆ. ಬಲಗೈಯಲ್ಲಿ ಕುಂಚ ಎಡಗೈಯಲ್ಲಿ ತಾಳೆಗರಿ ಎದುರಿಗೆ ವಚನದ ಹಸ್ತಪ್ರತಿಯನ್ನು ಕೆಂಪು ವಸ್ತ್ರದಿಂದ ಮಣಿಯ ಮೇಲೆ

ಬಿಚ್ಚಿಡಲಾಗಿದೆ. ಮಂಟಪದಲ್ಲಿ ಕುಳಿತ ಭಂಗಿಯಲ್ಲಿರುವ ಬಸವಣ್ಣನವರ ಹಿಂಬದಿಯಲ್ಲಿ ಹಸಿರು ಮತ್ತು ಹಳದಿ ವರ್ಣ ಮಿಶ್ರಿತ ಪ್ರಭಾವಳಿಯಿದ್ದು ಒಟ್ಟು ಆಕೃತಿಗೆ ಯಾವುದೇ ಧಕ್ಕೆತಾರದೆ ಶಾಂತವರ್ಣಗಳನ್ನು ಬಳಸಿ ಚಿತ್ರರಚಿಸಿರುವುದು ಈ ಕೃತಿಯ ವಿಶೇಷತೆ ಎನ್ನಬಹುದು. ಈ ಕೃತಿಯಲ್ಲಿ ತಥಾದರ್ಶನಕ್ಕೆ ಹೆಚ್ಚು ಒತ್ತು ನೀಡಿರುವುದು ಗಮನಿಸಬಹುದಾಗಿದೆ.

ವಚನರಚನೆಯಲ್ಲಿ ನಿರತರಾದ ಬಸವಣ್ಣನವರ ಪೂರ್ಣ ಭಾವಚಿತ್ರ–೨

ಬಸವಣ್ಣನವರನ್ನು ಪ್ರಸ್ತುತ ಚಿತ್ರದಲ್ಲಿ ವಚನರಚನೆಯ ಚಿಂತನೆಯಲ್ಲಿ ತೊಡಗಿರುವಂತೆ ಕಲಾವಿದ ವಿ. ಟಿ. ಕಾಳೆಯವರು ಚಿತ್ರಿಸಿದ್ದಾರೆ. ಅರೆಪದ್ಮಾಸನದಲ್ಲಿ ಕುಳಿತ ಬಸವಣ್ಣನವರು ನಿತ್ಯದಂತೆ ಕೊರಳಲ್ಲಿ ರುದ್ರಾಕ್ಷಿ ಮಾಲೆ, ಇಷ್ಟಲಿಂಗ, ತೋಳು, ಮಣಿಕಟ್ಟುಗಳಲ್ಲಿ ರುದ್ರಾಕ್ಷಿಯ ಚಿಕ್ಕ ಸರಗಳನ್ನು ಧರಿಸಿದ್ದಾರೆ. ಹಣೆಯಲ್ಲಿ, ಭ್ರೂಮಧ್ಯದಲ್ಲಿ, ತೋಳು ಮತ್ತು ಕೈಗಳಲ್ಲಿ ವಿಭೂತಿ ಧಾರಣೆ ಮಾಡಿದ್ದಾರೆ. ಎಡಗೈಯಲ್ಲಿ ಅರ್ಧ ಬರೆದ ಹಸ್ತಪ್ರತಿಯೊಂದನ್ನು ಹಿಡಿದು, ಬಲಗೈಯಲ್ಲಿ ಲೇಖನಿಯನ್ನು ಹಿಡಿದುಕೊಂಡಿದ್ದಾರೆ. ಅವರ ಬಲಬದಿಯ ಪಕ್ಕದಲ್ಲಿ ಮಸಿಕುಡಿಕೆಯನ್ನು ಕಾಣಬಹುದು. ತಿಳಿನೀಲಿಬಣ್ಣದ ಹಾಸುಗೆಯ ಮೇಲೆ ಕುಳಿತ ಬಸವಣ್ಣನವರ ಹಿಂಬದಿಯಲ್ಲಿನ ಗುಹೆಯೊಂದರಲ್ಲಿ ಹಂತಹಂತವಾಗಿ ಹರಿದುಬರುತ್ತಿರುವ ಝರಿಯೊಂದು ಕಾಣಸಿಗುತ್ತದೆ. ಅವರ ತಲೆಯ ಹಿಂದೆ ಹಳದಿ, ಕೆಂಪು ಬಣ್ಣ ಮಿಶ್ರಿತ ಪ್ರಕಾಶಮಾನವಾದ ಬೆಳಕನ್ನು ರಚಿಸಲಾಗಿದೆ.

ಬಸವಣ್ಣನವರು ಈ ಚಿತ್ರದಲ್ಲಿ ಯಾವುದೋ ವಚನರಚನೆಯ ಗಾಢ ಚಿಂತನೆಯಲ್ಲಿ ಮುಳುಗಿರುವಂತೆ ಇಲ್ಲವೆ ಚಿಂತನೆಯ ಧ್ಯಾನಾಸಕ್ತ ಭಂಗಿಯಲ್ಲಿ ಕುಳಿತಿರುವಂತೆ ಭಾಸವಾಗುತ್ತದೆ. ಕುಳಿತಿರುವ ಭಂಗಿ, ಅವಯವಗಳ ಪ್ರಮಾಣಬದ್ಧತೆ ಅಚ್ಚುಕಟ್ಟಾಗಿ ಮೂಡಿಬಂದಿವೆ. ಉಟ್ಟಿರುವ ಪಂಚೆ, ಹೊದ್ದುಕೊಂಡಿರುವ ಅಂಗವಸ್ತ್ರಗಳ ನಿರಿಗೆಗಳು ಸಹಜವಾಗಿ ಒಡಮೂಡಿದ್ದು ಇಡಿಯಾಗಿ ಬಸವಣ್ಣನವರ ಆಕೃತಿಯು ನೋಡುವವನ ಕಣ್ಣಿಗೆ ತುಂಬಾ ಆಪ್ತವೆನಿಸಲು ಇಲ್ಲಿ ಅಚ್ಚುಕಟ್ಟಾಗಿ ನಿರ್ವಹಿಸಿರುವ ವರ್ಣ ಸಂಯೋಜನೆ. ತುಂಬ ಮೃದುವಾದ ವರ್ಣಯೋಜನೆಯ ಸಾಂಗತ್ಯವನ್ನು ಆಕೃತಿಯಲ್ಲಿ ಕಾಣಬಹುದಾಗಿದ್ದು, ಈ ನಿಟ್ಟಿನಲ್ಲಿ ಕಲಾವಿದರ ಶ್ರಮ ಸಾರ್ಥಕ.

ವಚನರಚನೆಯಲ್ಲಿ ನಿರತರಾದ ಬಸವಣ್ಣನವರ ಪೂರ್ಣ ಭಾವಚಿತ್ರ–೩

“ಬಿಜ್ಜಳನ ಆಸ್ಥಾನದಿಂದ ಸಕಲ ರಾಜಭೋಗದಿಂದ ಪರಿತ್ಯಕ್ತಗೊಂಡ ಬಸವಣ್ಣ ತ್ರಿವೇಣಿ ಸಂಗಮದ ಹಿನ್ನೆಲೆಯ ಅನುಭವ ಮಂಟಪದಲ್ಲಿ ತಾಳೆಗರಿಗಳ ಮೇಲೆ ವಚನಗಳನ್ನು ಬರೆಯುತ್ತಿರುವ ದೃಶ್ಯವನ್ನು ಹೊಂದಿರುವ ಒಂದು ಸಂಯೋಜನೆ. ಕಲಾವಿದ ವಿ. ಬಿ. ಹಿರೇಗೌಡರವರ ಈ ಕಲಾಕೃತಿಯೂ ಫೋಟೋ ರಿಯಲಿಸಂ ನೆಲೆಯಲ್ಲಿ, ಆದರೆ ಸೃಜನಾತ್ಮಕವಾದ ರಚನೆ. ಹಿನ್ನೆಲೆಯಲ್ಲಿ ತ್ರಿವೇಣಿ ಸಂಗಮವನ್ನು ಬಿಂಬಿಸುವಂಥ ನೀರಿನಿಂದ ಆವೃತವಾದ ಸುಂದರ ಪ್ರಕೃತಿ, ಮುನ್ನೆಲೆಯಲ್ಲಿ ಬಸವಣ್ಣನ ಪ್ರಚಲಿತ ಚಿತ್ರಕ್ಕಿಂತ ವಿಭಿನ್ನವಾಗಿ ಚಿತ್ರಿಸಿರುವ ಆಕೃತಿಯಲ್ಲಿ ಶರಣ ಸಂಸ್ಕೃತಿಯ ಭಾವವನ್ನು ಪ್ರಕಟಿಸಿದ್ದಾರೆ. ಅದಕ್ಕೆ ಪೂರಕವಾದ ವರ್ಣಗಳ ನಿರ್ವಹಣೆಯಿಂದ ಉತ್ತಮ ಸಂಯೋಜನಾ ಕ್ರಮವನ್ನು ಅನುಸರಿಸಿದ ಹಿರೇಗೌಡರು

ಬಸವಣ್ಣನವರ ವಸ್ತ್ರ ವಿನ್ಯಾಸಗಳನ್ನು ನೈಜ ನೆಲೆಯಲ್ಲಿ ವೈಭವೀಕರಿಸಿದ್ದಾರೆ. ಕೈಯಲ್ಲಿ ಲೇಖನಿ, ತಾಳೆಗರಿಗಳ ರಚನೆಯನ್ನು ಶುಭ್ರ ವರ್ಣಗಳ ಸಾಂಗತ್ಯದಿಂದ ನೈಜ ರಚನಾ ತಂತ್ರಗಾರಿಕೆಯ ಆಧಾರಗ ಮೇಲೆ ಆಕೃತಿಗೆ ಜೀವ ಕಳೆ ತುಂಬುವ ಪ್ರಯತ್ನವನ್ನು ಮಾಡಿದ್ದಾರೆ."[೧]

೫.೧.೪. ಪೀಠದಲ್ಲಿ ಕುಳಿತ ಬಸವಣ್ಣನವರು-೧

ಪ್ರಸ್ತುತ ಚಿತ್ರದಲ್ಲಿ ಬಸವಣ್ಣನವರನ್ನು ಸಿಂಹಾಸನದ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. ಬಂಗಾರವರ್ಣದ ಜರಿಯ ಅಂಚುಗಳೊಂದಿಗೆ ಕೂಡಿರುವ ಬಿಳಿಯ ಬಣ್ಣದ ನಿಲುವಂಗಿ, ಬಿಳಿಯ ಬಣ್ಣದ ಪಂಚೆ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಅದರೊಟ್ಟಿಗೆ ಮುತ್ತಿನ ಹಾರ ಮತ್ತು ಅದಕ್ಕೆ ಹೊಂದಿಕೊಂಡ ಪದಕ, ಇಷ್ಟಲಿಂಗ ಸಹಿತವಾದ ಕಾವಿಬಣ್ಣದ ವಸ್ತ್ರದ ಗಂಟನ್ನು ಧರಿಸಿದ ಬಸವಣ್ಣನವರ ಕಲಾಕೃತಿಯನ್ನು ಇಲ್ಲಿ ರಚಿಸಲಾಗಿದೆ. ತಲೆಯಲ್ಲಿ ಮುತ್ತು ರತ್ನಗಳಿಂದ ಅಲಂಕೃತವಾದ ಬಂಗಾರದ ಕಿರೀಟಧಾರಣೆಯು ಮನಮೋಹಕವಾಗಿದೆ. ಕೆಂಪುಬಣ್ಣದ ಸಿಂಹಾಸನದ ಮೇಲೆ ಕುಳಿತಿರುವ ಬಸವಣ್ಣನವರ ವ್ಯಕ್ತಿತ್ವಕ್ಕೆ ಮೆರುಗು ಬರುವಂತೆ ಸಿಂಹಾಸನವು ಹಳದಿಬಣ್ಣದ ಹೊಳೆಯುವ ಅಂಚುಗಳೊಂದಿಗೆ ಅಲಂಕೃತಗೊಂಡಿದೆ.

ತಮ್ಮ ಬಲಗಾಲನ್ನು ಪಾದಪೀಠದ ಮೇಲಿಟ್ಟು ಠೀವಿಯಿಂದ ಕುಳಿತ ಬಸವಣ್ಣನವರಲ್ಲಿ ಮಂತ್ರಿಪದವಿಯ ಅಧಿಕಾರದ ದರ್ಪವನ್ನು ಕಾಣಲು ಸಾಧ್ಯವಾಗುವುದಿಲ್ಲ. ಬದಲಾಗಿ ಮಾನವೀಯತೆಯೇ ಮೂರ್ತಿವೆತ್ತ ಕರುಣಾಪೂರಿತ ಕೃಪಾಕಟಾಕ್ಷವನ್ನು ಹೊಂದಿರುವಂತೆ ಕಣ್ಣಿನ ನೋಟವನ್ನು ಬಿಂಬಿಸಲಾಗಿದೆ. ಅವರ ಬಲಬದಿಯ ಪಕ್ಕದಲ್ಲಿ ಪುಟ್ಟದೊಂದು ಪೀಠದ ಮೇಲೆ ಹಸ್ತಪ್ರತಿಗಳ ಕಟ್ಟುಗಳನ್ನು ಇಡಲಾಗಿದೆ. ಬಸವಣ್ಣನವರು ಸಿಂಹಾಸನದ ಮೇಲೆ ನೇರವಾಗಿ ಕುಳಿತಿದ್ದರೂ ಕಲಾವಿದ ಅವರನ್ನು ಓರೆನೋಟದ ಭಂಗಿಯಲ್ಲಿ ಸೆರೆಹಿಡಿದಿರುವಂತೆ ತೋರುತ್ತದೆ. ಅವರ ಹಿಂದಿನ ಮತ್ತು ಪಕ್ಕದ ಗೋಡೆಗಳಿಗೆ ಗಾಢವಾದ ಹಸಿರುಬಣ್ಣವನ್ನು ಬಳಸಲಾಗಿದ್ದು, ಅದರಲ್ಲಿ ಕೂಡಲಸಂಗಮದ ಐಕ್ಯಮಂಟಪ ಮತ್ತು ಕೂಡಲಸಂಗಮೇಶನ ದೇವಸ್ಥಾನವನ್ನು ಚಿತ್ರಿಸಿ ಅದಕ್ಕೆ ಕಟ್ಟುಗಳನ್ನು ಹಾಕಿ ತೂಗುಹಾಕಲಾಗಿದೆ. ಎಂತಹ ಅಧಿಕಾರದಲ್ಲಿದ್ದರೂ ಬಸವಣ್ಣನವರು ವಚನಗಳ ತಾಳೆ ಹಸ್ತಪ್ರತಿಗಳ ಕಟ್ಟುಗಳನ್ನು ಮರೆಯುವುದಿಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಈ ಚಿತ್ರದಲ್ಲಿ ಎಡಗೈಯಲ್ಲಿ ಹಸ್ತಪ್ರತಿಯ ಕಟ್ಟನ್ನು ಹಿಡಿದಿರುವುದು ಕಂಡುಬರುತ್ತದೆ. ಅದಲ್ಲದೇ ಈ ಚಿತ್ರದಲ್ಲಿ ನೆರಳು ಬೆಳಕಿನ ಯೋಜನೆ ಇಲ್ಲ. ಅದರ ಬದಲು ಚಪ್ಪಟೆಯಾದ ವರ್ಣಲೇಪನ, ಅದೂ ಅವಾಸ್ತವ ಬಗೆಯಲ್ಲಿ ಹಳದಿವರ್ಣವನ್ನು ಇಲ್ಲಿ ದುಡಿಸಿಕೊಂಡಿರುವುದರ ಹಿಂದೆ ಶ್ರೀಸಾಮಾನ್ಯರನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಹೀಗಾಗಿ ಇಂದು ಬಹುತೇಕ ಬಸವ ಅನುಯಾಯಿಗಳ ಮನೆಯಲ್ಲಿ ಈ ಚಿತ್ರ ಲಭ್ಯವಿದೆ.

ಪೀಠದಲ್ಲಿ ಕುಳಿತ ಬಸವಣ್ಣನವರು-೨

ಈ ಚಿತ್ರದಲ್ಲಿ ಬಸವಣ್ಣನವರು ಸಿಂಹಾಸನದ ಮೇಲೆ ಠೀವಿಯಿಂದ ಕುಳಿತಿರುವಂತೆ ಕಲಾವಿದ

---

೦೧. ಡಾ. ರವೀಂದ್ರ ಎಸ್. ಕಮ್ಮಾರ : ಚಿತ್ರಕಲಾವಿದ ವಿ.ಬಿ. ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ. ಹಂಪಿ.) ಪು-೧೨೦

ಚಿತ್ರಿಸಿದ್ದಾನೆ. ಅಗಲವಾದ ಹಳದಿ ಜರತಾರಿ ಜರಿಯಿಂದ ಕೂಡಿದ ನಿಲುವಂಗಿ, ಮತ್ತು ಪಾಯಿಜಾಮ್‌ಗಳನ್ನು ಧರಿಸಿದ ಬಸವಣ್ಣನವರ ಎಡಗೈಯ ಮೇಲೆ ಬಂಗಾರವರ್ಣದ ಸೆರಗನ್ನು ಹೊಂದಿರುವ ದಟ್ಟ ಹಸಿರುಬಣ್ಣದ ಮೇಲುಹೊದಿಕೆ ಇಳಿಯಬಿದ್ದಿರುವುದನ್ನು ಕಾಣುತ್ತೇವೆ. ಅಂತೆಯೇ ಎಡಗೈಯಲ್ಲಿ ಒರೆಸಮೇತವಾಗಿರುವ ಕತ್ತಿ ಚಿತ್ರದ ಪ್ರಮುಖ ಆಕರ್ಷಣೆಯಾಗಿದೆ. ಕೊರಳಲ್ಲಿ ಮೂರು ಎಳೆಯ ಮುತ್ತಿನ ಹಾರ, ಮತ್ತು ಇಷ್ಟಲಿಂಗದ ಗಂಟಿನ ಧಾರಣೆಯಿದೆ. ಕೊರಳಲ್ಲಿ ಮತ್ತು ಕಿವಿಯಲ್ಲಿ ರುದ್ರಾಕ್ಷಿ ಮಾಲೆಯಿಲ್ಲದಿರುವುದನ್ನು ಗಮನಿಸಬಹುದು.

ಹರವಾದ ಮೈಕಟ್ಟು, ಅದಕ್ಕೆ ತಕ್ಕ ಪ್ರಮಾಣದಲ್ಲಿ ತಲೆ, ಕೊರಳಿನ ಚಿತ್ರಣವಿದೆ. ಮುಖವನ್ನು ಇನ್ನಷ್ಟು ಚೆಲುವಾಗಿಸಬಹುದಿತ್ತು. ಕಣ್ಣಿನ ಹುಬ್ಬುಗಳು ಹೆಚ್ಚು ಬಾಗದೆ ಮಧ್ಯಮ ಪ್ರಮಾಣದಲ್ಲಿವೆ. ಕಣ್ಣುಗಳು ಕಿರಿದಾಗಿದ್ದರೂ ದೃಷ್ಟಿ ಚೂಪಾಗಿರುವುದನ್ನು ಗಮನಿಸಬಹುದು. ನೀಳವಾದ ನಾಸಿಕ ಏನನ್ನೋ ಯೋಚಿಸುವ ಇಲ್ಲವೆ ಚಿಂತಿಸುವ ಭಂಗಿಯಲ್ಲಿ ಬಸವಣ್ಣನವರನ್ನು ಈ ಚಿತ್ರದಲ್ಲಿ ಕಾಣುತ್ತೇವೆ. ಉಳಿದ ಚಿತ್ರಗಳಲ್ಲಿ ತುಟಿಗಳಲ್ಲಿ ಮಂದಹಾಸ ಕಂಡುಬಂದರೆ ಇಲ್ಲಿ ಸಪ್ಪೆಯಾಗಿರುವಂತೆ ತೋರುತ್ತದೆ. ತಲೆಯ ಮೇಲಿನ ಬಂಗಾರದ ಕಿರೀಟವು ಹಸಿರು ಮಣಿಗಳಿಂದ ಅಲಂಕೃತವಾಗಿದೆ. ಕಿರೀಟದ ಮೇಲಿನ ಚಿಕ್ಕ ಶಿಖರವು ಪ್ರಕಾಶ ಬೀರುತ್ತಿರುವುದನ್ನು ಗಮನಿಸಬಹುದು. ಅಂತೆಯೇ ಸಿಂಹಾಸನವು ಹಸಿರುಬಣ್ಣವನ್ನು ಹೊಂದಿದ್ದು ಅದಕ್ಕೆ ಹೊಂದಿಕೊಂಡ ಗೋಡೆಯೂ ದಟ್ಟವಾದ ಹಸಿರು ಬಣ್ಣವನ್ನು ಹೊಂದಿರುವುದು ಗೋಚರಿಸುತ್ತದೆ. ಇಲ್ಲಿ ಹಸ್ತಪ್ರತಿಯ ಗಂಟುಗಳು ಕಂಡುಬರುವುದಿಲ್ಲ. ಬಸವಣ್ಣನು ಕುಳಿತ ಭಂಗಿ ಮತ್ತು ಅವನು ಕುಳಿತ ಸಿಂಹಾಸನದ ಪ್ರಮಾಣಬದ್ಧತೆ ಮತ್ತು ಯಥಾದರ್ಶನ ನಿಯಮದಿಂದ ದೂರವಾಗಿವೆ.

ಪೀಠದಲ್ಲಿ ಕುಳಿತ ಬಸವಣ್ಣನವರು–೩

ಬಹುಕಾಲದಿಂದ ಜನಮಾನಸದಲ್ಲಿ ಉಳಿದಿರುವ, ಬಸವಣ್ಣನವರು ಎಂದರೆ ಇವರು ಮಾತ್ರ ಎನ್ನುವಷ್ಟರ ಮಟ್ಟಿಗೆ ಈ ಭಾವಚಿತ್ರವು ಜನಪ್ರಿಯವಾಗಿದೆ. ಬಹುತೇಕ ಕಲಾವಿದರಿಗೆ ಮೂಲ ಆಕರ ಸಾಮಗ್ರಿಯಂತಾಗಿರುವ ಈ ಚಿತ್ರ 'ರೆಫೆರೆನ್ಸ್' ಕಲಾಕೃತಿ. ಹಲವಾರು ಬಾರಿ ಮುದ್ರಣಗೊಂಡಿರುವ ಈ ಚಿತ್ರದ ಮೂಲ ಕಲಾಕೃತಿ ಹೇಗಿದ್ದೀತು ? ಎಂಬ ಪ್ರಶ್ನೆ ನಮ್ಮಲ್ಲಿ ಮೂಡುವುದು ಸಹಜ. ಬಂಗಾರದ ಬಣ್ಣದ ಸಿಂಹಾಸನದ ಮೇಲೆ ಆಸೀನರಾಗಿರುವ ಬಸವಣ್ಣನವರ ಈ ಚಿತ್ರವು ಗಂಭೀರ ಮುಖಭಾವವನ್ನೊಳ–ಗೊಂಡಿದೆ. ಕಿರುಗಾತ್ರದ ಕಡುಹಳದಿ ಬಣ್ಣದ ಅಂಚನ್ನು ಒಳಗೊಂಡ ಮುತ್ತಿನ ಬಣ್ಣಕ್ಕೆ ತೆಳುಹಳದಿ ಬಣ್ಣ ಮಿಶ್ರಿತ ರೇಶ್ಮೆ ನಿಲುವಂಗಿಯನ್ನು ಮತ್ತು ಬಿಳಿಯ ಪಂಚೆಯನ್ನು ಬಸವಣ್ಣನವರು ಧರಿಸಿದ್ದಾರೆ. ಎರಡು ಪಾದಗಳಲ್ಲಿ ಒಂದನ್ನು ಹಸಿರುಬಣ್ಣದ ಪಾದಪೀಠದ ಮೇಲೆ, ಇನ್ನೊಂದನ್ನು ನೆಲಹಾಸಿನ ಮೇಲೆ ಇಡಲಾಗಿದೆ. ಮಂತ್ರಿಯ ಸಿಂಹಾಸನದ ಪೀಠದ ಮೇಲೆ ಬಸವಣ್ಣನವರು ಕುಳಿತಿದ್ದರೂ ಅಲ್ಲಿ ಅಧಿಕಾರದ ದರ್ಪ ಕಂಡುಬರದೆ ಇಡೀ ದೇಹವನ್ನು ತುಸು ಬಾಗಿದಂತೆ ಚಿತ್ರಿಸಿರುವುದು ಕಂಡುಬರುತ್ತದೆ. ಅದು ಪದವಿ, ಪ್ರತಿಷ್ಠೆಗಳನ್ನು ಹೊರತುಪಡಿಸಿದಂತೆ ತೋರಿಸುವುದು ಪ್ರಾಯಶಃ ಕಲಾವಿದನ ಉದ್ದೇಶವಾಗಿರಬಹುದು.

ಕೊರಳಿನಲ್ಲಿ ರುದ್ರಾಕ್ಷಿಯ ಸರ, ಇಷ್ಟಲಿಂಗದ ಕಂಠಕೌಪೀನ, ಹಣೆಯಲ್ಲಿ ಢಾಳವಾಗಿ ಎದ್ದು ಕಾಣುವ ವಿಭೂತಿ, ಭ್ರೂಮಧ್ಯದಲ್ಲಿ ವಿಭೂತಿಯ ದಟ್ಟವಾದ ಬೊಟ್ಟು ಇಡೀ ಚಿತ್ರಕ್ಕೆ ಕಳೆಕಟ್ಟಿವೆ. ಕರುಣಾಮಯವಾದ ಮಾನವಪ್ರೇಮವನ್ನು ಸೂಸುವ ಕಣ್ಣಿನ ದೃಷ್ಟಿ, ನೀಳವಾದ ನಾಸಿಕ, ಅದರ ಕೆಳಗಡೆ ಇರುವ ಕಿರು ಮೀಸೆ, ತುಟಿಗಳಲ್ಲಿ ಸೌಮ್ಯಭಾವ, ಎಡಗೈಯಲ್ಲಿ ಹಸ್ತಪ್ರತಿಯ ಕಟ್ಟು, –ಇವು ಬಸವಣ್ಣನವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿವೆ. ಸಿಂಹಾಸನದ ಎಡಬದಿಯಲ್ಲಿ ತುಸು ಎತ್ತರವಾದ ಮಣೆಯ ಮೇಲೆ ಹಸ್ತಪ್ರತಿಗಳ ಗ್ರಂಥವನ್ನು ಇಡಲಾಗಿದ್ದು, ಬಸವಣ್ಣನವರು ಎಲ್ಲಿಯೇ ಇರಲಿ, ಈ ಗ್ರಂಥಗಳೊಂದಿಗೆ ಅವರನ್ನು ಕಲಾವಿದರು ಸಾಮಾನ್ಯವಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಸಿಂಹಾಸನವು ಬಂಗಾರದ ಬಣ್ಣದಿಂದ ಕೂಡಿದ್ದು, ಬಸವಣ್ಣನವರು ಧರಿಸಿದ ನಿಲುವಂಗಿಯ ಬಣ್ಣ ಮುತ್ತಿನ ಬಣ್ಣದೊಂದಿಗೆ ತೆಳು ಹಳದಿ ಬಣ್ಣವನ್ನು ಲೇಪಿಸಿರುವುದರಿಂದ ಸುಂದರವಾಗಿ ಕಾಣಿಸುತ್ತದೆ. ಬಸವಣ್ಣನವರ ನೇಪಥ್ಯದ ಗೋಡೆಗಳು ೧೨ನೆಯ ಶತಮಾನದ ವಾಸ್ತುಶೈಲಿಯನ್ನು ನೆನಪಿಸುತ್ತವೆ. ಒಳಾಂಗಣ ಮಂಟಪದ ಕಂಬಗಳನ್ನು ತೇಗದ ಮರದಿಂದ ನಿರ್ಮಿತವಾದಂತೆ ಕಲಾಕುಸುರಿಯಿಂದ ಚಿತ್ರಿಸಲಾಗಿದೆ. ಅರಸೊತ್ತಿಗೆಯಲ್ಲಿನ ಬಸವಣ್ಣನವರ ಸಾರ್ವಕಾಲಿಕ ದಾಖಲೆಯ, ಸಾರ್ವತ್ರಿಕ ಮನ್ನಣೆಯ ಈ ಚಿತ್ರ ಚಿರಸ್ಥಾಯಿ.

ಪೀಠದಲ್ಲಿ ಕುಳಿತ ಬಸವಣ್ಣನವರು–೪

ಮೈಸೂರು ಅರಮನೆಯ ಪ್ರಸಿದ್ಧ ಕಲಾವಿದರಾದ ಶಿಲ್ಪಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳು ರಚಿಸಿದ ನೈಜಶೈಲಿಯ ಚಿತ್ರವಿದು. ಇದೊಂದು ವಿಶಿಷ್ಟ ಅನುಭೂತಿಯನ್ನು ನೀಡುವ ಬಸವಣ್ಣನವರ ಚಿತ್ರವಾಗಿದೆ. ಇಲ್ಲಿಯ ಬಸವಣ್ಣನವರ ಮುಖಚರ್ಯೆ ಮತ್ತು ಬಳಸಲಾದ ಬಣ್ಣಗಳನ್ನು ಗಮನಿಸಿದರೆ ಇದೊಂದು ತುಂಬಾ ಪುರಾತನ ಕಲಾಕೃತಿ ಎನ್ನುವ ಭಾವನೆ ಬರುತ್ತದೆ. ಇಲ್ಲಿ ಬಸವಣ್ಣನವರು ಅತ್ಯಂತ ಸದೃಢದೇಹಿಯೂ ಮತ್ತು ಮೀಸೆರಹಿತ ಮುಖವು ಇಲ್ಲಿಯ ವಿಶೇಷವಾಗಿದೆ. ಪ್ರಸ್ತುತ ಚಿತ್ರದಲ್ಲಿ ಬಸವಣ್ಣನವರನ್ನು ಕಲಾವಿದ ವಿಜೃಂಭಣೆಯಿಂದ ಕೂಡಿರುವಂತೆ ರಚಿಸಿದ್ದಾನೆ. ಇದೊಂದು ನೈಜಚಿತ್ರಗಳ ಸಾಲಿಗೆ ಸೇರುತ್ತದೆ. ಬಸವಣ್ಣನವರ ದೇಹವರ್ಣವು ಸಹಜವಾದ ತುಸು ಕಂದುಮಿಶ್ರಿತವಾಗಿರುವುದರಿಂದ ಹಣೆಯಲ್ಲಿ, ಎದೆ, ಕೊರಳು ಮತ್ತು ಕೈಗಳಲ್ಲಿ ಧರಿಸಿರುವ ವಿಭೂತಿಯು ಸ್ಪಷ್ಟವಾಗಿ ಗೋಚರಿಸಲು ಕಾರಣವಾಗಿದೆ.

ಅಂತೆಯೇ ಕೊರಳಿನಲ್ಲಿ ಇಷ್ಟಲಿಂಗವನ್ನು ಕಟ್ಟಿಗೆಯ ಇಲ್ಲವೆ ಲೋಹದ ಚೌಕದಲ್ಲಿ ಧರಿಸಿರುವಂತೆ ಎರಡು ಎಳೆಗಳ ರುದ್ರಾಕ್ಷಿಮಾಲೆಯು ಬಂಗಾರದ ಲೋಹದ ಗಂಟೆಯನ್ನು ಹೊಂದಿರುವಂತೆ ತೋರುತ್ತದೆ. ಈವರೆಗಿನ ಬಸವಣ್ಣನವರ ಕಿರುಚಿತ್ರಗಳಲ್ಲಿ ಕೊರಳಲ್ಲಿ ಲಿಂಗಧಾರಣೆ ಮಾಡಿರುವ ದೃಶ್ಯವನ್ನು ಹೆಚ್ಚು ಕಾಣುತ್ತೇವೆ. ಆದರೆ ಇಲ್ಲಿ ಕೊರಳಲ್ಲಿ ವಜ್ರವೈಢೂರ್ಯ ಖಚಿತವಾದ ಬಂಗಾರದ ಆಭರಣವನ್ನು ಧರಿಸಿದ್ದಾರೆ. ಅದರಲ್ಲಿ ಕೆಂಪು, ಬಿಳಿ, ಹಸಿರು, ಹಳದಿ ಬಣ್ಣದ ಹರಳುಗಳನ್ನು ಬಳಸಿಕೊಳ್ಳಲಾಗಿದೆ. ಬಸವಣ್ಣನವರ ಮುಖವು ಶಾಂತ ಮುದ್ರೆಯನ್ನು ಹೊಂದಿದ್ದು, ಕಣ್ಣುಗಳು ನೇರನೋಟದೊಂದಿಗೆ ಕೂಡಿವೆ. ಮುಖದಲ್ಲಿ ಮಗುವಿನ ಮುಗ್ಧತೆ ಎದ್ದುತೋರುತ್ತದೆ. ಕಿವಿಗಳು ದೊಡ್ಡವಾಗಿದ್ದು, ಅವುಗಳಲ್ಲಿ ರತ್ನಖಚಿತವಾದ ಕುಂಡಲಗಳಿವೆ. ತಲೆಗೆ ಬಹಳ ಚೆನ್ನಾಗಿ ಅಲಂಕೃತಗೊಂಡ ನವರತ್ನಗಳನ್ನೊಳಗೊಂಡ ಕಿರೀಟ

ಆಕರ್ಷಕವಾಗಿದೆ. ಎಡಹಸ್ತದ ಪ್ರಮಾಣಕ್ಕಿಂತ ಬಲಹಸ್ತದ ಪ್ರಮಾಣ ತುಸು ಹೆಚ್ಚಾಗಿರುವಂತೆ ಕಾಣುತ್ತದೆಯಾದರೂ, ಬಲಗೈಯನ್ನು ತಮ್ಮ ತೊಡೆಯ ಮೇಲೆ ಭಾರಬಿಟ್ಟು ಇಟ್ಟುಕೊಂಡಾಗ ಸ್ವಲ್ಪ ದಪ್ಪವಾಗುವಂತೆ ತೋರುವುದು ಸಹಜ. ಅಂತಹ ಚಮತ್ಕೃತಿಯನ್ನು ಕಲಾವಿದ ಇಲ್ಲಿ ಸಾಧಿಸಿದ್ದಾನೆ. ಎರಡೂ ಮುಂಗೈಗಳಲ್ಲಿ ರುದ್ರಾಕ್ಷಿಹಾರದೊಂದಿಗೆ ಬಂಗಾರದ ಕೈಕಡಗಗಳನ್ನು, ಸೊಂಟದಲ್ಲಿ ಒಡ್ಯಾಣವೆಂದು ಹೇಳಬಹುದಾದ ಅಲಂಕೃತ ಪಟ್ಟಿ, ಬಲಗೈಯಲ್ಲಿ ಕಿರು ರುದ್ರಾಕ್ಷಿ ಮಾಲೆ, ಕಾಲಿನಲ್ಲಿ ಅಲಂಕೃತಗೊಂಡ ಕಟ್ಟಿಗೆಯ ಪಾದುಕೆಗಳು ಈ ಎಲ್ಲ ಸಂಗತಿಗಳು ಬಸವಣ್ಣನವರನ್ನು ವೈಭವಯುತವಾಗಿ ಚಿತ್ರಿಸಲು ಸಹಕಾರಿಯಾಗಿವೆ. ಅಲಂಕೃತಗೊಂಡ ಸಿಂಹಾಸನ, ಅದರ ಹಿಂದೆ ಬಳಸಿದ ಕಡುಹಸಿರು ಬಣ್ಣದ ಭಿತ್ತಿ ಚಿತ್ರದ ಕಳೆಯನ್ನು ಹೆಚ್ಚಿಸಿದೆ. ಅಂತೆಯೇ ಬಂಗಾರದ ಅಂಚಿನೊಂದಿಗಿರುವ ರೇಷ್ಮೆಬಣ್ಣದ ಪಂಚೆ, ದಟ್ಟ ಹಸಿರುಬಣ್ಣದಿಂದ ಕೂಡಿದ ಮೇಲುಹೊದಿಕೆ ಗಮನಸೆಳೆಯುತ್ತವೆ. ಒಟ್ಟು ಚಿತ್ರವನ್ನು ಗಮನಿಸಿದಾಗ ಬಸವಣ್ಣನವರು ದೃಢಶರೀರ ಹೊಂದಿದ ಭಂಡಾರದ ಮಂತ್ರಿ ಎಂಬ ಭಾವನೆ ಹೊರಡುತ್ತದೆ.

ಇತರ ಚಿತ್ರಗಳಿಗಿಂತ ಈ ಚಿತ್ರದಲ್ಲಿ ಬಸವಣ್ಣನವರು ವಿಭಿನ್ನವಾದ ಗುಣಲಕ್ಷಣಗಳನ್ನು ಹೊಂದಿದ್ದಾರೆ. ಬಸವಣ್ಣನವರ ಮೂಲಭಾವಚಹರೆ (ಫೇಸ್ ಕ್ಯಾರೆಕ್ಟರ್) ಇದುವರೆಗೂ ಯಾರಿಗೂ ಲಭ್ಯವಾಗಿಲ್ಲ. ವಚನಗಳ, ಪುರಾಣಗಳ, ಕಾವ್ಯಗಳ ಆಧಾರದ ಮೇಲೆ ಬಸವಣ್ಣನವರನ್ನು ಕಲಾವಿದರು ಊಹಿಸಿಕೊಂಡು ಚಿತ್ರಿಸಿರುವುದೇ ಹೆಚ್ಚು. ಹೀಗಾಗಿ ಯಾವುದೇ ಕಲಾವಿದ ರಚಿಸಿದ ಭಾವಚಿತ್ರವನ್ನು ತಕ್ಷಣಕ್ಕೆ ಗುಣಲಕ್ಷಣಗಳ ಕಾರಣದಿಂದ ತಿರಸ್ಕರಿಸಲು ಆಗುವುದಿಲ್ಲ. ಅಂತಹ ಚಿತ್ರ ಇದಾಗಿದ್ದು ವೈಯಕ್ತಿಕ ಸಂಗ್ರಹದಲ್ಲಿ ಇದ್ದುದರಿಂದ ಹೊರಪ್ರಪಂಚಕ್ಕೆ ಅಗೋಚರವಾಗಿರುವುದರಿಂದ ಜನಪ್ರಿಯವಾಗದೇ ಇರುವುದಕ್ಕೆ ಮುಖ್ಯ ಕಾರಣ. ಪಾರಂಪರಿಕ ಚಿತ್ರಗಳಿಗಿಂತ ಭಿನ್ನತೆಯನ್ನು ಸಾಧಿಸಲು ಹೊರಟ ಕಲಾವಿದ ಎಲ್ಲ ಸಂಗತಿಗಳಲ್ಲಿ ಎಚ್ಚರಿಕೆ ವಹಿಸಿರುವುದು ಕಂಡುಬರುತ್ತದೆ.

ಪೀಠದಲ್ಲಿ ಕುಳಿತ ಬಸವಣ್ಣನವರು–೫

ಈ ಚಿತ್ರದಲ್ಲಿ ನಗುಮೊಗದ ಬಸವಣ್ಣನವರು ಮೂಡಿಬಂದಿದ್ದಾರೆ. ನೈಜಚಿತ್ರಗಳ ಸಾಲಿಗೆ ಇದು ಸೇರುತ್ತದೆ. ಇಂತಹ ಬಹುತೇಕ ಕಿರುಚಿತ್ರಗಳಲ್ಲಿ ಗಂಭೀರವಾದ ಮುಖಭಾವವನ್ನು ಹೊಂದಿದ ಚಿತ್ರಗಳೇ ಹೆಚ್ಚಾಗಿ ಕಾಣಸಿಗುತ್ತವೆ. ಪ್ರಸ್ತುತ ಚಿತ್ರದಲ್ಲಿ ಬಸವಣ್ಣನವರು ನೀಳಕಾಯದವರಂತೆ ಕಂಡುಬರುತ್ತಿದ್ದಾರೆ. ಹಣೆ, ಕೊರಳು, ಕೈಗಳಲ್ಲಿ ಎದ್ದುಕಾಣುವ ಭಸ್ಮಧಾರಣೆ, ಕೊರಳಲ್ಲಿ ಮತ್ತು ಕೈಗಳಲ್ಲಿ ರುದ್ರಾಕ್ಷಿ ಧಾರಣೆ, ಕೆಂಪುವಸ್ತ್ರದಲ್ಲಿ ಬಂಧಿಸಿದ ಇಷ್ಟಲಿಂಗವು ಬಿಳಿಯ ಬಣ್ಣದ ನಿಲುವಂಗಿಯ ಬಣ್ಣಕ್ಕೆ ಹೊಂದಿಕೆಯಾಗಿ ಎದ್ದುತೋರುತ್ತದೆ. ಪಂಚೆ ಮತ್ತು ನಿಲುವಂಗಿಗಳಲ್ಲಿ ಮೂಡಿಸಿದ ಬಂಗಾರದ ಬಣ್ಣದ ಅಂಚು, ಕೊರಳಿನ ಬದಿಯಲ್ಲಿ ನಿಲುವಂಗಿಯನ್ನು ಗಂಟುಕಟ್ಟಿದ ರೀತಿಯು ಅತ್ಯಂತ ಸ್ಪಷ್ಟವಾಗಿ ಮೂಡಿಬಂದಿದೆ. ಎಡಗೈಯಲ್ಲಿ ತಾಳೆಗರಿಗಳ ಕಟ್ಟುಗಳು, ಅವುಗಳಲ್ಲಿ ಮೂಡಿಬಂದಿರುವ ಅಕ್ಷರಗಳ ಸಾಲು, ಬಂಧಿಸಲು ಮಾಡಿದ ಎರಡು ಕಂಡಿಗಳು, ಅವುಗಳೊಂದಿಗೆ ಕಟ್ಟಿರುವ ದಾರವು ಗಮನಾರ್ಹವಾಗಿದೆ. ಕಲಾವಿದ ಇಲ್ಲಿ ಪ್ರತಿಯೊಂದು ಸಂಗತಿಗಳತ್ತ ತೀವ್ರ ಗಮನಕೊಟ್ಟಿರುವುದನ್ನು ಕಾಣಬಹುದಾಗಿದೆ. ಬಲಗೈಯಲ್ಲಿ ಹಿಡಿದಿರುವ ತಾಳೆಯ ಗರಿಗಳು, ಅವುಗಳನ್ನು ಹಿಡಿದಿರುವ ಕೈಬೆರಳುಗಳ ಗೆರೆಗಳು ಸ್ಪಷ್ಟವಾಗಿ ಕಾಣುತ್ತವೆ. ಮುಖದಲ್ಲಿ ಮಂದಹಾಸ,

ಆತ್ಮತೃಪ್ತಿಯ ನಗೆ, ಕಣ್ಣುಗಳ ಚೂಪುನೋಟ ಆಕರ್ಷಕವಾಗಿವೆ. ಹಿನ್ನೆಲೆಯಾಗಿ ಬಂದಿರುವ ಕೆಂಪುವರ್ಣದಿಂದ ವಿರಚಿತ ಸಿಂಹಾಸನ, ಪಕ್ಕದಲ್ಲಿರುವ ತಾಳೆಯ ಗರಿಗಳ ಕಟ್ಟುಗಳು, ತಲೆಯ ಹಿಂದಿರುವ ಪ್ರಭಾವಳಿ, ಎಡಪಕ್ಕದಲ್ಲಿ ಚಿಕ್ಕ ಮೇಜಿನ ಮೇಲಿರುವ ಕಿರೀಟ ಮತ್ತು ಅದರ ಹರಳು, ಮುತ್ತಿನ ಅಲಂಕಾರ ಗಮನಸೆಳೆಯುತ್ತವೆ. ಆದರೆ ಶರೀರರಚನಾ ಶಾಸ್ತ್ರ (ಅನಾಟಮಿ)ದ ದೃಷ್ಟಿಯಿಂದ ನೋಡಿದರೆ ಬಸವಣ್ಣನ ಆಕೃತಿಯಲ್ಲಿ ತುಸು ಲೋಪದೋಷಗಳಾಗಿರುವುದು ಕಂಡುಬರುತ್ತದೆ. ಮುಖ್ಯವಾಗಿ ಮುಖ ಮತ್ತು ದೇಹಾಕೃತಿಯ ಪ್ರಮಾಣಕ್ಕೆ ತಾಳೆಯಾಗುತ್ತಿಲ್ಲ. ಉಳಿದಂತೆ ಚಿತ್ರದ ಸಂದರ್ಭದಲ್ಲಿನ ಪರಿಕರಗಳನ್ನು ಚಿತ್ರಿಸುವಲ್ಲಿ ಕಲಾವಿದ ವಹಿಸಿರುವ ಶ್ರದ್ಧೆ ಎದ್ದುಕಾಣುತ್ತದೆ.

ಪೀಠದ ಮೇಲೆ ಕುಳಿತ ಬಸವಣ್ಣನವರು–೬

ಅಂಡಾಕಾರದ ಅರ್ಧ ವೃತ್ತದಲ್ಲಿ ಬಸವಣ್ಣನವರು ತಮ್ಮೆರಡೂ ಕೈಗಳನ್ನು ಜೋಡಿಸಿ ಮುಗಿದು ಕುಳಿತಿದ್ದಾರೆ. ತೈಲವರ್ಣದಲ್ಲಿ ರಚಿತವಾದ ಈ ಕಲಾಕೃತಿಯಲ್ಲಿ ಪ್ರತಿಯೊಂದು ಚಿಕ್ಕ ಚಿಕ್ಕ ಸಂಗತಿಗಳನ್ನು ಕಲಾವಿದ ಅತ್ಯಂತ ನಾಜೂಕಾಗಿ ನಿರ್ವಹಿಸಿರುವುದು ಕಂಡುಬರುತ್ತದೆ. ಅಚ್ಚ ಬಿಳಿ, ನಸು ಕಂದುಬಣ್ಣ, ಹಳದಿಮಿಶ್ರಿತ ಕೆಂಪು ಬಣ್ಣ, ಕಡಿಮೆ ಪ್ರಮಾಣದಲ್ಲಿ ಕಾವಿ ಬಣ್ಣಗಳ ಪ್ರಯೋಗಗಳನ್ನು ಇಲ್ಲಿ ನೋಡುತ್ತೇವೆ. ಚೌಕಾಕಾರವನ್ನು ಹೋಲುವ ಮುಖ, ತಲೆಯಲ್ಲಿ ಆಗ ತಾನೆ ಮೂಡುತ್ತಿರುವಂತೆ ಕಾಣುವ ಕಪ್ಪಾದ ಕಿರುಗೂದಲು, ಹಣೆಯಲ್ಲಿ ಅಷ್ಟೇನೂ ಎದ್ದುಕಾಣದಂತಿರುವ ವಿಭೂತಿಯ ಪಟ್ಟೆಗಳು, ಭ್ರೂಮಧ್ಯದಲ್ಲಿ ವಿಭೂತಿಯ ದುಂಡಗಿನ ಬೊಟ್ಟು, ನೀಳಮೂಗು, ಕಿರುಮೀಸೆ, ಒಪ್ಪವಾಗಿ ತೋರುವ ತುಟಿಗಳು, ಅರೆನಿಮೀಲಿತ ಕಣ್ಣುಗಳು, ನೀಳವಾದ ಕಿವಿಗಳು, ಅವುಗಳಲ್ಲಿ ರುದ್ರಾಕ್ಷಿಯ ಓಲೆಗಳು, ಕೊರಳಲ್ಲಿ ಕೆಂಪು ವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗ, ಸ್ಪಷ್ಟವಾಗಿ ತೋರುವ ಮಧ್ಯಮಗಾತ್ರದ ರುದ್ರಾಕ್ಷಿಯ ಮಾಲೆಗಳು ಸಮರ್ಪಕವಾಗಿ ಚಿತ್ರಿತವಾಗಿವೆ. ಅಚ್ಚ ಬಿಳಿಬಣ್ಣದ ಪಂಚೆ, ಅದೇ ಬಣ್ಣದ ಮೇಲುವಸ್ತ್ರವನ್ನು ದೇಹದ ಬಹುಭಾಗವನ್ನು ಆವರಿಸಿದೆ. ಚಿತ್ರದ ಪ್ರಮುಖ ಆಕರ್ಷಣೆಗಳಲ್ಲಿ ಬಿಳಿಯ ಬಣ್ಣದ ವಸ್ತ್ರಗಳೇ ಮೊದಲ ಸ್ಥಾನಪಡೆದಿವೆ ಎಂದು ಹೇಳಬಹುದು.

ಪಂಚೆ ಮತ್ತು ಮೇಲುವಸ್ತ್ರಗಳ ನಿರಿಗೆಗಳು, ಅವುಗಳ ಕೊನೆಯಲ್ಲಿ ಹಳದಿ ಬಣ್ಣದ ಜರತಾರಿ ಅಂಚನ್ನು ಚಿತ್ರಿಸಿರುವುದು ಕಲಾವಿದನ ತಾಳ್ಮೆ ಮತ್ತು ಪ್ರತಿಭೆಗೆ ಸಾಕ್ಷಿಯಾಗಿವೆ. ದಟ್ಟವಾದ ಕಂದುಬಣ್ಣದ ಪೀಠದ ಮೇಲೆ ಕುಳಿತಿರುವ ಬಸವಣ್ಣನವರ ಹಿಂಬದಿಯಲ್ಲಿ ಶಿವಲಿಂಗವಿದೆ. ಶಿವಲಿಂಗದಲ್ಲಿ ಬಸವಣ್ಣರಿದ್ದಾರೆ ಎಂದು ನೋಡುಗನಿಗೆ ಮೊದಲ ನೋಟಕ್ಕೆ ತೋರುತ್ತದೆ. ನಿಧಾನವಾಗಿ ಈ ಚಿತ್ರವನ್ನು ಗಮನಿಸಿದಾಗ ಪೀಠದ ಮೇಲೆ ಬಸವಣ್ಣನವರು ಕುಳಿತಿದ್ದಾರೆ. ಆತನ ಹಿಂಬದಿಯಲ್ಲಿ ಶಿವಲಿಂಗವಿದೆ. ಶಿವಲಿಂಗದ ಬಣ್ಣ ಮತ್ತು ಬಸವಣ್ಣನವರು ಕುಳಿತ ಪೀಠದ ಬಣ್ಣಗಳು ಒಂದೇ ಆಗಿರುವುದು ಈ ತೆರನ ಗ್ರಹಿಕೆಗೆ ಕಾರಣವಾಗಿದೆ. ಕಲಾವಿದ ಉದ್ದೇಶಪೂರ್ವಕವಾಗಿ ಇಂತಹ ತಂತ್ರವನ್ನು ಬಳಸಿರಲೂಬಹುದು. ಬಸವಣ್ಣನವರ ತಲೆಯ ಸುತ್ತಲೂ ಇರುವ ಕೆಂಪು, ಹಳದಿ ಮಿಶ್ರಿತ ಬಣ್ಣದ ಪ್ರಭಾವಳಿಯು

ಗಮನಸೆಳೆಯುತ್ತದೆ. ಆತನ ಕೆಳಬದಿಯಲ್ಲಿ ಎರಡೂ ಬದಿಗಳಲ್ಲಿ ಹಸ್ತಪ್ರತಿಗಳ ಎರಡೆರಡು ಕಟ್ಟುಗಳಿದ್ದು ಅವು ಸಹಜವೆಂಬಂತೆ ಚಿತ್ರಿತವಾಗಿವೆ. ಕಲಾವಿದನ ವರ್ಣಸಂಯೋಜನೆ, ಒಟ್ಟು ಕೃತಿಯ ಆಶಯ ಇಲ್ಲಿ ಸಮರ್ಥವಾಗಿ ಮೂಡಿಬಂದಿದೆ.

ಪೀಠದಲ್ಲಿ ಕುಳಿತ ಬಸವಣ್ಣನವರು-೭

ಸುಮಾರು ೧೫ ಅಡಿ ಎತ್ತರವುಳ್ಳ ತೈಲವರ್ಣದಲ್ಲಿ ರಚಿತವಾದ ಬಸವಣ್ಣನವರ ಈ ಭಾವಚಿತ್ರ ಒಂದು ಉತ್ತಮ ಕಲಾಕೃತಿಯಾಗಿದೆ. ಬಿಳಿ, ದಟ್ಟಕೆಂಪು, ನಸುಗೆಂಪು, ನಸು ಕಪ್ಪು, ತೆಳು ಹಳದಿ ಬಣ್ಣಗಳ ಬಳಕೆ ಇಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಮುತ್ತುರತ್ನಗಳ ಸಾಲಂಕೃತ ಬಂಗಾರ ಬಣ್ಣದ ಕಿರೀಟ, ಹಣೆಯಲ್ಲಿ ಮೂರು ಗೆರೆಗಳು ಒಟ್ಟೊಟ್ಟಿಗೆ ಸೇರಿದಂತೆ ಕಾಣುವ ವಿಭೂತಿಯ ಪಟ್ಟಿಗಳು, ತಿದ್ದಿದಂತಿರುವ ಹುಬ್ಬು, ನೀಳವಾದ ಮೂಗು, ಕಿರುಮೀಸೆ, ಅಂದವಾದ ತುಟಿಗಳು, ಎಡಗಿವಿಯಲ್ಲಿ ರುದ್ರಾಕ್ಷಿಯ ಓಲೆ, ಕೊರಳಲ್ಲಿ ಕೆಂಪು ವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ರುದ್ರಾಕ್ಷಿ ಮತ್ತು ಮುತ್ತಿನ ಸರಮಾಲೆಗಳನ್ನು ಧರಿಸಿದ ಬಸವಣ್ಣನವರ ಮುಖ ಆಕರ್ಷಕವಾಗಿ ಕಂಡುಬರುತ್ತದೆ. ಮಿರುಗುವ ಹಳದಿ ಬಣ್ಣದ ಅಂಚಿನಿಂದ ಕೂಡಿರುವ ತುಂಬು ತೋಳುಗಳ ನಿಲುವಂಗಿ, ಕಡುಬಿಳಿಯ ಬಣ್ಣದ ಪಂಚೆ ಧರಿಸಿದ ಬಸವಣ್ಣನವರ ಮುಖಭಾವ ಸೌಮ್ಯವಾಗಿದ್ದು, ಕುಳಿತಿರುವ ಭಂಗಿಯು ಸಹಜವಾಗಿದೆ. ತನ್ನೆರಡು ಕೈಗಳನ್ನು ಸಿಂಹಾಸನದ ಪೀಠದ ಎರಡೂ ಬದಿಗಳ ಮೇಲಿಟ್ಟು, ತನ್ನ ಬಲಗಾಲನ್ನು ಕಾಲ ಕೆಳಗಿರುವ ಕೆಂಪು ಬಣ್ಣದ ಕಿರುಪೀಠದಲ್ಲಿಟ್ಟು, ತನ್ನ ಎಡಗಾಲಿನ ಪಾದವನ್ನು ತುಸು ಮೇಲೆತ್ತಿದಂತೆ ಚಿತ್ರಿಸುವುದರ ಮೂಲಕ ಕಲಾವಿದ ಸಹಜತೆಯನ್ನು ಮೆರೆದಿದ್ದಾನೆ.

ಬಸವಣ್ಣನವರ ಬಲಬದಿಯಲ್ಲಿ ವೃತ್ತಾಕಾರದ ಹಲಗೆಯುಳ್ಳ ಮಧ್ಯಮಗಾತ್ರದ ಪೀಠದ ಮೇಲೆ ಕೆಂಪು ವೆಲ್‌ವೆಟ್ ಬಟ್ಟೆಯನ್ನು ಇಳಿಯಬಿಡಲಾಗಿದ್ದು ಅದರ ಮೇಲೆ ತೆಳು ಹಳದಿಯ ಬಣ್ಣದ ಎರಡು ಹಸ್ತಪ್ರತಿಗಳ ಕಟ್ಟುಗಳಿವೆ. ಬಸವಣ್ಣನವರು ಕುಳಿತ ಪೀಠವು ಕೆಂಪುಬಣ್ಣದ ವಸ್ತ್ರ ಮತ್ತು ಅದರ ಕಟ್ಟುಗಳಿಗೆ ಮಬ್ಬಾಗಿರುವ ಹಳದಿ ಬಣ್ಣವನ್ನು ಬಳಸಲಾಗಿದೆ. ಈ ಕಲಾಕೃತಿಯಲ್ಲಿ ಕಲಾವಿದ ಬಿಸಿವರ್ಣಗಳನ್ನು ಹೆಚ್ಚು ಬಳಸಿದ್ದರೂ ಅವು ಕಣ್ಣಿಗೆ ರಾಚದೇ ಸೌಮ್ಯವಾಗಿರುವಂತೆ ಸಂಯೋಜಿಸಿರುವುದು ಮೆಚ್ಚುಗೆಗೆ ಪಾತ್ರವಾಗಿದೆ.

ಪೀಠದಲ್ಲಿ ಕುಳಿತ ಬಸವಣ್ಣನವರು-೮

ಕಲಾವಿದ ಎಂ. ಎ. ಚೆಟ್ಟಿಯವರು ರಚಿಸಿದ ಈ ಕಲಾಕೃತಿಯು ತೈಲವರ್ಣದ ೨೪"x೩೬" ಅಳತೆಯಲ್ಲಿದ್ದು, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ ಇಲ್ಲಿ ಸಂಗ್ರಹಗೊಂಡಿದೆ. ಮೇಲಿನ ವಿಷಯದ ಹಿನ್ನೆಲೆಯಲ್ಲಿ ಹಲವಾರು ಕಲಾವಿದರು ತಮ್ಮದೇ ಆದ ಶೈಲಿಯಲ್ಲಿ ರಚಿಸಿರುವುದನ್ನು ಕಾಣಬಹುದು. ಆದರೆ ಚೆಟ್ಟಿಯವರ ಈ ಕಲಾಕೃತಿಯಲ್ಲಿ ಕೆಲವು ವಿಶೇಷತೆಗಳನ್ನು ಗಮನಿಸಬಹುದಾಗಿದೆ. ಸ್ವರ್ಣ ಪೀಠದ ಮೇಲೆ ಶಾಂತ ಸ್ಥಿತಿಯಲ್ಲಿ ಕುಳಿತ ಬಸವಣ್ಣನವರು ನಿಲುವಂಗಿ, ಕಿರೀಟ, ಕೊರಳಲ್ಲಿ

ಆಭರಣಗಳೊಂದಿಗೆ ಇಷ್ಟಲಿಂಗ ಮತ್ತು ರುದ್ರಾಕ್ಷಿ ಮಾಲೆಯನ್ನು ಧರಿಸಿರುವರು. ಇಲ್ಲಿ ಕಂದು ಕೆಂಪು, ಬಿಳಿ ಹಾಗೂ ಬಂಗಾರ ಈ ಮೂರು ತೈಲವರ್ಣಗಳನ್ನು ಮಾತ್ರ ಬಳಸಲಾಗಿದೆ. ಚಿತ್ರದಲ್ಲಿನ ದೂರ ಮತ್ತು ಸಮೀಪದ ದೃಷ್ಟಿಯು ಯಥಾವತ್ತಾಗಿ ಮೂಡಿಬಂದಿದೆ.

ಪೀಠದಲ್ಲಿ ಕುಳಿತ ಬಸವಣ್ಣನವರು–೯

ಕಲಾವಿದ ಸಿ.ಎನ್. ಪಾಟೀಲ ಅವರ ಸಾಂಪ್ರದಾಯಿಕ ಶೈಲಿಯ, ತೈಲವರ್ಣದ ೪೮"x೬೬" ಅಳತೆಯ ಕಲಾಕೃತಿ ಇದಾಗಿದೆ. ಈ ಕಲಾಕೃತಿಯಲ್ಲಿ ಬಸವಣ್ಣನವರು ಅಲಂಕೃತಗೊಂಡ ಪೀಠದ ಮೇಲೆ ಸುಂದರವಾದ ಜಾಮಿತಿಕ ವಿನ್ಯಾಸಗಳನ್ನು ಒಳಗೊಂಡ ಬಿಳಿ ವರ್ಣದ ವಸ್ತ್ರವನ್ನು ಧರಿಸಿ ಕುಳಿತಿರುವುದು ಕಾಣಬಹುದು. ಬಸವಣ್ಣನವರು ಎಡಗಡೆ ಮುಖಮಾಡಿ ವೀಕ್ಷಿಸುತ್ತಿದ್ದು ಸ್ವರ್ಣದ ಕಿರೀಟ ಕಿವಿಯಲ್ಲಿ ಮುತ್ತಿನ ಓಲೆ ಕೊರಳಲ್ಲಿ ಮುತ್ತಿನ ಸರ ಎಡಗೈ ಪಕ್ಕದಲ್ಲಿ ಖಡ್ಗವನು ಇಲ್ಲಿ ಸಂಯೋಜಿಸಲಾಗಿದೆ. ಆಕೃತಿಯ ಹಿಂಭಾಗವನ್ನು ಗಮನಿಸಿದರೆ ಅರಮನೆಯ ಒಂದು ಕೋಣೆಯಲ್ಲಿ ಅಥವಾ ಮಂಟಪದಲ್ಲಿ ಕುಳಿತಿರುವಂತೆ ಭಾಸವಾಗುತ್ತದೆ. ಆಕೃತಿಯನ್ನು ಹೊರತು ಪಡಿಸಿ ಉಳಿದ ಕೆಲವು ವಸ್ತುಗಳು ವರ್ಣಗಳಲ್ಲಿ ಮರೆಮಾಚಿವೆ. ಇಲ್ಲಿ ಆಕೃತಿಯ ರೂಪ, ಪ್ರಮಾಣ, ಭಾವ, ಲಾವಣ್ಯ ಯೋಜನೆ, ಸಾದೃಸ್ಯ ಹಾಗೂ ವರ್ಣಿಕಭಂಗಿ ಹೀಗೆ ಒಂದು ಉತ್ತಮ ಚಿತ್ರಕಲಾಕೃತಿಗೆ ಇರಬೇಕಾದ ಸರ್ವ ಅಂಶಗಳು ಇಲ್ಲಿ ಕಂಡುಬಂದಿರುವುದು ವಿಶೇಷ ಮತ್ತು ಆಕೃತಿಗೆ ಮಾಡಿರುವ ಅಲಂಕರಣ ನೋಡುಗರಿಗೆ ಹೆಚ್ಚು ಆಕರ್ಷಣೆ ಮತ್ತು ಕಣ್ಮನಸೆಳೆಯುವವಲ್ಲಿ ಸಂದೇಹವಿಲ್ಲ.

ಪೀಠದಲ್ಲಿ ಕುಳಿತ ಬಸವಣ್ಣನವರು–೧೦

ಈ ಚಿತ್ರದಲ್ಲಿರುವ ಕಲಾಕೃತಿಯು ಅಂತರ್ಜಾಲ(Basavanna Images)ದಲ್ಲಿ ಲಭ್ಯವಾಗಿದೆ.ಈ ಚಿತ್ರವನ್ನು ರಚಿಸಿದ ಕಲಾವಿದರ ಹೆಸರು ದೊರೆಯಲಿಲ್ಲ. ತೈಲವರ್ಣ ಮಾಧ್ಯಮದಲ್ಲಿದ್ದು, ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹಲವು ಕಲಾಕೃತಿಗಳು ರಚನೆಯಾಗಿವೆ. ಅದೇ ರೀತಿಯಲ್ಲಿಯೇ ಈ ಚಿತ್ರವೂ ರಚನೆಗೊಂಡಿದೆ. ಆದರೆ ಈ ಚಿತ್ರದಲ್ಲಿ ಪೀಠದ ವಿನ್ಯಾಸದಲ್ಲಿನ ಅಲಂಕರಣ, ಧರಿಸಿರುವ ವಸ್ತ್ರಗಳ ವರ್ಣಗಳು ಸ್ವಲ್ಪ ಭಿನ್ನವಾಗಿವೆ. ಇಲ್ಲಿ ನೀಲಿ, ಹಸಿರು, ಕೆಂಪು, ಬಿಳಿ ವರ್ಣಗಳೊಂದಿಗೆ ಹಳದಿ ವಾಷ್ ವಿಧಾನದಲ್ಲಿ ಈ ಚಿತ್ರವನ್ನು ರಚಿಸಲಾಗಿದೆ.

ಪೀಠದಲ್ಲಿ ಕುಳಿತ ಬಸವಣ್ಣನವರು–೧೧

ಪ್ರಸ್ತುತ ಈ ಚಿತ್ರವು ತೈಲವರ್ಣದಲ್ಲಿದ್ದು, ತುಮಕೂರಿನ ಶ್ರೀ ಸಿದ್ಧಗಂಗಾ ಮಠದಲ್ಲಿ ಸಂಗ್ರಹಗೊಂಡಿದೆ. ಈ ಕಲಾಕೃತಿಯು ನೋಡಲು ಸಾಧಾರಣವಾಗಿದ್ದರೂ ತುಂಬಾ ಹಳೆಯದೆಂಬ ಕಲ್ಪನೆ ಮೂಡುತ್ತದೆ. ಈ ಚಿತ್ರದಲ್ಲಿ ಕಪ್ಪು ಮತ್ತು ಕೆಂಪು ಮಿಶ್ರಿತ ವರ್ಣವು ಪ್ರಧಾನವಾಗಿದ್ದು, ನಿಲುವಂಗಿಯ ಅಂಚಿನ ಪಟ್ಟಿಗಳಿಗೆ ಬಂಗಾರ ವರ್ಣನ್ನು ಸಂಯೋಜಿಸಲಾಗಿದೆ. ಕೆಳಗೆ ಬಿಳಿ ಪೈಜಾಮಿಗೆ ಕೇಸರಿ ಮಿಶ್ರಿತ ಬಂಗಾರ ವರ್ಣದ

ಅಂಚಿನ ಪಟ್ಟಿಯನ್ನು ಚಿತ್ರಿಸಲಾಗಿದೆ. ಚಿತ್ರದಲ್ಲಿನ ಆಕೃತಿಯು ನೈಜ ರೀತಿಯಲ್ಲಿ ಮೂಡಿಬಂದಿದೆ. ಈ ಕೃತಿಯ ವಿಶೇಷತೆ ಎಂದರೆ ಎಲ್ಲ ಚಿತ್ರಗಳಲ್ಲಿಯೂ ಬಸವಣ್ಣನವರು ಶಾಂತ ರೀತಿಯ ಮುಗುಳ್ನಗೆ ಮಾಡುತ್ತಿರುವಂತೆ ಚಿತ್ರಿಸಿದರೆ ಈ ಚಿತ್ರದಲ್ಲಿ ಚಿಂತನೆಯಲ್ಲಿ ನಿರತರಾಗಿರುವಂತೆ ರಚಿಸಲಾಗಿದೆ.

೫.೧.೫. ಪೂರ್ಣಭಾವಚಿತ್ರ –೧

ಬಸವಣ್ಣನವರು ನಿಂತ ಭಂಗಿಯಲ್ಲಿ ರಚಿತವಾದ ಚಿತ್ರವಿದು. ಬಸವಣ್ಣನವರು ಮಂತ್ರಿ ಪದವಿಯ ಪೋಷಾಕನ್ನು ಧರಿಸಿದ್ದರೂ ಕೈಯಲ್ಲಿ ಹಸ್ತಪ್ರತಿಯನ್ನು ಹಿಡಿದಿರುವಂತೆ ಚಿತ್ರಿಸಲಾಗಿದ್ದು, ಕೈಯಲ್ಲಿ ಅಧಿಕಾರದ ಸಂಕೇತವಾದ ಖಡ್ಗವನ್ನು ಹೊಂದಿರುವುದಿಲ್ಲ. ಹಳದಿ ಮತ್ತು ಕೆಂಪು ಮಿಶ್ರಿತ ಜರಿಯ ಪಟ್ಟಿಯೊಂದಿಗೆ ಉದ್ದವಾದ ನಿಲುವಂಗಿ ಮತ್ತು ಪಂಚೆಯನ್ನು ಧರಿಸಿದ್ದಾರೆ. ಕೊರಳಲ್ಲಿ ರುದ್ರಾಕ್ಷಿ ಮಾಲೆ, ಇಷ್ಟಲಿಂಗ ಮತ್ತು ಮುತ್ತಿನ ಹಾರವನ್ನು ಧರಿಸಿ ಹಣೆಗೆ ವಿಭೂತಿಯನ್ನು ಧರಿಸಿರುವ ಚಿತ್ರಣ ಕಂಡುಬರುತ್ತದೆ. ತಲೆಗೆ ಬಂಗಾರದ ಕಿರೀಟವಿದ್ದು ಅದರ ಮಧ್ಯದಲ್ಲಿ ಹಸಿರು ಬಣ್ಣದ ಹರಳನ್ನು ಜೋಡಿಸಿರುವುದು ಕಂಡುಬರುತ್ತದೆ. ಬಲಬದಿಗೆ ಮುಖಮಾಡಿದಂತೆ ಓರೆಯಾಗಿ ಪೂರ್ಣ ಪ್ರಮಾಣದ ನಿಲುವಿನಲ್ಲಿ ನಿಂತ ಭಂಗಿ ಆಕರ್ಷಕವಾಗಿದೆ. ಬಲಗೈಯ ತೋರುಬೆರಳನ್ನು ಚಾಚಿರುವುದು ಏನನ್ನೋ ಉಪದೇಶ ಇಲ್ಲವೆ ಮಾರ್ಗದರ್ಶನ ಮಾಡುತ್ತಿರುವ ರೀತಿಯನ್ನು ಸೂಚಿಸುತ್ತದೆ. ಮೇಲುಹೊದಿಕೆ ಹೆಗಲಿನಿಂದ ಕಾಲಿನವರೆಗೆ ಇಳಿಯಬಿದ್ದಿದೆ. ಬಸವಣ್ಣನವರು ಕಾಲಿಗೆ ಚೂಪಾದ ತುದಿಯುಳ್ಳ ಪಾದರಕ್ಷೆಯನ್ನು ಧರಿಸಿರುವ ಅಪರೂಪದ ಚಿತ್ರವಿದಾಗಿದೆ. ಬಸವಣ್ಣನವರ ಹಿನ್ನೆಲೆಯು ಕಡುನೀಲಿಬಣ್ಣವನ್ನು ಹೊಂದಿರುವುದರಿಂದ, ಬಿಳಿಯ ಬಣ್ಣದ ವಸ್ತ್ರಗಳನ್ನು ಧರಿಸಿರುವುದರಿಂದ ಕಲಾವಿದನ ವರ್ಣಸಂಯೋಜನೆಯ ತದ್ವಿರುದ್ಧವಾಗಿದ್ದರೂ ಸ್ಪಷ್ಟವಾಗಿದೆ.

ಪೂರ್ಣ ಭಾವಚಿತ್ರ –೨

ಬಸವಣ್ಣನವರು ಈ ಚಿತ್ರದಲ್ಲಿ ಧ್ಯಾನಮುದ್ರೆಯ ಭಂಗಿಯಲ್ಲಿ ಆಲದ ಮರದ ಕೆಳಗೆ ಕುಳಿತಿರುವ ಸನ್ನಿವೇಶವನ್ನು ಕಾಣುತ್ತೇವೆ. ಹಸಿರುಬಣ್ಣದ ರತ್ನಗಂಬಳಿಯ ಮೇಲೆ ತೀವ್ರ ಧ್ಯಾನಾಸಕ್ತರಾಗಿ ಕುಳಿತಿದ್ದಾರೆ. ಬಿಳಿಯ ಬಣ್ಣದ ಪಂಚೆ ಮತ್ತು ವಸ್ತ್ರಗಳನ್ನು ಧರಿಸಿದ್ದಾರೆ. ಕೊರಳಲ್ಲಿ ರುದ್ರಾಕ್ಷಿ ಮಾಲೆ, ಇಷ್ಟಲಿಂಗ, ಕಿವಿಯಲ್ಲಿ ಬಂಗಾರಖಚಿತವಾದ ರುದ್ರಾಕ್ಷಿಯ ಓಲೆಗಳು, ತೋಳು ಮತ್ತು ಮಣಿಕಟ್ಟುಗಳಲ್ಲಿ ರುದ್ರಾಕ್ಷಿಯ ಸುತ್ತುಗಳನ್ನು ಧರಿಸಿರುವ ಬಸವಣ್ಣನವರ ಅಪರೂಪದ ಚಿತ್ರವಿದಾಗಿದ್ದು ಕಲಾವಿದ ತುಂಬ ಎಚ್ಚರಿಕೆಯಿಂದ ಕಲಾಕೃತಿಯನ್ನು ರಚಿಸಿರಬೇಕೆನ್ನಿಸುತ್ತದೆ. ನೀಳವಾದ ನಾಸಿಕ, ಅರೆದುಂಡಗಾದ ಎಡ ಮತ್ತು ಬಲ ಹುಬ್ಬುಗಳು, ಹಣೆಯ ಮೇಲೆ ಧರಿಸಿದ ವಿಭೂತಿ, ಅರೆನಿಮೀಲಿತ ಧ್ಯಾನಾರೂಢ ಕಣ್ಣುಗಳು, ತಲೆಯ ಹಿಂಬದಿಯಲ್ಲಿ ಬಿಳಿಬಣ್ಣದಿಂದ ಆವೃತವಾದ ಪ್ರಭಾವಳಿ –ಈ ಎಲ್ಲ ಅಂಶಗಳು ಬಸವಣ್ಣನವರ ಕಲಾಕೃತಿಗೆ ಶೋಭೆ ನೀಡಿವೆ. ಅರೆಪದ್ಮಾಸನದಿಂದ ಬಲಗಾಲನ್ನು ಎಡ ತೊಡೆಯ ಮೇಲಿಟ್ಟು ಎರಡೂ ಹಸ್ತಗಳನ್ನು ಒಂದರ ಮೇಲೊಂದನ್ನಿಟ್ಟು ಕುಳಿತಿರುವ ಭಂಗಿ ಆಕರ್ಷಕವಾಗಿದೆ.

ಬಸವಣ್ಣನವರ ಮುಂಭಾಗದಲ್ಲಿ ಕಾವಿಬಣ್ಣದ ಒಂದು ಚಿಕ್ಕಪೀಠವಿದ್ದು ಅದರ ಮೇಲೆ ಗ್ರಂಥವನ್ನು ಇಡಲಾಗಿದೆ. ಬಸವಣ್ಣನವರ ಹಿಂಬದಿಯಲ್ಲಿ ಆಲದ ಮರವಿದ್ದು ಅನೇಕ ರೆಂಬೆಕೊಂಬೆಗಳಿಂದ

ಆವೃತವಾಗಿರುವುದನ್ನು ಕಾಣುತ್ತೇವೆ. ಆಲದ ಮರದ ಪಕ್ಕದಲ್ಲಿ ನದಿಯೊಂದು ಹರಿದಿರುವ ಚಿತ್ರಣವನ್ನೂ ಸಹ ಕಾಣಬಹುದಾಗಿದೆ. ಇಲ್ಲಿ ಆಲದ ಮರದ ಚಿತ್ರಣವಿರುವುದರಿಂದ ಇದು ಒಮ್ಮೆ ಬೋಧಿಸತ್ವ ಬುದ್ಧನ ಚಿತ್ರದಂತೆಯೂ ಕಾಣಿಸುತ್ತಿದ್ದು ಇಲ್ಲಿನ ವರ್ಣಯೋಜನೆ ಅತ್ಯಂತ ಪ್ರಬುದ್ಧವಾಗಿದೆ. ಜೊತೆಗೆ ಯಥಾದರ್ಶನ ನೀತಿಯನ್ವಯ ಇಲ್ಲಿ ದೃಶ್ಯರಚನೆಯನ್ನು ಕೈಗೊಂಡಿದ್ದು, ಮುನ್ನೆಲೆಯ ಆಕೃತಿಯನ್ನು ಸ್ಪಷ್ಟವಾಗಿಸುವಲ್ಲಿ ಹಿನ್ನೆಲೆಯ ವಿನ್ಯಾಸಗಳು ಮಂದವಾಗಿ ಚಿತ್ರಿತಗೊಂಡು ಒಟ್ಟು ಕಲಾಕೃತಿಯ ಮೆರಗನ್ನು ಹೆಚ್ಚಿಸಿವೆ.

ಪೂರ್ಣ ಭಾವಚಿತ್ರ –೩

ಪ್ರಸ್ತುತ ಚಿತ್ರದಲ್ಲಿ ಬಸವಣ್ಣನವರನ್ನು ನಿಂತ ಭಂಗಿಯಲ್ಲಿ ಚಿತ್ರಿಸಲಾಗಿದೆ. ಹಸಿರು ಅಂಚಿನೊಂದಿಗಿರುವ ಬಿಳಿಯ ಪಂಚೆಯುಟ್ಟು, ಕೆಂಪುಅಂಚಿನೊಂದಿಗೆ ಕೂಡಿರುವ ಬಿಳಿಯ ಮೇಲುಹೊದಿಕೆಯನ್ನು ಬಸವಣ್ಣನವರು ಹೊದ್ದಿರುವುದನ್ನು ಕಾಣುತ್ತೇವೆ. ಕೊರಳಲ್ಲಿ ರುದ್ರಾಕ್ಷಿ, ಕೆಂಪುವಸ್ತ್ರದಲ್ಲಿ ಇಟ್ಟು ಕಟ್ಟಿದ ಇಷ್ಟಲಿಂಗ, ಕಿವಿಗಳಲ್ಲಿನ ರುದ್ರಾಕ್ಷಿಯ ಓಲೆಗಳು ಗಮನಸೆಳೆಯುತ್ತವೆ. ಅಂತೆಯೇ ಲಂಬಕರ್ಣ (ಉದ್ದವಾದ ಕಿವಿಗಳು)ಗಳನ್ನು ಇಲ್ಲಿ ಕಾಣಬಹುದು. ಹಣೆ, ತೋಳು, ಕೈಗಳಲ್ಲಿ ವಿಭೂತಿಯನ್ನು ಧರಿಸಲಾಗಿದ್ದು ಹಣೆಯಲ್ಲಿ ಧರಿಸಿದ ವಿಭೂತಿ ಮತ್ತು ಭ್ರೂಮಧ್ಯದ ಬೊಟ್ಟು ಎದ್ದು ಕಾಣುವುದಿಲ್ಲ. ಎಡಗೈಯಲ್ಲಿ ಹಸ್ತಪ್ರತಿಯ ಕಟ್ಟೊಂದನ್ನು ಹಿಡಿದಿರುವ ಬಸವಣ್ಣನವರು ಈ ಚಿತ್ರದಲ್ಲಿ ಬಲಗೈಯ ತೋರುಬೆರಳನ್ನು ಮೇಲೆತ್ತಿ ಹಿಡಿದಿರುವುದನ್ನು ಕಾಣುತ್ತೇವೆ.

ಬಹುಶಃ ಅದು ಇತರರಿಗೆ ಸಂದೇಶ ಇಲ್ಲವೆ ಮಾರ್ಗದರ್ಶನ ಮಾಡಲು ಇರಬಹುದೆಂದು ಊಹಿಸಬಹುದು. ಕಣ್ಣುಗಳು ಅಗಲವಾಗಿದ್ದು ನೇರ ದೃಷ್ಟಿಯನ್ನು ಹೊಂದಿವೆ. ನೀಳವಾದ ನಾಸಿಕದ ಕೆಳಗೆ ಕಿರುಮೀಸೆಯಿದ್ದು ಒಟ್ಟಾರೆ ಮುಖಭಂಗಿಯು ಪ್ರಶಾಂತವಾದ ಮುದ್ರೆಯಿಂದ ಕೂಡಿರುವುದನ್ನು ಕಾಣುತ್ತೇವೆ. ಬಸವಣ್ಣನವರ ಹಿಂಬದಿಯ ಭಿತ್ತಿಯು ಕಡು ಹಸಿರು ಬಣ್ಣದಿಂದ ಕೂಡಿರುವುದರಿಂದ ಮತ್ತು ಅವರು ಧರಿಸಿರುವ ವಸ್ತ್ರಗಳು ಬಿಳಿಯ ಬಣ್ಣದಿಂದ ಕೂಡಿರುವುದರಿಂದ ಕಲಾವಿದನ ವರ್ಣ ಸಂಯೋಜನೆ ಇಲ್ಲಿ ಯಶಸ್ಸು ಪಡೆದಿದೆಯೆನ್ನಬಹುದು.

ಪೂರ್ಣ ಭಾವಚಿತ್ರ –೪

ಈ ಚಿತ್ರದಲ್ಲಿ ಬಸವಣ್ಣನವರನ್ನು ಉಪದೇಶ ನೀಡುವಂತೆ ಮತ್ತು ಪ್ರಜೆಗಳ, ಭಕ್ತರ ದಾರಿದೀಪವಾಗಿರುವಂತೆ ಚಿತ್ರಿಸಲಾಗಿದೆ. ಹಳದಿಮಿಶ್ರಿತ ಕೆಂಪುಬಣ್ಣದ ಜರಿಯಿಂದ ಕೂಡಿದ ನಿಲುವಂಗಿ, ಬಿಳಿಯ ಪಂಚೆಯುಟ್ಟು, ಹಾಗೂ ಹಳದಿ ಬಣ್ಣದ ರೇಶ್ಮೆ ಮೇಲುವಸ್ತ್ರವನ್ನು ಹೊದ್ದಿರುವ ಬಸವಣ್ಣನವರು ನಿಂತ ಭಂಗಿಯು ನೇರವಾಗಿದೆ. ಎಡಗೈಯಲ್ಲಿ ಹಸ್ತಪ್ರತಿಯ ಕಟ್ಟು, ಬಲಗೈಯ ಮುಂಚಾಚಿದ ತೋರುಬೆರಳು ಉಪದೇಶಕನ ಚಿತ್ರಣವನ್ನು ಕಣ್ಣಿಗೆ ಕಟ್ಟುತ್ತವೆ. ಹಣೆಯಲ್ಲಿ ಎದ್ದುಕಾಣುವ ವಿಭೂತಿ, ಭ್ರೂಮಧ್ಯದಲ್ಲಿ ಇಟ್ಟ ವಿಭೂತಿಯ ಹಿರಿದಾದ ಬೊಟ್ಟು, ಕೊರಳಲ್ಲಿ ಧರಿಸಿದ ರುದ್ರಾಕ್ಷಿಯ ಮಾಲೆ, ಇಷ್ಟಲಿಂಗ ಕಟ್ಟಿದ ವಸ್ತ್ರದ ಗಂಟು, ಕಿವಿಯಲ್ಲಿ ಧರಿಸಿದ ರುದ್ರಾಕ್ಷಿಯ ಓಲೆಗಳು, ದೊಡ್ಡ ಕಿವಿಗಳು ಪ್ರಮಾಣಬದ್ಧವಾಗಿರುವುದನ್ನು

ಕಾಣುತ್ತೇವೆ. ಹಣೆಯಲ್ಲಿ ಮೇಲೆದ್ದಿರುವ ಹುಬ್ಬುಗಳು, ಸ್ಪಷ್ಟವಾಗಿ ತೋರುವ ಕಣ್ಣಿನ ದೃಷ್ಟಿ, ಮಟ್ಟಸವಾದ ತಲೆಗೂದಲು ಇವು ಬಸವಣ್ಣನವರ ವ್ಯಕ್ತಿತ್ವವನ್ನು ಕಳೆಗೊಳಿಸಿವೆ. ತಲೆಯ ಹಿಂಬದಿಯಲ್ಲಿ ಪ್ರಕಾಶಮಾನವಾದ ಪ್ರಭಾಪುಂಜ ಬಿಳಿ ಮತ್ತು ನಸುಗೆಂಪು ಬಣ್ಣದಿಂದ ಕೂಡಿದೆ. ಹಿನ್ನೆಲೆಯಲ್ಲಿನ ವರ್ಣವಿನ್ಯಾಸವೂ ಸೊಗಸಾಗಿ ಮೂಡಿಬಂದಿದೆ.

ಬಸವಣ್ಣನವರ ಭಿತ್ತಿಯು ಕಡುಹಸಿರು ಬಣ್ಣವನ್ನು ಹೊಂದಿದೆ. ಬಸವಣ್ಣನವರ ಎಡ ಮತ್ತು ಬಲಬದಿಯಲ್ಲಿ ವಿಭೂತಿಯನ್ನು ಧರಿಸಿದ, ವಿವಿಧ ಬಣ್ಣದ ವಸ್ತ್ರಗಳನ್ನು ಧರಿಸಿದ ಕಲ್ಯಾಣದ ಶರಣರು, ಉಳಿದ ಪ್ರಜೆಗಳು ಹಿಂಬಾಲಿಸಿ ಬರುತ್ತಿರುವುದನ್ನು ಕಾಣುತ್ತೇವೆ. ಅವರ ಸಮೂಹದಲ್ಲಿ ಕೆಂಪು ಬಣ್ಣದ ಧ್ವಜಗಳನ್ನು ಗುರುತಿಸಬಹುದು. ಬಸವಣ್ಣನವರ ಕಾಲಿನ ಕೆಳಗಡೆಯಲ್ಲಿ ನದಿಯ ಮಧ್ಯದಲ್ಲಿ ಐಕ್ಯ ಮಂಟಪ, ಅದರ ಪಕ್ಕದಲ್ಲಿಯೇ ಇರುವ ಬಸವನ ಬಾಗೇವಾಡಿಯ ಬಸವೇಶ್ವರ ದೇವಾಲಯ ಚಿತ್ರಿತವಾಗಿವೆ. ಪ್ರಜೆಗಳು, ಬಸವ ಸ್ಮಾರಕ, ಐಕ್ಯಮಂಟಪ ಇವೆಲ್ಲವುಗಳನ್ನು ಮಂದಪ್ರಕಾಶದಲ್ಲಿ ಚಿತ್ರಿಸಿ, ಬಸವಣ್ಣನವರ ಚಿತ್ರವನ್ನು ಪೂರ್ಣ ಬೆಳಕಿನಲ್ಲಿ ಕಾಣುವ ಹಾಗೆ ಚಿತ್ರಿಸಲಾಗಿದ್ದು, ಅತ್ಯಂತ ಪ್ರಬುದ್ಧರಚನೆಯೂ ಹೌದು.

ಪೂರ್ಣ ಭಾವಚಿತ್ರ–೫

ದಿ. ಪ್ರೊ. ವಿ. ಬಿ. ಹಿರೇಗೌಡರು ಶರಣರ ಕುರಿತು ಅನೇಕ ಭಾವಚಿತ್ರಗಳನ್ನು ಮತ್ತು ಪೂರ್ಣಭಾವಚಿತ್ರಗಳನ್ನು ರಚಿಸಿದ್ದು, ಅವುಗಳಲ್ಲೊಂದಾದ ಈ ಕ್ರಾಂತಿಕಾರಿ ಬಸವಣ್ಣನವರ ಪೂರ್ಣಭಾವ ಚಿತ್ರವೂ ಒಂದಾಗಿದೆ. "ನಾವು ನಿತ್ಯ ನೋಡುವ ಬಸವಣ್ಣನು ಕಿರೀಟಧಾರಿಯಾಗಿದ್ದು, ಅದು ಅತ್ಯಂತ ಪ್ರಚಲಿತ ಪೂರ್ಣಭಾವಚಿತ್ರವಾಗಿ ಜನಮನದಲ್ಲಿ ಹಾಸುಹೊಕ್ಕಾಗಿದೆ. ಆದರೆ ಹಿರೇಗೌಡರು ಪ್ರಚಲಿತವಿರುವ ಭಾವಚಿತ್ರಕ್ಕೆ ವಿಭಿನ್ನವಾಗಿ ತಮ್ಮದೇ ಕಲ್ಪನೆಯಲ್ಲಿ ಬಸವಣ್ಣನ ಭಾವಚಿತ್ರವನ್ನು ರಚಿಸಿದ್ದಾರೆ. ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಬಸವಣ್ಣನು ರಾಜ ಮರ್ಯಾದೆಯನ್ನು ತ್ಯಜಿಸಿ, ವಿರಕ್ತ ಪರಂಪರೆಗೆ ಧುಮುಕಿದಾಗಿನ ಸಂದರ್ಭವನ್ನು ಚಿತ್ರಿಸಿದ್ದಾರೆ. ಸಂಪೂರ್ಣ ಶರಣ ಸ್ವರೂಪಿಯಾಗಿ ಹಿರೇಗೌಡರಿಂದ ರೂಪುಪಡೆದ ಇಲ್ಲಿನ ಬಸವಣ್ಣನ ಪ್ರತಿಮೆ ಫೋಟೋ ರಿಯಲಿಸ್ಟ್ ನೆಲೆಯಲ್ಲಿ ರಚನೆಗೊಂಡದ್ದು, ಕೈಯಲ್ಲಿ ವಚನಗಳನ್ನು ಒಳಗೊಂಡ ತಾಳೆಗರಿಗಳ ಕಟ್ಟುಗಳನ್ನು ಹಿಡಿದುಕೊಂಡು ಶರಣ ಸಂಸ್ಕೃತಿಯನ್ನು ಪ್ರಸಾರ ಮಾಡುವ ಸ್ಥಿತಿಯ ಭಾವದಲ್ಲಿ ಈ ಪೂರ್ಣಭಾವಚಿತ್ರ ರಚನೆಗೊಂಡಿದೆ. ಮೃದುವಾದ ಆಧ್ಯಾತ್ಮಿಕ ಮುಖ ವಿನ್ಯಾಸ, ಆಕೃತಿಯ ವಸ್ತ್ರವಿನ್ಯಾಸಗಳು, ಸ್ಪಷ್ಟ ಗ್ರಹಿಕೆಯ ಮಡಿಕೆಗಳ ರಚನೆಯಿಂದ ಈ ಕೃತಿ ಆಕರ್ಷಕ. ಹಿನ್ನೆಲೆಯಲ್ಲಿ ಪ್ರಭಾವಳಿಯಿಂದ ಆವೃತಗೊಂಡ ದಟ್ಟ ವರ್ಣ ಛಾಯೆ ಅವಕಾಶದ ತುಂಬೆಲ್ಲ ವಿವಿಧ ಶ್ರೇಣಿಯಲ್ಲಿ ಹರಡಿಕೊಂಡಿದೆ. ಕೆಳಗೆ ಶರಣರ ಭಕ್ತಿ ಸೂಚಕವಾಗಿ ಹೂವುಗಳನ್ನು ಚಿತ್ರಿಸಿರುವ ಹಿರೇಗೌಡರು ಒಟ್ಟಾರೆ ಶರಣ ನಿಲುವಿಗೆ ಪೂರಕವಾದ ಭಾವ ಪ್ರಕೃತಿಯನ್ನು ಅವಕಾಶದಲ್ಲಿ ಪಸರಿಸಿ, ಒಂದು ಅನನ್ಯ ಕೃತಿಯನ್ನು ಲೋಕಾರ್ಪಣೆಗೊಳಿಸಿದ್ದಾರೆ."[೨]

೦೨. ಡಾ. ರವೀಂದ್ರ ಎಸ್. ಕಮ್ಮಾರ : ಚಿತ್ರಕಲಾವಿದ ವಿ.ಬಿ. ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು. (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕ.ವಿ.ವಿ., ಹಂಪಿ.) ಪು–೧೧೮

೫.೧.೬. ಬುದ್ಧನ ರೂಪದ ಬಸವಣ್ಣನವರ ಭಾವಚಿತ್ರ

ಪ್ರಸ್ತುತ ಕಲಾಕೃತಿಯು ಬಸವಣ್ಣನವರನ್ನು ಭಗವಾನ್ ಗೌತಮ ಬುದ್ಧನ ವೇಷದಲ್ಲಿ ನೋಡಲು ಪ್ರಯತ್ನಿಸಿದಂತಿದೆ. ಕಲಾವಿದನ ಈ ಪ್ರಯತ್ನ ಹೊಸದೆನಿಸಿದರೂ, ಬಸವಣ್ಣನವರು ಸಾಂಪ್ರದಾಯಿಕವಾಗಿ ಧರಿಸುವ ಕೊರಳಿನ ರುದ್ರಾಕ್ಷಿ ಮಾಲೆ, ಇಷ್ಟಲಿಂಗ, ವಿಭೂತಿಧಾರಣೆ, ಕೈಯಲ್ಲಿರುವ ಹಸ್ತಪ್ರತಿಯ ಗ್ರಂಥದ ಕಟ್ಟು ಇವುಗಳೇನೂ ಬದಲಾಗಿಲ್ಲ. ಇಲ್ಲಿ ಪ್ರಧಾನವಾಗಿ ಬದಲಾದದ್ದು ಬಸವಣ್ಣನವರ ಸಮಮಟ್ಟದ ತಲೆಗೂದಲು. ಅದು ಗೌತಮ ಬುದ್ಧನ ತಲೆಗೂದಲಿನಂತೆ ಜಟಾಶಿಖೆಯನ್ನು ಹೊಂದಿದೆ. ಎರಡನೆಯ ಮುಖ್ಯ ವ್ಯತ್ಯಾಸವೆಂದರೆ ಈ ವರೆಗಿನ ಸಾಂಪ್ರದಾಯಿಕ ಬಸವಣ್ಣನವರ ಚಿತ್ರಗಳಲ್ಲಿ ಲಂಬಕರ್ಣಗಳ ಗಾತ್ರ ಕಿರಿದಾಗಿದ್ದವು. ಇಲ್ಲಿ ಅವೆಲ್ಲವುಗಳಿಗಿಂತ ಮತ್ತಷ್ಟು ದೊಡ್ಡದಾದ ಕಿವಿಗಳನ್ನು ಇಲ್ಲಿ ಗೌತಮಬುದ್ಧನ ಕರ್ಣಗಳಂತೆ ಚಿತ್ರಿಸಿರುವುದು ವಿಶೇಷವಾಗಿದೆ.

ಪ್ರಸ್ತುತ ಬುದ್ಧನ ವೇಷದಲ್ಲಿರುವ ಬಸವಣ್ಣನವರ ದೃಷ್ಟಿಯು ತೀಕ್ಷ್ಣವಾಗಿರದೆ ತುಸು ನಿಮೀಲಿತವಾದಂತೆ ತೋರುತ್ತದೆ. ಬಸವಣ್ಣನವರು ಧರಿಸುವ ಬಿಳಿಬಣ್ಣದ ನಿಲುವಂಗಿ ಇಲ್ಲವೆ ಪಂಚೆಯ ಬಣ್ಣವು ಇಲ್ಲಿ ಕಾವಿ ಬಣ್ಣದಲ್ಲಿ ಚಿತ್ರಿತಗೊಂಡಿದೆ. ಪ್ರಭಾವಳಿಯು ಪ್ರಕಾಶಮಾನವಾಗಿರದೆ ಚಕ್ರದೋಪಾದಿಯಲ್ಲಿದ್ದು ಕಡುಕಂದುಬಣ್ಣವನ್ನು ಹೊಂದಿದೆ. ಬಸವಣ್ಣನವರ ನೇಪಥ್ಯವು ಕಮಾನುಗಳಿಂದ ಕೂಡಿದ್ದು, ತೆಳು ಕೆಂಪುಬಣ್ಣದಿಂದ ಕೂಡಿದೆ. ಬಸವಣ್ಣನನ್ನು ಈ ಬಗೆಯಲ್ಲಿ ನೋಡುವುದು ಒಂದು ವಿಶಿಷ್ಟ ಬಗೆಯಾಗಿದೆಯಷ್ಟೇ ಅಲ್ಲದೆ ಅರ್ಥಪೂರ್ಣವೂ ಆಗಿದೆ. ಬಹುತೇಕವಾಗಿ ಬುದ್ಧ ಮತ್ತು ಬಸವರ ಸಂದೇಶಗಳು ಒಂದೇ ಆಗಿವೆ. ಆದರೆ ಇಲ್ಲಿ ಬಸವಣ್ಣನ ಮುಖರಚನೆಗೆ ನೀಡಿದ ಪ್ರಾಶಸ್ತ್ಯವನ್ನು ಕಲಾವಿದ ಉಳಿದೆಡೆಗೂ ನೀಡಿದ್ದರೆ ಹಾಗೂ ಅನಗತ್ಯವಾಗಿದ್ದ ಕಮಾನು ರಚಿಸದೇ ಇದ್ದಿದ್ದರೆ, ಚಿತ್ರ ಇನ್ನೂ ಮೌಲಿಕವಾಗಿರುವಂಥದ್ದು ಆಗುತ್ತಿತ್ತು.

೫.೧.೭. ಬಸವಣ್ಣನವರ ಅರ್ಧ ಭಾವಚಿತ್ರ

ಇದೊಂದು ತುಂಬಾ ಹತ್ತಿರದಿಂದ ನೋಡಿದ ನೋಟದಂತಿರುವ ತುಂಬಾ ರಿಯಲಿಸ್ಟಿಕ್ ಆಗಿರುವ ಭಾವಚಿತ್ರವಾಗಿದೆ. ಇಲ್ಲಿ ಬಸವಣ್ಣನವರ ಭಾವಚಿತ್ರವು ಕಾಲ್ಪನಿಕವೆಂದೆನಿಸದೆ ಈಗಾಗಲೇ ಇರುವ ಒಬ್ಬ ವ್ಯಕ್ತಿಗೆ ಬಸವಣ್ಣನವರ ವೇಷ ತೊಡಿಸಿದಂತೆ ಕಾಣುತ್ತದೆ. ಕಡುಹಸಿರು ಬಣ್ಣದ ಭಿತ್ತಿಯಿಂದ ರಚಿಸಿದ ಬಸವಣ್ಣನವರ ಪ್ರಸ್ತುತ ಕಲಾಕೃತಿಯಲ್ಲಿ ಬಸವಣ್ಣನನ್ನು ಓರೆಮುಖವಾಗಿ ನೋಡುತ್ತಿರುವಂತೆ ಚಿತ್ರಿಸಲಾಗಿದೆ. ದೇಹವರ್ಣವು ಪ್ರಕಾಶಮಾನವಾಗಿರುವುದರಿಂದ ಹಣೆಯಲ್ಲಿ ಧರಿಸಿದ ವಿಭೂತಿ ಎದ್ದುತೋರುವುದಿಲ್ಲ. ತಿದ್ದಿತೀಡಿದಂತಿರುವ ಹುಬ್ಬುಗಳು, ಆಕರ್ಷಕವಾಗಿ ಕಾಣುವ ಕಣ್ಣುಗಳ ಹೊಳಪು ಚಿತ್ರಕ್ಕೆ ಮೆರುಗು ನೀಡುತ್ತವೆ. ಮೂಗು ಗಿಣಿಮೂಗನ್ನು ನೆನಪಿಸುವಂತಿದೆ. ಗದ್ದ, ಗದ್ದದ ಕೆಳಗೆ ಬಳಸಲಾದ ಕಡುವರ್ಣದಿಂದ ರೂಪಿಸಲಾದ ನೆಳಲು-ಬೆಳಕಿನ ಸಂಯೋಜನೆ, ಉತ್ತಮವಾಗಿವೆ. ದಟ್ಟವಾದ ಕಪ್ಪುಬಣ್ಣದ ಕೂದಲುಗಳು ತಲೆಯ ಹಿಂದೆ ಇಳಿಯಬಿದ್ದಿರುವುದು, ಕಿವಿಯ ಪಕ್ಕದಲ್ಲಿ ಕಿರೀಟದಿಂದ ಹೊರಚಾಚಿರುವುದನ್ನು ಗಮನಿಸಬಹುದು.

ಕುತ್ತಿಗೆಯವರೆಗೆ ಧರಿಸಿದ ಶುಭ್ರ ಬಿಳಿಯಬಣ್ಣದ, ಬಂಗಾರದ ಜರಿಯಿಂದ ಅಲಂಕೃತಗೊಂಡ ನಿಲುವಂಗಿ, ಅದರ ಮೇಲೆ ಧರಿಸಿದ ಮೇಲುವಸ್ತ್ರ ಕೆಂಪುಬಣ್ಣದ್ದಾಗಿದ್ದು ಅಲಂಕೃತಗೊಂಡಿರುವುದರಿಂದ ಚಿತ್ರದ ಆಕರ್ಷಣೆ ಮತ್ತೂ ಹೆಚ್ಚಾಗಲು ಕಾರಣವಾಗಿದೆ. ಕೊರಳಿನಲ್ಲಿ ಧರಿಸಿದ ಕೆಂಪುವಸ್ತ್ರದಲ್ಲಿರುವ ಇಷ್ಟಲಿಂಗದ ಗಂಟು, ಮತ್ತು ವಸ್ತ್ರದ ನಿರಿಗೆಗಳು ಸ್ಪಷ್ಟವಾಗಿ ಗುರುತಿಸುವಂತಿವೆ. ಕೊರಳಿನಲ್ಲಿ ಧರಿಸಿದ ಒಂದು ಎಳೆಯ ರುದ್ರಾಕ್ಷಿಯ ಸರ, ಜೊತೆಗೆ ಎರಡು ಎಳೆಗಳ ಹೊಳೆಯುವ ಮುತ್ತಿನ ಹಾರವು ಚಿತ್ರದಲ್ಲಿ ಪ್ರಮುಖ ಆಕರ್ಷಣೆಗಳಾಗಿವೆ. ಮುತ್ತಿನ ಹಾರದಲ್ಲಿರುವ ಮುತ್ತುಗಳನ್ನು ನೈಜವೆನ್ನುವಂತೆ ಚಿತ್ರಿಸಿರುವುದು ಕಲಾವಿದನ ಕುಸುರಿಕೆಲಸ ಮತ್ತು ಏಕಾಗ್ರತೆಯಿಂದ ಕೂಡಿದ ಕಾರ್ಯಕ್ಷಮತೆಗೆ ಸಾಕ್ಷಿಯಾಗಿವೆ. ಮುಖವು ಓರೆಯಾಗಿರುವುದರಿಂದ ಎಡಗಿವಿಯಲ್ಲಿ ಧರಿಸಿದ ಮುತ್ತು ಮತ್ತು ವಜ್ರಖಚಿತವಾದ ಬೆಂಡವೋಲೆಗಳನ್ನು ಗಮನಿಸಿದರೆ ಅಂದು ಪುರುಷರು ಬೆಂಡವೋಲೆಗಳನ್ನು ಧರಿಸುತ್ತಿದ್ದರೆಂಬುದನ್ನು ಕಲಾವಿದ ದಾಖಲಿಸುವ ಪ್ರಯತ್ನ ಮಾಡಿದ್ದಾನೆ. ಮುತ್ತು, ರತ್ನ, ಹವಳಗಳಿಂದ ಅಲಂಕೃತಗೊಂಡ ಬಂಗಾರದ ಕಿರೀಟವನ್ನು ಚಿತ್ರಿಸುವಲ್ಲಿ ಕಲಾವಿದನ ಪರಿಶ್ರಮ ಎದ್ದುಕಾಣುತ್ತದೆ.

೫.೧.೮. ವಚನ ಅಧ್ಯಯನದಲ್ಲಿ ನಿರತ ಬಸವಣ್ಣನವರು

ಜಲವರ್ಣ ಮತ್ತು ನೈಜಚಿತ್ರ ಪರಂಪರೆಗೆ ಸೇರಿದ ಬಸವಣ್ಣನವರ ಈ ಚಿತ್ರವನ್ನು ಕಲಾವಿದ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಭಿತ್ತಿಯಲ್ಲಿ ಕೂಡಲಸಂಗಮದ ಐಕ್ಯಮಂಟಪವನ್ನು ಸಾಂಕೇತಿಕವಾಗಿ ಮೂಡಿಸಿದ್ದು, ಹಿನ್ನೆಲೆಗೆ ಲಘುಹಳದಿ ಬಣ್ಣದ ಲೇಪನವಿದೆ. ಚಿನ್ನದ ಅಲಂಕೃತ ಪಟ್ಟಿಯೊಂದಿಗೆ ಹಾಸಿರುವ ಕಡುನೀಲಿ ಬಣ್ಣದ ದಪ್ಪನೆಯ ಹಾಸಿನ ಮೇಲೆ ಬಸವಣ್ಣನವರನ್ನು ತಾಳೆಕಟ್ಟುಗಳನ್ನು ಕೈಯಲ್ಲಿ ಹಿಡಿದು ಅಧ್ಯಯನದಲ್ಲಿ ತೊಡಗಿರುವಂತೆ ಚಿತ್ರಿಸಲಾಗಿದೆ. ಬಿಳಿ ಪಂಚೆಯುಟ್ಟು, ತೆಳುನೇರಿಳೆ ಬಣ್ಣದ ಮೇಲುವಸ್ತ್ರದೊಂದಿಗೆ ಬಸವಣ್ಣನವರು ಹಣೆಯಲ್ಲಿ ಢಾಳಾಗಿ ಕಾಣುವಂತಹ ವಿಭೂತಿ, ಭ್ರೂಮಧ್ಯದಲ್ಲಿ ಭಸ್ಮದ ಬೊಟ್ಟು, ದಪ್ಪ ಮೀಸೆ, ಚಿಂತನೆಯಲ್ಲಿ ತೊಡಗಿರುವಂತಹ ಹೊಳೆಯುವ ಕಣ್ಣುಗಳನ್ನು ಹೊಂದಿರುವ ಈ ಚಿತ್ರದಲ್ಲಿ ಕಲಾವಿದನ ಕುಸುರಿಕೆಲಸ ಮೆಚ್ಚುವಂತಿದೆ. ಉದ್ದವಾದ ಬಲಕಿವಿಯು ನೋಡುಗರಿಗೆ ಕಾಣುವಂತೆ, ಎಡಗಿವಿಯು ಕಾಣದಿದ್ದರೂ ಅದರ ಕೆಳಗೆ ನೇತಾಡುತ್ತಿರುವ ರುದ್ರಾಕ್ಷಿಯ ಓಲೆ ಗಮನಸೆಳೆಯುತ್ತದೆ. ಕೊರಳು, ಕೈಗಳಲ್ಲಿ ಧರಿಸಿದ ರುದ್ರಾಕ್ಷಿ ಮಾಲೆಗಳಲ್ಲಿರುವ ರುದ್ರಾಕ್ಷಿಗಳು ತುಂಬು ಕಾಂತಿಯಿಂದ ಹೊಳೆಯುತ್ತಿರುವಂತೆ ಕಲಾವಿದ ರಚಿಸಿರುವುದು ಉತ್ತಮವಾದ ಅಂಶವಾಗಿದೆ. ಬಸವಣ್ಣನವರು ಒರಗಿಕೊಂಡು ಕುಳಿತ ನೀಲಿಬಣ್ಣದ ಅಲಂಕೃತ ದಿಂಬು ಆಕರ್ಷಕವಾಗಿದೆ. ಕೈಯಲ್ಲಿ ವಚನಗಳ ಕಟ್ಟುಗಳನ್ನು ತೆರೆದು ಓದುತ್ತಿರುವುದನ್ನು ನೋಡಿದರೆ, ಕಲಾವಿದ ಅಧ್ಯಯನನಿರತ ಬಸವಣ್ಣನವರನ್ನು ಪರಿಚಯಿಸುವ ಉದ್ದೇಶವನ್ನು ಹೊಂದಿರುವುದು ತಿಳಿಯುತ್ತದೆ. ಚಿತ್ರದ ಭಾವ, ಭಂಗಿ, ಉದ್ದೇಶಗಳು ಇಲ್ಲಿ ಸಮರ್ಪಕವಾಗಿ ಈಡೇರಿವೆ ಎನ್ನಬಹುದು.

೫.೧.೯. ವಚನ ಬೋಧನೆ-ಅರ್ಧ ಭಾವಚಿತ್ರ

ಈ ಚಿತ್ರವು ಜಲವರ್ಣ ಮಾಧ್ಯಮಕ್ಕೆ ಸೇರಿದುದಾಗಿದೆ. ಬಸವಣ್ಣನವರು ಕೈಯಲ್ಲಿ ವಚನಗ್ರಂಥದ ಕಟ್ಟನ್ನು ಹಿಡಿದು ಬಲಗೈಯ ತೋರುಬೆರಳನ್ನೆತ್ತಿ ಉಪದೇಶ ಮಾಡುವ ಭಂಗಿಯನ್ನು ಇಲ್ಲಿ ಕಾಣುತ್ತೇವೆ.

ಕೆಂಪು ಮತ್ತು ಹಳದಿ ಬಣ್ಣದ ಮಿರುಗುವ ಅಂಚಿನಿಂದ ಕೂಡಿರುವ ಬಿಳಿಬಣ್ಣದ ನಿಲುವಂಗಿ, ಹಣೆಯಲ್ಲಿ ವಿಭೂತಿ, ಕೊರಳಿನಲ್ಲಿ ಇಷ್ಟಲಿಂಗ, ಅಲಂಕೃತಗೊಂಡ ರುದ್ರಾಕ್ಷಿ ಮಾಲೆ, ಕಿವಿಯಲ್ಲಿ ರುದ್ರಾಕ್ಷಿಯ ಓಲೆಗಳನ್ನು ಹೊಂದಿರುವ ಬಸವಣ್ಣನವರ ಈ ಭಂಗಿ ಆಕರ್ಷಕವಾಗಿದೆ. ಮುಖದಲ್ಲಿ ಅಗಲವಾದ, ಕಂದುಬಣ್ಣದ ಹೊಳೆಯುವ ಕಣ್ಣುಗಳು, ನೀಳವಾದ ಮೂಗು, ತೆಳುವಾದ ಮೀಸೆ, ತಲೆಯಲ್ಲಿ ಮಟ್ಟಸವಾದ ಕಪ್ಪುಕೂದಲಿನಿಂದ ಕೂಡಿದ ಪ್ರಸ್ತುತ ಚಿತ್ರವು ಬಸವಣ್ಣನವರ ಆಕರ್ಷಕ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿದೆ. ಎದೆಯ ಕೆಳಗೆ ನದಿಯಲ್ಲಿರುವ ಕೂಡಲಸಂಗಮದ ಮಂಟಪ, ಸಂಗಮನಾಥನ ದೇವಾಲಯ ಮತ್ತು ಅದರ ಸುತ್ತಲೂ ಬಿಳಿವರ್ಣದಿಂದ ಕೂಡಿರುವ ಬೆಳಕು ಸಮಾಜಕ್ಕೆ ಬಸವಣ್ಣನವರು ನೀಡಿದ ಜ್ಞಾನದ ಕೊಡುಗೆಯಾಗಿರಬೇಕೆನ್ನಿಸುತ್ತದೆ. ಕೂಡಲಸಂಗಮದ ಐಕ್ಯಮಂಟಪವು ನೀಲಿಬಣ್ಣದ ನೀರು ಮತ್ತು ಅದರ ಮೇಲೆ ಬಿದ್ದ ಬೆಳಕು ಇವುಗಳ ಸಂಯೋಜನೆಯಿಂದ ಚಿತ್ತಾಕರ್ಷಕವಾಗಿದೆ. ಎಡಗೈಯಲ್ಲಿ ಹಿಡಿದಿರುವ ವಚನಗಳ ಕಟ್ಟು, ಅದರ ಮೇಲೆ ಚಿತ್ರಿಸಿರುವ ರೇಖೆಗಳು ಸ್ಪಷ್ಟವಾಗಿ ಕಾಣುತ್ತಿವೆ, ಬೆರಳುಗಳನ್ನು ಚಿತ್ರಿಸುವಲ್ಲಿ ಕಲಾವಿದ ತೋರಿರುವ ವರ್ಣಪ್ರಜ್ಞೆ ಅನನ್ಯವಾಗಿದೆ.

೫.೧.೧೦. ವಚನರಚನೆ – ಪೂರ್ಣ ಭಾವಚಿತ್ರ

ಬಸವಣ್ಣನವರ ವಚನರಚನೆಯ ಕ್ರಿಯೆಗೆ ಹಗಲು–ರಾತ್ರಿಗಳ ಪರಿವೆಯೇ ಇರುತ್ತಿರಲಿಲ್ಲ. ಮಧ್ಯರಾತ್ರಿ ಮೀರಿದರೂ ಅವರು ಇನ್ನೂ ತಮ್ಮ ಮಹತ್ವದ ಕೆಲಸದಲ್ಲಿ ತೊಡಗಿಕೊಂಡೇ ಇರುತ್ತಿದ್ದರು ಎನ್ನುವ ಭಾವವನ್ನು ಮೂಡಿಸುವ ಈ ಕೃತಿ ರಾತ್ರಿಯ ಸನ್ನಿವೇಶದ ಕತ್ತಲು–ಬೆಳಕಿನ ವಿನ್ಯಾಸದಿಂದಾಗಿ ಹೆಚ್ಚು ಗಮನಸೆಳೆಯುತ್ತದೆ. ಪ್ರಸ್ತುತ ಚಿತ್ರವು ನೈಜಚಿತ್ರ ಮಾಧ್ಯಮಕ್ಕೆ ಸೇರಿದುದಾಗಿದೆ. ಕಲಾವಿದ ಇಲ್ಲಿ ಬಸವಣ್ಣನವರ ವಚನರಚನೆಯ ಕಾಯಕವನ್ನು ಕುರಿತು ಚಿತ್ರಿಸಿದ್ದಾನೆ. ಎಡಗಾಲನ್ನು ತಮ್ಮ ತೊಡೆಯ ಮೇಲಿರಿಸಿ, ತಮ್ಮ ಬಲಗೈಯಿಂದ ಕಂಠದಿಂದ ತಾಳೆಗರಿಯ ಮೇಲೆ ವಚನರಚನೆಯನ್ನು ಮಾಡುವ ಸಂದರ್ಭವಿಲ್ಲಿದೆ. ತಲೆಯನ್ನು ತುಸುಬಾಗಿಸಿ, ತನ್ಮಯತೆಯಿಂದ ವಚನಗಳನ್ನು ಬರೆಯುತ್ತಿರುವ ಭಂಗಿಯು ಆಕರ್ಷಕವಾಗಿದೆ. ಕೃತಿರಚನೆಗೆ ಹಿನ್ನೆಲೆಯಾಗಿ ಕಲಾವಿದ ಬಳಸಿದ ಹಿನ್ನೆಲೆ ಮಾಧ್ಯಮದ ವಸ್ತುಗಳು, ಅವುಗಳ ಜೋಡಣೆ, ಸಂಯೋಜನೆ ಮೂಡಿಬಂದಿವೆ. ಬಿಳಿಯ ಬಣ್ಣದ ಪಂಚೆಯನ್ನು ಪೂರ್ತಿಯಾಗಿ ಧರಿಸಿದ ಬಸವಣ್ಣನವರ ಮುಖದ ದೇಹವರ್ಣವು ಪ್ರಕಾಶಮಾನವಾಗಿದೆ. ಅಂತೆಯೇ ಅರೆಮುಚ್ಚಿದ ಕಣ್ಣುಗಳು, ನೀಳವಾದ ನಾಸಿಕ, ಧ್ಯಾನದ ಮುಖಮುದ್ರೆ, ಕೊರಳಲಲ್ಲಿ ಇಷ್ಟಲಿಂಗ, ರುದ್ರಾಕ್ಷಿ ಮಾಲೆ, ತಲೆಯ ಮೇಲೆ ಮಟ್ಟಸವಾಗಿ ಕಟ್ಟಿದ ಕಪ್ಪು ಕೂದಲು ಇವುಗಳನ್ನು ಚಿತ್ರಿಸುವಲ್ಲಿ ಕಲಾವಿದ ಯಶಸ್ವಿಯಾಗಿದ್ದಾನೆ. ಬಸವಣ್ಣನವರು ಕುಳಿತಿರುವ ದಟ್ಟ ನೀಲಿವರ್ಣದ ಮೆತ್ತನೆಯ ಹಾಸಿಗೆಯಂತೂ ವಾಸ್ತವವಾಗಿ ಇದೆಯೇನೋ ಎಂಬ ಭಾವನೆ ಮೂಡಿಸುತ್ತದೆ. ತಲೆಯ ಮೇಲೆ ವೃತ್ತಾಕಾರದ ಕಂದು ಮತ್ತು ಬಿಳಿವರ್ಣ ಮಿಶ್ರಿತ ಪ್ರಭಾವಳಿ ಹಿನ್ನೆಲೆಯಲ್ಲಿ ಮಿಶ್ರವಾಗಿ ಅಂಚುರಹಿತವಾಗಿ ಚಿತ್ರಣಗೊಳ್ಳಬೇಕಿತ್ತು. ಹಿನ್ನೆಲೆಯ ಎಡಬದಿಯಲ್ಲಿ ಕೂಡಲಸಂಗಮದ ಐಕ್ಯಮಂಟಪ, ಬಲಬದಿಯಲ್ಲಿ ಪ್ರಕಾಶಮಾನವಾಗಿ ಬೆಳಗುತ್ತಿರುವ ನಿಲ್ಲಿಸಿದ ಜ್ಯೋತಿಕಂಭ, ಅಲಂಕೃತಗೊಂಡ ಗೋಡೆಗಳು, ಎತ್ತರದ ಟೀಪಾಯಿಯಂತಹ ವಸ್ತುವಿನ ಮೇಲೆ ಹಾಗೂ ಎಡ ಮತ್ತು ಬದಿಯಲ್ಲಿ ಒಂದರ ಮೇಲೊಂದು ಅಚ್ಚುಕಟ್ಟಾಗಿ ಪೇರಿಸಿಟ್ಟ ವಚನದ ಕಟ್ಟುಗಳನ್ನು ಅತ್ಯಂತ ಸೊಗಸಾಗಿ

ಮೂಡಿಸಲಾಗಿದೆ. ವಚನಕಟ್ಟುಗಳ ಮೇಲೆ ದೀಪದ ಬೆಳಕು ಎಲ್ಲೆಲ್ಲಿ ಎಷ್ಟೆಷ್ಟು ಪ್ರಕಾಶಮಾನವಾಗಿ ಬೀಳಬೇಕೋ ಅಷ್ಟು ಮಾತ್ರವನ್ನು ಬಿಟ್ಟು ಉಳಿದೆಡೆ ನೆರಳು ಬಿದ್ದಂತೆ ಸಂಯೋಜಿಸಿರುವುದು ಅನನ್ಯವಾಗಿದೆ.

೫.೧.೧೧. ಅಶ್ವಾರೂಢ ಬಸವಣ್ಣನವರ ಪೂರ್ಣ ಭಾವಚಿತ್ರ –೧

ತುಂಬ ಪ್ರಸಿದ್ಧವಾದ ಬಸವಣ್ಣನವರ ಅಶ್ವಾರೂಢ ಭಂಗಿಗಳಲ್ಲಿ ಒಂದಾದ ಚಿತ್ರವಿದಾಗಿದೆ. ದಟ್ಟವರ್ಣಗಳ ಬಳಕೆಯಿಂದ ಕೂಡಿದ ಪ್ರಸ್ತುತ ಕಲಾಕೃತಿಯು ಜಲವರ್ಣಕ್ಕೆ ಸೇರಿದುದಾಗಿದೆ. ಅಶ್ವದ ಮೇಲೆ ಕುಳಿತ ಬಸವಣ್ಣನವರ ಪೂರ್ಣ ಆಕೃತಿಯ ಸುತ್ತ ನೀಲಿಮಿಶ್ರಿತ ಬಿಳಿಬಣ್ಣದ ಪ್ರಭಾವಳಿಯನ್ನು ನಿರ್ಮಿಸಲಾಗಿದೆ. ಚಿತ್ರದ ಸೌಂದರ್ಯಕ್ಕೆ ಇದೂ ಒಂದು ಕಾರಣವಾಗಿದೆ. ತುಂಬ ದಟ್ಟವಾದ ಬಣ್ಣಗಳ ಸಂಯೋಜನೆಯಿಲ್ಲಿದೆ. ಹೊಳೆಯುವ ಪೀತಾಂಬರದ ಪಂಚೆ, ಕೆಂಪುವರ್ಣದ ಮೇಲಂಗಿ, ಮೇಲು ಹೊದಿಕೆಗಳು ಎದ್ದುತೋರುತ್ತವೆ. ಬಿಳಿಯ ಜಾತ್ಯಶ್ವದ ಮೇಲೆ ಕುಳಿತ ಬಸವಣ್ಣ ಆಕರ್ಷಕರಾಗಿ ಕಾಣುವಂತೆ ಕಲಾವಿದ ಮಾಡಿರುವ ಪ್ರಯತ್ನ ಇಲ್ಲಿ ಯಶಸ್ವಿಯಾಗಿದೆ.

ಸುಂದರವಾದ ದುಂಡುಮುಖ, ಕಪ್ಪುವರ್ಣದಿಂದ ಚಿತ್ರಿತವಾದ ಕಣ್ಣು, ಹುಬ್ಬು, ಮೀಸೆಗಳು, ತಲೆಯ ಮೇಲೆ ಧರಿಸಿದ ಹೊಳೆಯುವ ಹೊಂಬಣ್ಣದ ಕಿರೀಟ, ಅದರಲ್ಲಿ ಹಸಿರು ಮತ್ತು ಕೆಂಪು ಬಣ್ಣದ ಹರಳುಗಳನ್ನು ಸಂಯೋಜಿಸಲಾಗಿದೆ. ಬಿಳಿಯ ಕುದುರೆಯು ಸಹ ಬಂಗಾರದ ಆಭರಣಗಳಿಂದ ಅಲಂಕೃತಗೊಂಡಿದೆ. ತುಸು ತಲೆಯನ್ನು ಬಾಗಿಸಿದ ಕುದುರೆಯು ತನ್ನ ಬಲಗಾಲನ್ನು ಸ್ವಲ್ಪ ಮಡಚಿ ಮುಂದೆ ಹೆಜ್ಜೆಯನ್ನು ಇಡುವಂತೆ ತೋರುತ್ತದೆ. ಕುದುರೆಯ ಕಾಲಿನ ಗೊರಸುಗಳು, ಕಿವಿಗಳ ಮಧ್ಯೆ ಬೆನ್ನಿನವರೆಗಿದ್ದ ಕೂದಲಿನ ಗುಚ್ಛವು ಇದು ಉತ್ತಮ ಜಾತಿಯ ಕುದುರೆ ಎಂಬುದನ್ನು ಸಾಬೀತುಪಡಿಸುವಂತಿದೆ. ಎಡಗೈಯಲ್ಲಿ ಲಗಾಮು, ಸೊಂಟದಿಂದ ಇಳಿಯಬಿದ್ದಿರುವಂತೆ ಕಾಣುವ ಖಡ್ಗ, ಕುದುರೆಯ ಮೇಲೆ ಹಾಸಿರುವ ಹೊಳೆಯುವ ಬಣ್ಣದ ಜೀನುಗಳು ತಮ್ಮ ಅಸ್ತಿತ್ವವನ್ನು ಸಹಜವಾಗಿ ಸಾರುವಂತಿವೆ, ವಾಣಿಜ್ಯ ಉದ್ದೇಶದ ಹಿನ್ನೆಲೆಯಲ್ಲಿ ಚಿತ್ರ ರಚಿತವಾಗಿದೆ.

ಅಶ್ವಾರೂಢ –ಪೂರ್ಣ ಭಾವಚಿತ್ರ–೨

ಅಶ್ವದ ಮೇಲೆ ಬಸವಣ್ಣನವರು ಬಲಮುಖವಾಗಿ ಆದೇಶ ಮಾಡುವ ಭಂಗಿಯಲ್ಲಿ ಕುಳಿತಂತೆ ಪ್ರಸ್ತುತ ಚಿತ್ರವನ್ನು ರಚಿಸಲಾಗಿದೆ. ಜಲವರ್ಣ ಮಾಧ್ಯಮಕ್ಕೆ ಸೇರಿದ ಈ ಕಲಾಕೃತಿಯಲ್ಲಿ ಗಾಢವಾದ ಬಿಳಿ, ಕೆಂಪು ಮತ್ತು ಕಂದುವರ್ಣಗಳ ಬಳಕೆಯಿದೆ. ಹೊಳೆಯುವ ಬಂಗಾರದ ಕಿರೀಟವನ್ನು ಧರಿಸಿದ ಬಸವಣ್ಣನವರು ಕೊರಳಲ್ಲಿ ಕೆಂಪುವಸ್ತ್ರದಿಂದ ಕಟ್ಟಿದ ಇಷ್ಟಲಿಂಗ, ರುದ್ರಾಕ್ಷಿಮಾಲೆ, ಮುತ್ತಿನ ಮಾಲೆಗಳನ್ನು ಧರಿಸಿದ್ದು ನೋಡುಗರಿಗೆ ಕಳಾಯುಕ್ತನೆನಿಸಿದ್ದಾನೆ. ಬಿಳಿಯ ಕುದುರೆಯ ಮೇಲೆ ಕುಳಿತ ಭಂಗಿಯು ಯಾರಿಗೋ ಹಿತೋಪದೇಶವನ್ನು ನೀಡುತ್ತಿರುವಂತೆ ತೋರುತ್ತದೆ. ಕುದುರೆಯ ಮೇಲೆ ನೇರವಾಗಿ ಕುಳಿತ ಬಸವಣ್ಣನವರ ಭಂಗಿಯೂ ಸಾಂಕೇತಿಕವಾಗಿ ನೇರ ನಡೆ ನುಡಿಯ ವ್ಯಕ್ತಿತ್ವದವನೆಂಬುದಾಗಿ ಗುರುತಿಸಬಹುದಾಗಿದೆ. ತಾನು ಕುಳಿತ ಕುದುರೆಯು ಕೆಂಪು, ಹಳದಿ, ಮತ್ತು ಕಂದು ಬಣ್ಣಗಳ ಅಲಂಕೃತ

ರೇಷ್ಮೆ ಬಟ್ಟೆಯ ಪಟ್ಟಿಕೆಗಳನ್ನು ಧರಿಸಿದೆ. ಬಿಳಿಬಣ್ಣದ ಕುದುರೆಗೆ ಇಂಥ ತ್ರಿವರ್ಣಪಟ್ಟಿಕೆಗಳು, ಮತ್ತು ಕಂದುಮಿಶ್ರಿತ ಕಪ್ಪುಬಣ್ಣದ ಬಾಲ, ಗೊರಸುಗಳು ಅರ್ಥಪೂರ್ಣವಾಗಿವೆ. ಕುದುರೆಯ ಮುಖವು ಅತ್ಯಂತ ಸ್ಪಷ್ಟವಾಗಿದ್ದು, ಉತ್ತಮ ಜಾತಿಯ ಕುದುರೆಯಂತೆ ತೋರುತ್ತಿದೆ. ಹಣೆಯಲ್ಲಿ ಪದಕವನ್ನು ಧರಿಸಿದ್ದು, ಅದು ನಿಂತ ಭಂಗಿ, ಮತ್ತು ತನ್ನ ಬಲಗಾಲನ್ನು ಮೇಲೆತ್ತಿ ಚಲಿಸುತ್ತಿರುವ ರೀತಿಯನ್ನು ಕಲಾವಿದ ಅತ್ಯುತ್ತಮವಾಗಿ ಚಿತ್ರಿಸಿದ್ದಾನೆ. ಚಿತ್ರದ ಭಿತ್ತಿಯಲ್ಲಿ ನೆಲದ ಕೆಂಪುಬಣ್ಣದ ರಸ್ತೆ, ಮನೆಗಳು, ಪುಟ್ಟ ಬೀದಿಯಲ್ಲಿ ಕಾಯಕದಲ್ಲಿ ನಿರತರಾದ ಶರಣರು ಮುಂತಾದ ಅಂಶಗಳು ಸೊಗಸಾಗಿ ಮೂಡಿಬಂದಿವೆ.

ಅಶ್ವಾರೂಢ –ಪೂರ್ಣ ಭಾವಚಿತ್ರ–೩

ಅಶ್ವದ ಮೇಲೆ ಬಸವಣ್ಣನವರು ಎಡಮುಖವಾಗಿ ಆದೇಶ ಮಾಡುವ ಭಂಗಿಯಲ್ಲಿ ಕುಳಿತಂತೆ ಪ್ರಸ್ತುತ ಚಿತ್ರವನ್ನು ರಚಿಸಲಾಗಿದೆ. ಜಲವರ್ಣ ಮಾಧ್ಯಮಕ್ಕೆ ಸೇರಿದ ಈ ಕಲಾಕೃತಿಯಲ್ಲಿ ಗಾಢವಾದ ಬಿಳಿ, ನೀಲಿ ಮತ್ತು ಬಿಳಿವರ್ಣಗಳ ಬಳಕೆಯಿದೆ. ಹೊಳೆಯುವ ಬಂಗಾರದ ಕಿರೀಟವನ್ನು ಧರಿಸಿದ ಬಸವಣ್ಣನವರ ಕೊರಳಲ್ಲಿ ಹಳದಿವಸ್ತ್ರದಿಂದ ಕಟ್ಟಿದ ಇಷ್ಟಲಿಂಗ, ಮುತ್ತಿನ ಸರಗಳಿದ್ದು ಧರಿಸಿದ್ದು ನೋಡುಗರ ಗಮನಸೆಳೆಯುತ್ತವೆ. ಹೊಳಪಿನ ಬಿಳಿಯ ಕುದುರೆಯ ಮೇಲೆ ಕುಳಿತ ಭಂಗಿಯು ಪ್ರಯಾಣ ಹೊರಟಿರುವಂತೆ ತೋರುವುದಾಗಿದೆ. ಕುದುರೆಯ ಮೇಲೆ ನೇರವಾಗಿ ಕುಳಿತ ಬಸವಣ್ಣ ಮುಂದಿನ ದಾರಿಯತ್ತ ದೃಷ್ಟಿ ನೆಟ್ಟಿದ್ದಾರೆನ್ನುವುದು ಸ್ಪಷ್ಟವಾಗಿದೆ. ಬಿಳಿಬಣ್ಣದ ಕುದುರೆಯನ್ನು ಗೌರವರ್ಣದ ಗೊರಸನ್ನು ಹೊಂದಿರುವಂತೆ ಚಿತ್ರಿಸಲಾಗಿದೆ. ಸೌಮ್ಯಮುಖದ ಬಸವಣ್ಣನವರು ಗಹನವಾದ ಚಿಂತನೆಯನ್ನು ನಡೆಸುತ್ತಿರುವಂತೆ ಕಾಣುತ್ತಿದ್ದಾರೆ. ಕುದುರೆಯು ಅಡವಿಯ ಮಾರ್ಗದಲ್ಲಿ ಸಂಚರಿಸುತ್ತಿರುವಂತೆಯೂ, ಭಿತ್ತಿಯಲ್ಲಿ ಮಟ್ಟಸವಾದ ನೀಲಿಬಣ್ಣದಿಂದ ಕೂಡಿದ ಗುಡ್ಡಗಳು, ಶುಭ್ರವಾದ ಬಿಳಿಯ ಮೋಡಗಳು, ಪೊದೆಗಳನ್ನು ಚಿತ್ರಿಸಲಾಗಿದ್ದು ಬಹಳ ಹಳೆಯ ಮುದ್ರಿತ ಪ್ರತಿಯಿದು.

೫.೧.೧೨. ವಚನ ಅಧ್ಯಯನ – ಪೂರ್ಣ ಭಾವಚಿತ್ರ

ಬಸವಣ್ಣನವರು ಕೂಡಲಸಂಗಮದಲ್ಲಿ ವಚನರಚನೆಯ ಕಾಯಕದಲ್ಲಿ ತೊಡಗಿರುವ ಸಂದರ್ಭದ ಚಿತ್ರಣವನ್ನು ಇಲ್ಲಿ ಕಲಾವಿದ ಮೂಡಿಸಿದ್ದಾನೆ. ಬಲಬದಿಗೆ ತುಸು ಬಾಗಿದ ಬೋಳುತಲೆಯನ್ನು ಹೊಂದಿರುವ ಬಸವಣ್ಣನವರ ಮುಖವು ಇಲ್ಲಿ ಮಂದಸ್ಮಿತ ಭಾವನೆಯನ್ನು ಹೊಂದಿದೆ. ಹಣೆಯಲ್ಲಿ ಧರಿಸಿದ ವಿಭೂತಿಯ ಪಟ್ಟಿಕೆಗಳು ದೇಹವರ್ಣದ ಪ್ರಕಾಶದಿಂದ ಅಷ್ಟೊಂದು ಎದ್ದುಕಾಣುವುದಿಲ್ಲ. ಕೊರಳಿನಲ್ಲಿ ಮತ್ತು ತೋಳಿನಲ್ಲಿ ಧರಿಸಿದ ರುದ್ರಾಕ್ಷಿಯ ಮಾಲೆಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಅವುಗಳ ಗಾತ್ರ ತುಸು ಹಿರಿದಾಗಿರುವುದು ಅದಕ್ಕೆ ಕಾರಣವಿರಬಹುದು. ಕೊರಳಿನಲ್ಲಿ ಇಷ್ಟಲಿಂಗವನ್ನು ಸುತ್ತಿದ ಬಟ್ಟೆಯ ಬಣ್ಣ ಮತ್ತು ದೇಹದ ಪೂರ್ತಿ ಧರಿಸಿದ ಪಂಚೆ ಮತ್ತು ಮೇಲುಹೊದಿಕೆಯ ದಟ್ಟಕಾವಿ ಬಣ್ಣವು ಒಂದೇ ಆಗಿದೆ. ಬಲಗೈಯಲ್ಲಿ ವಚನದ ಕಟ್ಟನ್ನು ಹಿಡಿದು ಅಧ್ಯಯನದಲ್ಲಿ ನಿರತರಾದಂತೆ ಬಸವಣ್ಣ ಇಲ್ಲಿ ಕಂಡುಬರುತ್ತಾರೆ. ಅಲಂಕೃತಗೊಂಡ ಕಟ್ಟೆಗೆಯ ಮಣೆಯ ಮೇಲೆ ವಚನದ ಕಟ್ಟುಗಳು ತೆರೆದಿದ್ದು, ಅವುಗಳಲ್ಲಿ ಒಂದನ್ನು ಕೈಯಲ್ಲಿ ಹಿಡಿದಿರುವಂತಿದೆ. ಎಡಬದಿಯಲ್ಲಿ ಕೆಲವು ಕಟ್ಟುಗಳು ಹಾಗೆಯೇ ಇವೆ. ಚಿತ್ರದ ಹಿನ್ನೆಲೆಯು ಕೂಡಲಸಂಗಮದ ಐಕ್ಯಮಂಟಪದ

ಪರಿಕಲ್ಪನೆಯನ್ನು ಪ್ರಕಟಿಸುತ್ತಿದೆ. ಬಹುಸುಂದರವಾಗಿ ಮೂಡಿಬಂದ ಮಂಟಪವು ದಟ್ಟ ಮತ್ತು ತೆಳುನೀಲಿಗಳ ಮತ್ತು ಬಿಳಿ ಮತ್ತು ಹಳದಿ ಬಣ್ಣಗಳ ಅಪೂರ್ವ ಸಂಯೋಜನೆಯೊಂದಿಗೆ ಕೂಡಿದೆ. ಮಂಟಪದ ಕಂಬಗಳು, ಮಂಟಪದ ಬಾಗುವಿಕೆ, ಮಂಟಪದ ಸುತ್ತ ನಿಂತಿರುವ ನೀರು, ಅಂತೆಯೇ ದೂರದಲ್ಲಿ ಕಂಡುಬರುವ ತೆಂಗಿನ ಮರಗಳು ಅಸ್ಪಷ್ಟವಾಗಿದ್ದರೂ ಕೃತಿಯ ತಾಂತ್ರಿಕ ಉದ್ದೇಶಕ್ಕೆ ಅನುಗುಣವಾಗಿವುದನ್ನು ಕಾಣುತ್ತೇವೆ. ಕಲಾವಿದ ಇಲ್ಲಿ ಎಲ್ಲ ಸಂಗತಿಗಳನ್ನು ತುಂಬ ನವುರಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾನೆ.

೫.೧.೧೩. ಲಿಂಗದೊಳಗೆ ಮೂಡಿರುವ ಬಸವಣ್ಣನವರ ಅರ್ಧ ಭಾವಚಿತ್ರ

ಈ ಚಿತ್ರದಲ್ಲಿ ಬಸವಣ್ಣನವರ ಮುಖಚಿತ್ರವನ್ನು ಶಿವಲಿಂಗದಲ್ಲಿ ಒಡಮೂಡಿದಂತೆ ಕಲಾವಿದ ಕಲ್ಪಿಸಿ ಚಿತ್ರಿಸಿದ್ದಾನೆ. ತೈಲವರ್ಣದಲ್ಲಿ ರಚಿತವಾದ ಈ ಚಿತ್ರದಲ್ಲಿ ನಸು ಕಂದು, ತೆಳುಗೆಂಪು, ಹಳದಿಮಿಶ್ರಿತ ಕೆಂಪು ಬಣ್ಣಗಳೆಲ್ಲವೂ ಬಿಸಿವರ್ಣಗಳಾಗಿವೆ. ಶಿವಲಿಂಗದಲ್ಲಿ ಒಡಮೂಡಿದ ಬಸವಣ್ಣನವರ ಮಟ್ಟಸವಾದ ತಲೆಯ ಭಾಗವನ್ನು ಮಾತ್ರ ಇಲ್ಲಿ ಕಾಣುತ್ತೇವೆ. ಮುಖದ ಎಲ್ಲ ಅವಯವಗಳನ್ನು ಅಳತೆ ಮಾಡಿಟ್ಟಂತೆ ರಚಿಸಲಾಗಿದೆ. ಬಂಗಾರದ ವರ್ಣದ ಅತ್ಯಂತ ಕುಸುರಿ ಕಲೆಗಳಿಂದ ನಿರ್ಮಿತವಾಗಿರುವ ಕಿರೀಟ, ಅದರಲ್ಲಿರುವ ವಿವಿಧ ಹರಳು, ಮಣಿಗಳು, ಇಳಿಯಬಿದ್ದಿರುವ ಮುತ್ತಿನ ಸರವನ್ನು ಧರಿಸಿರುವ ಬಸವಣ್ಣನವರ ಮುಖವನ್ನು ಕಲಾವಿದ ತುಂಬ ಸುಂದರವಾಗಿ ಚಿತ್ರಿಸಿದ್ದಾನೆ. ಕಡುಗೆಂಪು ಬಣ್ಣದ ದೇಹವರ್ಣ, ಪೂರ್ತಿ ಕಪ್ಪುಬಣ್ಣವಲ್ಲದ ನಸುಗಪ್ಪು ಬಣ್ಣದ ಹುಬ್ಬುಗಳು, ಅದೇ ಬಣ್ಣದ ಕಣ್ಣುಗಳು, ಮೀಸೆಗಳು ಒಪ್ಪವಾಗಿವೆ. ಪ್ರಸ್ತುತ ಚಿತ್ರದಲ್ಲಿ ಹಣೆಯಲ್ಲಿ ವಿಭೂತಿ, ಎರಡು ಹುಬ್ಬುಗಳ ಮಧ್ಯೆ ವಿಭೂತಿಯ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿ, ಇಷ್ಟಲಿಂಗದ ಗಂಟುಗಳಿಲ್ಲದ ಬಸವಣ್ಣನವರ ಮುಖದ ಚಿತ್ರಣವನ್ನು ಕಾಣುತ್ತೇವೆ. ಕಲಾವಿದ ಈ ಕಲಾಕೃತಿಯಲ್ಲಿ ಉದ್ದೇಶಪೂರ್ವಕವಾಗಿ ಇವುಗಳನ್ನು ಬಿಟ್ಟಿರುವ ಸಾಧ್ಯತೆಯಿದೆ. ಉಳಿದೆಲ್ಲ ಕಲಾವಿದರ ಬಸವಣ್ಣನವರ ಚಿತ್ರಣಕ್ಕಿಂತ ಭಿನ್ನವಾದ ಚಿತ್ರಣವನ್ನು ಕೊಡುವುದು ಆತನ ಆಶಯವಾಗಿರಬಹುದು. ಶಿವಲಿಂಗವನ್ನು ಮತ್ತು ಚಿತ್ರದ ಭಿತ್ತಿಯ ಪ್ರಭಾಕಿರಣವನ್ನು ಚಿತ್ರಿಸಲು ಕಲಾವಿದ ಬಳಸಿರುವ ವರ್ಣಗಳ ಸಂಯೋಜನೆ ನಿಜಕ್ಕೂ ಆಕರ್ಷಣೀಯವಾಗಿದೆ. ಸಹಜತೆಯನ್ನು ನೀಡಲು ಶಿವಲಿಂಗದ ಮುಂದೆ ಅದರ ನೆರಳನ್ನು ಮೂಡಿಸಲು ಕಲಾವಿದ ಇಲ್ಲಿ ಮರೆತಿಲ್ಲ.

೫.೧.೧೪. ವಚನ ವಾಚನ ಮಾಡುತ್ತಿರುವ ಬಸವಣ್ಣನವರು

ಪ್ರಸ್ತುತ ಚಿತ್ರ ಬಸವಣ್ಣನವರು ತಾಳೆಗರಿಯಲ್ಲಿರುವ ವಚನಗಳನ್ನು ವಾಚನ ಮಾಡುತ್ತಿರುವ ಸನ್ನಿವೇಶವನ್ನು ಒಳಗೊಂಡಿದೆ. ವರ್ಣದಲ್ಲಿ ರಚಿತವಾದ ಈ ಚಿತ್ರದಲ್ಲಿ ಸಾಮಾನ್ಯ ಬಿಳಿ, ಕಿತ್ತಳೆ, ಕಪ್ಪು ಮತ್ತು ಕಂದುಬಣ್ಣಗಳ ಪ್ರಧಾನ ಬಳಕೆಯನ್ನು ಕಾಣುತ್ತೇವೆ. ವಿಶಾಲವಾದ ಕೊಠಡಿಯಲ್ಲಿ ಪೀಠದ ಮೇಲೆ ಕುಳಿತಿರುವ ಬಸವಣ್ಣನವರ ಭಂಗಿಯು ತುಸು ಬಾಗಿದಂತಿರುವುದು ಸನ್ನಿವೇಶಕ್ಕೆ ತಕ್ಕುದಾಗಿದೆ. ಕಪ್ಪುಬಣ್ಣದ ಮಟ್ಟಸವಾದ ಕಿರಿದಾದ ತಲೆಗೂದಲು, ಹಣೆಯಲ್ಲಿ ವಿಭೂತಿ, ಕೊರಳಿನಲ್ಲಿ ಬಿಳಿಯ ಬಣ್ಣದ ವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ಕಂದುಬಣ್ಣದ ರುದ್ರಾಕ್ಷಿ ಮಾಲೆ, ಬಿಳಿಯ ಪಂಚೆ ಮತ್ತು ಮೇಲುವಸ್ತ್ರವನ್ನು ಧರಿಸಿದ ಬಸವಣ್ಣನವರು ಎತ್ತರದ ನಿಲುವಿನ ವ್ಯಕ್ತಿಯಂತೆ ಕಂಡುಬರುತ್ತಾರೆ. ನೀಳವಾದ

ಕೈ-ಕಾಲುಗಳು, ಅವುಗಳಿಗೆ ತಕ್ಕಂತಿರುವ ಕುತ್ತಿಗೆಯ ಎತ್ತರ ಮುಂತಾದವುಗಳು ಚಿತ್ರದ ಪ್ರಮಾಣಬದ್ಧತೆಯನ್ನು ಸಾರುತ್ತವೆ.

ಬಲಗಾಲನ್ನು ಎಡಗಾಲಿನ ಮೇಲಿಟ್ಟು, ಎರಡೂ ಪಾದಗಳನ್ನು ಕಾಲ ಕೆಳಗಿರುವ ಅಗಲವಾದ ಮಣೆಯ ಮೇಲಿಟ್ಟು, ತಮ್ಮ ಬಲಗೈಯನ್ನು ಮೇಲಕ್ಕೆತ್ತಿ, ಎಡಗೈಯಲ್ಲಿ ಹಸ್ತಪ್ರತಿಯ ಕಟ್ಟನ್ನು ಹಿಡಿದು ವಚನಗಳನ್ನು ಓದುತ್ತಿರುವಂತೆ ತೋರುವ ಭಂಗಿಯಲ್ಲಿ ಬಸವಣ್ಣನವರು ಇಲ್ಲಿ ಚಿತ್ರಿತರಾಗಿದ್ದಾರೆ. ಅವರ ಎದುರಿಗೆ ಯಾವ ಮಾನವಾಕೃತಿಗಳು ಇಲ್ಲದಿರುವುದರಿಂದ ಬಹುಶಃ ಬಸವಣ್ಣ ತಾಳೆಗರಿಯಲ್ಲಿರುವ ವಿಷಯಗಳನ್ನು ತಾನೇ ಓದಿ ಮನನ ಮಾಡಿಕೊಳ್ಳುತ್ತಿರುವಂತೆ ಹೇಳುವುದು ಕಲಾವಿದನ ಉದ್ದೇಶವಾಗಿರುವಂತೆ ತೋರುತ್ತದೆ. ಅವರ ಎಡಬದಿಯಲ್ಲಿ ಚಿಕ್ಕ ಮೇಜೊಂದರ ಮೇಲೆ ಕಿತ್ತಳೆ ಬಣ್ಣದ ಬಟ್ಟೆಯನ್ನು ಹಾಕಲಾಗಿದ್ದು ಅದರ ಮೇಲೆ ತಾಳೆಗರಿಯ ಕಟ್ಟೊಂದಿದೆ. ಬಲಬದಿಯಲ್ಲಿ ವೃತ್ತಾಕಾರದ ಟೀಪಾಯಿಯ ಮೇಲೆ ಹಣ್ಣುಗಳ ಬುಟ್ಟಿಯೊಂದಿದೆ. ಹಿಂಬದಿಯ ಭಿತ್ತಿಯಲ್ಲಿ ಸಂಗಮನಾಥನ ದೇವಾಲಯದ ಶಿಖರದ ಕಿರುಚಿತ್ರವಿದೆ. ಬಸವಣ್ಣನವರ ಎಡಬದಿಯ ಕಿಟಕಿಯಲ್ಲಿ ಕಂಡುಬರುವ ಹಸಿರಾದ ಗಿಡ ಮರಗಳ ಸುಂದರ ಪರಿಸರವಿದೆ. ಕಿಟಕಿಯೊಳಗಿಂದ ತೂರಿ ಬಂದಿರುವ ಬೆಳಕಿನ ಕಿರಣಗಳು ನೈಜತೆಯನ್ನು ಪ್ರಕಟಿಸಿವೆ. ಕಲಾವಿದ ಇಲ್ಲಿ ತನ್ನ ಆಶಯ ಮತ್ತು ವರ್ಣಸಂಯೋಜನೆ, ಪ್ರಮಾಣಬದ್ಧತೆ ಇವುಗಳಲ್ಲಿ ಸಹಜತೆಯನ್ನು ಮೆರೆದಿದ್ದಾನೆ.

❑❑❑



ಚಿತ್ರ ೫.೧.೧ ಅರ್ಧ ಭಾವಚಿತ್ರ ೧



ಅರ್ಧ ಭಾವಚಿತ್ರ ೨



ಅರ್ಧ ಭಾವಚಿತ್ರ ೩



ಅರ್ಧ ಭಾವಚಿತ್ರ ೪




ಅರ್ಧ ಭಾವಚಿತ್ರ ೫



ಅರ್ಧ ಭಾವಚಿತ್ರ ೬



ಅರ್ಧ ಭಾವಚಿತ್ರ ೭



ಅರ್ಧ ಭಾವ ಚಿತ್ರ ೮



ಅರ್ಧ ಭಾವ ಚಿತ್ರ ೯



ಚಿತ್ರ ೫.೧.೨ ಇಷ್ಟಲಿಂಗ ಪೂಜೆಯಲ್ಲಿ ನಿರತನಾದ ಪೂರ್ಣ ಭಾವ ಚಿತ್ರ ೧



ಇಷ್ಟಲಿಂಗಪೂಜೆಯಲ್ಲಿ ನಿರತನಾದ ಪೂರ್ಣ ಭಾವ ಚಿತ್ರ ೨



ಇಷ್ಟಲಿಂಗಪೂಜೆಯಲ್ಲಿ ನಿರತನಾದ ಪೂರ್ಣ ಭಾವ ಚಿತ್ರ ೩



ಚಿತ್ರ ೫.೧.೩ ಚವನ ರಚನೆಯಲ್ಲಿ ನಿರತನಾದ ಪೂರ್ಣ ಭಾವ ಚಿತ್ರ ೧



ಚವನ ರಚನೆಯಲ್ಲಿ ನಿರತನಾದ ಪೂರ್ಣ ಭಾವ ಚಿತ್ರ ೨



ಚವನ ರಚನೆಯಲ್ಲಿ ನಿರತನಾದ ಪೂರ್ಣ ಭಾವ ಚಿತ್ರ ೩



ಚಿತ್ರ ೫.೧.೪ ಪೀಠದಲ್ಲಿ ಕುಳಿತ ಬಸವಣ್ಣ ೧



ಚಿತ್ರ ೫.೧.೬ ಪೀಠದಲ್ಲಿ ಕುಳಿತ ಬಸವಣ್ಣ ೨



ಪೀಠದಲ್ಲಿ ಕುಳಿತ ಬಸವಣ್ಣ ೩



ಪೀಠದಲ್ಲಿ ಕುಳಿತ ಬಸವಣ್ಣವರು ೪



ಪೀಠದಲ್ಲಿ ಕುಳಿತ ಬಸವಣ್ಣವರು ೫



ಪೀಠದ ಮೇಲೆ ಕುಳಿತ ಬಸವಣ್ಣ ೬



ಪೀಠದಲ್ಲಿ ಕುಳಿತ ಬಸವಣ್ಣ ೭



ಪೀಠದಲ್ಲಿ ಕುಳಿತ ಬಸವಣ್ಣ ೮



ಪೀಠದಲ್ಲಿ ಕುಳಿತ ಬಸವಣ್ಣ ೯



ೀಠದಲ್ಲಿ ಕುಳಿತ ಬಸವಣ್ಣ ೧೦



ೀಠದಲ್ಲಿ ಕುಳಿತ ಬಸವಣ್ಣ ೧೧



ಚಿತ್ರ ೫.೧.೫. ಪೂರ್ಣ ಭಾವ ಚಿತ್ರ ೧



ಪೂರ್ಣ ಭಾವ ಚಿತ್ರ ೨



ಪೂರ್ಣ ಭಾವ ಚಿತ್ರ ೩



ಪೂರ್ಣ ಭಾವ ಚಿತ್ರ ೪





ಪೂರ್ಣ ಭಾವ ಚಿತ್ರ ೫

೫.೧.೬ ಬುದ್ಧರೂಪದಲ್ಲಿ ಬಸವಣ್ಣವರ ಭಾವ ಚಿತ್ರ



೫.೧.೭ ಅರ್ಧ ಭಾವ ಚಿತ್ರ



೫.೧.೮ ವಚನ ಅಧ್ಯಯನದಲ್ಲಿ ನಿರತ ಬಸವಣ್ಣ



೫.೧.೯ ವಚನ ಬೋಧನೆ ಅರ್ಧ ಭಾವಚಿತ್ರ



೫.೧.೧೦ ವಚನರಚನೆ-ಪೂರ್ಣ ಭಾವ ಚಿತ್ರ



ಚಿತ್ರ ೫.೧.೧೧ ಅಶ್ವಾರೂಢ ಬಸವಣ್ಣ ಪೂರ್ಣ ಭಾವಚಿತ್ರ ೧



೫.೧.೧೧ ಅಶ್ವಾರೂಢ-ಪೂರ್ಣ ಭಾವಚಿತ್ರ ೨



ಅಶ್ವಾರೂಢ-ಪೂರ್ಣ ಭಾವಚಿತ್ರ ೩



ಚಿತ್ರ ೫.೧.೧೨ ವಚನ ಅಧ್ಯಯನ-ಪೂರ್ಣ ಭಾವಚಿತ್ರ



ಚಿತ್ರ ೫.೧.೧೩ ಲಿಂಗದೊಳಗೆ ಮೂಡಿರುವ ಬಸವಣ್ಣನ ಅರ್ಧಭಾವ ಚಿತ್ರ



ವಚನ ಬೋಧನೆ ಮಾಡುತ್ತಿರುವ ಬಸವಣ್ಣ

ಅಧ್ಯಾಯ : ಆರು

ಬಸವಣ್ಣನವರ ಕುರಿತ ವರ್ಣಚಿತ್ರಗಳ ಅಧ್ಯಯನಕ್ಕೆ ಪೂರಕವಾದ ಕಲಾಕೃತಿಗಳು

ಮಹಾಮಾನವತಾವಾದಿ ಬಸವಣ್ಣನವರು ಬಸವನಬಾಗೇವಾಡಿಯಲ್ಲಿ ಜನಿಸಿ, ಕೂಡಲಸಂಗಮದಲ್ಲಿ ಅಧ್ಯಯನಗೈದು, ಕಲ್ಯಾಣದಲ್ಲಿ ಭಕ್ತಿ ಭಂಡಾರಿಯಾಗಿ, ಅಂತ್ಯದಲ್ಲಿ ಕೂಡಲಸಂಗಮನಲ್ಲಿ ಲಿಂಗೈಕ್ಯರಾದ ಬಸವಣ್ಣನವರು ಸವೆಸಿದ ಹಾದಿ ಬಹು ದೊಡ್ಡದು. ಆ ಹಾದಿಯಲ್ಲಿನ ಅನೇಕ ಪ್ರಮುಖ ಘಟನೆಗಳನ್ನು ಆಧರಿಸಿದ ಕಲಾಕೃತಿಗಳನ್ನು ಇದುವರೆಗೆ ಅಧ್ಯಯನ ಮಾಡಲಾಗಿದ್ದು, ಅವುಗಳಿಗೆ ಪೂರಕವಾಗಿ ನಮ್ಮ ಕಲಾವಿದರು ಬಸವಾದಿ ಶರಣರ ಸಮಕಾಲೀನ ಘಟನೆಗಳಿಗೆ ದೃಶ್ಯಾತ್ಮಕ ಪ್ರತಿಕ್ರಿಯೆ ನೀಡಿದ ಹಲವು ಕಲಾಕೃತಿಗಳನ್ನು ಇಲ್ಲಿ ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿದೆ.

೬.೧. ಪಾದುಕೆ ತಯಾರಿಕೆಯಲ್ಲಿ ತೊಡಗಿದ ಹರಳಯ್ಯ-ಕಲ್ಯಾಣಮ್ಮ ದಂಪತಿಗಳು

ಕಲ್ಯಾಣದಲ್ಲಿ ಶರಣ ಹರಳಯ್ಯ ಒಂದು ಬಾರಿ ಬಸವಣ್ಣನವರನ್ನು ವಂದಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಒಂದು ಸಾರಿ ಶರಣು ಎಂದು ಬಸವಣ್ಣ ವಂದಿಸಬೇಕಿತ್ತು. ಆದರೆ ಬಸವಣ್ಣ "ಶರಣು ಶರಣು" ಎಂದು ಎರಡು ಸಾರಿ ಹೇಳಿದಾಗ, ತನ್ನಿಂದ ಏನೋ ಪ್ರಮಾದವಾಗಿರಬೇಕು ಎಂದು ಭಾವಿಸಿ ಹರಳಯ್ಯ ಮತ್ತು ಆತನ ಹೆಂಡತಿ ಇಬ್ಬರೂ ತೊಡೆಯ ಚರ್ಮವನ್ನು ತೆಗೆದು ಪಾದರಕ್ಷೆಗಳನ್ನು ಮಾಡಿ ಬಸವಣ್ಣನವರಿಗೆ ಅರ್ಪಿಸುವ ಸಂಕಲ್ಪ ಮಾಡುತ್ತಾರೆ. ಆ ಸನ್ನಿವೇಶವನ್ನು ಈ ಚಿತ್ರದಲ್ಲಿ ಕಲಾವಿದ ಚಿತ್ರಿಸಿದ್ದಾನೆ. ಅಚ್ಚುಕಟ್ಟಾಗಿ ಹಿಂದಕ್ಕೆ ಬಾಚಿ ಕಟ್ಟಿದ ಕಪ್ಪು ತಲೆಗೂದಲು, ಗಡ್ಡಮೀಸೆ, ಹಣೆಯಲ್ಲಿ ವಿಭೂತಿ, ಕೊರಳಲ್ಲಿ ಇಷ್ಟಲಿಂಗದ ಬಿಳಿವಸ್ತ್ರದ ಗಂಟು, ರುದ್ರಾಕ್ಷಿ ಮಾಲೆಗಳನ್ನು ಧರಿಸಿದ ಹರಳಯ್ಯ ಇಲ್ಲಿ ಚಿಂತನೆಯಲ್ಲಿ ತೊಡಗಿರುವಂತೆ ಕುಳಿತಿದ್ದಾನೆ. ತನ್ನ ಬಲಗಾಲಿನ ತೊಡೆಯ ಚರ್ಮವನ್ನು ತೆಗೆದಿರುವುದರಿಂದ ರಕ್ತವು ಸುರಿಯುತ್ತಿರುವ ಸಂದರ್ಭವನ್ನು ಚಿತ್ರಗಾರ ಇಲ್ಲಿ ನಿರೂಪಿಸಿದ್ದಾನೆ. ಬಲಗೈ ತೋರುಬೆರಳನ್ನು ತುಸು ಮುಂಚಾಚಿ ಎಡಗೈಯಲ್ಲಿ ತನ್ನ ತೊಡೆಯ ಚರ್ಮವನ್ನು ಹಿಡಿದುಕೊಂಡು ಹರಳಯ್ಯ ಉಪದೇಶವನ್ನು

ಮಾಡುವ ಭಂಗಿಯಲ್ಲಿ ಕುಳಿತಿದ್ದಾನೆ. ಆತನ ಪಕ್ಕದಲ್ಲಿಯೇ ಹಣೆಯಲ್ಲಿ ವಿಭೂತಿ, ಕಪ್ಪುತಲೆಗೂದಲು, ಬಂಗಾರದ ಬಣ್ಣದ ಕಿರು ಅಂಚನ್ನುಳ್ಳ ತೆಳು ಹಸಿರುವರ್ಣದ ಸೀರೆ, ಕೊರಳಲ್ಲಿ ಚಿಕ್ಕ ಎಳೆಯ ತಾಳಿ ಮತ್ತು ಬೊಟ್ಟುಗಳು, ದಟ್ಟವಾದ ಹಸಿರುಬಣ್ಣದ ಕುಪ್ಪಸ ಧರಿಸಿದ ಎಡಗಾಲಿನ ತೊಡೆಯ ಭಾಗದ ಚರ್ಮವನ್ನು ಆಗತಾನೆ ಕತ್ತರಿಸಿಕೊಂಡು ಹರಳಯ್ಯನ ಹೆಂಡತಿ ಕುಳಿತುಕೊಂಡಿದ್ದಾಳೆ. ಅವಳ ಮುಖವು ಎಡಭಾಗಕ್ಕೆ ತುಸು ಬಾಗಿ ತದೇಕಚಿತ್ತದಿಂದ ತನ್ನ ಕಾಲಿನ ಚರ್ಮವನ್ನು ತೆಗೆಯುವ ಕಾಯಕದಲ್ಲಿ ನಿರತಳಾಗಿದ್ದಾಳೆ. ದಂಪತಿಗಳಿಬ್ಬರ ಎದುರಿಗೆ ಚಪ್ಪಲಿಯನ್ನು ಆಗತಾನೆ ಹೊಲಿದು ಸಿದ್ಧಪಡಿಸಿದ ಚಪ್ಪಲಿಗಳನ್ನು ಒಂದು ಚಿಕ್ಕ ತಟ್ಟೆಯಲ್ಲಿ ಇಡಲಾಗಿದೆ. ಕೆಂಪುಬಣ್ಣದ ಪಾದುಕೆಗಳು ಸುಂದರವಾಗಿ ಸಿದ್ಧಗೊಂಡಿವೆ. ಅವುಗಳ ಪಕ್ಕದಲ್ಲಿ ಚಪ್ಪಲಿ ಹೊಲಿಯುವ ಸಾಮಗ್ರಿಗಳಾದ ಕಬ್ಬಿಣದ ಸಲಕರಣೆಗಳು, ನೀರಿನ ಬಟ್ಟಲುಗಳನ್ನು ಕಲಾವಿದ ಎಚ್ಚರಿಕೆಯಿಂದ ಚಿತ್ರಿಸಿದ್ದಾನೆ. ಅದರಾಚೆಗೆ ಇಡೀ ಚಿತ್ರವನ್ನು ನೋಡಿದಾಗ ಎರಡು ಮಾನವಾಕೃತಿಗಳ ದೇಹದ ಅವಯವಗಳ ಭಂಗಿ, ಪ್ರಮಾಣಬದ್ಧತೆ ಒಂದಕ್ಕೊಂದು ಹೊಂದಾಣಿಕೆ ಆಗಿಲ್ಲ. ಬಹುಶಃ ಈ ಚಿತ್ರವು ಕಲಾವಿದ ಮುಗಳಿಯವರ ಕಲಾಜೀವನದ ಆರಂಭಿಕ ಚಿತ್ರವಾಗಿರಬೇಕು. ಹಾಗಾಗಿ ಅಭ್ಯಾಸದ ಕೊರತೆ ಎದ್ದು ಕಾಣುತ್ತಿದೆ. ಇಬ್ಬರು ದಂಪತಿಗಳು ಮೊಣಕಾಲನ್ನು ಮಡಚಿ ಕುಳಿತಿರುವ ರೀತಿಯು ಅಸಹಜವೆನ್ನಿಸುತ್ತಿದೆ. ಹಿನ್ನೆಲೆಯಲ್ಲಿ ಹರಳಯ್ಯನವರ ಮನೆಯನ್ನು ಆಡಂಬರವಿಲ್ಲದ, ಬಡವರ ಮನೆಯ ಹಾಗೆ ಚಿತ್ರಿಸಿದ್ದಾರೆ. ಸಾಮೀಪ್ಯದಿಂದ ಚಿತ್ರಿಸಿರುವ ಘಟನೆಯನ್ನು ಮನಮುಟ್ಟುವಂತೆ ನಿರೂಪಿಸುವಲ್ಲಿ ಕಲಾವಿದನ ಶ್ರಮ ಸಾರ್ಥಕವಾಗಿದೆ.

೬.೨. ತೊಡೆಯ ಚರ್ಮದ ಪಾದುಕೆಯನ್ನು ಹೊತ್ತ ಹರಳಯ್ಯ-ಕಲ್ಯಾಣಮ್ಮ

ಹರಳಯ್ಯದಂಪತಿಗಳು ತಮ್ಮ ತೊಡೆಯ ಚರ್ಮದಿಂದ ರಚಿಸಿದ ಪಾದರಕ್ಷೆಗಳನ್ನು ಬಸವಣ್ಣವರಿಗೆ ಸಮರ್ಪಿಸಲು ಹೋಗುವ ದೃಶ್ಯವನ್ನು ಇಲ್ಲಿ ಕಾಣುತ್ತೇವೆ. ಹಣೆಯ ತುಂಬ ವಿಭೂತಿ, ಭ್ರೂಮಧ್ಯದಲ್ಲಿ ಭಸ್ಮದ ಬೊಟ್ಟು, ಕಪ್ಪು ತಲೆಗೂದಲು ಮತ್ತು ಗಡ್ಡ, ಕೊರಳಲ್ಲಿ ಕೆಂಪುವಸ್ತ್ರದಲ್ಲಿ ಕಟ್ಟಿದ ಇಷ್ಟಲಿಂಗದ ಗಂಟು, ರುದ್ರಾಕ್ಷಿಯ ಮಾಲೆ, ತಲೆಯ ಮೇಲೆ ಕೆಂಪು ತಟ್ಟೆಯೊಂದರಲ್ಲಿ ಆಗ ತಾನೆ ರಚಿಸಿದ ಅಲಂಕೃತ ಪಾದರಕ್ಷೆಗಳನ್ನು ಹೊತ್ತ ಹರಳಯ್ಯ ಇಲ್ಲಿ ಕಂಡುಬರುತ್ತಾನೆ. ವಿಶಾಲವಾದ ಕಣ್ಣು, ತಿದ್ದಿ ತೀಡಿದಂತಿರುವ ಹುಬ್ಬುಗಳು, ಮುಖದಲ್ಲಿ ಆತ್ಮತೃಪ್ತಿಯ ಭಾವ ಇವು ಕಲಾವಿದನ ಶ್ರಮವನ್ನು ಸಾರ್ಥಕಗೊಳಿಸಿವೆ. ಹಸಿರುಬಣ್ಣದ ಸೀರೆ ಮತ್ತು ಕಡುಹಸಿರು ಬಣ್ಣದ ರವಿಕೆ, ಹಣೆಯಲ್ಲಿ ವಿಭೂತಿ, ಭಸ್ಮದ ಬೊಟ್ಟು, ಕಪ್ಪು ತಲೆಗೂದಲಿನಲ್ಲಿ ಕಂಡೂ ಕಾಣದಂತಿರುವ ಬೈತಲೆ, ಕೊರಳಲ್ಲಿ ಒಂಟಿ ಎಳೆಯ ತಾಳಿಯೊಂದಿಗೆ ಎರಡು ಬೊಟ್ಟುಗಳನ್ನು ಧರಿಸಿರುವ ಹರಳಯ್ಯನ ಪತ್ನಿ ತಲೆಯನ್ನು ತುಸು ಓರೆಯಾಗಿಸಿ ಆತನ ಹಿಂದೆ ಬರುತ್ತಿದ್ದಾಳೆ. ಅವಳ ಮುಖದಲ್ಲಿ ತಿದ್ದಿ ತೀಡಿದಂತಿರುವ ಹುಬ್ಬುಗಳು, ಕಣ್ಣುರೆಪ್ಪೆಗಳು, ನೀಳವಾದ ನಾಸಿಕ, ಹೊಳೆಯುವ ಮೂಗುಬೊಟ್ಟು, ಬಿಲ್ಲಿನಾಕಾರದ ತುಟಿಗಳು, ಮಂದವಾದ ಅರ್ಧಮುಚ್ಚಿದ ಕಣ್ಣುಗಳುಳ್ಳ ಮತ್ತು ಆಕೆ ನಿಂತ ಭಂಗಿಯನ್ನು ಚಿತ್ರಿಸುವಲ್ಲಿ ಕಲಾವಿದ ಇನ್ನಿಲ್ಲದ ತಾಳ್ಮೆಯನ್ನು ವಹಿಸಿರುವುದು ತಿಳಿಯುತ್ತದೆ. ಹಿನ್ನೆಲೆಯಲ್ಲಿ ತಿಳಿಹಸಿರು ಬಣ್ಣದ ಎಲೆಗಳಿಂದ ಕೂಡಿರುವ ಗಿಡವನ್ನು ಕಾಣುತ್ತೇವೆ.

೬.೩. ಎಳೆಯೂಟೆ ಪ್ರಸಂಗ-೧

ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಬಸವಣ್ಣನವರು ತಮ್ಮ ನೇತೃತ್ವದಲ್ಲಿ ಹರಳಯ್ಯ ಮತ್ತು ಮಧುವರಸ ದಂಪತಿಗಳ ಮಕ್ಕಳಿಗೆ ಅಂತರ್ಜಾತೀಯ ವಿವಾಹವನ್ನು ಏರ್ಪಡಿಸುತ್ತಾರೆ. ಈ ವಿಷಯವಾಗಿ ಬಿಜ್ಜಳನ ಆಸ್ಥಾನದ ಕೊಂಡೆ ಮಂಚಣ್ಣ ಮುಂತಾದ ಬಸವಣ್ಣನವರ ವಿರೋಧಿ ಬ್ರಾಹ್ಮಣರು ಬಿಜ್ಜಳನಿಗೆ ಚಾಡಿ ಹೇಳುತ್ತಾರೆ. ಅದರ ಫಲವಾಗಿ ಬಸವಣ್ಣನವರನ್ನು ಬಿಜ್ಜಳ ಮಹಾರಾಜನು ಗಡೀಪಾರು ಮಾಡುತ್ತಾನೆ. ಬಸವಣ್ಣನವರಿಲ್ಲದ ಮೇಲೆ ಅಲ್ಲಿ ಚಾಡಿಕೋರರ ಮಾತೇ ಬಿಜ್ಜಳನಿಗೆ ವೇದವಾಕ್ಯವಾಗಿ ಪರಿಣಮಿಸುತ್ತದೆ. ಇದೆಲ್ಲದರ ಪರಿಣಾಮವಾಗಿ ಹರಳಯ್ಯ ಮತ್ತು ಮಧುವರಸ ಇಬ್ಬರನ್ನು ಆನೆಯ ಕಾಲಿಗೆ ಕಟ್ಟಿ ತುಳಿಸುವ ಪ್ರಸಂಗವನ್ನು ಪ್ರಸ್ತುತ ಚಿತ್ರವು ಹೊಂದಿದೆ.

ತೈಲವರ್ಣದ ನೈಜ ಚಿತ್ರಪರಂಪರೆಗೆ ಸೇರಿದ ಈ ಚಿತ್ರವು ಅರಮನೆಯ ಪ್ರಾಂಗಣದ ಒಳಗೆ ನಡೆದಿರುವುದನ್ನು ದಾಖಲಿಸಿದೆ. ಅರಮನೆಯ ಗೋಡೆಗೆ ಹೊಂದಿಕೊಂಡಿರುವ ಮೇಲು ಉಪ್ಪರಿಗೆಯೊಂದರಲ್ಲಿ ಬಿಜ್ಜಳ ಮತ್ತು ಆತನ ಹೆಂಡತಿ, ರಾಜಭಟರು ನಿಂತಿದ್ದಾರೆ. ಅವರಲ್ಲಿ ಬಿಜ್ಜಳನು ಹರಳಯ್ಯ ಮತ್ತು ಮಧುವರಸರನ್ನು ಎಳೆಯೂಟೆ ನಡೆಸಿ ಕೊಲ್ಲುವಂತೆ ಆಜ್ಞೆ ಮಾಡುತ್ತಿರುವ ದೃಶ್ಯವನ್ನು ಇಲ್ಲಿ ಕಾಣುತ್ತೇವೆ.

ಅರಮನೆಯ ಒಳಾಂಗಣದಲ್ಲಿ ಅಲಂಕೃತವಾದ ಕೆಂಪು ಮತ್ತು ಹಳದಿ ಬಣ್ಣದ ಮೇಲುಹೊದಿಕೆಯನ್ನು ಹೊದ್ದಿರುವ ಆನೆಯೊಂದು ಉಗ್ರರೂಪವನ್ನು ತಾಳಿ ಚಲಿಸುವ ದೃಶ್ಯವನ್ನು ಕಲಾವಿದ ಇಲ್ಲಿ ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದಾನೆ. ಆನೆಯ ನೆರಳು ಅದರ ಕೆಳಗೆ ಬಿದ್ದಿರುವುದರಿಂದ ಘಟನೆಯು ಸರಿಸುಮಾರು ಮಧ್ಯಾಹ್ನದ ವೇಳೆಯಲ್ಲಿ ಘಟಿಸಿರುವುದನ್ನು ಸೂಚಿಸುತ್ತದೆ. ಈ ಘಟನೆಯನ್ನು ಖಂಡಿಸಿ ಜನರು ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದು ಅವರನ್ನು ನಿಯಂತ್ರಿಸಲು ರಾಜಭಟರು ತಮ್ಮ ಖಡ್ಗಗಳನ್ನು ಎತ್ತಿ ಹೆದರಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಅವರನ್ನು ತಡೆಗಟ್ಟಲು ಕಟ್ಟಿಗೆಯ ಅಡ್ಡಗೋಡೆಯನ್ನು ನಿರ್ಮಿಸಲಾಗಿದ್ದು, ಅದನ್ನು ಮೀರಿ ಒಳಗೆ ಬರಲು ಜನರು ಪ್ರಯತ್ನಿಸುತ್ತಿದ್ದಾರೆ. ವಿಶೇಷವಾಗಿ ಕಪ್ಪು ಬಣ್ಣದ ಬೋಳುತಲೆಯ ವೃದ್ಧನೊಬ್ಬ ತನ್ನ ಎದುರಿಗೆ ತುರುಬು ಕಟ್ಟಿಕೊಂಡ ಹೆಣ್ಣಿನೊಂದಿಗೆ ಆಕ್ರೋಶಭರಿತನಾಗಿ ಎಡಗೈಯನ್ನು ಅತ್ತಚಾಚಿ ಘಟನೆಯನ್ನು ಖಂಡಿಸುತ್ತಿರುವಂತೆ ಕಾಣುತ್ತದೆ. ಅವರಲ್ಲಿ ಚಿತ್ರದ ಎಡಭಾಗದಲ್ಲಿ ಬಲಿಷ್ಠನಾದ ವ್ಯಕ್ತಿಯೊಬ್ಬ ತಲೆಗೆ ಕೆಂಪು ರುಮಾಲನ್ನು ಸುತ್ತಿಕೊಂಡಿದ್ದು, ತನ್ನ ಎಡಗೈಯ ಹಸ್ತವನ್ನು ಎತ್ತಿ ಈ ತೆರನ ಹಿಂಸೆ ಬೇಡವೆಂಬ ಭಂಗಿಯಲ್ಲಿ ನಿಂತಿದ್ದಾನೆ. ಒಂದು ಕಡೆ ಪ್ರಜೆಗಳು ಅಥವಾ ಶರಣರ ದಂಡು ಮತ್ತೊಂದು ಕಡೆ ರಾಜಭಟರ ಗುಂಪು ಕಾಣಿಸುತ್ತದೆ. ಕೆಂಪು ಮತ್ತು ಕಪ್ಪು ಮಿಶ್ರಿತ ಬಣ್ಣದ ಅರಮನೆಯ ಗೋಡೆಗಳನ್ನು ಚಿತ್ರಿಸುವಲ್ಲಿ ಕಲಾವಿದ ತನ್ನ ಪ್ರತಿಭೆ, ಸಂಯಮಗಳನ್ನು ಧಾರೆಯೆರೆದಿರುವುದು ಕಂಡುಬರುತ್ತದೆ. ಯಥಾದರ್ಶನದ ನೀತಿಯನ್ವಯ ಚಿತ್ರದಲ್ಲಿನ ಆಕೃತಿಗಳನ್ನು ರಚಿಸಿರುವ ಕಲಾವಿದರು ಅವುಗಳಿಗೆ ಚಲನಶೀಲತೆಯ ಭಾವವನ್ನು ತುಂಬಿದ್ದಾರೆ. ತನ್ನ ಉದ್ದೇಶ ಮತ್ತು ಆಶಯಗಳನ್ನು ಈಡೇರಿಸುವಲ್ಲಿ ಪ್ರಸ್ತುತ ಕಲಾಕೃತಿಯು ಸಂಪೂರ್ಣ ಸಫಲವಾಗಿದೆ.

ಎಳೆಯೂಟೆ ಪ್ರಸಂಗ–೨

ಮಂತ್ರಿಪದವಿಯಲ್ಲಿದ್ದ ಬಸವಣ್ಣ ತಮ್ಮ ನೇತೃತ್ವದಲ್ಲಿ ಹರಳಯ್ಯ ಮತ್ತು ಮಧುವರಸ ದಂಪತಿಗಳ ಮಕ್ಕಳಿಗೆ ಅಂತರ್ಜಾತಿ ವಿವಾಹವನ್ನು ಏರ್ಪಡಿಸುತ್ತಾನೆ. ಈ ವಿಷಯವನ್ನು ಬಿಜ್ಜಳನ ಆಸ್ಥಾನದ ಕೊಂಡೆ ಮಂಚಣ್ಣ ಮುಂತಾದ ಬಸವಣ್ಣನ ವಿರೋಧಿ ಬ್ರಾಹ್ಮಣರು ಬಿಜ್ಜಳನಿಗೆ ಚಾಡಿ ಹೇಳುತ್ತಾರೆ. ಅದರ ಫಲವಾಗಿ ಬಸವಣ್ಣನನ್ನು ಬಿಜ್ಜಳ ಮಹಾರಾಜನು ಗಡೀಪಾರು ಮಾಡುತ್ತಾನೆ. ಬಸವಣ್ಣನಿಲ್ಲದ ಮೇಲೆ ಅಲ್ಲಿ ಚಾಡಿಕೋರರ ಮಾತೇ ಬಿಜ್ಜಳನಿಗೆ ವೇದವಾಕ್ಯವಾಗಿ ಪರಿಣಮಿಸುತ್ತದೆ. ಇದೆಲ್ಲದರ ಪರಿಣಾಮವಾಗಿ ಹರಳಯ್ಯ ಮತ್ತು ಮಧುವರಸ ಇಬ್ಬರನ್ನು ಆನೆಯ ಕಾಲಿಗೆ ಕಟ್ಟಿ ತುಳಿಸುವ ಪ್ರಸಂಗವನ್ನು ಪ್ರಸ್ತುತ ಚಿತ್ರವು ಹೊಂದಿದೆ. ತೈಲವರ್ಣದ ನೈಜ ಚಿತ್ರಪರಂಪರೆಗೆ ಸೇರಿದ ಈ ಚಿತ್ರವು ಅರಮನೆಯ ಪ್ರಾಂಗಣದ ಒಳಗೆ ನಡೆದಿರುವುದನ್ನು ದಾಖಲಿಸಿದೆ. ಆನೆ ಮತ್ತು ಆನೆಯ ಕಾಲಿಗೆ ಕಟ್ಟಿದ ಹರಳಯ್ಯ, ಮಧುವರಸ, ಹರಳಯ್ಯನ ಮಗ ಈ ಮೂವರು ಚಿತ್ರದ ವಸ್ತುವಾಗಿದ್ದಾರೆ. ತಿಳಿ ಕಪ್ಪುಬಣ್ಣದ ಆನೆಯು ದಷ್ಟಪುಷ್ಟವಾಗಿದ್ದು, ತೆಳುವಾದ ದಂತವನ್ನು ಹೊಂದಿದೆ. ಅದರ ಕಣ್ಣುಗಳು ಕೆಂಪಗಿದ್ದು ರೋಷಗೊಂಡಂತೆ ಕಾಣಿಸಲು ಅದರ ಮೇಲೆ ಕುಳಿತ ಮಾವುತ ಅಂಕುಶದಿಂದ ತಿವಿದಿರುವುದು ಕಾರಣವಿರಬೇಕೆಂಬುದನ್ನು ಕಲಾವಿದ ಯಶಸ್ವಿಯಾಗಿ ಅಭಿವ್ಯಕ್ತಿಸಿದ್ದಾನೆ. ಆನೆಯ ಕಾಲಿಗೆ ಕಟ್ಟಿದ ಹಗ್ಗವು ತೆಳುಬಿಳಿ ಬಣ್ಣದಿಂದ ನಿರ್ಮಿತವಾಗಿದ್ದರೂ ಗಮನಕ್ಕೆ ಬರುವಂತಿದೆ.

ಹಗ್ಗಗಳಿಂದ ಬಂಧಿತರಾದವರು ಬರಿ ಪಂಚೆಯನ್ನು ಮೊಣಕಾಲಿನ ಮೇಲಕ್ಕೆ ಮಾತ್ರ ಕಟ್ಟಿದ್ದಾರೆ. ಅವರ ತಲೆಗಳು ಮೇಲಕ್ಕೆತ್ತಿವೆ. ಗಡ್ಡಮೀಸೆಯನ್ನು ಬಿಟ್ಟ ಹರಳಯ್ಯ ಮಧ್ಯದಲ್ಲಿದ್ದಾನೆ. ಆತನ ಮಗ ಎಡಭಾಗದಲ್ಲಿ, ಬಲಭಾಗದಲ್ಲಿ ಮಧುವರಸ ಇವರೆಲ್ಲ ಶಿಕ್ಷೆಯನ್ನು ಅನುಭವಿಸುವ ಸನ್ನಿವೇಶವು ನೈಜವಾಗಿ ಮೂಡಿಬಂದಿದೆ. ಈ ಘಟನೆಯನ್ನು ಇಬ್ಬರು ರುಮಾಲು ಧರಿಸಿದ ವ್ಯಕ್ತಿಗಳು, ಒಬ್ಬ ಜುಟ್ಟುಬಿಟ್ಟುಕೊಂಡಿರುವ ಬ್ರಾಹ್ಮಣ, ಬಿಳಿಯ ರುಮಾಲನ್ನು ಧರಿಸಿದವನೊಂದಿಗೆ ಸಂಭಾಷಿಸುತ್ತಿದ್ದಾನೆ. ಚಿತ್ರದ ಎಡಭಾಗದಲ್ಲಿ ಬಿಜ್ಜಳ ಮತ್ತು ಆತನ ಜೊತೆಗಿರುವ ಬ್ರಾಹ್ಮಣರು ಇದನ್ನು ನೋಡಿ ಆನಂದಿಸುವ ಮನಸ್ಥಿತಿಯಲ್ಲಿದ್ದಾರೆ. ಅವರ ಪಕ್ಕದಲ್ಲಿ ಹಸಿರು, ಕೆಂಪು ಬಣ್ಣದ ಸೀರೆಯನ್ನು ಧರಿಸಿದ ಹಲವಾರು ಸ್ತ್ರೀಯರು ನೋವಿನಿಂದ ಈ ಘಟನೆಯನ್ನು ನೋಡುತ್ತಿದ್ದಾರೆ. ಮೃದುವಾದ ವರ್ಣಯೋಜನೆಯನ್ನು ಹೊಂದಿರುವ ಈ ಚಿತ್ರ ಒಂದು ಕಡೆ ದ್ವೇಷ, ಇನ್ನೊಂದು ಕಡೆ ಅಮಾನವೀಯ ಶಿಕ್ಷೆಯ ಪರಿಸರವನ್ನು ಹೊಂದಿದಂತೆ ಬಹಳ ಜಾಗರೂಕತೆಯಿಂದ ಚಿತ್ರಿಸಲಾಗಿದೆ. ರಮಣೀಯ ವರ್ಣಗಳ ಸೆಳಕುಗಳು ಈ ಚಿತ್ರದಲ್ಲಿ ಒಡಮೂಡಿವೆ. ಕಲ್ಲಿನಿಂದ ನಿರ್ಮಿತವಾದ ಕೋಟೆಗೋಡೆಯನ್ನು ಮತ್ತು ಒಂದು ಚಿಕ್ಕ ಗಿಡವನ್ನು ಸಹಜವಾಗಿ ಚಿತ್ರಿಸಲು ಕಲಾವಿದ ಇಲ್ಲಿ ಮರೆತಿಲ್ಲ.

೬.೪. ವಚನ ಸಾಹಿತ್ಯವನ್ನು ಸಂರಕ್ಷಣೆ ಮಾಡುತ್ತಿರುವುದು

ಬಸವಣ್ಣ ಕಲ್ಯಾಣ ಪಟ್ಟಣದಿಂದ ಕೂಡಲಸಂಗಮಕ್ಕೆ ತನ್ನ ಅಧಿಕಾರ ತ್ಯಜಿಸಿ ಹೊರಟುಹೋದ ಮೇಲೆ ಇತ್ತ ಬಿಜ್ಜಳ ಮತ್ತು ಆತನ ಅನುಯಾಯಿಗಳು ಬಸವಣ್ಣನ ಅನುಯಾಯಿಗಳಾದ ಶರಣ

ಸಮೂಹವನ್ನು ಮನಬಂದಂತೆ ಶಿಕ್ಷಿಸುವ, ಹಿಂಸಿಸುವ ಕುಕೃತ್ಯದಲ್ಲಿ ತೊಡಗುತ್ತಾರೆ. ಅವುಗಳಲ್ಲಿ ವಚನಕಾರರು ಬರೆದ ವಚನಗಳನ್ನು ಸುಟ್ಟುಹಾಕುವ ಪ್ರಯತ್ನವನ್ನು ಮಾಡುತ್ತಾರೆ. ಆ ಹೊತ್ತಿನಲ್ಲಿ ಮಡಿವಾಳ ಮಾಚಿದೇವ, ಚನ್ನಬಸವಣ್ಣ, ಅಕ್ಕನಾಗಮ್ಮ ಮೊದಲಾದ ಶರಣರು ವಚನಗಳ ಹಸ್ತಪ್ರತಿಗಳನ್ನು ಗಂಟುಕಟ್ಟಿ ಹೊತ್ತುಕೊಂಡು ಉಳವಿಯ ಕಡೆಗೆ ಹೋಗುವ ಮುಂಚಿನ ಸಿದ್ಧತೆಯನ್ನು ಇಲ್ಲಿ ಕಾಣುತ್ತೇವೆ.

ಮನುಕುಲದ ಬಹುದೊಡ್ಡ ಆಸ್ತಿಯಾಗಿ ನಿಲ್ಲುವ ಶಕ್ತಿ ತಮ್ಮ ವಚನಗಳಿಗಿದೆ ಎಂದು ಶರಣರು ತಿಳಿದಿದ್ದರು. ಆ ಕಾರಣಕ್ಕಾಗಿ ಅವುಗಳ ಸಂರಕ್ಷಣೆಯನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ಮಾಡಿಕೊಳ್ಳಲು ಮುಂದಾಗುತ್ತಿದ್ದಾರೆ. ಸನ್ನಿವೇಶವನ್ನು ಕಲಾವಿದ ಯಶಸ್ವಿಯಾಗಿ ದಾಖಲಿಸಿದ್ದಾನೆ. ಲಘುವರ್ಣಗಳನ್ನು ಇಲ್ಲಿ ಪ್ರಧಾನವಾಗಿ ಬಳಸಲಾಗಿದೆ. ಇದರಲ್ಲಿ ಕಾವಿ, ಮತ್ತು ತೆಳು ಬಿಳಿಯ ಬಣ್ಣ, ಮತ್ತು ತೆಳು ಹಸಿರುಬಣ್ಣಗಳು ಹೆಚ್ಚು ಬಳಕೆಯಾಗಿವೆ. ಗಡ್ಡ ಮೀಸೆಗಳು, ಬಲಗೈಯಲ್ಲಿ ಉದ್ದನೆಯ ಬೆತ್ತ, ಎಡಗೈಯಲ್ಲಿ ಒರೆಯಲ್ಲಿರುವ ಕತ್ತಿ, ಹೆಗಲಮೇಲೆ ಕೆಂಪುಬಣ್ಣದ ಮೇಲುಹೊದಿಕೆ, ತೆಳುಹಳದಿ ಬಣ್ಣದ ಪಂಚೆಯನ್ನು ಧರಿಸಿದ ವ್ಯಕ್ತಿ ಬಹುಶಃ ಮಡಿವಾಳ ಮಾಚಿದೇವನಿರಬೇಕು. ಆತನ ಪಕ್ಕದಲ್ಲಿ ಚನ್ನಬಸವಣ್ಣ ಕಪ್ಪುಕೂದಲಿನ ಜಟೆಯನ್ನು ಹೊಂದಿ, ತಿಳಿಗೆಂಪು ಬಣ್ಣದ ಪಂಚೆ, ಮೇಲುಹೊದಿಕೆಯನ್ನು ಹೊದ್ದು ಆತನ ಪಕ್ಕದಲ್ಲಿ ಕೆಂಪುಬಣ್ಣದ ಸೀರೆಯನ್ನು ಉಟ್ಟಿರುವ ಅಕ್ಕನಾಗಮ್ಮನ ಕಡೆಗೆ ನೋಡುತ್ತಿದ್ದಾನೆ. ಇವರ ಮುಂದೆ ಮೂರು ಜನ ಶರಣರು ದೊಡ್ಡದಾದ ವಚನದ ಹಸ್ತಪ್ರತಿಗಳ ಗಂಟುಗಳನ್ನು ಬಿಳಿ ಪಂಚೆಯಿಂದ ಕಟ್ಟುತ್ತಿರುವ ದೃಶ್ಯವು ಯಥಾವತ್ತಾಗಿ ಮೂಡಿಬಂದಿದೆ. ಮಡಿವಾಳ ಮಾಚಿದೇವನ ಹಿಂದೆ ಕೆಲವು ಶರಣೆಯರು ಹಸ್ತಪ್ರತಿಯ ದೊಡ್ಡ ಗಂಟುಗಳನ್ನು ತಲೆಯ ಮೇಲೆ ಹೊತ್ತು ಸಾಗುವ ಹಂತದಲ್ಲಿರುವುದನ್ನು ಕಾಣುತ್ತೇವೆ. ಬಸವಣ್ಣನವರ ಅನುಪಸ್ಥಿತಿಯಲ್ಲಿ ನಡೆದ ಈ ಘಟನೆಯು ಮಹತ್ವಪೂರ್ಣವಾಗಿದೆ. ಕಲಾವಿದ ಇಂತಹ ಘಟನೆಯನ್ನು ತನ್ನ ಚಿತ್ರಪಥ್ಯದಲ್ಲಿ ಅಳವಡಿಸಿರುವುದು ಶ್ಲಾಘನೀಯವಾಗಿದೆ.

೬.೫. ಬಿಜ್ಜಳನ ಸೈನಿಕರು ಮತ್ತು ಶರಣರ ನಡುವಿನ ಸಂಘರ್ಷ

ಬಸವಣ್ಣನವರನ್ನು ಕಲ್ಯಾಣದಿಂದ ಬಿಜ್ಜಳ ಮಹಾರಾಜನು ಗಡೀಪಾರು ಮಾಡಿದ ಮೇಲೆ ಶರಣರು ಬಿಜ್ಜಳನ ಮೇಲೆ ಕೋಪ ತಾಳುತ್ತಾರೆ. ಅದಾದ ನಂತರ ಬಿಜ್ಜಳನು ಹರಳಯ್ಯ ಮಧುವರಸರಿಗೆ ಎಳೆಯೂಟೆ ಶಿಕ್ಷೆ ವಿಧಿಸಿದ ಮೇಲೆ ಶರಣರು ಮತ್ತಷ್ಟು ಆಕ್ರೋಶಭರಿತರಾಗುತ್ತಾರೆ. ಆ ನಿಟ್ಟಿನಲ್ಲಿ ದಂಗೆಯೆದ್ದು ಬಿಜ್ಜಳನನ್ನು ಕೊಲೆ ಮಾಡುತ್ತಾರೆ. ಆ ಸನ್ನಿವೇಶವನ್ನು ಕಲಾವಿದ ಇಲ್ಲಿ ಮೂಡಿಸಿದ್ದಾನೆ. ಅಪೂರ್ವವಾದ ವರ್ಣಸಂಯೋಜನೆಯನ್ನು ಇಲ್ಲಿ ಕಾಣುತ್ತೇವೆ. ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ, ಕಿವಿಗಳಲ್ಲಿ ರುದ್ರಾಕ್ಷಿಯ ಓಲೆಗಳನ್ನು ಧರಿಸಿ ಕತ್ತಿ ಹಿಡಿದು ಕುದುರೆಯ ಮೇಲೆ ನಿಂತವರೆಲ್ಲರೂ ಶರಣರೆಂದು ಹಾಗೂ ನಿಲುವಂಗಿ, ತಲೆಯ ಮೇಲೆ ಮುಂಡಾಸನ್ನು ಧರಿಸಿ, ಸೊಂಟಕ್ಕೆ ಮೇಲುಹೊದಿಕೆಯನ್ನು ಕಟ್ಟಿಕೊಂಡು ಕತ್ತಿ ಹಿಡಿದವರನ್ನು ಬಿಜ್ಜಳನ ಕಡೆಯ ಸೈನಿಕರೆಂದು ಗುರುತಿಸಬಹುದು. ಶರಣರು ಮತ್ತು ಬಿಜ್ಜಳನ ಸೈನಿಕರೊಂದಿಗೆ ನಡೆಯುತ್ತಿರುವ ಯುದ್ಧದ ಗಂಭೀರ ದೃಶ್ಯಗಳನ್ನು ಇಲ್ಲಿ ಕಾಣುತ್ತೇವೆ. ಕಂದುಬಣ್ಣದ

ಮತ್ತು ಬಿಳಿಬಣ್ಣದ ಎರಡು ಜೊತೆ ಕುದುರೆಗಳು ಇಲ್ಲಿ ಪ್ರಧಾನವಾಗಿ ಗುರುತಿಸಿಕೊಳ್ಳುತ್ತವೆ. ಶರಣರೊಂದಿಗೆ ಶರಣೆಯರು ಕುದುರೆಯ ಮೇಲೆ ಖಡ್ಗ ಹಿಡಿದು ಕುಳಿತು ಹೋರಾಟದಲ್ಲಿ ಭಾಗಿಯಾಗಿರುವುದು ವಿಶೇಷವಾಗಿದೆ. ಶರಣರು ಖಡ್ಗ ಹಿಡಿದಿರುವುದು ಯಾವುದೇ ಭೂಮಿ-ಸೀಮೆಯ ಗಳಿಕೆಗಾಗಿ ಅಲ್ಲ. ತಮ್ಮ ವಿಚಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಎಂಬುದು ಇಲ್ಲಿ ಕಾಣುತ್ತಿದೆ. ಕೃತಿಯ ಪರಿಣಾಮದಲ್ಲಿ ಶರಣರ ಪಡೆಯು ಮೇಲುಗೈ ಸಾಧಿಸಿರುವುದು, ಬಿಜ್ಜಳನ ಸೈನಿಕರು ಸೋಲುವ ಹಂತದಲ್ಲಿರುವುದು ಸ್ಪಷ್ಟವಾಗಿ ಮೂಡಿದೆ. ಚಿತ್ರವನ್ನು ನೋಡಿದರೆ ಹೋರಾಟವು ನಿಜವಾಗಿಯೂ ನಡೆಯುತ್ತಿದೆಯೆಂಬ ಭಾವನೆಯನ್ನು ಮೂಡಿಸುವಲ್ಲಿ ಕಲಾಕೃತಿ ಸಫಲವಾಗಿದೆ.

೬.೬. ಕಲ್ಯಾಣ ತೊರೆಯುತ್ತಿರುವ ಶರಣರ ಸಮೂಹ

ಬಸವಣ್ಣನವರ ಅನುಯಾಯಿಗಳು ಮತ್ತು ಶರಣರ ನಡುವೆ ನಡೆದ ಹೋರಾಟದಲ್ಲಿ ಅನೇಕ ಜನ ಶರಣರ ಹತ್ಯೆಯಾಗುತ್ತದೆ. ಅಂತೆಯೇ ಬಿಜ್ಜಳನು ಕೂಡ ಶರಣರಿಂದ ಹತನಾಗುತ್ತಾನೆ. ಚನ್ನಬಸವಣ್ಣ, ಅಕ್ಕನಾಗಮ್ಮ, ಸಿದ್ಧರಾಮ, ಮಡಿವಾಳ ಮಾಚಿದೇವ ಮುಂತಾದ ಪ್ರಮುಖ ಶರಣರು ಕಲ್ಯಾಣವನ್ನು ತೊರೆದು ಉಳವಿಯ ಕಡೆಗೆ ಹೋಗಲು ಇಚ್ಛಿಸುತ್ತಾರೆ. ಆ ಪ್ರಯಾಣದ ಸಂದರ್ಭವನ್ನು ಪ್ರಸ್ತುತ ಚಿತ್ರವು ಮನಮುಟ್ಟುವಂತೆ ನಿರೂಪಿಸಿದೆ. ಕಂದು, ಕಡು ಕಂದು, ಬಿಳಿಯ ಬಣ್ಣದ ಕುದುರೆಗಳ ಮೇಲೆ ಶರಣ, ಶರಣೆಯರು ಖಡ್ಗಗಳನ್ನು ಎತ್ತಿ ಹಿಡಿದು ಉಳವಿಯ ಕಡೆಗೆ ಪ್ರಯಾಣ ಹೊರಟಿದ್ದಾರೆ. ಅವರಲ್ಲಿ ಪ್ರಮುಖವಾಗಿ ಅಲಂಕೃತಗೊಂಡ ಬಿಳಿಯ ಕುದುರೆಯ ಮೇಲೆ ಗಡ್ಡಮೀಸೆಗಳುಳ್ಳ ಶರಣನೊಬ್ಬ ಗಮನಸೆಳೆಯುತ್ತಾನೆ. ಆತನ ಕುದುರೆಯಲ್ಲಿ ಹಸ್ತಪ್ರತಿಗಳ ಒಂದು ದೊಡ್ಡ ಗಂಟು ನೇತಾಡುತ್ತಿರುವುದನ್ನು ಗಮನಿಸಬಹುದು. ಆತನ ಪಕ್ಕದಲ್ಲಿ ಬಿಳಿಸೀರೆ ಮತ್ತು ಹಸಿರು ಬಣ್ಣದ ಕುಪ್ಪಸವನ್ನು ಧರಿಸಿ ಕೈಯಲ್ಲಿ ಖಡ್ಗ ಹಿಡಿದ ಶರಣೆ ಕುದುರೆಯ ಮೇಲಿದ್ದು ಪಕ್ಕದಲ್ಲಿ ಹಸ್ತಪ್ರತಿಯ ಗಂಟು ಕಂಡುಬರುತ್ತದೆ.

ಚನ್ನಬಸವಣ್ಣ ಮತ್ತು ಅಕ್ಕನಾಗಮ್ಮ ಚಿತ್ರದ ಎಡಬದಿಯಲ್ಲಿ ಕುದುರೆಯ ಮೇಲೆ ಕುಳಿತು ಖಡ್ಗವನ್ನು ಎತ್ತಿ ಹಿಡಿದಿರುವುದನ್ನು ನೋಡುತ್ತೇವೆ. ಅವರ ಹಿಂದೆ ಬಿಳಿಬಣ್ಣದ ನಿಲುವಂಗಿ, ಪಂಚೆಗಳನ್ನು ಧರಿಸಿ, ಖಡ್ಗಗಳನ್ನು ಮೇಲೆತ್ತಿ ಹಿಡಿದ ಅನೇಕ ಶರಣರು ಕುದುರೆಯ ಮೇಲೇರಿ ಕಲ್ಯಾಣವನ್ನು ತೊರೆಯುತ್ತಿರುವ, ಹಿನ್ನೆಲೆಯಲ್ಲಿ ಕಾರ್ಮೋಡಗಳನ್ನು ಚಿತ್ರಿಸಿರುವ ಕಾರಣದಿಂದ ಚಿತ್ರದಲ್ಲಿ ಒಂದು ಬಗೆಯ ದುಃಖದ ಛಾಯೆಯ ಸನ್ನಿವೇಶವನ್ನು ಕಲಾವಿದ ಯಶಸ್ವಿಯಾಗಿ ನಿರ್ವಹಿಸಿದ್ದಾನೆ.

೬.೭. ಬುದ್ಧ-ಬಸವ-ಅಂಬೇಡ್ಕರ್

ಈ ಚಿತ್ರದಲ್ಲಿ ಕಲಾವಿದ ಭೂತ-ವರ್ತಮಾನಗಳ ಸಂಗಮವನ್ನು ಬುದ್ಧ-ಬಸವ-ಅಂಬೇಡ್ಕರ್ ಇವರ ಭಾವಚಿತ್ರಗಳ ಸಂಗಮದ ಮೂಲಕ ಅಭಿವ್ಯಕ್ತಿಪಡಿಸಿದ್ದಾನೆ. ಸಾಮೀಪ್ಯದಿಂದ ನೋಡುಗರಿಗೆ ಕಾಣುವಂತಿರುವ ಈ ಚಿತ್ರದಲ್ಲಿ ನೋಡುಗರಿಗೆ ಮೊದಲು ಬುದ್ಧನ ಚಿತ್ರ ಕಾಣಸಿಗುತ್ತದೆ. ಆತನ ಬಲಬದಿಯಲ್ಲಿ ಬಸವಣ್ಣ, ಎಡಬದಿಯಲ್ಲಿ ಅಂಬೇಡ್ಕರ್ ಅವರ ಚಿತ್ರಗಳಿವೆ. ಬುದ್ಧನ ಬಲಬದಿಯಲ್ಲಿರುವ ಬಸವಣ್ಣ

ಕಂದುಬಣ್ಣದ ಮಟ್ಟಸವಾಗಿ ಕತ್ತರಿಸಿದ ತಲೆಗೂದಲು, ಹಣೆಗೆ ದಪ್ಪನೆಯ ಗೆರೆಗಳ ವಿಭೂತಿ, ಕಂದುಬಣ್ಣದ ತಿದ್ದಿದಂತಿರುವ ಹುಬ್ಬುಗಳು ಮತ್ತು ಕಾಂತಿಯುಕ್ತ ಕಂದುಬಣ್ಣದ ಆಲಿಗಳನ್ನುಳ್ಳ ಕಣ್ಣುಗಳ ಶಾಂತ, ಗಂಭೀರ ನೋಟ, ನೀಳವಾದ ಮೂಗು, ಕಂದುಬಣ್ಣದ ದಪ್ಪ ಮೀಸೆಯನ್ನು ಹೊಂದಿದ್ದಾನೆ. ಆತನ ಬಲಭುಜದ ಸ್ವಲ್ಪ ಭಾಗ ಮಾತ್ರ ಕಾಣಿಸುತ್ತಿದ್ದು, ಉಳಿದ ದೇಹದ ಭಾಗವೆಲ್ಲವೂ ಬುದ್ಧನ ಬೆನ್ನ ಹಿಂದೆ ಮರೆಯಾಗಿದೆ. ಕಿವಿಯಲ್ಲಿ ಧರಿಸಿರುವ ರುದ್ರಾಕ್ಷಿಯ ಓಲೆ ಮಾತ್ರ ಕಾಣಿಸುತ್ತಿದ್ದು ಬಸವಣ್ಣನ ಎಡಕಿವಿ ಮರೆಯಾಗಿದೆ. ರುದ್ರಾಕ್ಷಿಯು ಬುದ್ಧನ ಕಿವಿಯಲ್ಲಿ ಇದೆಯೆಂಬ ಭ್ರಮೆ ಹುಟ್ಟಿಸುತ್ತದೆ.

ಚಿತ್ರದ ಮಧ್ಯದಲ್ಲಿರುವ ಬುದ್ಧನ ಚಿತ್ರವೇ ಪ್ರಸ್ತುತ ಕಲಾಕೃತಿಯಲ್ಲಿ ಪ್ರಧಾನವಾಗಿ ಕಾಣುವಂತೆ ಕಲಾವಿದ ಚಿತ್ರಿಸಿದ್ದಾನೆ. ಕಂದು ಬಣ್ಣದ ಗುಂಗುರು ಕೂದಲು, ಅವುಗಳನ್ನು ಬಾಚಿ ಸಿಂಬೆಯಂತೆ ಸುರುಳಿಯಾಕಾರದಲ್ಲಿ ಕಟ್ಟಿದ ಮಟ್ಟಸವಾದ ಜಟೆ, ವಿಶಾಲವಾದ ಹಣೆ, ತೆಳುವಾದ ಬಿಲ್ಲಿನಾಕಾರದ ಹುಬ್ಬುಗಳು, ಪದ್ಮನೇತ್ರಗಳು, ಹಾಲುಗೆನ್ನೆ, ಮುಗ್ಧತೆಯನ್ನು ಸೂಸುವ ತುಟಿಗಳು, ಬೋಳು ಕೊರಳಿನ ಬುದ್ಧ ಶಾಂತಮೂರ್ತಿಯಾಗಿ ಬಿಂಬಿತನಾಗಿದ್ದಾನೆ. ತನ್ನ ಬಲಗೈಯ ಹಸ್ತದ ತೋರುಬೆರಳು, ಹೆಬ್ಬೆರಳನ್ನು ಕೂಡಿಸಿ ಆಶೀರ್ವಾದ ಮಾಡುವ ಭಂಗಿಯಲ್ಲಿ ಬುದ್ಧ ನಿಂತಿದ್ದು ಕಾವಿ ಬಣ್ಣದ ಮೇಲುವಸ್ತ್ರವನ್ನು ಧರಿಸಿದ್ದಾನೆ. ಆತನ ಎಡಬದಿಯಲ್ಲಿ ಕಂದುಬಣ್ಣದ ಕಿರು ತಲೆಗೂದಲು, ವಿಶಾಲವಾದ ಹಣೆ, ಕಪ್ಪು ಕಟ್ಟಿನ ದುಂಡನೆಯ ಆಕಾರದ ಕನ್ನಡಕ, ದಪ್ಪ ಮೂಗು, ದೃಢತೆಯನ್ನು ಸೂಸುವ ದಪ್ಪ ತುಟಿಗಳು, ಕೋಟು, ಕೆಂಪು ಬಣ್ಣದ ಟೈಯನ್ನು ಧರಿಸಿದ ಅಂಬೇಡ್ಕರ್ ಅವರ ಕಣ್ಣುಗಳು ಹೊಳೆಯುತ್ತಿದ್ದು, ತೀಕ್ಷ್ಣವಾದ ನೋಟವನ್ನು ಬೀರುತ್ತಿವೆ. ಈ ಮೂವರು ಮಹಾವ್ಯಕ್ತಿಗಳ ಅರ್ಧದೇಹಾಕೃತಿಯ ಹಿಂಬದಿಯ ಭಿತ್ತಿಯಲ್ಲಿ ತೆಳು ಕಂದುಬಣ್ಣದಿಂದ ಚಿತ್ರಿಸಿದ ಅಶೋಕಚಕ್ರವಿದೆ. ಈ ಚಿತ್ರದಲ್ಲಿ ಕಲಾವಿದ ಕ್ರಾಂತಿಪುರುಷರನ್ನು ಒಂದೆಡೆ ಸೇರಿಸುವ ಪ್ರಯತ್ನ ಮಾಡಿರುವುದು ಮೆಚ್ಚುಗೆಗೆ ಪಾತ್ರವಾಗಿದೆ.

೬.೮. ಬಸವೇಶ್ವರರ ಜೀವನವನ್ನು ನಿರೂಪಿಸುವ ಚಿತ್ರಪಟ

ಬಸವಣ್ಣನವರು ತನ್ನ ಪೂರ್ವಜನ್ಮದಲ್ಲಿ ನಂದಿಯ ಅವತಾರವನ್ನು ಹೊಂದಿದ್ದು, ಅನಿಮಿಷಯ್ಯನಿಗೆ ಲಿಂಗವನ್ನು ನೀಡುತ್ತಿರುವ ಸನ್ನಿವೇಶವನ್ನು ಮೊದಲ ಚಿತ್ರದಲ್ಲಿ ಕಾಣುತ್ತೇವೆ. ಕೆಂಪುವಸ್ತ್ರವನ್ನು ಹೆಗಲಮೇಲೆ ಪೂರ್ತಿ ಹೊದ್ದುಕೊಂಡು, ತಲೆಯ ಮೇಲೆ ಕಿರೀಟವನ್ನು ಧರಿಸಿರುವ ನಂದಿಯು ತನ್ನ ಕೆಳಗೆ ಕುಳಿತಿರುವ ಅನಿಮಿಷಯ್ಯ ಎಂಬ ರಾಜನಿಗೆ ಇಷ್ಟಲಿಂಗವನ್ನು ನೀಡಿ ಅನುಗ್ರಹಿಸುತ್ತಿರುವ ಸನ್ನಿವೇಶವಿದೆ.

ಎರಡನೆಯ ಚಿತ್ರಪಟವು ಬಸವಣ್ಣನವರ ಜೀವನ ಚರಿತ್ರೆಯನ್ನು ಹನ್ನೊಂದು ಚಿತ್ರಗಳಲ್ಲಿ ನಿರೂಪಿಸಲು ಯತ್ನಿಸಿದೆ. ಚಿತ್ರಪಟದ ಬಲತುದಿಯ ಮೇಲೆ ಬಸವಣ್ಣನ ಜನನದ ಸಂದರ್ಭವಿದೆ. ಮಂಚದ ಮೇಲೆ ಕೆಂಪುಬಣ್ಣದ ಸೀರೆಯನ್ನುಟ್ಟ ಮಾದಲಾಂಬಿಕೆಯ ಪಕ್ಕದಲ್ಲಿ ಶಿಶು ಬಸವಣ್ಣನಿದ್ದಾನೆ. ಕಾವಿ ಬಣ್ಣದ ವಸ್ತ್ರಗಳನ್ನುಟ್ಟು ತಲೆಯಲ್ಲಿ ಜಟೆಯನ್ನು ಹೊಂದಿರುವ ಜಂಗಮವೇಷದ ಶಿವನು ಬಸವಣ್ಣನ ತಲೆಯ ಮೇಲೆ ಕೈಯಿರಿಸಿ ಆಶೀರ್ವದಿಸುವ ಸಂಗತಿಯು ಚಿತ್ರಿತವಾಗಿದೆ.

ಮೂರನೆಯ ಚಿತ್ರದಲ್ಲಿ ಬಸವಣ್ಣನು ಉಪನಯನವನ್ನು ನಿರಾಕರಿಸುವ ಸನ್ನಿವೇಶವಿದೆ. ಮಾದರಸ, ಮಾದಲಾಂಬಿಕೆ ಮತ್ತು ಇತರ ಕುಟುಂಬವರ್ಗದವರು ಬಸವಣ್ಣನಿಗೆ ಉಪನಯನವನ್ನು ಮಾಡಿ ಜನಿವಾರವನ್ನು ಹಾಕಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿರುವುದನ್ನು ಈ ಚಿತ್ರದಲ್ಲಿ ಕಾಣುತ್ತೇವೆ. ಮಂಗಳಕರವಾದ ವಸ್ತ್ರಗಳು, ವಸ್ತುಗಳು, ಹಣ್ಣುಹಂಪಲುಗಳು ಇಲ್ಲಿ ಕಂಡುಬರುತ್ತವೆ. ಬಸವಣ್ಣನು ಕೊರಳಲ್ಲಿ ಕೆಂಪುಬಣ್ಣದ ವಸ್ತ್ರದಲ್ಲಿ ಇಷ್ಟಲಿಂಗವನ್ನು ಈಗಾಗಲೇ ಧರಿಸಿದ್ದಾನೆ. ಉಪನಯನ ಸಂಸ್ಕಾರವು ತನಗೆ ಬೇಡ ಎಂಬುದನ್ನು ಸೂಚಿಸಲು ತನ್ನ ಎಡಗೈಯನ್ನು ಹಿಂದಕ್ಕೆ ಚಾಚಿರುವುದು ಕಂಡುಬರುತ್ತದೆ.

ನಾಲ್ಕನೆಯ ಚಿತ್ರದಲ್ಲಿ ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಆಕಾಶದಿಂದ ಬಿದ್ದ ಗೂಢಲಿಪಿಯ ಓಲೆಯನ್ನು ಓದುತ್ತಿರುವ ಸಂದರ್ಭವನ್ನು ಪ್ರತಿಪಾದಿಸುತ್ತದೆ. ಸಿಂಹಾಸನದ ಮೇಲೆ ಹಳದಿಬಣ್ಣದ ರಾಜಪೋಷಾಕಿನೊಂದಿಗೆ ಕಿರೀಟವನ್ನು ಧರಿಸಿದ ಬಿಜ್ಜಳನ ಎದುರಿನಲ್ಲಿ ಬಸವಣ್ಣನವರು ಕೆಂಪುವಸ್ತ್ರದ ಮೇಲುಹೊದಿಕೆಯನ್ನು ಧರಿಸಿ, ಬಿಳಿಪಂಚೆಯನ್ನು ಧರಿಸಿ, ಕೈಯಲ್ಲಿನ ಓಲೆಯನ್ನು ಓದಿ ಬಿಜ್ಜಳನಿಗೆ ಹೇಳುತ್ತಿರುವ ಸನ್ನಿವೇಶವಿದೆ.

ಐದನೆಯ ಚಿತ್ರದಲ್ಲಿ ಅಲ್ಲಮಪ್ರಭುದೇವರಿಗೆ ಬಸವಾದಿ ಶರಣರು ಪಾದಪೂಜೆಯನ್ನು ಮಾಡುವ ಸನ್ನಿವೇಶವನ್ನು ಕಾಣುತ್ತೇವೆ. ಕಪ್ಪು ಬಣ್ಣದ ಜಟೆ, ಗಡ್ಡಮೀಸೆಗಳನ್ನು ಹೊಂದಿದ ಅಲ್ಲಮಪ್ರಭು ಕಾವಿಬಣ್ಣದ ಉಡುಗೆಗಳನ್ನು ಧರಿಸಿ, ಪೀಠವೊಂದರ ಮೇಲೆ ಕುಳಿತಿದ್ದಾನೆ. ಆತನ ಅಕ್ಕಪಕ್ಕದಲ್ಲಿ ಶರಣರು, ಶರಣೆಯರು ಇದ್ದಾರೆ. ಕೆಳಗೆ ಬಸವಣ್ಣ ಮತ್ತು ಚನ್ನಬಸವಣ್ಣ, ಸಿದ್ಧರಾಮ ಮುಂತಾದ ಶರಣರು ಪಾದಪೂಜೆಯ ಕಾಯಕದಲ್ಲಿ ತೊಡಗಿದ್ದಾರೆ.

ಆರನೆಯ ಚಿತ್ರವು ಬಿಜ್ಜಳನ ಸಿಂಹಾಸನವು ಹೊತ್ತಿ ಉರಿಯುವ ಘಟನೆಯನ್ನು ಒಳಗೊಂಡಿದೆ. ಬಸವಣ್ಣನವರ ನಂದಿಯುಂಗುರಕ್ಕೆ ಮಾತ್ರ ನಮಸ್ಕರಿಸುತ್ತಾನೆ, ಅದನ್ನು ಕಳಚಿ ನಿಮಗೆ ನಮಸ್ಕರಿಸಲು ಹೇಳಿರಿ ಎಂದು ಬ್ರಾಹ್ಮಣರು ಬಿಜ್ಜಳನಿಗೆ ಹೇಳುತ್ತಾರೆ. ಅದರಂತೆ ಬಿಜ್ಜಳನು ಬಸವಣ್ಣನವರಿಗೆ ನಂದಿಯುಂಗುರದ ಮುದ್ರೆಯನ್ನು ಧರಿಸದೆ ನಮಸ್ಕರಿಸಲು ಹೇಳಿದಾಗ, ಬಸವಣ್ಣನವರು ಬಿಜ್ಜಳನಿಗೆ ತಾವು ಸಿಂಹಾಸನದಿಂದ ಕೆಳಗಿಳಿದು ಬಂದರೆ ಮಾತ್ರ ನಮಸ್ಕರಿಸುವೆ ಎಂದು ಹೇಳುತ್ತಾನೆ. ಅದರಂತೆ ಮಾಡಲು, ಬಸವಣ್ಣ ಮುದ್ರೆಯುಂಗುರವನ್ನು ಕಳಚಿ ಸಿಂಹಾಸನಕ್ಕೆ ನಮಸ್ಕರಿಸಿದಾಗ ಬೆಂಕಿಯು ಹೊತ್ತಿಕೊಂಡು ಸಿಂಹಾಸನ ಭಸ್ಮವಾಗುತ್ತದೆ. ಆ ಸನ್ನಿವೇಶವು ಇಲ್ಲಿ ದಾಖಲುಗೊಂಡಿದೆ. ಬಸವಣ್ಣ ಸಿಂಹಾಸನಕ್ಕೆ ಕೈಮುಗಿಯುತ್ತಿರುವಂತೆ ಉಳಿದವರು ಆ ಘಟನೆಗೆ ಅಚ್ಚರಿ ವ್ಯಕ್ತಪಡಿಸುತ್ತಿದ್ದಾರೆ.

ಏಳನೆಯ ಚಿತ್ರದಲ್ಲಿ ಅನುಭವಮಂಟಪದ ಸನ್ನಿವೇಶವನ್ನು ಪ್ರಸ್ತುತಪಡಿಸಲಾಗಿದೆ. ಅಲ್ಲಮಪ್ರಭು ಬಂಗಾರದ ಸಿಂಹಾಸನದ ಎತ್ತರದ ಪೀಠದ ಮೇಲೆ ಕುಳಿತಿದ್ದಾನೆ. ತನ್ನ ಎಡಗೈಯನ್ನು ಹೃದಯಭಾಗದ ಹತ್ತಿರ ಹಿಡಿದು ಬಲಗೈಯಿಂದ ಆಶೀರ್ವದಿಸುವ ಸನ್ನಿವೇಶವಿದೆ. ಆತನ ಎದುರಿಗೆ ಬಲಬದಿಯಲ್ಲಿ ಬಸವಣ್ಣನವರು ತಲೆಗೆ ಕಿರೀಟ, ಕೆಂಪು ಮೇಲುವಸ್ತ್ರವನ್ನು ಧರಿಸಿ, ಎರಡೂ ಕೈಗಳನ್ನು ಮುಗಿದು ಬಾಗಿ

ನಮಸ್ಕರಿಸುವ ಭಂಗಿಯಲ್ಲಿ ನಿಂತಿದ್ದಾರೆ. ಆತನ ಎದುರಿಗೆ ಬೋಳುತಲೆಯ ಚನ್ನಬಸವಣ್ಣ, ಆತನ ಹಿಂದೆ ಶರಣೆಯರು ನಿಂತಿದ್ದಾರೆ.

ಎಂಟನೆಯ ಚಿತ್ರದಲ್ಲಿ ತನ್ನ ಶರಣರಿಗೆ ದಾಸೋಹವನ್ನು ನೆರವೇರಿಸಿ ಭಂಡಾರವನ್ನು ಬರಿದು ಮಾಡಿದನೆಂಬ ಆರೋಪವನ್ನು ನಿರಾಕರಿಸಲು ರಾಜಭಟರಿಗೆ ಭಂಡಾರದಲ್ಲಿದ್ದ ಧನಕನಕಗಳನ್ನು ತೋರಿಸುತ್ತಿರುವ ಸನ್ನಿವೇಶವನ್ನು ನಿರೂಪಿಸಲಾಗಿದೆ. ತಲೆಯಲ್ಲಿ ಕಿರೀಟ, ಹೆಗಲ ಮೇಲೆ ಇಳಿಯಬಿಟ್ಟಿರುವ ಕೆಂಪು ಹೊದಿಕೆ, ಬರಿಯ ಮೈ, ಕೆಂಪು ಅಂಚನ್ನೊಳಗೊಂಡ ಬಿಳಿ ಬಣ್ಣದ ಪಂಚೆಯನ್ನು ಧರಿಸಿದ ಬಸವಣ್ಣ ತನ್ನ ಬಲಗೈಯನ್ನು ನಿಧಿಯ ಕಡೆಗೆ ಚಾಚಿರುವಂತೆ ಚಿತ್ರಿತವಾಗಿದ್ದಾನೆ. ಆತನ ವಿವರಣೆಯನ್ನು ಕೇಳುತ್ತಿರುವ ಭಂಗಿಯಲ್ಲಿ ಹಳದಿ ಬಣ್ಣದ ನಿಲುವಂಗಿ ತೊಟ್ಟು ಸೊಂಟದಲ್ಲಿ ಕಪ್ಪುಬಣ್ಣದ ಪಟ್ಟಿಯನ್ನು ಧರಿಸಿದ ರಾಜಭಟ ನಿಂತಿದ್ದಾನೆ. ಬಸವಣ್ಣನ ಬಲಪಾರ್ಶ್ವದಲ್ಲಿ ಬಂಗಾರದ ನಿಧಿಯ ಚಿತ್ರಣವಿದೆ.

ಒಂಬತ್ತನೆಯ ಚಿತ್ರದಲ್ಲಿ ಶಿವನು ವಿಟಜಂಗಮ ವೇಷಧರಿಸಿ, ಬಸವಣ್ಣನವರನ್ನು ಪರೀಕ್ಷಿಸುವ ಘಟನೆಯನ್ನು ನಿರೂಪಿಸಿದೆ. ಶಿವನು ಬಸವಣ್ಣನಲ್ಲಿಗೆ ಬಂದು, ನಾನು ಸೂಳೆಯ ಮನೆಗೆ ಹೋದಾಗ, ಅವಳು, ಬಸವಣ್ಣನ ಹೆಂಡತಿ ಗಂಗಾಂಬಿಕೆಯ ಪಟ್ಟದ ಸೀರೆಯನ್ನು ತಂದುಕೊಟ್ಟರೆ ಮಾತ್ರ ನಿನ್ನೊಂದಿಗೆ ಸೇರುತ್ತೇನೆ ಎಂದು ಹೇಳಿರುವಳು. ಆದ್ದರಿಂದ ನೀನು ನಿನ್ನ ಹೆಂಡತಿಯ ಸೀರೆಯನ್ನು ಕೊಡು ಎಂದು ಕೇಳಿದಾಗ, ಬಸವಣ್ಣನು ತನ್ನ ಹೆಂಡತಿಯ ಸೀರೆಯನ್ನು ಸೆಳೆಯುತ್ತಾನೆ. ಎಷ್ಟು ಸೆಳೆದರೂ ಅದು ಅಕ್ಷಯಾಂಬರವಾಗುತ್ತದೆ. ಆಗ ಜಂಗಮರೂಪದ ಶಿವನು ಬಸವಣ್ಣನವರನ್ನು ಮೆಚ್ಚುತ್ತಾನೆ. ಕೆಂಪುವಸ್ತ್ರವನ್ನು ಹೆಗಲ ಮೇಲೆ ಹೊದೆದಿರುವ, ಬಿಳಿಪಂಚೆಯನ್ನು ಉಟ್ಟು, ತಲೆಗೆ ಕಿರೀಟವನ್ನು ಬಸವಣ್ಣ ಧರಿಸಿರುವರು. ಆತನ ಹಿಂದೆ ಕಾವಿ ಬಣ್ಣದ ವಸ್ತ್ರಗಳನ್ನು ಧರಿಸಿದ ವ್ಯಕ್ತಿ ಜಂಗಮವಿಟನ ವೇಷದ ಶಿವನಾಗಿದ್ದಾನೆ. ಬಸವಣ್ಣನವರ ಎದುರಿಗೆ ಗಂಗಾಂಬಿಕೆಯು ನಿಂತಿದ್ದಾಳೆ. ಅವಳಿಂದ ಎಳೆದು ಹಾಕಿದ ಸೀರೆಯು ಹಾವಿನಂತೆ ಅಂಕುಡೊಂಕಾಗಿ ನೆಲದ ಮೇಲೆ ಬಿದ್ದಿದೆ.

ಹತ್ತನೆಯ ಚಿತ್ರವು ಬಸವಣ್ಣನವರು ಸಂಗಮನಾಥನನ್ನು ಸೇರಿ ಐಕ್ಯವಾಗುವ ಸನ್ನಿವೇಶವನ್ನು ಹೊಂದಿದೆ. ಕೂಡಲಸಂಗಮದಲ್ಲಿ ಬಸವಣ್ಣನವರು ಲಿಂಗದಲ್ಲಿ ಮೂಡಿದ ಶಿವನೊಂದಿಗೆ ಬಾಚಿರುತಬ್ಬಿ ತಾಯಿ ಮಗುವನ್ನು ಅಪ್ಪಿಕೊಳ್ಳುವಂತೆ ಅಪ್ಪಿಕೊಂಡಿದ್ದಾನೆ. ಶಿವನು ಲಿಂಗದಿಂದ ಒಡಮೂಡಿದಂತೆ ಕಲಾವಿದ ಇಲ್ಲಿ ಚಿತ್ರಿಸಿದ್ದು, ಒಂದು ಕಾಲನ್ನು ಲಿಂಗದ ನೆತ್ತಿಯ ಮೇಲೆ ಇಟ್ಟಿರುವಂತೆ ತೋರಿಸಲಾಗಿದೆ. ಕೈಯಲ್ಲಿ ತ್ರಿಶೂಲ, ಡಮರುಗಗಳನ್ನು, ಮತ್ತೆರಡು ಕೈಗಳಿಂದ ಬಸವಣ್ಣನವರನ್ನು ತಬ್ಬಿ ಹಿಡಿದು ಸಂತೈಸುವ ಸ್ಥಿತಿಯಲ್ಲಿರುವಂತೆ ಸನ್ನಿವೇಶವು ರೂಪುಗೊಂಡಿದೆ. ಕಪ್ಪುಬಣ್ಣದ ಶಿವಲಿಂಗದಲ್ಲಿ ಮೂರು ವಿಭೂತಿ ಗೆರೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಅದರ ಕೆಳಗೆ ಪುಷ್ಪವೃಷ್ಟಿಯಾಗಿರುವುದಕ್ಕೆ ಸಂಕೇತವಾಗಿ ಹೂವುಗಳು ಚಲ್ಲಾಪಿಲ್ಲಿಯಾಗಿ ಬಿದ್ದಿವೆ. ಅವರಿಬ್ಬರ ಹಿಂದೆ ನದಿಯು ಅಂಕುಡೊಂಕಾಗಿ ಚಲಿಸಿದೆ.

ಹನ್ನೊಂದನೆಯ ಚಿತ್ರದಲ್ಲಿ ಶಿವನು ಭೂಲೋಕದ ಯಾತ್ರೆಯನ್ನು ಮುಗಿಸಿ, ಲೋಕೋದ್ಧಾರವನ್ನು ಮಾಡಿ ಮತ್ತೆ ನಂದಿಯ ಅವತಾರದಲ್ಲಿ ಶಿವನ ಒಡ್ಡೋಲಗದಲ್ಲಿ ನಿಂತಿರುವ ಸಂದರ್ಭವನ್ನು ಕಲಾವಿದ

ಚಿತ್ರಿಸಿದ್ದಾನೆ. ಉನ್ನತವಾದ ಆಸನದಲ್ಲಿ ಪಾರ್ವತಿ ಪರಮೇಶ್ವರರು ಮತ್ತು ಗಣೇಶ ಕುಳಿತಿದ್ದಾರೆ. ಶಿವನು ಹಳದಿ ಬಣ್ಣದ ಉಡುಗೆಗಳನ್ನು ಧರಿಸಿ, ತಲೆಯನ್ನು ತುಸು ಬಾಗಿಸಿ, ಹಸಿರು ಹೂವುಗಳ ಪುಷ್ಪಮಾಲಿಕೆಯನ್ನು ನಂದಿರೂಪದಲ್ಲಿರುವ ಬಸವಣ್ಣನವರಿಗೆ ಹಾಕಲು ಮುಂದಾಗಿದ್ದಾನೆ. ಕೆಂಪುಸೀರೆ ಧರಿಸಿರುವ ಪಾರ್ವತಿಯು ಈ ದೃಶ್ಯವನ್ನು ನೋಡುತ್ತಿರುವಳು. ಗಣೇಶ ಕುತೂಹಲದಿಂದ ಈ ಘಟನೆಯನ್ನು ನೋಡುತ್ತಿದ್ದಾನೆ. ದಷ್ಟಪುಷ್ಟವಾಗಿರುವ ನಂದಿಯ ಭುಜದ ಮೇಲಿನ ಹಳದಿಬಣ್ಣದ ದಪ್ಪ ಅಂಚುನ್ನುಳ್ಳ ಕಡುಹಸಿರು ಬಣ್ಣದ ಮೇಲುಹೊದಿಕೆಯು ಗಮನಸೆಳೆಯುತ್ತದೆ. ಗಣಧರರು ಶಿವ ಪಾರ್ವತಿಯರ ಸುತ್ತಲೂ ಕಿಕ್ಕಿರಿದು ನಿಂತು ಕೈಮುಗಿದು ಭಕ್ತಿಭಾವಗಳಿಂದ ನೋಡುವಲ್ಲಿ ತಲ್ಲೀನರಾಗಿದ್ದಾರೆ. ಶಿವನ ಮೇಲೆ ಇರುವ ಛತ್ರ ಚಾಮರಗಳು, ಚಿತ್ರಕ್ಕೆ ಮೆರುಗನ್ನು ನೀಡಿವೆ.

❑❑❑



ಚಿತ್ರ ೬.೧ ಪಾದುಕೆ ತಯಾರಿಕೆಯಲ್ಲಿ ತೊಡಗಿದ ಹರಳಯ್ಯ-ಕಲ್ಯಾಣಮ್ಮ ದಂಪತಿಗಳು



ಚಿತ್ರ ೬.೨ ಪಾದುಕೆ ತಯಾರಿಕೆಯಲ್ಲಿ ತೊಡಗಿದ
ಹರಳಯ್ಯ-ಕಲ್ಯಾಣಮ್ಮ ದಂಪತಿಗಳು



ಚಿತ್ರ ೬.೩ ಎಳೆಯೂಟೆ ಪ್ರಸಂಗ ೧



ಎಳೆಯೂಟೆ ಪ್ರಸಂಗ ೨



ಚಿತ್ರ ೬.೪ ವಚನ ಸಾಹಿತ್ಯವನ್ನು ಸಂರಕ್ಷತೆ ಮಾಡುತ್ತಿರುವುದು



ಚಿತ್ರ ೬.೫ ಬಿಜ್ಜಳನ ಸೈನಿಕರು ಮತ್ತು ಶರಣರ ನಡುವಿನ ಸಂಘರ್ಷ



ಚಿತ್ರ ೬.೬ ಕಲ್ಯಾಣ ತೊರೆಯುತ್ತಿರುವ ಶರಣರ ಸಮೂಹ



ಚಿತ್ರ ೬.೭ ಬುದ್ಧ, ಬಸವ, ಅಂಬೇಡ್ಕರ



ಚಿತ್ರ ೬.೮ ಬಸವೇಶ್ವರರ ಜೀವನವನ್ನು ನಿರೂಪಿಸುವ ಚಿತ್ರಪಟ

ಅಧ್ಯಾಯ : ಏಳು

ಬಸವಣ್ಣನವರ ಕುರಿತ ಕಲಾಕೃತಿಗಳ ರಚನಾ ಕಲಾವಿದರು

ಪ್ರಸ್ತುತ ಅಧ್ಯಯನ ಭಾಗದಲ್ಲಿ ಕರ್ನಾಟಕ ರಾಜ್ಯದ ಮತ್ತು ಹೊರರಾಜ್ಯದ ಅನೇಕ ಕಲಾವಿದರು ಬಸವಣ್ಣನವರ ಕುರಿತು ಕಲಾಕೃತಿ ರಚಿಸಿದ್ದು ಅವರ ಸಂಕ್ಷಿಪ್ತ ಪರಿಚಯವನ್ನು ಕೊಡಲಾಗಿದೆ.

೧. ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು, ಮೈಸೂರು

ಶ್ರೀ ಸಿದ್ಧಲಿಂಗಸ್ವಾಮಿಗಳು ಕೊಳ್ಳೇಗಾಲದಲ್ಲಿ ೧೮೮೫ರಲ್ಲಿ ಜನಿಸಿದರು. ತಂದೆ ಸಿದ್ಧಪ್ಪಾಜಿ, ತಾಯಿ ಮಲ್ಲಾಜಮ್ಮನವರು. ಇವರ ಅಣ್ಣ ಅಪ್ಪಾಜಿ ಮೂಲತಃ ವಿಶ್ವಕರ್ಮ ಸಮುದಾಯದವರು. ಈ ಕುಟುಂಬ ಕಲಾಕುಟುಂಬ. ಇವರ ತಂದೆ ತಾಯಿ ಎಲ್ಲರೂ ಲೋಹಮಾಧ್ಯಮ, ಮರಮಾಧ್ಯಮ, ಮಣ್ಣು ಮುಂತಾದ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ತಯಾರಿಸುವಲ್ಲಿ ತಮ್ಮದೇ ಆದ ಹೆಸರನ್ನು ಪಡೆದಿದ್ದಾರೆ. ಶ್ರೀ ಸಿದ್ಧಲಿಂಗಸ್ವಾಮಿಗಳು ಬಹುಮುಖ ಕಲಾವಿದರು. ಶಿಲ್ಪಕಲೆ, ಶಾಸ್ತ್ರಗಳನ್ನು ಕಲಿತವರು. ಸಂಸ್ಕೃತ ಶಾಸ್ತ್ರ ಮತ್ತು ಚಿತ್ರರಚನೆಯಲ್ಲಿ ನಿಪುಣರು. ಆಗಿನ ಸಂದರ್ಭದಲ್ಲಿ ಅರಮನೆಯ ಅಲಂಕಾರದ ಕೆಲಸಕ್ಕೆ ೨೫ನೆಯ ವಯಸ್ಸಿನಲ್ಲಿ ಆಯ್ಕೆಯಾದರು. ಇವರು ತೈಲವರ್ಣದ ಚಿತ್ರಗಳನ್ನು ಮತ್ತು ಜಲವರ್ಣದ ಚಿತ್ರಗಳನ್ನು ರಚಿಸಿದ್ದಾರೆ. ತೈಲವರ್ಣದಲ್ಲಿ ಮತ್ತು ಜಲವರ್ಣದಲ್ಲಿ ಸಾಕಷ್ಟು ಪರಿಣತಿ ಹೊಂದಿದ ಇವರು ರಾಜರಾಜೇಶ್ವರಿ, ಅಷ್ಟಭುಜ ಕಾಳಿಕಾದೇವಿ, ನವದುರ್ಗಾದೇವಿ, ಮಹಿಷ ಮರ್ದಿನಿ, ಸರಸ್ವತಿ, ಮಹಾಲಕ್ಷ್ಮಿ, ಭುವನೇಶ್ವರಿದೇವಿ, ಗಾಯತ್ರಿದೇವಿ, ಏಕಮುಖ ಈಶ್ವರ, ತ್ರಿಮುಖ ಈಶ್ವರ, ಸರಸ್ವತಿ, ಪಾರ್ವತಿ, ಪರಮೇಶ್ವರ, ಅಶೋಕವನದಲ್ಲಿ ಹನುಮಂತ, ಇದರೊಂದಿಗೆ ಬಸವಣ್ಣನವರ ಜೀವನಾಧಾರಿತ ಚಿತ್ರಪಟಗಳ ರಚನೆಯನ್ನು ಮಾಡಿದ್ದಾರೆ. ಇವರ ಚಿತ್ರಪಟದಲ್ಲಿ ಬಸವಣ್ಣನ ಜೀವನ ಚಿತ್ರಗಳೊಂದಿಗೆ, ಬಸವನ ಪೂರ್ವಾವತಾರವಾದ ನಂದಿಯ ಚಿತ್ರವೂ ಇದರಲ್ಲಿದೆ. ೧೯೨೫ರಲ್ಲಿ ನಂಜುಂಡಸ್ವಾಮಿಗಳು ಕರಸ್ಥಲ ನಾಗಲಿಂಗಪೀಠದ ಪೀಠಾಧಿಕಾರಿಯನ್ನಾಗಿ ಶ್ರೀ ಸಿದ್ಧಲಿಂಗಸ್ವಾಮಿಗಳನ್ನು ನೇಮಿಸುತ್ತಾರೆ. ಪೀಠಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಲೇ ಇವರು ಶಿಲ್ಪಕಲೆ, ಚಿತ್ರಕಲೆ, ವಾಸ್ತುಶಿಲ್ಪದ ಬಗೆಗೆ ಅಪಾರವಾದ ಪ್ರೀತಿ ಮತ್ತು ಆಸಕ್ತಿಯೊಂದಿಗೆ ಕಲಾಕೃತಿಯ

ನಿರ್ಮಾಣ ಕಾರ್ಯದಲ್ಲಿ ತೊಡಗುತ್ತಾರೆ. ೧೯೩೦ರಲ್ಲಿ ಶ್ರೀ ಪೀಠದ ಸಂಪೂರ್ಣ ಜವಾಬ್ದಾರಿಯನ್ನು ತಮ್ಮ ಅಣ್ಣನ ಮಗನಿಗೆ ವಹಿಸಿ ಪೂರ್ಣಪ್ರಮಾಣದಲ್ಲಿ ಕಲಾಕ್ಷೇತ್ರಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಳ್ಳುತ್ತಾರೆ. ಈ ಘಟನೆಯು ಅವರ ಕಲಾಪ್ರೀತಿಗೆ ಸಾಕ್ಷಿಯಾಗಿದೆ. ಶ್ರೀ ಸಿದ್ಧಲಿಂಗಸ್ವಾಮಿಗಳು ಶಿಲ್ಪಕಲಾ ಪರಂಪರೆಯನ್ನು ಮುಂದಿನ ಜನಾಂಗಕ್ಕೆ ಮುಟ್ಟಿಸುವ ಸಲುವಾಗಿ ಶಿಲ್ಪಗುರುಕುಲವೊಂದನ್ನು ಸ್ಥಾಪಿಸುತ್ತಾರೆ. ಕಲಾಕ್ಷೇತ್ರದಲ್ಲಿ ಇವರ ಕೊಡುಗೆ ಬಹುದೊಡ್ಡ ಮಟ್ಟದ್ದಾಗಿದ್ದರೂ ಅವರ ಪ್ರತಿಭೆ ಅಷ್ಟೊಂದು ಗಮನಕ್ಕೆ ಬರಲಿಲ್ಲ. ಹಣ ಮತ್ತು ಅಧಿಕಾರಕ್ಕಾಗಿ ಆಸೆಪಡದ ಅವರು ಕಲಾಸೇವೆಗೆ ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೆ ಎನ್ನುವುದಕ್ಕೆ ಶ್ರೀ ಸಿದ್ಧಲಿಂಗಸ್ವಾಮಿಗಳು ಸಾಕ್ಷಿಯಾಗಿದ್ದಾರೆ. ಇವರು ಬಸವಣ್ಣನವರ ಪೂರ್ಣಭಾವಚಿತ್ರವನ್ನು ರಚಿಸಿದವರು.

೨. ಎಂ. ವಿ. ಮಿಣಜಿಗಿ

ಮಡಿವಾಳಪ್ಪ ವೀರಪ್ಪ ಮಿಣಜಿಗಿ ಅವರು ೧೯೦೧ ಜನವರಿ ೩೦ ರಂದು ಬಿಜಾಪುರ ಐತಿಹಾಸಿಕ ಪ್ರದೇಶದಲ್ಲಿ ಜನಿಸಿದರು. ಇವರದು ವ್ಯಾಪಾರಸ್ಥರ ಕುಟುಂಬ. ಇವರ ಪ್ರಾಥಮಿಕ ಶಿಕ್ಷಣ ಬಿಜಾಪುರದಲ್ಲಿ ಬಾಂಬೆ ಸರಕಾರವು ತೆರವು ಮಾಡಿದ ಸರಕಾರಿ ಮರಾಠಿ ಶಾಲೆಯಲ್ಲಿ ಜರುಗಿತು. ಚಿಕ್ಕಂದಿನಲ್ಲಿಯೇ ಇವರು ಓದಿನಲ್ಲಿ ತುಂಬಾ ಆಸಕ್ತರಾಗಿ ಗುರುವಿನ ಅತಿ ಮೆಚ್ಚಿ ಶಿಷ್ಯರಾಗಿದ್ದರು. ಇವರ ಮಧ್ಯಮಿಕ ಶಿಕ್ಷಣವು ಸಹ ಬಿಜಾಪುರದ ಹೈಸ್ಕೂಲನಲ್ಲಿಯೇ ವಿಧ್ಯಾಭ್ಯಾಸ ಮಾಡಿದರು. "ಕಲೆ ಸ್ವಭಾವಜನ್ಯವಾದ ಒಂದು ಗುಣವಾಗಿದ್ದು ಅದನ್ನು ಬೆಳೆಯಿಸುವ ವಾತಾವರಣವಿದ್ದರೆ ಅದು ಬೆಳೆಯುತ್ತದೆ" ಎಂಬ ಮಾತು ಎಂ. ವಿ. ಮಿಣಜಿಗಿ ಅವರಿಗೆ ಅನ್ವಯಿಕವಾಗುತ್ತದೆ. ತಮ್ಮ ಮಾಧ್ಯಮಿಕ ಶಿಕ್ಷಣದ ಅವಧಿಯಲ್ಲಿ ಕಲೆಯ ಬಗ್ಗೆ ಹೆಚ್ಚು ಆಸಕ್ತಿ ಮೂಡಿ ಕಲಾವಿದನಾಗಬೇಕೆಂಬ ಹಂಬಲದಿಂದ ಬಿಜಾಪುರದಲ್ಲಿಯೇ ಕಲಾಶಿಕ್ಷಣವನ್ನು ಪ್ರಾರಂಭಿಸಿದರು. ಮುಂದೆ ಚಿತ್ರಕಲೆಯಲ್ಲಿ ಉನ್ನತ ಶಿಕ್ಷಣವನ್ನು ಮುಂಬೈಯ ಸರ್.ಜೆ.ಜೆ.ಸ್ಕೂಲ್ ಆಫ್ ಆರ್ಟ್‌ದಲ್ಲಿ ವ್ಯಾಸಂಗ ಮಾಡುವರು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಅವರು ತೋರಿದ ಈ ಏಕಾಗ್ರತೆ ತನ್ಮಯತೆಗಳು ಹುಸಿ ಹೋಗಲಿಲ್ಲ, ಆ ಕಾಲದಲ್ಲಿಯೇ ಅವರಿಗೆ ಹೆಸರು ಕೀರ್ತಿಗಳು ಲಭಿಸುವದರೊಂದಿಗೆ ಅನೇಕ ಉತ್ತಮವಾದ ಅವಕಾಶಗಳು ಕೂಡ ದೊರೆತವು. ಎಂ.ವ್ಹಿ. ಮಿಣಜಿಗಿಯವರು ತಮ್ಮ ಕಲಾಶಿಕ್ಷಣವನ್ನು ಮುಗಿಸಿ ಅಲ್ಲಿಯೇ ತಮ್ಮ ವೃತ್ತಿಜೀವನವನ್ನು ಸಹ ಪ್ರಾರಂಭಿಸಿದರು. ಮುಂದೆ ಇವರು ಲಂಡನ್ನಿನ ರಾಯಲ್ ಕಲಾ ಕಾಲೇಜಿನಲ್ಲಿ ೧೯೩೦ರಲ್ಲಿ ಪ್ರವೇಶ ಪಡೆದು ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡರು. ಇವರು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದ ಕಲಾ ಪ್ರದರ್ಶನ, ಪ್ರಾತ್ಯಕ್ಷಿಕೆ, ಶಿಬಿರ ಹೀಗೆ ಅನೇಕ ಕಲಾ ಚಟುವಟಿಕೆಗಳನ್ನು ಏರ್ಪಡಿಸುವದರೊಂದಿಗೆ ಇನ್ನಿತರ ಚಟುವಟಿಕೆಗಳಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ. ೧೯೮೨ ಜನವರಿ ೧೪ರಂದು ಇವರು ನಿಧನ ಹೊಂದುವರು.

೩. ಎಂ. ವೀರಪ್ಪ, ಮೈಸೂರು

ಹಿರಿಯ ಕಲಾವಿದ ಎಂ.ವೀರಪ್ಪನವರು ೧೯೦೧ರಲ್ಲಿ ಜನಿಸಿದ್ದು, ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಆರಂಭಿಕ ಕಲಾಶಿಕ್ಷಣ ಪಡೆದು, ನಂತರ ಮುಂಬೈ ಜೆ.ಜೆ. ಕಲಾಶಾಲೆಯಲ್ಲಿ ಲಲಿತಕಲೆಯಲ್ಲಿ ಪದವಿ ಪಡೆದು, ೧೯೩೩ರಲ್ಲಿ ಅಖಿಲ ಭಾರತ ಕರಕುಶಲ ವಸ್ತು ಮಂಡಳಿಯಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಜಪಾನಿಗೆ ಹೋದರು. ೧೯೬೬ರಲ್ಲಿ ಮೈಸೂರು ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿಯನ್ನು ಪಡೆದರು.

ಇವರು ರಚಿಸಿದ ಕಲಾಕೃತಿಗಳು ಜಗನ್ಮೋಹನ ಕಲಾಗ್ಯಾಲರಿಯಲ್ಲಿ ಪ್ರದರ್ಶನಗೊಂಡಿವೆ. ಮುಂದೆ ಮೈಸೂರಿನಲ್ಲಿ ನೆಲೆಸಿ ಮೈಸೂರು ಟಾಯ್ಸ್ ಎಂದೇ ಪ್ರಖ್ಯಾತಿಯಾದರು. ಇವರು ರಚಿಸಿದ ಬಸವಣ್ಣನವರ ಚಿತ್ರವು ಭಾರತ ಸರಕಾರದ ಅಂಚೆ ಚೀಟಿಯಲ್ಲಿ ಮುದ್ರಿತವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಬಸವಣ್ಣನವರ ವಚನಗಳನ್ನು ಅನಕ್ಷರಸ್ಥರು ಓದಲಾರರು. ಆದ್ದರಿಂದ ವಚನಗಳ ಆಶಯವನ್ನು ಚಿತ್ರಕಲೆಯ ಮೂಲಕ ಅಭಿವ್ಯಕ್ತಿಸಿ ಓದು ಬಾರದವರಿಗೂ ತಿಳಿಯುವಂತೆ ಮಾಡಿದ ಕೀರ್ತಿ ಇವರಿಗೆ ಸಲ್ಲಬೇಕು.

ಎಂ.ವೀರಪ್ಪನವರು ರಚಿಸಿದ ವರ್ಣಚಿತ್ರಗಳನ್ನು ಅವರ ಮೊಮ್ಮಗ ತನ್ನ ತಂದೆಯ ಹೆಸರಿನಲ್ಲಿ ಮೈಸೂರಿನಲ್ಲಿ ಕಲಾಗ್ಯಾಲರಿಯನ್ನು ತೆರೆದು ಖಾಯಂ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದ್ದಾರೆ. ಎಂ. ವೀರಪ್ಪನವರ ಚಿತ್ರಗಳು ನೈಜಶೈಲಿಯ ಪ್ರಕಾರದವುಗಳಾಗಿವೆ. ಅವರ ಚಿತ್ರಗಳು ಬಹುವರ್ಣಗಳಿಂದ ರಚಿತವಾಗಿವೆಯಾದರೂ ಸುತ್ತೂರು ಮಠದ ಕಲಾಸಂಗ್ರಹಾಲಯದಲ್ಲಿ ಒಂಬತ್ತು ಕಪ್ಪು-ಬಿಳುಪು ವರ್ಣ ಲೇಪಿತ ಚಿತ್ರಗಳಾಗಿವೆ. ಇವು ಕೂಡ ಬಸವಣ್ಣನವರ ಜೀವನಾಧಾರಿತ ಚಿತ್ರಗಳಾಗಿವೆ. ಎಂ. ವೀರಪ್ಪನವರು ಮೊದಲು ವಚನಗಳನ್ನು ಓದಿ ನಂತರ ತಾವು ಅರ್ಥೈಸಿಕೊಂಡ ಮೇಲೆ ಸರಳವಾಗಿ ಚಿತ್ರದ ಮೂಲಕ ವಚನದ ಅರ್ಥವನ್ನು ತಿಳಿಯುವಂತೆ ಮೂಡಿಸುತ್ತಿದ್ದರು. ಇವರು ಕ್ರಿ.ಶ.೧೯೬೯ರಲ್ಲಿ ನಿಧನರಾದರು.

೪. ಬಿ.ಆರ್. ಕೊಟ್ಯಾಳಕರ, ಕೋಟ್ಯಾಳ

ಬಿ.ಆರ್. ಕೊಟ್ಯಾಳಕರ ಇವರ ಹೆಸರು ಭರಮಪ್ಪ ರತ್ನಪ್ಪ ಕುಂಬಾರ. ಇವರ ಗ್ರಾಮ ವಿಜಯಪುರ ಜಿಲ್ಲೆಯ ಕೊಟ್ಯಾಳ. ಇವರ ಜನನ ೧೯೦೨ ರಿಂದ ೧೯೦೫ ರೊಳಗೆ ಎಂದು ಅಂದಾಜಿಸಿಲಾಗಿದೆ. ೧೯೫೪-೧೯೫೫ರ ಕಾಲಾವಧಿಯಲ್ಲಿ ನಿಧನರಾರೆಂದು ಭೂಸಗೊಂಡ ಅವರ ಸಂಶೋಧನೆಯಿಂದ ತಿಳಿದು ಬಂದಿದೆ. ಬಿ.ಆರ್. ಕೊಟ್ಯಾಳಕರ ಅವರ ಮೂಲ ಕಸುಬು ಕುಂಬಾರಿಕೆ. ಸ್ವತಃ ಕಲೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡ ಇವರ ಕಲಾಕೃತಿಗಳನ್ನು ಕಂಡು ಮಹಾರಾಷ್ಟ್ರದ ಔಂಧ ಸಂಸ್ಥಾನ ರಾಜ ಬಾಳಾಸಾಹೇಬ ಅವರು ಇವರನ್ನು ಕರೆಯಿಸಿ ರಾಜಕುಟುಂಬದ ಭಾವಚಿತ್ರಗಳನ್ನು ರಚಿಸಲು ಪ್ರೋತ್ಸಾಹಿಸಿದರು. ಕಾರಣದಿಂದ ಔಂಧ ರಾಜರಲ್ಲಿ ಆಶ್ರಯ ಪಡೆದರು. ಒಳಮನಸ್ಸಿನಲ್ಲಿ ಬಸವಣ್ಣನವರ ಚಿತ್ರಗಳನ್ನು ಮತ್ತು ಶರಣರ ಕುರಿತು ಚಿತ್ರಗಳನ್ನು ರಚಿಸಬೇಕೆಂಬ ತುಡಿತವಿದ್ದ ಇವರು ಬಸವಣ್ಣನವರ ಕುರಿತು ರಚಿಸಿದ ಮೂಲ ಕೃತಿಗಳು ಬೇರೊಬ್ಬರ ಮಾಲಿಕತ್ವದಲ್ಲಿ ಇರುವುದರಿಂದ ಸಾರ್ವಜನಿಕರಿಗೆ ಲಭ್ಯವಾಗಿರುವುದಿಲ್ಲ.

೫. ಶ್ರೀ ಎಂ. ಎ. ಚೆಟ್ಟಿ, ಗದಗ

ಫೆಬ್ರುವರಿ ೮, ೧೯೦೭ರಂದು ಬೆಳಗಾವಿ ಜಿಲ್ಲೆಯ ಮುರುಘೇಂದ್ರ ಶಿವಯೋಗಿಗಳ ಪುಣ್ಯಕ್ಷೇತ್ರವಾದ ಅಥಣಿಯಲ್ಲಿ ಅಡಿವೆಪ್ಪ ಹಾಗೂ ಶಿವಗಂಗಾದೇವಿ ದಂಪತಿಗಳ ನಾಲ್ಕನೇಯ ಮಗನಾಗಿ ಶ್ರೀಯುತ ಎಂ.ಎ.ಚೆಟ್ಟಿಯವರು ಜನಿಸಿದರು. ಇವರದು ವ್ಯಾಪಾರ ಮನೆತನ. ಚಿಕ್ಕ ವಯಸ್ಸಿನಲ್ಲಿಯೇ ತಂದೆಯವರ ಮರಣ. ಚಿಕ್ಕಪ್ಪ ಅವರ ಆಶ್ರಯದಲ್ಲಿ ಬೆಳೆದರು. ಬಾಲ್ಯದಲ್ಲಿಯೇ ಕಲೆಯಲ್ಲಿ ಆಸಕ್ತಿಯನ್ನು ಬೆಳಸಿಕೊಂಡ ಚೆಟ್ಟಿಯವರು ೧೯೨೪ರಲ್ಲಿ ಅಥಣಿಯಿಂದ ಬೆಳಗಾವಿಗೆ ಬಂದ ಮೇಲೆ ಕಲಾಶಾಲೆಗೆ ಸೇರಬೇಕೆಂಬ

ತವಕ ಹುಟ್ಟಿಕೊಂಡಿತು. ಇಲ್ಲಿಂದಲೇ ಚೆಟ್ಟಿಯವರ ಕಲಾಶಿಕ್ಷಣ ಪ್ರಾರಂಭಗೊಂಡಿತೆನ್ನಬಹುದು. ಮುಂದೆ ಸರ್.ಜೆ.ಜೆ.ಸ್ಕೂಲ್ ಆಫ್ ಆರ್ಟ್ ಮುಂಬೈಗೆ ಕಲೆಯಲ್ಲಿ ಉನ್ನತ ಶಿಕ್ಷಣ ಪಡೆದು ಪ್ರವೇಶ ಪಡೆದರು. ೧೯೩೩ರಲ್ಲಿ ಚೆಟ್ಟಿಯವರು ವಿದ್ಯಾರ್ಥಿ ಜೀವನ ಮುಗಿಸಿ ಕ್ರಿಯಾಶೀಲನಾದ ಕಲಾವಿದನಾಗಿ ಹೊರಹೊಮ್ಮಿದರು.

ಎಂ.ಎ.ಚೆಟ್ಟಿಯವರು ತಮ್ಮ ಜೀವಿತಾವಧಿಯಲ್ಲಿ ಸುಮಾರು ೫೦೦ ರಿಂದ ೬೦೦ ಚಿತ್ರಗಳಷ್ಟು ತೈಲ ವರ್ಣದಲ್ಲಿ, ೩೦೦ ಚಿತ್ರಗಳನ್ನು ಜಲವರ್ಣದಲ್ಲಿಯೂ, ಹಾಗೂ ಬಹಳಷ್ಟು ಚಿತ್ರಗಳನ್ನು ಪೆನ್ಸಿಲ್ ಮಾಧ್ಯಮದಲ್ಲಿಯೂ ಚಿತ್ರಿಸಿರುವ ಚೆಟ್ಟಿಯವರು ಭಾವಚಿತ್ರ, ನಿಸರ್ಗಚಿತ್ರ, ರೇಖಾಚಿತ್ರ, ಸ್ಮರಣಚಿತ್ರ, ಹಾಗೂ ಸಂಯೋಜನಾ ಚಿತ್ರಗಳೆಲ್ಲವನ್ನೂ ಚಿತ್ರಿಸಿದ್ದಾರೆ. ಇವುಗಳಲ್ಲಿ ಹೆಚ್ಚು ಧಾರ್ಮಿಕ ಚಿತ್ರಗಳನ್ನು ರಚಿಸಿರುವುದು ವಿಶೇಷವೆನಿಸುತ್ತದೆ. ಇವರ ಅನೇಕ ಕಲಾಕೃತಿಗಳು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನಗೊಂಡಿವೆ. ತಮ್ಮ ೭೫ನೆಯ ವಯಸ್ಸಲ್ಲೂ ಕುಂಚವನ್ನು ಹಿಡಿದು ಕಲಾಕೃತಿ ರಚಿಸುವಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತಿದ್ದರು. ಇಂದಿಗೂ ದಿ. ಚೆಟ್ಟಿಯವರ ಕಲಾಕೃತಿಗಳು ನಮಗೆ ನೋಡಲು ಲಭ್ಯವಿರುವುದು ನಮ್ಮ ಅದೃಷ್ಟವಶಾತ್ ಭಾಗ್ಯವೆಂದೆ ಹೇಳಬೇಕು.

೬. ಸೋಮಶೇಖರ ಸಾಲಿ, ಬಾಗಲಕೋಟೆ

ಬಾಗಲಕೋಟೆ ಜಿಲ್ಲೆಯ ಹಿರಿಯ ಕಲಾವಿದರಾದ ಸೋಮಶೇಖರ ಎಂ.ಸಾಲಿಯವರು ೭.೧೧.೧೯೨೨ರಲ್ಲಿ ಚಿಕ್ಕಾಲಗುಂಡಿಯಲ್ಲಿ ಜನಿಸಿದರು. ಇವರು ಜೆ.ಜೆ. ಸ್ಕೂಲಿನಲ್ಲಿ ಲಲಿತಕಲೆಯಲ್ಲಿ ಡಿಪ್ಲೋಮಾ ಪಡೆದಿದ್ದರು. ಮತ್ತು ವಿಜಯ ಮಹಾಂತೇಶ್ವರ ಕಲಾಮಂದಿರದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕದ ಹೆಸರಾಂತ ಚಿತ್ರಕಲಾ ಪರಿಷತ್ ಉಪಾಧ್ಯಕ್ಷರಾಗಿ, ಆಜೀವ ಸದಸ್ಯರಾಗಿದ್ದರು. ೧೯೬೭-೭೧ರವರೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ, ಬಾಗಲಕೋಟೆ ಬಸವೇಶ್ವರ ಸಂಘದ ಆಜೀವ ಸದಸ್ಯರಾಗಿದ್ದರು. ಸೋಮಶೇಖರ ಸಾಲಿ ಅವರು ಕಲೆಯ ಬಗೆಗೆ ಅಪಾರ ಕಾಳಜಿ ಹೊಂದಿದ್ದು ಇವರು ೭೪ನೆಯ ವರ್ಷದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿನಲ್ಲಿ ಮುಳುಗಡೆ ಹೊಂದಿರುವ ೧೨೦ ಗ್ರಾಮಗಳಿಗೆ ಸಂಚರಿಸಿ, ಗ್ರಾಮೀಣ ಪ್ರದೇಶದ ದೈನಂದಿನ ಬದುಕಿಗೆ ಸಂಬಂಧಪಟ್ಟ ಸಾಮಗ್ರಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಭಾಗಿಯಾಗಿದ್ದರು. ಕಲೆ ಮತ್ತು ರಾಜಕೀಯದೊಂದಿಗೆ ಅರಳಿ ವ್ಯಾಪಾರದಲ್ಲಿ ನಿರತರಾದ ಇವರ ಸೇವೆ ಸ್ತುತ್ಯರ್ಹವಾಗಿದೆ.

೭. ಶಂಕರಗೌಡ ಬೆಟ್ಟದೂರ, ರಾಯಚೂರು

ಶಂಕರಗೌಡ ಬೆಟ್ಟದೂರ ಅವರು ೧೪.೪.೧೯೨೮ರಲ್ಲಿ ಜನಿಸಿದರು. ಇವರು ೧೯೫೫ರಲ್ಲಿ ಶಾಂತಿನಿಕೇತನದಿಂದ ಲಲಿತಕಲಾ ಡಿಪ್ಲೋಮಾ ವ್ಯಾಸಂಗ ಪೂರೈಸಿದರು. ಇವರು ಗಾಂಧೀಜಿಯವರ ಜೀವನ ಕುರಿತ ಹಲವು ಚಿತ್ರಗಳನ್ನು ರಚಿಸಿದರು. ೧೯೫೪ರಲ್ಲಿ ಬಿರ್ಲಾ ಭವನ, ದೆಹಲಿಯಲ್ಲಿ, ಗಾಂಧೀಜಿಯವರ ಚಿತ್ರವನ್ನು ರಚಿಸಿದರು. ೧೯೩ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯನ್ನು ೧೯೫ರಲ್ಲಿ ಪಡೆದರು. ರಾಷ್ಟ್ರೀಯ ವಸ್ತುಸಂಗ್ರಹಾಲಯಕ್ಕಾಗಿ ಚೀನಾದ ೫-೬ನೇ ಶತಮಾನದ

ತುನ್‌ಹಾಂಗ್ ಗುಹೆಗಳ ಚಿತ್ರಣದ ಪ್ರತಿರೂಪ ಚಿತ್ರಿಸಲು ಇವರಿಗೆ ಅವಕಾಶ ದೊರೆಯಿತು. ಇವರ ಚಿತ್ರಕಲಾ ಪರೀಕ್ಷೆಗಳ ಮಂಡಳಿಯ ಸದಸ್ಯರಾಗಿ ೧೭ ವರ್ಷಕಾಲ ಸೇವೆಗೈದಿದ್ದಾರೆ. ಸರಕಾರದ ಸಂಗ್ರಹಾಲಯಕ್ಕೆ ಬೇಕಾಗುವ ವಸ್ತುಗಳ ಖರೀದಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ ಶಂಕರಗೌಡ ಬೆಟ್ಟದೂರ ಅವರ ಮಕ್ಕಳೊಂದಿಗಿರುವ ಬಸವಣ್ಣನ ಚಿತ್ರಣವನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೮. ವಿ. ಟಿ. ಕಾಳೆ, ಸಂಡೂರು

ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರತಿಷ್ಠಿತ ನಾಡೋಜ ಪ್ರಶಸ್ತಿಯನ್ನು ಪಡೆದ ಕಲಾವಿದ ವ್ಹಿ.ಟಿ. ಕಾಳೆಯವರು ೧೨.೨.೧೯೩೪ರಲ್ಲಿ ಹುನಗುಂದ ತಾಲ್ಲೂಕಿನಲ್ಲಿ ಜನಿಸಿದರು. ಇವರ ಕಲಾಶಿಕ್ಷಣವು ಮುಂಬೈನ ಹೆಸರಾಂತ ಕಲಾಶಾಲೆಯಾದ ಜೆ.ಜೆ. ಸ್ಕೂಲಿನಿಂದ ಪ್ರಾರಂಭವಾಯಿತು. ಅಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದು, ಟಿ.ಪಿ.ಅಕ್ಕಿಯವರ ವಿಜಯ ಕಲಾಮಂದಿರದಲ್ಲಿ ಟಿ.ಪಿ. ಅಕ್ಕಿ, ಸಿ.ಎಸ್. ಪಾಟೀಲರಿಂದ ಕಲಾಶಿಕ್ಷಣವನ್ನು ಪಡೆದ ವ್ಹಿ.ಟಿ.ಕಾಳೆಯವರು ಸಂಡೂರಿನ ಎಂ.ವೈ. ಘೋರ್ಪಡೆಯವರ ವಸತಿಶಾಲೆಯಲ್ಲಿ ಕಲಾಶಿಕ್ಷಕರಾಗಿ ಸೇವೆಸಲ್ಲಿಸಿ ನಿವೃತ್ತಿಗೊಂಡು ಈಗಲೂ ಕಲಾಸೇವೆಯಲ್ಲಿ ನಿರತರಾಗಿದ್ದಾರೆ. ಇವರ ಕಲಾಕೃತಿಗಳು ದೇಶಾದ್ಯಂತ ಯಶಸ್ವಿ ಪ್ರದರ್ಶನಗಳನ್ನು ಕಂಡಿವೆ. ಕಲಾವಿದ ವ್ಹಿ.ಟಿ.ಕಾಳೆಯವರು ಸುಮಾರು ನೂರಕ್ಕೂ ಹೆಚ್ಚು ಬಸವಾದಿ ಶರಣರ ಕಲಾಕೃತಿಗಳನ್ನು ರಚಿಸಿದವರು. ಶಿವಯೋಗಮಂದಿರದಲ್ಲಿ ಇವರು ರಚಿಸಿದ ಕುಮಾರಸ್ವಾಮಿಗಳ ಜೀವನಾಧಾರಿತ ಚಿತ್ರಗಳು ಸುಂದರವಾಗಿ ನೈಜವಾಗಿ ಮೂಡಿಬಂದಿವೆ. ಚಿತ್ರಕಲಾ ಪರಿಚಯವೆಂಬ ಪುಸ್ತಕವನ್ನು ಬರೆದ ಇವರು ಸಾಕಷ್ಟು ನಾಟಕಗಳನ್ನು ರಚಿಸಿದ್ದಾರೆ. ವ್ಹಿ.ಟಿ.ಕಾಳೆಯವರು ವಚನಗಳನ್ನು ಬರೆಯುತ್ತಿರುವ ಬಸವಣ್ಣ, ಲಿಂಗಪೂಜೆಯಲ್ಲಿ ನಿರತನಾಗಿರುವ ಬಸವಣ್ಣ, ನಿಲುವಂಗಿ ಧರಿಸಿರುವ ಬಸವಣ್ಣ –ಹೀಗೆ ಹಲವು ಭಂಗಿಗಳಲ್ಲಿರುವ ಬಸವಣ್ಣನನ್ನು ಕುರಿತು ರಚಿಸಿದ ಚಿತ್ರಗಳು ಪುಸ್ತಕದ ಮುಖಪುಟಗಳಲ್ಲಿ ಬಳಕೆಯಾಗಿವೆ.

೯. ಎಂ.ಬಿ. ಪಾಟೀಲ, ಬೆಂಗಳೂರು

ಎಂ.ಬಿ. ಪಾಟೀಲರು ವಿಜಯಪುರ ಜಿಲ್ಲೆಯ ತಿಕೋಟ ಗ್ರಾಮದಲ್ಲಿ ೧೦.೧೨.೧೯೫೩ರಲ್ಲಿ ಜನಿಸಿದರು. ಇವರು ತಮ್ಮ ಕಲಾಶಿಕ್ಷಣವನ್ನು ೧೯೬೦ರಿಂದ ೧೯೬೪ರವರೆಗೆ ಮುಂಬೈಯ ನೂತನ ಕಲಾಮಂದಿರದಲ್ಲಿ ಪೂರೈಸಿದರು. ಇವರ ಕಲಾಕೃತಿಗಳು ಏಕವ್ಯಕ್ತಿ ಚಿತ್ರಗಳ ಪ್ರದರ್ಶನ ಮತ್ತು ಸಾಮೂಹಿಕ ಚಿತ್ರ ಪ್ರದರ್ಶನಗಳಲ್ಲಿ ಪ್ರದರ್ಶನಗೊಂಡಿವೆ. ೨೩ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರ ಚಿತ್ರಗಳು ವಿವಿಧ ಸ್ಥಳಗಳಲ್ಲಿ ಸಂಗ್ರಹಗೊಂಡಿದ್ದು, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಸಂದಿದೆ.

೧೦. ವಿಜಯ ಸಿಂಧೂರ, ಜಮಖಂಡಿ

ವಿಜಯ ಸಿಂಧೂರ ಅವರು ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ೬.೭.೧೯೪೦ರಲ್ಲಿ ಜನಿಸಿದರು. ಜೆ.ಜೆ. ಕಲಾಶಾಲೆಯಲ್ಲಿ ಲಲಿತಕಲೆಯಲ್ಲಿ ಡಿಪ್ಲೋಮಾ ವ್ಯಾಸಂಗ ಮುಗಿಸಿ ದೇಶದ ಪ್ರಮುಖ ನಗರಗಳಲ್ಲಿ ತಮ್ಮ ಚಿತ್ರಗಳ ಪ್ರದರ್ಶನ ಏರ್ಪಡಿಸಿದರು. ಮುಂಬಯಿ, ದೆಹಲಿ, ಕೋಲ್ಕತ್ತಾ, ಚೆನ್ನೈ, ಹೈದರಾಬಾದ್, ಬೆಂಗಳೂರು, ಭೂಪಾಲ್ ಮುಂತಾದ ಕಡೆಗಳಲ್ಲಿ ಇವರ ಚಿತ್ರಗಳು ಪ್ರದರ್ಶನಗೊಂಡಿವೆ.

ಹೈದ್ರಾಬಾದ್ ೧೯೮೫, ವಿಶ್ವಕನ್ನಡ ಸಮ್ಮೇಳನ, ೧೯೯೭ರ ಸಾರ್ಕ್ ಸಮ್ಮೇಳನ, ೧೯೮೭ರಲ್ಲಿ ಚೆನ್ನೈ, ೧೯೮೯ರಲ್ಲಿ ಅಪ್ನಾ ಉತ್ಸವ, ಮುಂಬಯಿ ಮುಂತಾದ ಹಲವಾರು ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ೧೯೯೧ರಲ್ಲಿ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದ ಇವರಿಂದ ರಚಿತ, ಬಾಗಲಕೋಟೆಯ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಂಗ್ರಹಗೊಂಡಿರುವ ಬಸವಣ್ಣನವರ ಚಿತ್ರವನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೧೧. ಜೆ. ಎಸ್. ಖಂಡೇರಾವ್, ಕಲಬುರ್ಗಿ

ಜೆ.ಎಸ್. ಖಂಡೇರಾವ್ ೧೧.೧.೧೯೪೦ರಲ್ಲಿ ಜನಿಸಿದರು. ಮುಂಬೈನ ಜೆ.ಜೆ. ಕಲಾಶಾಲೆಯಲ್ಲಿ ೧೯೬೩ರಲ್ಲಿ ಲಲಿತಕಲೆಯಲ್ಲಿ ಡಿಪ್ಲೋಮೋ ವ್ಯಾಸಂಗ ಮುಗಿಸಿ, ೧೯೭೫ರಲ್ಲಿ ಬಿ.ಎ. ಪದವಿಯನ್ನು ಪಡೆದರು. ಗುಲಬರ್ಗಾದ ಶರಣಬಸವೇಶ್ವರ ಕಾಲೇಜಿನ ಲಲಿತಕಲಾ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ೧೯೬೮ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ೧೯೬೯, ೧೯೭೦, ೧೯೮೦ರಲ್ಲಿ ಹುಬ್ಬಳ್ಳಿ ನಗರಪಾಲಿಕೆ ಪ್ರಶಸ್ತಿ, ೧೯೯೦ರಲ್ಲಿ ಅಕಾಡೆಮಿ ಪ್ರಶಸ್ತಿ, ೧೯೮೮ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ೧೯೯೫ರಲ್ಲಿ ನಾಡೋಜ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಜೆ.ಎಸ್. ಖಂಡೇರಾವ್ ಅವರು ೧೨ನೆಯ ಶತಮಾನದಲ್ಲಿ ಜಾತಿರಹಿತ, ವರ್ಣರಹಿತವಾಗಿ ಬಸವಣ್ಣ ಅನುಭವ ಮಂಟಪದಲ್ಲಿ ಭಾಗವಹಿಸಿದ ಚಿತ್ರವನ್ನು ಸುಂದರವಾಗಿ ರಚಿಸಿದರು. ಜೆ.ಎಸ್. ಖಂಡೇರಾವ್ ಅವರು ರಚಿಸಿದ ಅನುಭವಮಂಟಪದ ಚಿತ್ರವು ತುಂಬ ನೈಜತೆಯಿಂದ ಕೂಡಿದೆ. ಅವರು ವಸ್ತುವಿಗೆ ಹೊಂದಾಣಿಕೆಯಾಗುವ ರೀತಿಯಲ್ಲಿ ವರ್ಣಗಳನ್ನು ಸಂಯೋಜಿಸುವುದರಲ್ಲಿ ಸಿದ್ಧಹಸ್ತರಾಗಿದ್ದಾರೆ.

೧೨. ಎಂ.ಆರ್. ಬಾಳೀಕಾಯಿ, ಧಾರವಾಡ

ಎಂ.ಆರ್. ಬಾಳೀಕಾಯಿ ಅವರು ೧.೬.೧೯೪೧ರಲ್ಲಿ ಹುಕ್ಕೇರಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ಜನಿಸಿದರು. ೧೯೬೭ರಲ್ಲಿ ಎರಡನೆಯ ರ್‍ಯಾಂಕ್‌ನೊಂದಿಗೆ ಲಲಿತಕಲೆಯಲ್ಲಿ ಡಿಪ್ಲೋಮಾ ಮತ್ತು ೧೯೭೨ರಲ್ಲಿ ಮೊದಲನೆಯ ರ್‍ಯಾಂಕ್‌ನೊಂದಿಗೆ ಆರ್ಟ್ ಮಾಸ್ಟರ್ ಪದವಿಯನ್ನು ಪಡೆದರು. ಧಾರವಾಡದ ಸರ್ಕಾರಿ ಚಿತ್ರಕಲಾಶಾಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಇವರು "ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯ.." ಎಂಬ ಬಸವಣ್ಣನವರ ವಚನವನ್ನು ಕುರಿತು ರಚಿಸಿದ ಚಿತ್ರವು ಗಮನಾರ್ಹವಾಗಿದೆ. ಬಾಳೀಕಾಯಿ ಅವರು ನಿಸರ್ಗ ಮತ್ತು ಭಾವಚಿತ್ರಗಳನ್ನು ಹೆಚ್ಚು ಸಂಖ್ಯೆಯಲ್ಲಿ ರಚಿಸಿದ್ದಾರೆ. ೧೯೯೭ರಲ್ಲಿ ಬೆಂಗಳೂರಿನ ಕಲಾಶಿಬಿರ, ಗ್ರಾಫಿಕ್ ಕಾರ್ಯಾಗಾರಗಳು ಮತ್ತು ರಾಷ್ಟ್ರೀಯ ಕಲಾಶಿಬಿರದಲ್ಲಿ ಭಾಗವಹಿಸಿದ್ದಾರೆ.

೧೩. ಎ. ಎಸ್. ಪಾಟೀಲ, ಕಲಬುರ್ಗಿ

ಶ್ರೀ ಎ.ಎಸ್. ಪಾಟೀಲರು ಗುಲಬರ್ಗಾ ಜಿಲ್ಲೆಯ ಬಂಕೂರ್ ಗ್ರಾಮದಲ್ಲಿ ೧೯೪೨ರಲ್ಲಿ ಜನಿಸಿದರು. ಅವರು ತಮ್ಮ ಕಲಾಶಿಕ್ಷಣದಲ್ಲಿ ಮುಂಬೈಯ ಜೆ.ಜೆ. ಕಲಾಶಾಲೆಯಲ್ಲಿ ಡಿಪ್ಲೋಮಾ, ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದರು. ಇವರ ಚಿತ್ರಗಳು ಅಪರೂಪದವುಗಳಾಗಿವೆ. ಬಸವಾದಿ ಶರಣರ ಚಿತ್ರಗಳು ಮತ್ತು ಇಷ್ಟಲಿಂಗದ ಬಗೆಗೆ ಹಲವಾರು ಚಿತ್ರಗಳನ್ನು ರಚಿಸಿದ್ದಾರೆ. ಇವರು

ಚೈತನ್ಯಮಯಿ ಕಲಾಗ್ಯಾಲರಿಯನ್ನು ತಮ್ಮ ಗೃಹದಲ್ಲಿ ತೆರೆದರು. ಅವರ ಜೀವನವು ಶರಣರ ಜೀವನದಂತೆ ಸರಳ ಮತ್ತು ಶಾಂತವಾದುದು. ಎ.ಎಸ್. ಪಾಟೀಲರು ಇತ್ತೀಚೆಗೆ ಮೈಸೂರಿನಲ್ಲಿ ಪಿ.ಆರ್. ತಿಪ್ಪೇಸ್ವಾಮಿ ಅವರ ಪ್ರಥಮ ಪ್ರಶಸ್ತಿಯನ್ನು ಪಡೆದವರಲ್ಲಿ ಮೊದಲಿಗರಾಗಿದ್ದಾರೆ. ಅವರು ರಚಿಸಿದ ಚಿತ್ರಗಳ ಸಂಯೋಜನೆಯಲ್ಲಿ ಸರಳತೆ, ವರ್ಣಗಳಲ್ಲಿ ಮೃದುತ್ವ ಕಾಣುತ್ತದೆ. ಸೃಜನಶೀಲ ಚಿಂತಕರಾದ ಇವರು ತಮ್ಮ ಕಲಾಕೃತಿಯಲ್ಲಿ ವರ್ಣಗಳನ್ನು ಚೆನ್ನಾಗಿ ದುಡಿಸಿಕೊಳ್ಳುವ ಗುಣವನ್ನು ಹೊಂದಿದ್ದಾರೆ.

೧೪. ದಿ. ಪ್ರೊ. ವಿ. ಬಿ. ಹಿರೇಗೌಡರ್, ದಾವಣಗೆರೆ

ಏಪ್ರಿಲ್ ೧, ೧೯೪೩ರಲ್ಲಿ ಜನಿಸಿದ ಪ್ರೊ. ವಿ. ಬಿ. ಹಿರೇಗೌಡರು ಚಿತ್ರಕಲಾ ಕ್ಷೇತ್ರದಲ್ಲಿ ಅತ್ಯಂತ ಉನ್ನತ ಮಟ್ಟದಲ್ಲಿ ಸಾಧನೆಗೈದವರು. ಇವರ ಹೆಸರು ಕರ್ನಾಟಕದ ದೃಶ್ಯಕಲಾ ಪುಟಗಳಲ್ಲಿ ಉಲ್ಲೇಖನಾರ್ಹವೆನಿಸಿದೆ. ಇವರು ೧೯೬೬ರಲ್ಲಿ ಹಿರಿಯ ಕಲಾಗುರುಗಳಾಗಿ ಶ್ರೀ. ಡಿ. ವಿ. ಹಾಲಭಾವಿ ಮತ್ತು ಡಾ. ಎಂ.ವಿ. ಮಿಣಜಗಿಯವರಲ್ಲಿ ಕಲಾಧ್ಯಾಯನ ಮಾಡಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದರು. ಮುಂದೆ ೧೯೬೭ರಲ್ಲಿ ಆರ್ಟ್ ಮಾಸ್ಟರ್ ಪದವಿ ಪಡೆದು, ದಾವಣಗೆರೆಯ ಸರ್ಕಾರಿ ಚಿತ್ರಕಲೆ ಮತ್ತು ಕರಕುಶಲ ಶಾಲೆಗೆ ಉಪನ್ಯಾಸಕರಾಗಿ ನೇಮಕಗೊಂಡು, ೧೯೭೫ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ಅದೇ ಶಾಲೆಯ ಪ್ರಾಚಾರ್ಯರಾಗಿ ನೇಮಕಗೊಂಡರು. ೨೦೦೩, ಮಾರ್ಚ್ ೩೧ರವರೆಗೆ ಅವಿರತ ಸೇವೆ ಸಲ್ಲಿಸಿ ನಿವೃತ್ತರಾದರು. ಅವರ ಜೀವನದುದ್ದಕ್ಕೂ ಕಲಾಕ್ಷೇತ್ರಕ್ಕಾಗಿಯೇ ಶ್ರಮವಹಿಸಿ ಹಲವು ಕಾರ್ಯಗಳನ್ನು ಸಾಧಿಸಿದ್ದಾರೆ.

೧೫. ಯಶವಂತ ಹಿಬಾರೆ, ಹಳ್ಳೀಖೇಡ

ಕಲಾವಿದ ಯಶವಂತ ಹಿಬಾರೆಯವರು ೨೫.೧೧.೧೯೪೩ರಲ್ಲಿ ಬೀದರ ಜಿಲ್ಲೆಯಲ್ಲಿ ಹುಮನಾಬಾದ್ ತಾಲೂಕಿನ ಹಳ್ಳಿಖೇಡ ಗ್ರಾಮದಲ್ಲಿ ಜನಿಸಿದರು. ಇವರು ಕಲಾಶಿಕ್ಷಣ ಪಡೆಯದೆ ಇದ್ದರೂ ಸ್ವಯಂಪ್ರೇರಿತ ಕಲಾವಿದರಾಗಿ ಬೆಳೆದವರು. ಇವರು ಬಣ್ಣಗಳಿಗೆ ಜೀವ ತುಂಬುವ ಅಭಿಜಾತ ಕಲಾವಿದರು. ಇವರ ಕಲಾಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ೨೦೦೮ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ವಿವಿಧ ಭಂಗಿಯ ಗಣಪತಿ, ಪರಮೇಶ್ವರ, ಸರಸ್ವತಿ. ಬುದ್ಧ ಅಲ್ಲದೆ ಅನೇಕ ಶರಣರ, ಸಂತರ ಚಿತ್ರಗಳನ್ನು ರಚಿಸಿದ ಇವರನ್ನು ಡಾ. ರಾಜಕುಮಾರ ಅವರು ೧೯೭೭ ರಲ್ಲಿ ತಮ್ಮ ಸ್ವಗೃಹಕ್ಕೆ ಕರೆಯಿಸಿ ಗೌರವಿಸಿದ್ದಾರೆ.

೧೬. ಬಸವರಾಜ ಮುಗಳಿ, ಹುಡಗಿ

ಬೀದರ ಜಿಲ್ಲೆಯ ಹುಡಗಿ ಗ್ರಾಮದ ಇವರು ೨೬.೮.೨೦೧೩ರಂದು ನಿಧನರಾದರು. ಬಸವಾದಿ ಶರಣರ ಕುರಿತು ನೂರಾರು ಚಿತ್ರಗಳನ್ನು ರಚನೆ ಮಾಡಿದ ಕಲಾವಿದ ಮುಗಳಿಯವರು ೧೦.೦೬.೨೦೧೩ ರಂದು ಸಂದರ್ಶನಕ್ಕೆ ತೆರಳಿದಾಗ ತಾವು ಬಸವಣ್ಣನವರ ಕುರಿತು ಒಟ್ಟು ಎಷ್ಟು ಚಿತ್ರಗಳನ್ನು ರಚಿಸಿದ್ದೀರಿ ಎಂದು ಕೇಳಿದಾಗ "ಬಕ್ಕಳ ಚಿತ್ರಗಳನ್ನು ಬರೆದಿದ್ದೇನೆ, ಆದ್ರ ಅವನ್ನ ಎಣಿಕೆ ಮಾಡಿಲ್ಲ" ಎಂದರು. ಅದಲ್ಲದೆ ಇವರು ಈ ಕೆಳಗಿನ ಸ್ಥಳಗಳಲ್ಲಿ ಚಿತ್ರಗಳನ್ನು ರಚಿಸಿ ಕೊಟ್ಟಿದ್ದಾರೆ. ಬೀದರ ಜಿಲ್ಲೆಯ ಭಾಲ್ಕಿ

ಹಿರೇಮಠ, ಶಿವಕುಮಾರಸ್ವಾಮಿ ಗುಂಪಾ, ವೀರಭದ್ರೇಶ್ವರ ದೇವಸ್ಥಾನ, ಹುಮನಾಬಾದ್, ಗುಲಬರ್ಗಾ ರೇವಣಸಿದ್ದೇಶ್ವರ ದೇವಸ್ಥಾನ, ವೀರಶೈವ ಕಲ್ಯಾಣ ಮಂಟಪ, ಗುಲಬರ್ಗಾ, ಬಸವಕಲ್ಯಾಣದ ಬಸವೇಶ್ವರ ದೇವಸ್ಥಾನ, ಅನುಭವ ಮಂಟಪ, ಬಸವ ಪೀಠ, ಬಸವಕಲ್ಯಾಣ, ಕೂಡಲಸಂಗಮ, ಹಾರಕೂಡ ಶಿವಯೋಗಿ ಚನ್ನವೀರಮಠ, ಬೆಳಗಾವಿ ಜಿಲ್ಲೆಯ ದುರದುಂಡೀಶ್ವರ ಮಠ, ನೆರೆರಾಜ್ಯದ ಕರಿಂನಗರ ಹಾಗೂ ಜಹಿರಾಬಾದ ಅನುಭವ ಮಂಟಪ ಮುಂತಾದವುಗಳಲ್ಲಿ ತಮ್ಮ ಜೀವನನುದ್ದಕ್ಕೂ ಬಸವಾದಿ ಶರಣರ ಚಿತ್ರಗಳನ್ನು ರಚಿಸಿ ತಮ್ಮ ಜೀವನ ಸಾರ್ಥಕಗೊಳಿಸಿದರು.

೧೭. ಸುರೇಶ ಡಿ. ಹಾಲಭಾವಿ, ಧಾರವಾಡ

ಸುರೇಶ ಡಿ. ಹಾಲಭಾವಿ ೧೯೪೬ರಲ್ಲಿ ಜನಿಸಿದ್ದು, ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿದ್ದು, ಡಿ.ವಿ.ಹಾಲಭಾವಿ ಚಿತ್ರಕಲಾ ಶಾಲೆಯ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ ಹಾಗೂ ಅನೇಕ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

೧೮. ಆರ್. ಸೂರಿ, ಬೆಂಗಳೂರು

ಇವರು ೧೯೪೯ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಇವರು ೧೯೭೧ರಲ್ಲಿ ಮಲ್ಲಿಗೆ ಎಂಬ ತಿಂಗಳ ಪತ್ರಿಕೆಯಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿದರು. ೧೯೭೨ ರಿಂದ ೧೯೮೦ ರವರೆಗೆ ಉದಯವಾಣಿ ಪತ್ರಿಕೆಯ ಕಲಾವಿದರಾಗಿ, ೧೯೮೧ ರಿಂದ ೧೯೮೨ ರವರೆಗೆ ಇಂಚರ ಮ್ಯಾಗಜಿನ್ ಆಫ್ ಐಬಿಹೆಚ್‌ನ ಕಲಾವಿದರಾಗಿ, ೨೦೦೦ರಲ್ಲಿ ಟಿಲ್ ಡಾಟ್ ಸ್ವತಂತ್ರ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ರಾಜ್ಯಾದ್ಯಂತ ಕಲಾಪ್ರದರ್ಶನ ಹಾಗೂ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

೧೯. ಡಿ.ಎ. ಉಪಾಧ್ಯಾಯ, ಮೈಸೂರು

ಡಿ.ಎ. ಉಪಾಧ್ಯಾಯ ಅವರು ಮೈಸೂರಿನ ಕಲಾಶಾಲೆ, 'ಕಾವಾ'ದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ಈಗ ಅವರೇ ಪ್ರಾರಂಭಿಸಿದ ಕಲಾಶಾಲೆಯಲ್ಲಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಮಾರ್ಚ್ ೬, ೧೯೫೨ರಲ್ಲಿ ಅಬ್ಬಿಗೇರಿ ಎಂಬ ಗ್ರಾಮದಲ್ಲಿ ಜನಿಸಿದರು. ಇವರು ಮೊದಲಿನಿಂದಲೂ ಕಲಾಸಕ್ತರಾಗಿದ್ದರು. ಸಿ.ಒ.ಎ.ಸಿ. ಯಿಂದ ಲಲಿತಕಲೆಯಲ್ಲಿ ಡಿಪ್ಲೋಮಾ ಅಭ್ಯಾಸ ಮಾಡಿದರು. ೧೯೮೧ರಿಂದ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಹೆಚ್ಚು ಕಲಾವಿದರು ತಾವು ತಮ್ಮ ಕಲೆ ಮತ್ತು ಚಿತ್ರಗಳ ಪ್ರದರ್ಶನಕ್ಕೆ ನಿಮಿತ್ತರಾದರೆ, ಉಪಾಧ್ಯಾಯ ಅವರು ಸಾಹಿತ್ಯ ಕ್ಷೇತ್ರದಲ್ಲಿಯೂ ಸಹ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮೂಲತಃ ಕಲಾವಿದರಾದ ಅವರು ಕಲೆಯನ್ನು ಕುರಿತಾದ ಬರವಣಿಯೊಂದಿಗೆ ಕಂಠೀ ಬಸವ ಭಕ್ತವತ್ಸಲ ಎಂಬ ಕಾವ್ಯನಾಮದಲ್ಲಿ ಅನೇಕ ಕವನ, ಕಾದಂಬರಿ, ನಾಟಕಗಳನ್ನು ರಚಿಸಿದ್ದಾರೆ. ಉಪಾಧ್ಯಾಯ ಅವರ ಮಹತ್ವದ ಕೊಡುಗೆ ಅಂದರೆ ವಚನಗಳನ್ನು ಕುರಿತು ಚಿತ್ರ ರಚಿಸಿದ್ದು. ಸಾಹಿತ್ಯದಲ್ಲಿ ಮಾನವನ ಒಳ-ಹೊರಗೆ ಬೆಳಕು ಚೆಲ್ಲಿದ ವಚನಾಧಾರಿತ ಚಿತ್ರಗಳನ್ನು ರಚಿಸಿದ್ದಾರೆ. ಇವರ ತೈಲವರ್ಣದ ಚಿತ್ರಗಳು ನವ್ಯಶೈಲಿಗೆ ಸೇರುತ್ತವೆ.

೨೦. ಸುಹಾಸ್ ಬಹುಲ್ಕರ್, ಪುಣೆ

ಸುಹಾಸ್ ಬಹುಲ್ಕರ್ ಅವರು ೧೯೫೪ರಲ್ಲಿ ಜನಿಸಿದರು. ಇವರ ಶಿಕ್ಷಣ ಮುಂಬೈನ ಪ್ರತಿಷ್ಠಿತ ಜೆ.ಜೆ. ಕಲಾಶಾಲೆಯಲ್ಲಿ ನಡೆದು ಜೆ.ಡಿ.ಆರ್ಟ್ ಮುಗಿಸಿದರು. ಇವರು ಅದೇ ಕಲಾಶಾಲೆಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ಸುಮಾರು ೧೨ ಏಕವ್ಯಕ್ತಿ ಚಿತ್ರಗಳ ಪ್ರದರ್ಶನ ಏರ್ಪಡಿಸಿದ್ದಾರೆ. ಗುಂಪು ಪ್ರದರ್ಶನದಲ್ಲಿ ಭಾಗವಹಿಸಿದ್ದಾರಲ್ಲದೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಲಂಡನ್, ಪ್ಯಾರೀಸ್, ನ್ಯೂಯಾರ್ಕ್, ಹಾಂಗ್‌ಕಾಂಗ್ ಮುಂತಾದ ದೇಶಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನ ಕಂಡಿವೆ. ಭಾರತದ ರಾಷ್ಟ್ರಪತಿ ಭವನ, ಭಾರತೀಯ ರಿಸರ್ವ್ ಬ್ಯಾಂಕ್, ಮುಂಬಯಿಯ ಉಚ್ಚ ನ್ಯಾಯಾಲಯ ಮುಂತಾದ ಕಡೆಗಳಲ್ಲಿ ಇವರು ರಚಿಸಿದ ಚಿತ್ರಗಳು ಸಂಗ್ರಹಗೊಂಡಿದ್ದು, ಮುಂಬಯಿಯ ನ್ಯಾಶನಲ್ ಮ್ಯೂಸಿಯಮ್ ಆಫ್ ರೆವಲ್ಯೂಷನರಿ, ಇಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

೨೧. ವಿಜಯ ಕದಮ್, ಪುಣೆ

ವಿಜಯ ಕದಮ್ ಅವರು ೧೯೫೪ರಲ್ಲಿ ಪುಣೆಯಲ್ಲಿ ಜನಿಸಿದರು. ಅವರು ಚಿಕ್ಕವಯಸ್ಸಿನಲ್ಲಿ ಕಲೆಯ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದವರು. ಇವರು ೧೯೭೯ರಲ್ಲಿ ಮಹಾರಾಷ್ಟ್ರ ಅಭಿನವ ಕಲಾಮಹಾವಿದ್ಯಾಲಯ ಪುಣೆಯಲ್ಲಿ ಲಲಿತಕಲೆಯಲ್ಲಿ ಡಿಪ್ಲೋಮಾ ವ್ಯಾಸಂಗ ಮಾಡಿದರು. ೧೯೫ರಲ್ಲಿ ಪ್ರಥಮಬಾರಿಗೆ ಏಕವ್ಯಕ್ತಿ ಚಿತ್ರಗಳ ಪ್ರದರ್ಶನವನ್ನು ರಾಷ್ಟ್ರೀಯ ಲಲಿತಕಲಾ ಕೇಂದ್ರ ಭುವನೇಶ್ವರ, ಓರಿಸ್ಸಾದಲ್ಲಿ ನಡೆಸಿದರು. ೧೯೮೬ರಲ್ಲಿ ರಾಷ್ಟ್ರೀಯ ಪರಿಷತ್, ಬೆಂಗಳೂರಲ್ಲಿ, ೧೯೮೭ರಲ್ಲಿ ತಾವು ವಿದ್ಯಾಭ್ಯಾಸ ಮಾಡಿದ ಕಲಾಶಾಲೆಯಲ್ಲಿ ಪ್ರದರ್ಶನವನ್ನು ಏರ್ಪಡಿಸಿದರು. ಅಲ್ಲದೆ ಇವರು ಭಾವಚಿತ್ರಗಳನ್ನು ವಿಶೇಷವಾದ ಆಸಕ್ತಿಯಿಂದ ರಚಿಸಿರುತ್ತಾರೆ. ಇವರು ರಚಿಸಿದ ಹಲವಾರು ಭಾವಚಿತ್ರಗಳೊಂದಿಗೆ ಬಸವಣ್ಣನ ಭಾವಚಿತ್ರ ಸುಂದರವಾಗಿ ರಚನೆಗೊಂಡಿದೆ. ಇವರು ಭಾವಚಿತ್ರಕ್ಕಾಗಿಯೇ ನಗದು ಬಹುಮಾನವನ್ನು ಪಡೆದುಕೊಂಡರು. ಏಕವ್ಯಕ್ತಿ ಪ್ರದರ್ಶನ ಮತ್ತು ಸಮೂಹ ಚಿತ್ರಗಳ ಪ್ರದರ್ಶನ ಕಲಾಶಿಬಿರದಲ್ಲಿ ಭಾಗವಹಿಸಿದ್ದಾರೆ. ಬಸವಣ್ಣನವರನ್ನು ಕುರಿತ ಎರಡು ವರ್ಣಚಿತ್ರಗಳನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೨೨. ಪಿ.ಎಸ್. ಕಡೇಮನಿ, ವಿಜಯಪುರ

ವಿಜಯಪುರ ಜಿಲ್ಲೆಯ ಕುಮುದೆ ಗ್ರಾಮದಲ್ಲಿ ೧.೦೬.೧೯೫೫ರಲ್ಲಿ ಜನಿಸಿದ ಪಿ.ಎಸ್. ಕಡೇಮನಿ ಇವರು ೨೦೧೫ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದ ಕಲಾವಿದರಾಗಿದ್ದಾರೆ. ಕೌದಿ ಚಿತ್ರಗಳನ್ನು ರಚಿಸುವ ಇವರು ಚಿಕ್ಕಂದಿನಿಂದಲೂ ಕಲೆಯ ಬಗೆಗೆ ಆಸಕ್ತಿಯುಳ್ಳವರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಹಾಗೂ ಕಲಾ ಚರಿತ್ರೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದವರು. ವಿಜಯಪುರ ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಹೆಸರುವಾಸಿಯಾಗಿರುವ ಬಿ.ಎಲ್.ಡಿ. ಸಂಸ್ಥೆಯ ಶ್ರೀ ಸಿದ್ಧೇಶ್ವರ ಕಲಾ ಮಂದಿರದಲ್ಲಿ ಉಪನ್ಯಾಸಕರಾಗಿ ನಿವೃತ್ತಿ ಹೊಂದಿದವರು. ಚಿತ್ರಕಲೆಯಲ್ಲಿ ಆಳಿನಂತೆ ದುಡಿದು ತಮ್ಮದೇಯಾದ ಜಾನಪದ ಶೈಲಿಯ ಚಿತ್ರಕೃತಿಗಳನ್ನು ರಚಿಸುವಲ್ಲಿ ಹೆಸರು ಪಡೆದವರು. ಪ್ರಥಮ ಬಾರಿಗೆ ೧೯೮೬ರಲ್ಲಿ ವಿಜಯಪುರದಲ್ಲಿ

ಏಕವ್ಯಕ್ತಿ ಚಿತ್ರಪ್ರದರ್ಶನದಿಂದ ಆರಂಭಿಸಿ ಇಲ್ಲಿಯವರೆಗೆ ಸಾಕಷ್ಟು ಏಕವ್ಯಕ್ತಿ ಪ್ರದರ್ಶನ, ಗುಂಪು ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿ, ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದ ಕಲಾಶಿಬಿರದಲ್ಲಿ ಭಾಗವಹಿಸಿದವರು. ಹಲವಾರು ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳಿಗಾಗಿ ಅರ್ಧಭಾವಚಿತ್ರ ಮತ್ತು ಕಲೆಗಳ ಕುರಿತು ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳ ಮೂಲಕ ಕಲಾಶಿಕ್ಷಣ ನೀಡಿದ ಕೀರ್ತಿ ಇವರದು.

೨೩. ಡಾ. ನೀಲಾ, ಕಲಬುರ್ಗಿ

ಗುಲಬರ್ಗಾದ ಸುಬ್ಬಯ್ಯ ಎಂ. ನೀಲಾಸ್ವಾಮಿ ಅವರು ೨.೨.೧೯೫೬ರಂದು ಜನಿಸಿದರು. ಚಿಕ್ಕಂದಿನಿಂದಲೂ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ ಇವರ ತಂದೆ ಮಹದೇವಯ್ಯನವರು ವಾಣಿಜ್ಯ ಕಲಾವಿದರಾಗಿದ್ದರು. ಅವರ ತಂದೆಯ ಪ್ರಭಾವ ಡಾ. ನೀಲಾ ಅವರ ಮೇಲಾಗಿದೆ. ಪ್ರಾರಂಭದಲ್ಲಿ ಡಿ.ಟಿ.ಸಿ.ಎಂಬ ಕೋರ್ಸನ್ನು ಮುಗಿಸಿ, ೧೯೭೮ರಲ್ಲಿ ಡಿಪ್ಲೋಮಾ ಇನ್ ಡ್ರಾಯಿಂಗ್ ಅಂಡ್ ಪೇಂಟಿಂಗ್ ಮತ್ತು ಬಿ.ಎಫ್.ಎ. ಪದವಿಯನ್ನು ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯಿಂದ ಪಡೆದುಕೊಂಡರು. ಮುಂದೆ ಫೈನ್ ಆರ್ಟ್ಸ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಶ್ರೀ ಶರಣಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ ಪಡೆದರು. ೧೯೭೮ರಲ್ಲಿ ಐಡಿಯಲ್ ಫೈನ್‌ಆರ್ಟ್ಸ್ ಸಂಸ್ಥೆಯಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ನಂತರ ೧೯೭೯ರಲ್ಲಿ ಶರಣ ಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ೨೦೦೩ರಲ್ಲಿ ನವದೆಹಲಿಯ ಸಂಸತ್ ಭವನದಲ್ಲಿ ಇವರು ರಚಿಸಿದ 'ಅಂತರ್‌ಜಾತಿ' ಎಂಬ ವಿಷಯದ ಚಿತ್ರವು ಪ್ರದರ್ಶನಗೊಂಡಿತ್ತು. ಅಂತರ್ಜಾತೀಯ ವಿವಾಹದಲ್ಲಿ ಬಸವಣ್ಣನವರು ಭಾಗಿಯಾಗಿದ್ದು ಇವರ ಚಿತ್ರವನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೨೪. ಎನ್. ಮನೋಹರ, ಚೆನ್ನೈ

ಕುಂಭಕೋಣಮ್‌ನಲ್ಲಿ ೩೧.೧೨.೧೯೫೭ರಂದು ಜನಿಸಿದ ಮನೋಹರ ಅವರು ಚಿತ್ರಕಲೆಯಲ್ಲಿ ಪದವೀಧರರರಾಗಿದ್ದು, ಪ್ರಸ್ತುತ ಚೆನ್ನೈನ ಲಲಿತಕಲಾ ಮಹಾವಿದ್ಯಾಲಯದ, ಲಲಿತಕಲಾ ವಿಭಾಗದ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಮಿಳುನಾಡು ಮತ್ತು ಹೊರರಾಜ್ಯಗಳಲ್ಲಿ ತಮ್ಮ ಕಲಾಕೃತಿಗಳ ಕಲಾಪ್ರದರ್ಶನವನ್ನು ಏರ್ಪಡಿಸಿದ್ದು, ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ.

೨೫. ಎಂ.ಸಿ. ಚೆಟ್ಟಿ, ಹುಬ್ಬಳ್ಳಿ

ಎಂ.ಸಿ. ಚೆಟ್ಟಿಯವರು ಹುಬ್ಬಳ್ಳಿಯಲ್ಲಿ ೨೧.೭.೧೯೫೮ ರಲ್ಲಿ ಜನಿಸಿದ್ದು, ಡಿಪ್ಲೋಮಾ ಹಾಗೂ ಬಿ.ಎಫ್.ಎ. ಪದವಿಯನ್ನು ಪಡೆದವರು. ಬೆಂಗಳೂರು, ಗೋವಾ, ಧಾರವಾಡ, ಹುಬ್ಬಳ್ಳಿ ಮುಂತಾದ ಕಡೆಗೆ ಏಕವ್ಯಕ್ತಿ ಚಿತ್ರಗಳ ಪ್ರದರ್ಶನವನ್ನು ಸಾದರಪಡಿಸಿದ್ದಾರೆ. ಹೊರರಾಜ್ಯದಲ್ಲಿ ೧೯೮೫ರಲ್ಲಿ ಮುಂಬೈ, ೧೯೮೮ರಲ್ಲಿ ಪುಣೆ, ೧೯೮೬ರಲ್ಲಿ ಚೆನ್ನೈ, ೧೯೮೭ರಲ್ಲಿ ನಾಗಪುರ, ೧೯೯೧ರಲ್ಲಿ ಭೂಪಾಲ್, ೧೯೯೪ರಲ್ಲಿ ನವದೆಹಲಿ ಮತ್ತು ೧೯೮೮ರಲ್ಲಿ ಮ್ಯಾಂಚೆಸ್ಟರ್, ಇಂಗ್ಲೆಂಡ್ ಮುಂತಾದ ಕಡೆ ಕಲಾಪ್ರದರ್ಶನ, ಗುಂಪುಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ೧೯೮೬ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ,

ಕ್ಯಾಮ್ಲಿನ್ ಪ್ರಶಸ್ತಿ ಪಡೆದಿರುವ ಇವರು ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

೨೬. ಅನಿಲ ನಾಯ್ಕ, ಮುಂಬಯಿ

೧೫ ಏಪ್ರಿಲ್ ೧೯೫೯ರಲ್ಲಿ ಜನಿಸಿದ ಅನಿಲ್ ಇವರು ಮುಂಬೈಯಿಯ ಜೆಜೆ ಸ್ಕೂಲ್ ಆಫ್ ಆರ್ಟ್‌ನಲ್ಲಿ ಜಿಡಿ ಆರ್ಟ್ ಪದವಿಯನ್ನು ಪಡೆದಿದ್ದು, ಇವರು ಮಹಾರಾಷ್ಟ್ರ ಮತ್ತು ಇತರ ರಾಜ್ಯಗಳಲ್ಲಿ ತಮ್ಮ ಏಕವ್ಯಕ್ತಿ ಕಲಾಪ್ರದರ್ಶನವನ್ನು ಏರ್ಪಡಿಸಿದ್ದಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ. ಮಹಾರಾಷ್ಟ್ರ ಸರ್ಕಾರದ ಪ್ರಶಸ್ತಿಯೂ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಪ್ರಸ್ತುತ ಜೆಜೆ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

೨೭. ಸಿ.ವಿ ಅಂಬಾಜಿ, ಸೊಲ್ಲಾಪುರ

೧೦.೧೦.೧೯೬೦ರಲ್ಲಿ ಸೋಲ್ಲಾಪುರದಲ್ಲಿ ಜನಿಸಿದ ಅಂಬಾಜಿಯವರು ಕರ್ನಾಟಕ, ಆಂಧ್ರಪ್ರದೇಶದ ಕಲಾಶಾಲೆಗಳಲ್ಲಿ ಹಲವಾರು ಪ್ರಾತ್ಯಕ್ಷಿಕೆ ನೀಡಿದ್ದಾರೆ. ಕಳೆದ ನಾಲ್ಕು ದಶಕಗಳಿಂದ ದಕ್ಷಿಣ ಭಾರತದ ಚಲನ ಚಿತ್ರೋದ್ಯಮದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಹೈದರಾಬಾದಿನ ಯೂಸುಫ್ ಗಡ ಸ್ಟೇಡಿಯಂನಲ್ಲಿ ೨೧೫X೩೨ ಅಡಿಯ ಕಲಾಕೃತಿಯನ್ನು ರಚಿಸಿದ್ದಾರೆ.

೨೮. ಇಬಿ ಎನ್ ಜೋಸೆಫ್, ಕಣ್ಣೂರು, ಕೇರಳ

೧೯೬೦ರಲ್ಲಿ ಜನಿಸಿ, ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿರುವ ಇವರು ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ ಹಾಗೂ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

೨೯. ಕೆ. ಗಂಗಾಧರ, ವಡವಡಗಿ

ಬಸವನಬಾಗೇವಾಡಿ ತಾಲೂಕಿನ ವಡವಡಗಿ ಗ್ರಾಮದಲ್ಲಿ ೧೯೬೨ರಲ್ಲಿ ಜನಿಸಿದರು. ಕಲಾಭ್ಯಾಸವನ್ನು ಧಾರವಾಡ ಸರ್ಕಾರಿ ಚಿತ್ರಕಲಾ ಕಲಾಶಾಲೆಯಲ್ಲಿ ಮಾಡಿದ ಇವರು ನಂತರ ಬಸವನ ಬಾಗೇವಾಡಿಯ ಸರ್ವೋದಯ ಪ್ರೌಢಶಾಲೆಯಲ್ಲಿ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಲಾವಿದ ಕೆ. ಗಂಗಾಧರ ಇವರು ಬಸವಣ್ಣನವರ ಬಾಲ್ಯ,ಯೌವನ, ಕಲ್ಯಾಣದ ಸನ್ನಿವೇಶಗಳೊಂದಿಗೆ ವಚನ ಸಾಹಿತ್ಯ ಕುರಿತು ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಇವರ ಸೇವೆಯನ್ನು ಪರಿಗಣಿಸಿ ೨೦೧೪ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ನೀಡಿದೆ. ೨೦೦೭ರಲ್ಲಿ ಮಹಾರಾಷ್ಟ್ರ ಬಸವ ವಚನ ಪ್ರಶಸ್ತಿಯನ್ನು, ೨೦೦೬ರಲ್ಲಿ ಬಸವ ಸಾಧಕ ಪ್ರಶಸ್ತಿಯನ್ನು, ೨೦೦೩ರಲ್ಲಿ ದೆಹಲಿಯ ಸಂಸತ್ ಭವನದಲ್ಲಿ ರಾಷ್ಟ್ರೀಯ ಪುರಸ್ಕಾರ, ೨೦೦೩ರಲ್ಲಿ ರಾಧಾಕೃಷ್ಣನ್ ಪ್ರಶಸ್ತಿ, ಕೆಂಪೇಗೌಡ ನಾಗರೀಕ ಪ್ರಶಸ್ತಿ ಮತ್ತು ೨೦೦೩ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರಕಿದೆ. ಬಸವಣ್ಣನವರ ಕುರಿತು ರಚಿಸಿದ ಇವರ ಚಿತ್ರಗಳನ್ನು

ಕರ್ನಾಟಕ ಸರ್ಕಾರದ ಮೂಲಕ ನವದೆಹಲಿಯ ಸಂಸತ್ ಭವನದ ಆವರಣದಲ್ಲಿ ಅಂದಿನ ರಾಷ್ಟ್ರಪತಿ ಡಾ. ಎ. ಪಿ. ಜೆ. ಅಬ್ದುಲ್ ಕಲಾಂ ಅವರು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದು ಸ್ಮರಣೀಯ. ರಾಜ್ಯದ ಹಲವಾರು ಕಡೆ ಗುಂಪು ಚಿತ್ರ ಪ್ರದರ್ಶನ ಹಾಗೂ ಏಕವ್ಯಕ್ತಿ ಚಿತ್ರ ಪ್ರದರ್ಶನ ನೀಡಿರುತ್ತಾರೆ.

೩೦. ಕಿಶೋರ ಕುಮಾರ ಹಿರೇಮಠ, ತುಮಕೂರು

ಕಿಶೋರಕುಮಾರ ಹಿರೇಮಠ ಅವರು ಗುಲಬರ್ಗಾದಲ್ಲಿ ೧೯೬೪ರಲ್ಲಿ ಜನಿಸಿದರು. ಇವರು ೧೯೮೧–೮೨ರಲ್ಲಿ ಎಂ.ಎ. ಪದವಿ ಪಡೆದ ನಂತರ ಬೆಂಗಳೂರು, ಮಂಗಳೂರು, ದೆಹಲಿ, ಅಹಮದಾಬಾದ್ ಮುಂತಾದ ಪ್ರಮುಖ ನಗರಗಳಲ್ಲಿ ಏಕವ್ಯಕ್ತಿ ಚಿತ್ರಪ್ರದರ್ಶನ ಮತ್ತು ಸಮೂಹ ಚಿತ್ರಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ೭, ೮ ಮತ್ತು ೯ನೇ ಕಲಾಮೇಳದಲ್ಲಿ ಇವರು ಭಾಗವಹಿಸಿದ್ದಾರೆ. ಕಲಾಶಿಬಿರಗಳಲ್ಲದೆ ಗ್ರಾಫಿಕ್ಸ್ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಸದ್ಯ ತುಮಕೂರಿನ ರವೀಂದ್ರ ಕಲಾನಿಕೇತನದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

೧೯೯೧ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ, ಮೈಸೂರು ದಸರಾ ಪ್ರಶಸ್ತಿ, ೧೯೯೭ರ ಪ್ರಶಸ್ತಿ, ನಾಗಪುರದ ದ.ಮ.ವ.ತಾಂ.ಕೇ., ೧೯೮೫ರಲ್ಲಿ ಕಿಶೋರ್ ಕುಮಾರ್ ಅವರು ಧಾರವಾಡದ ಬೆಲ್ಲದ ಅವರ ಬಸವಣ್ಣನವರ ವಚನಗಳನ್ನು ಕುರಿತ ಕಲಾಶಿಬಿರದಲ್ಲಿ ಭಾಗವಹಿಸಿ ಚಿತ್ರಗಳನ್ನು ರಚಿಸಿದ್ದಾರೆ.

೩೧. ಆರ್. ಗಿರಿಧರಗೌಡ, ಗುಡವಲ್ಲಿ

ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿರುವ ಇವರು ೧೯೬೫ ರಲ್ಲಿ ಜನಿಸಿದ್ದಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ ಹಾಗೂ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ ಮತ್ತು ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

೩೨. ಡಾ. ಪಿ. ಬಿ. ಗವಾನಿ, ರಾಯಬಾಗ

ಪಿ.ಬಿ. ಗವಾನಿಯವರು ೨೨.೭.೧೯೬೭ರಲ್ಲಿ ಜನಿಸಿದರು. ಇವರು ತಮ್ಮ ಕಲಾಶಿಕ್ಷಣವನ್ನು ಬೆಂಗಳೂರಿನ ಕೆನ್ ಕಲಾಶಾಲೆಯಲ್ಲಿ ಪಡೆದು ರಾಯಬಾಗದ ವಿವೇಕಾನಂದ ಕಲಾಮಂದಿರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಲವಾರು ಕಡೆ ಇವರ ಚಿತ್ರಗಳು ಪ್ರದರ್ಶನಗೊಂಡಿವೆ. ಶ್ರೀಯುತರು ಬಸವಣ್ಣನನ್ನು ಮುಖ್ಯವಾಗಿ ಅಷ್ಟಾವರ್ಣ ಹೊಂದಿದ ವೃತ್ತಾಕಾರದ ಮಧ್ಯದಲ್ಲಿರುವಂತೆ ಭಾವಚಿತ್ರವನ್ನು ಚಿತ್ರಿಸಿದ್ದಾರೆ.

೩೩. ಚಂದ್ರನಾಥ ಆಚಾರ್ಯ, ಬೆಂಗಳೂರು

ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ, ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ಜನಿಸಿದ ಚಂದ್ರನಾಥ ಅವರು ಕೋಲ್ಕತ್ತಾದ ಶಾಂತಿನಿಕೇತನದ ಪೋಸ್ಟ್ ಡಿಪ್ಲೋಮಾ ಪದವೀಧರರು. ಕರ್ನಾಟಕ ಮತ್ತು

ಹೊರರಾಜ್ಯದಲ್ಲಿ ತಮ್ಮ ಕಲಾಕೃತಿಗಳ ಕಲಾಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಅಷ್ಟೇ ಅಲ್ಲದೇ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ. 'ಪ್ರಜಾವಾಣಿ'ಯಲ್ಲಿ ಕಲಾವಿದರಾಗಿ ಬಹುಕಾಲ ಸೇವೆಸಲ್ಲಿಸಿದ ಇವರ ಅನೇಕ ನಿರೂಪಣಾ ಚಿತ್ರಗಳು ಪ್ರಜಾವಾಣಿ, ಸುಧಾ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಶ್ರೀಸಾಮಾನ್ಯರಿಗೂ ಚಂದ್ರನಾಥ ಆಚಾರ್ಯ ಹೆಸರು ಪರಿಚಿತವಾಗಿದೆ. ಕೇಂದ್ರ ಲಲಿತಕಲಾ ಅಕಾಡೆಮಿ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ, ಹೀಗೆ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

೩೪. ಡಿ. ವಿಶ್ವನಾಥ, ಹುಬ್ಬಳ್ಳಿ

ವಿಶ್ವನಾಥ ಇವರು ಚಿತ್ರಕಲೆಯಲ್ಲಿ ಪದವೀಧರರಾಗಿದ್ದು, ಮುಂಬಯಿಯ ಹಲವಾರು ಸ್ಟುಡಿಯೋಗಳಲ್ಲಿ ಕಲಾವಿದರಾಗಿ ಕಾರ್ಯ ನಿರ್ವಹಿಸಿದ್ದಾರೆ. ಕರ್ನಾಟಕ ಮತ್ತು ಹೊರರಾಜ್ಯಗಳ ತಮ್ಮ ಕಲಾಕೃತಿಗಳ ಕಲಾಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಅಷ್ಟೇ ಅಲ್ಲದೇ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ಫೇಲೋಶಿಪ್ ಪಡೆದಿದ್ದಾರೆ. ನವದೆಹಲಿಯ ಐಫೆಕ್ಸ್, ಧಾರವಾಡ ಉತ್ಸವ, ರಾಜ್ಯೋತ್ಸವ ಪ್ರಶಸ್ತಿಗಳನ್ನು ಪಡೆದಿದ್ದಾರೆ.

೩೫. ವಿಜಯ್ ಬಾಗೋಡಿ, ಬರೋಡಾ

ಮೂಲತಃ ಕಲಬುರ್ಗಿಯವರಾದ ವಿಜಯ್ ಬಾಗೋಡಿ ಇವರು ಚಿತ್ರಕಲೆ ಮತ್ತು ಮುದ್ರಣ ಕಲೆಯಲ್ಲಿ ಸಿದ್ಧಹಸ್ತರು. ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದ ಗ್ರಾಫಿಕ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಇವರು ರಾಷ್ಟ್ರೀಯ ಮಟ್ಟದ ಕಲಾವಿದರಾಗಿ ಗುರುತಿಸಲ್ಪಟ್ಟಿದ್ದಾರೆ. ಕೇಂದ್ರ ಲಲಿತಕಲಾ ಅಕಾಡೆಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಎರಡನೇ ಬ್ಯಾಂಗಕಾಕ್ ಟ್ರಿನಾಲೆ, ೧೩ನೇ ಅಂತಾರಾಷ್ಟ್ರೀಯ ಬಿನಾಲೆ ೧೧ನೇ ಟ್ರಿನಾಲೆ, ಭಾರತದ ೧ನೇ ಏಷಿಯನ್ ಆರ್ಟ್ ಬಿನಾಲೆ ಹೀಗೆ ಅನೇಕ ಅಂತಾರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ ಮತ್ತು ಪ್ರಶಸ್ತಿಗಳನ್ನು ಸಹ ಪಡೆದಿದ್ದಾರೆ.

೩೬. ಭೀಮರಾವ್ ಮುರಗೋಡ, ನವದೆಹಲಿ

ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಜನಿಸಿದ ಮುರಗೋಡ ಇವರು ನವದೆಹಲಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ರಾಷ್ಟ್ರಪತಿ ಭವನ, ಸಂಸತ್ ಭವನಕ್ಕೆ ಅನೇಕ ರಾಜಕೀಯ ನಾಯಕರ ಭಾವಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕಲಾಶಿಬಿರಗಳಲ್ಲಿ, ಕಲಾಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ.

೩೭. ಸಂಜಯ ಸೆಲಾರ್, ಕೊಲ್ಹಾಪುರ

ಚಿತ್ರಕಲೆಯಲ್ಲಿ ಪದವಿಯನ್ನು ಪಡೆದ ಇವರು ತಮ್ಮ ಏಕವ್ಯಕ್ತಿ ಕಲಾಪ್ರದರ್ಶನವನ್ನು ರಾಜ್ಯ ಹೊರರಾಜ್ಯಗಳಲ್ಲಿ ಏರ್ಪಡಿಸಿದ್ದಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ. ಚಿತ್ರವನ್ನು ಬರೆಯುವುದು ಹೇಗೆ ? ಎಂಬ ಕುರಿತು ಅನೇಕ ಗ್ರಂಥಗಳನ್ನು ಚಿತ್ರಸಹಿತವಾಗಿ ಪ್ರಕಟಿಸಿರುವುದರ ಮೂಲಕ ಕಲಾಸೇವೆಗೈಯುತ್ತಲಿದ್ದಾರೆ.

೩೮. ಇವಾನ್ ಚೆರಿಯನ್, ತಮಿಳುನಾಡು

ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿರುವ ಇವರು ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ ಹಾಗೂ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

೩೯. ಜ್ಯೋತ್ಸ್ನಾ ಕದಮ್, ಮುಂಬಯಿ

ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿರುವ ಇವರು ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ ಹಾಗೂ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

೪೦. ಎಸ್. ಪ್ರಹ್ಲಾದ, ಬೆಂಗಳೂರು

ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿರುವ ಇವರು ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ ಹಾಗೂ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

೪೧. ರಾಮಚಂದ್ರ ಕರಾಟಮಲ್, ಪುಣೆ

ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿರುವ ಇವರು ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ ಹಾಗೂ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

೪೨. ಸುನೀಲ್ ಮಠದ, ಚಿಂಚೋಳಿ

ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿರುವ ಇವರು ಚಿಂಚೋಳಿಯಲ್ಲಿ ಜನಿಸಿದ್ದಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗಿಯಾಗಿದ್ದಾರೆ ಹಾಗೂ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

❑❑❑

ಅಧ್ಯಾಯ : ಎಂಟು

ಬಸವಣ್ಣನವರ ಕುರಿತ ಕಲಾಕೃತಿಗಳ ಪ್ರಭಾವ, ಪ್ರೇರಣೆ ತಂತ್ರ ಮತ್ತು ಶೈಲಿ

ಸೃಷ್ಟಿಯ ಆಂತರಿಕ ಮತ್ತು ಬಾಹ್ಯ ರಹಸ್ಯವನ್ನು ಭೇದಿಸುವುದಕ್ಕೆ ಕಲಾವಿದ ಒಂದು ಕಲಾಕೃತಿಯನ್ನು ನಿರ್ಮಿಸುತ್ತಾನೆ ಮತ್ತು ಪರ್ಯಾಯವಾಗಿ ಮತ್ತೊಂದು ರಹಸ್ಯವನ್ನು ಸೃಷ್ಟಿಸುತ್ತಾನೆ. ಇಂತಹ ರಹಸ್ಯದ ನಿರಂತರತೆಯಿಂದಲೇ ಕಲೆ ಸದಾ ಕಾಲ ಜೀವಂತವಾಗಿರುತ್ತದೆ. ಬಣ್ಣ ಮತ್ತು ರೇಖೆಗಳಿಂದ ರೂಪುಗೊಳ್ಳುವ ಕಲಾಕೃತಿ ಕ್ರಮೇಣ ತನ್ನ ವಶಕ್ಕೆ ಮಾಡಿಕೊಳ್ಳುತ್ತದೆ. ಹಾಗೆಯೇ ಒಂದು ವಿಶಿಷ್ಟ ಪರಿಸರದಲ್ಲಿ ಪ್ರವಹಿಸುವ ಕಲೆಯನ್ನು ಬಂಧಿಸುತ್ತದೆ. ಕಲೆ ಯಾವಾಗಲೂ ತನ್ನ ಸೀಮಾರೇಖೆಯಿಂದ ಹೊರಬರುವ ಪ್ರಯತ್ನ ಮಾಡುತ್ತದೆ ಮತ್ತು ಸಂಪ್ರದಾಯದಿಂದ ಮುಕ್ತವಾಗಿರುತ್ತದೆ. ಕಲೆಯ ಈ ಮುಕ್ತತೆಯಿಂದ ಕಲಾವಿದ ತಾನು ಸಹ ಬಂಧಮುಕ್ತನಾಗುತ್ತಾನೆ. ಸೌಂದರ್ಯದ ದರ್ಶನವಾಗಬೇಕಾದರೆ ವೃತ್ತಿಗೆ ಸ್ವಾತಂತ್ರ್ಯ ಬೇಕು. ಸೌಂದರ್ಯವನ್ನು ಅನುಭವಿಸುವ ಶಕ್ತಿ ಇರುವುದಿಲ್ಲ. ಪ್ರಕೃತಿಯ ರಹಸ್ಯಮಯ ಸೌಂದರ್ಯವನ್ನು ಪ್ರಾಮಾಣಿಕತೆಯಿಂದ ಮತ್ತು ವಿನಯಶೀಲತೆಯಿಂದ ಉದ್ಘಾಟಿಸುವ ಕೃತಿ ಕಲಾಕೃತಿಯಾಗುತ್ತದೆ. ಕಲಾವಿದನ ಪ್ರಾಮಾಣಿಕತೆಯು ಅವನ ಕಲೆಯಿಂದ ಪ್ರಕಟಿತವಾಗುತ್ತದೆ.[೧] ಎಷ್ಟೋ ಕಲಾವಿದರು ಮೂರ್ತ ಚಿತ್ರಗಳನ್ನು ರಚಿಸುತ್ತಾರೆ. ಆದರೆ ತಮ್ಮ ಮುಗ್ಧತೆಯಿಂದಲೋ ಏನೋ, ಕಲಾಕ್ಷೇತ್ರದಲ್ಲಿನ ಪ್ರಸಿದ್ಧಿಯಿಂದ ಅಮೂರ್ತವಾಗಿ ಉಳಿದ ಉದಾಹರಣೆಗಳು ಬಹಳಷ್ಟಿವೆ.

ಇಲ್ಲಿಯೂ ಕೂಡ ಬಸವಣ್ಣನವರ ಕುರಿತ ಹಲವಾರು ಕಲಾಕೃತಿಗಳನ್ನು ಅಭಿವ್ಯಕ್ತಿಸಿದ ನಮ್ಮ ನಡುವಿನ ಅನೇಕ ಕಲಾವಿದರು ಪ್ರಸಿದ್ಧಿಯಿಂದ ಅಮೂರ್ತವಾಗಿರುವದಲ್ಲದೇ ಅವರ ಕಲಾಕೃತಿಗಳು ಸಹ ಅಮೂರ್ತವೆಂಬ ಕತ್ತಲೆಯಲ್ಲಿ ಉಳಿದಿರುವ ಕೆಲವಾರು ಕಲಾಕೃತಿಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ. ಅಷ್ಟೇ ಅಲ್ಲದೆ ಅವರನ್ನು ಕೂಡ ಇಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

---

೦೧. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ) : ಕಲಾಕೋಶ, ಪು-೮೩

ಈ ಅಧ್ಯಯನಾತ್ಮಕ ಹಿನ್ನೆಲೆಯ ತಿರುಗಾಟದಲ್ಲಿ ಬಸವ ಅನುಯಾಯಿಗಳಲ್ಲಿ, ಗ್ರಂಥಾಲಯಗಳಲ್ಲಿ, ವಸ್ತುಸಂಗ್ರಹಾಲಯಗಳಲ್ಲಿ, ಲಭ್ಯವಾದ ಕಲಾಕೃತಿಗಳ ಛಾಯಾಚಿತ್ರಗಳು, ಕಲಾಕೃತಿಗಳ ಮುದ್ರಿತ ಪ್ರತಿಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬಸವಣ್ಣನವರ ಕಲಾಕೃತಿಗಳನ್ನು ಮೊದಲ ಹಂತದಲ್ಲಿ ಪ್ರಮುಖಘಟ್ಟಗಳನ್ನು ಕುರಿತು ವಿಷಯವಾರು ವರ್ಗೀಕರಣ ಮಾಡಿಕೊಂಡರೆ, ವಚನಗಳನ್ನು, ಭಾವಚಿತ್ರಗಳನ್ನು ಪ್ರತ್ಯೇಕವಾಗಿ ಹಾಗೂ ಇತರೆ ಮಾಧ್ಯಮದಲ್ಲಿ ರಚನೆಗೊಂಡ ಕಲಾಕೃತಿಗಳನ್ನು ಮಾಧ್ಯಮವಾರು ವರ್ಗೀಕರಣದೊಂದಿಗೆ ಅಧ್ಯಯನ ಮಾಡಲಾಗಿರುವುದರ ಹಿಂದೆ ಅವುಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿಗಳ ಕುರಿತು ಇಲ್ಲಿ ಚರ್ಚಿಸಲಾಗುವುದು.

ಕಲೆ ಮಾನವನ ಕ್ರಿಯಾಶಕ್ತಿಯ ಕುಶಲ ಅಭಿವ್ಯಕ್ತಿ. ಅಭಿವ್ಯಕ್ತಿಯು ಹಲವಾರು ರೀತಿಯಲ್ಲಿ ವ್ಯಕ್ತವಾಗಿದ್ದು, ಆಗಾಗ ಬದಲಾವಣೆ ಆಗುತ್ತಾ ಬಂದಿದೆ. ಮಾನವನಿಗೆ ತನ್ನ ಸುತ್ತಮುತ್ತಲಿನ ಪರಿಸರದಿಂದ ಕಲಾಪ್ರಜ್ಞೆ ಹೊರಹೊಮ್ಮಲು ಕಾರಣಗಳಾಗುತ್ತವೆ. ತನ್ನ ಪರಿಸರದಲ್ಲಿನ ಯಾವುದು ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಉಂಟು ಮಾಡುತ್ತದೆಯೋ ಅದನ್ನು ಚಿತ್ರಿಸುತ್ತಾನೆ. ಪ್ರಕೃತಿಯನ್ನು, ಅದು ಪ್ರಚೋದಿಸಿದ ಭಾವನೆಗಳನ್ನು ಕಲೆಯ ಮೂಲಕ ಸೃಷ್ಟಿಸುತ್ತಾನೆ.[೨] ಜನರು ಕಲಾಕೃತಿಗಳನ್ನು ನೋಡಿ ಸಂತೋಷ ಹಾಗೂ ತೃಪ್ತಿಗಳು ಸೇರಿದಂತೆ ವೈವಿಧ್ಯಮಯ ಅನುಭವಗಳನ್ನು ಪಡೆಯುತ್ತಾರೆ. ಕಲಾವಿದನು ಸೃಷ್ಟಿಸಿದ ಕಲಾಕೃತಿಗಳನ್ನು ನೋಡುವ ಪ್ರಕ್ರಿಯೆಗೆ ಅಭ್ಯಾಸ ತುಂಬ ಮುಖ್ಯವಾದದು. ಚಿತ್ರಕಲೆಯದೇ ಆದ ವ್ಯಾಕರಣವನ್ನು ತಿಳಿದುಕೊಳ್ಳುವುದರೊಂದಿಗೆ ತಮ್ಮಲ್ಲಿ ಅಂತರ್ಗತವಾಗಿರುವ ಸಾಮರ್ಥ್ಯಗಳನ್ನು ನೋಡುಗರು ಬಳಸಬೇಕಾಗುತ್ತದೆ. ಮೇಲ್ನೋಟಕ್ಕೆ ಚಿತ್ರ ಅಥವಾ ಶಿಲ್ಪವೊಂದು ಭೌತಿಕ ವಸ್ತುವಾಗಿ ಕಂಡುಬರುತ್ತದೆ. ಅವುಗಳನ್ನು ನಾವು ನಮ್ಮ ಇಂದ್ರಿಯಗಳ ಮೂಲಕ ಗ್ರಹಿಸುತ್ತೇವೆ. ದೃಶ್ಯಭಾಷೆಯನ್ನು ಕುರಿತು ನಮಗಿರುವ ಅನುಭವ, ಧೋರಣೆಗಳನ್ನು ಅನುಸರಿಸಿ ಅದು ನಮಗೆ ವಿಭಿನ್ನವಾಗಿ ಕಂಡುಬರುತ್ತದೆ.[೩] ಅಂತೆಯೇ ಸಹೃದಯರು ಹಾಗೂ ವಿಮರ್ಶಕರು ತಮ್ಮದೇ ಆದ ದೃಷ್ಟಿಯಿಂದ ಕಲಾಕೃತಿಯ ಗುಣಗ್ರಹಣ ಮಾಡುತ್ತಾರೆ.

ಕೃತಿ ರಚನೆಯ ಕಾಲದಲ್ಲಿ ಕೃತಿಕಾರ ಅನುಭವಿಸಿದ ರಸಾನುಭವಗಳನ್ನು ರಸಿಕನಾದ ಸಹೃದಯನೂ ಕೃತಿಯ ದರ್ಶನದಿಂದ ಪಡೆಯುತ್ತಾನೆ. ಕೃತಿಯಲ್ಲಿ ದೋಷಗಳು ಇರಬಹುದಾದರೂ ಅವುಗಳನ್ನು ಗೌಣವಾಗಿರಿಸಿ ಕೃತಿಯ ಗುಣಗ್ರಹಣ ಅಥವಾ ರಸಾಸ್ವಾದನೆಯನ್ನು (Art Appreciation) ಮಾಡುತ್ತಾನೆ. ಕಲಾಕೃತಿಗಳನ್ನು ಹೆಚ್ಚಾಗಿ ನೋಡಿ ನಮ್ಮ ಸೌಂದರ್ಯಪ್ರಜ್ಞೆಯನ್ನು ಬೆಳೆಸಿಕೊಂಡಷ್ಟು ನಿಜವಾದ ರಸಾಸ್ವಾದನೆ ಸುಲಭವಾಗುತ್ತದೆ. ರಸಾಸ್ವಾದನೆ ಹೆಚ್ಚಾದಷ್ಟು ಕಲಾಕೃತಿ ನಮಗೆ ಹೆಚ್ಚು ಆಪ್ಯಾಯಮಾನವಾಗುತ್ತದೆ, ಹತ್ತಿರವಾಗುತ್ತದೆ. ಕೃತಿಯನ್ನು ಅರ್ಥಮಾಡಿಕೊಳ್ಳಲು ಅಥವಾ ಅನುಭವಿಸಲು ಸಾಧ್ಯವಾಗುತ್ತದೆ.[೪] ಕಲಾವಿದರನ್ನು ಆವರಿಸಿರುವ ಸಾಮಾಜಿಕ, ಸಾಂಸ್ಕೃತಿಕ ಪರಿಸರ ಸೂಕ್ಷ್ಮಾತಿಸೂಕ್ಷ್ಮವಾಗಿ ಅವರ ಮೇಲೆ

---

೦೨. ಡಾ. ಅ. ಲ. ನರಸಿಂಹನ್ : ದೃಶ್ಯಕಲೆಗಳ ಗುಣಗ್ರಹಣ, ಪು–೫

೦೩. ಅದೇ., ಪು–೬

೦೪. ರವೀಂದ್ರ ಎಸ್. ಕಮ್ಮಾರ್ : ಚಿತ್ರಕಲಾವಿದ ವಿ.ಬಿ. ಹಿರೇಗೌಡರ್ ಬದುಕು ಮತ್ತು ಕಲಾಕೃತಿಗಳು – ಒಂದು ಅಧ್ಯಯನ, (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಕ.ವಿ.ವಿ. ಹಂಪಿ), ಪು–೨೦೫

ದೀರ್ಘ ಕಾಲದ ಪ್ರಭಾವವನ್ನು ಬೀರುತ್ತದೆ.[೫] ಕಲಾವಿದನ ಸೃಜನಶೀಲ ಮನಸ್ಸಿಗೆ ವ್ಯಕ್ತಿಗತವಾದ ಅಥವಾ ಭೌತಿಕವಾದ **'ಪ್ರಭಾವ'** ಪ್ರಾಕೃತಿಕ ಅಥವಾ ಸಾಮಾಜಿಕ ವಿದ್ಯಮಾನಗಳಿಂದಾಗುವ **'ಪ್ರೇರಣೆ'** ಇವೆರಡನ್ನೂ ಒಗ್ಗೂಡಿಸಿಕೊಂಡು ದೃಶ್ಯ ಕಾವ್ಯವೊಂದರ ರಚನೆಗೆ ಬೇಕಾಗುವ ಸ್ವಸೃಜನವಾದ **'ಶೈಲಿ'** ಹಾಗೂ ಇವು ಮೂರನ್ನೂ ಮೇಳೈಸಿಕೊಂಡು ನಿರ್ಮಿಸುವ ದೃಶ್ಯಗಳಿಗೆ ವಿಶಿಷ್ಟ **'ತಂತ್ರ'** ನಿರ್ವಹಣೆ ಈ ನಾಲ್ಕು ನೆಲೆಗಳ ಮಧ್ಯೆ ಉತ್ತಮ ಬಾಂಧವ್ಯ ಕಲ್ಪಿಸಿಕೊಂಡಾಗ ಮಾತ್ರವೇ ಒಂದು ಉತ್ತಮ ಕಲಾಕೃತಿ ರಚನೆಯ ಸಾಧ್ಯವಿದೆ.[೬] ಈ ನಾಲ್ಕು ನೆಲೆಗಳನ್ನು ತಮ್ಮ ಅನುಭವದ ನೆಲೆಗಟ್ಟಿನಲ್ಲಿ ಗಟ್ಟಿಗೊಳಿಸಿಕೊಂಡ ಕಲಾವಿದರು ಬಸವಣ್ಣನವರ ಕುರಿತು ರಚಿಸಿದ ಕಲಾಕೃತಿಗಳಲ್ಲಿ ಆ ನಾಲ್ಕು ನೆಲೆಗಳು ಸ್ಪಷ್ಟವಾಗಿ ಗೋಚರವಾಗುತ್ತವೆ. ಅಂತಹ ನೆಲೆಗಳನ್ನು ಇಲ್ಲಿ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಬಸವಣ್ಣನವರ ಕಲಾಕೃತಿಗಳಲ್ಲಿ 'ಪ್ರಭಾವ'

ಬಸವಣ್ಣನವರ ಮಾನವತೆ, ಸಮಾಜದಲ್ಲಿ ಏಕತೆ, ಇಷ್ಟಲಿಂಗ ಉಪಾಸನೆಯಂತಹ ಕ್ರಿಯಾಕಾಯಕಗಳು ಅನುಭವ ಮಂಟಪದಲ್ಲಿ ಚಿಗುರೊಡೆದು ಕಲ್ಯಾಣದಲ್ಲಿ ಕ್ರಾಂತಿಯನ್ನೇ ಸೃಷ್ಟಿಸಿದವು. ಬಸವಣ್ಣನವರ ಶರಣಕ್ರಾಂತಿಯ ಪ್ರಭಾವಕ್ಕೆ ಒಳಗಾದ ಒಂದು ಲಕ್ಷದ ತೊಂಬತ್ತಾರು ಸಾವಿರ ಜನ ಜಾತಿಮತಗಳ ಬೇಧವನ್ನರಿಯುದೇ ಬಸವಣ್ಣನವರ ಅನುಭವ ಮಂಟಪದ ಶರಣ ಅನುಯಾಯಿಗಳಾದರಲ್ಲದೇ, ಕೊರಳಿಗೆ ಶಿವಲಿಂಗವನ್ನು ಧರಿಸಿ ಏಕದೇವೋಪಾಸನೆಯ ವ್ರತವನ್ನು ಕೈಗೊಂಡಿದ್ದು ಬಿಜ್ಜಳನಂತಹ ಅರಸನನ್ನೇ ಕಂಗೆಡಿಸಿತು. ಹನ್ನೆರಡನೆಯ ಶತಮಾನದಿಂದ ಹಿಡಿದು ಸುಮಾರು ಎಂಟುನೂರು ವರ್ಷಗಳ ನಂತರವೂ ಬಸವಣ್ಣ ಈಗಲೂ ವಿಶ್ವದಾದ್ಯಂತ ಶರಣಸಂಪನ್ನ ಸಾಹಿತಿಗಳ, ಕಲಾವಿದರ ಮೇಲೆ ತಮ್ಮ ದಿವ್ಯವಾದ ಮನುಕುಲದ ಒಳಿತಿನ ಪ್ರಭಾವವನ್ನು ಬೀರಿದ್ದಾರೆ, ಬೀರುತ್ತಲೇ ಇದ್ದಾರೆ. ಮಾನವನ ಗತ ಇತಿಹಾಸದ ಹಿಂದೆ ಅಡಕವಾಗಿರುವ ನಿಯಮಗಳ ಜೊತೆಗೆ ಅವು ಹೇಗೆ ಆತನ ಕಾರ್ಯಚಟುವಟಿಕೆಗಳ ಮೇಲೆ ಪ್ರಭಾವವನ್ನು ಬೀರುತ್ತವೆಂಬುದು ಇದರಿಂದ ಗೊತ್ತಾಗುತ್ತದೆ.[೭] ಈ ಹಿನ್ನೆಲೆಯಲ್ಲಿ ಒಟ್ಟು ಅಧ್ಯಯನದಲ್ಲಿ ಬಸವಣ್ಣನವರ ಕುರಿತು ರಚಿಸಲಾದ ಕಲಾಕೃತಿಗಳ ಮೇಲಾದ ಪ್ರಭಾವವನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ:

ಬಸವಣ್ಣನವರ ಶರಣಸಂಪನ್ನವಾದ ಸಮಾಜಮುಖಿ 'ನಡೆ'ಯ ಪ್ರಭಾವದಿಂದ ಭಾರತದಲ್ಲಿ ಅನೇಕ ಬಗೆಯ ಸಾಹಿತ್ಯಕೃತಿಗಳಷ್ಟೇ ಏಕೆ? ನಾಟಕಗಳು, ಚಲನಚಿತ್ರಗಳು, ತೊಗಲು ಗೊಂಬೆಯಾಟಗಳು, ಚಿತ್ರಗಳು, ಶಿಲ್ಪಗಳು ಸಾಹಿತಿಗಳಿಂದ, ಕಲಾವಿದರಿಂದ ಅಭಿವ್ಯಕ್ತಗೊಂಡಿವೆ. ಹೀಗೆ ಅಭಿವ್ಯಕ್ತಗೊಂಡ ದೃಶ್ಯಕಲೆಗಳನ್ನು ಒಂದೆಡೆ ಅಧ್ಯಯನ ಮಾಡುವ ಉದ್ದೇಶವನ್ನು ಈ ಮಹಾಪ್ರಬಂಧ ಅತ್ಯಂತ ವಿನೀತವಾಗಿ ಪೂರೈಸಿದೆ.

---

೦೫. ಡಾ. ಎಸ್. ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪು-೬೫

೦೬. ರವೀಂದ್ರ ಎಸ್. ಕಮ್ಮಾರ್ : ಚಿತ್ರಕಲಾವಿದ ವಿ.ಬಿ. ಹಿರೇಗೌಡರ್ ಬದುಕು ಮತ್ತು ಕಲಾಕೃತಿಗಳು – ಒಂದು ಅಧ್ಯಯನ, (ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಕ.ವಿ.ವಿ. ಹಂಪಿ), ಪು-೨೦೫

೦೭. ಡಾ. ಎಸ್. ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪು-೩೭

ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳು ಮೂಲತಃ ವಿಶ್ವಕರ್ಮ ಸಮುದಾಯದವರಾಗಿದ್ದು, ಬಹುಮುಖ ಕಲಾವಿದರು, ಶಿಲ್ಪಕಲೆ, ಶಾಸ್ತ್ರಗಳನ್ನು ಕಲಿತವರು. ಮೈಸೂರು ಅರಸರ ಪೋಷಣೆಯಲ್ಲಿ ಬೆಳೆದ ಇವರು ಆಧ್ಯಾತ್ಮಿಕ ಜೀವಿ. ತಮ್ಮ ಬದುಕಿನುದ್ದಕ್ಕೂ ದೇವಾನುದೇವತೆಗಳ, ಮಹಾತ್ಮರ ಚಿತ್ರ, ಶಿಲ್ಪಗಳನ್ನೇ ರಚಿಸಿದ ಇವರು ಬಸವಣ್ಣನವರನ್ನೂ ಸಹ ಚಿತ್ರಿಸಿದ್ದಾರೆ. ಕಲ್ಯಾಣದಲ್ಲಿ ಬಸವಣ್ಣನವರು ಬಿಜ್ಜಳನ ಮಂತ್ರಿಯಾಗಿದ್ದ ಸಂದರ್ಭದ ಚಿತ್ರವನ್ನು ಚಿತ್ರಿಸಿದ್ದಾರೆ. ಮೈಸೂರು ಅರಮನೆಯಲ್ಲಿರುವ ವಾಸ್ತುವಿನ ಭಾಗವಾಗಿರುವ ಕಮಾನುಗಳ ಮತ್ತು ಅರಮನೆಯ ಸಿಂಹಾಸನದ ಪ್ರಭಾವವನ್ನು ಇಲ್ಲಿನ ಚಿತ್ರದಲ್ಲಿ ಕಾಣಬಹುದಾಗಿದೆ. ಬಸವಣ್ಣನವರ ಬಹುತೇಕ ಚಿತ್ರಗಳಿಗಿಂತ ವಿಭಿನ್ನವಾಗಿ ಚಿತ್ರಿಸಿರುವ ಈ ಚಿತ್ರದಲ್ಲಿ ಬಸವಣ್ಣನನ್ನು ಮೀಸೆಯಿಲ್ಲದ, ಸೌಮ್ಯವಾದ ಮುಖಚರ್ಯೆಯನ್ನು ಹೊಂದಿದವರಂತೆ ಸಿದ್ಧಲಿಂಗಸ್ವಾಮಿಗಳು ಚಿತ್ರಿಸಿದ್ದಾರೆ. ಆದರೆ ಈ ಚಿತ್ರ ಸಾರ್ವತ್ರಿಕವಾಗಿ ಪ್ರಸಿದ್ಧಿಯನ್ನು ಪಡೆಯಲಿಲ್ಲ. ಆಧ್ಯಾತ್ಮದ, ನೈಜ ಶೈಲಿಯ, ವರ್ಣಗಳಲ್ಲಿ ಎಂದಿನ ಮೃದುತ್ವದ ಪ್ರಭಾವ ಹೊಂದಿದ ಈ ಚಿತ್ರ ಈ ನೆಲದ ಪರಿಮಳವನ್ನು ಹೊರಸೂಸುತ್ತದೆ.

ಮುಗಳಿಯವರು ಬಸವಕಲ್ಯಾಣದ ಪರಿಸರದಲ್ಲಿದ್ದವರು. ಯಾವುದೇ ಬಗೆಯ ಶಿಷ್ಟವಾದ ಕಲಾಶಿಕ್ಷಣವನ್ನು ಪಡೆದವರಲ್ಲ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಅವರ ಕಲಾಕೃತಿಗಳೇ ಮೇಲುಗೈ ಪಡೆದಿವೆ. ವರ್ಣಮಾಧ್ಯಮಗಳ ಸಮೃದ್ಧವಾದ ಅನುಭವವಿಲ್ಲದ ಮುಗ್ಧರು. ಎನಾಮೆಲ್ ಮಾಧ್ಯಮದಲ್ಲಿಯೇ ಪ್ರಭುತ್ವ ಹೊಂದಿದವರು. ಅತಿ ಎನ್ನಬಹುದಾದ ಮೃದುವಾದ ವರ್ಣಲೇಪನ, ಆಕೃತಿಗಳಲ್ಲಿ ಶರಣಸಂಪನ್ನತೆ, ಭಾರತೀಯತೆಯ ಪ್ರಭಾವ ಇವರ ಕಲಾಕೃತಿಗಳಲ್ಲಿ ಒಡಮೂಡಿವೆ. ಹಣಕ್ಕಾಗಿಯೂ ಕಲಾಕೃತಿಗಳನ್ನು ರಚಿಸದ ಇವರನ್ನು ವಂಚಿಸಿದವರು ಸಾಕಷ್ಟು.

ಸ್ವತಃ ಬಸವನಬಾಗೇವಾಡಿಯ ನಿವಾಸಿಗಳಾದ ಕೆ. ಗಂಗಾಧರ ಅವರಿಂದ ಬಹು ಸಂಖ್ಯೆಯಲ್ಲಿ ರಚಿತವಾದ ನೈಜ ಶೈಲಿಯ ಕಲಾಕೃತಿಗಳು ಬಸವಣ್ಣನವರ ಒಟ್ಟು ಬದುಕಿನ ಮಹತ್ವದ ಸಂಗತಿಗಳನ್ನು ದೃಶ್ಯಾತ್ಮಕವಾಗಿ ನಿರೂಪಿಸುತ್ತವೆ. ಪಾಶ್ಚಾತ್ಯ ನೈಜ ಶೈಲಿಯ ಕಲಾವಿದರ ಕಲಾಕೃತಿಗಳಲ್ಲಿ ಕಂಡುಬರುವ ಹಿನ್ನೆಲೆಯ ದಟ್ಟ ಛಾಯೆಯ ಪ್ರಭಾವ ಇವರ ಬಹುತೇಕ ಕಲಾಕೃತಿಗಳಲ್ಲಿ ಕಂಡು ಬರುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ನೈಜ ಶೈಲಿಯ ಕಲಾಕೃತಿಗಳೊಂದಿಗೆ ಆಧುನಿಕ ಪ್ರಭಾವದಡಿಯಲ್ಲಿ ಹಲವು ಸಂಖ್ಯೆಯ ಕಲಾವಿದರು ಚಿತ್ರ ರಚಿಸಿದ್ದಾರೆ. ಡಿ.ಎನ್ ಉಪಾಧ್ಯ, ಕಿಶೋರಕುಮಾರ, ಕುಮಾರ ಹಿರೇಮಠ, ವಿ.ಜಿ.ಅಂದಾನಿ, ಗಿರಿಧರಗೌಡ ಗುಂಟೂರ, ಕೆ. ಗಂಗಾಧರ, ರವಿ ಇನ್ನೂ ಮುಂತಾದವರು ಆಧುನಿಕ ಪ್ರಭಾವಕ್ಕೊಳಗಾಗಿ ಬಸವಣ್ಣನವರ ಕುರಿತು ಕಲಾಕೃತಿ ರಚಿಸಿದ್ದಾರೆ. ಅಂತಹ ಕೆಲವು ಕಲಾಕೃತಿಗಳು ಪಶ್ಚಿಮದ ಪ್ರಭಾವಕ್ಕೂ ಒಳಗಾಗಿವೆ. ಈ ಅಧ್ಯಯನದಲ್ಲಿ ಚಿತ್ರಿತಗೊಂಡ ಕಲಾಕೃತಿಗಳಲ್ಲಿ ವಚನಗಳಲ್ಲಿ, ಬಸವಣ್ಣನವರ ಜೀವನ ಚರಿತೆಗಳಲ್ಲಿ ಕಂಡ ಪ್ರಾಕೃತಿಕ ವರ್ಣಛಾಯೆಯ ಪ್ರಭಾವ ಇಲ್ಲಿ ಪುನರುತ್ಪತ್ತಿಯಾಗಿದೆ. ಕೂಡಲಸಂಗಮದ, ಕಲ್ಯಾಣದ ಮತ್ತು ಬಿಜ್ಜಳನ ಅರಮನೆಯ ವೈಭವ ಬಹುಕಲಾಕೃತಿಗಳ ರಚನೆಯ ಮೇಲೆ ಪ್ರಭಾವ ಬೀರಿದೆ.

ಪ್ರಾಚೀನವೆನ್ನಬಹುದಾದ ಮಹತ್ವದ ಕೃತಿ ನಂಜುಂಡ ಭಾಗವತರಿಂದ ವಿರಚಿತ **ವೃಷಭೇಂದ್ರ ವಿಳಾಸ** ಯಕ್ಷಗಾನ ಮಹಾನಾಟಕ ಬಸವಣ್ಣನವರ ಸಮಗ್ರ ಜೀವನ ಚರಿತ್ರೆಯನ್ನು ದೃಶ್ಯರೂಪಕದಲ್ಲಿ ಸೆರೆಹಿಡಿದಿಟ್ಟಿದ್ದು ಈ ಕೃತಿಯ ಚಿತ್ರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಇಲ್ಲಿನ ಚಿತ್ರಗಳ ಚಿತ್ರಕಾರ ಅಗೋಚರ. ಹೀಗಾಗಿ ಮೈಸೂರುಭಾಗದ ಕಲಾವಿದ ಅಂದಿನ ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿ ರಚಿಸಿದ ಈ ಕೃತಿ ಸಾರ್ವಕಾಲಿಕವಾಗಿ ಮಹತ್ವದ್ದು.

ಇನ್ನು ಬಸವೇಶ್ವರ ಎನ್ನುವ ಇಂಗ್ಲೀಶ್ ಕಾಮಿಕ್ಸ್‌ನ್ನು ಮುಂಬಯಿನ ಕಲಾವಿದರಾದ ಜಿ.ಆರ್. ನಾಯಕ ಚಿತ್ರಿಸಿದ್ದಾರೆ. ಬಹಳ ಪ್ರಬುದ್ಧವಾದ ಚಿತ್ರಗಳನ್ನು ರಚಿಸುವಲ್ಲಿ ಅವರ ಏಕಾಗ್ರತೆ ಗಮನಾರ್ಹವಾದುದು. ಬಸವಣ್ಣನ ಮುಖ ಚಹರೆ/ಗುಣವನ್ನು (ಕ್ಯಾರೆಕ್ಟರ್) ಕಾಮಿಕ್ಸ್‌ನ ಆರಂಭದಿಂದ ಅಂತ್ಯದವರೆಗೂ ಜತನದಿಂದ ಕಾಯ್ದುಕೊಂಡು ಬಂದಿರುವ ಹಿನ್ನೆಲೆಯಲ್ಲಿ ಅವರ ಮೇಲೆ ವಿಕ್ಟರ್ ಪೆರಾರ್ಡ್ ಅವರ ಮಾನವ ಅಂಗರಚನಾ ಶಾಸ್ತ್ರಗ್ರಂಥದ ಪ್ರಭಾವದೊಂದಿಗೆ ಮುಂಬೈ ಜೆಜೆ ಕಲಾಶಾಲೆಯ ಪ್ರಭಾವವೂ ಬೀರಿರುವುದರ ಹಿನ್ನೆಲೆಯಲ್ಲಿ ಕಾಮಿಕ್ಸ್ ಸಂಪ್ರದಾಯ ಪ್ರಭಾವವೂ ಮೇಳೈಸಿದೆ. ಅಂತಿಮವಾಗಿ ಕಲಾಕೃತಿಯೊಂದರ ರಚನೆಯ ಹಿನ್ನೆಲೆಯಲ್ಲಿ 'ಪ್ರಭಾವ' ಎನ್ನುವ ಕ್ರಿಯೆ ಬಹು ಮಹತ್ವದ್ದು. ಅಪ್ಪ-ಅಮ್ಮ-ಗುರುಗಳಿಂದ ಮಕ್ಕಳು ಪ್ರಭಾವಿತರಾಗುವ ಹಾಗೆ ಮಹಾತ್ಮರ ವ್ಯಕ್ತಿತ್ವದಿಂದಲೂ ಸಾಹಿತಿಗಳು-ಕಲಾವಿದರು ಪ್ರಭಾವಿತರಾಗುತ್ತಾರೆ.

ಬಸವಣ್ಣನವರ ಕಲಾಕೃತಿಗಳಲ್ಲಿ 'ಪ್ರೇರಣೆ'

ಪ್ರೇರಣೆಯು ಅಪೇಕ್ಷಿತ ಗುರಿಯತ್ತ ಒಂದು ಜೀವಿಯನ್ನು ಪ್ರಚೋದಿಸುವ ಮತ್ತು ನಿರ್ದಿಷ್ಟ ಗುರಿ-ನಿರ್ದೇಶಿತ ವರ್ತನೆಗಳನ್ನು ಹೊರಹೊಮ್ಮಿಸುವ, ನಿಯಂತ್ರಿಸುವ ಮತ್ತು ಸಮರ್ಥಿಸುವ ಒಂದು ಮನೋವೈಜ್ಞಾನಿಕ ಲಕ್ಷಣ. ಕಲಾಕೃತಿಯೊಂದರ ರಚನೆಯ ಹಿನ್ನೆಲೆಯಲ್ಲಿ ಕಲಾವಿದರಿಗೆ **ಪ್ರಭಾವ** ಮೊದಲನೆಯದಾದರೆ ಎರಡನೆಯದಾಗಿ **'ಪ್ರೇರಣೆ'** ಎಂಬ ಬೌದ್ಧಿಕ ಕ್ರಿಯೆ ಎಂಬುದು ಮಹತ್ವದ್ದು. ಪ್ರಭಾವದ ಮುಖೇನ "ಕಲಾವಿದನಿಗೆ ಅನೇಕ ವಿಧದಲ್ಲಿ ಪ್ರೇರಣೆ ದೊರಕುವುದುಂಟು. ಕೆಲವೊಮ್ಮೆ ಪ್ರತ್ಯಕ್ಷವಾಗಿ, ಕೆಲವೊಮ್ಮೆ ಪರೋಕ್ಷವಾಗಿ. ಆದರೆ ಕಲಾಕಾರನ ಮನಸ್ಸು, ಬುದ್ಧಿಶಕ್ತಿ ಸರ್ವದಾ ಜಾಗೃತವಾಗಿದ್ದು ಸಂವೇದನಾಶೀಲವಾಗಿರಬೇಕು ಎನ್ನುವದಂತೂ ಅತ್ಯವಶ್ಯಕ".[೮] ಯಾವುದೇ ಒಂದು ನಾಡಿನ, ಜನಾಂಗದ, ವರ್ಗದ ಬದುಕಿನ ಬೆಳವಣಿಗೆಯನ್ನು, ಅದರ ಪರಂಪರೆ ಹಾಗೂ ಸಂಪ್ರದಾಯಗಳನ್ನು ತಿಳಿಯಬೇಕಾದರೆ ಅವರ ಪರಿಸರದಲ್ಲಿ ಜೀವ ಪಡೆದಿರುವ ಕಲೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಮಾನವನ ಸಾಂಸ್ಕೃತಿಕ ಲೋಕದ ಪ್ರತಿ ಹಂತದಲ್ಲೂ ಕಲೆ ಪ್ರೇರಣೆಯ ವಸ್ತು ಆಗಿರುತ್ತದೆ. ಕಲಾವಿದನಿಗೆ ಪ್ರಕೃತಿಯು ಪ್ರೇರಣೆಯನ್ನು ನೀಡಬಲ್ಲದು, ಅಲ್ಲದೆ ಅದು ಒಂದೊಂದು ಸವಾಲನ್ನು ಎದುರಿಸುವ ಸಂದರ್ಭವನ್ನು ಸೃಷ್ಟಿಸುತ್ತದೆ.[೯] ಇಲ್ಲಿನ ಬಹುತೇಕ ಕೃತಿಗಳಲ್ಲಿ ಪ್ರಕೃತಿ ಪ್ರೇರಣೆ, ಸಾಮಾಜಿಕ ಪ್ರೇರಣೆ, ಧಾರ್ಮಿಕ ಪ್ರೇರಣೆ ಹೀಗೆ ಇನ್ನೂ ಮುಂತಾದ ನೆಲೆಗಳ ಪ್ರೇರಣೆಗಳು ಬಸವಣ್ಣನವರ ಚಿತ್ರಗಳನ್ನು ರಚಿಸಿದ ಕಲಾಕೃತಿಗಳ ಹಿಂದೆ ಇವೆ.

---

೦೮. ಎನ್. ಮರಿಶಾಮಾಚಾರ್ : ಕೆ. ಕೆ. ಹೆಬ್ಬಾರ್, ಪು-೧೮

೦೯. ಕೆ. ವಿ. ಸುಬ್ರಹ್ಮಣ್ಯಂ : ಕಲಾಸಂವೇದನೆಯ ಒಳ ನೋಟಗಳು, ಪು-೮೩

ಜಾಗತಿಕ ದೃಷ್ಟಿಯಿಂದ ದೃಶ್ಯಕಲೆಯ ಚರಿತ್ರೆಯನ್ನು ಸ್ಥೂಲವಾಗಿ ಪರಿಶೀಲಿಸಿದರೆ ದೃಶ್ಯಕಲಾವಿದರ ಕಲಾಕೃತಿಯ ರಚನೆಗೆ ಪ್ರೇರಣೆ ಒದಗಿಸಿದ್ದು ನಮ್ಮ ನಡುವಿನ ಪ್ರಕೃತಿ ಮತ್ತು ಆಧ್ಯಾತ್ಮಿಕ ಕಥಾನಕಗಳು. ಪ್ರಾಚೀನ ಮತ್ತು ಅರ್ವಾಚೀನ ಕಾಲದಿಂದಲೂ ಶಿಲ್ಪ ಮತ್ತು ಚಿತ್ರಕಲೆಗಳೆರಡೂ ಧರೆಯ ಮೇಲಿನ ಚರಿತ್ರೆಯನ್ನು ಕಟ್ಟಲು ಕಾರಣೀಭೂತವಾಗಿವೆ. ಇವೆರಡೂ ಕಲೆಗಳು ಮನುಷ್ಯ ಮತ್ತು ಪ್ರಕೃತಿಯ ನಡುವಣ ಸಂಬಂಧದಿಂದ ವ್ಯುತ್ಪತ್ತಿಯಾದ ಬೌದ್ಧಿಕ ಮತ್ತು ಭೌತಿಕ ಕ್ರಿಯೆಗಳು.

೧೯ನೇ ಶತಮಾನದ ಉತ್ತರಾರ್ಧದಿಂದಲೇ ಬಸವಣ್ಣನವರ ಕಾಯಕ, ದಾಸೋಹ, ವಚನ ಸಾಹಿತ್ಯ ಹೀಗೆ ಅನೇಕ ವಿಷಯಗಳ ಮೇಲೆ ಅನೇಕ ವಿದ್ವಜ್ಜನರು ಸಂಶೋಧನೆಯನ್ನು ನಡೆಸಿ ಬಹು ಸಂಖ್ಯೆಯಲ್ಲಿ ಗ್ರಂಥಗಳನ್ನು ಪ್ರಕಟಪಡಿಸಿದ್ದಾರೆ. ಎಸ್. ಆರ್. ಗುಂಜಾಳರು ೧೯೬೦ರಲ್ಲಿಯೇ ೪೧೫ ಗ್ರಂಥಗಳು ಪ್ರಕಟವಾಗಿದ್ದರ ಕುರಿತು ಒಂದು ಗ್ರಂಥದಲ್ಲಿ ವಿವರವಾಗಿ ದಾಖಲಿಸಿದ್ದನ್ನು ಸ್ಮರಿಸಬಹುದಾಗಿದೆ. ೧೯೬೦ರ ನಂತರ ಅದೆಷ್ಟು ವಚನ ಸಾಹಿತ್ಯಗಳು, ವಿಮರ್ಶಾತ್ಮಕ ಪ್ರಬಂಧಗಳು, ಸಂಶೋಧನ ಪ್ರಬಂಧಗಳು ಬಸವಣ್ಣನವರ ಕುರಿತು ಬಂದಿರುವುದನ್ನು ಇತ್ತೀಚಿನವರೆಗೂ ಯಾರೂ ದಾಖಲಿಸಿಲ್ಲ. ಹೀಗಾಗಿ ಬಸವಣ್ಣನವರನ್ನು ಕುರಿತು ಬಂದ ಸಾಹಿತ್ಯಪ್ರಕಾರ ಇದುವರೆಗೂ ದಾಖಲೆಯಾಗಿಯೇ ಉಳಿದಿದೆ ಎನ್ನುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಇಷ್ಟು ಜನ ಸಾಹಿತಿಗಳಿಗೆ, ಕಲಾವಿದರಿಗೆ ಬಸವಣ್ಣನವರಿಗೆ ಪ್ರೇರಣೆಯಾಗಿರುವುದಕ್ಕೆ ಇಲ್ಲೊಂದು ಸೂಕ್ತ ನಿದರ್ಶನವೊಂದನ್ನು ಗಮನಿಸೋಣ. ಖ್ಯಾತ ಹಿಂದುಸ್ಥಾನಿ ಸಂಗೀತಗಾರರಾಗಿದ್ದ ಪಂಡಿತ ಮಲ್ಲಿಕಾರ್ಜುನ ಮನ್ಸೂರ ಮತ್ತು ಪಂಡಿತ ಬಸವರಾಜ ರಾಜಗುರು ಅವರು ಬಸವಣ್ಣನವರ ವಚನಗಳಿಂದ ಪ್ರೇರಣೆಗೊಂಡು ಹಿಂದುಸ್ಥಾನಿ ರಾಗದಲ್ಲಿ ವಚನಗಳನ್ನು ಸಂಯೋಜಿಸಿದ್ದರು. ಇಂತಹ ವಚನಸಂಗೀತವನ್ನು ಯಾರ ಒತ್ತಡವಿಲ್ಲದೇ ಸ್ವಯಂ ಆಸಕ್ತಿಯಿಂದ ಹುಟ್ಟುಹಾಕಿದರಲ್ಲದೇ ವಚನ ಸಂಗೀತದ ಪರಂಪರೆಗೆ ನಾಂದಿ ಹಾಡಿದ ಮಹಾ ಸಂಗೀತಗಾರರು ಅವರು.

ಉದಾಹರಣೆಯಾಗಿ ಹಂಪಿಯ ವಿರೂಪಾಕ್ಷ ದೇಗುಲದ ಮೇಲ್ಛಾವಣಿಯಲ್ಲಿ ರಾಮಾಯಣದ ಮತ್ತು ಶಿವನಿಗೆ ಸಂಬಂಧಪಟ್ಟ ಸಾಂಪ್ರದಾಯಿಕ ಚಿತ್ರರಚನೆಗಳು ಇವೆ. ಹಾಗೆಯೆ ರೋಮ್ ನಗರದ ಅನೇಕ ಚರ್ಚುಗಳ ಭಿತ್ತಿಗಳಲ್ಲಿ ಬೈಬಲ್ ಕಥಾನಕವನ್ನು ದೃಶ್ಯರೂಪದಲ್ಲಿ ಕಾಣಬಹುದಾಗಿದೆ. ಇಂತಹ ರಚನೆಗಳಿಗೆ ಆಧ್ಯಾತ್ಮಿಕ ಪ್ರೇರಣೆ ಬಹು ಮುಖ್ಯವಾದುದು. ಅಂತಹ ಆಧ್ಯಾತ್ಮಿಕ ಪ್ರೇರಣೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಬಹುತೇಕ ಎಲ್ಲ ಚಿತ್ರಗಳಲ್ಲಿ ಕಾಣಬಹುದಾಗಿದ್ದು ಈ ಕೆಳಗಿನಂತೆ ವಿವರಿಸಲಾಗಿದೆ.

ಮೊದಲಿಗೆ ವೃಷಭೇಂದ್ರ ವಿಳಾಸ ಕೃತಿ, ಮೂಲತಃ ಯಕ್ಷಗಾನ ಪ್ರಸಂಗಗಳ ಆಧಾರಿತ ರಚನೆಯಾದರೂ, ಯಕ್ಷಗಾನದ ಸಾಹಿತ್ಯದೊಂದಿಗೆ ವಿಪುಲವಾದ ದೃಶ್ಯ ಸಂಯೋಜನೆಗಳಿರುವುದರಿಂದ ಈ ಗ್ರಂಥವನ್ನು ಮೊದಲು ನೋಡುವ, ನಂತರ ಓದುವ ಆಕರವೆಂದು ಪರಿಗಣಿಸಬಹುದಾಗಿದೆ. ಇಲ್ಲಿನ ಚಿತ್ರಗಳ ರಚನೆಯ ಹಿನ್ನೆಲೆಯಲ್ಲಿ ಬಸವಣ್ಣನವರ ಕಥಾಚರಿತ್ರೆಯನ್ನು ಚಿತ್ರಕಾರ ಸಮಗ್ರವಾಗಿ ಅಧ್ಯಯನಗೈದಾಗ,

ಕಥಾಮೃತದಲ್ಲಿ ಕಂಡುಬಂದ ಅನೇಕ ಸನ್ನಿವೇಶಗಳು ಚಿತ್ರಕಾರನಿಗೆ ಚಿತ್ರ ರಚಿಸಲು ಪ್ರೇರಣೆ ಒದಗಿಸಿವೆ. ಈ ಹಿನ್ನೆಲೆಯಲ್ಲಿ ಬಸವಣ್ಣನ ಬಾಲ್ಯದ ಘಟನೆಗಳಿಂದ ಹಿಡಿದು ಕಲ್ಯಾಣದವರೆಗೆ, ಹಾಗೆಯೇ ಕಲ್ಯಾಣದ ಅನುಭವ ಮಂಟಪ ಮತ್ತು ಬಿಜ್ಜಳನ ಆಸ್ಥಾನದ ಚಿತ್ರಣಗಳನ್ನು ಹಾಗೂ ಕೂಡಲಸಂಗಮನಲ್ಲಿ ಐಕ್ಯವಾಗುವವರೆಗಿನ ಚಿತ್ರಗಳನ್ನು ಸಾಂಪ್ರದಾಯಿಕ ನೆಲೆಯಲ್ಲಿ, ಪ್ರಬುದ್ಧವಾಗಿ ಕಲಾವಿದ ರಚಿಸಿದ್ದಾನೆ. ಕಲಾವಿದನಿಗೆ ಮೊದಲು ಯಾರ ಕುರಿತು ಚಿತ್ರ ರಚಿಸಬೇಕೆನ್ನುವ ತುಡಿತದ ಜೊತೆಗೆ ಅವರ ಬಗ್ಗೆ ಗೌರವ, ಆಸ್ಥೆಗಳು, ಜ್ಞಾನ ಇದ್ದರೆ ಮಾತ್ರ ವೃಷಭೇಂದ್ರ ವಿಳಾಸದಂತಹ ಪ್ರಬುದ್ಧ ಕೃತಿ ಹೊರಬರಲು ಸಾಧ್ಯವೆಂಬುದಕ್ಕೆ ಈ ಕೃತಿ ಒಂದು ಉದಾಹರಣೆ.

ಮೈಸೂರಿನ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಸಂಗ್ರಹಿಸಲ್ಪಟ್ಟಿರುವ ಮೈಸೂರುಶೈಲಿ ಸಾಂಪ್ರದಾಯಿಕ ಚಿತ್ರವೊಂದಿದ್ದು, ಅದರಲ್ಲಿ ಅನುಭವ ಮಂಟಪದ ಪ್ರೇರಣೆಯಿಂದ ಹಾಗೂ ಮೈಸೂರಿನ ಆಳರಸರ ಕುಟುಂಬದ ಪ್ರೇರಣೆಯಿಂದ ಆಕೃತಿಗಳು ರಚನೆಯಾಗಿವೆ. ಅಂದರೆ ಬಸವಣ್ಣನವರಿಗೆ ಮೈಸೂರಿನ ಆಳರಸರು ಸಹ ವಿಧೇಯರಾಗಿದ್ದರು ಎಂಬ ಸಂದೇಶವನ್ನು ಕಲಾವಿದ ಇಲ್ಲಿ ದೃಶ್ಯಾತ್ಮಕವಾಗಿ ನೀಡಿದ್ದಾನೆ.

ಕರ್ನಾಟಕ ವಿಶ್ವವಿದ್ಯಾಲಯದ ಬಸವ ಪೀಠದಲ್ಲಿ ಇದೇ ಮೈಸೂರು ಶೈಲಿಯ ಕಲಾಕೃತಿಯೊಂದಿದ್ದು, ಮೈಸೂರಿನ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಸಂಗ್ರಹಸಲ್ಪಟ್ಟಿರುವ ಮೈಸೂರು ಶೈಲಿ ಸಾಂಪ್ರದಾಯಿಕ ಚಿತ್ರವನ್ನೇ ಹೋಲುತ್ತಿದೆ. ಇಲ್ಲಿಯೂ ಸಹ ಅನುಭವ ಮಂಟಪದ ಪ್ರೇರಣೆಯಿಂದ ಅನುಭವ ಮಂಟಪದ ಸನ್ನಿವೇಶವನ್ನೇ ನಾಲ್ಕು ಪಟ್ಟಿಕೆಗಳಲ್ಲಿ ಚಿತ್ರಿಸಲಾಗಿದೆ. ಬಸವ ಪರಿವಾರ ಮತ್ತು ಬಸವಾದಿ ಪ್ರಮಥರ ಪ್ರೇರಣೆಯಿಂದ ಇಲ್ಲಿನ ಆಕೃತಿಗಳಲ್ಲಿ ೧೨ನೇ ಶತಮಾನದಲ್ಲಿನ ಬಸವಾದಿ ಶರಣರನ್ನು ಸಾಂಪ್ರದಾಯಿಕ ಶೈಲಿಯಲ್ಲಿ ಚಿತ್ರಿಸಲಾಗಿದೆ.

ಮೈಸೂರಿನ ಕಲಾವಿದರಾದ ಎಂ. ವೀರಪ್ಪ ಅವರು ಬಸವಣ್ಣನವರ ಪ್ರೇರಣೆಯಿಂದ ಅನೇಕ ಕಲಾಕೃತಿಗಳನ್ನು ರಚಿಸಿದ್ದು, ಅವರದೇ ಆದ ಆರ್ಟ್ ಗ್ಯಾಲರಿಯೊಂದರಲ್ಲಿ ಎಲ್ಲ ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ. ಅವರ ಕಲಾಕೃತಿಗಳು ಬಸವಣ್ಣನವರ ಒಟ್ಟು ಬದುಕನ್ನು ನಿರೂಪಣಾತ್ಮಕವಾಗಿ ತೆರೆದಿಡುತ್ತವೆ.

ಹಳೆ ತಲೆಮಾರಿನ ಕಲಾವಿದರಾದ ವಿ.ಟಿ.ಕಾಳೆ ಅವರು ಬಸವಣ್ಣನವರ ಭಾವಚಿತ್ರ-ಪೂರ್ಣಭಾವಚಿತ್ರಗಳನ್ನು ನೈಜಶೈಲಿಯ ನೆಲೆಯಲ್ಲಿ ಭಾವಪೂರ್ಣವಾಗಿ ರಚಿಸಿರುವುದರ ಹಿನ್ನೆಲೆಯಲ್ಲಿ ಬಸವಣ್ಣನವರ ಆಧ್ಯಾತ್ಮಿಕ ಪ್ರೇರಣೆಯನ್ನು ಕಾಣಬಹುದಾಗಿದೆ. ಇನ್ನು ಕಲಾವಿದರಾದ ಗಂಗಾಧರ, ಎಂ. ವೀರಪ್ಪ, ಬಸವರಾಜ ಮುಗಳಿ, ಜಿ.ಆರ್. ನಾಯಕ್ ಇವರ ಚಿತ್ರಗಳೂ ಸಹ ಬಸವಣ್ಣನವರ ಬದುಕಿನ ಘಟನೆಗಳ ವಿವಿಧ ಹಂತಗಳನ್ನು ಅನನ್ಯವಾಗಿ ಚಿತ್ರಿಸಿರುವ ಹಿನ್ನೆಲೆಯಲ್ಲಿ ಬಸವಣ್ಣನವರ ಕ್ರಾಂತಿಕಾರಕ, ಆಧ್ಯಾತ್ಮಿಕ ಪ್ರೇರಣೆಯನ್ನು ಸ್ಪಷ್ಟವಾಗಿ ಅವರು ರಚಿಸಿದ ಕಲಾಕೃತಿಗಳಲ್ಲಿ ಗುರುತಿಸಬಹುದಾಗಿದೆ. ವಿಶೇಷವಾಗಿ ಬಸವನ ಜನ್ಮದ ಘಟನೆಗಳು, ಕೂಡಲಸಂಗಮದಲ್ಲಿ ಗುರುಗಳ ಉಪಸ್ಥಿತಿಯಲ್ಲಿ ಅಧ್ಯಯನದ ಸಂದರ್ಭ, ಕಲ್ಯಾಣದ ಬಿಜ್ಜಳನ ಆಸ್ಥಾನದ ದೃಶ್ಯಗಳು, ಅನುಭವ ಮಂಟಪದ ಸನ್ನಿವೇಶಗಳಲ್ಲಿ ಬಸವಣ್ಣನವರ

ಪ್ರೇರಣೆ ಕಾಣಬಹುದಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ನೈಜ ಶೈಲಿಯ ಕಲಾಕೃತಿಗಳೊಂದಿಗೆ ಆಧುನಿಕ ಶೈಲಿಯಲ್ಲಿ ಹಲವು ಕಲಾವಿದರು ಕಲಾಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಬಸವಣ್ಣನವರ ಬಾಲ್ಯ, ಕಲ್ಯಾಣದ ಜೀವನ, ಅನುಭವ ಮಂಟಪ ಹಾಗೂ ಮುಖ್ಯವಾಗಿ ವಚನಗಳಿಂದ ಪ್ರೇರಣೆಗೊಂಡು ವರ್ಣಚಿತ್ರಗಳನ್ನು ರಚಿಸಿದವರಲ್ಲಿ ಡಿ.ಎ.ಉಪಾಧ್ಯ, ಕಿಶೋರಕುಮಾರ ಕುಮಾರ ಹಿರೇಮಠ, ವಿ.ಜಿ.ಅಂದಾನಿ, ಗಿರಿಧರಗೌಡ ಗುಟೂರ, ಕೆ. ಗಂಗಾಧರ, ರವಿ ಇನ್ನೂ ಮುಂತಾದವರು. ಅಧ್ಯಯನದಲ್ಲಿ ಬಳಸಿಕೊಂಡ ಕಲಾಕೃತಿಗಳಲ್ಲಿ ವಚನಗಳ, ಬಸವಣ್ಣನವರ ಜೀವನ ಚರಿತ್ರೆಗಳಲ್ಲಿ ಕಂಡುಬರುವ ಪ್ರಾಕೃತಿಕ ವರ್ಣನೆ ಇಲ್ಲಿ ಪ್ರೇರಣೆಯ ರೂಪದಲ್ಲಿ ಪುನರುತ್ಪತ್ತಿಯಾಗಿದೆ.

ಬಸವಣ್ಣನವರ ಕಲಾಕೃತಿಗಳ ರಚನಾ ತಂತ್ರ

ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಂಡ ಕಲಾಕೃತಿಗಳ ರಚನಾ ತಂತ್ರಗಾರಿಕೆಯಲ್ಲಿ ಹೆಚ್ಚಿನ ವಿಶೇಷತೆಗಳು ಕಂಡುಬರುವುದಿಲ್ಲ. ಆದರೂ ಇಲ್ಲಿನ ಕಲಾಕೃತಿಗಳಲ್ಲಿ ಎಂದಿನ ಸಾಂಪ್ರದಾಯಿಕ ರಚನಾ ತಂತ್ರಗಳೇ ಪ್ರಾಬಲ್ಯವನ್ನು ಮೆರೆದಿವೆ. ಪ್ರಾಚೀನ ಕೃತಿ ನಂಜುಂಡ ಭಾಗವತ ವಿರಚಿತ **ವೃಷಭೇಂದ್ರ ವಿಳಾಸ** ಯಕ್ಷಗಾನ ಮಹಾನಾಟಕ ಬಸವಣ್ಣನವರ ಸಮಗ್ರ ಜೀವನ ಚರಿತ್ರೆಯನ್ನು ದೃಶ್ಯರೂಪಕದಲ್ಲಿ ಸೆರೆಹಿಡಿದಿಟ್ಟಿದ್ದು ಈ ಕೃತಿಯ ಚಿತ್ರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಮೈಸೂರು ಭಾಗದ ಕಲಾವಿದ ಅಂದಿನ ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿ ಈ ಕೃತಿಯಲ್ಲಿನ ಚಿತ್ರಗಳನ್ನು ಪಾರದರ್ಶಕ ತಂತ್ರದಿಂದ ರಚಿಸಿರುತ್ತಾನೆ. ಪ್ರಾಕೃತಿಕ ವರ್ಣಗಳಿಂದ ರಚಿಸಲ್ಪಟ್ಟ ಈ ಕಲಾಕೃತಿ ಇಂದಿನ ಜಲವರ್ಣದ ತಂತ್ರಗಾರಿಕೆಯನ್ನೇ ಹೋಲುತ್ತದೆ. ಅತ್ಯಂತ ಪ್ರಬುದ್ಧವಾದ ಪಾರದರ್ಶಕ ರಚನಾತಂತ್ರವನ್ನು ದುಡಿಸಿಕೊಂಡ ಇಲ್ಲಿನ ಆಕೃತಿ, ವಿನ್ಯಾಸಗಳಿಗೆ ದಟ್ಟವರ್ಣದಿಂದ ಬಾಹ್ಯರೇಖೆಯನ್ನು ಎಳೆದು ಆಕೃತಿಗಳನ್ನು ಸ್ಪಷ್ಟಗೊಳಿಸುವ ಇರಾದೆ ಕಲಾವಿದನಿಗೆ ಇರುವುದು ಸ್ಪಷ್ಟವಾಗುತ್ತದೆ.

ಮೈಸೂರಿನ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಸಂಗ್ರಹಿಸಲ್ಪಟ್ಟಿರುವ ಕೃತಿಗಳಲ್ಲಿ ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರವೊಂದಿದ್ದು ಅದರಲ್ಲಿ ಅನುಭವ ಮಂಟಪದ ಹಾಗೂ ಮೈಸೂರಿನ ಆಳರಸರ ಆಕೃತಿಗಳು ರಚನೆಯಾಗಿವೆ. ನಾಲ್ಕುಪಟ್ಟಿಕೆಗಳಲ್ಲಿ ಮೇಲ್ಭಾಗದ ಮೊದಲನೆಯ ಪಟ್ಟಿಕೆಯಲ್ಲಿ ಅನುಭವಮಂಟಪದಲ್ಲಿ ಅಲ್ಲಮಪ್ರಭುಗಳನ್ನು ಚಿತ್ರಿಸಿದ್ದಾರೆ. (ಹೆಚ್ಚಿನ ವಿವರಕ್ಕೆ ಅಧ್ಯಾಯ ೨ನ್ನು ನೋಡುವುದು) ಕೆಳಗಿನ ಮೂರು ಪಟ್ಟಿಕೆಗಳಲ್ಲಿ ಬಸವಾದಿ ಪ್ರಮಥರನ್ನು ಹಾಗೂ ಮೈಸೂರು ಆಳರಸರನ್ನು ಮೈಸೂರು ಶೈಲಿಯಲ್ಲಿ ಚಿತ್ರಿಸಲಾಗಿದೆ. ವೃಷಭೇಂದ್ರ ವಿಳಾಸದಲ್ಲಿ ಹೆಚ್ಚು ಪ್ರಮಾಣದಲ್ಲಿ ಪಾರದರ್ಶಕ ತಂತ್ರವನ್ನು ದುಡುಸಿಕೊಂಡಿದ್ದರೆ, ಇಲ್ಲಿ ಅಪಾರದರ್ಶಕ ತಂತ್ರವನ್ನು ದುಡಿಸಿಕೊಂಡಿದ್ದಾರೆ. ಇಲ್ಲಿನ ಆಕೃತಿ, ವಿನ್ಯಾಸಗಳಿಗೆ ದಟ್ಟವರ್ಣದಿಂದ ಬಾಹ್ಯರೇಖೆಯನ್ನು ಎಳೆದು ಆಕೃತಿಗಳನ್ನು ಸ್ಪಷ್ಟಗೊಳಿಸಲಾಗಿದೆ. ಇದೇ ಬಗೆಯ ಇನ್ನೊಂದು ಚಿತ್ರ ಕರ್ನಾಟಕ ವಿಶ್ವವಿದ್ಯಾಲಯದ ಬಸವ ಪೀಠದಲ್ಲಿ ಸಂಗ್ರಹಿಸಲ್ಪಟ್ಟಿದ್ದು, ಅದೂ ಸಹ ಹಿಂದಿನ ಚಿತ್ರದ ರಚನಾತಂತ್ರವನ್ನೇ ಹೋಲುತ್ತದೆ.

ಬಸವಣ್ಣನವರ ಕುರಿತು ಅನೇಕ ಕಲಾವಿದರು ಆಧುನಿಕ ನೆಲೆಯಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಉಪಾಧ್ಯರವರು ಕಲಾಕೃತಿಗಳಲ್ಲಿ ಆಧುನಿಕ ಬಗೆಯ ಆಕೃತಿಗಳಲ್ಲಿ ವರ್ಣಗಾರಿಕೆಯನ್ನು ಮೈವಳಿಕೆಯ ರೂಪದಲ್ಲಿ ದುಡಿಸಿಕೊಂಡಿದ್ದಾರೆ. ಕಿಶೋರಕುಮಾರ ಹಿರೇಮಠ ಅವರು, ಅಕ್ರಿಲಿಕ್ ಮಾಧ್ಯಮದಲ್ಲಿ ಅಪಾರದರ್ಶಕ ತಂತ್ರವನ್ನು ಬಳಸಿಕೊಂಡು ಹಿನ್ನೆಲೆಯನ್ನು ಮೇಲ್ಪದರ ಲೇಪನದ ಮೂಲಕ ವಿಶಿಷ್ಟವಾದ ಮೈವಳಿಕೆಯನ್ನು ಸೃಷ್ಟಿಸಿದ್ದಾರೆ.

ಕೆ. ಗಂಗಾಧರ ಅವರು ತೈಲವರ್ಣದಲ್ಲಿ ಕಲಾಕೃತಿಗಳನ್ನು ರಚಿಸಿದ್ದು, ತೈಲವರ್ಣ ಮಾಧ್ಯಮವನ್ನು ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಬಸವರಾಜ ಮುಗಳಿಯವರು ಅತ್ಯಂತ ಮೃದುವಾದ ವರ್ಣಮೇಳವನ್ನು ಎನಾಮೆಲ್ ಮಾಧ್ಯಮದಲ್ಲಿ ಆಶ್ಚರ್ಯಕರ ರೀತಿಯಲ್ಲಿ ದುಡಿಸಿಕೊಂಡಿದ್ದಾರೆ. ಆಕೃತಿಗಳಲ್ಲಿ ಮೃದುವಂತಿಕೆ ಬಂದಿರುವುದಕ್ಕೆ ಅವರ ವರ್ಣತಂತ್ರವೇ ಮುಖ್ಯ ಕಾರಣವಾಗುತ್ತದೆ.

ಮೈಸೂರಿನ ಕಲಾವಿದರಾದ ಎಂ. ವೀರಪ್ಪ ಅವರು ಬಸವಣ್ಣನವರ ಕುರಿತು ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಜಲವರ್ಣ ಮತ್ತು ಪೋಸ್ಟರ್ ವರ್ಣಗಳಲ್ಲಿ ಅವರ ಕಲಾಕೃತಿಗಳು ಬಸವಣ್ಣನವರ ಒಟ್ಟು ಬದುಕನ್ನು ನಿರೂಪಣಾತ್ಮಕವಾಗಿ ತೆರೆದಿಡುತ್ತವೆ.

ಕಲಾವಿದರಾದ ವಿ.ಟಿ.ಕಾಳೆ ಅವರು ತೈಲವರ್ಣದಲ್ಲಿ ಪೂರ್ಣಭಾವಚಿತ್ರಗಳನ್ನು ರಚಿಸಿದ್ದಾರೆ. ಒಂದು ಬಗೆಯಲ್ಲಿ ಪಾಶ್ಚಾತ್ಯವೆನ್ನಬಹುದಾದ ವರ್ಣಸಂಯೋಜನೆಯನ್ನು ಹೊಂದಿರುವ ಅವರ ಕಲಾಕೃತಿಗಳು ಸಾಮಾನ್ಯರಿಗೂ ಆಪ್ಯಾಯಮಾನವೆನಿಸುತ್ತವೆ. ತಾಂತ್ರಿಕವಾಗಿ ತೈಲವರ್ಣವನ್ನು ಹೇಗೆ ಭಾವಚಿತ್ರಗಳಲ್ಲಿ ದುಡಿಸಿಕೊಳ್ಳಬೇಕೆಂಬುದಕ್ಕೆ ಅವರ ಕಲಾಕೃತಿಗಳು ಉತ್ತಮ ಮಾದರಿಗಳಾಗುತ್ತವೆ. ಭಾವಚಿತ್ರಗಳಲ್ಲಿ ಬಹುಬಗೆಯಲ್ಲಿ ಜನಪ್ರಿಯವೆನ್ನಬಹುದಾದ ವಾಣಿಜ್ಯಾತ್ಮಕ ರಚನಾ ತಂತ್ರವನ್ನೇ ಅಳವಡಿಸಿಕೊಳ್ಳಲಾಗಿದ್ದು, ವಿಸ್ತೃತವಾಗಿ ಹೇಳುವುದಾದರೆ ಫೋಟೋಫಿನಿಶಿಂಗ್ ತಂತ್ರವನ್ನೇ ಇಲ್ಲಿನ ಚಿತ್ರಗಳಲ್ಲಿ ದುಡಿಸಿಕೊಳ್ಳಲಾಗಿದೆ. ಇಂತಹ ಭಾವಚಿತ್ರಗಳನ್ನು ಸಾಮಾನ್ಯರು ಅಪೇಕ್ಷಿಸುವುದರಿಂದ ಭಾವಚಿತ್ರಗಳಲ್ಲಿ ಅಕಾಡೆಮಿಕ್ ಶೈಲಿಯ ಸುಳುಹು ಕೂಡ ಗೋಚರವಾಗುವುದಿಲ್ಲ. ಈ ಬಗೆಯ ರಚನಾತಂತ್ರ ಬಸವಣ್ಣನವರಂತಹ ಚಿತ್ರಗಳಲ್ಲಿ ಅಪೇಕ್ಷಣೀಯವೂ ಅಲ್ಲ.

ಬಸವಣ್ಣನವರ ಕಲಾಕೃತಿಗಳ 'ಶೈಲಿ'

ಯಾವುದೇ ಪ್ರಕಾರವಾಗಲಿ, ಅದಕ್ಕೊಂದು 'ಶೈಲಿ' ಎಂಬುದು ಇರುತ್ತದೆ. ಸಾಹಿತ್ಯದಲ್ಲಿ, ಸಂಗೀತದಲ್ಲಿ, ನಾಟಕದಲ್ಲಿ, ನೃತ್ಯದಲ್ಲಿ ಹಾಗೂ ಮುಖ್ಯವಾಗಿ ದೃಶ್ಯಕಲೆಗಳಲ್ಲಿ ಶೈಲಿಯ ಸ್ಥಾನ ಪ್ರಧಾನವಾದುದು. ವಿಶೇಷವಾಗಿ ದೃಶ್ಯಕಲೆಗಳನ್ನೇ ಗಮನಿಸುವುದಾದರೆ ಅವುಗಳಲ್ಲಿ ಅನೇಕ ಶೈಲಿಗಳುಂಟು. ಪ್ರಚಲಿತದಲ್ಲಿರುವ ಶೈಲಿಗಳನ್ನು ಸಾಂಪ್ರದಾಯಿಕ ಶೈಲಿ, ನೈಜ ಶೈಲಿ, ಆಧುನಿಕ ಶೈಲಿ ಎಂದು ಮುಖ್ಯವಾಗಿ ವಿಂಗಡಿಸಿಕೊಳ್ಳಲಾಗಿದೆ. ಈ ಮೂರು ಶೈಲಿಗಳಲ್ಲಿ ಯಾವುದಾದರೊಂದು ಶೈಲಿಯಲ್ಲಿಯೇ ಕಲಾವಿದ ಕಲಾಕೃತಿಗಳನ್ನು ಸೃಷ್ಟಿಸುತ್ತಾನೆ.

ಸಾಂಪ್ರದಾಯಿಕ, ನೈಜ ಹಾಗೂ ಆಧುನಿಕ ಶೈಲಿಗಳಲ್ಲಿ ಬಸವಣ್ಣನವರು ಮತ್ತು ವಚನಗಳ ಕುರಿತು ರಚನೆಯಾದ ಕಲಾಕೃತಿಗಳೇ ಈ ಮಹಾಪ್ರಬಂಧದದ ಜೀವನಾಡಿಯಾಗಿವೆ. ಬಸವಣ್ಣನವರು ೧೨ನೆಯ ಶತಮಾನದಲ್ಲಿದ್ದವರು. ಅವರನ್ನು ಕಂಡವರಾರು? ಆದರೂ ಕಲಾವಿದರ ಕಲ್ಪನಾ ಮೂಸೆಯಲ್ಲಿ ಅನೇಕ ಕಲಾಕೃತಿಗಳು ಸೃಷ್ಟಿಯಾಗಿವೆ. ಹೀಗೆ ಸೃಷ್ಟಿಗೊಂಡ ಕಲಾಕೃತಿಗಳ ಶೈಲಿಗಳನ್ನು ಇಲ್ಲಿ ಗುರುತಿಸಲಾಗಿದೆ.

ಸಾಂಪ್ರದಾಯಿಕ ಶೈಲಿಯ ಚಿತ್ರಗಳು

ಗ್ರಂಥಸ್ಥಮೂಲವನ್ನು ಅವಲಂಬಿಸದೇ ತಲೆಮಾರಿನಿಂದ ತಲೆಮಾರಿಗೆ ಕರ್ಣಾಕರ್ಣಿಯಾಗಿ ಭಾಷೆ, ಸಂಗೀತ, ಸಾಹಿತ್ಯ ಮೊದಲಾದ ಎಲ್ಲ ಬಗೆಯ ಜ್ಞಾನವನ್ನೂ ಕಾಪಾಡಿಕೊಂಡು ಬರುವ ಕ್ರಮ. ತಾಯಿಯಿಂದ ಮಗಳಿಗೆ, ತಂದೆಯಿಂದ ಮಗನಿಗೆ, ಗುರುವಿನಿಂದ ಶಿಷ್ಯನಿಗೆ, ಹಿರಿಯ ತಲೆಮಾರಿನಿಂದ ಕಿರಿಯ ತಲೆಮಾರಿಗೆ ಈ ಸಂಪ್ರದಾಯದ ಮೂಲಕ ಪರಂಪರಾನುಗತ ಜ್ಞಾನವನ್ನು ಅರ್ಪಿಸುವ ಬಗೆ ಮಾನವಕುಲಕ್ಕೆ ಸಹಜವಾಗಿ ಬಂದ ಒಂದು ವರವಾಗಿದೆ. ಪ್ರಾಣಿಕುಲಕ್ಕೂ ಮಾನವಕುಲಕ್ಕೂ ಇರುವ ಮೂಲಭೂತ ಅಂತರವನ್ನು ಇದು ಶ್ರುತಪಡಿಸುತ್ತದೆ. ಓದು, ಬರಹ ಬೆಳೆದಂತೆಲ್ಲ ಸಂಪ್ರದಾಯದೊಂದಿಗೆ ಗ್ರಂಥಸ್ಥ ಸಂಪ್ರದಾಯವೂ ಬೆಳೆದು ಬಂದಿತೆಂದು ತೋರುತ್ತದೆ.[೧೦] ಈ ಹಿನ್ನೆಲೆಯಲ್ಲಿ ಪ್ರಾಚೀನ ಕಾಲದಿಂದಲೂ ಶಿಲ್ಪ–ಚಿತ್ರಾದಿಗಳು ತಲೆಮಾರಿನಿಂದ ತಲೆಮಾರಿಗೆ ಸಾಂಪ್ರದಾಯಿಕವಾಗಿ ಬೆಳೆದು ಬಂದಿದ್ದರೂ, ನಂತರದ ಕಾಲಘಟ್ಟಗಳಲ್ಲಿ ಗ್ರಂಥಸ್ಥ ರೂಪದಲ್ಲಿಯೂ ಸಂಪ್ರದಾಯಗಳು ಬೆಳೆದು ಬಂದಿರುವುದಕ್ಕೆ ಸೂಕ್ತ ಉದಾಹರಣೆಯೆಂದರೆ **'ವಿಷ್ಣುಧರ್ಮೋತ್ತರ ಪುರಾಣ'**ದಂತಹ ಚಿತ್ರ–ಶಿಲ್ಪಕಲೆಯ ಕುರಿತಾದ ಪ್ರಾಚೀನ ಗ್ರಂಥಗಳು, ಸಾಂಪ್ರದಾಯಿಕ ಶಿಲ್ಪ ರಚನೆಗೆ ಗ್ರಂಥಸ್ಥ ನಿದರ್ಶನಗಳಾಗಿವೆ. ಬಸವಣ್ಣನವರ ಕುರಿತು ಕೆಲವು ಸಾಂಪ್ರದಾಯಿಕ ಶೈಲಿಯ ಚಿತ್ರಗಳು ಲಭ್ಯವಾಗಿದ್ದು ಅವುಗಳನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

ಪ್ರಾಚೀನ ಕೃತಿ ನಂಜುಂಡ ಭಾಗವತ ವಿರಚಿತ **ವೃಷಭೇಂದ್ರ ವಿಳಾಸ** ಯಕ್ಷಗಾನ ಮಹಾನಾಟಕ ಬಸವಣ್ಣನವರ ಸಮಗ್ರ ಜೀವನ ಚರಿತ್ರೆಯನ್ನು ದೃಶ್ಯರೂಪದಲ್ಲಿ ಸೆರೆಹಿಡಿದಿಟ್ಟಿದ್ದು ಈ ಕೃತಿಯ ಚಿತ್ರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಮೈಸೂರು ಭಾಗದ ಕಲಾವಿದ ಅಂದಿನ ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿ ರಚಿಸಿದ್ದಾನೆ. ಆಕೃತಿಗಳಿಗೆ, ವಾಸ್ತುವಿನ ವಿನ್ಯಾಸಗಳಿಗೆ ದಟ್ಟವರ್ಣದಿಂದ ಬಾಹ್ಯ ರೇಖೆಯನ್ನು ಬಳಸಿಕೊಂಡು ರೇಖಾವಿಲಾಸವನ್ನೇ ಸೃಷ್ಟಿಸಿದ್ದಾನೆ. ಯಕ್ಷಗಾನದ ಪಠ್ಯಕ್ಕೆ ಪೂರಕವಾಗುವಂತೆ ಸಾಂಪ್ರದಾಯಿಕ ಶೈಲಿಯಲ್ಲಿ ಚಿತ್ರಗಳನ್ನು ಚಿತ್ರಿಸಲಾಗಿದೆ. ಈ ಹಿಂದೆ ಹೇಳಿದಂತೆ ವೃಷಭೇಂದ್ರ ವಿಳಾಸವು ಮೊದಲು ಚಿತ್ರವನ್ನು ನೋಡುವ, ನಂತರ ಪಠ್ಯವನ್ನು ಓದುವ ಕ್ರಮದಲ್ಲಿ ಸಿದ್ಧಗೊಂಡಿದೆ.

ಸಾಂಪ್ರದಾಯಿಕ ಶೈಲಿಯಲ್ಲಿ ವ್ಯಕ್ತಿಗಳನ್ನು ಅಥವಾ ಸನ್ನಿವೇಶವನ್ನು ಪ್ರತ್ಯೇಕವಾದ ಸ್ಥಳಾವಕಾಶದಲ್ಲಿ ಚಿತ್ರಿಸುವ ಸಂಪ್ರದಾಯವಿರುತ್ತದೆ. ಅದೇ ಸಂಪ್ರದಾಯದನ್ವಯ ಈ ಚಿತ್ರದಲ್ಲಿಯೂ ಸಹ ಅಗಲವಾದ ಪಟ್ಟಿಕೆಗಳಲ್ಲಿ ಅನುಭವಮಂಟಪ, ಹಾಗೂ ಬಸವಾದಿ ಪ್ರಮಥರನ್ನು, ಬಸವ ಭಕ್ತರನ್ನು ಪ್ರತ್ಯೇಕವಾಗಿ

---

೧೦. ವಿಕಿಸೋರ್ಸ್ : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಚಿತ್ರಿಸಿದ್ದಾರೆ. ಇದೇ ಬಗೆಯ ರಚನಾ ಶೈಲಿಯನ್ನು ಹೊಂದಿರುವ ಮೈಸೂರಿನ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಮೈಸೂರು ಶೈಲಿ ಸಾಂಪ್ರದಾಯಿಕ ಚಿತ್ರವೊಂದಿದ್ದು ಅದರಲ್ಲಿ ಅನುಭವ ಮಂಟಪದ ಹಾಗೂ ಮೈಸೂರಿನ ಆಳರಸರ ಆಕೃತಿಗಳು ರಚನೆಯಾಗಿವೆ. ನಾಲ್ಕುಪಟ್ಟಿಕೆಗಳಲ್ಲಿ ಮೇಲ್ಭಾಗದ ಮೊದಲನೆಯ ಪಟ್ಟಿಕೆಯಲ್ಲಿ ಅನುಭವಮಂಟಪದಲ್ಲಿ ಅಲ್ಲಮಪ್ರಭುಗಳನ್ನು ಚಿತ್ರಿಸಿದ್ದಾರೆ. (ಹೆಚ್ಚಿನ ವಿವರಕ್ಕೆ ಅಧ್ಯಾಯ ೨ನ್ನು ನೋಡುವುದು) ಕೆಳಗಿನ ಮೂರು ಪಟ್ಟಿಕೆಗಳಲ್ಲಿ ಬಸವಾದಿ ಪ್ರಮಥರನ್ನು ಹಾಗೂ ಮೈಸೂರು ಆಳರಸರನ್ನು ಮೈಸೂರು ಶೈಲಿಯಲ್ಲಿ ಚಿತ್ರಿಸಲಾಗಿದೆ. ಇದೇ ಬಗೆಯ ಶೈಲಿಯಲ್ಲಿ ರಚಿಸಿದ ಇನ್ನೊಂದು ಚಿತ್ರ ಕರ್ನಾಟಕ ವಿಶ್ವವಿದ್ಯಾಲಯದ ಬಸವ ಪೀಠದಲ್ಲಿ ಸಂಗ್ರಹಿಸಲ್ಪಟ್ಟಿದ್ದು, ಅದೂ ಸಹ ಹಿಂದಿನ ಚಿತ್ರದ ರಚನಾಶೈಲಿಯನ್ನೇ ಹೋಲುತ್ತದೆ. ಇನ್ನೊಂದು ಚಿತ್ರ ಬಸವಣ್ಣನವರ ವಚನಗಳ ಆಧಾರದ ಮೇಲೆ ರಚಿಸಲಾದ "ಕಲ್ಲನಾಗರ ಕಂಡರೆ ಹಾಲೆರೆಯೆಂಬರು" ಶೀರ್ಷಿಕೆಯ ಚಿತ್ರವೂ ಸಹ ಸಾಂಪ್ರದಾಯಿಕ ಶೈಲಿಯಲ್ಲಿ ರಚನೆಯಾಗಿದೆ. ಮುನ್ನೆಲೆಯಲ್ಲಿ ಬಸವಣ್ಣನವರನ್ನು ಪ್ರಧಾನವಾಗಿ ಅಲಂಕಾರಿಕ ಶೈಲಿಯಲ್ಲಿ ಚಿತ್ರಿಸಿದರೆ, ಹಿನ್ನೆಲೆಯಲ್ಲಿ ಭಿಕ್ಷುಕನಿಗೆ ಭಿಕ್ಷೆಯನ್ನು ನೀಡಲು ನಿರಾಕರಿಸುವ ಸ್ತ್ರೀಯೊಬ್ಬಳ ಆಕೃತಿಯನ್ನು ಸಹ ಅಲಂಕಾರಿಕ ಶೈಲಿಯಲ್ಲಿ ಚಿತ್ರಿಸಲಾಗಿದೆ.

ನೈಜ ಶೈಲಿಯ ಚಿತ್ರಗಳು

ರಿಯಲಿಸ್ಟಿಕ್ ಪದಕ್ಕೆ ಕನ್ನಡದಲ್ಲಿ 'ನೈಜ' ಎಂಬುದು ಅರ್ಥವಾಗಿದೆ. ನೈಜ ಶೈಲಿಯ ಚಿತ್ರಗಳಿಗೆ ಹಿಂದಿನಿಂದ ಹಿಡಿದು ಇಂದಿನವರೆಗೂ ಸ್ಥಾನಮಾನಗಳು, ಗೌರವಗಳು ಹಾಗೆಯೇ ಇವೆ. ಬಹುತೇಕವಾಗಿ ಈಗಲೂ ಕಥೆ, ಕಾದಂಬರಿಗಳಿಗೆ ನಿರೂಪಣ ಚಿತ್ರಗಳನ್ನು ನೈಜಶೈಲಿಯಲ್ಲಿಯೇ ಚಿತ್ರಿಸುತ್ತಾರೆ. ಹಾಗೆಯೇ ಬಸವಾದಿ ಪ್ರಮಥರಂತಹ ವ್ಯಕ್ತಿಗಳ ಕುರಿತು ಚಿತ್ರಪಠ್ಯವನ್ನು ರಚಿಸುವಾಗ ನೈಜಶೈಲಿಗೆ ಪ್ರಾಶಸ್ತ್ಯ ನೀಡುತ್ತಾರೆ. ಅಂತೆಯೇ ಇಲ್ಲಿಯೂ ಸಹ ಬಸವಣ್ಣನವರು ಹಾಗೂ ಅವರ ಸಮಕಾಲೀನ ಸಂತ ಶರಣರನ್ನೂ ಸಹ ನೈಜ ಶೈಲಿಯಲ್ಲಿ ಚಿತ್ರಿಸಿದ್ದು ಆ ಕಲಾಕೃತಿಗಳನ್ನು ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಬಸವರಾಜ ಮುಗಳಿ, ಎಂ. ವೀರಪ್ಪ, ಕೆ. ಗಂಗಾಧರ, ಕೆ.ಎಸ್. ರಾಮಚಂದ್ರ, ಎಂ.ಸಿ. ಚೆಟ್ಟಿ ಇವರ ಕಲಾಕೃತಿಗಳು ನೈಜ ಶೈಲಿಯಲ್ಲಿಯೇ ರಚನೆಯಾಗಿವೆ. ಬಸವರಾಜ ಇವರು ಎಂದಿನಂತೆ ತಮ್ಮ ಮೆಚ್ಚಿನ ಎನಾಮೆಲ್ ಮಾಧ್ಯಮದಲ್ಲಿಯೇ ನೈಜ ಶೈಲಿಯ ಕಲಾಕೃತಿಗಳನ್ನು ಅನನ್ಯವಾಗಿ ಚಿತ್ರಿಸಿದ್ದಾರೆ. ಎಂ.ಸಿ.ಚೆಟ್ಟಿ ಅವರು ನೈಜಶೈಲಿಯ ಕಲಾಕೃತಿ ರಚನೆಯಲ್ಲಿ ಸಿದ್ಧಹಸ್ತರು. ಅವರು ಸಹ ಇಲ್ಲಿ ತಮ್ಮ ಎಂದಿನ ನೆಚ್ಚಿನ ಭಾವಚಿತ್ರ ಶೈಲಿಯಲ್ಲಿ ಬಸವಣ್ಣನವರ ಚಿತ್ರವನ್ನು ನೈಜವಾಗಿಯೇ ಚಿತ್ರಿಸಿದ್ದಾರೆ.

ವಿ.ಟಿ.ಕಾಳೆಯವರು ಬಸವಣ್ಣನವರ ಭಾವಚಿತ್ರ, ಪೂರ್ಣಭಾವಚಿತ್ರಗಳನ್ನು ನೈಜ ಶೈಲಿಯಲ್ಲಿ ಚಿತ್ರಿಸಿದ್ದು ಅವು ಸಾರ್ವಕಾಲಿಕವಾಗಿ ಪ್ರಚಲಿತದಲ್ಲಿವೆ. ಈ ಚಿತ್ರಗಳ ವರ್ಣಗಾರಿಕೆಯಲ್ಲಿ ಪಾಶ್ಚಾತ್ಯ ಪರಿಮಳವೂ ಪ್ರಕಟವಾಗುತ್ತಿದೆ. ಅಂಗಾಂಗ ರಚನೆಯಲ್ಲಿ ಪ್ರಬುದ್ಧತೆಯನ್ನು ಕಾಯ್ದುಕೊಂಡು ಬಂದ ಇವರು ನೈಜತೆ ಪಕ್ವತೆಯ ಅರ್ಥವನ್ನು ತುಂಬಿಕೊಟ್ಟಿದ್ದಾರೆ.

ಪುಣೆಯ ಸುಹಾಸ ಬಹೂಲ್ಕರ್ ಅವರು ಪ್ರಸಿದ್ಧ ನೈಜಶೈಲಿಯ ಚಿತ್ರಕಾರರು. ಜೆಜೆ ಕಲಾಶಾಲೆಯ ಮೂರ್ತಕಲೆಯ ಹೆಜ್ಜೆಗಳು ಅವರ ಕಲಾಕೃತಿಗಳಲ್ಲಿ ಸ್ಪಷ್ಟವಾಗಿ ಮೂಡಿವೆ. "ಕಲ್ಲನಾಗರ ಕಂಡರೆ ಹಾಲೆರೆಯೆಂಬರು" ಎಂಬ ಶೀರ್ಷಿಕೆಯ ಕಲಾಕೃತಿಯನ್ನು ಅನನ್ಯವಾಗಿ ಚಿತ್ರಿಸಿದ್ದಾರೆ. ಆಕೃತಿಗಳಲ್ಲಿ ಜೀವ ತುಂಬುವ ಇವರು ಜಲವರ್ಣ, ತೈಲವರ್ಣಗಳಲ್ಲಿ ಸಿದ್ಧಿಯನ್ನು ಪಡೆದವರು. ನೈಜಚಿತ್ರಗಳನ್ನು ಹೇಗೆ ರಚಿಸಬೇಕೆಂಬುದಕ್ಕೆ ಇವರ ಕಲಾಕೃತಿಗಳು ಉತ್ತಮ ಮಾರ್ಗದರ್ಶಿಯಾಗಬಲ್ಲ ಅರ್ಹತೆಯನ್ನು ಪಡೆದಿವೆ.

ಕಲಾವಿದ ಕೆ. ಗಂಗಾಧರ ಅವರು ಬಸವಣ್ಣನವರ ಚಿತ್ರಗಳನ್ನು ರಚಿಸುವುದನ್ನು ತಮ್ಮ ಬದುಕಿನ ಭಾಗವಾಗಿ ಪರಿಗಣಿಸಿದವರು. ಅವರು ಎಂದಿನಂತೆ ನೈಜಶೈಲಿಯಲ್ಲಿಯೇ ಇಲ್ಲಿ ಚಿತ್ರಗಳನ್ನು ಚಿತ್ರಿಸಿದ್ದಾರೆ. ಮೈಸೂರಿನ ಕಲಾವಿದರಾದ ಎಂ. ವೀರಪ್ಪನವರು ಬಸವಣ್ಣನವರ ಕುರಿತು ಸುಮಾರು ಚಿತ್ರಗಳನ್ನು ನೈಜಶೈಲಿಯಲ್ಲಿಯೇ ಚಿತ್ರಿಸಿದ್ದು, ಬಸವಣ್ಣನವರ ಶರಣಸಂಪನ್ನ ಬದುಕನ್ನು ದೃಶ್ಯಾತ್ಮಕವಾಗಿ ನೋಡುಗರ ಮುಂದೆ ನಿರೂಪಿಸಿದ್ದಾರೆ. ಜಿ.ಆರ್. ನಾಯ್ಕ ಅವರು ಬಸವೇಶ್ವರ ಎಂಬ ಇಂಗ್ಲೀಶ್ ಭಾಷೆಯ ಕಾಮಿಕ್ಸ್‌ನಲ್ಲಿ ಎಂದಿನ ಕಾಮಿಕ್ಸ್ ಶೈಲಿಯ ಚಿತ್ರಗಳನ್ನು ರಚಿಸಿದ್ದು, ಮಾನವ ಅಂಗರಚನೆಗಳಲ್ಲಿ ನೈಜ ರಚನೆಗಳು ಗಮನಾರ್ಹ.

ಆಧುನಿಕ ಶೈಲಿಯ ಚಿತ್ರಗಳು

೧೮ನೆಯ ಶತಮಾನದ ಮಧ್ಯಾವಧಿಯಲ್ಲಿ ಕ್ಯಾಮೆರಾ ಶೋಧಿಸಲ್ಪಟ್ಟ ನಂತರ ದೃಶ್ಯಕಲೆಗಳಲ್ಲಿ ಅನೇಕ ಪಲ್ಲಟಗಳು-ತಲ್ಲಣಗಳು ಉಂಟಾದವು. ನೈಜಕಲೆಯನ್ನು ಕಲೆಯೇ ಅಲ್ಲ ಎಂಬಂತಹ ವಿತಂಡವಾದಗಳು ವಿಕೋಪ-ಪ್ರಕೋಪಕ್ಕೂ ಕಾರಣವಾದವು. ಈ ಹಿನ್ನೆಲೆಯಲ್ಲಿ ಕಲೆಯಲ್ಲಿ ಆಧುನಿಕತೆ ಒಡಮೂಡಿತು. ದೃಶ್ಯಕಲೆಗಳಲ್ಲಿ ಆಧುನಿಕತೆ ಎಂದರೇನು ? ಎನ್ನುವ ಪ್ರಶ್ನೆಗೆ ಹತ್ತು ಹಲವರು ಉತ್ತರಿಸಿದ್ದಾರೆ. "ನೈಜತೆಯನ್ನು ವಿರೂಪಗೊಳಿಸುವುದು ಆಧುನಿಕ ಕಲೆ" ಅಥವಾ "ನೈಜತೆಗೆ ಹೊಸರೂಪವನ್ನು ಕಲ್ಪಿಸುವುದು" ಎಂಬರ್ಥವನ್ನು ಹಲವಾರು ಬಗೆಯಲ್ಲಿ ಒಪ್ಪಿಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಬಸವಣ್ಣನವರ ಕುರಿತು ಅದರಲ್ಲೂ ವಿಶೇಷವಾಗಿ ವಚನಗಳನ್ನು ಆಧರಿಸಿ ಆಧುನಿಕ ಶೈಲಿಯ ಕಲಾಕೃತಿಗಳು ಲಭ್ಯವಾಗಿದ್ದು ಅವುಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಮೈಸೂರಿನ ಡಿ.ಎ.ಉಪಾಧ್ಯ ಅವರು ಮೂಲತಃ ಚಿತ್ರಕಲಾ ಅಧ್ಯಾಪಕರು. ಅವರು ಬಸವಣ್ಣನವರ ವಚನಗಳನ್ನು ಆಧರಿಸಿ ಇಲ್ಲಿ ಹಲವು ಚಿತ್ರಗಳನ್ನು ರಚಿಸಿದ್ದಾರೆ. ಅವೆಲ್ಲವೂ ಆಧುನಿಕ ಶೈಲಿಯವು. ಮೇಲ್ಪದರದ ಬಗೆಯಲ್ಲಿ ಲಿಂಗ, ಪಕ್ಷಿ, ಮಾನವಾಕೃತಿಗಳ ಅಂಗಗಳನ್ನು ಸಾಂಕೇತಿಕವಾಗಿ ದುಡಿಸಿಕೊಂಡು ಕಲಾಕೃತಿಗಳನ್ನು ರಚಿಸಿದ್ದಾರೆ. ಕೆಲವು ಕಲಾಕೃತಿಗಳಲ್ಲಿ ಮೈವಳಿಕೆಯ ಸೃಷ್ಟಿಯನ್ನು ಮಾಡುತ್ತಾರೆ. ವಚನದಲ್ಲಿ ನಾಮಾಮೃತವನ್ನು ತುಂಬಿ ಶೀರ್ಷಿಕೆಯ ಚಿತ್ರದಲ್ಲಿ ಮೂಲವರ್ಣಗಳನ್ನೇ ಹೆಚ್ಚಾಗಿ ಬಳಸಿಕೊಂಡಿದ್ದು ಚಿತ್ರದ ವಿನ್ಯಾಸಗಳೆಲ್ಲವೂ ಸಾಂಕೇತಿಕ ನೆಲೆಯಲ್ಲಿ ಚಿತ್ರಿತಗೊಂಡಿವೆ.

ಚೆನ್ನೈನ ಮನೋಹರ ಅವರು ಸೆಮಿ ಮಾಡರ್ನ ನೆಲೆಯಲ್ಲಿ "ಸೆಗಣಿಯ ಬೆನಕಂಗೆ ಸಂಪಿಗೆಯರಳಿ ಪೂಜಿಸಿದಡೆ" ಶೀರ್ಷಿಕೆಯ ಕಲಾಕೃತಿಯನ್ನು ರಚಿಸಿದ್ದಾರೆ. ಎಡಪಾರ್ಶ್ವದಲ್ಲಿ ಕೈಯಲ್ಲಿ ಫಲಪುಷ್ಪಗಳನ್ನು ಹಿಡಿದ ಮಹಿಳೆಯನ್ನು, ಬಲಪಾರ್ಶ್ವದಲ್ಲಿ ಗಣಪನನ್ನು ಚಿತ್ರಿಸಿದ್ದಾರೆ. ಮೈವಳಿಕೆಯೇ ಪ್ರಧಾನವಾಗಿರುವ ಈ ಕಲಾಕೃತಿಯಲ್ಲಿ ವರ್ಣಗಳ ತಾಜಾತನವನ್ನು ಉಳಿಸಿಕೊಂಡಿದ್ದಾರೆ.

ಗುಂಟೂರಿನ ಗಿರಿಧರಗೌಡ ಅವರು "ಆನೆಯನೇರಿಕೊಂಡು ಹೋದಿರೇ ನೀವು" ಶೀರ್ಷಿಕೆಯಡಿ ಆಧುನಿಕ ಶೈಲಿಯ ಕಲಾಕೃತಿಯನ್ನು ರಚಿಸಿದ್ದಾರೆ. ಮಾನವಾಕೃತಿಗಳ ಜೊತೆ ಪ್ರಾಣಿಗಳ ಆಕೃತಿಯನ್ನು ವಿರೂಪಗೊಳಿಸಿ ಕಲಾಕೃತಿಯನ್ನು ಅಣಿಗೊಳಿಸಿದ್ದಾರೆ. ಹೀಗೆ ಬಸವಣ್ಣನವರ ಕುರಿತ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿಗಳನ್ನು ಗುರುತಿಸಬಹುದಾಗಿದೆ.

ಅಧ್ಯಾಯ : ಒಂಬತ್ತು

ಸಮಾರೋಪ

ಕಳೆದ ಎಂಟು ಶತಮಾನಗಳ ನಂತರವೂ ಬಸವಾದಿ ಪ್ರಮಥರ ಅಸ್ತಿತ್ವ ಸಾರ್ವಕಾಲಿಕವಾಗಿರುವುದಕ್ಕೆ ಅವರ ವಚನಗಳೇ ಕಾರಣ. ಅನುಭವಮಂಟಪದ ರೂವಾರಿ ಬಸವಣ್ಣನವರು. ಅನುಭವಮಂಟಪ ಈ ದೇಶದ ಮೊದಲ 'ಸಂಸತ್' ಎಂಬ ಭಾವನೆ ಈಗಲೂ ಇದೆ. ಜಾತ್ಯತೀತ ಸಂಸತ್ ಎಂದೇ ಪ್ರತಿಪಾದಿತವಾಗಿರುವ ಅನುಭವ ಮಂಟಪ ಈ ವಿಶ್ವದ ಆಧ್ಯಾತ್ಮಿಕ ಬದುಕಿನ ಶಾಲೆ. ಬಸವಣ್ಣನವರಿಂದ ಪ್ರೇರಣೆಗೊಂಡ ವಿಶ್ವದ ಅನೇಕ ಸಮುದಾಯಗಳು ಇಂದು ಅನುಭವಮಂಟಪಗಳಾಗಿವೆ. ಬಸವಣ್ಣನವರ ಕುರಿತ ಅಧ್ಯಯನವೆಂದರೆ ಸಾಮಾಜಿಕ ಕ್ರಾಂತಿಯ ಅಧ್ಯಯನವೆಂದೇ ಪರಿಭಾವಿಸಬಹುದು. ಈ ಹಿನ್ನೆಲೆಯಲ್ಲಿ ಬಸವಣ್ಣನವರ ಕುರಿತು ನೂರಾರು ಸಂಶೋಧನಾತ್ಮಕ ಅಧ್ಯಯನಗಳು ನಡೆದಿವೆ, ನಡೆಯುತ್ತಲೇ ಇವೆ; ಪ್ರವಾಹೋಪಾದಿಯಲ್ಲಿ.!

ಪ್ರಸ್ತುತ ಅಧ್ಯಯನ ಇನ್ನುಳಿದ ಅಧ್ಯಯನಕ್ಕಿಂತ ವಿಭಿನ್ನವಾದುದು. ಏಕೆಂದರೆ ಇದುವರೆಗೂ ನಡೆದ ಅಧ್ಯಯನಗಳು ವಚನಸಾಹಿತ್ಯವನ್ನೇ ಆಧಾರವಾಗಿಸಿಕೊಂಡು, ನಾಟಕ, ಚಲನಚಿತ್ರ, ಚಿತ್ರ, ಶಿಲ್ಪಕಲೆಗಳು ಮೈದಳೆದಿವೆ. ಆದರೆ ಬಸವಣ್ಣನವರ ಕುರಿತು ಬಂದ ನಾಟಕ, ಚಲನಚಿತ್ರ, ಚಿತ್ರ, ಶಿಲ್ಪಕಲೆಗಳ ಮರು ವಿಶ್ಲೇಷಣೆ, ಮರು ವಿಮರ್ಶೆ, ಮರು ವ್ಯಾಖ್ಯಾನದಂತಹ ಅಧ್ಯಯನಗಳು ವಿರಳವಾಗಿವೆ. ಇವುಗಳ ನಡುವೆ ಪ್ರಸ್ತುತ "ಬಸವಣ್ಣನವರ ಕುರಿತ ವರ್ಣಚಿತ್ರಗಳು" ಒಂದು ವಿಶ್ಲೇಷಣಾತ್ಮಕ ಅಧ್ಯಯನವು ಬಸವಣ್ಣನವರ ಕುರಿತು ಬಂದ ದೃಶ್ಯಕಲೆಗಳನ್ನೇ ಅಧ್ಯಯನ ಮಾಡುವುದಾಗಿದೆ. ಹೀಗಾಗಿ ಈ ಅಧ್ಯಯನವು ದೃಶ್ಯಾತ್ಮಕ ನೆಲೆಯಲ್ಲಿ ಬಸವಣ್ಣನವರನ್ನು ಹಾಗೂ ಅವರ ಸಮಕಾಲೀನ ಶರಣಸಂಪನ್ನ ಪರಿಸರದ ಕುರಿತು ಮಾಡಿದ ಅಧ್ಯಯನವಾಗಿದೆ. ಚಿತ್ರಸೃಷ್ಟಿ ಕಲಾವಿದನ ಆಂತರ್ಯದ ತುಡಿತ. ತುಡಿತದ ಮೂಲಬೇರು ಅವನಿಗಿರುವ ಅನುಭವ. ಅನುಭವ ಅನುಭಾವವಾಗಿ ಜೀವನ ತತ್ತ್ವವನ್ನು ದೃಶ್ಯಕಲೆಗಳಲ್ಲಿ ಕಂಡುಕೊಳ್ಳುವ ಕಲಾವಿದನಿಂದ

ರೇಖಾವಿಲಾಸ, ವರ್ಣವಿಲಾಸಗಳೊಂದಿಗೆ ಒಂದು ಪ್ರಬುದ್ಧ ಕಲಾಕೃತಿ ಹುಟ್ಟುಪಡೆಯುತ್ತದೆ. ಇಂತಹ ಚಿತ್ರಸೃಷ್ಟಿ ಕ್ರಿಯೆ ಇಂದಿನದಲ್ಲ, ಪ್ರಾಚೀನ ಕಾಲದಿಂದಲೂ ನಡೆದು ಬಂದ ಬೌದ್ಧಿಕ ಕ್ರಿಯೆ. "ಮಾನವನ ಉಗಮದೊಂದಿಗೇ ಬೆಳೆದು ಬಂದ ಚಿತ್ರಕಲೆಯ ಇತಿಹಾಸವು ಗುರುತಿಸಲು ಸುಲಭವಲ್ಲದಷ್ಟು ಸಹಸ್ರ ಸಹಸ್ರ ವರ್ಷಗಳ ಹಿಂದಕ್ಕೆ ಹೋಗುತ್ತದೆ. ಈ ಮಾತುಗಳು ಭಾರತದ ಚಿತ್ರಕಲೆಗೂ ಅನ್ವಯಿಸುತ್ತದೆ. ಹೀಗೆ ಆದಿಮಕಾಲದಿಂದಲೂ ನಮ್ಮಲ್ಲಿ ನಡೆದು ಬಂದ ಚಿತ್ರಲೆಯ ಬಗೆಗೆ ಸುಮಾರು ಕ್ರಿ.ಶ. ೧೮೮೩ರಿಂದ ಸಂಶೋಧನೆಗಳು ನಡೆಯುತ್ತಿವೆ. ತನ್ನದೇ ಆದ ಒಂದು ನಿಶ್ಚಿತ ಪರಂಪರೆಯನ್ನು, ಶೈಲಿ-ವೈಶಿಷ್ಟ್ಯಗಳನ್ನು ಪಡೆದುಕೊಳ್ಳುವ ಮೊದಲು ಈ ದೇಶದಲ್ಲಿ ಕಲೆಯು ವಿವಿಧ ನೆಲೆಗಳಲ್ಲಿ ಸಾಗಿತ್ತು".[೧]

ಕಲೆ ಯಾವಾಗಲೂ ಜನರ ಮನಸ್ಸಿನ ಮೇಲೆ ಪ್ರಭಾವ ಬೀರುವ ಒಂದು ಮುಖ್ಯ ಸಾಧನವಾಗಿದೆ. ಅದಕ್ಕೆ ಚಿತ್ರಕಲೆ ಮನೋವಿಜ್ಞಾನದ ಸಿದ್ಧಾಂತಗಳ ಮೇಲೆ ಆಧಾರವಾಗಿರುವುದು. ಕಲೆಯಲ್ಲಿ ಕೇವಲ ತಾಂತ್ರಿಕ ನೈಪುಣ್ಯ ಹೆಚ್ಚಿರುತ್ತದೆ. ಯಾವುದೇ ಕಲಾಕೃತಿಯ ಹಿಂದೆ ಆ ಕಲಾವಿದನ ಮನಃಸ್ಥಿತಿಯು ಮುಖ್ಯವಾಗಿ ಕಾರಣವಾಗಿರುತ್ತದೆ. ಹೀಗಾಗಿ ಚಿತ್ರಕಲೆ ಮತ್ತು ಮನಃಶಾಸ್ತ್ರಕ್ಕೆ ಬಿಡಲಾರದ ನಂಟು ಇದ್ದು, ಇವು ಒಂದಕ್ಕೊಂದು ಪೂರಕ ಮತ್ತು ಪ್ರೇರಕವಾದ ಸಂಬಂಧವನ್ನು ಹೊಂದಿವೆಯೆಂದು ಹೇಳಬಹುದು.[೨] ಹೀಗೆ ಭಾರತೀಯ ಕಲಾವಿದರು ಕಲೆಯೇ ತಮ್ಮ ಜೀವನಸರ್ವಸ್ವವೆಂಬ ದೃಢ ನಂಬಿಕೆಯಿಂದ ವಂಶ ಪಾರಂಪರ್ಯವಾಗಿ ಕಲೆಯನ್ನವಲಂಬಿಸಿ ಕಲೆಯಲ್ಲಿ ವಿಪುಲ ಪ್ರಗತಿ ಸಾಧಿಸಿದ್ದರು.

ಬಸವಣ್ಣನವರ ಕುರಿತ ಕಲಾಕೃತಿಗಳ ಅಧ್ಯಯನ ಬಹುಮುಖಿ ನೆಲೆಯದ್ದು. ಏಕೆಂದರೆ ಶರಣನಾಗಿ, ಸಾಮಾಜಿಕ ಪರಿವರ್ತನೆಯ ಹರಿಕಾರನಾಗಿ, ಎಲ್ಲಕ್ಕೂ ಮಿಗಿಲಾಗಿ ಸಾರ್ವಕಾಲಿಕ ಸತ್ಯವಾಗಿರುವ ವಚನಸಾಹಿತ್ಯ ನೀಡಿದ ಬಸವಣ್ಣನವರನ್ನು ಇದುವರೆಗೆ ಅಧ್ಯಯನ ಮಾಡಿದ್ದರೂ ಸಹ, ಇಲ್ಲಿ ಅವರ ಕುರಿತು ಕಲಾವಿದರ ಸೃಜನಶೀಲ ತುಡಿತದಿಂದ ಒಡಮೂಡಿದ ನೂರಾರು ಕಲಾಕೃತಿಗಳಲ್ಲಿ ಕೆಲವನ್ನು ಆಯ್ದುಕೊಂಡು ಗಂಭೀರ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ ಈ ಮಹಾಪ್ರಬಂಧ ರಚನೆಗೊಂಡಿದೆ. ಪ್ರಸ್ತುತ ಅಧ್ಯಯನವನ್ನು ಒಂಬತ್ತು ಅಧ್ಯಾಯಗಳಲ್ಲಿ ಮಾಡಲಾಗಿದೆ. ಪ್ರತಿ ಅಧ್ಯಾಯದಲ್ಲಿ ಮಾಡಿದ ಅಧ್ಯಯನದ ವಿವರ ಈ ಕೆಳಗಿನಂತಿದೆ:

ಒಂದನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶವನ್ನು ವಿವರಿಸುವುದರೊಂದಿಗೆ, ಅಧ್ಯಯನದ ಸ್ವರೂಪ, ಅಧ್ಯಯನದ ವೈಧಾನಿಕತೆ ಮತ್ತು ವ್ಯಾಪ್ತಿಯ ಕುರಿತು ಹೇಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಬಸವಣ್ಣನವರ ಜೀವನದ ಪ್ರಮುಖ ಘಟ್ಟಗಳ ವರ್ಣಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬಸವಣ್ಣನ ಜನನಕ್ಕೂ ಮೊದಲು ಸಾಂಪ್ರದಾಯಿಕ ಚಿತ್ರಗಳನ್ನು ಮೊದಲು ಮಾಡಿ, ಅಂದಿನ ಬಸವಪೂರ್ವ ಯುಗದ ಸಾಮಾಜಿಕ-ಧಾರ್ಮಿಕ ವ್ಯವಸ್ಥೆಯ ವರ್ಣಚಿತ್ರಗಳು,

---

೦೧. ಆರ್. ಜಿ. ರಾಯ್ಕರ್ : ಭಾರತೀಯ ಚಿತ್ರಕಲೆ, ಪು-೫

೦೨. ಡಾ. ಎಸ್. ಸಿ. ಪಾಟೀಲ (ಸಂ.) : ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು, ಪು-೪೯

ಬಸವಣ್ಣನವರ ಬಾಲ್ಯಾವಸ್ಥೆಯ ವರ್ಣಚಿತ್ರಗಳು, ಯೌವ್ವನಾವಸ್ಥೆಯ ವರ್ಣಚಿತ್ರಗಳು, ಪವಾಡಗಳ ವರ್ಣಚಿತ್ರಗಳು, ಕಾಯಕದ ವರ್ಣಚಿತ್ರಗಳು, ಪ್ರಸಾದ ಮತ್ತು ದಾಸೋಹದ ವರ್ಣಚಿತ್ರಗಳು, ಅನುಭವ ಮಂಟಪದ ವರ್ಣಚಿತ್ರಗಳು, ಪಾದುಕಾ ಪ್ರಸಂಗದ ವರ್ಣಚಿತ್ರಗಳು, ಅಂತರ್ಜಾತೀಯ ವಿವಾಹದ ವರ್ಣಚಿತ್ರಗಳು, ಗಡಿಪಾರು ಘಟನೆಯ ವರ್ಣಚಿತ್ರಗಳು, ಕಲ್ಯಾಣದ ಶರಣರಿಂದ ಬೀಳ್ಕೊಡುಗೆಯ ವರ್ಣಚಿತ್ರಗಳು ಹಾಗೂ ಅಂತಿಮವಾಗಿ ಬಸವಣ್ಣನವರು ಕೂಡಲಸಂಗಮನಾಥನಲ್ಲಿ ಐಕ್ಯವಾಗುವ ವರ್ಣಚಿತ್ರಗಳ ಕುರಿತು ಈ ಅಧ್ಯಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಬಸವಣ್ಣನವರು ಇದುವರೆಗೂ ನಮ್ಮ ನಡುವೆ ಜೀವಂತವಾಗಿರುವುದಕ್ಕೆ ಮುಖ್ಯ ಕಾರಣ ಅವರು ರಚಿಸಿದ ವಚನಗಳು. ಅನೇಕ ಹಿಂದುಸ್ಥಾನಿ ಸಂಗೀತ ವಿದ್ವಾಂಸರು ಬಸವಣ್ಣನವರ ವಚನಗಳನ್ನು ಈಗಲೂ ತಮ್ಮ ಸಂಗೀತ ಕಛೇರಿಯಲ್ಲಿ ಹಾಡುವುದರಿಂದಲೂ ಬಸವಣ್ಣನವರ ಅಸ್ತಿತ್ವಕ್ಕೆ ಸಂಚಕಾರವಿಲ್ಲದಂತೆ ಮಾಡಿದ್ದಾರೆ. ಇನ್ನು ನಡುವಿನ ದೃಶ್ಯಕಲಾವಿದರೂ ಸಹ ಬಸವಣ್ಣನವರ ಬದುಕು–ಬರಹಗಳಿಂದ ಪ್ರೇರಿತರಾಗಿ ಬಗೆಬಗೆಯ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಬಸವಣ್ಣನವರು ಅರಮನೆಯಿಂದ ಅನುಭವ ಮಂಟಪದವರೆಗಿನ ತಮ್ಮ ಪಯಣದಲ್ಲಿ ಸಾವಿರಾರು ಸಮಾಜಮುಖಿಯಾದ ವಚನಗಳನ್ನು ರಚಿಸಿದ್ದಾರೆ. ಆಧ್ಯಾತ್ಮಿಕ ಸಾಧನೆ, ಸಾಮಾಜಿಕ ಸ್ವಾಸ್ಥ್ಯ ಇನ್ನೂ ಮುಂತಾದ ಸಾರ್ವತ್ರಿಕ ಬದುಕಿನ ವಿವಿಧ ಮಜಲುಗಳ ಕುರಿತು ವಚನಗಳನ್ನು ಆಧರಿಸಿ ನಮ್ಮ ಕಲಾವಿದರು ರಚಿಸಿದ ಕಲಾಕೃತಿಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಬಸವಣ್ಣನವರ ಕ್ರಾಂತಿಕಾರಕ, ಸಮಾಜಸುಧಾರಣೆಯ ಹಾಗೂ ಹಲವಾರು ಘಟನೆಗಳ ಕುರಿತಂತೆ ಅನೇಕ ಕಲಾವಿದರು ಅನೇಕ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಲೋಹ ಮಾಧ್ಯಮ, ಶಿಲಾ ಮಾಧ್ಯಮ, ಕಾಷ್ಠ ಮಾಧ್ಯಮ, ಫೈಬರ್ ಮಾಧ್ಯಮ, ಗಾಜಿನ ಮಾಧ್ಯಮ, ತೊಗಲುಗೊಂಬೆಯ ಮಾಧ್ಯಮ, ನಾಟಕ ಮಾಧ್ಯಮ, ಚಲನಚಿತ್ರ ಮಾಧ್ಯಮ, ಮುದ್ರಣ ಮಾಧ್ಯಮ, ನಾಣ್ಯಗಳ ಮೇಲೆ ಒಡಮೂಡಿದ, ಪುಸ್ತಕಗಳ ಮುಖಪುಟಗಳಲ್ಲಿ ಕಾಣಿಸಿಕೊಂಡ ಬಸವಣ್ಣನವರ ಕುರಿತ ಚಿತ್ರ–ಶಿಲ್ಪಗಳ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಬಸವಣ್ಣನವರ ಕುರಿತು ರಚಿತವಾದ ಭಾವಚಿತ್ರಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿದೆ. ಬಸವಣ್ಣನವರನ್ನು ವರ್ಣಚಿತ್ರಗಳ ಮೂಲಕ ನಾಡಿನ ಪ್ರತಿಯೊಬ್ಬರ ಅಂತರಂಗದಲ್ಲಿ ಪ್ರತಿಷ್ಠಾಪಿಸಲು ಕಲಾವಿದರು ಮಾಡಿರುವ ಪ್ರಯತ್ನವನ್ನು ಇಲ್ಲಿ ದಾಖಲಿಸಲಾಗಿದೆ. ಭಾವಚಿತ್ರಗಳು ನೋಡುಗರ ಮನಸ್ಸಿನ ಮೇಲೆ ಕ್ಷಣಮಾತ್ರದಲ್ಲಿ ಪರಿಣಾಮವನ್ನು ಬೀರುವ ವಿಶಿಷ್ಟ ಅಭಿವ್ಯಕ್ತಿ ಮಾಧ್ಯಮಗಳಾಗಿವೆ. ಚಿಕ್ಕಮಕ್ಕಳಲ್ಲಿ, ವಯಸ್ಕರಲ್ಲಿ ಹಾಗೂ ಸರ್ವರಲ್ಲಿ ಭಾವಚಿತ್ರಗಳು ಆಧ್ಯಾತ್ಮಿಕ, ಸಾತ್ವಿಕ, ನೈತಿಕ ಮೌಲ್ಯಗಳ ಬದುಕನ್ನು ಕಟ್ಟಿಕೊಳ್ಳಲು ಪ್ರೇರೇಪಿಸುತ್ತವೆ. ಹೆಸರೇ ಹೇಳುವಂತೆ ಭಾವವನ್ನು ಪ್ರಕಟಿಸುವ ಚಿತ್ರಗಳು ಸಾಧಕರ ಸಾರ್ಥಕ ಬದುಕಿನ ಸಂಕೇತಗಳಾಗಿವೆ. ಈ ಹಿನ್ನೆಲೆಯಲ್ಲಿ ಬಹಳಷ್ಟು ಕಲಾವಿದರು ಅನೇಕಾನೇಕ

ಭಾವಚಿತ್ರಗಳನ್ನು ರಚಿಸಿದ್ದಾರೆ. ಆ ಭಾವಚಿತ್ರಗಳನ್ನು ಹತ್ತು ಹಲವು ಬಗೆಯಲ್ಲಿ ಸಂಯೋಜಿಸಿಕೊಂಡು ರಚಿಸಿದ ಭಾವಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಇದುವರೆಗಿನ ಅಧ್ಯಯನದಲ್ಲಿ ಬಸವಣ್ಣನವರ ಕುರಿತ ಚಿತ್ರ–ಶಿಲ್ಪ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದರೆ, ಪ್ರಸ್ತುತ ಬಸವಣ್ಣನವರ ಅನುಭವಮಂಟಪದಲ್ಲಿ ನಡೆಯುವ ಘಟನೆಗಳಿಗೆ ಪೂರಕವಾದ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬಸವಣ್ಣನವರ ಬದುಕಿನ ಬಹು ಮುಖ್ಯ ಘಟನೆಗಳಾದ ಪಾದುಕಾ ಪ್ರಸಂಗ, ಎಳೆಯೂಟೆ ಪ್ರಸಂಗ, ಶರಣರು ಕಲ್ಯಾಣವನ್ನು ತೊರೆಯುತ್ತಿರುವುದು, ಶರಣರು ಹಸ್ತಪ್ರತಿಗಳ ಸಂರಕ್ಷಣೆಯನ್ನು ಮಾಡುತ್ತಿರುವುದು ಇನ್ನು ಮುಂತಾದ ಬಸವಣ್ಣನವರ ಬದುಕಿಗೆ ಸಂಬಂಧಪಟ್ಟ ಪೂರಕ ಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೆ ಬಳಸಿಕೊಂಡಿದೆ.

ಏಳನೆಯ ಅಧ್ಯಾಯದಲ್ಲಿ ಬಳಸಿಕೊಂಡ ಬಸವಣ್ಣನವರ ಕುರಿತ ಕಲಾಕೃತಿಗಳನ್ನು ಹಲವಾರು ಕಲಾವಿದರು ರಚಿಸಿದ್ದಾರೆ. ಅಂತಹ ಕಲಾವಿದರಲ್ಲಿ ಕೆಲವರು ಮಾತ್ರ ಈಗಲೂ ಜೀವಂತವಾಗಿದ್ದರೆ ಇನ್ನೂ ಕೆಲವು ಕಲಾವಿದರು ಗತಿಸಿಹೋಗಿದ್ದಾರೆ. ಲಭ್ಯ ಮಾಹಿತಿಯನ್ವಯ ಕಲಾವಿದರನ್ನು ಸಂಕ್ಷಿಪ್ತವಾಗಿ ಇಲ್ಲಿ ಪರಿಚಯಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಬಸವಣ್ಣನವರ ಕುರಿತು ರಚಿತವಾದ ಕಲಾಕೃತಿಗಳ ಮೇಲೆ ಬೀರಿದ ಪ್ರಭಾವನ್ನು ಗುರುತಿಸುವುದರೊಂದಿಗೆ, ಜ್ಞಾನದಾಸೋಹ, ಅನ್ನದಾಸೋಹಕ್ಕೆ, ಸಮಾಜದ ಮೇಲ್ವರ್ಗದವರ ಮನಃಪರಿವರ್ತನೆಗೆ ಬಸವಣ್ಣನವರ ಬದುಕು–ಬರಹಗಳು ಹೇಗೆ ಪ್ರೇರಣೆ ನೀಡಿವೆ. ಅದರಂತೆ ಸಮಾಜದ ಪ್ರಮುಖ ಭಾಗವಾಗಿರುವ ದೃಶ್ಯಕಲಾವಿದರಿಗೂ ಸಹ ಬಸವಣ್ಣನವರು ಕಲಾಕೃತಿಗಳನ್ನು ರಚಿಸಲು ಪ್ರೇರಣೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ರಚಿತಗೊಂಡ ಕಲಾಕೃತಿಗಳಲ್ಲಿ ಕಂಡುಬರುವ ರೇಖಾವಿನ್ಯಾಸ, ವರ್ಣಗಾರಿಕೆ, ಪ್ರಭಾವ, ಕಲಾತಂತ್ರ, ಶೈಲಿಯ ವಿಶಿಷ್ಟ ಅಭಿವ್ಯಕ್ತಿಯ ವೈವಿಧ್ಯತೆ–ಸಾಧ್ಯತೆಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಒಂಬತ್ತನೆಯ ಅಧ್ಯಾಯದಲ್ಲಿ ಪ್ರತಿಯೊಂದು ಅಧ್ಯಾಯಗಳ ಒಟ್ಟು ಸಮೀಕ್ಷೆಯನ್ನು ಪ್ರಸ್ತುತ ಈ ಒಂಬತ್ತನೆಯ ಅಧ್ಯಾಯದಲ್ಲಿ ನೀಡಲಾಗಿದೆ ಮತ್ತು ಪ್ರಸ್ತುತ ಮಹಾಪ್ರಬಂಧದಿಂದ ಕಂಡುಬರುವ ಮುಖ್ಯವಾದ ಫಲಿತಗಳನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಅಧ್ಯಯನದ ಫಲಿತಗಳು

೦೧. ಬಸವಣ್ಣನವರ ಒಟ್ಟು ಬದುಕು ವಚನಸಾಹಿತ್ಯ ಅಧ್ಯಯನಕ್ಕೆ ಅವಕಾಶ ನೀಡಿದಂತೆಯೇ ಅವರ ಕುರಿತು ರಚನೆಯಾದ ದೃಶ್ಯಕಲೆಗಳ ಅಧ್ಯಯನಕ್ಕೆ ಕಾರಣವಾಗಿದೆ.

೦೨. ಬಸವಣ್ಣನವರ ಕೂಡಲಸಂಗಮ, ಅನುಭವಮಂಟಪ, ಕಲ್ಯಾಣದ ಅರಮನೆಯಲ್ಲಿ ನಡೆದ ಘಟನೆಗಳು ನಮ್ಮ ನಡುವಿನ ಕಲಾವಿದರಿಗೆ ರೇಖಾಚಿತ್ರ, ಸಂಯೋಜನಾ ಚಿತ್ರ, ಶಿಲ್ಪಗಳ ರಚನೆಗಳಿಗೆ ಪ್ರೇರಣೆ ನೀಡಿವೆ.

೦೩. ವಚನ 'ಸಾಹಿತ್ಯ', 'ಸಂಗೀತ', ನಾಟಕಕ್ಕೆ ಹೇಗೆ ಸಂವಾದಿಯಾಗಬಲ್ಲದೋ ಹಾಗೆಯೇ ವಚನಗಳು ಚಿತ್ರ, ಶಿಲ್ಪ, ವಾಸ್ತುಶಿಲ್ಪಕ್ಕೆ ಸಂವಾದಿಯಾಗುವುದಕ್ಕೆ ಮಹಾಮಾರ್ಗವನ್ನು ತೋರಿವೆ.

೦೪. ಬಸವಣ್ಣನವರ ಕಲಾಕೃತಿಗಳಲ್ಲಿ ರೇಖಾಲಾಲಿತ್ಯ, ವರ್ಣವಿಲಾಸ, ಸಂಯೋಜನೆಗಳು ಅನನ್ಯವಾಗಿ ಗೋಚರವಾಗಿವೆ.

೦೫. ಬಸವಣ್ಣನವರ ಕುರಿತ ಚಿತ್ರಗಳು ಕಾಗದ, ಕ್ಯಾನ್ವಾಸ್, ಭಿತ್ತಿಗಳ ಮೇಲೆ ಜಲವರ್ಣ, ತೈಲವರ್ಣ, ಎಕ್ರಿಲಿಕ್ ವರ್ಣ, ಎನಾಮೆಲ್ ವರ್ಣ, ಪೋಸ್ಟರ್ ವರ್ಣಗಳನ್ನು ಸಮರ್ಥವಾಗಿ ದುಡಿಸಿಕೊಂಡಿವೆ.

೦೬. ಬಸವಣ್ಣನವರ ಕಲಾಕೃತಿಗಳಲ್ಲಿ ಪ್ರಮಾಣಬದ್ಧ ಅಂಗರಚನೆಗಳು, ಮೃದುವಾದ ವರ್ಣಮೇಳ, ಸಂಯೋಜನೆಯ ವಿಂಗಡನೆ ಹೀಗೆ ಚಿತ್ರದ ಒಟ್ಟಂದಕ್ಕೆ ಪೂರಕವಾಗಿವೆ.

೦೭. ವರ್ಣಚಿತ್ರಗಳಲ್ಲಿ ನೈಜ ಶೈಲಿ, ಆಧುನಿಕ ಶೈಲಿಯ ಸಂಯೋಜನಾ ಚಿತ್ರಗಳು, ಭಾವಚಿತ್ರ, ಪೂರ್ಣಭಾವ ಚಿತ್ರಗಳು ಪ್ರಸ್ತುತ ಅಧ್ಯಯನದಲ್ಲಿದ್ದು ಅವು ಶರಣಸಂಪನ್ನ ಅನುಭವವನ್ನು ನೀಡುತ್ತವೆ.

೦೮. ಪವಾಡ, ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಜನಪದ ಅಂಶಗಳನ್ನೊಳಗೊಂಡ ಕಲಾಕೃತಿಗಳು, ಸಮಾಜ ಸ್ವೀಕರಿಸಬಹುದಾದ ಶರಣ ಸಂಸ್ಕಾರ ಸಂದೇಶಗಳು ಬಸವಣ್ಣನವರ ಕಲಾಕೃತಿಗಳಲ್ಲಿ ಕಂಡುಬರುತ್ತವೆ.

೦೯. ೧೨ನೆಯ ಶತಮಾನದ ಬಸವಣ್ಣನವರ ನಡೆಯನ್ನು ೨೧ನೆಯ ಶತಮಾನದಲ್ಲಿ ದೃಶ್ಯಾತ್ಮಕವಾಗಿ, ಅದೂ ಆಧುನಿಕ ಶೈಲಿಯಲ್ಲಿ ಚಿತ್ರ ರಚಿಸುವುದರ ಮೂಲಕ ಬಸವಣ್ಣನವರಿಗೆ ಸ್ಪಂದಿಸಿರುವ ಬಗೆಯನ್ನು ಇಲ್ಲಿ ಕಾಣಬಹುದಾಗಿದೆ.

೧೦. ಬಸವಣ್ಣನವರ ಸಮಾಜೋ ಧಾರ್ಮಿಕ ನಡೆಗಳು ೨೧ನೆಯ ಶತಮಾನದಲ್ಲಿಯೂ ದೃಶ್ಯಾತ್ಮಕವಾಗಿ ಸಾರ್ವತ್ರಿಕವಾಗಿರುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಬಸವಣ್ಣನವರ ಕುರಿತ ಕಲಾಕೃತಿಗಳು ಕನ್ನಡ ನೆಲದ ಶರಣ ಸಂಸ್ಕೃತಿ, ಪರಂಪರೆಯ ಅಂಶಗಳನ್ನು ತಮ್ಮ ಕಲಾಕೃತಿಯ ವಸ್ತು ವಿಷಯವನ್ನಾಗಿ ಬಳಸಿಕೊಂಡಿರುವುದು ವಿಶೇಷವಾಗಿದೆ. ಬಸವಣ್ಣನವರ ಬದುಕಿನ ವಿವಿಧ ಘಟ್ಟಗಳ ಅನೇಕ ದೃಶ್ಯಗಳಿಂದ ಕೂಡಿರುವ ಇಲ್ಲಿನ ಕಲಾಕೃತಿಗಳು ರಮಣೀಯತೆ, ಸಂಭ್ರಮ, ಉತ್ಸಾಹ, ವೇದನೆಯುಳ್ಳ ಆಕೃತಿಗಳು–ವಿನ್ಯಾಸಗಳು ಆಧ್ಯಾತ್ಮಿಕ ದರ್ಶನವನ್ನು ನೀಡುತ್ತವೆ. ಪ್ರಕೃತಿ ಚಿತ್ರಣ ರಚನೆಯಲ್ಲಿ ಕೂಡಲಸಂಗಮ, ಕಲ್ಯಾಣದ ಅರಮನೆ, ಬೆಟ್ಟ–ಗುಡ್ಡ, ದೇಗುಲ, ಅರಮನೆ, ಗಿಡ–ಮರ, ಮೋಡ ಮತ್ತು ಪ್ರಕೃತಿಯ ವೈಶಿಷ್ಟ್ಯಗಳು ಕಲಾಕೃತಿಗಳಲ್ಲಿ ಅಲಂಕಾರಿಕವಾಗಿ, ನೈಜವಾಗಿ ರೂಪಗೊಂಡು ಶರಣಸಂಪನ್ನ ಅನುಭವ ನೀಡುತ್ತವೆ.

ಈ ಬಗೆಯಾಗಿ ಬಸವಣ್ಣನವರ ಕುರಿತ ಕಲಾಕೃತಿಗಳ ಅಧ್ಯಯನದಿಂದ ಹಲವಾರು ಹೊಸ ಫಲಿತಗಳನ್ನು ಕಂಡುಕೊಳ್ಳಲಾಗಿದ್ದು, ಪ್ರಸ್ತುತ ಅಧ್ಯಯನ "ಕನ್ನೆ ನೆಲ"ವೆಂದು ವಿನಮ್ರವಾಗಿ ತಿಳಿಯಪಡಿಸುತ್ತ ಈ ಮಹಾಪ್ರಬಂಧವನ್ನು ಸಂಪೂರ್ತಿಗೊಳಿಸಲಾಗಿದೆ.

❑❑❑

ಅನುಬಂಧ – ೧

ಸಂಕ್ಷೇಪಗಳು

೦೧. ಗು.ವಿ.ಗು.	:	ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
೦೨. ಕ.ವಿ.ವಿ.ಹಂ.	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
೦೩. ಮೈ.ವಿ.ವಿ	:	ಮೈಸೂರು ವಿಶ್ವವಿದ್ಯಾಲಯ, ಮೈಸೂರು
೦೪. ಕ.ವಿ.ವಿ.	:	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೦೫. ಕ.ಲ.ಕ.ಅ.	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೦೬. ಕೇ.ಲ.ಕ.ಅ.	:	ಕೇಂದ್ರ ಲಲಿತಕಲಾ ಅಕಾಡೆಮಿ, ನವದೆಹಲಿ
೦೭. ಅ.ಪ್ರ.	:	ಅಪ್ರಕಟಿತ
೦೮. ಅನು	:	ಅನುವಾದ
೦೯. ಲೇ	:	ಲೇಖಕರು
೧೦. ಸಂ.	:	ಸಂಪಾದಕರು
೧೧. ಪ್ರ.	:	ಪ್ರಕಾಶಕರು
೧೨. ಪ್ರ.ಸಂ.	:	ಪ್ರಧಾನ ಸಂಪಾದಕರು
೧೩. ಮ.ಪ್ರ	:	ಮಹಾಪ್ರಬಂಧ
೧೪. ಪು	:	ಪುಟ
೧೫. ವ.ಸಂ.	:	ವಚನ ಸಂಪುಟ
೧೬. ಅ.ನ.ಕೃ	:	ಅ. ನ. ಕೃಷ್ಣರಾಯ

ಅನುಬಂಧ – ೨

ಗ್ರಂಥಋಣ

೦೧. **ಅನುಕ್ತ** — **ರವಿಕುಮಾರ ಕಾಶಿ**
ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು
೨೦೧೨

೦೨. **ಕಣ್ಣೆಲೆ** — **ರವಿಕುಮಾರ ಕಾಶಿ**
ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು
೨೦೧೨

೦೩. **ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ** — **ಡಾ. ಬಿ.ಕೆ. ಹಿರೇಮಠ**
ಪ್ರ: ವೀರಶೈವ ಅಧ್ಯಯನ ವೇದಿಕೆ,
೧೯೯೨

೦೪. **ಕರ್ನಾಟಕದ ಇತಿಹಾಸ (ಪ್ರಥಮ ಸಂಪುಟ)** — **ಶ್ರೀ ರಾ. ಸ್ವಾ ಪಂಚಮುಖಿ**
ಕರ್ನಾಟಕ ಇತಿಹಾಸ ಸಂಶೋಧನ ಮಂಡಲ,
ಧಾರವಾಡ. ೨೦೦೭–೦೮

೦೫. **ಕರ್ನಾಟಕದ ಚಿತ್ರಕಲಾ ಪರಂಪರೆ** — **ಎನ್. ಮರಿಶಾಮಾಚಾರ್**
ಪ್ರ: ಸಿ.ಎಂ.ಎನ್ ಪ್ರಕಾಶನ, ಬೆಂಗಳೂರು
೨೦೧೨

೦೬. **ಕರ್ನಾಟಕದ ಜನಪದ ಚಿತ್ರಕಲೆ** — **ಡಾ. ಎಸ್. ಸಿ. ಪಾಟೀಲ**
ಪ್ರ: ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ತೋಂಟದಾರ್ಯ ಸಂಸ್ಥಾನ ಮಠ,
ಗದಗ–ಡಂಬಳ. ೧೯೯೩

೦೭. **ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ** — **ನಿಂಗಪ್ಪ ಎಂ. ಅಂಗಡಿ**
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦೧೦

೦೮. **ಕರ್ನಾಟಕದ ತೊಗಲುಗೊಂಬೆ** — **ಎಂ ಎಸ್. ನಂಜುಂಡರಾವ್**
ಕರ್ನಾಟಕ ಚಿತ್ರಕಲಾ ಪರಿಷತ್ತು,
ಬೆಂಗಳೂರು
೨೦೦೦.

೦೯. **ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ** — **ಶಶಿಕಲಾ ಹೂಗಾರ**
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦೦೮

೧೦. **ಕರ್ನಾಟಕ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ** — **ಡಾ. ಪಿ.ಬಿ. ಗವಾನಿ**
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೨

೧೧. **ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆ** — **ಬಿ. ಎಂ. ಪಾಟೀಲ**
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦೧೩

೧೨. **ಕರ್ನಾಟಕದ ಶಿಲ್ಪಗಳಲ್ಲಿ ಶಿವಶರಣರು** — **ಡಾ. ಜೆ. ಎಂ. ನಾಗಯ್ಯ**
ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ
ಸುಕ್ಷೇತ್ರ ಹಾರಕೂಡ ತಾ॥ ಬಸವಕಲ್ಯಾಣ,
ಬೀದರ ಜಿ॥. ೨೦೦೪

೧೩. **ಕರ್ನಾಟಕದ ಹುದುಗು ಕಲೆ** — **ಶಶಿಕಲಾ ನಂದನಗೌಡ**
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦೧೨

೧೪. **ಕರಕುಶಲ ಕಲೆ** — **ಸಂ. ಡಾ. ಕರಿಗೌಡ ಬೀಚನಹಳ್ಳಿ**
ಪ್ರ: ಪ್ರಸಾರಾಂಗ, ಕನ್ನಡ ವಿವಿ, ಹಂಪಿ
೨೦೦೦

೧೫. ಕಲಾ ಕೋಶ — (ಪ್ರಸಂ) ಪಿ.ಆರ್. ತಿಪ್ಪೇಸ್ವಾಮಿ
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೨೦೦೮

೧೬. ಕಲಾ ದಿಗ್ಗಜರು — ಎನ್. ಮರಿಶಾಮಾಚಾರ್
ಸಿ.ಎಂ.ಎಸ್. ಪ್ರಕಾಶನ, ಬೆಂಗಳೂರು.
೨೦೦೯

೧೭. ಕಲ್ಯಾಣ ವಿವಾಹ ಪದ್ಧತಿ — ಶಾಮಲಿಂಗ ಜವಳಿ
ಜಿಲ್ಲಾ ಬಸವ ದಳ, ಗುಲಬರ್ಗಾ
೧೯೮೬

೧೮. ಕಲಾತಪಸ್ವಿ ಕೆ. ವೆಂಕಟಪ್ಪ — ಪ್ರೋ. ಸಾ.ಕೃ. ರಾಮಚಂದ್ರರಾವ್
ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶನಾಲಯ,
ಮೈಸೂರು. ೨೦೦೪

೧೯. ಚಿತ್ರಕಲಾ ದರ್ಪಣ — ವಿ.ಟಿ. ಕಾಳೆ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು–೨೦೦೭

೨೦. ಚಿತ್ರಕಲಾ ಪ್ರಪಂಚ — (ಪ್ರಸಂ.) ಪಿ. ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು–೧೯೯೩

೨೧. ಚಿತ್ರಕಲಾವಿದ ಚಂದ್ರವರ್ಮ — ಜಿ. ಎಸ್. ಭೂಸಗೊಂಡ
ಬಿ.ಆರ್. ಕೋಟ್ಯಾಳಕರ
ಅಪ್ರಕಟಿತ ಡಿ.ಲಿಟ್ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦೧೨

೨೨. ಚಿತ್ರಕಲಾವಿದ ವಿ.ಬಿ. ಹಿರೇಗೌಡರ — ರವೀಂದ್ರ ಎಸ್. ಕಮ್ಮಾರ
ಬದುಕು ಮತ್ತು ಕಲಾಕೃತಿಗಳು–ಒಂದು ಅಧ್ಯಯನ
ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೩. ಚಿತ್ರಕಲಾವಿದ ಸಂಗಣ್ಣ ಎಂ. ದೋರನಹಳ್ಳಿ — ಬಸವರಾಜ ಕಲೆಗಾರ
ಕಲೆ ಮತ್ತು ಬದುಕು
ಮಹಾಂತಶ್ರೀ ಪ್ರಕಾಶನ, ಯಾದಗಿರಿ
೨೦೧೩

೨೪. ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು — **(ಸಂ) ಡಾ. ಎಸ್.ಸಿ. ಪಾಟೀಲ**
ಹಾಲಭಾವಿ ಸ್ಕೂಲ್ ಆಫ್ ಆರ್ಟ್
ವಜ್ರ ಮಹೋತ್ಸವ ಸಮಿತಿ
ಧಾರವಾಡ. ೧೯೯೬

೨೫. ದಾಸೋಹ ಬಸವೇಶ್ವರರು — **– ಕಲ್ಯಾಣರಾವ್ ಪಾಟೀಲ**
ಶರಣಬಸವೇಶ್ವರ ಪ್ರಕಾಶನ,
ಶರಣಬಸವೇಶ್ವರ ಸಂಸ್ಥಾನ, ಕಲಬುರ್ಗಿ.
೨೦೦೬

೨೬. ದೃಶ್ಯಕಲೆಗಳ ಗುಣಗ್ರಹಣ — **ಡಾ. ಅ.ಲ. ನರಸಿಂಹನ್**
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೧೯೯೫

೨೭. ದೃಶ್ಯಮಂಥನ — **ಪರಶುರಾಮ ಪಿ.**
ಚಿತ್ರಾಲಯ ಪ್ರಕಾಶನ, ಕಲಬುರ್ಗಿ
೨೦೧೧

೨೮. ದೃಶ್ಯ ಮಾಧ್ಯಮದಲ್ಲಿ ಬಸವಣ್ಣ — **ಎಲ್.ಶಿವಲಿಂಗಪ್ಪ**
ಗಾಯತ್ರಿ ಪ್ರಿಂಟಿಂಗ್ ಪ್ರೆಸ್, ಮೈಸೂರು
೨೦೧೫

೨೯. ಧರ್ಮ ಭಾಂಡಾರಿ ಬಸವಣ್ಣನವರು — **ಬಿ. ಸಿ. ಜವಳಿ**
ಮಲ್ಲಬಾರಿ ಮಹಾಂತಪ್ಪ ಸಹೋದರರು
೧೯೬೩

೩೦. ನಿಜದ ನೆಲೆ — **(ಸಂ) ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ**
ಡಾ. ಬಿ.ಕೆ. ಹಿರೇಮಠ ಅಭಿನಂದನ ಗ್ರಂಥ
ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ
ಬಾಗಲಕೋಟೆ–೨೦೦೩

೩೧. ನೂತನ ಪುರಾತನರ ರಗಳೆಗಳು — **ಡಾ. ಎಂ. ಎಸ್. ಸುಂಕಾಪುರ**
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೯೭೬

೩೨. ಬಸವ ಪುರಾಣ — **(ಸಂ.) ಮಲ್ಲಿಕಾರ್ಜುನ ಪರಡ್ಡಿ, ಪಂ. ನಾಗಭೂಷಣಶಾಸ್ತ್ರೀ**
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ. ೧೯೯೩

೩೩. **ಬಸವಣ್ಣನವರು** — **ಡಾ. ಎಂ. ಚಿದಾನಂದಮೂರ್ತಿ**
ಸ್ವಪ್ನ ಬುಕ್ ಹೌಸ್, ಬೆಂಗಳೂರು
೨೦೦೩

೩೪. **ಬಸವಣ್ಣನವರ ದೇವರು** — **ರಂಜಾನ ದರ್ಗಾ**
ಲೋಹಿಯಾ ಪ್ರಕಾಶನ, ಬಳ್ಳಾರಿ

೩೫. **ಬಸವಣ್ಣನವರ ವಚನಗಳ ಸಂಪುಟ** — **(ಸಂ.) ಡಾ. ಎಂ.ಎಂ. ಕಲಬುರ್ಗಿ**
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು. ೧೯೯೩

೩೬. **ಬಸವೇಶ್ವರ ಚರಿತಾಮೃತ** — **ವೇ. ಬಸವಯ್ಯಶಾಸ್ತ್ರೀಗಳು ಹಿರೇಮಠ**
ಪಿ.ಸಿ. ಶಾಬಾದಿಮಠ ಬುಕ್ ಡಿಪೊ
ಗದಗ. ೦೦೪

೩೭. **ಬಸವೇಶ್ವರ ಮತ್ತು ಪುರಂದರದಾಸ** — **– ಡಾ ಬಸವರಾಜ ಸಬರದ**
ಪಿಹೆಚ್.ಡಿ ಮಹಾಪ್ರಬಂಧ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
೧೯೮೨.

೩೮. **ಬಸವೇಶ್ವರ ವಚನ ದೀಪಿಕೆ** — **ಡಾ. ಹೆಚ್. ತಿಪ್ಪೆರುದ್ರಸ್ವಾಮಿ**
ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥ ಮಾಲೆ
ಮೈಸೂರು. ೧೯೯೫

೩೯. **ಭಾರತೀಯ ಸಂಸ್ಕೃತಿ ದರ್ಶನ** — **ಸಂ. ಡಾ. ಅ. ನ. ಕೃಷ್ಣರಾಯ**
ಸಾಗರ್ ಪ್ರಕಾಶನ, ಬೆಂಗಳೂರು
೨೦೦೯

೪೦. **ಯುಗಯುಗದ ಉತ್ಸಾಹ** — **ಸಂ. ವೀರಣ್ಣ ರಾಜೂರ**, **ಬಸವರಾಜ ಹೂಗಾರ**
ಶ್ರೀ ಮುರಘಾಮಠ, ಮೃತ್ಯಂಜಯನಗರ
ಧಾರವಾಡ. ೨೦೧೩

೪೧. **ರಾಜಾ ರವಿವರ್ಮ** — **ಎನ್.ಮರಿಶಾಮಾಚಾರ್**
ಸಿ.ಎಂ.ಎಸ್ ಪ್ರಕಾಶನ, ಬೆಂಗಳೂರು
೨೦೦೦

೪೨. **ರೂಪ ನಿರೂಪ** — **ಲಕ್ಷ್ಮಣ ಬದಾಮಿ**
ಅಭಿಲಾಷ ಪ್ರಕಾಶನ,
೨೦೧೪

p. 1(

೪೩. **ವಚನ ಕಲ್ಯಾಣ** ಬಸವ ಧರ್ಮ ಪ್ರಕಾಶನ, ಕಲಬುರ್ಗಿ ೨೦೦೯	ರಂಜಾನ ದರ್ಗಾ
೪೪. **ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ** ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ, ಗದಗ ೧೯೮೩	ಡಾ. ಪಿ. ವಿ. ನಾರಾಯಣ
೪೫. **ವಚನಾರ್ಥ ಚಿಂತನ** ವಚನ ಅಧ್ಯಯನ ಕೇಂದ್ರ, ಬೆಳಗಾವಿ ೨೦೧೧	ಸಿದ್ಧರಾಮ ಸ್ವಾಮಿಗಳು
೪೬. **ವರ್ಣಸಂಚಯ** ಪ್ರ: ವಿಜಯ ಲಲಿತಕಲಾ ಮಹಾವಿದ್ಯಾಲಯ, ಇಳಕಲ್. ೨೦೦೩	ಡಾ. ಎಸ್. ಸಿ. ಪಾಟೀಲ
೪೭. **ವಿಶ್ವಮಾನವ ಬಸವಣ್ಣನವರ ಜನ್ಮಸ್ಥಳ ಸ್ಮಾರಕ** ಸಾಂಸ್ಥಿಕ ಸಂವಹನ, ಕ.ವಿ.ನಿ.ನಿಯಮಿತ, ಬೆಂಗಳೂರು	ಡಾ. ಎಸ್. ಎಂ. ಜಾಮದಾರ
೪೮. **ಶರಣ ಕಿರಣ** ಶರಣ ಸಾಹಿತ್ಯ ಪರಿಷತ್ತು, ೨೦೦೭	ಸಂ. ಗೊ. ರು. ಚನ್ನಬಸಪ್ಪ ಟಿ. ಆರ್. ಮಹಾದೇವಯ್ಯ
೪೯. **ಶರಣ ಚರಿತಾಮೃತ** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು. ೨೦೧೦	ಸಿದ್ದಯ್ಯ ಪುರಾಣಿಕ
೫೦. **ಶರಣಬಸವೇಶ್ವರರ ಕುರಿತು ರಚಿಸಿದ ವರ್ಣಚಿತ್ರಗಳು** ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೨೦೧೩	ಸುಬ್ಬಯ್ಯ ಮಹಾದೇವಯ್ಯಾ ನೀಲಾ
೫೧. **ಶರಣ ಲೀಲಾಮೃತ** ಶಿವಶರಣ ವಾಙ್ಮಯ ಪ್ರಕಾಶನ ಮೈಸೂರು-೧೯೪೫	ಸಂ. ಶಿವಬಸವ ಸ್ವಾಮಿ

೫೨. ಶಿವಶರಣ ಕಥಾರತ್ನಕೋಶ — **ತ. ಸು. ಶಾಮರಾಯ**
ತಳುಕಿನ ವೆಂಕಯ್ಯ ಸ್ಮಾರಕ ಗ್ರಂಥಮಾಲೆ
೧೯೬೭

೫೩. ಸಂಯೋಜನೆ — **ಎನ್. ಮರಿಶಾಮಾಚಾರ್**
ಸಂಯೋಜಿತ ಪ್ರಕಾಶನ,
ಬೆಂಗಳೂರು.

೫೪. ಸಂಶೋಧನ ಸ್ವರೂಪ — **ಡಾ ಬಿ.ವ್ಹಿ. ಶೀರೂರ**
ಅನ್ನಪೂರ್ಣ ಪ್ರಕಾಶನ, ನಂ.೧೩
ಮಂಜುನಾಥನಗರ, ಹುಬ್ಬಳ್ಳಿ
೨೦೦೮.

೫೫. ಸುರಪುರ ಚಿತ್ರಕಲೆ — **ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ**
ಸರಚಂದ್ರ ಪ್ರಕಾಶನ, ಚಿತ್ತಾಪೂರ
೨೦೦೯

೫೬ . — **ಸೌಂದರ್ಯ ಸಮೀಕ್ಷೆ**
ಜಿ. ಎಸ್. ಶಿವರುದ್ರಪ್ಪ
ಕಾಮಧೇನು ಪ್ರಕಾಶನ, ಬೆಂಗಳೂರು
೧೯೬೫

ಅನುಬಂಧ – ೩

ವಕ್ತೃಗಳು

೦೧. **ದಿ. ಡಾ. ಎಂ. ಎಂ. ಕಲಬುರ್ಗಿ**
ಹಿರಿಯ ಸಂಶೋಧಕರು,
ಧಾರವಾಡ

೦೨. **ದಿ. ಶ್ರೀ. ಬಸವರಾಜ ಮುಗಳಿ**
ಹಿರಿಯ ಚಿತ್ರಕಲಾವಿದರು
ಹುಡುಗಿ, ಬೀದರ ಜಿ.

೦೩. **ಡಾ. ಬಿ. ಕೆ. ಹಿರೇಮಠ**
ಹಿರಿಯ ಸಂಶೋಧಕರು
ಬಾಗಲಕೋಟ

೦೪. **ಶ್ರೀ. ವಿಜಯ ಸಿಂಧೂರ**
ಹಿರಿಯ ಚಿತ್ರಕಲಾವಿದರು
ಜಮಖಂಡಿ. ಬಾಗಲಕೋಟ ಜಿ.

೦೫. **ಡಾ. ಕೊಟ್ರಸ್ವಾಮಿ ಎ.ಎಂ.ಎಂ.**
ಅಸೋಸಿಯೇಟ್ ಫೆಲೋ
ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಮೈಸೂರು.

೦೬. **ಶ್ರೀ. ಮಹೇಶ ತಿಪಶೆಟ್ಟಿ**
ವಿಶ್ರಾಂತ ಅಧ್ಯಾಪಕರು
ಹುನಗುಂದ, ಬಾಗಲಕೋಟ ಜಿ.

೦೭. **ಶ್ರೀ. ಅರವಿಂದ ಬೆಲ್ಲದ**
ಶಾಸಕರು, ಹುಬ್ಬಳ್ಳಿ–ಧಾರವಾಡ

೦೮. **ಶ್ರೀ. ಎಂ. ಆರ್. ಬಾಳೀಕಾಯಿ**
ಹಿರಿಯ ಚಿತ್ರಕಲಾವಿದರು
ಧಾರವಾಡ

೦೯. **ಶ್ರೀ. ಸುರೇಶ ಹಾಲಭಾವಿ**
ಹಿರಿಯ ಚಿತ್ರಕಲಾವಿದರು
ಧಾರವಾಡ

೧೦. **ನಾಡೋಜ ಡಾ. ಜೆ. ಎಸ್. ಖಂಡೇರಾವ್**
ಹಿರಿಯ ಚಿತ್ರಕಲಾವಿದರು
ಕಲಬುರ್ಗಿ

೧೧. **ಶ್ರೀ. ಎಂ. ಬಿ. ಪಾಟೀಲ**
ಹಿರಿಯ ಚಿತ್ರಕಲಾವಿದರು
ಬೆಂಗಳೂರು

೧೨. **ಶ್ರೀ. ಎ. ಎಸ್. ಪಾಟೀಲ**
ಹಿರಿಯ ಚಿತ್ರಕಲಾವಿದರು
ಕಲಬುರ್ಗಿ

೧೩. **ಶ್ರೀ. ವಿಜಯ ಹಾಗರಗುಂಡಗಿ**
ಹಿರಿಯ ಚಿತ್ರಕಲಾವಿದರು
ಕಲಬುರ್ಗಿ

೧೪. **ಪ್ರೊ. ವಿ. ಜಿ. ಅಂದಾನಿ**
ಹಿರಿಯ ಚಿತ್ರಕಲಾವಿದರು
ಕಲಬುರ್ಗಿ

೧೫. **ಶ್ರೀ. ಕೆ. ಗಂಗಾಧರ**
ಹಿರಿಯ ಚಿತ್ರಕಲಾವಿದರು
ಬಸವನ ಬಾಗೇವಾಡಿ

೧೬. **ಡಾ. ಎಸ್. ಎಂ. ನೀಲಾ**
ಹಿರಿಯ ಚಿತ್ರಕಲಾವಿದರು
ಕಲಬುರ್ಗಿ

೧೭. **ಶ್ರೀ. ಎಲ್. ಶಿವಲಿಂಗಪ್ಪ**
ಹಿರಿಯ ಚಿತ್ರಕಲಾವಿದರು, ಮೈಸೂರು

೧೮. **ಶ್ರೀ. ಸಿ. ಸೋಮಶೆಟ್ಟಿ**
ಹಿರಿಯ ಚಿತ್ರಕಲಾವಿದರು, ಬೀದರ

೧೯. **ಶ್ರೀ. ಪಿ. ಎಸ್. ಕಡೇಮನಿ**
ನಿರ್ದೇಶಕರು, ಸಿದ್ಧೇಶ್ವರ ಕಲಾಮಂದಿರ,
ವಿಜಯಪುರ

೨೦. **ಶ್ರೀ. ವಿ. ವಿ. ಹಿರೇಮಠ**
ಪ್ರಾಚಾರ್ಯರು, ಸಿದ್ಧೇಶ್ವರ ಕಲಾಮಂದಿರ,
ವಿಜಯಪುರ

೨೧. **ಶ್ರೀ. ನಾಗಲಿಂಗ ಪತ್ತಾರ**
ಚಿತ್ರಕಲಾವಿದರು, ಮದರಖಂಡಿ, ಬಾಗಲಕೋಟ ಜಿ.

೨೨. **ಶ್ರೀ. ಮಹಾಂತಯ್ಯ ಹಿರೇಮಠ**
ಚಿತ್ರಕಲಾವಿದರು, ಗುಡಿಹಾಳ, ವಿಜಯಪುರ ಜಿ.

೨೩. **ಶ್ರೀ. ಸಂಜು ರೂಡಗಿ**
ಚಿತ್ರಕಲಾವಿದರು, ಗೊಳಸಂಗಿ, ವಿಜಯಪುರ ಜಿ.

೨೪. **ಶ್ರೀ. ಸಂಬೋಜಿ ರಜಪೂತ**
ಚಿತ್ರಕಲಾವಿದರು, ವಿಜಯಪುರ

೨೫. **ಶ್ರೀ. ಮೋಹನ ಬಡಿಗೇರ**
ಕಾರ್ಪೆಂಟರ್ ಆರ್ಟಿಸ್ಟ್, ಬಸವನ ಬಾಗೇವಾಡಿ

೨೬. **ಶ್ರೀ. ಗಣೇಶ ದಿಡ್ಡಿಬಾಗಿಲ**
ಚಿತ್ರಕಲಾವಿದರು, ಬೇವೂರ, ಬಾಗಲಕೋಟ ಜಿ.

೨೭. **ಶ್ರೀ. ವಿಜಯ ಕುಮಾರ ಕಿರಸೂರ**
ಚಿತ್ರಕಲಾವಿದರು, ನಿಡಗುಂದಿ

೨೮. **ಡಾ. ಪಿ. ಬಿ. ಗವಾನಿ**
ಅಧ್ಯಾಪಕರು, ವಿವೇಕಾನಂದ ಲಲಿತಕಲಾ
ಮಹಾವಿದ್ಯಾಲಯ, ರಾಯಭಾಗ

ಅನುಬಂಧ – ೪

ಕಲಾಕೃತಿ ಸಂಗ್ರಹದ ಪ್ರಮುಖ ನೆಲೆಗಳು

೦೧. ಬಸವಪೀಠ, ಬಸವಕಲ್ಯಾಣ

೦೨. ಅನುಭವ ಮಂಟಪ, ಬಸವಕಲ್ಯಾಣ

೦೩. ಬಸವೇಶ್ವರ ದೇವಸ್ಥಾನ, ಬಸವಕಲ್ಯಾಣ

೦೪. ಚೈತನ್ಯಮಯೀ ಆರ್ಟ್ ಗ್ಯಾಲರಿ, ಕಲಬುರ್ಗಿ

೦೫. ಬಸವ ಕಲಾ ಸಂಗ್ರಹಾಲಯ, ಕೂಡಲಸಂಗಮ

೦೬. ಬಸವ ಪೀಠ, ಕೂಡಲಸಂಗಮ

೦೭. ಕೂಡಲಸಂಗಮ ಅಭಿವೃದ್ಧಿ ಮಂಡಳಿ, ಕೂಡಲಸಂಗಮ

೦೮. ಬಸವ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೦೯. ಬಸವ ಸಮಿತಿ, ಬೆಂಗಳೂರು

೧೦. ಜೆಎಸ್ಎಸ್ ಮಠ, ಮೈಸೂರು

೧೧. ಶ್ರೀ ವೀರಭದ್ರೇಶ್ವರ ದೇವಸ್ಥಾನ, ಮೈಸೂರು

೧೨. ಎಂ. ವೀರಪ್ಪ ಕಲಾ ಗ್ಯಾಲರಿ, ಮೈಸೂರು

೧೩. ಶೀ ಜಗದ್ಗುರು ಎಡೆಯೂರು ತೋಂಟದಾರ್ಯ ಮಠ, ಗದಗ–ಡಂಬಳ

೧೪. ಮುರುಘಾಮಠ, ಧಾರವಾಡ

೧೫. ಮುರುಘಾಮಠ, ಚಿತ್ರದುರ್ಗ

೧೬. ನಾಗನೂರುಮಠ, ಬೆಳಗಾವಿ

೧೭. ಮೈಸೂರು ಆರ್ಟ್ ಗ್ಯಾಲರಿ,

೧೮. ಅರವಿಂದ ಬೆಲ್ಲದ, ಶಾಸಕರು, ಧಾರವಾಡ

